
ಮುಗಿಯದ ಪಯಣ
ಜಿ. ಟಿ. ನಾರಾಯಣರಾವ್

ಅಧ್ಯಾಯಾನುಕ್ರಮಣಿಕೆ

ಲೇಖಕನ ಅರಿಕೆ – ಪುಟ ಸಂಖ್ಯೆ ೫

ಅರ್ಪಣೆ – ೧೧

ಒಂದು ತೆರನ ಸಂಪಾದಕೀಯ – ೧೨

೧. ಇಂದಿನ ಕಣ್ಣು ಅಂದಿನ ಮಣ್ಣು – ೧೪

೨. ಸಂಗೀತವೆನ್ನುಸಿರು – ೧೮

೩. ಮರಿಕೆ–ಮಡಿಕೇರಿ ಜೋಕಾಲಿಯಾಟ – ೨೦

೪. ಶಾಲೆ ತೊಡಿಸಿದ ಕಡಿವಾಣ – ೨೩

೫. ಉಪನಯನ ತಂದ ಅಪಾಯ – ೨೬

೬. ಗಾಂಧೀ ದರ್ಶನ – ೨೮

೭. ಸಾಹಿತ್ಯವೆನ್ನೊಡಲು – ೨೯

೮. ಗುರುವಿನ ಗುಲಾಮನಾಗುವ ತನಕ – ೩೧

೯. ನಾವು ಮಾಡಿದ ಪ್ರಯೋಗಗಳು – ೩೩

೧೦. ಬ್ರಾಹ್ಮಣರ ಓಣಿ ಅಂದು – ೩೫

೧೧. ಕಡಲಿಗೆ ಬಿದ್ದ ತೆಪ್ಪ – ೩೭

೧೨. ಗಣಿತ ಬೌತವಿಜ್ಞಾನಗಳ (ಸ–) ರಸಲೋಕದಲ್ಲಿ – ೩೯

೧೩. ಬೆನ್ನಿಗೆ ಬಿತ್ತು ಲಾಠೀ ಪೆಟ್ಟು – ೪೧

೧೪. ಮಂಗಳೂರಿನ ಗೆಳೆಯರು – ೪೩

೧೫. ಗೃಧ್ರಾಲಿಂಗನದಿಂದ ಪಾರಾದ ಪಕ್ಷಿ – ೪೫

೧೬. ನಮ್ಮ ಅಸ್ಮಿತೆಗೆದುರಾದ ಸವಾಲು – ೪೮

೧೭. ವಿಮೋಚನೆ ಮತ್ತು ನಿರ್ಮೋಚನೆ – ೪೯

೧೮. ಬ್ಯಾಂಕಿನ ಮರುಭೂಮಿಯಲ್ಲಿ ಬರಡಾಯ್ತು ಬುದ್ಧಿ! – ೫೧

೧೯. ಕ್ರಿಶ್ಚಿಯನ್ ಕಾಲೇಜಿನ ಕನ್ನಡ ಗೆಳೆಯರು – ೫೨

೨೦. ಉಪನ್ಯಾಸಗಿರಿಗೆ ಬಡ್ತಿ – ೫೬

೨೧. ಕಡಲತಡಿಯ ಕೊಡಲಿಗೊರವರೊಡನೆ ಕಂಡ ಬೆರಗು – ೬೦

೨೨. ಅರಿಯದ ಮಾಧ್ಯಮದಲ್ಲಿ ಪ್ರಯೋಗ – ೬೪

೨೩. ಬಾಳಿಗೊದಗಿದ ಬೆಳಕು – ೬೫

೨೪. ಖಾಸಗಿ ಪಾಠದ ಉಸುಕಿಗೆ ಬಿದ್ದೆ – ೬೮

೨೫. ಮಂಗಳೂರಿನಿಂದ ಮಡಿಕೇರಿಗೆ ಕಂಬಿ ಬದಲಾವಣೆ – ೭೦

೨೬. ಸಹಕಾರದಲ್ಲಿ ಒಂದು ಪ್ರಯೋಗ – ೭೩

೨೭. ಚಾಬಸಿಯಲ್ಲಿ ಚಂಡಮಾರುತ – ೯೮

೨೮. ಜೀವನ್ಮುಕ್ತ ಬಂಟ್ವಾಳ ಜನಾರ್ದನ ಬಾಳಿಗ – ೧೦೧

೨೯. ಮಡಿಕೇರಿ ಬದುಕಿನಲ್ಲಿ ತಳಮಳ ಕಳವಳ – ೧೦೬

೩೦. ಕೈಕೊಡದ ಹಿಲ್‌ಮ್ಯಾನ್ – ೧೦೮

೩೧. ಬೆಂಗಳೂರಿನಲ್ಲಿ ನವ ಅರುಣೋದಯ – ೧೧೪

೩೨. ಒರತೆಯ ಉಗಮ – ೧೧೬

೩೩. ಕಲ್ಲು ಕೊನರಿತು – ೧೧೮

೩೪. ೧೨ನೇ ಮೈಸೂರಿನ ಶಿಲಾರೋಹಿಗಳು – ೧೧೯

೩೫. ಬಂಡೆ ಜಿಗಿತ – ೧೨೧

೩೬. ಕುದುರೆಮುಖದ ಕರೆ – ೧೨೩

೩೭. ಒರತೆ ತೊರೆಯಾದಾಗ – ೧೨೪

೩೮. ಗಂಡುಗಳ ಆಯ್ಕೆ – ೧೨೫

೩೯. ಸಾವನದುರ್ಗದ ಜಾರುಬಂಡೆಯ ಮೇಲೆ – ೧೨೬

೪೦. ಬರಸಿಡಿಲು ಬಡಿಯಿತು – ೧೨೮

೪೧. ತೊರೆ ಹರಿಯಿತು – ೧೨೯

೪೨. ಕಾಗದದ ಕುದುರೆಮುಖ – ೧೩೦

೪೩. ಕುದುರೆಮುಖದ ರಾವುತರು – ೧೩೨

೪೪. ದೋಣಿ ಸಾಗಲಿ ಮುಂದೆ ಹೋಗಲಿ – ೧೩೩

೪೫. ನಾವೂರಿನ ತಳ ಶಿಬಿರ – ೧೩೭

೪೬. ಮೆಂಗಿಲ ಶೇಣವ – ೧೪೦

೪೭. ನಮ್ಮ ವಿದ್ಯಾರ್ಥಿ ಶಿಕ್ಷಕರು – ೧೪೪

೪೮. ಜಮಲಾಬಾದಿನ ಮಾನಸ ಸರೋವರ – ೧೪೭

೪೯. ನಿಮ್ಮ ಊಟ ಇಲ್ಲಿದೆ! – ೧೫೨

೫೦. ಒಂಟಿ – ವಾಂತಿ ಗುಡ್ಡೆಯಮೇಲೆ – ೧೫೩

೫೧. ಕಾಸ್ಮಿಕ್‌ರೇ ತಯಾರಿಸಿದ ಕುಂಬಳಕಾಯಿ ಹಲ್ವ – ೧೫೪

೫೨. ನಾಂದೀಮಹೋತ್ಸವ – ಹಿಂದಿನ ರಾತ್ರಿ – ೧೫೫

೫೩. ಆರೋಹಣ ಪರ್ವ – ೧೫೬

೫೪. ಗುಂಡಿಗೆ ಬಿದ್ದರು ಶೇಷಯ್ಯ – ೧೬೩

೫೫. ಕುದುರೆಮುಖದೆಡೆಗೆ ಮರಳೋಣ – ೧೬೫

೫೬. ಕುದುರೆಮುಖದ ಪರ್ಣ ಕುಟೀರ – ೧೬೭

೫೭. ಅವರೋಹಣ ಪರ್ವ – ೧೭೩

೫೮. ಸಾಗರಂ ಸಾಗರೋಪಮಂ – ೧೭೪

೫೯. ಗಣಿತವಿಭಾಗ; ಕಾಲೇಜಿನೊಳಗಿನ ಜೇನುಗೂಡು – ೧೭೫

೬೦. ಕನ್ನಡದ ಆಸ್ತಿ ಮಾಸ್ತಿಯವರೊಂದಿಗೆ ರಸಯಾನ – ೧೭೯

೬೧. ಸರ್ ಸಿವಿ ರಾಮನಾಯಣ – ೧೯೦

೬೨. ಸಮುದ್ರೋಲ್ಲಂಘನ – ೧೯೭

೬೩. ಸಿಂಹದ ಗವಿ ಹೊಕ್ಕ ಮೇಕೆ! – ೨೦೩

೬೪. ಕನ್ನಡ ವಾಲ್ಮೀಕಿಯ ಸನ್ನಿಧಾನದಲ್ಲಿ – ೨೧೬

೬೫. ಕನ್ನಡ ಪಠ್ಯಪುಸ್ತಕ ಸಮಿತಿ – ೨೩೦

೬೬. ನಾವು ಮಾಡಿಸದಿದ್ದ ಒಂದು ಮದುವೆ – ೨೩೩

೬೭. ಕನ್ನಡದ ಕರೆ – ೨೩೬

೬೮. ಉರುಳಾಗಿ ಕಾಡಿತ್ತು ಮಾತು – ೨೩೮

೬೯. ಕನ್ನಡ ವಟವೃಕ್ಷದ ಆಶ್ರಯದಲ್ಲಿ – ೨೪೦

೭೦. ಕನ್ನಡ ವಿಶ್ವಕೋಶದ ಪ್ರಥಮ ಸಂಪುಟ – ೨೪೩

೭೧. ದೇಜಗೌ ಅವರ ಔದಾರ್ಯ – ೨೪೭

೭೨. ವಿಶ್ವಕೋಶದ ಪ್ರಗತಿ – ೨೫೦

೭೩. ತಮಿಳು ತಲೆಗಳ ನಡುವೆ – ೨೫೬

೭೪. ಭಾಷಾಂತರ ತಂದ ಅವಾಂತರಗಳು – ೨೫೮

೭೫. ಕನ್ನಡದಲ್ಲಿ ಜನಪ್ರಿಯ ವಿಜ್ಞಾನ; ವಸ್ತು, ಶೈಲಿ, ವಿನ್ಯಾಸ – ೨೬೨

೭೬. ಸವಾಲನ್ನು ಎದುರಿಸುವ ಛಲ – ೨೬೯

೭೭. ಕನ್ನಡ ಅಭಿವರ್ಧನೆಯಲ್ಲಿ ವಿಶ್ವಕೋಶಗಳ ಪಾತ್ರ – ೨೭೪

೭೮. ಎಂಎಸ್ಐಎಲ್ ಮಾಡಿದ ನೂತನ ಪ್ರಯೋಗ – ೨೮೦

೭೯. ಬೀರಿತು ಪರಿಮಳ 'ಪಾವೆಂ ಕಸ್ತೂರಿ' – ೨೮೩

೮೦. ನಾವು ಮಾಡಿಸಿದ ಒಂದು ಮದುವೆ – ೨೮೪

೮೧. ಕುಲಪತಿ ಬೀರಿದ ಕ್ಷಿಪಣಿ ತಿರುಗುಬಾಣವಾದಾಗ – ೨೮೮

೮೨. ಕೆಲವು ಅವಿಸ್ಮರಣೀಯ ಘಟನೆಗಳು – ೨೯೦

೮೩. "ಹಾಲ್ಜೇನು ಸೇರಿ ನೀವಾಗಿಹಿರಿ ಆಚಾರ್ಯ!" – ೨೯೪

೮೪. ನಿವೃತ್ತ ಜೀವನದಲ್ಲಿ ತಯಾರಿಸಿದ ಅನುಭವದಡುಗೆ – ೨೯೮

೮೫. ಸರ್ಕಾರೀ ಕೃಪಾಪೋಷಿತ ಸಂಸ್ಥೆಗಳ ಸದಸ್ಯನಾಗಿ – ೨೯೯

೮೬. ಪ್ರತಿಭಾನ್ವಿತರ ಅನ್ವೇಷಣೆಯಲ್ಲಿ – ೩೦೨

೮೭. ಚಂದ್ರದರ್ಶನ ಮತ್ತು ಸಂದರ್ಶನ – ೩೦೯

೮೮. ಯಮಸದನ ನೋಡಿ ಬಂದೆ – ೩೧೧

೮೯. ವಿಶ್ವಕೋಶದ ಮರುವುಟ್ಟು – ೩೧೩

೯೦. ಅನಿರೀಕ್ಷಿತ ಪುರಸ್ಕಾರಗಳು – ೩೧೪

೯೧. ಕೊಡಗು ಜಿಲ್ಲಾ ೫ನೇ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷ ಭಾಷಣ – ೩೨೧

೯೨. ಅತ್ರಿ ವೃಕ್ಷದ ಬೀಜವಾಪನೆ – ೩೩೩

೯೩. ಸಮಾರೋಪ – ೩೩೬

ಮುಗಿಯದ ಪಯಣ

(ಆತ್ಮಕಥೆ)

ಜಿ.ಟಿ. ನಾರಾಯಣ ರಾವ್

ಲೇಖಕನ ಅರಿಕೆ



ಆಲ್ಬರ್ಟ್ ಐನ್‌ಸ್ಟೈನ್ (೧೮೭೯–೧೯೫೫) ತಮ್ಮ ಸ್ನೇಹಿತರ ಹಾಗೂ ಅಭಿಮಾನಿಗಳ ಒತ್ತಾಯಕ್ಕೆ ಮಣಿದು ಆತ್ಮಚರಿತ್ರೆಯನ್ನು ಬರೆದಿದ್ದಾರೆ. ಅದರ ಆರಂಭದ ಸಾಲುಗಳು ಹೀಗಿವೆ, "ಇಲ್ಲಿ ನಾನು ನನ್ನ ಅರುವತ್ತೇಳನೆಯ ವಯಸ್ಸಿನಲ್ಲಿ ನನ್ನದೇ ಚರಮಗೀತೆಯಂಥ (Obituary) ಒಂದು ಲೇಖನ ಬರೆಯಲು ಕುಳಿತಿದ್ದೇನೆ. ಡಾ। ಶಿಲ್ಪ್ ನನ್ನನ್ನು ಹೀಗೆ ಮಾಡಲು ಒಪ್ಪಿಸಿದರೆಂಬ ಒಂದೇ ಕಾರಣಕ್ಕಾಗಿ ಇದನ್ನು ಮಾಡುತ್ತಿರುವುದಲ್ಲ. ಒಬ್ಬಾತನ ಕಾರ್ಯ ಮತ್ತು ಶೋಧನೆಗಳನ್ನು ಸಿಂಹಾವಲೋಕಿಸಿದಾಗ ಅವು ಆತನಿಗೆ ಹೇಗೆ ಕಾಣುತ್ತವೆಂಬುದನ್ನು ಆತನೊಡನೆ ದುಡಿಯುತ್ತಿದ್ದವರಿಗೆ ತೋರಿಸಿಕೊಡುವುದು ಒಳ್ಳೆಯದೆಂಬ ಕಾರಣಕ್ಕಾಗಿಯೂ ಈ ಕೆಲಸಕ್ಕೆ ಕೈ ಹಾಕಿದ್ದೇನೆ. ಇಂಥ ಯಾವುದೇ ಪ್ರಯತ್ನ ಎಷ್ಟು ಅಪರಿಪೂರ್ಣವೆಂಬುದನ್ನು ಸ್ವಲ್ಪ ಆತ್ಮಶೋಧಾನಂತರ ಅರಿತೆ. ಏಕೆಂದರೆ ಒಬ್ಬನ ಪ್ರವೃತ್ತ ಜೀವನ ಎಷ್ಟೇ ಸಂಕ್ಷೇಪ ಮತ್ತು ಸೀಮಿತವಾಗಿದ್ದರೂ ಅದರಲ್ಲಿ ದೋಷಪೂರಿತ ಮಾರ್ಗಗಳು ಎಷ್ಟೇ ಎದ್ದುಕಾಣುವಂತಿದ್ದರೂ [ಅದರತ್ತ ಹಿನ್ನೋಟ ಹರಿಸಿ ಸಂಚಿತ ಅನುಭವವನ್ನು ಬರೆಯಲು ತೊಡಗಿದಾಗ] ನಿರೂಪಣಾರ್ಹವಾದ ಅಂಶ ಅಷ್ಟೇನೂ ಸಲೀಸಾಗಿ ಬರುವುದಂತೂ ಇಲ್ಲ – ಇಂದು ಅರುವತ್ತೇಳರಲ್ಲಿರುವ ವ್ಯಕ್ತಿ ಐವತ್ತರಲ್ಲಿ, ಮೂವತ್ತರಲ್ಲಿ ಅಥವಾ ಇಪ್ಪತ್ತರಲ್ಲಿ ಇದ್ದವನ ಹಾಗೆ ಖಂಡಿತ ಇರುವುದಿಲ್ಲ. ಒಂದೊಂದು ಹಳೆಯ ನೆನಪೂ ಇಂದಿನ ಪರಿಸ್ಥಿತಿಯಿಂದ ಬಣ್ಣ ಪಡೆದಿರುತ್ತದೆ. ಎಂದೇ ಇದೊಂದು ಮಿಥ್ಯಾದೃಷ್ಟಿಕೋನ. ಈ ಒಂದು ಪರಿಗಣನೆಯೇ ನಮ್ಮನ್ನು ಕಾರ್ಯವಿಮುಖರಾಗಿಸಬಹುದು. ಇಂತಿದ್ದರೂ ಬೇರೆ ಒಂದು ಪ್ರಜ್ಞೆಗೆ ಗಮ್ಯವಾಗದ ಅನೇಕ ಅಂಶಗಳನ್ನು ಸ್ವಂತಾನುಭವದ ಮೂಸೆಯಿಂದ [ಹೆಕ್ಕಿ] ಹೊರತೆಗೆಯುವುದು ಸಾಧ್ಯವಿದೆ."

ನೊಬೆಲ್ ಪ್ರಶಸ್ತಿ ಪುರಸ್ಕೃತರಾದ ಸಿ.ವಿ ರಾಮನ್ (೧೮೮೮–೧೯೭೦) ಮತ್ತು ಎಸ್. ಚಂದ್ರಶೇಖರ್ (೧೯೧೦–೯೫) ಇಬ್ಬರನ್ನೂ ವಿಭಿನ್ನ ಕಾಲ ಮತ್ತು ದೇಶಗಳಲ್ಲಿ ಆತ್ಮೀಯವಾಗಿ ಸಂದರ್ಶಿಸುವ ಯೋಗ ನನಗೊದಗಿತ್ತು. ಉಭಯ ಸಂದರ್ಭಗಳಲ್ಲಿಯೂ ನಾನು ಕೇಳಿದ ಒಂದು ಪ್ರಶ್ನೆ, "ನೀವೇಕೆ ನಿಮ್ಮ ಜೀವನಚರಿತ್ರೆ ಬರೆದಿಲ್ಲ?"

ರಾಮನ್ ಹೇಳಿದರು, "ಅದು ಒಂದೋ ಆತ್ಮಶ್ಲಾಘನೆ ಇಲ್ಲವೇ ಪರದೂಷಣೆ ಅಥವಾ ಎರಡರ ಮಿಶ್ರಣ ಆಗದಿರದು. ಶುದ್ಧ ಕಾಲಹರಣ. ನನ್ನ ವಿಜ್ಞಾನಕಾರ್ಯವೇ ನನ್ನ ಜೀವನಚರಿತ್ರೆ."

ಚಂದ್ರಶೇಖರ್ ನುಡಿದರು, "ನನ್ನ ಜೀವನ ನನಗೇನೂ ಮಹತ್ತ್ವದ್ದಾಗಿ ಕಾಣುವುದಿಲ್ಲ. ಆದ್ದರಿಂದ ಅಂಥ ಯಾವ ದುಸ್ಸಾಹಸಕ್ಕೂ ಕೈ ಹಾಕಲಾರೆ. ಅಲ್ಲದೇ ವಿಜ್ಞಾನದಲ್ಲೇ ನಾನು ಮಾಡಬೇಕಾದ ಕೆಲಸ ಸಾಕಷ್ಟಿದೆ."



ಇತ್ತ ಗಾಂಧೀಜಿಯವರ (೧೮೬೦–೧೯೪೮) 'ಸತ್ಯಶೋಧನೆ,' ಶಿವರಾಮ ಕಾರಂತರ (೧೯೦೨–೯೭) 'ಹುಚ್ಚು ಮನಸ್ಸಿನ ಹತ್ತು ಮುಖಗಳು', ಪಾಶ್ಚಾತ್ಯ ಪಿಟೀಲು ಮಾಂತ್ರಿಕ ಯೆಹೂದಿ ಮೆನುಹಿನ್ (೧೯೧೬–೯೯) ಅವರ ಆತ್ಮಚರಿತ್ರೆ 'Unfinished journey', ದೇ. ಜವರೇಗೌಡರ (೧೯೧೮) 'ಹೋರಾಟದ ಬದುಕು,' ಆರ್.ಕೆ ಶ್ರೀಕಂಠಕುಮಾರ ಸ್ವಾಮಿಯವರ (೧೯೨೮) 'ಹೃದಯಸಂಪನ್ನತೆ' ಇತ್ಯಾದಿ ಅಭಿಜಾತ ಕೃತಿಗಳು ನನಗೆ ನೀಡಿದ ಸಂದೇಶ ಬೇರೆಯೇ; ಅವು ಘಟನಾ ಪರಂಪರೆಯ ನಿಷ್ಠುರ ನಿರಪೇಕ್ಷ ಜ್ಞೇಯನಿಷ್ಠ ನಿರೂಪಣೆಗಳು. ಅವುಗಳಲ್ಲಿ ಸ್ವವೈಭವೀಕರಣವಿಲ್ಲ ಅಥವಾ ಸ್ವಂತವೈಫಲ್ಯಗಳಿಗೆ ಇತರರನ್ನು ಬಲಿಪಶುಗಳಾಗಿಸುವ ಹುನ್ನಾರವಿಲ್ಲ, ಬದಲು, ಅತ್ಯಂತ ಪಾರದರ್ಶಕ ವಿವರಣೆಗಳಿವೆ, ತೀರ್ಮಾನಗಳನ್ನು ವಾಚಕರಿಗೇ ಬಿಡಲಾಗಿದೆ. ಎಂದೇ ಆ ಕೃತಿಗಳು ಉತ್ಕೃಷ್ಟ ಸೃಜನಶೀಲ ಪ್ರಕಾರಗಳಾಗಿಯೂ ನಮಗೆ ಆತ್ಮೀಯಯವಾಗುತ್ತವೆ. ಅವರ ವೈಫಲ್ಯಗಳಲ್ಲಿ ನಾವು ಸಹಚರಿಗಳಾಗುತ್ತೇವೆ, ಸಾಫಲ್ಯಗಳಲ್ಲಿ ಸಂಭ್ರಮಿಸುತ್ತೇವೆ. ಮೆನುಹಿನ್ ಅವರ ಆತ್ಮಚರಿತ್ರೆಯ ಹೆಸರೇ ಪ್ರಸ್ತುತ ಕನ್ನಡ ಪುಸ್ತಕದ ಶೀರ್ಷಿಕೆಗೆ ಸ್ಫೂರ್ತಿ. ಹಿರಿಯ ಸಮಾಜಸೇವಕ, ಸ್ವಾತಂತ್ರ್ಯಹೋರಾಟಗಾರ, ಸಂಘಟಕ, ಪ್ರಖರ ಚಿಂತಕ ಹಾಗೂ ಲೇಖಕ ಬಿ.ವಿ ಕಕ್ಕಿಲ್ಲಾಯರ ಆತ್ಮಚರಿತ್ರೆ 'ಬರೆಯದ ದಿನಚರಿಯ ಮರೆಯದ ಪುಟಗಳು' ನನಗೊಂದು role modelನ್ನೇ ಒದಗಿಸಿಕೊಟ್ಟಿತು.

ಜೊತೆಗೆ ತುಸು ಲಘುವಾಗಿ ಇನ್ನೊಂದು ಮಾತನ್ನು ಸೇರಿಸಬೇಕು: ವ್ಯಕ್ತಿ ತನ್ನ ಕ್ರಿಯಾಶೀಲ ಜೀವನದ ಕೊನೆಯ ಘಟ್ಟ ತಲಪಿದಾಗ ಕುಸಿಯಲಾರಂಭಿಸುವ ಉತ್ಸಾಹವನ್ನು ಸಂವರ್ಧಿಸಲು ಆತ್ಮಚರಿತ್ರೆ ಬರೆಯುವುದರತ್ತ ಮಾಲುವುದಾಗಿರಬಹುದೇ? ಆದರೆ ಈ ಸಮಸ್ಯೆ ನನ್ನನ್ನೆಂದೂ ಬಾಧಿಸಲಿಲ್ಲ: ಸಮಾಜಕ್ಕೆ ನನ್ನ ಅಸ್ತಿತ್ವ ಅನಿವಾರ್ಯವೆಂದು ಯಾವ ಕ್ಷಣದಲ್ಲೂ ನನಗೆ ಅನ್ನಿಸಿಲ್ಲ. ಬದಲು, ಸ್ವಸಂತೋಷಾರ್ಥ ನಾನು ಸದಾ ಕ್ರಿಯಾಶೀಲವಾಗಿ ಬಾಳಬೇಕೆಂಬುದು ನನ್ನ ಸಂಕಲ್ಪ ಮತ್ತು ನಡವಳಿಕೆ. ಇದೊಂದು ಬಗೆಯ ಋಣ ಸಂದಾಯ – ಸಮಾಜದಿಂದ ವ್ಯಕ್ತಿ ಪಡೆದುದನ್ನು ಕೃತಜ್ಞತಾಪೂರ್ವಕವಾಗಿ ಸಮಾಜಕ್ಕೆ ಮರುಸಲ್ಲಿಸುವ ಪುಣ್ಯಸ್ನಾನ; ಜೊತೆಗೆ ಆತ್ಮವಿಮರ್ಶೆ ಅಥವಾ ಉತ್ತರದಾಯಿತ್ವ (accountability) ಕೂಡಾ.

ಇಷ್ಟೆಲ್ಲ ಸಂಗತಿಗಳು ನನಗೆ ಗೊತ್ತಿದ್ದರೂ ನಾನೇಕೆ ದೇವತೆಗಳು ಕಾಲಿಡಲು ಅಂಜುವ ಈ ಕಳಕ್ಕೆ ದುಮುಕಿದೆ? ಸರಳ ಉತ್ತರ: 'ಎನ್‌ಸಿಸಿ ದಿನಗಳು' ಪುಸ್ತಕ ವ್ಯಾಪಕ ಜನಪ್ರಿಯತೆ, ಮೊಮ್ಮಗ ಅಭಯನ ಒತ್ತಾಯ, ಬಂಧುಮಿತ್ರರ ಹಾಗೂ ಅಭಿಮಾನಿಗಳ ಪ್ರೀತಿಯ ಬೇಡಿಕೆ ಎಲ್ಲ ಒಗ್ಗೂಡಿ ಸುಮಾರು ಹದಿನೆಂಟು ತಿಂಗಳ ಹಿಂದೆ ಗತಾನುಭವದ ಹೊನಲಿಗೆ ಹಾರಿದೆ. ಹಾದಿ ತಿಳಿದಿರಲಿಲ್ಲ, ಗುರಿ ಗೊತ್ತಿರಲಿಲ್ಲ. ಆದರೆ ಅಭಯ ಇಂಥ ಒಂದು ದಾಖಲೆಯ ಆವಶ್ಯಕತೆ ಕುರಿತು ಮನಂಬುಗುವ ವಿವರಣೆ ನೀಡಿ ನನ್ನನ್ನು ಮುಂದುವರಿಯಲು ಹುಮ್ಮಸ್ಸು ಊಡಿದ. ಸೋದರಭಾವ ರಾಮನಾಥ ಹಾಗೂ ಸೋದರಳಿಯ ರಾಧಾಕೃಷ್ಣ ಇಬ್ಬರೂ ಎಡೆಬಿಡದೆ ವಿಚಾರಿಸುತ್ತ, ಈ ನಿಟ್ಟಿನಲ್ಲಿ ನನ್ನ ನಿಷ್ಕ್ರಿಯತೆ ಅಥವ ಔದಾಸೀನ್ಯದ ಕಾರಣವಾಗಿ, ನನ್ನಲ್ಲಿ 'ಅಪರಾಧ ಪ್ರಜ್ಞೆ' (guilty conscience) ಮೊಳೆಯುವಂತೆ ಮಾಡಿದರು. ಮಗ ಅಶೋಕ ಮತ್ತು ಮಡದಿ ಲಕ್ಷ್ಮಿ ಹೃತ್ಪೂರ್ವಕವಾಗಿ ಈ ಪ್ರಯತ್ನವನ್ನು ಸ್ವಾಗತಿಸಿದರು. ಹೀಗೆ ಹತ್ತು ಹನ್ನೊಂದು ಅರ್ಜುನ ಪ್ರೇರಣೆ ಅಥವಾ ಕುಮ್ಮಕ್ಕು ಒದಗಿದಾಗ ಈ 'ಉತ್ತರಕುಮಾರ' ಕೊಳುಗುಳಕ್ಕಿಳಿಯದೇ ಗತಿಯುಂಟೇ? ಅಂದ ಮಾತ್ರಕ್ಕೆ 'ಅಪರಾಧಿ ನಾನಲ್ಲ, ಅಪರಾಧವೆನಗಿಲ್ಲ' ಎಂಬ ವಿಶ್ವಾಮಿತ್ರ–ವಿನ್ಯಾಸ ತಳೆಯುವುದು (ಶಿಶು ಶಕುಂತಳೆಯನ್ನು ತಾಯಿ ಮೇನಕೆ ತಂದೆ ವಿಶ್ವಾಮಿತ್ರನಿಗೊಪ್ಪಿಸಲು ಮುಂದಾದಾಗ ಆತನ ಪ್ರತಿಕ್ರಿಯೆ) ನನ್ನ ಉದ್ದೇಶವಲ್ಲ. ಈಗ ನನ್ನ ನಿವೇದನೆ ಇಷ್ಟೆ (ಕುವೆಂಪು ಕ್ಷಮೆ ಕೋರಿ): "ಇದೊ ಮುಗಿಸಿ ತಂದಿಹೆನ್ 'ಮುಗಿಯದ ಪಯಣ' ಕೃತಿಯ ನಿಮ್ಮ ಸಿರಿಯಡಿಗೊಪ್ಪಿಸಲ್ಕೆ ಓ ವಾಚಕರೆ! ಪುರುಳಿರ್ದರಿದರೊಳಗೆ ಕರುಣಿಸಿಂ ಪೇಳ್ದೆನಗೆ, ದೋಷಂಗಳಿರ್ದೊಡೆ ಕ್ಷಮೆಯಿರಲಿ."

'ಮುಗಿಯದ ಪಯಣ'ದ ಬರವಣಿಗೆ ತೊಡಗಿದಾಗ ನಾನು ವಿಧಿಸಿಕೊಂಡ ಕೆಲವು ಮುಖ್ಯ ನಿಯಮಗಳಿವು: 'ಎನ್‌ಸಿಸಿ ದಿನಗಳು' ಪುಸ್ತಕದಲ್ಲಿಯಂತೆ ಇಲ್ಲಿಯೂ ಘಟನೆಗಳಿಗೆ ಪ್ರಾಮುಖ್ಯ ನೀಡಬೇಕು, ಸ್ವವಿಭವೀಕರಣ ಎಲ್ಲಿಯೂ ಸಲ್ಲದು, ತಿಳಿದೋ ತಿಳಿಯದೆಯೋ ನಾನು ಮಾಡಿದ ತಪ್ಪುಗಳನ್ನು ಮತ್ತು ಆ ಕಾರಣವಾಗಿ ಕಲಿತ ಪಾಠವನ್ನು ಎತ್ತಿ ಕಾಣಿಸಬೇಕು. ಇತರರಿಗೆ ನೋವು ಅಥವಾ ಮುಜುಗರ ಉಂಟುಮಾಡಬಹುದಾದ ಪ್ರಸಂಗಗಳನ್ನು ತೇಲಿಸಿ ಬರೆಯಬೇಕು, ಮತ್ತು ಪ್ರಸ್ತುತ ಕೃತಿ ಸಂದ ಯುಗಕ್ಕೆ ಇಂದು ಹಿಡಿದ ಕನ್ನಡಿ ಆಗಿರುವಂತೆ ಸರ್ವಪ್ರಯತ್ನ ಹೂಡಬೇಕು.

ನಾಗರಿಕತೆಯ ಒಂದು ಸಂಕ್ರಮಣ ಕಾಲದಲ್ಲಿ ನನ್ನ ಬಾಳು ಬೆಳೆದು ಅರಳಿತು: ೧೯೪೭ರಲ್ಲಿ ಸಾಫಲ್ಯ ಕಂಡ ಭಾರತದ ಸ್ವಾತಂತ್ರ್ಯ ಆಂದೋಳನದ ಉತ್ಸಾಹ, ಎರಡನೆಯ ಪ್ರಪಂಚ ಮಹಾಸಮರದ ಕಾವು (೧೯೩೯–೪೫), ಭಾರತ ವಿಭಜನೆಯ ನೋವು, ಶೂನ್ಯ ಉದ್ಯೋಗಾವಕಾಶ ಮುಂತಾದ ದೇಶದೊಳಗಿನ ತುಮುಲಗಳು ಒಂದು ಕಡೆ, ಗಣಕ ಮತ್ತು ಆಕಾಶಯುಗಗಳ ಪ್ರವೇಶ (೧೯೫೭), ತಂತ್ರವಿದ್ಯೆಯ ಅನೂಹ್ಯ ಉತ್ಕರ್ಷೆ, ಜ್ಞಾನಸೀಮೆಯ ಹಠಾತ್ ವಿಸ್ತರಣೆ ಮುಂತಾದವು ಜಾಗತಿಕ ಚಿಂತನೆ ಹಾಗೂ ಸಾಮಾಜಿಕ ಪ್ರಜ್ಞೆ ಮೇಲೆ ಬೀರಿದ ಪ್ರಭಾವ ಇನ್ನೊಂದು ಕಡೆ ಎರಡೂ ಕ್ರಿಯಾಶೀಲವಾಗಿದ್ದ ಪರ್ವಕಾಲವದು. ಮನುಕುಲ ನಾಲ್ಕನೆಯ ಕ್ರಾಂತಿಯತ್ತ ಸಾಗುತ್ತಿದೆಯೋ ಎನ್ನುವಂಥ ಪರಿಸ್ಥಿತಿ ತಲೆದೋರಿತ್ತು. ಆ ಕ್ರಾಂತಿಗಳಿವು: ಮಾತಿನ ಆರಂಭ (ವಿಕಾಸದ ಯಾವ ಮಜಲಿನಲ್ಲಿ ಇದು ಸಂಭವಿಸಿತೆಂಬುದು ತಿಳಿದಿಲ್ಲ), ಲಿಪಿಶೋಧನೆ (ಕ್ರಿಪೂ ಸು ೩೦೦೦), ಮುದ್ರಣ ಕ್ರಾಂತಿ (ಕ್ರಿಶ ೧೫ನೆಯ ಶತಮಾನ), ಎಲೆಕ್ಟ್ರಾನಿಕ್ ಯುಗದ ಆವಾಹನೆ (೨೦ನೆಯ ಶತಮಾನದ ಉತ್ತರಾರ್ಧ).

ನಾಲ್ಕನೆಯ ಕ್ರಾಂತಿಯ ಉಷಃ ಕಾಲದಲ್ಲಿ ವಿಜ್ಞಾನದ ವಿದ್ಯಾರ್ಥಿಯಾಗಿದ್ದ ನಾನು ಇದರ ಕ್ಷಿಪ್ರ ಅಭಿವೃದ್ಧಿ ಕಂಡು ಬೆರಗಾಗಿ ಉದ್ದೀಪನಗೊಂಡು ಕನ್ನಡದಲ್ಲಿ ವೈಜ್ಞಾನಿಕ ಲೇಖನಗಳನ್ನೂ ಪುಸ್ತಕಗಳನ್ನೂ ಬರೆದು ಪ್ರಕಟಿಸಲು ತೊಡಗಿದೆ. ನನ್ನ ವೃತ್ತಿ (ಕಾಲೇಜಿನಲ್ಲಿ ಗಣಿತೋಪನ್ಯಾಸಕ, ೧೯೪೭ರಿಂದ) ಈ ಹವ್ಯಾಸಕ್ಕೆ ಪೂರಕ ಪೋಷಕವಾಗಿತ್ತು. ಮುಂದೇನಾಯಿತು? ಪ್ರಸ್ತುತ ಕೃತಿಯ ಪುಟಗಳಲ್ಲಿ ಆ ಘಟನೆಗಳು ಕ್ರಮಶಃ ಅನಾವರಣಗೊಳ್ಳುವುದನ್ನು ವಾಚಕರು ಗುರುತಿಸಬಹುದು. ಪೂರ್ವಸಿದ್ಧ ಯೋಜನಾನುಸಾರ ರಚಿತವಾದ ಕೃತಿ ಇದಲ್ಲ, ಗತ ಜೀವನದ ಗೊಂಡಾರಣ್ಯದಲ್ಲಿ ನಡೆದಂತೆ ಹಾದಿ ಹುಡುಕಿ ವರ್ತಮಾನಕ್ಕೆ ತಲಪುವ ಪ್ರಯತ್ನ ಮಾತ್ರ.

ಆಗಸ್ಟ್ ೨೦೦೬ರ ವೇಳೆಗೆ ಬರವಣಿಗೆ (ಅಲ್ಲ, ಗಣಕ ಬೆರಳಚ್ಚು ಕೆಲಸ) ಮುಗಿಯಿತು. ಇಲ್ಲಿ ಪ್ರದರ್ಶಿತವಾಗುತ್ತಿರುವ ದೃಶ್ಯಪರಂಪರೆ ಹೇಗಿದೆ? ಡಿವಿಜಿಯವರ ಅಮರವಾಣಿಯಲ್ಲಿ –

ನಾಟಕವ ನೋಡು ಬ್ರಹ್ಮಾಂಡ ರಂಗಸ್ಥಲದಿ
ಕೋಟಿ ನಟರಾಂತಿಹರು ಚಿತ್ರ ಪಾತ್ರಗಳ
ಆಟಕ್ಕೆ ಕಥೆಯಿಲ್ಲ, ಮೊದಲಿಲ್ಲ, ಕಡೆಯಿಲ್ಲ
ನೋಟಕರುಂ ಆಟಕರೆ ಮಂಕುತಿಮ್ಮ

ಎಂಬ ಉಕ್ತಿಗೆ 'ಮುಗಿಯದ ಪಯಣ' ಒಂದು ಕಿರಿಯ ನಿದರ್ಶನ ಮಾತ್ರ. ಇದರಲ್ಲಿ ಪ್ರದರ್ಶಿಸಿರದ ಇತರ ದೃಶ್ಯಗಳನ್ನು ಮುಖ್ಯವಾಗಿ 'ಎನ್‌ಸಿಸಿ ದಿನಗಳು [ಬೆಲೆ ರೂ ೫೫], 'ಸುಬ್ರಹ್ಮಣ್ಯಂ ಚಂದ್ರಶೇಖರ್ [ಬೆಲೆ ರೂ ೫೫],' 'ಸವಾಲನ್ನು ಎದುರಿಸುವ ಛಲ' ಮತ್ತು 'ಸಪ್ತ ಸಾಗರದಾಚೆಯೆಲ್ಲೋ... [ಬೆಲೆ ರೂ ೬೦]' ಎಂಬ ಕೃತಿಗಳಲ್ಲಿ ಕಾಣಬಹುದು. ಇಷ್ಟಾಗಿಯೂ ಉಳಿದವನ್ನು 'ಸಂಗೀತ ರಸನಿಮಿಷಗಳು [ಬೆಲೆ ರೂ ೬೦]' ಹೆಸರಿನ ಹೊಸ ಪುಸ್ತಕದಲ್ಲಿ ಸದ್ಯವೇ ಪ್ರಕಟಿಸುವ ಸಂಕಲ್ಪವಿದೆ.

ಪ್ರಸ್ತುತ ಆತ್ಮಚರಿತ್ರೆಗೆ 'ಮುಗಿಯದ ಪಯಣ'ದ ಬದಲು 'ಮುಗಿದ ಪಯಣ' ಎಂಬ ಹೆಸರು ಅಧಿಕ ಸಮಂಜಸವಾಗಿರುತ್ತಿತ್ತು ಎಂದೊಬ್ಬ ಆತ್ಮೀಯ ಮಿತ್ರ ಸೂಚಿಸಿದಾಗ ನನ್ನ ಆಯ್ಕೆಗೊಂದು ವಿವರಣೆ ಅಗತ್ಯವೆನ್ನಿಸಿತು. 'ಪಯಣ' ಪದ ಕಾಲಚಕ್ರದ ನಿರಂತರ ಏಕಮುಖ ಏಕವೇಗ ಪರಿಕ್ರಮಣ ಸೂಚಕ. ಆನ್ವಯಿಕವಾಗಿ ಇದು ಮನುಕುಲದ ಅಥವಾ ನಾಗರಿಕತೆಯ ಚಲನಶೀಲತೆಯನ್ನು ಧ್ವನಿಸುತ್ತದೆ. ಈ ಅನಂತ ಹಾಸು ಬೀಸುಗಳಲ್ಲಿ(space and time) ಯಾವನೇ ವ್ಯಕ್ತಿ ಆತ ಎಂಥ ಸಾರ್ವಭೌಮ ಮಹಾಪುರುಷನಾಗಿರಲಿ ಇಲ್ಲವೇ ಕೇವಲ ನಗಣ್ಯ

ಸಾಮಾನ್ಯನಾಗಿರಲಿ ಒಂದು ಚುಕ್ಕಿ ಮಾತ್ರ. ಭೂಗಾತ್ರದೊಡನೆ ಹೋಲಿಸುವಾಗ ಸಾಕ್ಷಾತ್ ಮೌಂಟ್ ಎವರೆಸ್ಟ್ (ಭೂ ವ್ಯಾಸ ೧೨,೮೦೦ ಕಿಮೀ, ಎವರೆಸ್ಟ್ ಔನ್ನತ್ಯ ೮ ಕಿಮೀ) ಕೇವಲ ಧೂಳ ಕಣ ಎಂಬ ಭೌತಸತ್ಯವನ್ನು ಮರೆಯದಿರೋಣ. ಅದೇ ರೀತಿ ಭೂಮಿಯ ವಯಸ್ಸಿನೊಡನೆ (೫,೦೦೦,೦೦೦,೦೦೦ ವರ್ಷಗಳು) ಅಥವಾ ನಾಗರಿಕತೆಯ ಪ್ರಾಯದೊಡನೆ (ಸುಮಾರು ೧೦,೦೦೦ ವರ್ಷಗಳು) ಹೋಲಿಸುವಾಗ ವ್ಯಕ್ತಿಯ ಜೀವಿತಾವಧಿಗೇನು ಸ್ಥಾನವಿದೆ? ಈ ಸೀಮಿತ ವ್ಯಾಪ್ತಿಯಲ್ಲೂ ಎಷ್ಟೊಂದು ಕಾಲವನ್ನು ಆತ ವೃಥಾ ಅಪವ್ಯಯ ಅಥವಾ ದುರ್ವ್ಯಯ ಮಾಡಿರುತ್ತಾನೆ ಎಂಬ ಸಂಗತಿಗಳನ್ನು ಗಮನಿಸುವಾಗ ೮೦ರ ಎತ್ತರದಲ್ಲಿ ನಿಂತಿರುವ ನನ್ನಂಥವನ ಪ್ರತಿಕ್ರಿಯೆ ಏನು? ವ್ಯಕ್ತಿಯ ಬದುಕಿಗೆ ಕೊನೆ ಇದ್ದೇ ಇದೆ. ಅದು ಖಾತ್ರಿ ಮುಗಿದ ಪಯಣವಾಗುತ್ತದೆ. ಆದರೆ ಈ ಅಲ್ಪಾವಧಿ ಮತ್ತು ಅತಿಸೂಕ್ಷ್ಮ ಅವಕಾಶಗಳನ್ನು ಆತ ಹೇಗೆ ಬಳಸಿಕೊಂಡಿದ್ದಾನೆ ಎಂಬುದು ಮಾತ್ರ ಮುಖ್ಯವಾಗುತ್ತದೆ.

ಪ್ರಸ್ತುತ ಪುಸ್ತಕದ ಉದ್ದಕ್ಕೂ ಬರುವ 'ಅತ್ರಿಸೂನು ಚೌಪದಿ' ಕುರಿತು ಒಂದು ವಿವರಣೆ. ಡಿವಿಜಿಯವರ 'ಮಂಕುತಿಮ್ಮನ ಕಗ್ಗ' ನಾನು ಮೆಚ್ಚಿರುವ ಪರಮೋತ್ಕೃಷ್ಟ ಕೃತಿಗಳ ಪೈಕಿ ಒಂದು. ಕಗ್ಗ ಮತ್ತು ಕತೆ ಹೊಸೆಯುವ ಚಾಳಿ ಚಿಕ್ಕಂದಿನಿಂದಲೂ ನನಗೆ ಅಂಟಿರುವ ಗೀಳು. ಆಧುನಿಕ ವಿಜ್ಞಾನ ಪರಿಕಲ್ಪನೆ ಮತ್ತು ಸಾಧನೆಗಳನ್ನು ಜನಪ್ರಿಯ ಶೈಲಿಯಲ್ಲಿ ಬರೆಯುವುದು ೧೯೪೯ರ ಸುಮಾರಿಗೆ ನನ್ನನ್ನು ವಶೀಕರಿಸಿಕೊಂಡ ಹವ್ಯಾಸ. ಶುದ್ಧ ಸಾತ್ತ್ವಿಕ ಶಾಸ್ತ್ರೀಯ ಸಂಗೀತದ ಒಬ್ಬ ನೈಷ್ಠಿಕ ಶ್ರೋತೃ ನಾನು. ಇಂಗ್ಲಿಷಿನಲ್ಲಿಯ Limmericks & Doggerel verses (ಚುಟುಕಗಳು) ನನಗೆ ಬಲುಪ್ರಿಯ. ಇವೆಲ್ಲ ಪರಿಕರಗಳೂ ನನ್ನ ಅನುಭವದ ಮೂಸೆಯಲ್ಲಿ ಪಾಕಗೊಂಡು ಕನ್ನದ ಜನಪ್ರಿಯ ವಿಜ್ಞಾನ ಕ್ಷೇತ್ರದಲ್ಲಿ ವಿವಿಧ ಪ್ರಯೋಗಗಳನ್ನು ಮಾಡಲು ಪ್ರೇರಣೆ ಊಡಿದವು. ರತ್ನ ಹಾಡಿರುವಂತೆ, "ಬುಂಡೇನೆತ್ತಿ ಕುಡುದ್ಬುಟ್ಪಾಂದ್ರೆ ತಕ್ಕೋ ಪದಗೋಳ್ ಬಾಣಾ!"

ಆರ್ಕಿಮಿಡೀಸ್‌ನಿಗೆ ಸಾಪೇಕ್ಷ ರಹಸ್ಯ ಸ್ಫುರಣವಾದಾಗಿನ ಉದ್ಗಾರ "ಯುರೀಕಾ" (ಕಂಡೆನಾ, ಕಂಡೆನಾ!), ರಾಮಾಯಣದಲ್ಲಿ ಸೀತಾದರ್ಶನಪುಳಕಿತ ಹನುಮಂತ ಶ್ರೀರಾಮನಿಗೆ ಆ ರೋಮಾಂಚಕ ಸುದ್ದಿಯನ್ನು ಅರುಹಿದ 'ದೃಷ್ಟಾ ದೇವೀ' – ಕಂಡೆನಾ ದೇವಿಯನು ಸನ್ನಿವೇಶ, ೧೯೧೯ರ ಸಂಪೂರ್ಣ ಸೂರ್ಯಗ್ರಹಣದ ಸಂದರ್ಭದಲ್ಲಿ ಸಾರ್ವತ್ರಿಕ ಸಾಪೇಕ್ಷತಾ ಸಿದ್ಧಾಂತಕ್ಕೆ ನಿಸರ್ಗ ಒತ್ತಿದ ಅಸ್ತು ಮುದ್ರೆಯ ನಾಟಕೀಯ ಸನ್ನಿವೇಶ ಮುಂತದವು ಹೇಗೆ ಇಂಗ್ಲಿಷಿನಲ್ಲಿ ಅಸಂಖ್ಯ ಕವನ ಮತ್ತು ಚುಟಕಗಳಿಗೆ ಸ್ಫೂರ್ತಿ ನೀಡಿವೆ ಎಂಬುದು ಸುಪರಿಚಿತ. ಉದಾಹರಣೆಗೆ ಅಧ್ಯಾಯ ೮೨ರಲ್ಲಿ ನಿರೂಪಿತವಾಗಿರುವ ಸೂತ್ರವಾಕ್ಯ : Wha Oh Be A Fine Girl Kiss Me Right Now Sweet! (ಇಲ್ಲಿಯ ಸೂತ್ರಪದಗಳು W,O,B,A,F,G,K,M,R,N,S ನಕ್ಷತ್ರಗಳ ಗುಣಧರ್ಮಗಳನ್ನು ನಿರ್ದಿಷ್ಟ ಕ್ರಮಾನುಸಾರ ಪ್ರತಿನಿಧಿಸುತ್ತವೆ). ಅಂದ ಮೇಲೆ ಚೆಲುಗನ್ನಡದಲ್ಲಿಯೂ ಸಂವಾದೀ ಸೂತ್ರವಾಕ್ಯ ಮರುವುಟ್ಟು ಪಡೆಯಬೇಡವೇ? ಅದು "ವ್ಹಾರೆವಾ! ಓನನ್ನ ಬಾಳ್ಬೆಳಕೆ ಆಗಮಿಸು! ಫ್ಲೇನಮಯ ಗೋರಸವ ಕೊಡು ನನಗೆ ಮೃದುಭಾಷಿ ರಸಿಕಮಣಿ ನಗುನಗುತ ಸಾರೆಲೇ!" ಇದನ್ನು ಇಂಗ್ಲಿಷಿಗೆ ಲಿಪ್ಯಂತರಿಸಿದರೆ ಇಲ್ಲಿ ಪ್ರತಿಯೊಂದು ಗಣದ ಆದಿ ಅಕ್ಷರ ಮೇಲಿನ ಸೂತ್ರಪದಗಳೇ ಆಗಿವೆ ಎಂಬುದನ್ನು ಗಮನಿಸಬಹುದು. ಹಾಗೆ ನೋಡುವುದಾದರೆ ಆದಿಕಾವ್ಯದ ಆರಂಭ ಘಟನೆಯೇ (ಮಾ ನಿಷಾದ!) ವಾಲ್ಮೀಕಿಯ ಅವತಾರ ಕಾರಣವಲ್ಲವೇ?

ನಕ್ಷತ್ರವೊಂದರ ವಿಕಾಸ ಹಲವು ಬಿಲಿಯನ್ ವರ್ಷಗಳ ವಿಶ್ವ ವಿದ್ಯಮಾನ. ಇದರ ವಿವಿಧ ಹಂತಗಳನ್ನೂ ಇವನ್ನು ರೂಪಿಸುವ ವಿವಿಕ್ತ ಬಲಗಳನ್ನೂ ಖಭೌತ ವಿಜ್ಞಾನಿಗಳು ೨೦ನೆಯ ಶತಮಾನದ ಉತ್ತರಾರ್ಧದಲ್ಲಿ ಅನಾವರಣಗೊಳಿಸಿದರು. ಆ ರೋಮಾಂಚಕ ಸಂದರ್ಭದಲ್ಲಿ ಒಬ್ಬ ಮುಂಚೂಣಿ ಸಂಶೋಧಕನ ಕಾವ್ಯ ಪ್ರತಿಭೆ ಮಿಂಚಿತು: ಆತ ತನ್ನ ಗಣಕಕ್ಕೆ ಕಾಲದ ಹೊರತಾಗಿ ಉಳಿದೆಲ್ಲ ಮಾಹಿತಿಗಳನ್ನೂ ಊಡಿದ. ಕಾಲ ಕುರಿತಂತೆ ಮಾತ್ರ ಬಿಲಿಯನ್ ವರ್ಷಗಳನ್ನು ಕೇವಲ ಸೆಕೆಂಡಿನ ಅಲ್ಪಾಂಶಕ್ಕೆ ಹ್ರಸ್ವಗೊಳಿಸಿದ. ಆಗ ಆ ಗಣಕದ ತೆರೆ ಮೇಲೆ ಪ್ರಕಟವಾದ ಅಭೂತಪೂರ್ವ ದೃಶ್ಯ ಅವನಿಂದ ಹೊಮ್ಮಿಸಿದ ಕಾವ್ಯೋದ್ಗಾರ: At the yonder galaxy I saw a star dancing to the tune of gravity! ಇದರ ಕನ್ನಡ ರೂಪ: ಬ್ರಹ್ಮಾಂಡ ಗರ್ಭದಲಿ ಗುರುತ್ವದ ಗಾಯನಕೆ ನಕ್ಷತ್ರ ನರ್ತನವ ನಾಕಂಡೆ!"

ಇವೆಲ್ಲ ನನ್ನ ಕು–ಕವಿತೆಗಳ ಒರತೆಗಳಿಗೆ ಕಾರಣ, ಚಿಕ್ಕಂದಿನಿಂದಲೇ ಕಗ್ಗ ಹೊಸೆತದಲ್ಲಿ ನಾನು ಮಾಡಿದ ಕವಾಯತಿ ಮತ್ತು ಕನ್ನಡದಲ್ಲಿ ಜನಪ್ರಿಯ ವಿಜ್ಞಾನ ವಾಙ್ಮಯ ರಚನೆಯ ವೇಳೆ ವಿವಿಧ ಶೋಧಗಳು ನನ್ನಲ್ಲಿ ಪ್ರೇರಿಸಿದ ಅಮೂರ್ತ ಭಾವನೆಗಳು. ಪ್ರಾಯಶಃ ೧೯೭೦ರ ದಶಕದಲ್ಲಿ, ಮುಖ್ಯವಾಗಿ ಐನ್‌ಸ್ಟೈನ್ ಜೀವನ ಚರಿತ್ರೆ ಬರೆಯಲು ತೊಡಗಿದಾಗ, ಇವು ತಂತಾವೇ ಪ್ರವಹಿಸತೊಡಗಿಸಿದುವು. ಆಗ ಅತ್ರಿಸೂನು–ಉವಾಚ ಉಗಮಿಸಿತು. [**'ಅತ್ರಿಸೂನು ಉವಾಚ' ಬೆಲೆ ರೂ ೩೦. ಲಭ್ಯ – ಅವ**] ಸ್ವಗೃಹದ ನಾಮ ಅತ್ರಿ, ಎಂದೇ **'ಮಂಕುತಿಮ್ಮ'** ಗಣಕ್ಕೆ ಸಂವಾದಿಯಾಗಿ 'ಅತ್ರಿಸೂನು' ಅಂಕಿತ. ಅಂದ ಮೇಲೆ ಆ ಮಹಾಪ್ರತಿಭೆ ಜೊತೆ ನನ್ನನ್ನು ಹೋಲಿಸಿಕೊಂಡಾಗ ನನ್ನ ಸ್ಥಾನ ಏನು?

ಅತ್ರಿಸೂನೆಂಬಾತ ಮಂಕುತಿಮ್ಮನಿಗೇನು
ಪುತ್ರನೇ, ಭ್ರಾತೃವೇ, ನಕಲಿಯೇ?
ಚಿತ್ರಭಾನುವು ತಿಮ್ಮ ಕಿರಿ ಸೊಡರು ಸೂನು
ಶತ್ರುಗಳುಭಯರುಂ ತಮಂಧಕ್ಕೆ ಅತ್ರಿಸೂನು

ಜೊತೆಗೆ ಮಂಕುತಿಮ್ಮನ ಕಗ್ಗದಲ್ಲಿ, ಅಂತೆಯೇ ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯದಲ್ಲಿ ವೈಜ್ಞಾನಿಕ ಅಂಶಗಳು ಎಂಬ ಪ್ರತ್ಯೇಕ ಅಧ್ಯಯನಗಳನ್ನು **'ಕುವೆಂಪು ದರ್ಶನ ಸಂದರ್ಶನ'** [**ಲಭ್ಯ, ಬೆಲೆ ರೂ ೪೫ – ಅವ**] ಎಂಬ ನನ್ನ ಪುಸ್ತಕದಲ್ಲಿ ಗಮನಿಸಬಹುದು.

ಇನ್ನು ಕಿರಿದರೊಳ ಪಿರಿದರ್ಥ ತುಂಬಿರುವ ಬೆನ್ನುಡಿ ಬಗ್ಗೆ ಎರಡು ಮಾತು. ೧೯೬೯ರಲ್ಲಿ ನಾವು ಮೈಸೂರಿನ ಶಾಶ್ವತ ನಿನಾಸಿಗಳಾದಾಗ ಕನ್ನಡ ಪ್ರಾಧ್ಯಾಪಕ ಎಸ್. ರಾಘವೇಂದ್ರ ಭಟ್ಟ ಮತ್ತು ಅವರ ಮಡದಿ ಕಮಲಾಕ್ಷಿ ದಂಪತಿಗಳ ಪರಿಚಯವಾಯಿತು – ಅಕ್ಕಪಕ್ಕದ ಮನೆಗಳವರೆಂದ ಅನಿವಾರ್ಯತೆಯಿಂದ! ಆದರೆ ಸಮಾನಾಸಕ್ತಿ ಮತ್ತು ಮನೋಧರ್ಮಗಳ ಕಾರಣವಾಗಿ ಈ ಕುಟುಂಬ ಸ್ನೇಹ ಕಾಲ ಸಂದಂತೆ ಅಧಿಕ ಗಾಢತೆ ಪಡೆದಿದೆ. ನನ್ನ ಎಲ್ಲ ಹಾರಾಟ, ಚೀರಾಟ ಮತ್ತು ಹುಚ್ಚಾಟಗಳಿಗೆ ಸಾಕ್ಷಿಯೂ ಮನಸ್ಸಾಕ್ಷಿಪಾಲಕರೂ ಆಗಿದ್ದಾರೆ ಭಟ್ಟರು. ವಿದ್ವಾಂಸ, ಸಹೃದಯ, ನಿಶಿತಮತಿ ಆದರೆ ಲೇಖನವಿದೂರ ರಾಘವೇಂದ್ರ ಭಟ್ಟರು ನನ್ನ ಕೋರಿಕೆಯನ್ನು ಮನ್ನಿಸಿ ಬೆನ್ನುಡಿ ಬರೆದುಕೊಟ್ಟು ಉಪಕರಿಸಿದ್ದಾರೆ.

ಈಗ ಕೃತಜ್ಞತಾ ಸಮರ್ಪಣೆ: 'ಮುಗಿಯದ ಪಯಣ'ವನ್ನು ಪ್ರಕಟಿಸುತ್ತಿರುವಾತ ಅತ್ರಿ ಬುಕ್ ಸೆಂಟರಿನ ಮಾಲಿಕ ಮತ್ತು ನಮ್ಮ ಮಗ ಅಶೋಕ; ತಮ್ಮದೇ ಕೆಲಸವೆಂಬ ನಿವೇದಿತ ಭಾವದಿಂದ ಇದನ್ನು ಮುದ್ರಿಸಿಕೊಟ್ಟಿರುವವರು ಶ್ರೀ ಶಕ್ತಿ ಎಲೆಕ್ಟ್ರಿಕ್ ಪ್ರೆಸ್‌ನ ಕುಟುಂಬ ಮಿತ್ರ ರಾ. ಮೋಹನಮೂರ್ತಿ, ಬೆರಳಚ್ಚುಗಾರ್ತಿ ಸಿ.ಕೆ ಲತಾ ಮತ್ತು ಇವರ ಸಹಚರರು; ಮುದ್ರಣ ಕರಡನ್ನು ಸಂಪಾತಿ ದೃಷ್ಟಿಯಿಂದ ಓದಿದಾಕೆ ಸೊಸೆ ರುಕ್ಮಿಣಿಮಾಲಾ; ನನ್ನ ಕೆಲಸಕ್ಕೆ ಸದಾ ಉತ್ಸಾಹೋಲ್ಲಾಸ ಸಿಂಚನ ಒದಗಿಸುತ್ತಿದ್ದಾಳೆ ಮೊಮ್ಮಗಳು ಅಕ್ಷರಿ; 'ದೈವಿಕ ಗೊಂದಲ'ದ ಗೂಡಾಗಿರುವ ನನ್ನ ದಫ್ತರಗಳಿಂದ ಸಾಂದರ್ಭಿಕ ಛಾಯಾಚಿತ್ರಗಳನ್ನು ಆಯ್ದು ಮುದ್ರಣಕ್ಕೆ ಹೊಂದಿಸಿದವರು ಮಡದಿ ಲಕ್ಷ್ಮಿ ಮತ್ತು ಸೊಸೆ ಮಾಲಾ; ಛಾಯಾಚಿತ್ರಗಳ ಗೊಂಡಾರಣ್ಯದಿಂದ ಅಮೂಲ್ಯವಾದವನ್ನು ಮುದ್ರಣಕ್ಕೆ ಅಳವಡಿಸಿ, ಹೊದಿಕೆ ಚಿತ್ರಗಳ ವಿನ್ಯಾಸ ಮಾಡಿದವರು ಮೋಹನಮೂರ್ತಿ ಮತ್ತು ಅಭಯ. ನನ್ನ ಸೋದರ ಮತ್ತು ಜ್ಞಾತಿಸಂಬಂಧಿಗಳಾಗಿರುವ ಗೋವಿಂದ, ಕೃಷ್ಣಮೂರ್ತಿ, ರಾಘವೇಂದ್ರ, ದಿವಾಕರ, ನಾರಾಯಣ, ರಾಧಾಕೃಷ್ಣ ಮೊದಲಾದವರು ನಮ್ಮ (ಗುಡ್ಡೆಹಿತ್ಲು ಮತ್ತು ಅಡಮನೆ) ಕುಟುಂಬಗಳ ಬಗ್ಗೆ ಸಮೃದ್ಧ ಮಾಹಿತಿಗಳನ್ನು ಒದಗಿಸಿದ್ದಾರೆ. ದೇಜಗೌ ಅವರ ಛಾಯಾಚಿತ್ರ ನೀಡಿದವರು ಅರ್ಕೇಶ್. ಇವರೆಲ್ಲರ ನಿಷ್ಕಾಮ ಕರ್ಮವನ್ನು ಹೇಗೆ ತಾನೇ ಅಳೆಯಲಿ! ನಲ್ಮೆಯ ನೆಲೆಯಲ್ಲಿ ಮಾನಕ ಮೂಕವಾಗುವುದಿಲ್ಲವೇ?

ಆವ ಗಾಳಿಯದಾವ ಧೂಳ್ಕಣವ ಪೊತ್ತಿಹುದೊ!
ಆವ ಧೂಳಿನೊಳಾವ ಚೈತನ್ಯಕಣವೊ!
ಜೀವವಿಂತಜ್ಞಾತ ಸೂತ್ರದಾಟದ ಬೊಂಬೆ
ಭಾವಿಸಾ ಸೂತ್ರಗಳ ಮಂಕುತಿಮ್ಮ॥

ನಾದನಾವೆಯನೇರಿ ಋತಚಿದ್ರಸಾಬ್ಧಿಯಲಿ
ವೇದಪುರುಷನ ತಾಣ ಶೋಧಿಸಲು ತೇಲಿದೆನು
ಮೋದಪ್ರಮೋದಗಳ ನಾಡಿನಿಂ ಜಿಗಿದಂತೆ
ವೇದವೇ ನಾವೆಯಲಿ ಲೀನಿಸಿತು ಅತ್ರಿಸೂನು॥

ಸಂಕಲ್ಪ ಶುದ್ಧವಿರೆ ಮಾರ್ಗ ಬಲು ಸುಸ್ಪಷ್ಟ
ಶಂಕೆತೊರೆ ನಚಿಕೇತ ನಿಷ್ಠೆಯಿಂ ಮುನ್ನಡೆಯೊ!
ಸಂಕಷ್ಟ ಸರ್ವಸ್ವ ಮರೆಯಾಗಿ ಬಾಳಿನಲಿ
ಶಂಕರತೆ ನಳನಳಿಸುವುದು ದಿಟವೊ ಅತ್ರಿಸೂನು॥

"ಮತವೆಂತೊ ಪಥವಂತು" ವಾದಿಸಿದ ವೇದಾಂತಿ
"ಪಥದಂತೆ ಮತ"ವೆಂದು ನಡೆದನು ವಿಜ್ಞಾನಿ
ಮತ–ಪಥವಭಿನ್ನವೆಂದಿತು ವಿಶ್ವ – ವಾಸ್ತವದಿ
ಸತತ ಕ್ರಿಯಾಶೀಲನಾಗಿರೋ ಅತ್ರಿಸೂನು॥

ಅನುಭವಕೆ ನುಡಿಯೊಡಲ ಕೊಡಲು ಪ್ರಯತ್ನಿಸುವೆ–
ನನವರತ ದೊರೆವುದೆನಗಾನಂದವೀ ಪಥದಿ
ಮನವೊಪ್ಪಿದರೆ ನಿಮಗೆ ಸ್ವೀಕರಿಸಿ – ಹಕ್ಕಿ ಹಾ–
ಡನು ಬಂಧಿಸುವ ಸಾಹಸವನು ಬಿಡಿ ಅತ್ರಿಸೂನು॥

ಕಾರ್ಯಮಂಥನದಲ್ಲಿ ಗರಳಬರೆ ಕೊರಳಿನಲಿ
ಧೈರ್ಯದಿಂ ಧರಿಸುವಾ ಶಿವನಾಗು, ಸುಧೆಯೊಸರೆ
ಸ್ಥೈರ್ಯದಿಂ ಹಂಚು ಮೋಹಿನಿಯಂತೆ ಮನುಕುಲಕೆ
ಆರ್ಯತ್ವಮಿದು ಕಣಾ ಬದುಕಿನಲಿ ಅತ್ರಿಸೂನು॥

ಸುವರ್ಣ ಕರ್ನಾಟಕ ರಾಜ್ಯೋತ್ಸವ ದಿವಸ ೨೦೦೬
ಜಿ.ಟಿ. ನಾರಾಯಣ ರಾವ್

ಅರ್ಪಣೆ

ಕನ್ನಡದ ಕ್ರತುಶಕ್ತಿ, ಶ್ರೀ ರಕ್ಷೆ, ಕುವೆಂಪುಶಿಷ್ಯ, ವಿದ್ವಾಂಸ, ಸಂಘಟಕ, ಕನ್ನದ ವಿಶ್ವಕೋಶ ಯೋಜನೆಯ ಕನಸು ಕಂದು ಅದನ್ನು ನನಸು ಮಾಡಿದ ಮಹಾಪುರುಷ ಮತ್ತು ನನ್ನ ಜೀವನದ ಒಂದು ಪರ್ವ ಕಾಲದಲ್ಲಿ (೧೯೬೮–೬೯) ಅನಿರೀಕ್ಷಿತವಾಗಿ ರಂಗಪ್ರವೇಶಿಸಿ ನನಗೆ ನೂತನ ಮತ್ತು ಅನನ್ವೇಷಿತ ರಂಗಗಳಲ್ಲಿ ಮುಕ್ತವಾಗಿ ವ್ಯವಹರಿಸಲು ಅನಂತ ಅವಕಾಶಗಳನ್ನು ಪ್ರೀತಿಯಿಂದ ಒದಗಿಸಿದ

ಪೂಜ್ಯ ದೇ. ಜವರೇ ಗೌಡರಿಗೆ

ಭಕ್ತಿ ಪೂರ್ವಕ

ಕುವೆಂಪು ಉದ್ಗರಿಸಿದಂತೆ

ರಸಜೀವನಕೆ ಮಿಗಿಲ್ ತಪಮಿಹುದೆ?
ರಸಸಿದ್ಧಿಗಿಂ ಮಿಗಿಲೆ ಸಿದ್ಧಿ? ಪೊಣ್ಮಿದೆ ಸೃಷ್ಟಿ
ರಸದಿಂದೆ; ಬಾಳುತಿದೆ ರಸದಲ್ಲಿ; ರಸದೆಡೆಗೆ ತಾಂ
ಪರಿಯುತಿದೆ; ಪೊಂದುವುದು ರಸದೊಳೈಕ್ಯತೆವೆತ್ತು
ತುದಿಗೆ, ರಸಸಾಧನಂಗೈಯ್ಯದಿರುವುದೆ ಮೃತ್ಯು.
ಆನಂದರೂಪಮಮೃತಂ ರಸಂ!

–ಜಿ.ಟಿ ನಾರಾಯಣ ರಾವ್

ಒಂದು ತೆರನ ಸಂಪಾದಕೀಯ...
–ಅಶೋಕವರ್ಧನ



‘ಮುಗಿಯದ ಪಯಣ’ದ ಧಾರಾವಾಹಿ ೨೦೧೨ರ ಫೆಬ್ರುವರಿ ಹನ್ನೆರಡರಂದು ವಾರಕ್ಕೊಂದು ಕಂತಿನಂತೆ ತೊಡಗಿ, ನಲ್ವತ್ತೊಂದು ಕಂತುಗಳಲ್ಲಿ ಹರಿದು, ಈಗ ಮುಗಿದ ಮತ್ತು ವಿ–ಪುಸ್ತಕಕ್ಕೆ ಉತ್ತಾರಣೆಗೊಂಡಿದೆ. ಧಾರಾವಾಹಿಯಲ್ಲಿ ಮೂಲ ಅಧ್ಯಾಯಗಳನ್ನು ಒಡೆಯದೆ, ಪ್ರತಿ ಕಂತಿನಲ್ಲಿ ಕನಿಷ್ಠ ಸುಮಾರು ಇಪ್ಪತ್ತು ಪುಟಗಳ ಓದವಕಾಶವನ್ನು ಕೊಡಬೇಕೆಂದು ನಾನು ಅಂದಾಜಿಸಿದ್ದೆ. ಆದರೆ ಇಲ್ಲೇ ಕೆಳಗೆ ಕಾಣಿಸಿದ ಕಾರಣಗಳಿಗಾಗಿ ಅಧ್ಯಾಯಗಳನ್ನು ಹೆಚ್ಚಿಸುವುದು ಅನಿವಾರ್ಯವಾಯಿತು. ಹಾಗೆಂದು ಮೂಲ ಬರವಣಿಗೆಯಲ್ಲಿ ಎಲ್ಲೂ ನಾನು ಹಸ್ತಕ್ಷೇಪ ಮಾಡಿಲ್ಲ. ಅನಿವಾರ್ಯವಾಗಿ ಟಿಪ್ಪಣಿಸಿದ್ದಿದ್ದರೂ ನನ್ನ ಜಾಲತಾಣದ ಇತರ ಬರೆಹಗಳಲ್ಲಿ ಕಾಣಿಸಿದಂತೆ [. . . ಅ.ವ] ಹೀಗೆ ದೊಡ್ಡ ಕಂಸಗಳ ನಡುವೆ ನನ್ನ ಹೆಸರು ನಮೂದಿಸಿಯೇ ಮಾಡಿದ್ದೇನೆ, ಉಳಿದವೆಲ್ಲಾ ತಂದೆಯವೇ.

ಜಿಟಿನಾರಿಗೆ (ಮಗ ಹಾಗೂ ಪ್ರಕಾಶಕನಾಗಿ ನನ್ನ ತಿಳುವಳಿಕೆ) ಆತ್ಮಕತೆ ಬರೆಯುವಲ್ಲಿ ಎರಡು ಹಿಂಜರಿಕೆಗಳಿತ್ತು. ಮೊದಲನೆಯದು ಮತ್ತು ಬಲವತ್ತರವಾದದ್ದನ್ನು ಅವರೇ ಅರಿಕೆಯಲ್ಲಿ ಸಾಕಷ್ಟು ದೀರ್ಘವಾಗಿ, ಉದಾಹರಣೆಗಳ ಸಹಿತ ಚರ್ಚಿಸಿದ್ದಾರೆ; ನೀವೇ ಓದಿಕೊಳ್ಳಿ. ಎರಡನೆಯದ್ದು ನನ್ನ ಅಂದಾಜು. ಹಾಗಾಗಿ ತುಸು ವಿವರಣೆ ಸಹಿತ ಪ್ರಸ್ತುತಿ:

ತಂದೆ ಆತ್ಮಕತೆಗೆ ಇಳಿಯುವುದಕ್ಕಿಂತ ಒಂದೆರಡು ವರ್ಷಕ್ಕೂ ಮೊದಲೇ ನಾನವರಲ್ಲಿ ‘ನಕ್ಷತ್ರ ವೀಕ್ಷಣೆ’ ಪುಸ್ತಕದ ಮರುಮುದ್ರಿಸುವ ಆವಶ್ಯಕತೆಯನ್ನು ತಿಳಿಸಿದ್ದೆ. ತಂದೆ ವಿಜ್ಞಾನಸಾಹಿತ್ಯದ ಬರಿಯ ಮರುಮುದ್ರಣವನ್ನು ಎಂದೂ ಒಪ್ಪಿದವರಲ್ಲ. ಪ್ರತಿ ಮರುಮುದ್ರಣದ ಹಂತದಲ್ಲಿ ಕಾಲಾನುಗುಣವಾಗಿ ವಿಷಯವನ್ನು ಪರಿಷ್ಕರಿಸಲೇ ಬೇಕು ಎಂದು ನಂಬಿದ್ದರು ಮತ್ತು ಉಗ್ರವಾಗಿ ಪ್ರತಿಪಾದಿಸುತ್ತಿದ್ದರು. ಸಹಜವಾಗಿ ನನ್ನ ‘ಮರುಮುದ್ರಣ’ ಯೋಚನೆಯನ್ನು ಚಿಗುರಿನಲ್ಲೇ ಚಿವುಟಿದರು. “ಖಗೋಳ ವಿಜ್ಞಾನದ ನೂತನ ‘ಪಠ್ಯ’ವನ್ನೇ ಬರೆಯಬೇಕು. ಆದರೆ, ನಾನಲ್ಲ! ವಯೋಸಹಜವಾದ ಬಳಲಿಕೆಯಲ್ಲಿ ವಿಸ್ತೃತ ಕೃತಿಯೊಂದನ್ನು ಈಗ ರಚಿಸುವುದು ನನಗಸಾಧ್ಯ.” [ಮುಂದುವರಿದು “ನೋಡುವ, ಶಿಷ್ಯ ಗೋವಿಂದನನ್ನು (ಪ್ರೊ| ಎ.ವಿ. ಗೋವಿಂದರಾವ್) ಒಪ್ಪಿಸುತ್ತೇನೆ” ಎಂದಿದ್ದರು ಮತ್ತು ಒಪ್ಪಿಸಿದರು. ಆದರೆ ಆ ಪುಸ್ತಕ ನೋಡಲು ತಂದೆ ಉಳಿಯಲಿಲ್ಲ. ಗೋವಿಂದರಾಯರು ‘ತಾರಾವಲೋಕನ’ ಬರೆದು ಕೊಟ್ಟರು, ನಾನು ಪ್ರಕಟಿಸಿದ್ದೂ ಆಯ್ತು, ಮಾರಿ ಮುಗಿಸಿದ್ದೂ ಆಯ್ತು! ಈಚೆಗೆ ಗೋವಿಂದರಾಯರು ಅದನ್ನು ಅಂತರ್ಜಾಲದಲ್ಲಿ ವಿ–ಪುಸ್ತಕವಾಗಿ ಒದಗಿಸುತ್ತೇನೆ ಎಂದಿದ್ದಾರೆ. ಎವಿಜಿ ಗುರುವಿಗೆ ತಕ್ಕ ಶಿಷ್ಯ – ಯಥಾಪ್ರತಿ ಕೊಡಲಾರರು, ಪರಿಷ್ಕರಿಸುತ್ತಿರಬೇಕು. ಕಾದು ನೋಡಿ.]

ನಾವು – ಆತ್ಮೀಯರು (ಮನೆಯವರು ಮತ್ತು ಅಭಿಮಾನಿಗಳು), ಜಿಟಿನಾರ ಮೇಲೆ ಆತ್ಮಕತೆಗೆ ಒತ್ತಡ ಹೇರಿದೆವು. ಇದಕ್ಕೆ ವಿಜ್ಞಾನಸಾಹಿತ್ಯದ ಆಯಾಮಗಳಿಲ್ಲ, ಸುಲಭ ಎನ್ನುವುದು ನಮ್ಮ ತರ್ಕ. ತಂದೆ ‘ಮುಗಿಯದ ಪಯಣ’ವನ್ನೇನೋ ಮಾಡಿಕೊಟ್ಟರು. ಎಂದಿನಂತೆ ನಮ್ಮ ಆಪ್ತರಾದ ಶ್ರೀ ರಾ. ಮೋಹನಮೂರ್ತಿಯವರೇ ತಮ್ಮ ಶ್ರೀ ಶಕ್ತಿ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಕೊಟ್ಟಿದ್ದರು. ಆ ಎಲ್ಲ ಪ್ರತಿಗಳು ಮುಗಿಯುವ ಕಾಲಕ್ಕೆ ನಾನು ಮುದ್ರಿತ ಪುಸ್ತಕಗಳಿಂದಲೇ (ಸಾಹಿತ್ಯದಿಂದಲ್ಲ – ಗಮನಿಸಿ) ದೂರಸರಿದಿದ್ದೆ. ಸಹಜವಾಗಿ ಮೋಹನಮೂರ್ತಿಯವರ ಗಣಕದಲ್ಲಿದ್ದ ‘ಸಾಫ್ಟ್ ಕಾಪಿ’ ಒದಗುತ್ತದೆಂಬ ವಿಶ್ವಾಸದಲ್ಲಿ ನಾನು ಇಲ್ಲಿ ‘ಮುಗಿಯದ ಪಯಣ’ವನ್ನು ಧಾರಾವಾಹಿ ಘೋಷಿಸಿಕೊಂಡೆ. ಆದರೆ ಅವರ ಗಣಕ ಕೆಟ್ಟುಹೋಗಿ ನನಗೇನೂ ದಕ್ಕಲಿಲ್ಲ. ಆಗ ರುಕ್ಮಿಣಿಮಾಲಾ (ನನ್ನ ತಮ್ಮನ ಹೆಂಡತಿ) – ತಂದೆಯ ಎಲ್ಲಾ ಗಣಕ ಚಟುವಟಿಕೆಗಳಿಗೆ ಏಕಮಾತ್ರ ನಿರ್ವಾಹಕಿ, ಸಹಾಯಕ್ಕೆ ಒದಗಿದಳು. ಮೈಸೂರು ಮನೆಯ ಗಣಕದಲ್ಲಿ ತಂದೆ ಬೆರಳಚ್ಚಿಸಿಟ್ಟಿದ್ದ ‘ಮುಗಿಯದ ಪಯಣ’ದ ಅಷ್ಟೂ ಕಡತವನ್ನು ಕಳಿಸಿಕೊಟ್ಟಳು. ಆದರೆ

ಅದನ್ನು ನೋಡುವಾಗ ತಂದೆಗೆ ಈ 'ಪುಸ್ತಕ ಪಯಣ'ವೂ ಅಷ್ಟೇನೂ ಸುಲಲಿತವಾಗಲಿಲ್ಲ; ತಂದೆಗೆ ದೊಡ್ಡ ಕೃತಿರಚನೆಗಿದ್ದ ಹಿಂಜರಿಕೆಗೆ ಆಧಾರವನ್ನು ಕಂಡುಕೊಂಡೆ! (ಮೊದಲು ನಾನಿದನ್ನು ವಿವರಗಳಲ್ಲಿ ಓದಿರಲಿಲ್ಲ!!)

'ಎನ್‌ಸಿಸಿ ದಿನಗಳು' – ತಂದೆಯ ಆತ್ಮಕಥಾನಕದ ಒಂದು ಬಲು ಮುಖ್ಯ ಭಾಗವೂ ಹೌದು, ಅತ್ಯಂತ ಮನೋಹರವೂ ಶಕ್ತವೂ ಆದ ಲಲಿತ ಬರಹವೂ ಹೌದು. 'ಮುಗಿಯದ ಪಯಣ'ದಲ್ಲಿ ಆ ಲಯ ಇದೆ ಆದರೆ ವಿಸ್ತರಿಸುವ ತಾಳ್ಮೆ (ಅವರೇ ಹೇಳಿಕೊಂಡಂತೆ ಶಕ್ತಿ) ಉಳಿದಿರಲಿಲ್ಲ. ವರ್ಷಾನುಕ್ರಮದಲ್ಲಿ ಸ್ವಲ್ಪ ಬರೆದು, ಉಳಿದಂತೆ ವಿವಿಧ ಕಾಲಘಟ್ಟಗಳಲ್ಲಿ ತಾನೇ ಬರೆದ ಹಲವು ಬಿಡಿ ಬರಹಗಳನ್ನು ಕತ್ತರಿಸಿ, ಸೇರಿಸಿ (ಗಣಕ ಭಾಷೆಯಲ್ಲಿ ಹೇಳುವುದಿದ್ದರೆ ಕಟ್ ಅಂಡ್ ಪೇಸ್ಟ್) ಕೇವಲ ಪರಸ್ಪರ ಸಂಪರ್ಕ ಮಾತುಗಳನ್ನಷ್ಟೇ ಬರೆದು ಕೈತೊಳೆದುಕೊಂಡಿದ್ದಾರೆ. ವಾಸ್ತವವಾಗಿ ತಂದೆಯ ಗಣಕ–ಪ್ರತಿಯಲ್ಲಿ ". . . .ಪುಸ್ತಕದ (ಅಥವಾ ಲೇಖನದ) ಗುರುತಿಸಿದ ಭಾಗಗಳನ್ನು ತುಂಬಿ" ಎಂಬ 'ಮುದ್ರಕನಿಗೆ ಸೂಚನೆ'ಗಳು ಹೇರಳವಿದ್ದುವು. ಅಂದು ಮುದ್ರಕರಿಗೆ ತಂದೆ ಒದಗಿಸಿದ್ದಿರಬಹುದಾದ 'ಮೂಲ'ಗಳು ಇಂದು ನನಗೆ ಅಲಭ್ಯವಾದ್ದರಿಂದ ನಾನು ಇಲ್ಲಿ ಅವುಗಳ ವಿವರಗಳನ್ನು ಕೊಡಲಾರೆ ಮತ್ತು ಅಷ್ಟನ್ನೂ ನಾನು ಮೊದಲ ಮುದ್ರಣದ 'ಮುಗಿಯದ ಪಯಣ'ದಿಂದ ಹೊಸದಾಗಿ ಬೆರಳಚ್ಚಿಸಿದ್ದೇನೆ. ಆಗ ಪುಸ್ತಕದ ಒಟ್ಟಂದಕ್ಕೆ ಒಪ್ಪದ ಕೆಲವು ಕೊರತೆಗಳು (ತಪ್ಪಲ್ಲ), ಕೆಲವು ಅನಾವಶ್ಯಕ ಮರು ಉಲ್ಲೇಖಗಳು ಕಾಣಿಸಿದವು. ಅವನ್ನೇ ನಾನು 'ಎರಡನೇ ಹಿಂಜರಿಕೆ' ಎಂದು ಗುರುತಿಸುತ್ತೇನೆ. ನಾನಿಲ್ಲಿ ಅವರ ಬರಹದ ಮೌಲ್ಯಮಾಪನ ಮಾಡುತ್ತಿರುವುದಲ್ಲ, ಅವರದೇ ಆದರ್ಶದ ಎದುರು ಕಾಲ–ಪ್ರಭಾವ ಎಷ್ಟು ನಿಷ್ಕರುಣಿ ಎಂದು ಮಾತ್ರ ದಾಖಲಿಸುತ್ತಿದ್ದೇನೆ.

ಕುದುರೆಮುಖದೆಡೆಗೆ ಮಾತ್ರ ಮೊದಲು ಸ್ವತಂತ್ರ ಪುಸ್ತಕವಾಗಿಯೇ ಬರೆಯಲ್ಪಟ್ಟಿತ್ತು. ಉಳಿದಂತೆ ವಿವಿಧ ಕಾಲಘಟ್ಟಗಳಲ್ಲಿ ಸಾಮಯಿಕವಾಗಿ ಬಂದ ಕಾಲೇಜು ಸಹಕಾರ ಸಂಘ ಅನುಭವ, ಸಿಎನೆಸ್ ಮೊದಲಾದವರ ಜೀವನ ವೃತ್ತಗಳು, ಸ್ಮರಣಾದಿ ಲೇಖನಗಳು ಯಥಾವತ್ತು (ಹೌದು, ಪರಿಷ್ಕರಣೆ ಇಲ್ಲದೆ) ಸೇರಿ ಹೋಗಿವೆ. ಅವುಗಳ ಪರಿಷ್ಕರಣೆ ತುಂಬ ದೊಡ್ಡ ಕೆಲಸ ಮತ್ತು ಅಷ್ಟೇನೂ ತುರ್ತಿನದ್ದಲ್ಲ ಎಂದು ಕಂಡದ್ದರಿಂದ ನಾನು ವಹಿಸಿಕೊಂಡಿಲ್ಲ. ಆದರೆ ಸುಮಾರು ಒಂದು ನೂರು ಮುದ್ರಿತ ಪುಟಗಳಿಗೆ ಚಾಚಿಕೊಳ್ಳುವ ಅಧ್ಯಾಯ ೩೨ – ಭೌತ ಶಿಖರಾರೋಹಣ, ಅಂದರೆ ಮೂಲದಲ್ಲಿ 'ಕುದುರೆಮುಖದೆಡೆಗೆ' ಎಂಬ ಇಡಿಯ ಪುಸ್ತಕ ಬಂದಿದೆ. ನಾನು ಅಲ್ಲಿ ತಂದೆಯೇ ಮಾಡಿದ್ದ ಮೂಲ ಅಧ್ಯಾಯ ಕ್ರಮಗಳನ್ನು ಇಲ್ಲಿ ಪುನಃ ಸ್ಥಾಪಿಸಿದ್ದೇನೆ. ಮತ್ತಂತದ್ದೇ ಇನ್ನೊಂದೆರಡು ಸನ್ನಿವೇಶಗಳಲ್ಲಿ ಮೂಲ ಬರೆಹ ಉಪಶೀರ್ಷಿಕೆಗಳ ಅಗತ್ಯ ಬಾರದ ದೀರ್ಘ ಲೇಖನಗಳಾಗಿದ್ದುವು. ಅವನ್ನು ಸಣ್ಣ ಅಧ್ಯಾಯಗಳನ್ನಾಗಿ ಗುರುತಿಸಿ ಒಡೆದು, ಯುಕ್ತ ಶೀರ್ಷಿಕೆ ಕೊಡುವಲ್ಲಿ ಸ್ವಾತಂತ್ರ್ಯವಹಿಸಿದ್ದೇನೆ. ಹಾಗಾಗಿ ಮೂಲದಲ್ಲಿದ್ದ ೬೪ ಅಧ್ಯಾಯಗಳು ಇಲ್ಲಿ ೯೩ರ ಹಿರಿ ಸಂಖ್ಯೆ ತೋರಿಸುತ್ತವೆ. ಆದರೆ ಬರೆಹದಲ್ಲಿ ಏನೂ ಬದಲಾಗಿಲ್ಲ ಎಂದು ಸ್ಪಷ್ಟೀಕರಿಸಬಯಸುತ್ತೇನೆ.

ಮುಗಿಯದ ಪಯಣದ ಧಾರಾವಾಹಿಯ ವಾರದ ಕಂತುಗಳಿಗೆ ತುಸು ಚಿತ್ರಗಳ ರಮ್ಯತೆಯನ್ನೂ ಸೇರಿಸುವ ಉದ್ದೇಶಕ್ಕಾಗಿ ಸುಲಭ ಸಂಪರ್ಕದ ಮೂಲಗಳಿಂದ ದಕ್ಕಿದ ಒಂದಷ್ಟು ಚಿತ್ರಗಳನ್ನು ಹಂಚಿ ಹಾಕುತ್ತಲೇ ಬಂದೆ. ಈಗ ಪುಸ್ತಕ ರೂಪದಲ್ಲೂ ಬಳಸಿಕೊಳ್ಳುತ್ತಿದ್ದೇನೆ. ಅವುಗಳಲ್ಲಿನ 'ಪಾತ್ರಧಾರಿ'ಗಳ ಪಟ್ಟಿ, 'ಚಿತ್ರಗ್ರಾಹಿ'ಗಳ ಕೃಪೆಯನ್ನೆಲ್ಲ ದಾಖಲಿಸುವಷ್ಟು ಶಕ್ತಿ ನನಗಿಲ್ಲವಾದ್ದರಿಂದ ಸವಿನಯ ಓದುಗರ ಕಲ್ಪನೆಗೇ ಬಿಟ್ಟಿದ್ದೇನೆ; ದಾರ್ಷ್ಟ್ಯ ಅಥವಾ ಉಡಾಫೆ ಖಂಡಿತಾ ಅಲ್ಲ.

ಎಂದಿನಂತೆ ನನ್ನ ಜಾಲತಾಣವನ್ನೆಷ್ಟೋ ಅಷ್ಟೇ ಪ್ರೀತಿ ಮತ್ತು ಸಾಮರ್ಥ್ಯಗಳಿಂದ ಮುಗಿಯದ ಪಯಣದ ವಿ–ಪುಸ್ತಕವನ್ನೂ ಮಗ ಅಭಯಸಿಂಹ ಈಗ ನಿಮ್ಮ ಉಚಿತ ಸಂಗ್ರಹಕ್ಕೆ ಇಲ್ಲಿ ಪ್ರಸ್ತುತಪಡಿಸಿದ್ದಾನೆ. ಅವನಿಗೆ ಕೃತಜ್ಞತೆ ಹೇಳುವ ಕೃತಕತೆ ಬಿಟ್ಟು ಶುಭಾಶಯದೊಂದಿಗೆ ವಿರಮಿಸುತ್ತೇನೆ.

ಶುಭವಂದನೆಗಳು
೨೮–೧–೨೦೧೪

ಇಂದಿನ ಕಣ್ಣು ಅಂದಿನ ಮಣ್ಣು
ಅಧ್ಯಾಯ ಒಂದು

ಎಂಬತ್ತರ ಹಿರಿ ಎತ್ತರದಿಂದ ನಡೆದು ಬಂದ ಹಾದಿಯತ್ತ ವಿಹಂಗಮ ಮತ್ತು ಚಿಕಿತ್ಸಕ ದೃಷ್ಟಿ ಹಾಯಿಸಿದಾಗ ಎದ್ದು ಕಾಣುವ ಸಂಗತಿಗಳು ಮೂರು: ೧. ಹುಟ್ಟು – ತಂದೆ – ತಾಯಿ – ಪರಿಸರ ಎಲ್ಲ ಆಕಸ್ಮಿಕಗಳು, ವ್ಯಕ್ತಿಯ ಇಚ್ಛಾತೀತವಾದವು; ೨. ವರ್ತಮಾನ ವಾಸ್ತವತೆಗೆ ಶರಣಾಗಿ ಪೂರ್ಣ ತನ್ಮಯತೆಯಿಂದ ಬಾಳುವ ಸಾಮರ್ಥ್ಯ ಆತನಲ್ಲಿ ನಿಹಿತವಾಗಿರುವುದು, ಇದರ ಪೂರ್ಣ ಉಪಯೋಗವನ್ನು ಆತ ಪಡೆದುಕೊಳ್ಳುವುದು ಕರ್ತವ್ಯ; ೩. ಈ ಮುಂದಿನ ಕಗ್ಗ ಅದನ್ನು ಸೂಚಿಸುತ್ತದೆ (ಮಂಕು ತಿಮ್ಮನ ಕ್ಷಮೆ ಕೋರಿ):

ಏರಿರದ ಬಂಡೆಗಳು ಸೃಷ್ಟಿಯಲಿ ನೂರಾರು
ಏರಲಾಗದ ಬಂಡೆ ಮೇದಿನಿಯೊಳಗಿಲ್ಲವೋ!
ಹೋರಾಡುತಿರು ಸದಾ ಸಂಕಲ್ಪ ದೃಢನಾಗಿ
ಧೀರ ಜೀವನಮೌಲ್ಯ ಸಾಧಿಸೆಲೊ ಅತ್ರಿಸೂನು

ಮಡಿಕೇರಿಯ ಗುಡ್ಡೆ ಹಿತ್ಲು ತಿಮ್ಮಪ್ಪಯ್ಯ–ವೆಂಕಟಲಕ್ಷ್ಮಿ ದಂಪತಿಗಳ ಮೊದಲ ಮಗನಾಗಿ ತಾಯಿಯ ತವರ್ಮನೆ ಮರಿಕೆಯಲ್ಲಿ (ಇದು ಪುತ್ತೂರು ಸಮೀಪದ ಒಂದು ಕಿರು ಹಳ್ಳಿ) ಹುಟ್ಟಿದೆ (೩೦–೧–೧೯೨೬). ಮರಿಕೆಯ ಪ್ರಶಾಂತ ಪರಿಸರ, ಮಡಿಕೇರಿ ಬ್ರಾಹ್ಮಣ ಕೇರಿಯಲ್ಲಿಯ ಅಶ್ವತ್ಥಕಟ್ಟೆ, ಓಂಕಾರೇಶ್ವರ ದೇವಾಲಯ, ಆಂಜನೇಯನ ಗುಡಿ, ಮನೆ ಮುಂದಿನ ಕಿರುತೊರೆ ಮತ್ತು ಮನೆ ಹಿಂದಿನ ಗುಡ್ಡಕಾಡು ಎಲ್ಲವೂ ಬಾಲ್ಯದಲ್ಲಿ ನನ್ನನ್ನು ಗಾಢವಾಗಿ ಪ್ರಭಾವಿಸಿದ ಪ್ರಾಕೃತಿಕ ವಿಸ್ಮಯಗಳು. ಇವು ಅಚ್ಚೊತ್ತಿದ ಚಿರಂತನ ಮೌಲ್ಯಗಳು ಅನುಕ್ರಮವಾಗಿ ಜೀವನಪ್ರೇಮ, ಸ್ಥಿತಪ್ರಜ್ಞೆ, ಆಸ್ತಿಕತೆ, ಸಂಗೀತ–ಸಾಹಿತ್ಯಾಸಕ್ತಿ, ಬದುಕಿನ ನಿರಂತರತೆ ಮತ್ತು ಸವಾಲನ್ನು ಎದುರಿಸುವ ಛಲ.

ವಯಸ್ಸು ಎಪ್ಪತ್ತು ದಾಟಿದಾಗ ನನ್ನ ಬದುಕನ್ನು ರೂಪಿಸಿದ ಮುಖ್ಯ ಅಂಶಗಳೇನೆಂದು ಪ್ರಶ್ನಿಸಿಕೊಂಡಾಗ ದೊರೆತ ಉತ್ತರ, ಸೂತ್ರರೂಪದಲ್ಲಿ, "ಸಂಗೀತವೆನ್ನುಸಿರು, ಸಾಹಿತ್ಯವೆನ್ನೊಡಲು, ವಿಜ್ಞಾನವೆನ್ನಶನ, ಅಧ್ಯಾತ್ಮದೆಡೆಗೆ ಗಮನ." ಆ ಎಳವೆಯಲ್ಲೇ ಈ ಸೂತ್ರ ಹೇಗೆ ನನ್ನ ಭವಿಷ್ಯವನ್ನು ಟಂಕಿಸಿತೆಂಬುದನ್ನು ಇಂದು ವಿಶ್ಲೇಷಿಸುವಾಗ ಮೊದಲು ಮೂಡುವುದು ಆಶ್ಚರ್ಯ, ಸಮಾಜದ ಬಗ್ಗೆ ಗೌರವ ಮತ್ತು ಕೃತಜ್ಞತೆ, ಕೊನೆಗೆ ಆತ್ಮ ವಿಶ್ಲೇಷಣೆ. ಈ ಮೂರನೆಯದನ್ನು ಸಾಧ್ಯವಾಗುವಷ್ಟೂ ನಿರಪೇಕ್ಷವಾಗಿ ಮುಂದಿನ ಪುಟಗಳಲ್ಲಿ ನಿರೂಪಿಸಲು ಪ್ರಯತ್ನಿಸುತ್ತೇನೆ:

ಎದೆ ತುಂಬಿ ಬರೆದಿಹೆನು ಈ ಕೃತಿಯ ನಾನು
ಮನವಿಟ್ಟು ವಾಚಿಸಿರಿ ಇದನಿಂದು ನೀವು
ಎಲ್ಲರೋದಲೆ ಎಂದು ನಾನು ಬರೆದಿಹುದಲ್ಲ:
ಬರೆಯುವುದು ಅನಿವಾರ್ಯ ಕರ್ಮವೆನಗೆ

– ಜಿ.ಎಸ್.ಎಸ್ ಕ್ಷಮೆಕೋರಿ

ಎಲ್ಲ ಎಡದಿಂದ ಬಲಕ್ಕೆ

ಹಿಂದಿನ ಸಾಲಿನಲ್ಲಿ ನಿಂತವರು

೧. ಸಾವಿತ್ರಿ ೨. ಜಿ.ಎನ್. ರಾಮಚಂದ್ರರಾವ್ (ಅಪ್ಪಂಗಳ) ೩. ಜಿ.ಎನ್. ತಿಮ್ಮಪ್ಪಯ್ಯ (ಮೋದೂರು) ೪. ಎ.ಪಿ. ಸುಬ್ಬಯ್ಯ (ಕಿರಿಯ, ಆರ್ಯಾಪು) ೫. ವಿ. ಭಟ್

ಎರಡನೇ ಸಾಲಿನಲ್ಲಿ ಕುಳಿತವರು

೧. ಅಮ್ಮಣ್ಣಿ ೨. ವಿರಿಜಾ ಭವಾನಿ (ಜಿ.ಎನ್.ರಾ.ರಾ – ಹೆಂಡತಿ) ೩. ಎ.ಪಿ. ಲಕ್ಷ್ಮಿ (ಕಿರಿಯ, ಎ.ಪಿ.ಸು ಮತ್ತು ಎ.ಪಿ.ಪಾ – ಮಗಳು, ಕಾಲಾನಂತರದಲ್ಲಿ ಜಿಟಿನಾ ಹೆಂಡತಿ) ೪. ಜಿ.ಟಿ. ವೆಂಕಟಲಕ್ಷ್ಮಿ (ಜಿ.ಎನ್.ತಿ – ಹೆಂಡತಿ) ೬. ಸುಬ್ಬಯ್ಯ (ಹಿರಿಯ, ಅಡಮನೆ ಪಳ್ಳತಡ್ಕ) ೭. ಹೊನ್ನಮ್ಮ ೮. ಎ.ಪಿ. ಪಾರ್ವತಿ (ಎ.ಪಿ. ಸುಬ್ಬಯ್ಯ – ಹೆಂಡತಿ) ೧೦. ಲಕ್ಷ್ಮಿ (ಹಿರಿಯ – ಎ,ಪಿ.ಸು, ಜಿ.ಎನ್. ವೆಂ – ತಾಯಿ)

ನೆಲದಲ್ಲಿ ಕುಳಿತವರು:

೨. ವೆಂಕಟ್ರಮಣ ೪. ನಾರಾಯಣ (ಕಿರಿಯ, ಜಿ.ಎನ್.ತಿ ಮತ್ತು ಜಿ.ಎನ್.ವೆಂ – ಮಗ, ಕಾಲಾನಂತರದಲ್ಲಿ ಎ.ಪಿ.ಲ ಕಿರಿಯ – ಗಂಡ) ೫. ಎ.ಪಿ. ತಿಮ್ಮಪ್ಪಯ್ಯ (ಕಿರಿಯ, ಮರಿಕೆ, ಎ.ಪಿ.ಸು ಮತ್ತು ಎ.ಪಿ ಪಾ – ಮಗ)]

ಜಿ.ಟಿ. ನಾರಾಯಣರಾವ್ ಮರಾವಳಿ



ಅಂದು (೧೯೨೧–೩೦ರ ದಶಕ) ಮಡಿಕೇರಿಯಲ್ಲಿಯ ಅವಿಭಕ್ತ ಕುಟುಂಬವೊಂದರ ಕಿರಿ ಕುಡಿ ನಾನು. ಮನೆಯಲ್ಲಿ ಪ್ರಾಯ ೮೦ ದಾಟಿದ್ದ ಮುತ್ತಜ್ಜ ಅಡಮನೆ (ಎ) ಪಳ್ಳತಡ್ಕ (ಪಿ) ಸುಬ್ಬಯ್ಯ, ಇವರ ನಾಲ್ವರು ಹೆಣ್ಣು ಮಕ್ಕಳು ಹೊನ್ನಮ್ಮ, ಸಾವಿತ್ರಿ, ಗೌರಮ್ಮ ಮತ್ತು ದೇವಮ್ಮ. ಇವರೆಲ್ಲರೂ ಎಳೆ ಹರೆಯದಲ್ಲೇ ವಿಧವೆಯರಾದರು. ಹೊನ್ನಮ್ಮನ ಹೊರತು ಉಳಿದ ಮೂವರು ಹಡೆದ ಮಕ್ಕಳು ಯಾರೂ ಉಳಿಯಲಿಲ್ಲ. ಹೀಗೆ ಈ ವಿಧವೆಯರು ತಾಯಿಯಿಲ್ಲದ ತವರ್ಮನೆಗೆ ಮರಳಿದರು, ತಂದೆಗೆ ಊರುಗೋಲಾದರು, ತಂದೆ ಇವರಿಗೆ ರಕ್ಷಕರಾದರು. ಒಬ್ಬೊಬ್ಬರದು ಒಂದೊಂದು ದುರಂತ ಕತೆ.

ಹಿರಿ ಮಗಳು ಹೊನ್ನಮ್ಮ ಹಡೆದ, ಪ್ರಾಯಶಃ ಹದಿನಾಲ್ಕು ಮಕ್ಕಳ ಪೈಕಿ ಉಳಿದವರು ಇಬ್ಬರೇ: ಗುಡ್ಡೆಹಿತ್ಲು (ಜಿ) ನಾರಾಯಣ (ಎನ್) ತಿಮ್ಮಪ್ಪಯ್ಯ – ಇವರೇ ನನ್ನಪ್ಪ, ಮತ್ತು ಇವರ ತಮ್ಮ ರಾಮಚಂದ್ರ. ಈ ಸೋದರರ ನಡುವಿನ ವಯೋವ್ಯತ್ಯಾಸ ಸುಮಾರು ಹದಿನಾಲ್ಕು ವರ್ಷಗಳು. ತಿಮ್ಮಪ್ಪಯ್ಯನವರಿಗೆ ತಮ್ಮ ತಾಯಿಯ ಅಣ್ಣನ ಮಗಳು ವೆಂಕಟಲಕ್ಷ್ಮಿ ಜೊತೆ ವಿವಾಹವಾಗಿತ್ತು, ತಮ್ಮನಿಗೆ ಇನ್ನೂ ಮದುವೆ ಆಗಿರಲಿಲ್ಲ.

ಕೊಡಗು ರಾಜರ ಕಾಲದಲ್ಲಿ ಶಿವಮೊಗ್ಗ ಜಿಲ್ಲೆಯ ನಗರ ಸೀಮೆಯಿಂದ ಕೊಡಗಿಗೆ ಹೊಸ ಉಸಿರು ಮತ್ತು ಹಚ್ಚ ಹಸುರು ಅರಸಿ ಬಂದ ಹಲವಾರು ಕುಟುಂಬಗಳ ಪೈಕಿ ಗುಡ್ಡೆಹಿತ್ಲು ಮತ್ತು ಅಡಮನೆಯವರೂ ಸೇರಿದ್ದರು. ಉಭಯರೂ ಕೃಷಿಕರು, ಶಾಸ್ತ್ರ ಸಂಪನ್ನರು ಮತ್ತು ಸಾಹಸಪ್ರಿಯರು. ಗುಡ್ಡೆ ಹಿತ್ಲಿನ ಹಿರಿಯರು ರಾಜಕುಟುಂಬಕ್ಕೆ ಪುರೋಹಿತರಾಗಿಯೂ ಅಡಮನೆಯವರು ಕರಣಿಕರಾಗಿಯೂ ನೇಮನಗೊಂಡರು. ಈ ಕಾರಣವಾಗಿ ಮೊದಲಿನವರು ಪೌರೋಹಿತ್ಯ ಕಲಿತರು, ಎರಡನೆಯವರು ಲೆಕ್ಕಶಾಸ್ತ್ರ ಪರಿಣತರಾದರು.

ಅಂದಿನ (೧೮-೧೯ನೆಯ ಶತಮಾನಗಳು) ಸಂಪ್ರದಾಯದಂತೆ ರಾಜ ಇವರಿಗೆ ಕೊಡಗು ಮತ್ತು ದಕ್ಷಿಣಕನ್ನಡ ಜಿಲ್ಲೆಗಳಲ್ಲಿ ಉಂಬಳಿ ಜಹಗೀರುಗಳನ್ನು ದಾನವಿತ್ತಿದ್ದ. ಅಂದ ಹಾಗೆ ಅಂದು ಕೊಡಗಿನ ವ್ಯಾಪ್ತಿ ನೆರೆಯ ದಕ್ಷಿಣ ಕನ್ನಡದ ಸುಳ್ಯ, ಪಳ್ಳತಡ್ಕ, ಪುತ್ತೂರು ಸೀಮೆಗಳವರೆಗೂ ಹಬ್ಬಿತ್ತು; ಕಾವೇರಿಯಿಂದಮಾ ನೇತ್ರಾವತಿವರಮಿರ್ದ ನಾಡದಾ ಕ್ರೋಢದೇಶಂ! ಅಡಮನೆಯವರಿಗೆ ಪಳ್ಳತಡ್ಕ ಮತ್ತು ಪುತ್ತೂರು ಸೀಮೆಯ ಆರ್ಯಾಪು ಗ್ರಾಮಗಳಲ್ಲಿ ಜಹಗೀರು ಪ್ರಧಾನವಾಗಿತ್ತು. ಗುಡ್ಡೆಹಿತ್ಲಿನವರವು ಕೊಡಗು ಜಿಲ್ಲೆಗೇ ಸೀಮಿತವಾಗಿದ್ದುವು. ನನ್ನ ಜನ್ಮ ಸ್ಥಳ ಪುತ್ತೂರು ವಿಭಾಗದ ಆರ್ಯಾಪು ಗ್ರಾಮದಲ್ಲಿಯ ಮರಿಕೆ ಎಂಬ ಹಳ್ಳಿಯಲ್ಲಿದೆ.

ಹಿರಿಯ ಸುಬ್ಬಯ್ಯನವರಿಗೆ ಇಬ್ಬರು ಪುತ್ರರೂ ಇದ್ದರು: ತಿಮ್ಮಪ್ಪಯ್ಯ (ನನ್ನ ಅಪ್ಪ ಅಲ್ಲ) ಮತ್ತು ಪರಮೇಶ್ವರ. ಇಬ್ಬರಿಗೂ ಮದುವೆ ಮಾಡಿದ್ದರು. ಆದರೆ ಈ ಗಂಡು ಮಕ್ಕಳೂ ಅಲ್ಪಾಯುಷಿಗಳಾಗಿಯೇ ಮರಣಿಸಿದರು. ಹಿರಿ ಮಗನ ಹೆಂಡತಿ ಲಕ್ಷ್ಮಿ (ಮಕ್ಕಳಿಗೆ ಪ್ರೀತಿಯ ಅಮ್ಮಯ್ಯ). ಈ ದಂಪತಿಗಳ ಮಕ್ಕಳು ಕಿರಿಯ ಸುಬ್ಬಯ್ಯ ಮತ್ತು ವೆಂಕಟಲಕ್ಷ್ಮಿ (ನನ್ನ ತಾಯಿ). ತಿಮ್ಮಪ್ಪಯ್ಯ-ವೆಂಕಟಲಕ್ಷ್ಮಿ ದಂಪತಿಗಳ ಮೊದಲ ಮಗನಾಗಿ ನಾನು ಮರಿಕೆಯಲ್ಲಿ ಹುಟ್ಟಿದಾಗ ಉಭಯ ದುಃಖಿತ ಮತ್ತು ನಿರಾಶಾಮಯ ಕುಟುಂಬಗಳಿಗೆ ಹೊಸ ಭರವಸೆ ಮತ್ತು ಚೇತನ ಬಂದಂತಾಯಿತೆಂದು ಮುಂದೊಮ್ಮೆ ತಾಯಿ ಹೇಳಿದ್ದುಂಟು. "ಕತ್ತಲೆಯ ಮನೆಗೆ ಮಣಿದೀಪಮಾದಂತೆ ಸಲೆ ಬತ್ತಿದ ಸರೋವರಕೆ ನವಜಲಮೊದವಿದಂತೆ ಬಿತ್ತರದ ಕಾವ್ಯ ರಚನೆಗೆ ದೇವತಾಸ್ತುತಿ ನೆಗಳ್ದಂತೆ" ನನ್ನ ಅವತಾರವಾಯಿತೆಂದು ಅಜ್ಜಿ ಲಕ್ಷ್ಮೀಶನ ಚಂದ್ರಹಾಸೋಪಾಖ್ಯಾನದ ಪದ್ಯ ಹಾಡಿ ನನ್ನ ಗುಣಗಾನ ಮಾಡಿದಾಗ ಪ್ರಾಯಶಃ ನಾಲ್ಕರ ಹುಡುಗ ಹಿಗ್ಗಿ ಹದಿನಾರಾಗಿ ದರೆ ಹಾರಿ ಕಾಲು ಉಳುಕಿಸಿಕೊಂಡದ್ದು ಈಗಲೂ ನೆನಪಿನಲ್ಲಿದೆ. ಸಾಂಪ್ರದಾಯಿಕವಾಗಿ ನನಗೆ ಪಿತಾಮಹನ (ಮಾತಾಮಹನ ಅಲ್ಲ!) ಹೆಸರಿಟ್ಟರು: ಗುಡ್ಡೆಹಿತ್ಲು (ಜಿ) ತಿಮ್ಮಪ್ಪಯ್ಯ (ಟಿ) ನಾರಾಯಣ, ಕಾಲೇಜು ಸೇರುವಾಗ ರಾವ್ ಎಂಬ ಉಪನಾಮವೂ ಜೊತೆಗೂಡಿತು.

ಕಿರಿಯ ಸುಬ್ಬಯ್ಯ (ನನ್ನ ತಾಯಿಯ ಅಣ್ಣ) ಮತ್ತು ನನ್ನಪ್ಪ ಮಡಿಕೇರಿಯಲ್ಲಿ ಓದಿ, ಹಾಡಿ, ಹಾಕಿಯಾಟವಾಡಿ ಮತ್ತು ನಾಟಕಗಳಲ್ಲಿ ನಟಿಸಿ ಖ್ಯಾತಿ ಗಳಿಸಿದ್ದರು. ಎಸ್ಸೆಸ್ಸೆಲ್ಸಿಯಾದ ಬಳಿಕ ಮಂಗಳೂರಿಗೆ ಹೋಗಿ ಅಲ್ಲಿಯ ಸರ್ಕಾರಿ ಕಾಲೇಜಿನಲ್ಲಿ ಇಂಟರ್ ಮೀಡಿಯೆಟ್ ತರಗತಿಗೆ ದಾಖಲಾಗಿದ್ದರು. ಅಲ್ಲಿ ಇವರ ಸಹಪಾಠಿಯಾಗಿ ಕೋಟ ಶಿವರಾಮ ಕಾರಂತ ಎಂಬ ಅಪ್ಪಟ ಖಾದೀಧಾರಿ ದೇಶಭಕ್ತ ಪಾದರಸ ಸದೃಶ ವ್ಯಕ್ತಿತ್ವದ ವಿಚಾರವಂತರಿದ್ದರೆಂದು ಹೇಳುತ್ತಿದ್ದರು. ತರುವಾಯದ ದಿನಗಳಲ್ಲಿ ಇವರು ಆಧುನಿಕ ಕನ್ನಡ ವಾಙ್ಮಯ ಬ್ರಹ್ಮರಾಗಿ ಅರಳಿ ಬೆಳಗಿದುದು ಈಗ ಇತಿಹಾಸ. ಕಾರಂತರು ಶಿಕ್ಷಣ ರಂಗದ ಎದುರು ಮಾತ್ರವಲ್ಲ ಒಟ್ಟು ವ್ಯವಸ್ಥೆಯ ವಿರುದ್ಧವೂ ಸಿಡಿದೆದ್ದು ಕಾಲೇಜನ್ನು ಬಹಿಷ್ಕರಿಸಿ ಸ್ವತಂತ್ರ ಮಾರ್ಗಾವಲಂಬಿಯಾದರು. 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಎಂಬ ಆತ್ಮಚರಿತ್ರೆಯಲ್ಲಿ ತಮ್ಮ ಅನುಭವಗಳನ್ನು ದಾಖಲಿಸಿದರು.

ಇತ್ತ ತಿಮ್ಮಪ್ಪಯ್ಯ-ಸುಬ್ಬಯ್ಯದ್ವಯರ ಕಾಲೇಜ್ ಶಿಕ್ಷಣವಾದರೂ ಮುಂದುವರಿಯಲಿಲ್ಲ. ಇಬ್ಬರೂ ಸಾಂಸಾರಿಕ ಕಾರಣಗಳಿಗಾಗಿ ಓದನ್ನು ಕೈದುಮಾಡಿ ಮನೆಗೆ ಮರಳುವುದು ಅನಿವಾರ್ಯವಾಯಿತು. ತಿಮ್ಮಪ್ಪಯ್ಯ ಮಡಿಕೇರಿಯಲ್ಲಿ ಕೊಡಗು ಸರ್ಕಾರೀ ನೌಕರರಾದರು. ಸುಬ್ಬಯ್ಯ ತಮ್ಮ ತಾಯಿ ಮತ್ತು ತಂಗಿ ವೆಂಕಟಲಕ್ಷ್ಮಿ ಜೊತೆ ಮರಿಕೆ ಆಸ್ತಿಯಲ್ಲಿ ಕೃಷಿಕರಾಗಿ ನೆಲಸಿದರು. ಮುಂದೆ ಯಥಾ ಕಾಲದಲ್ಲಿ ಹಿರಿಯರೆಲ್ಲ ಸೇರಿ ತಿಮ್ಮಪ್ಪಯ್ಯನವರಿಗೆ ಸೋದರತ್ತಿಗೆ ವೆಂಕಟಲಕ್ಷ್ಮಿ ಜೊತೆ ಮದುವೆ ಮಾಡಿದರು. ಇತ್ತ ಸುಬ್ಬಯ್ಯನವರ ಭಾರ್ಯೆಯಾಗಿ ಪಂಜಿಗುಡ್ಡೆ ಮನೆಯ (ದಕ್ಷಿಣ ಕನ್ನಡ) ಪಾರ್ವತಿ ಮರಿಕೆಮನೆ ತುಂಬಿದರು.

ಸಂಗೀತವೆನ್ನುಸಿರು
ಅಧ್ಯಾಯ ಎರಡು

ಹಿರಿಯ ಸುಬ್ಬಯ್ಯನವರ ವೃದ್ಧಾಪ್ಯವೇನೂ ಸುಖ ಶಾಂತಿಮಯವಾಗಿರಲಿಲ್ಲ; ಗಂಡು ಮಕ್ಕಳಿಗೆ ತಮ್ಮ ಸಮೃದ್ಧ ಆಸ್ತಿ ಮನೆಗಳನ್ನು ಪಾಲು ಮಾಡಿ ತಾವು ವಿಧವೆ ಹೆಣ್ಣು ಮಕ್ಕಳ ಜೊತೆ ಮಡಿಕೇರಿ ಗೃಹವಾಸಿಗಳಾದರು. ಕೊಡಗು ಸರ್ಕಾರೀ ಸೇವೆಯಲ್ಲಿ ಇವರು ಕರಣಿಕರಾಗಿದ್ದುದರಿಂದ ನಿವೃತ್ತಿ ವೇತನ ಬರುತ್ತಿತ್ತು. ಅವರ ನಡುವೆ ಇವರು ಕರಣಿಕರೆಂದೂ ಶ್ರೀ ರಾಮಚಂದ್ರಾಪುರ ಮಠದ ಕೊಡಗು–ಪುತ್ತೂರು ಜಿಲ್ಲಾ ಧರ್ಮಾಧಿಕಾರಿಗಳೆಂದೂ ಗೌರವ ಭಾಜನರಾಗಿದ್ದರು. ಆಸ್ತಿಪಾಸ್ತಿಗಳು ಸಾಕಷ್ಟು ಇದ್ದುವು. ಇವರ ಹೆಂಡತಿ ಎಂದೋ ಗತಿಸಿದ್ದರು. ವಿಧವೆ ಹೆಣ್ಣು ಮಕ್ಕಳೇ ಈ ವೃದ್ಧರ ಯೋಗಕ್ಷೇಮಪಾಲಕರಾದರು. ಹೆಣ್ಣು ಮಕ್ಕಳಿಗೆ ಅವರವರ ಮೃತ ಪತಿಯರ ಸ್ಥಿರಚರ ಸೊತ್ತುಗಳನ್ನು ಕಾನೂನು ಪ್ರಕಾರ ದೊರಕಿಸಲು ಸುಬ್ಬಯ್ಯನವರು ನ್ಯಾಯಾಲಯ ಕಟ್ಟೆ ಹತ್ತಿ ಜಯಶೀಲರಾಗಿದ್ದರು.

ಕೊನೆ ಮಗಳು ದೇವಮ್ಮನವರದು (ಅಮ್ಮಣ್ಣಿ) ಜನ್ಮದತ್ತ ಮಧುರಕಂಠ, ಅಪಾರ ಸಾಹಿತ್ಯಾಸಕ್ತಿ ಕೂಡ. ಹೀಗಾಗಿ ತಂದೆ ತಮ್ಮ ಮನೆಯಲ್ಲೊಂದು ಗ್ರಂಥ ಭಂಡಾರ ಆರಂಭಿಸಿ ರಾಮಾಯಣ, ಮಹಾಭಾರತ, ಪುರಾಣ, ಧರ್ಮಶಾಸ್ತ್ರ ಮುಂತಾದ ಪ್ರಾಚೀನ ಕೃತಿಗಳನ್ನೂ ವೆಂಕಟಾಚಾರ್ಯ, ಗಳಗನಾಥ, ಪಂಜೆ ಮೊದಲಾದ ಆಧುನಿಕ ಲೇಖಕರ ಪುಸ್ತಕಗಳನ್ನೂ ಅದರಲ್ಲಿ ಜಮಾಯಿಸಿದ್ದರು. ಪಾಲ್ಘಾಟಿನಿಂದ ಈಶ್ವರ ಭಾಗವತರೆಂಬ ಕರ್ಣಾಟಕ ಸಂಗೀತ ಶಾಸ್ತ್ರಜ್ಞರನ್ನು ಮನೆಗೆ ಕರೆಸಿ ಅಮ್ಮಣ್ಣಿಗೆ ಗುರುಕುಲಕ್ರಮದಲ್ಲಿ ಸಂಗೀತ ಕಲಿಸುವ ಏರ್ಪಾಡನ್ನೂ ಮಾಡಿದರು. ಗುಡ್ಡ ಕಾಡು, ಪ್ರತಿಕೂಲ ಹವಾ ಏರಿಳಿತಗಳು, ಸಂಚಾರ ಸೌಲಭ್ಯ ಬಹುತೇಕ ಶೂನ್ಯ ಮತ್ತು ಮನೆಮಠಗಳು ತೀರ ಬೆಳವಣಿಗೆಯಲ್ಲಿದ್ದ ಅಂದಿನ (೧೯–೨೦ನೆಯ ಶತಮಾನಗಳ ಸಂಧಿಕಾಲ) ಮಡಿಕೇರಿಯಲ್ಲಿ ಕರ್ನಾಟಕ ಸಂಗೀತದ ಮೊದಲ ರಾಗ ಮಿಡಿದದ್ದು ಸುಬ್ಬಯ್ಯನವರ ಮನೆಯಲ್ಲಿ, ಅಮ್ಮಣ್ಣಿಯವರ ಸಿರಿಕಂಠದಲ್ಲಿ ಎಂದರೆ ಇಂದಿನವರಿಗೆ ಆಶ್ಚರ್ಯವಾದೀತು.

ಅಮ್ಮಣ್ಣಿ ಹಾಡುಗಾರಿಕೆಯ ಜೊತೆಗೆ ಪಿಟೀಲುವಾದನವನ್ನೂ ಗುರುಮುಖೇನ ನಿಷ್ಠೆಯಿಂದ ಅಭ್ಯಸಿಸಿದರು. ಹೀಗೆ ಇವರಲ್ಲಿ ಯುವವಯಸ್ಸು, ಸಂಗೀತ, ಸಾಹಿತ್ಯ, ಸಂಸ್ಕಾರ, ಶ್ರದ್ಧೆ ಎಲ್ಲವೂ ಹದವಾಗಿ ಬೆರೆತು ಕ್ರಮೇಣ ಇವರೊಬ್ಬ ಹಿರಿಯ ಗಾಯಿಕೆ–ಗುರುವಾಗಿ ಇತರರಿಗೆ ಮಾರ್ಗದರ್ಶಕಿಯೂ ಆದರು. ನನ್ನ ತಾಯಿ ಈ ಸೋದರತ್ತೆಯಿಂದ ಸಂಗೀತ ಮತ್ತು ಪಿಟೀಲು ಕಲಿತರು, ಸಾಹಿತ್ಯಾಸಕ್ತಿ ತಾಯಿಗೆ ಹುಟ್ಟಿನಿಂದಲೇ ಬಂದಿದ್ದ ಬಳುವಳಿ. ತಂದೆ ಮತ್ತು ಚಿಕ್ಕಪ್ಪ ಮನೆಯಲ್ಲಿಯ ನಿರಂತರ ಸಂಗೀತ ದಾಸೋಹದಿಂದ ಪ್ರಭಾವಿತರಾಗಿ ತಮ್ಮಷ್ಟಕ್ಕೆ ಹಾಡು, ನಾಟಕಮಟ್ಟು, ಶ್ಲೋಕ ಮುಂತಾದವನ್ನು ಗುನುಗಲು ತೊಡಗಿದರು. ತಂದೆ ಹಾರ್ಮೋನಿಯಂ ಕೊಂಡರು, ಕೊಳಲು ತಯಾರಿಸಿದರು ಮತ್ತು ಎರಡೂ ವಾದ್ಯಗಳ ಮೇಲೆ ಸ್ವಯಂಶಿಕ್ಷಿತರಾಗಿ ಹಿಡಿತ ಗಳಿಸಿದರು. ಚಿಕ್ಕಪ್ಪ ತುಂಬು ಕಂಠದಿಂದ ಹಾಡುತ್ತಿದ್ದರು.

ಆ ದಿನಗಳಲ್ಲಿ (೨೦ನೇ ಶತಮಾನದ ಮೊದಲ ಪಾದ) ಉತ್ತರ ಕರ್ನಾಟದಿಂದ ಮಡಿಕೇರಿಗೆ ಬರುತ್ತಿದ್ದ ಸಂಚಾರಿ ನಾಟಕ ಮಂಡಳಿಗಳು ನನ್ನ ಪೂರ್ವಜರ ಮೇಲೆ ಬೀರಿದ ಪ್ರಭಾವ ಅಪಾರ; ಸಂಪೂರ್ಣ ರಾಮಾಯಣ, ಕುರುಕ್ಷೇತ್ರ, ಸದಾರಮೆ, ಸಂಸಾರ ನೌಕೆ, ಭಕ್ತಿ ಭಂಡಾರಿ ಬಸವಣ್ಣ, ಸಂತ ಪುರಂದರ, ಭಕ್ತ ಕನಕದಾಸ ಇತ್ಯಾದಿ. ಇದೆಲ್ಲವೂ ಸಂಗೀತ ನಾಟಕಗಳು. ಇವನ್ನು ಅನುಕರಿಸಿ ಹುಡುಗರೇ ವೇಷಕಟ್ಟಿ ನಾಟಕವಾಡಿದರು. ಬಾಲಸಮಾಜವೆಂಬ ನಾಟಕ–ಸಾಹಿತ್ಯ–ಕ್ರೀಡಾ ಸಂಕೀರ್ಣವನ್ನು ಬ್ರಾಹ್ಮಣಕೇರಿಯಲ್ಲಿ ಸ್ಥಾಪಿಸಿ ತಮ್ಮ ಸುಪ್ತ ಕಲಾಸಕ್ತಿಗಳಿಗೆ ಅಭಿವ್ಯಕ್ತಿರಂಗ ಕಂಡುಕೊಂಡರು.

ಸ್ವತಃ ಸಾಮುಮಾಡಿ ಪೈಲ್ವಾನ್ ಎನಿಸಿಕೊಂಡಿದ್ದ ನನ್ನ ತಂದೆಗೆ ದೃಢ ಬಲಿಷ್ಠ ದೇಹವಿತ್ತು. ತುಂಬ ಚೂಟಿ ಹಾಗೂ ಬಲು ಮುಂಗೋಪಿ, ಆದರೆ ಶೀಘ್ರ ಸಮಾಧಾನಿ ಕೂಡಾ! ಉತ್ಸಾಹ, ಸಂತೋಷ ಮತ್ತು ಸ್ಫೂರ್ತಿ ಇವರ ನಿತ್ಯ ಸಂಗಾತಿಗಳು. ಸರೀಕರ ಪ್ರಕಾರ ಇವರು ತುಸು ಬೋಳೆ ಸ್ವಭಾವದವರು – ವ್ಯವಹಾರಕುಶಲರಲ್ಲವೆಂಬುದು ಇಂಗಿತ. ಹಾಕಿ ಆಟದಲ್ಲಿ ಗಟ್ಟಿ ಕುಳ, ಅಲ್ಲಿಯೂ dashing centre forward. ಇನ್ನು ನಾಟಕ? ಇವರೊಮ್ಮೆ ನರಸಿಂಹನ ಪಾತ್ರ ಮಾಡಿದ್ದರಂತೆ. ಆಗ ಇವರ ವೇಷಭೂಷಣ, ಉಗ್ರತೆ, ಆರ್ಭಟೆ, ಹಾರಾಟ, ಕುಣಿತ ಮುಂತಾದವನ್ನು ಕಂಡವರು ಇನ್ನೇನು ಈ ಉಗ್ರನರಸಿಂಹ ರಂಗದ ಮೇಲೆಯೇ ವಾಸ್ತವವಾಗಿ ಹಿರಣ್ಯ ಕಶಿಪುವನ್ನು ಸಂಹರಿಸಿಯೇ ಬಿಡುತ್ತಾನೆಂದು ಹೆದರಿದ್ದರಂತೆ!

ಇಂಥ ಸಂಗೀತ–ಸಾಹಿತ್ಯ–ನಾಟಕ ಪರಿಸರದ ಶಿಶು ನಾನು. ಜೊತೆಗೆ ನಿಸರ್ಗದ ಸಮೃದ್ಧಿ ಸೂರೆಹೋಗುವಂತಿತ್ತು. ನಮ್ಮ ಚಿಕ್ಕಜ್ಜಿ ಅಮ್ಮಣ್ಣಿ (ನಾವಿವರನ್ನು ಅತ್ತೆಮ್ಮ ಎಂದು ಕರೆಯುತ್ತಿದ್ದೆವು) ಹಾಡಿದರು, ತಾಯಿ ಯೆಂಕ (ವೆಂಕಟಲಕ್ಷ್ಮಿಯ ಹ್ರಸ್ವ ರೂಪ, ಮಕ್ಕಳ ಬಾಯಿಯಲ್ಲಿ ಅಕ್ಕ) ದನಿಗೂಡಿಸಿದರು, ಇಬ್ಬರೂ ಪಿಟೀಲು ಕೂಡಾ ನುಡಿಸಿದರು, ತಂದೆ ಕೊಳಲೂದಿದರು, ಚಿಕ್ಕಪ್ಪ ತಾಮ್ರದ ಕೊಡಪಾನವನ್ನು ಬೋರಲು ಹಾಕಿ ಘಟ ಬಾರಿಸಿದರು! ಅದೊಂದು ಅದ್ಭುತ ಸಂಗೀತ ರಸಮೇಳ, ನಾದಸುಧಾ ರಸಪಾನ, ಸ್ವರ್ಗಾನಂದಾನುಭವ.

ಇನ್ನು ಮನೆಯೊಂದು ಸದಾ ಚಟುವಟಿಕೆಯ ಜೇನುಗೂಡು. ಮುತ್ತಜ್ಜನಿಂದ ವೇದಮಂತ್ರ ಸಹಿತ ನಿತ್ಯ ಪೂಜೆ. ಅನ್ನದಾನ, ಅತಿಥಿ ಅಭ್ಯಾಗತರು, ನೆಂಟರಿಷ್ಟರು, ವಾರಾನ್ನ ವಿದ್ಯಾರ್ಥಿಗಳೆಲ್ಲರೂ ಭಾಗಿಗಳು. ಈ ಭೂರಿಯಲ್ಲಿ ತೀರಾ ಕಿರಿಯನಾಗಿ, ಎಲ್ಲರ ಕಣ್ಮಣಿಯಾಗಿ ಮತ್ತು ಮಗುಗಳ ಮಾಣಿಕ್ಯನಾಗಿ ನಾನು ನನ್ನ ಛಾಪು ಒತ್ತುತ್ತಿದ್ದೆ. ಮುತ್ತಜ್ಜನ ಜೊತೆ ಸಂಸ್ಕೃತ ಮಂತ್ರಗಳನ್ನು (ಅರ್ಥ ತಿಳಿಯದಿದ್ದರೂ) ಗಟ್ಟಿಯಾಗಿ ಉಚ್ಚರಿಸುತ್ತ ಅವುಗಳ ನಾದ ಮತ್ತು ಲಯಮಾಧುರ್ಯಕ್ಕೆ ಮರುಳಾದೆ. ಕ್ರಮೇಣ ನನಗೆ ಅವೆಲ್ಲವೂ ಕಂಠಗತವಾದುವು. ಫಲಿತಾಂಶ? ಹಿರಿಯರೆಲ್ಲರಿಂದಲೂ ನನಗೆ ಬೇಗ ಉಪನಯನ ಮಾಡಬೇಕೆಂಬ ಒತ್ತಾಯ.

ಅತ್ತೆಮ್ಮನ ಹಾಡುಗಾರಿಕೆಗೆ ದನಿಗೂಡಿಸಿದೆ. ಕೀರ್ತನೆಗಳಿಗೆ ತಬಲ (ಹಾರ್ಮೋನಿಯಂ ಪೆಟ್ಟಿಗೆ ಅಥವಾ ಕೊಡಪಾನ) ಕುಟ್ಟಿದೆ, ಹಾಡುಕಟ್ಟಿ ರಾಗ ಸಂಯೋಜಿಸುವ ಹುಚ್ಚು ಸಾಹಸ ಕೂಡ ಮಾಡಿದೆ! ಆದರೆ ಶಾಸ್ತ್ರೋಕ್ತವಾಗಿ ಸಂಗೀತ ಕಲಿಯಲೇ ಇಲ್ಲ. ಏಕೆ? ಆರಂಭದಿಂದಲೇ ನನಗೆ ನನ್ನ ಶಾರೀರದ ಬಗ್ಗೆ ತುಂಬ ಅಳುಕು – ಮನದ ಸಂಗೀತ ತುಡಿತಗಳಿಗೆ ಅಭಿವ್ಯಕ್ತಿ ಕೊಡುವಲ್ಲಿ ಅದು ಖುದ್ದು ನನಗೇ ಅಸಹ್ಯವಾಗುವಂತೆ ತೋರುತ್ತಿತ್ತು:

ಕತ್ತೆ ಕಿರುಚಿದೊಡಲ್ಲಿ ತೊತ್ತು ಹಾಡಿದೊಡಲ್ಲಿ
ಮತ್ತೆ ಕುಲರಸಿಕನಿರುವಲ್ಲಿ ನಗೆಯ
ಹುತ್ತ ಕಾಣೆಂದ ಸರ್ವಜ್ಞ

ಎಂಬ ಪದ್ಯ ಉದಾಹರಿಸುತ್ತ ನನ್ನ ದೌರ್ಬಲ್ಯವನ್ನು ಸಮರ್ಥಿಸಿಕೊಳ್ಳುತ್ತಿದ್ದೆ! ಇದು ಹೇಗೂ ಇರಲಿ: ಹುಟ್ಟಿನಿಂದಲೇ ಸಂಗೀತಾಸಕ್ತಿ ನನ್ನಲ್ಲಿ ಮೊಳಕೆಯೊಡೆದಿತ್ತು.

ಮರಿಕೆ–ಮಡಿಕೇರಿ ಜೋಕಾಲಿಯಾಟ

ಅಧ್ಯಾಯ ಮೂರು

ನನ್ನ ಬೆನ್ನಿಗೆ ನಾಲ್ಕೈದು ಮಕ್ಕಳು ಹುಟ್ಟಿದರೂ ಯಾವ ಮಗುವೂ ಉಳಿಯಲಿಲ್ಲ. ಪ್ರತಿಸಲವೂ ಬಾಣಂತಿತನ ಮರಿಕೆಯಲ್ಲಿ ನಡೆಯಿತು. ಹೀಗಾಗಿ ನಾನು ಚಿಕ್ಕಂದಿನಿಂದಲೇ ಮರಿಕೆ–ಮಡಿಕೇರಿ ನಡುವೆ ಓಲಾಡುವುದು ಮಾಮೂಲಾಯಿತು. ಎಂದೇ ಮರಿಕೆಯಲ್ಲಿ ನನ್ನ ಸೋದರಮಾವ ಕಿರಿಯ ಸುಬ್ಬಯ್ಯನವರ ಮಕ್ಕಳೇ ನನ್ನ ಸಹಪಾಠಿಗಳು: ನನಗಿಂತ ಎರಡು ವರ್ಷ ಕಿರಿಯನಾದ ತಿಮ್ಮಪ್ಪಯ್ಯ (ಹಿರಿಯರ ಬಾಯಿಯಲ್ಲಿ ಪೈ), ಇವನ ತಂಗಿ ಲಕ್ಷ್ಮಿ (ತಂಗಿ), ತಮ್ಮ ಗೋವಿಂದ ಮೊದಲಾದವರು. ಮಡಿಕೇರಿಯಲ್ಲಾಗಲೀ ಮರಿಕೆಯಲ್ಲಾಗಲೀ ಕುಟುಂಬ ಯೋಜನೆ ಎಂಬ ಕಲ್ಪನೆ ಅಂದು ಚಾಲ್ತಿಯಲ್ಲಿರಲಿಲ್ಲ. "ಹೆಂಡತಿ ಸಂತತಿ ಸಾಸಿರವಾಗಲಿ" ಎಂಬ ಆಶಯ ಅಕ್ಷರಶಃ ಮೈದಳೆಯುತ್ತಿದ್ದ ದಿನಗಳವು!

ಪೈ ಮತ್ತು ನಾನು ಅವಳಿ ಮಕ್ಕಳಂತೆ ಆಡಿ, ಓಡಿ, ಗುಡ್ಡೆ ಹತ್ತಿ ಇಳಿದು, ಕಣಿವೆ ಹಾರಿ, ಕೆರೆಯಲ್ಲಿ ಈಸಿ, ಕಾಡಿನಲ್ಲಿ ಅಡ್ಡಾಡಿ ನಿಸರ್ಗದ ಸ್ವತಂತ್ರ ಶಿಶುಗಳಾಗಿ ಬೆಳೆಯುತ್ತಿದ್ದೆವು. ಹೆಣ್ಣಿನ ಬಗ್ಗೆ ಸಾಮೂಹಿಕ ತಾತ್ಸಾರ ಅಂದಿನ ಹವೆ. ಇನ್ನು ಚಿಕ್ಕಂದಿನಲ್ಲೇ ಹಿರಿಯರು ತಂಗಿ–ನಾರಾಯಣ ಜೋಡಿ ಎಂದು, ಲಘುವಾಗಿಯೇ ಆದರೂ ಹೇಳುತ್ತಿದ್ದುದರಿಂದ ನನ್ನ ಎಳೆ ಮನಸ್ಸು ಈ ಹುಡುಗಿಯಿಂದ ಪೂರ್ತಿ ದೂರವಾಗಿರಲು ತವಕಿಸುತ್ತಿತ್ತು. ಇತ್ತ ಗೋವಿಂದ ಮತ್ತು ಇವನ ಮುಂದಿನವರು ತೀರ ಚಿಕ್ಕವರು. ಇವೆಲ್ಲ ಅಂಶಗಳೂ ಅಪ್ರಯತ್ನಿತವಾಗಿ ಸೇರಿ ಪೈ ಮತ್ತು ನನ್ನ ನಡುವಿನ ಬಾಂಧವ್ಯವನ್ನು ಇನ್ನಷ್ಟು ದೃಢಗೊಳಿಸಿದುವು.

ಮಡಿಕೇರಿ ಮನೆಯ ಪರಿಸರಕ್ಕಿಂತ ಮರಿಕೆಯಲ್ಲಿಯದೇ ನನಗೆ ಹೆಚ್ಚು ಪ್ರಿಯವಾಗುತ್ತಿತ್ತು. ಅದೊಂದು ಸಂತೆ, ಕಿರಿಯ ಸಂಗಾತಿಗಳಿಲ್ಲದ ಒಂಟಿ ಬಾಳು. ಮರಿಕೆಯಾದರೋ ಒಲುಮೆಯ ಪುಟ್ಟ ಗೂಡು. ಸೋದರಮಾವ ಸುಬ್ಬಯ್ಯ, ಅಜ್ಜಿ ಅಮ್ಮಯ್ಯ ಮತ್ತು ಅತ್ತೆ ಪಾರ್ವತಿ ನನ್ನನ್ನು ಎತ್ತಿ ಪ್ರೀತಿಸಿ ತಮ್ಮ ಸರೀಕನೆಂದು ಮುದ್ದು ಮಾಡುತ್ತಿದ್ದುದನ್ನೆಂದೂ ಮರೆಯಲಾರೆ. ಮಾವ ಕತೆ ಹೇಳಿದರು, ನಾಟಕದ ಮಟ್ಟು ಹಾಡಿದರು, ಪೈಯನ್ನೂ ನನ್ನನ್ನೂ ಎತ್ತಿಕೊಂಡು ಗದ್ದೆ ತೋಟವಿಡೀ ಅಡ್ಡಾಡಿದರು, ಜೊತೆಗೆ ಜೀವನ ಮೌಲ್ಯಗಳನ್ನು ಪ್ರತ್ಯಕ್ಷ ಆಚರಣೆಯಿಂದ ಬಿಂಬಿಸಿದರು.

ಉದಾಹರಣೆಗೆ ಅಂದಿನ ಸಂಪ್ರದಾಯದಂತೆ ತೋಟದ ಕೂಲಿಗಳು ಸಾಧಾರಣವಾಗಿ ಎಲ್ಲರೂ ಅಸ್ಪೃಶ್ಯವರ್ಗದವರು. ಮನೆಮುಂದಿನ ವಿಶಾಲ ಅಂಗಳದಲ್ಲಿ ತುಸು ದೂರದಲ್ಲಿ ಸಾಲಾಗಿ ನಡೆಯುತ್ತ ಕೆಲಸಕ್ಕೆ ಹೋಗುತ್ತಿದ್ದರು, ಮತ್ತು ಸಂಜೆ ಅದೇ ಶಿಸ್ತಿನಿಂದ ಮರಳಿ ತಮ್ಮ ತಮ್ಮ ಪಡಿಗಳನ್ನು ಪಡೆಯಲು ಅಲ್ಲೇ ನಿಲ್ಲುತ್ತಿದ್ದರು. ಪಡಿಯಲ್ಲಿ ಸೇರಿದ್ದ ಪದಾರ್ಥಗಳು ಮುಖ್ಯವಾಗಿ ಅಕ್ಕಿ, ಉಪ್ಪು, ಮೆಣಸು ಮತ್ತು ಹೊಗೆಸೊಪ್ಪು. ಅಡಿಕೆಮರದ ಹಾಳೆಗಳಲ್ಲಿ ಇವನ್ನು ಜೋಡಿಸಿಡುತ್ತಿದ್ದುದು ವಾಡಿಕೆ. ಆಳುಗಳು ಹಾಜರಾಗುವ ಮೊದಲೇ ಈ ಕೆಲಸವನ್ನು ವ್ಯವಸ್ಥಿತವಾಗಿ ಮಾವ (ನಮ್ಮಿಬ್ಬರು ಹುಡುಗರ ನೆರವಿನಿಂದ) ಮಾಡಿಸಿ ಮುಗಿಸಿಡುತ್ತಿದ್ದರು. ಅವರು ಹಿಂತಿರುಗುವಾಗ ಅಂಗಳದಲ್ಲಿ

ಸಾಲಾಗಿಟ್ಟಿದ್ದ ತಮ್ಮ ತಮ್ಮ ಹಸುಗೆಗಳನ್ನು ಯಾಂತ್ರಿಕವಾಗಿ ಎತ್ತಿ ಒಯ್ಯುತ್ತಿದ್ದರು – ಮಾತಿಲ್ಲ, ಭಾವವಿಲ್ಲ, ಮೌನ ಮೌನ!

ಮಾವ ಈ ಯಾಂತ್ರಿಕ ವಿಧಿಗೆ ಒಲುಮೆಯ ಹೃದಯ ಬೆಸೆದ ಮೊದಲಿಗರೆಂದು ಇವರ ಓರಗೆಯವರು ಹೇಳುತ್ತಿದ್ದುದನ್ನು ಕೇಳಿದ್ದೇನೆ. ಗಾಂಧೀ ಭಕ್ತರಾಗಿದ್ದ ಇವರು ಅಸ್ಪೃಶ್ಯತಾನಿವಾರಣೆಗೆ ಕೈಗೊಂಡ ಮೊದಲ ಕೆಲವು ಸುಧಾರಣೆಗಳಲ್ಲಿ ಇದೊಂದು: ಹಸುಗೆಯನ್ನು ಸ್ವತಃ ಕೈಯಾರೆ ಎತ್ತಿ ಕೊಟ್ಟು ತುಳುವಿನಲ್ಲಿ ಯೋಗಕ್ಷೇಮ ಕುರಿತು ಒಂದೆರಡು ಮಾತಾಡಿ ಕಳಿಸುತ್ತಿದ್ದರು. ಅವರೆಲ್ಲರೂ ನಮ್ಮವರೇ ಎಂಬ ಭಾವ ಅಲ್ಲಿ ಲಕಲಕಿಸುತ್ತಿತ್ತು. ದಿನಕ್ಕೊಮ್ಮೆಯಾದರೂ ಅವರ ದಟ್ಟಿಗೆಗಳಿಗೆ (ಗುಡಿಸಲುಗಳ ಹೆಸರು) ಭೇಟಿಯಿತ್ತು ಸಾಮೂಹಿಕ ಶುಚಿತ್ವ, ಮಕ್ಕಳ ಲಾಲನೆ, ಶಿಕ್ಷಣ ಮುಂತಾದವುಗಳ ಬಗ್ಗೆ ಕಾಳಜಿ ವಹಿಸುತ್ತಿದ್ದರು. ಹೀಗೆ ಮಾವ ಸುಬ್ಬಯ್ಯ ನನ್ನ ಒಬ್ಬ ಆರಾಧ್ಯವ್ಯಕ್ತಿಯಾದರು.

ಇತ್ತ ಮಡಿಕೇರಿ ಮನೆಯಲ್ಲಿ ನನ್ನ ಮೇಲೆ ಗಾಢ ಪ್ರಭಾವ ಅಚ್ಚೊತ್ತಿದವರು ಚಿಕ್ಕಪ್ಪ ರಾಮಚಂದ್ರ. ನಮ್ಮ ಹಿರಿಕುಟುಂಬದಲ್ಲಿ ಇವರೊಬ್ಬ ಒಂಟಿ ಸಲಗ: ಇಂಥವರಿಗೆ ಇಂಗ್ಲಿಷಿನಲ್ಲಿ maverick ಎನ್ನುವುದುಂಟು. ತಾಯಿಯ ಕೊನೆ ಮಗನಾಗಿ, ಅಣ್ಣನ ಕಿರಿ ತಮ್ಮನಾಗಿ ಮತ್ತು ದೊಡ್ಡಮನೆಯ ಪುಟ್ಟ ಕೂಸಾಗಿ ಇವರು ನಿರಂಕುಶರಾಗಿ ಸರ್ವತಂತ್ರ ಸ್ವತಂತ್ರರಾಗಿ ಬೆಳೆದರು. ತಮಗಿಂತ ಸುಮಾರು ಹದಿನಾಲ್ಕು ವರ್ಷ ಕಿರಿಯನಾದ ನನ್ನಲ್ಲಿ ತಮ್ಮ ಆಶೋತ್ತರಗಳ ಹೊಸ ಹರವನ್ನು ಗುರುತಿಸಿದರು. ನಾವಿಬ್ಬರೂ ಅಣ್ಣ ತಮ್ಮಂದಿರಂತೆ ಬೆಳೆದೆವು.

ಸಾಂಪ್ರದಾಯಿಕ ಶಿಕ್ಷಣದಲ್ಲಿ ಅವರು ಎಸ್‌ಎಸ್‌ಎಲ್‌ಸಿಗಿಂತ ಮುಂದಿನ ಮಜಲೇರುವ ಆಸಕ್ತಿ ತೋರ್ಪಡಿಸಲಿಲ್ಲ. ಬದಲು, 'ಸ್ವದೇಶೀ ಸ್ಟೋರ್ಸ್' ಹೆಸರಿನ ಬಟ್ಟೆ ಅಂಗಡಿಯನ್ನು ಮಡಿಕೇರಿ ಪೇಟೆಯಲ್ಲಿ ತೆರೆದರು. ಖಾದಿ ಬಟ್ಟೆ, ಇವರೇ ಮನೆಯಲ್ಲಿ ತಯಾರಿಸಿದ ಬಗೆ ಬಗೆಯ ಸಾಬೂನುಗಳು, ಆಯುರ್ವೇದಾರಿಷ್ಟಗಳು, ಲೇಹ್ಯಗಳು, ಚೂರ್ಣಗಳು ಮುಂತಾದವನ್ನು ಮಾರಾಟಕ್ಕೆ ಇಟ್ಟರು. ಅದೊಂದು ಏಕವ್ಯಕ್ತಿ–ಬಹು ಆಸಕ್ತಿ ಪ್ರದರ್ಶನ. ಆದರೆ ಇವರ ಪ್ರಾಮಾಣಿಕತೆ, ಮಾಲುಗಳ ಸಾಚಾತನ, ಗ್ರಾಹಕರಿಗೆ ಇವುಗಳ ಆವಶ್ಯಕತೆ ಮತ್ತು ಸ್ವದೇಶೀ ವಸ್ತುಗಳ ಬಗ್ಗೆ ದೇಶಾದ್ಯಂತ ಪಸರಿಸಿದ್ದ ಅಭಿಮಾನ ಯಾವುದೂ ವಾಸ್ತವ ವ್ಯವಹಾರದಲ್ಲಿ ಚಿಕ್ಕಪ್ಪನವರನ್ನು ಕಾಪಾಡಲಿಲ್ಲ. ಬೋಳೆಸ್ವಭಾವದ ಈ ಮಹಾಶಯ ಎಲ್ಲರನ್ನೂ ನಂಬಿದರು, "ತನ್ನಂತೆ ಪರರ ಬಗೆದೊಡೆ ಸ್ವರ್ಗ ಬಿನ್ನಾಣಮಕ್ಕು ಸರ್ವಜ್ಞ" ಎಂಬ ಋಷಿವಾಕ್ಯವನ್ನು ಅಕ್ಷರಶಃ ಪಾಲಿಸಿದರು, ಮೂಲ ಕಳೆದುಕೊಂಡು, ಸಾಲ ಹೊತ್ತು, ಮುಂಗಾಣದೆ ಮನೆ ಸೇರಿದರು, ಸರ್ಕಾರೀ ನೌಕರಿ ಹಿಡಿದ ಈ ನಿರಂಕುಶ ವ್ಯಕ್ತಿ ಅಂಕುಶವಿಧೇಯರಾಗುವುದು ಅನಿವಾರ್ಯವಾಯಿತು.

ಈಗ ಅವರು ತಮ್ಮ ಅಣ್ಣನಂತೆ (ನನ್ನ ತಂದೆ) ಸಹಕಾರ ಇಲಾಖೆಯಲ್ಲಿ ಒಬ್ಬ ನೌಕರ. ಮದುವೆ ಮಾಡಿದರೆ ಈ ಮಾಣಿ ಸರಿದಾರಿಗೆ ಬಂದಾನೆಂದು ಹಿರಿಯರು (ಮುತ್ತಜ್ಜ, ಇವರ ನಾಲ್ವರು ಪುತ್ರಿಯರು, ಅಪ್ಪ ಮತ್ತು ಅಮ್ಮ) ತೀರ್ಮಾನಿಸಿದರು. ಇಸವಿ ೧೯೩೩ರ ಭೋರ್ಗರೆವ ಮಳೆಗಾಲದ ಆರಂಭ, "ತೆಂಕಣ ಗಾಳಿಯು ಕೊಂಕಣ ಸೀಮೆಗೆ" ಸಾಕಷ್ಟು ಆರ್ಭಟೆ ಮತ್ತು ಹಾವಳಿ ಸಹಿತ ಪ್ರವೇಶಿಸಿ ಅಷ್ಟೇ ಭರದಿಂದ ಕೊಡಗನ್ನು ಹೊಕ್ಕ –– ಮೇ–ಜೂನ್ ಸಂಧಿ ಕಾಲ. ಕಾರ್ಗಾಲದ ಮಳೆರಾಯ ಬ್ರಹ್ಮಗಿರಿ ಉತ್ತರಿಸಿ ತಪ್ಪಲಿನ ಭಾಗಮಂಡಲದಲ್ಲಿ ತಾಂಡವವಾಡುತ್ತಿದ್ದಾಗ ಅಲ್ಲೇ ನನ್ನ ಚಿಕ್ಕಪ್ಪನ ಮದುವೆ ವಿರಿಜಾಭವಾನಿಯೆಂಬ ಹದಿಹರೆಯದ ಕನ್ಯೆಯೊಡನೆ ಜರಗಲಿತ್ತು.

ಭಾಗಮಂಡಲದಲ್ಲಿ ಕನ್ನಿಕೆ ಮತ್ತು ಕಾವೇರಿ ನದಿಗಳು ಸಂಗಮಿಸುತ್ತವೆ. ಪಶ್ಚಿಮ ಘಟ್ಟಗಳ ಈ ಶಿಶುಗಳು ದಂಡೆಮೀರಿ ಹರಿಯುತ್ತ ಸಂಗಮಸ್ಥಳದಲ್ಲಿಯ ಸೇತುವೆಯನ್ನೇ ಕಬಳಿಸಿದ್ದುವು! ಹೀಗಾಗಿ ಮಡಿಕೇರಿಯಿಂದ ನಮ್ಮ ದಿಬ್ಬಣವನ್ನು ಒಯ್ದ ಬಸ್ಸು ಅಲ್ಲೇ ಕುಕ್ಕರಬಡಿಯಬೇಕಾಯಿತು. ಪ್ರವಹಿಸುತ್ತಿದ್ದ ನೀರಿನಲ್ಲಿ ದೊಡ್ಡವರು ಏನೇನೋ ಸರ್ಕಸ್ ಮಾಡಿ ನಡೆದು ಅಥವಾ ಜಿಗಿದು ಎದುರು ದಂಡೆ ಸೇರಿದರು. ನನ್ನಂಥ ಚಿಳ್ಳೆ ಪಿಳ್ಳೆಗಳನ್ನು (ನನಗಾಗ ಏಳು ವರ್ಷ) ಧಡಿಯರು ಎತ್ತಿ ದಾಟಿಸಿದರು. ಅಂತೂ ಐದಾರು ದಿನಗಳ ಆ ವಿವಾಹ, ಭೋಜನ, ಹಸೆ, ಆರತಿ, ಅಕ್ಷತೆ, ಉರುಟಣೆ, ಉಡುಗೊರೆ, ಆಶೀರ್ವಾದ ಎಲ್ಲವೂ ಮಳೆಯ ನಿರಂತರ ಮುಸಲಧಾರೆಯ ಆಧಾರಶ್ರುತಿಯೊಂದಿಗೆ ಸಮಗತಿಯಲ್ಲಿ

ನೆರವೇರಿದುವು. ನಾನು ಚಿಕ್ಕಪ್ಪನವರ ಪಕ್ಕದಲ್ಲೇ ಹಸೆಮಣೆಯಲ್ಲಿ ಕುಳಿತು ಆ ಸೊಬಗನ್ನು ಸವಿದುದು ಮತ್ತು ಉಪಚಾರ ಪಡೆದುದು ಈಗಲೂ ನೆನಪಿನಲ್ಲಿದೆ. ಆಗ ಈ ಹೊಸ ಚಿಕ್ಕಮ್ಮ ನನ್ನಲ್ಲೊಬ್ಬ ಕಿರಿತಮ್ಮನನ್ನು ಕಂಡಿರಬೇಕು.



ಚಿಕ್ಕಮ್ಮ ತಂದೆಯನ್ನು ಕಳೆದುಕೊಂಡಿದ್ದ ದುರ್ದೈವಿ. ಎಳೆ ಹರೆಯದ ತಾಯಿ, ಪೌರೋಹಿತ್ಯ ಕಲಿಯುತ್ತಿದ್ದ ಅಣ್ಣ, ಶಾಲೆಯಲ್ಲಿ ಓದುತ್ತಿದ್ದ ತಮ್ಮ ಇವರ ಬಳಗ. ಚಿಕ್ಕಪ್ಪನವರ ಸಂಸಾರದ ಜೊತೆ ವಾಸ. ಕ್ಷೇತ್ರಪುರೋಹಿತರಾಗಿ ಅಲ್ಪ ವರಮಾನವಿತ್ತು. ಈ ಚಿಕ್ಕಪ್ಪ ಬಲು ಚಾಣಾಕ್ಷ, ಆದರೆ ಧಾರಾಳಿ ಅಲ್ಲ. ಹೀಗಾಗಿ ನನ್ನ ಚಿಕ್ಕಮ್ಮನಿಗೆ ತವರುಮನೆಯೇನೂ ಗಟ್ಟಿಯಾಗಿರಲಿಲ್ಲವೆಂದು ಮುಂದೆ ನನ್ನ ಅರಿವಿಗೆ ಬಂತು.

ಇದು ಹೇಗೂ ಇರಲಿ. ನನ್ನ ತಾಯಿಗೆ ಇವರೊಬ್ಬ ಸಭ್ಯ ಸುಸಂಸ್ಕೃತ ಸಂಗಾತಿಯಾಗಿ ನಮ್ಮ ಮಡಿಕೇರಿ ಮನೆ ಸೇರಿದರು. ಗಂಡ, ದೊಡ್ಡ ಭಾವ (ನನ್ನ ತಂದೆ), ನಾಲ್ವರು ಅತ್ತೆಯಂದಿರು, ಹಿರಿಯಜ್ಜ ಎಲ್ಲರ ಮನಗಳನ್ನೂ ತಮ್ಮ ಪ್ರೀತಿಪೂರ್ವಕ ಸೇವೆಯಿಂದ ಗೆದ್ದ ಈ ಮಹಿಳೆ ನನ್ನ ಮಟ್ಟಿಗೊಬ್ಬ ಹಿರಿಯಕ್ಕ ಮತ್ತು ನನ್ನ ಅಸಂಖ್ಯ ಪ್ರಯೋಗಗಳಿಗೊಬ್ಬ ವಿಮರ್ಶಕಿಯಾಗಿ ದೊರೆತದ್ದು ನನ್ನ ಭಾಗ್ಯ.

ತಂದೆಯಿಂದ ಶಿಸ್ತು ಕಲಿತೆ, ತಾಯಿಯಿಂದ ಸಾಹಿತ್ಯಪ್ರೀತಿ ಗಳಿಸಿದೆ, ಚಿಕ್ಕಪ್ಪನವರಿಂದ ಸಾಹಸಮಯ ಜೀವನದ ರುಚಿ ಸವಿದೆ, ಚಿಕ್ಕಮ್ಮನಿಂದ ಸಹನೆಯ ಬೆಲೆಯರಿತೆ, ಅಜ್ಜಿಯಂದಿರಿಂದ ಸಂಗೀತಾಸಕ್ತಿ ಕುದುರಿಸಿಕೊಂಡೆ ಮತ್ತು ಮುತ್ತಜ್ಜನಿಂದ ಮಂತ್ರ, ತಂತ್ರ, ಪೂಜಾವಿಧಾನಗಳಲ್ಲಿ ಪ್ರಾವೀಣ್ಯ ಸಂಪಾದಿಸಿದೆ. ಇನ್ನು ಮರಿಕೆ ಮಾವನ ಸಾನ್ನಿಧ್ಯದಲ್ಲಿ ಜೀವನಧರ್ಮವನ್ನೇ ಯಥೇಚ್ಛ ಪಾನಮಾಡಿದೆ. ನಿಜಕ್ಕೂ ಪ್ರತಿಯೊಬ್ಬನ ಬದುಕೂ, ಸೋಮನಾಥಕವಿ ಹೇಳಿರುವಂತೆ, "ಪಲವುಂ ಪಳ್ಳ ಸಮುದ್ರವ್ಯೆ" ಅಲ್ಲವೇ? ತಾಯಿ ಎಳೆ ಎಳೆಯಾಗಿ ಲಲಿತ ಕನ್ನಡದಲ್ಲಿ "ಅಳಿದ ಉಷ್ಣದ ಹಾಲಿನಂದದಿ" ನೀತಿ ಕಥೆಗಳನ್ನು ರಸವತ್ತಾಗಿ ತಿಳಿಯಹೇಳುತ್ತಿದ್ದರು. ಅಜ್ಜಿ ಕುಮಾರವ್ಯಾಸ ಮತ್ತು ಲಕ್ಷ್ಮೀಶರ ಕಾವ್ಯಗಳನ್ನು ರಾಗಾರ್ಥಭಾವಸಹಿತ ಹೃನ್ಮನಗಳಿಗೆ ಆಪ್ಯಾಯಮಾನವಾಗುವಂತೆ ಹಾಡುತ್ತಿದ್ದರು. ಇವೆಲ್ಲ ಪ್ರಭಾವಗಳು ನನ್ನಲ್ಲಿ ಕನ್ನಡ ಪುಸ್ತಕಗಳನ್ನು ಓದುವ ಹವ್ಯಾಸವನ್ನು ಬೆಳೆಸಿದುವು. ವಿರಾಜಪೇಟೆಯ 'ಲೋಕರಹಸ್ಯ' ಮತ್ತು ಬೆಂಗಳೂರಿನ 'ಸುಬೋಧ' ಮಾಸಿಕಗಳು, ಹುಬ್ಬಳ್ಳಿಯ 'ಕರ್ಮವೀರ' ಮತ್ತು ಮಡಿಕೇರಿಯ 'ಕೊಡಗು' ಸಾಪ್ತಾಹಿಕಗಳು ತಾಯಿಯವರ, ಆದ್ದರಿಂದ ನನ್ನ ಕೂಡ, ನಿತ್ಯ ಸಂಗಾತಿಗಳು. ಬಿ.ಪಿ.ಕಾಳೆಯವರ ಪತ್ತೇದಾರಿ ಪುಸ್ತಕಗಳು, ಗಳಗನಾಥ, ಬಿ.ವೆಂಕಟಾಚಾರ್ಯ ಮೊದಲಾದವರ ಐತಿಹಾಸಿಕ ಕಾದಂಬರಿಗಳು ನನ್ನಲ್ಲಿ ಸುಪ್ತವಾಗಿದ್ದಿರಬಹುದಾದ ಕನ್ನಡ ಪ್ರೇಮವನ್ನು ಜಾಗೃತಗೊಳಿಸಿದುವು.

ಕನ್ನಡದ ಡಿಂಗರಿಗ ಮತ್ತು ಜಂಗಮ ಪುಸ್ತಕಭಂಡಾರ ಎಂದೇ ಖ್ಯಾತರಾಗಿದ್ದ ದ.ಬಾ.ಕುಲಕರ್ಣಿಯವರು ಆಗ ಧಾರವಾಡದ ಮನೋಹರ ಗ್ರಂಥಮಾಲೆಯ ಪ್ರತಿನಿಧಿಯಾಗಿ ಮಡಿಕೇರಿಗೆ ಬರುತ್ತಿದ್ದರು. ಓಂಕಾರೇಶ್ವರ ದೇವಾಲಯದ ವಿಶಾಲ ಚಾವಡಿಯಲ್ಲಿ ಮೊಕ್ಕಾಂ –– "ಹಸಿವಾದರೆ ಊರೊಳಗೆ ಭಿಕ್ಷಾನ್ನಂಗಳುಂಟು, ತೃಷೆಯಾದರೆ ಕೆರೆ–ಬಾವಿ–ಹಳ್ಳಂಗಳುಂಟು, ಶಯನಕ್ಕೆ ಹಾಳು ದೇಗುಲವುಂಟು, ಚೆನ್ನಮಲ್ಲಿಕಾರ್ಜುನಯ್ಯ ಆತ್ಮಸಂಗಾತಕ್ಕೆ ನೀನೆನಗುಂಟು" ಈ ಗೋತ್ರಕ್ಕೆ ಸೇರಿದವರು ದಬಾಕು. ಕೊಡಗಿನ ಗೌರಮ್ಮನವರನ್ನು ಕನ್ನಡನಾಡಿಗೆ ಪರಿಚಯಿಸಿದ (ಓದಿ ದಬಾಕು ಲೇಖನ 'ನಾ ಕಂಡ ಗೌರಮ್ಮ') ಮಹಾನುಭಾವರಿವರು. ಇವರ ಸತ್ಸಂಗದಲ್ಲಿ ನಾನು ಅನೇಕ ಪುಸ್ತಕಗಳನ್ನು ಪುಕ್ಕಟೆ ಓದಿದೆ! ಹದಿಹರೆಯಕ್ಕೆ ಕಾಲಿಡುತ್ತಿದ್ದಂತೆ ಕುವೆಂಪು ಮತ್ತು ಡಿವಿಜಿಯವರ ವ್ಯಾಪಕ ವಾಙ್ಮಯಗಳಿಂದ ವಿಶೇಷ ಪ್ರಭಾವಿತನಾದೆ. ಈ ಮಹಾಚಿಂತಕರು ಮತ್ತು ಪ್ರಕೃತಿಪ್ರೇಮಿಗಳು ನನ್ನ ಮೇಲೆ ಬೀರಿರುವ ಪ್ರಭಾವ ಅಪಾರ. 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯವನ್ನೂ 'ಮಂಕುತಿಮ್ಮನ ಕಗ್ಗ' ಅನುಭಾವಕಾವ್ಯವನ್ನೂ ಅವು ಪ್ರಕಟವಾಗುತ್ತಿದ್ದಂತೆಯೇ ಖರೀದಿಸಿ ಓದಿ ಮನನ ಮಾಡಿದೆ. (೨೦೦೪ರಲ್ಲಿ ಪ್ರಕಟವಾದ 'ಕುವೆಂಪು ದರ್ಶನ ಸಂದರ್ಶನ' ಪುಸ್ತಕದಲ್ಲಿ ಇವುಗಳಲ್ಲಿ ಅಂತರ್ಗತವಾಗಿರುವ ವೈಜ್ಞಾನಿಕ ಪ್ರತಿಮೆಗಳನ್ನು ವಿಶ್ಲೇಷಿಸಿದ್ದೇನೆ.)

ಶಾಲೆ ತೊಡಿಸಿದ ಕಡಿವಾಣ
ಅಧ್ಯಾಯ ನಾಲ್ಕು



ಮೋಡದಂತೆ ತೇಲಿ, ಹಕ್ಕಿಯಂತೆ ಹಾರಿ, ಕಪ್ಪೆಯಂತೆ ಜಿಗಿದು ಸರ್ವತಂತ್ರ ಸ್ವತಂತ್ರನಾಗಿ ಬೆಳೆಯುತ್ತಿದ್ದ ನನ್ನನ್ನು ಐದು ವರ್ಷ ತುಂಬಿದಾಗ ಶಾಲೆಗೆ ಸೇರಿಸಿದರು (೧೯೩೧). ಅದರ ಹೆಸರು ಸರ್ಕಾರೀ ಮಾಧ್ಯಮಿಕ ಪ್ರಾಥಮಿಕ ಶಾಲೆ – Government Middle Primary School (GMP School). ಇದರ ಮೇಲಿನ ಮಜಲುಗಳು ಎರಡು: ಮಾಧ್ಯಮಿಕ ಮತ್ತು ಪ್ರೌಢ. ಈ ಮೂರು ಶಾಲೆಗಳೂ Central High Schoolನ (CH School) – ಉನ್ನತ ಪ್ರೌಢ ಶಾಲೆ – ವಿಶಾಲ ಆವರಣದೊಳಗೆ ವಿಸ್ತಾರವಾಗಿ ಹರಡಿದ್ದುವು. ಭರ್ಜರಿ ಕಟ್ಟಡಗಳು, ಆಟವಾಡಲು ಮತ್ತು ತೋಟಗಾರಿಕೆ ಕೆಲಸ ಮಾಡಲು ಮೂರು ಹಂತಗಳಲ್ಲಿ ಮೈದಾನಗಳಿದ್ದುವು: ಶಾಲಾವರಣದೊಳಗೆ, ಇದಕ್ಕೆ ಮುಟ್ಟಿಕೊಂಡು ಹಿಂದೆ ಕೆಳ ಮ್ಯಾನ್ಸ್ ಕಾಂಪೌಂಡ್, ಮುಂದಿನ ಹಂತದಲ್ಲಿ ಮೇಲಿನ ಮ್ಯಾನ್ಸ್ ಕಾಂಪೌಂಡ್ (lower and upper Mann's compounds). ಎಲ್ಲೆಲ್ಲೂ ಮರಗಾಡು, ಪೀಠಭೂಮಿ ಕ್ರಮೇಣ ಏರುತ್ತ ಹೋಗಿ ದೂರದ ಬಾನಿನ ನೀಲಿಮೆಯೊಂದಿಗೆ ಲೀನವಾಗುವ ದೃಶ್ಯ ಅನುಪಮ. ಇಂದು (೨೦೦೫) ಈ ಸಂಕೀರ್ಣ ಪೂರ್ತಿ ಕಾಂಕ್ರೀಟ್ ಕಾಡು, ಕೃತಕ ಭಿತ್ತಿಗಳು, ವೃಕ್ಷರಿಕ್ತ ಬಯಲು, ನೀರು ಹರಿಯದ ತೋಡು ಮತ್ತು ಸರ್ವತ್ರ ಕೊಳಕು 'ರಾರಾಜಿಸುತ್ತಿವೆ.' ಇಂದು ಒಟ್ಟು ಸಮುಚ್ಚಯದ ಹೆಸರು ಸರ್ಕಾರೀ ಪದವಿಪೂರ್ವ ಕಾಲೇಜು (Government P.U. College).

ಶಾಲೆ ಸೇರುವುದು ನನಗೊಂದು ಪ್ರತಿಷ್ಠೆಯ ಪ್ರತೀಕ – ನಾನು ದೊಡ್ಡವನಾಗಿದ್ದೇನೆಂಬುದರ ರುಜುವಾತು. ಅಲ್ಲದೇ ಆಟವಾಡಲು ಹೆಚ್ಚು ಮಕ್ಕಳು ದೊರೆಯುತ್ತಾರೆಂಬುದರ ಆಸೆಯೂ ಇತ್ತು. ಇಷ್ಟದಿಂದಲೇ 'ಹಲಗೆ ಬಳಪವ ಹಿಡಿ'ದು ಶಾಲೆಗೆ ಹೋದೆ, ಚೀಲವನ್ನು ಹೆಗಲಿಗೆ ಹಾಕಿ ನೆಟ್ಟಗೆ ನಡೆದೆ, ಬಾಲಶಿಕ್ಷೆ ತರಗತಿಯ ಸುಮಾರು ನಲವತ್ತು ಚಿಳ್ಳೆಪಿಳ್ಳೆಗಳ ಜೊತೆ ಒಬ್ಬನಾಗಿ ಕುಳಿತೆ. ಹುಡುಗಿಯರೂ ಇದ್ದರು. ಆದರೆ ಅವರು ಪ್ರತ್ಯೇಕವಾಗಿ ತರಗತಿಗೆ ಬಂದು ಬೇರೆಯಾಗಿ ಕುಳಿತು ಪಾಠ ಮುಗಿದನಂತರ ಒಟ್ಟಾಗಿ ಅವರಿಗೆಂದೇ ಮೀಸಲಿಟ್ಟ ಕೊಠಡಿಗೆ ಹಿಂತಿರುಗುತ್ತಿದ್ದರು. ಆ ಹನ್ನೊಂದು ವರ್ಷಗಳೂ (ಬಾಲಶಿಕ್ಷೆ ೧ ವರ್ಷ, ಪ್ರಾಥಮಿಕ ೪ ವರ್ಷಗಳು, ಮಾಧ್ಯಮಿಕ ಮತ್ತು ಪ್ರೌಢ ತಲಾ ೩ ವರ್ಷಗಳು) ಈ ಶಿಸ್ತು ಜಾರಿಯಲ್ಲಿತ್ತು.

ರಾಜು ಮಾಸ್ತರರು ಮೂರು ಕರಡಿಗಳ ಕತೆ, ಪಂಚತಂತ್ರದ ಕತೆಗಳು, ರಾಮಾಯಣ, ಮಹಾಭಾರತ ಮುಂತಾದವುಗಳಿಂದ ನೀತಿಪ್ರಧಾನ ಘಟನೆಗಳು ಮುಂತಾದವನ್ನು ನಿಧಾನವಾಗಿ ಹೇಳಿ, ಕರಿಹಲಗೆ ಮೇಲೆ ಚಿತ್ರಸಹಿತ ಬರೆದು ಕನ್ನಡದ ಅಕ್ಷರಗಳಿಗೆ ಸುಲಭ ಪ್ರವೇಶವೊದಗಿಸಿದರು –– ಕತೆ, ಚಿತ್ರ, ವಾಕ್ಯ, ಅಕ್ಷರ ಈ ಕ್ರಮದಲ್ಲಿ. ಹೀಗೆ ಅಕ್ಷರಾಭ್ಯಾಸವೊಂದು ಪ್ರೀತಿಯ ಆಟವಾಯಿತು. ಬಲಗೈಯಲ್ಲಿ ಆರು ಬೆರಳಿದ್ದ ರಾಮಚಂದ್ರ ಗುರುಗಳು 'ತಿರುಕನ ಕನಸು' ಮತ್ತು 'ಗೋವಿನ ಕತೆ'ಗಳನ್ನು ರಾಗವಾಗಿ ಹಾಡಿದರು, ನಮ್ಮನ್ನು ಬೇರೆ ಬೇರೆ ತಂಡಗಳಾಗಿ ವಿಂಗಡಿಸಿ ನಾವೇ ಅಭಿನಯಿಸುವಂತೆ ಮಾಡಿ ಉತ್ಸಾಹ ತುಂಬಿದರು. ಅಷ್ಟರಲ್ಲಿ ಬಂದನಾ ಹುಲಿರಾಯನು: 'ಬೊಮ್ಮನಹಳ್ಳಿಯ ಕಿಂದರಿ ಜೋಗಿ'ಯ ಅವಿಸ್ಮರಣೀಯ ಕತೆ, ಹಾಡು ಮತ್ತು ಅಭಿನಯ ಸಹಿತ 'ತುಂಗಾತೀರದ ಬಲಗಡೆಯಲ್ಲಿ ಹಿಂದಲ್ಲಿದ್ದುದು ಬೊಮ್ಮನ ಹಳ್ಳಿ.' ಇದರ ಕಲ್ಪನೆ ಮತ್ತು ಪದ್ಯದ ನೇಯ್ಗೆಯಿಂದ ನಾನೆಷ್ಟು ಮೋಹಿತನಾಗಿದ್ದೆನೆಂದರೆ ಇದೇ ಧಾಟಿಯಲ್ಲಿ ನಾಲ್ಕು ಸಾಲುಗಳನ್ನು ಹೊಸೆದೂ ಬಿಟ್ಟೆ:

ಕಿಬ್ಬಿಯ ಮೇಲಿಂದಬ್ಬಿಯ ಮಡಿಲಿಗೆ ಲಾಗವ ಹೊಡೆದನು ತಿಮ್ಮಪ್ಪ
ಬೊಬ್ಬೆಯನಿಟ್ಟನು ಮುಳುಗುತ್ತಿಹೆ ನಾ ರಕ್ಷಿಸಿರೆನ್ನನು ನಮ್ಮಪ್ಪ!

ಇಂಥ ಹುಚ್ಚು ಸಾಹಸವನ್ನು ಖುದ್ದು ನಾನೇ ಚಿಕ್ಕವನಾಗಿದ್ದಾಗ ಪ್ರದರ್ಶಿಸಿ ಒಂದು ಕ್ಷಣ ಹಿರಿಯರೆಲ್ಲರಿಗೂ ಆತಂಕ ಉಂಟು ಮಾಡಿದ್ದೆನೆಂದು ಕೇಳಿದ್ದೆ. ಇನ್ನೊಮ್ಮೆ 'ಮಾವಿನ ಗೊರಟನು ಇಡಿ ಇಡಿ ನುಂಗಿ ಅಪ್ಪನ ಪೆಟ್ಟನು ತಿಂದಿದ್ದೆ' ಕೂಡ! ಈ ಘಟನೆ ನೆನಪಿನಲ್ಲಿದೆ.

ನಮ್ಮ ಕಪಿಪಾಳ್ಯ ಒಮ್ಮೆ ರಾಜಾಸೀಟಿಗೆ (Raja's seat) ಹಿರಿಯರಿಗೆ ತಿಳಿಯದಂತೆ ಲಗ್ಗೆಹಾಕಿತು. ಅಲ್ಲೇನಿದೆ? ಮಡಿಕೇರಿಯ ಅತ್ಯಂತ ಆಕರ್ಷಕ ಪ್ರೇಕ್ಷಣೀಯ ತಾಣವದು, ಬ್ರಾಹ್ಮಣಕೇರಿಯಲ್ಲಿಯ ನಮ್ಮ ಮನೆಯಿಂದ ಕೇವಲ ೨೦ ನಿಮಿಷಗಳ ನಡಿಗೆ ದೂರ. ಆದರೆ ಚಿಕ್ಕವರಿಗೆ ಪ್ರವೇಶ ಪ್ರತಿಬಂಧಿತ ಪ್ರದೇಶ – ಬ್ರಹ್ಮರಾಕ್ಷಸನಿರುವನೆಂದೂ ಎಳೆಯರನ್ನು ಸೆಳೆದು ನುಂಗುವನೆಂದೂ ಹೆದರಿಸಿಟ್ಟಿದ್ದರು. ಅದರ ಸ್ಥಳಪುರಾಣ ದೊಡ್ಡದು. ಪ್ರತಿ ಮುಂಜಾನೆ ಮತ್ತು ಸಂಜೆ ರಾಜ ಅಲ್ಲಿಗೆ ಅಶ್ವಾರೋಹಿಯಾಗಿ ಬಂದು ಆತನೇ ಕಟ್ಟಿಸಿದ್ದ ಸುಂದರ ಮಂಟಪದಲ್ಲಿ (ಇಂದಿಗೂ ಇದನ್ನು ನೋಡಬಹುದು) ತುಸು ಹೊತ್ತು ಕುಳಿತಿದ್ದು ಪ್ರಕೃತಿ ದೃಶ್ಯದ ಸೊಬಗನ್ನು ಸವಿಯುತ್ತಿದ್ದನೆಂದು ಪ್ರತೀತಿ. ನಾವು ಚಿಕ್ಕವರಾಗಿದ್ದಾಗ ಮಂಟಪ ಮಾತ್ರ ಪುರಾತನ ವೈಭವದ ವರ್ತಮಾನ ಕಳೇಬರದಂತೆ ಅನಾಥವಾಗಿತ್ತು. ಅದರ ಚಾಚು ಅಂಚಿನಿಂದ ಮುಂದಕ್ಕೆ ಕಡಿದಾದ ಇಳಿಜಾರು, ತೀರ ಕೆಳಗಿನ ದಟ್ಟ ಗೊಂಡಾರಣ್ಯದಲ್ಲಿ ಇದು ಮರೆಯಾಗುತ್ತಿತ್ತು, ಅಲ್ಲಿಂದ ಮುಂದಕ್ಕೆ ವಿಸ್ತಾರವಾದ ಹಸುರ ಕಡಲು, ಇದು ಅಲೆಯಲೆಯಾಗಿ ಹರಡುತ್ತ ಹೋಗಿ ದಿಗಂತದಲ್ಲಿ ಬೆಟ್ಟ ಸಾಲುಗಳಾಗಿ ತಲೆಯೆತ್ತುತ್ತಿತ್ತು. ಈ ಸಾಲುಗಳ ತೆಳುವಾದ ಕೊಡಿಗೆರೆ ಬಾನಿಗೆ ಬರೆದ ಲಘು ಚಿತ್ತಾರ. ಇನ್ನು ಬಿಸಿಲು–ಮಳೆ–ಮೋಡ ಸೇರಿದ ಸಂಜೆಯ ನೋಟವಂತೂ ಪರಮಾದ್ಭುತ.

ಆದರೆ ಆ ಎಳವೆಯಂದು ನಮ್ಮನ್ನು ಅಲ್ಲಿಗೆ ಸೆಳೆದದ್ದು ಈ ದೃಶ್ಯಾವಳಿಯಲ್ಲ – ಕಡಲ ಮೀನಿಗೆ ನೀರ ಬಿತ್ತರದ ಅರಿವುಂಟೆ, ಬೇಕೆ? ರಾಜಾಸೀಟಿನ ತಪ್ಪಲಿನಲ್ಲಿದ್ದ ಕಾಡು ಮಾವಿನ ಭಾರೀ ಮರದಲ್ಲಿ ಭರ್ಜರಿ ಹಣ್ಣುಗಳು ಸೂರೆ ಹೋಗಿದ್ದ ಸುದ್ದಿ ಮಾತ್ರವಲ್ಲ, ಘಮ ಘಮ ಕೂಡ, ನಮ್ಮ ಘ್ರಾಣೇಂದ್ರಿಯಗಳನ್ನು ಮರುಳುಮಾಡಿತ್ತು. 'ಪರಿಮಳಕ್ಕೆ ಹಾರುತಿರುವ ತುಂಬಿಯಂತೆ ಸುಳಿದು ಸುಳಿದು' ಅತ್ತ ಧಾವಿಸಿದೆವು. ಮೂರುಮಂದಿ ಒತ್ತೊತ್ತಿಗೆ ನಿಂತು ತಬ್ಬಿದರೂ ಮುಗಿಯದಷ್ಟು ತೋರ ಅದರ ಕಾಂಡ. ನಾಲ್ಕಾಳು ಎತ್ತರದಲ್ಲಿ ಕೊಂಬೆಗಳು ಟಿಸಿಲೊಡೆದಿದ್ದುವು. ಮರಹತ್ತಿ ಹಣ್ಣು ಕೊಯ್ಯುವುದು ಅಸಾಧ್ಯ. ಹೀಗಾಗಿ ಕವಣೆ ಕಲ್ಲು ಬೀರಿ ಹಣ್ಣುಗಳನ್ನು ಉದುರಿಸಿ ಪಂಟಿಬಿರಿಯ ತಿಂದೆವು, ಇನ್ನಷ್ಟನ್ನು ಕಟ್ಟಿಕೊಂಡೆವು.

ಪಂಟಿಬಿರಿಯವೆಂಬುದು ಭೋಜನಪ್ರಿಯ ವೈದಿಕ ಬ್ರಾಹ್ಮಣರಲ್ಲಿ ಅಂದು ಪ್ರಚಾರದಲ್ಲಿದ್ದ ಪಾರಿಭಾಷಿಕ ಪದ! ಭೂರಿ ಬಿಟ್ಟಿ ಊಟದಲ್ಲಿ ಕವಳ ಕತ್ತರಿಸಲು ತೊಡಗುವ ಮೊದಲು ನೊಜೆಹುಲ್ಲಿನ ಗಟ್ಟಿ ದಾರವನ್ನು ಹೊಟ್ಟೆಗೆ ಬಿಗಿಯಾಗಿ ಕಟ್ಟಬೇಕು, ಮನಸೋ ಇಚ್ಛೆ ಭಕ್ಷಿಸುತ್ತ ಹೋದಂತೆ ಬಕಾಸುರನ ಹೊಟ್ಟೆ ಉಬ್ಬಿ ದಾರ ಬಿರಿದು ತುಂಡಾಗುವ ತನಕವೂ ಈ ಸ್ವಾಹಾ ಕ್ರಿಯೆಯನ್ನು ಮುಂದುವರಿಸಬೇಕು! ದಾರದ ಹೆಸರು ಪಂಟಿ. ಚಿಕ್ಕಂದಿನಲ್ಲಿ ಈ ಪ್ರಯೋಗ ಮಾಡಿ ಗೆದ್ದವರು ಕೆಲವರಿದ್ದರು. ನಾನು ಮಾತ್ರ ನರಪೇತಲ, ಸೋತಿದ್ದೆ!

ಸಂಜೆ ಕವಿದಂತೆ ಎಲ್ಲರ ಮನದೊಳಗೂ ಆತಂಕ – ಹಿರಿಯರ ಆಣತಿ ಮೀರಿದ್ದೆವಲ್ಲ. ನೆರಳ ಮರೆಯಲ್ಲೇನಾದರೂ ಬ್ರಹ್ಮರಾಕ್ಷಸ ಅಡಗಿ ಕುಳಿತಿದ್ದರೆ, ಅವಕಾಶಕ್ಕಾಗಿ ಕಾದು ಹೊಂಚುತ್ತಿದ್ದರೆ? ಲಗುಬಗೆಯಿಂದ ಗೂಡುಗಳಿಗೆ ಹಾರಲು ತೊಡಗುತ್ತಿದ್ದಂತೆಯೇ ಕೊನೆಯ ಗುಟುಕೆಂದು ಪುಟ್ಟ ಗೊರಟನ್ನು ಚೀಪುವ ಸಲುವಾಗಿ ಬಾಯೊಳಕ್ಕೆ ಸೇದಿದೆ. ತಕೋ! ಅದು ನನ್ನ ಹದ್ದು ಮೀರಿ ಗಂಟಲೊಳಕ್ಕೆ ಜಾರಬೇಕೇ! ಉಸಿರು ಕಟ್ಟಿತು, ಕಣ್ಣು ಕತ್ತಲೆ ಹೋಯಿತು, ದೊಡ್ಡ ಹುಡುಗರು ನನ್ನ ಬೆನ್ನು ತಟ್ಟಿದರು, ಗಂಟಲೊಳಗೆ ಕೈಹಾಕಿ ವಾಂತಿ ಬರಿಸಿದರು, ಆದರೆ ಗೊರಟು ಮಾತ್ರ ನಾಪತ್ತೆ. ಉಸಿರಾಟದ ತೊಂದರೆಯೇನೋ ನಿಂತಿತು.

ನಿಟ್ಟುಸಿರು ಸೂಸುತ್ತ ಮೌನವಾಗಿ ಎಲ್ಲರೂ ಮನೆಗಳತ್ತ ಕಾಲಿಡುತ್ತಿದ್ದಾಗ ಬಂದರಾ ಯಮರಾಯರು – ಸಾಕ್ಷಾತ್ ನನ್ನಪ್ಪ, ನನಗೇನೂ ಆಗಿಲ್ಲವೆಂಬುದನ್ನು ಖಾತ್ರಿ ಮಾಡಿಕೊಂಡು ಬೆನ್ನಿಗೆ ಮತ್ತೆರಡು ಬಾರಿಸಬೇಕೇ! ಮನೆಗೆ ಹೋದೊಡನೆ ನಿರಾಹಾರದ ಶಿಕ್ಷೆ, ಮತ್ತು ಮರುಮುಂಜಾನೆ ಹರಳೆಣ್ಣೆ ಕುಡಿಯುವ ಹೆಚ್ಚಿನ ರಕ್ಷೆ. ಗೊರಟು ಮಾತ್ರ ಹೊರಹೊಮ್ಮಲಿಲ್ಲ. ಎಷ್ಟೆಂದರೂ 'ವಾತಾಪಿ ಜೀರ್ಣೋಭವ' ಎಂಬ ಮಂತ್ರ ಹೇಳಿ ಹೊಟ್ಟೆ ಮೇಲೆ ಕೈಯಾಡಿಸಿ ಆ ರಾಕ್ಷಸನನ್ನು ಜೀರ್ಣಿಸಿಕೊಂಡ ಅಗಸ್ತ್ಯ ಋಷಿಯ ಊರಿನವನಲ್ಲವೇ ನಾನು?
ಮುಂದೊಮ್ಮೆ ಗೀಚಿದೆ:

ರಾಜಾ ಸೀಟಿನ ನಂದೀ ಮರದಲಿ ಕಪಿಗಳ ಬೀಡನು ನಾಕಂಡೆ
ಕಲ್ಲನು ಹೊಡೆದೆ ತೊಪ್ಪಿಯು ಕಳಚಿತು ಆಯಿತು ನನ್ನದು ಬರಿ ಮಂಡೆ!
ಮಾವಿನ ಹಣ್ಣಿನ ಗೊರಟನು ನುಂಗಿದ ವೀರಶಿರೋಮಣಿ ನಾನಹುದು
ನೀರಿಗೆ ಬಿದ್ದೂ ಮುಳುಗದೆ ಎದ್ದಿಹ ರಾಮನ ಬಂಡೆಯು ನಾಹೌದು!

ಹೀಗೆ ಮಡಿಕೇರಿ ಎಂಬ ಬೆಟ್ಟದೊಳಗಿನ ಬೋಗುಣಿಯಲ್ಲಿ ನಾವೆಲ್ಲ ಕೂಪ ಮಂಡೂಕಗಳಂತೆ ನಿತ್ಯ ಸುಖ ಸಂತೃಪ್ತಿಯಲ್ಲಿ ಅರಳುತ್ತಿದ್ದೆವು – ಅರಸನ ಅಂಕೆಯಿಲ್ಲ, ದೈವದ ಕಾಟವಿಲ್ಲ ಎಂಬ ಗಾದೆ ಮಾತಿನಂತೆ. ಇದ್ದಕ್ಕಿದ್ದಂತೆ ನನಗೊಂದು ದಿನ ತೀವ್ರ ಶೀತ, ಜ್ವರ, ಕೆಮ್ಮಲು ಬಾಧೆ ತಟ್ಟಿತು. ಬೋಧೆ ತಪ್ಪಿ ಮಲಗಿದ್ದೆನಂತೆ. ನಮ್ಮೂರಿನ ಧನ್ವಂತರಿಯೆಂದೇ ಪ್ರಖ್ಯಾತರಾಗಿದ್ದ ವಾರುಣ್ಣಿ ಡಾಕ್ಟ್ರು ಬಂದರು, ಸ್ಟೆತಸ್ಕೋಪ್ ಹಚ್ಚಿ "ಇವನಿಕೆ ನ್ಯೂಮೋನಿಯಾ ಆಕಿದೆ" ಎಂದರಂತೆ (ಅವರು ಕೇರಳೀಯರು). ಎದೆ ಪೂರ್ತಿ ಏಂಟಿಫ್ಲೋಜಿಸ್ಟೈನ್ ಬೆಚ್ಚಾರ ಹಚ್ಚಿದರಂತೆ, ಎಷ್ಟೋ ವಾರ ಹಾಗೆಯೇ ಮಲಗಿರಬೇಕಾಯಿತಂತೆ, ಅಂತೂ ಸಾಯದೆ ಬದುಕಿದೆ!

ಇತ್ತ ಮಡಿಕೇರಿಯ ವರಾಹಮಿಹಿರ ಶ್ರೀಕಂಠಯ್ಯ ನನ್ನ ಜಾತಕ ಪರಾಂಬರಿಸಿ "ಇವನಿಗೀಗ ದುಷ್ಟಗ್ರಹ ಕೇತುವಿನ ಬಾಧೆ. ಪ್ರಾಣಾಪಾಯವಿದೆ. ಇದರ ನಿವಾರಣೆಗೆ ಬೇಗನೆ ಉಪನಯನ ಮಾಡಿ. ಬ್ರಹ್ಮತೇಜೋಬಲವಿರುವ ದ್ವಿಜೋತ್ತಮನನ್ನು ಕೇತು ಪೀಡಿಸುವುದಿಲ್ಲ. ಜೊತೆಗೆ ಭಾಗಮಂಡಲದ ಭಗಂಡೇಶ್ವರ ದೇವಾಲಯಕ್ಕೆ ತುಲಾಭಾರ ಹರಕೆಯನ್ನೂ ಹೇಳಿಕೊಳ್ಳಿ" ಎಂದು ಕಣಿ ನುಡಿದರಂತೆ.

ಹೀಗೆ ಹಲವು ಹತ್ತು ಹಂಚಿಕೆ ಮಂಚಿಕೆ (ಒತ್ತುಗಂಬ ಅಥವಾ ಅಟ್ಟಳಿಗೆ) ಮತ್ತು ಅನುಕಂಪಗಳು ಏಕೀಭವಿಸಿ ನಾನು ಯಥಾಸ್ಥಿತಿಗೆ ಮರಳಿದೆ, ನಿಜ. ಆದರೆ ಅದನ್ನು ಕುರಿತ ಜಿಜ್ಞಾಸೆ ಬಲುಕಾಲ ಚರ್ಚೆ, ವಾದ, ಪ್ರತಿವಾದಗಳಿಗೆ ಸುಗ್ರಾಸ ಒದಗಿಸಿತ್ತು. ವಾರುಣ್ಣಿ ಡಾಕ್ಟರರ ಕೈಗುಣವೇ ಇದರ ಕಾರಣವೆಂದು ಚಿಕ್ಕಪ್ಪ ವಾದಿಸಿದರು, ತಾಯಿಯ ಹೊರತಾಗಿ ಇತರ ಹಿರಿಯರು ಹರಕೆಯ ಫಲವಿದೆಂದು ಪಟ್ಟು ಹಿಡಿದರು! ಹೇಗೂ ಇರಲಿ ಶೀಘ್ರದಲ್ಲೇ ಮಾಣಿಗೆ ಜನಿವಾರ ತೊಡಿಸಬೇಕೆಂಬುದು ಸರ್ವರ ಅಭಿಪ್ರಾಯ. ಅಲ್ಲದೇ ಆಟವಾಡಲು ಬಯಲಿಗೆಂದೂ ಹೋಗತಕ್ಕದ್ದಲ್ಲ ಎಂಬ ಶಾಶ್ವತ ಫರ್ಮಾನನ್ನು ಅಪ್ಪ ಹೊರಡಿಸಿದರು. ನನ್ನ ಭಾವನೆ ಏನು? ಹಾಕಿ (ಇದು ಕೊಡಗಿನ ರಾಜ–ಆಟ), ಕಾಲ್ಚೆಂಡು, ಕ್ರಿಕೆಟ್ ಮುಂತಾದ ಅಂದಿನ ಸಾಮೂಹಿಕ ಕ್ರೀಡೆಗಳು ಎಂದೂ ನನ್ನ ಮನ ಸೆಳೆದಿರಲಿಲ್ಲ. ಒಬ್ಬಿಬ್ಬ ಗೆಳೆಯರ ಜೊತೆ ಬೆಟ್ಟ ಗುಡ್ಡ ಹತ್ತಿ ಇಳಿಯುವುದು, ಅಂಕು ಡೊಂಕು ನಿರ್ಜನ ರಸ್ತೆಗಳಲ್ಲಿ ಅಲೆಯುವುದು, ಎತ್ತರದ ದಿಬ್ಬವೇರಿ ನಿಸರ್ಗ ದೃಶ್ಯಗಳನ್ನು ವೀಕ್ಷಿಸುತ್ತ ಕನಸು ಕಾಣುವುದು ಮುಂತಾದವು ಪ್ರಿಯ ಹವ್ಯಾಸಗಳು.

ಇನ್ನು ಉಪನಯನ? ಬ್ರಾಹ್ಮಣಭೋಜನಗಳಲ್ಲಿ ದಕ್ಷಿಣೆ ಪಡೆಯಲು ಆ ವಿಧಿ ನನಗೆ ಪರವಾನಿಗೆ ಒದಗಿಸುತ್ತದೆಂದು ಗೊತ್ತಿತ್ತು. ಉಡುಗೊರೆಗಳು ಬರುವುದು ಖಾತ್ರಿ. ಹೀಗಾಗಿ ನಾನೂ ಅದನ್ನು ಸ್ವಾಗತಿಸಿದೆ. ಆ ಮೊದಲೇ ಮುತ್ತಜ್ಜನ ಜೊತೆ ದನಿಗೂಡಿಸಿ ಸಂಧ್ಯಾವಂದನೆ, ಅಗ್ನಿಕಾರ್ಯ, ದೇವರ ಪೂಜೆ ಮುಂತಾದ ನಿತ್ಯ ನೈಮಿತ್ತಿಕ ಮಂತ್ರಗಳೆಲ್ಲವೂ ಕಂಠಸ್ಥವಾಗಿದ್ದುವು. ಉಳಿದದ್ದೇನಿದ್ದರೂ ವಿಪ್ರವರ್ಗದ ಸಾಮೂಹಿಕ ಅಸ್ತು ಮುದ್ರೆ.

ಮನೆಯಲ್ಲೇ ನನ್ನ ಉಪನಯನ, ತಂದೆಯಿಂದ ಮುಸುಕಿನೊಳಗೆ ಗಾಯತ್ರೀ ಮಂತ್ರಾಪನೆ, ಬಂಧುಬಾಂಧವರಿಂದ ಆಶೀರ್ವಚನ ಮತ್ತು ಉಡುಗೊರೆಗಳ ಮಹಾಪೂರ, ನಾಲ್ಕು ದಿನಗಳ ಅನ್ನಸಂತರ್ಪಣೆ ಎಲ್ಲವೂ ಅತಿಶಯ ವಿಜೃಂಭಣೆಯಿಂದ ನೆರವೇರಿ ನಾನು ಜಂತುತ್ವದಿಂದ ದ್ವಿಜತ್ವಕ್ಕೆ ಬಡ್ತಿ ಪಡೆದೆ ಏಳರ ಹರೆಯದಲ್ಲಿ. ಆ ವೇಳೆಗೆ ಶಾಲೆಯಲ್ಲಿ ಒಂದನೆಯ ತರಗತಿಗೆ ಉತ್ತೀರ್ಣನಾಗಿದ್ದೆ.

ಉಪನಯನ ತಂದ ಅಪಾಯ

ಅಧ್ಯಾಯ ಐದು

ನನ್ನ ತಾಯಿ ತಂದೆಯರ ಕನಸು ನಾನೊಬ್ಬ ಯುವ ಶಂಕರಾಚಾರ್ಯನಾಗಬೇಕೆಂದಿತ್ತು. ಇದಕ್ಕೆ ಮೊದಲ ಹೆಜ್ಜೆ ಶಾಸ್ತ್ರೋಕ್ತವಾಗಿ ವೇದಾಧ್ಯಯನ. ಮನೆಯಿಂದ ನೂರು ಹೆಜ್ಜೆಯಲ್ಲಿರುವ ಓಂಕಾರೇಶ್ವರ ದೇವಾಲಯದಲ್ಲಿ ಪಾಲ್ಘಾಟ್ ಸುಬ್ರಹ್ಮಣ್ಯ ಅವಧಾನಿಗಳು ವಿಪ್ರ ವಟುಗಳಿಗೆ ಪ್ರತಿ ದಿನ ಎರಡು ಹೊತ್ತು ಪಾಳಿಗಳಲ್ಲಿ ವೇದ ಪಾಠಮಾಡಲು ನಿಯೋಜಿತರಾಗಿದ್ದರು. ಅಂಥ ಒಂದು ತರಗತಿಗೆ ಸ್ವಂತ ಇಷ್ಟದಿಂದ ನಾನು ದಾಖಲಾದೆ. ಚತುರ್ದಶಿ, ಹುಣ್ಣಿಮೆ/ಅಮಾವಾಸ್ಯೆ, ಪಾಡ್ಯ ಮತ್ತು ಹಬ್ಬದಿನಗಳ ಹೊರತಾಗಿ ಈ ಪಾಠ ಸಾಗಿತು: ಗುರುಗಳ ಎದುರು ಪದ್ಮಾಸನಹಾಕಿ ನೆಟ್ಟಗೆ ಕೂರಬೇಕು, ಅವರು, ಉದಾಹರಣೆಗೆ,

ಗುರುಬ್ರಹ್ಮಾ ಗುರುರ್ವಿಷ್ಣುರ್ಗುರುರ್ದೇವೋ ಮಹೇಶ್ವರಃ
ಗುರುರೇವ ಪರಂ ಬ್ರಹ್ಮ ತಸ್ಮೈ ಶ್ರೀಗುರವೇ ನಮಃ

ಎಂಬ ಶ್ಲೋಕದ ಒಂದೊಂದು ಸಾಲನ್ನೂ ಮೊದಲು ಹೇಳುತ್ತಿದ್ದರು, ನಾನದನ್ನು ಅದೇ ಶ್ರುತಿ–ಗತಿ–ಧಾಟಿಯಲ್ಲಿ ಎರಡೆರಡು ಸಲ ಉಚ್ಚರಿಸಬೇಕು. ಹೆಚ್ಚಿನ ಈ ಶ್ಲೋಕಗಳು ನನ್ನ ಮನದಲ್ಲಿ ಆ ಮೊದಲೇ ಛಾಪುಗೊಂಡಿದ್ದುದರಿಂದ ತ್ವರಿತ ಗತಿಯಲ್ಲಿ ಪಾಠ ಮುಂದುವರಿಯಿತು. ಸುಮಾರು ಆರು ತಿಂಗಳುಗಳಲ್ಲಿ ನವಗ್ರಹ ಮಂತ್ರ, ರುದ್ರ, ಚಮೆ, ಪುರುಷಸೂಕ್ತ, ಶ್ರೀಸೂಕ್ತ ಮುಂತಾದವನ್ನು ಅಸ್ಖಲಿತವಾಗಿ ನೆನಪಿನಿಂದಲೇ ನಾನು ಹೇಳಬಲ್ಲವನಾಗಿದ್ದೆ. ಇನ್ನು ಪೂಜಾ ಮಂತ್ರಗಳು, ಶಿವಪಂಚಾಕ್ಷರಸೂತ್ರ, ಪುಷ್ಪಾಂಜಲಿ ಮುಂತಾದವು ಮುತ್ತಜ್ಜನ ಸಾನ್ನಿಧ್ಯದಲ್ಲಿ ಮೊದಲೇ ಕಲಿತಿದ್ದೆ.

ಹೀಗೆ ನನ್ನ ಬಾಲಬ್ರಹ್ಮಚಾರಿತ್ವದ (ವಯಸ್ಸು ಹನ್ನೊಂದರ ಮಗ್ಗುಲಲ್ಲಿತ್ತು) ಖ್ಯಾತಿ ವರ್ಚಸ್ಸುಗಳು ಮಡಿಕೇರಿಯ ಆಚೆ ಪುತ್ತೂರಿನಲ್ಲಿಯೂ (ಸೋದರಮಾವನ ಮನೆ) ಪಸರಿಸಿತು, ಸತ್ಯನಾರಾಯಣ ಪೂಜೆ, ರುದ್ರಾಭಿಷೇಕ, ನವಗ್ರಹಶಾಂತಿ ಮುಂತಾದವನ್ನು ನಿರ್ವಹಿಸಲು ಹಲವಾರು ಸಿರಿವಂತರ ಮನೆಗಳಿಂದ ನನಗೆ ಪದೇಪದೇ ಬೇಡಿಕೆಗಳು ಬರತೊಡಗಿದುವು. ಇಲ್ಲೆಲ್ಲ ಅಯಾಚಿತವಾಗಿ ಸಿಕ್ಕುತ್ತಿದ್ದ ದಕ್ಷಿಣೆ ಹಣವನ್ನು ತಂದೆ ನನ್ನ ಹೆಸರಿನಲ್ಲಿ, ಆಗ ತಾನೇ ಮಡಿಕೇರಿಯಲ್ಲಿ ಸಾಕಷ್ಟು ಬಜಾವಣೆ ಸಹಿತ ಆರಂಭವಾಗಿದ್ದ, Travancore National and Quilon Bank Limited ಶಾಖೆಯ ಉಳಿತಾಯಖಾತೆಗೆ ಜಮಾಮಾಡಿಸುತ್ತಿದ್ದರು. ರೂಪಾಯಿಗೆ ೨೦ ತೆಂಗಿನಕಾಯಿ, ೧೬–೧೭ ಸೇರು ಅಕ್ಕಿ ದೊರೆಯುತ್ತಿದ್ದ ೧೯೩೭ರ ಸಮೃದ್ಧ ದಿನಗಳಂದು ನನ್ನ ಖಾತೆ ರೂ ೧೦೦ನ್ನು ಮೀರಿ ಜಿಗಿದಿತ್ತು. 'ಸಮಾನರಾರೆನಗೆ, ಮೂರು ಲೋಕದಾ ಗಂಡರ ನಡುವೆ ಸಮಾನರಾರೆನಗೆ?' ಎಂದು ಜಂಬದಿಂದ ಬೀಗುತ್ತಿದ್ದೆ.

ಅಷ್ಟರಲ್ಲಿ ಎರಡು ಗಂಡಾಂತರಗಳು ಅನಿರೀಕ್ಷಿತವಾಗಿ ಬಡಿದು ಈ ಭಾವೀ ಶಂಕರಾಚಾರ್ಯನ ಬದುಕಿಗೆ ಒಂದು ಮಹತ್ತರ ತಿರುವನ್ನು ಕೊಟ್ಟುವು.

ಒಂದು, ಕೊಡವ ಭಕ್ತರೊಬ್ಬರು (ಕೊಡಗಿನ ನಿವಾಸಿಗಳೆಲ್ಲರೂ ಕೊಡಗರು, ಉದಾಹರಣೆಗೆ ನಾನು, ನಮ್ಮ ಮನೆಯವರು, ಹೆಚ್ಚಿನವರು ಬಹಳ ಹಿಂದೆ ಕೊಡಗಿಗೆ ವಲಸೆಬಂದು ಇಲ್ಲಿಯೇ ನೆಲಸಿದವರು – ಕನ್ನಡದ ಹಿರಿಯ ಕತೆಗಾರ್ತಿ ಶ್ರೀಮತಿ ಬಿ.ಟಿ.ಜಿ.ಕೃಷ್ಣ, ಕಾದಂಬರೀಕಾರ ಭಾರತೀಸುತ ಕೊಡಗರು; ಇನ್ನು ಕೊಡಗಿನ ಮೂಲನಿವಾಸಿಗಳಾಗಿದ್ದು ತಮ್ಮ ವಿಶಿಷ್ಟ ದೈಹಿಕ ನಿಲವು, ಉಡುಪು, ಭಾಷೆ, ಆಚಾರ ಮುಂತಾದವುಗಳಿಂದ ಯಾವುದೇ ಹಿಂದೂಸಮುದಾಯದಲ್ಲಿ ಎದ್ದು ಕಾಣುವ ವ್ಯಕ್ತಿಗಳು ಕೊಡವರು – ಸ್ವತಂತ್ರ ಭಾರತದ ಪ್ರಥಮ ಮಹಾದಂಡನಾಯಕ ಫೀಲ್ಡ್ ಮಾರ್ಷಲ್ ಕೊಡಂದೆರ ಎಂ.ಕಾರ್ಯಪ್ಪ, ನಮ್ಮ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ಬಿದ್ದಂಡ ಎಸ್.ಕುಶಾಲಪ್ಪ ಮೊದಲಾದವರು) ಸತ್ಯನಾರಾಯಣ ಪೂಜೆಯ ಸಂಸ್ಕೃತ ಮಂತ್ರಗಳ ಅರ್ಥ ವಿವರಿಸಬೇಕೆಂದು ಶ್ರದ್ಧಾಭಕ್ತಿಸಹಿತ ನನ್ನನ್ನು ಪ್ರಾರ್ಥಿಸಿದರು. ಗಿಳಿಬಾಯಿಪಾಠ ಒಪ್ಪಿಸುತ್ತಿದ್ದ ನನಗೆ ಆ ಶ್ಲೋಕಗಳ ಅರ್ಥ ಗೊತ್ತಿರಲಿಲ್ಲ. ಗುರುಗಳನ್ನು ಕೇಳಿ ಬರುವೆನೆಂದು ಸಮಜಾಯಿಷಿ ಕೊಟ್ಟಾಗ ಆತ, "ಇದೇನು ಪುಟ್ಸಾಮೀ! ನಿಮಗೆಲ್ಲವೂ ತಿಳಿದಿದೆಯೆಂದು ನಾವೆಲ್ಲರೂ ನಂಬಿದ್ದೆವು" ಎನ್ನಬೇಕೇ? ಗುರುಗಳ ಮುಂದೆ ಈ ಸಮಸ್ಯೆಯನ್ನಿಟ್ಟಾಗ, "ಮಂತ್ರಗಳ ಅರ್ಥ ಕೇಳಬಾರದು, ಗೊತ್ತಿದ್ದರೂ ಆ ದೇವವಾಣಿಗಳನ್ನು ಶೂದ್ರರಿಗೆಂದೂ ಹೇಳಲೇಬಾರದು" ಎಂದು ನನ್ನನ್ನೇ ದಬಾಯಿಸಿದರು!

"ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮವಿಭಾಗಶಃ ಎಂದು ಸಾಕ್ಷಾತ್ ಗೀತಾಚಾರ್ಯನೇ ಹೇಳಿರುವನಲ್ಲವೇ? ಇನ್ನು ಶ್ರೀಕೃಷ್ಣನಾಗಲೀ ಅರ್ಜುನನಾಗಲೀ ಜನ್ಮತಃ ಬ್ರಾಹ್ಮಣರಲ್ಲವಷ್ಟೆ?" ಹರಿಕಥೆಗಳಲ್ಲಿ ಈ ವಿವರಣೆ ಕೇಳಿ ತಲೆದೂಗಿದ್ದೆ, ಕನಕದಾಸರ "ಆತ್ಮ ಯಾವ ಕುಲ, ಜೀವ ಯಾವ ಕುಲ" ಪದ್ಯವನ್ನು ತರಗತಿಯಲ್ಲಿ ಬ್ರಾಹ್ಮಣ ಉಪಾಧ್ಯಾಯರೇ ಸಾಕಷ್ಟು ಸ್ಥಳೀಯ ನಿದರ್ಶನ ಸಹಿತ ಮನಂಬುಗುವಂತೆ ವಿವರಿಸಿದ್ದರು. ಮನೆಯಲ್ಲಾದರೂ ಪರಿಸ್ಥಿತಿ ಉದಾರವಾಗಿತ್ತು: ಊಟ ತಿಂಡಿಗಳ ಹೊತ್ತಿಗೆ ಬಂದವರೆಲ್ಲರಿಗೂ, ಬ್ರಾಹ್ಮಣ–ಶೂದ್ರ ವ್ಯತ್ಯಾಸವಿಲ್ಲದೆ, ಸಹಪಂಕ್ತಿ ಮಾಮೂಲು ಕ್ರಮ, ಅಸ್ಪೃಶ್ಯತೆ ಮುಂತಾದ ಮಾನವಭೇದಕ ಆಚರಣೆಗಳನ್ನು ಮನ್ನಾ ಮಾಡಿದ್ದರು, ಜಾತಿನಿಂದನೆ ಮಾತುಗಳು ಅತಿ ವಿರಳ. ಅರ್ಥಾತ್ ಅತ್ತೆಮ್ಮ ಹಾಡುತ್ತಿದ್ದ ಕನಕದಾಸರ

ಜಪವ ಮಾಡಿದರೇನು ತಪವ ಮಾಡಿದರೇನು
ಕಪಟ ಗುಣ ವಿಪರೀತ ಕಲುಷವಿದ್ದವರು

ಕೀರ್ತನೆಯ ಅನುಷ್ಠಾನ ಮನೆಯೊಳಗಣ ಸಮಷ್ಟಿ ದೃಷ್ಟಿಯಾಗಿತ್ತು. ಇದು ಮುತ್ತಜ್ಜನ ವ್ಯಕ್ತಿತ್ವದ ಪ್ರಭಾವವೆಂದು ಮುಂದೊಂದು ದಿನ ನನ್ನ ಅರಿವಿಗೆ ಬಂದಿತು: ಸ್ವಂತ ಆಚರಣೆಗಳಲ್ಲಿ ಕರ್ಮಠರಾಗಿದ್ದರೂ ಸಾಮಾಜಿಕ ನಡವಳಿಕೆಗಳಲ್ಲಿ ಸಮದೃಷ್ಟಿ ತಳೆದಿದ್ದ ಉದಾರಮತಿ ಅವರದು. ಸಹಜವಾಗಿ ನನ್ನ ಗುರುಭಕ್ತಿ ಅಲುಗಾಡಿತು. ಶಾಲೆಯಲ್ಲಿಯ ಪಾಠ ಪ್ರವಚನಗಳು, ಆಂಜನೇಯನ ಗುಡಿಯಲ್ಲಿಯೂ ವೇದಾಂತ ಸಂಘದಲ್ಲಿಯೂ ನಡೆಯುತ್ತಿದ್ದ ಹರಿಕಥೆ, ಭಾಷಣ, ಚರ್ಚಾಗೋಷ್ಠಿ ಮುಂತಾದವು ನನ್ನಲ್ಲಿ ವೈಚಾರಿಕ ಪ್ರಜ್ಞೆಯನ್ನು ಬಿತ್ತಿದುವು. ಶಾಲೆಯ ಕೆಲಸ ವಿಪರೀತವೆಂದು ನೆಪ ಹೂಡಿ ವೇದಪಾಠಕ್ಕೆ ಮಂಗಳ ಹಾಡಿದೆ. ಗುರುಗಳು ನೊಂದರು, ತಾಯಿ ಪರಿತಪಿಸಿದರು, ನಾನು ಮಾತ್ರ ವಿಚಲಿತನಾಗಲಿಲ್ಲ. ಅರ್ಥಹೀನ ಶಬ್ದಕವಾಯತಿಯಿಂದ ಮುಕ್ತನಾದುದಕ್ಕೆ ಸಂತೋಷವೇ ಆಯಿತು. ಜೊತೆಗೆ ಈ ಸೋಲು ನನಗೆ ಸ್ಫುಟ ಉಚ್ಚಾರಣೆ ಮತ್ತು ಲಯಬದ್ಧ ವಾಚನ ಕಲೆಯನ್ನು ಕಲಿಸಿತು.

ಎರಡನೆಯ ಗಂಡಾಂತರ ತೀರ ಹಠಾತ್ತಾಗಿ ಬಡಿಯಿತು. ನನ್ನ ತಿಜೋರಿಯಾಗಿದ್ದ ಆ ಬ್ಯಾಂಕ್ ದಿವಾಳಿ ಹೋಗಿ ನಾನದರಲ್ಲಿ ಜೋಪಾನವಾಗಿ ಕೂಡಿಟ್ಟಿದ್ದ ಸ್ವಂತ ಸಂಪಾದನೆಯೆಲ್ಲವೂ ಮಂಗಮಾಯವಾಯಿತು! ದಕ್ಷಿಣೆಯ 'ದೈವಿಕ' ಹಣವನ್ನೂ ಕಾಪಾಡದ ಈ ಪೊಳ್ಳು ಭಗವಂತನ ಅಸ್ತಿತ್ವದ ಬಗೆಗೇ ನನ್ನಲ್ಲಿ ಸಂದೇಹ ಹಣುಕಿತು. ಹಣಕಾಸಿನ ವಿಚಾರದಲ್ಲಿ ಗೋಪಾಲಕೃಷ್ಣ ಅಡಿಗರ ನುಡಿಗಳ ಸೊಗಡು ಚೆನ್ನಾಗಿ ಅರಿವಿಗೆ ಬಂತು:

ನಿನಗೆ ನೀನೇ, ಗೆಳೆಯ, ನಿನಗೆ ನೀನೇ!
ಅವರಿವರ ನಂಬುಗೆಯ ಮಳಲ ರಾಶಿಯ ಮೇಲೆ
ಬಾಳಮನೆಯನು ಮುಗಿಲಿಗೆತ್ತರಿಸಲಿಹೆಯಾ?
ನಿನಗೆ ನೀನೇ, ಗೆಳೆಯ, ನಿನಗೆ ನೀನೇ!

ಹೀಗೆ ಮಂತ್ರ, ಭಕ್ತಿ ಮತ್ತು ದೈವನಿಷ್ಠೆಗಳೆಂಬ ಸ್ವಯಂವಿಧಿತ ಬಂಧನಗಳಿಂದ ವಿಮೋಚನೆಗೊಂಡ ಮತಿಗೆ ಅದೇ ವೇಳೆ ನಮ್ಮ ಶಾಲೆಯ ಆವರಣದಲ್ಲಿ ಜರಗಿದ ಕನ್ನಡ ಸಾಹಿತ್ಯ ಸಮ್ಮೇಳನ ಹೊಸ ಹಾದಿಯನ್ನು ತೋರಿಸಿತು.

ಗಾಂಧೀ ದರ್ಶನ

ಅಧ್ಯಾಯ ಆರು

ನಾನಿನ್ನೂ ಮಾಧ್ಯಮಿಕ ಶಾಲಾವಿದ್ಯಾರ್ಥಿಯಾಗಿದ್ದಾಗ, ೧೯೪೦ಕ್ಕಿಂತ ಹಿಂದೆ, ಮಹಾತ್ಮ ಗಾಂಧಿ ಮಡಿಕೇರಿಗೆ ಆಗಮಿಸಲಿದ್ದಾರೆಂಬ ಸುದ್ದಿ ಜನಜನಿತವಾಯಿತು. ಕೊಡಗಿನ ಎರಡು ವಾರಪತ್ರಿಕೆಗಳಾದ 'ಕೊಡಗು' ಮತ್ತು 'ಜನ್ಮಭೂಮಿ'ಗಳಲ್ಲಿ ವಿವರಗಳು ಪ್ರಕಟವಾಗುತ್ತಿದ್ದುವು. ನನಗೆಷ್ಟು ಅರ್ಥವಾಯಿತೋ ಇಲ್ಲವೋ ಗೊತ್ತಿಲ್ಲ, ಆದರೆ ಮಹಾವ್ಯಕ್ತಿಯೊಬ್ಬ, ಶ್ರೀಕೃಷ್ಣನಂಥ ಅವತಾರಪುರುಷನೊಬ್ಬ ಮೂರ್ತರೂಪದಲ್ಲಿ ಬರಲಿದ್ದಾನೆಂಬ ಸಂಗತಿ ಆಬಾಲವೃದ್ಧರೆಲ್ಲರಲ್ಲಿಯೂ ಉತ್ಸಾಹದ ಹೊನಲನ್ನು ಹರಿಸಿತ್ತು.

ಅವರು ಬಂದೇ ಬಂದರು. ಆ ಮುಂಜಾನೆ ರಾಜಾಸೀಟಿನ ಮೈದಾನದಲ್ಲಿ ಸೇರಿದ್ದ ಭೂರಿ ಜನಸಂಖ್ಯೆ ನನ್ನಂಥ ಎಳೆಯರಿಗೆ ಕಾವೇರೀ ಜಾತ್ರೆಯ ನೆನಪು ತರುವಂತಿತ್ತು. ಆದರೆ ಎಲ್ಲಿಯೂ ಗಲಭೆ ಗೊಂದಲವಿಲ್ಲ, ಎಲ್ಲವೂ ಅಚ್ಚುಕಟ್ಟು, ಒಂದು ಬಗೆಯ ದಿವ್ಯ ಮೌನ ಸರ್ವವ್ಯಾಪಿಯಾಗಿತ್ತು. ವಿಪುಲ ಸಂಖ್ಯೆಯಲ್ಲಿದ್ದ ಖಾದೀ ಸಮವಸ್ತ್ರಧಾರೀ ಮಹಿಳಾ ಮತ್ತು ಪುರುಷ ಸ್ವಯಂಸೇವಕರು ಸರ್ವತ್ರ ಶಿಸ್ತು ಕಾಯುವಲ್ಲಿ ಮಗ್ನರಾಗಿದ್ದರು. ಹಿಂದೀ ಭಜನೆಗಳನ್ನು ಧ್ವನಿವರ್ಧಕಗಳ ಮೂಲಕ ಪ್ರಸರಿಸುತ್ತಿದ್ದರು. ನಾವು ಮಕ್ಕಳೆಲ್ಲ ವೇದಿಕೆಗೆ ಒತ್ತಾಗಿ ಹುಲ್ಲುಹಾಸಿನಲ್ಲಿ ಕುಳಿತಿದ್ದೆವು.

ನಿರೀಕ್ಷೆ, ಉಲ್ಲಾಸ, ಉತ್ಸಾಹ, ಆನಂದ ಎಲ್ಲವೂ ದಂಡೆಮೀರಿ ಹರಿಯುತ್ತಿದ್ದಂತೆ "ಭೋಲೋ ಭಾರತ್‌ಮಾತಾಕೀ ಜೈ, ಮಹಾತ್ಮಾಗಾಂಧೀಕೀ ಜೈ" ಎಂಬ ಘೋಷಣೆಗಳು ದಿಗ್ದಿಗಂತಗಳಲ್ಲಿ ಅನುರಣಿಸಿದುವು. ಈ ಎಲ್ಲ ರಾಗ ಭಾವಗಳು ಮೈವಡೆದಂತೆ ಅಂಚಿನ ರಸ್ತೆಯಲ್ಲೊಂದು ಕಾರು, ಅದರ ಚಾಲಕ ಅಪ್ಪನ ಸಹಪಾಠಿ ಜಿ.ಎಂ.ಮಂಜನಾಥಯ್ಯ, ಅದರೊಳಗಿಂದ ಇಳಿದವರು ಗಾಂಧೀಜಿ! ತೀರ ಸರಳ ಉಡುಪು, ಆದರೆ ಕಂಗಳಲ್ಲಿ ಅಪೂರ್ವ ಕಾಂತಿ, ಮೊಗದಲ್ಲಿ ವಿಶಿಷ್ಟ ಪ್ರಸನ್ನತೆ, ನಡಿಗೆಯಲ್ಲಿ ವಿಶೇಷ ಲವಲವಿಕೆ -- ಇವರೇ ಗಾಂಧೀಜಿ, ಭಾರತ ಮಾತೆಯ ಕಣ್ಮಣಿ, ದೇಶದ ಆಶೋತ್ತರಗಳ ಗಣಿ ಮತ್ತು ಭವಿಷ್ಯವನ್ನು ರೂಪಿಸುತ್ತಿದ್ದ ಧನಿ! ಈ ಸಾಲುಗಳನ್ನು ಬರೆಯುತ್ತಿರುವಾಗ ಕೂಡ ನನ್ನಲ್ಲಿ ಅದೇ ಮಿಂಚಿನ ಹೊಳೆ ಹರಿಯುತ್ತಿದೆ ಎಂದರೆ ಆಗಿನ ಮೋಡಿ ಹೇಗಿದ್ದಿರಬಹುದು!

[ಅಂದ ಹಾಗೆ ಅಂದು ಇಡೀ ಕೊಡಗಿನಲ್ಲಿ ಕಾರ್ ಇದ್ದವರು ಎರಡೋ ಮೂರೋ ಮಂದಿ ಕಾಫಿ ಪ್ಲಾಂಟರುಗಳು ಮಾತ್ರ. ಕೊಡಗಿನ ಕೊಡುಗೈ ಕರ್ಣ ಎಂದೇ ಪ್ರಖ್ಯಾತರಾಗಿದ್ದ ಮಂಜನಾಥಯ್ಯ ಇವರಲ್ಲೊಬ್ಬರು. ಇವರೇ ಮಹಾತ್ಮ ಗಾಂಧಿಯವರ ಕೊಡಗು ಯಾತ್ರೆ ವೇಳೆ ಅವರಿಗೆ ಸ್ವತಃ ಸಾರಥ್ಯ ಒದಗಿಸಿದ ಹಿರಿಯರು.]

ಮುಂದೆ ನಡೆದ ಭಜನೆ, ಭಾಷಣ, ಜನರು ಸಾಲಾಗಿ ವೇದಿಕೆವರೆಗೆ ನಡೆದು ಗಾಂಧೀಜಿಯವರಿಗೆ ಅರ್ಪಿಸುತ್ತಿದ್ದ ಕಾಣಿಕೆ ಮುಂತಾದವು ಮಕ್ಕಳಲ್ಲಿಯೂ ಹೊಸಹುರುಪು ಬಿತ್ತಿದುವು. ಆ ಚಟುವಟಿಕೆಗಳು ಬುದ್ಧಿಗೆ ಅರ್ಥವಾಗಿರದಿದ್ದರೂ ಹೃದಯಕ್ಕೆ ತಟ್ಟಿದ್ದುವೆಂಬುದು ಸ್ಪಷ್ಟ. ನಾನೂ ಏನಾದರೂ ಕೊಡಬೇಕು ಎಂಬ ಉತ್ಕಟೇಚ್ಛೆ ನನ್ನಲ್ಲಿ ಕೂಡ ಉದ್ಭವಿಸಿತು. ನನ್ನಲ್ಲೇನಿತ್ತು? ಕಿವಿಗಳಲ್ಲಿದ್ದ ಚಿನ್ನದ ವಂಟಿಗಳನ್ನು ಬಿಚ್ಚಲು ಪ್ರಯತ್ನಿಸಿ ಸೋತೆ, ನೋವಾಯಿತು ಮಾತ್ರ. ನನ್ನ ಚಡ್ಡಿಯ ಗುಪ್ತಜೇಬಿನಲ್ಲಿ ಅಡಗಿದ್ದ ಸ್ವಂತ ಸಂಪಾದನೆ ಬೆಳ್ಳಿಯ ಎಂಟಾಣೆ ನಾಣ್ಯ ಆಗ ಚುರುಚುರು ಎಂದಿತು! ಬ್ರಾಹ್ಮಣ ಭೋಜನಗಳಲ್ಲಿ ಸಿಕ್ಕುತ್ತಿದ್ದ ಮೂರು ಕಾಸಿನ ನಾಣ್ಯಗಳ ಮೊತ್ತವದು, ಮರುದಿನ ಬ್ಯಾಂಕಿಗೆ ಕಟ್ಟಬೇಕಾಗಿದ್ದ ಹಣ. ಅದನ್ನು ಹೊರತೆಗೆದೆ, ಸಾಲು ಸೇರಿದೆ, ಗಾಂಧೀಜಿ ಸಮೀಪ ಹೋದೆ, ಅವರ ಪಾದ ಮುಟ್ಟಿ ಆ ನಾಣ್ಯವನ್ನು ಅವರಿಗೆ ಅರ್ಪಿಸಿದೆ, ಅವರು ನನ್ನ ತಲೆ ನೇವರಿಸಿ ಏನೋ ಹೇಳಿದರು, ಕೃತಾರ್ಥನಾಗಿ ಮರಳಿದೆ! ಪುರಂದರದಾಸರ ಸಾಲು 'ನಾರಾಯಣನೆಂಬೊ ನಾಮವ ಬಿತ್ತಿದ ನಾರದ ಧರೆಯೊಳಗೆ' ನನ್ನ ಮನದಲ್ಲಿ ಅನುರಣಿಸುತ್ತಿತ್ತು.

ಸಾಹಿತ್ಯವೆನ್ನೊಡಲು
ಅಧ್ಯಾಯ ಏಳು

೧೯೩೨ರ ಕನ್ನಡ ಸಾಹಿತ್ಯ ಸಮ್ಮೇಳನದ ವಾರ್ಷಿಕ ಅಧಿವೇಶನವನ್ನು ನಮ್ಮ ಶಾಲೆಯ ವಿಶಾಲ ಮೈದಾನದಲ್ಲಿ ಏರ್ಪಡಿಸಲಾಗಿತ್ತು. ಆಗ ೬ ವರ್ಷದ ಹುಡುಗನಾಗಿದ್ದ ನಾನು ಆ ಜನಜಾತ್ರೆ, ಬಗೆಬಗೆಯ ಪ್ರದರ್ಶನಗಳು, ವಿವಿಧ ವಿನೋದಾವಳಿಗಳು ಮುಂತಾದವುಗಳಲ್ಲಿ ಮಗ್ನನಾಗಿದ್ದುದರ ನೆನಪುಂಟು. ಡಿ.ವಿ.ಗುಂಡಪ್ಪನವರು ಸಮ್ಮೇಳನಾಧ್ಯಕ್ಷರೆಂದು ತಿಳಿದೆ. ಭಾಷಣಗಳಾವುವೂ ನನಗೆ ಅರ್ಥವಾಗಲಿಲ್ಲ, ಅವನ್ನು ಆಲಿಸುವ ವ್ಯವಧಾನವೂ ಇರಲಿಲ್ಲ. ಆದರೆ ಆ ಸಮ್ಮೇಳನದಲ್ಲಿ ಕಿಶೋರಚಂದ್ರವಾಣಿ ಎಂಬ ಕಾವ್ಯನಾಮದ ಯುವ ತೇಜಸ್ವೀ ಕವಿ ಕೆ.ವಿ.ಪುಟ್ಟಪ್ಪನವರು (ತರುವಾಯದ ದಿನಗಳಲ್ಲಿ ಕುವೆಂಪು ಎಂದೇ ಪ್ರಸಿದ್ಧರು) ಮೊಳಗಿದ ಕಾವ್ಯಪಾಂಚಜನ್ಯ, ಕೆ.ವಿ.ಅಯ್ಯರ್ ಪ್ರದರ್ಶಿಸಿದ ಯೋಗಾಸನಗಳು ಮತ್ತು ಬಿ.ಎಂ.ಶ್ರೀಕಂಠಯ್ಯನವರು ಬಿತ್ತಿದ ಕನ್ನಡ ಮಂತ್ರ ನನ್ನ ಮನಸ್ಸಿನ ಮೇಲೆ ಗಾಢ ಪ್ರಭಾವ ಬೀರಿ ನನಗೆ ಹೊಸ ದೃಷ್ಟಿಯನ್ನೇ ಕೊಟ್ಟುವು. 'ಕನ್ನಡಕುವರ' ಎಂಬ ಕಾವ್ಯನಾಮ ಧರಿಸಿ ಕವನ, ಕತೆ, ಪ್ರಬಂಧ ಮುಂತಾದವನ್ನು ಗೀಚುವುದು ಅಥವಾ ಹೊಸೆಯುವುದು, ಜೊತೆಗೆ ನನ್ನಷ್ಟಕ್ಕೆ ಪುಸ್ತಕ ನೋಡಿ ಯೋಗಾಸನ ಹಾಕುವುದು ನನ್ನ ಪ್ರಿಯ ಹವ್ಯಾಸಗಳಾದುವು. ಇಲ್ಲೆಲ್ಲ ಚಿಕ್ಕಪ್ಪ ನನಗೆ ಒಲವಿನ ಮಾರ್ಗದರ್ಶಿ, ಚಿಕ್ಕಮ್ಮ ಪ್ರಥಮ ಶ್ರೋತೃ. ನನ್ನ ಹುಚ್ಚಾಟಗಳೆಲ್ಲವೂ ಅವರಿಗೆ ಪ್ರಿಯವಾಗುತ್ತಿದ್ದುವೆನ್ನುವುದನ್ನು ಗಮನಿಸುವಾಗ ಅವರ ಹೃದಯವಂತಿಕೆಗೆ ಶಿರಬಾಗುತ್ತೇನೆ.

ಆ ಸಮ್ಮೇಳನದ ಸಂದರ್ಭದಲ್ಲಿ ಡಿವಿಜಿಯವರು ಬರೆದ ಕಂದಪದ್ಯವಿದು:

ಗಿರಿಗಳ ಕಂದರಗಳ ನಿ–
ರ್ಝರಗಳ ವಿಪಿನಗಳ ವಕ್ರಪಥಗಳದರ ಸುಂ–
ದರ ಶಮಕರ ರೂಪಂಗಳ–
ನರಿವೊಡೆ ನೀಂನಡೆದು ನೋಡು ಕೊಡಗಿನ ಬೆಡಗಂ

ಇದನ್ನು ಕೇಳಿದ ಶಿವರಾಮ ಕಾರಂತರು ಒಡನೆ ಸಿಡಿಸಿದ ಚಟಾಕಿ: "ಒಡೆದು ನೋಡು ನೀಂ ಕೊಡಗಿನ ಕಡುಬಂ." ಎರಡೂ ನಿಜ. ಬಾಳೆ ಎಲೆಯ ಸುರುಳಿ ಕೊಳವೆಗೆ ಹದಹುಳಿ ಬಂದ ಹಿಟ್ಟನ್ನು ಹೊಯ್ದು ಹಬೆಯಲ್ಲಿ ಬೇಯಿಸಿ ಬಡಿಸುತ್ತಿದ್ದ ಕೊಟ್ಟೆಕಡುಬಿನ ಒಂದೊಂದು ತುಣುಕೂ ಸಾಕ್ಷಾತ್ ಭೀಮನ ಗದೆಯೇ. ಇನ್ನು ಇದಕ್ಕೆ ಆಗ ತಾನೇ ಕಡೆದ ಮೊಸರಿನಿಂದ ಕಲೆಹಾಕಿದ ಘಮಘಮಿಸುವ ಮೃದು ಬೆಣ್ಣೆಯ ಮುದ್ದೆಯನ್ನು ಹಾಕಿ ಸುತ್ತಲೂ ಕೊಡಗಿನ ಜೇನಿನ ಸಮೃದ್ಧ ಅಭಿಷೇಕ ಮಾಡಿ "ಅನ್ನಬ್ರಹ್ಮದ ದೇಗುಲದೊಳಗಡೆ ಹಗಲೂ ಇರುಳೂ ಚಿಟಪಿಟಿಗುಟ್ಟುವ ಬೆಂಕಿ"ಗೆ ಅರ್ಪಿಸಿ ಪೂರ್ಣಾಹುತಿಗೈದಾಗ ಲಭಿಸುವ ತೃಪ್ತಿ ವರ್ಣನಾತೀತ. ಸ್ವರ್ಗದೊಳುಂಟೇ ಆ ಸುಖ?

ಸಮ್ಮೇಳನದ ಅಂಗ ಅಥವಾ ಫಲಶ್ರುತಿಯಾಗಿ ಮಡಿಕೇರಿಯಲ್ಲಿ ಕೊಡಗು ಕರ್ನಾಟಕ ಸಂಘ ಅಸ್ತಿತ್ವಕ್ಕೆ ಬಂದಿತ್ತು. ನನ್ನ ತಂದೆಯ ಸಹಪಾಠಿ ಮತ್ತು ಗಮಕಿ ಮೈ.ಶೇ.ಅನಂತಪದ್ಮನಾಭರಾಯರು ಇದರ ಗೌರವ ಕಾರ್ಯದರ್ಶಿಯಾಗಿ ತಮ್ಮ (ಬಾಡಿಗೆ) ಮನೆಯ ಉಪ್ಪರಿಗೆಯಲ್ಲಿ ಸಂಘದ ಗ್ರಂಥಾಲಯವನ್ನು ತೆರೆದಿದ್ದರು. ಈ ತೆರನಾಗಿ ಆಧುನಿಕ ಕನ್ನಡ ವಾಙ್ಮಯದ ವಸಂತ ಋತು ಅಂದು ನಮ್ಮೂರಿನಲ್ಲಿಯೂ ತನ್ನ ಸುಗಂಧ ಪಸರಿಸತೊಡಗಿತು. ಅರ್ಥವಾಯಿತೋ ಇಲ್ಲವೋ ಅಂತೂ ದಿನಕ್ಕೊಂದು ಪುಸ್ತಕವನ್ನು ಈ ಗ್ರಂಥಾಲಯದಿಂದ ಎರವಲು ತಂದು ಓದಿ ಟಿಪ್ಪಣಿ ಬರೆದು ಮರುದಿನ ಹೊಸ ಪುಸ್ತಕಕ್ಕೆ ಬೇಡಿಕೆ ಸಲ್ಲಿಸುತ್ತಿದ್ದೆ. ಇವೆಲ್ಲ ಬದಲಾವಣೆಗಳು ನನ್ನಲ್ಲಿ ನುಸುಳುತ್ತಿದ್ದಾಗ ನಾನು ಪ್ರಾಥಮಿಕದಿಂದ ಮಾಧ್ಯಮಿಕ ತರಗತಿಗಳಿಗೆ ಬಡ್ತಿ ಪಡೆದಿದ್ದೆ, ತರಗತಿಯಲ್ಲಿ ರ್‍ಯಾಂಕ್ ವಿದ್ಯಾರ್ಥಿ ಎನಿಸಿಕೊಂಡಿದ್ದೆ. ಹುಡುಗಾಟ ಮಾಸಿ ಒಂದು ಬಗೆಯ ಗಾಂಭೀರ್ಯವೋ ಗತ್ತೋ ನನ್ನನ್ನು ಆವರಿಸಿತ್ತು. ಕನ್ನಡಕುವರನ ಪದ್ಯಗಳು ಸ್ಥಳೀಯ 'ಕೊಡಗು' ಮತ್ತು 'ಜನ್ಮಭೂಮಿ' ಎಂಬ ವಾರಪತ್ರಿಕೆಗಳಲ್ಲಿಯೂ 'ವೈಚಾರಿಕ' ಲೇಖನಗಳು 'ಕೊಡಗು ಸಹಕಾರ ಬಂಧು' ಮಾಸಪತ್ರಿಕೆಯಲ್ಲಿಯೂ ಬೆಳಕು ಕಾಣುತ್ತಿದ್ದುವು! ನಾನೊಬ್ಬ ಬಾಲಕವಿ (ಬಾಲರಹಿತ ಕಪಿ) ಆಗಿದ್ದೆ.

ಪದ್ಯಗಳೆಲ್ಲವೂ ಪುಟ್ಟಪ್ಪನವರ ಅನುಕರಣೆಗಳು, ವೈಚಾರಿಕ ಲೇಖನಗಳು ಬಹುತೇಕ ಬಿ.ಎಂ.ಶ್ರೀಕಂಠಯ್ಯ, ಡಿ.ವಿ.ಗುಂಡಪ್ಪ ಮತ್ತು ಎ.ಆರ್.ಕೃಷ್ಣಶಾಸ್ತ್ರಿಯವರ ಕೃತಿಗಳಿಂದಲೂ ಹುಬ್ಬಳ್ಳಿಯ 'ಸಂಯುಕ್ತ ಕರ್ನಾಟಕ' ದೈನಿಕದ ಲೇಖನಗಳಿಂದಲೂ ಪ್ರಭಾವಿತವಾದವು. ಹಾವೇರಿಯ ಶ್ರೀ ಶೇಷಾಚಲ ಗ್ರಂಥಮಾಲೆಯ ಪತ್ತೇದಾರಿ, ಐತಿಹಾಸಿಕ

ಮತ್ತು ಪೌರಾಣಿಕ ಕಾದಂಬರಿಗಳು, ಕೊಡಗಿನ ಮಾಸಪತ್ರಿಕೆ 'ಲೋಕರಹಸ್ಯದ' ಅದ್ಭುತ ಲೇಖನಗಳು, ಧಾರವಾಡದ ಮನೋಹರ ಗ್ರಂಥಮಾಲೆ, ಮಿಂಚಿನಬಳ್ಳಿ ಮುಂತಾದ ಸಂಸ್ಥೆಗಳು ಪ್ರಕಟಿಸುತ್ತಿದ್ದ ಉದ್ಗ್ರಂಥಗಳು ಮುಂತಾದವು ನನ್ನ ಸಾಹಿತ್ಯ ತೃಷೆ ಹಿಂಗಿಸಲು ಪುಕ್ಕಟೆ ಲಭಿಸುತ್ತಿದ್ದ ಅಮೃತ ಕುಂಭಗಳು.

ಅಪ್ಪ ಮತ್ತು ಚಿಕ್ಕಪ್ಪ ಸಹಕಾರ ಇಲಾಖೆಯಲ್ಲಿ ನೌಕರರಾಗಿದ್ದರಷ್ಟೆ. ಅವರು ಸಹಕಾರ ಸಂಘಗಳ ಸ್ಥಾಪನೆ, ಲೆಕ್ಕಪರಿಶೋಧನೆ, ಮಹಾಸಭೆ ಮುಂತಾದ ಕ್ಷೇತ್ರಕಾರ್ಯಗಳಲ್ಲಿ ಸದಾ ನಿರತರಾಗಿರುತ್ತಿದ್ದರು. ಅಲ್ಲದೇ ಕೊಡಗಿನ ಬೇರೆ ಬೇರೆ ಮೂಲೆಗಳಲ್ಲಿ (ಉದಾಹರಣೆಗೆ ಸೋಮವಾರಪೇಟೆ, ಕಾರುಗುಂದ, ಪೊನ್ನಂಪೇಟೆ ಇತ್ಯಾದಿ) ಬಿಡಾರ ಹೂಡಿ ತಮ್ಮ ಕೆಲಸ ಮಾಡಬೇಕಾಗುತ್ತಿತ್ತು. ವಾರಗಟ್ಟಲೆ ತಂದೆ ಮೂರ್ನಾಡು, ನಾಪೋಕ್ಲು, ಸಂಪಾಜೆ ಮುಂತಾದ ಹಳ್ಳಿಗಳಲ್ಲಿ ಮೊಕ್ಕಾಂ ಹೂಡಿ ಲೆಕ್ಕ ಪರಿಶೋಧನೆ ಮಾಡುವುದಿತ್ತು. ಅಂಥ ಸಂದರ್ಭಗಳಲ್ಲಿ ಅವರು ಸ್ವಯಂಪಾಕಸಂತೃಪ್ತರಾಗಿರುತ್ತಿದ್ದರು. ತೊಂದರೆ ಉಂಟಾಗುತ್ತಿದ್ದುದು ಶಾಲೆಗೆ ರಜೆ ದೊರೆತಾಗ ನಾನೂ ಅವರ ಜೊತೆ ಸೇರಿ ಕಡ್ಡಾಯವಾಗಿ ಈ ಸ್ವಯಂಪಾತಕದ ಶಿಕ್ಷೆ ಅನುಭವಿಸಲೇಬೇಕಾಗಿ ಬಂದಾಗ! ಅಯಾಚಿತವಾಗಿ ನಾನೂ ಲೆಕ್ಕಪರಿಶೋಧನೆಯಲ್ಲಿ ಪರಿಣತಿ ಗಳಿಸಿದೆ. ಪ್ರಾಥಮಿಕ ಗಣಿತದ ಸಂಕಲನ, ವ್ಯವಕಲನಾದಿ ಮೂಲ ಪರಿಕರ್ಮಗಳೆಲ್ಲದರಲ್ಲಿಯೂ ಲೀಲಾಜಾಲವಾಗಿ ಅಪ್ಪನನ್ನು ಸೋಲಿಸುತ್ತಿದ್ದೆ. ಫಲಿತಾಂಶ? ಹೆಚ್ಚಿನ ಭಾರ ಹೊರುವ ಹೊಣೆ. ನನಗಾದರೂ ಇದು ಖುಷಿ ಕೊಡುತ್ತಿತ್ತು. ಸಭೆಗಳಲ್ಲಿಯ ಆಟಾಟೋಪಗಳು, ಕನ್ನಡದ ಕೊಲೆ, ಸಹಕಾರ ತತ್ವದ ಹನನ ಎಲ್ಲವೂ ನನ್ನ ಹಾಸ್ಯ ಪ್ರಜ್ಞೆಗೆ ಸಮೃದ್ಧ ಗ್ರಾಸ ಒದಗಿಸುತ್ತಿದ್ದುವು.

ಕೊಡಗಿನ ಹಿರಿಮೆಯನ್ನು ಪಂಜೆಯವರು ಕಂಡು, ಕೇಳಿ, ಸವಿದು ಬರೆದ 'ಹುತ್ತರಿ ಹಾಡು' ನಮಗೆಲ್ಲರಿಗೂ ಅತ್ಯಂತ ಆಪ್ಯಾಯಮಾನವಾಗಿತ್ತು. ಕೊಡಗು ಹೇಗಿತ್ತು?

ಬೊಮ್ಮಗಿರಿಯಿಂ ಪುಷ್ಪಗಿರಿ ಪರ್ಯಂತ ಬೆಳೆದೀ ದೇಶವು
ಧರ್ಮ ದಾನದ ಕಟ್ಟುಕಟ್ಟಳೆ ರೀತಿ ನೀತಿಯ ಕೋಶವು

ಇದನ್ನು ಪೂರ್ಣ – ಆಕುಟ್ಟಕೊಡ್ಲೀಪೇಟೆ (ಆಸೇತುಹಿಮಾಚಲವೆಂಬಂತೆ) – ನೋಡುವ, ಅಲ್ಲಿಯ ಬೇರೆ ಬೇರೆ ಬೆಟ್ಟಗಳನ್ನು ಏರುವ, ಹಲವಾರು ಹೊಳೆ ತೊರೆಗಳಲ್ಲಿ ಜಳಕವಾಡುವ ಸುಯೋಗ ತಂದೆ ಚಿಕ್ಕಪ್ಪಂದಿರ ಜೊತೆ ನನಗೆ ಒದಗಿತು. ಫಲವಾಗಿ ಸಹಕಾರ ಕುರಿತ ಪ್ರಬಂಧಗಳನ್ನು ಬರೆದೆ, ಕತೆಗಳನ್ನು ಹೊಸೆದೆ, ಪದ್ಯಗಳನ್ನು ಗೀಚಿದೆ.

ಮೈಶೇಯವರಿಗೆ ನನ್ನ ಬಗ್ಗೆ ಅತಿಶಯ ಅಭಿಮಾನ ಮತ್ತು ಪ್ರೀತಿ. ಒಮ್ಮೆ ಅವರು ನನ್ನನ್ನು ವಿರಾಜಪೇಟೆಗೆ ಕರೆದೊಯ್ದು ಅಲ್ಲಿಯ ವಿದ್ಯಾರ್ಥಿ ಕವನಸ್ಪರ್ಧೆಯಲ್ಲಿ ಭಾಗವಹಿಸಲು ಪ್ರೋತ್ಸಾಹಿಸಿದರು. ನನಗೆ ಪ್ರಥಮ ಬಹುಮಾನವೇ ಬಂತು ನಿಜ. ಆದರೆ ಮೈಶೇಯವರಿಂದ ಮೆಚ್ಚುನುಡಿ ಬರಲಿಲ್ಲ, "ನೋಡಯ್ಯ ಸುಮ್ಮನೆ ಹಳೆಗನ್ನಡದಲ್ಲಿ ವಾಕ್ಯಗಳನ್ನು ನೇಯ್ದರೆ ಆ ಗುಂಪು ಪದ್ಯವಾಗದು. ಮೊದಲು ಛಂದಸ್ಸು ಕಲಿ, ಈ ದೃಷ್ಟಿಯಿಂದ ಕನ್ನಡದ ಪ್ರಾಚೀನ ಕಾವ್ಯ ಮತ್ತು ಆಧುನಿಕ ಕವನಗಳನ್ನು ಅಭ್ಯಸಿಸು. ಜೊತೆಯಲ್ಲೇ ಪ್ರಕೃತಿಲೀನನಾಗಿ ಭಾವೋತ್ಸಾಹಗಳನ್ನೂ ಸಾಮಾಜಿಕ ಆಗುಹೋಗುಗಳನ್ನು ಚಿಕಿತ್ಸಕವಾಗಿ ಗಮನಿಸುತ್ತ ರುಚಿಶುದ್ಧಿಯನ್ನೂ ಗಳಿಸು. ಆಗ ತಂತಾನೇ ನಿನ್ನ ಶೈಲಿ, ಪದ್ಯದಲ್ಲಾಗಲೀ ಗದ್ಯದಲ್ಲಾಗಲೀ, ವರ್ಧಿಸುತ್ತದೆ" ಎಂದು ಬೋಧಿಸಿ ನಾಗವರ್ಮನ 'ಛಂದೋಂಬುಧಿ' ಪುಸ್ತಕವನ್ನು ಓದಲು ಕೊಟ್ಟರು, ಮತ್ತು ಪ್ರಸ್ತಾರ ಹಾಕುವ ವಿಧಿಯನ್ನು ತೋರಿಸಿಯೂ ಕೊಟ್ಟರು. ಲಯದ ವರಿಸೆ ಮೋಡಿಗಳು ಹೇಗೂ ನನ್ನಲ್ಲೇ ನಿಹಿತವಾಗಿದ್ದುದರಿಂದ ಛಂದಶ್ಶಾಸ್ತ್ರಾಧ್ಯಯನ ಕಠಿಣವೆನಿಸಲಿಲ್ಲ.

ಕೆಲವು ಪ್ರಕಟಿತ ಉದಾಹರಣೆಗಳು:

ಸತತಂ ಎಂತಹ ಕಷ್ಟಮಿರ್ದರು ಪರಮ
ಹರುಷವನೀವ ತತ್ವವದು
ಕಾಮಧೇನು ಕಾಮಿಸಿದನೀವಂತೆ ಸಹಕಾ
ರ ತತ್ವವೀವುದು ಕಾಮಿಸಿದನು ಜನರ್ಗೆ!

ಇದೊಂದು ಪ್ರಥಮಾಕ್ಷರ ಚಮತ್ಕಾರ (**ಸಹಕಾರ** ಕುರಿತು). ಆದರೆ ಛಂದಸ್ಸು ಮಾತ್ರ ಗೋಟಾಳಿ!
ನಾಡಹಬ್ಬ 'ಹುತ್ತರಿ' ಕುರಿತು ಬರೆದ ಛಂದಸ್ಸಹಿತ ಕವನ:

ಮಳೆರಾಣಿ ಸಾಗಿದಳು ತಾಯಮನೆ ಕಡೆ ಭರದಿ
ಸುಳಿಗಾಳಿ, ಚಳಿಗಾಲಿ ಬೀಸಿದುವು, ಸಲೆ, ಮುದದಿ
ಚಲಿಸಿದುವು ಪಕ್ಷಿಗಳು, ಚಂಡಾಂಶು ಹರ್ಷದಲಿ
ಕೆಲತೆರದಿ ಧರಣಿಯಲಿ ತೋಷದಲಿ
ಕಳೆಗೊಂಡ ಪೈರುಗಳು ಹೊಂಬಣ್ಣ ತಾಳಿದುವು

ಕೆಳೆಯಾಯ್ತು ಸೂರ್ಯನಿಗೆ ಪವನನಿಗೆ ಇನ್ನೊಂದು ನಾಡಹಬ್ಬ 'ಕೈಲ್‌ಪೋದು' ಅಥವಾ 'ಕೈದುಪೊಳದು' ಕುರಿತ ಕೆಲವು ಸಾಲುಗಳು:

ಬನ್ನಿ ಗೆಳೆಯರೆ ಬನ್ನಿ ಚಿಣ್ಣರೆ ಕೈದುಪೊಳದಿನ ಹಬ್ಬಕೆ
ಮುನ್ನ ಹಿರಿಯರು ಮಾಡಿ ನೆಲೆಸಿಹ ಕೊಡಗು ದೇಶದ ಕಬ್ಬಕೆ
ಬೇಗ ಬನ್ನಿರಿ ಗೆಳೆಯರೆ
ಸಾಗಿ ಬನ್ನಿರಿ ಬಾಲರೆ!

'ಗಾಂಧೀ ಜನನ'ದ ಬಗ್ಗೆ (ಕಂದ ಪದ್ಯ):

ಗಾಂಧಿಯ ಜನನದ ಕಥೆಯಂ
ಮಂದಿಗೆ ತಿಳಿಸಲಗಜೆಸುತನಂ ನೆನೆವೆಂ ನಾಂ
ಬಾಂಧವರು ಬಾಲ ರಚಿಸಿದು–
ದೆಂದಿಂದು ತೊರೆಯುತ ತಪ್ಪ ತಿಳಿದೋದುವುದೈ

ಪ್ರೌಢಶಾಲೆ ಬಿಡುವ ವೇಳೆಗೆ (೧೯೪೨) ನಾನು ಕವಿಯಲ್ಲವೆಂಬ ಪ್ರಥಮ ಭ್ರಮನಿರಸನ ನನಗಾಯ್ತು. ಅಲ್ಲಿಗೆ ಕನ್ನಡ ಕವನ ಪ್ರಪಂಚ ಅಷ್ಟರ ಮಟ್ಟಿಗೆ ಪದಮಾಲಿನ್ಯರಹಿತವಾಯಿತು!

ಗುರುವಿನ ಗುಲಾಮನಾಗುವ ತನಕ
ಅಧ್ಯಾಯ ಎಂಟು

ಮಾಧ್ಯಮಿಕ ಶಾಲೆಯ ಕೊನೆ ವರ್ಷ, ೧೯೩೮–೩೯, ಇಡೀ ಕೊಡಗಿಗೆ ಸಾಮಾನ್ಯವಾಗಿದ್ದ ಪಬ್ಲಿಕ್ ಪರೀಕ್ಷೆ ಬರೆದೆ. ಆ ಬೇಸಗೆ ರಜೆಯಲ್ಲಿ ಅಪ್ಪ ಕೊಡಗು ಜಿಲ್ಲಾ ಶಿಕ್ಷಣಾಧಿಕಾರಿ ಸಿ.ಎಂ.ರಾಮರಾಯರನ್ನು ಯಾವುದೋ ಸಂದರ್ಭದಲ್ಲಿ ಭೇಟಿಯಾದರಂತೆ. ಅವರು ಅಪ್ಪನ ಗುರುಗಳಾಗಿದ್ದವರು, ನಮ್ಮ ನೆಂಟರು ಕೂಡ. ಸದಾ ಮೌನಿ ಮತ್ತು ಕಟ್ಟುನಿಟ್ಟಿನ ಈ ಹಿರಿಯ ಅಧಿಕಾರಿ ಅಂದು ತೀರ ಅನಿರೀಕ್ಷಿತವಾಗಿ ಹಸನ್ಮುಖಿಗಳಾಗಿ ನುಡಿದರಂತೆ, "ತಿಮ್ಮಪ್ಪಯ್ಯ! ನಿನ್ನ ಮಗ ಲೋವರ್ ಸೆಕಂಡರಿಯಲ್ಲಿ ಇಡೀ ಜಿಲ್ಲೆಗೇ ಪ್ರಥಮ ಸ್ಥಾನ ಗಳಿಸಿದ್ದಾನೆ, ಕಣೋ! ಚೆನ್ನಾಗಿ ಓದಿ ಮುಂದೆ ಬರಲಿ."

ಹೀಗೆ ತುಸು ಜಂಬಸಹಿತ ನಾನು ಪ್ರೌಢಶಾಲೆಯ ಮೆಟ್ಟಲು ಹತ್ತಿದೆ (೧೯೩೯). ಅಲ್ಲಿ ನನ್ನ ಭವಿಷ್ಯವನ್ನು ಕಂಡರಿಸಿದ ಗುರುಗಳ ಪೈಕಿ ಹೆಸರಿಸಲೇಬೇಕಾದವರು ಜಿ.ಎಸ್.ಕೇಶವಾಚಾರ್ಯ, ಎ.ಪಿ.ಶ್ರೀನಿವಾಸರಾವ್, ಆರ್.ಹರಿಶೆಣೈ, ಪಿ.ಸಿ.ಉತ್ತಯ್ಯ ಮತ್ತು ಜೆ.ಗಣೇಶರಾವ್. ನನಗೆ ಜಿಎಸ್‌ಕೆ ಕನ್ನಡವನ್ನೂ ಎಪಿಎಸ್ ವಿಜ್ಞಾನವನ್ನೂ ಆರ್‌ಎಚ್‌ಎಸ್ ಗಣಿತವನ್ನೂ ಪಿಸಿಯು ಇಂಗ್ಲಿಷನ್ನೂ ಜೆಜಿಆರ್ ಜೀವನದೃಷ್ಟಿಯನ್ನೂ ತಮ್ಮ ನಡೆನುಡಿಬಗೆಗಳಿಂದ ಬೋಧಿಸಿದ ಮಹಾಪುರುಷರು. ಅವರುಗಳಿಗಿದ್ದ ವೃತ್ತಿನಿಷ್ಠೆ, ಜ್ಞಾನತೃಷೆ, ಬೋಧನಕೌಶಲ, ವಿದ್ಯಾರ್ಥಿಪ್ರೇಮ ಮತ್ತು ನಿಃಸ್ವಾರ್ಥಭಾವ ಅನನ್ಯ. ಇಂದಿಗೂ ನನ್ನ ಹಂಬಲ ಎಂದಾದರೂ ನಾನು ಆ ಮಹಾತ್ಮರುಗಳ ಎತ್ತರ ಬಿತ್ತರ ಸಾಧಿಸಲು ಸಾಧ್ಯವಾದೀತೇ?

ಒಮ್ಮೆ ಜಿಎಸ್‌ಕೆಯವರೊಡನೆ ವಿನಾಕಾರಣ 'ಕಾಳೆಗ'ಕ್ಕಿಳಿದೆ! ಕನ್ನಡದಲ್ಲಿ ಸ್ಟ್ರಾಂಗ್ ಮತ್ತು ಒಬ್ಬ ಕವಿ ಎಂದು ಬೀಗುತ್ತಿದ್ದ ನಾನು ಪ್ರಬಂಧ ಬರೆಯುವಾಗ ಆದಷ್ಟು ಕ್ಲಿಷ್ಟ ಪದಗಳನ್ನೂ ಕಠಿಣಸಮಾಸಗಳನ್ನೂ ಬಳಸಿದೆ, ವಿಚಿತ್ರ ಅಕ್ಷರಸಂಯೋಜನೆಗಳನ್ನು ಪ್ರಯೋಗಿಸಿದೆ: ಕಾನ್ತಾರಾನ್ತರದಲ್ಲಿ ಪ್ರಕಾಶಶೂನ್ಯ, ಸುಙ್ಕ, ಸುಪ್ತಸಾಮರ್ಥ್ಯ, ದುರ್ಯೋಧನ ಇತ್ಯಾದಿ. ಇಡೀ ಪ್ರಬಂಧವನ್ನು ತಿದ್ದಿ ಮರುಬರೆದು ಜಿಎಸ್‌ಕೆ ಹಿತೋಕ್ತಿ ಹೇಳಿದರು, "ಪದಗಳ ಅಬ್ಬರದಲ್ಲಿ ವಿಷಯ ಮಸಳಿದೆ. ಸರಳವಾಗಿ ಬರೆಯಬೇಕು. ಇನ್ನು ಅನ್ತರ, ಸುಙ್ಕ ಮುಂತಾದ ವಿಚಿತ್ರ ವಿಕೃತ ರೂಪಗಳು ಬೇಡ, ಇವನ್ನು ಅಂತರ, ಸುಂಕ ಎಂದೇ ಬರೆಯಬೇಕು. ತಿದ್ದಿದ ಈ ಪ್ರಬಂಧವನ್ನು ಮರುಬರೆದು ನಾಳೆ ತೋರಿಸು."

ಹದಿಹರೆಯದ ಏರು, ಮೀಸೆ ಬರುವಾಗ ದೇಶ ಕಾಣದೆಂಬ ಬೀಗು ಮತ್ತು ಸಹಪಾಠಿಗಳ ಎದುರು ಆದ ಮುಖಭಂಗ ಮುಪ್ಪುರಿಗೊಂಡು ನಾನು ಗುರುಗಳ ಎದುರು ಮಲೆತೆ, "ನಾನೇನೂ ತಪ್ಪು ಮಾಡಿಲ್ಲವಾದ್ದರಿಂದ ಈ ಇಂಪೊಸಿಷನ್ (ಮರುಬರವಣಿಗೆ) ಮಾಡಲಾರೆ" ಎಂದೇ ಬಿಟ್ಟೆ. "ಹಾಗಾದರೆ ನನ್ನ ತರಗತಿಗೆ ನೀನು ಪ್ರವೇಶಿಸತಕ್ಕದ್ದಲ್ಲ, ಹೊರಟು ಹೋಗು" ಎನ್ನಬೇಕೇ ಆ ಮೂವತ್ತರ ಜವ್ವನಿಗರು! ಕ್ಲಾಸಿನಿಂದ ಹೊರ ಹೋದೆ, ಒಂದು ವಾರ ಚಡಪಡಿಸಿದೆ, ಶಾಲೆಯಲ್ಲಿ ಇದೊಂದು ದೊಡ್ಡ ಗುಲ್ಲಾಯಿತು. ಆ ಮುಂಜಾನೆ ಖುದ್ದು ಜಿಎಸ್‌ಕೆ ನಮ್ಮ ಮನೆಗೇ ಬಂದರು, ನನ್ನ ಕೈಯಿಂದಲೇ ಕಾಫಿ ಪಡೆದು ಕುಡಿಯುತ್ತ, "ಏಕೆ ಈ ಮೊಂಡುತನ? ನೀನು ನನ್ನ ಹೆಮ್ಮೆಯ ವಿದ್ಯಾರ್ಥಿಯಲ್ಲವೇ? ಇಂದಿನಿಂದ ತರಗತಿಗೆ ಬಾ, ಜ್ಞಾನಶಿಖರವೇರಲು ಮೊದಲ ಆವಶ್ಯಕತೆ ವಿನಯ" ಎಂಬ ಬುದ್ಧಿವಾದ ಹೇಳಿದರು. ನನ್ನ ಹೃದಯ ತುಂಬಿ ಕಣ್ಣುಗಳಲ್ಲಿ ನೀರು ಮೊಗೆಯಿತು. ಅನೇಕ ವರ್ಷಗಳ ತರುವಾಯ ಈ ಪರಶುರಾಮ–ಭೀಷ್ಮ ವಾಗ್ಯುದ್ಧ ನೆನೆದು ನಾವಿಬ್ಬರೂ ಪೊಗದಸ್ತಾಗಿ ನಕ್ಕದ್ದುಂಟು.

ಎಪಿಎಸ್ ಪ್ರಯೋಗಸಹಿತ ಕಲಿಸಿದ ವಿಜ್ಞಾನ, ಆರ್‌ಎಚ್‌ಎಸ್ ಗಣಿತ ಸಮಸ್ಯೆಗಳಿಗೆ ಕೊಟ್ಟ ಒಳನೋಟ, ಪಿಸಿಯು ಅಭಿನಯಪೂರ್ವಕ ಬೋಧಿಸಿದ ಶೇಕ್‌ಸ್ಪಿಯರ್ ನಾಟಕ, ಜೆಜಿಆರ್‌ಅವರ ಪಾಠಪ್ರವಚನ, ಆಟೋಟ ಮತ್ತು ಉಡುಪುತೊಡಪುಗಳಲ್ಲಿ ತೀರ ಸಹಜವಾಗಿ ಎದ್ದು ಮಿನುಗುತ್ತಿದ್ದ ಸುಟಿತನ ಅನ್ಯಾದೃಶವಾಗಿದ್ದುವು –– ನಮಗೆಲ್ಲ role model ಆಗಿದ್ದುವು.

ನಮ್ಮ ಡ್ರಿಲ್ ಮಾಸ್ಟರ್ ಬಿದ್ದಯ್ಯನವರದು ಬೇರೆಯೇ ವ್ಯಕ್ತಿತ್ವ, ಬಿಡಾರ ಮತ್ತು ಶಿಸ್ತು. ಅವರು ಒಂದನೆಯ ಮಹಾಯುದ್ಧದಲ್ಲಿ ಕಾದಾಡಿದ ವೀರರಂತೆ, ಅಪ್ಪನಿಗೂ ಮೇಷ್ಟ್ರಾಗಿದ್ದವರು, ಬ್ರಹ್ಮಚಾರಿ, ಪ್ರಾಥಮಿಕ ಶಾಲೆಯ ಮೂಲೆ ಕೊಠಡಿಗಳೆರಡರಲ್ಲಿ ಅವರ ವಾಸ, ಹತ್ತಿರವೇ ಇದ್ದ ಬೋರ್ಡಿಂಗ್ ಹೌಸ್‌ನಲ್ಲಿ ಆಹಾರ, ದೊಡ್ಡ ಆಳು, ಕಡುಕಠಿಣ ಮುಖಭಾವ, ಜೊತೆಗೊಂದು ಅಲ್ಸೇಷನ್ ನಾಯಿ. ನಡಿಗೆ ಅಪ್ಪಟ ಮಿಲಿಟರಿ. ಮಾತಿನಲ್ಲಿ ಪ್ರತಿ ನಾಲ್ಕನೆಯ ಪದ ಬ್ಲಡಿ ಅಥವಾ ಬಾಸ್ಟರ್ಡ್. ಕನ್ನಡ ಅಥವಾ ಕೊಡವ ಭಾಷೆ ಆಡಿದ್ದೇ ಇಲ್ಲ. ಧರೆಗಿಳಿದ ಈ ಯಮಧರ್ಮರಾಯ ಹೈಸ್ಕೂಲಿನಲ್ಲಿ ನಮಗೆ ಹಾಕಿ, ಫುಟ್‌ಬಾಲ್ ಮತ್ತು ಕ್ರಿಕೆಟ್, ಜೊತೆಗೆ ಡ್ರಿಲ್ ಕಲಿಸಲು ಬರುತ್ತಿದ್ದರು. ಆಟವಾಡಲು ಹೋದವರಿಗೆ ಡ್ರಿಲ್‌ನಿಂದ ವಿನಾಯತಿ. ಅಳ್ಳೇಶಿ ಮತ್ತು ಸದಾ ಶೀತಪೀಡಿತನಾಗಿದ್ದ ನಾನು ಆಟದಿಂದ ಬಲು ದೂರ. ಹೀಗಾಗಿ ಡ್ರಿಲ್ ಕಡ್ಡಾಯವಾಗಿತ್ತು, ವಾರಕ್ಕೆ ಮೂರು ಸಲ ಸಾಯಂಕಾಲದ ಕೊನೆಯ ತರಗತಿ.

ನಮ್ಮನ್ನೆಲ್ಲ ಎತ್ತರವಾರು ಮೂರು ಸಾಲುಗಳಲ್ಲಿ ನಿಲ್ಲಿಸಿ ಲೆಫ್ಟ್, ರೈಟ್, ಲೆಫ್ಟ್, ರೈಟ್ ಮುಂತಾಗಿ ಕವಾಯತಿ, ಮತ್ತೆ ಅದೇ ಕ್ರಮದಲ್ಲಿ ಓಟ, ಅಲ್ಲದೇ ಹೈ ಜಂಪ್, ಲಾಂಗ್ ಜಂಪ್, ಕ್ರಾಲಿಂಗ್ ಮುಂತಾದ ಕಠಿಣ ಶಿಕ್ಷೆಗಳಿಗೆ ಗುರಿಪಡಿಸುತ್ತಿದ್ದರು. ಚೂರು ತಪ್ಪಿದರೂ ಬ್ಲಡಿ ಸನ್ನಪ್ಪೆ ಸಿನ್ನರ್ (bloody son of a sinner) ಮುಂತಾದ ಸಹಸ್ರನಾಮಾರ್ಚನೆ ಸಾಮಾನ್ಯವಾಗಿತ್ತು. ನನ್ನ ಸ್ಥಾನ 'ಕಾಕ ಸಂಘಾತದೊಳ್ ಸಿಲುಕಿರ್ದ ಕೋಗಿಲೆಯ ಮರಿಯಂತೆ' (ಲಕ್ಷ್ಮೀಶ) ಇತ್ತು. ಇಂಥ ಒಂದು ಸಂಜೆ ಈ ಚಿತ್ರಗುಪ್ತ ನಮ್ಮನ್ನೆಲ್ಲ ಬೇರೆಯೇ ಒಂದು ಪರೀಕ್ಷೆಗೆ ಒಳಪಡಿಸಿ ಮತ್ತೆ ಬೈದರು: ಕೇಶವಿನ್ಯಾಸದ ಮೇಲೆ ಅವರ ಗೃಧ್ರದೃಷ್ಟಿ. "ಈ ಸಿನೆಮಾ ಫ್ಯಾಷನ್ ಎಲ್ಲ ಬೇಡ. ನಾಳೆ ಸಂಜೆ ಒಳಗೆ ನೀವೆಲ್ಲ ತಲೆಕೂದಲನ್ನು ಅರ್ಧ ಇಂಚಿಗಿಂತ ಹೆಚ್ಚಿಲ್ಲದಂತೆ ಬೋಳಿಸಿ ಬರತಕ್ಕದ್ದು. ಇಲ್ಲವಾದರೆ ನಾನೇ ನಿಮಗೆ ಹಜಾಮತ್ತು ಮಾಡುತ್ತೇನೆ, ಜೋಕೆ" ಎಂದು ಅಪ್ಪಟ ಇಂಗ್ಲಿಷಿನಲ್ಲಿ ಗುಡುಗಿದರು.

ನಾನಂತೂ ಭಯಭೀತನಾದೆ. ಮರುಮುಂಜಾನೆ ಮನೆಯಲ್ಲಿ ಯಾರಿಗೂ ಹೇಳದೆ ಕುಲನಾಪಿತ ನಂಜಪ್ಪನ ಕತ್ತರಿ ಮತ್ತು ಮಿಶನುಗಳಿಗೆ ಶಿರ ಕೊಟ್ಟೆ, ಮಂಡೆಬೋಳನಾದೆ! "ಏನಿದು ಅಸಹ್ಯ? ಕ್ಷೌರಕ್ಕೆ ಕಾಲಾಕಾಲ ಬೇಡವೇ? ಇವತ್ತು ಮಂಗಳವಾರ. ಏನು ನಿನ್ನವಸ್ಥೆ?" ಎಂದು ತಂದೆ ಗುಡುಗಿದಾಗ ಬಿದ್ದಯ್ಯ ಮೇಷ್ಟ್ರ ಸುಗ್ರೀವಾಜ್ಞೆ ಬಗ್ಗೆ ಹೇಳಿದೆ. ಇವರು ಅಪ್ಪನಿಗೂ ಮೇಷ್ಟ್ರು ಆಗಿದ್ದರಂತೆ. ಸರಿ ಅಪ್ಪ ನೇರ ಅವರಲ್ಲಿಗೆ ಹೋಗಿ ತನ್ನ ಸುಪುತ್ರನಿಗೇಕೆ ಈ ಶಿಕ್ಷೆ, ಅದೂ ಈ ಅಮಂಗಳ ಮುಹೂರ್ತದಲ್ಲೆಂದು ಕೇಳಿಯೇಬಿಟ್ಟರು. "ಲೋ ತಿಮ್ಮಪ್ಪಯ್ಯಾ! ಅದು ನಿನ್ನ ಕುಟ್ಟಿಗಲ್ಲವೋ ನಾ ಹೇಳಿದ್ದು, ಆ ಶೆಟ್ರ, ಸಾಬರ ಕುಟ್ಟಿಗಳಿಗೆ ಮತ್ತು ನಮ್ಮ ಕಿಣ್ಣಗಳಿಗೆ ಕಣೋ!" ಎಂದರಂತೆ.

ಅಂದಹಾಗೆ ಕೊಡವರ ಖಾಸಗಿ ನುಡಿಗಳಲ್ಲಿ ಅವರ ಮಕ್ಕಳೆಲ್ಲರೂ ಕಿಣ್ಣರು, ಉಳಿದವರೆಲ್ಲರೂ ಕುಟ್ಟಿಗಳು. ಹೀಗೆ ನಾನೊಬ್ಬ ಪಟ್ಟ ಕುಟ್ಟಿ (ಭಟ್ಟರ ಹೈದ). ಬಿದ್ದಯ್ಯ ಮೇಷ್ಟ್ರ ಕಲಾಯಿ ಡ್ರಿಲ್ ಎಂದೇ ಈ ಘಟನೆ ಮುಂದೊಂದು ದಿನ ನನ್ನ ವೃತ್ತಿಜೀವನದಲ್ಲಿ ಪುನರವತರಿಸಿತು! (ನೋಡಿ: 'ಎನ್‌ಸಿಸಿ ದಿನಗಳು' ಪುಸ್ತಕದಲ್ಲಿ 'ಕೊಟ್ಟಮುಡಿಯಲ್ಲಿ ಕೊಟ್ಟ ಮುಡಿ' ಅಧ್ಯಾಯ)

ಬದುಕಿನಲ್ಲಿ ಪ್ರತಿಯೊಂದು ಘಟನೆಗೂ, ಆ ಕ್ಷಣದಲ್ಲಿ ಅದು ಎಷ್ಟೇ ಅಸಹನೀಯವಾಗಿದ್ದರೂ, ಸ್ಥಾನವಿದ್ದೇ ಇದೆ. ಬಿದ್ದಯ್ಯ ಮೇಷ್ಟ್ರ ಕಲಾಯಿ ಡ್ರಿಲ್ ಅನುಭವಾನಂತರ ನಾನವರನ್ನು ಮನಸ್ವೀ ಹಳಿಯತೊಡಗಿದೆ? ಇಲ್ಲ. ಮುಂದೆ ೧೯೫೨ರಲ್ಲಿ ನಾನು ಸೇನಾಶಿಕ್ಷಣ ಪಡೆದು ಎನ್‌ಸಿಸಿ ಅಧಿಕಾರಿಯಾಗಿ ಮರಳಿದಾಗ ಮೊದಲು ಬಿದ್ದಯ್ಯ ಮೇಷ್ಟ್ರಲ್ಲಿಗೆ ಹೋದೆ, ಆ ಹಣ್ಣು ಹಣ್ಣು ಮುದುಕರ ಆಶೀರ್ವಾದ ಪಡೆದು ಹೇಳಿದೆ, "ಸರ್! ಅಂದು ನೀವು ನನ್ನಲ್ಲಿ ಕವಾಯತಿ ಬೀಜ ಬಿತ್ತಿದಿರಿ. ಇಂದು ನಿಮಗೆ ನಾನು ಅದರ ಫಲವನ್ನು ಕೃತಜ್ಞತಾಪೂರ್ವಕವಾಗಿ ಅರ್ಪಿಸುತ್ತಿದ್ದೇನೆ." ಹೌದು, Madras Regimental Centre, Wellington, Ootyಯಲ್ಲಿಯ ಸೇನಾಶಿಕ್ಷಣ ಭಾಂಡದಲ್ಲಿ ನಾನು ಉನ್ನತಶ್ರೇಣಿಯಲ್ಲಿ ಉತ್ತೀರ್ಣನಾಗಿದ್ದೆ! (ವಿವರಗಳಿಗೆ ನೋಡಿ 'ಎನ್‌ಸಿಸಿ ದಿನಗಳು' ಪುಸ್ತಕ.)

ಪ್ರೌಢಶಾಲೆಯ ಮೂರು ವರ್ಷಗಳಲ್ಲಿಯೂ ನನಗೆ ಗಣಿತ, ವಿಜ್ಞಾನ, ಕನ್ನಡ ಮತ್ತು ಒಟ್ಟು ಅಂಕಗಳಲ್ಲಿ ಒಂದನೆಯ ಸ್ಥಾನ ಲಭಿಸುತ್ತಿತ್ತು. ಹೀಗಾಗಿ ಅನೇಕ ಸಹಪಾಠಿಗಳು ನನ್ನಲ್ಲಿ ಲೆಕ್ಕ ಹೇಳಿಸಿಕೊಳ್ಳಲು ಮತ್ತು ಪ್ರಬಂಧ ತಿದ್ದಿಸಿಕೊಳ್ಳಲು ಬರುತ್ತಿದ್ದರು. 'ಕೆರೆಯ ನೀರನು ಕೆರೆಗೆ ಚೆಲ್ಲಿ ವರವ ಪಡೆ' ಎಂಬುದು ಮನೆಯ ಪಾಠ. ಅವರೆಲ್ಲರ ಜೊತೆ ನಾನು ದುಡಿದೆ, ನನ್ನ ಮನಸ್ಸು ಅಧಿಕ ನಿಶಿತವಾಯಿತು, ಸ್ನೇಹ ವರ್ಧಿಸಿತು. ನಿಜ, 'ಕೊಟ್ಟದ್ದು ತನಗೆ ಬೈಚಿಟ್ಟದ್ದು ಪರರಿಗೆ.'

ನಾವು ಮಾಡಿದ ಪ್ರಯೋಗಗಳು
ಅಧ್ಯಾಯ ಒಂಬತ್ತು

ಜಿಎಸ್‌ಕೆಮೇಷ್ಟ್ರು ಬಹುಶ್ರುತರು: ಬಿಎಸ್‌ಸಿ ಪದವೀಧರರಾಗಿದ್ದುದರಿಂದ ಇಂಗ್ಲಿಷ್, ಕನ್ನಡ, ಸಂಸ್ಕೃತ ಭಾಷೆಗಳ ಜೊತೆಗೆ ವಿಜ್ಞಾನ ವಿಭಾಗಗಳನ್ನೂ ಸಮರ್ಥವಾಗಿ ಬೋಧಿಸಬಲ್ಲವರಾಗಿದ್ದರು. ಪ್ರಧಾನವಾಗಿ ಅವರು ನಮಗೆ ಪ್ರೌಢಶಾಲೆಯಲ್ಲಿ ಕನ್ನಡವನ್ನು ವೈಜ್ಞಾನಿಕವಾಗಿ ಕಲಿಸಿದರು: ಕ್ಲಿಷ್ಟ ವಿಷಯಗಳಿಗೆ ವಿವರಣೆ ಕೊಡುವುದರ ಜೊತೆಗೆ ಬೇರೆ ಬೇರೆ ಶಿಸ್ತುಗಳಲ್ಲಿ ಅವುಗಳ ಅನ್ವಯ ಕುರಿತು ತೌಲನಿಕ ವ್ಯಾಖ್ಯಾನವನ್ನೂ ಮಾಡುತ್ತಿದ್ದರು. ವಿಜ್ಞಾನದ ಪರಿಕಲ್ಪನೆಗಳು ಬಂದಾಗಲಂತೂ ಅವರ ಉತ್ಸಾಹದ ಹೊನಲು ದಂಡೆ ಮೀರಿ ಹರಿಯುತ್ತಿತ್ತು.

ಶ್ರೀರಾಮನ ಕಪಿಸೈನ್ಯ ನಕ್ಷತ್ರಸಂಖ್ಯೆಯನ್ನೂ ಮೀರಿತ್ತು ಎಂಬ ಹೋಲಿಕೆ ಒಂದು ಪಾಠದಲ್ಲಿತ್ತು. ಜಿಎಸ್‌ಕೆಯವರು ಈ ಉಪಮಾನವನ್ನು ವಿವರಿಸುವ ಸಲುವಾಗಿ ಅಕ್ಬರ್–ಬೀರಬಲ್ ಪ್ರಕರಣದಿಂದ ಆಯ್ದ ಒಂದು ಉದಾಹರಣೆಯನ್ನು ಉಲ್ಲೇಖಿಸಿದರು.
ತುಂಬಿದ ಆಸ್ಥಾನದಲ್ಲಿ ಚಕ್ರವರ್ತಿ ಅಕ್ಬರ್ ಎತ್ತಿದ ಪ್ರಶ್ನೆ, "ಆಕಾಶದಲ್ಲಿರುವ ನಕ್ಷತ್ರಗಳ ಸಂಖ್ಯೆ ಎಷ್ಟು?"
ಆಸ್ಥಾನಪಂಡಿತರೆಲ್ಲರೂ ಮೌನ. ಕೊನೆಗೆ ಆತ ಬೀರಬಲನನ್ನೇ ಕುರಿತು ಈ ಪ್ರಶ್ನೆ ಕೇಳಿದ. ಈತನ ಉತ್ತರ, "ಪ್ರಭೂ! ಇಂದು ರಾತ್ರಿ ಪೂರ್ತಿ ಎಣಿಸಿ ನಾಳೆ ಮುಂಜಾನೆ ಸನ್ನಿಧಾನಕ್ಕೆ ಬಂದು ಉತ್ತರ ಒಪ್ಪಿಸುತ್ತೇನೆ."
ಆ ರಾತ್ರಿ ಆತ ಎಂದಿಗಿಂತಲೂ ಮೊದಲೇ ಮಲಗಿದ. ಮರುದಿನ ಬಲುತೂಕದ ಭರ್ತಿಗೋಣಿಚೀಲವನ್ನು ಎತ್ತಿನ ಗಾಡಿಗೆ ಹೇರಿ ಇದರ ಸಮೇತ ಆಸ್ಥಾನಕ್ಕೆ ತೆರಳಿದ. ಅಲ್ಲಿ ನಾಲ್ಕು ಮಂದಿ ಪಟುಭಟರು ಈ ಹೊರಲಾರದ ಭಾರವನ್ನು ಕೆಳಗಿಳಿಸಿ ಕಷ್ಟಪಟ್ಟು ಎತ್ತಿಕೊಂಡು ಹೋಗಿ ಅರಸನ ಮುಂದಿಟ್ಟರು. ಎಲ್ಲರಿಗೂ ಕುತೂಹಲ, ಒಗಟು. ಬೀರಬಲ್ ಗಂಭೀರವಾಗಿ ನುಡಿದ, "ರಾಜಾ! ನಕ್ಷತ್ರಸಂಖ್ಯೆಯನ್ನು ಈ ಗೋಣಿಚೀಲದಲ್ಲಿ ಹಿಡಿದಿಟ್ಟಿದ್ದೇನೆ. ನೀನೇ ಬಂದು ಇದರ ಹೊಲಿಗೆ ಬಿಚ್ಚಿ ಆ ಮೊತ್ತವನ್ನು ನೋಡಬಹುದು."
ಅಕ್ಬರ್ ಹಾಗೆಯೇ ಮಾಡಿದ. ಕಂಡದ್ದೇನು? ಮರಳ ಕಣಗಳ ನಿಬಿಡ ಮೊತ್ತ! ಹೇಗೆ ಈ ಕಣಗಳ ಎಣಿಕೆ ಅಸಾಧ್ಯವೋ ಹಾಗೆ ನಕ್ಷತ್ರಗಳ ಗಣನೆ ಕೂಡ ಎಂಬುದು ಧ್ವನಿ. ಎಂದಿನಂತೆ ಬೀರಬಲನ ಜಾಣ್ಮೆಗೆ ಎಲ್ಲರೂ ತಲೆದೂಗಿದರು.

ಈ ಪಾಠವನ್ನು ತನ್ಮಯನಾಗಿ ಆಲಿಸಿದೆ. ಹದಿಹರೆಯದ ನನ್ನ ತಲೆಯಲ್ಲಿ ಇದೊಂದು ಹೊಸ ಸವಾಲನ್ನು ಬಿತ್ತಿತು: ನಾನೇಕೆ ವಾಸ್ತವ ಗಣನೆಯನ್ನೇ ಮಾಡಿ ಈ ಒಡಪಿಗೆ ಉತ್ತರವನ್ನು ಶೋಧಿಸಬಾರದು? ಆ ಇರುಳು ರಾಜಾಸೀಟಿನ ಗುಡ್ಡೆಯ ಕೊಡಿಯಲ್ಲಿ ಬೇರೆಬೇರೆ ದಿಶೆಗಳಿಗೆ ಮುಖಮಾಡಿ ಕುಳಿತವರು ನಾವು ಎಂಟುಮಂದಿ ಸಹಪಾಠಿಗಳು –– ಒಬ್ಬೊಬ್ಬ ಒಂದೊಂದು ವಲಯದಲ್ಲಿ ಕಾಣುತ್ತಿದ್ದ ತಾರೆಗಳನ್ನು ಆಗಾಗಲೇ ಎಣಿಸಿ ಬರೆದಿಡುವುದು ನಮ್ಮ ಹಂಚಿಕೆ. ಮರುಮುಂಜಾನೆಯ ಹೊಂಬಣ್ಣ ಮಿನುಗುವ ತನಕವೂ ನಿಷ್ಠೆಯಿಂದ ಮಾಡಿದ ಈ ಪ್ರಯೋಗ ನಮಗರುಹಿದ ವಾಸ್ತವತೆ ಬೇರೆಯೇ: ಇದು ಅಸಾಧ್ಯ ಸಾಹಸ, ಕಪ್ಪೆಗಳನ್ನು ತಕ್ಕಡಿಯಲ್ಲಿ ತೂಗುವ ವಿಫಲ ಪ್ರಯತ್ನ! ಈಗ ಕಂಡ ಅರಿಲು ಇನ್ನೊಂದು ಕ್ಷಣ ಕಾಣದು, ಏನೂ ಇಲ್ಲ ಎನ್ನುವಲ್ಲಿ ನಾನಿಲ್ಲಿದ್ದೇನೆ ಎಂದು ಅಣಕಿಸುವ ರೀತಿ ನಕ್ಷತ್ರ ಜೊಂಪೆಯೇ ಪ್ರತ್ಯಕ್ಷ. ಈ ಮಾಯಾಮೃಗಾನ್ವೇಷಣೆ ಸಾಕ್ಷಾತ್ ಶ್ರೀರಾಮನಿಗೂ ಪರಿಹರಿಸಲಾಗದ ಸವಾಲು.

ಇನ್ನು ಎಪಿಎಸ್‌ಅವರು ಮೂರ್ತಿವೆತ್ತ ವಿಜ್ಞಾನವೆಂಬ ಹೆಸರು ಪಡೆದಿದ್ದರು. ಶಾಲೆಯಲ್ಲಿಯ ಇವರ ಪ್ರಯೋಗಮಂದಿರ astronomy(a)ಯಿಂದ zoology(z)ವರೆಗಿನ ವಿಜ್ಞಾನ ವಸ್ತುಸಂಗ್ರಹಾಲಯವೇ ಆಗಿತ್ತು. ಇವರು ಆಯಾ ತರಗತಿಗೆ ಸಂಬಂಧಿಸಿದ ಪ್ರಯೋಗ ಮಾದರಿಗಳನ್ನು ತಂದು ನಮ್ಮ ಮುಂದೆ ಹಿಡಿದು ತೋರಿಸಿ ವಿವರಿಸುವ ಪರಿ ಅನನ್ಯವಾಗಿತ್ತು. ಅಂದು ಇವರನ್ನು ಕುರಿತು ಪ್ರಚಲಿತವಿದ್ದ ಒಂದು ಐತಿಹ್ಯ ಇವರೆಂಥ ಪ್ರಯೋಗಪರಿಣತಮತಿ ಎನ್ನುವುದಕ್ಕೆ ನಿದರ್ಶನ.

ಜೀವಂತ ವ್ಯಕ್ತಿಯ ಸರಾಸರಿ ಸಾಂದ್ರತೆ ನೀರಿನದಕ್ಕಿಂತ ಕಡಿಮೆಯಾದ್ದರಿಂದ ತಾನು ನಿಶ್ಚಲ ಸರೋವರದ ಮೇಲೆ ಅಲ್ಲಾಡದೆ ಮಲಗಿದರೆ ಮರದ ಕೊರಡಿನಂತೆ ತೇಲಬೇಕು ಎಂಬುದಾಗಿ ತರ್ಕಿಸಿದ ನಮ್ಮ ಗುರುಗಳು, ವೃತ್ತಿ ಸೇರಿದ ತರುಣದಲ್ಲಿ, ಶ್ರೀ ಓಂಕಾರೇಶ್ವರ ದೇವಾಲಯದ ವಿಶಾಲ ಕೆರೆ ನೀರಹಾಸಿನ ಮಲಗಲು ಪ್ರಯತ್ನಿಸಿದರಂತೆ, ಈಸು ಕಲಿತಿರದ ಇವರು ಮರುಗಳಿಗೆ ನೀರಿನಲ್ಲಿ ಮುಳುಗಿ ನೀರ್ಗುಡಿದು ಕಂಗಾಲಾದರಂತೆ, ಇವರ ಬೊಬ್ಬೆ ಕೇಳಿದ ದೇವಾಲಯದ ಸಿಬ್ಬಂದಿ ಧಾವಿಸಿ ಬಂದು ಇವರನ್ನು ಎತ್ತಿ ಹಾಕಿ ಬೆನ್ನಿಗೆರಡು ಗುದ್ದಿ ಕುಡಿದಿದ್ದ ನೀರನ್ನು ಕಕ್ಕಿಸಿದರಂತೆ!

ಮುಂದೊಮ್ಮೆ ಈಸು ಕಲಿತ ನಾನು ಇದೇ ಪ್ರಯೋಗಮಾಡಿ ಕಾರಣ ಕಂಡುಕೊಂಡೆ: ಜೀವಂತ ವ್ಯಕ್ತಿ ನೀರಿನ ಮೇಲೆ ಮಲಗಿದಾಗ, ಅದೂ ಈಸು ಕಲಿತಿರದಾತ, ತುಸುವಾದರೂ ಕೆಳಮುಖ ಒತ್ತಡ ಬೀರುತ್ತಾನೆ, ಇದು ಆತನನ್ನು ಮುಳುಗಿಸಲು ಸಾಕು. ನಾನು ಮುಳುಗಲಿಲ್ಲವೆಂಬುದು ಕಂಡಂತೆಯೇ ಇದೆ.

"ಅವಿಭಾಜ್ಯ ಸಂಖ್ಯೆಗಳ (prime numbers) ವಿತರಣೆಯಲ್ಲಿ ಯಾವುದೇ ಕ್ರಮವನ್ನಾಗಲೀ ಅವನ್ನು ಕೊಡಬಲ್ಲ ಸೂತ್ರವನ್ನಾಗಲೀ ಇಲ್ಲಿಯ ತನಕ ಗುರುತಿಸಲಾಗಿಲ್ಲ" ಎಂದರು ಗಣಿತಗುರು ಆರ್‌ಎಚ್‌ಎಸ್. ಈ ವಿಷಯ ನಮ್ಮ ಪಠ್ಯಭಾಗವಾಗಿರಲಿಲ್ಲ. ನಾಗೇಶ ಎಂಬ ನಮ್ಮ ಸಹಪಾಠಿ ಯಾವುದೋ ಗಣಿತ ಚಮತ್ಕಾರದ ಪುಸ್ತಕ ಓದಿ ಹೇಗೆ ಮೊದಲ ಹಲವು ಅವಿಭಾಜ್ಯ ಸಂಖ್ಯೆಗಳಾದ ೨, ೩, ೫, ೭, ೧೧, ೧೩, ೧೭, ೧೯ ಮುಂತಾದವನ್ನು 'ಉದುರಿಸಬಲ್ಲ' ಸ್ಯಮಂತಕಮಣಿ *n*೨+*n*+೪೧ ಎಂಬ 'ಸಂಶೋಧನೆ'ಯನ್ನು ತರಗತಿಯಲ್ಲಿ ಪ್ರಕಟಿಸಿ ಬೀಗಿದ. *n*ಗೆ ೦, ೧, ೨, ೩ ಮುಂತಾಗಿ ಬೆಲೆಗಳನ್ನು ಆದೇಶಿಸಿದಾಗ ಈ ಫಲನ 'ಉದುರಿಸುವ' ಸಂಖ್ಯೆಗಳು ಅನುಕ್ರಮವಾಗಿ ೪೧, ೪೩, ೪೭, ೫೩ ಇತ್ಯಾದಿ. ಇವೆಲ್ಲವೂ ಅವಿಭಾಜ್ಯಗಳೇ. ನಾವೆಲ್ಲ ದಂಗಾಗಿ ಮಿಕಮಿಕ ಕಣ್ಣುಬಿಟ್ಟೆವು.

ಇತರರ ದೃಷ್ಟಿಯಲ್ಲಿ ಲೆಕ್ಕ ಕುರಿತಂತೆ ಗಟ್ಟಿಕುಳವೆಂದು ಪರಿಗಣಿತನಾಗಿದ್ದ ನಾನು ಕೂಡ ಮೂಕನಾಗಿದ್ದೆ. ಶೆಣೈಮಾಷ್ಟ್ರು ನಾಗೇಶನ ಮುಂದಾಳುತನವನ್ನು ಮೊದಲು ಹೊಗಳಿ ಬಳಿಕ *n*ಗೆ ೪೦ನ್ನು ಆದೇಶಿಸಿ ಸರಳೀಕರಿಸಲು ಆತನಿಗೇ ಹೇಳಿದರು. ಅವನಿಗೆ ದೊರೆತ ಬೆಲೆ ೧೬೮೧. "ಇದರ ವರ್ಗಮೂಲ ಪತ್ತೆ ಮಾಡು" ಎಂದರು. ಆಶ್ಚರ್ಯ, ಅದು ೪೧. "ಅಂದಮೇಲೆ ನೀನು ಪತ್ತೆ ಹಚ್ಚಿದ ಫಲನ ಸಾರ್ವತ್ರಿಕವಾದದ್ದಲ್ಲ, ಅಲ್ಲವೇ?" ಎಂದಾಗ ಇಡೀ ತರಗತಿ ಅವಾಕ್ಕಾಯಿತು, ಗುರುಗಳ ಜಾಣ್ಮೆಗೆ ಬೆರಗೂ ಆಯಿತು. ಈ ಘಟನೆ ನನ್ನ ಅಸ್ಮಿತೆಗೊಂದು ಸವಾಲಾಯಿತು: ಅಂಥ ಸಾರ್ವತ್ರಿಕ ಸೂತ್ರವನ್ನು ಎಂದಾದರೂ ನಾನು ಪತ್ತೆ ಮಾಡಲೇಬೇಕು.

ಪ್ರತಿಯೊಬ್ಬ ಗುರುವಿನ ಹಿರಿಮೆಯನ್ನೂ ಇಲ್ಲಿ ದಾಖಲಿಸುತ್ತ ಹೋಗದೇ ಒಂದು ಸಂಗತಿ ಮಾತ್ರ ನಿರೂಪಿಸಲು ಇಚ್ಛಿಸುತ್ತೇನೆ: ಆ ಮಹಾಶಯರ ಜ್ಞಾನನಿಷ್ಠೆ, ಬೋಧನೋತ್ಸಾಹ ಮತ್ತು ಶಿಷ್ಯವಾತ್ಸಲ್ಯ ಅಪಾರ. ಸಂಬಳ ತೀರ ಕಡಿಮೆ.

ಸಂಸಾರಸಮಸ್ಯೆ ಬಲು ಜಟಿಲ, ಸಾಮಾಜಿಕ ಮನ್ನಣೆ ಅಷ್ಟಕ್ಕಷ್ಟೆ (ಜನ ಇವರನ್ನು 'ಮಾಷ್ಟ್ರು' ಎಂದು ಏಕವಚನದಲ್ಲಿ ನಿಕೃಷ್ಟವಾಗಿ ಕರೆಯುತ್ತಿದ್ದುದೇ ವಾಡಿಕೆ, 'ಯಾವ ವೃತ್ತಿಗೂ ನಾಲಾಯಕ್ಕಾದವ ಮಾಷ್ಟನಾದ' ಎಂಬುದು ಸಾಮಾನ್ಯ ಜನ ಹೇಳಿಕೆ). ಇಂತಿದ್ದರೂ ನಮ್ಮ ಪ್ರೀತಿಯ ಗುರುಗಳಿತ್ತ ಜೀವನದರ್ಶನ ಮತ್ತು ಅವರು ಬಾಳಿಬೆಳಗಿದ ಜೀವನಶೈಲಿ ಅನುಪಮ. ಆ ಮಹನೀಯರುಗಳ ಅಕೃತ್ರಿಮ ನಿಷ್ಕಾಮ ಕರ್ಮವನ್ನು ಇಂದು ಸ್ಮರಿಸುವಾಗ ನನ್ನ ಮನದಲ್ಲಿ ಜಿಎಸ್‌ಎಸ್ 'ಶ್ರೀ ಕುವೆಂಪು ಅವರಿಗೆ --' ಸಲ್ಲಿಸಿರುವ ಕವನನಮನದ ಕೆಲವು ಪಙ್ತಿಗಳು ನೆನಪಿಗೆ ಬರುತ್ತವೆ:

ಎಷ್ಟೊಂದು ಕೀಲಿ ಕೈಗಳನು ದಾನ ಮಾಡಿದ್ದೀರಿ
ವಾತ್ಸಲ್ಯದಿಂದ; ನಾನರಿಯದನೇಕ
ಬಾಗಿಲುಗಳನು ತೆರೆದಿದ್ದೀರಿ ನನ್ನೊಳಗೆ;
ಕಟ್ಟಿ ಹರಸಿದ್ದೀರಿ ಕನ್ನಡದ ಕಂಕಣವನ್ನು ಕೈಗೆ.

ಬ್ರಾಹ್ಮಣರ ಓಣಿ ಅಂದು
ಅಧ್ಯಾಯ ಹತ್ತು

ಮಡಿಕೇರಿಯಲ್ಲಿ ನಾವಿದ್ದ ನೆಲೆಯ ಹೆಸರು ಬ್ರಾಹ್ಮಣರ ಓಣಿ ಅಥವಾ ಕೇರಿ, ರಾಜಭಾಷೆ ಇಂಗ್ಲಿಷಿನಲ್ಲಿ Brahmin Valley. ಇಲ್ಲಿಯ ಹೆಚ್ಚಿನ ಮನೆಗಳು ಬ್ರಾಹ್ಮಣರವು ನಿಜ, ಆದರೆ ಕೊಡವರ ಬಂಗ್ಲೆಗಳು (bungalows), ಇತರ ಕೋಮುಗಳವರ ಬಿಡಾರಗಳು, ತೀರ ಬಡವರ ಕುಟೀರಗಳೆಲ್ಲವೂ ಈ ವರ್ಣಮಯ ನೇಯ್ಗೆಯ ಅವಿಭಾಜ್ಯ ಅಂಗಗಳಾಗಿದ್ದುವು. ಮನೆಯೊಳಗಿನ ಜಾತಿ, ಆಚಾರ, ಕ್ರಮ ಮುಂತಾದವು ಸಾರ್ವಜನಿಕ ಜೀವನದಲ್ಲಿ ಎಂದೂ ಯಾರ ತಲೆಯನ್ನೂ ಕೊರೆಯಲಿಲ್ಲ. ಕಾರಣ, ಅಂದು ಎಲ್ಲರಿಗೂ ಸಾಮಾನ್ಯವಾಗಿದ್ದುದು ಉದರಂಭರಣೆ, ಸ್ವಾಭಿಮಾನ, ಸಂಸ್ಕೃತಿಪ್ರೇಮ ಮತ್ತು ಪರಿಸರ ಪ್ರಜ್ಞೆ, ವಾಸ್ತವವಾಗಿ ಇವು ಉಸಿರಾಟದಂತೆ ಬದುಕಿನ ಅಂಗಗಳೇ ಆಗಿದ್ದುವು.

ನಮ್ಮ ಮನೆ ಮುಂದಿನ ಹಾದಿಯ ಒಂದು ಕೊನೆಯಲ್ಲಿ ಅಶ್ವತ್ಥಕಟ್ಟೆ ರಾರಾಜಿಸುತ್ತಿತ್ತು. ಅಲ್ಲಿಂದ ಮುಂದಕ್ಕೆ ಮೊಟ್ಟೆ ಏರಿದರೆ ಬಾಣೆಮೊಟ್ಟೆ (ದೇಚೂರು). ಎದುರು ದಿಶೆಗೆ ಸಾಗಿದರೆ ಗಾರೇತೋಟ. ಇದೊಂದು ವಿಶಾಲ ಕ್ರೀಡಾಂಗಣ. ಇದರ ಸುತ್ತ ಕಲ್ಲು, ಇಟ್ಟಿಗೆ, ಗಾರೆಯಿಂದ ಕಟ್ಟಿದ್ದ ಭದ್ರ ಕಕ್ಕಟ್ಟು (compound wall) ಇದನ್ನೊಂದು ದ್ವೀಪವನ್ನಾಗಿಸಿತ್ತು. ಇದರೊಳಗೆ ಒಂದು ಬದಿಯಲ್ಲಿ ಆಂಜನೇಯನ ಗುಡಿ. ರಾಜರಕಾಲದ ಈ ಪುಟ್ಟ ಆದರೆ ಗಟ್ಟಿ ಗುಡಿಗೊಂದು ಭವ್ಯ ಗೋಪುರವಿತ್ತು. ಇದು ಆ ಇಡೀ ಆವರಣಕ್ಕೆ ವಿಶಿಷ್ಟ ಪಾವಿತ್ರ್ಯವನ್ನೂ ಗಾಂಭೀರ್ಯವನ್ನೂ ಆವಾಹಿಸಿತ್ತು. ಗುಡಿಯ ಒತ್ತಿಗೆ ಸುವ್ಯವಸ್ಥಿತ ಸ್ಥಿತಿಯಲ್ಲಿದ್ದ ಟೆನ್ನಿಸ್ ಕೋರ್ಟ್ ಗಾರೇತೋಟದ ಪೌರಸ್ತ್ಯ ಧಾರ್ಮಿಕತೆಗೆ ಪಾಶ್ಚಾತ್ಯ ಆಧುನಿಕತೆಯ ಸೊಗಡಿನ ಮಧುರ ಲೇಪವನ್ನು ಪೂಸಿತ್ತು. ಕಕ್ಕಟ್ಟಿನೊಳಗೆ ಅಂಚಿನ ನೇರ ಪೂರ್ತಿ ದಾಸವಾಳ, ಸೀಬೆ ಮತ್ತು ಕಾಡುಮರಗಳ ಸಾಲೇ ಸಾಲು. ಅದನ್ನೊಂದು ಋಷ್ಯಾಶ್ರಮವೆನ್ನೋಣವೇ?

ಗಾರೇತೋಟದ ಹೊರಕ್ಕೆ ಸಾತ್‌ಕಮಾನ್ ಕಟ್ಟಡ, ಇದರ ಎದುರು ವಿಶಾಲ ಸರೋವರ, ಇದರಲ್ಲಿ ತೇಲುತ್ತಿದ್ದ ಜೋಡಿದೋಣಿ, ನಡುವಿನ ಮಂಟಪ, ಇಲ್ಲಿಂದ ಮುಂದಕ್ಕೆ ಮೆಟ್ಟಲುಗಳನ್ನೇರಿದರೆ ಓಂಕಾರೇಶ್ವರ ದೇವಾಲಯ, ಇದರ ಹಿನ್ನೆಲೆಯಲ್ಲಿ ಅರಮನೆ ಬೆಟ್ಟ -- ಇಲ್ಲೆಲ್ಲ ವಿಹಾರ ರಾಘವಾಂಕನ ಅಮರಾವತಿವರ್ಣನೆಗೆ ಬರೆದ ಭೌತಭಾಷ್ಯವೆಂದು ನನಗನ್ನಿಸುತ್ತಿತ್ತು:

ಪರುಷವಂಗಣದ ಕಲು ಸುರಭಿ ಕರೆಹಂ ಕಲ್ಪ
ತರು ಬನಂ ಸ್ವರ್ಗ ನಿಜ ದೇಶಮಮರಾವತಿಯೆ
ಪುರದುರ್ಗವಮರರಾಳ್ ಮೇರು ಕೇಳೀ ಶೈಲ....

ಈ ದೇವಸ್ಥಾನದ ಸುತ್ತ ಹಲವಾರು ಜಾನಪದ-ಪೌರಾಣಿಕ-ಚಾರಿತ್ರಿಕ ಘಟನೆಗಳ ಜಾಲ ನೇಯ್ದುಕೊಂಡಿತ್ತು. ಇಂಥ ಒಂದು ಎಳೆಯನ್ನು ಆಧರಿಸಿ ಅದಕ್ಕೆ ಕಲ್ಪನೆಯ ಮೆರುಗನ್ನು ಕೊಟ್ಟು ನಾನೊಂದು ಕಥೆ ಬರೆದಿದ್ದೆ 'ಪಂಜರದ ಅರಗಿಳಿ.' (ನೋಡಿ 'ಕೊಡಗಿನ ಸುಮಗಳು') ಈ ಜನಜನಿತ ನಂಬಿಕೆಯ ಪ್ರಕಾರ ದೇವಸ್ಥಾನದ ಹೊರಪೌಳಿಯಲ್ಲಿಯ ತೋಟದಲ್ಲಿರುವ ಸಂಪಿಗೆ ಮರಗಳು ಬ್ರಹ್ಮರಾಕ್ಷಸನ ಆವಾಸ. ನಟ್ಟಿರುಳಿನಲ್ಲಿ ಆತ ಅಲ್ಲಿಂದ ಹೊರಟು, ಓಂಕಾರೇಶ್ವರನಿಗೆ ಪ್ರದಕ್ಷಿಣೆಹಾಕಿ ಮುಂದೆ ಅಶ್ವತ್ಥಕಟ್ಟೆಗೆ ನಡೆದು ಅಲ್ಲಿಯೂ ಪ್ರದಕ್ಷಿಣೆ ಮಾಡಿ ಮುಂದೆ ಗುಡ್ಡೆ ಏರಿ ದೂರ ಸಾಗಿ ಇನ್ನೊಂದು ಓಣಿಯಲ್ಲಿಯ ಬ್ರಾಹ್ಮಣರ ಶ್ಮಶಾನದಲ್ಲಿ ವಿರಮಿಸುತ್ತಾನೆ, ನಸುಕು ಹರಿಯುವಾಗ ಅಲ್ಲಿಂದ ಛಂಗನೆ ನೆಗೆದು ಸಂಪಿಗೆ ಬನದಲ್ಲಿ ಲೀನನಾಗುತ್ತಾನೆ. ಅಶ್ವತ್ಥವೃಕ್ಷದ ಮಹಿಮೆಯನ್ನು ಬಣ್ಣಿಸುವ ಶ್ಲೋಕವನ್ನು

ನಮಗೆಲ್ಲ ಬಾಯಿಪಾಠ ಮಾಡಿಸುತ್ತಿದ್ದರು: "ಮೂಲತೋ ಬ್ರಹ್ಮರೂಪಾಯಾ ಮಧ್ಯತೋ ವಿಷ್ಣು ರೂಪಿಣೇ ಅಗ್ರತಃ ಶಿವರೂಪಾಯಾ ವೃಕ್ಷರಾಜಾಯತೇ ನಮಃ."

ಈ ಕಲ್ಪನೆಯಲ್ಲಿ ನಿಹಿತವಾಗಿರುವ ವೈಜ್ಞಾನಿಕದೃಷ್ಟಿ ಕೂಡ ನನ್ನರಿವಿಗೆ ಮುಂದೊಂದು ದಿನ ಬಂದಾಗ ನಮ್ಮ ಹಿರಿಯರ ವೈಚಾರಿಕತೆಗೆ ನಮೋ ಎಂದದ್ದುಂಟು: ಜ್ಞಾನಂ ವಿಜ್ಞಾನಸಹಿತಂ! ಸೃಷ್ಟಿ, ಸ್ಥಿತಿ, ಲಯಗಳನ್ನು ಧಾರ್ಮಿಕ–ವೈಜ್ಞಾನಿಕ ಧಾರೆಯಿಂದ ಕೋದಿರುವ ಈ ಚಿಂತನೆ ಅತ್ಯಂತ ಸರಳ ಮತ್ತು ಸುಂದರ. ಇದು ಹಾಗಿರಲಿ. ಎಳೆಯ ಹುಡುಗನಾಗಿ ನಾನಂತೂ ಅಶ್ವತ್ಥವೃಕ್ಷಕ್ಕೆ ಪ್ರತಿ ಮುಂಜಾನೆ ಮಂತ್ರಸಹಿತ ಪ್ರದಕ್ಷಿಣೆಹಾಕುತ್ತಿದ್ದೆ, ಬಳಿಕ ಓದಲು ಕೂರುತ್ತಿದ್ದೆ. ಇಲ್ಲೊಂದು ಘಟನೆ ನಿರೂಪಿಸಬೇಕು. ಕೊಡವರ ಹುಡುಗ ಮಾದಪ್ಪ ನನ್ನ ಸಹಪಾಠಿ, ಪರಮ ಮಿತ್ರ, ನಮ್ಮ ಕೇರಿಯ ಅಂಚಿನಲ್ಲೇ ಅವನ ಮನೆ. ಪಾಠಪ್ರವಚನಗಳಲ್ಲಿ, ಅಲ್ಲಿಯೂ ಗಣಿತದಲ್ಲಿ ವಿಶೇಷವಾಗಿ, ಮುಂದಿದ್ದ ನನ್ನ ಬಳಿ ಅವನು ಆಗಾಗ ಲೆಕ್ಕ ಮತ್ತು ಕನ್ನಡ ಹೇಳಿಸಿಕೊಳ್ಳಲು ಬರುತ್ತಿದ್ದ. ನಾನೂ ಅವನಲ್ಲಿಗೆ ಹೋಗುತ್ತಿದ್ದೆ.

ಮಾದಪ್ಪನ ಮುಗ್ಧ ಪ್ರಶ್ನೆ, "ಜೀಟಿ! ನಿನಗೆ ಓದದೆಯೆ ಬರುವ ಈ ಕಬ್ಬಿಣದ ಕಡಲೆಗಳು ನಾನೆಷ್ಟು ಕಷ್ಟಪಟ್ಟರೂ ನೀನೆಷ್ಟು ಚೆನ್ನಾಗಿ ಹೇಳಿಕೊಟ್ಟರೂ ಅರ್ಥವಾಗುತ್ತಿಲ್ಲವೇಕೆ?"
ನನ್ನದೂ ಅಷ್ಟೇ ಮುಗ್ಧ ತರ್ಕ, "ನೋಡು ಮಾದಪ್ಪ! ನಾನು ಪ್ರತಿ ಮುಂಜಾನೆ ಅಶ್ವತ್ಥವೃಕ್ಷಕ್ಕೆ ಪ್ರದಕ್ಷಿಣೆ ಹಾಕುತ್ತೇನೆ. ಅದು ಕಾರಣವಾಗಿರಬಹುದು."

ಮುಂದಿನ ಎರಡು ವಾರ ಮಾದಪ್ಪ ನನ್ನ ದುಪ್ಪಟ್ಟು ಸುತ್ತುಗಳನ್ನು ಹಾಕಿದ. ಆದರೆ ಕ್ಲಾಸ್ ಪರೀಕ್ಷೆಯಲ್ಲಿ ದೊರೆತ ಅಂಕ ಪಾತಾಳಕ್ಕೆ ಕುಸಿದಿತ್ತು. ಅಶ್ವತ್ಥನಾರಾಯಣನ ಈ ಅವಕೃಪೆಗೆ ಕಾರಣವೇನೆಂಬುದು ನಮಗೆ ಹೊಳೆಯಲಿಲ್ಲ. ಮುತ್ತಜ್ಜನ ಮುಂದೆ ನಾವಿಬ್ಬರೂ ನಮ್ಮ ಸಮಸ್ಯೆಯನ್ನು ನಿವೇದಿಸಿದೆವು. ಕೂಲಂಕಷವಾಗಿ ವಿವರಗಳನ್ನು ಆಲಿಸಿದ ಅವರು ನೀಡಿದ ತೀರ್ಪು ನಮ್ಮಿಬ್ಬರ ಎದುರು ಹೊಸ ನೋಟ ಮತ್ತು ಹೊಸ ಹುರುಪು ಬಿತ್ತರಿಸಿದುವು, "ಮಾದಪ್ಪ! ನೀನು ಕೇವಲ ಪ್ರದಕ್ಷಿಣೆಗಳಲ್ಲೇ ಕಾಲಹರಣಮಾಡಿದೆ, ನಾರಾಯಣ ಅದರ ಜೊತೆಗೆ ಅಧ್ಯನವನ್ನೂ ಅಷ್ಟೇ ನಿಷ್ಠೆಯಿಂದ ಮಾಡಿದ. ಆದ್ದರಿಂದ ನೀವಿಬ್ಬರೂ ಅರಿತು ಸದಾ ಅನುಷ್ಠಾನಿಸಬೇಕಾದ ಜೀವನ ಸೂತ್ರವಿದು: ಭಗವಂತನಿಷ್ಠೆ ಮತ್ತು ಕರ್ತವ್ಯತತ್ಪರತೆ ಸಮವಾಗಿ ಎರಕಗೊಂಡಾಗ ಮಾತ್ರ ವ್ಯಕ್ತಿಗೆ ಯಶಸ್ಸು ಸಿದ್ಧಿಸುತ್ತದೆ."

ಇಂದು ತಿಳಿದಿದೆ: ಆಧ್ಯಾತ್ಮಿಕನಿಷ್ಠೆ ಗುರಿ ತೋರಿಸುತ್ತದೆ, ಕಾರ್ಯಶ್ರದ್ಧೆ ಹಾದಿ ರೂಪಿಸುತ್ತದೆ. ನಿಷ್ಠೆಯಿರದ ಶ್ರದ್ಧೆ ಜೀವನನೌಕೆಯ ವೃಥಾ ಅಂಡಲೆತ, ಶ್ರದ್ಧೆಯಿರದ ನಿಷ್ಠೆ ಕೇವಲ ಬೂಟಾಟಿಕೆ.

ಕಡಲಿಗೆ ಬಿದ್ದ ತೆಪ್ಪ
ಅಧ್ಯಾಯ ಹನ್ನೊಂದು

ಅಂದು ಕೊಡಗು ಚೀಫ್ ಕಮಿಶನರ್ ಆಡಳಿತೆಯಲ್ಲಿದ್ದ ಪ್ರತ್ಯೇಕ ರಾಜ್ಯ. ಇಲ್ಲಿಯ ಎಲ್ಲ ಶಾಲೆಗಳೂ ಮದ್ರಾಸು ಸರ್ಕಾರದ ಎಸ್‌ಎಸ್‌ಎಲ್‌ಸಿ ಬೋರ್ಡಿನ ಸುಪರ್ದಿಗೆ ಒಳಪಟ್ಟಿದ್ದುವು. ಇಡೀ ಕೊಡಗಿನಲ್ಲಿದ್ದುದು ಕೇವಲ ಮೂರು ಪ್ರೌಢ ಶಾಲೆಗಳು: ಮಡಿಕೇರಿಯಲ್ಲಿ ನಮ್ಮ ಶಾಲೆ ಮತ್ತು ಹುಡುಗಿಯರ ಕಾನ್ವೆಂಟ್, ವಿರಾಜಪೇಟೆಯಲ್ಲಿಯ ಸರ್ಕಾರಿ ಶಾಲೆ.

೧೯೪೨ರ ಎಸ್‌ಎಸ್‌ಎಲ್‌ಸಿ ಪಬ್ಲಿಕ್ ಪರೀಕ್ಷೆ ಬರೆದೆ. ಅಲ್ಲಿಯ ತನಕ ಪ್ರತಿ ತರಗತಿಯಲ್ಲಿಯೂ ನನ್ನ ಸ್ಥಾನ ಸದಾ ಒಂದನೆಯದು. ಕನ್ನಡದಲ್ಲಿ ಕಥೆ ಮತ್ತು ಪದ್ಯಗಳನ್ನು 'ಕನ್ನಡಕುವರ'ನೆಂಬ ಗುಪ್ತನಾಮದಲ್ಲಿ ಬರೆದು 'ಪ್ರಸಿದ್ಧ'ನಾಗಿದ್ದೆ. ಹದಿನಾರರ ಏರುಜವ್ವನ. ಸಹಜವಾಗಿ ಭವಿಷ್ಯ ಕುರಿತಂತೆ ಹೊಂಗನಸುಗಳನ್ನು ಕಾಣುತ್ತಿದ್ದೆ. ನಿರೀಕ್ಷೆಯಂತೆ ಅಂತಿಮ ಪರೀಕ್ಷೆಯಲ್ಲಿ ನಾನು ಇಡೀ ಜಿಲ್ಲೆಗೆ ಒಂದನೆಯ ಸ್ಥಾನ ಪಡೆದು ಉತ್ತೀರ್ಣನಾದೆ.

ಕಾಲೇಜ್ ವಿದ್ಯಾಭ್ಯಾಸವೆಲ್ಲಿ? ಮಂಗಳೂರಿಗೆ ಹೋಗೋಣವೇ? ಅದು ಮದ್ರಾಸಿನ ಶಿಕ್ಷಣ ವ್ಯವಸ್ಥೆಗೆ ಸಂಯೋಜಿತವಾಗಿದ್ದ ವಲಯ. ಅಲ್ಲಿ ನನಗೆ ಸುಲಭವಾಗಿ ಪ್ರವೇಶ ದೊರೆಯುತ್ತಿತ್ತು. ಆದರೆ ನನ್ನ ಆಕರ್ಷಣೆ ಕೈಯಲ್ಲಿದ್ದ ಆ ಹಕ್ಕಿಯಲ್ಲ, ಬದಲು, ಪೊದೆಯೊಳಗಿರಬಹುದಾಗಿದ್ದ ಕಾಲ್ಪನಿಕ ಪಕ್ಷಿ! ಅದು ನೆರೆರಾಜ್ಯ ಮೈಸೂರು, ಗಂಧ ಸುಗಂಧದ ಕುವೆಂಪು ಮೆರೆಯುವ, ಬಣ್ಣದ ಬೆಡಗಿನ ನಾಲ್ಮಡಿ ಕೃಷ್ಣನ ಮೈಸೂರು! ಅಪ್ಪ ನನ್ನನ್ನು ಮೈಸೂರಿಗೆ ಕರೆದೊಯ್ದರು. ಧರೆಗಿಳಿದ ಆ ಅಮರಾವತಿಗೆ ಅದು ನನ್ನ ಮೊದಲ ಭೇಟಿ:

ಅಲ್ಲಿನಾ ಜನರನಿಮಿಷರು ಮೇ–
ಣಲ್ಲಿನಾ ಗಿರಿಬನಗಳೆಲ್ಲವು
ಮಲ್ಲಿಗೆಯ ಪರಿಮಳವ ಸೂಸುವ ಕಲ್ಪವೃಕ್ಷಗಳೇ!
ಅಲ್ಲಿರದ ವೈಭವವ ನೀ ಬೇ–
ರೆಲ್ಲಿ ಕಾಣುವೆ! ಜ್ಞಾನಶಿಖರ–
ಕ್ಕಲ್ಲಿಹುದು ಸೋಪಾನ ಪಙ್ತಿಯು ನಿನ್ನ ನೆಲೆಯಲ್ಲಿ!

ಹೀಗೆ ಅಂದು ನನ್ನೊಳಗೆ ಲಾಸ್ಯವಾಡುತ್ತ 'ಭೃಂಗದ ಬೆನ್ನೇರಿ ಬಂತು ಕಲ್ಪನಾ ವಿಲಾಸ!' ಆದರೆ ಎದುರಾದ ವಾಸ್ತವತೆ ಕಠೋರವಾಗಿತ್ತು. ಯುವರಾಜ ಕಾಲೇಜಿನ ಪ್ರಾಂಶುಪಾಲರ ದೃಷ್ಟಿಯಲ್ಲಿ I was a foreigner and my marks were just ordinary. "ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಎಂಬ ಜನಪ್ರಿಯ ಗೀತೆ ಇನ್ನೂ ವಾಸ್ತವವಾಗಿರದ ಸನ್ನಿವೇಶ, ಭಾರತದೊಳಗೇ ನನಗೆ ವಿದೇಶೀ ಪಟ್ಟ, ಎಲ್ಲಕ್ಕೂ ಮಿಗಿಲಾಗಿ ನನ್ನ ಅಂಕಗಳು ಕೇವಲ ಸಾಮಾನ್ಯ! ಕೊಳವಲ್ಲವೀ ಕಡಲು, ದಾಟಲು ಸಾಲದಿಲ್ಲಿ ಕೇವಲ ತೆಪ್ಪ, ಹಡಗೇ ಬೇಕೆಂಬ ಜ್ಞಾನೋದಯವಾಯಿತು ನನಗಾಗ.

ನಮಗಿದ್ದ ಆಯ್ಕೆ ಒಲ್ಲದ ಮಂಗಳೂರೊಂದೇ. ಆ ಮೊದಲು ಅಪ್ಪ ಕಾಲೇಜ್ ಮೆಟ್ಟಲೇರಿದ್ದ ನಗರವದು, ಅವರ ಗುರುಗಳಾಗಿದ್ದ ಮುಳಿಯ ತಿಮ್ಮಪ್ಪಯ್ಯನವರ ನೆಲೆಯದು, ಮರಿಕೆ–ಪುತ್ತೂರುಗಳ ವಿಸ್ತರಣೆಯದು ಮತ್ತು ನಮ್ಮ ಅಸಂಖ್ಯ ನೆಂಟರಿಷ್ಟರ ಜೇನುಗೂಡದು. ಹೋದೆವು, ಸಂತ ಅಲೋಶಿಯಸ್ ಕಾಲೇಜಿನಲ್ಲಿ ಜೂನಿಯರ್ ಇಂಟರ್ಮೀಡಿಯೆಟ್ ತರಗತಿಗೆ ದಾಖಲಾದೆ. ವಾಸ ಮತ್ತು ಊಟ? ಯಾವುದೇ ಕೋಮಿನ (ವಿಶಿಷ್ಟವಾಗಿ ಹೇಳುವುದಾದರೆ ಬ್ರಾಹ್ಮಣರ) ವಿದ್ಯಾರ್ಥಿನಿಲಯಕ್ಕೆ ತಮ್ಮ ಮಗನನ್ನು ಸೇರಿಸತಕ್ಕದ್ದಲ್ಲ ಎಂಬುದು ನನ್ನ ತಂದೆಯವರ ಸ್ಪಷ್ಟ ನಿರ್ಧಾರ. ಅವರು ತಮ್ಮ ಕಾಲೇಜ್ ದಿನಗಳಂದು ಇಂಥ ಒಂದು ನಿಲಯದಲ್ಲಿದ್ದು ಕೋಮುಸಂಬಂಧವಾಗಿ ಸಾಕಷ್ಟು ಬವಣೆ ಅನುಭವಿಸಿ ಅದನ್ನು ತೊರೆದು ಪ್ರತ್ಯೇಕ ಬಿಡಾರವನ್ನೇ ಹೂಡಿದ್ದರಂತೆ. "ಸಾರ್ವಜನಿಕ ರಂಗ ಕುರಿತಂತೆ ನೀನು ಮುಕ್ತ ಹವೆಯಲ್ಲಿ ವೈಯಕ್ತಿಕ ಇಷ್ಟಾನಿಷ್ಟಗಳೆಂಬ ರಾಗವಶನಾಗದೇ ಪರಿಶುದ್ಧ ಜ್ಞಾನಾನ್ವೇಷಕನಾಗಿಯೇ ಮುಂದುವರಿಯಬೇಕು," ಇದು ಅವರು ನುಡಿದ ಮಾತು ಮತ್ತು ನಡೆದ ಹಾದಿ. ತತ್ಪೂರ್ವ ನಮ್ಮ ಮನೆಯ ವಾತಾವರಣವೂ ಈ ಸೆಕ್ಯುಲರ್ ದೃಷ್ಟಿಗೆ ಅನುಗುಣವಾಗಿಯೇ ಇದ್ದುದರಿಂದ ನನ್ನ ಅಪೇಕ್ಷೆಯೂ ಇದಕ್ಕೆ ಅನುಗುಣವಾಗಿಯೇ ಇತ್ತು. ನನ್ನನ್ನು ಅವರು ಕಾಲೇಜಿನ ಸಾರ್ವಜನಿಕ ಹಾಸ್ಟೆಲಿಗೆ ಸೇರಿಸಿದರು.

ನಾನು ಆಯ್ದದ್ದು ಅಂದು royal combination ಎಂದೇ ಪ್ರಸಿದ್ಧವಾಗಿದ್ದ physics-chemistry-mathematics (PCM) ಸಂಯೋಜನೆ. ಇಂದಿನ ಪರಿಸ್ಥಿತಿಯಾದರೂ ತೀರ ವಿಭಿನ್ನವಲ್ಲ. ಜ್ಞಾನತೃಷೆ ಇದರ ಕಾರಣವಲ್ಲ, ಬುದ್ಧಿಶ್ರೀಮಂತರ ಸಹಜ ನೆಲೆ PCM, ಭವ್ಯವೃತ್ತಿಗೆ ಆದ್ದರಿಂದ ಸಂಪತ್ತಿಗೆ ಕೀಲಿಕೈ ಅದೊಂದೇ ಸಂಯೋಜನೆ ಎಂದು ಮಕ್ಕಳಿಗಿಂತ ಹೆಚ್ಚಾಗಿ ತಂದೆತಾಯಿಯರನ್ನು ವಶೀಕರಿಸಿಕೊಂಡಿರುವ ಪಿಡುಗು.

ಹಾಸ್ಟೆಲಿನಲ್ಲಿ ವಾಸಕ್ಕೆ ಒಂಟಿ ಕೊಠಡಿ ಮಾತ್ರ. ಊಟಕ್ಕೆ ಪಕ್ಕದಲ್ಲೇ ಇದ್ದ ಆನಂದ ಭವನ ಹೋಟೇಲೊಂದೇ ಗತಿ. ಯಾವುದೂ ರುಚಿಯಿಲ್ಲ, ಆಕರ್ಷಣೀಯವಾಗಿಯೂ ಇಲ್ಲ. ಕುಸಲಕ್ಕಿ ಊಟ ಸೇರದು. ತಿಂಡಿಗಳೆಲ್ಲ ಬಲು ದುಬಾರಿ. ಮಡಿಕೇರಿಯ ತಣ್ಪು ಪ್ರಶಾಂತತೆ ಇಲ್ಲಿಲ್ಲ. ಸೊಳ್ಳೆಗಳ ಸಾಮ್ರಾಜ್ಯ. ಸೆಖೆಯೋ ಸೆಖೆ. ಯಾರೂ ಗುರುತಿಲ್ಲ, ನೆಂಟರಿಷ್ಟರ ಮನೆಗೆ ಹೋಗತಕ್ಕದ್ದಲ್ಲವೆಂದು ಅಪ್ಪನ ಆದೇಶ. ಈ ಗೊಂದಲದ ನಡುವೆ ಬೆಳಗಾಯಿತು. ಬೆಳ್ಳನೆ ಬೆಳಗಾಗಲಿಲ್ಲ, ಕಾರ್ಗಾಲದ ಬಿರುಮಳೆ ಜಡಿಯುತ್ತ ಅದು ಬಂತು – 'ತೆಂಕಣ ಗಾಳಿಯು ಕೊಂಕಣ ಸೀಮೆಗೆ ಬಂತೈ' ಎಂಬಂತೆ.

ಹಾಸ್ಟೆಲ್ ಬೆನ್ನಿಗಿದ್ದ ಗುಡ್ಡವೇರಿ ಕಾಲೇಜ್ ಸಂಕೀರ್ಣ ತಲಪಿದೆ. ಇಂಗ್ಲಿಷ್ ತರಗತಿ ವೇಳೆ ವಿವಿಧ ಸಂಯೋಜನೆಗಳವರು ಒಂದೇ ಕೊಠಡಿಯಲ್ಲಿ ಸೇರುತ್ತಿದ್ದೆವು. ಸುಮಾರು ೩೦೦ ಮಂದಿ. ಧ್ವನಿವರ್ಧಕದ ನೆರವಿಲ್ಲದೇ ನಮ್ಮ ಉಪನ್ಯಾಸಕರು ಪಾಠಮಾಡುತ್ತಿದ್ದ ಪರಿ ಅನನ್ಯವಾಗಿತ್ತು. ವಿದ್ಯಾರ್ಥಿಗಳಲ್ಲಿಯ ಶಿಸ್ತು ಉನ್ನತ ಮಟ್ಟದಲ್ಲಿದ್ದ ದಿನಗಳವು. ಮೊದಲ ವಾರದಲ್ಲಿಯೇ ನನಗೆ ಒಂದು ಅಂಶ ಮನದಟ್ಟಾಯಿತು: ಆ ಮುನ್ನೂರರಲ್ಲಿ ಎಸ್‌ಎಸ್‌ಎಲ್‌ಸಿ ಅಂಕಗಳ ಪ್ರಕಾರ ನನ್ನ ನೆಲೆ ನೂರಕ್ಕಿಂತ ಎಷ್ಟೋ ಆಚೆಗೆ! ``Coorg first! You are Mangalore last!'' ಎಂಬಂಥ ಪರಿಸ್ಥಿತಿ.

ಕನ್ನಡ ತರಗತಿಯಲ್ಲಿ ನಾನು ನೀರಿಗಿಳಿದ ಮೀನು. ಕನ್ನಡದ ಉದ್ದಾಮ ಪಂಡಿತ ಮುಳಿಯ ತಿಮ್ಮಪ್ಪಯ್ಯನವರು ಪ್ರಾಚೀನ ಕಾವ್ಯಗಳನ್ನು – ಪಂಪ, ರನ್ನ, ಬಾಣಭಟ್ಟ, ಲಕ್ಷ್ಮೀಶ ಮೊದಲಾದವರ ಕೃತಿಗಳಿಂದ ಆಯ್ದ ಭಾಗಗಳು – ರಾಗವಾಗಿ ಓದುತ್ತಿದ್ದಾಗಲೇ ಅರ್ಥ ಸ್ಫುಟವಾಗುತ್ತಿತ್ತು. ಅವರು ನೀಡುತ್ತಿದ್ದ ವಿವರಣೆಗಳು ನನ್ನಲ್ಲಿ ಸಂಶೋಧನೆಯ ಬೀಜಗಳನ್ನು ಬಿತ್ತುತ್ತಿದ್ದುವು. ಆದರೆ ಹೆಚ್ಚಿನ ವಿದ್ಯಾರ್ಥಿಗಳ ದೃಷ್ಟಿಯಲ್ಲಿ ಅವರು popular teacher ಅಲ್ಲ! ಏಕೆಂದರೆ ಪರೀಕ್ಷೆಯಲ್ಲಿ ಸುಲಭವಾಗಿ ಅಂಕ ಗಿಟ್ಟಿಸುವ ತಂತ್ರವನ್ನವರು ಹೇಳಿಕೊಡುತ್ತಿರಲಿಲ್ಲ. ಭೌತ ಮತ್ತು ಗಣಿತವಿಜ್ಞಾನಗಳಿಗೆ ಬರುತ್ತಿದ್ದ ಉಪನ್ಯಾಸಕರು ಸರ್ವಶ್ರೇಷ್ಠರಾಗಿದ್ದರು: ಎಸ್.ನಾರಾಯಣಹೊಳ್ಳ (ಭೌತವಿಜ್ಞಾನ), ಕೆ.ಎ.ಕೃಷ್ಣಮೂರ್ತಿ ಮತ್ತು ಬಿ.ಭುಜಂಗರಾವ್ (ಗಣಿತ). ತಿಮ್ಮಪ್ಪಯ್ಯನವರಂತೆ ಇವರು ಕೂಡ ಶ್ರೇಷ್ಠ ವಿದ್ವಾಂಸರು, ಜೊತೆಗೆ ಉತ್ಕೃಷ್ಟ ಬೋಧಕರು ಕೂಡ. ಹೀಗೆ ನನಗಿಲ್ಲಿ ಕೇಶವಾಚಾರ್ಯ ಮತ್ತು ಶ್ರೀನಿವಾಸರಾವ್ ಎಂಬ ಮಡಿಕೇರಿ–ಗುರುದ್ವಯ ಪರಂಪರೆಯ ವಿಸ್ತರಣೆ ದೊರೆಯಿತು.

ರಸಾಯನವಿಜ್ಞಾನದ ತರಗತಿಗಳು ಮಾತ್ರ ಭಯಂಕರ. ಅವರೊಬ್ಬ ಪಾದ್ರಿ, ಆದ್ದರಿಂದ ಆಡಳಿತ ವ್ಯವಸ್ಥಾಪನೆಯ ದೃಷ್ಟಿಯಲ್ಲಿ ಯಾವುದೇ ವಿಷಯದ ಬಗ್ಗೆ ಪಾಠಮಾಡಬಲ್ಲ ಪರವಾನಿಗೆ ಪಡೆದಿದ್ದ ಆಚಾರ್ಯ! Mithra's *Chemistry* ಎಂಬ ತೂಕದ ಹೆಬ್ಬೊತ್ತಿಗೆ ಅವರ ಬೈಬಲ್. ಬಂದರು ತರಗತಿಗೆ, ಮೊದಲ ಸುಮಾರು ೨೦ ಪುಟಗಳನ್ನು ಓದಿ ಹೇಳಿದರು: ಒಂದು ಗೆರೆಯೂ ಅರ್ಥವಾಗಲಿಲ್ಲ. ರಾಸಾಯನಿಕ ಧಾತುಗಳ ಮತ್ತು ಸಂಯುಕ್ತಗಳ ಪ್ರತೀಕಗಳನ್ನೂ ವೇಲೆನ್ಸಿಗಳನ್ನೂ ಮುದ್ರಿಸಿದ್ದ ಕೋಷ್ಟಕವನ್ನು ನಮಗಿತ್ತರು, ಮುಂದಿನ ತರಗತಿಗೆ ಬರುವ ವೇಳೆಗೆ ಅಷ್ಟನ್ನೂ ಉರುಹೊಡೆದು ಬರಬೇಕೆಂದು ಅಪ್ಪಣೆಮಾಡಿದರು.

ಮುಂದಿನ ಪಾಠ. ಇಪ್ಪತ್ತು ರಾಸಾಯನಿಕ ಸಂಯುಕ್ತಗಳನ್ನು ಯಾಂತ್ರಿಕವಾಗಿ ಉಸುರಿದರು, ನಾವು ಅವುಗಳ ಸೂತ್ರಗಳನ್ನು ಒಡನೆ ನೆನಪಿನಿಂದ ಬರೆದು ಆಗಲೇ ನಮ್ಮ ಉತ್ತರಪತ್ರಗಳನ್ನು ಅವರಿಗೆ ಒಪ್ಪಿಸಬೇಕಾಗಿತ್ತು. ಒಂದು ಉದಾಹರಣೆ: Hydrochloric acid ಪದದ ಎದುರು ಊಅಟ ಎಂದು ಬರೆಯಬೇಕಾಗಿತ್ತು. ಈ ಹಿಕಮತ್ತಿನ ತಲೆಬುಡ ತಿಳಿದಿರದಿದ್ದ ನಾನು ಅದೇ ಪದವನ್ನು ಇಂಗ್ಲಿಷಿನಲ್ಲಿ ಬರೆದೆ. ಉಳಿದ ೧೯ ಪದಗಳಿಗೂ ಇದೇ ಗತಿ! ಆ ಉತ್ತರಪತ್ರಿಕೆಗಳನ್ನು ಅವರು ಹಿಂತಿರುಗಿಸಿದಾಗ ನನಗೆ ದೊರೆತಿದ್ದ ಅಂಕ – ೨೦! ಈ ಮಾನಕದಲ್ಲಿ ೦ ಅಂಕ ದೊರೆತಾತನದು ಒಂದನೆಯ ಸ್ಥಾನ. ನಮ್ಮ ೧೨೦ 'ಕುರಿ'ಗಳ ಸಾಲಿನಲ್ಲಿ ಒಂದನೆಯ ಸ್ಥಾನ ಗಳಿಸಿದವ ಒಬ್ಬ ಮಾತ್ರ: ಅವನ ಹೆಸರನ್ನು ಪಾದ್ರಿಗುರುಗಳು ಘೋಷಿಸಿದರು: ಯು.ದೇವಿದಾಸ ಆಚಾರ್ಯ. ಮುಂದಿನ ಸಾಲಿನಲ್ಲಿ ಕುಳಿತಿದ್ದ ಈ

ಕುಳ್ಳ ಆ ಕ್ಷಣ ನಮ್ಮ ತರಗತಿಯಲ್ಲೊಬ್ಬ ಪವಾಡಪುರುಷ ಎನಿಸಿಕೊಂಡ. ಕಂಠಪಾಠಪಾರಂಗತ ಅವನೆಂಬುದು ಕ್ರಮೇಣ ಅರಿವಿಗೆ ಬಂತು. ಸ್ಮರಣಸಾಮರ್ಥ್ಯವೆಂದೂ ನನ್ನ ಆಸ್ತಿಯಾಗಿರಲಿಲ್ಲ. ಹಾಗಾದರೆ ಭವಿಷ್ಯ?

ಮೊದಲನೆಯ ಪರೀಕ್ಷೆಯಲ್ಲಿ ನನಗೆ (ರಸಾಯನವಿಜ್ಞಾನದಲ್ಲಿ) ೧೫೦ಕ್ಕೆ ಕೇವಲ ೧೯ ಅಂಕಗಳು ಬಂದುವು, ಎರಡನೆಯದರಲ್ಲಿ ಈ ಅಂಕ ೭ಕ್ಕೆ ಕುಸಿದಿತ್ತು! ಇದೇ ಧಾಟಿಯಲ್ಲಿ ಮುಂದುವರಿದರೆ ಎರಡನೆಯ ವರ್ಷದ ಅಂತಿಮ ಪರೀಕ್ಷೆಯಲ್ಲಿ ಅದೊಂದು ನಿಗೂಢ ಋಣಸಂಖ್ಯೆಯಾಗುವುದು ಖರೆ ಎಂಬುದು ಸ್ಪಷ್ಟವಾಯಿತು. ಅಲ್ಲಿಗೆ ನಾನು ಗೋತಹೊಡೆಯುವುದು ಖಾತ್ರಿ, ಆಗ ನನ್ನ ವಿದ್ಯಾಭ್ಯಾಸ ಕೈದು, ಮುಂದೇನು? ನಾನು ಹುಟ್ಟಾ ದಡ್ಡನಲ್ಲವೆಂಬುದು ಗಣಿತ ಮತ್ತು ಭೌತವಿಜ್ಞಾನ ವಿಷಯಗಳಲ್ಲಿ ಪಡೆಯುತ್ತಿದ್ದ ಶೇಕಡಾ ೯೦ಕ್ಕೂ ಮಿಕ್ಕಿದ ಅಂಕಗಳು ಎತ್ತಿ ಕಾಣಿಸುತ್ತಿದ್ದುವು. ಹಾಗಾದರೇನು ಮಾಡಬೇಕು? ಖಾಸಗಿಪಾಠ ತರಗತಿ ಸೇರಲು ದುಡ್ಡಿಲ್ಲ. ಕೊಠಡಿಯಲ್ಲೇ ಹಗಲಿರುಳು ಉರುಹೊಡೆದು ಉತ್ತರ ಕಕ್ಕುವುದೊಂದೇ ಶರಣು. ಹಾಗೆಯೇ ಮಾಡಿದೆ: ಶರತಲ್ಪವಾಸಸುಖವದು. ಆದರೆ ಉತ್ತರಾಯಣ ಬಂದಾಗ ಈ ಭೀಷ್ಮ ಸ್ವರ್ಗ ಸೇರಿದ! ೧೯೪೪ರ ಅಂತಿಮಪರೀಕ್ಷೆಯಲ್ಲಿ ಪಡೆದ ಅಂಕಗಳಿವು: ಗಣಿತ ೯೫%, ಭೌತವಿಜ್ಞಾನ ೮೭%, ರಸಾಯನವಿಜ್ಞಾನ ೬೧%. ಹೀಗೆ ಓದದೆಯೆ ಮೊದಲೆರಡು ವಿಷಯಗಳಲ್ಲಿ ಚೆನ್ನಾಗಿಯೇ ಗೆದ್ದರೆ ಓದಿಯೂ ಮೂರನೆಯದರಲ್ಲಿ ಗಳಿಸಿದ್ದು ಅಷ್ಟು ಕಡಿಮೆ. ಇನ್ನು ಇಂಗ್ಲಿಷ್ ಮತ್ತು ಕನ್ನಡಗಳಲ್ಲಿ ಶೇಕಡಾ ೬೦ಕ್ಕಿಂತಲೂ ಹೆಚ್ಚು ಅಂಕಗಳು ಬಂದಿದ್ದುವು. ಹೇಗೂ ಇರಲಿ, ಇಂಟರ್ಮೀಡಿಯೆಟ್ ವೈತರಣಿಯನ್ನು ಯಶಸ್ವಿಯಾಗಿ ಉತ್ತರಿಸಿದ್ದಾಯಿತು, ಅದೂ ಪ್ರಥಮ ದರ್ಜೆಯಲ್ಲಿ. ಈ ಹಿರಿಮೆ ಪಡೆದ ಕೊಡಗಿನ ವಿದ್ಯಾರ್ಥಿಗಳು ಕೇವಲ ಮೂರು. ಇವರ ಪೈಕಿ ನನ್ನದು ಎರಡನೆಯ ಸ್ಥಾನ.

ಗಣಿತ ಭೌತವಿಜ್ಞಾನಗಳ (ಸ–)ರಸಲೋಕದಲ್ಲಿ
ಅಧ್ಯಾಯ ಹನ್ನೆರಡು

ನಮ್ಮ ಗಣಿತಗುರುಗಳು ಕೆ.ಎ.ಕೃಷ್ಣಮೂರ್ತಿ ಮತ್ತು ಬಿ.ಭುಜಂಗರಾವ್; ಭೌತವಿಜ್ಞಾನಗುರು ಎಸ್.ನಾರಾಯಣಹೊಳ್ಳ. ಇವರುಗಳ ಸಾನ್ನಿಧ್ಯದಲ್ಲಿ ನಾವು ಆಯಾ ವಿಷಯಗಳಲ್ಲಿ ಪ್ರಾವೀಣ್ಯ ಗಳಿಸಿದುದರ ಜೊತೆಗೆ ಜೀವನಧರ್ಮವನ್ನೂ ಬೋಧನಮರ್ಮವನ್ನೂ ಕಲಿತೆವು. ಜೀವನಧರ್ಮ: ಇತರರಿಗೆ ಸಂತಸವೀವುದೇ ಪರಮಪುರುಷಾರ್ಥ. ಬೋಧನಮರ್ಮ: ವಿಷಯದ ಕಾಠಿಣ್ಯ ನಿವಾರಣೆಗಿರುವ ಉಪಾಯ ಒಂದೇ – ಕಥಾರೂಪದಲ್ಲಿ ಉದಾಹರಣೆಗಳ ಸಹಿತ ಪರಿಕಲ್ಪನೆಗಳ ಸ್ಪಷ್ಟೀಕರಣ. ಎರಡು ಪ್ರಾತಿನಿಧಿಕ ಉದಾಹರಣೆಗಳು. ಕಲನಶಾಸ್ತ್ರ (calculus) ಪ್ರವೇಶಗೊಳಿಸುವ ಮೊದಲು ನಮ್ಮ ಗುರುಗಳು ಬೀಜಗಣಿತದಲ್ಲಿ ಒಂದು ಸರಳ ಸಮೀಕರಣ ಬರೆದು ನಮ್ಮಿಂದಲೇ ಅದರ ಪರಿಹಾರವನ್ನು ತರಿಸಿದರು:

೧=೨=.......... !

ಸಾಧನೆ: a=b ಆಗಿರಲಿ.

$\therefore$ a X a = ab

$a^2 – b^2 = ab – b^2$

(a-b) (a+b) = b (a-b)

ಉಭಯ ಪಾರ್ಶ್ವಗಳಿಂದಲೂ (a-b)ಯನ್ನು ರದ್ದು ಮಾಡಿ. $\therefore$ a+b=b ಆದರೆ a=b ಎಂದು ಅಂಗೀಕರಿಸಿದ್ದೇವೆ.

$\therefore$ b+b=b

೨b=b

೨=೧, ಎಂದೇ ೧=೨=೩=೪=...

ಇಡೀ ಸಂಖ್ಯಾಸೌಧವೇ ನೆಲಕಚ್ಚಿದೆ! ಈ ಅನರ್ಥದ ಅರ್ಥವೇನು? ಅವರು ವಿವರಿಸಿದರು, "ಹುಲುಮನುಜಾ! ತಿಳಿದೋ ತಿಳಿಯದೆಯೋ ನೀನೇ ವಿಧಿಸಿಕೊಂಡ ಕೆಲವು ಕಟ್ಟುಪಾಡುಗಳನ್ನು ನೀನು ಅಹಂಕಾರದಲ್ಲಿ ಉಲ್ಲಂಘಿಸಿದ್ದಾದರೆ ನಿಸರ್ಗ ನಿನಗೆ ಒದ್ದು ಹೇಳುತ್ತದೆ 'ನಿನ್ನ ನಡೆ ತಪ್ಪು' ಎಂದು! ವ್ಯಾಘಾತ ಅಥವಾ ವೈರುಧ್ಯಗಳು (contradictions) ನೀಡುವ ಸಂದೇಶವಿದು. ಇಂಥ ಸಂದರ್ಭಗಳಲ್ಲಿ ಇಡೀ ಸಮಸ್ಯೆಯ ಪುನಃಪರೀಕ್ಷೆಯೊಂದೇ ಶರಣು. ಸಮೀಕರಣದ ಉಭಯ ಪಾರ್ಶ್ವಗಳನ್ನೂ ನಾವು *a-b*ಯಿಂದ ಭಾಗಿಸಿರುವುದು ಸರಿಯಷ್ಟೆ. ಆದರೆ ನಮ್ಮ ಮೂಲ ಅಭಿಗೃಹೀತದ ಪ್ರಕಾರ *a-b*=೦. ಅಂದರೆ ಈ ಸರಳ ಭಾಗಾಹಾರ ಕ್ರಿಯೆಯಲ್ಲಿ ನಾವು ಉಭಯ

ಪಾರ್ಶ್ವಗಳನ್ನೂ ೦ಯಿಂದ ಭಾಗಿಸಿದ್ದೇವೆ. ಇದು ಸಲ್ಲದು. Thou shalt not divide by zero (ನೀನು ೦ಯಿಂದ ಭಾಗಿಸತಕ್ಕದ್ದಲ್ಲ) ಎಂಬ ಅಂಕಗಣಿತದ ಮೂಲನಿಯಮವನ್ನು ಉಲ್ಲಂಘಿಸಿದುದರ (ದುಷ್)ಫಲ ಈ ವ್ಯಾಘಾತ. ಜೀವನದಲ್ಲಿಯೂ ಈ ನಿಯಮ ಸಾಧು. ಹಾಗಾದರೆ ಮುಂದಿನ ಹೆಜ್ಜೆ ಏನು? ಮಾನವನ ಅದಮ್ಯ ಸೃಜನಶೀಲತೆ ಇಂಥ ಸನ್ನಿವೇಶಗಳಲ್ಲಿ ಹೊಸಹಾದಿ ಮತ್ತು ಹೊಸಹೊಳಹು ಹುಡುಕುತ್ತ ಹೊಸತೇ ಆಗುತ್ತದೆ: ಕಲನಶಾಸ್ತ್ರದ ಒರತೆ ಬುಳುಬುಳಿಸುವುದು ಇಲ್ಲೇ."

ಇನ್ನೊಂದು ನಿದರ್ಶನ. ಗುರುತ್ವಾಕರ್ಷಣೆಯ (gravitation) ಮೊದಲ ಪಾಠವನ್ನು ನಮ್ಮ ಉತ್ಸಾಹೀ ಗುರುಗಳು ಆರಂಭಿಸಿದ ಕ್ರಮ ಹೀಗೆ: ಮಾಮೂಲಿನಂತೆ ಒಂದು ಪುಟ್ಟ ಕಥೆ. ಹಲವು ನೂರು ವರ್ಷಗಳ ಹಿಂದಿನ ಮಂಗಳೂರಿನಲ್ಲಿ ಬೊಗ್ಗು ಎಂಬೊಬ್ಬ ಹದಿಹರೆಯದ ಯುವಕನಿದ್ದ. ಮೀಸೆ ಮೊಳೆಯುವಾಗ ದೇಶ ಕಾಣದ ಹರೆಯ, ಯಾರೂ ಮಾಡದ ಏನಾದರೂ ಸಾಹಸ ಪ್ರದರ್ಶಿಸಿ ತಾನು ಸಮಾಜದ ಕಣ್ಮಣಿಯಾಗಬೇಕೆಂಬ ತವಕ. ಒಂದು ಮುಂಜಾನೆ ಬೊಗ್ಗು ಕಾಣದಾದ. ಮುಂಬಯಿಗೆ ನಡೆದು ತೆರಳಿದ್ದಾನೆಂಬ ಅಸ್ಪಷ್ಟ ಸುದ್ದಿ ಪಸರಿಸಿತು. ಅದು ಎಲ್ಲಿದೆ? ಪ್ರಾಯಶಃ ಚತುರ್ದಶಭುವನಗಳ ಪೈಕಿ ಭೂಲೋಕದ ಹೊರತಾಗಿ ಬೇರೆಲ್ಲೋ ಇರಬೇಕೆಂದು ಜನ ಭಾವಿಸಿ ಆಶ್ಚರ್ಯಚಕಿತರಾದರು. ಕಾಲ ಸಂದಿತು. ಜನರ ನೆನಪಿನಿಂದ ಬೊಗ್ಗು ಕ್ರಮೇಣ ಮರೆಯಾದ?

ಇಲ್ಲ! ಒಂದು ಮುಂಜಾನೆ ಆತ ಮರಳಿದ, ಪುನರಾಯಾನ್ ಮಹಾಕಪಿಃ! ಗಡ್ಡ ಮೀಸೆ ಹುಲುಸಾಗಿ ಬೆಳೆದು ಅವನ ತಾರುಣ್ಯಕ್ಕೆ ಹೊಸ ಪರಿವೇಷ ಹೊದೆಸಿದ್ದುವು. ಹುಡುಗ ಹುಡುಗಿಯರು ಅವನನ್ನು ಸುತ್ತುವರಿದು ಮುಂಬಯಿ ಅನುಭವಗಳನ್ನು ಹೇಳಬೇಕೆಂದು ಒತ್ತಾಯ ಹೇರಿದರು. ಆಗ ಅವನು ಚಳಿಗಾಲದ ಮುಂಬಯಿ ವರ್ಣನೆ ತೊಡಗಿದ, "ಮಕ್ಕಳೇ! ಅಲ್ಲಿಯ ಚಳಿಗಾಲ ಮಂಗಳೂರಿನ ನಿಮಗೆಂದೂ ಅರ್ಥವಾಗದು. ಮುಂಜಾನೆಯ ಕೊರೆವ ಕುಳಿರಿನಲ್ಲಿ ಅಲ್ಲಿಯ ಆಗಸ ಪೂರ್ತಿ ಹಕ್ಕಿಗಳ ಶವಗಳು ತೇಲುತ್ತಿದ್ದುದು ಮಾಮೂಲು ದೃಶ್ಯ."

"ಅದು ಹೇಗೆ ಸಾಧ್ಯ?"

"ಬೆಚ್ಚಗಿನ ಗೂಡಿನಿಂದ ಎಂದಿನಂತೆ ಹೊರಹಾರಿದ ಹಕ್ಕಿಗಳು ಅಲ್ಲಿಯ ಶೈತ್ಯದಿಂದ ಆ ಕ್ಷಣ ಮರಗಟ್ಟಿ ಆಕಾಶವಿಡೀ ಅವುಗಳ ಶವಗಳೇ ಶವಗಳು!"

ಆ ಹುಡುಗರ ಸಾಲಿನಲ್ಲಿ ಒಬ್ಬ ಗುರುತ್ವಾಕರ್ಷಣೆ ಬಗ್ಗೆ ಒಂದಿಷ್ಟು ತಿಳಿದುಕೊಂಡವನಿದ್ದ. ಈತ ಒಂದು ಸಂದೇಹವೆತ್ತಿದ, "ಹಾಗಾದರೆ ಗುರುತ್ವಾಕರ್ಷಣೆ? ಇದು ಎಲ್ಲವನ್ನೂ ನೆಲಕ್ಕೆ ಬೀಳಿಸಲೇಬೇಕಷ್ಟೆ?"

``Gravitation? Even that was frozen in the Bombay cold! (ಗುರುತ್ವಾಕರ್ಷಣೆ? ಅದು ಕೂಡ ಮುಂಬಯಿಯ ಶೈತ್ಯದಲ್ಲಿ ಹೆಪ್ಪುಗಟ್ಟಿಹೋಗಿತ್ತು!)"

ಇಡೀ ತರಗತಿಯಲ್ಲಿ ನಗುಹೊನಲು ಕಟ್ಟೆಯೊಡೆದು ಹರಿಯಿತು. ಆ ಕ್ಷಣದಲ್ಲಿ ಗುರುಗಳು ಭರತನಾಟ್ಯದಲ್ಲಿಯಂತೆ ಒಂದು ಆವರ್ತ ತಿರುಗಿ ವಿವರಿಸಿದರು, "ಮಕ್ಕಳೇ! ಈಗ ನಾವು ತಿಳಿಯೋಣ ಹವಾವೈಪರೀತ್ಯಗಳು ಗುರುತ್ವಾಕರ್ಷಣಬಲದ ಮೇಲೆ ಏನೂ ಪ್ರಭಾವ ಬೀರವು. ಬೊಗ್ಗು ಗಪ್ಪಾ ಹೊಡೆದಿದ್ದನಷ್ಟೆ, ಹೆಂಗಳೆಯರ ಸಾಮ್ರಾಜ್ಯದಲ್ಲಿ ಸುಖಾಸೀನನಾಗಿದ್ದ ಉತ್ತರಕುಮಾರನಂತೆ."

ಹೀಗೆ ನಾವು ಗಣಿತ ಮತ್ತು ಭೌತವಿಜ್ಞಾನಗಳನ್ನು ಒಂದು ಪತ್ತೇದಾರಿ ಕಾದಂಬರಿಯ ರೀತಿ ಕಲಿತು ಪ್ರತ್ಯೇಕವಾಗಿ ಜನಪ್ರಿಯ ಪುಸ್ತಗಳನ್ನು ಓದಿ ವಿಷಯ ಪ್ರಾವೀಣ್ಯ ಮತ್ತು ನಿರೂಪಣ ಕೌಶಲ ಗಳಿಸಿದೆವು. ಮುಂದೊಂದು ದಿನ ನಾನೇ ಒಬ್ಬ ಗಣಿತೋಪನ್ಯಾಸಕನಾದಾಗ (೧೯೪೭) *Evolution of Physics* by Einstein and Infeld ಎಂಬ ಅದ್ಭುತ ಗ್ರಂಥ ಓದಿದೆ. ಅದರ ಆರಂಭದ ಪರಿಚ್ಛೇದವಿದು: "ಕಲ್ಪನಾಲೋಕದಲ್ಲೊಂದು ನಿಗೂಢ ಕಥೆ ಅಡಗಿದೆ. ಇದು ನಮಗೆ ಅಗತ್ಯವಾಗುವ ಎಲ್ಲ ಸುಳುಹುಗಳನ್ನೂ ಒದಗಿಸಿ ಸದ್ಯದ ಪರಿಸ್ಥಿತಿ ಕುರಿತಂತೆ ನಮ್ಮದೇ ಸಿದ್ಧಾಂತ ರೂಪಿಸುವಂತೆ ನಮ್ಮನ್ನು ಒತ್ತಾಯಿಸುತ್ತದೆ. ಈ ಕಥೆಯ ವಸ್ತುವನ್ನು ನಾವು ಎಚ್ಚರಿಕೆಯಿಂದ ಅನುಸರಿಸಿದ್ದಾದರೆ ಲೇಖಕ ಪುಸ್ತಕದ ಕೊನೆಯಲ್ಲಿ ಇದರ ಪೂರ್ಣ ಪರಿಹಾರವನ್ನು ಅನಾವರಣಿಸುವ ಅದೇ ಮೊದಲು ನಾವೇ ಅದನ್ನು

ಕಂಡುಕೊಂಡಿರುತ್ತೇವೆ. ಇನ್ನು ಈ ಪರಿಹಾರವಾದರೋ ಅಗ್ಗದ ನಿಗೂಢಗಳಿಗೊದಗುವ ಪರಿಹಾರಗಳಂತಲ್ಲ. ಇದು ನಮ್ಮನ್ನು ಹತಾಶೆಗೊಳಿಸದು, ಅಲ್ಲದೇ ಇದನ್ನು ನಾವು ಯಾವ ಕ್ಷಣದಲ್ಲಿ ನಿರೀಕ್ಷಿಸುತ್ತೇವೋ ಆ ಕ್ಷಣದಲ್ಲೇ ಇದು ಪ್ರತ್ಯಕ್ಷವೂ ಆಗುವುದು. ಇಂಥ ಪುಸ್ತಕದ ಒಬ್ಬ ವಾಚಕನನ್ನು ನಾವು ನಿಸರ್ಗ ಗ್ರಂಥದ ನಿಗೂಢಗಳಿಗೆ ಪರಿಹಾರ ಶೋಧಿಸಲು ತಮ್ಮ ಉತ್ತರೋತ್ತರ ಪೀಳಿಗೆಗಳಲ್ಲಿ ಶ್ರಮಿಸುತ್ತಿರುವ ವಿಜ್ಞಾನಿಗಳ ಜೊತೆ ಹೋಲಿಸಬಹುದೇ?"
ಆದ್ದರಿಂದ ನಿಸರ್ಗಾನ್ವೇಷಣೆಯೇ ವಿಜ್ಞಾನಕಾರ್ಯದ ಪ್ರೇರಕಬಲ ಮತ್ತು ಪೋಷಕ ಇಂಧನ. ಈ ತೆರನಾಗಿ ಮತ್ತು ಇದೇ ಧಾಟಿಯಲ್ಲಿ ನಮ್ಮ ಗುರುಗಳು (ಗಣಿತಕ್ಕೆ ಕೆ.ಎ.ಕೃಷ್ಣಮೂರ್ತಿ ಹಾಗೂ ಬಿ.ಭುಜಂಗರಾವ್, ಭೌತವಿಜ್ಞಾನಕ್ಕೆ ಎಸ್.ನಾರಾಯಣ ಹೊಳ್ಳ) ನಮ್ಮನ್ನು "ಸರಿದಾರಿ ತಪ್ಪದಂತೆ ಕೈಹಿಡಿದು ನಡೆ"ಸಿದರು.

ಇನ್ನು ಕನ್ನಡ ತರಗತಿಗಳಲ್ಲಿ ದೊರೆತ ರಸದೌತಣದ ರುಚಿ ಬೇರೆಯೇ: ವಿಜ್ಞಾನದ ಸುಭದ್ರ ಬುನಾದಿ ಮೇಲೆ ರಚಿಸಿದ ಸಾಹಿತ್ಯ ಸೌಧವದು. ಸಂಶೋಧನೆ, ಗ್ರಂಥರಚನೆ, ಬೋಧನೆ, ತಪಾಸಣೆ ಮತ್ತು ನಿವೇದನೆಗಳ ಮಧುರ ಪಂಚಾಮೃತ ಪಾನಾನುಭವ. ಮುಳಿಯ ತಿಮ್ಮಪ್ಪಯ್ಯನವರ ಕನ್ನಡ ಪಾಠಗಳು ನಮಗೆ ಹಳೆ, ನಡು ಮತ್ತು ಹೊಸ ಕನ್ನಡಗಳ ಸಮಗ್ರ ಪರಿಚಯ ಒದಗಿಸಿದುದರ ಜೊತೆಗೆ ಸ್ವತಃ ನಾವೇ ಆ ರಾಜಮಾರ್ಗದಲ್ಲಿ ಮುನ್ನಡೆಯಲು ದಾರಿದೀವಿಗೆಯೂ ಆದುವು.

ಬೆನ್ನಿಗೆ ಬಿತ್ತು ಲಾಠೀ ಪೆಟ್ಟು
ಅಧ್ಯಾಯ ಹದಿಮೂರು

೧೯೪೨ ಆಗಸ್ಟ್ ಆರಂಭ. ರಾಷ್ಟ್ರದ ರಾಜಕೀಯ ತಾಪ ಗಳಿಗೆ ಗಳಿಗೆಗೆ ಏರುತ್ತಿತ್ತು. ಒಂದೆಡೆ ಜಪಾನಿನಿಂದ ಆಕ್ರಮಣ ಭೀತಿ. ಇನ್ನೊಂದೆಡೆ ಸ್ವಾತಂತ್ರ್ಯ ಸಮರದ ಉಲ್ಬಣತೆ. ಯೂರೋಪ್ ಮತ್ತು ರಶ್ಯಾ ದೇಶಗಳಿಂದ ಬರುತ್ತಿದ್ದ ಸಮರವಾರ್ತೆಗಳಂತೂ ಪ್ರಪಂಚದ ಅಂತ್ಯವನ್ನೇ ಸಾರುವಂತಿದ್ದುವು. ಸಾಂದ್ರ ತಮಸ್ಸು ಸುತ್ತಲಿಂದಲೂ ಕವಿಯುತ್ತಿದ್ದಂಥ ಅವ್ಯಕ್ತ ಮೌನ. ಅಂದು ನಮ್ಮ ಸುದ್ದಿ–ನೀರಡಕೆಗೆ ಶಮನ ಸಿಕ್ಕುತ್ತಿದ್ದುದು ಕೇವಲ ಎರಡು ವಿಶ್ವಾಸಾರ್ಹ ಮೂಲಗಳಿಂದ: ಮದ್ರಾಸಿನ *The Hindu* ದೈನಿಕ ಮತ್ತು ಸೆಂಟ್ರಲ್ ಮೈದಾನದ ನಡುವಿನಲ್ಲಿ ಪುರಸಭೆ ಒದಗಿಸಿದ್ದ ರೇಡಿಯೋ ಗೋಪುರ. ಪತ್ರಿಕೆ ಖರೀದಿಸಿ ಓದಲು ಹಣವಿಲ್ಲ, ಸ್ವಂತ ರೇಡಿಯೋವಂತೂ ಗಗನಕುಸುಮ. ಹೀಗಾಗಿ ಪ್ರತಿ ಸಂಜೆ ೬ ಗಂಟೆಗೆ ಮೊದಲೇ ನಾವು ನೂರಾರು ಮಂದಿ ವಾರ್ತಾದಾಹಿಗಳು ಗೋಪುರದ ಸುತ್ತ ಹಾಜರು.

ಆಗಸ್ಟ್ ೮, ೧೯೪೨. ಕಾಂಗ್ರೆಸ್ ಪಕ್ಷ Quit India "ಭಾರತದಿಂದ ತೊಲಗಿ" ಠರಾವನ್ನು ಅಂಗೀಕರಿಸಿತು ಮತ್ತು ಸ್ವಾತಂತ್ರ್ಯ ಸಮರಕ್ಕೆ ಹೊಸ ಆಯಾಮವಿತ್ತಿತು. Do or Die "ಮಾಡು ಇಲ್ಲವೇ ಮಡಿ" ಎಂಬ ಮಂತ್ರ ದೇಶಾದ್ಯಂತ ಅನುರಣಿಸಿತು. ಹುಣ್ಣಿಮೆ ಇರುಳಿನ ಕಡಲಿನಂತೆ ಜನಕ್ಷೋಭೆ ನಾಡನ್ನು ಆಕ್ರಮಿಸಿತು. ಆಳುತ್ತಿದ್ದ ಬ್ರಿಟಿಷ್ ಸರ್ಕಾರ ಒಡನೆ ರಾಷ್ಟ್ರೀಯ ಧುರೀಣರನ್ನು ಕೈದುಮಾಡಿ ಸೆರೆಯಲ್ಲಿಟ್ಟಿತು.

ಆಗಸ್ಟ್ ೯. ತಂತಾನೇ ಭುಗಿಲೆದ್ದ ಸಾರ್ವಜನಿಕ ಮುಷ್ಕರ (ಹರತಾಳ) ರಾಷ್ಟ್ರರಥದ ಚಲನೆಯನ್ನು ಹಠಾತ್ತನೆ ಸ್ಥಗಿತಗೊಳಿಸಿದಂಥ ಪರಿಸ್ಥಿತಿ. ಮಂಗಳೂರಿನ ಮೂಲೆ ಮೂಲೆಗಳಿಂದ ಜನರೆಲ್ಲ ವ್ಯವಸ್ಥಿತವಾಗಿ ಸಾಲುಗಳಲ್ಲಿ ನಡೆದು ಬಂದು ಮಧ್ಯಾಹ್ನದ ಹೊತ್ತಿಗೆ ಮೈದಾನದಲ್ಲಿ ಜಮಾಯಿಸಿದರು – ಬೆಟ್ಟದ ವಿವಿಧ ಮಗ್ಗುಲುಗಳಿಂದ ಜಿನುಗುವ ನೀರ ಪಸೆಗಳು ಕಿರುತೊರೆಗಳಾಗಿ, ಮುಂದೆ ಹೊಳೆಗಳಾಗಿ ಕ್ರಮೇಣ ಮಹಾನದಿಯಾಗಿ ಸಮುದ್ರದಲ್ಲಿ ಒಂದಾಗುವಂತೆ. ಪ್ರಾಯಶಃ ಒಂದು ಲಕ್ಷದಷ್ಟು ಮಂದಿ ಅಲ್ಲಿ ಸೇರಿರಬಹುದು. ಮಡಿಕೇರಿಯಲ್ಲಿ ಕೂಡ ಇಂಥ ಮೆರವಣಿಗೆ ಮತ್ತು ಜನಸೇರುವೆಗಳನ್ನು ನೋಡಿದ್ದೆ. ಆದರೆ ಮಂಗಳೂರಿನ ಈ ದೃಶ್ಯ ಅಭೂತಪೂರ್ವ. ಅದು ಕೆರೆ, ಇದು ಸಮುದ್ರ.

ಇಷ್ಟಾದರೂ ಆ ಜನಜಂಗುಳಿಯಲ್ಲಿಯ ಸಾಮೂಹಿಕ ಶಿಸ್ತು, ಅವರಲ್ಲಿ ಸ್ವಯಂಪ್ರೇರಣೆಯಿಂದ ಪ್ರಕಟವಾಗುತ್ತಿದ್ದ ಸಭ್ಯತೆ ಅನನ್ಯವಾಗಿದ್ದವು. ಏನೋ ಗಹನವಾದುದರ ಆಗಮನವನ್ನು ನಿರೀಕ್ಷಿಸುವಂತೆ ನಾವೆಲ್ಲ ವೇದಿಕೆಯ ಸುತ್ತ ನೆಲದ ಮೇಲೆ ವರ್ತುಳೀಯವಾಗಿ ಕುಳಿತೆವು. ಚಿಕ್ಕವರಾಗಿದ್ದ ನನ್ನಂಥವರಿಗೆ ಮುಂದಿನ ಸಾಲು. ವೇದಿಕೆಯಲ್ಲಿದ್ದ ಕಾಂಗ್ರೆಸ್ ನಾಯಕರು ತ್ರಿವರ್ಣ ಧ್ವಜವನ್ನು ಹಾರಿಸಿದರು, "ಜಂಡಾವೂಂಚಾ ರಹೇಹಮಾರಾ," "ವಂದೇ ಮಾತರಂ" ಮುಂತಾದ ರಾಷ್ಟ್ರಗೀತೆಗಳು ಮೊಳಗಿದುವು, ಭಾಷಣಗಳು ಪುಂಖಾನುಪುಂಖವಾಗಿ ಪ್ರವಹಿಸಿದುವು.

ಸಾರವಿಷ್ಟು, "ನಾವು ಮೂವತ್ತಮೂರು ಕೋಟಿ ಭಾರತೀಯರು ಒಮ್ಮೆಗೇ ಒಂದೊಂದು ಉದ್ಧರಣೆ ನೀರನ್ನು ಬ್ರಿಟನ್ ಮೇಲೆ ಪ್ರೋಕ್ಷಿಸಿದರೂ ಸಾಕು, ಆ ದೇಶವೇ ಕೊಚ್ಚಿ ಹೋದೀತು! ಇಂಥ ಅನಾಮಿಕ ಅನಾಗರಿಕ ಮತ್ತು ಅಲ್ಪ ರಾಜ್ಯಕ್ಕೆ ಭಾರತದಂಥ ವಿಶಾಲ ಮತ್ತು ಪ್ರಾಚೀನ ರಾಷ್ಟ್ರ ಏಕೆ ಅಡಿಯಾಳಾಗಿರಬೇಕು?" ಸಭೆ ತಲೆದೂಗಿತು, ಚಪ್ಪಾಳೆ ತಟ್ಟಿತು, ಜಯಘೋಷ ಗರ್ಜಿಸಿತು. ಒಂದು ಬಗೆಯ ಸಾಮೂಹಿಕ ಕ್ರಿಯಾಶಕ್ತಿ ನಮ್ಮನ್ನೆಲ್ಲ ವಶೀಕರಿಸಿಕೊಂಡಿತು.

ಹಸನಬ್ಬ ಒಡೆಯರ್, ಅಧಿಕಾರಿ, ನಾರಾಯಣ ಕಿಲ್ಲೆ ಮೊದಲಾದ ನಾಯಕರ ಉಪನ್ಯಾಸಗಳಲ್ಲಿ ನಾವು ತೇಲುತ್ತಿದ್ದಾಗ, ನಾಳೆ ಉದಯಿಸಲಿದ್ದ ಸ್ವಾತಂತ್ರ್ಯ ರವಿಯನ್ನು ನಿರೀಕ್ಷಿಸುತ್ತಿದ್ದಾಗ ಮತ್ತು ದಾಸ್ಯಮುಕ್ತ ಭಾರತದ ರಮ್ಯ ಸ್ವಪ್ನವನ್ನು ಕಾಣುತ್ತಿದ್ದಾಗ ಮೈದಾನದ ತೀರ ಹೊರ ಅಂಚಿನಲ್ಲಿ, ಜನಸ್ತೋಮದಿಂದ ಸಾಕಷ್ಟು ದೂರದಲ್ಲಿ ಕಾರ್ಮೋಡ ಸಂಚಯಿಸುತ್ತಿದ್ದುದು ಕಂಡಿತು: ಖಾಕಿ ಸಮವಸ್ತ್ರಧಾರೀ ಲಾಠೀಸಜ್ಜಿತ ಪೊಲೀಸರ ದಂಡು.

ಅಷ್ಟರಲ್ಲೇ ಅವರು ನಮ್ಮ ಸುತ್ತಲೂ ವ್ಯವಸ್ಥಿತವಾಗಿ ವಿತರಣೆಗೊಂಡು ಇದ್ದಕ್ಕಿದ್ದಂತೆ ಹುಚ್ಚಾಬಟ್ಟೆ ಲಾಠೀಹೊಡೆತ ಶುರುಮಾಡಿಯೇಬಿಟ್ಟರು. ವೇದಿಕೆಯತ್ತ ಮಿಂಚಿನ ವೇಗದಲ್ಲಿ ಧಾವಿಸಿ ಆ ಅಹಿಂಸಾವಾದಿ ನಾಯಕರಿಗೆ ಮೈಮೋರೆ ನೋಡದೆ ಬಡಿದರು, ಬಿದ್ದವರನ್ನು ಪುಳಿಮೂಟೆಗಳಂತೆ ಹೊತ್ತುಕೊಂಡು ಅಥವಾ ದರದರನೆ ಎಳೆದುಕೊಂಡು ಹೋಗಿ ಪೊಲೀಸ್ ವ್ಯಾನುಗಳಿಗೆ ತುಂಬಿದರು – ಕೋಳಿಗಳನ್ನು ತುರುಕುವಂತೆ.

ಇಂಥ ಕ್ರೂರ ಘಟನೆಗಳ ಬಗ್ಗೆ ಮಡಿಕೇರಿಯ ಹುಂಬನಾದ ನನಗೆ ಏನೂ ಕಲ್ಪನೆ ಇರಲಿಲ್ಲ. ಈ ಆಘಾತದಿಂದ ದಿಙ್ಮೂಢನಾಗಿದ್ದಾಗ ಎಲ್ಲರೂ ಅರಚುತ್ತಿದ್ದ "ಓಡು, ಓಡು, ಪೆಟ್ಟು ತಪ್ಪಿಸಿಕೊ" ಎಂಬ ಕಿರುಚಾಟ ಮರಣಭಯ ಹುಟ್ಟಿಸಿತು. ಮುಂದಿನ ಸಾಲಿನಲ್ಲಿ ಸುಖಾಸೀನರಾಗಿದ್ದ ನಾವು ಏಳಲು ಪ್ರಯತ್ನಿಸುತ್ತಿದ್ದಾಗಲೇ ಧಡಿಯರ ಒಂದು ಗುಂಪು ನಮ್ಮನ್ನು ಜಿಗಿದು ಹಾರುತ್ತ ಕುಪ್ಪಳಿಸುತ್ತ ಎತ್ತಲೋ ಓಡಿತು. ನಾವು ಎಲ್ಲರೂ ಅಂಗಾತ (ಎದೆ ಮೇಲಾಗಿ) ಅಥವಾ ಬೋರಲು (ಬೆನ್ನು ಮೇಲಾಗಿ) ಬಿದ್ದೆವು. ಅಷ್ಟರಲ್ಲೇ ನನ್ನ ಬೆನ್ನ ಮೇಲೆ ಹೆಗ್ಗಣಕ್ಕೆ ಬಡಿಯುವಂತೆ ಲಾಠೀ ಪೆಟ್ಟುಗಳ ಕುಟ್ಟಣೆ ಬಿತ್ತು. ಯೋಚನೆ ಮಾಡುವ ಮೊದಲೇ ಇದು ನಡೆದುಹೋಗಿತ್ತು. ಎದ್ದೆ, ಮೈದಾನದಂಚಿನತ್ತ ಜಿಗಿದೋಡಿದೆ, ಅಗಲವೂ ಆಳವೂ ಆಗಿದ್ದ ಚರಂಡಿ ಎದುರಾಯಿತು. ಹನುಮಂತನನ್ನು ಸ್ಮರಿಸಿ ನೆಗೆದೇಬಿಟ್ಟೆ. ಅದೃಷ್ಟ, ಕೊಳಚೆ ನೀರಿಗೆ ಕೆಡೆಯಲಿಲ್ಲ, ಎದುರು ಅಂಚಿನ ಮೇಲೆ ಬಿದ್ದೆ. ಅಲ್ಲೂ ಪೊಲೀಸರ ದಾಳಿ ಸಾಗಿತ್ತು. ಹೇಗೋ ಸಂದಿಗೊಂದಿಗಳಲ್ಲಿ ಅಡ್ಡಹಾಯ್ದು ಹಾಸ್ಟೆಲ್ ಕೊಠಡಿ ತಲಪಿದೆ.

ರಾತ್ರಿಯಾಗಿತ್ತು. ಮಂಗಳೂರು ಅಳುತ್ತಿತ್ತು. ಹಸಿವು ತೀವ್ರವಾಗಿತ್ತು. ಬೆನ್ನಿನಲ್ಲಿಯ ಬಾಸುಂಡೆಗಳು ಬೆಂಕಿ ಉಗುಳುತ್ತಿದ್ದುವು. ಅಂಗಡಿ ಹೋಟೇಲ್ ಎಲ್ಲ ಬಂದ್. ಹಾಸ್ಟೆಲ್ಲಿಗೂ ಪೊಲೀಸರು ಬಂದು ಕೋಣೆ ಕೋಣೆ ತಪಾಸಣೆ ಮಾಡಿ ಇದ್ದವರನ್ನು ಸದೆಬಡಿದು ಕೈದುಮಾಡಿ ವ್ಯಾನುಗಳಿಗೆ ಒಯ್ಯುತ್ತಿದ್ದರು. ಇನ್ನು ಇಲ್ಲಿದ್ದರೆ ಉಳಿಗಾಲವಿಲ್ಲ. ಅಕ್ಕಮಹಾದೇವಿಯ ವಚನ ನೆನಪಿಗೆ ಬಂತು, "ಹಸಿವಾದರೆ ಊರೊಳಗೆ ಭಿಕ್ಷಾನ್ನಂಗಳುಂಟು, ತೃಷೆಯಾದರೆ ಕೆರೆ ಭಾವಿ ಹಳ್ಳಂಗಳುಂಟು, ಶಯನಕ್ಕೆ ಹಾಳು ದೇಗುಲವುಂಟು, ಚೆನ್ನಮಲ್ಲಿಕಾರ್ಜುನಯ್ಯ ಆತ್ಮಸಂಗಾತಕ್ಕೆ ನೀನೆನಗುಂಟು." ಮನದಲ್ಲೇ ಭಾರತ್‌ಮಾತಾಕೀ ಜೈ ಎನ್ನುತ್ತ ಆ ಕರಾಳ ಕತ್ತಲಲ್ಲಿ ಕರಗಿಹೋದೆ – ಸೋದರಮಾವನ ಮರಿಕೆ ಮನೆಯತ್ತ. ಮಂಗಳೂರಿನಿಂದ ಮರಿಕೆಗೆ ಬಸ್ ದಾರಿ ದೂರ ೩೫ ಮೈಲುಗಳು. ಆದರೆ ಆ ದಿನಗಳಲ್ಲಿ ಯಾವ ವಾಹನವೂ ಓಡುತ್ತಿರಲಿಲ್ಲ. ರಸ್ತೆ ಮೇಲೆ ನಡೆಯುವುದೇ ಅಪಾಯಕ್ಕೆ ಆಹ್ವಾನವಾಗಿತ್ತು. ಕಾಡು, ಗುಡ್ಡೆ, ಗದ್ದೆ, ಹೊಳೆ ಮಾರ್ಗವಾಗಿ ರಾತ್ರಿಯಿಡೀ ನಡೆದೆ, ಹಾದಿಯಲ್ಲಿ ಸಿಕ್ಕಿದ ಸೊಪ್ಪು ಸದೆ ತಿಂದೆ, ಗುಡಿಸಲುಗಳಿಗೆ ಹೋಗಿ ನೀರು ಬೇಡಿ ಕುಡಿದೆ, ಅಂತೂ ಇಂತೂ ಮರುಮುಂಜಾನೆ ಮರಿಕೆಯ ತಣ್ಪನ್ನು, ಮಿಗಿಲಾಗಿ ಪ್ರೀತಿಯ ಆರೈಕೆಯ ತೊಟ್ಟಿಲನ್ನು, ತಲಪಿದೆ. ಅಜ್ಜಿ ನನ್ನ ಬೆನ್ನಿಗೆ ಹಸುರು ಲೇಪ ಹಚ್ಚಿ ನೋವನ್ನು ಶಮನಿಸಿದರು. ಮಾವನ ಮನೆಯಲ್ಲಿ ಒದಗಿದ ರಕ್ಷಣೆ ಮತ್ತು ಉಪಚಾರಗಳು ಕುಸಿದಿದ್ದ ನನ್ನ ಧೃತಿಗೆ ಸಂಜೀವಿನೀಸ್ಪರ್ಶ ನೀಡಿದುವು.

ಸುಮಾರು ಒಂದು ತಿಂಗಳನಂತರ ಕಾಲೇಜ್ ಪ್ರಾರಂಭವಾಯಿತು. ಆಗ ತಿಳಿದುಬಂದ ಸಂಗತಿ ಆಘಾತಕಾರಿಯಾಗಿತ್ತು: ನನ್ನ ತರಗತಿಯಲ್ಲಿದ್ದ ಅಂದಾಜು ೨೫ ಮಂದಿಯನ್ನು ಪೊಲೀಸರು ಸೆರೆಮನೆಗೆ ದೂಡಿದ್ದರಂತೆ, ಇವರ ಪೈಕಿ ಹಾಸ್ಟೆಲ್ಲಿಗರೂ ಸೇರಿದ್ದರು. ಆ ವರ್ಷ ಅವರ ಶಿಕ್ಷಣ ಕೈದಾಯಿತು. ಮುಂದೇನಾಯಿತೋ ಬಲ್ಲವರಾರು?

ಮಂಗಳೂರಿನ ಗೆಳೆಯರು

ಅಧ್ಯಾಯ ಹದಿನಾಲ್ಕು



ಇಂಗ್ಲಿಷ್ ತರಗತಿಯಲ್ಲಿ ಎಲ್ಲ ಸಂಯೋಜನೆಗಳ ವಿದ್ಯಾರ್ಥಿಗಳೂ ಜಮಾಯಿಸುತ್ತಿದ್ದೆವು –– ಅಂದಾಜು ೨೦೦ ಮಂದಿ. ಧ್ವನಿವರ್ಧಕದ ನೆರವಿಲ್ಲದೇ ಪಾದ್ರಿ ಗುರುಗಳು ಉಪನ್ಯಾಸವೀಯುತ್ತಿದ್ದರು. ವಿಷಯ ಪ್ರಾವೀಣ್ಯ, ನಿರೂಪಣೋಲ್ಲಾಸ ಮತ್ತು ಕಂಠಸೌಖ್ಯ ಅವರ ಆಸ್ತಿ. ನಮ್ಮದೋ? ಜ್ಞಾನದಾಹ, ಶ್ರವಣ ಸೂಕ್ಷ್ಮತೆ ಮತ್ತು ಮೌನ ಏಕಾಗ್ರತೆ. ಒಮ್ಮೆ ನಮ್ಮ ಈ ಗುರುಗಳು ನಮಗೊಂದು ವಿಷಯ ಸೂಚಿಸಿ ಅದರ ಬಗ್ಗೆ ಪ್ರಬಂಧ ಬರೆದು ತರಬೇಕೆಂದು ತಾಕೀತು ಮಾಡಿದರು. ಯಥಾವೇಳೆ ನಮ್ಮ ಬರೆಹಗಳು ಅವರ ಕೈಸೇರಿದುವು.

ಸುಮಾರು ೧೦ ದಿನಗಳು ಸಂದುವು. ಅದೇ ತರಗತಿ. ಗುರುಗಳ ಹಿಂದೆ ದೂತ ನಮ್ಮ ಬರೆಹಗಳ ಇಡೀ ಕಟ್ಟನ್ನು ತಂದಿಟ್ಟ. ಸಹಜವಾಗಿ ನಮಗೆಲ್ಲ ಆತಂಕ, ಆವೇಗ. ಎಲ್ಲಕ್ಕೂ ಮೇಲಿದ್ದ ಪ್ರಬಂಧವನ್ನು ಅವರು ಕೈಗೆತ್ತಿಕೊಂಡು ಗಟ್ಟಿಯಾಗಿ ಓದಿದರು ಮಾತ್ರವಲ್ಲ, ಮೆಚ್ಚಿ ವಿವರಿಸಿದರು ಕೂಡ, "ಈ ಸುಂದರ ಲೇಖನ ಬರೆದಾತ ಇದೇ ತರಗತಿಯ ಒಬ್ಬ ಪ್ರಚಂಡ ಪ್ರತಿಭೆ ಎಂಬ ಸಂಗತಿ ನನಗೆ ಅಭಿಮಾನವನ್ನೂ ಆಶ್ಚರ್ಯವನ್ನೂ ತರುತ್ತದೆ. ಆತನ ಹೆಸರು ಬಾಗಲೋಡಿ ದೇವರಾವ್. Deva Rao! Will you please stand up?''
ಯಾರೀತ? ಕತ್ತು ಉದ್ದ ಎತ್ತಿ ತರಗತಿ ಸುತ್ತ ಸಂಪಾತಿ ದೃಷ್ಟಿ ಹರಿಸಿದ್ದಾಯಿತು. ಎಲ್ಲರೂ ಷೋಡಶರೇ, ದೇವದೂತರೇ! ಇವರ ನಡುವೆ "ದೇವ ಬಂದ, ನಮ್ಮ ಸ್ವಾಮಿ ಬಂದನೋ, ದೇವರ ದೇವ ಶಿಖಾಮಣಿ ಬಂದನೋ" (ಪುರಂದರದಾಸ)! ಅವನನ್ನೆಲ್ಲಿ ಕಾಣೋಣ? ಮುಂದಿನ ಸಾಲಿನಲ್ಲಿ ಒಬ್ಬ ಎದ್ದಂತೆ ಭಾಸವಾಯಿತು. ಏಕೆಂದರೆ ಆತ ಕುಳಿತರೂ ನಿಂತರೂ ಒಂದೇ ಎತ್ತರ – ವಾಮನರೂಪ. ಬೆಳುಕರಿಸಿದ ಮತ್ತು ಕುರುಚಲು ಗಡ್ಡ ಬೆಳೆದ ಮುಖ, ಕೆದರಿದ ಕೂದಲು, ಖಾದಿ ಅಡ್ಡ ಬೈರಾಸು, ಮೇಲೊಂದು ಕುಡ್ತ.

ಗುರುಗಳ ಸಹಜ ಪ್ರಶ್ನೆ (ವಿಸ್ಮಯಮಿಶ್ರಿತವಾಗಿ), ``Deva Rao! Is it your own?''
``Of course! What doubt is there, Father?''
ಈ ಆತ್ಮವಿಶ್ವಾಸದ ಖಚಿತವಾಣಿ ಮತ್ತು ತನ್ನ ಆರ್ಜವವನ್ನು ಸಂಶಯಿಸಿದ್ದಕ್ಕಾಗಿ ತಂತಾನೇ ಪುಟಿದೆದ್ದ ಆತ್ಮಪ್ರತ್ಯಯದ ಗುಡುಗು ಇಂದಿಗೂ (೨೦೦೬) ನನ್ನ ನೆನಪಿನಲ್ಲಿ ಅನುರಣಿಸುತ್ತಿವೆ. ನಮ್ಮ ಪ್ರಬಂಧಗಳೆಲ್ಲವನ್ನೂ ಹಿಂತಿರುಗಿಸಿದರು. ಶೇಕಡಾ ೩೫ಕ್ಕಿಂತ ಕಡಿಮೆ ಅಂಕ ಪಡೆದವರ ಹಿರಿದಂಡಿನಲ್ಲಿ ನಾನಿರಲಿಲ್ಲ ಎಂಬುದೊಂದೇ ಸಮಾಧಾನ. ಅಳುಕು ಕೀಳರಿಮೆಗಳ ಕಾರಣವಾಗಿ ಆ ಎರಡು ವರ್ಷವೂ (೧೯೪೨–೪೪) ದೇವರಾಯರನ್ನು ನಾನು ಮಾತಾಡಿಸಲಿಲ್ಲ. ಅವರೋ? ಸದಾ ಏಕಾಕಿ ಮತ್ತು ಏಕಾಂಗಿ (lonely – ಏಕಾಕಿ, ಭೌತವಾಗಿ ಒಂಟಿ, alone – ಏಕಾಂಗಿ, ಅಂತರ್ಮುಖಿ).

ಗಣಿತ ತರಗತಿಯಲ್ಲಿ ಪಿ.ಸೇತುಮಾಧವರಾಯರೂ ನಾನೂ ಹಿಂದಿನ ಸಾಲಿನಲ್ಲಿ ಒಟ್ಟಿಗೆ ಕುಳಿತಿರುತ್ತಿದ್ದೆವು – back-benchers. ಇದು ಕೇವಲ ಆಕಸ್ಮಿಕ. ರಾಯರು ತುಸು ತಡವಾಗಿ ಕಾಲೇಜ್ ಸೇರಿದವರು. ಇನ್ನು ಸಾಹಿತ್ಯ ಮತ್ತು ಜನಜೀವನ ಕುರಿತಂತೆ ಪ್ರಚಂಡ ಬುದ್ಧಿವಂತರು. ಇಂಗ್ಲಿಷಿನಲ್ಲಿ ನಿಷ್ಣಾತರು. ಮಾತುಭಾರಿ, ಸ್ನೇಹಶೀಲ. ಹೀಗಾಗಿ ನನ್ನ ಸಹಜ ಕೀಳರಿಮೆಗೆ ಇವರಲ್ಲಿ ಒಳ್ಳೆಯ ಅವಲಂಬನ ದೊರೆಯಿತು. ಕ್ರಮೇಣ ಈ ಸಲಿಗೆ ಮತ್ತು ಬಳಕೆ ಗಾಢ ಮೈತ್ರಿಯಾಗಿ ನನ್ನ ಆಸಕ್ತಿ ಮತ್ತು ಜೀವನ ದೃಷ್ಟಿಯನ್ನು ಪ್ರಭಾವಿಸಿದುವು. ಆದರೆ ಸ್ಥೂಲಕಾಯರಾಗಿದ್ದ ಇವರೆಂದೂ ನನ್ನ ಜೊತೆ ಸಂಜೆಯ ವಾಯುವಿಹಾರಕ್ಕೆ ಬಂದುದೇ ಇಲ್ಲ.

ಮಡಿಕೇರಿದಿನಗಳಿಂದಲೇ ನನ್ನ ಸಹಪಾಠಿಯಾಗಿದ್ದ ಆರ್.ಎಚ್.ನಾರಾಯಣಶೆಣೈ (ಈತ ನಮ್ಮ ಗುರು ಆರ್.ಹರಿಶೆಣೈಗಳ ಸುಪುತ್ರ) ಭೌತವಿಜ್ಞಾನ ತರಗತಿಯಲ್ಲಿ ನನ್ನೊಟ್ಟಿಗೆ ಕುಳಿತಿರುತ್ತಿದ್ದ. ಸಂಜೆ ವೇಳೆ ಮಾರುತಿ

ವ್ಯಾಯಾಮ ಶಾಲೆಗೆ ಹೋಗಿ ಸಾಮೂ ಕಲಿತು ಗಟ್ಟಿ ಕುಸ್ತಿಪಟುವಾದ. ಇಂಥ ಯಾವ 'ದುಸ್ಸಾಹಸ'ಕ್ಕೂ ನಾನು ಎಂದೂ ದುಮುಕಲಿಲ್ಲ. ಕಾರಣ? ಆಹಾರದ ಸಮಸ್ಯೆ ನನ್ನನ್ನು ತೀವ್ರವಾಗಿ ಬಾಧಿಸುತ್ತಿತ್ತು. ಆರೋಗ್ಯ ಕೆಟ್ಟಿತು. ಮೈತುಂಬ ಕಜ್ಜಿ, ಕೆರೆತ. ವೈದ್ಯರ ಬಳಿ ಹೋದೆ.

"ಏನಾದರೂ ಕೆಟ್ಟ ಕೆಲಸ ಮಾಡಿರುವೆಯಾ? ಗುಹ್ಯ ರೋಗದ ಲಕ್ಷಣವಿದು" ಎಂದರವರು. ಹೆಣ್ಣಿನ ಕಡೆ ನೋಡಲು ಕೂಡ ಅಂಜಿಕೆ ನನಗೆ. ಗುಹ್ಯರೋಗವೆಂದರೇನೆಂದೇ ಗೊತ್ತಿರಲಿಲ್ಲ. ಕಡು ಬ್ರಹ್ಮಚರ್ಯವೇ ವ್ರತವೆಂದು ಅಂಗೀಕರಿಸಿ ಮನಸ್ಸನ್ನು ಸದಾ ಹತೋಟಿಯಲ್ಲಿಡಲು ಪ್ರಯತ್ನಶೀಲನಾಗಿದ್ದೆ. ಉಪನಿಷತ್ತು ಮತ್ತು ಭಗವದ್ಗೀತೆ ನಿತ್ಯ ಪಾರಾಯಣ ಗ್ರಂಥಗಳಾಗಿದ್ದುವು. ಇಂಥ ಋಷ್ಯಶೃಂಗನಿಗೆ ಗುಹ್ಯ ರೋಗ? ಮಡಿಕೇರಿಗೆ ಹೋದೆ, ಚಿಕ್ಕಪ್ಪನವರ ಜೊತೆ ಮನಬಿಚ್ಚಿ ಮಾತಾಡಿದೆ, ಅವರಿತ್ತ ಹೋಮಿಯೋಪತಿ ಮದ್ದು ಸೇವಿಸಿದೆ, ನಳನಿಗಂಟಿದ್ದ ಕಾರ್ಕೋಟಕದಂಶನದಿಂದ ಮುಕ್ತನಾದೆ.

ಲೈಂಗಿಕ ವಿಷಯಗಳು ಗೂಢಾದ್ಗೂಢತರವಾಗಿದ್ದ ಆ ದಿನಗಳಂದು ಹದಿಹರೆಯದ ಮತ್ತು ಲೋಕಜ್ಞಾನವಿಲ್ಲದ ನನ್ನಂಥವರ ಪಾಡು ಏನಾಗಿತ್ತೆಂಬುದನ್ನು ನಿದರ್ಶಿಸಲು ಈ ಅನುಭವವನ್ನು ಉಲ್ಲೇಖಿಸಿದ್ದೇನೆ. ಹಾಸ್ಟೆಲಿನಲ್ಲಿ ಹೆಚ್ಚಾಗಿ ಇದ್ದವರು ಮಲೆಯಾಳಿಗಳು. ಇವರೆಲ್ಲರೂ ನನಗಿಂತ ಹಿರಿಯರು, ಬಲಶಾಲಿಗಳು ಕೂಡ. ಬಾಯಿಯಲ್ಲಿ ಯಾವಾಗಲೂ ಹುಡುಗಿಯರ ವಿಚಾರವೇ, ಅದೂ ಅಶ್ಲೀಲ ಸಂಗತಿಗಳೇ. ರಾತ್ರಿ ತಡವಾಗಿ ಬಂದು ತಮ್ಮ 'ಸಾಹಸ'ಗಳನ್ನು ರಂಗುರಂಗಾಗಿ ಬಣ್ಣಿಸುತ್ತಿದ್ದರು. ಈ 'ಸಾಹಸ' ಕುರಿತು ತೀರ ಮುಗ್ಧನಾಗಿದ್ದ ನಾನು ಪ್ರಾಯ ಸಹಜ ಕುತೂಹಲದಿಂದ ಅದೇನೆಂದು ಅವರ ಪೈಕಿ ಒಬ್ಬನನ್ನು ಪ್ರಶ್ನಿಸಿದೆ.
"ಎಂಟಾಣೆ ನಾಣ್ಯ ಇಟ್ಟುಕೊ. ಇಂದು ರಾತ್ರಿ ನನ್ನ ಜೊತೆ ಬಾ. ನಿನ್ನ ಎಲ್ಲ ಸಂಶಯಗಳೂ ಪರಿಹಾರವಾಗುತ್ತವೆ."

ರಥಬೀದಿಯ ಹೊರಗಿದ್ದ ಯಾವುದೋ ಗಲ್ಲಿಗೆ ಆತ ನನ್ನನ್ನು ಕರೆದೊಯ್ದ. ಒಂದು ನಿಗೂಢ ಗುಡಿಸಲಿನ ಕದ ತಟ್ಟಿದ. ಲಾಂದ್ರದ ಮಂದ ಬೆಳಕಿನಲ್ಲಿ ಪ್ರತ್ಯಕ್ಷವಾದ ಶಾಕಿನಿ ಡಾಕಿನಿಯರನ್ನು ಕಂಡದ್ದೇ ನಾನಲ್ಲಿಂದ ಹೆದರಿ ಪದರಾಡು! ನನ್ನ ಮನದೊಳಗಿನ ಸ್ತ್ರೀಭಯ ತೀವ್ರವಾಗಲು ಈ ಘಟನೆಯೂ ಒಂದು ಕಾರಣ. ನನ್ನನ್ನು ಅಂದು, ೧೭-೧೮ರ ಹರೆಯದಲ್ಲಿ, ಆ ಪಾಪಕೂಪದಿಂದ ಕಾಪಾಡಿದ್ದು ಯಾವ ಶಕ್ತಿ ಎಂದು ಈಗ ವಿಶ್ಲೇಷಿಸಿದರೆ ನನಗೆ ದೊರೆಯುವ ಉತ್ತರ ಒಂದೇ: ಗೃಹಸಂಸ್ಕಾರ, ಸಂಸ್ಕೃತಿ ಮತ್ತು ರಾಮಾಯಣ ಮಹಾಭಾರತಾದಿ ಉದ್ಗ್ರಂಥವಾಚನದಿಂದ ಪಡೆದಿದ್ದ ರುಚಿಶುಚಿತ್ವ.

ಒಟ್ಟಾರೆ ಹೇಳುವುದಾದರೆ ಮಂಗಳೂರಿನಲ್ಲಿಯ ವಿದ್ಯಾರ್ಥಿಜೀವನ ಅಸಹನೀಯವಾಗಿತ್ತು: ಆಹಾರದ ಸಮಸ್ಯೆ, ರಸಾಯನವಿಜ್ಞಾನದ ಶವಭಾರ ಮತ್ತು ಸ್ನೇಹಿತರ ಅಭಾವ. ತರಗತಿಯಲ್ಲಿಯ ಪಾಠ ಮುಗಿದ ಬಳಿಕ ಹಗಲೂ ಇರುಳೂ ರಸಾಯನವಿಜ್ಞಾನ ಮತ್ತು ಇಂಗ್ಲಿಷ್ ವಿಷಯಗಳನ್ನು ಆದ್ಯತೆ ಮೇರೆಗೆ ಓದಿ, ಬರೆದು, ಉರುಹೊಡೆದೆ. ಉಳಿದ ವಿಷಯಗಳೆಲ್ಲವೂ ನನಗೆ ಸುಲಭವಾಗಿದ್ದುವು.

ಇಂಟರ್ಮೀಡಿಯೆಟ್ ಅಂತಿಮ ಪರೀಕ್ಷೆ ದಿನಾಂಕ ೪-೪-೪೪ರಂದು ಮುಗಿದಾಗ ಹೊಸೆದ ಸಾಲುಗಳು:
ನಾಕು ನಾಕುಗಳು ನಾಜೂಕಾಗಿ ಸೇರ್ದಂದು
ಸಾಕುಬೇಕಾಗಿದ್ದ ಜೀವಕ್ಕೆ ನರಕದಿಂ
ನಾಕಲೋಕಕ್ಕೆ ಉತ್ತಾರಣೆಯೊ ಕಾವ್ಯಜ್ಞ!

ಗೃಧ್ರಾಲಿಂಗನದಿಂದ ಪಾರಾದ ಪಕ್ಷಿ
ಅಧ್ಯಾಯ ಹದಿನೈದು

ಫಲಿತಾಂಶ ಬಂದಾಗ ಕೊಡಗಿನ ವಿದ್ಯಾರ್ಥಿಗಳಾಗಿ ನಾವು ಮೂವರು ಮಾತ್ರ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದೆವು: ಒಂದನೆಯ ಸ್ಥಾನ ಕೆ.ಬಿ.ಸುಬ್ಬಯ್ಯನಿಗೂ ಎರಡನೆಯದು ನನಗೂ ಮೂರನೆಯದು ಶೆಣೈಗೂ ಲಭಿಸಿದ್ದುವು. ಆ ದಿನಗಳಂದು ಇಂಟರ್ಮೀಡಿಯೆಟ್ ಪಿಸಿಎಂ ಸಂಯೋಜನೆ ಎಲ್ಲ ಶಿಸ್ತುಗಳಿಗೂ ನೇರ ಪ್ರವೇಶ ಒದಗಿಸುತ್ತಿದ್ದ ಕೀಲಿಕೈ: ಮೆಡಿಕಲ್, ಎಂಜಿನಿಯರಿಂಗ್, ಅಗ್ರಿಕಲ್ಚರಲ್, ಬಿಎ ಮತ್ತು ಬಿಎ (ಆನರ್ಸ್) ಮುಂತಾದ ಅಧ್ಯಯನಶಾಖೆಗಳಿಗೆ.

ಇಂದಿನವರಂತೆ, ಅಥವಾ ತುಸು ಹೆಚ್ಚಾಗಿ, ಅಂದಿನ ನಮ್ಮೆಲ್ಲರ ಆಶಯವಿದ್ದುದು ಎಂಜಿನಿಯರಿಂಗ್‌ಗೆ ಸೇರಬೇಕು, ಹಿರಿಹುದ್ದೆ ಹಿಡಿಯಬೇಕು, ತೋರ ಸಂಬಳ ಗಳಿಸಬೇಕು ಮತ್ತು ಸುಖಜೀವನ ಬಾಳಬೇಕು ಎಂಬ ಘನಸಾಧನೆಯತ್ತ ಮಾತ್ರ. ಕೊಡಗಿನ ಅರ್ಹ ವಿದ್ಯಾರ್ಥಿಗಳಿಗೆ ಮದ್ರಾಸಿನ ಸರ್ಕಾರೀ ಎಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ತಲಾ ಒಂದು ಸ್ಥಾನ ಮೀಸಲಿತ್ತು. ನಾವು ಮೂವರೂ ಉಭಯ ಕಾಲೇಜುಗಳಿಗೂ ಕೊಡಗಿನ ಚೀಫ್ ಕಮಿಶನರ್ ಮೂಲಕ ಅರ್ಜಿ ಸಲ್ಲಿಸಿದೆವು. ಸುಬ್ಬಯ್ಯ ಬಿಟ್ಟ ಸ್ಥಾನ ನನಗೆ ದೊರೆಯುವುದು ಖಾತ್ರಿ ಎಂಬುದು ನನ್ನ, ಮಿಗಿಲಾಗಿ ತಂದೆಯವರ, ದೃಢ ವಿಶ್ವಾಸ. ಆದರೆ ಹೂರಣ ಹೊರಬಿದ್ದಾಗ ಕಾಲ ಮಿಂಚಿತ್ತು: ಸುಬ್ಬಯ್ಯನಿಗೆ ಆತ ಇಷ್ಟಪಟ್ಟ ಎಂಜಿನಿಯರಿಂಗಿಗೆ ಪ್ರವೇಶ ದೊರೆತಿತ್ತು. ನನಗೂ ಶೆಣೈಗೂ ತೊಪ್ಪಿ: ಸಸ್ಯವಿಜ್ಞಾನ ಬಿಎಸ್‌ಸಿಯಲ್ಲಿ ಅನುತ್ತೀರ್ಣಳಾಗಿದ್ದ ತಮ್ಮ ನೆಂಟಿತ್ತಿಯನ್ನು ಚೀಫ್ ಕಮಿಶನರ್ ಮೆಡಿಕಲ್‌ಗೆ ಆಯ್ದಿದ್ದರು. ನ್ಯಾಯಾಲಯದ ಕಟ್ಟೆ ಏರುವ ದಿನಗಳು ಅವಲ್ಲ. ಜೊತೆಗೆ ನನ್ನಪ್ಪ ಸರ್ಕಾರೀ ನೌಕರ ಕೂಡ.

ಆಗ ನನ್ನೆದುರು ಇದ್ದುದು ಎರಡೇ ಹಾದಿ: ಮಂಗಳೂರಿಗೆ ಹೋಗಿ ಬಿಎಸ್‌ಸಿ (ಪಿಸಿಎಂ) ತರಗತಿ ಸೇರುವುದು, ಇಲ್ಲವೇ ಮದ್ರಾಸಿಗೆ ತೆರಳಿ ಬಿಎ(ಆನರ್ಸ್) ಭೌತ ಅಥವಾ ಗಣಿತವಿಜ್ಞಾನ ವಿಭಾಗಕ್ಕೆ ದಾಖಲಾಗುವುದು. ಆ ವೇಳೆಗೆ ಮಂಗಳೂರು ಮತ್ತು ರಸಾಯನವಿಜ್ಞಾನ ಎರಡೂ ನನ್ನ ಪ್ರಥಮವೈರಿಗಳಾಗಿದ್ದುವು. ಹೀಗಾಗಿ ಮದ್ರಾಸಿನ ಲಯೋಲಾ ಮತ್ತು ಕ್ರಿಶ್ಚಿಯನ್ ಕಾಲೇಜುಗಳಿಗೆ ಭೌತವಿಜ್ಞಾನ ಆನರ್ಸ್‌ಗೆ ಅರ್ಜಿ ಗುಜರಾಯಿಸಿದೆ. ಉಭಯ ಕಾಲೇಜುಗಳಲ್ಲಿಯೂ ಭೌತವಿಜ್ಞಾನ ವಿಭಾಗಕ್ಕೆ ಸ್ಥಾನ ದೊರೆಯಲಿಲ್ಲ. ಕ್ರಿಶ್ಚಿಯನ್‌ನಲ್ಲಿ ಗಣಿತ ಆನರ್ಸ್‌ಗೆ ಪ್ರವೇಶವೇನೋ ಸಿಕ್ಕಿತು, ಆದರೆ ಹಾಸ್ಟೆಲ್ ಸೌಕರ್ಯ ನಾಸ್ತಿ. ವಾಸಕ್ಕೆ ನೆಲೆ ಎಲ್ಲಿ? ಮದ್ರಾಸು ನಗರದಿಂದ ಸುಮಾರು ೩೫ ಕಿಮೀ ದೂರದ ತಾಂಬರಮ್ ಎಂಬ ಹಳ್ಳಿಯಲ್ಲಿ ನಮ್ಮ ಕಾಲೇಜಿತ್ತು. ಇದೊಂದು ವಿಶಾಲವಾದ ದ್ವೀಪ. ಆವರಣದ ಹೊರಗೆ ಮನೆಗಳು ಇರಲಿಲ್ಲ. ಅಂದ ಮೇಲೆ ನಗರದಲ್ಲಿ ಕೊಠಡಿ ಹಿಡಿದು ದಿನವೂ ಕಾಲೇಜಿಗೆ ಪಯಣಿಸಿ ಶಿಕ್ಷಣ ಮುಂದುವರಿಸುವುದೊಂದೇ ಮಾರ್ಗ. ಆದರೆ ಇದು ಆರ್ಥಿಕವಾಗಿ ಕೈಗೂಡದ ಸಾಹಸ. ಹೀಗಾಗಿ ಕಾಲೇಜಿನ ಭವ್ಯ ಕಟ್ಟಡದ ಹೊರ ಜಗಲಿಯನ್ನೇ ನನ್ನ ಶಯನಮಂದಿರ ಮತ್ತು ಅಧ್ಯಯನ ಕೊಠಡಿಯಾಗಿ ಮಾಡಿಕೊಂಡೆ. ಹಾಸ್ಟೆಲ್ಲಿನಲ್ಲಿ ಸ್ನಾನಾಹಾರಾದಿಗಳನ್ನು ಪೂರೈಸಿ ತರಗತಿಗಳಿಗೆ ಹಾಜರಾಗುತ್ತಿದ್ದೆ. ಇದೊಂದು ರೀತಿಯ ಗುಟ್ಟಿನ ವ್ಯವಹಾರ, ನನ್ನ ನೆರಳಿಗೇ ನಾನು ಅಂಜುತ್ತಿದ್ದ ಸನ್ನಿವೇಶ. ಇನ್ನು ತರಗತಿಗಳಲ್ಲಿಯ ಪಾಠ ಚೂರೂ ನನಗೆ ಅರ್ಥವಾಗುತ್ತಿರಲಿಲ್ಲ. ಅಧ್ಯಯನ ಬಿಟ್ಟು ಊರಿಗೆ ಮರಳಲೇ? ಕಾಫ಼ೀ ತೋಟದಲ್ಲಿ ಗುಮಾಸ್ತಿಕೆಯೊಂದೇ ಗತಿ. ಎಸ್‌ಎಸ್‌ಎಲ್‌ಸಿಯಲ್ಲಿ ನನಗೆ ಪ್ರಥಮ ಸ್ಥಾನ ಬಂದಿದ್ದುದರಿಂದ ಇಂಟರ್ಮೀಡಿಯೆಟ್ ತರಗತಿಗಳಲ್ಲಿ ಪ್ರತಿ ತಿಂಗಳೂ ಕೊಡಗು ಸರ್ಕಾರದಿಂದ ರೂ ೧೫ ವಿದ್ಯಾರ್ಥಿ ವೇತನ ದೊರೆಯುತ್ತಿತ್ತು. ಡಿಗ್ರಿ ತರಗತಿಗಳಿಗಾಗುವಾಗ ಇದು ರೂ ೨೦ಕ್ಕೆ ಏರಿತ್ತು. ಇದೇನೂ ಸಣ್ಣ ಮೊತ್ತವಲ್ಲ -- ಅಂದು- ಒಂದು ತಿಂಗಳ ಆಹಾರಕ್ಕೆ ಸಾಕಾಗುತ್ತಿತ್ತು. ವಾರ್ಡನ್‌ರನ್ನು ಅಂಜಿ ಅಳುಕಿ ಕಂಡು ನನ್ನ ದಾರುಣ ಪರಿಸ್ಥಿತಿಯನ್ನು ವಿವರಿಸಿ ಹಾಸ್ಟೆಲ್ಲಿನೊಳಗೆ ಸ್ಥಳಾವಕಾಶ ಕೊಡಿರೆಂದು ಬೇಡಿದೆ.
"ಈಗ ಎಲ್ಲಿ ವಾಸಿಸುತ್ತಿರುವೆ?" ಎಂಬ ಅವರ ತೀಕ್ಷ್ಣ ಪ್ರಶ್ನೆಗೆ ಸತ್ಯವನ್ನೇ ನುಡಿದೆ. ಅವರ ಪ್ರತಿಕ್ರಿಯೆ ತೀವ್ರ, "ತಿರುಕರಿಗೆ ನಮ್ಮ ಕಾಲೇಜಿನಲ್ಲಿ ನೆಲೆ ಇಲ್ಲ. ನೀನು ತತ್‌ಕ್ಷಣ ಕಾಲೇಜ್ ಆವರಣದ ಹೊರಗೆ ಬೇರೆ ಕೊಠಡಿ ಹಿಡಿದು ಬಂದು ನನಗೆ ತಿಳಿಸಬೇಕು. ಇಲ್ಲವಾದರೆ ಕಾಲೇಜ್ ಬಿಟ್ಟು ತೊಲಗಬೇಕು."

ಆ ಸಂಜೆ ಕಾಲೇಜ್ ಆವರಣದಲ್ಲಿಯ ಮರಗಾಡಿಗೆ ಹೋದೆ, ದೊಡ್ಡ ಮರದಡಿ ಒಂಟಿಯಾಗಿ ಕುಳಿತೆ, ಮುಂದೇನು, ಕರಾಳ ಕತ್ತಲೆ ಎಂಬ ಚಿಂತೆಯಿಂದ ಬಾಧಿತನಾಗಿದ್ದೆ. ಆಗೊಂದು ಪವಾಡಸದೃಶ ಘಟನೆ ಸಂಭವಿಸಿತು. ನನ್ನ ಮರದೆಡೆಗೆ ದೂರದಲ್ಲಿ ಯಾರೋ ಬರುತ್ತಿದ್ದರು, ಇಲ್ಲ, ಬಂದೇ ಬಿಟ್ಟರು. ಇಬ್ಬರಿಗೂ ಪರಮಾಶ್ಚರ್ಯ, "ಏನು ಜೀಟಿ ನೀವಿಲ್ಲಿ?" ಅವರ ಪ್ರಶ್ನೆ ಕನ್ನಡದಲ್ಲಿ! "ನೀವೇನಿಲ್ಲಿ ದೇವರಾವ್?" ನನಗಂತೂ ನಂಬಲಾಗದ ಅನುಭವವದು. ಮಂಗಳೂರಿನಲ್ಲಿ ಇದ್ದದ್ದು ಕೇವಲ ಮುಖ ಪರಿಚಯ. ಆದರೆ ಬದಲಾದ ಈ ಪರಕೀಯ ಪರಿಸರದಲ್ಲಿ ನಾವಿಬ್ಬರೂ ಚಿರಕಾಲದಿಂದಲೂ ಆತ್ಮೀಯ ಮಿತ್ರರೋ ಎಂಬಂತೆ ಮನಬಿಚ್ಚಿ ಹರಟೆ ಹೊಡೆದೆವು. ಅವರು ಸ್ವಂತ ಇಷ್ಟದಿಂದ ಸಕಾಲದಲ್ಲಿ ಕ್ರಿಶ್ಚಿಯನ್ ಕಾಲೇಜಿನ ಇಂಗ್ಲಿಷ್ ಆನರ್ಸ್ ವಿಭಾಗ ಸೇರಿದ್ದರು, ಹಾಸ್ಟೆಲ್‍ನಲ್ಲಿ ಕೊಠಡಿಯೂ ದೊರೆತಿತ್ತು. ನನ್ನ ಪರಿಸ್ಥಿತಿ ತದ್ವಿರುದ್ಧ.

"ಮುಂದೇನು ಮಾಡಬೇಕೆಂದು ಯೋಚಿಸಿದ್ದೀರಿ?" ಅವರ ಪ್ರಶ್ನೆ.
"ಊರಿಗೆ ಮರಳುವುದು. ಮತ್ತೇನೆಂಬುದು ತಿಳಿಯದು."
"ನಿಮ್ಮ ಸಹಪಾಠಿ ಈ ದೇವರಾಯ ಇನ್ನೂ ಬದುಕಿದ್ದಾನೆ!" ನಾನು ಬೆರಗಾಗಿ ಅವರ ಮೋರೆ ದಿಟ್ಟಿಸಿದೆ. ಅವರು ಆದೇಶಿಸಿದರು, "ಈ ಕ್ಷಣ ಏಳಿ, ನಿಮ್ಮ ಎಲ್ಲ ಸರಂಜಾಮುಗಳನ್ನು ತೆಗೆದುಕೊಂಡು ಬನ್ನಿ, ಒಂದನೆಯ ಮಾಳಿಗೆಯಲ್ಲಿರುವ ನನ್ನ ಒಂಟಿ ಕೊಠಡಿ ಸಾಕಷ್ಟು ದೊಡ್ಡದಾಗಿದೆ, ಅದರೊಳಗೆ ಮಡಗಿ, ಮತ್ತೇನು ಮಾಡಬೇಕೆಂಬುದನ್ನು ಯೋಚಿಸೋಣ, ನೀವು ಯಾವುದೇ ಕಾರಣಕ್ಕೂ ಊರಿಗೆ ಮರಳತಕ್ಕದ್ದಲ್ಲ."
ಎದ್ದೆವು. ಇಬ್ಬರೂ ಸೇರಿ ನನ್ನ ಗಂಟು ಮೂಟೆಗಳನ್ನು ಅವರ ಕೊಠಡಿಗೆ ಸಾಗಿಸಿದೆವು. ಅಷ್ಟರಲ್ಲಿ ಕತ್ತಲೆ ಕವಿದಿತ್ತು. ರಾತ್ರಿ ೮ ಗಂಟೆಗೆ ಹಾಸ್ಟೆಲ್ ದ್ವಾರವನ್ನು ಬಂದ್ ಮಾಡುತ್ತಿದ್ದರು. ಆ ಮೊದಲೇ ಹಕ್ಕಿಗಳು (ಹಾಸ್ಟೆಲ್ ನಿವಾಸಿಗಳು) ಗೂಡು ಸೇರಿ ಊಟ ಮುಗಿಸಿ, ತಮ್ಮ ಕೊಠಡಿ ಕದ ತೆರೆದಿಟ್ಟು ಅಧ್ಯಯನಮಗ್ನರಾಗಬೇಕಿತ್ತು, ಒಳಗಿದ್ದ ಅತಿಥಿಗಳು ನಿರ್ಗಮಿಸಲೇಬೇಕಿತ್ತು. ವಾರ್ಡನ್ ಮಹಾಶಯರು ೮–೧೫ರಿಂದ ೮–೩೦ರ ನಡುವೆ ಪ್ರತಿಯೊಂದು ಕೋಣೆಯನ್ನೂ ಪರೀಕ್ಷಿಸಿ ತಪಾಸಿಸುತ್ತಿದ್ದರು. ಹಾಗಾದರೆ ಅವರ ತಪಾಸಣೆಯಿಂದ ನಾನು –– ನಿಯಮವಿರುದ್ಧವಾಗಿ ಹಾಸ್ಟೆಲಿನೊಳಗಿರುವ ಆಗಂತುಕ –– ಪಾರಾಗುವುದು ಹೇಗೆ?
ನಾನೆಂದೆ, "ನನ್ನಿಂದಾಗಿ ನಿಮಗೆ ವೃಥಾ ತೊಂದರೆ."
"ನಿಮಗೆ ವ್ಯವಹಾರಜ್ಞಾನವೇನೂ ಇಲ್ಲ! ನೋಡಿ, ಇದು ಮನುಷ್ಯಕೃತ ನಿಯಮ, ಆದರೆ ಮನುಷ್ಯವಿರೋಧಿ. ನಾವಿದನ್ನು ಉಲ್ಲಂಘಿಸಿದರೆ ಅದೇನೂ ನೈತಿಕ ಅಪರಾಧವಾಗುವುದಿಲ್ಲ." ಅವರೇ ನನಗೊಂದು ಸುಲಭೋಪಾಯ ಸೂಚಿಸಿದರು. ಹಿಮಾಲಯಭಾರ ಆ ಗಳಿಗೆ ಮಲ್ಲಿಗೆಹಗುರವಾಗಿ ನಿರುಮ್ಮಳನಾದೆ.

ರಾತ್ರಿ ೮ ಗಂಟೆಗೆ ಮೊದಲೇ ಕೋಣೆ ಬಿಟ್ಟೆ, ನಿರ್ಮಲಮಂದಿರ (lavatory) ಹೊಕ್ಕೆ, ನಿಶ್ಶಬ್ದದಲ್ಲಿ ತಪಸ್ಸ್ವಾಧ್ಯಾಯನಿರತನಾದೆ! ವಾರ್ಡನ್–ತಪಾಸಣೆ ಮುಗಿದನಂತರ ದೇವರಾಯರು ಪೂರ್ವನಿಶ್ಚಿತ ಏರ್ಪಾಡಿನಂತೆ ಅಲ್ಲಿಗೆ ಬಂದು ಕದತಟ್ಟುತ್ತಿದ್ದರು, ನಾನು ಹೊರಬಂದು ಕೊಠಡಿ ಸೇರಿ ಕದಮುಚ್ಚಿ ಇಬ್ಬರೂ ಅಧ್ಯಯನಮಗ್ನರಾಗುತ್ತಿದ್ದೆವು. ಮಲಗಲು ನಾನು ಟಾರ್ಸಿಗೆ (open terrace) ಹೋಗುತ್ತಿದ್ದೆ. ಹಸಿವಿಗೆ ಹಾಸ್ಟೆಲ್ ಮೆಸ್, ತೃಷೆಗೆ ಕೊಳಾಯಿ, ಶಯನಕೆ ಟಾರ್ಸಿ, ಮಾಡಿಗೆ ಆಗಸ, ದೇವರಾಯರಲ್ಲಿ ಕೃಪಾಶ್ರಯ ಈ ಪ್ರಕಾರ ನನ್ನ ಆ ಕಠಿಣ 'ಭೂಗತ' ದಿನಗಳು ಸಂದುವು? ಇಲ್ಲ.

ಆ ಒಂದು ಕರಾಳ ರಾತ್ರಿ, ಹೊತ್ತಲ್ಲದ ಹೊತ್ತಿಗೆ ಹೊರಗಿನ ಜಗಲಿಯಲ್ಲಿ ದುಷ್ಮನ್ ದೃಢ ಹೆಜ್ಜೆ ಕುಕ್ಕಿ ನಮ್ಮ ಕೊಠಡಿಯತ್ತ ಬರುತ್ತಿದ್ದುದು ಕೇಳಿ ನಡುಗಿದೆವು. ಕದ ಮುಚ್ಚಿ ಓದುತ್ತಿದ್ದೆವಾದರೂ ವಾರ್ಡನ್ ಬಂದು ತೆರೆಯಲು ಆಜ್ಞೆ ಮಾಡಿದರೆ ನನಗೆಲ್ಲಿ ರಕ್ಷಣೆ, ಮಿಗಿಲಾಗಿ, ನನ್ನ ಆಶ್ರಯದಾತನ ಗತಿ ಏನು? ಯಮನ ಕಠೋರ ವಾಣಿ ನಮ್ಮ ಬೆನ್ನೆಲುಬುಗಳನ್ನು ನಡುಗಿಸಿದುವು, ``Deva Rao! Open the door.''
ಇನ್ನೇನು ನಾವಿಬ್ಬರೂ ಬಲೆಗೆ ಬೀಳುವುದು ಖಾತ್ರಿ? ಆ ಗಳಿಗೆ ದೇವರಾಯರೇನೋ ಕೈಕರಣಮಾಡಿ ನನಗೊಂದು ಗುಪ್ತ ಸಂದೇಶವಿತ್ತರು, ಮತ್ತು ಕದ ತೆರೆಯಲು ತುಸು ನಿಧಾನವಾಗಿ ಹೋದರು.
ವಾರ್ಡನ್ ಗುಡುಗಿದರು, ``Why so much time? What were you doing?''

``I was immersed in my studies, sir.''
``Where 's the other person?''
``Who? I'm alone here.''
``Are you sure?''

``Of course what doubt is there, sir?''
``Well! Deva Rao. I believe you. Others had told me that you were harbouring someone else. You know that is illegal. We could just dismiss you from the college itself for such an offence.''

ಅಷ್ಟು ಹೊತ್ತೂ ನಾನೆಲ್ಲಿದ್ದೆ? ಒಂದನೆಯ ಮಾಳಿಗೆಯಲ್ಲಿದ್ದ ನಮ್ಮ ಕೋಣೆಯ ಕಿಟಕಿಗೆ ಸರಳುಗಳಿರಲಿಲ್ಲ. ದೇವರಾವ್ ಸೂಚಿಸಿದ ಹಿಕಮತ್ತಿನಂತೆ ನಾನು ಆ ಮುಕ್ತ ಗವಾಕ್ಷಿಯ ಮೂಲಕ ನುಸುಳಿ, ಹೊರಗಿನ ಕೆಳಚೆಜ್ಜಾದ ಮೇಲೆ ತಂಪು ಗಾಳಿಗೆ ಮೈಯೊಡ್ಡಿ ಮುದುಡಿ ಅಸುಖಾಸನನಾಗಿದ್ದೆ. ಆದರೆ ನನ್ನ ಸ್ಥಿತಿ ಮಾತ್ರ "ನೀರೊಳಗಿರ್ದುಂ ಬೆಮರ್ದನ್" ಎಂಬಂತಿತ್ತು.
ಸದ್ಯಕ್ಕೆ ಬಚಾವ್. ಆದರೆ ಬಲು ಬೇಗನೆ ವಾರ್ಡನ್ ನಮ್ಮ 'ಕಾರಸ್ಥಾನ'ವನ್ನು ಪತ್ತೆ ಹಚ್ಚುವುದು ಖಾತ್ರಿ. ಆಗ ದೇವರಾಯರ ಸ್ಥಿತಿ ನೆನೆದು ನಡುಗಿದೆ. ಮರುದಿನ ತಾಂಬರಮಿನ ಬಹುತೇಕ ನಿರ್ಜನ ಆದರೆ ಹಂದಿ, ಕೋಳಿ, ಕತ್ತೆ, ದನಗಳ ರೊಪ್ಪಗಳಂತಿದ್ದ ಗುಡಿಸಲುಗಳ ಹಿಂಡಿನಲ್ಲಿ ಒಂದು ಖೋಲಿ ಹಿಡಿದೆ. ರಾತ್ರಿ ವಾಸ ಮಾತ್ರ ಅಲ್ಲಿ. ಆಹಾರ, ಸ್ನಾನ, ಅಧ್ಯಯನ ಎಲ್ಲವೂ ಕಾಲೇಜ್ ವಲಯದಲ್ಲಿ. ನಿಜ, "ಅಲ್ಲಿದೆ ನನ್ನ ಮನೆ, ಇಲ್ಲಿ ಬಂದೆ ಸುಮ್ಮನೆ!" ಜೊತೆಗೆ, "ಅಂಜಿಕಿನ್ಯಾತಕಯ್ಯಾ ಸಜ್ಜನರಿಗೆ, ಅಂಜಿಕಿನ್ಯಾತಕಯ್ಯಾ?"

ಸರಿ, ಸದ್ಯಕ್ಕೇನೋ ದೊಣ್ಣೆ ಬೀಸಿನಿಂದ ಪಾರಾಗಿದ್ದೆ. ಆದರೆ ಕಾಲೇಜಿನ ಪಾಠ ಪ್ರವಚನಗಳಲ್ಲಿ ನಾನು ಪೂರ್ತಿ ಸೋತಿದ್ದೆ: ಅನನುಭವಿ ಯುವ ಉಪನ್ಯಾಸಕರು ಬೇಕಾಬಿಟ್ಟಿ ತರಗತಿಗೆ ಬಂದು ಯಾಂತ್ರಿಕವಾಗಿ (ಪಠ್ಯ ಪುಸ್ತಕ ನೋಡುತ್ತ) ಏನನ್ನೋ ಗುನುಗುತ್ತಿದ್ದಾಗ ಯಾವ ಲೆಕ್ಕವೂ ನನ್ನ ತಲೆಗೆ ಹತ್ತುತ್ತಲೇ ಇರಲಿಲ್ಲ. ಆಗ ಗೀಚಿದ ಕಗ್ಗಗಳು ಕೆಲವು ನೆನಪಿವೆ (ಮುಂದೊಂದು ದಿನ ನಾನೇ ಯುವ ಅನನುಭವಿ ಉಪನ್ಯಾಸಕನಾಗಿದ್ದಾಗ ನನ್ನ ವಿದ್ಯಾರ್ಥಿಗಳನ್ನು ರಂಜಿಸಲು ಇವನ್ನು ಉಲ್ಲೇಖಿಸುವುದಿತ್ತು):
ನಿದ್ದೆ ಬರುತಿದೆ ಪಾಠ ಕೇಳಲು
ಬುದ್ಧಿಯೆಲ್ಲವು ಮಂದವಾಗಿದೆ
ಸದ್ದ ಕಿವಿಗಳು ಕೇಳಲೊಲ್ಲವು ಕರದ ಲೆಕ್ಕಣಿಕೆ
ಉದ್ಯಮದಿ ತೊಡಗಿರದು ಕಣ್ ತೆರೆ–
ದಿದ್ದರೂ ವಸ್ತುಗಳ ನೋಡದು
ಬದ್ಧ ವೈರಿಗು ಬೇಡವಿಂತಹ ಶಿಕ್ಷೆ ಹಾದೇವಟಟ

ಲೆಕ್ಚರರು ಭರದಿಂದ ಪಾಠವ–
ನುಚ್ಚರಿಸುತಿರಲಗಲಮಾಗಿಯೆ
ಬಿಚ್ಚಿ ಕಂಗಳು ನೋಡುವುವು ಅವರನ್ನು ಮನಮಾತ್ರ
ಇಚ್ಛೆ ಬಂದೆಡೆಗೋಡಿ ಕಾಲವ
ವೆಚ್ಚಗೈವುದು ಪ್ರಶ್ನೆ ಕೇಳ್ದೊಡೆ
ಬೆಚ್ಚಿ ಬೀಳುತ ಏನನಾದರು ಗಳಹತೊಡಗುವುದುಟಟ

ಲೆಕ್ಕವನು ಕಲಿಯುವುದರಲಿ ನನ–
ಗಕ್ಕರೆಯು ರವೆಯಷ್ಟು ಬಾರದು
ನಕ್ರಪೂರಿತ ಮಡುವಿದರೊಳಗೆ ತಳ್ಳಿ ನನ್ನನ್ನು
ನಕ್ಕು ನಲಿದಿದೆ ದುರುಳ ವಿಧಿ ಹಾ
ದಕ್ಕದೆನಗೀ ದೊಂಬರಾಟವು
ಬಿಕ್ಕೆ ಬೇಡುತ ಹೊಟ್ಟೆ ಹೊರೆವೆನು ಕರುಣಿಸೈ ದೇವಾ!ಟಟ

ನಮ್ಮ ಅಸ್ಮಿತೆಗೆದುರಾದ ಸವಾಲು
ಅಧ್ಯಾಯ ಹದಿನಾರು



ಇಂಗ್ಲಿಷ್ ಆನರ್ಸ್ ತರಗತಿಯಲ್ಲಿ ಗುರುಮೂರ್ತಿ ಎಂಬ ತೆಲುಗು ಮನೆಮಾತಿನ ಅಪ್ಪಟ ತಮಿಳ ದೇವರಾಯರ ಸಹಪಾಠಿ ಮಿತ್ರ. ಹೀಗಾಗಿ ನನಗೂ ಸ್ನೇಹಿತನಾದ. ನಾವು ಮೂವರೂ ಆ ದಿನಗಳಂದು ತಾಂಬರಂ ಸುತ್ತುಮುತ್ತಲಿನ ಗುಡ್ಡ ಬೆಟ್ಟ ತೆಮರು ಗದ್ದೆ ಎಲ್ಲ ಅಲೆದದ್ದೂ ಅಲೆದದ್ದೇ. ಆಗ ನಮ್ಮೊಳಗೆ ಬಹಳವಾಗಿ ಚರ್ಚಿತವಾಗುತ್ತಿದ್ದ ವಿಷಯ ದೇವರು, ಧರ್ಮ, ಆಚರಣೆ ಮತ್ತು ಪೂಜೆ. ಕರ್ಮಠ ಬ್ರಾಹ್ಮಣ ಸಂಪ್ರದಾಯದ ಶಿಶುವಾದ ನಾನು ಆ ವೇಳೆಗೆ (ಪ್ರಾಯ ೧೮) ಬಹುತೇಕ ಉದಾಸೀನನಾಗಿದ್ದೆ, ನಿರೀಶ್ವರತೆಯತ್ತ ವಾಲುತ್ತಿದ್ದೆ, "ದಯೆಯೇ ಧರ್ಮದ ಮೂಲವಯ್ಯಾ" ಎನ್ನುವ ತತ್ವದಿಂದ ಆಕರ್ಷಿತನಾಗಿದ್ದೆ. ಈ ಬಗ್ಗೆ ಯಾವುದೇ ಸಿದ್ಧಾಂತ ಅಥವಾ ತರ್ಕ ತಿಳಿದಿರಲಿಲ್ಲ. ಗುರುಮೂರ್ತಿ ಪೂರ್ತಿ ನಿರುದ್ವಿಗ್ನ, ನಿಶ್ಚಿಂತ. ದೇವರಾರಾಯರಾದರೋ ಉಗ್ರ ಭಗವಂತವೈರಿ, "ಚೂಟಿ ಮಂದಿ ಸ್ವಾರ್ಥಸಾಧನೆಗಾಗಿ ದೇವರೆಂಬ ಕಲ್ಪನೆಯನ್ನು ಹುಟ್ಟುಹಾಕಿ ಅದರ ಸುತ್ತ ಧರ್ಮ, ಆಚರಣೆ ಮುಂತಾದ ಭದ್ರ ಬೇಲಿ ಕಟ್ಟಿದ್ದಾರೆ. ನಾನಂತೂ ಶತ ನಾಸ್ತಿಕ. ಯೋಗ್ಯ ವ್ಯಕ್ತಿಯಾಗಿರಬೇಕೆಂಬುದೇ ನನ್ನ ಸಂಕಲ್ಪ ಮತ್ತು ಪ್ರಯತ್ನ." ಹೀಗೆ ಗುರುಮೂರ್ತಿ ಮತ್ತು ನನ್ನ ಅಸ್ಪಷ್ಟ ಚಿಂತನೆಗೆ ದೇವರಾವ್ ಖಚಿತ ಮುಖವಾಣಿ ಆಗಿದ್ದರು.

ಕಾಲೇಜಿನ ಮೊದಲನೇ ಆನರ್ಸ್ ತರಗತಿಯಲ್ಲಿ ವಾರಕ್ಕೊಂದು ಸಲ ಎಲ್ಲ ವಿಭಾಗಗಳವರೂ ಒಂದೇ ಉಪನ್ಯಾಸ ಕೊಠಡಿಯಲ್ಲಿ ಸೇರುತ್ತಿದ್ದೆವು – ಸುಮಾರು ೨೦೦ ಮಂದಿ. ಕ್ರಿಶ್ಚಿಯನ್ ಧಾರ್ಮಿಕ ಬೋಧನೆಯ ತರಗತಿಯದು, ಹೆಸರು ಮಾತ್ರ Moral Instruction (MI), ನಮ್ಮ ಪರಿಭಾಷೆಯಲ್ಲಿ Immoral Mortification (IM). ಈ ವಿಷಯ ಕುರಿತಂತೆ ನಾವೊಂದು ಆಂತರಿಕ ಪರೀಕ್ಷೆಯನ್ನೂ ಕಡ್ಡಾಯವಾಗಿ ತೆಗೆದುಕೊಳ್ಳಬೇಕಿತ್ತು. ಸದ್ಯ ಯಾರನ್ನೂ ಅನುತ್ತೀರ್ಣಗೊಳಿಸುತ್ತಿರಲಿಲ್ಲ. ಆದರೆ ಸರಾಸರಿಯಲ್ಲಿ ಅಧಿಕ ಅಂಕ ಗಳಿಸಿದವರಿಗೆ ಆಕರ್ಷಕ ಬಹುಮಾನವೀಯುತ್ತಿದ್ದರು. ಕ್ರಿಶ್ಚಿಯನ್ ಧರ್ಮಶಾಸ್ತ್ರದಲ್ಲಿ ಡಾಕ್ಟೊರೇಟ್ ಗಳಿಸಿದ್ದ ವಾರ್ಡನ್ ಮಹಾಶಯರು ನಮ್ಮ ಉಪನ್ಯಾಸಕರು. ಇವರಿಗೆ ರೆವರೆಂಡ್ ಎಂಬ ಬಿರುದು ಕೂಡ ಇತ್ತು.
ಆ ತರಗತಿಯಲ್ಲಿಯ ಪಾಠವಸ್ತು ಬೈಬಲ್, ವಿವರಣೆಯ ಧಾಟಿ ಕ್ರಿಶ್ಚಿಯನ್ ಧರ್ಮದ ವೈಭವೀಕರಣ ಮತ್ತು ಹಿಂದೂ ಸಂಪ್ರದಾಯಗಳ ಪರೋಕ್ಷ ನಿಂದನೆ. ವಿದ್ಯಾರ್ಥಿಗಳಲ್ಲಿ ಹೆಚ್ಚಿನವರು ಹಿಂದೂಗಳು. ಸಹಜವಾಗಿ ನಮಗೆಲ್ಲ ತುಂಬ ಇರಸುಮುರಸಾಗುತ್ತಿತ್ತು. ಇಂತಿದ್ದರೂ ತರಗತಿಯಲ್ಲಿ ಬಾಯಿಬಿಡಲು ಅಂಜಿಕೆ, ಸರಕೂ ಇರಲಿಲ್ಲ. ಹೀಗೆ ನಾಲ್ಕೈದು ಪಾಠಗಳು ಸಂದುವು. ಗುರುಮೂರ್ತಿ ಕುದ್ದ, ನಾನು ಕ್ರುದ್ಧ, ಆದರೆ ತರಗತಿಯಲ್ಲಿ ಎದ್ದೇಳಲು ಇಬ್ಬರೂ ಅಸಿದ್ಧ! ನಮ್ಮ ಪ್ರತಾಪವೆಲ್ಲ ಹೊರಗೆ. ದೇವರಾಯರ ಜೊತೆ ವಾದಮಾಡಿದ್ದೇ ಮಾಡಿದ್ದು. ಮೂವರೂ ಬೈಬಲನ್ನು ಪಠಿಸಿ ಅದರ ಸಾರ ಹೀರಲು ಪ್ರಯತ್ನಿಸಿದೆವು.

ಅದೊಂದು ತರಗತಿಯಲ್ಲಿ ಗಳಿಗೆಬಟ್ಟಲು ತುಂಬಿಬಂದಿತ್ತು! ಅಂದಿನ ಪಾಠದಲ್ಲಿ ರೆವರೆಂಡ್ ಮಹಾಶಯರು *Parable of the Sower* ಅಧ್ಯಾಯವನ್ನು ಓದಿ ವಿವರಿಸಲು ತೊಡಗಿದರು: And that which fell among thorns are they, which when they have heard, go forth, and are choked with cares and riches and pleasures of *this* life, and bring no fruit to perfection (St Luke VIII 14).
ಇದರಲ್ಲಿಯ thorn ಮತ್ತು they ಪದಗಳ ಮೇಲೆ ವ್ಯಾಖ್ಯಾನ ಮಾಡುತ್ತ ಇತರ ಧರ್ಮೀಯರ ನಂಬಿಕೆ ಆಚರಣೆಗಳ ವಿರುದ್ಧ ನೇರ ವಾಗ್ದಾಳಿ ಮಾಡಿದರು. ನಾವೆಲ್ಲ ಪಿಳಿಪಿಳಿ, ಆದರೆ ದೇವರಾಯರು ಅಪವಾದ.

ಅವರೆದ್ದರು, ಬೈಬಲಿನ ಆ ಅಧ್ಯಾಯದ ಪೂರ್ಣ ಪಾಠವನ್ನು ನೆನಪಿನಿಂದಲೇ ಹೇಳಿ ಅದರ ವಾಚ್ಯ, ಸೂಚ್ಯ ಮತ್ತು ಧ್ವನಿತ ಅರ್ಥಗಳನ್ನು ಸೌಮ್ಯವಾಗಿ ಮತ್ತು ರೆವರೆಂಡರಿಗಿಂತ ಸ್ಫುಟವಾಗಿ ವಿವರಿಸಿದರು! ರೆವರೆಂಡರಿಗೆ ಪರೋಕ್ಷ ಮುಖಪ್ರಕ್ಷಾಳನೆ. ಅವರು, "ಹಾಗೆಯೂ ವ್ಯಾಖ್ಯಾನಿಸಬಹುದು" ಎನ್ನುತ್ತ ಹಠಾತ್ತನೆ ನಿಷ್ಕ್ರಮಿಸಿಯೇಬಿಟ್ಟರು. ನಮಗೆಲ್ಲ ಖುಷಿಯೋ ಖುಷಿ. ಪರಧರ್ಮ ದೂಷಣೆ ಖಂಡನೆ ನಿಂದನೆಗಳೇ ಸ್ವಧರ್ಮ ಸ್ಥಾಪನೆ ಸ್ಥಿರೀಕರಣಗಳ ಮೂಲವಾಗಿರಬಹುದೇ?

ವಿಮೋಚನೆ ಮತ್ತು ನಿರ್ಮೋಚನೆ
ಅಧ್ಯಾಯ ಹದಿನೇಳು

ಅಂದು ಮದ್ರಾಸಿನಲ್ಲಿದ್ದುದು ಕೇವಲ ನಾಲ್ಕು ಪುರುಷರ ಕಾಲೇಜುಗಳು: ಪ್ರೆಸಿಡೆನ್ಸಿ, ಪಚ್ಚಯ್ಯಪ್ಪ, ಲಯೊಲಾ ಮತ್ತು ಕ್ರಿಶ್ಚಿಯನ್. ವಿದ್ಯಾರ್ಥಿಗಳ ಪರಿಭಾಷೆಯಲ್ಲಿ ಇವು Princes of Presidency, Rowdies of Pachhayyappa's, Slaves of Loyola and Gentlemen of Christian. ೧೯೪೪-೪೫ರ ಶಿಕ್ಷಣವರ್ಷ ಮುಗಿಯುವ ವೇಳೆಗೆ ನಾನು ಉಳಿದ ಮೂರೂ ಕಾಲೇಜುಗಳ ಪಾಠಪ್ರವಚನ ಮತ್ತು ಹಾಸ್ಟೆಲ್ ಸೌಕರ್ಯ ಕುರಿತು ಸಾಕಷ್ಟು ಮಾಹಿತಿ ಸಂಗ್ರಹಿಸಿದ್ದೆ. ಈ ಪೈಕಿ ಪರೀಕ್ಷೆ ಮತ್ತು ಹಾಸ್ಟೆಲ್ ದೃಷ್ಟಿಯಿಂದ ಲಯೊಲಾವೇ ಸರ್ವಶ್ರೇಷ್ಠವೆಂಬುದು ಸ್ಪಷ್ಟವಾಗಿತ್ತು. ಇತ್ತ ಕ್ರಿಶ್ಚಿಯನ್ ಕಾಲೇಜಿನಲ್ಲಿ ಮುಂದಿನ ವರ್ಷವಾದರೂ ಹಾಸ್ಟೆಲ್ ಸೌಕರ್ಯ ದೊರೆಯುವ ಬಗ್ಗೆ ಭರವಸೆ ಇರಲಿಲ್ಲ. ಅಂದಮೇಲೆ ಈ ನರಕದಿಂದ ವರ್ಷಾಂತ್ಯದಲ್ಲಿ ವಿಮೋಚನೆ ಪಡೆದು ಎರಡನೆಯ ಮತ್ತು ಮೂರನೆಯ ಆನರ್ಸ್ ತರಗತಿಗಳಿಗೆ ಲಯೊಲಾ ಸೇರುವುದೊಂದೇ ಸರಿಯಾದ ಮಾರ್ಗವೆಂಬ ದೃಢ ನಿರ್ಧಾರಕ್ಕೆ ಬಂದಿದ್ದೆ.

ಲಯೊಲಾದ ಪ್ರಾಂಶುಪಾಲ ರೆವರೆಂಡ್ ಜೆರೋಮ್ ಡಿಸೋಜ಼ಾರನ್ನು ಭೇಟಿಯಾಗಿ ನನ್ನ ಸಮಸ್ಯೆಗಳನ್ನು ವಿವರಿಸಿ ಅವರಲ್ಲಿ ಆಶ್ರಯ ಕೋರಿದೆ. ಹಿಂದೆ ಸಂತ ಅಲೋಶಿಯಸ್ ಕಾಲೇಜಿನಲ್ಲಿ ನಾನು ಇವರ ಅಣ್ಣ ರೆವರೆಂಡ್ ಬರ್ಟ್ರಮ್ ಡಿಸೋಜ಼ಾರ ವಿದ್ಯಾರ್ಥಿ ಆಗಿದ್ದೆನೆಂಬುದನ್ನು ಮನವರಿಕೆ ಮಾಡಿದೆ. ಅವರು ಆಶ್ವಾಸಿಸಿದರು, "ಸರಿ! ನೀನು ಒಂದನೆಯ ಆನರ್ಸ್‌ನಲ್ಲಿ ಉತ್ತೀರ್ಣನಾಗಿ ಕ್ರಿಶ್ಚಿಯನ್‌ನಿಂದ ವರ್ಗಾವಣೆ ಮತ್ತು ನಡತೆ ಶಿಫಾರಸು ಪತ್ರಗಳನ್ನು ತಂದುದಾದರೆ ಇಲ್ಲಿ ಎರಡನೆಯ ಆನರ್ಸ್‌ಗೆ ಮತ್ತು ಹಾಸ್ಟೆಲ್ಲಿಗೆ ಪ್ರವೇಶ ಕೊಡಬಹುದು."

ಅದೇ ಜೂನ್ ವೇಳೆಗೆ ಒಂದನೆಯ ಆನರ್ಸ್ ಫಲಿತಾಂಶ ಪ್ರಕಟವಾಯಿತು. ನಾನು ಮುಳುಗಿರಲಿಲ್ಲ. ಕ್ರಿಶ್ಚಿಯನ್ ಕಾಲೇಜ್ ಪ್ರಾಂಶುಪಾಲ ಅಲೆಗ್ಸಾಂಡರ್ ಜಾನ್ ಬಾಯ್ಡ್‌ರನ್ನು ಭೇಟಿಮಾಡಿ ಒಂದು ಸುಳ್ಳು ಹೇಳಿದೆ, "ನನಗೆ ಗಣಿತ ಆನರ್ಸ್‌ನಲ್ಲಿ ಮುಂದುವರಿಯಲು ಸಾಧ್ಯವಾಗುತ್ತಿಲ್ಲ. ಮಂಗಳೂರಿಗೆ ಹಿಂತಿರುಗಿ ಬಿಎಸ್‌ಸಿಗೆ ದಾಖಲಾಗುತ್ತೇನೆ. ದಯವಿಟ್ಟು ವರ್ಗಾವಣೆ ಮತ್ತು ನಡತೆ ಶಿಫಾರಸು ಕಾಗದಗಳನ್ನು ದಯಪಾಲಿಸಬೇಕು."

ಶುಭಾಶಯಸಹಿತ ಅವರು ನನ್ನನ್ನು ಬೀಳ್ಕೊಟ್ಟರು. ಆಗೇನಾದರೂ ನಾನು ಅವರಿಗೆ ಅಪ್ರಿಯವಾಗಬಹುದಾಗಿದ್ದ ಸತ್ಯ ನುಡಿದಿದ್ದರೆ ನನ್ನ ಭವಿಷ್ಯ ಏನಾಗಿರುತ್ತಿತ್ತೋ ಹೇಳಲಾರೆ. "ಸತ್ಯವಂತರಿಗಿದು ಕಾಲವಲ್ಲ?" ಜೂನ್ ಮಾಸುವ ಮೊದಲೇ ನಾನು ತಾಂಬರಮಿನ ರೊಪ್ಪದಿಂದ ವಿಮೋಚಿತನಾಗಿ ಮುಕ್ತನಾಗಿ ಲಯೊಲಾದ ಕಪ್ಪಕ್ಕೆ (ಆನೆಗಳನ್ನು ಹಿಡಿದು ಪಳಗಿಸುವ ಏರ್ಪಾಡು) ಸ್ವ-ಇಚ್ಛೆಯಿಂದ ಕೆಡೆದಿದ್ದೆ! ಇದೊಂದು ಬಗೆಯ ನಿರ್ಮೋಚನೆ (moulting), ಅಂದರೆ ಪೊರೆಯುರ್ಚಿ ಹೊಸಹುಟ್ಟು ಪಡೆಯುವುದು. ಹೀಗೆ ೧೯೪೫-೪೬ರ ಶೈಕ್ಷಣಿಕ ವರ್ಷಾರಂಭದಲ್ಲಿ ನಾನು ಲಯೊಲಾದಲ್ಲಿ ಎರಡನೆಯ ಆನರ್ಸ್ ವಿದ್ಯಾರ್ಥಿಯಾದೆ, ಹಾಸ್ಟೆಲ್‌ನಿವಾಸಿಯೂ ಆದೆ.

ಅದೊಂದು ವಿನೂತನ ಅನುಭವ. ಅಲ್ಲಿ ಎಲ್ಲವೂ ಯಾಂತ್ರಿಕವೆನ್ನುವ ಮಟ್ಟಿಗೆ ಕ್ರಮಬದ್ಧ. ಪಾಠಪ್ರವಚನಗಳಾಗಲೀ ಸ್ಪೆಶಲ್ ಕ್ಲಾಸ್‌ಗಳಾಗಲೀ ಒಂದು ಸುಸಜ್ಜಿತ ಕಾರ್ಖಾನೆಯ ತೆರದಲ್ಲಿ ಸಾಗುತ್ತಿದ್ದುವು. ಸುಮಾರು ೪೦೦ ಹಾಸ್ಟೆಲಿಗರಿದ್ದೆವು. ಹುಡುಗ ಪಾಳ್ಯ. ಹುಡುಗಿಯರಿಗೆ ಪ್ರವೇಶವಿಲ್ಲ. ನಾಲ್ಕು ಬಗೆಯ ಭೋಜನಶಾಲೆಗಳಿದ್ದುವು: ತಮಿಳು, ಆಂಧ್ರ, ಕೇರಳ (ಇವು ಮೂರೂ ಶಾಕಾಹಾರಿ), ಮತ್ತು ಮಾಂಸಾಹಾರಿ. ಯಾವುದನ್ನು ಬೇಕಾದರೂ ಆಯಬಹುದಿತ್ತು. ನನ್ನ ರುಚಿ ಶುಚಿಗಳಿಗೆ ತಮಿಳು ಮೆಸ್ ಹೆಚ್ಚು ಒಪ್ಪುವಂತಿತ್ತು.

ಎರಡನೆಯ ಆನರ್ಸ್‌ನ ಮೊದಲನೆಯ ಪಾಠಕ್ಕೆ ಹಾಜರಾದೆ. ಇದು ಅಲೋಶಿಯಸ್ ಕಾಲೇಜಿನ ವಿಸ್ತರಣೆ ಎಂದು ಒಡನೆ ಕಂಡುಕೊಂಡೆ. ಸುಮಾರು ೨೦ ಮಂದಿ ಗಂಭೀರ ವಿದ್ಯಾರ್ಥಿಗಳು. ಉಪನ್ಯಾಸಕರೆಲ್ಲರೂ ಅನುಭವಿಗಳು, ಅದ್ಭುತ ಆಸಕ್ತಿ, ನಿಷ್ಠೆ ಮತ್ತು ಸ್ಪಷ್ಟತೆ ಸಹಿತ ಬೋಧಿಸುತ್ತಿದ್ದರು. ಪ್ರಾಚೀನ ಗುರುಕುಲಾಶ್ರಮ ಹೀಗೆ ಇದ್ದಿರಬೇಕೆಂದೆನ್ನಿಸಿತು. ಪ್ರತಿ ದಿನ ತಲಾ ೧ ಗಂಟೆಯ ೫ ಉಪನ್ಯಾಸಗಳು, ಜೊತೆಗೆ ಗ್ರಂಥಾಲಯದೊಳಗಿನ ಸ್ವಂತ ಅಧ್ಯಯನಾವಕಾಶ, ಭಾನುವಾರದ ಹೊರತು ಬೇರೆ ಯಾವ ರಜೆಯೂ ಇಲ್ಲ – ಇಂಥಲ್ಲಿ ವಿದ್ಯಾರ್ಥಿಯಾಗಿರುವುದು ಪರಮ ಭಾಗ್ಯವೆಂದುಕೊಂಡೆ. ಆದರೆ ತರಗತಿಯೊಳಗೆ ನಾನು ಕೀಳರಿಮೆಯಿಂದ ಕುಸಿದು ಹೋದೆ. ಉಪನ್ಯಾಸಕರು ಕೇಳುತ್ತಿದ್ದ ತೀರ ಸುಲಭ ಪ್ರಶ್ನೆಗಳಿಗೂ ಉತ್ತರ ಕೊಡಲಾಗದೆ ತಲೆ ಅಡಿಹಾಕಿ ನಿಲ್ಲುತ್ತಿದ್ದೆ. ಏಕೆಂದರೆ ಹಿಂದಿನ ವರ್ಷ ಆ ಜಂಟಲ್‌ಮೆನ್ನರ ಕಾಲೇಜಿನಲ್ಲಿ ಗಣಿತ ಕುರಿತಂತೆ ಯಾವ ಗಂಭೀರ ಪಾಠವೂ ನಡೆದಿರಲಿಲ್ಲ! ಸಹಪಾಠಿ ಸಿಡಿಲ ಮರಿಗಳ ದೃಷ್ಟಿಯಲ್ಲಿ ನಾನೊಬ್ಬ ಪರಪುಟ್ಟ, ಅನಾಹ್ವಾನಿತ ನಾಲಾಯಕ್ಕು.

ಅವರ ಪೈಕಿ ಆ ಹಿಂದೆ ಇಂಟರ್‌ಮೀಡಿಯೆಟ್ ತರಗತಿಗಳಲ್ಲಿ ನನ್ನ ಸಹಪಾಠಿಯಾಗಿದ್ದ ದೇವಿದಾಸ ಆಚಾರ್ಯ ಎಂಬ ವಿದ್ಯಾರ್ಥಿ ಇದ್ದ. ಮಂಗಳೂರಿನಲ್ಲಿಯಂತೆ ಇಲ್ಲಿ ಕೂಡ ಈತ ಆಸನದಲ್ಲಿಯೂ ಅಂಕಗಳಿಕೆಯಲ್ಲಿಯೂ ಒಬ್ಬ front bencher. ದೇವರಾಯರಂತೆ ಮೌನಿ, ಒಂಟಿಗ, ವಾಮನಮೂರ್ತಿ. ಪಾಠ ಮುಗಿದ ಕೂಡಲೇ ನಾನು ಈತನಿಗೆ ಗಂಟುಬಿದ್ದೆ – ಹೇಗೂ ಮುಖಪರಿಚಯವಿತ್ತಷ್ಟೆ. ಇವನೂ ಹಾಸ್ಟೆಲಿಗ ಆಗಿದ್ದುದು ಅನುಕೂಲವಾಯಿತು. ಆಚಾರ್ಯನಿಂದ ಹಿಂದಿನ ವರ್ಷದ ತರಗತಿ ಟಿಪ್ಪಣಿ ಹೊತ್ತಗೆಗಳನ್ನು ಎರವಲು ತಂದೆ, ಅವನ್ನು ನಕಲು ಮಾಡಲು ಮೂರು ನಾಲ್ಕು ವಾರ ಹಗಲಿರುಳೂ ಶ್ರಮಿಸಿ ಸಫಲನಾದೆ. ಅವು ಪ್ರಪಂಚ ಮಹಾಯುದ್ಧದ ದಿನಗಳಾಗಿದ್ದುದರಿಂದ ಪಾಠ ಪುಸ್ತಕಗಳೊಂದೂ ಕೊಳ್ಳಲು ದೊರೆಯುತ್ತಿರಲಿಲ್ಲ, ಗ್ರಂಥಾಲಯದಿಂದ ಅವನ್ನು ತಂದು ಅಕ್ಷರಶಃ ನಕಲುಮಾಡುವುದೊಂದೇ ಅಂದು ನಮಗಿದ್ದ ಹಾದಿ. ಆಚಾರ್ಯನೂ ನಾನೂ ಈ ಕೆಲಸವನ್ನು ಹಂಚಿಕೊಂಡೆವು. ಸರಿ, "ಬಂದದ್ದೆಲ್ಲ ಬರಲಿ, ಗೋವಿಂದನ ದಯ ನಮಗಿರಲಿ" ಎಂದು ಹೊನಲಿಗೆ ದುಮುಕಿಯೇ ಬಿಟ್ಟೆ. ಅನ್ಯ ಮಾರ್ಗ ಹೇಗೂ ಇರಲಿಲ್ಲವಷ್ಟೆ.

ಆ ಎರಡು ವರ್ಷ (೧೯೪೫–೪೭) ನಡುವಿನ ಒಂದು ಬೇಸಗೆ ರಜೆಯ ಹೊರತು ಮಿಕ್ಕ ಎಲ್ಲ ದಿನಗಳಂದೂ ಇರುಳು ೯ ಗಂಟೆಗೆ ಮಲಗಿ ಮುಂಜಾನೆ ೩ ಗಂಟೆಗೆದ್ದು ಅಧ್ಯಯನನಿರತನಾಗುತ್ತಿದ್ದೆ; ಸಂಜೆ ೬ರಿಂದ ೭ರ ತನಕ ಕಾಲೇಜ್ ಮೈದಾನದಲ್ಲಿ ಸುಮಾರು ೧೦ ಕಿಮೀ ದೂರ ಸುತ್ತೋಟ ಓಡುತ್ತಿದ್ದೆ. ಇನ್ನು ಹಾಸ್ಟೆಲ್ ಆಹಾರ ಅತ್ಯಂತ ಸ್ವಾದಿಷ್ಟವಾಗಿರುತ್ತಿತ್ತು. ವಾರಾಂತ್ಯದಲ್ಲಿ ಕರ್ನಾಟಕ ಸಂಗಿತ ಕಛೇರಿಯೊಂದಕ್ಕೆ ಕಡ್ಡಾಯವಾಗಿ ಹಾಜರಾಗುತ್ತಿದ್ದೆ. ಇಂತಿದ್ದರೂ ಪ್ರಾಯಸಹಜವಾದ ಮನೋವಿಕಾರಗಳು ಸತತ ಬಾಧಿಸುತ್ತಿದ್ದುವು. ಇಲ್ಲಿ ಕಾಪಾಡಿದ್ದು ಮನೆಯಲ್ಲಿ ದೊರೆತಿದ್ದ ಸಂಸ್ಕಾರ: ಮುಂಜಾನೆ ಅಧ್ಯಯನ ತೊಡಗುವ ಮುನ್ನ ಭಗವದ್ಗೀತೆಯ ೧೦ ಶ್ಲೋಕಗಳನ್ನು ಕ್ರಮಶಃ ನಕಲುಮಾಡುತ್ತ ಅರ್ಥ ಗ್ರಹಿಸುತ್ತ ಮುನ್ನಡೆದೆ. ಮನಶ್ಶಾಂತಿ ಮತ್ತು ಏಕಾಗ್ರತೆ ಲಭಿಸಿದುವು, ಆತ್ಮಭರವಸೆಯೂ ಮೂಡಿತು.

ಪ್ರಾಂಶುಪಾಲರು ನನ್ನನ್ನು ಲಯೊಲಾ ಕಾಲೇಜಿನ ಕರ್ನಾಟಕ ಸಂಘಕ್ಕೆ ವಿದ್ಯಾರ್ಥಿ ಕಾರ್ಯದರ್ಶಿಯಾಗಿ ನಿಯೋಜಿಸಿದರು. ಹಣಕ್ಕೆ ಕೊರತೆ ಇಲ್ಲ –– ಪ್ರಾಂಶಪಾಲರ ಆಶ್ವಾಸನೆ; ವಿದ್ಯಾರ್ಥಿಗಳಲ್ಲಿ ಆಸಕ್ತ ಶ್ರೋತೃಗಳು ಸಾಕಷ್ಟು ಮಂದಿ ಇದ್ದರು –– ಪ್ರಾಯಶಃ ತಾಯಿನುಡಿಯ ತವರಿನಿಂದ ದೂರವಾದಾಗ ನಾವದನ್ನು ಹೆಚ್ಚುಹೆಚ್ಚು ಪ್ರೀತಿಸುತ್ತೇವೆ; ಇನ್ನು ಮದ್ರಾಸಿನ ವಿವಿಧ ಸಾರ್ವಜನಿಕ ಕ್ಷೇತ್ರಗಳಲ್ಲಿದ್ದ ಕನ್ನಡ ಪ್ರತಿಭೆಗಳಿಗೂ ದಾನಿಗಳಿಗೂ ಎಂದೂ ಕೊರತೆ ಇರಲಿಲ್ಲ. ಇವೆಲ್ಲ ಸಂಗತಿಗಳೂ ವಾಸ್ತವ ಕಾರ್ಯರಂಗ ನನಗೆ ಕಲಿಸಿದ ಪಾಠಗಳು:

ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ
ಮಾ ಕರ್ಮಫಲಹೇತುರ್ಭೂರ್ಮಾ ತೇ ಸಂಗೋಸ್ತ್ವಕರ್ಮಣಿಟಟ

ಏರಿರದ ಬಂಡೆಗಳು ನೂರಾರು ಜಗದೊಳಗೆ
ಏರಲಾಗದ ಶಿಖರ ಸೃಷ್ಟಿಯೊಳಗಿಲ್ಲವೋ
ದಾರಿ ಮುನ್ನಡೆದಂತೆ ಕಾಣ್ಬ ಕಂಟಕಗಳ ನಿ–
ವಾರಿಸೆಲೊ ಧೃತಿಗೆಡದೆ ಕೆಚ್ಚಿನಿಂ ಅತ್ರಿಸೂನು

೧೯೪೭ರ ಮಾರ್ಚ್ ದಿನಾಂಕ ೨೦–೨೮ ಅವಧಿಯಲ್ಲಿ ಅಂತಿಮ ಆನರ್ಸ್ ಪರೀಕ್ಷೆ ಬರೆದು ಕೃತಾರ್ಥ ಭಾವದಿಂದ ಮಡಿಕೇರಿಗೆ ಮರಳಿದೆ. ಕ್ರಿಶ್ಚಿಯನ್ ಕಾಲೇಜಿನಲ್ಲಿ ದೇವರಾಯರ ಮೂಲಕ ಗೆಳೆಯನಾಗಿದ್ದ ಗುರುಮೂರ್ತಿ ನಮ್ಮೂರು ನೋಡಬಯಸಿ ನನ್ನ ಜೊತೆ ಬಂದಿದ್ದ. ಹಾದಿಯಲ್ಲಿ ಬೆಂಗಳೂರು, ಮೈಸೂರು, ಬೇಲೂರು, ಹಳೇಬೀಡು ಮುಂತಾದ ಪ್ರೇಕ್ಷಣೀಯ ನೆಲೆಗಳನ್ನು ದರ್ಶಿಸಿದೆವು. ಮಡಿಕೇರಿ–ಭಾಗಮಂಡಲ ದಾರಿಯನ್ನು ನಡೆದು ಕ್ರಮಿಸಿದೆವು. ಅಲ್ಲೆಲ್ಲ ನಮ್ಮ ನೆಂಟರಿಷ್ಟರು ಇದ್ದುದರಿಂದ ಮತ್ತು ಅವರ ಮುಗ್ಧ ದೃಷ್ಟಿಯಲ್ಲಿ ನಾವು ಅಸಾಧ್ಯವಾದುದೇನನ್ನೋ ಸಾಧಿಸಿ ಮರಳಿದವರಾದ್ದರಿಂದ ನಮಗೆ ಹೋದಲ್ಲೆಲ್ಲ ಭವ್ಯ ಸ್ವಾಗತ ಲಭಿಸಿದ್ದೊಂದು ಭಾಗ್ಯ.

ಅದೇ ಜೂನ್‌ನಲ್ಲಿ ನಮ್ಮ ಪರೀಕ್ಷಾಫಲಿತಾಂಶ ಪ್ರಕಟವಾಯಿತು: ಇಡೀ ವಿಶ್ವವಿದ್ಯಾಲಯದಲ್ಲಿ ಪ್ರಥಮ ದರ್ಜೆಯಲ್ಲಿ (ಸರಾಸರಿ ೬೦% ಮತ್ತು ಹೆಚ್ಚು ಅಂಕ ಗಳಿಸಿದವರು) ಕೇವಲ ೫ ಮಂದಿಯೂ ದ್ವಿತೀಯ ದರ್ಜೆಯಲ್ಲಿ (ಸರಾಸರಿ ೫೦–೫೯% ಅಂಕ ಪಡೆದವರು) ೧೨ ಮಂದಿಯೂ ಉತ್ತೀರ್ಣರಾಗಿದ್ದರು. ಈ ಎರಡನೆಯವರ ಸಾಲಿನಲ್ಲಿ ನಾನೂ ಇದ್ದೆ. ಕ್ರಿಶ್ಚಿಯನ್ ಕಾಲೇಜಿನಲ್ಲೇ ಮುಂದುವರಿದಿದ್ದರೆ ಖಂಡಿತ ಗೋತಾ ಹೊಡೆದಿರುತ್ತಿದ್ದೆ. ಆಚಾರ್ಯ ಪ್ರಥಮ ದರ್ಜೆ ಗಳಿಸಿದ್ದ.

ಬ್ಯಾಂಕಿನ ಮರುಭೂಮಿಯಲ್ಲಿ ಬರಡಾಯ್ತು ಬುದ್ಧಿ!
ಅಧ್ಯಾಯ ಹದಿನೆಂಟು

ಅಂದಿನ ಬಿಎ (ಆನರ್ಸ್) ಪದವಿ ಎಂಎ ಪದವಿಗೆ ಸಮವೆಂದು ವಿಶ್ವವಿದ್ಯಾಲಯ ಅಂಗೀಕರಿಸಿತ್ತು. ಪ್ರಾಯಶಃ ಇಡೀ ಕೊಡಗಿನಲ್ಲಿ ಇಂಥ ಹಿರಿ ಡಿಗ್ರಿ ಪಡೆದವರು ಅಂದು ಬೆರಳೆಣಿಕೆಯವರು. ಆದರೆ ಈ ಪದವಿಗೊಪ್ಪುವ ವೃತ್ತಿ ಕೊಡಗಿನಲ್ಲೆಲ್ಲಿದೆ? ಇನ್ನು ಯಾವುದೇ ತಾಂತ್ರಿಕ ಪದವಿ ಅಥವಾ ಅನುಭವ ಇಲ್ಲದ, ಕೇವಲ ೨೧ರ ಹರೆಯದ, ಹುಡುಗನಿಗೆ ಸರಿಯಾದ ಹುದ್ದೆ ಯಾವುದು? ಯಾವ ಸ್ವತಂತ್ರ ಕಸಬನ್ನು ಹಿಡಿಯಬಹುದು? ಬಂಡವಾಳ?

೧೯೪೭ರ ಶೈಕ್ಷಣಿಕ ವರ್ಷಾರಂಭ. ಕೊಡಗಿನ ಶಿಕ್ಷಣಪ್ರೇಮಿಗಳು ನಾಪೋಕ್ಲು, ಸೋಮವಾರಪೇಟೆ, ಪೊನ್ನಂಪೇಟೆ ಮುಂತಾದ ವಿಸ್ತೃತ ಹಳ್ಳಿಗಳಲ್ಲಿ ಹೊಸ ಪ್ರೌಢಶಾಲೆಗಳನ್ನು ಸ್ಥಾಪಿಸಲು ನವೋತ್ಸಾಹಭರಿತರಾಗಿ ಕಳಕ್ಕೆ ದುಮುಕಿದರು. ಇವೆಲ್ಲ ಖಾಸಗಿ ಪ್ರಯತ್ನಗಳು. ಆಕರ್ಷಕ ಸಂಬಳ. ನೂತನ ಅವಕಾಶ. ನನ್ನ ಅನೇಕ ಹಿತೈಷಿಗಳು ಇಂಥ ಒಂದು ಶಾಲೆಗೆ ನಾನು ಗಣಿತಾಧ್ಯಾಪಕನಾಗಿ ಸೇರಬೇಕೆಂದು ಸೂಚಿಸಿದರು. ತಂದೆಗೂ ಇದು ಒಪ್ಪಿಗೆ ವಿಷಯ. ಆದರೆ ತಾಯಿ ಮಾತ್ರ ಖಡಾಖಂಡಿತವಾಗಿ ಹೇಳಿದರು, "ನೀನು ಸಮುದ್ರದಲ್ಲಿ ಈಸಿ ಜೈಸಬೇಕಾದ ಸ್ವತಂತ್ರ ತಿಮಿಂಗಿಲ, ಕೆರೆ ಕುಂಟೆಗಳಲ್ಲಿ ಅಡಗಿ ಹೆದರಿ ಬಾಳಬೇಕಾದ ಕಿರಿ ಮೀನಲ್ಲ."

ಮದ್ರಾಸಿನ ರುಚಿವೈವಿಧ್ಯವನ್ನು – ಜ್ಞಾನ, ವಿಜ್ಞಾನ, ಸಂಗೀತ, ಸಾಹಿತ್ಯ ಇತ್ಯಾದಿ – ಯಥೇಚ್ಛವಾಗಿ ಉಂಡು ಸುಪುಷ್ಟನಾಗಿದ್ದ ನಾನು ಆ ಮಹಾನಗರಕ್ಕೇ ಹೋಗಿ ಪ್ರಯತ್ನಿಸುವುದೆಂದು ತೀರ್ಮಾನಿಸಿದೆ. ಅಪ್ಪನ ಸಹಪಾಠಿ ಕೆ.ಎಂ.ನಂಜಪ್ಪ (ಇವರು ಸ್ವತಂತ್ರ ಭಾರತದ ಪ್ರಥಮ ಮಹಾದಂಡನಾಯಕ ಜನರಲ್ ಕೆ.ಎಂ.ಕಾರ್ಯಪ್ಪನವರ ಅನುಜ) ಅಂದು Imperial Bank of Indiaದ (ಮುಂದೆ ಸ್ವತಂತ್ರ ಭಾರತದಲ್ಲಿದರ ಹೆಸರು State Bank of India) ಮದ್ರಾಸು ವಿಭಾಗದಲ್ಲಿ ಒಬ್ಬ ವರಿಷ್ಠ ಅಧಿಕಾರಿ. ಬ್ರಿಟಿಷ್ ಪ್ರಭುತ್ವದ ಉಕ್ಕಿನ ಶಿಸ್ತಿನಲ್ಲಿ ಈ ಹಿರಿ ಬ್ಯಾಂಕಿನ ಉನ್ನತ ಅಧಿಕಾರಿಯೊಬ್ಬನನ್ನು ನನ್ನಂಥ ಅನಾಮಧೇಯ ಯುವಕ ಭೇಟಿಯಾಗುವುದು ಅಸಾಧ್ಯ. ಆದರೆ ಕೊಡಗಿನ ಸಹಪಾಠಿಯಿಂದ ತಂದಿದ್ದ ಪರಿಚಯಪತ್ರವಿದ್ದುದರಿಂದ ನನಗೆಲ್ಲೂ ಮುಖಭಂಗವಾಗಲಿಲ್ಲ. ದ್ರುಪದನ ಆಸ್ಥಾನಕ್ಕೆ ಹೋದ ದ್ರೋಣನನ್ನೂ ಶ್ರೀಕೃಷ್ಣನ ಅರಮನೆಯನ್ನು ಪ್ರವೇಶಿಸಿದ ಸುದಾಮನನ್ನೂ ನೆನಪಿಸಿಕೊಂಡೆ.

ಮಹಾನುಭಾವ ನಂಜಪ್ಪ ನನ್ನನ್ನು ಆತ್ಮೀಯವಾಗಿ ಸ್ವಾಗತಿಸಿ ನುಡಿದರು, "ನೋಡು ತಿಮ್ಮಯ್ಯನ ಮಗ! ಇದು ಕೊಡಗಲ್ಲ. ಇಲ್ಲಿ ಬ್ರಾಹ್ಮಣರಿಗೆ ಸರ್ಕಾರೀ ಸಂಸ್ಥೆಗಳಲ್ಲಿ ಉದ್ಯೋಗಾವಕಾಶವಿಲ್ಲ. ಆದ್ದರಿಂದ ಖುದ್ದು ನಾನೇ ನಿನಗೆ ಈ ಬ್ಯಾಂಕಿನಲ್ಲಿ ಒಬ್ಬ ಗುಮಾಸ್ತನ ಕೆಲಸವನ್ನು ಕೂಡ ಕೊಡಿಸಲಾರೆ. ಚಿಂತೆ ಇಲ್ಲ. ನೀನು Indian Overseas Bank Ltdನ ಜನರಲ್ ಮ್ಯಾನೇಜರ್‌ನನ್ನು ನನ್ನ ಈ ಕಾಗದ ಸಹಿತ ಭೇಟಿಮಾಡು. ಅಲ್ಲಿ ನಿನಗೆ ಕೆಲಸವೇನೋ ಸಿಕ್ಕುತ್ತದೆ. ಆದರೆ ಎಲ್ಲಿಯೂ ಎಂದೂ ನಿನ್ನ ಯಾವುದೇ ಮಾತು ನಡವಳಿಕೆಗಳಿಂದ ಬ್ರಾಹ್ಮಣತ್ವ ಪ್ರಕಟವಾಗದಂತೆ ಕಡು

ಎಚ್ಚರಿಕೆಯಿಂದ ವರ್ತಿಸು. ನನ್ನ ಶಿಫಾರಸನ್ನು ಅವರು ಮನ್ನಿಸುತ್ತಾರೆ. ಆದರೆ ಮೊದಲ ಅವಕಾಶದಲ್ಲೇ ನಿನ್ನನ್ನು ವಜಾಮಾಡಿಬಿಡಬಹುದು. ಎಚ್ಚರ, ಎಚ್ಚರ, ಎಚ್ಚರ" ಎಂದು ಹರಸಿ ಬೀಳ್ಕೊಟ್ಟರು.

ನಾನು ಹುಟ್ಟಿ ಬೆಳೆದ ಪರಿಸರದಲ್ಲೆಲ್ಲೂ ಜಾತಿಕಾರಣವಾಗಿ ಯಾರನ್ನಾದರೂ ದ್ವೇಷಿಸಿದ್ದಾಗಲೀ ತಿರಸ್ಕರಿಸಿದ್ದಾಗಲೀ ಅರಿವಿಗೆ ಬಂದಿರಲಿಲ್ಲ. ಎಂದೇ ನನ್ನ ನಡೆ ನುಡಿ ಬಗೆಗಳಲ್ಲಿ ಕೋಮುಭಾವನೆ ಎಂದೂ ಎಲ್ಲಿಯೂ ನುಸುಳುತ್ತಿರಲಿಲ್ಲ. ನಂಜಪ್ಪನವರಿತ್ತ ವಿಭೀಷಣಪತ್ರ ಸಹಿತ ಓವರ್ಸೀಸ್ ಬ್ಯಾಂಕಿಗೆ ಹೋದೆ. ಜನರಲ್ ಮ್ಯಾನೇಜರ್ ನನ್ನನ್ನು ಚೀಫ್ ಅಕೌಂಟೆಂಟ್ ಬಳಿ ಕಳಿಸಿದರು.

Chief Accountant, ``You are a Mathematics MA?''

``Yes sir.''

``Then work out the following problem. It has been dodging us since this morning: Rs 93,457-5-7 X 19/20.''

ರೂಪಾಯಿ–ಆಣೆ–ಪೈ ಬಳಕೆಯಲ್ಲಿದ್ದ ದಿನಗಳವು. Ready reckoner, ಕಿಸೆಗಣಕ ಮುಂತಾದ ಧಿಡೀರ್ ಉತ್ತರ ಕೆಡೆಯುವ ಸ್ಯಮಂತಕಮಣಿ ರಂಗಪ್ರವೇಶಿಸಿರಲ್ಲ. ಮಗ್ಗಿಕೋಷ್ಟಕ, ಕಾಗದ, ಪೆನ್ಸಿಲ್ ಮತ್ತು ಗಣಿತಪ್ರಜ್ಞೆ ಮಾತ್ರ ನನ್ನ ಆಸ್ತಿ. ಕೇವಲ ೨ ಮಿನಿಟುಗಳಲ್ಲೇ ಉತ್ತರ ಬರೆದು ಅವರಿಗಿತ್ತೆ. ಅವರಿನ್ನೂ ಮೊದಲ ಹೆಜ್ಜೆಯಲ್ಲೇ ತೊಳಲಾಡುತ್ತಿದ್ದರು. ಅವರಿಗೆ ನಂಬಲಾಗಲಿಲ್ಲ, ``How did you do it?''

ಆ ಹೆಜ್ಜೆಗಳನ್ನು ವಿವರಿಸಿದೆ, ``19/20 is equal to (1 - 1/20). So you divide the given amount by 20 and subtract the quotient from the original figure. It is just elementary.''

``I won't accept it. We in the Bank do not recognize any shortcuts. Do it in the right royal way, which is the safest. First multiply by 19 and then divide the product by 20. Do you get me?''

ನನಗೆ ಇಂಗ್ಲಿಷ್ ವಿದ್ವಾಂಸ ಸ್ಯಾಮ್ಯುಯೆಲ್ ಜಾನ್ಸನ್ ಒಮ್ಮೆ ಸಿಡಿಸಿದ್ದ ನುಡಿಕಿಡಿ ನೆನಪಿಗೆ ಬಂತು, ``An Athenian blockhead is the worst of all blockheads.'' (ಸಕಲ ಮುಠ್ಠಾಳರ ಪೈಕಿ ಪಾಟಲೀಪುತ್ರದ ಮುಠ್ಠಾಳ ಪರಮ ನಿಕೃಷ್ಟ!) ನಿಜ, ಅಜ್ಞಾನಿಗಳ ಕೂಡೆ ಅಧಿಕ ಪ್ರಸಂಗ ಸಲ್ಲಲ್ಲದೆಂದು ನಾನು ಮೌನಕ್ಕೆ ಶರಣಾದೆ. ಈ "ಪ್ರಥಮ ಚುಂಬನಂ ದಂತ ಭಗ್ನಂ" ನನಗೊಂದು ಪಾಠ ಕಲಿಸಿತು: ನನ್ನ ಯಾವುದೇ ಬೌದ್ಧಿಕ ಕಸರತ್ತು ಅಥವಾ ಸಾಹಿತ್ಯಕ ಚಮತ್ಕಾರ ಇಲ್ಲಿ ಸಲ್ಲದು –– ಕೋಣನ ಮುಂದೆ ಕಿನ್ನರಿ ಬಾರಿಸತಕ್ಕದ್ದಲ್ಲ.

ನನ್ನನ್ನು ಉಣ್ಣಿಕೃಷ್ಣನ್ ಎಂಬ ಅನುಭವೀ ಗುಮಾಸ್ತನ ಜೊತೆ ಅಭ್ಯಾಸಾರ್ಥ ಬಿಟ್ಟರು. ಗ್ರಾಹಕರು ಕೊಡುವ ಚೆಕ್ಕನ್ನು ಅವರ ಖಾತೆಯೊಂದಿಗೆ ತುಲನೆ ಮಾಡಿ ಅದರಲ್ಲಿ ಸಾಕಷ್ಟು ಠೇವಣಿ ಇದ್ದರೆ ಮಂಜೂರು ಮಾಡುವ ಯಾಂತ್ರಿಕ ಕೆಲಸವಿದು. ಎರಡನೆಯ ಹಂತದಲ್ಲಿ ವಾರಾಂತ್ಯದ ಖಾತಾಪುಸ್ತಕ ಸಂತುಲನವೆಂಬ (balancing the ledgers) ಮಹಾಯಜ್ಞ ನಿರ್ವಹಣೆಗೆ ನಿಯೋಜಿಸಿದರು. ಸಹೋದ್ಯೋಗಿಗಳ ದೃಷ್ಟಿಯಲ್ಲಿ ಇದೊಂದು ಯಮಶಿಕ್ಷೆ: ಸುಮಾರು ೧೦೦೦ ಬಿಡಿ ಖಾತೆಗಳಲ್ಲಿಯ ಶಿಲ್ಕುಗಳ ಮೊತ್ತವನ್ನು ಶುಕ್ರವಾರ ಕೆಲಸಸದ ವೇಳೆ ಮುಗಿದ ಬಳಿಕ ತೊಡಗಿ ಶನಿವಾರ ಮುಂಜಾನೆ ಕೆಲಸ ಆರಂಭವಾಗುವ ಮೊದಲು ಸರಿದೂಗಿಸಲೇಬೇಕಾಗಿತ್ತು. ಈ ರೂಪಾಯಿ–ಆಣೆ–ಪೈಗಳ ಸಂಕಲನವನ್ನು ಅವರು ಸಕಾಲದಲ್ಲಿ ಮುಗಿಸಲಾಗದೇ ಆದಿತ್ಯವಾರ ಕೂಡ ಕಛೇರಿಗೆ ಬಂದು ದುಡಿಯುತ್ತಿದ್ದರು.

ಆದರೆ ನನಗದು ಲೀಲಾಜಾಲವಾಗಿತ್ತು. ಒಮ್ಮೆ ಆ ಅಂಕೆಸಂಖ್ಯೆಗಳ ಸಾಲಿನ ಮೇಲೆ ಕಣ್ಣಾಡಿಸಿದರೆ ಇಡೀ ಮೊತ್ತ ಹೊಳೆಯುತ್ತಿತ್ತು. ಒಟ್ಟು ೪೦ ಪುಟಗಳಲ್ಲಿ ಆ ಬಿಡಿ ಖಾತೆಗಳು ಹಂಚಿಹೋಗಿದ್ದರೆ ಅಷ್ಟೇ ಮಿನಿಟುಗಳಲ್ಲಿ ಸಮಗ್ರ ಮೊತ್ತವನ್ನು ಬರೆದುಬಿಡುತ್ತಿದ್ದೆ. ಬೇರೆ ಯಾವುದೋ ಮೂಲದಿಂದ ಮುಂದಾಗಿಯೇ ಬರುತ್ತಿದ್ದ ಸಂಖ್ಯೆ ಜೊತೆ ಸಾಧಾರಣವಾಗಿ ಇದು ಸರಿದೂಗುತ್ತಲೂ ಇತ್ತು. ಹೀಗಾಗದಾಗ ಉಭಯ ಸಂಖ್ಯೆಗಳ ಪುನಃಪರಿಶೀಲನೆ ವಿಶೇಷ ಕಾಲಾವಕಾಶ ಬೇಡುತ್ತಿರಲಿಲ್ಲ. ಹೀಗೆ ಖಾತಾಯಜ್ಞ ಆಯಾ ಶುಕ್ರವಾರ ಸಂಜೆಯೇ ಪೂರ್ತಿಗೊಂಡು ನಮಗೆಲ್ಲ ಬಿಡುವು ಒದಗುತ್ತಿತ್ತು. ಈ 'ಪವಾಡ'ದ ರಹಸ್ಯವೇನೆಂದು ಪತ್ತೆಮಾಡಲು ವರಿಷ್ಠರ ಒಂದು ತಂಡ ನನ್ನ ವಿಧಾನವನ್ನು ತಪಾಸಿಸಲು ಬಂತು. ಅದರ ಸದಸ್ಯರೆದುರೇ ನಾನು 'ರಹಸ್ಯ'ವನ್ನು ಬಯಲುಮಾಡಿ ಗೆದ್ದೆನೆಂಬ ಕ್ಷಮ್ಯ ಜಂಬದಿಂದ ಬೀಗಿದೆ? ತಂಡವಿತ್ತ ತೀರ್ಮಾನ ಕುಠಾರಾಘಾತವಾಗಿ ನನಗೆ ಬಡಿಯಿತು: "ಇಂಥ ಒಳದಾರಿಗಳು ಇಲ್ಲಿ ವರ್ಜ್ಯ.

ನೋಡಿ ನೀವು ರಾಜಮಾರ್ಗದಲ್ಲೇ, ಅಂದರೆ ೩+೪=೭, ೭+೯=೧೬ ಮುಂತಾಗಿ, ಎಣಿಕೆಹಾಕಿ ಅಲ್ಲಲ್ಲೇ ಹಂತಗಳನ್ನು ದಾಖಲಿಸಿ ಮುಂದುವರಿಯಬೇಕು. ಗೊತ್ತಾಯಿತೇ?"

ಅಂದು ಬ್ಯಾಂಕ್ ನೌಕರರಿಗೆ ನಿಗದಿಯಾದ ಕೆಲಸದ ವೇಳೆ, ರಜಾಸವಲತ್ತು, ವೈದ್ಯಕೀಯ ನೆರವು ಮುಂತಾದ ಯಾವುದೇ ಸೌಕರ್ಯವಿರಲಿಲ್ಲ. ಇನ್ನು ಸಂಬಳ? ಎರಡು ದಶಕಗಳ ಅನುಭವವಿದ್ದ ಮುಖ್ಯ ಗುಮಾಸ್ತನಿಗೂ ಒಟ್ಟು ರೂ ೧೦೦ ಮಾಸಿಕ ತಲಬು ದೊರೆಯುತ್ತಿರಲಿಲ್ಲ. ನನ್ನ ಸಂಬಳ ಕೇವಲ ರೂ ೫೫. ಹೊಟ್ಟೆ ಕಟ್ಟಿ ಕಷ್ಟ ಪಟ್ಟು ಆ ಸುಖವಿಲ್ಲದ ದಿನ ತಳ್ಳಿದೆ. ಅಪ್ಪನನ್ನು ಬೇಡತಕ್ಕದ್ದಲ್ಲ, ನನ್ನ ಶಿಕ್ಷಣಕ್ಕಾಗಿ ಮಾಡಿದ್ದ ಸಾಲವನ್ನು ನಾನೇ ತೀರಿಸತಕ್ಕದ್ದು ಮುಂತಾದವು ನನ್ನ ಖಚಿತ ನಿಲವುಗಳು.

ಈ ಕುಂಭೀಪಾಕವಾಸ ಮುಂದುವರಿಯುತ್ತಿದ್ದಂತೆಯೇ ದೇಶಕ್ಕೆ ಸ್ವಾತಂತ್ರ್ಯ ಬಂತು, ೧೫-೮-೧೯೪೭. ರಾಷ್ಟ್ರಾದ್ಯಂತ ಸಂಭ್ರಮ, ಸಂತೋಷ ಮತ್ತು ಬಿಡುವು. ಆದರೆ ನನಗೆ? ಅಧಿಕ ಕೆಲಸ ಬ್ಯಾಂಕಿನೊಳಗೆ. ಇನ್ನೂ ಮೂರು ತಿಂಗಳು ಮುಗಿಯುವ ಮೊದಲೇ ನನಗೊಂದು ಹುಕುಂ ಬಂದಿತು: ನನ್ನ ದಕ್ಷತೆಯನ್ನು ಗಮನಿಸಿ ನನ್ನನ್ನು ಬ್ಯಾಂಕಿನ ಕುವಲಯಾಲಂಪುರ (ಮಲೇಶಿಯ) ಶಾಖೆಗೆ ವರ್ಗಮಾಡಿದ್ದರು, ಕೇವಲ ೧೦ ದಿನಗಳಲ್ಲಿ ನಾನು ಗಂಟು ಮೂಟೆ ಕಟ್ಟಿ ಹಡಗುಯಾನಕ್ಕೆ ಸಿದ್ಧನಾಗಬೇಕಿತ್ತು. ಆಗ ನಾನು ದರ್ಜೆಯಲ್ಲಿ ಬಡ್ತಿ ಮತ್ತು ಸಂಬಳದಲ್ಲಿ ಹೆಚ್ಚಳ ಕೋರಿ ಮೇಲಧಿಕಾರಿಗಳಿಗೊಂದು ಲಿಖಿತ ಮನವಿ ಸಲ್ಲಿಸಿದೆ. ಇದಕ್ಕೆ ಬಂದ ಜವಾಬು ನನ್ನ ಜಂಘಾಬಲವನ್ನೇ ನಡುಗಿಸಿಬಿಟ್ಟಿತು: ನನ್ನ ವರ್ತನೆ ಶಿಸ್ತಿನ ತೀವ್ರ ಉಲ್ಲಂಘನೆಯಾದ ಕಾರಣ ನನ್ನನ್ನು ಆ ಕ್ಷಣವೇ ಒಂದು ತಿಂಗಳ ಮುಂಗಡ ಸಂಬಳ ಪಾವತಿ ಸಹಿತ ಕೆಲಸದಿಂದ ವಜಾ ಮಾಡಿದ್ದರು. ಹೀಗೆ ನಾನೊಬ್ಬ ಜುಟುಜಜ ಃಚಿಟಿಇ ಛಿಟಜಡಿಇ!

ವಿನಾ ಕಾರಣ ನನ್ನ ಅಸ್ಮಿತೆಗೆ ಹೊಡೆತ ಬಿದ್ದಿತ್ತು. ನೇರ ನಂಜಪ್ಪನವರಲ್ಲಿಗೆ ಹೋಗಿ ವಿಷಯ ಅರುಹಿದೆ. ಅವರೆಂದರು, "ತಿಮ್ಮಯ್ಯನ ಮಗ! ನೀನು ಆ ಆದೇಶವನ್ನು ಒಪ್ಪಿ ಹೋಗಬೇಕಾಗಿತ್ತು. ಅವರಿಗೆ ತಮ್ಮ ನಡುವೆ ಒಬ್ಬ ಬ್ರಾಹ್ಮಣ ಇರುವುದು ಸಹ್ಯವಾಗಿರಲಿಲ್ಲ. ಅದಕ್ಕೆ ಇದು ನೆಪ ಮಾತ್ರ. ಈಗ ನಾನೇನೂ ಮಾಡುವಂತಿಲ್ಲ."

ಕ್ರಿಶ್ಚಿಯನ್ ಕಾಲೇಜಿನ ಕನ್ನಡ ಗೆಳೆಯರು
ಅಧ್ಯಾಯ ಹತ್ತೊಂಬತ್ತು

ಬಾಗಲೋಡಿ ದೇವರಾಯರ ಪ್ರಸ್ತಾವನೆ ಹಿಂದೆ ಬಂದಿದೆ. ಅವರು ಆ ವರ್ಷ (೧೯೪೭) ಇಂಗ್ಲಿಷ್ ಆನರ್ಸ್ ಅಂತಿಮ ಪರೀಕ್ಷೆಯಲ್ಲಿ ನಿರೀಕ್ಷೆಯಂತೆ ಪ್ರಥಮ ದರ್ಜೆಯಲ್ಲಿ ಪ್ರಥಮ ಸ್ಥಾನ ಗಳಿಸಿ ಉತ್ತೀರ್ಣರಾಗಿದ್ದರು ಮತ್ತು ಅದೇ ಕಾಲೇಜಿನಲ್ಲಿ ಇಂಗ್ಲಿಷ್ ಟ್ಯೂಟರ್ ಆಗಿ ನೇಮನಗೊಂಡಿದ್ದರು. ಬ್ಯಾಂಕಿನಿಂದ ಉಚ್ಚಾಟಿತನಾದ ನಾನು ಅವರನ್ನು ನೋಡುವ ಸಲುವಾಗಿ ಅವರಲ್ಲಿಗೆ (ಕ್ರಿಶ್ಚಿಯನ್ ಕಾಲೇಜ್, ತಾಂಬರಮ್) ಹೋದೆ. ನನ್ನನ್ನು ಕಂಡು ಅವರಿಗೆ ಪರಮಾಶ್ಚರ್ಯ ಮತ್ತು ಸಂತೋಷ.

ಅವರೆಂದರು, "ನಿಮಗೆ ತುರ್ತು ಕಾಗದ ಬರೆಯಲು ತೊಡಗಿದ್ದೆ. ನೀವೇ ಪ್ರತ್ಯಕ್ಷರಾಗಿಬಿಟ್ಟಿರಿ! ಇಲ್ಲೊಂದು ಗಣಿತ ಟ್ಯೂಟರ್ ಹುದ್ದೆ ಖಾಲಿ ಇದೆ. ಒಡನೆ ಸೇರಬಲ್ಲಿರಾ? ಈ ಕಾಲೇಜಿನ ಹಳೇ ವಿದ್ಯಾರ್ಥಿಗಳಿಗೆ ಆದ್ಯತೆ. ನೀವು ಹೇಗೂ ಒಂದು ವರ್ಷ ಇಲ್ಲಿ ಇದ್ದುದು ಹೌದಷ್ಟೆ."
"ಈ ಗಳಿಗೆಯೇ ಸಿದ್ಧ."
"ಹಾಗಾದರೆ ಬನ್ನಿ, ಪ್ರಾಂಶುಪಾಲರಲ್ಲಿಗೆ ಹೋಗೋಣ."
ಹೋದೆವು. ಪ್ರಾಂಶುಪಾಲ ಬಾಯ್ಡ್‌ರಿಗೆ ನನ್ನ ಹೆಸರು ಕೂಡ ನೆನಪಿನಲ್ಲಿತ್ತು. ಒಡನೆ ನನ್ನನ್ನು ಆ ಹುದ್ದೆಗೆ ನೇಮಿಸಿ ಹಾಸ್ಟೆಲ್‌ನಲ್ಲಿ ಕೊಠಡಿಯನ್ನೂ ಕೊಟ್ಟರು. ನನ್ನ ಹೊಣೆ: ಹಾಸ್ಟೆಲ್‌ನಲ್ಲಿ ಶಿಸ್ತು ಕಾಪಾಡಲು ವಾರ್ಡನ್‌ರಿಗೆ ನೆರವಾಗುವುದು, ವಾರದಲ್ಲಿ ೬ ಗಂಟೆ ಇಂಟರ್ಮೀಡಿಯೆಟ್ ಮತ್ತು ಪದವಿ ತರಗತಿಗಳಿಗೆ ಗಣಿತ ಕಲಿಸುವುದು ಮತ್ತು ಹಿರಿಯ ಪ್ರಾಧ್ಯಾಪಕರು ಕೊಡುವ ವಿದ್ಯಾರ್ಥಿಗಳ ಉತ್ತರಪತ್ರಿಕೆಗಳ ಮೌಲ್ಯ ಮಾಡುವುದು. ಸಂಬಳ ತಿಂಗಳಿಗೆ ರೂ ೮೦. ಕೊಠಡಿಗೆ ಬಾಡಿಗೆ ಇಲ್ಲ. ಇನ್ನೇನು ಬೇಕು ೨೧ರ ಜವ್ವನಿಗನಿಗೆ? ಸ್ವರ್ಗಕ್ಕೆ ಮೂರೇ ಗೇಣು.
ಹೀಗೆ ಅನಿರೀಕ್ಷಿತವಾಗಿ ಎರಡನೆಯ ಸಲ ದೇವರಾಯರ ಅಭಯಪ್ರದಾನ ನನ್ನೆದುರು ಹೊಸ ಹರವನ್ನು ಕಾಣಿಸಿತು:

ಫಲಿತಾಂಶದಾಕಸ್ಮಿಕತೆ ನಿಜಕು ಮನುಜಮತಿ–
ಗಳವಡದ ಋತುಲೀಲೆ –– ನಡೆವುದು ತಪಶ್ಚರ್ಯೆ
ಜಲಧರದ ಸಂಗ್ರಹಕೆ, ತಂಪಿಸಲು ಕೆಡೆಯುವುದು
ಮಳೆ! ತಿಳಿಯೊ ಕಾರ್ಯ–ಕಾರಣ ಬಂಧ ಅತ್ರಿಸೂನು

ಆ ವೇಳೆಗೆ ನಮ್ಮ ಕಾಲೇಜನ್ನು ವಿದ್ಯಾರ್ಥಿಗಳಾಗಿ ಸೇರಿದ್ದವರು ಕು.ಶಿ.ಹರಿದಾಸ ಭಟ್ಟ, ಸೇವ ನಮಿರಾಜ ಮಲ್ಲ, ಪಿ.ರಂಗನಾಥ ಶೆಣೈ ಮತ್ತು ಎಮ್.ಜನಾರ್ದನ. ಬೇಂದ್ರೆ ಹಾಡಿರುವಂತೆ ––
ಯುಗ ಯುಗಗಳ ಹಣೆ ಬರಹವ ಒರಸಿ
ಮನ್ವಂತರಗಳ ಭಾಗ್ಯವ ತೆರೆಸಿ
ರೆಕ್ಕೆಯ ಬೀಸುತ ಚೇತನಗೊಳಿಸಿ
ಹೊಸಗಾಲದ ಹಸುಮಕ್ಕಳ ಹರಸಿ
ಹಕ್ಕಿ ಹಾರುತಿದೆ ನೋಡಿದಿರಾ?



ಅಂದರೆ ಅಂದು (೧೯೪೦ರ ಉತ್ತರಾರ್ಧ) ಕ್ರಿಶ್ಚಿಯನ್ ಕಾಲೇಜಿನ ಪ್ರಶಾಂತ ಪರಿಸರದಲ್ಲಿ ಕನ್ನಡದ ಆರು ಯುವಚೇತನಗಳು ಸಂಗಮಿಸಿ ಜ್ಞಾನದ ವಿಯದ್ವಿಸ್ತೀರ್ಣವನ್ನು ಅನುಶೀಲಿಸಿ ಮಾಪಿಸಲು ಉತ್ಸುಕವಾಗಿದ್ದುವು –
ಬಾಗಲೋಡಿ: ಸರ್ವಂಕಷ ವೈದುಷ್ಯ, ಇದಕ್ಕೊಪ್ಪುವ ಸಹಜ ವಿನಯ, ಕನ್ನಡ–ಹಿಂದಿ–ಇಂಗ್ಲಿಷ್–ಫ್ರೆಂಚ್–ಜರ್ಮನ್ ಪಂಚಭಾಷಾ ಪ್ರಾವೀಣ್ಯ, ಪಾದರಸಬುದ್ಧಿ, ವಿದ್ವತ್ಸಮೂಹದಲ್ಲಿ ಎದ್ದುಕಾಣುವ ಪ್ರಖರ ವ್ಯಕ್ತಿತ್ವ ಮತ್ತು ಮೈವೆತ್ತ ಅನುಕಂಪ. (ನೋಡಿ: ಇದೇ ಲೇಖಕ ಸಂಪಾದಿಸಿರುವ 'ದೇವಸ್ಮರಣೆ – ಬಾಗಲೋಡಿ ದೇವರಾಯ ಸ್ಮರಣ ಸಂಪುಟ')

ಕುಶಿ: "ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು, ಕಲ್ಲಾಗು ವಿಧಿ ಕಷ್ಟಗಳ ಮಳೆಯ ಸುರಿಯೆ, ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ, ಎಲ್ಲರೊಳಗೊಂದಾಗು ಮಂಕುತಿಮ್ಮ" –– ಈ ತತ್ತ್ವದ ಮಾನುಷರೂಪ, ವೈದುಷ್ಯ ಮತ್ತು ಕುತೂಹಲ ಕುರಿತಂತೆ ಬಾಗಲೋಡಿಸಮಾನರು ಮತ್ತು ಸಂಘಜೀವಿ.
ಮಲ್ಲ: ದಿನಕ್ಕೊಂದರಂತೆ ಕಥೆ ಉದುರಿಸುತ್ತಿದ್ದ ಸ್ಯಮಂತಕಮಣಿ, ದೈತ್ಯ ಲೇಖಕ, ಜನವಿದೂರ, ಅಂತರ್ಮುಖಿ ಮತ್ತು ಸಹೃದಯ ಸನ್ಮಿತ್ರ.
ಶೆಣೈ: ಶಿಶು ಆಂಜನೇಯ ಜನಿಸಿದೊಡನೆ ಬಾನಿನಲ್ಲಿಯ ಹಣ್ಣು (ಉದಯಸೂರ್ಯ) ಬಯಸಿ ಅತ್ತ ನೆಗೆದನಂತೆ! ಆ ಗೋತ್ರಜರಿವರು. ಉದಾರ ಹೃದಯಿ, ಉಪಕಾರಿ ಮತ್ತು ಸದಾ ಕಾರ್ಯಪ್ರವೃತ್ತ.
ಜನಾರ್ದನ: ತತ್ತ್ವಶಾಸ್ತ್ರದ ನೈಷ್ಠಿಕ ವಿದ್ಯಾರ್ಥಿ, ಅತಿ ಮುಗ್ಧ ಮತ್ತು ಹೃದಯವಂತ. ವ್ಯವಹಾರದಲ್ಲಿ ಮೋಸಹೋದರೂ ಅದನ್ನು ತಲೆಗೆ ಹಚ್ಚಿಕೊಳ್ಳದ ಋಜುವೇದಾಂತಿ.
ಜಿಟಿ: "ಮಾಡಿದ ಅಡುಗೆಗೆ ಊಟವೆ ಸಾಕ್ಷಿ" ಎಂಬ ದಾಸವಾಣಿಯಂತೆ ಪ್ರಸ್ತುತ ಪುಸ್ತಕವೇ ನಿದರ್ಶನ.
ಮೊದಲ ಐವರದೂ ಇಂದು (೨೦೦೬) ನೆನಪು ಮಾತ್ರ. ಅದು ಹೇಗಿದೆ? ವಿಸೀಯವರ ಅಮರವಾಣಿಯಲ್ಲಿ –

ಸತ್ತಮೇಲೆ ಉಳಿವುದೇನು?
ಪುಸ್ತಕವೆ? ವಿದ್ವತ್ತೆ? ನೆನಪೆ? ಗೈಮೆಯೆ?
ಹತ್ತು ಜನಕಿತ್ತ ನೆರವೆ? ನಟ್ಟು
ನಡೆಸಿದ ಸುವ್ಯವಸ್ಥೆಗಳೆ? ಗುಣವೆ?
ಹೊರ ಪ್ರಪಂಚಕೆ ಹಿರಿಯವಿವು ಸರಿಯೆ,
ಅದಕಿಂತ ಚೆಲುವಾದ್ದು ನರನ ಪಾಲಿಗೆ
ಇದೆಯೆ ಎಂದೀರಿ; –– ಇದೆ ......
ಕಂಡವರಿಗೆ, ಬಳಿಗೆ ಬಂದವರಿಗೆ

ಯಾವ ತೆರನ ಮನುಜನಿವನೆಂಬ ಇಂಪು,
ಅವನು ಕಾಣಿಸಿದಾ ಆದರ, ಜೀವನೋತ್ಸಾಹ,
ತುಂಬು ನೆಮ್ಮದಿ; ಚಿತ್ತ ಚಾಂಚಲ್ಯವಿಲ್ಲದ್ದು ......
ಲೋಕದ ಕೆಳೆ, ವಿಶ್ವಾಸಗಳಿಗಿಂತ ಬೇರೆ
ಏನಿದೆ?

ನಮ್ಮೊಳಗಿನ ಪರಸ್ಪರ ಸಂಬಂಧಗಳು ಮೈತ್ರಿಯ ಭದ್ರ ತಳಪಾಯದ ಮೇಲೆ ಅರಳಿದ ಗೌರವ, ಜೀವನಾಸಕ್ತಿ ಮತ್ತು ಅನ್ವೇಷಣಕುತೂಹಲ. ದೇವರಾಯರು ಮಿದುಳು, ಕುಶಿ ಹೃದಯ, ಉಳಿದ ನಾವು ನಾಲ್ವರು ಅಂಗೋಪಾಂಗಗಳು. ಹೀಗೆ ಕ್ರಿಶ್ಚಿಯನ್ ಕಾಲೇಜಿನ ತಮಿಳು–ಇಂಗ್ಲಿಷ್ ದ್ವೀಪದೊಳಗೆ "ಹಚ್ಚೇವು ಕನ್ನಡದ ದೀಪ." ನಮ್ಮ ಮಂತ್ರ "ಬಾರಿಸು ಕನ್ನಡ ಡಿಂಡಿಮವ ಹೇ ಕರ್ನಾಟಕ ಹೃದಯಶಿವ" ಮತ್ತು ತಂತ್ರ ––

ಜ್ಞಾನಸಂಜೀವಿನೀ ಶೋಧನೆಗೆ ಹನುಮಂತ,
ಧ್ಯಾನಮಗ್ನತೆಯಲ್ಲಿ ನಚಿಕೇತನಾಗೆಲೋ
ವೈನತೇಯನ ದೃಷ್ಟಿ ಭೀಮಸೇನನ ಶಕ್ತಿ
ನೀನಾಗಿ ಮೈದಳೆವೆ ನಡೆಮುಂದೆ ಅತ್ರಿಸೂನು

ಇಂಗ್ಲಿಷ್ ಸಾಹಿತ್ಯವನ್ನು ದೇವರಾಯರ ಬೆಳಕಿನಲ್ಲಿ ಆಳವಾಗಿ ಅಭ್ಯಸಿಸಿದೆವು, ಕನ್ನಡ ವಾಙ್ಮಯ ಕುರಿತು ಸಂಯುಕ್ತವಾಗಿ ವಿಮರ್ಶಿಸಿದೆವು ಮತ್ತು ತಮಿಳು ಭಾಷೆಯಲ್ಲಿ ವ್ಯವಹರಿಸಿದೆವು. ಸ್ವಾತಂತ್ರ್ಯ ಅದಾಗ ತಾನೇ ಉದಯಿಸಿ ಸರ್ವತ್ರ ನವಚೈತನ್ಯ ಮತ್ತು ಅಮಿತ ಕ್ರತುಶಕ್ತಿ ಹೊಮ್ಮುತ್ತಿದ್ದು ನಮ್ಮ ಅಸ್ಮಿತೆಗೆ ಕೋಡು ಮೂಡಿತ್ತು. ಸಹಜವಾಗಿ "ಓ ಭರತ ಮಾತೆಯ ವರಪುತ್ರ! ಪರರ ಕಣ್ಣ ಕನ್ನಡಕದಲ್ಲಿ ಜಗದಿರವ ನೋಡುವುದ ತೊರೆ, ಶ್ರೀಹೃದಯ ಶಾರದೆಯ ಭಜಿಸಿ ಪಡೆದವಳ ಕರದ ಪುಸ್ತಕವ ತೆರೆ" (ಸೇಡಿಯಾಪು) ದೀಕ್ಷೆಯಾಯಿತು.

ಟ್ಯೂಟರುಗಳಾಗಿದ್ದ ನಮಗೆ ಕಾಲೇಜ್ ಕೆಲಸ ವಿಶೇಷವೇನೂ ಇರಲಿಲ್ಲ. ಹೀಗಾಗಿ ಬಿಡು ವೇಳೆ ಪೂರ್ತಿ ಅಧ್ಯಯನ, ಚಿಂತನ, ವಿಚಾರಮಂಥನ, ಸ್ವಂತ ಸಾಹಿತ್ಯ ರಚನೆ ಮತ್ತು ಗುಡ್ಡ ಕಾಡು ಪರ್ಯಟನೆಗಳಲ್ಲಿ ಮಗ್ನರಾಗಿರುತ್ತಿದ್ದೆವು. ಕಾಲೇಜಿನ ಎಲ್ಲ ಪಾಠೇತರ ಚಟುವಟಿಕೆಗಳಲ್ಲಿಯೂ ನಮ್ಮ 'ಕನ್ನಡ ಕೂಟ' ಸಕ್ರಿಯವಾಗಿ ಪಾತ್ರವಹಿಸುತ್ತ ಸಕಲರ ಗೌರವಾದರಗಳಿಗೆ ಭಾಜನವಾಗಿತ್ತು. ನನಗಂತೂ ವಾರಾಂತ್ಯದಲ್ಲಿ ಕರ್ನಾಟಕ ಸಂಗೀತ ಬೈಠಕ್ಕಿನಲ್ಲಿ ಹಾಜರಾಗುವುದು ಕಡ್ಡಾಯ. ನನ್ನ ಸಂಗೀತ ಹುಚ್ಚು ಮತ್ತು ವರ್ಣನೆಗಳಿಗೆ ಮನಸೋತ ಬಾಗಲೋಡಿ ಮತ್ತು ಕುಶಿ ಆಗ ಈಗ ನನ್ನ ಜೊತೆ ಜಿಎನ್‌ಬಿ, ಮಧುರೆ ಮಣಿ, ಎಂಎಸ್, ಮಾಲಿ, ದ್ವಾರಂ, ಚೆಂಬೈ ಮೊದಲಾದ ಸಂಗೀತ ದಿಗ್ಗಜರ ಕಛೇರಿಗಳಿಗೆ ಬರುತ್ತಿದ್ದರು. ಕ್ರಮೇಣ ಅವರಿಗೂ ಈ ಗೀಳು ಅಂಟಿತು. ಅಂದು ಕುಶಿ ಮನದಲ್ಲಿ ಬಿತ್ತಿದ ಈ ಬೀಜ ಮುಂದೆ ಅವರ ತವರು ಮತ್ತು ಕಾರ್ಯಕ್ಷೇತ್ರ ಉಡುಪಿಯನ್ನು ಶಾಸ್ತ್ರೀಯ ಸಂಗೀತದ ಒಂದು ಪ್ರಮುಖ ಆಡುಂಬೊಲವಾಗಿ ಅರಳಿಸುವುದರಲ್ಲಿ ಹೇಗೆ ಯಶಸ್ವಿಯಾಯಿತೆಂಬುದು ಈಗ ಇತಿಹಾಸ (ನೋಡಿ: ಇದೇ ಲೇಖಕನ 'ಸಂಗೀತ ರಸನಿಮಿಷಗಳು'):

ಬಿತ್ತುವುದು ಪರಿಶುದ್ಧ ಬೀಜವನು ಫಲವಂತ
ಹಿತ್ತಲಲಿ ನಿನ್ನ ಹೊಣೆ, ಹಿಂತಿರುಗಿ ನೋಡದಿರು ––
ಚಿತ್ತದಲಿ ಮೂಡೀತಹಂಕಾರ, ಜಗಕೆ ಬಿಡು
ಉತ್ತಮ ಫಲ, ನಿಮಿತ್ತ ನೀನೆಲೋ! ಅತ್ರಿಸೂನು

ಸೋಮವಾರದಿಂದ ಶುಕ್ರವಾರದ ತನಕ ಆ ಎರಡೂ ವರ್ಷ (೧೯೪೭–೪೯) ದೇವರಾಯರು ದೂರದ ಮದ್ರಾಸು ವಿಶ್ವವಿದ್ಯಾಲಯಕ್ಕೆ ಹೋಗಿ ಫ್ರೆಂಚ್, ಜರ್ಮನ್ ಮತ್ತು ರಶ್ಯನ್ ಭಾಷೆಗಳನ್ನು ಕಲಿತು ಡಿಪ್ಲೊಮಾ ಪದವೀಧರರಾದರು. ಸ್ವತಂತ್ರ ಭಾರತದ ಕೇಂದ್ರೀಯ ಸೇವಾವ್ಯವಸ್ಥೆ (Indian Foreign Service or Indian Administrative Service) ಸೇರಬೇಕೆಂಬುದು ಅವರ ಆಸೆ. ಆ ಪ್ರಖರ ಧೀಶಕ್ತಿ ಇರದಿದ್ದ ನಾನು ಆರಂಭಶೂರತ್ವ ಪ್ರದರ್ಶಿಸಿ ಸ್ಟ್ಯಾಟಿಸ್ಟಿಕ್ಸ್ ಡಿಪ್ಲೊಮಾ ತರಗತಿಗೆ ದಾಖಲಾದೆ. ಆದರೆ ನನ್ನ ಬೊಗಸೆ ಚಿಕ್ಕದು. ನಡುವಿನಲ್ಲೇ ಕೈಚೆಲ್ಲಿದೆ. "ಕಡಲೇಳಂ ಮಗುಚಿಟ್ಟೊಡಂ, ಕಲಿಯೆ ನಾನಾ ಹೃದ್ಯ ವಿದ್ಯಂಗಳಂ, ಪಡೆದಷ್ಟಲ್ಲದೆ ಬರ್ಪುದೇ ಹರಹರಾ ಶ್ರೀಚೆನ್ನಸೋಮೇಶ್ವರಾ?"

ಆ ದಿನಗಳಂದು ನಾವೆಲ್ಲ ಕನ್ನಡದಲ್ಲಿ ಸಣ್ಣ ಕತೆಗಳನ್ನು ಬರೆದು ಅಂದಿನ ಪ್ರಸಿದ್ಧ ಮಾಸಪತ್ರಿಕೆಗಳಾದ 'ಜೀವನ,' 'ಜಯಂತಿ,' 'ಜಯಕರ್ನಾಟಕ,' 'ಸುಬೋಧ' ಮುಂತಾದವುಗಳಿಗೆ ಕಳಿಸುತ್ತಿದ್ದೆವು. ಎಲ್ಲವೂ ಯಥಾಕಾಲ ಪ್ರಕಟವೂ ಆಗುತ್ತಿದ್ದುವು. ನಮ್ಮ ಪೈಕಿ ದೇವರಾಯರ ಕತೆಗಳನ್ನು 'ಕನ್ನಡದಲ್ಲಿ ಸಣ್ಣ ಕತೆಗಳ ಒಬ್ಬ ಜನಕ' ಎಂಬ ಅರ್ಥಪೂರ್ಣ ಬಿರುದಾಂಕಿತರಾಗಿದ್ದ ಮಾಸ್ತಿಯವರೇ ಮೆಚ್ಚಿ ತಮ್ಮ 'ಜೀವನ' ಮಾಸಿಕದಲ್ಲಿ ಪ್ರಕಟುಸುತ್ತಿದ್ದರು. ಉತ್ಸಾಹ, ಉಲ್ಲಾಸ, ದೈಹಿಕ–ಬೌದ್ಧಿಕ ಸಾಹಸಪ್ರದರ್ಶನ, ಜ್ಞಾನದ ನವಪ್ರಾಂತಾನ್ವೇಷಣೆ ಮುಂತಾದವು ಅಂದು ನಮ್ಮ ಬದುಕಿಗೆ ಹೊಸ ಉದ್ದೇಶ ಮತ್ತು ಅರ್ಥ ನೀಡಿದ ಧಾತುಗಳು.

ಹೇಗೂ ಇರಲಿ. ೧೯೪೯ರ ಶೈಕ್ಷಣಿಕ ವರ್ಷ ಅದೇ ಏಪ್ರಿಲ್ ಕೊನೆಗೆ ಮುಗಿಯಿತು. ಮುಂದೆ ಟ್ಯೂಟರ್ ಆಗಿ ಅಲ್ಲಿ ಮುಂದುವರಿಯುವಂತಿಲ್ಲ. ಉಪನ್ಯಾಸ ಪದವಿ ಖಾಲಿ ಇರಲಿಲ್ಲ. ಮುಂದೇನು?

ಉಪನ್ಯಾಸಗಿರಿಗೆ ಬಡ್ತಿ
ಅಧ್ಯಾಯ ಇಪ್ಪತ್ತು



೧೯೪೯ ಶೈಕ್ಷಣಿಕ ವರ್ಷಾರಂಭ. ಕೊಡಗು ಸರ್ಕಾರ ಮಡಿಕೇರಿಯಲ್ಲಿ ಹೊಸ ಕಾಲೇಜು ಸ್ಥಾಪಿಸಲು ಮುಂದಾಯಿತು: ಆರಂಭದಲ್ಲಿ ಮದ್ರಾಸು ವಿಶ್ವವಿದ್ಯಾಲಯಕ್ಕೆ ಸಂಯೋಜಿತವಾದ ಸರ್ಕಾರೀ ಇಂಟರ್ಮೀಡಿಯೆಟ್ ಕಾಲೇಜ್. ತತ್ಸಂಬಂಧವಾದ ಜಾಹೀರಾತು ರಾಷ್ಟ್ರದ ಪ್ರಮುಖ ದೈನಿಕಗಳಲ್ಲಿ ಪ್ರಕಟವಾಯಿತು: ಕೇಂದ್ರ ಸರ್ಕಾರದ ವೇತನಶ್ರೇಣಿ ಮತ್ತು ಸೇವಾಸೌಲಭ್ಯ. ಆಗ ನೆರೆರಾಜ್ಯಗಳಲ್ಲಿ (ಮೈಸೂರು ಸಂಸ್ಥಾನ ಮತ್ತು ಮದ್ರಾಸು ಪ್ರಾಂತ) ಉಪನ್ಯಾಸಕರ ಸಂಬಳ ತಿಂಗಳಿಗೆ ರೂ ೧೦೦–೨೫೦ ಶ್ರೇಣಿಯಲ್ಲಿತ್ತು. ಕೊಡಗಿನಲ್ಲಾದರೋ ಇದು ರೂ ೨೫೦–೪೦೦! ಸಹಜವಾಗಿ ಇಡೀ ರಾಷ್ಟ್ರದಿಂದ ಅಸಂಖ್ಯ ಅನುಭವಿಗಳು ಹೊಸ ಕಾಲೇಜಿಗೆ ಅರ್ಜಿ ಲಗ್ಗೆಹಾಕಿದರು. ಕೇವಲ ೨ ವರ್ಷ ಅನುಭವವಿದ್ದ, ಆದರೆ ಸ್ಥಳೀಯನೇ ಆಗಿದ್ದು ಅಲ್ಲಿಯ ಸರ್ಕಾರ ನೀಡಿದ ವಿದಾರ್ಥಿವೇತನದಿಂದ ಓದಿದ್ದ, ನಾನೂ ಅರ್ಜಿ ಗುಜರಾಯಿಸಿದೆ.

ಕೊಡಗು ರಾಜ್ಯದ ಚೀಫ಼್ ಕಮಿಷನರ್ ಮತ್ತು ಅವರ ಆಪ್ತ ಸಹಾಯಕರು ಗುಣಪಕ್ಷಪಾತಿಗಳಾಗಿದ್ದುದೊಂದು ಅದೃಷ್ಟ. ನನ್ನನ್ನೂ ಆಯ್ಕೆ ಭೇಟಿಗೆ ಕರೆದಿದ್ದರು. ಆ ಎಲ್ಲ ಅಧಿಕಾರಿಗಳೂ ನನಗೆ ಪರಿಚಿತರೇ. ಖಾಸಗಿಯಾಗಿ ಅವರೆಂದರು, "ನೀನಿನ್ನೂ ಅನನುಭವಿ. ಮುಂದೆ ಕಾಲೇಜಿನಲ್ಲಿ ಪದವಿ ತರಗತಿಗಳನ್ನು ಆರಂಭಿಸುವಾಗ ನಿನ್ನ ಅರ್ಜಿಯನ್ನು ಪರಿಶೀಲಿಸೋಣ."
ಅಲ್ಲಿಯ ಗಣಿತೋಪನ್ಯಾಸಕರ ಹುದ್ದೆಗೆ ಸಂತ ಅಲೋಶಿಯಸ್ ಕಾಲೇಜಿನ ವಿ.ವೆಂಕಟರಮಣರಾವ್ ಎಂಬ ಹಿರಿಯರು ಆಯ್ಕೆಯಾದರು. ನನ್ನ ಈ ಮಾತೃಸಂಸ್ಥೆಯಿಂದ ಬಂದಿದ್ದ ಇವರ ಪರಿಚಯಮಾಡಿಕೊಂಡೆ. ಆ ವಿನಯದ ಸಾಕಾರಮೂರ್ತಿ ನುಡಿದರು, "ಇಲ್ಲಿ ನಾನೇನಾದರೂ ಆಯ್ಕೆಗೊಂಡರೆ ಒಡನೆ ಅಲ್ಲಿಯ ಕೆಲಸಕ್ಕೆ ರಾಜಿನಾಮೆಯಿತ್ತು ಬರಲು ಒಪ್ಪಿದ್ದೇನೆ. ಅಲ್ಲಿರುವ ನಿಮ್ಮ ಮಾಜಿ ಗುರುಗಳಾದ ಕೆ.ಎ.ಕೃಷ್ಣಮೂರ್ತಿ ಮತ್ತು ಬಿ.ಭುಜಂಗರಾಯರ ಬಳಿ ನಿಮ್ಮ ಬಗ್ಗೆ ಪ್ರಸ್ತಾವಿಸುತ್ತೇನೆ." ಮುಂದಿನ ಎರಡೇ ದಿನಗಳಲ್ಲಿ ಭುಜಂಗರಾಯರಿಂದ ನನಗೆ ತಂತಿ ಸಂದೇಶವೇ ಬಂತು: "ತತ್‌ಕ್ಷಣ ಹೊರಟುಬಂದು ಇಲ್ಲಿಯ ಉಪನ್ಯಾಸಕ ಹುದ್ದೆಗೆ ದಾಖಲಾಗು!"

ಅದೇ ಜುಲೈ ಆರಂಭದಲ್ಲಿ "ತೆಂಕಣ ಗಾಳಿಯು ಕೊಂಕಣ ಸೀಮೆಗೆ" ಬಡಿದು ಮಳೆ ಜಡಿದು ಉತ್ಪಾತವೆಸಗುತ್ತಿದ್ದಾಗ ಘಟ್ಟದ ಮೇಲಿನ ನಾನು ಅಲ್ಲಿ ಲೆಕ್ಚರರ್–ಇನ್–ಮ್ಯಾತ್‌ಮೆಟಿಕ್ಸ್ ಆಗಿ ನೇಮನಗೊಂಡೆ. ತಿಂಗಳಿಗೆ ಸಂಬಳ ರೂ ೧೦೦ + ರೂ ೧೭.೫೦ ತುಟ್ಟಿಭತ್ಯ. ನಾನು ಇಂಟರ್ಮೀಡಿಯೆಟ್ ಓದಿದ ಕಾಲೇಜ್, ನನ್ನ ಗುರುಗಳ ಕಿರಿಯ ಸಹೋದ್ಯೋಗಿ, ಅದ್ಭುತ ಪ್ರತಿಭೆಯ ವಿದ್ಯಾರ್ಥಿಗಳು, ಪಾತಾಳ ಮಟ್ಟದಿಂದ ನಾಲ್ಕನೆಯ ಅಂತರಿಕ್ಷ ಉನ್ನತಿಗೆ ಚಾಚಿದ್ದ ಮಹಾಸೌಧ –– ಈ ಭವ್ಯ ಪರಿಸರದಲ್ಲಿ ನಾನೊಬ್ಬ ಗಣ್ಯ! "ನೀನೇರಬಲ್ಲೆಯಾ ನಾನೇರುವೆತ್ತರಕೆ" ಎಂದು ಇಡೀ ಪರಿಸರ ನನ್ನನ್ನು ಕುತೂಹಲದಿಂದ ಪರೀಕ್ಷಿಸುತ್ತಿದ್ದ ಸನ್ನಿವೇಶ.

ವಾಸ ಮತ್ತು ಆಹಾರ ಕಾಲೇಜ್ ಆವರಣದಲ್ಲಿಯ ಸ್ಟಾಫ್ ಕ್ವಾರ್ಟರ್ಸ್‌ನಲ್ಲಿ, ಎರಡು ಹೆಜ್ಜೆ ನಡೆದರೆ ಕಾಲೇಜ್ ಸೌಧಗಳು, ಪಶ್ಚಿಮಕ್ಕೆ ದೃಷ್ಟಿ ಹರಿಸಿದರೆ "ಪಡುವಣ ಕಡಲಿನ ತೆಂಗಿನ ಮಡಲಿನ ಮರೆಯಲಿ" ಅಡಗಿಹ ಮಂಗಳೂರು, ಇದರ ಅಂಚಿಗೆ ವಿಸ್ತಾರವಾದ ಅರೇಬಿಯನ್ ಸಮುದ್ರ. ಅಧ್ಯಯನ ಮತ್ತು ಅಧ್ಯಾಪನಗಳಿಗೆ ಇದಕ್ಕಿಂತ ಹೆಚ್ಚಿನ ಅವಕಾಶ ಮತ್ತು ಸನ್ನಿವೇಶ ಲಭಿಸೀತೇ? ತತ್ಪೂರ್ವ ಅದೇ ಕಾಲೇಜಿನಲ್ಲಿ ನನ್ನ ಗಣಿತ ಗುರುಗಳಾಗಿದ್ದ ಕೃಷ್ಣಮೂರ್ತಿಯವರನ್ನೂ ಭುಜಂಗರಾಯರನ್ನೂ ಭೌತವಿಜ್ಞಾನ ಗುರುವಾಗಿದ್ದ ಎಸ್.ನಾರಾಯಣಹೊಳ್ಳರನ್ನೂ ಆತ್ಮೀಯವಾಗಿ ಭೇಟಿಮಾಡಿ ಮಾರ್ಗದರ್ಶನ ಕೋರಿದೆ. ಅವರೆಲ್ಲರ ಹಿತೋಕ್ತಿಗಳ ಸಾರವಿಷ್ಟೇ: "ನಿಮಗೆ ನಿಮ್ಮ ಉತ್ಕೃಷ್ಟ ಗುರು ಏನಾಗಿದ್ದರೋ ಹಾಗೆ ನೀವು ನಿಮ್ಮ ವಿದ್ಯಾರ್ಥಿಗಳಿಗೆ ಆಗಬೇಕು. ವಿಷಯ ಕುರಿತು ಪೂರ್ವಸಿದ್ಧತೆ ಇಲ್ಲದೇ ಎಂದೂ ತರಗತಿಗೆ ಹೋಗಬಾರದು. ಉಪನ್ಯಾಸದ ಪೂರ್ಣಪಾಠವನ್ನು ಮೊದಲೇ ಬರೆದು, ಕನ್ನಡಿ ಮುಂದೆ ನಿಂತು ಗಟ್ಟಿಯಾಗಿ ಓದಿ, ಅದು ವಿದ್ಯಾರ್ಥಿಗಳಿಗೆ ಮನದಟ್ಟಾಗುವಂತೆ ವಿವರಿಸುವ ಕಲೆ ಸಾಧಿಸಿಕೊಳ್ಳಬೇಕು, ನೂತನ ಪರಿಕಲ್ಪನೆಯೊಂದನ್ನು ಪ್ರವೇಶಗೊಳಿಸುವ ಮೊದಲು ಅದರ ಇತಿಹಾಸದ ಬಗ್ಗೆ ಪ್ರಸ್ತಾವಿಸಿ ವಿದ್ಯಾರ್ಥಿಗಳಲ್ಲಿ ಸುಪ್ತವಾಗಿರುವ ಪ್ರತಿಭೆಯನ್ನು ಉದ್ದೀಪಿಸಬೇಕು, ತರಗತಿಯಲ್ಲಿಯ ಕನಿಷ್ಠ ಬೌದ್ಧಿಕ ಮಟ್ಟದ ವಿದ್ಯಾರ್ಥಿಗೂ ನಿಮ್ಮ ವಿವರಣೆ ಅರ್ಥವಾಗುವಂತೆ ಸತತ ಪ್ರಯತ್ನಶೀಲರಾಗಿರಬೇಕು, ಮತ್ತು ಕು-ವಿದ್ಯಾರ್ಥಿ ಜನಿಸಲೇ ಇಲ್ಲ ಎಂಬ ಧನಾತ್ಮಕ ಧೋರಣೆಯನ್ನು ಸದಾ ತಳೆದು ತದನುಸಾರ ವರ್ತಿಸಬೇಕು." ಹೌದು, ಅವರೆಲ್ಲರೂ ಇಂಥ ಆದರ್ಶದೀಪ್ತರಾಗಿದ್ದರೆಂಬುದು ನನ್ನ ಪ್ರತ್ಯಕ್ಷ ಅನುಭವ.

ಆಗ ನನ್ನ ಪ್ರಾಯ ಕೇವಲ ೨೩ ಇಂಟರ್ಮೀಡಿಯೆಟ್ ವಿದ್ಯಾರ್ಥಿಗಳ ಸರಾಸರಿ ವಯಸ್ಸು ೧೭, ಇನ್ನು ಪದವಿ ತರಗತಿಗಳಲ್ಲಿ ಇದು ೧೯ನ್ನು ಮೀರಿರಲಿಲ್ಲ. ಅಂದಿನ ಅವಿಭಕ್ತ ದಕ್ಷಿಣ ಕನ್ನಡ ಜಿಲ್ಲೆ ಇಡೀ ಮದ್ರಾಸು ಪ್ರಾಂತದಲ್ಲಿ ಶೈಕ್ಷಣಿಕವಾಗಿ ಮುಂಚೂಣಿಯಲ್ಲಿತ್ತು. ಇಲ್ಲಿಯ ಒಬ್ಬೊಬ್ಬ ವಿದ್ಯಾರ್ಥಿಯೂ ಬೃಹಸ್ಪತಿಯೇ -- ಶಾಲೆಯಲ್ಲಿ ಉತ್ತಮ ಬೋಧನೆ, ಮನೆಯಲ್ಲಿ ಸಮರ್ಥ ಪ್ರೋತ್ಸಾಹ, ಸಮಾಜದಲ್ಲಿ ಉನ್ನತ ಗೌರವ ಎಲ್ಲವೂ ಸಂಗಳಿಸಿ ವಿದ್ಯಾರ್ಜನೆ ಅಲ್ಲೊಂದು ತಪಶ್ಚರ್ಯೆಯೇ ಆಗಿತ್ತು. ಮನೋವೈಜ್ಞಾನಿಕವಾಗಿ ಹೇಳುವುದಾದರೆ ನಾನೂ ವಿದ್ಯಾರ್ಥಿಗಳೂ ಹೆಚ್ಚುಕಡಿಮೆ ಒಂದೇ ಮಟ್ಟದಲ್ಲಿದ್ದೆವು. ಆದರೂ ನಾನವರ ಬೌದ್ಧಿಕ ನಾಯಕ! ಇಂಥ ಪೈಪೋಟಿಯ ಕಳದಲ್ಲಿ ನನ್ನ ಅಸ್ತಿತ್ವ ಛಾಪಿಸಲು ನನಗಿದ್ದ ಹಾದಿ ಒಂದೇ: ಒಳಗೂ ಹೊರಗೂ ಭರ್ಜರಿ ಪೋಷಾಕುಧಾರಿಯಾಗಿ ತರಗತಿಯನ್ನು ಪ್ರವೇಶಿಸುವುದು.

ಅಂದು ನಾನು ಸೂಟು-ಬೂಟು-ಟೈಗಳಿಂದ ಪೂರ್ಣಾಲಂಕೃತನಾಗಿ ಅತಿ ತ್ವರಿತ ಗತಿಯಲ್ಲಿ ನಡೆದಾ(ದೋ)ಡುತ್ತಿದ್ದೆ. ಮಾತು ನಡವಳಿಕೆ ಕೂಡ ಹಾಗೆಯೇ ಬಲು ಚುರುಕು., ಸದಾ ಟಾಪ್ ಗಿಯರಿನಲ್ಲೇ ತರಗತಿಯಲ್ಲಿ ಪಾಠ ಪ್ರವಚನಗಳನ್ನು ಚೆನ್ನಾಗಿ ಮಾಡುತ್ತಿರುವೆನೆಂದು ವಿದ್ಯಾರ್ಥಿಗಳಿಂದ ಸಕಾರಣ ಪ್ರಶಂಸೆ ಗಳಿಸಿದೆ ನಿಜ. ಆದರೆ ನನ್ನ ತೀವ್ರ ದ್ರುತ ನಡೆ, ನುಡಿ ಮತ್ತು ಪ್ರತಿಕ್ರಿಯೆ ಅನೇಕ ರಸಸನ್ನಿವೇಶಗಳಿಗೆ ಎಡೆಕೊಟ್ಟುವು. ಕೆಲವು ಉದಾಹರಣೆಗಳು:

ಎಂದಿನಂತೆ ತರಗತಿಯನ್ನು ತುರ್ತಾಗಿ ಪ್ರವೇಶಿಸಿ ವೇದಿಕೆಯಲ್ಲಿ ನಿಂತಾಗ ಕರಿಹಲಗೆ ಮೇಲೆ ಕಂಡದ್ದೇನು? **G**rand **T**runk **N**onstop Railway! ನನ್ನ ಹೆಸರಿನ ಪ್ರಥಮಾಕ್ಷರಗಳನ್ನು ವಿದ್ಯಾರ್ಥಿಗಳು ಹೀಗೆ (ಅಪ-) ವ್ಯಾಖ್ಯಾನಿಸಿದ್ದರು. ಅಂದಹಾಗೆ ಅಂದು ಈ Grand Trunk train ಮದ್ರಾಸು-ದೆಹಲಿ ನಡುವೆ ಅತಿ ತ್ವರಿತ ವೇಗದಿಂದ ಧಾವಿಸುತ್ತಿದ್ದ ಟ್ರೈನ್.

೧೨೦ ಮಂದಿಯ ಆ ತರಗತಿಯಲ್ಲಿ ಹಿಂದಿನ ಸಾಲಿನ ಒಬ್ಬ ಹುಡುಗ ದೊಡ್ಡದಾಗಿ ಬಾಯಿಕಳೆದು ಸಶಬ್ದವಾಗಿ ಆಕಳಿಸಿದ. ಅತ್ತ ಚಿಮ್ಮಿದೆ ಬಾಣದಂತೆ, "ತಾಯಿಗೆ ಬಾಯಲ್ಲಿ ಜಗವನ್ನೆ ತೋರಿದ" ಎಂಬ ಪುರಂದರದಾಸರ "ಜಗದೋದ್ಧಾರನ ಆಡಿಸಿದಳು ಯಶೋದಾ" ಹಾಡನ್ನು ಉಲ್ಲೇಖಿಸಿ ಹೇಳಿದೆ, "ತಮ್ಮಾ! ನೀನು ಹೀಗೆ ಕಿಸುಬಾಯಿಯನ್ನು ಸಾರ್ವಜನಿಕವಾಗಿ ತೆರೆದು ತೋರಿಸಿದರೆ ಅದರೊಳಗೆ ಜಗ ಕಾಣಲು ನಾನು ಗೋಪಿ ಅಲ್ಲ, ನೀನು ಕೃಷ್ಣನೂ ಅಲ್ಲ!" ಮರುಮುಂಜಾನೆ ಕರಿಹಲಗೆ ಮೇಲೆ ನಾನು ಕಂಡದ್ದೇನು? ಹುಡುಗನ ಮೊಸಳೆಬಾಯಿ ತೆರೆದಿದೆ, ಅದರೊಳಗೆ ಭೂಮಂಡಲ, ಹೊರಗೆ ಗಾಬರಿಯಿಂದ ನೋಡುತ್ತಿದ್ದೇನೆ ಮರಿಗೆಟೊಪ್ಪಿ-ಬೂಟುಧಾರಿ ದೊರೆಯಾದ ನಾನು!

ಅಲ್ಲಿಯ ಬಿಸಿಲ ಧಗೆಯಲ್ಲಿ ಗಣಿತದ ಸಹಜ ಕಾಠಿಣ್ಯ ತೀವ್ರಗೊಂಡಾಗ ಅನೇಕ ಹುಡುಗರು ಗಣಿತಪಾಠ ಆಲಿಸುವುದರಲ್ಲಿ ನಿರಾಸಕ್ತರಾಗುತ್ತಿದ್ದುದು ನನ್ನ ಲಕ್ಷ್ಯಕ್ಕೆ ಬಂದಿತು. ಆಗ ರಾಮಕೃಷ್ಣ ಪರಮಹಂಸರು ಹೇಳಿದ ಒಂದು ಕತೆಯನ್ನು ಉಲ್ಲೇಖಿಸಿದೆ.

ಪುರದ ರಾಜನೊಂದು ದಿವಸ ತನ್ನ ಮೆಚ್ಚಿನರಸಿಯೊಡನೆ
ಮಾತನಾಡುತಿದ್ದ ವೇಳೆ ಕಳ್ಳನೊಬ್ಬ ಕದ್ದು ಕೇಳಿ
ಹೊಸತು ಹಂಚಿಕೆಯನು ಹೂಡಿದ!
ಸಭ್ಯನಂತೆ ನಟನೆ ಮಾಡಿದ!

ಅರಸ ತನ್ನ ಪತ್ನಿಗೆ ಹೇಳಿದ, "ನಮ್ಮ ಮುದ್ದಿನ ಮಗಳಿಗೆ ಯೋಗ್ಯ ವರ ಇನ್ನೂ ಪತ್ತೆ ಆಗಿಲ್ಲ. ನಾಳೆ ಮುಂಜಾನೆ ನಾನು ಮಂತ್ರಿಪರಿವಾರ ಸಹಿತ ಗಂಗಾತಟಕ್ಕೆ ಹೋಗಿ ಅಲ್ಲಿ ತಪಸ್ಸ್ವಾಧ್ಯಾಯನಿರತರಾಗಿರುವ ಋಷಿಪುಂಗವರಲ್ಲಿ ಒಬ್ಬನನ್ನು ಅಳಿಯನನ್ನಾಗಿ ಬರಲು ಒಪ್ಪಿಸುತ್ತೇನೆ."

ಯಥಾಕಾಲ ರಾಜ ಅಲ್ಲಿ ಹಾಜರಾಗಿ ಒಬ್ಬೊಬ್ಬನೇ ಋಷಿ ಹತ್ತಿರ ಹೋಗಿ ತನ್ನ ಕೋರಿಕೆಯನ್ನು ನಿವೇದಿಸತೊಡಗಿದ. ಆದರೆ ಒಬ್ಬನೂ ಕಣ್ಣು ತೆರೆದು ಕೂಡ ನೋಡಲಿಲ್ಲ. ಮುನಿವೇಷ ತೊಟ್ಟು ಕೊನೆಯಲ್ಲಿ ಕುಳಿತಿದ್ದ ಕಳ್ಳನ ಬಳಿಗೂ ಹೋಗಿ ನಿಲ್ಲುವ ಮೊದಲೇ ಈತನ ಮನದೊಳಗೆ ತುಮುಲ ಜಿಜ್ಞಾಸೆ ಮಥಿಸತೊಡಗಿದ್ದುವು: ಸಾಕ್ಷಾತ್ ರಾಜಪುತ್ರಿಯ ಕೈಹಿಡಿವ ಯೋಗ ಕದತಟ್ಟಿ ಎದುರು ನಿಂತಾಗಲೂ ತಮ್ಮ ಧ್ಯಾನದಿಂದ ಈ ಋಷಿಗಳು ವಿಚಲಿತರಾಗದಿರಬೇಕಾದರೆ ಇವರ ಆಕರ್ಷಣೆ ಅದೆಂಥ ದಿವ್ಯ ವಸ್ತುವಾಗಿರಬೇಡ! ಇಂಥವರ ವೇಷ ಹಾಕಿಕೊಂಡ ಮಾತ್ರಕ್ಕೇ ನನ್ನೆದುರು ಇಹಲೋಕದ ಸಕಲ ಸುಖಸಂತೋಷಗಳೂ ಬಂದು ನಿಲ್ಲಬೇಕಾದರೆ ಆ ಪರಲೋಕ ಅದೆಷ್ಟು ಅದ್ಭುತವಾಗಿರಬೇಡ! ಕಳ್ಳನೂ ಅರಸನ ಆಮಿಷ ನಿರಾಕರಿಸಿ ತಾಪಸಿಯೇ ಆಗಿಬಿಟ್ಟ. "ಆದ್ದರಿಂದ ನನ್ನ ಪ್ರಿಯ ವಿದ್ಯಾರ್ಥಿಗಳೇ! ಸದ್ಯ ಗಣಿತ ನಿಮಗೆ ಕಠಿಣವನಿಸಿದರೂ ಅದರಲ್ಲಿ ಆಸಕ್ತಿ ತಳೆವ ನಟನೆಮಾಡಿ. ಕ್ರಮೇಣ ನೀವು ಗಣಿತಾಧ್ವರ್ಯುಗಳಾಗುವಿರಿ."

ಗಣಿತೀಯ ಖಗೋಳವಿಜ್ಞಾನವನ್ನು (mathematical astronomy) ಅಂತಿಮ ಬಿಎ ವಿದ್ಯಾರ್ಥಿಗಳಿಗೆ ಪಾಠ ಮಾಡಬೇಕಾಗಿತ್ತು. ಆಕಾಶದ ಎತ್ತರ ಬಿತ್ತರಗಳನ್ನು ಕರಿಹಲಗೆಯ ಕೃಪಣತೆಯಲ್ಲಿ ಚಿತ್ರಿಸಿ ಗಣಿತ ಸಮೀಕರಣ ಸೂತ್ರಗಳನ್ನು ಅವುಗಳಿಗೆ ಯಾಂತ್ರಿಕವಾಗಿ ಅನ್ವಯಿಸಿ ಪೂರ್ವಸಿದ್ಧ ಉತ್ತರವನ್ನು ಪಡೆಯುವ ಹಿಕಮತ್ತು ಈ ವಿಜ್ಞಾನವಿಭಾಗ. ಹಿಂದೆ ಲಯೊಲಾದಲ್ಲಿ ಓದುತ್ತಿದ್ದಾಗ ನಾನು ಈ ದೊಂಬರಾಟದಲ್ಲಿ ಪರಿಣತನೆನಿಸಿಕೊಂಡಿದ್ದೆ, ಉತ್ತಮ ಅಂಕಗಳನ್ನೂ ಗಳಿಸಿದ್ದೆ. "ವಿಜ್ಞಾನಗಳ ಮಾತೃ ಖಗೋಳವಿಜ್ಞಾನ, ರಾಜ್ಞಿ ಗಣಿತ" (Astronomy is the mother, and mathematics the queen of sciences) ಎಂದು ಉಪನ್ಯಾಸಕರು ವರ್ಣಿಸುತ್ತಿದ್ದಾಗ ನಮ್ಮ ಹಿರಿಮೆ ಗರಿಮೆಗಳ ಬಗ್ಗೆ ನಾವು ವಿಶೇಷ ಅಭಿಮಾನ ತಳೆಯುತ್ತಿದ್ದೆವು.

ಬಿಎ ತರಗತಿಯಲ್ಲಿದ್ದ ವಿದ್ಯಾರ್ಥಿಗಳ ಸಂಖ್ಯೆ ೨೦ನ್ನು ದಾಟಿರಲಿಲ್ಲ. ಒಮ್ಮೆ ಒಬ್ಬ ಸುಟಿ ವಿದ್ಯಾರ್ಥಿ ಪ್ರಾಮಾಣಿಕ ಸಂದೇಹವೊಂದನ್ನು ಎತ್ತಿದ, "ನಿಮ್ಮ ಪಾಠಪ್ರವಚನ ತುಂಬ ಸೊಗಸಾಗಿದೆ. ಇವೆಲ್ಲ ಗಗನಕಾಯಗಳನ್ನೂ ಪ್ರತ್ಯಕ್ಷವಾಗಿ ಆಕಾಶದಲ್ಲಿ ದರ್ಶಿಸಬೇಕೆಂಬ ಚಡಪಡಿಕೆ ನಮ್ಮದು. ಈ ಸಂಜೆ ತೋರಿಸುತ್ತೀರಾ?"

ಐನ್‌ಸ್ಟೈನರ ಸುಪ್ರಸಿದ್ಧ ಹೇಳಿಕೆ ಮನದೊಳಗೆ ಛಳಕಿತು, ``How wretchedly inadequate is the theoretical physicist as he stands before Nature - and before his students!''

ವಸ್ತುಸ್ಥಿತಿ ಏನೆಂದರೆ ಖುದ್ದು ನಾನೇ ಅವನ್ನು ನೋಡಿರಲಿಲ್ಲ! ಯಾರ ಮುಂದೆಯೂ, ಅದೂ ವಿದ್ಯಾರ್ಥಿಗಳೆದುರು ಎಂದೂ, ಗಫ಼ಾ ಹೊಡೆಯತಕ್ಕದ್ದಲ್ಲ ಎಂಬ ಅರಿವು ನನಗಿತ್ತು. "ಒಂದು ತಿಂಗಳ ಕಾಲಾವಕಾಶ ಕೊಡಿ. ಖಂಡಿತ ಬಾನಿನಡಿ ನಿಂತು ಆಕಾಶಕಾಯಗಳನ್ನು ಪರಿಚಯಿಸಿಕೊಳ್ಳೋಣ" ಎಂದೆ. ನಿಜಕ್ಕೂ ಇಂಥ ಅನಾಮಧೇಯ ಅಜ್ಞಾತ ಶಿಷ್ಯರೇ ನನ್ನ ಋಜು ಗುರುಗಳು. ಕಿಪ್ಲಿಂಗ್ ಕವಿ ಹೇಳಿದ್ದುಂಟು:

ಆರು ಸೇವಕರಿಹರು ನನಗೆ, ನಾ ತಿಳಿದಿರುವು–
ದೆಲ್ಲವನು ಕಲಿಸಿದವರವರೇ! ಪೆಸರ್ ಬೇಕೆ? ––
ಎಂದು, ಎಲ್ಲಿ, ಹೇಗೆ, ಏಕೆ, ಯಾರು, ಯಾವುದು?

ಗ್ರಂಥಾಲಯಕ್ಕೆ ಹೋಗಿ, ನಕ್ಷತ್ರವೀಕ್ಷಣೆ ಕೈಪಿಡಿ ಎರವಲು ಪಡೆದು, ಮುಂದಿನ ಹಲವಾರು ರಾತ್ರಿ ಕದ್ರಿಗುಡ್ಡೆಯಲ್ಲಿ ನಕ್ಷತ್ರ ಸಾಮ್ರಾಜ್ಯದಡಿ ಲಂಗರುಹೂಡಿದೆ. ಧ್ರುವ ನಕ್ಷತ್ರ, ನಕ್ಷತ್ರಪುಂಜಗಳು, ರಾಶಿಗಳು, ಪ್ರಸಿದ್ಧ ತಾರೆಗಳು, ಗ್ರಹಗಳು, ಚಂದ್ರನ ಚಲನೆ ಮುಂತಾದವುಗಳ ಬಗೆಗಿನ ಸ್ಫುಟ ಚಿತ್ರ ರೂಪಿಸಿಕೊಂಡೆ. ತತ್ಸಂಬಂಧವಾದ ಪೌರಾಣಿಕ ಹಾಗೂ ಜಾನಪದ ವಾಙ್ಮಯಗಳನ್ನು ಓದಿ ನಮ್ಮ ಹಿರಿಯರ ಅಂತರ್ದೃಷ್ಟಿಗೆ ನಮೋ ಎಂದೆ. ಮುಂದೆ ಸರ್ವಸನ್ನದ್ಧನಾಗಿ ವಿದ್ಯಾರ್ಥಿಗಳ

ಜೊತೆ ನಕ್ಷತ್ರವೀಕ್ಷಣೆ ತೊಡಗಿದಾಗ ನಮಗೆಲ್ಲ ಹೊಸತೊಂದು ರಸಲೋಕ ಸವಿದ ಅಪೂರ್ವ ಅನುಭವ. ನಿಜ, ಬೇಂದ್ರೆ ಹಾಡಿರುವಂತೆ --

ಸಪ್ತ ಋಷಿಗಳೇಳೆತ್ತು ತಿರುಗುತಿವೆ ಹಾಕಿ ಧ್ರುವದ ಗಾಣಾ
ಮೇರುದಂಡದಾ ಇಕ್ಷು ರಸವು ಹಿಂಡುತ್ತಲಿಹುದೊ ಜಾಣಾ
ವಿವಿಧವಾಗಿ ಸಂಚರಿಸಿ ತಾಯಿಯಲಿ ಬ್ರಹ್ಮದೇಕ ತಾನಾ
ಕರೆಯುತಿಹುದು ಸ್ವರಮೇಳಕಾಗಿ ಗ್ರಹಗೋಲ ವಿಶ್ವಗಾನಾ

ನಿಜ, ಮೊದಲು ವಸ್ತುಕ, ಬಳಿಕ ಮಸ್ತಕ, ಮತ್ತೆ ಹಸ್ತಕ, ಕೊನೆಗೆ ಪುಸ್ತಕ! ಇದು ಋಜು ಜ್ಞಾನಮೂಲಶೋಧನೆಯ ಸಹಜ ಮಾರ್ಗ. ಆದರೆ ಇಂದಿನ ಶಿಕ್ಷಣಕ್ರಮ ಹೇಗಿದೆ? ಮೊದಲಿನಿಂದ ಕೊನೆಯ ತನಕ ಪುಸ್ತಕ–ಮಸ್ತಕ–ಪುಸ್ತಕ–ಮಸ್ತಕ ಉರುಹೊಡೆತ!

ಕಡಲ ತಡಿಯ ಕೊಡಲಿಗೊರವರೊಡನೆ ಕಂಡ ಬೆಡಗು
ಅಧ್ಯಾಯ ಇಪ್ಪತ್ತೊಂದು

ನನ್ನ ಕ್ರಿಶ್ಚಿಯನ್ ಕಾಲೇಜ್ ಗೆಳೆಯ ಕು.ಶಿ.ಹರಿದಾಸಭಟ್ಟರ ಬಗ್ಗೆ ಹಿಂದೆ ಹೇಳಿದ್ದೇನೆ. ಇವರು ಅರ್ಥಶಾಸ್ತ್ರ ಎಂಎ ಪದವಿಯನ್ನು ಉತ್ತಮ ಸ್ಥಾನ ಮತ್ತು ಶ್ರೇಣಿಯಲ್ಲಿ ಗಳಿಸಿ (೧೯೪೯) ತಮ್ಮ ತವರು ಉಡುಪಿಯಲ್ಲಿ ಅದಾಗ ತಾನೇ ಸ್ಥಾಪಿತವಾಗಿದ್ದ ಮಹಾತ್ಮ ಗಾಂಧಿ ಮೆಮೋರಿಯಲ್ ಕಾಲೇಜಿನಲ್ಲಿ ಉಪನ್ಯಾಸಕರಾಗಿ ನೇಮನಗೊಂಡಿದ್ದರು. ಅವರ ದೀರ್ಘ ಕಾಲದ ಕರೆ ಮನ್ನಿಸಿ ಒಂದು ವಾರಾಂತ್ಯ ಅಲ್ಲಿಗೆ ಹೋದೆ. ಕರಾವಳಿ ಹಾದಿಯಾಗಿ ಬಸ್ ಪಯಣ: ಮೂರು ಕಡೆ – ಕೂಳೂರು, ಮೂಲ್ಕಿ ಮತ್ತು ಉದ್ಯಾವರ – ಹೊಳೆದಾಟಲು ದೋಣಿ ಹಿಡಿದು ಸಾಗುವ ಮಜಲು ಬಸ್–ದೋಣಿ ಯಾತ್ರೆ. ಅವರ ಮನೆಯಲ್ಲಿಯ ತುಂಬು ಆತಿಥ್ಯ ಮತ್ತು ಅದರ ತಳದಲ್ಲಿ ಸಹಜವಾಗಿ ಹೊಮ್ಮುತ್ತಿದ್ದ ಪ್ರೀತಿ ನನಗೆ "ಶಬರಿಗಾದನು ಅತಿಥಿ ದಾಶರಥಿ"ಯನ್ನು ('ಶ್ರೀ ರಾಮಾಯಣ ದರ್ಶನಂ') ನೆನಪಿಗೆ ತಂದಿತು.

ಅಂದಿನ ಉಡುಪಿ ಒಂದು ವಿಸ್ತೃತ ಗ್ರಾಮ. ಕುಶಿನಿವಾಸ ಇದರ ಹೊರವಲಯದ ಕುಂಜಿಬೆಟ್ಟುವಿನಲ್ಲಿತ್ತು. ಅಲ್ಲಿಂದಾಚೆಗೆ ಬಹುತೇಕ ನಿರ್ಜನ ಪ್ರದೇಶ. ಮುರಕಲ್ಲಿನ ದಿಬ್ಬ ಗುಡ್ಡಗಳು, ಕಣಿವೆ ಕೊರಕಲುಗಳು, ಹಸುರಿನ ಹರವು, ಅಲ್ಲಲ್ಲಿ ನಿಬಿಡ ಮರ ಕಾಡುಗಳು, ಜುಳುಜುಳು ಹರಿಯುವ ನಿತ್ಯ ತೊರೆಗಳು – ಪ್ರಾಚೀನ ಋಷ್ಯಾಶ್ರಮ ಅಥವಾ ಪವಿತ್ರ ಕ್ಷೇತ್ರಗಳನ್ನು ನೆನಪಿಗೆ ತರುವ ನಿಸರ್ಗ ವೈಭವ. ಅಲ್ಲೇ ಸುತ್ತು ಬಳಸಿ ಕಾರ್ಕಳಕ್ಕೆ ಸಾಗುತ್ತಿದ್ದ ಬಸ್ ಹಾದಿಯಲ್ಲಿ ಸುಮಾರು ೪ ಕಿಮೀ ನಡೆದು ಎತ್ತರದ ನೆಲೆಯನ್ನು ತಲಪಿದೆವು. ನಮ್ಮೆದುರಿನ ವಿಸ್ತಾರ ಇಳಿಜಾರಿಡೀ ಮುರಕಲ್ಲಿನ ಎಡ್ಡತಿಡ್ಡ ಹರವು, ಪ್ರಕೃತಿಯ ರೌದ್ರತಾಂಡವ ಹಠಾತ್ತನೆ ಘನೀಭವಿಸಿದಂಥ ನೋಟ. "ಈ ಒಟ್ಟು ಪ್ರದೇಶದ ಹೆಸರು ಮಣಿಪಾಲ" ಎಂದರು ಕುಶಿ.

ನೇಸರು ಪಡುಬಾನಿಗೆ ಹೊರಳಿತ್ತು. ನೆರಳುಗಳು ಉದ್ದುದ್ದವಾಗುತ್ತಿದ್ದುವು. ಕಾಗೆಗಳು ಹಿಂಡುಹಿಂಡಾಗಿ ಕಾಕಾರವ ಸಹಿತ ಎಲ್ಲಿಂದಲೋ ಇನ್ನೆಲ್ಲಿಗೋ ಹಾರುತ್ತಿದ್ದುವು. ಆ ದೈವಿಕ ದೃಶ್ಯ ಕುವೆಂಪು ಸಾಲುಗಳಿಗೆ "ದೇವರು ರುಜು ಮಾಡಿದನು, ಕವಿ ಅದ ರಸವಶನಾಗುತ ನೋಡಿದನು" ಬರೆದ ಭಾಷ್ಯದಂತೆ ಕಂಡಿತು. ಅದೇ ವರ್ಷ (೧೯೪೯) ಪ್ರಕಟವಾಗಿದ್ದ ಮತ್ತು ನಾವಿಬ್ಬರೂ ಗರಬಡಿದವರಂತೆ ಓದಿ ಮೈಮರೆತಿದ್ದ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯದ 'ಶಿಲಾತಪಸ್ವಿನಿ' ಅಧ್ಯಾಯ ನಮ್ಮ ನೆನಪಿಗೆ ಬಂತು:

ಪಾಂಥರ್ಗೆ
ಗೋಚರಿಸಿತೊಂದು ಋಷಿವನ ಸದೃಶ ಕಾನನಂ.
ಪೊಕ್ಕರದನೇನೆಂಬೆನಾ ಮಹಾ ಶಕುನಮಯ
ದುಃಖಗರ್ಭಿತ ಮೌನಮಂ! ಹಾಡದಿವೆ ಹಕ್ಕಿ.
ನಲಿದಾಡದಿವೆ ಮಿಗಂ. ಸಂಚರಿಸದಿದೆ ಗಾಳಿ.
ತನಿಗಂಪನೀಯದಿವೆ ಮರಗೋಡಿನೊಳ್ ಮಲರ್.
ಚಲಿಸವೆಲೆ ಪುಲ್ಲೆಸಳ್. ಆವ ದುಃಖವೊ ಅಲ್ಲಿ
ಕೊನೆಗಾಣದಂತಮಂ ದಿನಮುಂ ನಿರೀಕ್ಷಿಪೋಲ್
ಮೂಗುವಟ್ಟಿರ್ದ ಬನಮೆಸೆದುದಾ ಪಥಿಕರ್ಗೆ
ಬರೆದಂತೆ ನೀರವಂ, ಕೊರೆದಂತೆ ನಿಶ್ಚಲಂ,
ನಿಶ್ಶಬ್ದತಾ ಕುಂಭಕ ಸ್ಥಿತಿಯ ಯತಿನಾದದೋಲ್.

ನಿರ್ಜನ, ನಿರ್ಮೃಗ, ನೀರವ, ನಿರ್ವನ ವಿಸ್ತಾರ. ಇದ್ದವರು ನಾವಿಬ್ಬರೇ. ದೂರ ದಿಗಂತದ ಅಂಚಿನಲ್ಲಿ ವ್ಯಕ್ತಿಯೊಬ್ಬನ ಛಾಯೆ ಕಂಡಂತಾಯಿತು. ಅತ್ತ ಕಡೆಗೆ ಲಗುಬಗೆಯಿಂದ ನಡೆದೆವು, ಅಲ್ಲ, ಬಂಡೆಗಳ ಮಂಡೆಗಳನ್ನು ಕುಪ್ಪಳಿಸಿ ನೆಗೆಯುತ್ತ ಅಡ್ಡಹಾಯ್ದೆವು. ಆ ಮಧ್ಯವಯಸ್ಕ ಹಸನ್ಮುಖಿಗೆ ಕುಶಿ ವಂದನೆ ಸಲ್ಲಿಸಿ, "ಇವರು ಜಿ.ಟಿ.ನಾರಾಯಣರಾವ್, ನನ್ನ ಪರಮಾಪ್ತರು, ವಿದ್ಯಾರ್ಥಿಗಳ ಮಾತಿನಲ್ಲಿ Grand Trunk Nonstop Railway! ಅಂದರೆ ಎಲ್ಲಿಯೂ ನಿಲ್ಲದೇ ಮಾತಾಡುತ್ತಿರುವ ವಾಗ್ಧುರಧೀರರು!" ಹೀಗೆ ಹೇಳಿ ಮುಂದೆ ನಡೆದು ಆ ಕರ್ಬಂಡೆಗಳೆಡೆಯಲ್ಲಿ ಕರಗಿಯೇಹೋದರು.

ಈಗ ಅಲ್ಲಿ ನಾವಿಬ್ಬರೇ: ಹೊಸ ಹಿರಿಯ ಮತ್ತು ಹಳೆ ಕಿರಿಯ –– ಹಳೆ ಬೇರು ಹೊಸ ಚಿಗುರು ಕೂಡಿದರೆ ಮರ ಬೆರಗು (ಮಂಕುತಿಮ್ಮನ ಕ್ಷಮೆಕೋರಿ)! ಅವರೋ ನನ್ನನ್ನು ಒಬ್ಬ ಹಿರಿಯಣ್ಣನ ಒಲವಿನಿಂದ ತಮ್ಮತ್ತ ಸೆಳೆದುಕೊಂಡು ತಮ್ಮ ಕನಸುಗಳನ್ನು ಎಳೆ ಎಳೆಯಾಗಿ ನನ್ನೆದುರು ಬಿಡಿಸಿಡಲು ತೊಡಗಿದರು. ಮುಂದಿನ ೧ ತಾಸು, ಸೂರ್ಯ ಕಂತುವ ತನಕವೂ, ಆ ವಲಯ ಪೂರ್ತಿ ಅಲೆದಾಡಿದೆವು. ಅವರೊಂದು ಹಿರಿಕನಸನ್ನು ಕನವರಿಸುತ್ತಿದ್ದಂತೆ ನನಗನ್ನಿಸಿತು: ವೈದ್ಯಕೀಯ–ಎಂಜಿನಿಯರಿಂಗ್ ಕಾಲೇಜ್ ಸಮುಚ್ಚಯದ ನಿರ್ಮಾಣ, ಹಾಸ್ಟೆಲ್, ಮನೆ, ಅತಿಥಿಗೃಹ, ಕ್ರೀಡಾಂಗಣ, ಕ್ಯಾಂಟೀನ್ ಮುಂತಾದ ಸೌಕರ್ಯಗಳ ಏರ್ಪಾಡು! ಪ್ರತಿ ಸಲವೂ ಅವರು ನನ್ನನ್ನೇ ಉದ್ದೇಸಿಸಿ ಅಷ್ಟು ವಿವರವಾಗಿಯೂ ಆತ್ಮೀಯವಾಗಿಯೂ ಹೇಳುತ್ತಿದ್ದಾಗ, ಇನ್ನು ನಾನು ಹೆಡ್ಡನಾಗಬಾರದಲ್ಲ ಎಂಬ ಆತ್ಮಪ್ರತ್ಯಯದಿಂದ, ಒಂದು ಮಾರ್ಮಿಕ ಪ್ರಶ್ನೆ ಅವರತ್ತ ಎಸೆದೆ (ಹಾಗೆಂದು ಆಗ ಭಾವಿಸಿದ್ದೆ). ಮತ್ತು ಅವರಿಂದ ನಿಭಾಯಿಸಲಾಗದಿದ್ದ ಪಟ್ಟು ಹೊಡೆದೆನೆಂದು ಬೀಗಿದೆ ಕೂಡ. “ಅದೆಲ್ಲ ಸರಿ ಸರ್! ಆದರೆ ಇಷ್ಟೆಲ್ಲ ಯೋಚನೆ ಯೋಜನೆಗಳ ಸಾಕ್ಷಾತ್ಕಾರಕ್ಕೆ ಅತ್ಯವಶ್ಯವಾದ ಹಣಸಂಗ್ರಹ ಹೇಗೆ ಮಾಡುತ್ತೀರಿ?”

ನಾನು ಹೇಳಬಾರದ್ದನ್ನು ಹೇಳಿದೆನೋ ಎಂಬಂತೆ ಅವರು ನನ್ನತ್ತ ತೀಕ್ಷ್ಣ ದೃಷ್ಟಿ ಕುತ್ತಿ ನುಡಿದರು, ``That's the last priority.''
My ego was hurt. ``How can you be so sure of it, sir?''
``Well, young man! No great cause has ever suffered for want of funds. The real question is how great the cause is and how unselfish and committed you are towards achieving it.''
``Can you prove it?''
``Life is not mathematics. It's my experience for the past four-odd decades in public life that emboldens me to visualize dreams and realize them. If you live like me, by the time you attain my present age, you too will realize the truth underlying my assertion.'' He was emphatic and uncompromising!
ಅಷ್ಟರಲ್ಲಿ ಹರಿದಾಸಭಟ್ಟರು ಅಲ್ಲಿ ಹಾಜರಾದರು.

ಬೈಗಿನ ಹೊಂಬೆಳಕಿನಲ್ಲಿ ಮತ್ತೆ ನಾವಿಬ್ಬರೂ ಕುಶಿ ಮನೆಯತ್ತ ನಡೆಯತೊಡಗಿದೆವು. “ಯಾರಯ್ಯಾ ಈ ಹುಚ್ಚು ಕನಸಿಗ? ಶುದ್ಧ ಬೋರ್!” ಎಂದೆ.
“ಅಂಥಿಂಥ ವ್ಯಕ್ತಿ ಇವರಲ್ಲ. ಇವರಂಥ ವ್ಯಕ್ತಿ ಇನ್ನಿಲ್ಲ. ಜಮ್‌ಶೆಡ್ಜೀ ತಾತಾ ಅಥವಾ ಪಂಡಿತ ಮದನಮೋಹನ ಮಾಳವೀಯ ಸಮಾನರಿವರು. ಡಾಕ್ಟರ್ ಟಿ.ಮಾಧವ ಪೈ ಎಂದರೆ ಇವರೇ. ಕಲ್ಲಿನಿಂದ ಗೊಮ್ಮಟನನ್ನು ಉತ್ಪನಿಸುವ ಮಹಾಶಿಲ್ಪಿ, ಮಣಿಪಾಲದ ಬ್ರಹ್ಮ, ನಿಂದೆಡೆ ನೆಲವನೆ ತುಂಬುವ ಜಾದೂಗಾರ. ಸದ್ಯ ನಾನಿರುವ ಕಾಲೇಜ್ ಇವರ ಕನಸಿನ ನನಸು!”
ಪುರಂದರದಾಸರು ಹಾಡಿದ್ದಾರೆ, “ನಾರಾಯಣನೆಂಬ ನಾಮದ ಬೀಜವ ನಾರದ ಬಿತ್ತಿದ ಧರೆಯೊಳಗೆ.” ಅಂದು ಮಾಧವ ಪೈಗಳು ಬಿತ್ತಿದ ಆ ‘ನಾಮ’ –– ಯಾವ ಘನೋದ್ದೇಶವೂ ಧನಾಭಾವದಿಂದ ಕುಂಠಿತವಾದದ್ದಿಲ್ಲ, ನಿಜಕ್ಕೂ ಅದರ ನಿರ್ವಹಣೆ ಬಗ್ಗೆ ನೀವೆಷ್ಟು ಬದ್ಧ ಮತ್ತು ಸ್ವಾರ್ಥರಹಿತರಾಗಿರುವಿರೆಂಬುದೇ ಇಲ್ಲಿಯ ಪ್ರಶ್ನೆ –– ಮುಂದೆ ನನ್ನ ಬದುಕಿನ ವಿವಿಧ ಕಲಾಪಗಳಲ್ಲಿ ಹೇಗೆ ಮೊಳೆತು ಹೆಮ್ಮರವಾಯಿತೆಂಬುದನ್ನು ಇಂದು ಸಿಂಹಾವಲೋಕಿಸುವಾಗ ವಿಸ್ಮಯವಾಗುತ್ತದೆ. ನನ್ನ ಅನುಭವಗಳನ್ನು ಮುಖ್ಯವಾಗಿ ‘ಎನ್‌ಸಿಸಿ ದಿನಗಳು’ [**ಪುಸ್ತಕ ಲಭ್ಯ ಬೆಲೆ ರೂ ೫೫ ವಿಳಾಸ ಸಹಿತ ಮನಿಯಾರ್ಡರ್ ಮಾಡಿ**] ಮತ್ತು ‘ಸವಾಲನ್ನು ಎದುರಿಸುವ ಛಲ’ (ನೋಡಿ – ‘ವೀಣೆ ಶೇಷಣ್ಣ ಭವನ’ ಲೇಖನ) ಎನ್ನುವ ಎರಡು ಕೃತಿಗಳಲ್ಲಿ ನಿವೇದಿಸಿದ್ದೇನೆ.

ಮಂಗಳೂರಿನಲ್ಲಿಯ ಇನ್ನೊಂದು ರಸಾನುಭವ ‘ಷೋಡಶಿಯರ ಕಾಂತಕ್ಷೇತ್ರ ಮತ್ತು ನಾನೆಂಬ ಋಷ್ಯಶೃಂಗ.’ ಬೆಸೆಂಟ್ ಮಹಿಳಾ ಶಾಲೆಯ ಅಧ್ಯಾಪಕ ಮಿತ್ರ ಶ್ರೀನಿವಾಸ ಉಡುಪರ ಕೋರಿಕೆ ಮೇರೆಗೆ ನಾನು ಅಲ್ಲಿಯ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿನಿಯರಿಗೆ ನನ್ನ ಬಿಡುವೇಳೆಯಲ್ಲಿ ಐಚ್ಛಿಕ ಗಣಿತ ಪಾಠ ಮಾಡಲು ಒಪ್ಪಿ ಅಲ್ಲಿಗೆ ಹೋದೆ. ಕಾಲೇಜಿನ

ಅನುಮತಿಯನ್ನು ಅವರೇ ಪಡೆದಿದ್ದರು. ಆ ತನಕ ನನ್ನ ಅರಿವಿಗೆ ಬಂದಿರದ ವಿಚಿತ್ರ ಸಮಸ್ಯೆಯೊಂದು ಆಗ ನನ್ನೆದುರು ಧುತ್ತೆಂದು ಎದ್ದುನಿಂತಿತು: ಸುಮಾರು ೩೦ ಮಂದಿ ಹದಿಹರೆಯದ ಮುಗುದೆಯರು ಏಕಕಾಲದಲ್ಲಿ ನನ್ನಲ್ಲೇ ತಮ್ಮ ದೃಷ್ಟಿ ನೆಟ್ಟಿದ್ದಾರೆ! ಒಂಟಿ ಹುಡುಗನಾಗಿ ಬಾಳಿದ ನಾನು ಎಂದೂ ಒಬ್ಬ ಹುಡುಗಿಯ ಮುಖವನ್ನೂ ನೇರ ನೋಡಿರಲಿಲ್ಲ, ಯಾರೊಬ್ಬಳ ಜೊತೆಯೂ ಮಾತಾಡಿರಲಿಲ್ಲ. ಹುಚ್ಚುಚ್ಚು ಕಲ್ಪನೆಗಳು. ದೂರವಿರುವುದೇ ಕ್ಷೇಮವೆಂಬ ಪಲಾಯನವಾದ. ಶುದ್ಧ ಪುಕ್ಕಲುತನ!

ತರಗತಿಯತ್ತ ಮುಖ ತಿರುಗಿಸಿ ಪಾಠ ಹೇಳಲು ಪ್ರಯತ್ನಿಸಿ ಸೋತೆ. ಗಣಿತ ಪರಿಕಲ್ಪನೆಗಳೆಲ್ಲವೂ ಆವಿಯಾಗಿ ಹೋಗಿ ಪೆಚ್ಚಾದೆ. ಈಗೇನು ಮಾಡಲಿ? ಸರಿ, ಕರಿಹಲಗೆಯತ್ತ ದೃಷ್ಟಿಹರಿಸಿ ಎಲ್ಲವನ್ನೂ ಅಲ್ಲಿ ಬರೆಯುತ್ತ ಮೊದಲ ಹಲವಾರು ತರಗತಿಗಳನ್ನು ನಿಭಾಯಿಸಿದೆ. ಆ ಒಂದು ತರಗತಿಯನ್ನು ಎಂದಿನಂತೆ ತಲೆ ಅಡಿಹಾಗಿ ಕರಿಹಲಗೆಯನ್ನೇ ದಿಟ್ಟಿಸುತ್ತ ಹೊಕ್ಕಾಗ ಅದರ ಮೇಲೆ ಅತ್ಯಂತ ಕಲಾತ್ಮಕವಾಗಿ ರೂಪಿಸಿದ್ದ ಅಣಕುಚಿತ್ರವನ್ನೂ ಅಡಿಬರೆಹವನ್ನೂ ಕಂಡು ಹೌಹಾರಿದೆ: ಬಾಲಬ್ರಹ್ಮಚಾರಿಯೊಬ್ಬ ಕಪ್ಪುಹಲಗೆ ಜೊತೆ ಚಕ್ಕಂದವಾಡುತ್ತಿದ್ದ ದೃಶ್ಯ, ಇದರ ಕೆಳಗೆ our smart and handsome teacher is wedded to the black board! ಬಹುಶಿರದ ರುದ್ರ ಭದ್ರ ಕಾಳಿ ಹಠಾತ್ತನೆ ಪ್ರತ್ಯಕ್ಷವಾದಾಗ ಗಾಬರಿಗೊಂಡ ತೆನಾಲಿ ರಾಮಕೃಷ್ಣನ ಸುಹಾಸ ಪ್ರಜ್ಞೆ ನೆನಪಿಗೆ ಬಂತು: "ಒಂದು ಮೂಗು ಮಾತ್ರ ಇರುವ ನನಗೇ ಶೀತಬಾಧೆಯಿಂದ ಸೀನುಗಳು ಪುಂಖಾನುಪುಂಖವಾಗಿ ಸಿಡಿದಾಗ ತಡೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಇನ್ನು ನೂರಾರು ಮೂಗುಗಳಿರುವ ನಿನಗಂಥ ಸ್ಥಿತಿ ಎದುರಾದರೆ ಹೇಗೆ ಸಹಿಸುವೆ ತಾಯೀ!"
ನಾನೂ ಸುಹಾಸಕ್ಕೇ ಶರಣಾದೆ, ``Thank you very much my dear dancing damsels for giving me such compliments `smart and handsome.' Are you not contradicting yourselves when you say in the very next sentence that I am wedded to the black board? Am I that ugly?'' ಇಡೀ ತರಗತಿಯಲ್ಲಿ ನಗುವಿನ ಹೊನಲು ಕಟ್ಟೆಯೊಡೆದು ಭೋರ್ಗರೆಯಿತು, ಜೊತೆಗೇ ನನ್ನ ಅಳುಕು ಆತಂಕಗಳನ್ನು ಕೊಚ್ಚಿಕೊಂಡು ಹೋಯಿತು ಕೂಡ.

ಮಂಗಳೂರಿನಲ್ಲಿದ್ದಾಗ ನಡೆದ ಇನ್ನೆರಡು ಘಟನೆಗಳನ್ನು 'ಸಂಗೀತ ರಸನಿಮಿಷಗಳು' ಪುಸ್ತಕದಲ್ಲಿ [**ಪುಸ್ತಕ ಲಭ್ಯವಿದೆ. ಬೆಲೆ ರೂ ೬೦ ವಿಳಾಸ ಸಹಿತ ಮನಿಯಾರ್ಡರ್ ಮಾಡಿ**] ಚಿತ್ರಿಸಿದ್ದೇನೆ: ಭಾವೀ ಚಿತ್ರವೀಣಾ ಜೀನಿಯಸ್ ಎನ್.ರವಿಕಿರಣ್‌ನ ತಂದೆ ಎನ್.ನರಸಿಂಹನ್ ಮತ್ತು ಅಜ್ಜ ಗೋಟುವಾದ್ಯ ನಾರಾಯಣ ಅಯ್ಯಂಗಾರ್ ಇವರ ಭೇಟಿ, ಕಾಂಚನವೆಂಬ ಕುಗ್ರಾಮದಲ್ಲಿ ಆಸ್ವಾದಿಸಿದ ತ್ಯಾಗರಾಜರ ಪಂಚರತ್ನ ಕೃತಿಗಳ ಸೊಗಸು.

ಅವೇ ದಿನಗಳಲ್ಲಿ ಮಂಜೇಶ್ವರ ಗೋವಿಂದ ಪೈ, ಮುಳಿಯ ತಿಮ್ಮಪ್ಪಯ್ಯ, ಕಡೆಂಗೋಡ್ಲು ಶಂಕರಭಟ್ಟ, ಸೇಡಿಯಾಪು ಕೃಷ್ಣಭಟ್ಟ, ಉಗ್ರಾಣ ಮಂಗೇಶರಾವ್, ಕಡವ ಶಂಭುಶರ್ಮ ಮತ್ತು ಕೋಟ ಶಿವರಾಮಕಾರಂತ – ಈ ವಾಙ್ಮಯ–ಸಪ್ತರ್ಷಿಗಳೊಂದಿಗೆ ನನಗೆ ನಿಕಟ ಸಾಹಚರ್ಯ ಒದಗಿದ್ದೊಂದು ಭಾಗ್ಯ.

ಕುಶಿ ಮತ್ತು ನಾನು ಮಂಜೇಶ್ವರರಲ್ಲಿಗೆ ಆಗಾಗ ತೀರ್ಥಯಾತ್ರಾರ್ಥ ಹೋಗಿ ಆ ಸಾಹಿತ್ಯಗಂಗೋತ್ರಿಯಲ್ಲಿ ಯಥೇಚ್ಛವಾಗಿ ಮಿಂದು ಪುನೀತರಾಗಿ ಮರಳುತ್ತಿದ್ದೆವು. ದಾಖಲೆಗಳ ಪರಿಶೀಲನೆ, ತುಲನೆ ಮತ್ತು ತೀರ್ಮಾನಗಳಿಗೆ ಇವರು ಪರ್ಯಾಯ ನಾಮ.

ತತ್ಪೂರ್ವ ಇಂಟರ್ಮೀಡಿಯೆಟ್ ತರಗತಿಗಳಲ್ಲಿ ನನ್ನ ಗುರುಗಳಾಗಿದ್ದ ಮುಳಿಯರು ಕೆಲವು ವರ್ಷಗಳ ಹಿಂದೆ ನಿವೃತ್ತರಾಗಿ ಪರ ಊರಿಗೆ ತೆರಳಿದ್ದರು. ಹಳೆಗನ್ನಡ ಕಾವ್ಯಗಳನ್ನು ಭಾವಾರ್ಥಸಹಿತ ಓದಿ ವಿವರಿಸಿ ಆ ದೃಶ್ಯಗಳನ್ನು ನಮ್ಮೊಳಗೆ ಬಿಂಬಿಸುವುದರಲ್ಲಿ ಇವರು ಸಿದ್ಧಹಸ್ತರು.

ಕಡೆಂಗೋಡ್ಲು ತಮ್ಮ ವೃತ್ತಿ (ಸಂತ ಅಗ್ನೆಸ್ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕ) ಜೊತೆ 'ರಾಷ್ಟ್ರಬಂಧು' ಸಾಪ್ತಾಹಿಕದ ಸಂಪಾದಕರೂ ಆಗಿದ್ದರು. ಇವರ ಸಹಸಂಪಾದಕ ಕುಳುಕುಂದ ಶಿವರಾಯರ (ಮುಂದೆ ನಿರಂಜನ ಎಂಬ ಕಾವ್ಯನಾಮದಿಂದಲೇ ಪ್ರಸಿದ್ಧರಾದರು) ನಿಕಟ ಪರಿಚಯಲಾಭ ನನಗೊದಗಿತು. ಶಂಕರಭಟ್ಟರ ಹಿರಿ ಮಗ ಕಾಲೇಜಿನಲ್ಲಿ

ನನ್ನ ವಿದ್ಯಾರ್ಥಿಯೂ ಹೌದು. ಇತ್ತ ನಾನೊಬ್ಬ ಮರಿಲೇಖಕ! ಹೀಗಾಗಿ ಶಂಕರಭಟ್ಟರು ನನ್ನ ಪ್ರಗತಿಯಲ್ಲಿ ವಿಶೇಷ ಆಸ್ಥೆ ತಳೆದು ನನಗೆ ಪ್ರೋತ್ಸಾಹವಿತ್ತರು. ನನ್ನ ಹಲವಾರು ಲೇಖನಗಳು ಮತ್ತು ಕತೆಗಳು 'ರಾಷ್ಟ್ರಬಂಧು'ವಿನಲ್ಲಿ ಬೆಳಕು ಕಂಡು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾನೊಬ್ಬ 'ಗಣ್ಯ ಲೇಖಕ'ನಾದೆ!

ಕಡೆಂಗೋಡ್ಲು ಮತ್ತು ಸೇಡಿಯಾಪು ಇಬ್ಬರೂ ಮುಳಿಯರ ಶಿಷ್ಯರು. ಅವರು ಅಭಿಮನ್ಯು, ಇವರು ವಿದುರ! ಇಬ್ಬರೂ ನವೋದಯ ಕಾವ್ಯದ ಹರಿಕಾರರಲ್ಲಿ ಅಗ್ರ ಪಙ್ತಿಯ ಕವಿಗಳು. ಒಮ್ಮೆ ಇಂಟರ್ಮೀಡಿಯೆಟ್ ತರಗತಿಯಲ್ಲಿ ಮುಳಿಯರೆಂದಿದ್ದರು, "ಕನ್ನಡದ ಮುಖವಾಣಿ ಕಡೆಂಗೋಡ್ಲು, ಒರೆಗಲ್ಲು ಸೇಡಿಯಾಪು." ಸೇಡಿಯಾಪು ಮೊದಲು ನಮ್ಮ ಕಾಲೇಜಿನ ಪ್ರೌಢಶಾಲಾ ವಿಭಾಗದಲ್ಲಿ ಕನ್ನಡ ಅಧ್ಯಾಪಕರಾಗಿದ್ದರು. ನಾನು ಉಪನ್ಯಾಸಕ ವೃತ್ತಿಗೆ ಬಡ್ತಿ ಪಡೆದು ಕಾಲೇಜಿಗೆ ಬಂದಾಗ ಇವರು ನಮ್ಮ ಜೊತೆ ಕನ್ನಡ ಟ್ಯೂಟರ್ ಆಗಿ ನೇಮನಗೊಂಡಿದ್ದರು. ಆಡಳಿತೆಯ ವಿಪರ್ಯಾಸ: ಗುರುಗಳ ಗುರುವಾಗಿದ್ದ ಸೇಡಿಯಾಪು ಇನ್ನೂ ಟ್ಯೂಟರ್, ಹುಡುಗತನ ಮಾಸದಿದ್ದ ಎಳೆನಿಂಬೆ ನಾನೋ? ಉಪನ್ಯಾಸಕ! ಒಮ್ಮೆ ಕೃಷ್ಣಭಟ್ಟರ ಮನೆಗೆ ಹೋದೆ. ಅವರ ಮಗಳು ಶಿವಸುಂದರಿ ಐದಾರು ವರ್ಷದ ಕೂಸು. ಅವಳನ್ನು ರಂಜಿಸುವ ಸಲುವಾಗಿ ತಿರುಚಿದ ಒಂದು ಕನ್ನಡ ಪದ್ಯವನ್ನು ದ್ರುತಗತಿಯಲ್ಲಿ ಉದುರಿಸಿದೆ:

ಟೋಮುಲಾಕು ಟಾಕುಯಾನಿ ಟೇಪೆದೀಬಿ ಟಾದುಗಾವ
ಟಾಸೆಡುಮ್ತದೊಮ್ನಡಮ್ಕು ತಿಮ್ನುಟಿತ್ತಿಬು
ಟೋತಿಬೊಯ್ಯ ಟಾಸೆಡುಮ್ತಿದಿಮ್ನ ಡಯಿಬೆ ಟೋಮುಲಾಕ
ಡದಿಬು ಡದಿಬು ಣ್ರಾಪಟಿತ್ತಿಬು!

ಆ ಹುಡುಗಿ 'ಟಾಸೆಡುಮ್ತದೊಮ್ನಡಮ್ಕು ತಿಮ್ನುಟಿತ್ತಿಬು' ಭಾಗದಲ್ಲಿ ಬಿದ್ದು ಬಿದ್ದು ನಗತೊಡಗಿದಳು. ಮತ್ತೆ ಮತ್ತೆ ಅದನ್ನು ನನ್ನಿಂದ ಹೇಳಿಸಿ ಕೇಳಿ ಸಂತೋಷಪಟ್ಟಳು. ನಮ್ಮ ಗಲಾಟೆ ಕೇಳಿದ ಸೇಡಿಯಾಪು ಹೊರಬಂದು ಈ ತಿರುಚಾಟ ಕಿರುಚಾಟಗಳಲ್ಲಿ ತಾವೂ ಭಾಗಿಗಳಾದರು. ಕಗ್ಗದ ನೇರ ಪಾಠವನ್ನು ಕೂಡಲೇ ಗ್ರಹಿಸಿ ನನ್ನ ಕಸರತ್ತನ್ನು ಮೆಚ್ಚಿದರು. ಅದರ ಆರಂಭ ಸಾಲು ಹೀಗಿದೆ, "ಮೋಟುಕಾಲು ಕಾಟುನಾಯಿ ಪೇಟೆಬೀದಿ ದಾಟುವಾಗ." ಮುಂದೆ ನನಗೆ ಕಾಗದ ಬರೆಯುವಾಗಲೆಲ್ಲ 'ಪ್ರಿಯ ಟೋಮುಲಾಕು' ಎಂದೇ ಸಂಬೋಧಿಸುತ್ತಿದ್ದರು.

ಉಗ್ರಾಣ, ಕಡವ ಮತ್ತು ಕಾರಂತ ಅಂದು ಪುತ್ತೂರಿನ ಸಾಹಿತ್ಯರತ್ನರು, ಸ್ವತಃ ಸೃಜನಶೀಲ ಲೇಖಕರೂ ಭಾಷಾಂತರಕಾರರೂ ಆಗಿದ್ದ ನನ್ನ ಸೋದರಮಾವ ಮರಿಕೆ ಎ.ಪಿ.ಸುಬ್ಬಯ್ಯನವರ ಪರಮಮಿತ್ರರು. ಹೀಗಾಗಿ ರಜಾದಿನಗಳಲ್ಲಿ ಪುತ್ತೂರಿಗೆ ಹೋದಾಗ ಈ ತ್ರಿಮೂರ್ತಿಗಳ ಸಂಗ ನನ್ನ ಚಿಂತನೆ ಕಾರ್ಯವೈಖರಿಗಳಿಗೆ ಹೊಸ ಆಯಾಮ ನೀಡಿತು. ಕಾರಂತರ 'ಬಾಲವನ' ಈ ಮಾನವಮೇರುವಿನ ಪ್ರಯೋಗರಂಗ, ನಮ್ಮಂಥ ತರುಣರ ಶಿಕ್ಷಣಕಾಶಿ ಮತ್ತು ಮಕ್ಕಳ ಕ್ರೀಡಾಲೋಕ. ಉಗ್ರಾಣರದು ವಿದ್ವಜ್ಜನ್ಯ ಸಾಗರೋಪಮ ಗಾಂಭೀರ್ಯ. ಕಡವರನ್ನೊಮ್ಮೆ ಕಾರಂತರು ಪುತ್ತೂರಿನ ಸಾಕ್ರೆಟೀಸ್ ಎಂದು ಸಕಾರಣವಾಗಿ ವರ್ಣಿಸಿದ್ದುಂಟು –– ಅಂಥ ಪ್ರಖರ ವೈಚಾರಿಕತೆ ಮತ್ತು ಆಚರಣೆ, ನಿರ್ಭೀತ ಮನೋವೃತ್ತಿ ಮತ್ತು ಪರಿಪೂರ್ಣ ಪಾರದರ್ಶಕತೆ. ಶಿವರಾಮ ಕಾರಂತರಂತೂ ಮೈವೆತ್ತ ವಿಕಿರಣಪಟುತ್ವ (radioactivity) – ಅವರದೇ ಮಾತಿನಲ್ಲಿ ಸುತ್ತಲೂ ಲತ್ತೆ ಕೊಡುವ ಕತ್ತೆ ಇದು!

ಅದೇ ಸುಮಾರಿಗೆ ವೈಜಯಂತೀ ಪಂಚಾಂಗದ ಸ್ಥಾಪಕ–ಸಂಪಾದಕ ಯರ್ಮುಂಜ ಶಂಕರಜೋಯಿಸರ ಸಾಹಚರ್ಯ ನನಗೆ ಲಭಿಸಿತು. ಇದೊಂದು ಬೋನಸ್. ಖಗೋಳವಿಜ್ಞಾನದಲ್ಲಿಯ ಆಧುನಿಕ ದೃಕ್ಸಿದ್ಧಾಂತವನ್ನು ಬೋಧಿಸುವಲ್ಲಿ ಈ ಮಹಾನುಭಾವರು ಕೈಗೊಂಡ ಕ್ರಮಗಳು ಮೂರು ಸಮಾಂತರ ಸಮಕಾಲೀನ ಧಾರೆಗಳಲ್ಲಿ ಪ್ರವಹಿಸಿದುವು: ವಾರ್ಷಿಕ ಪಂಚಾಂಗ ಪ್ರಕಟಣೆ, ಮದುವೆ ಮುಂಜಿ ಮುಂತಾದ ಧಾರ್ಮಿಕ ಸಭೆಗಳಲ್ಲಿ ದೃಕ್ಸಿದ್ಧಾಂತದ ಪ್ರಚಾರ ಮತ್ತು ವಿದ್ವದ್ಗೋಷ್ಠಿಗಳಲ್ಲಿ ಪ್ರಬಂಧ ಮಂಡನೆ ಹಾಗೂ ಚರ್ಚೆ.

ಸಿದ್ಧಾಂತದ ಸಾರವಿಷ್ಟು: ವರ್ತಮಾನಕಾಲದಲ್ಲಿ ಗೋಚರಿಸುವ ಮತ್ತು ಪ್ರತ್ಯಕ್ಷ ವೀಕ್ಷಣೆಗೆ ಲಭಿಸುವ ಗಗನವಿದ್ಯಮಾನಗಳ – ಮುಖ್ಯವಾಗಿ ಸೂರ್ಯ, ಚಂದ್ರ, ಗ್ರಹಗಳ ಚಲನೆ, ಯುಗಾದಿ, ಉತ್ತರಾಯಣ ಮತ್ತು ದಕ್ಷಿಣಾಯನ ಆರಂಭ ದಿನಗಳು – ಖಚಿತ ನಿರ್ಣಯ. ಉದಾಹರಣೆಗೆ ಪರಂಪರಾಗತವಾಗಿ (ಆದ್ದರಿಂದ ಯಾಂತ್ರಿಕವಾಗಿ ಕೂಡ) ಬಂದಿರುವ ಸೂರ್ಯಸಿದ್ಧಾಂತದ ಪ್ರಕಾರ ಎರಡು ಯುಗಾದಿಗಳಿವೆ: ಸೌರ ಮತ್ತು ಚಾಂದ್ರ. ಇವೆರಡೂ ವರ್ತಮಾನ ಆಕಾಶದಲ್ಲಿ ಅಸಿಂಧು, ವಸಂತ ವಿಷುವವೊಂದೇ (ಸಾಧಾರಣವಾಗಿ ಮಾರ್ಚ್ ೨೧/೨೨) ಋಜು ಯುಗಾದಿ; ಉತ್ತರಾಯಣಾರಂಭ ಮಕರಾಯಣದಂದು (ಡಿಸೆಂಬರ್ ೨೧/೨೨) ಸಂಭವಿಸುತ್ತದೆ, ಮಕರ

ಸಂಕ್ರಮಣದಂದು ಅಲ್ಲ ಮುಂತಾದ ಪ್ರತಿಪಾದನೆಗಳು ಅಂದಿನ ಪಟ್ಟಭದ್ರ ಮತ್ತು ಚಿಂತನಶೂನ್ಯ ಧಾರ್ಮಿಕ ನಾಯಕರಿಗೆ ಪಥ್ಯವಾಗಲಿಲ್ಲ. ಆದರೆ ಜೋಯಿಸರು ಬಗ್ಗಲಿಲ್ಲ.

ಕ್ಯಾಂಬ್ರಿಜ್ ವಿಶ್ವವಿದ್ಯಾಲಯದ ಗಣಿತ ಟ್ರೈಪಾಸ್ ಎಂಬ ಅತ್ಯುನ್ನತ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದ ಪುಣೆಯ ಬಾಲಗಂಗಾಧರ ತಿಲಕರು ಮರಾಠಿಯಲ್ಲಿ ಮೊದಲಿಗೆ ದೃಕ್ಸಿದ್ಧಾಂತವನ್ನು ಬಳಕೆಗೆ ತಂದವರಂತೆ. ಶಂಕರಜೋಯಿಸರ ವೈಜ್ಞಾನಿಕಮತಿ ಈ ನೂತನ ಚಿಂತನಪ್ರಕಾರದ ಭೌತಿಕ–ಬೌದ್ಧಿಕ ಸೌಂದರ್ಯಕ್ಕೆ ಮಾರುಹೋಯಿತು. ಮುಂದೆ ಇವರು ಪುಣೆಗೆ ತೆರಳಿ ಮರಾಠಿ ಕಲಿತು ಅದರ ಹೂರಣವನ್ನು ಸ್ವಾಂಗೀಕರಿಸಿ ಕನ್ನಡದಲ್ಲಿ ಬಳಕೆಗೆ ತಂದರು. ಹಿಂದೆ ಭಾರತದಲ್ಲಿ ವರಾಹಮಿಹಿರ (ಕ್ರಿಶ ಸುಮಾರು ೬ನೆಯ ಶತಮಾನ) ಮುಂದೆ ಯೂರೋಪಿನಲ್ಲಿ ಕೊಪರ್ನಿಕಸ್ (೧೫–೧೬ನೆಯ ಶತಮಾನ) ಇಂಥ ಕ್ರಾಂತಿಗಳಿಗೆ ಕಾರಣರಾಗಿದ್ದರು. ಆದರೆ ದುರ್ದೈವ: ಯಾವ ಯುಗಪುರುಷನೂ, ಬುದ್ಧನಿಂದ ತೊಡಗಿ ಗಾಂಧಿವರೆಗೂ, ಸಮಕಾಲೀನವಾಗಿ ಗಣ್ಯತೆ (ಅಂದರೆ ಬಹುಸಂಖ್ಯಾತ ಅಜವೃಂದದ ಮಾನ್ಯತೆ) ಗಳಿಸಲಿಲ್ಲ, ಬದಲು, ಭವಿಷ್ಯಕಾಲೀನವಾಗಿ ಆರಾಧ್ಯನಾಗುತ್ತಾನೆ!

ಅರಿಯದ ಮಾಧ್ಯಮದಲ್ಲಿ ಪ್ರಯೋಗ
ಅಧ್ಯಾಯ ಇಪ್ಪತ್ತೆರಡು

ಪ್ರತಿಯೊಂದು ನೂತನ ವಿಷಯವನ್ನು ಪ್ರವೇಶಗೊಳಿಸುವಾಗಲೂ ಅದರ ಐತಿಹಾಸಿಕ ನೆಲೆ ಮತ್ತು ಮಹತ್ತ್ವಗಳನ್ನು ಸೂಕ್ಷ್ಮವಾಗಿ ವಿವರಿಸುತ್ತಿದ್ದೆ. "ಆರ್ಕಿಮಿಡೀಸ್‌ನಿಗೆ ಸಾಪೇಕ್ಷ ಸಾಂದ್ರತೆಯ ರಹಸ್ಯ ಅಥವಾ ನ್ಯೂಟನ್‌ನಿಗೆ ಗುರುತ್ವಾಕರ್ಷಣ ನಿಯಮದ ಮೂಲ, ಅಂತೆಯೇ ಒಬ್ಬ ಯುಗಪುರುಷನಿಗೆ ಪ್ರಕೃತಿಯ ನೂತನ ಸುಪ್ತ ಗುಣವೊಂದು ಹೊಳೆದುದೇನೂ ಪವಾಡವಲ್ಲ, ಬದಲು, ತಪಸ್ಸಿದ್ಧ ಮನಸ್ಸಿಗೆ ಅದೃಷ್ಟ ಒಲಿವ ಸಹಜ ವಿದ್ಯಮಾನವದು. ನಿಮ್ಮೊಳಗೆ ಪ್ರತಿಯೊಬ್ಬನಲ್ಲಿಯೂ ಅಡಗಿರುವ ಇಂಥ ಪ್ರತಿಭೆಯನ್ನು ಉದ್ದೀಪಿಸಿ ಪ್ರಕಾಶಿಸುವಂತೆ ಮಾಡುವುದು ಉಪಾಧ್ಯಾಯರ ಕರ್ತವ್ಯ" ಎಂಬ ತತ್ತ್ವವನ್ನು ಮತ್ತೆ ಮತ್ತೆ ತರಗತಿಗೆ ಹೇಳುತ್ತಿದ್ದೆ ಮತ್ತು ಈ ನಿಟ್ಟಿನಲ್ಲಿ ಅವರಿಗೆ ಪ್ರೇರಣೆ ನೀಡುತ್ತಿದ್ದೆ.
ಆ ಸಲ ಕ್ಯಾಲ್ಕುಲಸ್ (Calculus) ಎಂಬ ನೂತನ ಗಣಿತವಿಭಾಗವನ್ನು ಶುರುಮಾಡುವ ಮೊದಲು ಹೇಗೆ ಈ ಪರಿಕಲ್ಪನೆ ಸಮಕಾಲೀನವಾಗಿ ಇಂಗ್ಲೆಂಡಿನ ನ್ಯೂಟನ್ ಮತ್ತು ಜರ್ಮನಿಯ ಲೈಬ್‌ನಿಟ್ಜ್ (೧೭–೧೮ನೆಯ ಶತಮಾನ) ಎಂಬ ಗಣಿತವಿದರಿಗೆ ಪರಸ್ಪರ ಸ್ವತಂತ್ರವಾಗಿ ಹೊಳೆಯಿತು, ಅವರು ಹೇಗೆ ತಮ್ಮವೇ ವಿಧಾನಗಳಲ್ಲಿ ಅದನ್ನು ಬೆಳೆಸಿ ಪ್ರಕಟಿಸಿದರು, ಆದರೆ ಇದನ್ನು ಮೊದಲು ಶೋಧಿಸಿದವರು ಯಾರೆಂಬ ಆದ್ಯತೆ ಕುರಿತಂತೆ ಇಬ್ಬರ ನಡುವೆ, ಮುಂದೆ ಉಭಯ ರಾಷ್ಟ್ರಗಳ ನಡುವೆ, ಮತ್ಸರ ಮತ್ತು ಕೃತಿಚೌರ್ಯಗಳ ಅಗ್ನಿ ಭುಗಿಲೆದ್ದು ಹೆಚ್ಚುಕಡಿಮೆ ಒಂದು ಶತಮಾನ ಗಣಿತದ ಮುನ್ನಡೆಗೆ ಪ್ರತಿಬಂಧಕವಾಯಿತು ಎಂಬ ಸಂಗತಿಗಳನ್ನು ಕೂಲಂಕಷವಾಗಿ ವಿವರಿಸಿದೆ ಶಿಕ್ಷಣಮಾಧ್ಯಮ ಇಂಗ್ಲಿಷಿನಲ್ಲಿ.

ನನ್ನ ಈ ನಿರೂಪಣೆಯನ್ನು ಮೆಚ್ಚಿದ ವಿದ್ಯಾರ್ಥಿಗಳ ಪ್ರೀತಿಯ ಒತ್ತಾಯಕ್ಕೆ ಮಣಿದು ಇಡೀ ಲೇಖನವನ್ನು ಕನ್ನಡದಲ್ಲಿ ಬರೆದು ಅಂದಿನ ಜನಪ್ರಿಯ ಸಾಪ್ತಾಹಿಕ 'ಕರ್ಮವೀರ'ಕ್ಕೆ ಕಳಿಸಿದೆ. ಅದು ಸಂಕಬು (ಸಂಪಾದಕರ ಕಸದ ಬುಟ್ಟಿ) ಸೇರುವುದು ಖಾತ್ರಿ ಎಂದು ನಿರಾಳನಾಗಿದ್ದೆ. ಇಲ್ಲ! ಮುಂದಿನ ವಾರವೇ ಅವರಿಂದ ಪೋಸ್ಟ್ ಕಾರ್ಡ್ ಬಂತು, "ಇಂಥ ಲೇಖನಗಳನ್ನು ಕಳಿಸುತ್ತ ಇರಿ" ಎಂಬ ಷರಾ ಸಹಿತ. ಅಡಿಯಲ್ಲಿ ಸಂಪಾದಕರ ಪರವಾಗಿ 'ಪಾವೆಂ' ಎಂಬ ಎರಡಕ್ಷರಗಳ ಬೀಜಮಂತ್ರವಿತ್ತು. ಆ ಲೇಖನ ಪ್ರಕಟವಾಯಿತು, ನನಗೆ ಸಂಭಾವನೆ ಬಂತು, ಅನೇಕ ಜನರ ಮೆಚ್ಚುಗೆಗೂ ಪಾತ್ರವಾಯಿತು. ಮುಂದೆ ಪಾವೆಂ ಮತ್ತು ನನ್ನ ಸ್ನೇಹ ವರ್ಧಿಸಿದಂತೆ ಒಂದು ಸಂಜೆ ಖುದ್ದು ಅವರೇ ನನ್ನನ್ನು ಅರಸಿ ಕವಿ ಗೋಪಾಲಕೃಷ್ಣ ಅಡಿಗರ ಸಹಿತ ನಮ್ಮ ಕಾಲೇಜಿಗೇ ಆಗಮಿಸಿದರು –– ವಿದುರನ ಮನೆಗೆ ಶ್ರೀಕೃಷ್ಣ ಬಂದಂತೆ. ಪಾಡಿಗಾರು ವೆಂಕಟರಮಣ ಆಚಾರ್ಯ ಅವರ ಪೂರ್ತಿ ನಾಮಧೇಯ. ಊರು ಉಡುಪಿ, ಹುದ್ದೆ ಮತ್ತು ವಾಸ ಹುಬ್ಬಳ್ಳಿ. ಉಡುಪಿಗೆ ಬಂದವರು ನನ್ನನ್ನು ನೋಡಲೆಂದೇ ಮಂಗಳೂರಿಗೆ ಪಯಣಿಸಿದ್ದರು. "ವಿಜ್ಞಾನ ವಿಷಯಗಳ ಸಹಜ ಕಾಠಿಣ್ಯವನ್ನು ನೀವು ಸಾಹಿತ್ಯ ಸಂಸ್ಪರ್ಶದಿಂದ ಮಾರ್ದವಗೊಳಿಸುವ ವಿಧಾನ ಸೊಗಸಾಗಿದೆ. ಹೀಗೆಯೇ ಕೃಷಿಮಾಡುತ್ತಿರಿ" ಎಂದು ಹರಸಿದರು ಕೂಡ.

ಜಗತ್ತಿನಲ್ಲಿ ಯಾವ ನಿಸ್ವಾರ್ಥ ಸತ್ಪ್ರಯತ್ನವೂ ದೀರ್ಘ ಕಾಲದಲ್ಲಾದರೂ ಸತ್ಫಲವೀಯದಿರದು ಎಂಬ ಅನುಭವೋಕ್ತಿಗೆ ಇದೊಂದು ನಿದರ್ಶನ. ಏಕೆಂದರೆ, ತತ್ಪೂರ್ವ ನನಗೆ ಎರಡು ಸಲ ಭ್ರಮನಿರಸನವಾಗಿತ್ತು: ನಾನು ಕವಿಯಲ್ಲ, ಕತೆಗಾರನೂ ಅಲ್ಲ. ಆದರೆ ಆ ಕವಾಯತಿಗಳ ಸಂದರ್ಭದಲ್ಲಿ ಗಳಿಸಿದ ತಂತ್ರಗಾರಿಕೆ ಈಗ ಫಲ ನೀಡಿತ್ತು. ಕಾಡ ಕಲ್ಲು ನಾಡ ವಿಗ್ರಹವಾಗಲು ಅದೆಷ್ಟು ಚಾಣದೇಟು ತಿನ್ನಬೇಕೋ! ಅಷ್ಟರಲ್ಲಿ ಹಿರಿಯರಿಂದ ಅದೇ ಬೇಸಗೆಯಲ್ಲಿ (೧೯೫೧ ಮಾರ್ಚ್-ಏಪ್ರಿಲ್) ನನಗೆ ಮದುವೆ ಮಾಡಿಸಲು 'ಪಿತೂರಿ' ನಡೆದಿತ್ತು.

ಬಾಳಿಗೊದಗಿದ ಬೆಳಕು
ಅಧ್ಯಾಯ ಇಪ್ಪತ್ಮೂರು

ಅಂದು ನಾನೊಬ್ಬ ಅತ್ಯಂತ 'ಅರ್ಹ ಬ್ರಹ್ಮಚಾರಿ.' ಮದುವೆ ಮಾರುಕಟ್ಟೆಯಲ್ಲಿ ನನ್ನ ಬೆಲೆ ಏರಿತ್ತು! ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ನನ್ನಲ್ಲಿಗೆ ಬಂದ ಎಲ್ಲ ಸೂಚನೆಗಳಿಗೂ ನನ್ನ ಉತ್ತರ ಒಂದೇ: ವಯಸ್ಸು ೩೦ ತುಂಬಿದ ಬಳಿಕವೇ ವಿವಾಹದ ಯೋಚನೆ. ಮಡಿಕೇರಿಯ ತವರಿನಲ್ಲಿದ್ದ ನಾಲ್ವರು ಅಜ್ಜಿಯರದೂ ಒಂದೇ ಒತ್ತಾಯ, "ಸುಬ್ಬಯ್ಯನ ಮಗಳನ್ನು ಒಪ್ಪಿಕೊಳ್ಳೋ. ನಿನಗೆ ಇಷ್ಟವಾದ ತೆಂಗಿನಕಾಯಿಹುಳಿಯನ್ನೂ ಅಕ್ಕಿ ಪಾಯಸವನ್ನೂ ಚೆನ್ನಾಗಿ ತಯಾರಿಸುತ್ತಾಳೆ ಕಾಣೋ!"

ಈ ಸುಬ್ಬಯ್ಯ ಬೇರೆ ಯಾರೂ ಅಲ್ಲ, ನನ್ನ ತಾಯಿಯ ಅಣ್ಣ, ಮರಿಕೆಯ ದೊರೆ, ನನ್ನ ಸಾಹಿತ್ಯ-ಸಂಗೀತಾಸಕ್ತಿಗಳಿಗೆ ಸಮೃದ್ಧಪೋಷಣೆಯಿತ್ತ ಆದರ್ಶ ಪುರುಷ. ನಾನು ಎಷ್ಟು ಮಡಿಕೇರಿಯ ಶಿಶುವೋ ಅಷ್ಟೇ ಮರಿಕೆಯ ಶಿಶು ಕೂಡ. ಇನ್ನು ಈ ಮಾವನ ಹೆಂಡತಿ (ನನ್ನತ್ತೆ) ನನ್ನನ್ನು ಖುದ್ದು ತಮ್ಮ ಮಕ್ಕಳಿಗಿಂತಲೂ ಹೆಚ್ಚು ಅಕ್ಕರೆಯಿಂದ ಲಾಲಿಸಿ ಪಾಲಿಸಿ ಬೆಳೆಸಿದ ಮಹಾಮಾತೆ. ಇಂಥವರ ಮಗಳು ಲಕ್ಷ್ಮಿ, ನನ್ನ ಸೋದರತ್ತಿಗೆ, ನನಗಿಂತ ೪ ವರ್ಷ ಕಿರಿಯಳು, ತುಂಬ ಜಾಣೆ. ಎಲ್ಲವೂ ಸರಿ. ಆದರೆ ನಾನು ಋಷ್ಯಶೃಂಗ, ಅನ್ಯಸ್ತ್ರೀಯರನ್ನು, ಅಲ್ಲಿಯೂ ಕನ್ಯೆಯರನ್ನು, ಕಡೆಗಣ್ಣಿಂದಲೂ ನೋಡಿದವನಲ್ಲ. ಲಕ್ಷ್ಮಿ ಮಡಿಕೇರಿಯಲ್ಲಿಯ ನಮ್ಮ ಮನೆಯಲ್ಲಿಯೇ ಇದ್ದು ನನ್ನದೇ ಶಾಲೆಗೆ ಹೋಗಿ ಬರುತ್ತಿದ್ದಳಾದರೂ ನನ್ನ ಮಟ್ಟಿಗೆ ಅವಳ ಅಸ್ತಿತ್ವವೇ ಇರಲಿಲ್ಲವೆಂಬಂಥ ಅತಿರೇಕ ವರ್ತನೆ ನನ್ನದು. ಏಕೆ? ಒಂಟಿ ಹುಡುಗನಾಗಿ 'ಗಂಡು ಮುತ್ತಿನ ಚಂಡು' ಎಂಬ ಅತಿಶಯ ಮುದ್ದಿನ ಪರಿಸರದಲ್ಲಿ ಬೆಳೆದವ ನಾನು. ತೀರ ಎಳೆ ಪ್ರಾಯದಿಂದಲೇ ಮನೆಯ ಹಿರಿಯರು ಮತ್ತು ಹಿತೈಷಿಗಳು ಸದುದ್ದೇಶದಿಂದಲೇ ಹೇಳುತ್ತಿದ್ದ ಮಾತು, "ನಮ್ಮ ನಾರಾಯಣನಿಗೆ ಈ ಲಕ್ಷ್ಮಿ ಹೇಳಿ ಮಾಡಿಸಿದ ಹಾಗಿದ್ದಾಳೆ. ಈಗಲೇ ಮದುವೆಮಾಡಿಬಿಡೋಣ." ಇದನ್ನು ಕೇಳಿಕೇಳಿ ಈ ಹುಡುಗಿ ಬಗ್ಗೆ ತಿರಸ್ಕಾರ ಜುಗುಪ್ಸೆಗಳು ನನ್ನಲ್ಲಿ ಮೊಳೆತು ಮರವಾದುವು. ಪ್ರಾಯ ಬಂದಂತೆ ಇವು ಒಂದು ರೀತಿಯ ಅಲರ್ಜಿಯೇ ಆಗಿಬಿಟ್ಟುವು!

ಅತ್ತ ಮಾವ ಸುಬ್ಬಯ್ಯ ತಮ್ಮ ಮಗಳಿಗೆ ಪ್ರಾಯ ೧೫-೧೬ ತುಂಬುವ ಮೊದಲೇ ವರಾನ್ವೇಷಣೆಗೆ ತೊಡಗಿದ್ದರು. ತಮಾಷೆ ಏನೆಂದರೆ ಇಂಥ ಮೂರು ವಧೂಪರೀಕ್ಷಾ ಸಂದರ್ಭಗಳಲ್ಲಿಯೂ ತೀರ ಅನಿರೀಕ್ಷಿತವಾಗಿ ನಾನು

ಮರಿಕೆಯಲ್ಲಿ ಹಾಜರ್! ಭಾವೀ ಅಳಿಯನ ಶೀಲ ಹಾಗೂ ವಿದ್ಯಾರ್ಹತೆಗಳಿಗೆ ಮಾತ್ರ ಸ್ಪಂದಿಸುತ್ತಿದ್ದ ಮಾವ –– ಶ್ರೀಮಂತಿಕೆಯ ಡೌಲು ಅಬ್ಬರಗಳಿಗೆ ಎಂದೂ ಅಲ್ಲ –– ಯಾವ ಕನ್ಯಾರ್ಥಿಯನ್ನೂ ಒಪ್ಪಲಿಲ್ಲ. ಹುಡುಗಿಯ ಅಭಿಪ್ರಾಯವನ್ನು ಕೇಳಿ ಮುಂದುವರಿಯಬೇಕೆಂಬ ವ್ಯಾವಹಾರಿಕ ಪ್ರಜ್ಞೆ ಇನ್ನೂ ಮೂಡಿರದ ಕಾಲವದು. ಲಕ್ಷ್ಮಿಗೆ ವಯಸ್ಸು ೨೦ ದಾಟಿತು. ಹಿರಿಯರೆಂದರು ಹದಿನೆಂಟು ದಾಟಿದ ಕನ್ಯೆ ವಿಧವೆಯಂತೆ ಬಾಳಬೇಕು. ಆದರೆ ಮಾವ ಮಾತ್ರ ಅವಿಚಲಿತ. ಅವರ ಮನೋಧರ್ಮ ಕೆಎಸ್‌ನ ಹೇಳಿದಂತೆ ––

ಶಾನುಭೋಗರ ಮಗಳು ರತ್ನದಂತಹ ಹುಡುಗಿ;
ಗಂಡು ಸಿಕ್ಕುವುದೊಂದು ಕಷ್ಟವಲ್ಲ;
ಸರಿಯಾದ ಗಂಡೊದಗಿ ಹೆಣ್ಣು ಸುಖವಾಗಿರಲಿ,
ತಡವಾದರೇನಂತೆ? ನಷ್ಟವಿಲ್ಲ.

೧೯೫೧ರ ಆರಂಭ. ಮಾವನಿಂದ ನನಗೊಂದು ಪತ್ರ ಬಂತು. ಖುದ್ದು ನಾನೇ ಅವರ ಮಗಳ ಕೈಹಿಡಿವ 'ಕೃಪೆ' ಮಾಡಬೇಕೆಂಬ ಹೃದಯದ ಮೊರೆ ಅದರಲ್ಲಿ ಮಿಡಿಯುತ್ತಿತ್ತು. ನನ್ನ ಮಾವನಂಥ ಆದರ್ಶವ್ಯಕ್ತಿಗೆ ಈ ತೆರನಾದ ದೈನ್ಯ ಪರಿಸ್ಥಿತಿ ಬರಬಹುದೇ ಎಂದು ನನ್ನ ಮನ ಮರುಗಿತು, ಎದೆ ಕರಗಿತು, ಸಂಕಲ್ಪ ಸಡಿಲವಾಯಿತು. ಹಾಗಾದರೆ ಪ್ರತಿಜ್ಞೆ? ಇನ್ನೂ ೨೫ರಲ್ಲಿದ್ದೆ. ಆರ್ಥಿಕ ಸ್ಥಿತಿ ಸಂಸಾರ ಹೂಡಲು ಖಂಡಿತ ಅನುಕೂಲವಾಗಿರಲಿಲ್ಲ. ತಂದೆ, ಮಾವ, ನೆಂಟರಿಷ್ಟರು ಯಾರಿಂದಲೂ ಹಣ ಯಾಚಿಸತಕ್ಕದ್ದಲ್ಲ ಪಡೆಯತಕ್ಕದ್ದೂ ಅಲ್ಲ ಎಂಬ ದೃಢ ನಿಲವು.

ವಾರಾಂತ್ಯದಲ್ಲಿ ಮರಿಕೆಗೆ ಹೋದೆ. ಹುಡುಗಿ ಎಂದಿಗಿಂತಲೂ ಹೆಚ್ಚಾಗಿ ಅಡಗಿದಳು. ಆದರೂ ನನ್ನ ಕಣ್ಣಿಗೆ ಬಿದ್ದಳು. ಆಗಲೇ ಅವಳನ್ನು ನಾನು ಸರಿಯಾಗಿ ನೋಡಿದ್ದು. ಕೆಎಸ್‌ನ ನುಡಿಗಳಲ್ಲಿ –– –
ಉಟ್ಟ ರೇಸಿಮೆಗಿಂತ ನಿನ್ನ ಮೈ ನುಣುಪು:
ಬೆಟ್ಟದರಗಿಳಿಗಿಂತ ನಿನ್ನ ನುಡಿ ಇಂಪು;
ತುಂಬು ಹರೆಯದ ಹುಡುಗಿ ನೀನೊಲುಮೆಗೀಡು;
ನಂಬಿ ನನ್ನನು ವರಿಸಿ ಸಂತಸದಿ ಬಾಳು.
ನವಿಲೂರಿನೊಳಗೆಲ್ಲ ನೀನೆ ಬಲು ಚೆಲುವೆ
ಅದಕೆ ನಮ್ಮಿಬ್ಬರಿಗೆ ನಾಳೆ ಮದುವೆ!

ದಿನಾಂಕ ೯-೫-೧೯೫೧ರಂದು ಮರಿಕೆ ಮನೆಯಲ್ಲಿ 'ಲಕ್ಷ್ಮೀನಾರಾಯಣರ ವಿವಾಹ'ವೆಂದು "ಗುರುರಿಯರಿದ್ದು" ಹುಡುಗಿಯ ಅಭಿಪ್ರಾಯ ಕೇಳದೇ ನಿರ್ಧರಿಸಿದರು! ಅದೇ ಹಿಂದಿನ ರಾತ್ರಿ ನಾನು ಒಂಟಿಯಾಗಿ ಮಂಗಳೂರಿನಿಂದ ಬಸ್ ಪ್ರಯಾಣ ಮಾಡಿ ಸಂಟ್ಯಾರಿನಲ್ಲಿ ಇಳಿದೆ. ಅಲ್ಲಿಂದ ಸುಮಾರು ೧ ಕಿಮೀ ದೂರ ಗಾಡಿ ರಸ್ತೆಯಲ್ಲಿ ನಡೆದರೆ ಮಾವನ ಮನೆ ಮರಿಕೆ ಸಿಕ್ಕುತ್ತದೆ. ಅಲ್ಲಿಯೇ ಹುಟ್ಟಿ ಆಡಿ ಓಡಿ ಬೆಳೆದಿದ್ದ ನನಗೆ ಈ ಕಾರ್ಗತ್ತಲೆಯ ಹಾದಿ ಆತ್ಮೀಯವಾಗಿತ್ತು. ಹೀಗೆ ತಾರೆಗಳಡಿಯಲ್ಲಿ ಮುನ್ನಡಿಯಿಡುತ್ತಿದ್ದಾಗ ಯಾರೋ ವೃದ್ಧರು ದೊಣ್ಣೆ ಊರುತ್ತ ಮುಂದೆ ಹೋಗುತ್ತಿದ್ದುದು ನನ್ನ ಅರಿವಿಗೆ ಬಂತು. ಅವರ ಜೊತೆ ಹರಟೆಗಿಳಿದೆ, "ಎತ್ತ ಕಡೆಗೆ ಪಯಣ ಅಜ್ಜಯ್ಯ?"
"ಇಲ್ಲೇ ಸುಬ್ಬಯ್ಯನವರ ಮನೆ ಮರಿಕೆಗೆ."
"ಏನು ವಿಶೇಷ?"
"ಓಹೋ ನಿಮಗೆ ಗೊತ್ತಿಲ್ಲವೋ? ನಾಳೆ ಅವರಲ್ಲೊಂದು ಭರ್ಜರಿ ಮದುವೆ!"
"ಯಾರಿಗೋ?"

"ಅವರ ಹಿರಿಮಗಳಿಗೆ."

"ಅದರಲ್ಲಿ ನಿಮ್ಮ ಪಾತ್ರವೇನು?"

"ನಾನೇ ಪ್ರಧಾನ ಪುರೋಹಿತ."

"ಬಹಳ ಸಂತೋಷ. ವರ ಯಾರೋ?"

"ಅವರ ಸೋದರಳಿಯನಂತೆ. ಅದಿರಲಿ ನೀವು ಯಾರು? ಈ ಅರಿಯದ ನೆಲೆಗೆ ಇಂಥ ಅಪರಾತ್ರಿಯಲ್ಲೇಕೆ ಬಂದಿದ್ದೀರಿ?"

"ನಾನೂ ಅದೇ ಮದುವೆಗೆಂದು ದೂರದ ಮುಂಬಯಿಯಿಂದ ಬಂದಿದ್ದೇನೆ. ಅವರ ಭಾವೀ ಅಳಿಯ ನನ್ನ ಗಳಸ್ಯ ಕಂಠಸ್ಯ ಸ್ನೇಹಿತ. ಈಗ ನೋಡಿ ಸ್ವಾಮೀ! ನೀವು ಸಿಕ್ಕಿ ನನ್ನನ್ನು ಸರಿಯಾದ ಸ್ಥಳಕ್ಕೆ ಕರೆದೊಯ್ಯುತ್ತಿರುವುದೊಂದು ಭಾಗ್ಯ."

ಇಷ್ಟಾಗುವಾಗ ಮರಿಕೆ ಅಂಗಳಕ್ಕೆ ಕಾಲಿಟ್ಟೆವು. ಆ ಝುಗಝುಗಿಸುವ ಗ್ಯಾಸ್‌ಲೈಟುಗಳ ಬೆಳಕಿನಲ್ಲಿ ಮನೆಯ ಮಕ್ಕಳೆಲ್ಲರೂ ಒಡನೆ ನನ್ನನ್ನು ಗುರುತಿಸಿ, "ನಾರಾಯಣ ಬಂದ!" ಎಂದು ಬೊಬ್ಬೆ ಹೊಡೆದಾಗ ನಮ್ಮ ಪುರೋಹಿತರು ಕಕ್ಕಾಬಿಕ್ಕಿ. ಅವರೇ ನಕ್ಕು ನುಡಿದರು, "ನನ್ನನ್ನು ಎಂಥ ಮಂಗಮಾಡಿದಿರಿ ಮಾರಾಯ್ರೇ!"

ಮದುವೆ ಸಾಕಷ್ಟು ದೀರ್ಘವಾಗಿಯೇ ನೆರವೇರಿತು. ಅಂದು ಸಂಪ್ರದಾಯದ ಸಂಕೋಲೆ ಹಾಗಿತ್ತು. ಐದು ದಿನಗಳ ಮದುವೆ ಮಾಮೂಲು; ಆದರೆ ಧಾರೆಯ ಸಂಜೆಯೇ 'ಪದುಮಳು ಒಳಗಿಲ್ಲ' ಪ್ರಕರಣ (ಕೆಎಸ್‌ನ 'ಮಾವನ ಮನೆಯಲ್ಲಿ'); ಶುದ್ಧಾನಂತರ ಮರಳಿದಾಗ ನಮ್ಮ ಕುಟುಂಬದಲ್ಲಿ ಯಾರೋ ವೃದ್ಧರು ಮಡಿದ ವಾರ್ತೆಯನ್ನು ಹೊತ್ತು ತಂದರು ಆಪ್ತ ಸಂಬಂಧಿಕರೊಬ್ಬರು; ಈ ಸೂತಕ ಮುಗಿದಾಗ ಬೇರೇನೋ ಅಶುಭ! ಅಂತೂ ಇಂತೂ ಸುಮಾರು ೨೭ ದಿನ ಪರ್ಯಂತ (ಚಂದ್ರನ ನಾಕ್ಷತ್ರಿಕ ಮಾಸ) ಈ ಸತಾವಣೆ (ತದ್ದೂರೇ ತದ್ವಂತಿಕೇ – [ನನ್ನ ಭಾರ್ಯೆ ನನಗೆ] ಅಷ್ಟು ಹತ್ತಿರವಿದ್ದೂ ಅಷ್ಟು ದೂರವಾಗಿರುವ ಸಂದಿಗ್ಧತೆ) ಸಾಗಿತು. ಸದ್ಯ ಆಗ ನನಗೆ ಬೇಸಗೆ ರಜೆ ಇದ್ದುದರಿಂದ ಬಚಾವ್.

ಅದೇ ಜೂನ್ ತಿಂಗಳಲ್ಲಿ ಕಾಲೇಜ್ ಶುರುವಾದಾಗ ಮತ್ತೆ ಹಾಸ್ಟೆಲ್ಲಿನ ಗಂಡು ಬಿಡಾರ. ಆಗ ವಿರಹ ತಾಪವೇನೆಂಬುದು ಅರಿವಿಗೆ ಬಂತು. ಮನೆ ಮಾಡದೆ ವಿಧಿ ಇಲ್ಲ, ಮರ್ಯಾದೆಯೂ ಇಲ್ಲ. ಆದರೆ ಕೈಗೆ ಬರುತ್ತಿದ್ದ ರೂ ೧೨೦ರಲ್ಲಿ ಇದು ಸಾಧ್ಯವೇ? ಹಿರಿಯ ಸಹೋದ್ಯೋಗಿ ಮಿತ್ರ ಬಿ.ವಿ.ಕೆದಿಲಾಯರೂ ನವ ಗೃಹಸ್ಥ ನಾನೂ ಸೇರಿ ಬಾಡಿಗೆ ಮನೆಯೊಂದನ್ನು ಹಿಡಿದೆವು: ಅರ್ಧ ಭಾಗದಲ್ಲಿ ಅವರು, ಅವರ ಹೆಂಡತಿ ಮತ್ತು ಆರರ ಹರೆಯದ ಮಗಳು, ಉಳಿದರ್ಧದಲ್ಲಿ ನಾವಿಬ್ಬರು; ಅಡುಗೆ, ವಾಸ ಬೇರೆ ಬೇರೆ.

ನನ್ನವಳು ನನ್ನೆಲ್ಲ ಕಲ್ಪನೆ ನಿರೀಕ್ಷೆಗಳನ್ನೂ ಮೀರಿದ ಸುಸಂಸ್ಕೃತೆ, ಅನುಕೂಲೆ ಎಂಬುದು ಅತಿ ಶೀಘ್ರದಲ್ಲೇ ಅರಿವಿಗೆ ಬಂತು. ವಿವಾಹಮಂಟಪದಲ್ಲಿ ಪುರೋಹಿತರು ಹೇಳುವ –

ಕಾರ್ಯೇಷು ಮಂತ್ರೀ ಕರಣೇಷು ದಾಸೀ

ಭೋಜ್ಯೇಷು ಮಾತಾ ಶಯನೇಷು ರಂಭಾ

ಧರ್ಮೇನುಕೂಲಾ ಕ್ಷಮಯಾ ಧರಿತ್ರೀ

ಭಾರ್ಯಾ ಚ ಷಾಡ್ಗುಣ್ಯವತೀಹ ದುರ್ಲಭಾ

– ಮಂತ್ರಕ್ಕೆ ಬರೆದ ಜೀವಂತ ಭಾಷ್ಯ ಅವಳಾಗಿದ್ದಳು. ತುಂಬು ಸಂಸಾರದ ಹೆಣ್ಣು ಅವಳು. ನಾನೋ ಒಂಟಿ ಸಲಗನಾಗಿ ಬೆಳೆಯುತ್ತ ಮನೆಯವರಿಂದಲೂ ಹೊರಗಿನವರಿಂದಲೂ ಜೈ ಜೈ ಎಂದು ಹೇಳಿಸಿಕೊಂಡು ಬೀಗುತ್ತಿದ್ದ ನಿರಂಕುಶ ಮನೋವೃತ್ತಿಯ ಗಂಡು. ಪಾಶ್ಚಾತ್ಯ ದೇಶಗಳಲ್ಲಾಗಿದ್ದರೆ ಮನೆ ಹೂಡಿದ ತರುಣದಲ್ಲೇ ಅವಳು ನನ್ನಿಂದ ವಿವಾಹವಿಚ್ಛೇದನ ಪಡೆದು ಸ್ವತಂತ್ರಳಾಗಿ ಬಿಡುತ್ತಿದ್ದಳು. ಆದರೆ ನನ್ನ ಹೆಂಡತಿ ಭಾರತೀಯ ಸ್ತ್ರೀ, "ಮನೆಮನೆಯಲಿ ನೀನಾಗಿಹೆ ಗೃಹಶ್ರೀ. ಪೆಸರಿಲ್ಲದ ಪೆಸರಿದೆ ನಿನಗದು ಗೃಹಸ್ತ್ರೀ."

ಖಾಸಗಿಪಾಠದ ಉಸುಕಿಗೆ ಬಿದ್ದೆ
ಅಧ್ಯಾಯ ಇಪ್ಪತ್ನಾಲ್ಕು

ಮದ್ರಾಸು ವಿಶ್ವವಿದ್ಯಾಲಯ (ಆಡಳಿತಾತ್ಮಕವಾಗಿ ದಕ್ಷಿಣ ಕನ್ನಡ ಜಿಲ್ಲೆ ಮದ್ರಾಸು ಆಧಿಪತ್ಯಕ್ಕೆ ಸೇರಿದ್ದುದರಿಂದ ನಮ್ಮ ಕಾಲೇಜು ಈ ವಿಶ್ವವಿದ್ಯಾಲಯಕ್ಕೆ ಸಂಯೋಜಿತವಾಗಿತ್ತು) ಕನ್ನಡದಲ್ಲಿ ಜನಪ್ರಿಯ ವಿಜ್ಞಾನ ವಾಙ್ಮಯವನ್ನು ಪ್ರೋತ್ಸಾಹಿಸುವ ಸಲುವಾಗಿ 'ಖಗೋಳವಿಜ್ಞಾನ' ಕುರಿತಂತೆ ಗ್ರಂಥಹಸ್ತಪ್ರತಿಗಳನ್ನು ಆಹ್ವಾನಿಸಿತು. ನನಗೆ ತಂತಾನೇ ಒದಗಿದ ಸುವರ್ಣಾವಕಾಶವಿದೆಂದು ಭಾವಿಸಿ ಈ ಸವಾಲನ್ನು ಸ್ವೀಕರಿಸಿದೆ. ಖಗೋಳವಿಜ್ಞಾನದ ಹಸ್ತಪ್ರತಿಯನ್ನು (ಆ ೨೦೦ ಪುಟಗಳನ್ನು ಪ್ರತಿಯೊಂದನ್ನೂ ಹತ್ತಾರು ಬಾರಿ ಬರೆದು ಮರುಬರೆದು) ಯಥಾಕಾಲದಲ್ಲಿ ವಿಶ್ವವಿದ್ಯಾಲಯಕ್ಕೆ ರವಾನಿಸಿದೆ. ಇದಕ್ಕೆ ಬಹುಮಾನ ದೊರೆಯಲಿಲ್ಲ. ``The style is too high and academic'' ಎಂಬ ಟಿಪ್ಪಣಿ ಲಭಿಸಿದ್ದೇ ಲಾಭ. ಇನ್ನು ಪ್ರಶಸ್ತಿಪಾತ್ರವಾದ ಕೃತಿಯನ್ನು ಖರೀದಿಸಿ ಓದಿದೆ. ಅದೊಂದು ವಿಸ್ತೃತ ಪಾಠಪುಸ್ತಕ, ಹಳೆಯ ಹಳಸಲು ಮಾಹಿತಿಗಳ ಮೊತ್ತ! ಸ್ಪರ್ಧೆಗಳ ಬಗೆಗೇ ನನ್ನಲ್ಲಿ ಜುಗುಪ್ಸೆ ಮೂಡಿತು. ಮುಂದೆ ಎಂದೂ ನಾನು ಯಾವ ಸ್ಪರ್ಧೆಯಲ್ಲೂ ಭಾಗವಹಿಸಲಿಲ್ಲ. ನಿಜ,

ಆಸೆಯೆಂಬುದನರ್ಥಕಾರಿಯು
ಮೋಸಮಾರ್ಗಕೆ ತಳ್ವ ಆಮಿಷ
ವೇಷಭೂಷಣ ನಡೆನುಡಿಗಳಲಿ ಕೃತಕತೆಗೆ ನಾಂದಿ!
ದ್ವೇಷಕಾರಕ ಗರಳವಿದು ಖರೆ
ದೇಶಛಿದ್ರಕ ಪಟ್ಟಭದ್ರರ
ಭ್ರಷ್ಟ ಕೂಪಕೆ ಕೆಡೆವ ಘಾತಕ ಮಾರ್ಗವಿದು ತಿಳಿಯೊ!

ಇತ್ತ ಪತ್ರಿಕೆಗಳಿಗೆ ವಿಜ್ಞಾನಲೇಖನಗಳನ್ನು ನಿಯತಕಾಲಿಕವಾಗಿ ಕಳಿಸುತ್ತಿದ್ದೆ. ಪರಿಣಾಮವಾಗಿ ನಾನೊಂದು ಪುಟ್ಟ ಗ್ರಂಥಾಲಯವನ್ನೇ ಕಟ್ಟುವುದು ಅನಿವಾರ್ಯವಾಯಿತು. ಆದರೆ ಕಾಸೆಲ್ಲಿ? ಸಾಲಮಾಡದೇ ಮರ್ಯಾದೆಯಿಂದ ಬಾಳಬೇಕು, ಹೆಂಡತಿಯ ಆಭರಣಾದಿಗಳನ್ನು ಮುಟ್ಟತಕ್ಕದ್ದಲ್ಲ, ಅಪ್ಪ ಮಾವ ಅಥವಾ ಸಂಬಂಧಿಕರತ್ತ ಕೈಚಾಚತಕ್ಕದ್ದಲ್ಲ. ಇತ್ತ ಗ್ರಂಥಾಲಯ ನನ್ನ ವಿಕಾಸಕ್ಕೆ ಅತ್ಯವಶ್ಯ ಪೋಷಕಧಾತು. ಹೇಗೆ ಹಣ ಹೊಂದಿಸಲಿ? ಹಿರಿಯ ಸಹೋದ್ಯೋಗಿಯೊಬ್ಬರು ಸಲಹೆ ನೀಡಿದರು, "ಗಣಿತದಲ್ಲಿ ಮನೆಪಾಠಕ್ಕೆ ಒಳ್ಳೆ ಬೇಡಿಕೆ ಇದೆ. ಒಬ್ಬನೋ ಇಬ್ಬರೋ ವಿದ್ಯಾರ್ಥಿಗಳಿಗೆ ಖಾಸಗಿಪಾಠ ಮಾಡಿ. ಗಂಟೆಗೆ ಕನಿಷ್ಠ ರೂ ೨ ಶುಲ್ಕವಿದೆ. ಸೀನಿಯರ್ ಲೆಕ್ಚರರ್‌ಗಳು ರೂ ೫ಕ್ಕಿಂತ ಕಡಿಮೆಗೆ ಒಪ್ಪುವುದಿಲ್ಲ."

"ಆದರೆ ಅಂಥ ಸಂಪಾದನೆ ಅನೈತಿಕವಲ್ಲವೇ? ವರ್ಷಾಂತ್ಯದಲ್ಲಿ ನಾನು, ಅದೇ ಹಿಂದಿನ ವರ್ಷ ಯಾವುದೇ ಖಾಸಗಿಪಾಠ ಹೇಳಿಲ್ಲವೆಂಬ ಲಿಖಿತ ಮುಚ್ಚಳಿಕೆ ಕೊಡಬೇಕಲ್ಲವೇ?"

"ಅಷ್ಟೊಂದು ನಿಷ್ಠುರ ನೈತಿಕತೆ ಖುದ್ದು ಸರ್ಕಾರದಲ್ಲೇ ಇಲ್ಲ. ಮುಚ್ಚಳಿಕೆ ಕೊಡಿ, ಇತ್ತ ಮನೆಪಾಠದಲ್ಲೂ ತೊಡಗಿ. ನಿಮ್ಮದು ವ್ಯಾವಹಾರಿಕವಲ್ಲದ ಆದರ್ಶ."
ಕ್ರಮೇಣ ನಾನು ಕಪ್ಪಕ್ಕೆ ಕೆಡೆದೆ?

ಅವನು ಬಂದ. ಅಲ್ಲ, ಅವನ ಶ್ರೀಮಂತ ಅಪ್ಪ ಈ ದಡ್ಡ ಮಗನನ್ನು ಕಾರ್‌ನಲ್ಲಿ ಕರೆದುಕೊಂಡು ಬಂದು ನಮ್ಮ ಮನೆಯಲ್ಲಿ ಬಿಟ್ಟು, "ಏ ಮಾಷ್ಟ್ರಾ! ನನ್ನ ಮಗ ಎಂಜಿನಿಯರ್ ಆಗತಕ್ಕದ್ದು. ಲೆಕ್ಕದಲ್ಲಿ ತುಸು ವೀಕ್ ಅಷ್ಟೆ. ಅದರಲ್ಲಿ ಇವನು ಸಾಕಷ್ಟು ಅಂಕ ಗಳಿಸುವಂತೆ ಮಾಡುವುದು ನಿನ್ನ ಹೊಣೆ. ದುಡ್ಡಿನ ಕೊರತೆ ಇಲ್ಲ" ಎಂದು ದರ್ಪದಿಂದ ಇಂಗ್ಲಿಷಿನಲ್ಲಿ ಆದೇಶಿಸಿ ಹೋದ. 'ಮಾಷ್ಟ್ರು' ಅಂದರೆ ಬಹುವಚನ, ಇದರ ಏಕವಚನ 'ಮಾಷ್ಟ' ಎಂಬುದು ಅಂದಿನ ಗರ್ವಿಷ್ಠರ ತರ್ಕ. ಅಲ್ಲದೇ ಎಲ್ಲಿಯೂ ಸಲ್ಲದಾತ ಮಾತ್ರ ಉಪಾಧ್ಯಾಯನಾಗುತ್ತಾನೆ ಎಂದು ಜನ ಭಾವಿಸುತ್ತಿದ್ದ ಕಾಲವದು. (ಇಂದು ಬದಲಾಗಿದೆಯೇ?)
ಗಂಟೆಗೆ ರೂ ೨ ಶುಲ್ಕ. ತಿಂಗಳಿಗೆ ರೂ ೬೦, ಖುದ್ದು ನನ್ನ ಸಂಬಳದ ಅರ್ಧಾಂಶ! ಪಾಠ ಮಾಡಿದೆ, ಕೊಸರು ಸೇರಿಸಿ ಲೆಕ್ಕ ಹೇಳಿಕೊಟ್ಟೆ. ನಮಗೇ ಕಾಫ಼ಿಗೆ ತತ್ವಾರವಾಗಿದ್ದಾಗಲೂ ಅವನಿಗೆ ಒತ್ತಾಯಪೂರ್ವಕವಾಗಿ, ಹೆಂಡತಿಯ ಅಭ್ಯಂತರ ಲೆಕ್ಕಿಸದೇ, ಅದನ್ನು ಕುಡಿಸಿದೆ. ಒಂದು ಲೋಟ ಕಾಫ಼ಿಗೆ ಕೇವಲ ಅರ್ಧಾಣೆ (ರೂ ೧ = ೧೬ ಆಣೆಗಳು) ಬೆಲೆಯಿದ್ದ ಕಾಲವದು. ಆತ ಮಾತ್ರ ಶತ ಶುಂಠ. ೧ಕ್ಕೆ ೫ ಕೂಡಿಸಿದರೆ ೭ ಎನ್ನುತ್ತಿದ್ದ ಬೃಹಸ್ಪತಿ. ಬೀಜಗಣಿತದ ಅಕ್ಷರದೋಹದಲ್ಲಿ ಅಂತೆಯೇ ಜ್ಯಾಮಿತಿಯ ವಕ್ರರೇಖೆಗಳ ಗೋಜಲಿನಲ್ಲಿ ಅವನು ಸಿಕ್ಕಿಹಾಕಿಕೊಂಡು ತಾನೂ ತೊಳಲಿ ನನ್ನನ್ನೂ ಬಳಲಿಸುತ್ತಿದ್ದುದೇ ವಾಡಿಕೆ. ಆದರೂ ತಿಂಗಳ ಕೊನೆಯಲ್ಲಿ ಕಾದಿದೆ ರೂ ೬೦, ಹೆಂಡತಿಗೆ ಸೀರೆ, ನನಗೆ ಶೂಗಳು ...... ಮಂಡಿಗೆ ಮೆದ್ದದ್ದೇ ಮೆದ್ದದ್ದು.

ತಿಂಗಳು ತುಂಬಿತು. ದುಡ್ಡಿನ ಥೈಲಿ ಅಪ್ಪ ಮಗನ ಸಹಿತ ಕಾರ್‌ನಲ್ಲಿ ಬಂದಿಳಿದ, "ಏ ಮಾಷ್ಟ್ರಾ! ಇವನಿಗೆ ಪರೀಕ್ಷೆಯಲ್ಲಿ ಒಳ್ಳೆಯ ಅಂಕ ಬರುವಂತೆ ನೀನು ಪಾಠ ಮಾಡಿದರೆ ಸಾಕು. ಈಗಿನ ವ್ಯರ್ಥ ಬೋಳು ಹರಟೆ ನಿಲ್ಲಿಸು" ಎಂದು ಮತ್ತೆ ಇಂಗ್ಲಿಷಿನಲ್ಲಿ ಅಪ್ಪಣೆ ಮಾಡಿದ.
ನನ್ನ ಆತ್ಮ ಪ್ರತ್ಯಯ ಸೆಟೆದೆದ್ದು ಬುಸುಗುಟ್ಟಿತು, ``It's I, and NOT you, who'll decide on the mode of tutoring your blockhead son. Get out of my sight at once,'' ಎಂದು ಗರ್ಜಿಸಿದೆ. ಆ ಶನಿಗಳು ತೊಲಗಿಯೇ ಹೋದುವು. ಹಾಗಾದರೆ ರೂ ೬೦? ಕುಡಿಸಿದ ಕಾಪಿಯ ಬೆಲೆ? ಕಂಠ ಮತ್ತು ಮಿದುಳುಶೋಷಣೆಯ ಶುಲ್ಕ? ಎಲ್ಲವೂ ಮಂಗಮಾಯ. ಗೊತ್ತಿದ್ದ ಪಾಠ ಮತ್ತೊಮ್ಮೆ ದೃಢವಾಯಿತು: ವಾಮಮಾರ್ಗದಲ್ಲಿ ಹಣದ ಗಳಿಕೆ ಸಲ್ಲ ಸಲ್ಲ.

ಆದರೆ ಬದುಕು ತನ್ನದೇ ಅಜ್ಞಾತ ಕಾರಣಗಳಿಗಾಗಿ ಹೊಸ ಹಾದಿಗಳನ್ನು ಕಾಣಿಸುವುದು ವಿರಳವಲ್ಲ. ಹಿಂದೆ ಪ್ರಸ್ತಾವಿಸಿದ ಬೆಸೆಂಟ್ ಶಾಲೆಯ ಮಿತ್ರ ಶ್ರೀನಿವಾಸ ಉಡುಪರು ನನ್ನ ಒಂದು ಕಥಾಸಂಕಲನ ಪ್ರಕಾಶಿಸಲು ತಾವಾಗಿಯೇ ಮುಂಬಂದರು. 'ವನಸುಮ' ಪುಸ್ತಕ ಹೊರಬಂತು (೧೯೫೧), ಇದು ಪ್ರೌಢಶಾಲಾತರಗತಿಗಳಿಗೆ ಉಪಪಠ್ಯ ಪುಸ್ತಕವೂ ಆಗಿ ನನಗೆ ಹೇರಳ ಸಂಭಾವನೆ ದೊರೆಯಿತು. ಎರಡನೆಯ ಸಂಕಲನ 'ಕೊಡಗಿನ ಕತೆಗಳು' (೧೯೫೩) ಕೂಡ ಇದೇ ರೀತಿ ಜನಪ್ರಿಯತೆ ಗಳಿಸಿ ಇನ್ನಷ್ಟು ಗೌರವಧನ ತಂದುಕೊಟ್ಟಿತು –– ತುಸು ಹೆದರಿಕೆಯೇ ಆಗುವಷ್ಟು. ('ಕೊಡಗಿನ ಸುಮಗಳು' ಎಂಬ ಒಂದೇ ಶೀರ್ಷಿಕೆಯಲ್ಲಿ ೨೦೦೬ರಲ್ಲೂ ಪ್ರಕಟವಾಗಿತ್ತು.) ಆದರೆ ಅಷ್ಟರಲ್ಲೇ ನಾನು ಸಣ್ಣಕತೆಗಳ ಬುರುಡೆ ನೆಲ ಬಿಟ್ಟು ಜನಪ್ರಿಯವಿಜ್ಞಾನ ಲೇಖನಗಳ ಅನಿಲಮಯ ಗಗನಕ್ಕೆ ನೆಗೆದಿದ್ದೆ.

೧೯೫೨ರ ಆರಂಭ. ನ್ಯಾಷನಲ್ ಕ್ಯಾಡೆಟ್ ಕೋರ್ (ಎನ್‌ಸಿಸಿ) ದಳವನ್ನು ಪ್ರಥಮ ಬಾರಿಗೆ ನಮ್ಮ ಕಾಲೇಜಿನಲ್ಲಿ ಆರಂಭಿಸಲು ಕೇಂದ್ರ ಸರ್ಕಾರದ ರಕ್ಷಣಾ ಇಲಾಖೆ ಮುಂಬಂದಿತು. ಇದನ್ನು ನಿರ್ವಹಿಸಲು ನಮ್ಮಲ್ಲಿಯ ಯುವ ಸುಟಿ ಸಮರ್ಥ ಉಪನ್ಯಾಸಕನೊಬ್ಬನನ್ನು ಆಯ್ದು ಸೇನಾಕೇಂದ್ರಕ್ಕೆ ಶಿಕ್ಷಣಾರ್ಥ ಕಳಿಸಿಕೊಡಬೇಕೆಂದು ಪ್ರಾಂಶುಪಾಲರನ್ನು ಕೋರಿತು. ನನ್ನಂಥ ಯುವ ಉಪನ್ಯಾಸಕರಿಂದ ಇವರು ಅರ್ಜಿಗಳನ್ನು ಆಹ್ವಾನಿಸಿದರು.
ಎನ್‌ಸಿಸಿ ಅಂದರೇನೆಂದು ನಮಗೆ ಯಾರಿಗೂ ಏನೂ ಗೊತ್ತಿರದ ದಿನಗಳವು. ಇನ್ನು ವೈಯಕ್ತಿಕವಾಗಿ ನಾನು ಎಲ್ಲ ಬಗೆಯ ಬಲಾತ್ಕಾರಗಳಿಗೂ ವಿರೋಧಿ. ಆದ್ದರಿಂದ ಈ ಮಿಲಿಟರಿ ಉಸಾಬರಿ ಅಪ್ಪಟ ಪುಳಿಚಾರಿ ಅಹಿಂಸಾವಾದಿಯಾಗಿದ್ದ ನನಗೆಂದೂ ಹೇಳಿದ್ದಲ್ಲ ಎಂದು ಅದರ ಬಗ್ಗೆ ಉದಾಸೀನನಾಗಿದ್ದೆ. ಆದರೆ ವಿಧಿ ಅನ್ನಿ, ಸನ್ನಿವೇಶಗಳ ಪಿತೂರಿ ಅನ್ನಿ, ಸಂದರ್ಭಗಳ ಆಕಸ್ಮಿಕತೆ ಎನ್ನಿ ಖುದ್ದು ನಾನೇ ಈ ಎನ್‌ಸಿಸಿ ಸೇರುವಂತಾದುದು,

ಮತ್ತು ಅದರಲ್ಲಿ ಮುಂದಿನ ೧೭ ವರ್ಷ (೧೯೫೨–೬೯) ಕ್ರಿಯಾಶೀಲವಾಗಿ ಕಾರ್ಯನಿರತನಾಗುವಂತಾದುದು ಎಂದೂ ಬಗೆಹರಿಯದ ವಿಸ್ಮಯ.
ಮದ್ರಾಸು ರೆಜಿಮೆಂಟಲ್ ಸೆಂಟರ್, ವೆಲ್ಲಿಂಗ್ಟನ್ (ನೀಲಗಿರಿ) ಇಲ್ಲಿ ನಾನು ೧೯೫೨ ಮೇ ೧ರಿಂದ ಜುಲೈ ೩೧ರ ತನಕ ಸೇನಾಶಿಕ್ಷಣ ಪಡೆಯಲು ನಿಯೋಜಿತನಾದೆ. ಮರಿಕೆಯ ತವರಿನಲ್ಲಿ ಮಡದಿಯನ್ನು ಬಿಟ್ಟು ದೂರದ ಮತ್ತು ಅರಿಯದ ನೆಲೆಗೆ ಮೂರು ತಿಂಗಳ ಮಿಲಿಟರಿ 'ಸೆರೆವಾಸ' ಅನುಭವಿಸಲು ಹೊರಟು ನಿಂತಾಗ ಅವಳಿಗೇನೆನ್ನಿಸಿತೋ ವಿಚಾರಿಸುವ ಗೋಜಿಗೆ ನಾನು ಹೋಗಲಿಲ್ಲ. ಆದರೆ ಅವಳ ಆ ತುಂಬು ನೋಟದ ಮಿಂಚು ಖಂಡಿತ ನನಗೆ ಶುಭ ಹಾರೈಸಿತೆಂಬುದು ಒಳಮನಸ್ಸಿಗೆ ಅರ್ಥವಾಯಿತು. ಇನ್ನು ರಂಗೇರುತ್ತಿದ್ದ ಅವಳ ದೇಹರೇಖೆಗಳು ಭವಿಷ್ಯದ ಶುಭ ಸೂಚಕಗಳಾಗಿದ್ದುವು. ಅದೇ ಸೆಪ್ಟೆಂಬರಿನಲ್ಲಿ ನಮ್ಮ ಚೊಚ್ಚಲ ಶಿಶು ಅಶೋಕ ಹುಟ್ಟಿದ.

Second Lieutenant (NCC) ಎಂಬ ಕಮಿಶನ್ನನ್ನು ಉನ್ನತ ಸ್ಥಾನದಲ್ಲಿ ಗಳಿಸಿ ಆಗಸ್ಟ್ ೧ರಂದು ಮರಳಿದೆ ಮತ್ತು ಕಾಲೇಜಿನಲ್ಲಿ ಎನ್‌ಸಿಸಿ ದಳವನ್ನು ಪ್ರಾರಂಭಿಸಿದೆ. ಈ ಭಾಗಕಾಲೀನ ಹೊಣೆಗಾರಿಕೆಗೆ ಎನ್‌ಸಿಸಿ ಕಛೇರಿ ಪ್ರತಿ ತಿಂಗಳು ನನಗೆ ರೂ ೧೭.೫೦ ಗೌರವಧನ ಪಾವತಿಸುತ್ತಿತ್ತು. ಅಲ್ಲದೇ ವಾರ್ಷಿಕ ಶಿಬಿರಗಳಿಗೆ ಹೋದಾಗ ಸಕಲ ಸೌಕರ್ಯಗಳ ಜೊತೆಗೆ ಹಿರಿ ಸಂಭಾವನೆಯೂ ದೊರೆಯುತ್ತಿತ್ತು.
ಮುಂದಿನ ೧೭ ವರ್ಷ (೧೯೫೨–೬೯) ಪರ್ಯಂತ ನಾನು ಎನ್‌ಸಿಸಿಯಲ್ಲಿದ್ದೆ. ಅಲ್ಲಿ ಗಳಿಸಿದ ಅನುಭವಗಳನ್ನು 'ಎನ್‌ಸಿಸಿ ದಿನಗಳು' (ಪ್ರಥಮಾವೃತ್ತಿ ೧೯೭೨, ದ್ವಿತೀಯಾವೃತ್ತಿ ೧೯೯೬, ಪುಟಗಳು ೪೭೬. ಲಭ್ಯವಿದೆ ಬೆಲೆ ರೂ ಐವತ್ತೈದು ವಿಳಾಸ ಸಹಿತ ಮನಿಯಾರ್ಡರ್ ಮಾಡಿದವರಿಗೆ ಉಚಿತ ಅಂಚೆ) ಪುಸ್ತಕದಲ್ಲಿ ಬರೆದಿದ್ದೇನೆ.

ಮಂಗಳೂರಿನಿಂದ ಮಡಿಕೇರಿಗೆ ಕಂಬಿ ಬದಲಾವಣೆ
ಅಧ್ಯಾಯ ಇಪ್ಪತ್ತೈದು

ಇಸವಿ ೧೯೫೨ ಕೊನೆಗೊಳ್ಳುವ ಮೊದಲೇ ಅಪ್ಪನಿಂದ (ಮಡಿಕೇರಿ) ಬುಲಾವ್, "ಮುಂದಿನ ಮೇ–ಜೂನ್ ಹೊತ್ತಿಗೆ ನಮ್ಮ ಮಡಿಕೇರಿ ಸರ್ಕಾರೀ ಪದವಿಪೂರ್ವ ಕಾಲೇಜ್ ಸ್ವಂತ ನೂತನ ಕಟ್ಟಡಕ್ಕೆ ಪ್ರಥಮ ದರ್ಜೆ ಪದವಿ ಕಾಲೇಜಾಗಿ ವರ್ಗಾವಣೆಗೊಳಲಿದೆ. ಜಾಹೀರಾತು ಪ್ರಕಟವಾದೊಡನೆ ಅರ್ಜಿ ಸಲ್ಲಿಸಲು ಸಿದ್ಧನಾಗಿರು."

ಅಂದಿನ ನಿಯಮಾವಳಿ ಪ್ರಕಾರ ನಾನು ೧೯೫೩ ಮಾರ್ಚ್ ೩೧ರಂದು ಸಂತ ಅಲೋಶಿಯಸ್ ಕಾಲೇಜಿಗೆ ಜೂನ್ ೩೦ಕ್ಕೆ ನನ್ನನ್ನು ಅವರಲ್ಲಿಯ ಸೇವೆಯಿಂದ ಬಿಡುಗಡೆ ಮಾಡಬೇಕೆಂಬ ಕೋರಿಕೆ ಸಲ್ಲಿಸಿದೆ, ಜೊತೆಗೆ ಎನ್‌ಸಿಸಿಗೂ ರಾಜಿನಾಮೆ ಪತ್ರ ಕಳಿಸಿದೆ. ಯಥಕಾಲ ಎರಡೂ ಮಂಜೂರಾದುವು. ಆದರೆ ಏಪ್ರಿಲ್ ಸಂದರೂ ಮಡಿಕೇರಿ ಕಾಲೇಜಿನಲ್ಲಿಯ ಹುದ್ದೆ ಕುರಿತ ಜಾಹಿರಾತು ಪ್ರಕಟವಾಗಲಿಲ್ಲ! ನಾನು ದುಡುಕಿದೆನೇ?

ಮೇಯಲ್ಲಿ ಅದೇನೋ ಹೊರಬಂತು. ಆದರೆ ಆ ಹಿರಿ ವೇತನಶ್ರೇಣಿ ನೋಡಿ (ಉಪನ್ಯಾಸಕರಿಗೆ ರೂ ೨೫೦–೭೦೦ + ರೂ ೬೫ ತುಟ್ಟಿಭತ್ಯೆ = ಆರಂಭದಲ್ಲೇ ರೂ ೩೧೫) ಬಾಯಿಯಲ್ಲಿ ನೀರೂಡಿತು, ಆದರೆ ಎದೆ ಧಸಕ್ಕೆಂದಿತು. ಅಂದು ದೇಶಾದ್ಯಂತ ಸಾಧಾರಣವಾಗಿ ಪ್ರಚಲಿತವಿದ್ದ ಶ್ರೇಣಿ ರೂ ೧೦೦–೨೫೦ ತುಟ್ಟಿಭತ್ಯೆ. ನನಗಾಗ ಕೇವಲ ೬ ವರ್ಷಗಳ ಬೋಧನಾನುಭವ, ಹೆಚ್ಚಿಗೆ ಎನ್‌ಸಿಸಿ ಶಿಕ್ಷಣವೂ ಸೇರಿತ್ತು. ನನಗಿಂತ ಎಷ್ಟೆಷ್ಟೋ ಅಧಿಕ ಅರ್ಹತೆ ಇರುವವರು ಈ ಹುದ್ದೆಗೆ ಅರ್ಜಿ ಸಲ್ಲಿಸುವುದು ಖರೆ. ಮುಂದೇನು ದಾರಿ? ಎಲ್ಲೋ ಹುದುಗಿರಬಹುದಾದ ನಿಧಿಯ ಆಸೆಯಿಂದ ಕೈಯಲ್ಲಿದ್ದ ಪುಡಿಗಾಸುಗಳನ್ನು ಎಸೆದಿದ್ದೆನೇ? ಹಾಗಾದರೆ "ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೆ ಜೀವನ?" (ಗೋಪಾಲಕೃಷ್ಣ ಅಡಿಗ)

ಮುಖ್ಯಮಂತ್ರಿ ಸಿ.ಎಂ.ಪೂಣಚ್ಚ ಮತ್ತು ಶಿಕ್ಷಣಮಂತ್ರಿ ಕೆ.ಮಲ್ಲಪ್ಪ ಇಬ್ಬರಿಗೂ ನನ್ನ ಬಗ್ಗೆ ಅಪಾರ ಭರವಸೆ: ನಮ್ಮ ಹುಡುಗ ಎಂಬ ಅಭಿಮಾನ. ಅದೇ ಜುಲೈ ತಿಂಗಳಿನಲ್ಲಿ ನಾನು ಹೊಸ ಹುರುಪಿನಿಂದ ನಮ್ಮೂರ ಹೊಸ ಹಸುರಿನಲ್ಲಿ ಹೊಸ ಹುದ್ದೆ ಹಿಡಿದು ಹೊಸಬನೇ ಆದೆ.
ವಾಸ ಬ್ರಾಹ್ಮಣಕೇರಿಯಲ್ಲಿಯ ನಮ್ಮ ಪಿತ್ರಾರ್ಜಿತ ಮನೆ. ಬಲು ಚಿಕ್ಕದು. ಸೌಕರ್ಯಗಳು ತೀರ ಕನಿಷ್ಠ. ಇನ್ನು ಜನ? ಅಪ್ಪ, ಅಮ್ಮ, ವಿದ್ಯಾರ್ಥಿಗಳಾಗಿದ್ದ ಒಬ್ಬಳು ತಂಗಿ ಮತ್ತು ಮೂರು ತಮ್ಮಂದಿರು, ಜೊತೆಗೆ ನಾವು ಮೂವರು. ಇನ್ನೂ ವರ್ಷ ತುಂಬದ ಅಶೋಕನಿಗೆ ಆಡಲು ಜಾಗವಿಲ್ಲ. ನನಗೆ ಅಭ್ಯಾಸಕ್ಕೆ ಏಕಾಂತವಿಲ್ಲ. ನನ್ನ ಹೆಂಡತಿ ಮಾಮೂಲಿನಂತೆ

ಮನೆಕೆಲಸದ ಪೂರ್ತಿ ಹೊಣೆ ಹೊರಬೇಕಾಯಿತು. ಮಡಿಕೇರಿಯ ಆ ಚಳಿ ಮಳೆ ಗಾಳಿಗಳಲ್ಲಿ ಬಾಳೊಂದು ನರಕವಾಸ ಎನ್ನಿಸಿತು.

ಮನೆಯಿಂದ ಕಾಲೇಜಿಗೆ ಅಂದಾಜು ೫ ಕಿಮೀ ದೂರ. ಸಾರಿಗೆ ವ್ಯವಸ್ಥೆ ಇಲ್ಲ, ಸೈಕಲ್ ಏರಲು ಮಡಿಕೇರಿಯ ಮಳೆ ಗಾಳಿ ಮತ್ತು ಕೊರಕಲು ಹಾದಿ ಪ್ರಬಲ ಪ್ರತಿಬಂಧಕಗಳು. ಮುಂಜಾನೆ ಬೇಗ ತಿಂಡಿ ತಿಂದು ಮಧ್ಯಾಹ್ನದ ಊಟ ಕಟ್ಟಿಹೊತ್ತುಕೊಂಡು ಹೋಗಿ ಸಂಜೆ ತಡವಾಗಿ ಮರಳದೇ ವಿಧಿ ಇರಲಿಲ್ಲ. ಕಾಲೇಜಿನಲ್ಲಿ ವಾರಕ್ಕೆ ೧೨ರಿಂದ ೧೪ ಗಂಟೆ ಪಾಠ, ಪಾಠೇತರ ಚಟುವಟಿಕೆಗಳು ಇತ್ಯಾದಿ. ಕಾಲೇಜಿಗೆ ಆದಷ್ಟು ಹತ್ತಿರ ಮನೆ ಹಿಡಿಯುವುದೊಂದೇ ಪರಿಹಾರವೆಂಬ ತೀರ್ಮಾನಕ್ಕೆ ನಾನು ಬಂದೆ. ಅಪ್ಪ ಅಮ್ಮನಿಗೆ ಇದು ಇಷ್ಟವೇ ಇರಲಿಲ್ಲ. ಬೆಳೆದ ಮಕ್ಕಳು ಒಂದೇ ಊರಿನಲ್ಲಿ ಅವಿಭಕ್ತ ಕುಟುಂಬದಿಂದ ಹೊರಗೆ ಹೋಗಿ ಪ್ರತ್ಯೇಕ ಬಿಡಾರಹೂಡುವುದು ಮಾತಾಪಿತೃ ದ್ರೋಹವೆಂಬುದು ಅಂದಿನ ಸಂಪ್ರದಾಯ. ಆರ್ಥಿಕವಾಗಿ ನಾವು ಚೆನ್ನಾಗಿದ್ದರೂ ನನಗೇಕೆ ಈ ಶಿಕ್ಷೆ? ಅಪ್ಪನ ಜೊತೆ ವಾದಮಾಡುವ ಸಲಿಗೆ ಚಿಕ್ಕಂದಿನಿಂದಲೇ ಬೆಳೆದಿರಲಿಲ್ಲ. ಅವರದೊಂದು ಬಗೆಯ ನಿರಂಕುಶ (ಪಾಳೇಗಾರಿಕೆ) ಧೋರಣೆ. ಅಮ್ಮನಿಗೇನೂ ಮಾತಿಗೆ ಅವಕಾಶವಿರಲಿಲ್ಲ. "ಅವರ ಮನಸ್ಸಿಗೆ ನೋವು ಮಾಡಿ ನಾವೇಕೆ ಬೇರೆ ಹೋಗಬೇಕು. ಇಲ್ಲಿಯೇ ಸುಧಾರಿಸೋಣ" ಇದು ಹೆಂಡತಿಯ ಕಿವಿಮಾತು. ಆದರೆ ಅದೇ ಅಪ್ಪನ ಅದೇ ನಿರಂಕುಶ ಧೋರಣೆಯ ಸಾಕಾರ ರೂಪವಾಗಿದ್ದ ನಾನು ಮಾತ್ರ ಜಗ್ಗಲಿಲ್ಲ, Like poles repels, **ಅಂದರೆ ಅಯಸ್ಕಾಂತದಲ್ಲಿ ಸದೃಶ ಧ್ರುವಗಳು ವಿಕರ್ಷಿಸುತ್ತವೆ, ನಿಜ.**
ಕಾಲೇಜ್ ಸಮೀಪ ಬಾಡಿಗೆ ಮನೆ ಹಿಡಿದು ಅಲ್ಲಿ ಹೊಸ ಬಿಡಾರ ಹೂಡಿಯೇಬಿಟ್ಟೆ. ಅಪ್ಪ ಮುನಿಸಿಕೊಂಡರು, ಅಮ್ಮ ಮಾತುಬಿಟ್ಟರು, ಸಂಬಂಧಿಕರು ವಿಚಿತ್ರದೃಷ್ಟಿ ಬೀರಿದರು. ಆದರೆ ಕ್ರಮೇಣ ಇವರೆಲ್ಲರೂ ಬದಲಾದ ಈ ಸನ್ನಿವೇಶಕ್ಕೆ ಹೊಂದಿಕೊಂಡರು. ಅಂತರಂಗ ನಿರ್ಮಲವಾಗಿದ್ದರೆ ಬಹಿರಂಗವೂ ಕ್ರಮೇಣ ನಿರ್ಮಲವಾಗುವುದಲ್ಲವೇ?

ನಮ್ಮ ಕಾಲೇಜ್ ಪ್ರಾಚೀನ ನಳಂದಾ ಪಾಟಲೀಪುತ್ರಗಳಂತೆ ಸರ್ವಾಂಗ ಸುಂದರ ವಿದ್ಯಾಕೇಂದ್ರವಾಗಬೇಕೆಂಬುದು ಸರ್ಕಾರದ ಆಶಯ. ಇದರ ನೆಲೆ ಊರ ಹೊರಗಿನ ಎತ್ತರದ ಗುಡ್ಡದ ಮೇಲೆ. ಸುತ್ತಲಿನ ಹಸುರೇ ಘನಿಸಿ ಈ ಭವ್ಯ ಸುಂದರ ಸೌಧ ಮೈದಳೆಯಿತೋ ಎಂಬಂತಿತ್ತು. ಕೆ.ಪಿ.ಅಚ್ಯುತನ್ ಪಿಳ್ಳೆ ಇಲ್ಲಿಯ ಪ್ರಾಂಶುಪಾಲ. ಇವರು ಇಂಗ್ಲಿಷ್ ಪ್ರಾಧ್ಯಾಪಕರು, ವಿದ್ವಾಂಸ, ಆದರ್ಶದೀಪ್ತರು ಮತ್ತು ಎಲ್ಲರೊಡನೆ ಸಮಾನಗೌರವದಿಂದ ವರ್ತಿಸುವ ಮಹಾನುಭಾವ. ಇವರು ಹೊತ್ತುತಂದಿದ್ದ ಅನೇಕ ಕನಸುಗಳ ಪೈಕಿ ಕಾಲೇಜಿಗೊಂದು ವಿದ್ಯಾರ್ಥಿ ಸಹಕಾರ ಸಂಘದ ಸ್ಥಾಪನೆ, ಆ ಹಿಂದೆಯೇ ಆರಂಭಿಸಿದ್ದ ವಿದ್ಯಾರ್ಥಿ ಸಮಾಜಸೇವಾ ಘಟಕದ ವಿಸ್ತರಣೆ, ಸ್ಕೌಟ್ ಮತ್ತು ಎನ್‌ಸಿಸಿ ದಳಗಳ ಪ್ರವರ್ತನೆ ಇತ್ಯಾದಿ. ಗ್ರಂಥಾಲಯ ಅದ್ಭುತವಾಗಿತ್ತು. ಪಾಠಪ್ರವಚನಗಳು ಅತ್ಯಂತ ದಕ್ಷತೆಯಿಂದ ನಡೆಯುತ್ತಿದ್ದುವು. ಇಂಥವೇ ಆದರ್ಶಗಳಿಂದ ಪ್ರೇರಿತನಾಗಿದ್ದ ನನಗೆ ಇದಕ್ಕಿಂತ ಉತ್ಕೃಷ್ಟ ಪರಿಸರ ಲಭಿಸೀತೇ? "ಇಲ್ಲಿಲ್ಲದುದುಳಿದುದೇ? ಜೇನು ಸುರಿವ ಹಾಲು ಹರಿವ ದಿವಂ ಭೂಮಿಗಿಳಿದುದೇ?" (ಮಂಜೇಶ್ವರ).

ನನ್ನನ್ನು ಕಾಲೇಜಿನ ಸಮಾಜ ಸೇವಾಘಟಕದ ಗೌರವ ಉಪಾಧ್ಯಕ್ಷನಾಗಿ ಪ್ರಾಂಶುಪಾಲರು (ಇವರೇ ಪದನಿಮಿತ್ತ ಅಧ್ಯಕ್ಷರು) ನಾಮಕರಿಸಿದರು. ಆಸಕ್ತ ಸ್ವಯಂಸೇವಕರ ದಂಡು ಕಟ್ಟಿ ಅವರಿಂದಲೇ ಸಲಹೆಗಳನ್ನು ಆಹ್ವಾನಿಸಿದೆ. ಅಂದು ಕೊಡಗು ಭಾರತ ಒಕ್ಕೂಟದಲ್ಲೊಂದು ಪಾರ್ಟ್ ಸಿ ರಾಜ್ಯವಾಗಿತ್ತು. ಚುನಾವಣೆ ಮೂಲಕ ತನ್ನದೇ ಪ್ರಜಾಪ್ರಭುತ್ವಾತ್ಮಕ ಸರ್ಕಾರವನ್ನು ಕೂಡ ಹೊಂದಿತ್ತು. ಚುನಾಯಿತ ಪ್ರಜಾಪ್ರತಿನಿಧಿಗಳೂ ಮಂತ್ರಿಗಳೂ ನಮ್ಮ ಪುಟ್ಟ ನಾಡನ್ನು ರಾಮರಾಜ್ಯವಾಗಿ ರೂಪಿಸಲು ಕಂಕಣಬದ್ಧರಾಗಿದ್ದರು. ಕಾಲೇಜ್ ಒಂದು ನೂತನ ಗುರುಕುಲ ವಿದ್ಯಾಲಯವಾಗಿ ಅರಳಬೇಕೆಂಬುದು ಇವರೆಲ್ಲರ ಪ್ರಾಮಾಣಿಕ ಆಶಯ. ಈ ದಿಶೆಯಲ್ಲಿ ನಾವು ಕೇಳಿದ ಸೌಕರ್ಯ ಸವಲತ್ತುಗಳನ್ನು ಮಂಜೂರಿಸಲು ಸಿದ್ಧರಾಗಿದ್ದರು.

ನಮ್ಮ ಸೇವಾಘಟಕದ ಪ್ರಥಮ ಯೋಜನೆ ಮಡಿಕೇರಿಯ ಹೊರ ಅಂಚಿನಲ್ಲಿ ತೀರ ಅಲಕ್ಷಿತವಾಗಿ ಪಾಳುಗರೆಯುತ್ತಿದ್ದ ಶಿಕಾರಿ ಉಕ್ಕಡದ ಸಮಗ್ರ ಅಭಿವೃದ್ಧಿ. ಅಲ್ಲಿಯ ನಿವಾಸಿಗಳೆಲ್ಲರೂ ದಲಿತರು (ಅಂದಿನ ಪರಿಭಾಷೆಯಲ್ಲಿ ಹರಿಜನರು). ಗಾಂಧೀಜಿ ಕೊಡಗಿಗೆ ಮೊದಲ ಸಲ ಭೇಟಿ ನೀಡಿದಾಗ (೧೯೩೦ರ ದಶಕ) ತಂಗಿದ್ದ ಪವಿತ್ರ ನೆಲವಿದು. ಆದರೂ ಸದ್ಯದ ಪರಿಸ್ಥಿತಿ ಮಾತ್ರ ಅತ್ಯಂತ ಶೋಚನೀಯ. ಈ ಉಕ್ಕಡವನ್ನು ನಮ್ಮ ಘಟಕ ದತ್ತು ತೆಗೆದುಕೊಂಡು ಇಲ್ಲಿಯ ಮಕ್ಕಳಿಗೆ ಶಿಕ್ಷಣಸೌಕರ್ಯ, ಶುಚಿತ್ವದ ಮಹತ್ತ್ವ, ಆರೋಗ್ಯ ರಕ್ಷಣೆ ಮುಂತಾದ ವಿಷಯಗಳಲ್ಲಿ ತರಬೇತಿ ನೀಡಲು ನಿರ್ಧರಿಸಿದೆವು. ವಯಸ್ಕ ನಿರಕ್ಷರಿಗಳಿಗೆ ಅಕ್ಷರಬೋಧನೆಯೂ ನಮ್ಮ ಯೋಜನೆಯ ಒಂದು ಅಂಗವಾಯಿತು. ಆ

ಸುಮಾರು ೯ ತಿಂಗಳ ಪರ್ಯಂತ ಭಾನುವಾರದ ಹೊರತು ಉಳಿದೆಲ್ಲ ದಿನಗಳಂದು ನಮ್ಮ ಸ್ವಯಂಸೇವಕರು (ಸರಾಸರಿಯಲ್ಲಿ ೧೦ ಮಂದಿ) ಸಂಜೆವೇಳೆ ಉಕ್ಕಡಕ್ಕೆ ನಡೆದುಕೊಂಡು ಹೋಗಿ ಸುಮಾರು ೨ ತಾಸು ಪ್ರತ್ಯಕ್ಷ ಕಾರ್ಯನಿರತರಾಗುತ್ತಿದ್ದರು. ಕ್ರಮೇಣ ವಯಸ್ಕರಲ್ಲಿ ಅಕ್ಷರಜ್ಞಾನ ವರ್ಧಿಸಿತು, ಸಾಮಾಜಿಕ ಶುಚಿತ್ವಪ್ರಜ್ಞೆ ಜಾಗೃತವಾಯಿತು, ಮಕ್ಕಳ ಸಾಮೂಹಿಕ ಚಟುವಟಿಕೆಗಳು ಹೊಸ ಹುಮ್ಮಸ್ಸಿನಿಂದ ನಡೆಯತೊಡಗಿದುವು. ಅಲ್ಲಿಯ ಜೀವಸ್ಪಂದನದಿಂದ ಉತ್ತೇಜಿತರಾದ ನಾವು ನಮ್ಮ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿದೆವು. ಅವರ ಗುಡಿಸಲುಗಳಿಗೆ ಹಂಚು ಹೊದೆಸಲು ಮತ್ತು ವಿದ್ಯುತ್ಸಂಪರ್ಕವೀಯಲು ಸರ್ಕಾರಕ್ಕೆ ಮನವಿ ಸಲ್ಲಿಸಿದೆವು. ಕೂಡಲೇ ಅದು ಕಾರ್ಯಗತವಾಯಿತು.

ನನಗಂತೂ ಒಂದು ಸಂಗತಿ ಸ್ಪಷ್ಟವಾಯಿತು: ಬಡವರಲ್ಲಿರುವ ಔದಾರ್ಯ ಮತ್ತು ಕೃತಜ್ಞತೆ ಬಲು ದೊಡ್ಡ ಬಂಡವಾಳ, ಇದನ್ನು ಸಮರ್ಪಕವಾಗಿ ಸಂಘಟಿಸಿ ಸ್ವಾರ್ಥ ತೊರೆದು ಕರ್ತವ್ಯ ನಿರ್ವಹಿಸಿದ್ದಾದರೆ ಯಾವ ಮಹಾಸಾಧನೆಯೂ ನಮ್ಮ ಅಳವಿಗೆ ಮೀರಿದ್ದಲ್ಲ. ರಾಮಾಯಣದಲ್ಲಿಯ ಕಪಿಗಡಣ ಸಾಗರಕ್ಕೆ ಸೇತುವೆ ಕಟ್ಟಲು ಸಾಧ್ಯವಾದುದರ ಹಿನ್ನೆಲೆಯ ತತ್ತ್ವ ಇದೇ ಅಲ್ಲವೇ? ವರ್ಷಾಂತ್ಯದಲ್ಲಿ ಅಲ್ಲೊಂದು ದೀಕ್ಷಾಪ್ರದಾನ ಸಮಾರಂಭ ಏರ್ಪಡಿಸಿ ಮಂತ್ರಿ ಮಹೋದಯರನ್ನು ಆಹ್ವಾನಿಸಿದೆವು. ನಮ್ಮ ವಿದಾರ್ಥಿ ಸ್ವಯಂಸೇವಕರ ಮಾರ್ಗದರ್ಶನದಲ್ಲಿ ಸ್ಥಳೀಯ ಚೇತನಗಳು ಅದನ್ನು ನಿರ್ವಹಿಸಿದ ಪರಿ ಅನ್ಯಾದೃಶವಾಗಿತ್ತು. ಸರ್ಕಾರ ಈ ಉಕ್ಕಡದ, ಅಂತೆಯೇ ಇಂಥ ಇತರ ಉಕ್ಕಡಗಳ, ಸಮಗ್ರ ಅಬಿವೃದ್ಧಿಗೆಂದೇ ಅಧಿಕೃತ ಇಲಾಖೆಯೊಂದನ್ನು ಸ್ಥಾಪಿಸಿ ನಮ್ಮ ಚಟುವಟಿಕೆಗಳಿಗೆ ಸಾಂಸ್ಥಿಕ ರೂಪವನ್ನು ಕೊಟ್ಟಿತು.

ಅದೇ ವರ್ಷ ನಮ್ಮ ಸಮಾಜಸೇವಾಘಟಕ ಇನ್ನೂ ಒಂದು ರಚನಾತ್ಮಕ ಕೆಲಸ ಕೈಗೆತ್ತಿಕೊಂಡಿತು. ಅಂದಿನ ದಿನಗಳ ಮಡಿಕೇರಿಯಲ್ಲಿ ಬಸ್ ನಿಲ್ದಾಣದಿಂದ ಚೌಕಿವರೆಗಿನ ನೇರ ಮತ್ತು ಎತ್ತರ ಮಾರ್ಗದ ಇಕ್ಕೆಲಗಳಗಳಲ್ಲಿಯೂ ಗೊಸರು ಗದ್ದೆ ಎಡ್ಡತಿಡ್ಡ ಚಾಚಿಕೊಂಡಿತ್ತು. ಬಲಗಡೆಯ ಗೊಸರಿನಲ್ಲಿ ಕ್ರಮೇಣ ಗೌಸ್ ಅಕ್ಕಿ ಮಿಲ್ ಮತ್ತು ಕಾವೇರಿ ಸಿನೆಮಾ ಥಿಯೇಟರ್ ತಲೆಯೆತ್ತಿದುವು. ಎಡಗಡೆಯದರಲ್ಲಾದರೋ ಹಂದಿ, ಕತ್ತೆ, ಎಮ್ಮೆ, ನಾಯಿಗಳು ಯಥೇಚ್ಛವಾಗಿ ವಿಹರಿಸುತ್ತಿದ್ದುವು! ಇದರ ಕಟ್ಟ ಕೊನೆಯಲ್ಲಿ ಕೋಹಿನೂರ್ ಡೇರೆ ಸಿನೆಮ, ಗದಗ ಕಡೆಯಿಂದ ಬರುತ್ತಿದ್ದ ನಾಟಕ ಕಂಪನಿಗಳು, ಸರ್ಕಸ್ ತಂಡಗಳೆಲ್ಲ ಬಂದು ಬೇಸಗೆಯ ದಿನಗಳಂದು ಜಾಂಡಾ ಹೊಡೆಯುತ್ತಿದುವು. ಈ ಗೊಸರು ನೆಲಕ್ಕೆ ಕೋಹಿನೂರ್ ಮೈದಾನವೆಂಬ ಹೆಸರೇ ಶಾಶ್ವತವಾಯಿತು.

ನಿಲ್ದಾಣದಿಂದ ಕೋಹಿನೂರ್ ಡೇರೆಗೆ ಹೋಗಬಯಸುವವರು ಚೌಕಿಗಾಗಿ ಸುತ್ತಿ ಬಳಸಿ ನಡೆಯಬೇಕಾಗಿತ್ತು. ಇಲ್ಲೊಂದು ಒಳದಾರಿ ಕಡಿದರೆ ಜನರಿಗೆ ತುಂಬ ಅನುಕೂಲವಾಗುತ್ತದೆ ಎಂಬ ಭಾವನೆ ನಮ್ಮಲ್ಲಿ ಹಲವರಿಗೆ ಬಂತು. ಸರಿ, ಸರ್ಕಾರೀ ಎಂಜಿನಿಯರುಗಳ ಮಾರ್ಗದರ್ಶನದಲ್ಲಿ ನಮ್ಮ ಸ್ವಯಂಸೇವಕಪಡೆ ಶ್ರಮದಾನಗೈದು ಈ ಕೆಲಸವನ್ನು ಕೆಲವೇ ತಿಂಗಳುಗಳಲ್ಲಿ ಪೂರೈಸಿತು. ಈಗಿನ ಹೊಸ ಬಸ್ ನಿಲ್ದಾಣ, ಮಕ್ಕಳ ಕಲ್ಯಾಣ ಮಂದಿರ ಮುಂತಾದವು ಇದೇ ಹಾದಿಯ ನೇರ ಇವೆ.

ಇವೆಲ್ಲ ಪಾಠೇತರ ಚಟುವಟಿಕೆಗಳು. ಇನ್ನು ಪಾಠ, ಪ್ರವಚನ, ಉಪನ್ಯಾಸ, ಚರ್ಚೆ, ಪರೀಕ್ಷೆ ಮುಂತಾದ ಶೈಕ್ಷಣಿಕ ವಿಚಾರಗಳಲ್ಲಿ ನಮ್ಮ ಕಾಲೇಜು ಹೊಸ ಪರಂಪರೆಯನ್ನೇ ಸ್ಥಾಪಿಸಿತ್ತು. ಮುಖ್ಯವಾಗಿ ಕಡಿಮೆ ಅಂಕಗಳು ಪಡೆದಿದ್ದ ವಿದ್ಯಾರ್ಥಿಗಳ ಮೇಲ್ಮೆಗಾಗಿ ವಿಶೇಷ ಪಾಠಗಳು, ಟ್ಯೂಟೋರಿಯಲ್ ತರಗತಿಗಳು, ನಿಯತಕಾಲಿಕ ಪರೀಕ್ಷೆಗಳು ಮಂತಾದವನ್ನು ಮಾಡುತ್ತ ಅವರನ್ನೆಲ್ಲ ಮೇಲಕ್ಕೆತ್ತಲು ಪ್ರಯತ್ನಿಸುತ್ತಿದ್ದೆವು. ಇವೆಲ್ಲವುಗಳ ನೇತಾರರು ನಮ್ಮ ಅಚ್ಯುತನ್ ಪಿಳ್ಳೆಯವರು. ವಿದ್ಯಾರ್ಥಿಗಳಿಗೆ, ಅಂತೆಯೇ ನನ್ನಂಥ ಯುವ ಉಪನ್ಯಾಸಕರಿಗೆ, ಇವರೊಬ್ಬ ಆದರ್ಶ ಆಚಾರ್ಯ. ನಿಜ, ಪ್ರಾಚೀನ ಗುರುಕುಲಾಶ್ರಮಗಳಲ್ಲಿಯ ಅಂತಸ್ಸತ್ತ್ವ ಇಲ್ಲಿ ಮೈವಡೆದಿದೆಯೋ ಎಂಬ ಮಧುರ ಪರಿವೇಷ ನಮ್ಮ ಕಾಲೇಜಿನ ಸುತ್ತ ಮಿನುಗುತ್ತಿದ್ದ ದಿನಗಳವು:

ವಿಶ್ವಗರ್ಭಿತ ಸತ್ಯ ಕಂಡವನು ನೈಜ ಋಷಿ
ಋಷಿ ಕಂಡ ಸತ್ಯಕ್ಕೆ ವ್ಯಾಖ್ಯಾನ ಬರೆವಾತ ಆಚಾರ್ಯ
ಆಚಾರ್ಯಸೂಕ್ತಿಗಳ ಬೋಧಕನು ಶ್ರೇಷ್ಠ ಗುರು
ಗುರುಬೋಧನೆಗೆ ಪಾತ್ರನಾದವನು ಪ್ರಿಯ ಶಿಷ್ಯ
ಶಿಷ್ಯ ಋಷಿಯಾಗುವುದೆ ಋಜು ವಿದ್ಯೆ

ನಮ್ಮ ಕಾಲೇಜ್‌ನ ನೆಲೆ ಊರ ಹೊರಗಿನ ಒಂದು ಎತ್ತರದ ದಿಬ್ಬವೆಂದು ಹಿಂದೆ ಹೇಳಿದ್ದೇನೆ. ಅದೇ ಆವರಣದಲ್ಲಿದ್ದ ಹಾಸ್ಟೆಲ್‌ನಿವಾಸಿಗಳ ಹೊರತಾಗಿ ಉಳಿದೆಲ್ಲ ವಿದ್ಯಾರ್ಥಿಗಳೂ ದೂರದ ಪಟ್ಟಣದಿಂದ ನಡೆದೇ ಅಲ್ಲಿಗೆ ಬರಬೇಕಾಗಿತ್ತು. ಮಡಿಕೇರಿಯ ಮಳೆ, ಗಾಳಿ ಮತ್ತು ಚಳಿ ಇವನ್ನು ಅನುಭವಿಸಿದವರಿಗೇ ಗೊತ್ತು. ಇಂಥಲ್ಲಿ ವಿದ್ಯಾರ್ಥಿಗಳ ಆವಶ್ಯಕತೆಗಳನ್ನು – ಪಠ್ಯಪುಸ್ತಕಗಳು, ಸಾದಿಲ್ವಾರು, ಉಪಾಹಾರಮಂದಿರ ಇತ್ಯಾದಿ – ಪೂರೈಸಲು ಒಂದು ಸಹಕಾರ ಸಂಘವನ್ನೂ ಕ್ಯಾಂಟೀನನ್ನೂ ಪ್ರಾರಂಭಿಸಲು ಪ್ರಾಂಶುಪಾಲರು ನಿರ್ಧರಿಸಿದರು. ಈ ಸಂಘ ಹೇಗೆ ನನ್ನ ಗೌರವ ಕಾರ್ಯದರ್ಶಿತ್ವದಲ್ಲಿ ೧೯೫೪ರ ತರುಣದಲ್ಲಿ ಸ್ಥಾಪನೆಗೊಂಡು ಕ್ರಮೇಣ ಹೆಮ್ಮರವಾಗಿ ಬೆಳೆದು ಮಾದರಿ ಸಂಸ್ಥೆಯಾಯಿತು ಎಂದು ತುಸು ವಿಸ್ತರಿಸುತ್ತೇನೆ.

ಸಹಕಾರದಲ್ಲಿ ಒಂದು ಪ್ರಯೋಗ
ಅಧ್ಯಾಯ ಇಪ್ಪತ್ತಾರು

ಮಡಿಕೇರಿಯ ಸರಕಾರೀ ಕಾಲೇಜು ಅಂದಿನ ಕೊಡಗು ಸರ್ಕಾರದ ವತಿಯಿಂದ ೧೯೪೯ರಲ್ಲಿ ಆರಂಭವಾಯಿತು. ಆಗ ಕೊಡಗು ಪ್ರಾಂತ ಕೇಂದ್ರ ಸರ್ಕಾರದ ಆಡಳಿತೆಗೆ ಒಳಪಟ್ಟಿದ್ದು ಸಿ ವಿಭಾಗದ ರಾಜ್ಯವಾಗಿತ್ತು. ಇದರ ಮುಖ್ಯ ಆಡಳಿತಾಧಿಕಾರಿ ಚೀಫ್ ಕಮಿಷನರ್ ಜನರ ಬಹು ವರ್ಷಗಳ ಬೇಡಿಕೆಗಳನ್ನು ಸಹಾನುಭೂತಿಯಿಂದ ಗ್ರಹಿಸಿ ಕಾಲೇಜಿನ ಸ್ಥಾಪನೆಯಲ್ಲಿ ಅಗ್ರಪಾತ್ರ ವಹಿಸಿದ್ದರು. ಜನರ ಸಹಕಾರ ಮಾತ್ತು ಸರ್ಕಾರದ ಬೆಂಬಲ ಎರಡೂ ವಿಪುಲವಾಗಿ ದೊರೆತ ಈ ಕಾಲೇಜು 'ಶೀಲಂ ಸರ್ವಸ್ಯ ಭೂಷಣಂ' ಎನ್ನುವ ಉನ್ನತಾದರ್ಶ ಧರಿಸಿ ಮೈದಳೆಯಿತು. ಇದರ ಪ್ರಧಾನ ನಿರ್ಮಾಣ ಘಟಕಗಳಾದ ಅಧ್ಯಾಪಕರನ್ನು ಆಯುವಲ್ಲಿ ಚೀಫ್ ಕಮಿಷನರ್ ತುಂಬ ಮುತುವರ್ಜಿ ವಹಿಸಿದ್ದರು. ವಿದ್ವತ್ತು, ಸಂವಹನ ಸಾಮರ್ಥ್ಯ ಹಾಗೂ ಶೀಲ ಹಿರಿಯ ಮಟ್ಟದಲ್ಲಿದ್ದ ಅನುಭವೀ ವ್ಯಕ್ತಿಗಳಿಗೆ ಆಕರ್ಷಕ ಆರ್ಥಿಕ ಸವಲತ್ತುಗಳನ್ನು ನೀಡಿ ಇಲ್ಲಿ ನೇಮಿಸಲಾಗಿತ್ತು. ಇವರಿಗೆ ಪೂರಕವಾಗಿ ಗ್ರಂಥ ಭಂಡಾರ, ಪ್ರಯೋಗ ಮಂದಿರ, ಆಟೋಟಗಳ ಸೌಲಭ್ಯ ಮೊದಲಾದವು ಇಲ್ಲಿದ್ದುವು. ಕೊಡಗಿನ ಬೇರೆ ಬೇರೆ ಮೂಲೆಗಳಿಂದ ಮತ್ತು ನೆರೆಯ ದಕ್ಷಿಣ ಕನ್ನಡ ಜಿಲ್ಲೆಯ ಗಡಿ ಭಾಗಗಳಿಂದ ಅಧಿಕ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಈ ಕಾಲೇಜಿಗೆ ಬಂದು ಸೇರಿದರು. ಇವರೆಲ್ಲರೂ ಸಾಧಾರಣವಾಗಿ ಒಳ್ಳೆಯ ಆರ್ಥಿಕ ಸ್ಥಿತಿ ಸಂಪನ್ನರು, ಶಿಸ್ತುಗಾರರು. ಹೀಗೆ ೧೯೪೯ರ ಆ ಮಹಾ ವರ್ಷರ್ತುವಿನ ಮುಸಲಧಾರೆಗಳ ತೀವ್ರ ಪ್ರಹಾರ ಪ್ರಾರಂಭವಾದಾಗ ಮಡಿಕೇರಿಯ ಸರ್ಕಾರೀ ಇಂಟರ್ಮೀಡಿಯೇಟ್ ಕಾಲೇಜ್ ಮಹಾಬಾಜಣೆ (Big bang) ಸಮೇತ ಕಾರ್ಯಪ್ರವೃತ್ತವಾಯಿತು.

ಹೊಸ ಕಾಲೇಜು ಮಡಿಕೇರಿಯ ಮಾರುಕಟ್ಟೆಯ ಮೇಲೆ ಹೊಸ ಬೇಡಿಕೆಗಳನ್ನು ಹೇರಿತು: ಮುಖ್ಯವಾಗಿ ವಿದ್ಯಾರ್ಥಿಗಳ ಪಠ್ಯಪುಸ್ತಕಗಳು, ಸಾದಿಲ್ವಾರು ಮುಂತಾದವು ಮತ್ತು ಕಾಲೇಜ್ ಗ್ರಂಥ ಭಂಡಾರದ ಆವಶ್ಯಕತೆಗಳು. ಆ ತನಕ ಶಾಲೆಗಳಿಗೆ ಮಾತ್ರ ಪಠ್ಯ ಪುಸ್ತಕಗಳನ್ನು (ಇವುಗಳ ಬಿಡಿ ಬೆಲೆಗಳು ಹೇಗೂ ನಿಯಮಿತವಾದವು ಮತ್ತು ಬಲು ಅಗ್ಗದವು) ಪೂರೈಸುತ್ತಿದ್ದ ಒಂದೆರಡು ಅಂಗಡಿಗಳು ಈ ಹೊಸ ನೆಲದಲ್ಲಿ ಅತಿ ಲಾಭದ ಸದವಕಾಶಗಳನ್ನು ಸಹಜವಾಗಿ ಕಂಡುವು. ಕಾಲೇಜ್ ವಿದ್ಯಾರ್ಥಿಗಳ ಪಠ್ಯ ಮತ್ತು ಸಹಾಯಕ ಪುಸ್ತಕಗಳನ್ನು ಮುದ್ರಿತ ಬೆಲೆಗಳಿಗಿಂತ ಜಾಸ್ತಿ ಆಗಿಯೇ ಮಾರುವುದು ವಾಡಿಕೆ ಆಯಿತು.

"ಪುಸ್ತಕಗಳ ಮೇಲೆ ಮುದ್ರಿತವಾಗಿರುವುದು ಪ್ರಕಾಶಕರಿಗೆ ನಾವು ತೆರಬೇಕಾದ ಬೆಲೆ, ಇನ್ನು ನೋಡಿ, ಮದರಾಸು ಬೆಂಗಳೂರು ಮೊದಲಾದ ಕಡೆಗಳಿಂದ ಭಾಂಗಿಗಳನ್ನು ತರಿಸಲು ನಮಗೆ ಎಷ್ಟು ವೆಚ್ಚ ಶ್ರಮ ವ್ಯಯ ಆಗುವುದಿಲ್ಲ? ಮಾರಾಟವಾಗದ ಪುಸ್ತಕಗಳು ನಮಗೆ ಪೂರ್ಣ ನಷ್ಟದ ಬಾಬೇ" ಎಂಬ ಸೋಗಿನ ನಿಜ ಸಮಜಾಯಿಷಿಯನ್ನು ಅಂಗಡಿ ಮಾಲೀಕರು ಒಪ್ಪಿಸಿದಾಗ ೨ ರೂಪಾಯಿ ಬೆಲೆಯ ಪುಸ್ತಕಕ್ಕೆ ೨.೨೫ ರೂಪಾಯಿ ಪಾವತಿಸುವುದು ಖಂಡಿತ ಹೆಚ್ಚಲ್ಲ. ಬದಲು, ನಮಗೇ ಲಾಭದಾಯಕ ಎಂದು ಯಾವ ಗಣಿತ ಧೀಮಂತನಿಗೆ ಅನ್ನಿಸಿದ್ದರೂ ಅಚ್ಚರಿ ಏನೂ ಇರಲಿಲ್ಲ. ಇತರ ವಿಶೇಷ ಆವಶ್ಯಕತೆಗಳಿಗೆ – ಪ್ರಯೋಗ ಮಂದಿರದ ದಾಖಲೆ ಪುಸ್ತಕಗಳು, ವಿಶೇಷ ಡ್ರಾಯಿಂಗ್ ಹತ್ಯಾರುಗಳು, ಉಪಕರಣ ಪೆಟ್ಟಿಗೆಗಳು, ಇತ್ಯಾದಿ – ಅಂಗಡಿಕಾರರು ವಿಧಿಸಿದ ಬೆಲೆಗಳನ್ನು ಮರುಸೊಲ್ಲಿಲ್ಲದೆ ವಿದ್ಯಾರ್ಥಿಗಳು ತೆರುವುದು ಮಾಮೂಲಾಯಿತು. ನೆರೆಯ ಹಿರಿ ಪಟ್ಟಣಗಳಾದ ಮೈಸೂರು ಮಂಗಳೂರುಗಳ ಪೈಪೋಟಿ ಮಾರುಕಟ್ಟೆಗಳಲ್ಲಿ ಸಲ್ಲುತ್ತಿದ್ದ ಬೆಲೆಗಳಿಗೂ ಮಡಿಕೇರಿಯ ಏಕಸ್ವಾಮ್ಯ ಮಾರುಕಟ್ಟೆಯಲ್ಲಿ ಗಿರಾಕಿಗಳನ್ನು ಕೊಲ್ಲುತ್ತಿದ್ದ ಬೆಲೆಗಳಿಗೂ ನಡುವೆ ಯಾವುದೇ ವೈಜ್ಞಾನಿಕ ಹೊಂದಾಣಿಕೆ ಇರಲಿಲ್ಲ. ಅತಿ ಲಾಭಕೋರತನದ

ದುರಾಸೆಯಲ್ಲಿ ಮುಳುಗಿರುವ ಮನಸ್ಸಿನ ಅಪರಿಮೇಯತೆಯನ್ನು ಯಾವ ಶಾಸ್ತ್ರವೂ ಎಂದೂ ಯಾವುದೇ ಚೌಕಟ್ಟಿನೊಳಗೂ ಹಿಡಿದಿಟ್ಟು ಅರ್ಥವಿಸುವುದು ಅಸಾಧ್ಯ.

ಕಾಲೇಜಿಗೆ ನಾಲ್ಕು ವರ್ಷಗಳಾಗುವಾಗ, ೧೯೫೩, ಮಳೆಗಾಲದ ಆರಂಭದಲ್ಲಿ ಅದನ್ನು ಪ್ರಥಮ ದರ್ಜೆಯ ಕಾಲೇಜಾಗಿ ಬಡ್ತಿ ನೀಡಿ ಊರ ಹೊರಗಿನ ಗಾಳೀಬೀಡಿನ ಹೊಸ ಕಟ್ಟಡಗಳಿಗೆ ಜರೂರು ವರ್ಗ ಮಾಡಲಾಯಿತು. ತೆಂಕಣ ಗಾಳಿ ಮಡಿಕೇರಿಯ ಬೋಗುಣಿಗೆ ಮಳೆ ಹೊತ್ತು ಸುಯ್ಯಲಿಡುತ್ತ ಭರದಿಂದ ನುಗ್ಗುವ ಹೆಬ್ಬಾಗಿಲೇ ಗಾಳಿಬೀಡು. ಆ ಗುಡ್ಡದ ಕೊಡಿಯ ಮೇಲಿನ ಕಾವಲುಗಾರನಾಗಿ ನಿಂತಿತ್ತು ಕಾಲೇಜು. ಇನ್ನು ಅಲ್ಲಿ ಮಳೆರಾಯನ ಪ್ರತಾಪ ಲೀಲೆ ಹೇಳಬೇಕೇ? "ಚೆಲ್ಲಿದರನಿತೂ ತೀರದ ನೀರಿನ ಜಡದೇಹದ ಕರ್ಮುಗಿಲೇನು?. . . . . ಮರಗಳ ಕೀಳುತ ಬಂಡೆಯ ಹೋಳುತ ಜಗಜಟ್ಟಿಯ ತೆರನಾಡುವುದು" (ಕಡೆಂಗೋಡ್ಲು). ಮಡಿಕೇರಿಯ ನಾಗರಿಕ ನೆಲೆಗಳಿಂದ ಕಾಲೇಜಿನ ದೂರ ಸುಮಾರು ಎರಡೂವರೆ ಮೈಲು. ಇಷ್ಟು ದೂರವೂ ಇರಿಚಲಿನ ಚುಚ್ಚು ಗೋಡೆಯನ್ನು ಒಡೆದುಕೊಂಡೇ ಕಾಲೇಜಿನ ಸಮಸ್ತರೂ ನಡೆಯಬೇಕಿತ್ತು. ಯಾವ ಸೂರ್ಯ ಛಾಪಿನ ಕೊಡೆಯೂ ಆ ಥಂಡಿಯನ್ನು ಹಿಂಗಿಸುತ್ತಿರಲಿಲ್ಲ. ಯಾವ ಜಿಂಕೆ ಮುದ್ರೆಯ ಛತ್ರಿಗೂ ಆ ಮಳೆ ಓಟ ಸೋಲುತ್ತಿರಲಿಲ್ಲ. ಇನ್ನು ಬಾತುಬೆನ್ನು ಮಳೆಕೋಟುಗಳಾಗಲಿ ಗಮ್ ಬೂಟುಗಳಾಗಲಿ ಒಳಗಿನ ನರಪೇತಲನಿಗೆ ಬರಿಸದ (ಮಳೆಯ) ಆಟೋಪದ ಎದುರು ಕಾಪು ಖಂಡಿತ ನೀಡುತ್ತಿರಲಿಲ್ಲ. ಕಾಲೇಜ್ ತಲಪುವ ವೇಳೆಗೆ ಮಜ್ಜೆ ತನಕ ಕೋಟಕೋಡದಿದ್ದರೆ ಅದು ಗಾಳೀಬೀಡೇ ಅಲ್ಲ ಅನ್ನುವ ಸ್ಥಿತಿ. ಆದರೆ ನಿಸರ್ಗದ ರುದ್ರಬಲಗಳೊಡನೆ ಸಹಜೀವನ ನಡೆಸುತ್ತ ಅವುಗಳಿಂದ ಶಿವಫಲಗಳನ್ನೇ ಪಡೆದು ಅಭಿವರ್ಧಿಸಿರುವ ಕೊಡಗಿನ ವಿದ್ಯಾರ್ಥಿವೃಂದಕ್ಕೆ ಇವು ಮಾಮೂಲು ಪ್ರಕೃತಿ ವ್ಯಾಪಾರಗಳಾಗಿದ್ದುವೇ ವಿನಾ ಅಸಹನೀಯ ಪ್ರತಿರೋಧಗಳಾಗಿರಲಿಲ್ಲ. ಅವರು ಅಂಜಿದ್ದು ಹಿಂಜರಿದದ್ದು ಮತ್ತು ಮುಲುಗುಟ್ಟಿದ್ದು ಮನುಷ್ಯ ವ್ಯಾಪಾರಗಳಿಗೆ, ಕೃತಕ ಪ್ರತಿರೋಧಗಳಿಗೆ, ಡೋಂಗಿ ಮಂದಿಯ ಕೋಡಂಗಿತನಕ್ಕೆ.

ನೀರಡಕೆ, ಬಾಯಾರಿಕೆ ಪದಗಳ ನಡುವೆ ಒಂದು ಸೂಕ್ಷ್ಮ ವ್ಯತ್ಯಾಸ ಉಂಟು: ಬಾಹ್ಯ ಪರಿಸರದ ಪ್ರಭಾವದಿಂದ ಮೊದಲನೆಯದು ಕಾಣಿಸಿಕೊಳ್ಳುತ್ತದೆ, ಎರಡನೆಯದಾದರೋ ಆಂತರಿಕ ಸ್ಥಿತಿಗತಿಗಳ ಪರಿಣಾಮವಾಗಿ ತಲೆದೋರುವುದು. ಬಿಸಿಲಲ್ಲಿ ಹಾದಿ ಸವೆಸಿದಾಗ ಬಳಲಿಸುವುದು ನೀರಡಕೆ, ಜ್ವರದ ಕಾವು ತಟ್ಟಿದಾಗ ತೊಳಲಿಸುವುದು ಬಾಯಾರಿಕೆ. ನೀರು ಕುಡಿದು ನೀರಡಕೆಯನ್ನು ತಣಿಸಬಹುದಾದರೆ, ಬೇನೆಗೆ ಚಿಕಿತ್ಸೆಯೊಂದೇ ಬಾಯರಿಕೆಯನ್ನು ತಂಪಿಸುವ ಹಾದಿ. ಮಡಿಕೇರಿಯ ಪಟ್ಟಭದ್ರರಿಗೆ ತೀವ್ರ ಬಾಯಾರಿಕೆ ಏರಿದ್ದು ಸಹಜವೇ – ಅಧಿಕ ಸಂಖ್ಯೆಯ ವಿದ್ಯಾರ್ಥಿಗಳು, ಹೆಚ್ಚು ಬೆಲೆಯ ಪುಸ್ತಕಗಳಿಗೆ ತುಂಬ ಬೇಡಿಕೆ, ಪೈಪೋಟಿ ಇಲ್ಲದ ನಿರಾತಂಕ ಸನ್ನಿವೇಶ – ಕಿಚ್ಚು ಹಚ್ಚೆಂದ ಸ್ವರ್ಗಕ್ಕೆ! ಪುಸ್ತಕ ಬೇಡಿ ದುಡ್ಡು ನೀಡಿ ದೇಹಿ ಎಂದು ನಿಂತ ಜ್ಞಾನದಾಹಿಗಳಿಗೆ ದೊರೆತದ್ದು ಗರಿಷ್ಠ ಮೌಲ್ಯಕ್ಕೆ ಕನಿಷ್ಠ ಸರಕು (ಮತ್ತು ಋಣಾತ್ಮಕ ಸೇವೆ). ಅನೇಕ ವಿದ್ಯಾರ್ಥಿಗಳು ವ್ಯಾಪಾರ ಅಂದರೆ ಹೀಗೆಯೇ ಇರಬೇಕು ಎಂಬುದಾಗಿ ಪರಿಸ್ಥಿತಿಗೆ ಹೊಂದಿಕೊಂಡರು. ಮತ್ತೆ ಕೆಲವರು ಬೇರೆ ಏನೂ ವಿಧಿ ಇಲ್ಲದೆ ಈ ಲುಕ್ಸಾನನ್ನೂ ಕಟುಕರೋಹಿಣಿಯನ್ನೂ ನುಂಗಿಕೊಂಡರು. ಇನ್ನುಳಿದವರು ಇವೆಲ್ಲವೂ ವಿದ್ಯಾರ್ಜನೆ ಎಂಬ ತಪಸ್ಸಿನ ಒಂದು ಅಂಗ ಎಂಬ ನಿರ್ವಿಣ್ಣ ಭಾವದಿಂದ ಉದಾಸೀನರಾದರು. ಸುಲಭ ಶ್ರಮದಿಂದ ವಾಮ ಮಾರ್ಗದಲ್ಲಿ ಗಳಿಕೆ ಆದ ಲಾಭ ವ್ಯಾಪಾರಿಗಳ ರೋಗವನ್ನು ಉಲ್ಬಣಿಸಿ ಅವರ ಬಾಯಾರಿಕೆಯನ್ನು ಅತಿಶಯವಾಗಿ ವರ್ಧಿಸಿತು. ಮತ್ತಷ್ಟು ತನಿರಸವನ್ನು ಅದಕ್ಕೆ ಎರೆಯುವುದು ಅವರ ದೃಷ್ಟಿಯಿಂದ ಅನಿವಾರ್ಯವಾಯಿತು. ಮತ್ತಿನ ಲಕ್ಷಣವೇ ಇದು. ಆದರೆ ವಿದ್ಯಾರ್ಥಿಗಳ ದೃಷ್ಟಿಯಿಂದಲೋ? ವ್ಯಾಧಿ ನಿರ್ಮೂಲನವೊಂದೇ ಅದಕ್ಕಿದ್ದ ಮದ್ದು.

೧೯೫೩ರ ಕರಿಮುಗಿಲಿನ ಒನಕೆ ಮಳೆಯ ಕುಟ್ಟಣೆ ಮುಗಿದು ದಟ್ಟ ಹಸುರಿನ ಹಚ್ಚಡ ಇಡೀ ಮಡಿಕೇರಿಯ ಮೇಲೆ ಹಾಸಿದಂತಿತ್ತು. ಬತ್ತದ ಗದ್ದೆಗಳಲ್ಲಿ ಕದಿರೊಡೆಯುವ ಕಾಲ ಸನ್ನಿಹಿತವಾಗಿತ್ತು. ಪಚ್ಚೆ ಮಣಿಗಳನ್ನು ನಿಬಿಡವಾಗಿ ಧರಿಸಿ ಅವುಗಳ ಭಾರದಿಂದ ಇಡೀ ಕಾಫಿ ತೋಟದ ಹರವೇ ತೊನೆಯುತ್ತಿತ್ತು. ಏಲಕ್ಕಿಯ ನರುಗಂಪನ್ನು ಹೊತ್ತು ಎಲ್ಲೆಡೆಗೂ ಮೆಲುಬೀಸಿನಿಂದ ಪಸರಿಸುತ್ತಿದ್ದ ಪ್ರಾಣವಾಯು ಆ ನಡುಹಗಲ ಹೂಬಿಸಿಲ ಹಿತಲೇಪನದ ಮೇಲೆ ನಮ್ಮನ್ನು ಸ್ವಯಂಪ್ರಭೆಯ ಲೋಕಕ್ಕೆ ಕೊಂಡೊಯ್ಯುತ್ತಿತ್ತು. ವಿದ್ಯಾರ್ಥಿಗಳ ಎಂದೂ ಬತ್ತದ ಹುರುಪಿಗೆ ಹೊಸ ಕಳೆ ಬಂದಿತ್ತು. ಹಿರಿಯ ಆದರ್ಶವನ್ನು ಇಟ್ಟುಕೊಂಡು ಕಾಲೇಜಿನ ಸರ್ವಾಂಗೀಣ ಅಭ್ಯುದಯಕ್ಕಾಗಿ ಅಹರ್ನಿಶೆ ದುಡಿಯುತ್ತಿದ್ದ ಪ್ರಾಂಶುಪಾಲ ಅಚ್ಯುತನ್ ಪಿಳ್ಳೆಯವರು ತಮ್ಮ ಬತ್ತಳಿಕೆಯಿಂದ ಇನ್ನೂ ಒಂದು ಹೊಸ ಅಸ್ತ್ರವನ್ನು ಹೊರತೆಗೆದರು.

ಅದೇ ಕಾಲೇಜ್ ವರ್ಷದ ಆರಂಭದಲ್ಲಿ (ಜುಲೈ ೧೯೫೩) ಹಲವಾರು ತರುಣ ಉಪನ್ಯಾಸಕಾರರನ್ನು ಕಾಲೇಜಿಗೆ ನೇಮಿಸಲಾಗಿತ್ತು. ಇವರಲ್ಲಿ ನಾನೂ ಒಬ್ಬ. ವಯಸ್ಸು ೨೭. ನಮ್ಮನ್ನೆಲ್ಲ ಪ್ರಾಂಶುಪಾಲರು ತಮ್ಮ ಕೊಠಡಿಗೆ ಕರೆಸಿ ಅವರ ಮನಸ್ಸಿನಲ್ಲಿದ್ದ ಹಲವಾರು ಯೋಜನೆ ಯೋಚನೆಗಳನ್ನು ವಿವರಿಸಿದರು. ಇವುಗಳ ಪೈಕಿ ಮುಖ್ಯವಾದ ಒಂದನ್ನು ಅವರು ತಮ್ಮ ಮಿದುಳುಕೂಸು, ತಮ್ಮ ಬಾಳಹಂಬಲ ಎಂಬ ಆತ್ಮೀಯತೆಯಿಂದ ನಮ್ಮ ಮುಂದೆ ಇಟ್ಟರು. "ಕಾಲೇಜಿನ ವಿದ್ಯಾರ್ಥಿಗಳಿಗೆ ಅವರ ಸಕಲಾವಶ್ಯಕತೆಗಳೂ ಇಲ್ಲಿಯೇ ದೊರೆಯುವಂತೆ ಒಂದು ಸಹಕಾರ ಸಂಘವನ್ನು ಒಡನೆ ಸ್ಥಾಪಿಸಬೇಕು. ಕ್ರಮೇಣ ಇದನ್ನು ವಿಸ್ತರಿಸಿ ಇದೊಂದು ಸರ್ವವಸ್ತು ಭಂಡಾರ ಆಗುವಂತೆ ಮಾಡಬೇಕು. ಕಾಲೇಜಿನ ಸುಪುಷ್ಟ ಅಭಿವರ್ಧನೆಗೆ ಪಾಠಪ್ರವಚನ, ಗ್ರಂಥಭಂಡಾರ ಮುಂತಾದವುಗಳಷ್ಟೇ ಅಗತ್ಯವಾದದ್ದು ಇಂಥ ಒಂದು ಸಾಮಾಜಿಕ ಕೇಂದ್ರವಾದ ಸಹಕಾರ ಸಂಘ." ಇದಿಷ್ಟು ಅವರ ಮಾತಿನ ಸಾರ. ಅವರು ಮುಂದುವರಿದು ನಮ್ಮ (ಅಂದರೆ ತರುಣ ಅಧ್ಯಾಪಕರು) ಪೈಕಿ ಒಬ್ಬರು ಈ ಹೊಣೆ ಹೊರಲು ಮುಂಬರಬೇಕೆಂದು ಬಯಸಿದರು. ನೆರೆದಿದ್ದವರ ದೃಷ್ಟಿಬಿದ್ದದ್ದು ನನ್ನ ಮೇಲೆ. ನನಗೆ ಯಾವ ಭಾವನೆಯೂ ಇರಲಿಲ್ಲ. ಕಾರಣ ಸಹಕಾರ ನನಗೆ ಪರಕೀಯ ಕ್ಷೇತ್ರ. ಅಲ್ಲದೇ ನಾನಾಗ ಕಾಲೇಜಿನ ಸಮಾಜಸೇವಾ ಸಂಘದ ಗೌರವ ಕಾರ್ಯನಿರ್ವಾಹಕನಾಗಿ ತಲೆ ತುಂಬ ಯೋಜನೆಗಳನ್ನೂ ಕೈತುಂಬ ಕೆಲಸಗಳನ್ನೂ ಹಮ್ಮಿಕೊಂಡಿದ್ದೆ.

"ನಿಮ್ಮ ಅಭಿಪ್ರಾಯ ಏನು?" ಎಂಬುದಾಗಿ ಪ್ರಾಂಶುಪಾಲರು ನನ್ನನ್ನು ಕೇಳಿದಾಗ ಉಳಿದವರು ಅವರ ಇಂಗಿತವರಿತು, "ನೀವೇ ಈ ಮುಂದಾಳುತನ ವಹಿಸಲು ಸಮರ್ಥರು" ಎಂದು ಧ್ವನಿಗೂಡಿಸಿದರು.
ನನ್ನಲ್ಲಿ ಸ್ವಭಾವಜನ್ಯ ದೌರ್ಬಲ್ಯವೊಂದುಂಟು: ನಾಲ್ಕು ಜನ ಸೇರಿ ವಿಶ್ವಾಸದಿಂದ "ಈ ಕೆಲಸ ನಿಮ್ಮಿಂದ ಆಗಬೇಕು" ಎಂದಾಗ ಹಿಂದೆ ಮುಂದೆ ನೋಡದೆ ದುಮುಕುವುದು. ಅದೂ ಆ ಎಳೆ ಹರೆಯದಲ್ಲಿ ಈ ದೌರ್ಬಲ್ಯ ತೀವ್ರವಾಗಿತ್ತು. ಆ ಗಳಿಗೆಯಲ್ಲಿ ನಾನು ತರ್ಕಾತೀತ ಭಾವಾವಿಷ್ಟನಾಗಿ, "ನಿಮ್ಮ ಇಚ್ಛೆಯಂತೆ ಆಗಲಿ. ಆದರೆ ಮಾರ್ಗದರ್ಶನಕ್ಕೆ ಹಿರಿಯ ಪ್ರಾಧ್ಯಾಪಕರು ಯಾರಾದರೊಬ್ಬರು ಮುಂದಿರಲಿ. ನಾನು ಹಿಂದೆ ನಿಂತು ಕೆಲಸ ಮಾಡುತ್ತೇನೆ" ಎಂದೆ.
"ಇಲ್ಲ, ಅಂಥ ಏರ್ಪಾಡು ಎಂದೂ ಸರಿ ಆಗದು. ನಿಮ್ಮ ದುಡಿಮೆ ನಿಮಗೂ ನಿಮ್ಮ ಕಾಲೇಜಿಗೂ ಹೆಸರು ತರಬೇಕು. ಮಾರ್ಗದರ್ಶನ ನೀವೇ ಮಾಡಿಕೊಂಡು ಹೊಸ ಜಾಡಿನಲ್ಲಿ ಸಾಗಿ. ನಾವೆಲ್ಲ ನಿಮ್ಮ ಬೆಂಬಲಕ್ಕೆ ಇದ್ದೇವೆ" ಎಂದು ಪ್ರಾಂಶುಪಾಲರು ಸಮಾರೋಪಿಸಿದರು.

ಜಾಗ ನೋಡದೆ ಲಾಗ ಹೊಡೆವಾತನಿಗೆ ಒದಗುವ ಸಮಸ್ತ ಅನುಭವವೂ ಮುಂದೆ ನನ್ನದಾಯಿತು. ಸಹಕಾರ ಕ್ಷೇತ್ರ ಅಂದರೇನು? ಇದರಲ್ಲಿ ಸಂಘ ಸ್ಥಾಪನೆಯ ವಿಧಿ ಹೇಗೆ? ವ್ಯಾಪಾರದ ಹಿಕ್ಮತ್ತುಗಳು ಯಾವುವು? ಬಂಡವಾಳವನ್ನು ಎಲ್ಲಿಂದ ದೊರಕಿಸುವುದು? ಸಾಮಗ್ರಿಗಳ ಪೂರೈಕೆ ಎಂತು? ಗಲ್ಲಾದಲ್ಲಿ ಕುಳಿತು ವ್ಯಾಪಾರ ಮಾಡುವವರು ಯಾರು? ಲೆಕ್ಕ ಪುಸ್ತಕಗಳ ವಿಲೆವಾರಿ ಏನು? ನನ್ನ ಪಾಠಾಧ್ಯಯನಗಳ ಮತ್ತು ಸಂಘದ ವ್ಯವಹಾರಗಳ ನಡುವೆ ಹೊಂದಾಣಿಕೆ ಸಾಧಿಸುವುದು ಹೇಗೆ? ಇವೇ ಮೊದಲಾದ ನೂರಾರು ಪ್ರಶ್ನೆಗಳು ನನ್ನನ್ನು ಆ ಗಳಿಗೆಯಿಂದ ಕಾಡತೊಡಗಿದುವು. ಆವೇಶಭರದಲ್ಲಿ ಸ್ವಸಾಮರ್ಥ್ಯವನ್ನು ಗ್ರಹಿಸದೆ ನೀಡಿದ ಆಶ್ವಾಸನೆ ಸಿಂದಬಾದ ನಾವಿಕನ ಮುದುಕ ಮಿತ್ರನಂತೆ ನನ್ನ ಬೆನ್ನೇರಿ ತನ್ನ ಹೆಣಭಾರದಿಂದ ನನ್ನನ್ನು ಜಗ್ಗತೊಡಗಿತು. ಕಾಲೇಜಿನಲ್ಲಿ ಈ ವಿಚಾರಗಳನ್ನು ಚರ್ಚಿಸಬಲ್ಲ ಅನುಭವಿಗಳು ಯಾರೂ ಇರಲಿಲ್ಲ.

ಪ್ರಥಮ ಪ್ರಜಾಸರಕಾರ ಈ ವೇಳೆಗೆ ಕೊಡಗಿನಲ್ಲಿ ಅಸ್ತಿತ್ವಕ್ಕೆ ಬಂದು ಸಮರ್ಥವಾಗಿ, ಪ್ರಾಮಾಣಿಕವಾಗಿ ಮತ್ತು ಆತ್ಮೀಯವಾಗಿ ಕೆಲಸವೆಸಗುತ್ತಿತ್ತು. ಮಂತ್ರಿದ್ವಯರಿಗೂ ಕೊಡಗಿನ ಹೆಸರನ್ನು ಸರ್ವರಂಗಗಳಲ್ಲಿ ಮುಂದೆ ತರಬೇಕೆಂಬ ತೀವ್ರಾಸಕ್ತಿ ಇತ್ತು. ಸಾರ್ವಜನಿಕ ಜೀವನದಲ್ಲಿ ಲವಲವಿಕೆ ಮತ್ತು ಅರ್ಥಪೂರ್ಣತೆ ತುಂಬಿ ತುಳುಕುತ್ತಿದ್ದುವು. ಆ ಮೊದಲೇ ಆಳವಾಗಿಯೂ ಅಗಲವಾಗಿಯೂ ಕೊಡಗಿನಲ್ಲಿ ನೆಲೆಸಿದ್ದ ಸಹಕಾರಾಂದೋಳನಕ್ಕೆ ಈ ಹೊಸ ಅನುಕೂಲ ಸನ್ನಿವೇಶ ಅಧಿಕ ಚೈತನ್ಯ ನೀಡಿತ್ತು. ಇತ್ತ ವೈಯಕ್ತಿಕವಾಗಿ ನನಗೆ ಒಂದು ವಿಶೇಷ ಸೌಕರ್ಯವೂ ಇತ್ತು: ನನ್ನ ತಂದೆ ಕೊಡಗಿನ ಸಹಕಾರ ರಂಗದಲ್ಲಿ ಹಿರಿಯ ಅಧಿಕಾರಿಗಳಾಗಿದ್ದರು. ಹೀಗಾಗಿ ಶಾಲಾದಿನಗಳಿಂದಲೇ ನನಗೆ ಗ್ರಾಮ ಸಹಕಾರ ಸಂಘಗಳ ನಡವಳಿಕೆಗಳನ್ನು ಹತ್ತಿರದಿಂದ ನೋಡುವ ಅವಕಾಶ ಲಭಿಸಿತ್ತು. ನಾನು ಪ್ರೌಢಶಾಲೆಯ ವಿದ್ಯಾರ್ಥಿ ಆಗಿದ್ದಾಗ ನನ್ನ ತಂದೆಯವರೇ ಅಧಿಕಾರ ನಿಮಿತ್ತ ಹಿರಿತನವಹಿಸಿ ಮಡಿಕೇರಿಯಲ್ಲಿ ಪ್ರಥಮವಾಗಿ ಸ್ಥಾಪಿಸಿದ ಗ್ರಾಹಕ ಸಹಕಾರ ಸಂಘದ ಕ್ಷಿಪ್ರಾಭಿವರ್ಧನೆಯನ್ನು ಕಂಡಿದ್ದೆ. ಸದ್ಯ ಅವರು ಕೊಡಗಿನ ಕೇಂದ್ರ ಸಹಕಾರ ಬ್ಯಾಂಕಿನ ಪ್ರಧಾನಾಧಿಕಾರಿಗಳಾಗಿದ್ದುದರಿಂದ ಅಂಗೈ ಅಗಲದ ಕೊಡಗಿನ ನೆಲದಲ್ಲಿ ಸಹಕಾರ ಇಲಾಖೆಯ ಸಕಲ ಅಧಿಕಾರಿಗಳೂ ನನಗೆ ಪರಿಚಿತರಾಗಿದ್ದರು. ಈ ರಕ್ತಸಂಬಂಧವನ್ನು ನಗದಿಸಲು ಮುಂದಾದೆ.

ಸಹಕಾರ ಸಂಘಗಳ ರಿಜಿಸ್ಟ್ರಾರ್ ವಿದ್ಯಾರ್ಥಿಗಳ ಗ್ರಾಹಕ ಸಹಕಾರ ಸಂಘದ ಸ್ಥಾಪನೆಗೆ ಬೇಕಾದ ಪೂರ್ತಿ ತಾಂತ್ರಿಕ ಮಾಹಿತಿಯನ್ನು ಒದಗಿಸಿದರು. ಆ ಪ್ರಕಾರ ಮೊದಲ ಹೆಜ್ಜೆಯಾಗಿ ನಾವು, ನಿಗದಿ ಪಾಲುಬಂಡವಾಳವನ್ನೂ ಪ್ರವರ್ತಕ ಸದಸ್ಯ ಸಂಖ್ಯೆಯನ್ನೂ ಕಲೆಹಾಕಬೇಕಾಗಿತ್ತು. ಪ್ರತಿ ಸದಸ್ಯ ಕೊಡಬೇಕಾಗಿದ್ದ ಕನಿಷ್ಠ ಮೊಬಲಗು ನಾಲ್ಕೂವರೆ ರೂಪಾಯಿಗಳು. ಆ ದಿನಗಳಲ್ಲಿ ವಿದ್ಯಾರ್ಥಿಗಳ ದೃಷ್ಟಿಯಿಂದ ಇದು ಕಡಿಮೆ ಮೊತ್ತವೇನೂ ಆಗಿರಲಿಲ್ಲ. ಹಣವಾಗಲಿ ಸದಸ್ಯ ಸಂಖ್ಯೆಯಾಗಲಿ ನಮ್ಮ ಉತ್ಸಾಹದ ದುಡಿಮೆಗೆ ಅನುಪಾತೀಯವಾಗಿ ಹರಿಯಲಿಲ್ಲ. ಈ ಸಾರ್ವಜನಿಕ ಭಿಕ್ಷಾಟಣೆಯಲ್ಲಿ ದೊರೆತ ಅನುಭವಗಳನ್ನು ಸಾರೀಕರಿಸಿ ಇಷ್ಟು ಹೇಳಬಹುದು:

ಯಾವುದೇ ಕಾರ್ಯ ಅಂತಿಮವಾಗಿ ತಮ್ಮ ಒಳಿತಿಗಾಗಿಯೇ ಇದೆ ಎಂದು ಜನರಿಗೆ ಖಾತ್ರಿ ಆದಾಗ್ಯೂ ಹಣ ಹರಿಯುವುದು ತುಂಬಾ ದಾಕ್ಷಿಣ್ಯದಿಂದ. ವಿಚಾರವಂತರು ಸಂಘಟಕರ ಪ್ರಾಮಾಣಿಕತೆ ಮತ್ತು ಕಾರ್ಯದಕ್ಷತೆಗಳನ್ನು ಚೆನ್ನಾಗಿ ವಿಮರ್ಶಿಸಿ ಪರ್ಯಾಲೋಚಿಸಿ ಹಣ ನೀಡುವರು. ಇಂಥವರ ಸಂಖ್ಯೆ ಕಡಿಮೆ. ಉಳಿದವರು (ನಮ್ಮಲ್ಲಿ ವಿದ್ಯಾರ್ಥಿಗಳೇ ಬಹುತೇಕ ಕಚ್ಚಾ ಸಾಮಗ್ರಿ ಮತ್ತು ಬೇಡುವವ ಖುದ್ದು ಅವರ ಒಬ್ಬ ಅಧ್ಯಾಪಕ ಆಗಿದ್ದುದರಿಂದ) ನಾಲ್ಕು ಸಲ ಕಾಡುವಾಗ "ಪೀಡೆ ತೊಲಗಲಿ" ಎಂದು ಮನಸ್ಸಿನೊಳಗೆ ಶಪಿಸುತ್ತ ಸದಸ್ಯ ಶುಲ್ಕವನ್ನು ಪಾವತಿಸಿದರು. ವಾದ ಮಾಡಲು ಅರ್ಹತೆ ಇದ್ದಂಥ ಸಮಾನಸ್ಕಂಧರ ಪೈಕಿ ಒಳ್ಳೆಯ ಮಾತಾಡಿ ಹುರಿದುಂಬಿಸಿ ಆದರೆ ಸಾಕಷ್ಟು ಸತಾಯಿಸಿ ಮತ್ತೆ ಅನಿವಾರ್ಯವಾಗಿ ಮೊಬಲಗು ತೆತ್ತವರು ಹಲವರು. ಇನ್ನು ಕೆಲವರು "ಆಗ ಬಾ ಈಗ ಬಾ ಹೋಗಿಬಾ" ಎಂದು ಪರಿಪರಿ ವಿಧದಿಂದ ಸತಾಯಿಸಿ ಮತ್ತೆ ಈ ಕೆಲಸ ಹೇಗೆ ವಿಫಲವಾದೀತೆಂಬ ವಿಚಾರ ಉದ್ದುದ್ದ ಭಾಷಣ ಬಿಗಿದು ಕೊನೆಗೂ ಸದಸ್ಯರಾಗದೇ ನಾಲ್ಕೂವರೆ ರೂಪಾಯಿಗಳನ್ನು ದಕ್ಕಿಸಿಕೊಂಡರು. ಆದ್ದರಿಂದ ಇಲ್ಲೆಲ್ಲ ಕಲಿತ ಪಾಠ ಒಂದೇ: "ಸುಖದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ತತೋಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ." ಆದರೇನು ಮಾಡುವುದು? ಕೈ ಹಾಕಿದ ಕೆಲಸದಲ್ಲಿ ರಾಗಭಾವಗಳನ್ನು ತರದೇ ದುಡಿಯುವ ದಿವ್ಯ ನಿರ್ಲಕ್ಷ್ಯ ಭಾವವಾಗಲಿ ಬೋರ್ಗಲ್ಲತನವಾಗಲಿ ಈ ಜೀವದ (ನನ್ನ) ಪ್ರವೃತ್ತಿ ಅಲ್ಲ.

ರಿಜಿಸ್ಟ್ರಾರರು ವಿಧಿಸಿದ್ದ ಕನಿಷ್ಠ ಅಡಚಣೆಗಳನ್ನು, ಅಂತೂ ಇಂತೂ ನೋವು ಗಾಸಿ ಏನೂ ಇಲ್ಲದೆ, ದಾಟಿ ಎರಡನೆಯ ಸುತ್ತಿನ ಮಾತಿಗೆ ಅವರನ್ನು ಕಾಣಹೋದೆ. ಅವರು ಸೂಚಿಸಿದ್ದ ಮಾದರಿ ಉಪನಿಬಂಧನೆಗಳ ಪೈಕಿ ಬಹುತೇಕ ಎಲ್ಲವನ್ನೂ ಚಾಚೂ ತಪ್ಪದೆ ಒಪ್ಪಿಕೊಂಡಿದ್ದೆವು. (ಹೆಚ್ಚಿನವು ನಮಗೆ ಅರ್ಥವಾಗಿರಲಿಲ್ಲ). ಕಾರ್ಯನಿರ್ವಾಹಕ ಸಮಿತಿಯ ವಿಚಾರದಲ್ಲಿ ಮಾತ್ರ ನಮ್ಮ ವ್ಯಕ್ತಿತ್ವಕ್ಕೆ ಅನುಗುಣವಾಗಿ ಕೆಲವು ಮುಖ್ಯ ಮಾರ್ಪಾಡುಗಳನ್ನು ಸೂಚಿಸಿದ್ದೆವು. ಗೌರವ ಅಧ್ಯಕ್ಷ ಮತ್ತು ಪ್ರಧಾನ ಕಾರ್ಯನಿರ್ವಾಹಕನಾದ ಗೌರವ ಕಾರ್ಯದರ್ಶಿ ಇವರಿಬ್ಬರು ಮಾತ್ರ, ವಿದ್ಯಾರ್ಥಿಗಳೇ ಬಹುಸಂಖ್ಯೆಯಲ್ಲಿ ಇರುವಂಥ, ಮಹಾಸಭೆಯಿಂದ ಚುನಾಯಿತರಾಗತಕ್ಕದ್ದಲ್ಲ; ಬದಲು, ಕಾಲೇಜಿನ ಪ್ರಾಂಶುಪಾಲರೇ ಪದನಿಮಿತ್ತ ಗೌರವ ಕಾರ್ಯದರ್ಶಿಯಾಗಿ ನಾಮಕರಿಸತಕ್ಕದ್ದು. ಮತ್ತು ಇವರೇ ಅಧ್ಯಾಪಕ ಸದಸ್ಯರ ಪೈಕಿ ಒಬ್ಬನನ್ನು ಗೌರವ ಕಾರ್ಯದರ್ಶಿಯಾಗಿ ನಾಮಕರಿಸತಕ್ಕದ್ದು. ಕಾರ್ಯನಿರ್ವಾಹಕ ಮಂಡಳಿಯ ಅಧ್ಯಾಪಕಸದಸ್ಯನನ್ನು ಅಧ್ಯಾಪಕಸದಸ್ಯರು ಮಾತ್ರ ಚುನಾಯಿಸತಕ್ಕದ್ದು.

ರಿಜಿಸ್ಟ್ರಾರರು ಮೊದಲಿನ ಸೂಚನೆಯನ್ನು ಒಪ್ಪಿದರು. ಆದರೆ ಉಳಿದೆರಡನ್ನು ತಳ್ಳಿಹಾಕಿದರು. ಅವು ಸಹಕಾರ ತತ್ತ್ವಗಳಿಗೆ ಅನುಗುಣವಾಗಿಲ್ಲ, ಮಹಾಸಭೆಯ ಅಧಿಕಾರವ್ಯಾಪ್ತಿಗೆ ಸರ್ವಸದಸ್ಯರೂ ಒಳಪಟ್ಟಿರಬೇಕು ಎಂಬುದಾಗಿ ವಾದಿಸಿದರು. ಅಲ್ಲದೆ ನಾನು ಸರ್ವಾನುಮತದಿಂದ ಗೌರವ ಕಾರ್ಯದರ್ಶಿಯಾಗಿ ಚುನಾಯಿತನಾಗುವ ವಿಚಾರದಲ್ಲಿ ತಮಗೆ ಒಂದಿನಿತು ಸಂದೇಹವೂ ಇಲ್ಲ ಎಂಬುದಾಗಿ ನನ್ನ ಬೆನ್ನು ತಟ್ಟಿದರು. ನಾನು ಸ್ಪಷ್ಟವಾಗಿ ನಮ್ಮ ನಿಲವನ್ನು ವಿವರಿಸಿದೆ (ಸ್ವಲ್ಪ ಕಾವು ಕೂಡಾ ಬೆರೆತಿತ್ತು): "ಸಹಕಾರ ತತ್ತ್ವ ಅನ್ನುವುದು ನಮ್ಮ ಅಳವಿಗೆ ಮೀರಿದ ನಿಸರ್ಗ ನಿಯಮ ಏನೂ ಅಲ್ಲ. ಪರಿಸ್ಥಿತಿಗೆ ಅನುಗುಣವಾಗಿ ಇದನ್ನು ಮಾರ್ಪಡಿಸದಿದ್ದರೆ ಅದು ದಫ್ತರಗಳಲ್ಲಿ ಕೀಟಾಹಾರವಾಗಿ ಉಳಿದೀತು, ಅಷ್ಟೆ. ಇದೀಗ ತಾನೇ ಹುಟ್ಟಲಿರುವ ನಮ್ಮ ಸಹಕಾರ ಸಂಘಕ್ಕೆ ಯಾರು ಗೌರವ ಕಾರ್ಯದರ್ಶಿ ಆಗುವರೆಂಬುದು ಮುಖ್ಯ ಅಲ್ಲ. ಆ ಅಧಿಕಾರ ಆ ವ್ಯಕ್ತಿಗೆ ಹೇಗೆ ಪ್ರಾಪ್ತವಾಗುವುದು ಎನ್ನುವುದು ಮುಖ್ಯ. ಇಲ್ಲಿ ವಿದ್ಯಾರ್ಥಿಸದಸ್ಯರ ಮಹಾಸಭೆಗೆ ಅಧ್ಯಾಪಕರಿಂದ ಇಬ್ಬರನ್ನು ಚುನಾಯಿಸುವ ಅಧಿಕಾರ ನೀಡುವುದು ಬೀದಿ ರಾಜಕೀಯವನ್ನು ದೇಗುಲದೊಳಕ್ಕೆ ಎಳೆದು ತಂದಂತೆ. ಕಾಲೇಜಿಗೆ ಸಹಕಾರ ಸಂಘವಿಲ್ಲದಿದ್ದರೂ ಅಡ್ಡಿ ಇಲ್ಲ. ಈ ಹೊಸ ಗೆದ್ದಲನ್ನು ಒಳಕರೆಯುವುದು ಬೇಡ."
ಅವರೂ ದನಿ ಏರಿಸಿ ಹೇಳಿದರು, "ನಿಮ್ಮ ಷರತ್ತುಗಳಿಗೆ ಅನುಗುಣವಾಗಿ ಈ ಸಂಘವನ್ನು ನೋಂದಾಯಿಸಲು ಸಾಧ್ಯವಾಗುವುದಿಲ್ಲ."

“ಸಹಕಾರ ಸಂಘಗಳ ಸ್ಥಾಪನೆ ಪೋಷಣೆಗಳಿಗೆಂದೇ ಮೀಸಲಾಗಿರುವ ಈ ಇಲಾಖೆ ನಾವಾಗಿಯೇ ಒಂದು ಸಸಿಯನ್ನು ನಿಮ್ಮ ಯಾವ ನೆರವೂ ಇಲ್ಲದೆ ನೆಟ್ಟು ಬೆಳೆಸಿ ಮೇಲೆ ತರುವೆವೆಂದು ಕೋರಿ ಬಂದಿರುವಾಗ, ನಮ್ಮನ್ನು ತೆರೆದ ಮನದಿಂದ ಸ್ವಾಗತಿಸಿ ಪ್ರೋತ್ಸಾಹಿಸುವುದು ಬಿಟ್ಟು ಗಾಲಿಗಳ ಅರಗಳ ನಡುವೆ ಸಲಾಕಿ ತೂರುವುದು ಸರಿಯೇ? ನಿಮ್ಮ ‘ಸಹಕಾರ’ ವಿಶೇಷಣದ ಬೆಂಬಲ ಇಲ್ಲದೆಯೂ ನಾವು ಸಂಸ್ಥೆಯೊಂದನ್ನು ಕಟ್ಟಿ ವಿದ್ಯಾರ್ಥಿ ಸೇವೆಯನ್ನು ಮಾಡುವುದಂತೂ ಖರೆ. ನೋಡಿ ಬೇಕಾದರೆ” ಎಂಬುದಾಗಿ ಹೇಳಿ ನಾನು ಅಲ್ಲಿಂದ ಹೊರಟೆ, ವಿಶ್ವಾಮಿತ್ರನಂತೆ.

ಪ್ರಾಂಶುಪಾಲರಿಗೆ ಯಥಾವತ್ತು ವರದಿ ಒಪ್ಪಿಸಿ ಎರಡು ಅಂಶಗಳನ್ನು ಸ್ಪಷ್ಟಪಡಿಸಿದೆ. ಒಂದು, ರಿಜಿಸ್ಟ್ರಾರರ ಅಸಹಜ ಶರತ್ತುಗಳಿಗೆ ಮಣಿದು ಕಾಲೇಜು ಸಹಕಾರ ಸಂಘದ ಸ್ಥಾಪನೆ ಆಗಬೇಕೆಂದಾದರೆ ನನ್ನನ್ನು ಆ ಕ್ಷಣವೇ ಸಂಘದ ಹೊಣೆಗಾರಿಕೆಯಿಂದ ಬಿಡುಗಡೆ ಮಾಡಬೇಕು. ಎರಡು, ನಾನೇ ಇದ್ದು ಸಂಸ್ಥೆಯನ್ನು ಸಂಘಟಿಸಬೇಕು ಎಂದಾದರೆ ನಾವು ಸಹಕಾರ ಕ್ಷೇತ್ರವನ್ನು ಪ್ರವೇಶಿಸದೆ ಅಲಾಯಿದ ಮುಂದುವರಿಯಬೇಕು.

ಮುಂದಿನ ದಿನಗಳಲ್ಲಿ ಪ್ರಾಂಶುಪಾಲರು ರಿಜಿಸ್ಟ್ರಾರರನ್ನೂ ಸಹಕಾರ ಮಂತ್ರಿಗಳನ್ನೂ ಭೇಟಿ ಮಾಡಿ ನಮ್ಮ ಮೂಲ ಮಾರ್ಪಾಡಿಕೆಗಳನ್ನು ಇಲಾಖೆ ಒಪ್ಪುವಂತೆ ಮಾಡಿದರು. ೧೯೫೪ರ ಫೆಬ್ರುವರಿ ೬ರಂದು ‘ಕೂರ್ಗ್ ಗವರ್ನ್‌ಮೆಂಟ್ ಕಾಲೇಜ್ ಕೋ ಆಪರೇಟಿವ್ ಸ್ಟೋರ್ಸ್ ಲಿಮಿಟೆಡ್’ ಎಂಬ ನಾಮಧೇಯ ಧರಿಸಿ ನಮ್ಮ ಸಂಘ ಜನ್ಮ ತಳೆಯಿತು. ಇದರ ಗೌರವ ಕಾರ್ಯದರ್ಶಿಯಾಗಿ ಪ್ರಾಂಶುಪಾಲರು ನನ್ನನ್ನು ನಾಮಕರಿಸಿದರು. ಈಗ ನೊಗ ಪೂರ್ತಿ ನನ್ನ ಕತ್ತ ಮೇಲೆ ಬಿತ್ತು, ಮಾತ್ರವಲ್ಲ ಉರುಳೆಯನ್ನು ಅದಕ್ಕೆ ಬಲವಾಗಿಯೇ ಬಿಗಿದಿದ್ದರು ಕೂಡ. ಹೆಸರುಂಟು ಬಂಡವಾಳ ಇಲ್ಲ, ಸಾಗುವ ಹುಮ್ಮಸ್ಸುಂಟು ಹಾದಿ ತಿಳಿದಿಲ್ಲ. ವ್ಯವಸ್ಥಿತ ಕಾರ್ಯದ ಗಟ್ಟಿ ಅಡಿಪಾಯವಿಲ್ಲದ ಉತ್ಸಾಹದ ನೊರೆ ಎಷ್ಟು ಎತ್ತರ ಏರಿದರೇನು ಫಲ? ಅಂದು ನನ್ನ ಮನಃಸ್ಥಿತಿ ಹಾಗಿತ್ತು.

೧೯೫೪ರ ಜೂನ್ ಹೊತ್ತಿಗೆ ನಮ್ಮ ಸಂಘ ಸುಸಜ್ಜಿತವಾಗಿ ವ್ಯಾಪಾರಾರಂಭ ಮಾಡಬೇಕು ಎಂದು ನಿರ್ಧರಿಸಿದೆವು. ನಾಲ್ವರು ವಿದ್ಯಾರ್ಥಿಗಳು ಸ್ವಯಂಪ್ರೇರಣೆಯಿಂದ ಮುಂಬಂದು ತೇರೆಳೆಯಲು ನನ್ನೊಡನೆ ಟೊಂಕ ಕಟ್ಟಿ ನಿಂತರು. ಆದರೆ ಹೇರಿಲ್ಲದ ತೇರಿದು. ಅಂದು ನನ್ನನ್ನು ಪೀಡಿಸಿದ ಮುಖ್ಯ ಸಮಸ್ಯೆ ಬೇರೆಯೇ: ಪಾಲು ಬಂಡವಾಳ, ಇತರ ಸಂಗ್ರಹ ಎಲ್ಲವೂ ಸೇರಿ ನಮ್ಮ ಮೂಲಧನ ಎರಡು ಸಾವಿರದ ಅಂಚನ್ನೂ ದಾಟಿರಲಿಲ್ಲ. ಹಾಗಿರುವಾಗ ಹಲವಾರು ಸಾವಿರ ರೂಪಾಯಿ ಬೆಲೆಯ ಮಾಲುಗಳನ್ನು ಒದಗಿಸಿಕೊಳ್ಳುವುದು ಹೇಗೆ? ಮಡಿಕೇರಿಯ ಪುಸ್ತಕ ವ್ಯಾಪಾರಿ ಒಬ್ಬರು ತುಂಬ ಅನುಕಂಪ ವಹಿಸಿ ನಯವಾಗಿ ಹೇಳಿದರು, “ಈ ತಾಪತ್ರಯ ನಿಮಗೆಂದೂ ನಿಭಾಯಿಸಲು ಸಾಧ್ಯವಾಗದು. ಇನ್ನು ನಿಮ್ಮ ಕಾಲೇಜಿಗೆ ಒಂದು ಸಂಘ ಬೇಕೇಬೇಕು ಎಂದಾದರೆ ನೋಡಿ, ನಾನಂತೂ ಪೂರ್ತಿ ಸಹಕಾರ ನೀಡಲು ತಯಾರಾಗಿದ್ದೇನೆ. ಜೂನ್ ಹೊತ್ತಿಗೆ ನಿಮಗೆ ಬೇಕಾದ್ದೆಲ್ಲವನ್ನೂ ಸಗಟು ದರದಲ್ಲಿ ಕೊಟ್ಟುಬಿಡುವೆವು. ಮಾರಾಟ ಆದಂತೆ ದುಡ್ಡು ಕೊಡುವಿರಂತೆ.” ಈ “ಬಾನೊಳವೆ ಬಾನೊಳವೆ ಬಾ ನನ್ನ ಮನೆಗೆ, ಬಾನೊಳಗೆ ಹಾರಿ ಬಲು ದಣಿವಾಯ್ತು ನಿನಗೆ” (ಪಂಜೆ) ಎನ್ನುವ ಜೇಡನ ಕರೆಗೆ ಓಗೊಡುವ ಹೆಡ್ಡ ನೊಣ ನಾನಾಗಿರಲಿಲ್ಲ.

ಮಂಗಳೂರು ನಗರದೊಡನೆ ನನಗೆ ವೈಯಕ್ತಿಕ ಸಂಪರ್ಕ ನಿಕಟವಾಗಿತ್ತು. ಅಲ್ಲಿ ಮೊದಲು ಎರಡು ವರ್ಷ ಕಾಲೇಜು ವ್ಯಾಸಂಗ ಮಾಡಿದ್ದೆ. ಮತ್ತೆ ಕೆಲವು ವರ್ಷಗಳ ತರುವಾಯ ಅದೇ ಊರಿನಲ್ಲಿ ನಾಲ್ಕು ವರ್ಷ ಕಾಲೇಜು ಅಧ್ಯಾಪಕ ಹುದ್ದೆಯಲ್ಲೂ ಇದ್ದುದು ಸರಿಯಷ್ಟೆ. ಹೀಗಾಗಿ ಆ ಪರಿಚಿತ ಹಿರಿ ಪಟ್ಟಣದ ಸಗಟು ವ್ಯಾಪಾರಿಗಳನ್ನು (ಇವರಲ್ಲಿ ಹಲವು ಮಂದಿ ನನ್ನ ಸ್ನೇಹಿತರೂ ಆಗಿದ್ದರು) ಕಂಡು ಮಾತಾಡಿ ಖುದ್ದು ಮಾಹಿತಿ ಪಡೆಯುವುದೊಂದೇ ಹಾದಿ ಎಂದು ನಿರ್ಧರಿಸಿ ಅಲ್ಲಿಗೇ ಹೋದೆ. ಸ್ಕೂಲ್ ಬುಕ್ ಕಂಪೆನಿ ಎಂಬ ಹೆಸರಿನ ಪ್ರಸಿದ್ಧ ಪುಸ್ತಕ ವ್ಯಾಪಾರಿಗಳು ತುಂಬ ತಾಳ್ಮೆಯಿಂದ ನನಗೆ ಈ ಹೊಸ ಪ್ರಪಂಚದ ಸಾಧ್ಯಾಸಾಧ್ಯತೆಗಳನ್ನು ವಿವರಿಸಿದರು. ಲೇಖನ ಸಾಮಗ್ರಿಗಳು ಸಮಸ್ತವನ್ನೂ ತಾವು ಸಾಲರೂಪವಾಗಿ ಜೂನ್ ವೇಳೆಗೆ ಒದಗಿಸುವ ಆಶ್ವಾಸನೆ ನೀಡಿದರು. ಅವರ ಸಗಟು ದರಗಳು ನಾನು ನಂಬಲಾರದಷ್ಟು ಕಡಿಮೆ ಇದ್ದುವು. “ನೀವು ಈ ಸಂಘದ ಗೌರವ ಕಾರ್ಯದರ್ಶಿ ಆಗಿರುವ ತನಕ ನಮ್ಮ ಪೂರ್ತಿ ಬೆಂಬಲ ನಿಮಗಿದೆ” – ಖಾಸಗಿ ಕ್ಷೇತ್ರ ಸಹಕಾರ ರಂಗಕ್ಕೆ ನೀಡಿದ ಈ ಆಶ್ವಾಸನೆ ನನಗೆ ಎಂಟಾನೆ ಬಲ ನೀಡಿತು. ಹಣವಿಲ್ಲವೆಂದು ಒದ್ದಾಡುತ್ತಿದ್ದವನಿಗೆ ಅಯಾಚಿತವಾಗಿ ಅದು ಈಗ ಸಾಕಷ್ಟು ಒದಗಿಬಂದಿತ್ತು. ಸ್ಕೂಲ್ ಬುಕ್ ಕಂಪೆನಿಯವರ ಸಲಹೆ ಮೇರೆಗೆ ನಮಗೆ ಬೇಕಾಗುವ ಲೇಖನ ಸಾಮಗ್ರಿಗಳ ಯಾದಿ ತಯಾರಿಸಿ ಅವನ್ನು ಪೂರೈಸಲು ಅವರಿಗೆ ಆದೇಶವಿತ್ತು ಹಿಂತಿರುಗಿದೆ. ಇತ್ತ ಪಠ್ಯಪುಸ್ತಕಗಳನ್ನು ಪ್ರಕಾಶಕರಿಂದಲೇ ನೇರವಾಗಿ ತರಿಸಲು ಪತ್ರ

ವ್ಯವಹಾರ ತೊಡಗಿದೆವು. ಮ್ಯಾಕ್ಸ್‌ಮಿಲನ್, ಬ್ಲ್ಯಾಕೀ, ಆಕ್ಸ್‌ಫರ್ಡ್, ಓರಿಯೆಂಟಲ್ ಲಾಂಗ್‌ಮನ್ ಇವೇ ಮೊದಲಾದವು ಅಂದಿನ ಪ್ರಕಾಶನ ಸಂಸ್ಥೆಗಳು.

ಮೇ ತಿಂಗಳ ಕೊನೆಯಲ್ಲಿ ಮಳೆ ಎಂದಿನ ಬಿರುಸಿನಿಂದ ಜಡಿಯತೊಡಗಿತು. ಮಂಗಳೂರಿನಿಂದ ಲಾರಿ ಹೊರೆ ಲೇಖನ ಸಾಮಗ್ರಿ ಬಂದಿಳಿದಾಗ ಒಂದು ಸಲಕ್ಕೆ ಆ ಮುಗಿಲಾಗಸವೇ ನಮ್ಮ ತಲೆಯ ಮೇಲೆ ಕಳಚಿ ಬಿದ್ದಂತೆ ಅನ್ನಿಸಿತು. ಸುಮಾರು ಎಂಟು ಸಾವಿರ ರೂಪಾಯಿ ಮಾಲು. ಇಪ್ಪತ್ತು ಭಾರೀ ಪಿಂಡಿಗಳು. ಅವನ್ನು ಬಿಚ್ಚಿ ಸಾಮಗ್ರಿಗಳನ್ನು ವರ್ಗೀಕರಿಸಿ, ಇನ್‌ವಾಯ್ಸಿನ ತಪಶೀಲಿಯೊಡನೆ ತಾಳೆ ನೋಡಿ ಮತ್ತೆ ಅಟ್ಟಳಿಗೆಗಳಲ್ಲಿ ವ್ಯಾಪಾರನುಕೂಲ್ಯದ ದೃಷ್ಟಿಯಿಂದ ಅಳವಡಿಸಿ ಪೇರಿಟ್ಟಾಗ ಪುರಾಣೋಕ್ತ ರಾಜಸೂಯಾಧ್ವರ ಮಾಡಿ ಮುಗಿಸಿದ ಅನುಭವ ನಮ್ಮದಾಗಿತ್ತು. ಪಠ್ಯಪುಸ್ತಕಗಳೆಲ್ಲವೂ ಬ್ಯಾಂಕ್ ಮೂಲಕ ಬಂದುವು. ಅಂದರೆ ಅವನ್ನು ನಗದು ಹಣ ಪಾವತಿಸಿಕೊಳ್ಳಬೇಕಾಯಿತು. ಸಾರ್ವಜನಿಕ ಹಿತ ದೃಷ್ಟಿಯಿಂದ ಮತ್ತು ನಮ್ಮ ವ್ಯಾಪಾರ ಕುದುರಿ ಈ ಸಾಹಸ ಜಯಪ್ರದವಾಗಲೆಂಬ ಉದ್ದೇಶದಿಂದ ಸಾಕಷ್ಟು ಕರಪತ್ರಗಳನ್ನು ಮುದ್ರಿಸಿ (ಆ ದಿನಗಳಂದು ಮಡಿಕೇರಿಯಿಂದ ಪ್ರಕಟವಾಗುತ್ತಿದ್ದ ದೈನಿಕ ಯಾವುದೂ ಇರಲಿಲ್ಲ) ನಮ್ಮ ವ್ಯಾಪಾರ ದರಗಳನ್ನೂ ನಿಯಮಗಳನ್ನೂ ವಿವರಿಸಿ ಊರಿಡೀ ಹಂಚಿದೆವು. ಮಾದರಿ ನೋಡಿ:

- ಪ್ರತಿಯೊಂದು ಬರೆಯುವ ಪುಸ್ತಕದಲ್ಲಿಯೂ ರಟ್ಟಿನ ಮೇಲೆ ಮುದ್ರಿತವಾಗಿರುವಷ್ಟು ಪುಟಗಳು, ರಟ್ಟಿನ ಹೊರತಾಗಿ, ಇರುವುವು.
- ಪುಟದ ವಿಸ್ತಾರ ಸ್ಥಳೀಯ ಮಾರುಕಟ್ಟೆಯ ಇತರ ಪುಸ್ತಕಗಳ ಪುಟ ವಿಸ್ತಾರಕ್ಕಿಂತಲು ದೊಡ್ಡದು.
- ಅತ್ಯಂತ ಉತ್ಕೃಷ್ಟವಾದ ಕಾಡೆಮ್ಮೆ ಛಾಪಿನ ಕಾಗದದಿಂದ ಈ ಪುಸ್ತಕಗಳನ್ನು ತಯಾರಿಸಿದೆ.
- ಹಾಗಿದ್ದರೂ ಇವುಗಳ ಮಾರಾಟ ಬೆಲೆ ಮಂಗಳೂರು ನಗರದ ಪೈಪೋಟಿ ಮಾರುಕಟ್ಟೆಯಲ್ಲಿ ಪ್ರಚಲಿತವಾಗಿರುವ ಬೆಲೆಯೇ ಆಗಿದೆ.
- ಇತರ ಲೇಖನ ಸಾಮಗ್ರಿಗಳಿಗೂ ಈ ತತ್ತ್ವ ಅನ್ವಯವಾಗುತ್ತದೆ. ಮುದ್ರಿತ ಪುಸ್ತಕಗಳ ಬೆಲೆಗಳು ಅವುಗಳ ಮೇಲೆ ನಮೂದಿತವಾಗಿವೆ. ಆ ಬೆಲೆಗಳಿಗೇ ಮಾರುವೆವು.

ನಿಮ್ಮ ಕಷ್ಟಾರ್ಜಿತ ಹಣಕ್ಕೆ ಉತ್ಕೃಷ್ಟ ಮಾಲು ಮತ್ತು
ವಿನಯಪೂರ್ವಕ ಕ್ಷಿಪ್ರ ಸೇವೆ ದೊರೆಯಬೇಕಾದರೆ
ಬನ್ನಿ ಬನ್ನಿ ಬನ್ನಿ ಓ ಬನ್ನಿ
ಮಡಿಕೇರಿಯ ಗವರ್ನ್‌ಮೆಂಟ್ ಕಾಲೇಜ್
ಕೋ ಆಪರೇಟಿವ್ ಸ್ಟೋರ್ಸ್ ಲಿಮಿಟೆಡ್ ಸಂಸ್ಥೆಗೆ!
ಸಹಕಾರ ವ್ಯಾಪಾರೋದ್ಯಮದ ಮಹೋನ್ನತ ನಿದರ್ಶನಕ್ಕೆ!

ಸಂಘದ ಆರಂಭದಿಂದಲೂ ನಾವೊಂದು ಸ್ಪಷ್ಟ ನಿಲವನ್ನು ತಳೆದಿದ್ದೆವು: ನಮ್ಮ ಕೆಲಸದ ವಿಚಾರ ಸ್ಪಷ್ಟವಾಗಿ ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಎಗೆ ನಿವೇದನೆ ಮಾಡಿಕೊಳ್ಳತಕ್ಕದ್ದು. ಯಾವ ಗಿರಾಕಿಯೂ ನಮಗೆ ಕಿರಿಯನಲ್ಲ, ಯಾವ ವ್ಯಾಪಾರವೂ ನಮ್ಮ ಅಳವಿಗೆ ಮೀರಿದ್ದಲ್ಲ. ಮಾರಾಟ ವಸ್ತು ಸೂಜಿ ಆಗಿರಲಿ ಉದ್ಗ್ರಂಥವೇ ಆಗಿರಲಿ, ಬಿಲ್ ಬರೆದೇ ಅದನ್ನು ವಿಕ್ರಯಿಸತಕ್ಕದ್ದು. ವ್ಯಾಪಾರ ಹಾಗೂ ಸೇವಾವಿಚಾರಗಳಲ್ಲಿ ಸದಾ ವಿವೃತ ಮನಸ್ಕರಾಗಿರತಕ್ಕದ್ದು (open minded). ಮಡಿಕೇರಿಯ ಮಾರುಕಟ್ಟೆಯ ವಿಚಾರ ಚಕಾರವನ್ನೂ ಎತ್ತತಕ್ಕದ್ದಲ್ಲ. ನಮ್ಮ ವ್ಯಾಪಾರದ ಸರ್ವೋತ್ಕೃಷ್ಟತೆ ಒಂದೇ ನಮಗೆ ಜಯದೆಡೆಗೆ ರಹದಾರಿ ಆಗತಕ್ಕದ್ದು.

ನಮ್ಮ ಕಾರ್ಯವಿಧಾನ, ಪ್ರಚಾರ ವೈಖರಿ (ಎಲ್ಲ ಅಧ್ಯಾಪಕರೂ ವಿದ್ಯಾರ್ಥಿಗಳೂ ನಮ್ಮ ರಾಯಭಾರಿಗಳಾಗಿದ್ದರಷ್ಟೆ) ಮೇಲಾಗಿ ಕಾಲೇಜಿನ ಹಿರಿ ಹೆಸರು ಇವು ನಮಗೆ ನಾವೆಂದೂ ನಿರೀಕ್ಷಿಸದಿದ್ದಂಥ ವ್ಯಾಪಾರವನ್ನು ತಂದುಕೊಟ್ಟವು. ಮೊದಲೇ ಮಡಿಕೇರಿಯದು ಒಂದು ಸಂವೃತ ಮಾರುಕಟ್ಟೆ (closed market). ಅಂಥಲ್ಲಿ ಈ ವಿವೃತ ವ್ಯವಹಾರ ಆ ದಿನಗಳಲ್ಲಿ ಪವಾಡವಾಗಿ ಕಂಡಿದ್ದರೆ ಆಶ್ಚರ್ಯ ಏನೂ ಇರಲಿಲ್ಲ. ಶಾಲೆಯ ಎಳೆ ಮಿಡಿಗಳು ಮತ್ತು ಅವರ ಪಾಲಕರು ಸಾಲು ಹಿಡಿದು ಮಳೆ ಹೊಡೆತ ಲೆಕ್ಕಿಸದೆ ಗಾಳಿಬೀಡಿನ ಗುಡ್ಡ ಏರಿಬಂದು ನಮ್ಮ ಅಂಗಡಿಗೆ ಮುತ್ತಿಗೆ ಹಾಕಿದರು. ಬೊಮ್ಮನಹಳ್ಳಿಯ ಕಿಂದರಿ ಜೋಗಿಯ ಬೆನ್ನು ಹಿಡಿದು ಸಾಗಿದ ಅಣುಗರ ಹೊನಲು ಪ್ರಾಯಶಃ ಹೀಗಿದ್ದಿರಬಹುದು. ಕಾಲೇಜಿನ ಬೇಸಗೆ ರಜೆ ಇನ್ನೂ ಮುಗಿದಿರಲಿಲ್ಲವಾಗಿ ನಾವು ಹಗಲಿಡೀ ಯಾವುದೇ ಬಗೆಯ ವಿಶ್ರಾಂತಿಗೆ ಅವಕಾಶ ಇರದಂತೆ ತಂಡಗಳಲ್ಲಿ ದುಡಿದು ಈ ಮಹಾಪೂರವನ್ನು ನಿಭಾಯಿಸಿದೆವು. ನಮಗಿದು ಹೊಸ ಸಾಹಸ, ಆಟ; ನಮ್ಮ

ಹೊಟ್ಟೆಪಾಡಿಗೆ ಸುತರಾಂ ಅನ್ವಯವಾಗದ ವ್ಯವಹಾರ. ಆದರೆ ಪೇಟೆ ಅಂಗಡಿಗಳವರಿಗೋ? ಅವರ ಅಳಿವು ಉಳಿವುಗಳ ಪ್ರಶ್ನೆ ಇದಾಗಿತ್ತು. ಅವರು ಲೇಖನ ಸಾಮಗ್ರಿಗಳ ಬೆಲೆಗಳನ್ನು ಇಳಿಸಿದ್ದು ನಮ್ಮ ಅಸ್ತಿತ್ವವನ್ನು ಪರೋಕ್ಷವಾಗಿ ಒಪ್ಪಿಕೊಂಡದ್ದಕ್ಕೆ ಪ್ರತ್ಯಕ್ಷ ನಿದರ್ಶನ. ಆದರೆ ಕಾಲೇಜ್ ಸೊಸೈಟಿಯ (ಜನರ ಬಾಯಲ್ಲಿ ಬಂದದ್ದು ಮತ್ತು ಉಳಿದದ್ದು ಈ ಹೆಸರು) ಮಾಲುಗಳ ಗುಣಮಟ್ಟ ಇವುಗಳಿಗೆ ಇರಲಿಲ್ಲ. ಮೇಲಾಗಿ ನಮ್ಮ ಗ್ರಾಹಕ ಸೇವೆ ಜನರಿಗೆ ಒಂದು ನೂತನಾನುಭವೇ ಆಗಿತ್ತು. ಸರ್ವರಿಗೂ ಸದಾ ನಗುಮೊಗದ ಸೇವೆ, "ಗುಂಡು ಪಿನ್ನಿನಿಂದ ತೊಡಗಿ ಪರ್ವತದವರೆಗೆ ಯಾವುದಕ್ಕೂ ಎಲ್ಲದಕ್ಕೂ ಕೇಳಿ ಸದಾ ಕಾಲೇಜ್ ಸೊಸೈಟಿಯನ್ನು" ಎನ್ನುವ ಘೋಷಣೆ – ಇವುಗಳಿಂದ ನಮ್ಮೂರ ಮುಗ್ಧ ಜನತೆ ಆಕರ್ಷಿತವಾದದ್ದು ಸಹಜವೇ.

ಸರ್ವಸಿದ್ಧರಾಗಿ ಸರ್ವಾಂಗಭೂಷಿತರಾಗಿ ನವ ಕಾಲೇಜ್‌ವರ್ಷ ಪ್ರಾರಂಭವನ್ನು ಸ್ವಾಗತಿಸಿದೆವು. ಕಾವೇರಿಯಲ್ಲಿ ಹೊನಲೇರಿತು. ಸಾಮೂಕಳದಲ್ಲಿ ಕಾವೇರಿತು. ಪೇಟೆ ವ್ಯಾಪಾರಿಗಳು ಹೊಸ ಪಟ್ಟು ಹೊಡೆದರು. ಇದರ ಕುಟ್ಟು ಪೆಟ್ಟು ನಮ್ಮ ಆಯಕಟ್ಟು ಪ್ರದೇಶಕ್ಕೆ ಬಿರುಸಾಗಿಯೇ ತಟ್ಟಿತು. ಕಾಲೇಜ್ ಹಾಗೂ ಉಪಪಠ್ಯ ಪುಸ್ತಕ ಎಲ್ಲವುಗಳ ಮುದ್ರಿತ ಬೆಲೆಗಳ ಮೇಲೆ ರೂಪಾಯಿಗೆ ಒಂದಾಣೆ ಸೋಡಿ ಬಿಡುವುದಾಗಿ ಅವರು ಘೋಷಿಸಿದರು. ನಾಲ್ಕು ರೂಪಾಯಿ ಬೆಲೆಯ ಪುಸ್ತಕವನ್ನು ನಾಲ್ಕೂವರೆಗೆ ಮಾರುತ್ತಿದ್ದವರು ಈಗ ಮೂರೂಮುಕ್ಕಾಲಕ್ಕೆ ಕೊಡಲು ಸಿದ್ಧರಾದದ್ದು ವಿದ್ಯಾರ್ಥಿಗಳ ವಿಚಾರದಲ್ಲಿ ಅವರಿಗೆ ಧಿಡೀರನೆ ಉಗಮಿಸಿದ ಮರುಕದ ದ್ಯೋತಕ ಖಂಡಿತ ಅಲ್ಲ ಎಂಬುದು ನಮಗೆ ನಿಚ್ಚಳವಾಗಿದ್ದರೂ ವಿದ್ಯಾರ್ಥಿಗಳಿಗೆ ಇದನ್ನು ಮನವರಿಕೆ ಮಾಡುವುದು ಹೇಗೆ? ನಗದು ವ್ಯಾಪಾರದ ನಿಷ್ಠುರ ವ್ಯವಹಾರ ಪ್ರಪಂಚದಲ್ಲಿ ನೈತಿಕ ಕೋಮಲತೆಗೆ ಎಡೆ ಎಲ್ಲಿದೆ? ಯಾವ ಕಾಲೇಜ್ ವಿದ್ಯಾರ್ಥಿಗಳ ಸಾರ್ವಕಾಲಿಕ ಹಿತವೊಂದನ್ನೇ ಲಕ್ಷ್ಯದಲ್ಲಿಟ್ಟುಕೊಂಡು ಈ ವಿದ್ಯಾರ್ಥಿ ಸಂಘವನ್ನು ಆರಂಭಿಸಲಾಗಿತ್ತೋ ಸ್ವತಃ ಆ ವಿದ್ಯಾರ್ಥಿಗಳಿಗೇ ಪಠ್ಯ ಪುಸ್ತಕಗಳ ವಿಚಾರದಲ್ಲಿ ಮಾತ್ರ ಇದರ ಸೇವೆ ಬೇಕಾಗಿರಲಿಲ್ಲ ಎಂಬ ನಗ್ನ ಸತ್ಯ ನಮಗೆ ಪ್ರತ್ಯಕ್ಷವಾದಾಗ ಸಂತೋಷಿಸುವ ಸ್ಥಿತಿಯಲ್ಲಿ ನಾವಿರಲಿಲ್ಲ. ಪಠ್ಯಪುಸ್ತಕಗಳ ಮತ್ತು ಅವುಗಳೊಂದಿಗೆ ಇತರಾವಶ್ಯಕತೆಗಳ ವ್ಯಾಪಾರದ ಹೊನಲು ಪೇಟೆಗೆ ಹರಿಯಿತು. ನಾವೂ ಸೋಡಿ ಬಿಡಬಹುದಿತ್ತು. ಆದರೆ ನಮಗೆ ಇದೊಂದು ಗೌರವದ ಪ್ರಶ್ನೆ ಎನಿಸಿತು: ಪೇಟೆಯ ಅಸ್ತಿತ್ವವನ್ನು ನಾವು ಒಪ್ಪಬೇಕೇ? ಮೊದಲೇ ಮುದ್ರಿತ ಬೆಲೆ ತೆತ್ತವರಿಗೆ ನಮ್ಮ ನೈತಿಕ ಜವಾಬುದಾರಿಕೆ ಏನು? ಪೇಟೆಯೊಂದಿಗೆ ಪೈಪೋಟಿಗೆ ಇಳಿಯಬೇಕೇ? ಸಲ್ಲದು. ಮುದ್ರಿತ ಬೆಲೆಗಳಿಗೆ ಮಾತ್ರ ಪುಸ್ತಕಗಳನ್ನು ಮಾರುವೆವೆಂಬ ನಮ್ಮ ನಿಲವನ್ನು ನಾವು ತ್ಯಜಿಸಲು ಇಷ್ಟಪಡಲಿಲ್ಲ. ವಿದ್ಯಾರ್ಥಿಗಳಿಗೆ ಈ ವಿಷಯವನ್ನು ಸ್ಪಷ್ಟಪಡಿಸಿದ್ದಾಯಿತು. ತರಗತಿಗಳಲ್ಲಿ ಅಧ್ಯಾಪಕರ ಮೂಲಕ ಬೋಧಿಸಿದ್ದಾಯಿತು. ಆದರೆ ಮೊತ್ತದಲ್ಲಿ ಫಲ ಮಾತ್ರ ಸಿದ್ಧಿಸಲಿಲ್ಲ. ಸಾವಿರಾರು ರೂಪಾಯಿ ಬೆಲೆಯ ಪುಸ್ತಕಗಳು ನಾವು ಗಳಿಸಿದ ಹೊಸ ಅನುಭವದ ವಿಫಲ ಪ್ರತೀಕಗಳಾಗಿ ಅಟ್ಟಳಿಗೆಗಳಿಂದ ನಮ್ಮನ್ನು ತಿವಿದು ದಿಟ್ಟಿಸುತ್ತಿದ್ದುವು. ಮುಂದಿನ ವರ್ಷ ಅವುಗಳಿಗೆ ಬೇಡಿಕೆ ಒದಗುವುದು ತೀರ ಅಸಂಭಾವ್ಯ. ಬೇರೇನೂ ದಾರಿ ತೋರದೆ ನೇರ ಪ್ರಕಾಶಕರಿಗೆ ನಮ್ಮ ಪಾಡನ್ನು ತೋಡಿಕೊಳ್ಳುವ ಕಾಗದಗಳನ್ನು ಬರೆದೆವು. ಅವರಿಂದ ಬಂದ ಮಾರೋಲೆಗಳು ಸಂಜೀವಿನಿಗಳಾಗಿ ನಮಗೆ ಚೇತನ ನೀಡಿದುವು. ಮಾರಾಟವಾಗದ ಪುಸ್ತಕಗಳನ್ನು ನಮ್ಮ ಖರ್ಚಿನಲ್ಲಿ ಹಿಂತಿರುಗಿಸಲು ಅವರು ಸೂಚಿಸಿದ್ದರು.

ಮಳೆಗಾಲದ ಕಾವೇರಿಯ ಗರ್ಜನೆ ಕ್ರಮೇಣ ತಗ್ಗಿತು. ದಂಡೆ ಮೀರಿದ ಉತ್ಸಾಹದಿಂದ ಪ್ರವಹಿಸಿದ ಜೀವವಾಹಿನಿ ಈಗ ಪಾತಳಿಗೆ ಸೀಮಿತವಾಗಿ ಸಾಂಪ್ರದಾಯಿಕ ರೀತ್ಯ ಹರಿಯುತ್ತಿತ್ತು. ನಮ್ಮ ವ್ಯಾಪಾರವೂ ಹಾಗೆ. ಇಪ್ಪತ್ತೈದು ಸಾವಿರ ರೂಪಾಯಿಗಳ ವ್ಯಾಪಾರವನ್ನು ಆ ನಾಲ್ಕೈದು ತಿಂಗಳುಗಳಲ್ಲಿ ಸಾಧಿಸಿದ್ದು ನಾವು ನಂಬಲಾಗದ ದಿಟವಾಗಿತ್ತು. ವ್ಯಾಪಾರದ ಅಮಲು ಇಳಿಯುತ್ತಿದ್ದಂತೆ ನಮಗೊಂದು ಜಾಪಾಳ ಮಾತ್ರೆ ಸೇವನೆಯ ಅನುಭವ ನೀಡುವ ಪತ್ರ ಮದ್ರಾಸಿನಿಂದ ಬಂತು. ಶಾಯಿ ತಯಾರಕ ಸಂಸ್ಥೆಯೊಂದು ನೋಟೀಸ್ ಜಾರಿ ಮಾಡಿತ್ತು: "ನೀವು ನಮ್ಮ ಪ್ರಪಂಚ ವಿಖ್ಯಾತ ಪೈಲಟ್ ಶಾಯಿಯನ್ನು ನಾವು ನಿಗದಿ ಮಾಡಿರುವ ಮಾರಾಟ ಬೆಲೆಗಿಂತ ಕಡಿಮೆ ಬೆಲೆಗೆ ಮಾರುತ್ತಿದ್ದೀರೆಂದು ತಿಳಿದಿದ್ದೇನೆ. ಇದು ತಪ್ಪು. ಇದರಿಂದ ನಮ್ಮ ಸಾರ್ವತ್ರಿಕ ಮಾರುಕಟ್ಟೆ ವ್ಯವಹಾರಕ್ಕೆ ಅಪಾರ ಹಾನಿ ಒದಗಿದೆ. ಒಡನೆ ನೀವು ಈ ಅವ್ಯವಹಾರವನ್ನು ನಿಲ್ಲಿಸಿ ಹಾಗೆಂದು ನಮಗೆ ಬರೆದು ದೃಢಪಡಿಸದಿದ್ದರೆ ನಿಮ್ಮ ಮೇಲೆ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾದೀತು" ಇದಿಷ್ಟು ಆ ಕಾಗದದ ಸಾರಾಂಶ.

ನಾವು ಎಸಗಿದ್ದ ಅಪರಾಧ ಏನು? ಶಾಯಿ ಕುಪ್ಪಿಗಳನ್ನು ನಮಗೆ ಶೇಕಡಾ ಆರೂಕಾಲು ಲಾಭ ಬರುವಂತೆ ಮಾರಿದ್ದು, ಈ ಮಾರಾಟ ಬೆಲೆ ಮುದ್ರಿತ ಬೆಲೆಗಿಂತ ನಾಲ್ಕಾಣೆ ಕಡಿಮೆ ಆದದ್ದು, ಅದರಿಂದ ಪೇಟೆಯ ಪರದರಿಗೆ ಪರದಾಟ ಒದಗಿದ್ದು. ವಾಣಿಜ್ಯ ಪ್ರಪಂಚದ ನೀತಿ ನಿಯತ್ತು ಕಾನೂನು ವಹಿವಾಟು ಏನೂ ತಿಳಿಯದಿದ್ದ ನಾನು ವ್ಯವಹಾರ ಪ್ರಜ್ಞೆ

ವಿಧಿಸಿದ ಪ್ರಕಾರ ಒಡನೆ ಉತ್ತರ ಬರೆದೆ. "ನಾವು ಅಂಗಡಿಯಲ್ಲಿ ಮಾಲುಗಳನ್ನು ಯಾವ ದರದಲ್ಲಿ ಮಾರಬೇಕು ಎನ್ನುವುದು ನಮ್ಮ ನಿರ್ಧಾರಕ್ಕೆ ಸೇರಿದ್ದು. ಇಲ್ಲಿ ನಿಮ್ಮ ಹಸ್ತಕ್ಷೇಪ ಅನಾವಶ್ಯಕ."

ಇದಕ್ಕೆ ಅವರಿಂದ ಬಂದ ಮಾರೋಲೆಯ ಶ್ರುತಿ ಸ್ವಲ್ಪ ತಗ್ಗಿತ್ತು. "ನೀವಂದಿರುವುದು ನಿಜ, ಆದರೂ ಸ್ವಲ್ಪ ತಣ್ಣಗೆ ಯೋಚಿಸಿ ನೋಡಿ. ಆಗ ನಾವಂದಿರುವುದು ಸತ್ಯ ಎಂದು ನಿಮಗೆ ಅರಿವಾಗದಿರದು. ಅಲ್ಲದೇ ನಾವು ನಿಗದಿಸಿರುವ ಮಾರಾಟ ಬೆಲೆಯ ಪ್ರಕಾರ ಮಾರುವುದರಿಂದ ನಿಮಗೆ ದೊರೆವ ಲಾಭವೂ ಅಧಿಕವಾಗುವುದಷ್ಟೆ?"

ಇದಕ್ಕೆ ನಾನು ಬರೆದ ಉತ್ತರ ಈ ಅವ್ಯವಹಾರಕ್ಕೆ ಪೂರ್ಣ ವಿರಾಮ ಹಾಕಿತು. "ಮಡಿಕೇರಿಯ ಮಂಜು ಮುಸುಕಿರುವ ಬೆಟ್ಟದ ಕೊಡಿಯ ಮೇಲಿರುವ ನಾವಲ್ಲ ತಣ್ಣಗೆ ಯೋಚಿಸಬೇಕಾದವರು, ಬದಲು, ಮದ್ರಾಸಿನ ಕಲುಷಿತ ಕಾವು ಪರಿಸರದಲ್ಲಿರುವ ನೀವು. ಈ ವಿಚಾರದಲ್ಲಿ ಇನ್ನು ಪತ್ರವ್ಯವಹಾರ ಇಲ್ಲ."

ಮುಂದೆ ಕೆಲವು ತಿಂಗಳ ಬಳಿಕ ಅದೇ ಕಂಪೆನಿಯಿಂದ ನಮಗೊಂದು ಕಾಗದ ಬಂತು. ಸುಮಾರು ನಾಲ್ಕುನೂರು ರೂಪಾಯಿ ನಿವ್ವಳ ಮೌಲ್ಯದ ಶಾಯಿ ಕುಪ್ಪಿಗಳ ಭಾಂಗಿಯನ್ನು ಅವರು ಮಡಿಕೇರಿ ಪೇಟೆಯ ಅಂಗಡಿಯೊಂದಕ್ಕೆ ರವಾನಿಸಿದ್ದರಂತೆ. ಆದರೆ ಆ ಅಂಗಡಿಯವರು ಅದರ ದಾಖಲೆ ಪತ್ರಗಳನ್ನು ಬ್ಯಾಂಕಿಗೆ ಹಣ ನೀಡಿ ಪಡೆದುಕೊಳ್ಳದ್ದರಿಂದ ತಮಗೆ ತುಂಬ ತೊಂದರೆ ಆಗಿದೆ. ನಾವು ನೇರವಾಗಿ (ಅಂದರೆ ಹಣ ಪಾವತಿ ಮಾಡದೆ) ಈ ದಾಖಲೆಗಳನ್ನು ಬ್ಯಾಂಕಿನಿಂದ ತೆಗೆದುಕೊಂಡು ಭಾಂಗಿಯನ್ನು ಬಿಡಿಸಿ ಶಾಯಿಕುಪ್ಪಿಗಳು ಮಾರಾಟವಾದ ಬಳಿಕ ಮೊಬಲಗನ್ನು ತಮಗೆ ಪಾವತಿಸಿದರೆ ಮಹದುಪಕಾರವಾಗುತ್ತದೆ. ಈ ಸೌಕರ್ಯವನ್ನು ನಾವು ಅವರಿಗೆ ಒದಗಿಸಿಕೊಟ್ಟೆವು. ಹೀಗೆ ಜಗಳದಿಂದ ಆರಂಭವಾದ ನಮ್ಮ ಸಂಬಂಧ ಮುಂದೆ ಚಿರಕಾಲ ಸ್ನೇಹ ವಿಶ್ವಾಸದ ಬೆಸುಗೆಯಾಗಿ ಉಳಿಯಿತು. ನೀತಿಯ ನೆಲಗಟ್ಟಿನಲ್ಲಿ ಪ್ರೀತಿ ಸಂವರ್ಧಿಸಿತು.

ವ್ಯಾಪಾರದ ಬಿರುಸು ವೇಳಾಪಟ್ಟಿಗೆ ಹೊಂದಿ ಹೋದ ನಮಗೆ ದಸರಾನಂತರದ ದಿವಸಗಳು ಭಾರವಾಗತೊಡಗಿದ್ದುವು. ಈಗ ಗಿರಾಕಿಗಳಿಗೆ ಅನಾವಶ್ಯಕವಾದ ಸರಕುಗಳಿಂದ ಏನು ವಹಿವಾಟು ತಾನೇ ಕುದುರೀತು? ಮೇ ತನಕ ಮಂದ್ರ ಸ್ಥಾಯಿಯ ವಿಳಂಬ ಗತಿಯೇ ನಮ್ಮ ಪಾಡು ಎಂದೆನ್ನಿಸಿದಾಗ ಬಿಡಿಚಲು ಜಾಸ್ತಿ ಬಡಿಯಿತು. ಆದರೆ ವ್ಯಾಪಾರದಲ್ಲಿ ಮುಂದಿನ ತಿರುಗಾಸು ಅದೆಂಥ ವಿಸ್ಮಯವನ್ನೋ ಆಘಾತವನ್ನೋ ಕಾದಿರಿಸಿದೆ ಎಂಬುದು ಊಹಾತೀತ. ಅಕ್ಟೋಬರ್ ತಿಂಗಳ ತರುಣದಲ್ಲಿ ಕಾಲೇಜಿನ ಇಬ್ಬರು ಅಧ್ಯಾಪಿಕೆಯರು ನಮ್ಮ ಅಂಗಡಿಗೆ ಬಂದರು. ತಾವು ತಂದಿದ್ದ ಮಾದರಿ ತುಕ್ಕುರಹಿತ ಉಕ್ಕು (ಸ್ಟೇನ್‌ಲೆಸ್ ಸ್ಟೀಲ್) ಊಟದ ಗಂಗಳ ತೋರಿಸಿ ಅಂಥ ಎರಡು ಗಂಗಳಗಳನ್ನು ತರಿಸಿಕೊಡುವುದು ಸಾಧ್ಯವಾದೀತೇ ಎಂದು ಕೋರಿದರು. ನೇರವಾಗಿ ಯಾವ ಗಿರಾಕಿಗೂ ಇಲ್ಲ ಎನ್ನಬಾರದು. ಸಾಧ್ಯವಾಗುವಷ್ಟೂ ಸಹಕಾರ ನೀಡಬೇಕು ಎಂಬ ನಮ್ಮ ಎಂದಿನ ಧೋರಣೆಯ ಅನುಸಾರ ಈ ಹೊಸ ಸೇವೆಗೆ ಇಳಿದೆವು. ಮಂಗಳೂರಿನ ಪರಿಚಿತ ಸಗಟು ಅಂಗಡಿಯೊಂದರಿಂದ ಆರು ಗಂಗಳಗಳನ್ನು ತರಿಸಿ ಅಸಲಿನ ಮೇಲೆ ರೂಪಾಯಿಗೆ ಒಂದಾಣೆ ಲಾಭವಿರಿಸಿ ಆ ಅಧ್ಯಾಪಿಕೆಯರಿಗೆ ಎರಡನ್ನು ಮಾರಿದೆವು. "ಇಷ್ಟು ಕಡಿಮೆ ಬೆಲೆ! ಇದು ಸಾಧ್ಯವೇ? ನೀವೇನೂ ನಷ್ಟ ಮಾಡಿಕೊಂಡಿಲ್ಲವಷ್ಟೆ" ಎಂಬ ಪ್ರಾಮಾಣಿಕ ಸಂದೇಹವನ್ನು ಅವರು ಎತ್ತಿದರು. ಇನ್‌ವಾಯಿಸನ್ನೇ ಅವರಿಗೆ ಕೊಟ್ಟು ನೋಡ ಹೇಳಿದೆ. ಅವರು ಆ ಮೊದಲು ಮಡಿಕೇರಿಯಲ್ಲೇ ಕೊಂಡಿದ್ದ ಹದಿನೈದು ರೂಪಾಯಿ ಬೆಲೆಯ ತಟ್ಟೆಗೆ ನಾವು ವಿಧಿಸಿದ ಬೆಲೆ ಕೇವಲ ಐದು ರೂಪಾಯಿ! ಅಲ್ಲದೇ ನಮಗೆ ಲಾಭ ಕೂಡಾ ಉಂಟು! ಅಷ್ಟೂ ತಟ್ಟೆಗಳನ್ನು ಆಗಲೇ ಅವರು ಬಿಕರಿ ಮಾಡಿದರು. ಈ ಸುದ್ದಿ ಬೆಳಕಿನ ವೇಗಕ್ಕಿಂತಲೂ ರಭಸದಿಂದ ಊರಿನಲ್ಲಿ ಹಬ್ಬಿತು. ಮುಂದಿನ ದಿನಗಳಲ್ಲಿ ಸಹೋದ್ಯೋಗಿಗಳೂ ಸಾರ್ವಜನಿಕರೂ ಬಹುಸಂಖ್ಯೆಯಲ್ಲಿ ನಮ್ಮಲ್ಲಿಗೆ ಬಂದು ತುಕ್ಕುರಹಿತ ಉಕ್ಕು ಪಾತ್ರೆಗಳಿಗೆ ಬೇಡಿಕೆ ಸಲ್ಲಿಸಿದರು. ನನಗೆ stainless person ಬಿರುದನ್ನೂ ಪ್ರದಾನಿಸಿದರು! ಈ ಪ್ರಕಾರ ಆರಂಭವಾದ ನಮ್ಮ ಉಕ್ಕು ವಿಭಾಗ ಬಹು ವ್ಯಾಪಕವಾಗಿ ಬೆಳೆದು ನಮ್ಮನ್ನು ಹೊಸ ಲೋಕಕ್ಕೇ ಕೊಂಡೊಯ್ದಿತು. ಮುಂಬಯಿಯ ಪ್ರಮುಖ ತಯಾರಕ ಕಂಪೆನಿಯೊಂದರೊಡನೆ ನಾವು ತುಕ್ಕುರಹಿತ ಉಕ್ಕು ಪಾತ್ರೆಗಳ ಸಗಟು ವ್ಯಾಪಾರ ತೊಡಗಿದೆವು. ಆದರೆ ಈ ಕಂಪೆನಿಯ ವ್ಯವಹಾರ ದಗಲ್ಬಾಜಿಯದು: ತೂಕದಲ್ಲಿ ಕಡಿಮೆ, ಸಂಖ್ಯೆಯಲ್ಲಿ ಕೊರತೆ, ಕೊನೆಗೆ ತೂತಾದ ಅಥವಾ ನಗ್ಗಿಹೋದ ಪಾತ್ರೆಗಳ ಸರಬರಾಜು ಕೂಡ. ಇವನ್ನೆಲ್ಲ ಯಾದಿ ಮಾಡಿ ತಿಳಿಸಿದರೆ ಒಂದೋ ಉತ್ತರವೇ ಇಲ್ಲ. ಅಥವಾ "ನಮ್ಮ ಗೋದಾಮು ಬಿಡುವ ತನಕ ಎಲ್ಲವೂ ಸರಿಯಾಗಿಯೇ ಇತ್ತು. ಆದ್ದರಿಂದ ಈ ವಿಚಾರದಲ್ಲಿ ನಮ್ಮ ಹೊಣೆಗಾರಿಕೆ ಏನೂ ಇಲ್ಲ" ಎನ್ನುವ ವಿಶ್ವಾಮಿತ್ರ ವಿನ್ಯಾಸ. ಅನಿವಾರ್ಯವಾಗಿ ನಾವು ಒಂದು ತಪ್ಪು ಮಾಡಬೇಕಾಯಿತು. ಆ ಸಲ ಬಂದ ಅವರ ದಾಖಲೆ ಪತ್ರಗಳನ್ನು (ನಮ್ಮ

ಆದೇಶ ಪ್ರಕಾರವೇ ಅವು ಬಂದಿದ್ದರೂ) ತಿರಸ್ಕರಿಸಿದೆವು. ಒಡನೆ ಅವರಿಂದ ನಮಗೆ ತುರ್ತು ಕರೆ ಬಂತು. ಬೆದರಿಕೆಯ ಕಾಗದ ತಲಪಿತು. ನೀತಿಬೋಧೆ ಸುರಿಯಿತು. ಎಲ್ಲವಕ್ಕೂ ನಮ್ಮದು ಒಂದೇ ಪಲ್ಲವಿ: ಹಿಂದಿನ ನಮ್ಮ ಪ್ರಾಮಾಣಿಕ ಕೊರತೆ ಪಟ್ಟಿಗಳನ್ನು ಅವರು ಮನ್ನಿಸಿ ನಷ್ಟವನ್ನು ಭರ್ತಿ ಮಾಡಿದ ವಿನಾ ಈ ಭಾಂಗಿಯನ್ನು ನಾವು ಸ್ವೀಕರಿಸುವವರಲ್ಲ. ಆಶ್ವಾಸನೆ ಬಂತು, ಆದರೆ ಈಡೇರಿಕೆ ಹೇಗೆ? "ನಮ್ಮ ಮೇಲೆ ನಂಬಿಕೆ ಇಟ್ಟು ನೇರವಾಗಿ ಭಾಂಗಿಯನ್ನು ನಮಗೆ ಕೊಡಿ. ನಷ್ಟವನ್ನು ಹೊಂದಿಸಿ ಉಳಿದ ಮೊಬಲಗನ್ನು ನಿಮಗೆ ಒಡನೆ ಪಾವತಿಸುತ್ತೇವೆ" ಎಂದು ಹಾದಿ ತೋರಿಸಿದೆವು. ಅವರಿಗೆ ಒಪ್ಪದೆ ವಿಧಿ ಇರಲಿಲ್ಲ. ಆ ಭಾಂಗಿಯಲ್ಲೂ ಕೊರತೆ, ಕಳಪೆ, ವಂಚನೆ! ಮರಣೋತ್ತರ ಪರೀಕ್ಷೆಯನ್ನು ವಿಧಿಬದ್ಧವಾಗಿ ಮಾಡಿ ತುಕ್ಕು ಹಿಡಿದ ಮತ್ತು ತೂತಾದ ಪಾತ್ರೆಗಳನ್ನು ಭಾಂಗಿ ಮಾಡಿ, ನಿವ್ವಳ ಮೊತ್ತದ ಬ್ಯಾಂಕ್ ಡ್ರಾಫ್ಟ್ ಸಮೇತ ಅವರಿಗೆ ವರದಿ ಒಪ್ಪಿಸಿ "ಬದುಕಿದೆಯಾ ಬಡ ಜೀವವೇ" ಎಂದು ಕೈತೊಳೆದುಕೊಂಡೆವು.

ಇಷ್ಟಾಗುವಾಗ ೧೯೫೫ರ ಬೇಸಗೆ ರಜೆ ಶುರುವಾಯಿತು. ಆ ವರ್ಷದ ಮೇ ತಿಂಗಳಿನಲ್ಲಿ ಅಖಿಳ ಮಲೆನಾಡಿಗೆ (ಮಳೆನಾಡಿಗೆ ಕೂಡ) ಸಂಬಂಧಿಸಿದ ಭಾರೀ ವಸ್ತು ಪ್ರದರ್ಶನವೊಂದು ಮಡಿಕೇರಿಯಲ್ಲಿ ಏರ್ಪಡುವುದರಲ್ಲಿತ್ತು. ಕೊಡಗಿನ ಮಟ್ಟಿಗೆ ಇಂಥ ಒಂದು ಚಟುವಟಿಕೆ ಅದೇ ಮೊದಲಿನದು. ಮಂತ್ರಿಗಳು ವಿಶೇಷ ಮುತುವರ್ಜಿ ವಹಿಸಿ ಇದರ ಸಂಘಟನೆಗೆ ಬೇಕಾದ ಸಮಸ್ತ ಸವಲತ್ತುಗಳನ್ನೂ ಒದಗಿಸಿದ್ದರು. ಮಲೆನಾಡಿಗರು ಅಲ್ಲೇ ಆ ಕಡೆ, ಚಡಾವಿನ ಕೊನೆಯ ಆ ಮಗ್ಗುಲಲ್ಲೆ, ಸ್ವರ್ಗ ಧರೆಗಿಳಿದಿರುವುದನ್ನು ಇನ್ನೇನು ಈ ಪ್ರದರ್ಶನ ತೊಡಗುವ ವೇಳೆಗೆ ಕಾಣುವುದು ಖರೆ ಎಂದು ವಂದಿಮಾಗಧರು ಸ್ತುತಿಗೈದರು. ನಮ್ಮ ಸಂಘ ಈ ಪ್ರದರ್ಶನದಲ್ಲಿ ಒಂದು ಮಳಿಗೆ ಇಡಬೇಕೆಂಬ ಕೋರಿಕೆಗೆ (ಅಲ್ಲ, ಹುಕುಂ) ಘನ ಸರ್ಕಾರದ ವತಿಯಿಂದ ಬಂದಿತ್ತು. ಇದೇನೋ ಸರಿ. ಆದರೆ ಮಳೆಗಾಲದ ಆರಂಭದ ದಿನಗಳಂದು ಮಡಿಕೇರಿಯ ಮ್ಯಾನ್ಸ್ ಕಾಂಪೌಂಡಿನ ಎತ್ತರದ ಬಯಲಿನಲ್ಲಿ ನಾವು ಪುಸ್ತಕಾಲಯವನ್ನು ತೆರೆದುದಾದರೆ ಕೊಡಗಿನ ತೀವ್ರ ನಿಸರ್ಗಪ್ರೇಮಿ ಮಹಾಜನತೆಯಿಂದ ("ಪುಸ್ತಕವೆ? ಜಡ ಜಡ, ಹಸುರ ಹರವಿನಲಿ ತೊರೆಯ ಹರಿವಿನಲಿ ಕುಡುಮಲೆಗಳೋಟದಲಿ ಕಾಣು ನಿತ್ಯ ಸತ್ಯವನು, ಸುಡು ನಿನ್ನ ಪುಸ್ತಕವ" ಎಂಬುವುದಿವರ ಬಾಳ ಹಾಡು) ನಮಗೆ ಯಾವ ಪ್ರೋತ್ಸಾಹವೂ ದೊರೆಯದು; ಅಷ್ಟೇ ಅಲ್ಲ, ಮಾಲೇ ಹಾಳಾಗಿ ಹೋಗಿ "ಬಯಲು ಆಲಯವೆರಡೂ ನಿನ್ನೊಳಗೇ" ದಿಟ ಎಂಬುದು ದೃಢವಾದೀತು, ಅಷ್ಟೆ. ನಮ್ಮ ಶ್ರಮ ಪೂರ್ತಿ ವ್ಯರ್ಥವಾದೀತು ಎಂಬುದಾಗಿ ನನ್ನ ಪ್ರಾಮಾಣಿಕ ಅನ್ನಿಸಿಕೆಯನ್ನು ಪ್ರಾಂಶುಪಾಲರಿಗೆ ಅರಿಕೆ ಮಾಡಿದೆ. "ನಮ್ಮ ಅಂಗಡಿ ಇಡುವುದನ್ನಂತೂ ಒಪ್ಪಿ ಆಗಿದೆ. ಆದ್ದರಿಂದ ಈಗ ನೀವು ಮಾಡಬಹುದಾದ್ದು ಇಷ್ಟೇ – ಹಾಳಾಗದ ಮತ್ತು ಮಾರಾಟವಾಗಬಹುದಾದ ಸಾಮಗ್ರಿಗಳನ್ನು ಇಟ್ಟು ನೋಡಿ" ಎಂದು ಸೂಚಿಸಿದರು.

ಸಹಜವಾಗಿ ನಮ್ಮ ಒಲವು ಉಕ್ಕುಪಾತ್ರೆಗಳತ್ತ ಮಾಲಿತು. ಮಂಗಳೂರಿನ ಸಗಟು ವ್ಯಾಪಾರಿಗಳ ಮೂಲಕ ಮುಂಬಯಿಯ ಸುಪ್ರಸಿದ್ಧ ಪ್ರಾಮಾಣಿಕ ತಯಾರಕರೊಂದಿಗೆ ವ್ಯವಹರಿಸಿ ಉಕ್ಕು ಪಾತ್ರೆಗಳ ಭಾಂಗಿಗಳನ್ನು ತರಿಸಿದೆವು. ಹತ್ತು ಸಾವಿರ ರೂಪಾಯಿಗಳನ್ನು ಈ ಹೊಸ ಸಾಹಸದ ಮೇಲೆ ಹೂಡಿದೆವು. ಬೆಳ್ಳಿಯ ಬಿಳಿ ಬಣ್ಣದಿಂದ ಥಳಥಳಿಸಿ ಮಿರುಗುವ ನಾನಾ ನಮೂನೆಯ ಅಕ್ಷಯ ಪಾತ್ರೆಗಳ ಆ ಸಮುದಾಯ ನಮ್ಮ ಮಳಿಗೆಗೆ ವಿಶೇಷ ಮೆರುಗನ್ನು ನೀಡಿತು. ಇಂಥ ಮಳಿಗೆ ಬೇರೊಂದು ಅಲ್ಲಿರಲಿಲ್ಲ. ನಿಜಕ್ಕೂ ಇದೊಂದು ಧರೆಗಿಳಿದ ಗಂಧರ್ವ ಲೋಕವೇ ಸೈ. ಆದರೆ ಮಳಿಗೆಯ ವ್ಯವಸ್ಥಾಪನೆಯಲ್ಲಿ ನಮ್ಮ ಸ್ವಯಂ ಸೇವಕರಿಗೂ ನನಗೂ ಭಾರಿ ತೊಂದರೆಗಳು ಎದುರಾದುವು.

ಒಂದನೆಯದಾಗಿ, ನಮ್ಮ ಮಳಿಗೆಗೆ ಕದಗಳೇ ಇರಲಿಲ್ಲ (ಕಾಲ ಅಶೋಕಚಕ್ರದ್ದು, ಅಶೋಕನದಲ್ಲ; ಹೀಗಾಗಿ ರಾತ್ರಿ ನಾವೇನು ಮಾಡುವುದು?). ಎರಡನೆಯದಾಗಿ, ಜಡಿ ಮಳೆಯ ನೀರು ಕೆಸರು ರಾಡಿ ಇವುಗಳಿಂದಾಗಿ ಜಿಗಣೆ, ಕಪ್ಪೆ, ಗಂಗೆಹುಳು, ಅಲ್ಲದೇ ಮಳೆ ನಿಂತಾಗ ಮಳೆಹಾತೆಗಳ ದಂಡು. ಇವುಗಳ ಅವ್ಯಾಹತ ಆಕ್ರಮಣದಿಂದ ಪಾತ್ರೆಗಳು ಪಾರಾದರೂ ಅವುಗಳ ರಕ್ಷಕರಾದ ನಾವು ಪಾರಾಗುವುದೆಂತು? ಮೂರನೆಯದಾಗಿ, ದಟ್ಟಯಿಸುತ್ತಿದ್ದ ಜನತಿಮುಕಿನಲ್ಲಿ ತೆರೆದ ಅಂಗಡಿಯ ಆಕರ್ಷಕ ವಸ್ತುಗಳು ಶುಲ್ಕರಹಿತವಾಗಿ ಮಂಗಮಾಯವಾಗುವುದನ್ನು ನಿವಾರಿಸುವುದು ಹೇಗೆ? ಆದರೆ ಆ ಎರಡು ವಾರಗಳು ಹದಿನಾಲ್ಕು ವರ್ಷಗಳೇ ಆದದ್ದು ಬೇರೆಯೇ ಒಂದು ಕಾರಣಕ್ಕಾಗಿ – ಅದು ನಮ್ಮ ಮಾನ್ಯ ಸಹಕಾರ ಸಚಿವರಿಗೆ (ವಿದ್ಯಾಸಚಿವರೂ ಅವರೇ ಆಗಿದ್ದರು) ಆ ಮಳಿಗೆಯ ಮೇಲೆ ಬಿದ್ದ ವಕ್ರ ದೃಷ್ಟಿಯ ಪರಿಣಾಮವಾಗಿ. ಮೊದಲ ದಿನವೇ ಅವರು ಖುದ್ದು ನನಗೇ ಗದರಿದ್ದರು, "ಕಾಲೇಜಿನ ಸೊಸೈಟಿ ಉಕ್ಕು ವ್ಯಾಪಾರ ಮಾಡುವುದು ಸುತರಾಂ ಸಲ್ಲದು. ಅದೂ ನೀವು, ಅಧ್ಯಾಪಕರು, ಗೌರವಾನ್ವಿತರು, ಓರ್ವ ಹಲ್ಕಾ ವ್ಯಾಪಾರಿಯಂತೆ ಇಲ್ಲಿ ನಿಂತು ಹಲ್ಕಿರಿಯುವುದು ನನಗೇನೂ ಒಪ್ಪಿಗೆ ಇಲ್ಲ." ಅವರ ಮಾತಿನ ಸರಣಿ ನನಗೆ ಸರಿ ಎನ್ನಿಸಲಿಲ್ಲ. ಆದರೆ

ದೊರೆಯೊಡನೆ ಸದರ ಸಂದೀತೇ? ಆಗ ನನಗಿದ್ದ ವ್ಯಾವಹಾರಿಕ ವಿಮೋಚನೆ ಒಂದೇ – ಮಂತ್ರಿಗಳು ಆ ಕಡೆಗೆ ಪಾದಯಾತ್ರೆ ಬೆಳೆಸುತ್ತಿದ್ದ ಕ್ಲುಪ್ತ ವೇಳೆಗಳಲ್ಲಿ ಅತಿ ತುರ್ತು ಕಾರ್ಯನಿಮಿತ್ತ ಅಲ್ಲಿಂದ ದೂರ ತೆರಳಿ ಮರೆಯಾಗಿ ನಿಂತು "ತಾಬೆದಾರಿಕೆಯ ಮಹಿಮೆಯನಿಂದು ಕಂಡೆ" ಎಂಬುದಾಗಿ ತೋಡಿ ರಾಗದಲ್ಲಿ ಮನದುಮ್ಮಳವನ್ನು ಕೋಡಿ ಹರಿಸುತ್ತಿದ್ದೆ. ವ್ಯಾಪಾರವೇನೋ ಭರ್ಜರಿಯಾಗಿ ನಡೆದುಹೋಯ್ತು. ಆರ್ಥಿಕವಾಗಿ ನಮ್ಮ ಸಾಹಸ ಪೂರ್ಣ ಯಶಸ್ವಿಯಾಯಿತು. ಮಳಿಗೆ ಮುಚ್ಚಿ ಮನೆಗೆ (=ಕಾಲೇಜಿಗೆ) ಮರಳಿದ ಬಳಿಕ ಒಂದು ದಿನ ನಾನು ಮಂತ್ರಿ ಮಹಾಶಯರನ್ನು (ಕೆ. ಮಲ್ಲಪ್ಪ) ಕಾಣಲು ಹೋದೆ. ನನ್ನನ್ನು ಚಿಕ್ಕಂದಿನಿಂದಲೂ ಬಲ್ಲವರು ಅವರು; ನನ್ನ ವಿಚಾರ ಅಪಾರ ಅಭಿಮಾನವಿದ್ದುದರಿಂದಲೇ ಖುದ್ದು ಅವರೇ ನನ್ನನ್ನು ಮಡಿಕೇರಿ ಕಾಲೇಜಿಗೆ ಆಯ್ದಿದ್ದರು. ನಮ್ಮ ಸಂಘದ ವಿಷಯದಲ್ಲಿ ಅವರಿಗೆ ತುಂಬ ವಿಶ್ವಾಸವಿತ್ತು. ಆದ್ದರಿಂದ ಅವರ ಈ ಹೊಸ ನಿಲವಿನ ಅಂತರಾರ್ಥವನ್ನು ಅರಿಯಲೇಬೇಕು, ಅದಕ್ಕೆ ಪ್ರತ್ಯಕ್ಷ ಭೇಟಿ ಒಂದೇ ಸರಿಯಾದ ಕ್ರಮ ಎಂದು ಭಾವಿಸಿದೆ.

ಸಚಿವರು ನನ್ನನ್ನು, ನಾನು ನಿರೀಕ್ಷಿಸಿದಂತಲ್ಲದೇ, ತುಂಬ ಹಸನ್ಮುಖಿಗಳಾಗಿ ಎಂದಿನ ಆತ್ಮೀಯತೆಯಿಂದ ಬರಮಾಡಿಕೊಂಡು ತಾವಾಗಿಯೇ ಮಾತು ತೊಡಗಿದರು, "ಬಿಟ್ಟಿ ಕೆಲಸ ಮಾಡಿಯೂ ಬೈಸಿಕೊಳ್ಳಬೇಕಾಯಿತಲ್ಲಾ ಎಂಬ ನಿನ್ನ ಬೇಗುದಿ ನನಗೆ ತಿಳಿಯದ್ದಲ್ಲ. ಆದರೆ ಕಾಲೇಜು ಮಂದಿಗೆ ಪುಸ್ತಕ ಒದಗಿಸಬೇಕಾದ ನಿನ್ನ ಸಂಘ ಈಗ ಪೇಟೆ ವರ್ತಕರಿಗೆ ಸಿಂಹಸ್ವಪ್ನವಾಗಿದೆ. ಅವರೆಲ್ಲರೂ ಒಟ್ಟಾಗಿ ನನ್ನಲ್ಲಿಗೆ ಬಂದು ಈ ವಿಚಾರ ಮನವಿ ಒಪ್ಪಿಸಿದ್ದಾರೆ. ನಿನ್ನ ಸೇವೆ, ಉತ್ಸಾಹ ಸರಿ. ಆದರೆ ಮಿತಿ ಮೀರಿ ನೆಗೆತ ಬೇಡ."
"ಈಗ ನಾನೇನು ಮಾಡಬೇಕೆಂದು ತಮ್ಮ ಆಜ್ಞೆ?"
ಪುಸ್ತಕದ ಅಂಗಡಿಯಾಗಿ ಯಾವ ಗಾತ್ರಕ್ಕೂ ಸಂಘವನ್ನು ಬೆಳೆಸು. ಜನರಿಗೆ ಗ್ರಂಥಭಂಡಾರಗಳಿಗೆ ಒಳ್ಳೆಯ ಓದಿಗೆ ಬೇಕಾಗುವ ಪುಸ್ತಕಗಳನ್ನು ಒದಗಿಸು. ನಮ್ಮ ಜನ ವಿದ್ಯಾವಂತರೂ ಸುಸಂಸ್ಕೃತರೂ ಆಗಲು ಆವಶ್ಯವಾಗುವ ಸತ್ಸಾಹಿತ್ಯವನ್ನು ಪ್ರಚಾರ ಮಾಡು. ಕಾಲೇಜ್ ಸಂಘ ಇದನ್ನು ಮಾಡದಿದ್ದರೆ ಬೇರೆ ಇನ್ಯಾರು ತಾನೇ ಮಾಡಬೇಕು?"

ಅಲ್ಲಿಗೆ ನಮ್ಮ ಉಕ್ಕು ವಿಭಾಗ ಬರಖಾಸ್ತಾಯಿತು. ಓದಿಗೆ ಬೇಕಾಗುವ ಪುಸ್ತಕಗಳ ವಿಭಾಗವನ್ನು ತೆರೆವ ದಿಶೆಯಲ್ಲಿ ಕಾರ್ಯಮಗ್ನರಾದೆವು. ಇದನ್ನು ಮಳೆಗಾಲ ಕಳೆವ ತನಕ ಆರಂಭಿಸುವಂತಿರಲಿಲ್ಲ. ಗಿರಿಶಿಖರ ಮಹಾಪೂರ (ಮೇ–ಸೆಪ್ಟೆಂಬರ್ ಶ್ರಾಯ) ಮುಗಿದ ಬಳಿಕ ಗ್ರಂಥ ವಿಭಾಗವನ್ನು ಪರಿಮಿತ ಪ್ರಮಾಣದಲ್ಲಿ ತೆರೆದದ್ದಾಯಿತು. ಆದರೆ ಇತ್ತ ಕಡೆ ವಿದ್ಯಾರ್ಥಿಗಳಿಗಾಗಲೀ ಅಧ್ಯಾಪಕರಿಗಾಗಲೀ ಯಾವುದೇ ಕುತೂಹಲ ಮೊಳೆತದ್ದು ನನ್ನ ಅನುಭವಕ್ಕೆ ಬರಲಿಲ್ಲ. ಕಾಲೇಜಿನಲ್ಲಿ ಅತ್ಯುತ್ಕೃಷ್ಟ ಗ್ರಂಥಾಲಯವೂ ಗ್ರಂಥ ಸೇವೆಯೂ ಇದ್ದುವು. ಹೀಗಾಗಿ ಕಾಲೇಜಿಗರು ಯಾರೂ ಪುಸ್ತಕಗಳನ್ನು ಖರೀದಿಸಿ ಓದುವ ದುಸ್ಸಾಹಸಕ್ಕೆ (!) ಕೈ ಹಾಕುತ್ತಿರಲಿಲ್ಲ. ಇನ್ನು ಊರ ಜನ ಕೇವಲ ಪುಸ್ತಕಗಳಿಗಾಗಿ ಊರ ಹೊರಗಿನ ಈ ಅಂಗಡಿಗೆ ಬಂದಾರೇ? ಖಂಡಿತ ಇಲ್ಲ. ಹೀಗಾಗಿ ಕಾಲೇಜಿನ ಗ್ರಂಥಾಲಯಕ್ಕೂ ಕಾಲೇಜು ವಾರ್ಷಿಕೋತ್ಸವದ ಬಹುಮಾನ ಸಮಿತಿಗೂ ಪುಸ್ತಕಗಳನ್ನು ಒಟ್ಟಾಗಿ ಒದಗಿಸುವ ಸಗಟು ವ್ಯಾಪಾರವಾಗಿ ಮಾತ್ರ ನಮ್ಮ ಗ್ರಂಥ ಸೇವೆ ನಿಲ್ಲಬೇಕಾಯಿತು. ಪರಿಸರದ ವಿಧಿ ನಿಯಮಗಳಿಗೆ ಅನುವರ್ತಿ ಆಗದ ಪ್ರಯೋಗ ಹೇಗೆ ತಾನೇ ಯಶಸ್ವಿ ಆದೀತು? ಪರಿಸರವನ್ನೇ ಪರಿವರ್ತಿಸುವ ಆರ್ಥಿಕ ತ್ರಾಣವಾಗಲೀ ಸಂಘಟನಾ ಕೌಶಲವಾಗಲೀ ಒಂದೂವರೆ ವರ್ಷದ ನಮ್ಮ ಬಿಡುವೇಳೆಯ ಬಿಟ್ಟಿ ದುಡಿಮೆಗಾರರ ಈ ಮಿದುಳ ಕೂಸಿಗೆ ಇರಲಿಲ್ಲ. ಇದು ಹಾಗಿರಲಿ. ಈ ದಿಶೆಯಲ್ಲಿ ರೂಢ ಮೌಲ್ಯಗಳ ಬುಡ ಹಂದಾಡಿಸುವ ಕೆಲವು ಸಂಗತಿಗಳ ಆವಿಷ್ಕಾರವಾದದ್ದು ಮಾತ್ರ ನನಗೆ ಒದಗಿದ ಹೊಸ ಲಾಭ.

ಒಂದನೆಯದು, ಬಹುಮಾನ ಸಮಿತಿ ಸದಸ್ಯರೊಬ್ಬರ ಕುರೆ ಆಸೆ. ಸಹಕಾರ ಸಂಗದ ಗೌರವ ಕಾರ್ಯದರ್ಶಿ ಆಗಿದ್ದ ನಾನು ಪದನಿಮಿತ್ತ ಬಹುಮಾನ ಸಮಿತಿಯ ಕಾರ್ಯದರ್ಶಿಯೂ ಆಗಿದ್ದೆ. "ಬುದ್ಧಂ ಶರಣಂ ಗಚ್ಛಾಮಿ" ಎಂದು ಸದಾ ಜಪಿಸುತ್ತಿದ್ದ ಈ ಮಹಾಶಯರು ತಮ್ಮ ಮನೆಯಲ್ಲಿದ್ದ ಒಂದಷ್ಟು ಪುಸ್ತಕಗಳನ್ನು ನನಗೆ ತಂದುಕೊಟ್ಟು ಅವನ್ನು ಸಮಿತಿ ಖರೀದಿಸಿ ಬಹುಮಾನಗಳಿಗಾಗಿ ಬಟವಾಡೆ ಮಾಡಬೇಕೆಂದೂ ಆ ಮೊಬಲಗನ್ನು ತಮಗೆ ಪಾವತಿಸಬೇಕೆಂದೂ ಕೋರಿದರು. ಮೊದಲ ವರ್ಷ ಅನುಭವರಾಹಿತ್ಯದಿಂದಲೂ ದಾಕ್ಷಿಣ್ಯದಿಂದಲೂ ಈ ಸ್ಪಷ್ಟ ತಪ್ಪು ಹಾದಿಯಲ್ಲಿ ನಡೆದೆ; ಕ್ರಮವಾದ ಬಿಕರಿ ಚೀಟಿ ತಯಾರಿಸಿ ಅವರಿಂದ ರಶೀತಿ ಪಡೆದು ದುಡ್ಡು ಪಾವತಿಸಿದೆ. ಮರುವರ್ಷವೂ ಇದೇ ಸನ್ನಿವೇಶ ಮರುಕೊಳಿಸಿದಾಗ ಎಚ್ಚತ್ತಿದ್ದೆ. ಅವರಿಗೆ ನೇರವಾಗಿ ಒಂದು ಮಾತು ಹೇಳಿದೆ, "ಸಂಘದ ಮತ್ತು ನನ್ನ ದೃಷ್ಟಿಯಿಂದ ಕಾನೂನು ರೀತ್ಯಾ ಈ ವಹಿವಾಟಿನಲ್ಲಿ ಏನೂ ಅರೆಕೊರೆ ಇಲ್ಲ. ಏಕೆಂದರೆ ಸಂಘಕ್ಕೆ ದೊರೆಯಬೇಕಾದ ವಟ್ಟಾ ಬರುತ್ತದೆ. ರಶೀತಿ ಪ್ರಕಾರ ಹಣ ಸಂದಾಯವಾಗುತ್ತದೆ. ಮುಂದೆ ಮಾಲು ಬಿಕರಿ ಆಗುವುದು ಖಾತ್ರಿ. ಆದರೆ ನಿಮ್ಮ ದೃಷ್ಟಿಯಿಂದ ಇದು ಹಿತಕರ ಅಲ್ಲ. ಪುಸ್ತಕ ವ್ಯಾಪಾರಿಯಲ್ಲದ ನೀವು, ಖುದ್ದು ನೀವೇ ಪ್ರಕಟಿಸದಿದ್ದ ಇತರ ಪುಸ್ತಕಗಳನ್ನು, ಸಂಘಕ್ಕೆ ಮಾರಿರುವುದನ್ನು ಯಾರಾದರೂ ಲೆಕ್ಕತಪಾಸಣೆ ವೇಳೆ ಸೂಕ್ಷ್ಮವಾಗಿ ಗಮನಿಸಿದರೆ ಅದರಿಂದ

ನಿಮಗೆ ಕಳಂಕ ತಟ್ಟದಿರದು. ಮಹಾಸಭೆಯಲ್ಲಿ ಈ ಪ್ರಶ್ನೆ ಬಂದುದಾದರೆ ಆಗ ನಾನು ಕೂಡ ನಿಮಗೆ ಶಾಮೀಲಾಗಿದ್ದೇನೆ ಎಂಬ ಅರ್ಥ ಧ್ವನಿಸೀತು. ಆದ್ದರಿಂದ ಈ ವ್ಯವಹಾರ ಬೇಡ, ಇಲ್ಲಿಗೇ ಕೈದು ಮಾಡೋಣ." ನನ್ನ ವಿವರಣೆಯನ್ನು ಅವರು ತುಂಬ ಚೆನ್ನಾಗಿ ಅರ್ಥಮಾಡಿಕೊಂಡು ಅದಕ್ಕಾಗಿ ನನ್ನನ್ನು ಶ್ಲಾಘಿಸಿದರು ಮತ್ತು ಆ ಪುಸ್ತಕಗಳನ್ನು ಧರ್ಮಾರ್ಥ ಸಮಿತಿಗೆ ಒಪ್ಪಿಸಿದರು.

ಎರಡನೆಯದು, ಪುಸ್ತಕ ವಿಕ್ರಯದಲ್ಲಿ ತಪ್ಪು ನಡತೆ. ಬಹುಮಾನವೀಯಲು ಮತ್ತು ಗ್ರಂಥಾಲಯಕ್ಕೆ ಸರಬರಾಜು ಮಾಡಲು ವಿವಿಧ ಪ್ರಕಾರಗಳಲ್ಲಿಯೂ ಭಾಷೆಗಳಲ್ಲಿಯೂ ಇರುವ ಪುಸ್ತಕಗಳನ್ನು ಭೂರಿ ಸಂಖ್ಯೆಯಲ್ಲಿ ಆಯ್ದು ರಖಂ ದರದಲ್ಲಿ ಖರೀದಿಸಿ ತರಲು ಖುದ್ದು ನಾನೇ ನೆರೆ ನಗರಗಳಾದ ಮಂಗಳೂರು, ಮೈಸೂರು, ಬೆಂಗಳೂರುಗಳಿಗೆ ಹೋಗುತ್ತಿದ್ದೆ. ಹೆಚ್ಚಿನ ಅಂಗಡಿಗಾರರು ನೇರ ನಡೆಯವರಾಗಿದ್ದುದರಿಂದ ವ್ಯವಹಾರ ಸಲೀಸಾಗುತ್ತಿತ್ತು. ಆದರೆ ಎರಡು ಬಲು ದೊಡ್ಡ ಅಂಗಡಿಗಳಲ್ಲಿ, ನನಗೆ ಆ ತನಕ ಬೇರೆಲ್ಲಿಯೂ ಅನುಭವಕ್ಕೆ ಬಂದಿರದಿದ್ದಂಥ, ಆಮಿಷವನ್ನು ಒಡ್ಡಿದರು. "ನೀವು ಇಡೀ ವ್ಯಾಪಾರವನ್ನು ನಮ್ಮಲ್ಲಿಯೇ ಮಾಡಬೇಕಾಗಿ ವಿನಂತಿಸುತ್ತೇವೆ. ಇದರಿಂದ ನಿಮಗೆ ಸೌಕರ್ಯ ಉಂಟು. ಲಾಭವೂ ಉಂಟು." ಹೆಡ್ಡನಾದ ನಾನು 'ನಿಮಗೆ' ಪದವನ್ನು 'ನಮ್ಮ ಸಂಘಕ್ಕೆ' ಎಂದು ಅರ್ಥವಿಸಿ, "ಖಂಡಿತ ಮಾಡೋಣ. ಆದರೆ ಆ ಲಾಭ ಏನೆಂದು ಸ್ಪಷ್ಟವಾಗಲಿ" ಎಂದೆ. ದೇವಾಧಿದೇವರುಗಳ ಪಟಗಳ ಅಡಿಯಲ್ಲೇ ಕುಳಿತಿದ್ದ ಆ ಶುಭ್ರವಸನಧಾರಿ ಗಾಂಧಿ ಟೋಪಿ ಅಲಂಕೃತರು ವಿವರಿಸಿದರು, "ಮುದ್ರಿತ ಬೆಲೆಗಳ ಮೊತ್ತದ ಮೇಲೆ ನಾವು ಶೇಕಡ ೨೦ ಸೋಡಿ ಬಿಡುತ್ತೇವೆ ಹಾಗೂ ಭಾಂಗಿಗಳನ್ನು ನಮ್ಮ ವೆಚ್ಚದಲ್ಲಿ ನಿಮ್ಮ ಅಂಗಡಿ ಬಾಗಿಲಿಗೆ, ಬೇಕಾದರೆ, ಒಂದೆರಡು ತಿಂಗಳುಗಳ ತನಕ ಕಡರೂಪದಲ್ಲಿ ತಲಪಿಸುತ್ತೇವೆ. ಅಲ್ಲಿಯೂ ಬೇಡವಾದವನ್ನು ನಮ್ಮ ವೆಚ್ಚದಲ್ಲಿ ಹಿಂದೆ ತರಿಸಿಕೊಂಡು ನಿಮ್ಮಿಂದ ಆ ಮೊಬಲಗನ್ನು ವಜಾಮಾಡುತ್ತೇವೆ. ಅಧಿಕೃತ ಇನ್ವಾಯ್ಸಿನ ಮೇಲೆ ಶೇಕಡಾ ೧೦ನ್ನು ಮಾತ್ರ ಕಾಣಿಸುತ್ತೇವೆ. ಉಳಿದ ಶೇಕಡಾ ೧೦ನ್ನು ನಿಮಗೆ ನಗದಾಗಿ ರಶೀತಿ ಯಾವುದನ್ನೂ ಕೇಳದೇ ಕೊಡುತ್ತೇವೆ." ವರ್ಷವೊಂದರ ಹತ್ತು ಸಾವಿರ ರೂಪಾಯಿಗಳಿಗೆ ಕಡಿಮೆ ಇಲ್ಲದ ವ್ಯಾಪಾರ. ಕೇವಲ ಕೈಚಳಕದಿಂದ ಸಾವಿರ ರೂಪಾಯಿ (ಇದು ಆ ದಿನಗಳಲ್ಲಿ ಸಾಧಾರಣ ಮೊತ್ತವೇನೂ ಆಗಿರಲಿಲ್ಲ) ಬರುವುದಾದರೆ ಈ ಸುಲಭದ ಉಭಯ ಲಾಭಮಾರ್ಗ ಏಕಾಗಬಾರದು? ಹೊಣೆ ಹೊತ್ತವರಿಗೆಲ್ಲ ಇಂಥ ಚಂದ್ರನಖಿ ಆಮಿಷಗಳು ಎದುರಾಗಿ ಅವರನ್ನು ಆಕರ್ಷಿಸುವುದು ವಿರಳವೇನಲ್ಲ. ಚಂದ್ರನಖಿಯ ಹಿಂದೆ ಮರೆಯಾಗಿರುವ ಶೂರ್ಪನಖಿತ್ವವನ್ನು ಗುರುತಿಸಿ ಅದರಿಂದ ದೂರ ಇರುವ ರಾಮ ತತ್ತ್ವ ನಮ್ಮಲ್ಲಿರಲಿ ಎಂದು ಪ್ರಾರ್ಥಿಸುವುದೊಂದೇ ಆರ್ಜವದ ಮಾರ್ಗ. ನನಗೆ ಎದುರಾದ ಎರಡೂ ಸಂದರ್ಭಗಳಲ್ಲಿ ನಾನು ಅವರೊಡನೆ ವಾದಿಸದೆ ಮರುನುಡಿಯದೆ ಎದ್ದು ಹಿಂತಿರುಗಿದ್ದೆ.

ಮೂರನೆಯದು, ವಿದೇಶೀ ಪ್ರಕಟಣೆಗಳ ಕರ್ಣ ಭೇದನ. ಈ ಹಿಕ್ಮತ್ತು ನನಗೆ ತಿಳಿದದ್ದು ಆಕಸ್ಮಿಕವಾಗಿ. ಯಾವುದೋ ಗಡಿಬಿಡಿಯಲ್ಲಿ ಇಬ್ಬರು ಸಗಟು ಪುಸ್ತಕ ವ್ಯಾಪಾರಿಗಳಿಗೆ ಒಂದೇ ಆದೇಶ ನಮ್ಮಲ್ಲಿಂದ ಹೋಗಿತ್ತು. ಭಾಂಗಿಗಳು ಬಂದಾಗ ಇನ್ವಾಯಿಸುಗಳ ಮೊತ್ತದಲ್ಲಿ ತುಂಬ ವ್ಯತ್ಯಾಸ ಕಂಡುಬಂದದ್ದರಿಂದ ಬಿಡಿ ಪುಸ್ತಕಗಳ ಬೆಲೆ, ವ್ಯಾಪಾರಿ ವಟ್ಟಾ ಮುಂತಾದವೆಲ್ಲವನ್ನೂ ಕೂಲಂಕಶವಾಗಿ ತಪಾಸಣೆ ಮಾಡಿ ತಾಳೆ ನೋಡಿದೆವು. ಒಂದೇ ಪುಸ್ತಕ, ಒಂದೇ ವಟ್ಟಾ ಆದರೆ ನಮೂದಿಸಿದ ಬಿಡಿ ಬೆಲೆಗಳು ಬೇರೆ ಬೇರೆ. ಕಡಿಮೆ ಬೆಲೆಯ ಅಂಗಡಿಗಾರನಿಂದ ಬಂದ ಪುಸ್ತಕದ ಹೊದಿಕೆಯ ಅಂಚಿನಲ್ಲಿ ೨೦ ಶಿಲಿಂಗ್ ಎಂದು ಬೆಲೆ ಮುದ್ರಿತವಾಗಿತ್ತು. ಆತ ಅದಕ್ಕೆ ವಿನಿಮಯ ದರ ಹನ್ನೆರಡಾಣೆ ಪ್ರಕಾರ ೧೫ ರೂಪಾಯಿಯ ಬೆಲೆ ವಿಧಿಸಿದ್ದ. ಹೆಚ್ಚು ಬೆಲೆಯ ಅಂಗಡಿಗಾರನಿಂದ ಬಂದ ಪುಸ್ತಕದ ಹೊದಿಕೆಯ ಈ ಭಾಗ ಬಲು ನಯವಾಗಿ ಕತ್ತರಿಸಲ್ಪಟ್ಟು ಅಂತರ್ಧಾನವಾಗಿತ್ತು; ಬದಲು ಒಳಪುಟದಲ್ಲಿ ಪೆನ್ಸಿಲ್ಲಿನಿಂದ ೩೨ ಶಿಲಿಂಗ್ ಎಂದು ಬರೆಯಲ್ಪಟ್ಟಿತ್ತು. ಈ ಅಂಗಡಿಗಾರ ಆ ಪುಸ್ತಕಕ್ಕೆ ವಿನಿಮಯ ದರ ಹತ್ತಾಣೆ ಪ್ರಕಾರ ೨೦ ರೂಪಾಯಿ ವಿಧಿಸಿದ್ದ. ಕರ್ಣಭೇದಿತ ಗ್ರಂಥಗಳನ್ನು ತಿರಸ್ಕರಿಸಿ ವಾಪಾಸು ಮಾಡಿದೆವು.

ನಾಲ್ಕನೆಯದು, ತತ್ತ್ವಶಾಸ್ತ್ರದ ದಿಗ್ದಂತಿ ಕಲಿಸಿದ ಪಾಠ. ಈ ಮಹಾಶಯ ನಮ್ಮ ಕಾಲೇಜಿಗೆ ವರ್ಗವಾಗಿ ಬಂದಾಗ ಗಾಳಿಬೀಡಿನ ಪ್ರಶಾಂತ ಪರಿಸರದಲ್ಲಿ ಲಘು ಭೂಕಂಪನವೇ ಆಯಿತು. ತತ್ತ್ವಶಾಸ್ತ್ರದಲ್ಲಿ ಡಾಕ್ಟೊರೇಟ್ ಪಡೆದಿದ್ದ ಮತ್ತು ಐವತ್ತರ ಅಪರ ಮಗ್ಗುಲಲ್ಲಿದ್ದ ಈ ವಾಗ್ಮಿ, ಪಾಶ್ಚಾತ್ಯ ಹಾಗೂ ಪೌರಸ್ತ್ಯ ಸಮಸ್ತ ದರ್ಶನಗಳ ಸಾರದ ಮೂರ್ತ ರೂಪದಂತೆ ಅಲ್ಲಿ ವಿರಾಜಿಸಿದರು. ಅವರ ಪಾಠವೇ, ಪ್ರವಚನವೇ, ಸಾರ್ವಜನಿಕ ಭಾಷಣವೇ, ಖಾಸಗಿ ಸಂಭಾಷಣೆಯೇ ಒಂದೊಂದರಲ್ಲೂ ತಮ್ಮ ಪ್ರತಿಭೆಯಿಂದ ಮತ್ತು ವಿದ್ವತ್ತಿನಿಂದ ನಮ್ಮ ಮನಸ್ಸನ್ನು ಸೂರೆಗೊಂಡರು. ಪ್ರತಿದಿನವೂ ಅವರು ಕಾಲೇಜನ್ನು ಪ್ರವೇಶಿಸುವ ಮುನ್ನ ನಮ್ಮ ಅಂಗಡಿಗೆ ದರ್ಶನವಿತ್ತು ನನ್ನನ್ನು ಕರ್ಮಯೋಗಿ ಎಂದು ಮುಂತಾಗಿ ಹೊಗಳಿ ಹರಸಿ ತಮಗೆ ಬೇಕಾದ ವಸ್ತುಗಳನ್ನು ಕಡವಾಗಿ ತೆಗೆದುಕೊಂಡು ಹೋಗುತ್ತಿದ್ದುದು ವಾಡಿಕೆ. ಅದೇ ವೇಳೆ ಅವರ ಕೈಗಳು ತಂತಾವೇ ಗಾಜಿನ ಜಾಡಿಗಳ ಮುಚ್ಚಳಗಳ ಮೇಲೆ ಆಡುತ್ತ ಒಳಗಿನ ದ್ರಾಕ್ಷಿ

ಗೋಡಂಬಿ ಪೆಪ್ಪರ್ ಮಿಂಟುಗಳನ್ನು ಪರಡುತ್ತಿದ್ದುವು. ಕೈಗೆ ಬಂದವು ಬಾಯಿಗೆ ಸಲ್ಲದಿದ್ದಾವೇ? ಅವೂ ಸ್ವೀಟುಗಳು! ನಮ್ಮ ಅಂಗಡಿಯಿಂದ ಯಾವ ಪದಾರ್ಥವೂ ಬಿಟ್ಟಿಯಾಗಿ ಯಾ ಸ್ಯಾಂಪಲ್ ಆಗಿ ಹೋಗತಕ್ಕದ್ದಲ್ಲ, ಮಾರಾಟವಾಗಿಯೇ ಹೋಗತಕ್ಕದ್ದು ಎಂಬುದು ನಾವು ಕಡ್ಡಾಯವಾಗಿ, ಖುದ್ದು ನಮ್ಮನ್ನು ಕುರಿತಂತೆ ಕೂಡ, ಪಾಲಿಸಿಕೊಂಡು ಬಂದಿದ್ದ ಶಿಸ್ತು. ಹೀಗಾಗಿ ಮೊದಲ ಕೆಲವು ದಿವಸ ಅವರ ಎದುರೇ ನಾನು ಬಿಲ್ ಹಾಕಿ ಅವರ ಮುಕ್ತಗ್ರಾಸದ ಮೌಲ್ಯವನ್ನು ತೆತ್ತಿದ್ದೆ. ಆದರೆ ಈ ದೈನಂದಿನ ಮಧುರ ಪ್ರೀತಿ ಉಲ್ಬಣಿಸಿದಂತೆ ಒಂದು ದಿನ ನೇರ ಅವರಿಗೆ ಬಿಲ್ ಒಪ್ಪಿಸಿ ಹಣ ಕೇಳಿದೆ.

"ಏನಿದು?" ಅವರ ಚಕಿತ ಪ್ರಶ್ನೆ.

"ಇದೀಗ ತಾನೇ ತಾವು ಕೊಂಡ ಸ್ವೀಟುಗಳ ಬೆಲೆ."

ಸ್ಯಾಂಪಲ್ ಪ್ರಕರಣ ಪುನರಾವರ್ತಿಸಲಿಲ್ಲ. ಆದರೆ ಹೊಸ ಸಮಸ್ಯೆಯೊಂದು ಉದ್ಭವಿಸಿತು. ಸಾಕ್ಷಾತ್ ಅವರೇ ಒಂದು ದಿವಸ ಒಂದಷ್ಟು ಉದ್ಗ್ರಂಥಗಳ ಹೊರೆಯನ್ನು ಆಳಿನ ಹತ್ತಿರ ಹೊರಿಸಿಕೊಂಡು ಬಂದು ನನ್ನ ಎದುರು ಇರಿಸಿದರು, "ಇವೆಲ್ಲ ತತ್ತ್ವಶಾಸ್ತ್ರಕ್ಕೆ ಸಂಬಂಧಿಸಿದ ಅಮೂಲ್ಯ ಗ್ರಂಥಗಳು. ಕಾಲೇಜಿನ ಪುಸ್ತಕ ಭಂಡಾರಕ್ಕೆ ಬೇಕೆಂದು ನಾನೇ ಖುದ್ದು ಮೈಸೂರಿನಲ್ಲಿ ಬೆಲೆ ತೆತ್ತು ಇವನ್ನು ತಂದಿದ್ದೇನೆ. ಹೇಗೂ ನೀವು ತಾನೇ ಗ್ರಂಥಾಲಯಕ್ಕೆ ಪುಸ್ತಕ ಸರಬರಾಜು ಮಾಡುವವರು. ಇವನ್ನು ಅಲ್ಲಿಗೆ ಮಾರಿ ಮೌಲ್ಯವನ್ನು ನನಗೆ ಪಾವತಿ ಮಾಡಿ."

"ಸರಿ, ನೀವೇ ಶಿಫಾರಸು ಮಾಡಿದ ಮೇಲೆ ಹಾಗೆಯೇ ಆಗಲಿ, ಇವುಗಳ ಬೆಲೆ?"

"ನಾನು ನಗದು ಹಣ ಪಾವತಿ ಮಾಡಿ ಪುಸ್ತಕಗಳನ್ನು ತಂದಿದ್ದೇನೆ. ಇನ್ನೂರು ರೂಪಾಯಿಗಳಾಗಿವೆ. ಅಷ್ಟನ್ನು ನೀವು ನನಗೆ ಕೊಟ್ಟರೆ ಸಾಕು. ಇವುಗಳ ಮುಖ ಬೆಲೆ ಮುನ್ನೂರು ರೂಪಾಯಿಗಳಾಗುತ್ತವೆ, ನೋಡಿ."

"ಸರಿ, ಹಣ ಪಾವತಿಮಾಡಲು ನಮಗೆ ಮೈಸೂರಿನ ಆ ಅಂಗಡಿಯ ಮೂಲ ಇನ್ವಾಯಿಸ್ ಮತ್ತು ರಶೀತಿ ಬೇಕಲ್ಲ?"

"ಅಯ್ಯೋ! ಅವೆಲ್ಲ ಕಳೆದುಹೋಗಿವೆ. ಪುಸ್ತಕಗಳು ಹೇಗೂ ಇಲ್ಲೇ ಇವೆಯಲ್ಲ?"

"ಅಡ್ಡಿ ಇಲ್ಲ, ನಾನು ಅವರಿಗೆ ಕಾಗದ ಬರೆದು ದ್ವಿಪತ್ರಿಗಳನ್ನು ತರಿಸಿಕೊಳ್ಳುವೆನು. ಅಂಗಡಿ ಹೆಸರು?" ಎನ್ನುತ್ತ ಉದ್ಗ್ರಂಥಗಳನ್ನು ಒಂದೊಂದಾಗಿ 'ಅನಾವರಣ ಮಾಡಿ'ದಾಗ ಕಂಡದ್ದೇನು? 'ದಿ ಹಿಂದೂ', 'ಟೈಮ್ಸ್ ಆಫ್ ಇಂಡಿಯಾ', 'ತ್ರಿವೇಣಿ' ಮುಂತಾದ ಪ್ರಸಿದ್ಧ ಪತ್ರಿಕೆಗಳಿಂದ ವಿಮರ್ಶೆಗಾಗಿ ಮತ್ತು ಹಲವಾರು ಹೆಸರಾಂತ ಪ್ರಕಾಶಕರಿಂದ ಮುಫತ್ತಾಗಿ ಬಂದಿದ್ದ ಪುಸ್ತಕಗಳವು. ಆ ಮೊಹರುಗಳು ನನ್ನನ್ನು ಏಡಿಸುತ್ತಿವೆ ಅನ್ನಿಸಿತು.

ಸ್ವಾಮೀ! ನಾನು ಶಂಕರ ಸಿದ್ಧಾಂತದಲ್ಲಿ ಮಿಂದವನಲ್ಲ, ಮಾಧ್ವದರ್ಶನದಲ್ಲಿ ಬೆಂದವನಲ್ಲ, ಗೀತೆಯ ತಿರುಳನ್ನು ತಿಂದವನೂ ಅಲ್ಲ. ಆದರೆ ಒಂದು ಅಂಶವಂತೂ ನನಗೆ ನಿಚ್ಚಳವಾಗಿ ತಿಳಿದಿದೆ: ನನ್ನ ಇಡೀ ಬದುಕು ಅಖಂಡವಾದ ಸ್ವಚ್ಛ ಗ್ರಂಥವಾಗಿರಬೇಕು. ನಿಮ್ಮ ಈ ದಗಲಬಾಜಿಯಲ್ಲಿ ನನ್ನ ಪಾಲು ಇಲ್ಲ." ಇಂಗು ತಿಂದ ಸಿಂಗಳೀಕದಂತೆ ಮುಸುಡು ಸೊಟ್ಟ ಮಾಡಿಕೊಂಡು ಅವರು ಅಲ್ಲಿಂದ ಕಂಬಿ ಕಿತ್ತರು, ಮುಂದೆ ಅಂಗಡಿಗೆ ಕಾಲಿಡಲಿಲ್ಲ.

ಐದನೆಯದು, ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕರ ನಿರ್ದೇಶನ. ನಮ್ಮ ಕಾಲೇಜಿನ ವಾರ್ಷಿಕೋತ್ಸವಕ್ಕೆ ಈ ಮಹಾಶಯರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಆ ವೇಳೆಗೆ ನಮ್ಮ ಅಂಗಡಿ ಗಡದ್ದಾಗಿ ಬೆಳೆದು ಸರ್ವವಸ್ತು ಭಂಡಾರದ (ಅಥವಾ ಇಂದಿನ ಜನತಾ ಬಝಾರಿನ) ವ್ಯಾಪ್ತಿ ಅಂತಸ್ತುಗಳನ್ನು ಪಡೆದಿತ್ತು. ನಮಗೆ ಪೂರ್ಣಾವಧಿಯ ಮ್ಯಾನೇಜರ್ ಮೊದಲಾದ ನೌಕರರು ಇದ್ದರು. ದೂರವಾಣಿ ಬಂದಿತ್ತು. ಮಡಿಕೇರಿಗೆ ಬಂದ ಸಂದರ್ಶಕರೆಲ್ಲರೂ ಕಾಲೇಜ್ ಸೂರಡಿಯ ಸಂಘಕ್ಕೆ ಬರುವುದು ಸಂಪ್ರದಾಯವಾಯಿತು. ಮಹಾಘನತೆವೆತ್ತ ನಿರ್ದೇಶಕರು ಸಪರಿವಾರ ನಮ್ಮ ಮಳಿಗೆಗೆ ದರ್ಶನವಿತ್ತರು. ನನ್ನೊಡನೆ ಚೆನ್ನಾಗಿ ಮಾತಾಡಿ, ಆತ್ಮೀಯ ಪ್ರಶ್ನೆಗಳಿಂದ ನನ್ನನ್ನು ಹುರಿದುಂಬಿಸಿ, ಮುಕ್ತವಾಗಿ ಈ ಸ್ವಯಂಸೇವೆಯನ್ನು ಪ್ರಶಂಸಿಸಿ ನಮ್ಮ ರಾಜ್ಯದ (ಮೈಸೂರು) ಬೇರೆ ಯಾವ ಕಾಲೇಜಿನಲ್ಲಿಯೂ ಈ ಮಾದರಿಯ ಸರ್ವಸೇವಾಸಂಘ ಇಲ್ಲವೆಂದು ಹೊಗಳಿ ತಾವೂ ಈ ಸರ್ವೋತ್ಕೃಷ್ಟ ಸಂಘದ ಒಬ್ಬ ಗ್ರಾಹಕನಾಗಿರಲು ತುಂಬ ಸಂತೋಷಪಡುವುದಾಗಿ ತಿಳಿಸಿದರು. ಸಾಕಷ್ಟು ವಸ್ತುಗಳನ್ನು ಅವರೇ ಖುದ್ದು ಆಯ್ದರು. ನನ್ನ ವಿವರಣೆಗಳಿಂದ ಉಲ್ಲಸಿತರಾದರು. ಅವರು ಆಯ್ದ ಸಾಮಾನುಗಳಿಗೆ ನಾನು ಎಂದಿನಂತೆ ಕ್ರಯಚೀಟಿ ಬರೆದು ಅವರ ಕೈಗಿತ್ತೆ. ನನ್ನನ್ನು ಹೊಗಳುವ ವೇಳೆ ಅವರಿಗಿದ್ದ ಉತ್ಸಾಹ ಮತ್ತು ಸಾಮಗ್ರಿಗಳನ್ನು ಆಯುವಾಗ ಇದ್ದ ಆಸಕ್ತಿ ಬಿಲ್ಲನ್ನು ಪಡೆಯುವಾಗ ಕಾಣಲಿಲ್ಲ. ತಾವು ಬೆಂಗಳೂರಿಗೆ ಮರಳಿದ ಬಳಿಕ ಮೊಬಲಗನ್ನು ಕಳಿಸುವುದಾಗಿ ಹೇಳಿ ಮಾಲು ಮತ್ತು ಬಿಲ್ ಸಮೇತ ನಿರ್ಗಮಿಸಿದರು. ಮುಂದೆ ತಿಂಗಳು ತಿಂಗಳು ಅವರು ನಿವೃತ್ತರಾಗುವ ತನಕವೂ ಅವರಿಗೆ ನಾವು ನೆನಪಿನೋಲೆಗಳನ್ನು ಕಳಿಸುತ್ತಲೇ ಇದ್ದೆವು. ಆದರೆ ನನ್ನ ಕಾರ್ಯದರ್ಶಿತ್ವದ ಅವಧಿಯಲ್ಲಿ ಆ ಹಣ ಬಂದಿರಲಿಲ್ಲ.

'ದೊಡ್ಡವರ' ಸಣ್ಣತನದ ಅನುಭವಗಳು ಕೆಲವೇ ಕೆಲವು ಮಾತ್ರ. ಆದರೆ 'ಸಣ್ಣವರ' ದೊಡ್ಡತನದ ಅನುಭವಗಳು ದಿನ ದಿನ ಎಂಬಂತೆ ನನಗೆ ಒದಗಿ ಕೆಲಸಕ್ಕೆ ಅರ್ಥ ಆಯಾಮಗಳನ್ನು ನೀಡುತ್ತಿದ್ದುವು. ಎರಡನೆಯದಕ್ಕೆ ಕೇವಲ ಮೂರು ಪ್ರಾತಿನಿಧಿಕ ನಿದರ್ಶನಗಳನ್ನು ನಿರೂಪಿಸುತ್ತೇನೆ.

ಕೊಡಗಿನ ಅಮ್ಮತ್ತಿಯ ಬಳಿ ಒಂದು ಕುಗ್ರಾಮ. ಅಲ್ಲಿಯ ಶಾಲೆಯಲ್ಲಿ ಓದುತ್ತಿದ್ದ ಒಬ್ಬ ಬಡವ, ಬೇನೆ ಹಿಡಿದ, ಸಣಕಲ ಹುಡುಗ ರಾಮಕೃಷ್ಣ. ಜಡಿ ಮಳೆಗಾಲದ ಗಾಳಿ ಮಳೆಯಿಂದ ತೊಯ್ದು ತೊಪ್ಪೆಯಾಗಿ ನಮ್ಮ ಅಂಗಡಿಗೆ ಬಂದ. ತಾನು ಈ ತನಕ ಪ್ರತಿ ವರ್ಷ ಮಡಿಕೇರಿ ಪೇಟೆಯಿಂದ ನಗದು ಹಣ ನೀಡಿ ಸಗಟು ದರದಲ್ಲಿ ಒಂದಿಷ್ಟು ಲೇಖನ ಸಾಮಗ್ರಿಗಳನ್ನು ಕೊಂಡೊಯ್ದು ತನ್ನ ಹಳ್ಳಿಯಲ್ಲಿ ಮಾರಿ ನಾಲ್ಕು ಕಾಸು ಸಂಪಾದಿಸಿ ಓದುತ್ತಿದ್ದುದಾಗಿಯೂ ಆದರೆ ಈಚೆಗೆ ಖಾಯಿಲೆಯಿಂದಾಗಿ ಎಲ್ಲ ಬಂಡವಾಳವನ್ನೂ ಕಳೆದುಕೊಂಡು ನಿರ್ಗತಿಕನಾಗಿರುವುದಾಗಿಯೂ ನಿವೇದಿಸಿದ. ಸಾಲವಾಗಿ ಒಂದಿಷ್ಟು ಮಾಲನ್ನು ನಾವು ಅವನಿಗೆ ಒದಗಿಸಿದ್ದಾದರೆ ಮುಂದಿನ ವಾರ ಮರಳಿ ಬಂದು ಆ ಹಣವನ್ನು ಖಾತ್ರಿ ಪಾವತಿಸುವುದಾಗಿ ಭರವಸೆ ನೀಡಿದ. ಯಾವ ಪ್ರಶ್ನೆಯನ್ನೂ ಹಾಕದೆ ಅವನಿಗೆ ಬೇಕಾದ ಸಾಮಾನುಗಳನ್ನು ಬೇಕಾದಷ್ಟು ಪ್ರಮಾಣದಲ್ಲಿ ಕೊಂಡೊಯ್ಯಲು ಅನುಮತಿ ಕೊಟ್ಟೆ. ಅವುಗಳ ಬೆಲೆ ಐವತ್ತು ರೂಪಾಯಿಗಳನ್ನು ದಾಟಲಿಲ್ಲ. ಮತ್ತೆ ಮರು ವಾರ ಅವನು ಅದೇ ಹೊತ್ತಿಗೆ ಹಾಜರ್. ಹೀಗೆ ಬೆಳೆದ ವ್ಯವಹಾರದ ಪರಿಣಾಮವಾಗಿ ಅವನು ಪ್ರೌಢಶಾಲೆಯ ವಿದ್ಯಾಭ್ಯಾಸವನ್ನು ಯಶಸ್ವಿಯಾಗಿ ಮುಗಿಸಿ ನಮ್ಮ ಕಾಲೇಜಿನಲ್ಲೇ ವ್ಯಾಸಂಗಕ್ಕೆ ಬಂದ. ಆ ವೇಳೆ ಅವನಿಗೆ ಭಾಗಾವಧಿಯ ಕೆಲಸವನ್ನು ನಮ್ಮ ಸಂಘದಲ್ಲೇ ಕೊಟ್ಟು ಸಂಬಳ ಪಾವತಿಸಿದೆವು. ಅವನ ನಿಷ್ಠೆ ಅವನನ್ನು ರಕ್ಷಿಸಿತು.

ನಾಪೋಕ್ಲು ಅಂದರೆ ಕೊಡಗಿನ ಅಂಡಮಾನ್. ಮಳೆಗಾಲದಲ್ಲಿ ಇದೊಂದು ಭಾರೀ ಪರ್ಯಾಯ ದ್ವೀಪ. ಮಡಿಕೇರಿಗೂ ನಾಪೋಕ್ಲಿಗೂ ನಡುವೆ ಕಾವೇರಿಯ ಮಹಾಪೂರ. ದೋಣಿ, ಜಂಗಲ್ಲುಗಳಲ್ಲಿ ಇದನ್ನು ದಾಟಿ ನಾಪೋಕ್ಲು ದಡ ಐದಬೇಕು, ಅಷ್ಟೆ. ಅಲ್ಲಿಯ ಪ್ರಾಥಮಿಕ ಶಾಲೆಯ ಅಧ್ಯಾಪಕ ರಾಮಚಂದ್ರಯ್ಯ (ಈ ವೃತ್ತಿನಾಮದ ಹಿಂದೆ ಬಡ ಎಂಬ ವಿಶೇಷಣ ಸದಾ ಅಧ್ಯಾಹಾರ), ವಯಸ್ಸಿನಲ್ಲಿ ನನಗಿಂತ ಎಷ್ಟೋ ಹಿರಿಯರು. ಪ್ರತಿ ಆದಿತ್ಯವಾರ ನಮ್ಮ ಅಂಗಡಿಗೆ ಬಂದು ತಮ್ಮ ಸರ್ವಋತು ಸದಾ ಸಿದ್ಧ ದ್ವಿಚಕ್ರರಥದಲ್ಲಿ (ಸೈಕಲ್) ಹೊರುವಷ್ಟು ಹೇರನ್ನು ನಮ್ಮಿಂದ ಕೊಂಡು, ಒಟ್ಟಿ ನಾಪೋಕ್ಲಿಗೆ ಒಯ್ದು ಅವರ ಶಾಲೆಯ ಸಹಕಾರ ಸಂಘದಿಂದ ಮಾರಿ ಅದನ್ನೊಂದು ಮಾದರಿ ಸಂಸ್ಥೆಯಾಗಿ ರೂಪಿಸಿದರು. ಅವರು ತಮ್ಮ ಸೇವೆಗೆ ಒಂದು ಪೈಯನ್ನೂ ತೆಗೆದುಕೊಳ್ಳಲಿಲ್ಲ. ಸ್ವತಃ ಸಂಸಾರ ತಾಪತ್ರಯದಿಂದಲೂ ಆರ್ಥಿಕ ಸಂಕಷ್ಟದಿಂದಲೂ ಬಂಧಿತರಾಗಿದ್ದ ಆ ಹಿರಿಯರು ಜನತೆಗೆ ಒಪ್ಪಿಸಿದ ಈ ಸೇವೆಯನ್ನು ಬಣ್ಣಿಸಲಾಗಲಿ ಅಳೆಯಲಾಗಲಿ ನನಗೆ ಯೋಗ್ಯತೆ ಸಾಲದು.

ವ್ಯಾಪಾರ ಒಂದು ಅಮಲು. ತತ್ರಾಪಿ ಗೌರವಸೇವೆಯ ವ್ಯಾಪಾರ ಕ್ಷೇತ್ರ ನೇರ ಸಮಾಧಿ ಸ್ಥಿತಿಗೆ ಉತ್ತಾರಣೆಗೊಳಿಸುವ ಅಮೃತಪಾನ. ಇದರ ಮುಂಚೂಣಿಯಲ್ಲಿ ನಿಂತವನಿಗೆ ದಿನ ದಿನ ಹೊಸ ಹಸುರನ್ನು ಅರಸಿ ಸಾಗುವ ಮತ್ತು ತನ್ಮೂಲಕ ವ್ಯಾಪಾರ ಮೊಬಲಗು ಏರಿದುದನ್ನು ನೋಡುವ ರಸಾನಂದ ಒದಗುತ್ತಲೇ ಇರುವುದು. ಸಂಶೋಧಕನಿಗೆ ಪ್ರಾಪ್ತವಾಗುವ ಸಂತೋಷವಾದರೂ ಈ ಬಗೆಯದೇ ಇರಬೇಕು. ಹೀಗೆ ನಾನು ಹುಚ್ಚು ಕುದುರೆಯ ನಾಗಾಲೋಟದಿಂದ ದೌಡಾಯಿಸುತ್ತಿದ್ದಾಗ ಸಹಜವಾಗಿ ಮಾರಾಟ ಸಾಮಗ್ರಿಗಳ ಪೂರೈಕೆ, ಬಂದ ವಸ್ತುಗಳನ್ನು ಓರಣವಾಗಿ ಅಟ್ಟಳಿಗೆಗಳಲ್ಲಿ ಅಳವಡಿಸುವುದು, ಸಮಗ್ರವಾಗಿ ಮಳಿಗೆಯನ್ನು ಸುಟಿಯಾಗಿ ಇರಿಸುವುದು, ಲೆಕ್ಕಪತ್ರಗಳನ್ನು ಆಯಾ ದಿನವೇ ಚುಕ್ತಗೊಳಿಸುವುದು ಇದುವೇ ಮುಂತಾದ ಅತ್ಯಂತ ಆವಶ್ಯಕ ಹಾಗೂ ಜರೂರು, ಆದರೆ ಬಲು ಬಿಡಿಚಲು ಬಡಿಸುವಂಥ, ಕೆಲಸಗಳು ತುಂಬ ಹಿಂದೆ ಬೀಳುತ್ತಿದ್ದುವು. ಯಾವುದೇ ಸಾಹಸದ ಅಂತಿಮ ಯಶಸ್ಸಿಗೆ ಅದರ ಅಧೋರಚನೆ (infrastructure) ಅತಿಭದ್ರವಾಗಿ ಇರಬೇಕಾದದ್ದು ಪ್ರಥಮಾವಶ್ಯಕತೆ ಎಂಬುದು ಸಿದ್ಧಾಂತ ರೂಪದಲ್ಲಿ ಮಾತ್ರ ನನ್ನನ್ನು ಸ್ಪರ್ಶಿಸಿತ್ತು. ಅದನ್ನು ನೆಲಕ್ಕೆ ಇಳಿಸಲು ಬೇಕಾಗುವ ಪ್ರವೃತ್ತಿ ಎಂದೂ ನನ್ನದಲ್ಲ. ಈ ಭೀಕರ ಕೊರಕಲನ್ನು ಸ್ವಯಂ ಪ್ರೇರಣೆಯಿಂದ ತುಂಬಿ ನಮ್ಮ ಸಂಘಕ್ಕೆ ಉಕ್ಕಿನ ನೆಲಗಟ್ಟನ್ನು ಒದಗಿಸಿದವರು ನನ್ನ ಸಹೋದ್ಯೋಗೀ ಮಿತ್ರರಾದ ಜನಾರ್ದನ ಬಾಳಿಗರು. ಕೆಲಸವೆಲ್ಲ ಅವರದು. ಹೆಸರು ಮಾತ್ರ ನನ್ನದು ಎಂದು ನಾನಿಲ್ಲಿ ಬರೆಯುವುದು ಭಾವುಕತೆಯಿಂದ ಅಲ್ಲ, ಉಪಚಾರಕ್ಕಾಗಿಯೂ ಅಲ್ಲ (ಮುಂದೆ ನೋಡಿ: ಅಧ್ಯಾಯ ೨೮).

ರಾಮಕೃಷ್ಣ, ರಾಮಚಂದ್ರಯ್ಯ, ಬಾಳಿಗರಂಥವರೇ ನೆಲದ ಸಾರ. ಇಂಥ ಬಹುಮಂದಿಯ ಒಡನಾಟ ನಿರಂತರವಾಗಿ ಆ ದಿನಗಳಂದು ಒದಗಿದ್ದರಿಂದಲೇ ನಾನು ಎಂದೂ ಹಿಂಗದ ಹುಮ್ಮಸ್ಸಿನಿಂದ ದಣಿವರಿಯದೇ ದುಡಿಯುವುದು ಸಾಧ್ಯವಾಯಿತು.

ಯಾವುದೇ ಸಾರ್ವಜನಿಕ ವ್ಯವಹಾರದಲ್ಲಿ ಎರಡು ಪ್ರಮುಖ ಮುಖಗಳನ್ನು ಗುರುತಿಸಬಹುದು: ಕಾರ್ಯಮುಖ, ವರದಿಮುಖ. ವ್ಯವಹಾರದ ಉದ್ದೇಶ ಸಿದ್ಧಿಗೋಸ್ಕರ ಪ್ರತ್ಯಕ್ಷವಾಗಿ ನಾವು ಏನನ್ನು ಎಸಗುವೆವೋ ಅದೇ ಕಾರ್ಯ. ಇದನ್ನು ನಡೆಸುವ ಮುನ್ನ, ನಡೆಸುತ್ತಿರುವ ವೇಳೆ ಮತ್ತು ನಡೆಸಿ ಆದ ಮೇಲೆ ನಾವು ಶೇಖರಿಸಿ, ಸಂಸ್ಕರಿಸಿ ಬರೆದು ದಫ್ತರಿಸುವ ಸಮಸ್ತ ದಾಖಲೆಗಳೂ ಈ ವ್ಯವಹಾರದ ವರದಿ. ಸಹಕಾರ ಸಂಘದಲ್ಲಿ ಪ್ರತ್ಯಕ್ಷ ವ್ಯಾಪಾರ ಅದರ ಕಾರ್ಯಮುಖವನ್ನು ಬಿಂಬಿಸಿದರೆ ರಶೀತಿ ಪುಸ್ತಕಗಳು, ಲೆಕ್ಕ ಪತ್ರಗಳು ಮುಂತಾದುವು ವರದಿಮುಖವನ್ನು ಪ್ರತಿಬಿಂಬಿಸುತ್ತವೆ. ವಾಸ್ತವವಾಗಿ ಇಲ್ಲಿಯದು ಬಿಂಬ – ಪ್ರತಿಬಿಂಬ ಸಂಬಂಧ. ದತ್ತ ಮುಹೂರ್ತದಲ್ಲಿ ಯಾವುದು ಬಿಂಬ, ಯಾವುದು ಪ್ರತಿಬಿಂಬ ಎಂಬುದರ ನಿರ್ಧರಣೆ ನಾವು ಏನನ್ನು ಅರಸುತ್ತಿದ್ದೇವೆ ಎಂಬುದನ್ನು ಅವಲಂಬಿಸಿದೆ. ವರದಿಯ ತಪಾಸಣೆ ಮಾಡುತ್ತಿರುವಾಗ ಇದು (ವರದಿ) ಬಿಂಬವೂ ಆದ್ದರಿಂದ ಕಾರ್ಯ ಪ್ರತಿಬಿಂಬವೂ ಆಗುತ್ತದೆ. ಕಾರ್ಯ ಹೇಗೆ ನಡೆಯುತ್ತಿದೆ ಎಂಬುದರತ್ತ ಗಮನ ಹರಿಸಿದಾಗ ಇದು ಬಿಂಬ, ಆದ್ದರಿಂದ ವರದಿ ಪ್ರತಿಬಿಂಬ ಎನಿಸಿಕೊಳ್ಳುತ್ತದೆ. ಎರಡು ಪರಿಶುದ್ಧವಿದ್ದಾಗ ಉದ್ದೇಶ ಸಿದ್ಧಿ ಸಮರ್ಪಕವಾಗಿರುತ್ತದೆ. ಯಾವುದೇ ಒಂದರಲ್ಲಿ ಐಬು ತಲೆದೋರಿದರೆ ಅದು ಇನ್ನೊಂದಕ್ಕೂ ತಾಗುವುದು ಇಲ್ಲಿಯ ಸಯಾಮೀ ಅವಳಿಗಳ ಅವಿನಾ ಸಂಬಂಧದ ಒಂದು ಮುಖ್ಯ ಲಕ್ಷಣ. ಸಿದ್ಧಾಂತದ ಮಟ್ಟದಲ್ಲಿ ಇದು ಸರಿ. ಆದರೆ ರಂಗಕ್ಕೆ ಇಳಿವ ಪ್ರತಿಯೊಬ್ಬನೂ ಕೆಲವು ಪ್ರಾಯೋಗಿಕ ಸಮಸ್ಯೆಗಳನ್ನು ಎದುರಿಸುತ್ತಾನೆ. ನಮಗೆ ಎದುರಾದಂಥವನ್ನು ಮಾತ್ರ ಇಲ್ಲಿ ಪ್ರಸ್ತಾವಿಸುವೆನು.

ಸಹಕಾರ ಸಂಘವೆಂದು ಹೆಸರು ತಳೆದು ಸಹಕಾರ ಕಾಯ್ದೆಗೆ ಅನುಗುಣವಾಗಿ ರಚಿತವಾದ ಸಂಘದ ಉಪನಿಬಂಧನೆಗಳ ರೀತ್ಯಾ ಕೆಲಸ ಮಾಡುತ್ತೇವೆ ಎಂದು ಒಪ್ಪಿ ರಂಗಕ್ಕೆ ದುಮುಕಿದ ನಾವು ಕಡ್ಡಾಯವಾಗಿ ಪಾಲಿಸಬೇಕಾಗಿದ್ದ ಕೆಲವು ಮುಖ್ಯ ನಿಯಮಗಳಿವು: ವ್ಯಾಪಾರ ಕ್ಷೇತ್ರದಲ್ಲಿ ಗ್ರಾಹಕರಕ್ಷಣೆಯೊಂದನ್ನೇ ಹೆಗ್ಗುರಿಯಾಗಿ ಇರಿಸಿ ದುಡಿಯತಕ್ಕದ್ದು. ಮುಕ್ತ ಮಾರುಕಟ್ಟೆಯೊಡನೆ ಪೈಪೋಟಿ ನಡೆಸತಕ್ಕದ್ದಲ್ಲ. ನಮ್ಮ ಪ್ರತಿಯೊಂದು ವಹಿವಾಟನ್ನೂ ಸಮರ್ಥಿಸುವಂಥ ದಾಖಲೆಗಳನ್ನು ಸಹಕಾರ ಇಲಾಖೆ ವಿಧಿಸಿರುವ ರೀತಿಯಲ್ಲಿ ಬರೆದು ಯಾವಾಗ ಬೇಕೆಂದರೆ ಆಗ ಕ್ಷಿಪ್ರ ತಪಾಸಣೆಗೆ ದೊರೆಯುವಂತೆ ಇಡತಕ್ಕದ್ದು. ಇಲ್ಲಿಯ ಸಮಸ್ತ ವ್ಯವಹಾರಗಳೂ ನಿಯತಕಾಲಿಕವಾಗಿ ಕಾರ್ಯನಿರ್ವಾಹಕ ಸಮಿತಿಯ ಕೂಲಂಕಶ ತಪಾಸಣೆಗೆ ಒಳಪಟ್ಟು ಅದರ ಮಂಜೂರಾತಿಯನ್ನು ಪಡೆಯತಕ್ಕದ್ದು. ಆದರೆ ಇವನ್ನು ನಿಭಾಯಿಸುವಾಗ ಸೀಮಿತ ಕಾಲಾವಕಾಶ, ಸೀಮಿತ ಜನಬಲ (ಎಲ್ಲರೂ ಬಿಟ್ಟಿ ದುಡಿಮೆಗಾರರೇ; ನಮಗೆ ರಂಗದಲ್ಲಿ ಕುಣಿಯುವುದರಿಂದ ಲಭಿಸುತ್ತಿದ್ದ ಸಂತೋಷ ನೇಪಥ್ಯ ಕಾರ್ಯದಿಂದ ಒದಗುತ್ತಿರಲಿಲ್ಲ – ಮಾನವ ಸಹಜ ದೌರ್ಬಲ್ಯ ಎನ್ನಿ ಬೇಕಾದರೆ) ಇದ್ದ ನಮ್ಮ ಸಂಘದಲ್ಲಿ ಸಹಜವಾಗಿ ಕಾರ್ಯ ವರದಿ ಮುಖಗಳ ನಡುವೆ ಸಮಶ್ರುತಿ ಸಮಗತಿ ಏರ್ಪಡಲಿಲ್ಲ. ಕನಿಷ್ಠಾವಶ್ಯಕತೆಯನ್ನು ಮಾತ್ರ ನಾವು ಪೂರೈಸಿಕೊಂಡು ಹೋಗಿದ್ದೆವು. ಅಂದರೆ ಪ್ರತಿಯೊಂದು ಮಾರಾಟವನ್ನು ಬಿಲ್ ಮೂಲಕವೇ ಮಾಡುವುದು, ಪ್ರತಿಯೊಂದು ನಗದು ಅಥವಾ ಸಾಲ ಕೊಡುಕೊಳು ವ್ಯವಹಾರಕ್ಕೂ ಲೆಕ್ಕ ಇಡುವುದು, ದಿನ ದಿನ ನಗದು ಹಣವನ್ನು ಲೆಕ್ಕ ಮಾಡಿ ಅಂದಂದಿನ ವಹಿವಾಟಿನೊಡನೆ ತಾಳೆ ನೋಡಿ ಸರಿಪಡಿಸುವುದು – ಇಷ್ಟನ್ನು ಎಚ್ಚರಿಕೆಯಿಂದ ಮಾಡುತ್ತ ಬೀಸುವ ದೊಣ್ಣೆಯಿಂದ ಪಾರಾಗಿ ಮರುದಿನವನ್ನು ಸ್ವಾಗತಿಸುತ್ತಿದೆವು. ವ್ಯಾಪಾರದ ಬೀಸು ಬಿರುಸುಗಳಿಂದಾಗಿ ಆದಿತ್ಯವಾರ ಕೂಡ ರಜೆ ತೆಗೆದುಕೊಳ್ಳುವುದು ಸಾಧ್ಯವಾಗುತ್ತಿರಲಿಲ್ಲ. ಇತ್ತ ಕಾರ್ಯ ನಿರ್ವಾಹಕ ಸಮಿತಿಯ ಸಭೆಗಳು ಜರಗಲೇ ಇಲ್ಲ. ದಾಸ್ತಾನು ಪುಸ್ತಕವನ್ನಂತೂ ತೊಡಗಿಯೇ ಇರಲಿಲ್ಲ. ಜೊತೆಗೆ ನಾನು ಎನ್‌ಸಿಸಿ ಅಧಿಕಾರಿಯೂ ಆಗಿದ್ದೆ.

ದಾಸ್ತಾನು ಪುಸ್ತಕದಲ್ಲಿ ಎರಡು ಬಗೆಗಳಿವೆ ಎಂಬುದಾಗಿ ಸಹಕಾರ ಸಂಘಗಳ ಇನ್‌ಸ್ಪೆಕ್ಟರ್ ಎನ್.ಟಿ ಅಪ್ಪಯ್ಯ ಹೇಳಿದ್ದರು. ಒಂದನೆಯ ಬಗೆಯದ್ದರಲ್ಲಿ ವಸ್ತುವಾರು ಪುಟಗಳನ್ನು ತೆರೆಯಬೇಕು. ಪ್ರತಿದಿನವೂ ಬಂದ ಮತ್ತು ಹೋದ ವಸ್ತುಗಳನ್ನು ಈ ಪುಟಗಳಿಗೆ ಬರಾಯಿಸಿ ನಿವ್ವಳ ಸಂಖ್ಯೆ ಕ್ಷಿಪ್ರ ತಪಾಸಣೆಗೆ ದೊರೆಯುವಂತಿರಬೇಕು. ಈ ಸಂಖ್ಯೆ ಆ ವಸ್ತುವಿನ ವಾಸ್ತವಿಕ ಸಂಖ್ಯೆ ಜೊತೆ ತಾಳೆ ಆಗಬೇಕು. ಇಂಥ ದಾಸ್ತಾನು ಪುಸ್ತಕ ಸಂಘದ ಸಮಗ್ರ ವಸ್ತುಗಳ ಕ್ರಮೀಕೃತ ಪ್ರತಿಬಿಂಬ. ಇದರಲ್ಲಿಯ ಪ್ರತಿಯೊಂದು ನಮೂದಿಗೂ ಒಡನೆ ಪರಿಶೀಲನೆಗೆ ದೊರೆಯುವ ದಾಖಲೆಗಳು ಇದ್ದೇ ಇರುವುದರಿಂದ ಸಂಘದಲ್ಲಿ ಲಪಟಾಯಿಸಿಕೆ ಬಲು ಕಷ್ಟ ಸಾಧ್ಯವಾಗುತ್ತದೆ. ಹೀಗೆ ಈ ವಸ್ತು–ಪುಟ ದಾಸ್ತಾನು ಪುಸ್ತಕ ಸಂಘದ ಹಿತವನ್ನು ಸದಾ ಕಾದಿಡುವ ಪಡಿಯಳ (ಬಾಗಿಲು ಕಾಯುವಾತ). ಎರಡನೆಯ ಬಗೆಯದರಲ್ಲಿ ದಿನ ದಿನ

ಮಾರಾಟಕ್ಕಾಗಿ ತರಿಸಿದ ಸಾಮಗ್ರಿಗಳ ಮಾರಾಟ ಬೆಲೆಯನ್ನೂ (ಅಸಲು ಬೆಲೆಯನ್ನಲ್ಲ) ಆಯಾ ದಿವಸ ನಡೆದ ವ್ಯಾಪಾರ ಮೌಲ್ಯವನ್ನೂ ಯುಕ್ತ ಕಾಲಮುಗಳಲ್ಲಿ ಬರಾಯಿಸುತ್ತ ಸಾಗಬೇಕು. ಆ ಮಾರಾಟಮೌಲ್ಯ–ಪುಸ್ತಕದ ಪ್ರಕಾರ ಯಾವುದೇ ದಿನಾಂತ್ಯದಲ್ಲಿ ದೊರೆಯುವ ಸಂಖ್ಯೆ ಈ ಗಳಿಗೆ ಅಲ್ಲಿ ದಾಸ್ತಾನಿನಲ್ಲಿರುವ ಸಾಮಗ್ರಿಗಳ ಒಟ್ಟು ಮಾರಾಟ ಬೆಲೆಗೆ ಸಮವಾಗುತ್ತದೆ. ಮೊದಲನೆಯದು ಶುದ್ಧ ವೈಜ್ಞಾನಿಕವಾದದ್ದು ಎಂಬುದರಲ್ಲಿ ಸಂದೇಹ ಇಲ್ಲ. ಎರಡನೆಯದೋ ಅನುಕೂಲ ಸಿಂಧು. ಏನೂ ಇಲ್ಲದೇ ಇರುವುದಕ್ಕಿಂಥ ಲೇಸು, ಅಷ್ಟೆ. ವಸ್ತು–ಪುಟ ದಾಸ್ತಾನು ಪುಸ್ತಕವನ್ನು ಸಮರ್ಪಕವಾಗಿ ಇಡಲು ಗುಮಾಸ್ತರ ಹಾಗೂ ತಪಾಸಣೆಗಾರರ ಒಂದು ಪಟಾಲಮ್ಮೇ ಬೇಕಾಗುತ್ತದೆ. ಮಾರಾಟಮೌಲ್ಯ–ಪುಸ್ತಕವನ್ನು ಮುಂದುವರಿಸಿಕೊಂಡು ಹೋಗಲು ಇಂಥ ತಾಪತ್ರಯ ಇಲ್ಲದಿದ್ದರೂ ಕೇವಲ ಒಂದೆರಡು ದಿವಸಗಳಲ್ಲೇ ಇಲ್ಲಿಯ ಅಸಹಜತೆ ಹಾಗೂ ನಿಷ್ಪ್ರಯೋಜಕತೆ ಇದರ ಉಪಯುಕ್ತತೆಯ ಬಗ್ಗೆ ನಮ್ಮ ನಂಬಿಕೆಯನ್ನೇ ಕೆಡಿಸಿಬಿಡುತ್ತವೆ. ಆದ್ದರಿಂದ ನಾವು ಹಿಡಿದ ಹಾದಿ ಏನು? ಉಭಯ ತೊಂದರೆಗಳಿಂದಲೂ ದೂರವಾದದ್ದು: ಯಾವ ಬಗೆಯ ದಾಸ್ತಾನು ಪುಸ್ತಕವನ್ನೂ ಆರಂಭಿಸಲೇ ಇಲ್ಲ! ನಮ್ಮ ಮೂಲಭೂತ ಪ್ರಾಮಾಣಿಕತೆ ಮತ್ತು ನಿಷ್ಠುರ ಶಿಸ್ತೇ ನಿಜವಾದ ದಾಸ್ತಾನು ಪುಸ್ತಕವೆಂದು ಧೈರ್ಯ ತಳೆದು ವ್ಯಾಪಾರವನ್ನು ಮುಂದುವರಿಸಿದೆವು.

ಮೊದಲ ವರ್ಷದ ವ್ಯವಹಾರಗಳನ್ನು ತಪಾಸಣೆ ಮಾಡಲು ಎನ್.ಟಿ ಅಪ್ಪಯ್ಯನವರೇ ಬಂದರು. ನಮ್ಮ ಸಂಘದ ಸ್ಥಾಪನೆಗೆ ಮುಖ್ಯ ಕಾರಣರಾದ ಈ ಸಹೃದಯರ ಮಾರ್ಗದರ್ಶನದಲ್ಲಿಯೇ ನಾವು ಲೆಕ್ಕ ಪತ್ರಗಳನ್ನು ಇಟ್ಟಿದ್ದೆವು. ವಿದ್ಯಾವಂತರು ನಿಸ್ಪೃಹತೆಯಿಂದ ನಡೆಸುತ್ತಿರುವ ಈ ಸಂಘ ಮಾದರಿ ಸಂಸ್ಥೆ ಆಗಬೇಕು ಎಂಬುದು ಇವರ ಆಸೆ. ನಮ್ಮ ಅಪ್ರಬುದ್ಧ ಲೆಕ್ಕಪತ್ರಗಳ ನಡುವೆ ವೈಜ್ಞಾನಿಕ ಕ್ರಮವನ್ನು ತಂದು ವ್ಯವಸ್ಥೆ ಏರ್ಪಡಿಸಲು ಇವರಂಥ ಅನುಭವಿಗಳು ಕೂಡ ಸಾಕಷ್ಟು ಕಾಲ ಹೋರಾಡಬೇಕಾಯಿತು. ಗಣಿತ ವಿದ್ಯಾರ್ಥಿಯಾದ ನಾನು ವಾಣಿಜ್ಯದ ಅಂಕೆ ಸಂಖ್ಯೆಗಳ ಗೊಂಡಾರಣ್ಯದಲ್ಲಿ ಅವೆಷ್ಟೋ ಒಳದಾರಿಗಳನ್ನು ಆಗಾಗ ಕಂಡುಕೊಂಡು, ಆದರೆ ಎಲ್ಲಿಯೂ ಬಿಡಿಗಾಸು ಅಥವಾ ಮಾಲು ಪೋಲಾಗದಂತೆ ಎಚ್ಚರವಹಿಸಿ, ಮುಂದಕ್ಕೆ ನೆಗೆಯುತ್ತ ದಿನ ದಿನ ತಕ್ಕಡಿಯನ್ನು ಸರಿಯಾಗಿ ಸಂತುಲಿಸಿಕೊಂಡು ಹೋಗುತ್ತಿದ್ದೆ. ಸಾಂಪ್ರದಾಯಿಕ ಲೆಕ್ಕ ನಮೂದು ವಿಧಾನ, ಅದೆಷ್ಟೇ ಆವಶ್ಯ ಹಾಗೂ ವೈಜ್ಞಾನಿಕ ಎಂಬುದು ನನಗೆ ಮನವರಿಕೆ ಆಗಿದ್ದರೂ, ಎಂದೂ ಹಿಡಿಸಲಿಲ್ಲ. ಹೀಗೆ ನಾನು ವಿಹರಿಸುತ್ತಿದ್ದ ನಿರಂಕುಶ ಕ್ಷೇತ್ರದಲ್ಲಿ ವ್ಯವಸ್ಥೆಯ ಅಂಕುಶ ಪ್ರಯೋಗ ಮಾಡುವುದು, ಅದೂ ಮಾನವೀಯ ಆಸಕ್ತಿ ಮೌಲ್ಯಗಳು ಬೆರೆತಿರುವಲ್ಲಿ, ಎಷ್ಟು ಕಷ್ಟ ಎಂಬುದು ಈ ಬಗೆಯ ವ್ಯವಹಾರಗಳಲ್ಲಿ ಕೈ ಆಡಿಸಿದವರಿಗೆ ಎಲ್ಲರಿಗೂ ತಿಳಿದೇ ಇರುವುದು.

ಇನ್ಸ್ಪೆಕ್ಟರ್ ಅಪ್ಪಯ್ಯನವರು 'ತಮಸೋಮಾ ಜ್ಯೋತಿರ್ಗಮಯ' ಎಂಬ ಉಕ್ತಿಯಲ್ಲಿ ಅಚಲ ನಂಬಿಕೆ ಇದ್ದವರು. ಅದನ್ನು ಅವರು ಪ್ರತ್ಯಕ್ಷ ಸಾಧಿಸಿ ಲೆಕ್ಕ ಪರಿಶೋಧನ ವರದಿಯನ್ನು ಸಿದ್ಧಪಡಿಸಿದರು. ವ್ಯಾಪಾರರಂಗದಲ್ಲಿ, ಗ್ರಾಹಕ ಸೇವೆಯಲ್ಲಿ ಮತ್ತು ಶಿಕ್ಷಣದಲ್ಲಿ ನಾವು ನಡೆಸಿದ್ದು ಒಂದು ಪವಾಡವೆಂದೇ ಅಂಕೆ ಅಂಶಗಳ ಸಮೇತ ಸಾಬೀತುಪಡಿಸಿದರು. 'ಸಹನಾವವತು' ಎಂಬ ನಮ್ಮ ಧ್ಯೇಯವನ್ನು ನಾವು ಸಾಧಿಸಿದ್ದೆವು. ಕೊನೆಯಲ್ಲಿ ಅವರು ಒಂದಿಷ್ಟು ವ್ಯವಹಾರ ನೀತಿಯನ್ನು ನನಗೆ ಖುದ್ದಾಗಿ ಬೋಧಿಸಿದರು. "ನಿಸ್ವಾರ್ಥ ಹಾಗೂ ಉತ್ಸಾಹೀ ಕಾರ್ಯಕರ್ತರು ಎಂಥ ವಿಜಯವನ್ನು ಸಾಧಿಸಬಲ್ಲರು ಎಂಬುದನ್ನು ನಾನಿಲ್ಲಿ ಪ್ರತ್ಯಕ್ಷ ಕಂಡಿದ್ದೇನೆ. ಆದರೆ ಇದೊಂದು ಶಾಶ್ವತ ಸಂಸ್ಥೆಯಾಗಿ ಅಭಿವರ್ಧಿಸುತ್ತ ಮುನ್ನಡೆಯುತ್ತಿರಬೇಕಾದರೆ ನೀವು ಈಗಿಂದಲೇ ಇದನ್ನು ಸುಭದ್ರ ತಳಹದಿಯ ಮೇಲೆ ನೆಲೆಗೊಳಿಸಲೇಬೇಕು. ವಿವಿಧ ಲೆಕ್ಕ ಪುಸ್ತಕ ಹಾಗೂ ಪತ್ರಗಳನ್ನು ಸಹಕಾರ ನಿಯಮಾನುಸಾರ ಇಡುವ ದಿಶೆಯಲ್ಲಿ ಆದ್ಯ ಲಕ್ಷ್ಯ ಹರಿಸಲೇಬೇಕು. ಇಲ್ಲವಾದರೆ ಸ್ವತಃ ನಿಮ್ಮ ಚಾರಿತ್ರ್ಯಕ್ಕೆ ಕೂಡ ಕಳಂಕ ತಟ್ಟುವ ಅಪಾಯ ಉಂಟು. ಹೀಗೆ ಹೇಳುವಾಗ ಕಾಗದ ಪತ್ರ ಸರಿಯಾಗಿ ಇರುವಲ್ಲೆಲ್ಲ ವ್ಯವಹಾರ ತಂತಾನೇ ಪರಿಶುದ್ಧವಾಗಿರುತ್ತದೆ ಎಂಬ ಭ್ರಮೆ ಏನೂ ನನಗಿಲ್ಲ. ಆದರೆ ನಿಮ್ಮ ಹಿತ ದೃಷ್ಟಿಯಿಂದ ಇದು ತೀರ ಅವಶ್ಯ. ಇದನ್ನು ಹೇಗೆ ಸಾಧಿಸಬಹುದು ಎಂಬುದರ ವಿಚಾರ ನೀವೇ ಯೋಚಿಸಿ ನಿರ್ಧರಿಸಬೇಕು."

ಅಂದು ಏಕಕಾಲದಲ್ಲಿ ನಾಲ್ಕು ನಾವೆಗಳಲ್ಲಿ ನನ್ನ ಪ್ರಯಾಣ – ಪಾಠ ಪ್ರವಚನ, ಎನ್‌ಸಿಸಿ, ಸಹಕಾರ ಸಂಘ ಮತ್ತು ಸಂಸಾರ; ಆದರ್ಶ – ಪಂಡಿತ ಮದನ ಮೋಹನ ಮಾಳವೀಯ ಮತ್ತು ಬಾಲಗಂಗಾಧರ ತಿಲಕ.

ಒಂದು ವಿಷಯವಂತೂ ಆ ವೇಳೆಗೆ ಸ್ಪಷ್ಟವಾಗಿ ನನಗೆ ಅರ್ಥವಾಗಿತ್ತು: ನಮ್ಮ ಸಂಘದ ಸಮಸ್ತ ವರದಿಗಳನ್ನು ಸಮರ್ಪಕವಾಗಿ ಇಡಲು ಬೇಕಾಗುವ ಕಾಲಾವಕಾಶ, ತಾಳ್ಮೆ, ಅನುಭವ ಯಾವುದೂ ಗೌರವ ಕಾರ್ಯಕರ್ತರಾದ ನಮಗೆ ಇರಲಿಲ್ಲ, ಎಂದೂ ಅವು ಒದಗುತ್ತಲೂ ಇರಲಿಲ್ಲ. ಅನುಭವಿಯಾದ ಗುಮಾಸ್ತನನ್ನು ನೇಮಿಸೋಣ ಎಂದರೆ ಆರ್ಥಿಕವಾಗಿ ನಮಗೆ ಸಾಕಷ್ಟು ತ್ರಾಣ ಇರಲಿಲ್ಲ. ಸರಕಾರದಿಂದ ಯಾ ಇತರ ಮೂಲಗಳಿಂದ ನಮಗೆ ಧನ ಸಹಾಯ

ಏನೂ ಲಭಿಸಿರಲಿಲ್ಲ. ಆದ್ದರಿಂದ ನಾವೇ, ವ್ಯಾಪಾರ ಎಂದೂ ಹಿನ್ನಡೆಯದಂತೆ, ಸ್ವಸಾಮರ್ಥ್ಯದ ಪರಿಧಿಯೊಳಗೆ ಲೆಕ್ಕಪತ್ರಗಳ ಉಸ್ತುವಾರಿ ಕೂಡ ನೋಡಿಕೊಳ್ಳುತ್ತ ಮುಂದುವರಿಯುವುದೊಂದೇ ತಾತ್ಕಾಲಿಕ ಪ್ರಾಯೋಗಿಕ ಪರಿಹಾರ ಎಂದು ನಿರ್ಧರಿಸಿದೆವು.

ನಮ್ಮ ಅನುಕೂಲತೆ – ಅನನುಕೂಲತೆ ಒಂದನ್ನೂ ಕೇಳದೆ ಭೂಮಿ ಉರುಳಿತು, ಋತುಗಳು ಪುನರಾವರ್ತಿಸಿದುವು. ಹಳೆ ವಿದ್ಯಾರ್ಥಿಗಳು ನಿರ್ಗಮಿಸಿದರು. ಹೊಸ ಹುರುಪುಗಳು ಅಧಿಕ ಸಂಖ್ಯೆಯಲ್ಲಿ ಆಗಮಿಸಿದುವು. ನಮಗೆ ಮೂರು ವರ್ಷ ಪ್ರಾಯ ಆಗಿಯೇ ಹೋಯಿತು (೧೯೫೭). ಆ ವೇಳೆಗೆ ಕೊಡಗು ರಾಜ್ಯ ಅಖಿಲ ಕರ್ನಾಟಕದಲ್ಲಿ ವಿಲೀನಗೊಂಡಿದ್ದುದರಿಂದ ಕೊಡಗಿನ ಪ್ರಜಾ ಸರ್ಕಾರ ಬರಖಾಸ್ತಾಗಿತ್ತು. ಇತ್ತ ಗ್ರಾಹಕರಿಂದ ಉಕ್ಕು ಪಾತ್ರೆಗಳಿಗೆ ಬೇಡಿಕೆ ಉಕ್ಕುತ್ತಿತ್ತು. ಒಮ್ಮೆ ರುಚಿ ನೋಡಿದ ಅವರು ಮತ್ತೆ ಅವುಗಳಿಗಾಗಿ ನಮ್ಮಲ್ಲಿಗೆ ಬಂದಾಗ ಹತಾಶರಾಗಿ ಪೇಟೆಗೆ ಹೋಗುತ್ತಿದ್ದರು. ಅಲ್ಲೋ? ಈಗ ಉಕ್ಕಿನ ದರ ಬೆಳ್ಳಿಯ ದರಕ್ಕೆ ಜಿಗಿದಿತ್ತು; ಸೌದಾಮಿನಿಯ ಕ್ಷಣಿಕ ಮಿಂಚಿನಿಂದ ಉದ್ಭವಿಸಿದ ನಿರ್ವಾತದಲ್ಲಿ ವಾಯು ಅಣುಗಳು ಅಧಿಕ ಸಂಖ್ಯೆಯಲ್ಲಿ ಸಂಘಟ್ಟಿಸುವಂತೆ.

ಪ್ರತಿ ವರ್ಷದ ಲೆಕ್ಕ ಪರಿಶೋಧನ ವರದಿಯಲ್ಲಿ ಕಾಣಿಸುತ್ತಿದ್ದ ಅಭ್ಯಂತರಗಳು ಗೌರವ ಕಾರ್ಯದರ್ಶಿಯಾದ ನನ್ನನ್ನು ನೇರ ಸೆರೆಮನೆಗೆ ರವಾನಿಸಲು ಸಾಕಾಗುವಷ್ಟು ಹಿರಿಗಾತ್ರದಲ್ಲಿದ್ದುವು. ಹಿಂದಿನ ವಿದ್ಯಾರ್ಥಿ ಮಿತ್ರರು ಓದು ಮುಗಿಸಿ ಕಾಲೇಜು ಬಿಟ್ಟುಹೋಗಿದ್ದರು. ಹೊಸಬರು ಸಿಗಲಿಲ್ಲ. ಬಾಳಿಗರು ಮತ್ತು ನಾನು ಇಬ್ಬರೇ 'ಹಳೆ ಅಪರಾಧಿ'ಗಳಾಗಿ ಉಳಿದವರು. ಅಚ್ಯುತನ್ ಪಿಳ್ಳೆಯವರ ಮೇಲೆ ರಾಜಕೀಯ ದೋಷಾರೋಪಣೆ ಮಾಡಿ ಹಿಂದಕ್ಕೆ ಕಳಿಸಲಾಗಿತ್ತು (ಅಧ್ಯಾಯ ೨೭ ನೋಡಿ). ಹೊಸತಾಗಿ ಬಂದವರು? ಆದರೆ ಸಂಘ ನಮ್ಮ ಪೂರ್ಣಾವಧಿಯ ಸೇವೆಯಿಂದಲೂ ತೃಪ್ತಿ ತಳೆವ ಸ್ಥಿತಿಯಲ್ಲಿರಲಿಲ್ಲ. ಇವೆಲ್ಲ ಅಂಶಗಳನ್ನೂ ಅನುಲಕ್ಷಿಸಿ, ಹೊಸ ಪ್ರಾಂಶುಪಾಲರ ಅನುಮತಿಯ ಮೇರೆಗೆ, ಎರಡು ನಿರ್ಧಾರಗಳನ್ನು ತಳೆದೆ: ಒಂದು, ಉಕ್ಕು ವಿಭಾಗವನ್ನು ಪುನರಾರಂಭಿಸಿ ಸದಾ ಸ್ತಿಮಿತ ವ್ಯಾಪಾರ ಇರುವಂತೆ ಮಾಡುವುದು. ಎರಡು, ಪೂರ್ಣಾವಧಿಯ ಒಬ್ಬ ಗುಮಾಸ್ತ–ಮತ್ತು–ಮಾರಾಟಗಾರನನ್ನು ನೇಮಿಸುವುದು.

ಈ ಮೊದಲು ಉಲ್ಲೇಖಿಸಿದ್ದ ಅಪ್ಪಯ್ಯನವರು ಈ ವೇಳೆಗೆ ಸ್ಥಳೀಯ ಸಹಕಾರೀ ಶಿಕ್ಷಣಶಾಲೆಯಲ್ಲಿ ಒಬ್ಬ ಶಿಕ್ಷಕರಾಗಿದ್ದರು. ಅವರ ಶಿಫಾರಸಿನ ಮೇರೆಗೆ ಅವರ ಶಿಷ್ಯನೇ ಆಗಿದ್ದ ಒಬ್ಬ ಅಭ್ಯರ್ಥಿಯನ್ನು ಗುಮಾಸ್ತನಾಗಿ ನೇಮಿಸಿಕೊಂಡೆವು. ಅತ್ಯಂತ ಶುಭ್ರ ಚಾರಿತ್ರ್ಯವಂತನೀತ, ಕಾರ್ಯನಿಷ್ಠನೀತ, ಶಿಸ್ತುಗಾರನೀತ ಎನ್ನುವ ವಿಚಾರದಲ್ಲಿ ಅವರಿಂದ ನಮಗೆ ಪೂರ್ಣ ಭರವಸೆ ದೊರೆತಿತ್ತು. ಇಲ್ಲಿಯ ಸನ್ನಿವೇಶ ಹೇಗಿತ್ತು? ಹಲವು ಹತ್ತು ಸಾವಿರ ರೂಪಾಯಿ ಮೌಲ್ಯದ ಸಾರ್ವಜನಿಕ ನ್ಯಾಸವನ್ನು ಯಾವುದೇ ವಿಧವಾದ ದಾಖಲೆ ಯಾ ಇಡುಗಂಟು ಇಲ್ಲದೇ ಮಾರಾಟ ಮಾಡಲು ನಾವು ಅವನಿಗೆ ನೇರವಾಗಿ ಒಪ್ಪಿಸುವವರಿದ್ದೆವು – ವಿಶ್ವಾಸಾರ್ಹತೆ, ಪ್ರಾಮಾಣಿಕತೆ, ಋಜುತ್ವ, ಆರ್ಜವ ಎಂಬಿವೇ ಮುಂತಾದ ಅಮೂರ್ತ (ಅಸ್ಪಷ್ಟವೂ ಅನ್ನಿಬೇಕಾದರೆ) ಗುಣಗಳನ್ನು ಅವನಲ್ಲಿ ನಿರೀಕ್ಷಿಸಿದ್ದೆವು. ನಾನೂ ಅವನೊಡನೆ ಸಮಭುಜನಾಗಿ ಈ ಹಿಂದಿನಂತೆಯೇ, ದುಡಿದು ವ್ಯಾಪಾರಾಭಿವೃದ್ಧಿಯನ್ನು ಸಾಧಿಸುವವನಿದ್ದೆ. ಬಾಳಿಗರ ಮತ್ತು ಆಯ್ದ ಕೆಲವು ವಿದ್ಯಾರ್ಥಿಗಳ ಸೇವೆ ಕೂಡ ನಮಗೆ ದೊರೆಯುತ್ತಿತ್ತು. ಇತ್ತ ನಮ್ಮ ಹೊಸ ಗುಮಾಸ್ತನಿಗೆ ಸ್ಥಳೀಯವಾಗಿ ಎಲ್ಲಿಯೂ ದೊರೆಯದಿದ್ದ ಆರ್ಥಿಕ ಸಂಭಾವನೆ ಮತ್ತು ಇತರ ಸವಲತ್ತುಗಳನ್ನು ನೀಡಿದ್ದೆವು. ಬೋನಸ್, ವೇಳೆ ಮೀರಿದ ದುಡಿಮೆಗೆ ಅಧಿಕ ಸಂಭಾವನೆ, ಸಾಲ ರೂಪದಲ್ಲಿ ಅವನಿಗೆ ಬೇಕಾಗುವ ಸಾಮಗ್ರಿಗಳು ಇವೇ ಮುಂತಾದ ರಿಯಾಯಿತಿಗಳನ್ನು ನಾವಾಗಿಯೇ ತಿಳಿದು ಒದಗಿಸಿದ್ದೆವು. ಅವನು ಸಂತೋಷಿಯಾಗಿ ಪೂರ್ಣ ನಿಷ್ಠೆಯಿಂದ ಈ ಸಂಘವನ್ನು ಬೆಳೆಸಬೇಕು, ಸಂಘದ ಆದರ್ಶವನ್ನು ಇನ್ನಷ್ಟು ಸಫಲಗೊಳಿಸಬೇಕು ಎಂಬುದು ನಮ್ಮ ಘನ ಉದ್ದೇಶ. ಆದರೆ ತಿಂಗಳುಗಳು ಉರುಳಿದಂತೆ ಒಂದು ಸಂಗತಿ ಸ್ಪಷ್ಟವಾಯಿತು: ನಮ್ಮ ಗುಮಾಸ್ತನ ಒಲವು ಇದ್ದುದು 'ಅಧಿಕ ಸಂಬಳ, ಜಾಸ್ತಿ ಸವಲತ್ತು, ಕಡಿಮೆ ಕೆಲಸ'ದ ಕಡೆಗೆ. ತಡವಾಗಿ ಬಂದು ಬೇಗ ಹೋಗಿ ಇದ್ದಾಗ ಕೆಲಸ ಮಾಡದೇ ಗೊಣಗುವುದು ಇವನ ನೀತಿ ಆಯಿತು. ಕಡವಾಗಿ ಇವನು ಕೊಂಡ ಉಕ್ಕು ಪಾತ್ರೆಗಳನ್ನು ನಗದಾಗಿ ಹೊರಗೆ ಮಾರಿ ಚಲಾವಣೆಗೆ ದುಡ್ಡು ಮಾಡಿಕೊಳ್ಳುತ್ತಿದ್ದ ಎಂಬುದು ನನಗೆ ಗೊತ್ತಾಯಿತು. ಅತಿ ಹೆಚ್ಚು ಕೆಲಸ ಇದ್ದ ದಿನವೇ ಇವನು ಗೈರುಹಾಜರ್. ಪ್ರತಿದಿನ ಸಾಯಂಕಾಲ ನಗದು ಹಣವನ್ನು ತಾಳೆ ಮಾಡುವಾಗ ಹೊಂದಾಣಿಕೆಯೇ ಇರುತ್ತಿರಲಿಲ್ಲ. ಒಂದೋ ಹೆಚ್ಚು, ಇಲ್ಲವೇ ಕಡಿಮೆ. ಹೆಚ್ಚು ಹಣ ಇದ್ದರೆ ಬಿಲ್ ಬರೆಯದೇ ವ್ಯಾಪಾರ ನಡೆದಿದೆ ಎಂದೂ ಕಡಿಮೆ ಇದ್ದರೆ ಹಣ ಸೋರಿಹೋಗಿದೆ ಎಂದೂ ಮೊದಲಿಗೆ ಹೊಳೆವ ಕಾರಣ. ಗುಮಾಸ್ತನ ಕುಹಕ ಮನಸ್ಸು ಇಂಥ ಸನ್ನಿವೇಶಗಳನ್ನು ಕೃತಕವಾಗಿ ನಿರ್ಮಿಸಿ ನಮ್ಮನ್ನು ಬೇಸ್ತು ಬೀಳಿಸುವುದು ಅಸಂಭಾವ್ಯ ಏನೂ ಅಲ್ಲ. ವಸ್ತು–ಪುಟ ದಾಸ್ತಾನು ಪುಸ್ತಕ ಇಲ್ಲದ (ವಾಸ್ತವವಾಗಿ ಯಾವುದೇ ವಿಧದ ದಾಸ್ತಾನು ಪುಸ್ತಕ ಇಲ್ಲದ) ನಮ್ಮ ಸಂಗಹದ ಬೆಲೆ

ಬಾಳುವ ಪಾತ್ರೆಗಳನ್ನು ಈತ ನೇರ ಲಪಟಾಯಿಸಿದರೆ ಅದು ನಮಗೆ ತಿಳಿವ ಬಗೆಯೇ ಇರಲಿಲ್ಲ – ಕದಳಿವನದೊಳು ಮದ್ದಾನೆ ಹೊಕ್ಕಂಥ ಪರಿಸ್ಥಿತಿ. ನಿದ್ರಾನಾಶ ಏನೆಂದೇ ಗೊತ್ತಿರದಿದ್ದ ನನಗೆ ಈಗ ಅದರ ಅನುಭವ ಕಟುವಾಗಿ ಆಗತೊಡಗಿತ್ತು. ನನ್ನ ಕೆಲಸ ಏನಾದರೂ ಕಡಿಮೆ ಆಯಿತೇ? ಕೆಲಸ ಜಾಸ್ತಿ, ಚಿಂತೆ ಹೆಚ್ಚು, ದುಗುಡ ದುಮ್ಮಾನ ದಿನ ದಿನ ಏರಿಕೆ. ಎಲ್ಲಿಯ ತನಕ? ಮಾಲೀಕ ಕೆಲಸದ ಹೊಣೆಯನ್ನು ಹಗುರ ಮಾಡಿಕೊಳ್ಳಲು ಸಹಾಯಕನನ್ನು ನೇಮಿಸುವನು. ಆದರೆ ಅವನಿಗೆ ತಿಳಿಯದಂತೆ ಆ ಸಹಾಯಕ ಹೊಸ ಒಂದು ಸಮಸ್ಯೆಯನ್ನು ತನ್ನೊಡನೆ ತಂದಿರುತ್ತಾನೆ. ಹೀಗಾಗಿ ಪರದನಿಗೆ ಈಗ ಮೊದಲಿನ ಕೆಲಸದ ಜೊತೆಗೆ ಈ ಸಮಸ್ಯಾ ಪರಿಹಾರದ ಚಿಂತೆಯೂ ಸೇರಿಕೊಳ್ಳುವುದು. ಪಾರ್ಕಿನ್ಸನ್ನನ ಈ ಸೂತ್ರದ ಪ್ರತ್ಯಕ್ಷಾನ್ವಯ ನನ್ನ ಮೇಲೆಯೇ ಆಗತೊಡಗಿದಾಗ ಸಹಜವಾಗಿ ನಾನು ಶಾಶ್ವತ ಪರಿಹಾರಾನ್ವೇಷಣೆ ಮಾಡಲು ಹವಣಿಸಿದೆ. ಜಬರದಸ್ತು, ಅನುನಯವಿನಯ, ನೀತಿಬೋಧನೆ ಯಾವುದೂ ಇವನನ್ನು ಸರಿ ಹಾದಿಗೆ ತರಲಿಲ್ಲ. ಸ್ವತಃ ಇವನ ಗುರುಗಳನ್ನೇ ನಿಂದಿಸುವ ದಾರ್ಷ್ಟ್ಯ ಇವನದ್ದಾಗಿತ್ತು. ಈಗೀಗ ಕೆಲಸ ಮಾಡದೆ ಹೋರುವುದು, ಎದುರಾಡುವುದು, ಗಿರಾಕಿಗಳೊಡನೆ ಅಸಡ್ಡೆಯಿಂದ ವರ್ತಿಸುವುದು, ವಿನಾಕಾರಣ ಗೈರುಹಾಜರಾಗುವುದು ಎಲ್ಲವೂ ಹೆಚ್ಚಾದುವು. ಇವನನ್ನು ವಜಾಗೊಳಿಸುವುದೊಂದೇ ಶಾಶ್ವತ ಪರಿಹಾರ ಎಂದು ಭಾವಿಸಿ ಯುಕ್ತ ಮುಹೂರ್ತಕ್ಕಾಗಿ ಹೊಂಚುಹಾಕುತ್ತಿದ್ದೆ. ಈ ಪೊಲೀಸ್ – ಕಳ್ಳ ವ್ಯವಹಾರ ನನಗೆ ತುಂಬ ಸಂಕಟವನ್ನೂ ಕ್ಲೇಶವನ್ನೂ ಉಂಟುಮಾಡುತ್ತಿತ್ತು. ಆದರೆ ಬೇರೆ ವಿಧಿ ಇರಲಿಲ್ಲ.

ಒಂದು ಅಪರಾಹ್ನ. ತರಗತಿ ಪಾಠ ಮುಗಿಸಿದ ಬಳಿಗೆ ಎಂದಿನಂತೆ ಸಂಘಕ್ಕೆ ಬಂದು ಗಲ್ಲಾದಲ್ಲಿ ಕುಳಿತೆ. ಗಿರಾಕಿಗಳು ಬರುತ್ತಿದ್ದರು. ಗುಮಾಸ್ತ ಗೋಣಗುತ್ತ ಅವರಿಗೆ ಸಾಮಾನು ಕೊಡುತ್ತಿದ್ದ. ನಾನು ಬಿಲ್ ಬರೆದು ಹಣ ಪಡೆಯುತ್ತಿದ್ದೆ. ಹೀಗೆಯೇ ಮುಂದುವರಿಯುತ್ತಿದ್ದಾಗ ಒಬ್ಬ ವಿದ್ಯಾರ್ಥಿ ಬಂದು, "ಸರ್! ನಾನು ಇದೀಗ ತಾನೇ ಕೊಂಡು ಹೋದ ಈ ಕ್ಲಿಪ್ಪರ್ ಪೆನ್ ಬದಲು ಹೆಚ್ಚು ಕ್ರಯದ ಬೇರೆ ಒಂದು ಪೆನ್ ಬೇಕು" ಎಂದು ಅದನ್ನೂ ಅದರ ಬಿಲ್ಲನ್ನೂ ನನಗೆ ಕೊಟ್ಟ. ಬಿಲ್ಲಿನ ಮೇಲೆ ಪೆನ್ನಿನ ಬೆಲೆ ರೂ ೪.೫೦ನ್ನು ಗುಮಾಸ್ತ ಸರಿಯಾಗಿಯೇ ಬರೆದಿದ್ದ. ಅದರ ದ್ವಿಪ್ರತಿಯನ್ನು ನಾನು ಸಹಜವಾಗಿ ತೆರೆದು ನೋಡಿದಾಗ ಅಲ್ಲಿ ಕಂಡದ್ದೇನು? ಆ ಇಂಗಾಲ ಪ್ರತಿಯಲ್ಲಿ ಸ್ಪಷ್ಟವಾಗಿ ಇದ್ದದ್ದು 'ಸ್ವೀಟ್ಸ್ ೦–೨೫.' ಮೂಲಬಿಲ್ಲನ್ನೂ ದ್ವಿಪ್ರತಿಯನ್ನೂ ಗುಮಾಸ್ತನ ಎದುರೊಡ್ಡಿದೆ. ಈ ಹಠಾತ್ ಆಕ್ರಮಣದಿಂದ ತತ್ತರಿಸಿ ಹೋದ ಆತ ಆ ಕ್ಷಣ ದೀರ್ಘದಂಡ ಪ್ರಣಾಮ ಮಾಡಿ, "ತಪ್ಪಾಯ್ತು, ತಪ್ಪಾಯ್ತು, ಕ್ಷಮಿಸಬೇಕು ಸರ್" ಎಂದು ಗೋಗರೆದು ಅತ್ತ. ಆ ಗಳಿಗೆಯಲ್ಲಿ ನಾನು ಯಾವ ಪ್ರತಿಕ್ರಿಯೆಯನ್ನೂ ವ್ಯಕ್ತಪಡಿಸದೆ (ನನ್ನ ಸ್ವಭಾವಕ್ಕೆ ತೀರ ವಿರುದ್ಧವಾದ ವರ್ತನೆ ಇದು) ಗಿರಾಕಿಗಳೆಲ್ಲರನ್ನೂ ತೃಪ್ತಿಪಡಿಸಿ ಕಳಿಸಿದ್ದಾಯಿತು. ಅಂದಿನ ಸಂಜೆಯ ಲೆಕ್ಕ ತಪಾಸಣೆ ಮುಗಿಯಿತು. ಮಾಮೂಲಿನಂತೆ ಹಣದಲ್ಲಿ ಖೋತಾ ಇತ್ತು. ಈ ವೇಳೆಗೆ ನನ್ನ ಮನಸ್ಸು ಪೂರ್ಣಾಹುತಿಗೆ ಪಕ್ವವಾಗಿತ್ತು. ಆದ್ದರಿಂದ ಯಾವ ಉದ್ವೇಗವೂ ಇಲ್ಲದೇ ಶಾಂತವಾಗಿ ಆದರೆ ಖಚಿತವಾಗಿ ಮಾತಾಡತೊಡಗಿದೆ, "ನಿನ್ನ ಮೇಲೆ ನಾನು ಇಟ್ಟಿದ್ದ ವಿಶ್ವಾಸಕ್ಕೆ, ನಿನಗೆ ನೀಡಿದ ರಿಯಾಯಿತಿಗಳಿಗೆ ಸರಿಯಾದ ಪ್ರತಿಫಲ ದೊರೆಯಿತು."

"ಮನ್ನಿಸಬೇಕು ಸರ್! ತಪ್ಪಾಯಿತು"

"ಖಚಿತ ಪುರಾವೆ ದೊರೆತದ್ದರಿಂದ ತಾನೇ ಈ ನಿನ್ನ ತಪ್ಪೊಪ್ಪಿಗೆ? ನಮ್ಮ ಲೆಕ್ಕಕ್ಕೆ ಸಿಕ್ಕದೇ ಸೋರಿ ಹೋದ ಪ್ರಸಂಗಗಳೆಷ್ಟೋ?"

ಮಾತಿಲ್ಲ, ನಾನೇ ಮುಂದುವರಿಸಿದೆ, "ಈಗೇನು ಮಾಡಬೇಕು?"

"ಕ್ಷಮಿಸಿಬಿಡಿ ಸರ್, ಮುಂದೆ ನೀವು ಹೇಳಿದ ಹಾಗೆ ವಿಧೇಯನಾಗಿ ಇರುವೆನು."

"ವಿಶ್ವಾಸಾಘಾತಕ್ಕೆ ಕ್ಷಮೆ ಇಲ್ಲ. ಈಗ ಎರಡು ಪರ್ಯಾಯಗಳನ್ನು ಸೂಚಿಸುತ್ತೇನೆ: ಈ ಪ್ರಸಂಗವನ್ನು ಪೊಲೀಸರಿಗೆ ಒಪ್ಪಿಸುವುದು ಒಂದು, ಮರುಮಾತಾಡದೆ ಈಗಿಂದೀಗಲೇ ನೀನು ರಾಜೀನಾಮೆ ಕಾಗದ ಬರೆದು ಒಪ್ಪಿಸಿ ಇಲ್ಲಿಂದ ಹೊರಟುಹೋಗುವುದು ಎರಡು. ಹೇಳು, ಏನು ಮಾಡುತ್ತೀಯೆಂದು?"

ಅವನು ಹಲುಬಿದ, ಗೋಳಾಡಿದ, ಕಾಲು ಹಿಡಿದ. ಇವೆಲ್ಲ ನಾಟಕಗಳಿಗೆ ನಾನು ಬಗ್ಗಲಿಲ್ಲ, ಜಗ್ಗಲಿಲ್ಲ. ಕೊನೆಗೆ ರಾಜೀನಾಮೆ ಕಾಗದ ನಾನು ಹೇಳಿದಂತೆ ಬರೆದು ನಮ್ಮಲ್ಲಿಂದ ಬಿಡುಗಡೆಗೊಂಡು ತೊಲಗಿಹೋದ. ಹೀಗೆ ಒಂದು, ದುಸ್ವಪ್ನ ಕರಗಿ ಹೋಯಿತು: ಅವನ ಒಂದು ವರ್ಷದ ಸೇವಾವಧಿಯಲ್ಲಿ ಸೋರಿ ಮರೆ ಆಗಿರಬಹುದಾದ ಹಣ, ಮಾಲು ಎಷ್ಟು ಎಂಬುದರ ಅಂದಾಜೇ ನನಗೆ ಆಗಲಿಲ್ಲ.

ಈ ಘಟನೆ ನನ್ನೆದುರು ಎರಡು ಮುಖ್ಯ ಪ್ರಶ್ನೆಗಳನ್ನು ಎತ್ತಿತು: ಅವನ ದುರ್ವರ್ತನೆಯನ್ನು ವೈಯಕ್ತಿಕ ಅಪರಾಧವೆಂದು ತಿಳಿಯಬೇಕೇ? ಅಥವಾ ಸಹಕಾರ ರಂಗದಲ್ಲಿ (ವ್ಯಾಪಕವಾಗಿ ಸಾರ್ವಜನಿಕ ವಲಯದಲ್ಲಿ) ಹಬ್ಬುತ್ತಿರುವ ವೈರಸ್ಸಿನ ಪ್ರತೀಕವೆಂದು ಭಾವಿಸಬೇಕೇ? ಸಮಕಾಲೀನರು ಯಾರೂ ಇವುಗಳಿಗೆ ಉತ್ತರ ನೀಡಲಾರರು.

ಬುದ್ಧಿವಂತನಾದ ವಂಚಕನಿಗಿಂತಲೂ ದಡ್ಡನಾದ ಪ್ರಾಮಾಣಿಕನೇ ಲೇಸು ಎಂದು ತೀರ್ಮಾನಿಸಿ ಇಂಥ ಒಬ್ಬನನ್ನು ಅರಸಲು 'ಕರಿಯ ಕೈಗೆ ಕುಸುಮ ಮಾಲೆಯಿತ್ತು' ಕಳಿಸಿದೆವು. ನಮ್ಮ ಅದೃಷ್ಟದಿಂದ ನಗುಮೊಗದ, ದುಡಿಮೆಗಾರ, ಪ್ರಾಮಾಣಿಕ, ಬಡವನೊಬ್ಬ ದೊರೆತ. ಇವನಿಗೆ ಕೆಲಸದ ಯಾವ ಮಾಹಿತಿಯೂ ಇರಲಿಲ್ಲ. ಆದರೆ ಕೆಲಸ ಕಲಿಯುವುದರಲ್ಲೂ ಮಾಡುವುದರಲ್ಲೂ ಅತಿ ಶ್ರದ್ಧೆ ಆಸಕ್ತಿಗಳಿದ್ದುವು. ಇವನು ಬಂದದ್ದರಿಂದ ನಮ್ಮ ಒಳಾಡಳಿತದ ಸಮಸ್ಯೆಗಳೆಲ್ಲವೂ ಮಾಯವಾಗಿ ಹೋದುವು. ವ್ಯಾಪಾರ ಹಾಗೂ ಗ್ರಾಹಕ ಸೇವೆ ಅತಿ ಕ್ಷಿಪ್ರವಾಗಿ ವರ್ಧಿಸಿದುವು. ನಮಗೆ ಐದು ವರ್ಷ ತುಂಬುವ ವೇಳೆಗೆ ಇವನನ್ನು ಮ್ಯಾನೇಜರ್ ಪದವಿಗೆ ಏರಿಸಿ ಒಬ್ಬ ಅಕೌಂಟೆಂಟನನ್ನೂ ಒಬ್ಬ ಸೇವಕನನ್ನೂ ನೇಮಿಸಿದೆವು. ಹೀಗೆ ಭಾರೀ ಒಂದು 'ಸಾಮ್ರಾಜ್ಯ'ದ ಹಿರಿತನ ನನಗೆ ಸಹಜವಾಗಿ ಬಂದೊದಗಿತು. ಸಂಘದ ಶಾಶ್ವತ ಅಭಿವರ್ಧನೆಗೆ ಬೇಕಾಗುವ ಲೆಕ್ಕ ಪತ್ರಗಳನ್ನು ವ್ಯವಸ್ಥೆಗೊಳಿಸುವ ದಿಶೆಯಲ್ಲಿ ದಿಟ್ಟಿ ಹಾಯಿಸುವುದು ಈಗ ಸಾಧ್ಯವಾಯಿತು.

ನಮ್ಮ ಅಂದಿನ ಘೋಷಣೆ ಜಾಹೀರಾತುಗಳ ಮಾದರಿ ನೋಡಿ:
ನಿಮ್ಮ ಹಣಕ್ಕೆ ಯೋಗ್ಯ ಪ್ರತಿಫಲ ಮತ್ತು ಸೇವೆ ಬೇಕೇ?
ಏರುತ್ತಿರುವ ಧಾರಣೆಯನ್ನು ತಡೆಹಿಡಿದಿಡಲು ಬಯಸುವಿರೇ?
ನಿಮಗಿರುವ ದಾರಿ ಒಂದೇ: ಬನ್ನಿ ಕಾಲೇಜ್ ಸಂಘಕ್ಕೆ!
ಸಹಕಾರ ವ್ಯಾಪಾರೋದ್ಯಮದ ಮಹೋನ್ನತ ನಿದರ್ಶನಕ್ಕೆ!
ಓದಲು ಪುಸ್ತಕ ಬರೆಯಲು ಕಾಗದ
ತಿನ್ನಲು ಬಿಸ್ಕತ್ ಧರಿಸಲು ಸ್ವೆಟ್ಟರ್
ಬೇಕಾದ್ದೆಲ್ಲವ ಹರ್ಷದೊಳೀಯುವ
ಕಾಮಧೇನುವನು ಕೇಳಲು ಬನ್ನಿ!
ಉದ್ಗ್ರಂಥಗಳ ಸಾಲೇ ಸಾಲು
ಬಣ್ಣ ಬಣ್ಣದ ಮಾಲೇ ಮಾಲು
ಮಿರಮಿರಗುತ್ತಿಹ ಸ್ಟೀಲೇ ಸ್ಟೀಲು
ಈ ವೈಭವವನು ನೋಡಲು ಬನ್ನಿ!

ಗ್ರಂಥಗಳು, ಪಠ್ಯ ಹಾಗೂ ಉಪಪಠ್ಯ ಪುಸ್ತಕಗಳು, ಮಾರ್ಗದರ್ಶೀ ಪುಸ್ತಕಗಳು, ವಿದ್ಯಾರ್ಥಿಗಳಿಗೂ ಮುದ್ರಣಾಲಯಗಳಿಗೂ ಕಛೇರಿಗಳಿಗೂ ಬೇಕಾಗುವ ಸಮಸ್ತ ಲೇಖನ ಸಾಮಗ್ರಿಗಳು, ಉಕ್ಕಿನ ಪಾತ್ರೆಗಳು, ಸರ್ವವಿಧವಾದ ಶೃಂಗಾರ ವಸ್ತುಗಳು, ಉಣ್ಣೆ ವಸ್ತ್ರಗಳು ಮತ್ತು ನೇಯ್ಗೆಗಳು, ನೈಲಾನ್ ಕಾಲುಚೀಲಗಳು, ಬಿಸ್ಕಟ್ ಬಗೆಗಳು, ಸಕ್ಕರೆ, ಜೇನು, ಕಾಫಿಬೀಜ, ಗೋಡಂಬಿ, ಏಲಕ್ಕಿ, ದ್ರಾಕ್ಷಿ, ಕೇಸರಿ, ತೆಂಗಿನೆಣ್ಣೆ, ಎಳ್ಳೆಣ್ಣೆ, ರಿಫೈನ್ಡ್ ಆಯಿಲ್, ಮುಂತಾದ ಆಹಾರ ಪದಾರ್ಥಗಳು, ಬಹುಮಾನವೀಯಲು ಕಪ್ಪುಗಳು, ಮೆಡಲುಗಳು, ಷೀಲ್ಡುಗಳು ಮುಂತಾದ ಆಕರ್ಷಕ ವಸ್ತುಗಳು, ಕೊಡೆಗಳು, ಮಳೆಕೋಟುಗಳು, ಗಂಬೂಟುಗಳು – ಹೀಗೆಯೇ ಬೆಳೆಸಬಹುದು. ಈ ತೆರನಾಗಿ ನಮ್ಮ ಸೇವೆ ವ್ಯಾಪಕವಾಗಿತ್ತು. ಸ್ಥಳಾವಕಾಶ ದೊರೆತಿದ್ದರೆ ವಸ್ತ್ರ ವಿಭಾಗವನ್ನು ಪ್ರಾರಂಭಿಸುವ ಯೋಚನೆಯೂ ಇತ್ತು. ಕೆಲವು ಹಿತೈಷಿಗಳು ಮಡಿಕೇರಿ ಪೇಟೆಯಲ್ಲಿ ನಮ್ಮ ಒಂದು ಶಾಖೆಯನ್ನು ತೆರೆಯಬೇಕೆಂದು ಸೂಚಿಸಿದರು. ಅದು ಸಂಘಕ್ಕೆ ಪೂರ್ಣಾವಧಿಯ ಕಾರ್ಯದರ್ಶಿ ಬರುವ ತನಕ ಯೋಚಿಸತಕ್ಕದ್ದಲ್ಲ. ಈಗಾಗಲೇ ಗೌರವ ಕಾರ್ಯದರ್ಶಿಯ ನಿಜವೃತ್ತಿ ಸಂಘ ಸೇವೆ, ಉಪವೃತ್ತಿ ಕಾಲೇಜು ಅಧ್ಯಾಪನ ಎನ್ನುವ ತಿರುಗಾಮುರುಗಾ ಪರಿಸ್ಥಿತಿ ಆಗಿದೆ. ಇನ್ನು ಶಾಖೆಯನ್ನೇನಾದರೂ ಆರಂಭಿಸಿದರೆ ಈ ಒಂಟೆಯೇ ಡೇರೆಯ ಯಜಮಾನ ಪೂರ್ತಿ ಆಗುವುದು ಖರೆ ಎಂದು ಭಾವಿಸಿ ಈ ಸೂಚನೆಯನ್ನು ತಳ್ಳಿ ಹಾಕಿದೆ.

ಕೆಲವು ವೇಳೆ ವಿಶೇಷ ಆದೇಶಗಳು ಬರುವುದಿತ್ತು. ಉದಾಹರಣೆಗೆ ಹಲವಾರು ಸಂಸ್ಥೆಗಳಿಗೆ ಗಾಡ್ರೆಜ್ ಅಲ್ಮೈರಾಗಳು, ಸ್ಟೀಲಿನ ಪೀಠೋಪಕರಣಗಳು ಇತ್ಯಾದಿಗಳ ಪೂರೈಕೆ. ಇಂಥವನ್ನು ಸಕಾಲದಲ್ಲಿ ಆಕರ್ಷಕ ಬೆಲೆಯಲ್ಲಿ ಒದಗಿಸಿ ಅವುಗಳ ಕೃತಜ್ಞತೆಗೆ ಪಾತ್ರರಾಗಿದ್ದೆವು. ಒಮ್ಮೆ ಒಬ್ಬ ಮಿತ್ರರು, "ನಮಗೆ ಹಾಲುಗರೆಯಲು ಎಮ್ಮೆ ಒದಗಿಸುವಿರಾ?"

ಎಂದು ಲಘು ವಿನೋದ ಮಿಶ್ರಿತವಾಗಿ ಕೇಳಿದ್ದರು. ಅವರನ್ನು ಹೆಬ್ಬಾಲೆಯ (ಕೊಡಗಿನಲ್ಲಿ ಎಮ್ಮೆಗಳಿಗೆ ಹೆಸರಾಂತ ಮಾರುಕಟ್ಟೆ) ಗಿರಾಕಿ ಮಿತ್ರರೊಬ್ಬರಿಗೆ ಪರಿಚಯಿಸಿ ಈ ವ್ಯವಹಾರವನ್ನು ಕುದುರಿಸಿದ್ದೆವು. ಮುಫತ್ತಾಗಿ ನೀಡಿದ ಇಂಥ ಸಲಹೆ ನೆರವುಗಳು ಅವೆಷ್ಟೋ. ನಮ್ಮ ಸಂಘವೆಂದರೆ ಕೇವಲ ವ್ಯಾಪಾರ ಸಂಸ್ಥೆ ಅಲ್ಲ. ಒಂದು ಸಾಮಾಜಿಕ ಕೇಂದ್ರ, ಯಾವ ವಿಷಯವನ್ನೂ ಕುರಿತು ಸಮರ್ಥ ಸಲಹೆ ಸಿಕ್ಕಬಲ್ಲ ಒಂದು ವಿನಿಮಯ ಕೇಂದ್ರ ಎಂಬ ಭಾವನೆ ನಂಬಿಕೆ ಸಾರ್ವತ್ರಿಕವಾಗಿ ಬೆಳೆದುವು.

ನಮ್ಮ ಗಿರಾಕಿಗಳೀಗ ಅಖಿಳ ಪ್ರಪಂಚ ವ್ಯಾಪ್ತಿ ಪಡೆದಿದ್ದರು. ದೇಶ ವಿದೇಶಗಳಿಂದ ಕೊಡಗಿಗೆ ಬರುತ್ತಿದ ಪ್ರವಾಸಿಗಳು ರಾಜಧಾನಿ ಮಡಿಕೇರಿಯನ್ನು ಸಂದರ್ಶಿಸುತ್ತಿದ್ದುದು ವಾಡಿಕೆ. ಇವರೆಲ್ಲರೂ ತಪ್ಪದೆ ಕಾಲೇಜ್ ಸಂಘಕ್ಕೆ ಬಂದು ಏನಿಲ್ಲೆಂದರೂ ಇಲ್ಲಿಯ ಹೆಸರಾಂತ ಜೇನು, ಏಲಕ್ಕಿಯನ್ನು ಕೊಂಡೊಯ್ಯುತ್ತಿದ್ದರು. ಕಾಲೇಜ್ ಸೊಸೈಟಿಯ ಮಾಲು ಎಂದರೆ ಮುಗಿಯಿತು, ಜನ ಕಣ್ಮುಚ್ಚಿ ಬೆಲೆ ವಿಚಾರ ಮರುಮಾತಾಡದೆ ತೆಗೆದುಕೊಂಡು ಹೋಗುತ್ತಿದ್ದರು. ನಮ್ಮಲ್ಲಿ ಮಾರುತ್ತಿದ್ದ ಉಕ್ಕಿನ ಪಾತ್ರೆಗಳ ಬೆಲೆ ನೆರೆಯ ಮೈಸೂರು ಬೆಂಗಳೂರು ಮಂಗಳೂರುಗಳ ಪೈಪೋಟಿ ಮಾರುಕಟ್ಟೆಗಳ ಬೆಲೆಗಳಿಗಿಂತ ಎಷ್ಟೋ ಕಡಿಮೆ ಇತ್ತು. ಇನ್ನು ತೂಕ, ಗುಣಮಟ್ಟ, ಸೇವೆ ಮುಂತಾದವುಗಳಲ್ಲಿ ನಮ್ಮದೊಂದು ವಿಶೇಷ ದರ್ಜೆಯೇ ಆಗಿತ್ತು.

ಸಹಜವಾಗಿ ನಮಗೆ ಪದೇ ಪದೇ ತೀವ್ರ ಆರ್ಥಿಕ ಸಂಕಷ್ಟ ತಲೆದೋರುತ್ತಿತ್ತು. ಬೆಳೆಯುತ್ತಿರುವ ಪ್ರತಿಯೊಂದು ವ್ಯಾಪಾರ ವ್ಯವಸ್ಥೆಯಲ್ಲಿಯೂ ಇದು ಇದ್ದದ್ದೇ. ಬಹು ವರ್ಷಗಳ ಕಾಲ ಬ್ಯಾಂಕ್ ಸಾಲ ಏನನ್ನೂ ಪಡೆಯದೆ ನಿರಖು ಠೇವಣಾತಿಗಳನ್ನು ಹಿತೈಷಿಗಳಿಂದ ಆಹ್ವಾನಿಸಿ ಮತ್ತು ಸಗಟು ಪೂರೈಕೆದಾರರಿಗೆ ನಮ್ಮ ವಿಶ್ವಾಸವನ್ನೇ ಒತ್ತೆ ಇಟ್ಟು ಕ್ಷಿಪ್ರಾವಧಿ ಸಾಲದ ಮೇರೆಗೆ ಸಾಮಾನುಗಳನ್ನು ತರಿಸಿ ವ್ಯಾಪಾರ ಮಾಡುತ್ತಿದ್ದೆವು. ಎಲ್ಲಿಯೂ ಎಂದೂ ಮರ್ಯಾದೆ ಹೋಗುವ ಪ್ರಸಂಗ ಎದುರಾಗಲಿಲ್ಲ. ಉದಾಹರಣೆ ನೋಡಿ: ಇಂದು ಅಪರಾಹ್ಣ ೨ ಗಂಟೆ ಒಳಗೆ ಬ್ಯಾಂಕಿಗೆ ೨೦೦೦ ರೂಪಾಯಿ ತುಂಬಲೇಬೇಕು. ಈಗ ಬೆಳಿಗ್ಗೆ ೧೦ ಗಂಟೆ. ನಮ್ಮಲ್ಲಿ ಒಟ್ಟಾಗಿ ಇರುವುದು ಕೇವಲ ೬೦೦ ರೂಪಾಯಿ. ಆದರೆ ನಿಶ್ಚಿತ ಮುಹೂರ್ತದ ಮೊದಲು ವ್ಯಾಪಾರ ಕುದುರಿ ಅಥವಾ ಹಳೆಬಾಕಿ ಬಂದು ಅಥವಾ ಎರಡು ಕಾರಣಗಳಿಂದ ಬೇಕಾದ ಹಣ ಒದಗುವುದು ಖಾತ್ರಿ. ಅನೇಕ ಸಲ ನಾನು ಖಾಸಗಿ ಆಗಿ ಸಾಲ ಪಡೆದು ಆರ್ಥಿಕ ತೊಂದರೆಗಳನ್ನು ಪರಿಹರಿಸಿದ್ದುಂಟು. ನಮ್ಮಿಂದ ಸಾಲವಾಗಿ ಮಾಲುಗಳನ್ನು ಕೊಂಡಂಥ ನನ್ನ ಸಹೋದ್ಯೋಗಿ ಮಿತ್ರರೆಲ್ಲರೂ ಶಿಸ್ತಿನಿಂದ ಸಕಾಲದಲ್ಲಿ ಹಣ ಮರುಪಾವತಿ ಮಾಡಿದ್ದರೆ ಇಂಥ ಪ್ರಸಂಗಗಳು ನಮಗೆ ಎಂದೂ ಎದುರಾಗುತ್ತಿರಲಿಲ್ಲ. ಬಹುಶಃ ನನ್ನ ನಿರೀಕ್ಷೆ ಅತಿ ಆಯಿತೋ ಏನೋ? ಇನ್ನು ಲಾಭದ ಅಂಚನ್ನು ಎತ್ತರಿಸಿದ್ದರೆ ನಾವು ಎಂದೋ ಹೇರಳ ಹಣ ಕೂಡಿಡಬಹುದಿತ್ತು. ಆದರೆ ಲಾಭ ಗಳಿಸುವುದೊಂದೇ ನಮ್ಮ ನೀತಿ ಅಲ್ಲವಷ್ಟೆ? ಹೀಗಾಗಿ ನಮ್ಮ ಸಂಚಿ ಸದಾ ಖಾಲಿ; ವ್ಯಾಪಾರ ಸದ ಟಾಪ್ ಗೇರ್! ಚಿಂತೆ ಎಂದೂ ತಪ್ಪಿದ್ದಲ್ಲ. ಬ್ಯಾಂಕ್ ಸಾಲ ಸುಲಭವಾಗಿ ದೊರೆಯಲಿದ್ದುದರಿಂದ (ನಾವು ಈ ಸೌಕರ್ಯವನ್ನು ಪಡೆದು ಉಪಯೋಗಿಸಿಕೊಳ್ಳಬೇಕೆಂಬ ಕೋರಿಕೆ ವಾಸ್ತವವಾಗಿ ಸಹಕಾರೀ ಬ್ಯಾಂಕಿನವರಿಂದಲೇ ಪದೇ ಪದೇ ಬರುತ್ತಿತ್ತು) ಅನಿವಾರ್ಯವಾಗಿ ಅದನ್ನು ಪಡೆದುಕೊಂಡೆವು (ಕೇವಲ ಹತ್ತು ಸಾವಿರ ರೂಪಾಯಿಯ ಮಿತಿಯಲ್ಲಿ). 'ಕಡ ಹುಟ್ಟಿ ಬಡವ ಕೆಟ್ಟ' ಎಂಬ ಗಾದೆಯ ಅರ್ಥ ಬೇಗನೆ ನಮಗೆ ಚೆನ್ನಾಗಿ ಮನವರಿಕೆ ಆಯಿತು. ವ್ಯವಹಾರ ಸ್ವಾತಂತ್ರ್ಯವನ್ನು ಕಡದೊಂದಿಗೆ ನಮ್ಮ ಅರಿವಿಲ್ಲದೆ ಕಳೆದುಕೊಂಡಿದ್ದೆವು. ಪರಿಣಾಮವಾಗಿ, ಮಾನಧನನಾದ ನಾನು ಮತ್ತು ದಿಟ್ಟ ನಿಲವಿನ ನಮ್ಮ ಸಂಘ, ಕೆಲವು ಅಹಿತಕರ ಕಹಿಗುಳಿಗೆಗಳನ್ನು ನುಂಗಬೇಕಾಯಿತು. ಹೀಗಾಗಿ ಆದಷ್ಟು ಬೇಗನೆ ಈ ಸಾಲ ಖಾತೆಯನ್ನು ಮುಚ್ಚಿಬಿಡಬೇಕೆಂದು ನಿರ್ಧರಿಸಿದೆ. ಆದರೆ ಸಾಲವನ್ನು ಪಡೆದಷ್ಟು ಸುಲಭ ಖಂಡಿತ ಅಲ್ಲ ಅದನ್ನು ಸಂದಾಯಿಸಿ ಮುಕ್ತನಾಗುವುದು ಎಂಬ ಸತ್ಯವೂ ಅರಿವಾಯಿತು. ಹಾಸಿಗೆ ಇದ್ದಷ್ಟೇ ಕಾಲು ಚಾಚುವುದು, ಸ್ವಪ್ರಯತ್ನದಿಂದ ನಿಧಾನವಾಗಿ ಹಾಸಿಗೆಯನ್ನು ವಿಸ್ತರಿಸಿ ಮತ್ತೆ ಹೆಚ್ಚಿನ ಸುಖ ಪಡೆಯುವುದು – ನಿಜವಾಗಿ ಇವೇ ವಿರಶಾಂತಿಯ ಸೂತ್ರಗಳು.

ಈ ಪ್ರಕಾರವಾಗಿ ನಮ್ಮ ಬಲು ಎತ್ತರದ ಬಿಗಿ ಸರಿಗೆ ಮೇಲಿನ ಸುಟಿ ನಡಿಗೆ ಮುಂದುವರಿದಿತ್ತು.

ನಮ್ಮ ಕಾಲೇಜಿನ ಸಮಸ್ತ ಕಟ್ಟಡಗಳು – ಸಂಘದ ಕಟ್ಟಡವೂ ಸೇರಿದಂತೆ, ಸರ್ಕಾರದ ಕಾಮಗಾರಿ ಇಲಾಖೆಯ ಸುಪರ್ದಿಗೆ ಒಳಪಟ್ಟಿದ್ದುವು. ಕೊಡಗು ಸರ್ಕಾರ ಇದ್ದಾಗ ಸಂಘ ಮತ್ತು ಕ್ಯಾಂಟೀನುಗಳಿಗಾಗಿ ಈ ಸೌಧವನ್ನು ನಿರ್ಮಿಸಿ ಒದಗಿಸಿದ್ದರು. ನಾವು ಇದನ್ನು ಪ್ರವೇಶಿಸುವ ವೇಳೆಗೆ (೧೯೫೭) ವಿಶಾಲ ಮೈಸೂರು ಸರ್ಕಾರ ಅಧಿಕಾರ ವಹಿಸಿಕೊಂಡಿತ್ತು. ಕೆಲವು ವರ್ಷಗಳ ಬಳಿಕ ಮಡಿಕೇರಿಗೆ ವರ್ಗವಾಗಿ ಬಂದ ಅಸಿಸ್ಟೆಂಟ್ ಎಂಜಿನಿಯರನೊಬ್ಬ ಮಾಮೂಲಿನಂತೆ ನಮ್ಮ ಸಂಘಕ್ಕೂ ಬಿಜಯಂಗೈದು ತನ್ನ ಪ್ರವರವನ್ನು ಒಪ್ಪಿಸಿ ಖಾಸಗಿಯಾಗಿ ನನಗೊಂದು ಮನವಿ

(=ಹುಕುಂ) ಸಲ್ಲಿಸಿದ. ಅವನ ಬೇಡಿಕೆಯ ಸಾಮಗ್ರಿಗಳನ್ನು ನಾವು ಕಾಣಿಕೆಯಾಗಿ ಅವನಿಗೆ ಒಪ್ಪಿಸಬೇಕು. ಅಧಿಕಾರದ ವಿವಿಧ ಸ್ತರಗಳಿಂದ ಆಗ ಈಗ ಬರುತ್ತಿದ್ದ ಇಂಥ ಕೋರಿಕೆಗಳಿಗೆ ಮತ್ತು ಕಿರುಕುಳಗಳಿಗೆ ಎದುರಾಗಿ ನಾನು ಖಾಯಂ ಅಸ್ತ್ರವೊಂದನ್ನು ಇರಿಸಿದ್ದೆ. "ಇದು ಸಾರ್ವಜನಿಕ ನ್ಯಾಸ. ನನ್ನನ್ನೂ ಒಳಗೊಂಡಂತೆ ಇಲ್ಲಿ ಯಾರಿಗೂ ಇಂಥ ಸೌಕರ್ಯ ದೊರೆಯದು. ದಯಮಾಡಿ ಮನ್ನಿಸಬೇಕು." ಹೆಚ್ಚಿನ ಮಂದಿ ನನ್ನ ನಿಲವನ್ನು ಮೆಚ್ಚಿ ಮತ್ತೆ ಎಂದೂ ಇಂಥ ಪ್ರಾರ್ಥನೆಗಳನ್ನು ಸಲ್ಲಿಸುತ್ತಿರಲಿಲ್ಲ. ಆದರೆ ಈ ಅಸಿಸ್ಟೆಂಟ್ ಎಂಜಿನಿಯರ್ ಮಹೋದಯ ತನ್ನ ಬೇಡಿಕೆಯನ್ನು ನಾವು ಈಡೇರಿಸದಿದ್ದರೆ ಪರಿಣಾಮ ಒಳಿತಾಗಲಿಕ್ಕಿಲ್ಲ ಎಂಬುದಾಗಿ ಬೆದರಿಕೆ ಹಾಕಿದ. ತಿಪ್ಪೆಗೆ ಕಲ್ಲೆಸೆದರೆ ರಾಡಿ ಮುಖಕ್ಕೆ ರಟ್ಟಿ ಹೇಸಿಕೆ ಮಾಡುವುದಲ್ಲದೆ ಬೇರೇನಾದರೂ ಆದೀತೇ? ಹಾಗಾಗಿ ನಾನು ಸುಮ್ಮನಿದ್ದೆ. ಕೆಲವು ತಿಂಗಳುಗಳ ಅನಂತರ ನಮಗೆ ಸರ್ಕಾರದಿಂದ (ಕಾಮಗಾರಿ ಇಲಾಖೆಯ ಮೂಲಕ) ಒಂದು 'ಪ್ರೇಮಪತ್ರ' ಬಂತು. ಅದರ ಪ್ರಕಾರ ನಾವು ತಿಂಗಳೊಂದರ ೨೦೦ ರೂಪಾಯಿಯಂತೆ ಬಾಡಿಗೆ ಪಾವತಿ ಮಾಡಬೇಕು, ಮತ್ತು ಆ ತನಕದ ಹಳೆ ಬಾಕಿಯನ್ನು (೧೨,೦೦೦ ರೂಪಾಯಿಗಳನ್ನು ಮೀರುತ್ತಿತ್ತು) ಒಡನೆ ಸಲ್ಲಿಸಬೇಕು ಎಂದಿತ್ತು. ಅಲ್ಲದೇ ಸಂಘ ಲಾಭದಾಯಕವಾಗಿ ಕೆಲಸ ಮಾಡುತ್ತಿರುವುದರಿಂದ ಈ ಮೊಬಲಗನ್ನು ಕೇಳಿರುವುದು ನ್ಯಾಯವಾಗಿಯೇ ಇದೆ ಎಂಬ ವಿವರಣೆಯೂ (ಬರೆಯ ಮೇಲೆ ಉಪ್ಪಿನ ಲೇಪ ಕೂಡಾ) ಇತ್ತು. ಪ್ರಾಂಶುಪಾಲರ ಮೂಲಕ ನಾವು ಸರ್ಕಾರಕ್ಕೆ ನಮ್ಮ ಹಾಲೆಹವಾಲೆಗಳನ್ನು ಸಲ್ಲಿಸಿದೆವು. ಸಾರಂಶ ಇಷ್ಟೇ: ಕಾಲೇಜಿನ ಈ ಸಂಘವೂ ಗ್ರಂಥಾಲಯ, ಪ್ರಯೋಗಮಂದಿರ, ಕಛೇರಿ, ತರಗತಿ ಕೊಠಡಿಗಳಂಥ ಒಂದು ಸೇವಾ ಅಂಗ. ಇದು ಖಾಸಗಿ ಸಂಸ್ಥೆ ಅಲ್ಲ. ವಿದ್ಯಾರ್ಥಿಗಳಿಗೆ ಸರಕಾರ ಒದಗಿಸಬೇಕಾದ ಸೌಕರ್ಯವೊಂದನ್ನು ಇದು, ಸರ್ಕಾರಕ್ಕೆ ಯಾವುದೇ ಆರ್ಥಿಕ ಭಾರ ತಾಗದಂತೆ, ಚೆನ್ನಾಗಿ ನೀಡುತ್ತಿದೆ. ನಮ್ಮ ಮುಫತ್ತು ಸೇವೆ ಹಾಗೂ ದಕ್ಷ ಆಡಳಿತೆಯ ಪರಿಣಾಮವಾಗಿ ಇದರಲ್ಲಿ ಲಾಭ ಉಂಟಾಗುತ್ತಿದೆ ಅಷ್ಟೆ. "ಲಾಭ ಬರುತ್ತಿದೆ ಆದ್ದರಿಂದ ಬಾಡಿಗೆ ಕೊಡಿ" ಎಂದರೆ ಲಾಭ ಮಾಡುವುದು ಅಪರಾಧ ಎಂಬ ಅರ್ಥ ಧ್ವನಿಸುತ್ತದೆ – ಇದು ಸರಿ ಅಲ್ಲ. ಇನ್ನು ಯಾರು ಯಾರನ್ನು ಕೇಳುವುದು? ಎಡಗೈ ಬಲಗೈಯನ್ನೇ? ಸರ್ಕಾರ–ಕಾಲೇಜು–ಸಂಘ ಎಲ್ಲ ಒಂದು ಅಖಂಡ ವ್ಯವಸ್ಥೆಯ ಭಿನ್ನ ಏರ್ಪಾಡುಗಳು ಮಾತ್ರ.

ಬಾಡಿಗೆ ಹಾಗೂ ಪಾವತಿಗಾಗಿ ಅಸಿಸ್ಟೆಂಟ್ ಎಂಜಿನಿಯರನ ಕೀಟಲೆ ಕೋಟಲೆ ದಾಂಧಲೆಗಳು ಅತಿರೇಕಕ್ಕೆ ಮುಟ್ಟಿದಾಗ ಆತನ ಮೇಲಧಿಕಾರಿ ಎಕ್ಸಿಕ್ಯೂಟಿವ್ ಎಂಜಿನಿಯರರೊಡನೆ ನಾನು ಸ್ವತಃ ಮಾತಾಡಿ ಇವನ್ನು ತಾತ್ಕಾಲಿಕವಾಗಿ ನಿವಾರಿಸಿಕೊಂಡೆ. ಕೆಲವು ತಿಂಗಳುಗಳ ಅನಂತರ ಸರಕಾರೀ ಆದೇಶ ಪ್ರಕಟವಾಯಿತು. ಅದರ ಪ್ರಕಾರ ಎಲ್ಲ ಸರ್ಕಾರೀ ಕಾಲೇಜುಗಳೂ ವಿದ್ಯಾರ್ಥಿಗಳ ಉಪಯೋಗಾರ್ಥ ಮಡಿಕೇರಿ ಸರ್ಕಾರೀ ಕಾಲೇಜಿನ ಸಹಕಾರ ಸಂಘದ ಮಾದರಿಯಲ್ಲಿ ಸಂಘಗಳನ್ನು ಸ್ಥಾಪಿಸಬಹುದೆಂದೂ ಅವುಗಳಿಗೆ ಕಾಲೇಜಿನಲ್ಲಿ ಮುಫತ್ತಾಗಿ ಕೊಠಡಿ ಪೀಠೋಪಕರಣ ಮುಂತಾದವನ್ನು ಒದಗಿಸಬೇಕೆಂದೂ ಇತ್ತು. ಹೀಗೆ ನಮ್ಮ ನ್ಯಾಯಸಮ್ಮತವಾದ ನಿಲವು ಮತ್ತು ವಿವರಣೆ ಸಾರ್ವತ್ರಿಕವಾಗಿ ಉಪಕಾರಿ ಆದ ಒಂದು ಸರ್ಕಾರೀ ಆದೇಶಕ್ಕೆ ಕಾರಣವಾದುವು.

ಸಂಘದ ವ್ಯವಹಾರದಲ್ಲಿ ನನ್ನ ಕೆಲಸವಾಗಲೀ ಹೊಣೆಗಾರಿಕೆ ಆಗಲೀ ಎಂದೂ ಕಡಿಮೆ ಆಗಲಿಲ್ಲ. ಆಗುವ ಲಕ್ಷಣವೂ ಇರಲಿಲ್ಲ. ಏನಿದ್ದರೂ ಏರುವುದೊಂದೇ, ನಮ್ಮೆಲ್ಲರ ಸೇವೆಯನ್ನೂ ಅದು ಸ್ವಾಹಾಕರಿಸಿ ಅಧಿಕ ಗ್ರಾಸವನ್ನು ಬೇಡುತ್ತಿತ್ತು. ಯಾವುದೋ ಗಳಿಗೆಯಲ್ಲಿ ಯಾವುದೋ ಭಾವನೆಯಿಂದ ಪ್ರವರ್ತಿಸಿದ ಈ ಸಂಘ ಈಗ ನನ್ನ ಸಮಸ್ತ ವ್ಯಕ್ತಿತ್ವವನ್ನು ಹಿಂಡಿ ಹಿಪ್ಪೆ ಮಾಡುತ್ತಿರುವಂತೆ ನನಗೆ ಅನ್ನಿಸತೊಡಗಿತು. ಇದಕ್ಕೆ ಹಲವಾರು ಬೇರೆ ಕಾರಣಗಳೂ ಇದ್ದುವು. ಅವುಗಳ ಪೈಕಿ ಮುಖ್ಯವಾದ ನಾಲ್ಕನ್ನು ಮಾತ್ರ ಇಲ್ಲಿ ಬರೆಯುತ್ತೇನೆ.

ಒಂದನೆಯದು, ಸಹಕಾರ ಇಲಾಖೆಯ ರಂಗಿನಲ್ಲಿ ಕ್ರಮೇಣ ಆದ ಬದಲಾವಣೆ. ನಮ್ಮ ಸಂಘಕ್ಕೆ 'ಸಹಕಾರ' ಎಂಬ ವಿಶೇಷಣ ಒದಗಿಸಿದ ಸವಲತ್ತು ಒಂದೇ ಒಂದು: ನಾವು ಆ ದಿನಗಳ ಕಾನೂನು ಪ್ರಕಾರ ನಮ್ಮ ಲಾಭದ ಮೇಲೆ ಆದಾಯ ತೆರಿಗೆ ಪಾವತಿಸಬೇಕಾಗಿರಲಿಲ್ಲ. ಇದೇನೂ ಭಾರೀ ಉಳಿತಾಯ ಆಗಿರಲಿಲ್ಲ. ಕಾರಣ ನಮ್ಮ ಲಾಭಾಂಶ ಸದಾ ಬಲು ಕಡಿಮೆ. ಇದರಲ್ಲೂ ಹೆಚ್ಚಿನ ಅಂಶವನ್ನು ನಾವು ಬಡ ವಿದ್ಯಾರ್ಥಿಗಳಿಗೆ ಹಂಚಿಬಿಡುತ್ತಿದ್ದೆವು. ಇತ್ತ ಸಹಕಾರ ಇಲಾಖೆಯ ವಕ್ತಾರರು ನಮ್ಮ ಹಿರಿಮೆಯನ್ನು ಹಾಡಿ ಹೊಗಳಿ ಇದು ತಮ್ಮ ಉತ್ತಮ ಸಂಘಟನೆಯ ಪ್ರತೀಕವೆಂದು ಪ್ರಚಾರ ಮಾಡಲು ಹಿಂಜರಿಯುತ್ತಿರಲಿಲ್ಲ. ಹಾಗಿದ್ದರೂ ನಮ್ಮನ್ನು ಅವರು ನಡೆಸಿಕೊಂಡ ರೀತಿ ನಾವು ಇಲಾಖೆಯ ಒಂದು ಅಂಗ, ಅವರ ಕೃಪಾಶ್ರಯದಲ್ಲಿ ಇರುವ ತಾಬೆದಾರರು ಎಂಬಂತೆ. ಇದರಿಂದಾಗಿ ಇಲಾಖೆ – ಸಂಘ ನಡುವೆ ಒಂದು ತರಹದ ಬಿಗುಮಾನ ರಂಗೇರತೊಡಗಿತು. ವಾರ್ಷಿಕ ಲೆಕ್ಕ ಪರಿಶೋಧನೆಗೆ ಬರುತ್ತಿದ್ದ ಕಿರಿ–ಮರಿ–ಹೊಸ ಇನ್ಸ್ಪೆಕ್ಟರುಗಳಿಗೆ ಸ್ವಂತ ಕೆಲಸದಲ್ಲಿ ಯಾವ ಅನುಭವ ಯಾ ಪ್ರಾವೀಣ್ಯ ಇಲ್ಲದಿದ್ದರೂ ಅಧಿಕಾರದ

ಹಮ್ಮುಬಿಮ್ಮುಗಳಿಗೇನೂ ಕೊರತೆ ಇರಲಿಲ್ಲ. ಲೆಕ್ಕ ತಪಾಸಣೆ ಮಾಡುವ ಮುಖ್ಯ ಕರ್ತವ್ಯವನ್ನು ಬಿಟ್ಟು ನಾನಿಲ್ಲದಾಗ, ಮ್ಯಾನೇಜರನಿಗೆ ಅಕೌಂಟೆಂಟನಿಗೆ ಕಿರುಕುಳ ಕೊಡಲು ತೊಡಗಿದರು. ಈ ಸಲ್ಲದ ನಡವಳಿಕೆಯನ್ನು ವಿರೋಧಿಸಿ ನಾನವರಿಗೆ ತಿಳಿಯ ಹೇಳಿದ್ದು ಪಥ್ಯವಾಗಲಿಲ್ಲ. ಫಲಿತಾಂಶ ವಾರ್ಷಿಕ ಲೆಕ್ಕ ಪರಿಶೋಧನ ವರದಿ ಕ್ಷುದ್ರ ಲೋಪದೋಷಗಳನ್ನು ಎತ್ತಿ ಹಿಡಿಯುವ ಮತ್ತು ನಮ್ಮ ಕಾರ್ಯನೀತಿಯ ಮೇಲೆ ಟೀಕೆ ಎಸೆಯುವ ಭಾರಿ ಹೊತ್ತಗೆ ಆಯಿತು. ವ್ಯಾಪಾರವೊಂದೇ ಉದ್ದೇಶವಾಗಿರುವ ನಮ್ಮ ಸಂಘವನ್ನು ಸರ್ಕಾರದ ಯಾವುದೇ ಕಛೇರಿಯನ್ನು ತಪಾಸಿಸುವ ರೀತಿ ಪರಿಶೀಲಿಸತಕ್ಕದ್ದಲ್ಲ. ಬದಲು, ವಾಣಿಜ್ಯ ಲೆಕ್ಕ ಪರಿಶೋಧನೆಗೆ ಒಳಪಡಿಸಬೇಕು ಎಂದು ನಾನು ವಾದಿಸಿದೆ. ಲಕ್ಷಾಂತರ ರೂಪಾಯಿಗಳ ವ್ಯಾಪಾರ ಆಗಿ ಅಸಂಖ್ಯಾತ ಗ್ರಾಹಕರಿಗೆ ವಿಪುಳ ಸೇವೆ ಒದಗಿಸಿ ಮಾರುಕಟ್ಟೆಯ ಮೇಲೆ ತುಂಬ ಆರೋಗ್ಯಕರ ಪ್ರಭಾವ ಬೀರಿ ಸಾವಿರಾರು ರೂಪಾಯಿಗಳ ಲಾಭ ಪಡೆದು ಸಹಕಾರ ಕ್ಷೇತ್ರಕ್ಕೆ ಹೆಸರು ತಂದಿದ್ದ ನಮ್ಮ ಸಂಘದ ಲೋಪ ದೋಷಗಳು ಯಾವುವು ಗೊತ್ತೇ? ನಾಲ್ಕಾಣೆ, ಎಂಟಾಣೆ ಕೂಲಿ ಪಾವತಿ ಮಾಡಿದ್ದಕ್ಕೆ ರಶೀತಿಗಳು ಇಲ್ಲದಿರುವಿಕೆ (ಒಂದು ವರ್ಷದಲ್ಲಿ ಈ ಸಂಖ್ಯೆ ಸಾವಿರವನ್ನು ಮೀರುತ್ತದೆ). ಖಾಲಿ ಗೋಣಿ, ಟಿನ್ ಮುಂತಾದವನ್ನು ಒಟ್ಟಾಗಿ ಮೊದಲೇ ಪ್ರಕಟಿಸಿ ಸಾರ್ವಜನಿಕವಾಗಿ ಹರಾಜು ಹಾಕದೆ ಆಗಾಗ ಮಾರಿ ಮುಗಿಸಿದ್ದು. ರಜಾದಿನ ಕೂಡ ಬಂದು ದುಡಿದು ವ್ಯಾಪಾರವನ್ನು ಏರಿಸಿ ತನ್ಮೂಲಕ ಲಾಭಾಂಶವನ್ನು ವರ್ಧಿಸಿದ ನೌಕರರಿಗೆ ಆಯಾ ತಿಂಗಳೇ ಅಧಿಕ–ವೇಳೆ–ದುಡಿಮೆ ಭತ್ಯ ನೀಡಿದ್ದು. ಗೌರವ ಕಾರ್ಯದರ್ಶಿ ಮಂಗಳೂರಿಗೋ ಮೈಸೂರಿಗೋ ಸ್ವಂತ ಕೆಲಸಕ್ಕಾಗಿ ಹೋಗಿದ್ದಾಗ ಸಂಘದ ಕಾರ್ಯವನ್ನೂ ಮಾಡಿ ಅದಕ್ಕಾಗಿ ವೆಚ್ಚವಾದ ಕೇವಲ ಕೂಲಿ, ಲಗ್ಗೇಜು ಮೊದಲಾದ ವಾಸ್ತವ ಮೊಬಲಗನ್ನು ಮಾತ್ರ ಖರ್ಚು ಹಾಕಿದ್ದಕ್ಕೆ ಕಾರ್ಯಕಾರೀ ಮಂಡಳಿಯ ಅನುಮೋದನೆ ಪಡೆಯದಿದ್ದುದು. ಗೌರವ ಕಾರ್ಯದರ್ಶಿ ಉಪನಿಬಂಧನೆ ಪ್ರಕಾರ ಗೌರವ ಸಂಭಾವನೆ (ವಾರ್ಷಿಕವಾಗಿ ಐನೂರು ಆರುನೂರು ರೂಪಾಯಿಗಳನ್ನು ಇದು ಮೀರುತ್ತಿರಲಿಲ್ಲ) ಪಡೆದದ್ದಕ್ಕೆ (ಈ ಮೊತ್ತವನ್ನಾದರೂ ನಾನು ಆಗಾಗಲೇ ಅರ್ಹ ಬಡ ವಿದ್ಯಾರ್ಥಿಗಳಿಗೆ ಹಂಚಿಬಿಟ್ಟಿದ್ದೆ ಎಂಬುದಕ್ಕೆ ಅಲ್ಲಿಯೇ ಲಿಖಿತ ಪುರಾವೆಗಳಿದ್ದರೂ) ಇಲಾಖೆಯ ಅನುಮತಿ ಪಡೆಯದಿದ್ದುದು. ಕೆಲವೊಂದು ಸಾರ್ವಜನಿಕ ಸಂಸ್ಥೆಗಳಿಗೆ ಉಪನಿಬಂಧನೆಗಳ ಷರತ್ತುಗಳಿಗೆ ವಿರುದ್ಧವಾಗಿ, ಸಾಲವಾಗಿ ಮಾಲುಗಳನ್ನು ನೀಡಿದ್ದು, ಇತ್ಯಾದಿ. ಇವೆಲ್ಲವೂ ಇಲಾಖೆಯ ಕುರುಡು ಕಾನೂನಿನ ದೃಷ್ಟಿಯಿಂದ ಸರಿಯೇ ಇರಬಹುದು. ಸಹಕಾರ ಕ್ಷೇತ್ರದ ಒಳಿತಿಗಾಗಿಯೇ ಇದ್ದವಾಗಿರಬಹುದು. ಆದರೆ ಈ ಜೀವರಹಿತ ವಿಧಿನಿಯಮಗಳು ನನ್ನಲ್ಲಿ ತಿರಸ್ಕಾರ ಭಾವನೆಯನ್ನು ಉಂಟುಮಾಡಿದುವು. ಬೆಳೆಯುತ್ತಿರುವ ಆರೋಗ್ಯವಂತ ಉಪಕಾರೀ ಪ್ರಾಣಿಗೆ ಅದರ ಒಳಿತಿಗಾಗಿಯೇ ತೊಡಿಸುವ ಸಂಕೋಲೆಗಳಿವು ಎಂದು ಭಾವಿಸಿದೆ. ಇನ್ಸ್ಪೆಕ್ಟರರ ಪುಟಗಟ್ಟಲೆ ದೋಷ ಯಾದಿಗೆ ನಾನು ಒಂದೇ ಒಂದು ಸಮಜಾಯಿಸಿಕೆ ನೀಡುತ್ತಿದ್ದೆ: ಪ್ರಸಕ್ತ ವ್ಯಾಪಾರ–ಸಿಬ್ಬಂದಿ ನಿಷ್ಪತ್ತಿಯಲ್ಲಿ ಇದು ಅನಿವಾರ್ಯ. ಮುಂದೆ ನೌಕರರ ಸಂಖ್ಯೆಯನ್ನು ಏರಿಸಿದಾಗ ಇದನ್ನು ಗಮನಿಸಲಾಗುವುದು. ಸಹಜವಾಗಿ ನನ್ನ ಧೋರಣೆ ಇಲಾಖೆಗೆ ಹಿಡಿಸಲಿಲ್ಲ.

ಎರಡನೆಯದು, ಪ್ರಾಂಶುಪಾಲರೊಬ್ಬರ ಅನುಚಿತ ವರ್ತನೆ. ಅವರು ಕಾಲೇಜಿಗೆ ವರ್ಗವಾಗಿ ಬಂದು ಅಧಿಕಾರ ವಹಿಸಿಕೊಂಡ ತರುಣದಲ್ಲಿ ನನ್ನನ್ನು ಕರೆದು ಸಂಘದ ವಿಚಾರ ಆತ್ಮೀಯವಾಗಿ ಮಾತಾಡಿ ವಿವರಗಳನ್ನು ಕೇಳಿ ತಿಳಿದುಕೊಂಡರು. ಮತ್ತೆ ನಾಲ್ಕು ದಿವಸಗಳ ಬಳಿಕ ಪುನಃ ನನ್ನನ್ನು ಬರಹೇಳಿ ಕಳಿಸಿ ಮಾತು ಆರಂಭಿಸಿದರು,

"ಸಂಘದಲ್ಲಿ ಹಣಕಾಸಿನ ವಹಿವಾಟು ಹೇಗೆ?"

"ಸದಾ ಮುಗ್ಗಟ್ಟು. ಆದರೆ ಆ ಕಾರಣದಿಂದ ವ್ಯಾಪಾರ ಎಂದೂ ಕುಂಠಿತವಾಗಲಿಲ್ಲ."

"ಅದಲ್ಲ ನಾನು ಕೇಳಿದ್ದು. ದಿನ ದಿನ ನಗದು ಸಂಗ್ರಹದ ವಿಲೇವಾರಿ ಏರ್ಪಾಡು ಏನು?"

"ನೇರ ಬ್ಯಾಂಕಿಗೆ ಜಮೆ ಆಗುತ್ತದೆ. ಪಾವತಿಗಳೆಲ್ಲವೂ ಹೆಚ್ಚಾಗಿ ಚೆಕ್ ಮೂಲಕವೇ. ಈ ಎಲ್ಲ ಕ್ರಿಯೆಗಳೂ ಖುದ್ದು ನನ್ನ ನಿರ್ದೇಶನದಲ್ಲಿಯೇ ನಡೆಯುತ್ತವೆ."

"ಅದು ಸರಿ. ಹಾಗಾದರೆ ಪದನಿಮಿತ್ತ ಅಧ್ಯಕ್ಷನಾಗಿ ನನ್ನ ಹೊಣೆಗಾರಿಕೆ ಏನು?"

"ಅದು ಉಪನಿಬಂಧನೆಗಳಲ್ಲಿ ಸ್ಪಷ್ಟವಾಗಿ ಇದೆ. ಮುಖ್ಯವಾಗಿ ಗೌರವ ಕಾರ್ಯದರ್ಶಿಯನ್ನು ನಾಮಕರಿಸುವುದು ನಿಮ್ಮ ಖುಷಿ. ಮತ್ತೆ ಅದು ಹದ್ದು ಮೀರಿ ಹೋಗದಂತೆ ಉಸ್ತುವಾರಿ ವಹಿಸುವುದು, ಇತ್ಯಾದಿ."

"ಹಾಗೋ? ಈಗ ಅಧ್ಯಕ್ಷನಾಗಿರುವ ನನಗೆ ಒಂದೈನೂರು ರೂಪಾಯಿ ಬೇಕಲ್ಲ?"

"ನಮ್ಮದು ಹಣ ಲೇವಾದೇವಿ ಸಂಘ ಅಲ್ಲ. ವ್ಯಾಪಾರ ಸಂಘ. ಇಲ್ಲಿ ಅಂಥ ಏರ್ಪಾಡು ಇಲ್ಲ."

"ಆದರೆ ಅಧ್ಯಕ್ಷನಾದ ನಾನು ಅಪ್ಪಣೆ ಮಾಡಿದರೆ?"

"ಲಿಖಿತ ಆದೇಶ ನೀಡಿ, ಮತ್ತು ನನ್ನ ರಾಜಿನಾಮೆ ಪತ್ರ ಸ್ವೀಕರಿಸಿ."

ಮಾತು ಮುಂದುವರಿಯಲಿಲ್ಲ. ಮತ್ತೆ ಕೆಲವು ದಿವಸಗಳ ಬಳಿಕ ನನಗೊಂದು ಸಂಗತಿ ತಿಳಿಯಿತು: ಅವರು ಹಲವಾರು ಮಂದಿ ಅಧ್ಯಾಪಕರನ್ನು ತಮ್ಮ ಕೊಠಡಿಗೆ ಕರೆಸಿ ಗೌರವ ಕಾರ್ಯದರ್ಶಿತ್ವವನ್ನು ಅವರಿಗೆ ಕಟ್ಟಲು ಸೂಚಿಸಿದ್ದರಂತೆ.

ಆದರೆ ಪ್ರತಿಯೊಬ್ಬರೂ ಈ ಹೊಣೆಗಾರಿಕೆಯನ್ನು ಎರಡನೆಯ ಯೋಚನೆ ಇಲ್ಲದೇ ನಿರಾಕರಿಸಿದ್ದರಂತೆ; ಕೆಲವರಂತೂ ಭಾವಾವಿಷ್ಟರಾಗಿ ನನ್ನ ಗುಣಗಾನ ಮಾಡಿದ್ದರಂತೆ.

ಪ್ರಾಂಶುಪಾಲರ ಕೊಠಡಿಗೆ ಹೋದೆ, "ಈ ಗೌರವ ಕಾರ್ಯದರ್ಶಿತ್ವ ನಾನು ಬಯಸಿ ಬಂದದ್ದಲ್ಲ, ವಿಶ್ವಾಸದಿಂದ ಬಿದ್ದ ಮಾಲೆ. ವಿಶ್ವಾಸ ಕೆಟ್ಟಾಗ ಮಾಲೆ ಉರುಳಾಗುವುದು ಸರಿಯಷ್ಟೆ. ನನ್ನನ್ನು ಈ ಹೊಣೆಗಾರಿಕೆಯಿಂದ ಒಡನೆ ಬಿಡುಗಡೆ ಮಾಡಿ."
ಇಂಥ ಸನ್ನಿವೇಶದ ತೀರ್ವತೆಯನ್ನು ಅರ್ಥಮಾಡಿಕೊಳ್ಳಬಲ್ಲ ಸಂವೇದನೆಯೇ ಅವರ ಬರಡು ಬುದ್ಧಿಗೆ ಇರಲಿಲ್ಲ. ಯಾವ ಪ್ರತಿಕ್ರಿಯೆಯೂ ಅವರಿಂದ ಪ್ರಕಟವಾಗಲಿಲ್ಲ. ನಾನೇ ಭಂಡನಾಗಿ ಅಲ್ಲಿಂದ ಹೊರಟೆ. ಯಥಾಸ್ಥಿತಿ ಮುಂದುವರಿಯಿತು. ಆದರೆ ಈ ಶೀಂತ್ರಿ ಪ್ರಾಂಶುಪಾಲ ಎಂದಾದರೂ ನನ್ನನ್ನು ಕಂಬಿ ತಪ್ಪಿಸುವುದು ಕಟ್ಟಿಟ್ಟದ್ದೇ ಎಂಬ ಹೊಸ ಅರಿವು ಮೂಡಿತು. ಇದು ಸಂಘದ ಅಂತೆಯೇ ನನ್ನ ಆರೋಗ್ಯದ ದೃಷ್ಟಿಯಿಂದ ಅಪೇಕ್ಷಣೀಯವಾಗಿರಲಿಲ್ಲ.

ಮೂರನೆಯದು, ಕಾಲೇಜಿನ ಹವೆ ಕ್ರಮೇಣ ಬಿಗಡಾಯಿಸಿತು. ವಿದ್ಯಾರ್ಥಿಗಳ ಸಂಖ್ಯೆ ಏರುತ್ತಿದ್ದಂತೆ ಸಹಜವಾಗಿ ಅವರಲ್ಲಿ ಆಗೀಗ ಹಲವು ನಿಷೇಧಾತ್ಮಕ ಪ್ರವೃತ್ತಿಗಳು ತಲೆದೋರುತ್ತಿದ್ದುವು. ಇವು ಮುಷ್ಕರಗಳ ರೂಪದಲ್ಲಿ, ಕೆಲವು ಅಧ್ಯಾಪಕರ ವಿರುದ್ಧ ಸಂಪಿನ ರೋಷದಿಂದ, ಸಾಮೂಹಿಕವಾಗಿ ಅತಿರೇಕ ವರ್ತನೆಯ ತೀವ್ರತೆಯಲ್ಲಿ ಇತ್ಯಾದಿ ಪ್ರಕಟವಾಗುತ್ತಿದ್ದುವು. ಅಧಿಕಾರದ ವಿರುದ್ಧ ವಿನಾ ಕಾರಣ ಬಂಡೇಳುವುದು ಪ್ರಗತಿಯ ಲಕ್ಷಣ ಎಂದು ಹಲಮಂದಿ ವಿದ್ಯಾರ್ಥಿಗಳು ತಪ್ಪಾಗಿ ತಿಳಿದಿದ್ದರು ಎಂದು ಅನಿಸುತ್ತಿತ್ತು. ಇಂಥ ಒಂದು ಸಂದರ್ಭದಲ್ಲಿ ನಮ್ಮ ಸಂಘ (ಅವರದು ಕೂಡ) ಅವರ ವಕ್ರ ದೃಷ್ಟಿಗೆ ಎದುರಾಯಿತು. ಸಂಘದ ಚಟುವಟಿಕೆಗಳನ್ನು ಚರ್ಚಿಸಲು ವಿಶೇಷ ಮಹಾಸಭೆಯೊಂದನ್ನು ಕರೆಯಬೇಕು ಎಂಬ ಲಿಖಿತ ಮತ್ತು ಸಾಕಷ್ಟು ಮಂದಿ ವಿದ್ಯಾರ್ಥಿ ಸದಸ್ಯರ ರುಜು ಪಡೆದ ಮನವಿಯನ್ನು ಅವರು ಸಂಘದ ಅಧ್ಯಕ್ಷರಾದ ಪ್ರಾಂಶುಪಾಲರಿಗೆ ಸಲ್ಲಿಸಿದರು. ಅವರಿದನ್ನು ಅಭಿಪ್ರಾಯಕ್ಕಾಗಿ ನನ್ನಲ್ಲಿಗೆ ಕಳಿಸಿದರು. ಸ್ಪಷ್ಟ ವಿಷಯವನ್ನು ನಮೂದಿಸದೇ ಕೇವಲ ಕುಹಕೋದ್ದೇಶದಿಂದ ಪ್ರಭಾವಿತವಾದ ಈ ಮನವಿಯನ್ನು ತಿರಸ್ಕರಿಸುವುದೊಂದೇ ಸರಿಯಾದ ಕ್ರಮ ಎಂಬುದಾಗಿ ನನ್ನ ಮಿತ್ರರು ಅನೇಕರು ಬೋಧನೆ ನೀಡಿದರು. ನಾನು ಪ್ರಾಂಶುಪಾಲರ ಕೊಠಡಿಗೆ ಹೋಗಿ ವಿಶೇಷ ಮಹಾಸಭೆಯ ದಿನವನ್ನು ಆಗಿಂದಾಗಲೇ ಗೊತ್ತುಪಡಿಸಿ ಯಾವುದೇ ಚರ್ಚೆಗೂ ಸಂಘ ಸಿದ್ಧವಾಗಿದೆ ಎಂಬುದಾಗಿ ಪ್ರಕಟಪಡಿಸಿದೆ. ಬಹುಶಃ ಈ ನಿಲವು ರುಜುಗಾರರಲ್ಲಿ ಹಲಮಂದಿಗೆ ಅನಿರೀಕ್ಷಿತವಾಗಿದ್ದಿರಬೇಕು. ಅವರೆಲ್ಲರೂ ನನಗೆ ಪರಿಚಿತರೇ, ಹೆಚ್ಚಿನವರು ಹೇಗೂ ನನ್ನ ವಿದ್ಯಾರ್ಥಿಗಳೇ. ಅವರು ಬಿಡಿಬಿಡಿಯಾಗಿ ಬಂದು ನನ್ನನ್ನು ಕಂಡು ತಾವು ತಿಳಿಯದೇ ಮಾಡಿದ ತಪ್ಪನ್ನು ನಾನು ಮನ್ನಿಸಬೇಕೆಂದು ಕೋರಿದರು. "ಹೇಗೂ ಸಭೆ ಏರ್ಪಡಿಸಿ ಆಗಿದೆ. ಅಲ್ಲಿಗೆ ಖಂಡಿತ ಬನ್ನಿ. ಬಂದು ನಿಮ್ಮ ಹೊಗಳಿಕೆ ತೆಗಳಿಕೆ ಎಲ್ಲವನ್ನೂ ಸಕಾರಣವಾಗಿ ಮಂಡಿಸಿ. ಪ್ರಾಮಾಣಿಕತೆಗೆ ಚ್ಯುತಿ ಬರದಿರಲಿ" ಎಂದು ಅವರನ್ನು ಕಳಿಸಿದೆ. ಸಭೆ ಸೇರಿತು. ಪ್ರಾಂಶುಪಾಲರೇ ಅಧ್ಯಕ್ಷರು. ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರು ಸೇರಿದ್ದರು. ಪ್ರಾಸ್ತಾವಿಕ ಮಾತು ಮುಗಿದ ಬಳಿಕ ಮನವಿದಾರರ ಮುಂದಾಳಿಗೆ ಮಾತಾಡಲು ಎಡೆ ಮಾಡಿಕೊಟ್ಟೆವು. ಅವನು ಭಾರೀ ಕಡತಗಳನ್ನು ಹೊತ್ತು ತಂದಿದ್ದುದನ್ನು ನೋಡಿದ್ದೆ. ತಯಾರಿಸಿದ್ದು ಏನನ್ನೋ ಆದರೆ ಅಲ್ಲಿ ಒದರಿದ್ದರ ಸಾರಾಂಶವಿಷ್ಟು, "ನಮ್ಮ ಹೆಮ್ಮೆಯ ಸಂಘ ಎಂದರೆ ನಮ್ಮ ಅಭಿಮಾನದ ಗೌರವ ಕಾರ್ಯದರ್ಶಿಯವರ ದುಡಿಮೆಯ ಫಲ. ಇವರಿಲ್ಲದಿದ್ದರೆ ಇದು ಎಂದೋ ಹೇಳಹೆಸರಿಲ್ಲದೇ ಹೋಗುತ್ತಿತ್ತು." ಈ ಧಾಟಿಯಲ್ಲಿ ಮುಂದುವರಿಸಿ, "ಈಗ ನಮ್ಮ ಬೇಡಿಕೆಗಳು ಬಲು ಸಾಮಾನ್ಯವಾದವು. ಅವನ್ನು ತಾವು ಈಡೇರಿಸಿದರೆ ತುಂಬ ಉಪಕೃತರಾಗುವೆವು. ಒಂದನೆಯದು, ಮಹಾಸಭೆಯಲ್ಲಿ ಸದಸ್ಯರೆಲ್ಲರಿಗೂ ಉಪಾಹಾರದ ಏರ್ಪಾಡಾಗಬೇಕು. ಎರಡನೆಯದು, ನಾವೇ ಸಂಘದ ಒಳಹೊಕ್ಕು ಬೇಕಾದ ಸಾಮಗ್ರಿಗಳನ್ನು ನೋಡಿ ಆಯ್ದು ತೆಗೆದುಕೊಳ್ಳುವ ವ್ಯವಸ್ಥೆ ಆಗಬೇಕು" ಎಂಬುದಾಗಿ ಮುಗಿಸಿದ. ಅಪಸ್ವರ ಎಲ್ಲೂ ಬರಲಿಲ್ಲ. ಅಷ್ಟೇ ಅಲ್ಲ – ನನ್ನ ಕೊರಳಿಗೆ ಒಂದು ಹೂಹಾರ ಹಾಕಿ ಒಲವಿನ ಉರುಳು ತೊಡಿಸಿಯೂ ಬಿಟ್ಟ!

ಇಂಥ ತಿಪ್ಪರ್ಲಾಗವನ್ನು ಕಲ್ಪನೆಯಲ್ಲಿಯೂ ನಿರೀಕ್ಷಿಸದಿದ್ದ ನನಗೆ ಆ ಗಳಿಗೆ ಏನು ಹೇಳಬೇಕೆಂಬುದು ತಿಳಿಯಲಿಲ್ಲ. ವಿದ್ಯಾರ್ಥಿಗಳನ್ನು ಹೊಗಳಿ ಅವರ ಬೆಂಬಲವೇ ಸಂಘದ ನಿಜವಾದ ತ್ರಾಣ ಎಬುದಾಗಿ ನುಡಿದು ಹೊರಬಂದೆ. ಆದರೆ ಈ ಘಟನೆ ಒಟ್ಟಾಗಿ ನನ್ನಲ್ಲಿ ಒಂದು ವಿಧದ ಸಾತ್ತ್ವಿಕ ರೋಷವನ್ನು ಉಂಟುಮಾಡಿತ್ತು. ಸಾರ್ವಜನಿಕ ಬಿಟ್ಟಿ ದುಡಿಮೆಯಲ್ಲಿ ಹೊಗಳಿಕೆ ನನಗೆ ಬೇಕಿರಲಿಲ್ಲ. ವೈಯಕ್ತಿಕ ಖಯಾಲಿಗಾಗಿ ದುಡಿದವನಿಗೆ ಆಗಾಗಲೇ ದೊರೆಯುವ ಖುಷಿಯೇ ನಿಜ ಪ್ರಸಾದ. ಆದರೆ ನನ್ನ ಚಾರಿತ್ರ್ಯವನ್ನು ಪ್ರಶ್ನಿಸುವಂಥ ನಡವಳಿಕೆಗಳನ್ನು, "ಅವೇನು ಮಹಾ! ಸತ್ಯ ಹರಿಶ್ಚಂದ್ರನಿಗೂ ತಪ್ಪಿದ್ದಲ್ಲ. ಶ್ರೀರಾಮನೂ ಅವುಗಳಿಂದ ವಿಮುಕ್ತನಾಗಿರಲಿಲ್ಲ" ಎಂಬ ನಿರ್ಲಕ್ಷ್ಯ ಭಾವದಿಂದ ಸ್ವೀಕರಿಸುವ ಸ್ಥಿತಪ್ರಜ್ಞತ್ವ ನನಗೆ ಅಂದು ಖಂಡಿತ ಇರಲಿಲ್ಲ (ವಯಸ್ಸು ೩೫).

ಕೊನೆಯದು, ಕಡಪಡೆದ ಒಡನಾಡಿಗಳಿಂದ ಬಿದ್ದ ಒದೆ. ಕಾಲೇಜಿನ ಸಮಸ್ತ ನೌಕರರಿಗೂ (ಇವರೆಲ್ಲರೂ ನನ್ನ ಸಹೋದ್ಯೋಗಿಗಳೇ ತಾನೇ) ಮಾಲುಗಳನ್ನು ಸಾಲವಾಗಿ ಕೊಟ್ಟು ಸಂಬಳದ ದಿನದಂದು ಪೂರ್ತಿ ಮೊಬಲಗನ್ನು ಪಡೆಯುವ ಸವಲತ್ತನ್ನು ಸಂಘದಲ್ಲಿ ಒದಗಿಸಿದ್ದೆವು. ವರ್ಷಗಳು ಉರುಳಿದಂತೆ ಸತ್ಯದ ಅಸಹ್ಯ ನಗ್ನಮುಖ ಗೋಚರವಾಯಿತು. ಬಹುಮಂದಿ ಸಂಭಾವಿತರಿಗೆ 'ಸಾಲವನು ಕೊಂಬಾಗ' ಇದ್ದ ಹಾಲೋಗರ ತಿಂದ ಮುಸುಡು ಅದನ್ನು ಮರುಪಾವತಿ ಮಾಡುವಾಗ ಇರಲಿಲ್ಲ. ಇಂಥವರು ಮೇರೆ ಮೀರಿ ಸಾಮಾನುಗಳನ್ನು ಸಾಲವಾಗಿ ಖರೀದಿಸಿ ನಮ್ಮ ಆರ್ಥಿಕತೆಗೆ ಮುಳುವಾಗಿ ಪರಿಣಮಿಸಿದರು. ಸಂಘದ ನೌಕರರು ಹೋಗಿ ಹಣ ಕೇಳಿದರೆ ಇವರಿಗೆ ಅಪಮಾನ. ತಾವೇ ಪಾವತಿ ಮಾಡರು. ಖುದ್ದು ನಾನೇ ಹೋದಾಗ ನುಣುಚಿಕೊಳ್ಳುವ ಉತ್ತರ. ಇನ್ನು ಮುಂದೆ ಸಾಲ ಕೊಡುವುದಿಲ್ಲ ಎಂದರೆ ಜಗಳ. ಸದಾ ತೀರ್ಥಕ್ಷೇತ್ರ ಸಂಚಾರ ನಿರತನೂ ಭಗವದ್ಭಕ್ತನೂ ಆದ ಒಬ್ಬ ಸಹೋದ್ಯೋಗಿ ಮಿತ್ರನಂತೂ ನನ್ನ ಮೇಲೆ ಕೈ ಮಿಲಾಯಿಸಲು ಮೇಲೆದ್ದು ಬಂದ. ಅವನನ್ನು ತಡೆದು ಎರಡು ಇಕ್ಕಡಿಸುವ ದೈಹಿಕ ತಾಕತ್ತು ನನಗಿದ್ದರೂ ಇಂಥ ಒಂದು ದೃಶ್ಯ ಕಾಲೇಜಿನ ಹೆಸರಿಗೂ, ವೈಯಕ್ತಿಕವಾಗಿ ನಮ್ಮಿಬ್ಬರ ಹೆಸರುಗಳಿಗೂ ಮಸಿ ಬಳಿಯದಿರದು ಎಂಬುದರ ಅರಿವಾಗಿ ನಾನು ಆ ಸ್ಥಳದಿಂದ ಓಡಿ ಹೋದೆ. "ಶುದ್ಧ ಹೇಡಿ, ಅಯೋಗ್ಯ" ಎಂದು ಕೂಡ ಆತನಿಂದ ಬಿರುದುಗಳನ್ನು ಪಡೆದೆ.

ಮೇಲೆ ನಮೂದಿಸಿದ ಘಟನೆಗಳು ಮತ್ತು ಇತರ ಅಸಂಖ್ಯಾತ ಕೀಟಲೆ ಕೋಟಲೆ ದಾಂಧಲೆಗಳು ನಾನು ಏಕಾಂಗಿ ಆಗಿದ್ದಾಗ ನನ್ನ ಮನಶ್ಶಾಂತಿಯನ್ನು ಕದಡುವ ಹಿರಿಮಟ್ಟಕ್ಕೆ ಏರಿದ್ದುವು. ಅತಿ ವ್ಯಾಪಾರದ (ಅತಿ ಯಶಸ್ಸಿನ ಕೂಡ) ಪರಿಣಾಮವಾಗಿ 'ನೆತ್ತಿಗೇರಿದ್ದ ಪಿತ್ತ' ಇಳಿದು ವಾಸ್ತವಾಂಶವನ್ನು ನಾನು ನಿರಪೇಕ್ಷವಾಗಿ ಪರಿಶೀಲಿಸುವುದು ಅನಿವಾರ್ಯವಾಯಿತು (೧೯೬೭).

ಮನಸ್ಸಾಕ್ಷಿ: "ಗಣಿತಾಧ್ಯಾಪಕನಾದ ನೀವು ಸ್ವಕ್ಷೇತ್ರದಲ್ಲಿ ಸಾಧಿಸಿದ್ದೇನು?"
ನಾನು: "ಪಾಠಪ್ರವಚನಗಳನ್ನು ಶ್ರದ್ಧೆಯಿಂದ ನಿರ್ವಹಿಸಿದ್ದು ಮಾತ್ರ."
ಮನಸ್ಸಾಕ್ಷಿ: "ವ್ಯಾಪಾರ ಕ್ಷೇತ್ರದಲ್ಲಿ ಊರನ್ನು ಉದ್ಧರಿಸಲು ವಿನಿಯೋಗಿಸಿದ ಶ್ರಮ ಮತ್ತು ವೇಳೆಗಳಲ್ಲಿ ಸ್ವಲ್ಪಾಂಶವನ್ನಾದರೂ ನೀನು ಗಣಿತಾಧ್ಯಯನ ಮಾಡಲು ಮೀಸಲಿಟ್ಟಿದ್ದರೆ ಬೌದ್ಧಿಕವಾಗಿ ಸಾಕಷ್ಟು ಮೇಲೇರಬಹುದಿತ್ತಲ್ಲ?"
ನಾನು: "ಗೊತ್ತಿಲ್ಲ, ಆ ಅವಕಾಶವೇ ಒದಗಲಿಲ್ಲವಲ್ಲ."
ಮನಸ್ಸಾಕ್ಷಿ: "ಅವಕಾಶ ಎಂದೂ ತಾನಾಗಿಯೇ ಬರದು. ಅದನ್ನು ಪ್ರಯತ್ನಪೂರ್ವಕವಾಗಿ ದೊರಕಿಸಿಕೊಳ್ಳಬೇಕು ಎಂಬುದು ನಿನಗೆ ತಿಳಿಯದ್ದೇ?"
ನಾನು: "ಹೌದು ತಿಳಿದಿದೆ."
ಮನಸ್ಸಾಕ್ಷಿ: "ಹಾಗಾದರೆ ನೀನು ತಾರುಣ್ಯದ ಈ ಎಂಟು ವರ್ಷಗಳನ್ನು ವೃಥಾಪೋಲು ಮಾಡಿದೆಯಲ್ಲ?"
ನಾನು: "ಆದರೆ ಸಂಘದಲ್ಲಿ ನಾನು ಯಶಸ್ಸು ಗಳಿಸಿದೆನಲ್ಲ?"
ಮನಸ್ಸಾಕ್ಷಿ: "ಅದು ಬರಿ ಭ್ರಮೆ. ಗಣಿತಾಧ್ಯಾಪಕನಾಗಿ ನೀನು ಗಣಿತ ಚಿಂತನೆ ಮುಂದುವರಿಸಲಿಲ್ಲ. ಸಂಸಾರವಂದಿಗನಾಗಿ ಮನೆಮಂದಿಯನ್ನು ಗಮನಿಸಲಿಲ್ಲ. ಊರಿಗೆ ಕೊಡೆ ಹಿಡಿದೆನೆಂಬ ಹಮ್ಮು ಮಾತ್ರ ನಿನ್ನದು. ಹೋಗಲಿ – ಈ ಸಂಸ್ಥೆ ನಿನ್ನ ಅನಂತರ ಉಳಿದೀತೆಂದು ನಂಬಿದ್ದೀಯಾ?"
ನಾನು: "ಆ ಗೊಡವೆ ನನ್ನದಲ್ಲ. ನಾನು ಅನಿವಾರ್ಯ ಎಂದು ಯಾವ ಹೊತ್ತಿನಲ್ಲೂ ಭಾವಿಸುವ ಮೂರ್ಖ ನಾನಲ್ಲ. ಆದರೆ ಈ ತನಕ ನಾನು ಮಾಡಿರುವ ಗ್ರಾಹಕ ಸೇವೆ, ಹಲವಾರು ಮಂದಿಗೆ ಉದ್ಯೋಗಾವಕಾಶವನ್ನು ಒದಗಿಸಿದ್ದು, ಮಾರುಕಟ್ಟೆಯಲ್ಲಿ ನಮ್ಮ ಸಂಸ್ಥೆ ಪ್ರಭಾವೀ ಕೇಂದ್ರವಾಗಿರುವುದು ಎಲ್ಲವೂ ವ್ಯರ್ಥವೇ? ಸುಳ್ಳೇ?"
ಮನಸ್ಸಾಕ್ಷಿ: "ಅದು ಯಾವುದನ್ನೂ ಕಡೆಗಣಿಸುವಂತಿಲ್ಲ. ಆದರೆ ಅವುಗಳಿಂದ ನಿನ್ನ ಉದ್ಧಾರ ಆಗಲಿಲ್ಲ."
ನಾನು: "ನನ್ನ ಉದ್ಧಾರ ಅಂದರೇನು?"
ಮನಸ್ಸಾಕ್ಷಿ: "ನಿನ್ನ ಕ್ಷೇತ್ರದಲ್ಲಿ ನಿನ್ನ ವೃತ್ತಿಯಲ್ಲಿ ಅತ್ಯುನ್ನತ ಶಿಖರ ಏರಲು ಪ್ರಯತ್ನಿಸುವುದೊಂದೇ ನಿನ್ನ ಉದ್ಧಾರದ ಮಾರ್ಗ. ಮಿಕ್ಕುದೆಲ್ಲ ಒಂದು ವಿಧವಾದ ಕರ್ತವ್ಯ ಪರಾಙ್ಮುಖತೆ, ಕಠಿಣ ಪರಿಶ್ರಮದಿಂದ ಪಲಾಯನ ಮಾಡುವ ತಂತ್ರ, ಭಾನಗಡಿ ಮನಸ್ಸಿನ ದೊಂಬರಾಟಗಳು ಮಾತ್ರ."

ನನ್ನ ಮನಸ್ಸಾಕ್ಷಿ ಮುಂಜಾನೆಯ ೩ ಗಂಟೆಯ ನೀರವತೆಯಲ್ಲಿ ನನ್ನನ್ನು ಬಡಿದೆಬ್ಬಿಸಿ ತಿವಿದು ಕೇಳುತ್ತಿದ್ದ ಈ ಪ್ರಶ್ನೆಗಳನ್ನು ಎದುರಿಸಲು ನಾನು ಅಸಮರ್ಥನಾಗಿದ್ದೆ. ಬೆಳಗಾದೊಡನೆ ಸಂಘ ಯಮಭಾರದಿಂದ ನನ್ನನ್ನು

ಜಗ್ಗುವುದು ಮಾಮೂಲಾಯಿತು. ಈ ಭಾರವೇನಾದರೂ ಅಕಸ್ಮಾತ್ತಾಗಿ ಕಳಚಿ ಹೋಗಿದ್ದರೆ ಚಂದ್ರನ ಮೇಲೆ ಆಕಾಶ–ಪೋಷಾಕುರಹಿತನಾಗಿ ಇಳಿವ ಮಾನವನ ಪಾಡು ನನ್ನದಾಗಿ ಹೋಗಿರುತ್ತಿತ್ತೋ ಏನೋ! ಮಡಿಕೇರಿಯಲ್ಲಿ ಇರುವ ತನಕವೂ ನನಗೆ ಮೋಕ್ಷ ಅಲಭ್ಯ. ಆದ್ದರಿಂದ ಪರ ಊರಿಗೆ ವರ್ಗ ಪಡೆದು ನೆಮ್ಮದಿಯಿಂದ ಕರಗಿ ಹೋಗುವುದೊಂದೇ ಸರಿಯಾದ ಹಾದಿ ಎಂದು ಯೋಚಿಸತೊಡಗಿದೆ.

೧೯೬೨ರ ದ್ವಿತೀಯಾರ್ಧದಲ್ಲಿ ಚೈನಾದೇಶ ಭಾರತದ ವಿರುದ್ಧ ಹಠಾತ್ತಾಗಿ ಯುದ್ಧ ಸಾರಿತು. ಆಗ ರಾಷ್ಟ್ರ ಕೈಗೊಂಡ ಹಲವಾರು ದೇಶ ರಕ್ಷಣ ಕಾರ್ಯಗಳ ಪೈಕಿ ಎನ್‌ಸಿಸಿಯ ಕ್ಷಿಪ್ರ ವಿಸ್ತರಣೆಯೂ ಒಂದು. ಆ ವೇಳೆಗೆ ಎನ್‌ಸಿಸಿಯಲ್ಲಿ ಕ್ಯಾಪ್ಟನ್ ದರ್ಜೆಯ ಅಧಿಕಾರಿಯಾಗಿದ್ದ ನಾನು ಆ ವಿಸ್ತರಣೆಯ ಅಂಗವಾಗಿ ದೂರದ ಬಳ್ಳಾರಿಗೆ ಪೂರ್ಣಾವಧಿ ಮಿಲಿಟರಿ ಸೇವೆಯ ಅಧಿಕಾರಿಯಾಗಿ ಹೋಗಬೇಕಾಯಿತು. (ವಿವರಗಳಿಗೆ ನಾನು ಬರೆದಿರುವ 'ಎನ್‌ಸಿಸಿ ದಿನಗಳು' ಪುಸ್ತಕ ಓದಬಹುದು.) (ರೂ ಐವತ್ತೈದು ವಿಳಾಸ ಸಹಿತ ಮನಿಯಾರ್ಡರ್ ಮಾಡಿದವರಿಗೆ ಉಚಿತ ಅಂಚೆ ಮೂಲಕ ಕಳಿಸಬಲ್ಲೆ. ಹೆಚ್ಚಿನ ಮಾಹಿತಿಗೆ ಜಾಲತಾಣದ ಮುಖಪುಟದ ಮೇಲಿರುವ ಪುಸ್ತಕಲೋಕ ತೆರೆದು ನೋಡಿ – ಅಶೋಕವರ್ಧನ) ಹೀಗೆ ನನ್ನರಿವಿಲ್ಲದೇ, ಒಂದು ರೀತಿ ಸ್ವಯಂಚಲಿಯಾಗಿ, ನಾನು ಕಾಲೇಜಿನ ಹುದ್ದೆಯಿಂದ ಮತ್ತು ಮಡಿಕೇರಿಯಿಂದ ಬಿಡುಗಡೆಗೊಂಡು ಹೊರಟೇಬಿಟ್ಟೆ (೩೧–೭–೧೯೬೩). ಇಂಥ ಒಂದು ಬದಲಾವಣೆ ಸಂಭವಿಸಲಿದೆ ಎಂಬ ಕುರುಹು ನನಗೆ ಆ ಹಿಂದಿನ ಏಪ್ರಿಲ್ ವೇಳೆಗೇ ತಿಳಿದಿದ್ದುದರಿಂದ ಸೊಸೈಟಿಯ ಹಿರಿತನವನ್ನು ವ್ಯವಸ್ಥಿತವಾಗಿ ಬೇರೆ ಅಧ್ಯಾಪಕ ಗೌರವ ಕಾರ್ಯದರ್ಶಿಯವರಿಗೆ ವಹಿಸಿಕೊಟ್ಟು ಅವರಿಗೆ ಯುಕ್ತ ತರಬೇತು ಕೊಡುವುದು ಸಾಧ್ಯವಾಯಿತು. ಸಂಘಕ್ಕೆ ಆರಂಭದಿಂದಲೂ ಬೆನ್ನೆಲುಬಿನಂತಿದ್ದ ಜನಾರ್ದನ ಬಾಳಿಗರ ಅಜ್ಞಾತ ಅಯಾಚಿತ ಸೇವೆ ಹೇಗೂ ಇತ್ತು (ಆದರೆ ಅವರು ಮಾತ್ರ ಯಾವ ಹೆಸರನ್ನೂ ಎಂದೂ ಸ್ವೀಕರಿಸಿದವರಲ್ಲ). ಇನ್ನು ಖುದ್ದು ನನ್ನೊಡನೆ ಪಳಗಿದ ಪೂರ್ಣಾವಧಿಯ ಮ್ಯಾನೇಜರ್, ಅಕೌಂಟೆಂಟ್, ಸೇವಕ ಇವರ ದಂಡು ದಕ್ಷತೆಯ ಉನ್ನತ ಮಟ್ಟದಲ್ಲಿತ್ತು. ವ್ಯಾಪಾರ, ಸುನಾಮ, ಗಿರಾಕಿಗಳ ಪೀಳಿಗೆ, ತಾಂತ್ರಿಕ ಜ್ಞಾನ ಎಲ್ಲವೂ ಸಮರ್ಪಕವಾಗಿದ್ದುವು. ಆರ್ಥಿಕ ಸ್ಥಿತಿಗತಿಗಳು ಆರೋಗ್ಯವಾಗಿ ವರ್ಧಿಸುತ್ತಲೇ ಇದ್ದುವು. ನನ್ನ ಉತ್ತರಾಧಿಕಾರಿಯವರಿಗೆ ನಾನು ನೀಡಿದ ಸಲಹೆ ಇದು, "ನಮ್ಮ ಸಂಘವೊಂದು ಭಾರೀ ಮರ್ಸಿಡೆಸ್ ಬೆನ್ಸ್ ಲಾರಿ. ಇದರ ಯಾಂತ್ರಿಕ ಸ್ಥಿತಿ ಸೊಗಸಾಗಿದೆ. ಉತ್ಕೃಷ್ಟ ಮಾಲುಗಳನ್ನು ಇದರಲ್ಲಿ ಹೇರಲಾಗಿದೆ. ಕಂಡಕ್ಟರ್ ಕ್ಲೀನರ್ ಎಲ್ಲರೂ ತಮ್ಮ ತಮ್ಮ ಕೆಲಸಗಳಲ್ಲಿ ನುರಿತವರು, ಆಸಕ್ತರು, ಪ್ರಾಮಾಣಿಕರು. ದಾರಿ ವಿಶಾಲವಾಗಿ ಮಟ್ಟಸವಾಗಿ ಹಬ್ಬಿದೆ. ಈಗ ಇದು ಚೆನ್ನಾದ ವೇಗದಲ್ಲಿ ಓಡುತ್ತಿದೆ. ನೀವು ಚುಕ್ಕಾಣಿ ಚಕ್ರ ಹಿಡಿದು ಇದನ್ನು ಮುತುವರ್ಜಿಯಿಂದ ಓಡಿಸಿ, ವೇಗದ ಅಮಲು ಎಂದೂ ನಿಮ್ಮ ತಲೆಗೆ ಹುಗದಿರಲಿ."

ಮುಂದಿನ ಆರೇಳು ವರ್ಷಗಳಲ್ಲಿ ಸಂಘದ ಗೌರವ ಕಾರ್ಯದರ್ಶಿತ್ವದಲ್ಲಿ ಪದೇ ಪದೇ ಬದಲಾವಣೆಗಳಾದುವು. ಓರ್ವ ಗೌಡಬಂಗಾಳೀ ಮಹಾಶಯನ ಅಪ್ರಾಮಾಣಿಕ ದಬ್ಬಾಳಿಕೆಯ ಹೊಡೆತವನ್ನು ಸೈರಿಸಲಾರದ ಮ್ಯಾನೇಜರ್ ಹಾಗೂ ಅಕೌಂಟೆಂಟ್ ಕೆಲಸ ಬಿಟ್ಟು ಬೇರೆ ಊರುಗಳಿಗೆ ಹೊರಟು ಹೋದರು. ವ್ಯಾಪಾರ ತಗ್ಗಿತು. ಸಗಟು ಪೂರೈಕೆದಾರರಿಗೆ ಸಂಘದ ವಿಚಾರ ವಿಶ್ವಾಸ ಹಾರಿಹೋಯಿತು. ಗಿರಾಕಿಗಳಿಗೆ ಇಲ್ಲಿ ಯಾವುದೂ ಖಾತ್ರಿ ಬೆಲೆಗೆ ದೊರೆಯುವ ನಂಬಿಕೆ ಉಳಿಯಲಿಲ್ಲ. ಒಟ್ಟು ಗೋಟಾಳೆ. ಇಂಥ ಇಳಿಕೆಯ ದಿನಗಳಂದು ಬೇರೆ ಒಬ್ಬನನ್ನು ಮ್ಯಾನೇಜರನಾಗಿ ತಂದು ಪಟ್ಟ ಕಟ್ಟಿದರು. 'ಮಾರಿಗೌತಣವಾಯ್ತು' ಮುಂದಿನ ಈತನ ರಾಜ್ಯಭಾರ. ಆ ವೇಳೆ ಸಂಘದ ಪೂರ್ಣ ವಿಸರ್ಜನೆ ವ್ಯವಸ್ಥಿತವಾಗಿ ನಡೆದು ೧೯೭೩–೭೪ರ ವೇಳೆಗೆ ಅದರ ಕದಗಳಿಗೆ ಶಾಶ್ವತ ಬೀಗ ಬಿತ್ತು.

ನಾನು ಮಡಿಕೇರಿಯವನೇ ಆದ್ದರಿಂದ (೧೯೬೩ರ ಅನಂತರ ಪರ ಊರುಗಳಲ್ಲಿ ಕೆಲಸ ಮಾಡುತ್ತಿದ್ದೇನೆ) ಅಲ್ಲಿಗೆ ಹೋದಾಗಲೆಲ್ಲ ಯಾರಿಗೂ ತಿಳಿಯದಂತೆ ಕಾಲೇಜುವರೆಗೆ ಅಲೆದಾಡಿ ಸಂಘದ ಕಟ್ಟಡಕ್ಕೆ ಪ್ರದಕ್ಷಿಣೆ ಹಾಕಿ ಬರುವುದು ವಾಡಿಕೆ. ಆ ನೀರವ ಏಕಾಂತತೆಯಲ್ಲಿ ನನಗೆ ಸ್ಫುರಿಸುವ ಈ ಮುಂದಿನ ಚರಣ (ಕಡೆಂಗೋಡ್ಲು ಕ್ಷಮೆ ಕೋರಿ):

ಗಾಳಿಬೀಡಿನ ದಿಬ್ಬದ ಮೇಲೆ
ಕಾಲೇಜ್ ನಿಂತಿಹ ಬಂಜರು ನೆಲದಲಿ
ಕಟ್ಟಳೆಯುಂಟೇ ಕಟ್ಟುಗಳುಂಟೇ
ಹೊಯ್ಲಿಡುವಾ ಮಳೆ ಚಾಟಿಯಲಿ?

ನನ್ನ ಹಳೆಯ ಮಿತ್ರರು ಸಹೋದ್ಯೋಗಿಗಳು ಹಾಗೂ ಗಿರಾಕಿಗಳು ಈ ದುರಂತವನ್ನು ಕುರಿತು ಪ್ರಸ್ತಾವಿಸುವುದುಂಟು. ಇಂಥ ಮಾತುಗಳು ಮೂರು ವರ್ಗಗಳಲ್ಲಿ ಅಳವಡುತ್ತವೆ: ಒಂದು, ಈಗ ನನ್ನ ಭಾವನೆ ಏನು? ಎರಡು, ನನ್ನಂಥ ದುಡಿಮೆಗಾರರ ಅಭಾವದಿಂದಾಗಿ ಈ ದುರಂತ ಸಂಭವಿಸಿತು. ಮೂರು, ಮೂಲ ವ್ಯವಸ್ಥಾಪನೆಯಲ್ಲೇ ಹುದುಗಿದ್ದ ಯಾವುದೋ ಐಬಿನಿಂದಾಗಿ ಹೀಗಾಗಿರಬಹುದೇ? ಈ ವಿಚಾರಗಳನ್ನು ನಾನು ಬಿಡುವಿದ್ದಾಗ ಯೋಚಿಸಿವುದುಂಟು. ನನ್ನ ಅನ್ನಿಸಿಕೆಗಳು ಹೀಗಿವೆ:

ಒಂದನೆಯದಾಗಿ, ಈಗ ನನ್ನ ಭಾವನೆ ತಾತ್ತ್ವಿಕ ವಿಷಾದ ಮಾತ್ರ – ಚೆನ್ನಾಗಿ ಸಾರ್ವಜನಿಕೋಪಕಾರಿಯಾಗಿ ಕೆಲಸ ಮಾಡುತ್ತಿದ್ದ ಒಂದು ಸಂಸ್ಥೆ ಮುಚ್ಚಿಹೋಯಿತಲ್ಲ ಎಂಬ ಕಾರಣದಿಂದ. ಅದರ ಸಾರಥ್ಯವನ್ನು ನಾನು ವಹಿಸಿದ್ದಾಗ ನನಗೆ ದೊರೆತ ಅನುಭವ ಸಂತೃಪ್ತಿ ಹೇಗೂ ಪೂರ್ಣ ನನ್ನ ಸೊತ್ತೇ ತಾನೇ.

ಎರಡನೆಯದಾಗಿ, ಮೇಲುನೋಟಕ್ಕೆ ಇದು ನಿಜವೆಂದೇ ತೋರಬಹುದಾದರೂ (ಜೊತೆಗೆ ಇಂಥ ಹೇಳಿಕೆಗಳು ವೈಯಕ್ತಿಕ ಬಡಾಯಿ ಪ್ರತಿಷ್ಠೆಗಳಿಗೆ ಪೋಷಕಗಳಾಗಿರುವುವಾದರೂ) ವಾಸ್ತವವಾಗಿ ಖೇದವನ್ನು ಉಂಟುಮಾಡುತ್ತದೆ. ರಾಷ್ಟ್ರದ ಭವಿಷ್ಯವನ್ನು ರೂಪಿಸುವಂಥ ಮತ್ತು 'ಶೀಲಂ ಸರ್ವಸ್ಯ ಭೂಷಣಂ' ಆದರ್ಶವನ್ನು ಧರಿಸಿದ್ದಂಥ ಆ ಮಹಾ ವಿದ್ಯಾಮಂದಿರದಲ್ಲಿ ಒಬ್ಬನೇ ಒಬ್ಬ ಸಮರ್ಥ ಪ್ರಾಮಾಣಿಕ ಧುರೀಣನೂ ದೊರೆಯದಾದನೇ? ಸಂಘ ನಡೆಸಲು ಬೇಕಾದದ್ದು ಮಹಾ ಮಿದುಳಲ್ಲ, ಸುಟಿ ವ್ಯಾಪಾರ ಚಾಕಚಕ್ಯವೂ ಅಲ್ಲ; ಬದಲು ಪ್ರಾಮಾಣಿಕತೆ, ಶಾಂತ ಚಿಂತನೆ, ನಿರಂತರ ದುಡಿಮೆ. ಯಾವುದೇ ಸಂಸ್ಥೆ (ಅಥವಾ ಅದಕ್ಕಿಂತ ಹಿರಿಯದಾದ ಯಾವುದೇ ವ್ಯವಸ್ಥೆ) ಕೇವಲ ಒಬ್ಬ ವ್ಯಕ್ತಿಯನ್ನು ಅವಲಂಬಿಸಿರುವ ವ್ಯಕ್ತಿ ಕೇಂದ್ರ ಸಂಘಟನೆಯಾದರೆ ಅದು ದೀರ್ಘ ಕಾಲ ಬಾಳಲು ಅರ್ಹತೆ ಪಡೆಯಲಾರದು.

ಮೂರನೆಯದಾಗಿ, ಇದಕ್ಕೆ ಉತ್ತರ ಹೇಳಲು ನಾನು ಸಮರ್ಥನಲ್ಲ. ಸಾರ್ವತ್ರಿಕವಾಗಿ ಒಂದು ಮಾತು ಹೇಳಬಹುದು ಅಷ್ಟೆ. ನಾವು ಸಂಘವನ್ನು ಸ್ಥಾಪಿಸಿದಾಗ ಯಾವುದೇ ವಿಧವಾದ ಸಿದ್ಧಾಲೇಖ್ಯವೂ ನಮ್ಮ ಮುಂದೆ ಇರಲಿಲ್ಲ. ಈ ಸುದೀರ್ಘ ಲೇಖನದಲ್ಲಿ ವಿವರಿಸಿರುವಂತೆ ಎಲ್ಲವೂ ಗ್ರಾಹಕರಿಗೆ 'ಕ್ಷಿಪ್ರ ಪ್ರಾಮಾಣಿಕ ಸೇವೆ' ಎಂಬ ಏಕೈಕೋದ್ದೇಶದ ಸುತ್ತ ವಿಕಸಿಸಿದವು. ಇಂಥ ವಿಕಾಸಕ್ಕೆ ಪೋಷಕವಾಗಿದ್ದ ಪ್ರಧಾನ ಘಟಕಗಳೆಂದರೆ ಗೌರವ ಕಾರ್ಯದರ್ಶಿಯ ವ್ಯಕ್ತಿತ್ವ, ಕಾಲೇಜಿನ ಅಂತಸ್ತು ಹಾಗೂ ಸಮಕಾಲೀನ ಪರಿಸರ. ಅನೇಕ ವೇಳೆ ನಮ್ಮ ಸಂಘವೊಂದು ವ್ಯಕ್ತಿಕೇಂದ್ರ ವ್ಯವಸ್ಥೆಯೇ ಆಗಿದೆಯೋ ಏನೋ ಎಂಬ ಸಂದೇಹ ನನಗೆ ಬಂದದ್ದುಂಟು. ಆದರೆ ಮನುಷ್ಯನ ಚಟುವಟಿಕೆಗಳಲ್ಲಿ ಭಾರಿ ಭಾರಿ ಸರ್ಕಾರಗಳು ಕೂಡ ವ್ಯಕ್ತಿಕೇಂದ್ರ ಸಂಘಟನೆಗಳೇ ಆಗಿ ಏಳುವುದನ್ನೂ ಬೀಳುವುದನ್ನೂ ಇತಿಹಾಸ ನಮಗೆ ಪದೇ ಪದೇ ಎತ್ತಿ ಕಾಣಿಸುತ್ತದೆ. ಯಾವುದೇ ಸಂಸ್ಥೆ ವ್ಯಕ್ತಿ ಸ್ವಾರ್ಥಕೇಂದ್ರ ವ್ಯವಸ್ಥೆಯಾಗಿ ಬೆಳೆಯಬಾರದು. ಬದಲು 'ನಿಮಿತ್ತಮಾತ್ರಂ ಭವಸವ್ಯಸಾಚಿನ್' ನಿಲವಿನ ವೃತ್ತಿಮೂಲ ವ್ಯವಸ್ಥೆಯಾಗಿ ಬೆಳಗಬೇಕು ಎಂದು ಮಾತ್ರ ಸೂಚಿಸಬಲ್ಲೆ. ತಾತ್ತ್ವಿಕವಾಗಿ ಇನ್ನೂ ಎತ್ತರಕ್ಕೆ ಏರಿ ಒಂದು ಮಾತು ಹೇಳಬಹುದು: ಪರಿಸರಕ್ಕೆ ಇಂಥ ಒಂದು ಸಂಘ ಅವಶ್ಯ ಎನ್ನಿಸಿದಾಗ ಅನುಕೂಲ ಬಲಗಳು ಒಂದೆಡೆ ಸಂಘನಿಸಿ ಕೆಲವು ವ್ಯಕ್ತಿಗಳಲ್ಲಿ ಆವಾಹನೆಗೊಂಡು ಉದ್ದೇಶ ಈಡೇರುತ್ತದೆ. ಸಂಘದ ಉಪಯುಕ್ತತೆ ಸಾಕೆಂದಾದಾಗ ಅವೇ ಬಲಗಳು ವಿಸಂಘಟನೆಗೊಂಡು ಸಂಘ ಬರಖಾಸ್ತಾಗುತ್ತದೆ. ಶ್ರೀಕೃಷ್ಣ ನಿರ್ಯಾಣಾನಂತರ ಅರ್ಜುನನಿಗೆ ಒದಗಿದ ಅನುಭವ ಇದೇ ಅಲ್ಲವೇ?

ವ್ಯಾಪಾರ ಪ್ರಪಂಚದಲ್ಲಿ ಗಿರಾಕಿ ಅನುಭವಿಸುವ ಬಗೆಬಗೆಯಾದ ಬವಣೆ ಮೋಸ ವಂಚಕೋಟಲೆಗಳ ಎದುರಾಗಿ ಅವನಿಗೆ ರಕ್ಷಣೆ ಕೊಡುವ ದಿವ್ಯ ಮಂತ್ರ ಯಾ ರಕ್ಷಕ ಅಸ್ತ್ರ ಯಾವುದೂ ನನಗೆ ತಿಳಿದಿಲ್ಲ. ಅಂಥಾದ್ದು ಒಂದು ಎಲ್ಲಿಯಾದರೂ ಇದ್ದರೆ ಅದು 'ಸಹಕಾರ'ವಂತೂ ಖಂಡಿತ ಅಲ್ಲ.

ಮನುಷ್ಯನ ಯಾವುದೇ ಸಮಸ್ಯೆಗಳಿಗೆ ಪರಿಹಾರಗಳನ್ನು ಅರಸುವಾಗ ಸಮಕಾಲೀನ ಪರಿಸರವನ್ನು ಗಣನೆಗೆ ತೆಗೆದುಕೊಳ್ಳಲೇಬೇಕು. ಇಂಗ್ಲೆಂಡಿನ ಅಂದಿನ ಪರಿಸರದಲ್ಲಿ (ಔದ್ಯಮಿಕ ಕ್ರಾಂತಿ, ೧೮ನೆಯ ಶತಮಾನದ ಕೊನೆಯ ಭಾಗ) ಉದ್ಭವಿಸಿದ ಸಹಕಾರ ತತ್ತ್ವ ಇಂದಿನ ಭಾರತದ ವಿಭಿನ್ನ ಪರಿಸರದಲ್ಲಿ ತಾರಕ ಮಂತ್ರವಾದೀತೆಂಬ ನಂಬಿಕೆ ಅವೈಜ್ಞಾನಿಕವೆಂದು ನನ್ನ ಭಾವನೆ.

ಮಾನವ ಮನಸ್ಸಿನ ವಿಚಿತ್ರ ವ್ಯಾಪಾರಗಳು ವಿಧಿನಿಯಮ ಸಂತಗ್ರಂಥಪಂಥಾತೀತವಾದವು. ಪ್ರಾಮಾಣಿಕತೆ ಅಪ್ರಾಮಾಣಿಕತೆ ಇದರ ಎರಡು ಮುಖಗಳು. ವ್ಯಕ್ತಿ ಪ್ರಾಮಾಣಿಕನಾದಲ್ಲಿ ದಫ್ತರಗಳು ಅನಾವಶ್ಯಕ ಹೊರೆಗಳಾಗುತ್ತವೆ; ಅಪ್ರಾಮಾಣಿಕನಾದಲ್ಲಿ ಅವು ನಿಷ್ಪ್ರಯೋಜಕವಾಗುತ್ತವೆ ಅಥವಾ ಅಪ್ರಾಮಾಣಿಕ ವ್ಯವಹಾರಗಳಿಗೆ ಪ್ರಾಮಾಣಿಕತೆಯ ಸೋಗಿನ ಮೊಗವಾಡವನ್ನು ಒದಗಿಸುವ ರಕ್ಷಾಕವಚಗಳಾಗುತ್ತವೆ. ಆದ್ದರಿಂದ ಬೆಳೆಯುತ್ತಿರುವ ಒಂದು ಜೈವಿಕ ವ್ಯವಸ್ಥೆಯಲ್ಲಿ ಪ್ರಧಾನ ಲಕ್ಷ್ಯ ಇರಬೇಕಾದದ್ದು ವ್ಯಕ್ತಿಗಳ ಪ್ರಾಮಾಣಿಕತೆ, ನಿಷ್ಠೆ, ಶ್ರದ್ಧೆ ಮುಂತಾದ ಜೀವಂತ ಸದ್ಗುಣಗಳೆಡೆಗೆ, ಜೀವರಹಿತ ವಿಧಿ ನಿಯಮ ನಿರ್ಬಂಧಗಳೆಡೆಗಲ್ಲ.

ಜೈವಿಕವಾಗಿ ಅಭಿವರ್ಧಿಸುತ್ತಿರುವ ಒಂದು ಸಂಸ್ಥೆಯ ಆರೋಗ್ಯ ಹದಗೆಡದಷ್ಟು ಪ್ರಮಾಣದಲ್ಲಿ ಮಾತ್ರ ವಿಧಿ ನಿಯಮ ನಿರ್ಬಂಧಗಳು ಇರಬೇಕು – ಭೂಮಿಯ ಗುರುತ್ವಬಲ ನಮ್ಮ ಮೇಲಿರುವಂತೆ – ಹೊರತು ಸಾಕ್ಷಾತ್ ಅದರ ಬೆಳವಣಿಗೆಯನ್ನೇ ಕುಂಠಿಸುವ ಪಂಜರಗಳು ಅವು ಆಗಬಾರದು.

ನಗದು ಪುಸ್ತಕದ ವಿಚಾರ ಎಚ್ಚರವಹಿಸಿದರೆ ಖಾತಪುಸ್ತಕಗಳು ತಂತಾವೇ ಶುದ್ಧವಾಗಿರುತ್ತವೆ. ನಮ್ಮ ಯಾವುದೇ ವ್ಯವಹಾರದಲ್ಲಿ ಉದ್ದೇಶ ಶುದ್ಧವಾಗಿದ್ದು ದೈನಂದಿನ ನಡವಳಿಕೆ ನೇರವಾಗಿದ್ದರೆ ನಾವು ಸಾಕ್ಷಾತ್ ಪರಬ್ರಹ್ಮನಿಗೆ ಕೂಡ ಅಂಜಬೇಕಾಗಿಲ್ಲ.

ಯಾವುದೇ ಸಂಘದ ಅಭಿವರ್ಧನೆ ಎಂದೂ ಹಣದ ಕೊರತೆಯಿಂದ ನಿಲ್ಲಲಾರದು; ಅದು ಸ್ಥಗಿತವಾಗುವುದು ಅಥವಾ ಇಳಿಮೊಗವಾಗುವುದು ನಿಸ್ಪೃಹತೆಯಿಂದ ದುಡಿಯಬಲ್ಲ ವ್ಯಕ್ತಿಗಳ ಅಭಾವದಿಂದ. ಆದ್ದರಿಂದ ಆದ್ಯ ಗಮನ ಹರಿಯಬೇಕಾದದ್ದು ನಿಷ್ಠಾವಂತ ಕರ್ತವ್ಯ ಪರಾಯಣರ ಸಂಚಯನದತ್ತ, ಆರ್ಥಿಕ ಸಂಪನ್ಮೂಲಗಳ ಸಂಗ್ರಹದತ್ತ ಅಲ್ಲ.

ನಗದು ಪುಸ್ತಕವನ್ನು ಒಪ್ಪವಾಗಿಟ್ಟಿರಲು
ನಗುನಗುತ ಖಾತೆಗಳು ಸಂತುಲತೆಯೈದುವುವು
ಬಗೆನೇರ ನುಡಿನೇರ ನಡೆನೇರವಿರುವಲ್ಲಿ
ಸೊಗದ ಸಿರಿ ಹರಿಯುವುದು ದಿಟ ನೋಡು ಅತ್ರಿಸೂನು

ಚಾಬಸಿಯಲ್ಲಿ ಚಂಡಮಾರುತ
ಅಧ್ಯಾಯ ಇಪ್ಪತ್ತೇಳು

ಈಗ ಸಹಕಾರ ಸಂಘ ಪ್ರಕರಣದಿಂದ ಕಾಲೇಜಿಗೆ ಮರಳೋಣ (೧೯೫೪). ಹೊಸ ಪೀಳಿಗೆಯ ಯುವ ಉತ್ಸಾಹೀ ಉಪನ್ಯಾಸಕರ ತಂಡ, ಕಾಲೇಜಿನ ಸರ್ವಾಂಗ ಸುಂದರ ಅಭಿವೃದ್ಧಿಯೊಂದನ್ನೇ ದೃಷ್ಟಿಯಲ್ಲಿಟ್ಟುಕೊಂಡು ಅಚ್ಯುತನ್ ಪಿಳ್ಳೆಯವರ ಆದರ್ಶ ಮಾರ್ಗದರ್ಶನದಲ್ಲಿ ಕ್ರಿಯಾಶೀಲವಾಗಿದ್ದಾಗಲೇ ಒಬ್ಬಿಬ್ಬ ಪ್ರಾಧ್ಯಾಪಕರು (ಇವರ ನಾಯಕರನ್ನು ಕ್ಯಾಶಿಯಸ್ ಎಂದು ಕರೆಯೋಣ) ಮುಸುಕಿನೊಳಗೆ ಏನನ್ನೋ ಹೊಸೆಯುತ್ತಿದ್ದುದು ಆಗ ಈಗ ಚುಚ್ಚುನುಡಿಗಳಲ್ಲೋ ಕೆಲಸಗಳ್ಳತನದಲ್ಲೋ ಪ್ರಕಟವಾಗುತ್ತಿತ್ತು: ಪುರಂದರದಾಸರೆಂದಿರುವಂತೆ, "ನಿಂದಕರಿರಬೇಕಿರಬೇಕು ಹಂದಿಯಿದ್ದರೆ ಕೇರಿ ಹ್ಯಾಂಗೆ ಶುದ್ಧಿಯೋ ಹಾಂಗೆ."

೧೯೫೫ರ ಮಾರ್ಚ್ ತಿಂಗಳಿನಲ್ಲಿ ಕಾಲೇಜಿನ ಪ್ರಥಮ ವಾರ್ಷಿಕ ದಿನಾಚರಣೆಗೆ ಭರದಿಂದ ಏರ್ಪಾಡು ಮುಂದುವರಿಯಿತು. ವಿದ್ಯಾಸಚಿವ ಮುಖ್ಯ ಅತಿಥಿ. ಒಟ್ಟಂದವನ್ನು ಲಕ್ಷ್ಯದಲ್ಲಿಟ್ಟುಕೊಂಡು ಬಿಡಿ ವಿವರಗಳನ್ನು (ಕ್ಯಾಶಿಯಸ್‌ರ ಹೊರತಾಗಿ) ಎಲ್ಲರ ಪೂರ್ಣಭಾಗಿತ್ವದೊಡನೆ ನಿರ್ವಹಿಸಲಾಯಿತು. ಮದುವೆಗೆ ಅತಿಥಿಗಳನ್ನು ಆಹ್ವಾನಿಸುವ ಆತ್ಮಿಯತೆಯಿಂದ ನಾವು ಎಲ್ಲ ಪೋಷಕರಿಗೂ ಗಣ್ಯರಿಗೂ ಅವರಿದ್ದಲ್ಲಿಗೇ ಹೋಗಿ ಕರೆಯೋಲೆ ಕೊಟ್ಟು ಬಂದಿದ್ದೆವು.

ಕೊನೆಗೂ ಬಂದಿತು ides of March. ಅಪರಾಹ್ಣ ೪ ಗಂಟೆಗೆ ಸಮಾರಂಭ ಶುರುವಾಗಬೇಕಿತ್ತು. ವಿದ್ಯಾರ್ಥಿಗಳ ಸೌಕರ್ಯಾರ್ಥ ೩ ಗಂಟೆಗೇ ತರಗತಿಗಳನ್ನು ಕೈದುಮಾಡುವ ಯೋಚನೆ ಪ್ರಾಂಶುಪಾಲರದು. ಆ ವೇಳೆಗೆ ಸ್ಥಳೀಯ ರಾಜಕೀಯ ಹವೆ ವಿನಾ ಕಾರಣ ವಿದ್ಯಾಸಚಿವರಿಗೆ ಪ್ರತಿಕೂಲವಾಗಿತ್ತು. ಏಕೆಂದರೆ ಇವರು 'ನಮ್ಮವರಲ್ಲ!' ಸ್ಥಳಿಯನಾದ ನನಗೆ ಈ ಅಧೋಪ್ರವಾಹದ ಅರಿವು ಚೆನ್ನಾಗಿ ಗೊತ್ತಿತ್ತು. ಧೈರ್ಯ ತಳೆದು ಪ್ರಾಂಶುಪಾಲರಿಗೆ ಹೇಳಿದೆ, "ಮಂತ್ರಿಗಳ ಆಗಮನದ ತನಕವೂ ತರಗತಿಗಳನ್ನು ಕೈದುಮಾಡುವುದು ಬೇಡ. ಅದು ವೃಥಾ ತೊಂದರೆಗೆ ಆಹ್ವಾನವಾದೀತು."
"ವಿದ್ಯಾರ್ಥಿಗಳಿಗೆ ಕಡ್ಡಾಯದ ಸಂಕೋಲೆ ತೊಡಿಸಿಡಲು ಇದೇನೂ ಸೇನಾಕೇಂದ್ರವಲ್ಲ. ನಾವಿಂದು ಪ್ರಜಾಪ್ರಭುತ್ವದಲ್ಲಿದ್ದೇವೆ. ಇಷ್ಟವಿಲ್ಲದ ವಿದ್ಯಾರ್ಥಿಗಳು ಹೋಗಲಿ." ಇದು ಪ್ರಾಂಶುಪಾಲರ ಪ್ರತಿಕ್ರಿಯೆ. ಅಂತೂ ನಾವು ಕೆಲವರ ಒತ್ತಾಯಕ್ಕೆ ಮಣಿದು ತರಗತಿ ಮುಕ್ತಾಯದ ದೀರ್ಘ ಬಾಜಣೆಯನ್ನು ೩–೪ಶಿಕ್ಕೆ ಮುಂದೂಡಿ ಆ ಪ್ರಕಾರ ಮಾಡಲಾಯಿತು.

ನಾವು ಅಧ್ಯಾಪಕರೆಲ್ಲರೂ ಪ್ರಾಂಶುಪಾಲರ ಹಿರಿತನದಲ್ಲಿ ಕಾಲೇಜಿನ ಮುಖಮಂಟಪದಲ್ಲಿ ನಿಂತೆವು. ಪಟ್ಟಣದಿಂದ ಏರುತ್ತ ಸುತ್ತಿ ಬಳಸಿ ಬರುವ ಸುರುಳಿ ರಸ್ತೆಯತ್ತ ದೃಷ್ಟಿ ಚಾಚಿದೆವು: ಯಾವ ಕ್ಷಣದಲ್ಲೂ ಸಚಿವರ ಹಸುರು ಕಾರ್ ದೂರದ ತಿರುಗಾಸಿನಲ್ಲಿ ಪ್ರತ್ಯಕ್ಷವಾಗಬಹುದು, ಮುಂದಿನ ಕೆಲವೇ ಕ್ಷಣಗಳಲ್ಲಿ ಅವರೆ ನಮ್ಮೆದುರು ಮೈದಳೆಯಲಿದ್ದಾರೆ, ಅಷ್ಟರಲ್ಲಿ ವಿದ್ಯಾರ್ಥಿಗಳೆಲ್ಲರೂ ಕಾಲೇಜಿನ ಭವ್ಯ ಸಭಾಭವನದಲ್ಲಿ ಜಮಾಯಿಸಿರುತ್ತಾರೆ, ನಮ್ಮ ಶಿಸ್ತುಬದ್ಧ ಏರ್ಪಾಡುಗಳನ್ನು ಗಮನಿಸುವ ಸಚಿವರು ಸುಪ್ರೀತರಾಗುತ್ತಾರೆ ಎಂಬುದೆಲ್ಲ ನಮ್ಮ ಕನಸು. ಆದರೆ ವಾಸ್ತವವಾಗಿ ಘಟಿಸಿದ್ದೇನು?

ಅಂದು ಕಾಲೇಜಿನ ಒಟ್ಟು ಸಂಖ್ಯೆ ಮುನ್ನೂರರ ಒಳಗಿತ್ತು. ಈ ಪೈಕಿ ಅರ್ಧಕ್ಕೂ ಮಿಕ್ಕಿದ ವಿದಾರ್ಥಿಗಳ ಹಿಂಡು ಒಮ್ಮೆಗೇ ಕಟ್ಟೆಯೊಡೆದ ನೀರಹೊನಲಿನಂತೆ ಪಟ್ಟಣದತ್ತ ಧಾವಿಸತೊಡಗಿತು. ಆ ಕೊನೆ ಗಳಿಗೆಯಲ್ಲಿ ನಾವೇನೂ ಮಾಡುವಂತಿರಲಿಲ್ಲ. ಮುಂದಿನ ಕೆಲವೇ ಕ್ಷಣಗಳಲ್ಲಿ ಈ ಪ್ರವಾಹ ಇಳಿಜಾರಿನಲ್ಲಿ ರಭಸದಿಂದ ದುಮುಕಿ ದೂರದ ತಿರುಗಾಸನ್ನೂ ತಲಪಿತು. ಅಷ್ಟರಲ್ಲೇ ಅಲ್ಲಿಗೆ ಸಚಿವರ ಕಾರ್ ಕೂಡ ಬರಬೇಕೇ?

ನಿರ್ಜನ ಮಾರ್ಗ. ಹಠಾತ್ ವಿದ್ಯಾರ್ಥಿಗಳ ದಂಡು. ಜೊತೆಗೆ ಕೆಲವರು ಹುಚ್ಚಾಬಟ್ಟೆ ಹೀನ ಘೋಷಣೆಗಳನ್ನು ಕೇಕೆಹಾಕುತ್ತಿದ್ದುದೂ ನಮಗೆ ಕೇಳುತ್ತಿತ್ತು. ಮಂತ್ರಿಗಳ ಕಾರ್ ನಿಂತಿತು. ನಮ್ಮ ಹುಡುಗರು ಅದಕ್ಕೆ ಮುತ್ತಿಗೆ ಹಾಕಿದರು. ಏನು ಮಾತುಕತೆ ನಡೆಯಿತೋ ಗೊತ್ತಿಲ್ಲ. ತುಸು ವೇಳೆಯಲ್ಲೇ ಕಾರ್ ಚಲಿಸಿತು ಮುಂದಕ್ಕೆ, ಚಡಾವು ಏರಿ ಬಂತು ನಮ್ಮಲ್ಲಿಗೆ, ತಂಗಿತು ಮುಖಮಂಟಪದಲ್ಲಿ ಗಕ್ಕನೆ. ಸಿಟ್ಟಿನಿಂದ ನಿಗಿನಿಗಿಯುತ್ತಿದ್ದ ಮಂತ್ರಿ ಅದರಿಂದ ಹೊರಗಿಳಿದು ಒಂದೇ ಸವನೆ ವಾಗ್ಪ್ರವಾಹ ಹರಿಯಬಿಟ್ಟರು. ಪ್ರಾಂಶುಪಾಲರು ಅವರಿಗೆ ತೊಡಿಸಲೆಂದು ಪುಷ್ಪಹಾರ ಸಹಿತ ಮುಂದೆ ಹೋದಾಗ ಅದನ್ನು ತೀಕ್ಷ್ಣವಾಗಿ ನಿರಾಕರಿಸುತ್ತ ಸಚಿವರು ಹೇಳಿದರು, "ಎಂಥ ರೌಡಿಗಳನ್ನು ನೀವಿಲ್ಲಿ ತಯಾರಿಸುತ್ತಿದ್ದೀರಿ. ನಾನಿಲ್ಲಿಗೆ ಕಾಲಿಡಲಾರೆ." ಪ್ರಾಂಶುಪಾಲರ ಯಾವುದೇ ಸಬೂಬು, ಸಮಾಧಾನ ಅಥವಾ ಅಂಗಲಾಚಿಕೆ ಆಲಿಸುವ ವ್ಯವಧಾನ ಅವರಿಗಿರಲಿಲ್ಲ. ಕಾರ್ ಹತ್ತಿದರು, ಹೊರಟುಹೋಗಿಯೇ ಬಿಟ್ಟರು.

ಒಂದು ಕ್ಷಣ ನಾವೆಲ್ಲರೂ ಸ್ತಂಭೀಭೂತರಾದೆವು. ಪ್ರಾಂಶುಪಾಲರು ತಮ್ಮ ಪಕ್ಕದಲ್ಲೇ ನಿಂತಿದ್ದ ಕ್ಯಾಶಿಯಸ್ ಜೊತೆ ಸಾವಧಾನವಾಗಿ ಮಾತು ತೊಡಗಿದರು, "ವಿದ್ಯಾರ್ಥಿಗಳನ್ನು ನಾವೇನು ಕಟ್ಟಿಹಾಕಬೇಕೇ?"
ಕ್ಯಾಶಿಯಸ್, "ನಮ್ಮದು ಪ್ರಜಾಪ್ರಭುತ್ವ. ರಾಜನಂತೆ ಪ್ರಜೆ, ಅಲ್ಲವೇ?"
ಪ್ರಾಂಶುಪಾಲ, "ಈಗ ಸಭೆಯನ್ನೇನೋ ಬರಖಾಸ್ತು ಮಾಡಬಹುದು. ಆದರೆ ಮೈಸೂರಿನ ಇಂದ್ರ ಭವನದಿಂದಲೇ ತರಿಸಿರುವ ತಿಂಡಿತೀರ್ಥಗಳನ್ನೇನು ಮಾಡೋಣ?"
ಅಧ್ಯಾಪಕರೆಲ್ಲರ ಅಭಿಪ್ರಾಯದ ಮೇರೆಗೆ ನಾವೆಲ್ಲ ಉಪಾಹಾರ ಬಡಿಸಿಟ್ಟಿದ್ದ ಕೊಠಡಿಗೆ ಹೋಗಿ ಕುಳಿತೆವು, ಸಚಿವರ ನಿರಂಕುಶ ಧೋರಣೆಯನ್ನು ಮನಸ್ವೀ ಹಳಿಯುತ್ತ ಒಳಗೆ ತುಂಬಿದ್ದ ಹತಾಶೆ ಅಪಮಾನಗಳನ್ನು ಕಾರಿದೆವು. ಸಾಕಷ್ಟು ಕಟಕಿ ಕೂಡ ಸೇರಿತ್ತು. ಕ್ಯಾಶಿಯಸ್ ಎಲ್ಲದರಲ್ಲೂ ಭಾಗಿಯಾಗಿದ್ದರೂ ತುಟಿ ಮಾತ್ರ ಪಿಟಕ್ ಅನ್ನಲಿಲ್ಲ – "ನಿಮ್ಮೊಡನಿದ್ದೂ ನಿಮ್ಮಂತಾಗದೆ" (ನಿಸಾರ್ ಅಹಮದ್). "ಮಸೆಯಲಿ ಮಸೆಯಲಿ ದ್ವೇಷ ಕುಠಾರಂ ನೆಲಸಮವಾಗಲಿ ವೈರಿ ವಠಾರಂ" (ರಾಜರತ್ನಂ) ಎಂಬಂತಿತ್ತು ಅವರ ಆಮ್ಲ ಮುಖಭಾವ. ಅದೊಂದು ಕೆಟ್ಟ ದಿವಸ.

ಅದೇ ರಾತ್ರಿ ನಾನು ಮನೆಯಲ್ಲಿ ಊಟಕ್ಕೆ ಕುಳಿತಿದ್ದಾಗ ಅಪರಿಚಿತನೊಬ್ಬ ಒಳಬಂದು ತಾನು ರಾಜ್ಯದ ಬೇಹುಗಾರ ಸಂಸ್ಥೆಯ ಪರವಾಗಿ ನನ್ನನ್ನು ಕಾಣಲು ಬಂದುದಾಗಿ ಹೇಳಿ ತನ್ನ ಪರವಾನಿಗೆ ಪತ್ರ ತೋರಿಸಿದ. ಪಕ್ಕದಲ್ಲೇ ಇದ್ದ ನನ್ನ ತಂದೆಯವರಿಗೆ ಆತನ ಪರಿಚಯವಿತ್ತು.
ನಾನೆಂದೆ, "ನನ್ನಿಂದೇನಾಗಬೇಕು?"
"ಮಿನಿಸ್ಟರ್ ಹೊರಟುಹೋದ ಬಳಿಕ ಕಾಲೇಜಿನಲ್ಲಿ ಏನೇನು ನಡೆಯಿತೆಂಬ ವಿವರ ತಿಳಿಯಲು ನಮ್ಮ ಮುಖ್ಯಸ್ಥರಿಂದ ನಿಯೋಜಿತನಾಗಿ ನಾನಿಲ್ಲಿಗೆ ಬಂದಿದ್ದೇನೆ." ನನ್ನ ಹೇಳಿಕೆ ದಾಖಲಿಸಲು ಆತ ಸಿದ್ಧನಾಗಿ ಕುಳಿತ.
"ಅದು ಕಾಲೇಜಿನ ಆಂತರಿಕ ವಿಷಯ. ರಹಸ್ಯ ಸಂಗತಿ. ನಿಮ್ಮ ಜೊತೆ ಹೇಳಬೇಕಾದರೆ ನಮ್ಮ ಪ್ರಾಂಶುಪಾಲರ ಲಿಖಿತ ಅನುಮತಿ ಬೇಕು. ತಂದಿದ್ದೀರಾ?"
"ಇಲ್ಲ. ಆದರೆ ನಮ್ಮ ಇಲಾಖೆಯ ಮುಖ್ಯಸ್ಥರು ನಿಮ್ಮಿಂದ ನಾನದನ್ನು ಸಂಗ್ರಹಿಸಬೇಕೆಂಬ ಆದೇಶ ನೀಡಿದ್ದಾರೆ."
"ಅದು ನಿಮಗಿತ್ತ ಆದೇಶ, ನನಗೆ ಲಗಾವಾಗದು. ಇನ್ನು ಮಾತು ಚರ್ಚೆ ಎಲ್ಲ ಸಾಕು" ಎನ್ನುತ್ತ ನಾನು ಎದ್ದೆ.
"ನನ್ನ ಕರ್ತವ್ಯ ನಿರ್ವಹಣೆಯಲ್ಲಿ ನಿಮ್ಮ ಸಹಕಾರ ಲಭಿಸಲಿಲ್ಲ ಎಂದು ನಾನು ಮೇಲಧಿಕಾರಿಗಳಿಗೆ ದೂರು ಸಲ್ಲಿಸಬೇಕಾಗುತ್ತದೆ."
"ಸ್ವಾಮೀ! ಈ ಪೊಳ್ಳು ಬೆದರಿಕೆಗೆ ನಾನು ಜಗ್ಗುವುದಿಲ್ಲ. ಇನ್ನು ನೀವು ಹೊರಡಬಹುದು" ಎನ್ನುತ್ತ ತಂದೆಯವರ ಮುಖ ನೋಡಿದೆ. ನನ್ನ ಖಚಿತ ನಿಲವನ್ನು ಒಪ್ಪಿದ್ದರೆಂಬುದು ಹೃದ್ಗತವಾಯಿತು.

ಮರುದಿನ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಸಾಮೂಹಿಕ ಮುಷ್ಕರ: ವಿದ್ಯಾಮಂತ್ರಿಗಳಿಂದ ಕಾಲೇಜಿಗೆ ಅಗೌರವವಾಗಿದೆ, ಅವರು ಮತ್ತೆ ಕಾಲೇಜಿಗೆ ಬಂದು ಸಾರ್ವಜನಿಕ ಕ್ಷಮೆಯಾಚಿಸಿ ವಿದ್ಯಾರ್ಥಿಸಭೆಯನ್ನು ಉದ್ದೇಶಿಸಿ ಮಾತಾಡಲೇಬೇಕು, ಅಲ್ಲಿಯ ತನಕ ಮುಷ್ಕರ ಮುಂದುವರಿಯಲಿದೆ. ಇದು ಅವರ ಬೇಡಿಕೆ. ಪ್ರಾಂಶುಪಾಲರೂ ಅಧ್ಯಾಪಕರೂ ವಿದ್ಯಾರ್ಥಿಗಳ ಜೊತೆ ಸೌಹಾರ್ದ ವಾತಾವರಣದಲ್ಲಿ ಮಾತಾಡಿ ಆ ಮುಷ್ಕರವನ್ನೇನೋ ನಿಲ್ಲಿಸಿದ್ದಾಯಿತು. ಫಲಶ್ರುತಿ? ಅಷ್ಟರಲ್ಲಿ ವಾರ್ಷಿಕ ಪರೀಕ್ಷೆಗಳು ಬಂದುವು. ಬೇಸಗೆ ರಜೆ ಶುರುವಾಯಿತು – ಏಪ್ರಿಲ್ ಆರಂಭ. ನಾವೆಲ್ಲ ಉತ್ತರ ಪತ್ರಿಕೆಗಳ ಮೌಲ್ಯಮಾಪನೆಯಲ್ಲಿ ಮಗ್ನರಾಗಿದ್ದಾಗ ಸರ್ಕಾರದಿಂದ ಅನಿರೀಕ್ಷಿತ ಕ್ಷಿಪಣಿಯೊಂದು ಬಂದು ಬಡಿಯಿತು: ಸಂದ ಶೈಕ್ಷಣಿಕ ವರ್ಷದಲ್ಲಿ, ಕಾಲೇಜಿನ ವಾರ್ಷಿಕೋತ್ಸವದ ಸಂದರ್ಭದಲ್ಲಿ, ನಡೆದ ದುರಾಚರಣೆ ಬಗೆಗಿನ ವಿಚಾರಣಾಯೋಗ ಒಡನೆ ಕಾಲೇಜಿಗೆ ಬರಲಿದೆ, ಎಲ್ಲ ಅಧ್ಯಾಪಕರೂ ಅದರೊಂದಿಗೆ ಸಹಕರಿಸತಕ್ಕದ್ದು.

ರಾಜ್ಯದ ಮುಖ್ಯ ನ್ಯಾಯಾಧೀಶ ಎನ್.ಆರ್.ಗೋಪಾಲಕೃಷ್ಣ ಯುಕ್ತ ಸಹಾಯಕ ಸಿಬ್ಬಂದಿ ಸಹಿತ ಮರುದಿನವೇ ಬಂದರು. ಮೊದಲ ಎರಡು ದಿನಗಳಲ್ಲಿ ಪ್ರಾಂಶುಪಾಲ ಮತ್ತು ಹಿರಿಯ ಪ್ರಾಧ್ಯಾಪಕರುಗಳನ್ನು ವೈಯಕ್ತಿಕವಾಗಿ ವಿಚಾರಣೆ ಮಾಡಿ ಮಾಹಿತಿ ಸಂಗ್ರಹಿಸಿದರು. ಮೂರನೆಯ ದಿನ ನನ್ನನ್ನು ಕರೆಸಿದರು.
"ಕಾಲೇಜ್ ವಾರ್ಷಿಕೋತ್ಸವದ ಕರೆಯೋಲೆ ಬಟವಾಡೆ ನಿನ್ನ ಹೊಣೆಯಾಗಿತ್ತು, ಹೌದೇ?" ಅವರು ನಮ್ಮ ಸಮೀಪ ಸಂಬಂಧಿ ಕೂಡ.
"ಹೌದು."
"ಅದನ್ನು ಹೇಗೆ ನಿಭಾಯಿಸಿದೆ? ದಾಖಲೆ ಇಟ್ಟಿರುವೆಯಾ?"
ಎಲ್ಲ ವಿವರಗಳನ್ನೂ ಕೂಲಂಕಷವಾಗಿ ಹೇಳಿದೆ. ಪ್ರತಿ ಹಂತದಲ್ಲೂ ವಿದ್ಯಾರ್ಥಿಗಳ ನೆರವು ಪಡೆದುದನ್ನು ಸಾಕ್ಷಿ ಸಹಿತ ಕಾಣಿಸಿದೆ.
"ವಿಶಿಷ್ಟ ಅಧಿಕಾರಿಯೊಬ್ಬರಿಗೆ ಆಹ್ವಾನಪತ್ರಿಕೆ ಕೊಡಬಾರದೆಂಬ ಆದೇಶ ನಿಮಗಿತ್ತೇ?"
ನಾನು ನಕ್ಕೆ, "ಅಂಥ ನಿಷೇಧಾತ್ಮಕ ಆದೇಶ ಇರಲಿಲ್ಲ ಮಾತ್ರವಲ್ಲ, ಆದಷ್ಟು ಹೆಚ್ಚು ಮಂದಿಗೆ ಅದನ್ನು ಕೈಯಾರೆ ಕೊಡಿ, ಇದೊಂದು ನಾಡ ಹಬ್ಬ ಎಂಬ ಸ್ಪಷ್ಟ ನಿರ್ದೇಶನವೂ ಇತ್ತು. ನಾನು ಇದೇ ಪಟ್ಟಣದವನಾದುದರಿಂದ ಎಲ್ಲರಿಗೂ ಕರೆಯೋಲೆಗಳನ್ನು ತಲಪಿಸಿದ್ದೇವೆಂದು ದೃಢವಾಗಿ ಹೇಳಬಲ್ಲೆ."
"ಇಲ್ಲ. ಬೇಹುಗಾರಿಕೆ ಇಲಾಖೆಯ ಮುಖ್ಯಸ್ಥರಿಗೆ ಅದು ತಲಪಿಲ್ಲವೆಂಬ ಲಿಖಿತ ಆಕ್ಷೇಪಣೆ ನಮಗೆ ಬಂದಿದೆ?"
"ಖುದ್ದು ನಾನೇ ಅವರ ಕಚೇರಿಗೆ ಹೋಗಿದ್ದೆ. ಅವರು ತಮ್ಮ ಆಸನದಲ್ಲಿರಲಿಲ್ಲ" ಎನ್ನುತ್ತ ಕಡತ ಹೊರತೆಗೆದು ಅವರ ಹೆಸರಿನ ಎದುರು ಇದ್ದ ಆ ಅಧಿಕಾರಿಯ ಸಹಾಯಕನ ರುಜು ತೋರಿಸಿದೆ.
"ಭಲೇ! ತಿಮ್ಮಪ್ಪಯ್ಯನವರ ಮಗ" ಎಂದವರು ನಸುನಗುತ್ತ ಉದ್ಗರಿಸಿದರು.

ಮೇ ತಿಂಗಳ ಹಗಲು ಮಡಿಕೇರಿಯಲ್ಲಿಯೂ ಬಿಸಿಲ ಧಗೆ ತೀವ್ರವಾಗಿದ್ದಾಗ, ಇರುಳಿನಲ್ಲಿ ಕೋಲ್ಮಿಂಚು ಗುಡುಗು ಸಿಡಿಲುಗಳ ಆರ್ಭಟೆ ಭಯಕಾರಕವಾಗಿದ್ದಾಗ, ರೈತರೆಲ್ಲರೂ ಆಸೆ ಕಣ್ಣುಗಳಿಂದ ಮೋಡಗಳನ್ನೇ ದಿಟ್ಟಿಸುತ್ತಿದ್ದಾಗ ಬಡಿದೇ ಬಡಿಯಿತು ಕಾಲೇಜಿಗೆ ಬರಸಿಡಿಲು? ಹೌದು, ಅಚ್ಯುತನ್ ಪಿಳ್ಳೆಯವರು ಅದಕ್ಷ ಪ್ರಾಂಶುಪಾಲ, ಎಂದೇ ಅವರನ್ನು ಕೊಡಗು ಸರ್ಕಾರದ ಸೇವೆಯಿಂದ ತತ್‌ಕ್ಷಣ ರದ್ದುಗೊಳಿಸಿ ಮಾತೃ ಸಂಸ್ಥೆಗೆ (ಕೇಂದ್ರ ಸರ್ಕಾರ) ವರ್ಗಾಯಿಸಲಾಗಿದೆ ಎಂಬ ಸರ್ಕಾರೀ ಆದೇಶ. ಕಾಲೇಜಿಗೆ ಪಿಳ್ಳೆಯವರಿಗಿಂತ ಹೆಚ್ಚು ಒಳ್ಳೆಯದನ್ನು ಮಾಡಿ ಅಧಿಕ ಮನಃಕ್ಲೇಶ ಅನುಭವಿಸಿದವರು ಇನ್ನೊಬ್ಬರಿರಲ್ಲ. ಮೇ ಕೊನೆಯ ಆ ಮುಂಜಾನೆ ಅವರು ಸಂಸಾರ ಸಹಿತ ಮಡಿಕೇರಿಯಿಂದ ನಿರ್ಗಮಿಸಿದಾಗ ಅವರನ್ನು ಬೀಳ್ಕೊಟ್ಟವರು ನಾವು ಕೆಲವರು ಮಾತ್ರ.
ಆ ದುರ್ಭರ ಸನ್ನಿವೇಶದಲ್ಲಿ ನನ್ನ ಮನದೊಳಗೆ ಮಿಡಿದ ನುಡಿಗಳೆರಡು: "ಪುರದ ಪುಣ್ಯಂ ಪುರುಷರೂಪಿಂದೆ ಪೋಗುತಿದೆ, ಪರಿಜನದ ಭಾಗ್ಯವಡವಿಗೆ ನಡೆಯುತಿದೆ" (ರಾಘವಾಂಕ) ಮತ್ತು "ಸತ್ಯವಂತರಿಗಿದು ಕಾಲವಲ್ಲ, ದುಷ್ಟ ಜನರಿಗೆ ಸುಭಿಕ್ಷ ಕಾಲ.... ಧರ್ಮ ಮಾಡುವವ ನಿರ್ಮೂಲವಾಗುವ ಕಾಲ, ಕರ್ಮಿ ಪಾತಕರಿಗೆ ಬಹು ಸೌಖ್ಯ ಕಾಲ" (ಪುರಂದರದಾಸ).

ಕ್ರಮೇಣ ಒಂದು ರಹಸ್ಯ ಬಯಲಾಯಿತು: ಅಚ್ಯುತನ್ ಪಿಳ್ಳೆಯವರ ಉಚ್ಚಾಟನೆ ಪಿತೂರಿಯನ್ನು ಹೊಸೆದು ನಿರ್ವಹಿಸಿದಾತ ಕ್ಯಾಶಿಯಸ್, ಈತನ ಸೋದರಮಾವನೇ ರಾಜ್ಯ ಬೇಹುಗಾರಿಕೆ ಇಲಾಖೆಯ ಮುಖ್ಯಸ್ಥ, ಕಾಲೇಜಿನ ಒಬ್ಬ ಜವಾನ ಈ ದುಷ್ಟಕೂಟದ ಮೀರ್ ಸಾದಕ್. ಉದ್ದೇಶ: ಪಿಳ್ಳೆಯವರನ್ನು ಅದಕ್ಷರೆಂದು ರುಜುವಾತಿಸಿ ಪ್ರಾಂಶುಪಾಲಗಿರಿಯಿಂದ ಇಳಿಸಿ ಕ್ಯಾಶಿಯಸನ ಸಿಂಹಾಸನಾರೋಹಣ. ಆದರೆ ಸೇವಾಜ್ಯೇಷ್ಠತೆಯಲ್ಲಿ ಈತನದು ನಾಲ್ಕನೆಯ ಸ್ಥಾನವಾಗಿದ್ದುದರಿಂದ ಈ ಎರಡನೆಯ (ದುರ್–)ಉದ್ದೇಶ ಈಡೇರಲಿಲ್ಲ. ಅಳಿಯ ಪೃಥ್ವೀರಾಜನ ವಿರುದ್ಧ ಸೇಡು ತೀರಿಸಿಕೊಳ್ಳಲು ಪರದೇಶದ ಘಜನೀ ಮಹಮೂದನನ್ನು ಆಹ್ವಾನಿಸಿದ ಜಯಚಂದನ ನಾಡಲ್ಲವೇ ಮೇರಾ ಮಹಾನ್ ಭಾರತ್?

ಜೀವನ್ಮುಕ್ತ ಬಂಟ್ವಾಳ ಜನಾರ್ದನ ಬಾಳಿಗ
ಅಧ್ಯಾಯ ಇಪ್ಪತ್ತೆಂಟು

೧೯೫೩–೫೪ರ ಬೇಸಗೆ ರಜೆಯಲ್ಲಿ ಕೇಂದ್ರ ಸರ್ಕಾರ ನಮ್ಮ ಕಾಲೇಜಿನಲ್ಲಿ ಸೀನಿಯರ್ ವಿಭಾಗದ ಎನ್‌ಸಿಸಿ ದಳವನ್ನು ಪ್ರಾರಂಭಿಸಿತು. ರಾಜ್ಯದ ಎಲ್ಲ ಪ್ರೌಢಶಾಲೆಗಳಲ್ಲಿಯೂ ಜೂನಿಯರ್ ವಿಭಾಗದ ಎನ್‌ಸಿಸಿ ಆ ಮೊದಲೇ ಇದ್ದುದರಿಂದ ಇವೆಲ್ಲವನ್ನೂ ಬೆಸೆದು ಕೊಡಗು ರಾಜ್ಯಕ್ಕೇ ಮೀಸಲಾಗಿ ಕೂರ್ಗ್ ಇಂಡೆಪೆಂಡೆಂಟ್ ಕಂಪನಿ ಎನ್‌ಸಿಸಿ ಘಟಕವನ್ನು ಆಗ ಸ್ಥಾಪಿಸಿದರು. ಇದರ ಮುಖ್ಯಸ್ಥನಾಗಿ ಒಬ್ಬ ಹಿರಿಯ ಸೇನಾ ಕ್ಯಾಪ್ಟನ್‌ನನ್ನು ನೇಮಿಸಿದರು. ೧೯೫೪ರ ಶೈಕ್ಷಣಿಕ ವರ್ಷ ತೊಡಗುವಾಗ ಕಾಲೇಜಿನ ಎನ್‌ಸಿಸಿ ಘಟಕ ಕಾರ್ಯಾರಂಭಿಸಬೇಕೆಂಬುದು ಉದ್ದೇಶ. ಆಗ ಆ ಅಧಿಕಾರಿಗಳಿಗೆ ತೀರ ಸುಲಭವಾಗಿ ಒದಗಿದ ಭಾಗಕಾಲೀನ ಎನ್‌ಸಿಸಿ ಅಧಿಕಾರಿ ನಾನು! ಹೇಗೂ ನನಗೆ ತತ್ಪೂರ್ವ ಈ ಸಂಬಂಧದ ಸೇನಾಶಿಕ್ಷಣ ದೊರೆತಿತ್ತಷ್ಟೆ. ಒಂದು ವರ್ಷದ ಪ್ರತ್ಯಕ್ಷಾನುಭವವೂ ಇತ್ತು. ನಮ್ಮ ಕಂಪನಿಯಲ್ಲಿ ಇನ್ನೂ ಎರಡು ಎನ್‌ಸಿಸಿ ಅಧಿಕಾರಿಗಳಿಗೆ ಅವಕಾಶವಿತ್ತು.

ನಾನು ಸಂತ ಅಲೋಶಿಯಸ್ ಕಾಲೇಜಿನಲ್ಲಿದ್ದಾಗ (೧೯೪೯–೫೩) ಬಂಟ್ವಾಳ ಜನಾರ್ದನ ಬಾಳಿಗರೆಂಬ ಭೌತವಿಜ್ಞಾನ ಉಪನ್ಯಾಸಕರಿಂದ ವಿಶೇಷವಾಗಿ ಆಕರ್ಷಿತನಾಗಿದ್ದೆ. ನನ್ನ ಸಮವಯಸ್ಕರು, ಸಮಾನಶೀಲರು ಮತ್ತು ಉಚ್ಚ ಆದರ್ಶದೀಪ್ತರು. ದೈಹಿಕವಾಗಿ ನನಗಿಂತ ಬಲಿಷ್ಠರು. ಸಾಮೂ ಮಾಡಿ ಉಕ್ಕಾಗಿದ್ದ ಒಡಲು. ಇದಕ್ಕೊಪ್ಪುವ ಗಂಡು ಕಂಠ. ಎನ್‌ಸಿಸಿ–ಅಧಿಕಾರಿ ಆಯ್ಕೆಗೆಂದು ಕಾಲೇಜ್ ನಿಯೋಜಿಸಿ ಮದ್ರಾಸಿಗೆ ಕಳಿಸಿದ್ದ ತಂಡದಲ್ಲಿ ನನ್ನ ಜೊತೆಗೆ ಬಾಳಿಗರೂ ಇದ್ದರು. ನಮ್ಮೆಲ್ಲರ ಅಭಿಪ್ರಾಯದಲ್ಲಿ ಆಯ್ಕೆಸಮಿತಿ ಇವರನ್ನೇ ಒಪ್ಪುತ್ತದೆಂದಿತ್ತು. ಆದರೆ ಆ 'ಉರುಳು' ನನ್ನ ಕೊರಳಿಗೆ ಬಿತ್ತು. ನನಗೆ ಹತಾಶೆ ಆಯಿತು, ಅಳುಕೂ ಆಯಿತು. ಬಾಳಿಗರಿಗೆ ಸಂತೋಷವಾಯಿತು,"ಜನರಲ್‌ಗಳ ನಾಡಿನವರಲ್ಲವೇ ನೀವು!" ಎಂದು ನನ್ನನ್ನು ಹುರಿದುಂಬಿಸಿದರು. ಇಂಥ ಪರಿಶುದ್ಧ ಹೃದಯಿ ಅವರು.

೧೯೫೩ರ ತರುಣದಲ್ಲಿ ನಾನು ಅಲೋಶಿಯಸ್ ಕಾಲೇಜನ್ನೂ ಆ ಕಾರಣದಿಂದ ಎನ್‌ಸಿಸಿ ಹೊಣೆಯನ್ನೂ ಬಿಡುವ ಮೊದಲು ಬಾಳಿಗರನ್ನು ಎನ್‌ಸಿಸಿ ಸ್ಥಾನಕ್ಕೆ ಆಯುವಂತೆ ಮಿಲಿಟರಿ ವರಿಷ್ಠರಿಗೆ ವಿನಂತಿಸಿದ್ದೆ. ನನ್ನ ಮಾತಿಗೆ ಅವರು ಬೆಲೆಕೊಟ್ಟು ಆ ಬೇಸಗೆಯಲ್ಲಿ ಬಾಳಿಗರನ್ನು ಸೇನಾಶಿಕ್ಷಣಕ್ಕೆಂದು ಮಿಲಿಟರಿ ಕೇಂದ್ರಕ್ಕೆ ಕಳಿಸಿದರು.

ಮಡಿಕೇರಿಯಲ್ಲಿಯ ನಮ್ಮ ಕಾಲೇಜಿಗೆ ಒಬ್ಬ ಭೌತವಿಜ್ಞಾನ ಉಪನ್ಯಾಸಕ ಬೇಕಾಗಿತ್ತು (೧೯೫೪). ಇತ್ತ ಎನ್‌ಸಿಸಿಯಲ್ಲಿ ಎರಡು ಹುದ್ದೆಗಳು ಖಾಲಿ ಇದ್ದುವು. ಆಗ ಕಾಲೇಜಿನ ಪ್ರಾಂಶುಪಾಲರು ವಿ.ವೆಂಕಟರಮಣರಾವ್ (ಗಣಿತ) ಮತ್ತು ಉಪಪ್ರಾಂಶುಪಾಲರು ಎಂ.ಎ.ರಾಮಚಂದ್ರರಾವ್ (ಭೌತವಿಜ್ಞಾನ). ಇವರಿಬ್ಬರೂ ತತ್ಪೂರ್ವ ಅಲೋಶಿಯಸ್ ಕಾಲೇಜಿನಲ್ಲಿ ಸಹೋದ್ಯೋಗಿಗಳಾಗಿದ್ದು ಬಾಳಿಗರನ್ನು ಬಲ್ಲವರಾಗಿದ್ದರು. ಅಲ್ಲದೇ ಬಾಳಿಗರು ರಾಮಚಂದ್ರರಾಯರ ಶಿಷ್ಯರು ಕೂಡ. ಹೀಗೆ ಎಲ್ಲ ರೀತಿಗಳಲ್ಲಿಯೂ ಮಡಿಕೇರಿ ಕಾಲೇಜಿಗೆ ಬಾಳಿಗರನ್ನು ಆವಾಹಿಸಿ ಪ್ರತಿಷ್ಠಾಪಿಸಲು ಕಾಲ ಪಕ್ವವಾಗಿತ್ತು.

೧೯೫೪–೫೫ ಶೈಕ್ಷಣಿಕ ವರ್ಷಾರಂಭ ನಮ್ಮ ಕಾಲೇಜಿನಲ್ಲಿ ಹೊಸ ಶಕೆಯನ್ನೇ ಹುಟ್ಟುಹಾಕಿತು: ವಿದ್ಯಾರ್ಥಿಗಳ ಸಹಕಾರ ಸಂಘ, ಬಾಳಿಗರ ಪ್ರವೇಶ ಮತ್ತು ಸೀನಿಯರ್ ಎನ್‌ಸಿಸಿ ಚಟುವಟಿಕೆಗಳು. ಇಂಥ ಪ್ರಸನ್ನ ವಾತಾವರಣದಲ್ಲಿಯೂ ಶೈಕ್ಷಣಿಕ ಮತ್ತು ಪಠ್ಯೇತರ ಕ್ರಿಯಾಕಲಾಪಗಳ ಜೇನುಗೂಡಿನಲ್ಲಿಯೂ ಅತೃಪ್ತ ಗುರುವೃಂದವೊಂದು ಇದ್ದೇ ಇತ್ತು. ಇದರ 'ಕಣ್ಮಣಿ' ನಮ್ಮ ಕ್ಯಾಶಿಯಸ್! ಬಾಳಿಗರೂ ನಾನೂ ಕಾಲೇಜಿನ ಎಲ್ಲ ಕೆಲಸಗಳಲ್ಲಿ ಅವಳಿಜವಳಿ ಸಹೋದರರಂತೆ ಹಗಲಿರುಳೆಂಬ ವ್ಯತ್ಯಾಸವಿಲ್ಲದೆ ಕಾರ್ಯನಿರತರಾಗಿದ್ದೆವು. ಅವರು ಒಳಗೂ ಹೊರಗೂ ಪರಮಧಾರ್ಮಿಕರು, ನಾನೋ ಚಿಕ್ಕಂದಿನಲ್ಲಿ ಕಡ್ಡಾಯವಾಗಿ ಅನುಭವಿಸಿದ ಸಾಕಷ್ಟು 'ಮತಧರ್ಮಕವಾಯತಿ'ಯ ಕಾರಣವಾಗಿ ಎಲ್ಲ ಬಾಹ್ಯಾಚರಣೆಗಳನ್ನೂ ತೊರೆದು 'ಕಾಯಕವೆ ಕೈಲಾಸ' ಎಂಬ ಶರಣತತ್ತ್ವಕ್ಕೆ ಶರಣಾದವನು. ನಮ್ಮಿಬ್ಬರದೂ ಗುರಿ ಒಂದೇ ಆಗಿದ್ದುದರಿಂದ – ಸಾಮಾಜಿಕ ಕೈಂಕರ್ಯ ಮತ್ತು ಕರ್ತವ್ಯ ಬದ್ಧತೆ – ಎಂದೂ ಎಲ್ಲಿಯೂ ನಮ್ಮ ನಡುವೆ ಯಾವುದೇ ಭಿನ್ನಾಭಿಪ್ರಾಯ ಹಣುಕಲಿಲ್ಲ.

ಖಾಸಗಿಯಲ್ಲಿ ಬಾಳಿಗರು ಮತ್ತು ಅವರ ಕುಟುಂಬ ಮಾತೆ ರಮಾದೇವಿಯವರ ನೈಷ್ಠಿಕ ಭಕ್ತರು. ಮಡಿಕೇರಿಯಲ್ಲಿಯ ತಮ್ಮ ಮನೆಯಲ್ಲಿ ರಮಾದೇವಿ ಭಜನಾ ವೃಂದವನ್ನು ಸ್ಥಾಪಿಸಿ ಸತ್ಸಂಗ ಚಟುವಟಿಕೆಗಳನ್ನು ತೊಡಗಿದರು. ಕ್ರಮೇಣ ಈ ಸಸಿ ಹೆಮ್ಮರವಾಗಿ ಬೆಳೆಯಿತು. ಆಗ ತಾವೇ ಒಂದು ಸಾರ್ವಜನಿಕ ಭಜನಾಮಂದಿರವನ್ನೇಕೆ ನಿರ್ಮಿಸಬಾರದೆಂಬ ಪ್ರಶ್ನೆ ಇವರೆದುರು ನಿಂತಿತು. ಆ ದಿಶೆಯಲ್ಲಿ ಯೋಜನೆ, ಸಂಪನ್ಮೂಲ ಸಂಗ್ರಹಣೆ, ಸಮರ್ಥ ನಿರ್ವಹಣೆ ಎಲ್ಲವೂ ಬಾಳಿಗರ ನೇತೃತ್ವದಲ್ಲಿ ಭರದಿಂದ ಸಾಗುತ್ತಿದ್ದಂತೆ ಇವರಿಗೆ ತುರ್ತಾಗಿ ಒಮ್ಮೆಗೇ ಸುಮಾರು ೧೨,೦೦೦ ರೂಪಾಯಿಗಳ ಆವಶ್ಯಕತೆ ಧುತ್ತೆಂದು ಎದುರಾಯಿತು: ಅಷ್ಟು ಬೆಲೆಯ ಸಿಮೆಂಟ್ ಅವರಿಗೆ ಸರ್ಕಾರದಿಂದ ಮಂಜೂರಾಗಿತ್ತು (ಸಿಮೆಂಟ್ ತೀರ ದುರ್ಲಭವಾಗಿದ್ದ ದಿನಗಳವು, ಇನ್ನು ಒಂದೇ ಗಂಟಿನಲ್ಲಿ ರೂ ೧೨,೦೦೦ವಂತೂ ಗಗನಕುಸುಮ). ಗಂಗೆ ಬರುತ್ತಿದೆ, ಪಾತ್ರವೆಲ್ಲಿದೆ? ಹೇಗೆ ಹಿಡಿದಿಡುವುದು? ಆ ಪ್ರವಾಹವನ್ನು ಮಂದಿರ ನಿರ್ಮಾಣದತ್ತ ತಿರುಗಿಸಬಲ್ಲ ಭಗೀರಥ ಎಲ್ಲಿದ್ದಾನೆ? ಅದೊಂದು ಆದಿತ್ಯವಾರದ ಅಪರಾಹ್ಣ. ತೀರ ಅನಿರೀಕ್ಷಿತವಾಗಿ ಬಾಳಿಗರು (ಪಟ್ಟಣದ ಹೊರವಲಯದ ಕಾಲೇಜ್ ಬಳಿ ಇದ್ದ) ನಮ್ಮ ಮನೆಗೆ ಬಂದರು. ಅವರ ವಾಸ ಪಟ್ಟಣದ ಮಧ್ಯೆ, ಓಂಕಾರೇಶ್ವರ ದೇವಾಲಯದ ಸಮೀಪ. ಆ ಸುಮಾರು ೩ ಕಿಮೀ ದೂರವನ್ನು ಎಂದಿನಂತೆ ನಡೆದೇ ಕ್ರಮಿಸಿದ್ದರು. ನನಗೆ ಆಶ್ಚರ್ಯ ಮತ್ತು ಸಂಭ್ರಮ. ಅವರು ಮಂದಿರದ ಪ್ರಗತಿಯನ್ನು ಸಂಕ್ಷೇಪವಾಗಿ ವಿವರಿಸಿ ಸದ್ಯದ ತುರ್ತು ಆವಶ್ಯಕತೆಯನ್ನು ನನ್ನೆದುರಿಟ್ಟರು: ರೂ ೧೨,೦೦೦ವನ್ನು ಅವರು ಮರುದಿನವೇ ಬ್ಯಾಂಕಿಗೆ ಪಾವತಿಸಿ ಸಿಮೆಂಟ್ ವ್ಯಾಗನ್ನನ್ನು ಬಿಡಿಸಿಕೊಳ್ಳಬೇಕು? ಮನೆಯಲ್ಲಿ ನಡೆದ ಮಾತುಕತೆ ವಿವರಗಳನ್ನೂ ತಿಳಿಸಿದರು. "ಜಿಟಿಯವರಿಂದ ಹಣದ ಸಮಸ್ಯೆ ಪರಿಹಾರ ಆಗಿಯೇ ಆಗುತ್ತದೆ" ಎಂದು ಅವರ ಹೆಂಡತಿ ಸಲಹೆ ನೀಡಿದ್ದರಂತೆ. ಈ ಸೂಚನೆಯನ್ನು ಮನಸಾ ಒಪ್ಪಿ ಬಾಳಿಗರು, ಮಠ ಮಂದಿರ ಭಜನೆ ಪೂಜೆ ಮುಂತಾದವುಗಳಿಂದ ಎಂದೋ ಮುಕ್ತನಾಗಿದ್ದ ನನ್ನ ಬಳಿಗೆ, ಆ ನಡುಹಗಲು ಬಂದರು!

ನಾವೆಲ್ಲರೂ ಬಡವರೇ. ಆದರೆ ನಮ್ಮ ಶೀಲ ಚಾರಿತ್ರ್ಯಗಳು ಸದಾ ಶ್ರೀಮಂತ. ಈ ಬಂಡವಾಳವನ್ನು ನಗದಿಸುವುದು ಹೇಗೆ? ಕೊಡಗಿನ ಕೊಡುಗೈ ಕರ್ಣ ಎಂದೇ ಜನಾದರಣೀಯರಾಗಿದ್ದ ಕಾಫ಼ೀ ಪ್ಲಾಂಟರ್ ಜಿ.ಎಂ.ಮಂಜನಾಥಯ್ಯನವರ ತೋಟಕ್ಕೆ (ಶುಂಠಿಕೊಪ್ಪ) ಹೋದೆ. ಇವರು ನಮ್ಮ ಕುಟುಂಬ ಸಂಬಂಧಿಕರು, ತಂದೆಯವರ ಸಹಪಾಠಿ ಮತ್ತು ಎಲ್ಲ ಸಾಮಾಜಿಕ ಕಾರ್ಯಕರ್ತರ ಬಗ್ಗೆ ಪ್ರೀತಿ ವಿಶ್ವಾಸ ತಳೆದಿದ್ದ ಮಹಾನುಭಾವರು. ನಮ್ಮ ತುರ್ತು ಆವಶ್ಯಕತೆಯನ್ನು ವಿವರಿಸಿ ರೂ ೧೨,೦೦೦ವನ್ನು ಸಾಲವಾಗಿ ಬೇಡಿದೆ, ಮುಂದಿನ ೧೨ ತಿಂಗಳ ಒಳಗೆ ಬಡ್ಡಿಸಹಿತ ಅದನ್ನು ಮರುಪಾವತಿಸುವ ಭರವಸೆ ನೀಡಿದೆ. ಮರುಸೊಲ್ಲಿಲ್ಲದೇ ಅವರು ಆ ಹಿರಿ ಮೊತ್ತಕ್ಕೊಂದು ಚೆಕ್ ಬರೆದುಕೊಟ್ಟು, "ಬಡ್ಡಿ ಬೇಡ, ಅನುಕೂಲವಾದಾಗ ಅಸಲು ತೀರಿಸಿದರೆ ಸಾಕು" ಎಂದು ಹರಸಿ ಕಳಿಸಿದರು. ಮಂದಿರ ನಿರ್ಮಾಣವಾಯಿತು, ಹಣದ ಹೊಳೆ ಹರಿದು ಬಂತು, ೧ ವರ್ಷದ ಗಡು ಮುಗಿಯುವ ಮೊದಲೇ

ಮಂಜನಾಥಯ್ಯನವರ ಸಾಲ ತೀರಿಸಲು ಬಾಳಿಗ ಮತ್ತು ನಾನು ಅವರಲ್ಲಿಗೆ ಹೋದೆವು. ಅಲ್ಲಿ ಇನ್ನೊಂದು ಆಶ್ಚರ್ಯ ಕಾದಿತ್ತು. ಅವರೆಂದರು, "ನಾನೇನೂ ಕೊಡಲಿಲ್ಲ. ನಿಮ್ಮ ನಿಷ್ಠೆಯೇ ಇದರ ಮೂಲ. ದಯವಿಟ್ಟು ಈ ಮೊಬಲಗನ್ನು ಇಟ್ಟುಕೊಂಡು ನೀವು ಇಷ್ಟಪಡುವ ಸಮಾಜಸೇವಾಕಾರ್ಯಗಳಿಗೆ ವಿನಿಯೋಗಿಸಿ." ತ್ಯಾಗರಾಜರು ಹಾಡಿರುವಂತೆ "ಎಂದರೋ ಮಹಾನುಭಾವುಲು ಅಂದರಿಕಿ ವಂದನಮು."

೧೯೬೩ರಲ್ಲಿ ನಾನು ಮಡಿಕೇರಿ ಬಿಟ್ಟು ಬೇರೆ ಬೇರೆ ಊರುಗಳಲ್ಲಿ ಕೆಲಸ ಮಾಡುತ್ತಿದ್ದೆ. ಇಂಥ ದಿನಗಳಲ್ಲಿ ಮಡಿಕೇರಿಗೆ ಹೋದಾಗ ಪ್ರತಿ ಸಲವೂ ಬಾಳಿಗ ದರ್ಶನ ಮತ್ತು ಸಂವಾದ ನನಗೆ ಕಡ್ಡಾಯ. ಒಮ್ಮೆ ಹೀಗೆ ಹೋದಾಗ ಬಾಳಿಗರ ಸೇವೆಯನ್ನು ಬಂಟ್ವಾಳದಲ್ಲಿಯ ಶ್ರೀವೆಂಕಟರಮಣ ಕಾಲೇಜಿನ ಕೋರಿಕೆ ಪ್ರಕಾರ ಅಲ್ಲಿಗೆ ಪ್ರಾಂಶುಪಾಲರಾಗಿ ಎರವಲು ನೀಡಲಾಗಿತ್ತೆಂದು ತಿಳಿದೆ. ಮತ್ತೊಮ್ಮೆ ಪೂರ್ವ ಸೂಚನೆ ನೀಡದೆ ನೇರ ಈ ಕಾಲೇಜಿಗೇ ಹೋದೆ. ಗುಡ್ಡದ ತಪ್ಪಲಿನ ಭವ್ಯ ಕಾಲೇಜು ಸಂಜೆಗೆಂಪಿನೋಕುಳಿಯಿಂದ ಇನ್ನಷ್ಟು ರಮ್ಯವಾಗಿ ಕಾಣುತ್ತಿತ್ತು. ಎದುರಿಗೆ ವನಶ್ರೀ, ದೂರದಲ್ಲಿ ಗಿರಿಶ್ರೀ, ಬೆನ್ನಿಗೆ ಈ ವಿದ್ಯಾಶ್ರೀ ನಡುವೆ ಪರಿವ್ರಾಜಕನಾದ ನಾನು! ಮಧುರಚೆನ್ನರ ಕವನ ನೆನಪಾಯ್ತು:

ಮಹಾಕಾಶ ಶಿರದ ಮೇಲೆ
ಅಹಾ ಪೃಥ್ವಿ ರಮ್ಯ ಮುಂದೆ
ಬಾನು ಬುವಿಯು ಸೇರುವಲ್ಲಿ
ಏನು ರಮ್ಯ ದೂರದಲ್ಲಿ
ಪ್ರಭಾಮಯನು ವಿಭಾಕರನು
ನಭೋಂಗಣದಿ ವಿರಾಜಿಪನು!

ಪ್ರಾಂಶುಪಾಲರ ಕೊಠಡಿಗೆ ಹೋದೆ. ಅವರು ಮೂರನೆಯ ಮಹಡಿಯಲ್ಲಿದ್ದಾರೆಂದು ಜವಾನ ಹೇಳಿದ. ಮೆಟ್ಟಲೇರಿ ಶಿಖರ ತಲಪಿದೆ. ಬಾಳಿಗರೆಲ್ಲಿ? ದೂರದ ಹೊರಗೋಡೆಗೆ ಆಂತುಕೊಂಡಿದ್ದ ಏಣಿ ಮೆಟ್ಟಲ ಮೇಲೆ ನಿಂತು ಗಾರೆ ಕೆಲಸದಲ್ಲಿ ಲೋಕವನ್ನೇ ಮರೆತಿದ್ದ ಆ ಕರ್ಮಯೋಗಿಯನ್ನು ಕಂಡೆ! ಇಂಥ ಕರ್ತವ್ಯ ಮೇರುವನ್ನು ಕಾಲೇಜಿನ ವ್ಯವಸ್ಥಾಪನೆ ತೀರ ಕೆಟ್ಟದಾಗಿ ನಡೆಸಿಕೊಂಡಿತೆಂದು ಮುಂದೊಂದು ದಿನ ತಿಳಿದು ಖೇದವಾಯಿತು. ಸ್ವಾರ್ಥಕ್ಕೆ ಚ್ಯುತಿ ಬರುವ ಸಂದರ್ಭದಲ್ಲಿ ದುಷ್ಟವ್ಯಕ್ತಿ ನೀತಿ, ನಿಯಮ, ಮಾನವೀಯತೆ ಎಲ್ಲವನ್ನೂ ಗಾಳಿಗೆ ತೂರಿ ಮೆರೆಯುವುದು ಮನುಕುಲಕ್ಕೆ ಹೊಸತಲ್ಲ. ಬಾಳಿಗರು ಸಾಕಷ್ಟು ಕಷ್ಟ, ನಷ್ಟ ಮತ್ತು ಮನಃಕ್ಲೇಶ ಅನುಭವಿಸಿ ಮಡಿಕೇರಿಗೆ ಮರಳಿದರು.

೨೦೦೬ ಮೇ ೫, ೬ರಂದು ಮಡಿಕೇರಿಯಲ್ಲಿ ಏರ್ಪಡಿಸಿದ್ದ ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಲೆಂದು ನಾನಲ್ಲಿಗೆ ೪ರ ಸಂಜೆ ತಲಪಿದೆ (೧೯೬೮ರಿಂದ ನನ್ನ ಶಾಶ್ವತ ನೆಲೆ ಮೈಸೂರು). ಆ ರಾತ್ರಿಯೇ ಬಾಳಿಗರ ಮನೆಗೆ ಹೋದೆ. ಅಲ್ಲಿ ಎದುರಾದ ದೃಶ್ಯ ನನ್ನನ್ನು ತೀವ್ರ ಚಿಂತೆಗೆ ಗುರಿ ಮಾಡಿತು. ಅವರು ತೀರ ಅಸ್ವಸ್ಥರಾಗಿ ಹಾಸಿಗೆ ಹಿಡಿದಿದ್ದರು. ಮಾತಾಡಲೂ ಸಾಧ್ಯವಾಗುತ್ತಿರಲಿಲ್ಲ. ಕಣ್ತುಂಬಿ ಮನತುಂಬಿ ಎದೆತುಂಬಿ ನನ್ನನ್ನು ನೋಡಿದರು, ಮರುದಿನದ ಸಾರ್ವಜನಿಕ ಸಭೆಗೆ ಖಂಡಿತ ಬರುವುದಾಗಿ ಅವರ ಪತ್ನಿ ಹೇಳಿದರು.
ನಾನೆಂದೆ, "ನೀವು ದಯವಿಟ್ಟು ಮನೆಯಿಂದ ಅಲ್ಲಾಡಬೇಡಿ. ನಾನೇ ಇನ್ನೊಮ್ಮೆ ಬಂದು ನಿಮ್ಮ ಅಭಿನಂದನೆ ಮತ್ತು ಶುಭಾಶಯ ಪಡೆದು ಮೈಸೂರಿಗೆ ಮರಳುತ್ತೇನೆ." (ಆಶೀರ್ವಾದ ಪದ ಬಳಸಿಲ್ಲವೇಕೆಂದರೆ ವಯಸ್ಸಿನಲ್ಲಿ ನಾನು ಅವರಿಗಿಂತ ತುಸು ಹಿರಿಯ!)
ಆದರೆ ೫ರ ಮುಂಜಾನೆ ನಾನು ಕಂಡದ್ದೇನು? ಈ ಪ್ರಾಣಮಿತ್ರ–ಕರ್ಮಯೋಗಿ–ಜೀವನ್ಮುಕ್ತ ಪತ್ನಿಸಹಿತ ಆ ಬೃಹತ್ಸಭೆಯಲ್ಲಿ ಹಾಜರ್! ಸುಮಾರು ೧ ತಾಸು ಕುಳಿತಿದ್ದು ನನ್ನ ಭಾಷಣ ಪೂರ್ತಿ ಆಲಿಸಿ ಮನೆಗೆ ಮರಳಿದರು. ೬ರ **ರಾತ್ರಿ** ನಾನು ಮೈಸೂರಿಗೆ ಹಿಂತಿರುಗಿದೆ. ೭ರ ಮುಂಜಾನೆ ಮಡಿಕೇರಿಯಿಂದ ತಮ್ಮ ರಾಘವೇಂದ್ರ ಅನಿವಾರ್ಯವಾಗಿ ಕಹಿ ಸುದ್ದಿ ಬಿರಿದ: ನಮ್ಮ ಪ್ರಿಯ ಬಾಳಿಗರು ಅದೇ ಹಿಂದಿನ ರಾತ್ರಿ ಮಡಿದಿದ್ದರು. ನಾನು ಕುಸಿದು ಹೋದೆ.

ಮರುಗಳಿಗೆ ಚೇತರಿಸಿಕೊಂಡು ಅವರಿಗೆ ನನ್ನ ನುಡಿತರ್ಪಣ ಬರೆದು ಮೈಸೂರಿನ ಮತ್ತು ಕೊಡಗಿನ ದೈನಿಕಗಳಿಗೆ ರವಾನಿಸಿದೆ:

ಅಗಲಿದ ಗೆಳೆಯನಿಗೆ ಅರ್ಪಿಸಿದ ನುಡಿನಮನ

*ಇಸವಿ ೧೯೪೯. ಸ್ಥಳ ಮಂಗಳೂರಿನ ಸಂತ ಅಲೋಶಿಯಸ್ ಕಾಲೇಜ್. ಅಲ್ಲಿಯ ಭೌತವಿಜ್ಞಾನ ವಿಭಾಗದಲ್ಲಿ ಬಾಳಿಗರೂ ಗಣಿತವಿಭಾಗದಲ್ಲಿ ನಾನೂ ಯುವ ಉಪನ್ಯಾಸಕರಾಗಿ ನೇಮನಗೊಂಡಿದ್ದೆವು. ಇಪ್ಪತ್ತರ ಹರೆಯ. ಅವಿವಾಹಿತರು. ಉತ್ಕೃಷ್ಟ ಶೈಕ್ಷಣಿಕ ಪರಿಸರ. ನಮ್ಮ ಉತ್ಸಾಹ, ಆಶೋತ್ತರಗಳಿಗೆ ಆಕಾಶವೇ ಮಿತಿ.
*ಇಸವಿ ೧೯೫೩. ನಾನು ಮಡಿಕೇರಿ ಸರ್ಕಾರೀ ಕಾಲೇಜಿನಲ್ಲಿ ಉಪನ್ಯಾಸಕನಾಗಿ ನೇಮಕಗೊಂಡೆ. ಮರುವರ್ಷ ಬಾಳಿಗರೂ ನಮ್ಮ ಬಳಗ ಸೇರಿದರು. ಆ ವೇಳೆಗೆ ನಾವಿಬ್ಬರೂ ಎನ್‌ಸಿಸಿ ಶಿಕ್ಷಣ ಪಡೆದು ಭಾಗಕಾಲೀನ ಅಧಿಕಾರಿಗಳಾಗಿದ್ದೆವು ಕೂಡ. ಹೀಗೆ ಮಂಗಳೂರಿನಲ್ಲಿ ಆರಂಭವಾದ ನಮ್ಮ ಸಾಹಚರ್ಯ ಮತ್ತು ಮೈತ್ರಿ ಮಡಿಕೇರಿಯ ಹೊಸ ಹವೆಯಲ್ಲಿ ಇನ್ನಷ್ಟು ದೃಢವಾದುವು. ಕಾಲೇಜಿನ ಸಮಸ್ತ ಚಟುವಟಿಕೆಗಳಲ್ಲಿಯೂ –– ಪಾಠಪ್ರವಚನಗಳ ಜೊತೆಗೆ ಎನ್‌ಸಿಸಿ, ಲಲಿತ ಕಲೆಗಳು, ಕ್ರೀಡೆ, ಸಹಕಾರ ಸಂಘ, ಸಾಮಾಜಿಕ ಸೇವೆ ಇತ್ಯಾದಿ –– ನಮ್ಮ ಅನ್ಯೋನ್ಯತೆಯನ್ನು ಗುರುತಿಸಿದ ಸಹೋದ್ಯೋಗಿಗಳೂ ವಿದ್ಯಾರ್ಥಿಗಳೂ ಪ್ರೀತಿಯಿಂದ ನಮಗಿತ್ತ ಬಿರುದುಗಳು 'ಮೌನದಕ್ಷತೆ' ಬಾಳಿಗ, 'ಮಾತಾಳಿದಕ್ಷತೆ' ಜಿಟಿಎನ್!
*ಇಸವಿ ೧೯೬೩. ಮಡಿಕೇರಿ ಬಿಟ್ಟೆ, ಎಲ್ಲೆಲ್ಲೋ ಅಲೆದು ೧೯೬೯ರಲ್ಲಿ ಮೈಸೂರಿನ ಶಾಶ್ವತ ನಿವಾಸಿಯಾದೆ. ಆದರೆ ನಮ್ಮ ಬಾಂಧವ್ಯ ಸದಾ ಹಸುರಾಗಿಯೇ ನಳನಳಿಸುತ್ತಿತ್ತು. ಏಕೆಂದರೆ ಅದು ಭದ್ರ ಜೀವನಮೌಲ್ಯಾಧಾರಿತವಾದುದಾಗಿತ್ತು. ತರುವಾಯದ ವರ್ಷಗಳಲ್ಲಿ ನಾನು ಮಡಿಕೇರಿಗೆ ಹೋದಾಗಲೆಲ್ಲ ಬಾಳಿಗರ ಆಶ್ರಮಕ್ಕೆ ಭೇಟಿಯಿತ್ತು ಅವರಿಂದ ಉತ್ಸಾಹೋಲ್ಲಾಸ ಪಡೆದು ಮರಳುತ್ತಿದ್ದುದು ವಾಡಿಕೆ.
*ದಿನಾಂಕ ೪–೫–೨೦೦೬. ಮಡಿಕೇರಿಯಲ್ಲಿ ಮರುದಿನ ಆರಂಭವಾಗಲಿದ್ದ ಕೊಡಗು ಜಿಲ್ಲಾ ೫ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಲು ಅಲ್ಲಿಗೆ ಹೋಗಿದ್ದೆ. ಆ ಸಂಜೆಯೇ ಬಾಳಿಗಾಶ್ರಮಕ್ಕೆ ಭೇಟಿನೀಡಿದೆ. ಆಗ ಕಂಡ ದೃಶ್ಯ ನನ್ನ ಬುಡವನ್ನೇ ಅಲ್ಲಾಡಿಸಿಬಿಟ್ಟಿತು: **ನಮ್ಮ ಪ್ರಿಯ ಬಾಳಿಗರು ಮಾತಾಡದ ಮತ್ತು ನಡೆಯಲಾಗದ** ಸ್ಥಿತಿಯಲ್ಲಿದ್ದರು. ಈಚೆಗಿನ ದಿನಗಳಲ್ಲಿ ಅವರ ಆರೋಗ್ಯ ಹದಗೆಟ್ಟು ಆ ಸಂಜೆ ಅದು ಪ್ರಕೋಪಿಸಿತ್ತೆಂದು ಅವರ ಹೆಂಡತಿ ಹೇಳಿದರು. ಮಾತು ಸಂವಹನಿಸಲಾಗದ್ದನ್ನು ಬಾಳಿಗರ ಕಣ್ಣುಗಳು ಅಧಿಕ ಅರ್ಥಭಾವಪೂರ್ಣವಾಗಿ ನನಗೆ ತಿಳಿಸಿದುವು. ಇಬ್ಬರ ಹೃದಯಗಳೂ ತುಂಬಿಬಂದಿದ್ದ ಕ್ಷಣವದು.
*ದಿನಾಂಕ ೫–೫–೨೦೦೬. ನಮ್ಮ ನಗರ ಮೆರವಣಿಗೆ ಮುಗಿದು ಕಾವೇರೀ ಪುರಭವನವನ್ನು ಪ್ರವೇಶಿಸಿದಾಗ, ಆ ತುಂಬು ಸಭೆಯಲ್ಲಿ, ನಮ್ಮ ಪ್ರೀತಿಯ ಬಾಳಿಗರೂ ಅವರ ಪತ್ನಿಯೂ ಪ್ರತ್ಯಕ್ಷರಾಗಿದ್ದರು! ಕನ್ನಡದ ಹಾಗೂ ನನ್ನ ಬಗೆಗಿನ ನಿರ್ವ್ಯಾಜ ಅಂತಃಕರಣ ಮತ್ತು ಅಕೃತ್ರಿಮ ಪ್ರೀತಿ ಅವರ ದೇಹಾಲಸ್ಯವನ್ನು ಮೀರಿ ಅವರಿಗೆ ಉತ್ಸಾಹ ತುಂಬಿ ಅಲ್ಲಿಗೆ ತಂದಿದ್ದುವು.
*ದಿನಾಂಕ ೬–೫–೨೦೦೬. ರಾತ್ರಿ ವೇಳೆಗೆ ಮೈಸೂರಿಗೆ ಮರಳಿದೆ.
*ದಿನಾಂಕ ೭–೫–೨೦೦೬. ಮಡಿಕೇರಿಯಿಂದ ದೂರವಾಣಿ ಸಂದೇಶ, "ಅದೇ ಹಿಂದಿನಿರುಳು ಜನಾರ್ದನ ಬಾಳಿಗರು ವಿಶ್ವಲೀನರಾಗಿದ್ದರು." ಆಗ ಮನದೊಳಗೆ ಮಿಡಿದದ್ದು ಮಹಾತ್ಮ ಗಾಂಧಿಯವರನ್ನು ಕುರಿತು ಐನ್‌ಸ್ಟೈನ್ ಸಲ್ಲಿಸಿದ ನುಡಿಕಾಣಿಕೆ, "[ಈ ಮಹಾಪುರುಷನ] ಯಶಸ್ಸು ಚಮತ್ಕಾರವನ್ನಾಗಲೀ ತಾಂತ್ರಿಕ ಕೌಶಲಗಳಲ್ಲಿ ಗಳಿಸಿರುವ ಪ್ರಾವೀಣ್ಯವನ್ನಾಗಲೀ ಅವಲಂಬಿಸಿಲ್ಲ, ಬದಲು, ಮನವೊಲಿಸಬಲ್ಲ ಸ್ವಂತ ವ್ಯಕ್ತಿತ್ವದ ಸಾಮರ್ಥ್ಯವನ್ನು ಮಾತ್ರ ಅವಲಂಬಿಸಿದೆ ...... ದೃಢನಿರ್ಧಾರ ಮತ್ತು ಅಚಲ ಸ್ಥೈರ್ಯದಿಂದ ಸಜ್ಜುಗೊಂಡು ಸಕಲ ತ್ರಾಣವನ್ನೂ ತನ್ನ ಜನರ ಉದ್ಧಾರ ಹಾಗೂ ಸ್ಥಿತಿಗತಿಗಳ ಸುಧಾರಣೆಗಾಗಿ ಅರ್ಪಿಸಿದಾತ ......" ನಿಜ, ಬಾಳಿಗರ ಸಾರ್ಥಕ ಜೀವನ ಡಿವಿಜಿಯವರ ಅಮರ ನುಡಿಗಳಿಗೆ ಬರೆದ ಜೀವಂತ ಭಾಷ್ಯ:

ವಿಸ್ತಾರದಲಿ ಬಾಳು, ವೈಶಾಲ್ಯದಿಂ ಬಾಳು
ಕತ್ತಲೆಯ ಮೊಡಕು ಮೂಲೆಗಳ ಸೇರದಿರು
ಭಾಸ್ಕರನನುಗ್ರಹವೆ ನೂತ್ನ ಜೀವನ ಸತ್ತ್ವ
ಮೃತ್ಯು ನಿನಗಲ್ಪತೆಯೊ ಮಂಕುತಿಮ್ಮ||

Loss of my twin brother

Bantwala Janardana Baliga and I had worked as twin brothers in the two Colleges we served: St Aloysius' College, Mangalore and Government College, Madikeri. He taught Physics and I Mathematics. We were also NCC Officers in the Units attached to the respective Colleges. Our outlooks on life, work, values, student welfare, society etc were identical. Students used to distinguish between us as silent efficiency (BJB) and noisy efficiency (GTN). I do agree with them.

In 1963 I left Madikeri. Since then whenever I visited my native town Madikeri I made it a point to call on this gem of purest ray serene and derive inspiration for my pursuits. On May 4, 2006 I reached Madikeri (to attend the Fifth Kodagu Jilla Kannada Sahitya Sammelana, May 5 and 6). On that cold and rainy evening we waded our way to Baliga's Ashram (yes, he lived as a hermit) in the Sri Ramadevi Mandira complex adjacent to Omkareshwara Temple.

However, in the place of a buoyant and beaming Baliga I was accustomed to see, I met a pale and weak shadow of the great man. His wife told me, just a few minutes earlier he had a severe bout of asthma. He was unable to speak. Yet his eyes full of compassion and love did express his feelings of appreciation. On the following morning he was very much present at the Town Hall to receive me! His dedication to Kannada and love for his friend were of that intensity.

We returned to Mysore late last night. This morning [May 7, 2006] I got a phone call from Madikeri that Janardana Baliga had breathed his last just a few hours earlier. At that unkindest moment of grievous personal loss, my mind hovered around the immortal words of Einstein on Gandhi, ``… a man of wisdom and humility, armed with resolve and inflexible consistency, who has devoted all his strength to the uplifting of his people and the betterment of their lot…''
Yes, the mortal frame of Baliga (aged about 80) has dissolved in the elements. But the values he had defined by dedicated work will remain eternal to serve as beacon light to generations to come.

ಮಡಿಕೇರಿ ಬದುಕಿನಲ್ಲಿ ತಳಮಳ
ಅಧ್ಯಾಯ ಇಪ್ಪತ್ತೊಂಬತ್ತು

ಸುಮಾರು ೧೯೬೦ರ ತನಕ ಎಲ್ಲ ರಂಗಗಳಲ್ಲಿಯೂ ಉಚ್ಛ್ರಾಯಪರ್ವದಲ್ಲಿದ್ದ ನನ್ನ ಜೀವನಕ್ಕೆ ಆಗ ಹೊಸ ಸಮಸ್ಯೆಗಳು ಕ್ರಮೇಣ ಎದುರಾಗತೊಡಗಿದುವು.

ಕಾಲೇಜ್ ಬಳಿ ಸ್ವಂತ ಮನೆಯೊಂದನ್ನು ಖರೀದಿಸಿ (೧೯೫೭) ಸಂಸಾರವನ್ನು ಅಲ್ಲಿಗೆ ವರ್ಗಾಯಿಸಿದೆ. ಆ ವೇಳೆಗೆ ನನ್ನ ದೈನಂದಿನ ಚಟುವಟಿಕೆಗಳು ಪಾಠ ಪ್ರವಚನ ಮತ್ತು ವಿಶೇಷ ತರಗತಿಗಳು, ಎನ್‌ಸಿಸಿ ಮತ್ತು ಕಾಲೇಜ್ ಸಹಕಾರ ಸಂಘ ಎಂಬ ಮೂರು ಸಮಾಂತರ ಕವಲುಗಳಲ್ಲಿ ಏಕಕಾಲಿಕವಾಗಿ ಬಿರುಸಿನಿಂದ ಸಾಗುತ್ತಿದ್ದುವು. ಎನ್‌ಸಿಸಿ ಕಛೇರಿ ಮನೆಯಿಂದ ಕೇವಲ ೫ ಮಿನಿಟ್ ನಡಿಗೆ ದೂರದಲ್ಲಿತ್ತು. ಎದುರು ದಿಶೆಯಲ್ಲಿ ೧೦ ಮಿನಿಟ್ ನಡೆದರೆ ಕಾಲೇಜ್. ಯಾವುದೇ ಕೆಲಸ ಕೈಗೊಂಡರೂ ಅದರಲ್ಲಿ ಸಂಪೂರ್ಣ ಮಗ್ನನಾಗಿ ದೇಶ ಕಾಲ ಮರೆತು ದುಡಿಯುವುದು ನನ್ನ ಜಾಯಮಾನ. ಫಲವಾಗಿ ನನಗೆ ಅಂಟುತ್ತಿದ್ದ ಮತ್ತು ನಾನೇ ಎಳೆದು ಹಾಕಿಕೊಳ್ಳುತ್ತಿದ್ದ (ಇತರರ ದೃಷ್ಟಿಯಲ್ಲಿ ವೃಥಾ ತಾಪತ್ರಯವೆಂದು ಕಾಣುತ್ತಿದ್ದ) ಹೊಣೆಗಾರಿಕೆಗಳು ದಿನೇ ದಿನೇ ವರ್ಧಿಸತೊಡಗಿದುವು. ಮನೆ, ಮಡದಿ, ಮಕ್ಕಳ ಯೋಗಕ್ಷೇಮದ ಬಗ್ಗೆ ಸಂಪೂರ್ಣ ಉದಾಸೀನನಾದೆ.

೧೯೫೯ರ ಹೊತ್ತಿಗೆ ಸಂಸಾರ ಬೆಳೆದಿತ್ತು. ಹಿರಿಮಗ ಅಶೋಕನಿಗೆ (೧೯೫೨) ಇಬ್ಬರು ತಮ್ಮಂದಿರು ಹುಟ್ಟಿದ್ದರು: ಆನಂದ (೧೯೫೭) ಮತ್ತು ಅನಂತ (೧೯೫೯). ಇಬ್ಬರ ನಡುವೆ ಒಂದು ಹೆಣ್ಣು ಮಗು ಜನಿಸಿತ್ತು. ಖುದ್ದು ನನ್ನ ಬೇಜವಾಬ್ದಾರಿಯಿಂದ ಈ ಶಿಶುವಿಗೆ ಸಕಾಲದಲ್ಲಿ ಯುಕ್ತ ವೈದ್ಯಕೀಯ ಚಿಕಿತ್ಸೆ ಒದಗಿಸಲಾಗದೆ ಕೆಲವೇ ತಿಂಗಳುಗಳಲ್ಲಿ ಅದು ಅಸುನೀಗಿತು. ಈ ದುರ್ಘಟನೆಯನ್ನು ನಿರೂಪಿಸವಾಗ ಈಗಲೂ (೨೦೦೬) ನನ್ನ ಕಣ್ಣು ಒದ್ದೆಯಾಗುತ್ತದೆ. ಎನ್‌ಸಿಸಿ ಮತ್ತು ಸಹಕಾರ ಸಂಘಗಳು ನನ್ನ ಸಮಸ್ತ ವ್ಯಕ್ತಿತ್ವವನ್ನೇ ಆಪೋಶಿಸಿ ನನಗೆ ಬಿಡುವೇಳೆ ಎಂಬುದೇ ದೊರೆಯುತ್ತಿರಲಿಲ್ಲ.

೧೯೬೨ ಬಂದಿತು. ದೇಶಕ್ಕೂ ಸಂಸಾರಕ್ಕೂ ಅಪರಿಹಾರ್ಯ ಗಂಡಾಂತರ ತಂದಿತು. ಅಲ್ಲಿ, ಉತ್ತರದ ಗಡಿಯಲ್ಲಿ ಚೀನೀ ಮಾರಿಹಲುಬೆಯ ಅನಿರೀಕ್ಷಿತ ಹೊಡೆತ. ಇಲ್ಲಿ, ನನ್ನ ಚಿಕ್ಕಪ್ಪ (ರಾಮಚಂದ್ರರಾವ್), ೫೦ರ ಹರೆಯದ ದಷ್ಟಪುಷ್ಟ ಸಮೃದ್ಧಜೀವ, ಹೋಮಿಯೋಪತಿ ವೈದ್ಯ, ಹಠಾತ್ತನೆ ಸಿಡುಬಿಗೆ ಬಲಿಯಾದರು. ಇವರ ಹಿರಿಮಗ ದೂರದ ಕೇರಳದಲ್ಲಿ ಹೋಮಿಯೋಪತಿ ಓದುತ್ತಿದ್ದಾತ ಮರುದಿನ ಮರಳಿದ. "ಸಿಡುಬು ಲಸಿಕೆ ಹಾಕಿಕೊ (ವ್ಯಾಕ್ಸಿನೇಷನ್)" ಎಂದು ಯಾರು ಏನು ಹೇಳಿದರೂ "ಅದು ನನ್ನ ಅಪ್ಪನ ಪವಿತ್ರ ಆತ್ಮಕ್ಕೆ ಮೆಚ್ಚಿಗೆ ಆಗದು" ಎಂದು ನಿರಾಕರಿಸಿ ಹೋಮಿಯೋಪತಿ ಸಿಡುಬುರೋಧಕ ಗುಳಿಗೆಗಳನ್ನು ಸೇವಿಸತೊಡಗಿದ. ಚಿಕ್ಕಪ್ಪ ಮಡಿದ ಒಂದು ತಿಂಗಳ ಒಳಗೆ ಈತನೂ ತದ್ವತ್ತು ಉಗ್ರ ಸಿಡುಬಿಗೆ ಬಲಿಯಾಗಿ ತಂದೆಯ 'ಪವಿತ್ರ ಆತ್ಮ'ದಲ್ಲಿ ಲೀನನಾದ. ಇತ್ತ ಮನೆಯಲ್ಲಿ ಆನಂದನಿಗೆ (ಹೋಮಿಯೋಪತಿ ಭಕ್ತನಾಗಿದ್ದ ನಾನು ಮಕ್ಕಳಿಗೆ ವ್ಯಾಕ್ಸಿನೇಷನ್ ಮಾಡಿಸಿರಲಿಲ್ಲ) ಉಲ್ಬಣ ಸಿಡುಬು ತಾಗಿ ಅವನು ಬದುಕಿ ಉಳಿದುದೇ ಪವಾಡ. ನನ್ನ ತಾಯಿ ಮತ್ತು ಇತರ ಸಮೀಪ ಸಂಬಂಧಿಕರಿಗೂ ಆ ದುರ್ದಿನಗಳಲ್ಲಿ ಸಿಡುಬು ಬಡಿದಿತ್ತು. ಪುಣ್ಯವಶಾತ್ ಎಲ್ಲರೂ ಚೇತರಿಸಿಕೊಂಡರು.

ಇವೆಲ್ಲ ದುರಂತಗಳೂ ಒಂದರ ಬೆನ್ನಿಗೊಂದರಂತೆ ಮಡಿಕೇರಿಯ ಕಡು ಮಳೆ–ಚಳಿಗಾಲಗಳ ಅವಧಿಯಲ್ಲಿ ಸಂಭವಿಸಿದುವು. ಅವಿಶ್ರಾಂತ ದುಡಿಮೆ, ಖಾಯಿಲಸ್ತರ ಶುಶ್ರೂಷೆ, ಕಾಲೇಜ್ ಮನೆಯಿಂದ ಚಿಕ್ಕಪ್ಪನವರ ಮನೆಗೆ ನಡೆದು (ಸುಮಾರು ೪ ಕಿಮೀ) ಹೋಗಿ ಅಲ್ಲಿ ಅವರಿಗೆ ಸಾಂತ್ವನ ಹೇಳಿ ಹಿಂತಿರುಗುವುದು, ಮಾನಸಿಕ ವ್ಯಾಕುಲ, ಆತಂಕ ಎಲ್ಲ ಸೇರಿ ನನ್ನ ಹೆಂಡತಿ ತೀವ್ರ ಜ್ವರಗ್ರಸ್ತಳಾದಳು. ಆಗಲಾದರೂ ನಾನು ಎಚ್ಚತ್ತು ಮಿಕ್ಕೆಲ್ಲ ಚಟುವಟಿಕೆಗಳಿಗೆ ತಾತ್ಕಾಲಿಕ ವಿದಾಯ ಹೇಳಿ ಆಕೆಯನ್ನು ಶುಶ್ರೂಷಿಸುವುದರಲ್ಲಿ ಪೂರ್ಣ ಲೀನನಾಗಬೇಕಾಗಿತ್ತು. ಹಾಗೆ ಮಾಡದೆ ಅವಳನ್ನು ತವರ್ಮನೆಗೆ (ಮರಿಕೆ) ಸಾಗಹಾಕಿ ನಿರ್ಲಿಪ್ತ ನಿಶ್ಚಿಂತ ನಿರ್ವಿಕಾರನಾದೆ –– "ಹರಿಯೇ! ಇದು ನಿನಗೆ ಸರಿಯೇ ದೊರೆಯೇ?" ಎಂದು ಅಂದಾಗಲೀ ಇಂದಾಗಲೀ ಒಮ್ಮೆಯೂ ಆಕೆ ನನ್ನಲ್ಲಿ ತಪ್ಪು ಕಾಣಲಿಲ್ಲ. ಏಕೆ ಗೊತ್ತೇ? ಅವಳು "ಕಡೆಗೆ ಕರುಣಾಳು ರಾಘವನಲಿ ತಪ್ಪಿಲ್ಲ" ಎಂಬ ಗೋತ್ರಜೆ, ಪರಮ ಸಾಧು ಸಜ್ಜನ ಶೀಲೆ.

ಪಾಠಪ್ರವಚನಗಳಲ್ಲಿ ಸಂತೋಷ ಒದಗುತ್ತಿರಲಿಲ್ಲ. ಜ್ಞಾನನಿಷ್ಠೆಯ ಸ್ಥಾನವನ್ನು ಪರೀಕ್ಷೆಯಲ್ಲಿ ಹೇಗಾದರೂ ಅತ್ಯಧಿಕ ಅಂಕ ಗಳಿಕೆ ಎಂಬ ಹೊಸ ಆಮಿಷ ವಿದ್ಯಾರ್ಥಿಮನಗಳನ್ನ ಆಕ್ರಮಿಸಿತ್ತು. ಸಹಜವಾಗಿ ಕಾಲೇಜಿನಲ್ಲಿಯ ಶಿಸ್ತು ಕುಸಿಯಿತು. ಎನ್‌ಸಿಸಿಗೆ ಬಂದ ಹೊಸ ಸೇನಾ ಕಮಾಂಡರ್ ಭಾಗಕಾಲೀನ ಅಧಿಕಾರಿಗಳಾಗಿದ್ದ ನಮ್ಮ ಮೂವರ ಬಗ್ಗೆ ಅಪಮಾನಕಾರಿಯಾಗಿ ವರ್ತಿಸತೊಡಗಿದರು. ಎನ್‌ಸಿಸಿಗೆ ರಾಜಿನಾಮೆ ಸಲ್ಲಿಸಿದೆವು. ನಾನು, ಬಾಳಿಗ ಮತ್ತು ಇ.ಎಸ್. ಕೃಷ್ಣಯ್ಯ. [ಹೆಚ್ಚಿನ ವಿವರಗಳಿಗೆ ಇಲ್ಲೇ ಮೇಲೆ ನಮೂದಾಗಿರುವ ಪುಸ್ತಕ ವಿಭಾಗದಲ್ಲಿನ ಎನ್‌ಸಿಸಿ ದಿನಗಳು ಪುಸ್ತಕ (ನಿಮ್ಮಲ್ಲಿಲ್ಲವಾದರೆ ಅಲ್ಲೇ ಸೂಚಿಸಿದಂತೆ ಕೊಂಡು) ಓದಿನೋಡಿ]

ಇನ್ನು ನನ್ನನ್ನು ಕುರಿತಂತೆ ಸಹಕಾರ ಸಂಘದ ಹೊಣೆಗಾರಿಕೆ 'ಒಂಟೆ ಮತ್ತು ಅರಬ'ನ ಕತೆಯ ಪುನರಾವರ್ತನೆಯಾಗಿತ್ತು. ಪೂರ್ತಿ ಪುಕ್ಕಟೆ ಸೇವೆಯಾಗಿ ೧೯೫೪ರಲ್ಲಿ ತೊಡಗಿದ ಈ ವಿದ್ಯಾರ್ಥಿ ಸೌಕರ್ಯ ಇಡೀ ರಾಜ್ಯದಲ್ಲೇ ಮಾದರಿ ಸಂಸ್ಥೆಯಾಗಿ ಪ್ರವರ್ಧಿಸಿತ್ತು, ಮೊದಲು ಕೇವಲ ೫ ಅಂಕಗಳೊಳಗಿದ್ದ ಇದರ ವಹಿವಾಟು ಈಗ ಹಲವು ಲಕ್ಷಗಳ ಮಟ್ಟಕ್ಕೆ ಉಬ್ಬಿತ್ತು, ಸೇವಾಕ್ಷೇತ್ರ ವ್ಯಾಪಕವಾಗಿ ವಿಸ್ತರಿಸಿತ್ತು, ಎಲ್ಲವೂ ನಿಜ. ಫಲಿತಾಂಶ? ಇದು ಖುದ್ದು ನನ್ನ ಮುಖ್ಯ ವೃತ್ತಿಗೇ ಸಂಚಕಾರ ತಂದಿತ್ತು: ವ್ಯಾಪಾರ ವಾಣಿಜ್ಯವೆಂಬ "ಲೋಕದ ಡೊಂಕ ನೀವೇಕೆ ತಿದ್ದುವಿರಿ? ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ" ಎಂದು ಅಂತರಾತ್ಮ ನನ್ನನ್ನು ಎಚ್ಚರಿಸಿತು. ಹುಲಿ ಸವಾರನ ಸ್ಥಿತಿ ನನ್ನದು! ಎನ್‌ಸಿಸಿಗೆ ಸಲ್ಲಿಸಿದ ರಾಜಿನಾಮೆಗಿನ್ನೂ ಅಂಗೀಕಾರ ಮುದ್ರೆ ಬಿದ್ದಿರಲಿಲ್ಲ. ಸಂಘದ ಗೌರವ ಕಾರ್ಯದರ್ಶಿತ್ವದ ಹೊಣೆ ವಹಿಸಿಕೊಳ್ಳಲು ಯಾವ ಸಹೋದ್ಯೋಗಿ ಮಿತ್ರರೂ ಸಿದ್ಧರಿರಲಿಲ್ಲ.

ಆ ದುರ್ಭರ ಸನ್ನಿವೇಶದಲ್ಲಿ ಮೂರು ಪವಾಡಸದೃಶ ಘಟನೆಗಳು ಸಂಭವಿಸಿದುವು. ಎನ್‌ಸಿಸಿ ಸಂಸ್ಥೆಗಳಲ್ಲಿ ಸೇನಾನಿಯೋಜಿತರಾಗಿದ್ದ ಎಲ್ಲ ಸೇನಾಧಿಕಾರಿಗಳನ್ನೂ ಭಾರತ ಸರ್ಕಾರ ತತ್ಕ್ಷಣ ಅವರವರ ಮಾತೃ ಸಂಸ್ಥೆಗಳಿಗೆ ವರ್ಗಾಯಿಸಿಬಿಟ್ಟಿತು, ದೇಶಾದ್ಯಂತ ಎಲ್ಲ ವಿದ್ಯಾರ್ಥಿಗಳಿಗೂ ಎನ್‌ಸಿಸಿ ತರಬೇತಿಯನ್ನು ಕಡ್ಡಾಯಗೊಳಿಸಿತು, ನನ್ನಂಥ ಭಾಗಕಾಲೀನ ಎನ್‌ಸಿಸಿ ಅಧಿಕಾರಿಗಳಿಗೆ ಪೂರ್ಣ ಕಮಿಶನ್ ನೀಡಿ ಎನ್‌ಸಿಸಿ ಘಟಕಗಳ ಕಮಾಂಡರ್ ಹುದ್ದೆಗಳನ್ನು ಕೊಡಲು ಮುಂಬಂದಿತು. ಇವು ಯಾವುದರಲ್ಲಿಯೂ ನನಗೆ ಆಸಕ್ತಿ ಇರಲಿಲ್ಲ. ಆದರೆ ತತ್ಪೂರ್ವ ನನ್ನೊಬ್ಬ ಕಮಾಂಡಿಂಗ್ ಆಫೀಸರ್ ಆಗಿದ್ದ ಒಬ್ಬರು ಸೇನಾಧಿಕಾರಿ ಬೆಂಗಳೂರಿನಿಂದ ಖುದ್ದು ಮಡಿಕೇರಿಗೆ ಬಂದು ನನ್ನನ್ನು ಈ ಪೂರ್ಣಕಾಲೀನ ಹುದ್ದೆ ಸೇರಲು ಇನ್ನಿಲ್ಲದ ರೀತಿಯಲ್ಲಿ ಪುಸಲಾಯಿಸಿದರು. ದೇಶಕ್ಕೆ ಗಂಡಾಂತರ ಬಂದಿರುವ ಈ ಸನ್ನಿವೇಶದಲ್ಲಿ ನನ್ನಂಥ ಸಮರ್ಥ ಮತ್ತು ಅನುಭವೀ ಅಧಿಕಾರಿ ಹಿಂದೇಟು ಹೊಡೆಯುವುದು ಸರಿಯೇ ಎಂಬುದು ಅವರ ಕಳಕಳಿಯ ವಾದದ ಸಾರ. ಆ ಕ್ಷಣ ನಾನು ಭಾವುಕನಾಗಿ ಈ ಕೋರಿಕೆಗೆ ಮಣಿದೆ.

೧೯೬೩ರ ಆರಂಭದಲ್ಲಿ ನಾನು ಕಾಲೇಜ್ ಹೊಣೆಗಾರಿಕೆಯಿಂದ (ದೇಶಸೇವೆಯೆಂಬ ಹೊಸ ಅಮಲಿನಲ್ಲಿ) ಬಿಡುಗಡೆಗೊಂಡೆ, ಸಹಕಾರ ಸಂಘದ ಉಡ ಹಿಡಿತದಿಂದ ಪಾರಾದೆ,

ಸಂಸಾರಸಮೇತ ಮಡಿಕೇರಿ ಬಿಟ್ಟು ದೂರದ ಬಳ್ಳಾರಿಯಲ್ಲಿ ನೂತನ ಎನ್‌ಸಿಸಿ ಘಟಕದ ಪೂರ್ಣಕಾಲೀನ ಕಮಾಂಡರ್ ಆಗಿ ಬೀಡುಬಿಟ್ಟೆ. ೨೦ ತಿಂಗಳು ಪರ್ಯಂತ ಕಂಬಿ ತಪ್ಪಿದ ಬಂಡಿಯಾಗಿದ್ದೆ. ನಡುನೀರಿನಲ್ಲಿ ಅಂಬಿಗನನ್ನು ಹೇಗೆ ಬದಲಾಯಿಸಬಾರದೋ ಹಾಗೆ ದೋಣಿಯನ್ನು ಕೂಡ. ಬಳ್ಳಾರಿಯಲ್ಲಿ ಯಶಸ್ಸಿನ ತುತ್ತತುದಿಯಲ್ಲಿದ್ದಾಗಲೇ ಇಡೀ ವ್ಯವಸ್ಥಾಪನೆ ಬಗ್ಗೆ ಜುಗುಪ್ಸೆ ಮೂಡಿ ಮತ್ತೆ ನನ್ನ ಮೂಲ ವೃತ್ತಿಗೆ -- ಕಾಲೇಜಿನಲ್ಲಿ ಗಣಿತೋಪನ್ಯಾಸಕ -- ೩೧-೩-೧೯೬೫ರಂದು ಮರಳಿದೆ. ಈಗ ನನ್ನ ಹೊಸ ನೆಲೆ ಬೆಂಗಳೂರು ಸರ್ಕಾರಿ ಕಾಲೇಜಿನಲ್ಲಿ. ನಾನು ಬಳ್ಳಾರಿಯಲ್ಲಿದ್ದಾಗ ಒಮ್ಮೆ ಮಡಿಕೇರಿಗೆ ಹೋಗಿದ್ದೆ. ಆಗ ಒದಗಿದ ಒಂದು ವಿಶಿಷ್ಟ ಅನುಭವ, ನಾನು ಜಂಕ್ ಕಾರನ್ನು ಕೊಂಕು ಹಾದಿಯಲ್ಲಿ ಪೀಂಕಿಸಿದ್ದು!

ಕೈಕೊಡದ ಹಿಲ್‌ಮ್ಯಾನ್
ಅಧ್ಯಾಯ ಮೂವತ್ತು

ಬಳ್ಳಾರಿಯ ಬೇಸಗೆಯ ಬೇಗೆ ತಡೆಯಲಾಗದೆ ಒಂದು ವಾರ ರಜೆ ಪಡೆದು ಮಡಿಕೇರಿಗೆ ಮರಳಿದ್ದೆ (೧೯೬೪). ಸ್ವಿಟ್ಸರ್ಲೆಂಡನ್ನು ಯುರೋಪಿನ ಮಡಿಕೇರಿ ಎಂಬುದಾಗಿ ಹಿರಿಯರೊಬ್ಬರು ಬಣ್ಣಿಸಿದ್ದನ್ನು ಕೇಳಿ ಹೆಮ್ಮೆ ತಳೆದಿದ್ದೇನೆ. ನನ್ನೂರಿಡೀ ಬೃಹತ್ತಾದ ಶೀತಕಾರಿ (ರೆಫ್ರಿಜಿರೇಟರ್). ಬೆಟ್ಟಗಳ ನಡುವಿನ ಬೋಗುಣಿ ಈ ಪುಟ್ಟ ಪಟ್ಟಣ. ಎಲ್ಲೆಲ್ಲಿಯೂ ಕಾಡೋಕಾಡು, ಹಸುರೋ ಹಸುರು. ವಿರಳ ಜನಸಂಖ್ಯೆ. ಸಾರಿಗೆ ಸಂಪರ್ಕ ಸರ್ವವ್ಯಾಪಿಯೂ ಅಲ್ಲ, ಸರ್ವಗ್ರಾಹಿಯೂ ಅಲ್ಲ. ನಿಸರ್ಗವೇ ಇಲ್ಲಿ ಆರಾಮವಾಗಿ ಮೈಚೆಲ್ಲಿ ವಿಶ್ರಾಂತಿ ಸುಖ ಸವಿಯುತ್ತಿರುವಾಗ ಅದರ ಕೂಸುಗಳಾದ ಜನರಿಗೆ ಎಲ್ಲಿಂದ ತಾನೇ ತುರ್ತುತನ ಬಂದೀತು!

ನಾನು ಅಜ್ಜಿ ಸಾಕಿದ ಮಗು. ಅಜ್ಜಿಯ ಗುಡಾರಕ್ಕೆ ಬಂದಿದ್ದೆ. ತಾಯಿ ಚಿಕ್ಕಮ್ಮ ಬೆಳೆಸಿದ ಕೂಸು. ತವರಿನ ಬಿಡಾರಕ್ಕೆ ಮರಳಿದ್ದೆ. ಬಳ್ಳಾರಿಯಲ್ಲಿ ಹಿರಿಯ ಸೇನಾಧಿಕಾರಿಯಾಗಿದ್ದ ನಾನು ಅಜ್ಜಿ, ತಾಯಿ, ಚಿಕ್ಕಮ್ಮ ಇವರ ದೃಷ್ಟಿಯಲ್ಲಿ ಲೋಕೈಕ ವೀರ, ಪ್ರತಾಪಶಾಲಿ, ಮಹಾಪುರುಷ. ತವರಿನ ಈ ನಲುಮೆ ನನಗೆ ಹಿತಕರವಾಗಿತ್ತು. ಅಲ್ಲಿ ಕ್ಷಣವೊಂದು ಯುಗವಾಗಿ ಇರಿಯುತ್ತಿತ್ತು. ಇಲ್ಲಿ? ಯುಗವೊಂದು ಕ್ಷಣವಾಗಿ ಸರಿಯುತ್ತಿತ್ತು.

ಮೇ ತಿಂಗಳ ಕೊನೆಯ ಪಾದ. ಅದೇ ಮಳೆಗಾಲದ ಆರಂಭದ ದಿನಗಳು. ಹೀಗಾಗಿ ಪ್ರಕೃತಿ ವ್ಯಾಪಾರಗಳು ಅಸಾಧಾರಣ ಚಟುವಟಿಕೆಯಿಂದ ಬದಲಾಗುತ್ತಿದ್ದುವು. ಈಗ ಸೆಕೆ, ಬೆನ್ನಿಗೇ ಸುಯ್ಯೆಂದು ತಂಗಾಳಿ. ಈಗ ನೀರವ, ಒಡನೆ ಗಿಡಮರಗಳ ಹಸುರೆಲೆಗಳ ಚಾಮರ ಬೀಸಿನ ಸರ ಸರ ಸದ್ದು. ಈಗ ಆಗಸ ನಿಚ್ಚಳ, ಅಗೋ ಬಂದೇ ಬಂತು ಮೋಡಗಳ ಆನೆವಿಂಡು. ಆದರೆ ಹುಯ್ಯಲಿಲ್ಲ ಮಳೆರಾಯ, ಕೈಕೊಟ್ಟ. ನಡೆದೇಬಿಟ್ಟ. ಎಲ್ಲೆಲ್ಲೂ ಪಸೆ ಪಸೆ, ಮಳೆ ಮೂರಿ. ಮತ್ತೆ ಸೆಕೆ, ಗಾಳಿ ಅಲೆತ, ಸ್ಥಗಿತ.

ಊರವರಿಗೆಲ್ಲ ಗೊತ್ತು ಮಳೆರಾಯನ ಬಗೆಬಗೆಯ ವರಿಸೆಗಳ ಹಿಕಮತ್ತು. ಕಡಲಿನಿಂದ ಮೇಲೇರಿದ ಅವನು ಕೋಡುಮಲೆಗಳ ಈ ನಾಡನ್ನು ಹೊಗುವುದೇನು ಸಾಧಾರಣ ಸಾಹಸವೇ? ಮೇಲೇರಿದವ ಇಳಿಗಿಳಿಯದೆ ಇನ್ನೆಲ್ಲಿಗೆ ಹೋದಾನು? ನೆಲದ ನೀರಡಕೆಯನ್ನೂ ಗಿರಿವನಗಳ ಬಯಕೆಯನ್ನೂ ಕೆರೆತೊರೆಗಳ ಆಸೆಯನ್ನೂ ಹಿಂಗಿಸದಿರುವನೇ? ದಿನದಿಂದ ದಿನಕ್ಕೆ, ಅಲ್ಲಲ್ಲ, ಸಂಜೆಯಿಂದ ಸಂಜೆಗೆ, ಬಾನಂಗಳದಲ್ಲಿ ರಂಗೇರುತ್ತಿತ್ತು. ಕೋಲ್ಮಿಂಚಿನ ಸುರುಸುರು ಬತ್ತಿಯ ಥಳಕುಗಳು ವಿಚಿತ್ರಾಕಾರಗಳನ್ನು ಕುಂಚಿಸುತ್ತಿದ್ದುವು. ಗುಡುಗಿನ ನಿನದ ದಿಗ್ದಿಗಂತಗಳನ್ನು ಭೇದಿಸಿ ಮೊಳಗುತ್ತಿತ್ತು.

ನಾನು ತಂಗಿದ್ದುದು ನನ್ನ ಚಿಕ್ಕಪ್ಪನವರ ಮನೆಯಲ್ಲಿ. ಅಲ್ಲೇ ನಾನು ಓದಿ ಬೆಳೆದವ. ಮನೆಯಲ್ಲಿ ಇದ್ದವರು ಚಿಕ್ಕಮ್ಮ, ಅವರ ಮಕ್ಕಳು, ಅಜ್ಜಿ, ಕೆಲಸದವರು ಇಷ್ಟು ಮಂದಿ. ಚಿಕ್ಕಪ್ಪ ಮತ್ತು ಅವರ ಹಿರಿಮಗ ಪುಂಡರೀಕ ಗತಿಸಿ ಎರಡು ವರ್ಷಗಳು ಸಂದಿದ್ದುವು. ಎರಡನೆಯ ಮಗ ನಾರಾಯಣ, ಇಪ್ಪತ್ತೆರಡರ ಹುರುಪಿನ ತರುಣ. ಕೃಷಿಕಾರ್ಯಗಳಲ್ಲಿ ನಿರತನಾಗಿದ್ದ. ಮಡಿಕೇರಿಯಿಂದ ಭಾಗಮಂಡಲಕ್ಕೆ ಹೋಗುವ ರಾಜಮಾರ್ಗದ ಬದಿಯ ಅಪ್ಪಂಕಳ ಎಂಬ ಹಳ್ಳಿಯಲ್ಲಿ ಅವರ ಆಸ್ತಿ ಇತ್ತು. ದೂರ ಸುಮಾರು ೭ ಕಿಮೀ. ನಾರಾಯಣ ಪ್ರತಿನಿತ್ಯ ಮೊದಲ ಬಸ್ಸಿನಲ್ಲಿ ಅಪ್ಪಂಕಳಕ್ಕೆ ಹೋಗಿ ಹಗಲಿಡೀ ಅಲ್ಲಿದ್ದು ಸಂಜೆ ಕೊನೆ ಬಸ್ಸಿನಲ್ಲಿ ಮರಳುತ್ತಿದ್ದುದು ವಾಡಿಕೆ.

ಅಂದು ಶುಕ್ರವಾರ, ಮಡಿಕೇರಿಯಲ್ಲಿ ಸಂತೆ. ಹಳ್ಳಿಗರೆಲ್ಲರೂ ಪೇಟೆಗೆ ಬಂದು ತಮ್ಮ ಉತ್ಪನ್ನಗಳನ್ನು ಸಂತೆಯಲ್ಲಿ ಮಾರಿ, ತಮಗೆ ಬೇಕಾಗಿದ್ದ ಪದಾರ್ಥಗಳನ್ನು ಅಂಗಡಿಗಳಿಂದ ಖರೀದಿಸಿ ಮರಳುವ ವಾರದ ರಜಾ ದಿನ. ಇತ್ತ ಮನೆಯಲ್ಲಿ ಗೌರವಾನ್ವಿತ ಅತಿಥಿಯಾದ ನಾನು ಬೇರೆ ಇದ್ದೇನೆ. ಹೀಗಾಗಿ ನಾರಾಯಣ ಆ ಮುಂಜಾನೆ ಅಪ್ಪುಕಳಕ್ಕೆ ಹೋಗಲಿಲ್ಲ. ನಿಸರ್ಗ ಪೂರ್ಣ ಸಹಕಾರ ನೀಡುವಂತೆ ಪ್ರಸನ್ನವಾಗಿತ್ತು. ಹೂಬಿಸಿಲು, ಸ್ವಚ್ಛಾಕಾಶ, ಗಾಳಿಯೇ ಹೆಪ್ಪುಗಟ್ಟಿ ಬಾನಾಯಿತೋ ಎನ್ನುವಂಥ ನೋಟ.

ಕೃಷಿರಂಗ ಯುದ್ಧರಂಗದಂತೆ, ನಿರಂತರ ಜಾಗರೂಕತೆಯೇ ಎರಡೂ ರಂಗಗಳಲ್ಲಿಯ ಯಶಸ್ಸಿನ ಗುಟ್ಟು. ನಾರಾಯಣನಿಗೆ ಅಪ್ಪುಕಳದಲ್ಲಿ ಜರೂರು ಕೆಲಸ ಬಂತು, ಹೀಗಾಗಿ ಅವನು ಬೇಗನೆ ಮಧ್ಯಾಹ್ನದ ಊಟ ಮುಗಿಸಿ ಅತ್ತ ಕಡೆಗೆ ಪಾದಯಾತ್ರೆ ಮಾಡಿದ. ಆ ಅವೇಳೆಯಲ್ಲಿ ಯಾವ ಬಸ್ಸೂ ಇರಲಿಲ್ಲ.
"ಹೊತ್ತು ಕಂತುವ ಮೊದಲೇ ಬಂದುಬಿಡು" ಅಜ್ಜಿಯ ಬುದ್ಧಿವಾದ.
"ಹೋಗದಿದ್ದರೇನು ಮಹಾ ಸೂರೆಹೋಗೋದು? ನಾಳೆ ಹೋದರಾಯಿತು" ತಾಯಿಯ ಕಾಳಜಿ ನುಡಿ.
"ಮಳೆರಾಯನ ಮೂಡ್ ನಂಬಬೇಡ" ನನ್ನ ಅನುಭವೋಕ್ತಿ.
"ಕೊನೆ ಬಸ್ಸಿನಲ್ಲಿ ಬಂದೇ ಬರುತ್ತೇನೆ. ಒಟ್ಟಿಗೇ ಊಟ ಮಾಡೋಣ" ನಾರಾಯಣನ ಸಮಜಾಯಿಷಿ.
ಸರಿ, ಅತ್ತ ಅವನು ನಡೆದು ಹೋದ, ಇತ್ತ ನಾನು ನಿದ್ರೆ ಹೋದೆ.

ಗಡಿಯಾರದ ಪ್ರಕಾರ ಸಾಯಂಕಾಲದ ೫ ಗಂಟೆ. ಆದರೆ ಸುತ್ತಲೂ ದಟ್ಟವಾಗಿ ಹಬ್ಬಿದ್ದ ಮೋಡಗಳ ದಪ್ಪ ಮುಸುಕು ಆಗಲೇ ಮಡಿಕೇರಿಗೆ ಕತ್ತಲೆಯ ಕರಿಗವಸು ತೊಡಿಸಿತ್ತು. ನಾನು ಎದ್ದೆ. ಮಳೆಯ ಮೊದಲ ಸುತ್ತು ಇನ್ನೇನು ಆರಂಭವಾಗುವುದರಲ್ಲಿತ್ತು. ಕೋಲ್ಮಿಂಚಿನ ಆರತಿ, ಗುಡುಗಿನ ನಗಾರಿ, ಕಪ್ಪೆ ಬಿಬ್ಬಿಗಳ ಮಂತ್ರ ಪಠಣ, ಗಿಡಮರಗಳ ತೊನೆತ, ಹೊಸ ಮಣ್ಣಿನ ಹಿತಕರ ಪರಿಮಳ ಇವೆಲ್ಲವೂ ನನಗೆ ಅಪ್ಯಾಯಮಾನವೇ. ಆದರೆ ನಾರಾಯಣ ಅಪ್ಪುಕಳಕ್ಕೆ ಹೋಗಿರುವವನಲ್ಲ. ಬೇಗನೆ ಮರಳಲಿ ಎಂಬ ಚಿಂತೆ ಮನಸ್ಸಿನ ಅಂತರಾಳದಲ್ಲಿ ಕಲಕುತ್ತಿತ್ತು. ಆಲಿಕಲ್ಲುಗಳ ಹೊಡೆತ ಬಿರುಸಾಗಿಯೇ ಇತ್ತು. ಅವುಗಳ ಬೆನ್ನಿಗೆ ಮಳೆಯ ತೋರ ಹನಿಗಳ ತೀವ್ರ ಕುಟ್ಟಣೆಯೂ ತೊಡಗಿತ್ತು. ಕೇವಲ ನಿಮಿಷಗಳಲ್ಲೇ ಚರಂಡಿ ತೋಡುಗಳು ತುಂಬಿ ಉಕ್ಕಿದುವು. ಪ್ರಕೃತಿಯೇ ಕರಗಿ ನೀರಾಗಿ ಹರಿಯುತ್ತಿತ್ತು. ಆಗಸವೇ ಬಿರಿದೊಡೆದು ನೆಲದ ಮೇಲೆ ಕೆಡೆದಿತ್ತು.

ಗಡಿಯಾರದ ಲೋಲಕ ನಿರಂತರವಾಗಿ ಆಂದೋಲಿಸಿತು. ಅಡುಗೆ ಮನೆಯಲ್ಲಿ ಸೌದೆ ಒಲೆಯ ಬೆಚ್ಚಗಿನ ಮೂಲೆಯಲ್ಲಿ ಕಾಲು ಚಾಚಿ ಕುಳಿತು ಸುಟ್ಟ ಹಲಸಿನ ಬೇಳೆಗಳನ್ನು ಕಟುಂ ಕುಟುಂ ಜಗಿಯುತ್ತ ಕೊಡಗಿನ ಘಮಘಮಿಸುವ ಸುಡು ಸುಡು ಕಾಫಿಯನ್ನು ತೆಳು ಪೊರೆಯಲ್ಲಿ ಹೀರುತ್ತ ಪರನಿಂದೆ ಹಾಗೂ ಆತ್ಮಶ್ಲಾಘನೆ ಎಂಬ ಅತ್ಯುತ್ಸಾಹದಾಯಕ ವಿಷಯವನ್ನು ಎಳೆ ಎಳೆಯಾಗಿ ಬಿಡಿಸಿ ಮಾತಾಡುತ್ತ ಕಾಲಸವೆದದ್ದಾಯಿತು. ರಾತ್ರಿ ಗಂಟೆ ಎಂಟಾದರೂ ಕೊನೆಯ ಬಸ್ ಮಡಿಕೇರಿ ನಿಲ್ದಾಣ ತಲಪಿ ಒಂದು ಗಂಟೆಯೇ ಸಂದು ಹೋಗಿದ್ದರೂ ನಾರಾಯಣ ಬರಲಿಲ್ಲ. ಚಿಂತೆ ಕಾತರತೆಯಾಗಿ ಭಯರೂಪದಲ್ಲಿ ಹೆಪ್ಪುಗಟ್ಟಿತು.
"ದಾರಿಯಲ್ಲಿ ಮರಬಿದ್ದು ಬಸ್ ಸಂಚಾರ ಬಂದ್ ಆಗಿರಬಹುದು."
"ಸೇತುವೆ ಕುಸಿದು ಬಸ್ ಆ ಕಡೆ ನಿಂತುಹೋಗಿರಬಹುದು."
"ಬಸ್ ಓಡಿಯೇ ಇರಲಾರದು."
"ಬಂದೇ ಬರುವೆನೆಂದ. ಮಹಾ ಹಠಮಾರಿ, ನಡೆದುಕೊಂಡೇ ಹೊರಟಿರಬಹುದು."
"ಹಾಗಾದರೆ ಯಾಕೆ ಅಂವ ಬರಲಿಲ್ಲ?"
ಇನ್ನೂ ಯಾಕ ಬರಲ್ಲಿಲ್ಲಾಂವಾ ಅಪ್ಪುಕಳದಾಂವಾ?
ಮುಂದಿನ ಊಹಾಪೋಹಗಳು ಯಾರಿಗೂ ಬೇಕಾಗಿರಲಿಲ್ಲ. ಚಿಕ್ಕಮ್ಮನವರ ಕಳವಳ ವ್ಯಾಕುಲವಾಯಿತು. ಮಳೆಗಾಳಿಗಳು ಗಿಯರ್ ಏರಿಸಿ ಇನ್ನೂ ರಭಸದಿಂದ ಪ್ರತಾಪ ಪ್ರದರ್ಶಿಸತೊಡಗಿದುವು. ರಾಕ್ಷಸ ಶಕ್ತಿಗಳೇ ಹಾಗೆ. ರಾತ್ರಿ ವೇಳೆ ಅವಕ್ಕೆ ಹೆಚ್ಚಿನ ಹುಮ್ಮಸ್ಸು ಧಿಮಾಕು.

ಸೇನಾಧಿಕಾರಿಯಾದ ನಾನೊಂದು ಮಿಲಿಟರಿ ಆಪರೇಷನ್ – ಯುದ್ಧ ಕಾರ್ಯಾಚರಣೆ ಸೂಚಿಸಿದೆ. ಚಿಕ್ಕಪ್ಪನವರ ಹಳೆ ಕಾರ್ ೧೯೩೦ರ ಮೊಡೆಲ್ ಹಿಲ್ ಮ್ಯಾನ್ ಮಿಂಕ್ಸ್ ಮನೆಯ ಗೆರಾಜಿನಲ್ಲಿದ್ದದ್ದು (ಕಾರುಕೊಟ್ಟಿಗೆ) ನನಗೆ ಗೊತ್ತಿತ್ತು. ಎರಡು ದಿನಗಳ ಹಿಂದೆ ನಾರಾಯಣ ಅದನ್ನು ಮಡಿಕೇರಿಯ ಇಕ್ಕಟ್ಟು ಬೀದಿಗಳಲ್ಲಿ ಓಡಿಸಿದ್ದ. ನಾನದರೊಳಗೆ

ಮಂಡಿಸಿದ್ದೆ. "ಈಗ ನಾನು ಆ ಕಾರನ್ನು ಡ್ರೈವ್ ಮಾಡಿ ಅಪ್ಪುಕಳಕ್ಕೆ ಹೋಗಿ ಏನಾಗಿದೆ ಎಂದು ತಿಳಿದು ಬರುತ್ತೇನೆ" ಎಂದೆ.

ಚಿಕ್ಕಮ್ಮನವರ ಆಗಿನ ಮನಸ್ಥಿತಿಯಲ್ಲಿ ಈ ಸೂಚನೆ ಅಮೃತೋಪಮವಾಯಿತಾದರೂ ಒಡನೆ ಅವರಿಗೆ ನನ್ನ ಯೋಗಕ್ಷೇಮದ ಬಗ್ಗೆ ಚಿಂತೆ ಕವಿಯಿತು. ಇಂಥ ಎಲ್ಲ ಸನ್ನಿವೇಶಗಳಲ್ಲಿ ನಡೆಯುವಂತೆ ಅತಿ ಕಾಳಜಿಯ ವಾದವಿವಾದವಾದ ಬಳಿಕ ಚಿಕ್ಕಮ್ಮ ಮತ್ತು ನಾನು ಇಬ್ಬರೂ ಕಾರಿನಲ್ಲಿ ಅಪ್ಪುಕಳಕ್ಕೆ ಹೋಗುವುದೆಂಬ ಒಪ್ಪಂದಕ್ಕೆ ಬಂದೆವು.

ಕತ್ತಲೆಯ ಗುಹೆಯೊಳಗೆ ಹುದುಗಿದ್ದ ಹಿಲ್ ಮ್ಯಾನನ್ನು ಮುಟ್ಟಿ ನೋಡಿ ಅರಿತೆ. ಚಾಲಕನ ಆಸನದ ಕಡೆಗಿದ್ದ ಕದವನ್ನು ಪ್ರಯಾಸದಿಂದ ತೆರೆದೆ. ಅದು ಕಿರೋರೋರೋರಕ್ ಎಂದು ಅರಚಿ ಹಠಾತ್ತಾಗಿ ನಿಂತಾಗ ಪಾತಾಳದಾಕಳಿಕೆಯೋ ಕುಂಭಕರ್ಣನ ಸೆಟೆತವೋ ಎಂಬ ಭಾವಗಳು ಮೂಡಿದುವು. ಒಳಹೊಕ್ಕೆ, ಕುಳಿತೆ, ಬಡಿದು ಕದವಿಕ್ಕಿದೆ. ಸ್ವಿಚ್ ಕೀಲಿಯನ್ನು ಪರಡಿ ತೂತಕ್ಕೆ ಸಿಕ್ಕಿಸಿದೆ, ತಿರುಗಿಸಿದೆ. ಫಲಕದಲ್ಲಿ ಬೆಳಕು ಮಿನುಗಲಿಲ್ಲ. ಬಿರಿ ಒತ್ತಿ ಕ್ಲಚ್ ಅಮರಿಸಿ ಗಿಯರನ್ನು ತಟಸ್ಥ ಸ್ಥಾನಕ್ಕೆ ತಳ್ಳಿ ಸ್ಟಾರ್ಟರನ್ನು ಎಳೆದೆ, ಚೋಕ್ ಕೊಟ್ಟೆ. ಊಹೂಂ, ಜೀವ ಸ್ಪಂದಿಸಲಿಲ್ಲ. ಸ್ಪಂದನ ಶ್ರುತಿಯೂ ನಾಸ್ತಿ. ಬ್ಯಾಟರಿ ಡೌನ್, ನನ್ನದೂ ಹಾಗೆ. ಮನೆ ಮಂದಿ ಸೇರಿ ಕಾರನ್ನು ರೊಪ್ಪದಿಂದ ಉತ್ಖನನ ಮಾಡಿದ್ದಾಯಿತು. ಈಗ ಅದು ರಸ್ತೆಯ ತೆರೆ ಜಾಗದಲ್ಲಿ ನಿಂತಿರುವ ಲಡಾರಿ ಮಾಲು. ಅದರ ಮೇಲೆ ಮಳೆಯ ಒನಕೆ ಹನಿಗಳು ಎಡಬಿಡದೆ ಬಡಿದು ಅಭ್ಯಂಜನ ಮಾಡಿಸುತ್ತಿವೆ. ಟಾರ್ಚ್ ಲೈಟಿನಿಂದ ಬೆಳಕು ಬೀರಿ ಕಾರಿನ ಒಳಭಾಗವನ್ನು ಒಮ್ಮೆ ಪರಿಶೀಲಿಸಿದೆ. ಇದೇನು ಕಾರೇ? ಗತಯುಗದ ಭವ್ಯ ಸ್ಮಾರಕವೇ? ಪ್ರಾಚ್ಯ ಸಂಶೋಧನಾಲಯದಲ್ಲಿ ಇಡಬೇಕಾದ ವಸ್ತು ವಿಶೇಷವೇ? ಚಿಕ್ಕಪ್ಪನವರ ಅತಿವಿಧೇಯ ಪುಷ್ಪಕವಾಗಿದ್ದ ಈ ಕಾರ್ ತನ್ನ ಆತ್ಮವನ್ನು ಅವರೊಂದಿಗೆ ಪರಲೋಕಕ್ಕೆ ರವಾನಿಸಿಬಿಟ್ಟಿರಬೇಕು ಎಂದೆನಿಸಿತು ನನಗೆ. ಹರಕು ಮುರುಕು, ಜಂಗು ಹಿಡಿದ ಈ ಜಂಕನ್ನು ನಾನು ಚಾಲೂ ಮಾಡಬಲ್ಲೆನೇ?
ಆದರೆ ನಾರಾಯಣ ಅಲ್ಲಿ, ಚಿಕ್ಕಮ್ಮ ಇಲ್ಲಿ. ನಡುವೆ ನಾನು! ನಾವು ಹೋಗಲೇಬೇಕು.

ನೋಡಿಯೇ ಬಿಡೋಣ ಒಂದು ಕೈ ಎಂದು ಜಟ್ಕಾ ಸ್ಟಾರ್ಟ್ ಮಾಡಲು ಪ್ರಯತ್ನಿಸಿದೆ. ಕಾರನ್ನು ಜೋರಾಗಿ ತಳ್ಳಿಸಿ ಅದು ಓಡುತ್ತಿದ್ದಂತೆ ಗಿಯರನ್ನು ಲಗಾಯಿಸಿ ಎಂಜಿನ್ನನ್ನು ಚಾಲೂ ಮಾಡುವ ಉಲ್ಟಾ ವಿಧಾನವಿದು. ನನ್ನ ಈ ಹಿಕಮತ್ತು ಫಲ ನೀಡಿತು. ಡೊರಡೊರಡೊರ ಠಪ್ ಬ್ರೂರೋ ಎಂಬ ಕರ್ಣಾನಂದಕರ ಹೃದಯಮಧುರ ನಿನದದೊಡನೆ ಕಾರ್ ಜೀವ ಪಡೆದೇ ಪಡೆಯಿತು. ಭಲೇ ಹಿಲ್ ಮ್ಯಾನ್ ಯೂ ಆರ್ ಎ ಮ್ಯಾನ್! (ಅಥವಾ ನಾನೋ?)

ದೀಪಗಳ ಸ್ವಿಚ್ ಹಾಕಿದೆ, ಜ್ಯೋತಿ ಬೆಳಗಲಿಲ್ಲ. ಎಂಜಿನ್ನಿನ ನಾದವೇನೋ ಭರವಸೆ ಮೂಡಿಸುವಂತಿದೆ. ಆದರೆ ಬೆಳಕಿಲ್ಲದೆ ಆ ಅಪರಾತ್ರಿ ಮಳೆಗೋಡೆ ಭೇದಿಸುತ್ತ ಮಲೆನಾಡಿನ ಗೊಂಡಾರಣ್ಯದ ಸರ್ಪ ಮಾರ್ಗದಲ್ಲಿ ಈ ಚರಸ್ಮಾರಕವನ್ನು ಓಡಿಸುವುದು ಹೇಗೆ? ಇನ್ನೂ ಒಂದು ತೊಂದರೆ ಕಾದಿತ್ತು. ಚಾಲಕನಿಗೆ ಎದುರಾಗಿ ಅಖಂಡ ಕನ್ನಡಿ ಚೌಕಟ್ಟು – ಗಾಳಿತೆರೆ (ವಿಂಡ್ ಸ್ಕ್ರೀನ್), ಇದೆಯಷ್ಟೆ. ಅದರ ಹೊರಮೈ ಮೇಲೆ ಚಾಮರ ಬೀಸಿ ನೀರೊರೆಸುವ ವೈಪರುಗಳೇ ಇರಲಿಲ್ಲ. ಹೀಗಾಗಿ ರಸ್ತೆ ಒಂದಿಷ್ಟೂ ಕಾಣುತ್ತಿರಲಿಲ್ಲ. ಹಾಗಾದರೆ ಕಾರನ್ನು ಹಿಂತಿರುಗಿಸುವುದೇ?
ಆದರೆ ನಾರಾಯಣ ಅಲ್ಲಿ, ಚಿಕ್ಕಮ್ಮ ಇಲ್ಲಿ, ನಡುವೆ ನಾನು. ನಾವು ಹೋಗಲೇಬೇಕು.

ಪ್ರಾಚೀನ ಕಾಲದ ಯಂತ್ರೋದ್ಯಮದ ಪ್ರತೀಕವಾದ ಹಿಲ್ ಮ್ಯಾನನ ಗಾಳಿತೆರೆಯ ತಿರುಪನ್ನು ಸಡಿಲಗೊಳಿಸಿ ಕೈ ಹಿಡಿಯನ್ನು ತಿರುಗಿಸಿದೆ. ಗಾಳಿತೆರೆ ಹೊರಕ್ಕೆ ತೆರೆದುಕೊಂಡು ಬಾನೆಟ್ಟಿಗೆ ಸಮಾಂತರವಾಗಿ ನಿಂತಿತು. ಅಲ್ಲಿಗೆ ನನಗೂ ಹಾದಿಗೂ ನಡುವಿನ ಅಡಚಣೆ ಇಲ್ಲವಾದಂತಾಯಿತು, ನಿಜ. ಆದರೆ ಈಗ ಮಳೆಯ ನೇರ ಹೊಡೆತಕ್ಕೆ ಅದೂ ಕಾರ್ ಓಡುವಾಗ ಹೆಚ್ಚಿನ ಬಡಿತಕ್ಕೆ ನಾನು ತುತ್ತಾಗುತ್ತಿದ್ದೆ. ಮಳೆಯೂರಿನವನಾದ ನಾನು ಈ ಹೊಡೆತ ಬಡಿತಗಳಿಗೆ ಅಂಜುವ ಮಾಣಿ ಅಲ್ಲ. ಮಡಿಕೇರಿಯಿಂದ ಅಪ್ಪುಕಳದವರೆಗಿನ ಹಾದಿ ಕಂಡುದಾದರೆ ಹೇಗೂ ಹೋಗಬಹುದು. ಎಕ್ಸ್‌ಕಿರಣ ನೇತ್ರಗಳಿರಬಾರದಿತ್ತೇ ನನಗೆ?

ಆ ಹಾದಿಯ ಒಂದೊಂದು ತಿರುವು ಮುರುವು, ಏಳುಬೀಳು, ಓರೆಕೋರೆ ಎಲ್ಲವೂ ನನಗೆ ಕಂಠಪಾಠ, ಅಲ್ಲಲ್ಲ ಪಾದಪಾಠ. ಹಾದಿಬದಿಯ ಗಿಡಗಂಟಿ, ಪೊದೆ ಕುರುಚಲು, ಬರೆ ಕೊರಕಲು ಎಲ್ಲವೂ ಆತ್ಮೀಯ ಒಡನಾಡಿಗಳು.

ಹಾಗಿದ್ದರೂ ತಿಳಿಯದ ಕಾರನ್ನು ಕಾಣದ ಹೊತ್ತಿನಲ್ಲಿ, ಅರಿಯದ ಗುರಿಯೆಡೆಗೆ, ಆ ಹಾದಿಯಲ್ಲಿ ಒಯ್ದೇನೆಂಬ ಧೈರ್ಯ ಮೂಡಲಿಲ್ಲ. ಕಾರಿನ ಟೈರುಗಳು ಪಾದಗಳಲ್ಲವಷ್ಟೆ. ಹಾಗಾದರೆ ಕಾರನ್ನು ಲಾಯದೊಳಕ್ಕೆ ನುಗ್ಗಿಸುವುದೇ? ಆದರೆ ನಾರಾಯಣ ಅಲ್ಲಿ, ಚಿಕ್ಕಮ್ಮ ಇಲ್ಲಿ, ನಡುವೆ ನಾನು. ನಾವು ಹೋಗಲೇಬೇಕು.

ಚಿಕ್ಕಮ್ಮನಿಗೆ ಹೇಳಿದೆ, "ನೀವು ಮುಂದಿನ ಆಸನದಲ್ಲಿ ಎಡಗಡೆ ಕುಳಿತುಕೊಳ್ಳಿ. ಮಳೆನೀರಿನಿಂದ ತೋಯದಂತೆ ಕಂಬಳಿ ಹೊದ್ದುಕೊಳ್ಳಿ. ಎಡಗೈಯಲ್ಲಿ ಟಾರ್ಚ್ ಹಿಡಿದು ಅದರ ಬೆಳಕನ್ನು ಡಾಮರು ದಾರಿಯ ಎಡ ಅಂಚು ಸರಿಯಾಗಿ ನನಗೆ ಕಾಣುವಂತೆ ಬೀರುತ್ತಿರಿ. ಆ ಅಂದಾಜಿನ ಮೇಲೆ ನಾನು ಕಾರ್ ಚಾಲಿಸುತ್ತೇನೆ. ನಿಧಾನವಾಗಿ ಹೋಗೋಣ." ಕುರುಡಚಾಲಕ ಕುಂಟಪಯಣಿಗ ಅವರ ಸಹಯೋಗದಿಂದ ಬಂಡಿ ಉರುಳಿತು. ದಾರಿ ಸರಿಯಿತು. ದೂರ ತೀರಕೆ?

ಕಾರನ್ನು ಒಂದನೆಯ ಗಿಯರಿಗೆ ಸರಿಸಿ ಎಂಜಿನ್ ನಾದ ಏರಿದಂತೆ ಎರಡನೆಯ ಗಿಯರಿಗೆ ಬದಲಾಯಿಸಿದೆ. ರಸ್ತೆಯಲ್ಲಿ ಜುಳುಜುಳಿಸುತ್ತಿದ್ದ ನೀರನ್ನು ಇಕ್ಕೆಲಗಳಿಗೂ ಚೇಪುತ್ತ ಎರಡೆರಡು ತಿರುಗಾಸುಗಳನ್ನು ಮಂದಗತಿಯಿಂದ ದಾಟುತ್ತ ಕಾರ್ ಸಾಗಿತು. ಈಗ ಬ್ರಾಹ್ಮಣಕೇರಿಯ ಬಲು ಕಡಿದಾದ ಚಡಾವು ಏರಬೇಕು. ಮೂರನೆಯ ಗಿಯರಿಗೆ ಆ ತಾಕತ್ತು ಬಾರದೆಂದು ಅನಿಸಿದ್ದರಿಂದ, ಜೊತೆಗೆ ಮೂರನೆಯದರಲ್ಲಿ ಹೋಗುತ್ತಿರುವಾಗ ನಡು ಚಡಾವಿನಲ್ಲಿ ವೇಗ ತಗ್ಗಿದರೆ ಗಿಯರನ್ನು ಎರಡನೆಯದಕ್ಕೆ ಇಳಿಸಲು ಬೇಕಾಗುವ ಎದೆಗಾರಿಕೆ ಆಗ ನನಗೆ ಇಲ್ಲದ್ದರಿಂದ – ಹೊಸ ನೀರು, ಹೊಸ ಕಾರು, ಬಲು ಹುಷಾರು – ಯಥಾಸ್ಥಿತಿಯನ್ನೇ ಮುಂದುವರಿಸಿದೆ. ಊರ ಒಳಗಿನ ಓಣಿ ಕೇರಿಗಳನ್ನು ಹಿಂದೆ ಹಾಕಿ ಮಡಿಕೇರಿಯ ಗಡಿಯಲ್ಲಿರುವ ಸುಂಕದ ಕಟ್ಟೆ ತಲಪಿದೆವು. ಪೆಟ್ರೋಲ್ ಪಂಪಿನಿಂದ ಕಾರಿಗೆ ಅಮೃತ ಊಡಿಸಿದೆ.

ಇನ್ನು ಮುಂದೆ ನಾವು ೭ ಕಿಮೀಗಳಷ್ಟು ದೂರ ಗೊಂಡಾರಣ್ಯದ ನಡುವೆ, ಬೆಟ್ಟದ ಮಗ್ಗುಲನ್ನು ಕೊರೆದು ಮಾಡಿದ್ದ ಬಳಸುದಾರಿಯ ಮೇಲೆ, ಸುತ್ತುತ್ತ ಬಳುಕುತ್ತ ಇಳಿಯುತ್ತ ಏರುತ್ತ ತೆವಳಬೇಕು. ಮಳೆರಾಯ ಗಿಯರ್ ಏರಿಸಿ ಇನ್ನೂ ತೀವ್ರವಾಗಿ ಜಡಿಯತೊಡಗಿದ. ನಾನೇನು ಕಡಿಮೆ? ನಾನು ಗಿಯರ್ ಏರಿಸಿ ಅಪ್ಪುಕಳದ ಹಾದಿಗೆ, ಗಹನ ತಿಮಿರದ ಬಾಯಿಗೆ, ಅಜ್ಞಾತ ಭವಿಷ್ಯದ ಕೂಪಕ್ಕೆ, ಕಾರನ್ನು ಹೊರಳಿಸಿಯೇ ಬಿಟ್ಟೆ. ಕಾರಿನ ಬಿರಿಗಳು ಸಮರ್ಪಕವಾಗಿಲ್ಲ. ಆದ್ದರಿಂದ ನಾಲ್ಕನೆಯ (ಟಾಪ್) ಗಿಯರ್ ಪೂರ್ಣ ವರ್ಜ್ಯ. ಮೂರನೆಯ ಗಿಯರಿನಲ್ಲಿ ಹೋಗೋಣವೇ? ಅದರಲ್ಲಿ ಜಾರಿಕೆ, ಎಂದರೆ ಗಿಯರಿನ ಸರಳು ಬೇಕಾದಲ್ಲಿ ನಿಲ್ಲದೆ ತಟಸ್ಥ ಸ್ಥಾನಕ್ಕೆ ಜಾರಿ ಬೀಳುವ ಐಬು. ಆಗ ಎಂಜಿನ್ ಚಾಲೂ ಇದ್ದರೂ ಬಂಡಿ ಓಡದು. ಎರಡನೆಯ ಗಿಯರಿನಲ್ಲಿಯೇ ಇಡೀ ಪಯಣ ಮಾಡೋಣವೇ? ಗತಿ ಅತಿ ಮಂದ. ಎಂಜಿನ್ ತುಂಬ ಬಿಸಿಯಾಗಿ ಕಾದು ಒಡೆದೇ ಹೋಡೀತು. ಆದ್ದರಿಂದ ಮೂರನೆಯ ಗಿಯರೇ ಶರಣು. ಸರಳನ್ನು ಎಡಗೈಯಿಂದ ಅಮರಿಸಿ ಬಿಗಿಹಿಡಿದು ಬಲಗೈಯಿಂದ ಚುಕ್ಕಾಣೀಚಕ್ರ (ಸ್ಟೀಯರಿಂಗ್ ವೀಲ್) ತಿರುಗಿಸುವ ಕರ್ಣನಾದೆ.

ಕಾರು ಮುಂದೆ ಮುಂದೆ ಹರಿಯಿತು, ಅಲ್ಲ, ರಸ್ತೆ ಹಿಂದೆ ಹಿಂದೆ ಜಾರಿತು. ಕಣ್ಣುಗಳಿಗೆ ಮಳೆಹನಿಗಳು ಬಡಿದು ಎಮೆ ಮೇಲೆ ಮಿನಿ ಭೂತಗನ್ನಡಿಗಳನ್ನು ರಚಿಸಿದುವು. ಅವುಗಳ ಮೂಲಕ ಕಂಡ ನೋಟವೇ ಬೇರೆ. ಇತ್ತ ಡಾಮರು ರಸ್ತೆಯಲ್ಲಿ ಹರಿಯುತ್ತಿದ್ದ ನೀರ ಹೊನಲಿನಲ್ಲಿ ಪ್ರತಿಫಲಗೊಂಡ ಟಾರ್ಚ್ ಬೆಳಕು ಮಾಯಾಲೋಕವೊಂದನ್ನು ನಿರ್ಮಿಸಿತ್ತು. ದಾರಿ ಯಾವುದಯ್ಯಾ ತಿಳಿಯದೆ ಭಯಗೊಂಡೆ. ಬಲಗಡೆಗೆ ಬರೆ, ಎಡಗಡೆಗೆ ದರೆ, ಎದುರಿಗೋ ಮಳೆಹಿಮಗಳ ದಟ್ಟ ತೆರೆ, ನಡುವೆ ಈ ಮಿಲಿಟರಿ ದೊರೆ! ಟಾರ್ಚಿನ ಸುತ್ತಲೂ ಬೆಳಕಿನ ಮಬ್ಬು ಜೊಂಪೆ, ಅದರಿಂದಾಚೆಗೆ ಗಭೀರ ಶೂನ್ಯ.

ಚಿಕ್ಕ ಕಲ್ಲಿನ ಮೇಲೂ ಚಕ್ರ ಉರುಳಿದಾಗ, ಪುಟ್ಟ ಹೊಂಡವನ್ನೂ ಅದು ದಾಟಿದಾಗ, ಸಣ್ಣ ಕಣಿವೆಯನ್ನೂ ಅದು ಅಡ್ಡ ಹಾಯ್ದಾಗ ಚುಕ್ಕಾಣಿಚಕ್ರ ಅಲುಗುತ್ತಿತ್ತು. ನನ್ನ ಗುಂಡಿಗೆ ಬಡಿತ ತಾರಕ್ಕೆ ಜಿಗಿಯುತ್ತಿತ್ತು. ಎಂಜಿನ್ ನಾದ ಮಂದ್ರಕ್ಕೆ ಕುಸಿಯುತ್ತಿತ್ತು. ಅತ್ತಿತ್ತ ನೋಡುವುದುಂಟೇ? ರಸ್ತೆಯ ಎಡ ಅಂಚೊಂದೇ ನನ್ನ ಧ್ರುವ ತಾರೆ. ಆದರೆ ಎಡ ಅಂಚೇ ನಲುಗಿ ಕರಗಿ ನೀರಾಗಿ ಪ್ರವಹಿಸುತ್ತಿದೆ. ಚಿಕ್ಕಮ್ಮ ಎವೆ ಮುಚ್ಚದೆ ಹಾದಿ ದಿಟ್ಟಿಸುತ್ತ ನನಗೆ ಸೂಚನೆ ನೀಡುತ್ತಿದ್ದಾರೆ. ಅಳ್ಳೇಶಿ ಅರ್ಜುನನ ಟೊಳ್ಳು ಎದೆಗೆ ಕೆಚ್ಚು ತುಂಬುತ್ತಿದ್ದಾರೆ. ಅಂಥದ್ದರಲ್ಲೂ ನನಗೆ ಖಾತ್ರಿ ಇದೆ, ನಮ್ಮ ವಾಹನ ಕೇರೆಹಾವಿನಂತೆ ಅಂಕುಡೊಂಕಾಗಿಯೇ ತೆವಳಿರಬೇಕೆಂದು.

ಐದು ಕಿಮೀ ಉದ್ದದ ಇಳಿಜಾರು ಹಾದಿ ಮುಗಿಯಿತು. ದಾರಿಗೆ ಅಡ್ಡ ಮರ ಬಿದ್ದಿರಲಿಲ್ಲ. ಬಿದ್ದಿದ್ದರೆ ಅದೇ ನಮ್ಮನ್ನು ತಡೆದು ನಿಲ್ಲಿಸಿರುತ್ತಿತ್ತು. ಮೋರಿ ಸೇತುವೆ ಯಾವುದೂ ಕುಸಿದಿರಲಿಲ್ಲ. ಕುಸಿದಿದ್ದರೆ ಅವೇ ನಮ್ಮ ಕಾರನ್ನು ಮುಗ್ಗರಿಸಿ ಕುಕ್ಕರಿಸುವಂತೆ ವಿಧಿಸಿರುತ್ತಿದ್ದುವು. ಈಗ ಬಂದಿದೆ ನಿಜವಾದ ಪರೀಕ್ಷಾ ಕಾಲ. ನನ್ನೂರಿನ ನನಗೆ ಬಲು ಚೆನ್ನಾಗಿ ಗೊತ್ತಿರುವ, ಎಂದೂ ಬದಲಾಗದಿರುವ ಹಾದಿಯೊಂದು, ಸನ್ನಿವೇಶದ ಬದಲಾವಣೆಯಿಂದ ಎಂಥಾ ಸವಾಲಾದೀತೆಂಬುದನ್ನು ಯೋಚಿಸಿ ನಡುಗಿದೆ. ಬಿಗಿ ಸರಿಗೆಯ ಮೇಲೆ ಸಮತೋಲ ತಪ್ಪದೆ ನಡೆದು ಗುರಿ ತಲಪುವ ಅದಟು ನನಗುಂಟೇ? ಮೂರು ಕಿಮೀ ಉದ್ದದ ಉಡುವತ್ತುಮೊಟ್ಟೆ ಚಡಾವನ್ನು ನಾವೀಗ ಏರಬೇಕಾಗಿದೆ. ಅದೆಂಥ ಚಡಾವು? ಏರುಧಾಟಿಯಲ್ಲಿ ಬಳಸುತ್ತ ಸುತ್ತುತ್ತ ಹತ್ತುತ್ತ ಬಳುಕುತ್ತ ಹೋಗಿ ಕೊನೆಯ ಹಂತದಲ್ಲಿ ನೇರ ನೆತ್ತಿಗೇ ನೆಗೆದು ಬಲಕ್ಕೆ ಲಂಬ ಕೋನದಲ್ಲಿ ಒಮ್ಮೆಗೇ ತಿರುಗಿ ದಿಢೀರನೆ ಇಳಿಯಲು ತೊಡಗುವ ಕಾಲನ ಕೋಣನ ಜಾಡು. ಇದರ ಬಹುಭಾಗವನ್ನು ಮೂರನೆಯ ಗಿಯರಿನಲ್ಲಿ ನಿಭಾಯಿಸಬಹುದು. ನಿಜ, ಆದರೆ ಗಿಯರ್ ಜಾರಿಕೆಗೆ ಮದ್ದು? ಚಡಾವು ಏರುವಾಗ ಚುಕ್ಕಾಣಿ ಚಕ್ರದ ಮೇಲೆ ಬೀಳುವ ಒತ್ತಡ ಜಾಸ್ತಿ. ಆದ್ದರಿಂದ ಎರಡು ಕೈಗಳೂ ಅದರ ಮೇಲಿರುವುದು ಅಪೇಕ್ಷಣೀಯ. ಈ ಕಾರಣಕ್ಕಾಗಿ ಎರಡನೆಯ ಗಿಯರಿನಲ್ಲಿ ಹೋಗಲಾದೀತೇ? ಅತಿಯಾಗಿ ಕಾದು ಹೋಗುವ ಎಂಜಿನ್ ಯಾವ ಗಳಿಗೆಯಲ್ಲಿಯೂ ಸ್ಫೋಟಗೊಳ್ಳಬಹುದಾದ ಶಾಶ್ವತ ಅಪಾಯದೊಂದಿಗೆ ಸೆಣಸಾಟ. ಸರಿ, ಹಿಂದಿನಂತೆಯೇ ಎಡಗೈಯಲ್ಲಿ ಗಿಯರ್ ಸರಳು, ಬಲಗೈಯಲ್ಲಿ ಚುಕ್ಕಾಣಿ ಚಕ್ರ ಹಿಡಿದು, ಮೂರನೆಯ ಗಿಯರಿನಲ್ಲಿ ಬಂಡಿ ಚಾಲೂ ಮಾಡಿದೆ.

ಏರಿದೆವು, ಮಳೆ ತಾಡನೆಯನ್ನು ಲೆಕ್ಕಿಸದೆ ಏರಿದೆವು, ಎಂಜಿನ್ನಿನ ನಾದ ತಾರಕ್ಕೇರಿದಂತೆ ಕಾಡಿನ ಗುಹಾಂತರದಿಂದ ಅದರ ಪ್ರತಿಧ್ವನಿ ಭೀಕರವಾಗಿ ಅನುರಣಿಸಿದಂತೆ ಮೇಲೆ ಮೇಲೆ ಏರಿದೆವು. ಬಲಗಡೆಯ ಬರೆಗೆ ಹೆಟ್ಟದೆ, ಎಡಗಡೆಯ ಕೊರಕಲಿಗೆ ಬೀಳದೆ ಏರಿದೆವು. ಈಗ ಬಂದೇ ಬಂತು ಕೊನೆಯ ಇಪ್ಪತ್ತೈದು ಮೀಟರುಗಳ ಅಗ್ನಿಪರೀಕ್ಷಾ ಸ್ಥಳ. ಮೂರನೆಯ ಗಿಯರಿನಲ್ಲಿಯೇ ಮುಂದುವರಿಯುವುದೇ? ಇಲ್ಲ, ಎಂಜಿನ್ ಹುಯಿಲಿಡುತ್ತಿದೆ "ನಾನಿನ್ನು ಎಳೆಯಲಾರೆ." ಅದರ ಮೊರೆಯನ್ನು ಅಲಕ್ಷಿಸಿ "ಹೋಗಿಯೇ ಹೋಗು" ಎಂದು ವಿಧಿಸಲೇ? ಅದು ನಡು ಚಡಾವಿನಲ್ಲಿ ದುಡುಂ ಸಂಪು ಹೂಡಿ ನಿಂತೇ ಹೋದರೆ? ಒಡನೆ ಗಿಯರ್ ಪೆಟ್ಟಿಗೆ ಒಡೆದೇ ಹೋದೀತು, ಅಥವಾ ಕಾರ್ ಹಿಂದಕ್ಕೆ ದಡದಡನೆ ಧಾವಿಸೀತು. ದುರ್ಬಲ ಬಿರಿಗಳು ಈ ಹಿನ್ಸರಿತವನ್ನು ತಡೆಯಲಾರವು. "ನ್ಯೂಟನ್ ಮಹಾಶಯಾ! ನೀನು ದೂರದ ಇಂಗ್ಲೆಂಡಿನಲ್ಲಿ ಸತ್ತು ಹೋಗಿ ಎರಡು ಶತಮಾನಗಳೇ ಸಂದಿದ್ದರೂ ನಮ್ಮನ್ನು ಕಾಡಿನ ಈ ಸಂದಿನಲ್ಲಿ ಕೂಡ ಗೋಳು ಹುಯ್ದುಕೊಳ್ಳುವುದನ್ನು ಇನಿತೂ ಕಡಿಮೆ ಮಾಡಿಲ್ಲವಲ್ಲ!" ಎಂದು ಅವನಿಗೆ ಮನಸ್ವೀ ಶಾಪ ಹಾಕಿದೆ. ಯೋಚನೆಗೆ ಈಗ ಪುರುಸೊತ್ತಿಲ್ಲ. ಕ್ರಿಯೆ, ಅಧಿಕ ಕ್ರಿಯೆ, ಕಾರ್ ಮುಂದೆ ಹೋಗಲೇಬೇಕು. ಪರ್ವ ಬಿಂದುವನ್ನು ಉತ್ತರಿಸಲೇಬೇಕು. ಜಯ ಲಭಿಸಲೇಬೇಕು.

ಕ್ಲಚ್ ಒತ್ತಿದೆ. ಗಿಯರನ್ನು ಅದೇ ಕ್ಷಣ ತಟಸ್ಥ ಸ್ಥಾನಕ್ಕೆ ಎಳೆದೆ. ಕ್ಲಚ್ ಬಿಟ್ಟೆ, ಆಕ್ಸಿಲರೇಟರ್ ಒತ್ತಿದೆ. ಎಂಜಿನ್ ಬುಸ್ ಗುಂಯ್ ಎಂದಿತು. ಆಕ್ಸಿಲರೇಟರ್ ಬಿಟ್ಟೆ. ಕ್ಲಚ್ ಒತ್ತಿದೆ ಅದೇ ಕ್ಷಣ ಗಿಯರನ್ನು ಬಲಪ್ರಯೋಗಿಸಿ ಎರಡನೆಯ ಸ್ಥಾನಕ್ಕೆ ಎಳೆದೇ ಬಿಟ್ಟೆ. ನಿಧಾನವಾಗಿ ಕ್ಲಚ್ಚನ್ನು ಸಡಿಲಗೊಳಿಸುತ್ತ ಆಕ್ಸಿಲರೇಟರನ್ನು ಒತ್ತತೊಡಗಿದೆ. ಇವೆಲ್ಲ ಕ್ರಿಯೆಗಳೂ ನಡೆದು ಹೋದುದು ಸೆಕೆಂಡಿನ ಅಲ್ಪಾಂಶ ಅವಧಿಯಲ್ಲಿ. ಆ ವೇಳೆ ನಾನೇ ಗಿಯರ್, ನಾನೇ ಕ್ಲಚ್, ನಾನೇ ಆಕ್ಸಿಲರೇಟರ್. ನಾನೇ ಎಲ್ಲವೂ : "ಅಹಂ ಕ್ರತುರಹಂ ಯಜ್ಞ." ಒಮ್ಮೆ ಕಾರ್ ಹಿಂದೆ ಸರಿದಂತಾಯಿತು, ದೇವರೇ ಗತಿ (ಅಂದ ಹಾಗೇ ಶತನಾಸ್ತಿಕನಾದ ನಾನು ದೇವರೇ ಗತಿ ಎಂದು ಮರೆತೂ ಅನ್ನುವಂತಿಲ್ಲ!). ಬಲಗಡೆಗೆ ಹೋಗಿ ಬರೆಗೆ ಬಡಿದು ನಿಲ್ಲಲಿ, ಎಡಗಡೆಗೆ ಸಾಗಿ ದರೆಗೆ ಬಿದ್ದು ನುಚ್ಚುನುರಿ ಆಗುವುದಕ್ಕಿಂತ ಎಂದು ಬಗೆದು ಚುಕ್ಕಾಣಿಚಕ್ರವನ್ನು ಬಲಗಡೆಗೆ ತಿರುಗಿಸಿದೆ. ಹಿಲ್ ಮ್ಯಾನ್ ಕೈಕೊಡಲಿಲ್ಲ. ಹಸ್ತಾಲಿಂಗನ ನೀಡಿತು! ಎಂಜಿನ್ ಎರಡನೆಯ ಗಿಯರನ್ನು ಒಪ್ಪಿಕೊಂಡು ಘೋರ ಗರ್ಜನೆ ಸಹಿತ ಎಳೆಯತೊಡಗಿತು. 'ನೀರೊಳಗಿರ್ದು ಬೆಮರ್ದ' ನಾನು ಆ ಕ್ಷಣ ಗಾಳಿಯಂತೆ ಹಗುರಾದೆ, ಮಿಂಚಿನಂತೆ ಚುರುಕಾದೆ, ಮಳೆ ಹನಿಯಂತೆ ಮುಕ್ತನಾದೆ. ಚಡಾವಿನ ಕೊನೆಯ ಮಜಲನ್ನು ಕಾರ್ ಯಶಸ್ವಿಯಾಗಿ ಉತ್ತರಿಸಿ ತಿರುಗಾಸಿನಲ್ಲಿ ರಷ್ಯದ ಬ್ಯಾಲೇ ನರ್ತಕಿಯಂತೆ ಬಳುಕಿ ತಿರುಗಿ ಮುಂದಿನ ಇಳಿಜಾರು ಹಾದಿಯಲ್ಲಿ ಓಡಲು ಸಿದ್ಧವಾಗಿತ್ತು.
ಅಲ್ಲಿ ಅದನ್ನು ಕ್ಷಣಕಾಲ ನಿಲ್ಲಿಸಿಕೊಂಡು, ಆದರೆ ಎಂಜಿನ್ನನ್ನು ಚಾಲೂ ಸ್ಥಿತಿಯಲ್ಲಿಯೇ ಇಟ್ಟುಕೊಂಡು, ಕೈ ಮುಸುಡು ಒರೆಸಿಕೊಂಡು ನಿಡು ಉಸಿರು ಎಳೆದುಕೊಂಡು, "ಹೋಗಿನ್ನು ಸಲೀಸಾಗಿ" ಎಂದು ಹಿಲ್ ಮ್ಯಾನನಿಗೆ ಆತ್ಮೀಯತೆಯಿಂದ ಉಸುರಿದೆ. ಅಚ್ಚರಿ ಎಂದರೆ ಈಗ ತೇಜಿ ಮಳೆ ಪೂರ್ತಿ ಬಂದ್ ಆಗಿತ್ತು. ಕಾಡಿನ ಹೆಮ್ಮರಗಳ ಕೊಂಬೆ ರೆಂಬೆ ಎಳೆ ಹೂಗಳ ಮೇಲೆ ಒಟ್ಟಯಿಸಿದ್ದ ನೀರು ತೊಟ್ಟು ತೊಟ್ಟಾಗಿ ಜಿನುಗುತ್ತಿತ್ತು. ನಮ್ಮ ಟಾರ್ಚಿನ ಪ್ರಕಾಶದಲ್ಲಿ (ಈಗದು ಅತಿ ಪ್ರಖರವಾಗಿತ್ತು) ಆ ನೀರ ಹನಿಗಳು ತೋರ ಬೆಂಕಿ ಉಂಡೆಗಳಂತೆ ಪ್ರಜ್ವಲಿಸುತ್ತಿದ್ದುವು.

ಮೋಡಗಳ ಎಡೆಯಿಂದ ತಿಂಗಳ ಬೆಳಕು ಮಂದವಾಗಿ ಒಸರಿ ಗಿಡಮರಗಳ ಎಲೆ ಅಡರುಗಳ ಜರಡಿ ಮೂಲಕ ಸೋರಿ ಅಲ್ಲಲ್ಲ ತೆಳು ಅರಿಸಿನ ಹುಡಿ ಚೇಪಿರುವಂತೆ ತೋರುತ್ತಿತ್ತು. ಕೇವಲ ಒಂದು ಗಳಿಗೆ ಹಿಂದೆ ಕಾಡಿನ ಏಕಾಂಗೀ ಭೀಕರತೆಯಿಂದ ಭೀತನಾಗಿದ್ದೆ. ಈಗಾದರೋ ಅದರ ರುದ್ರರಮಣೀಯತೆಯಿಂದ ಉಲ್ಲಸಿತನಾಗಿದ್ದೇನೆ.
ಆದರೆ ನಾರಾಯಣ? 'ನಾರಾಯಣಂ ನಮಸ್ಕೃತ್ಯಂ.. .'

ಕಾರು ದೌಡಾಯಿಸುತ್ತಿದೆ. ಅಪ್ಪುಕಳದ ಶಹರು ಎರಡಂಗಡಿಗಳ ಹಿರಿ ಸಾಲು. ಇನ್ನೇನು ಎದುರಗಲಿದೆ. ಅಲ್ಲಿಂದ ಮುಂದೆ ರಾಜಮಾರ್ಗ ಬಿಟ್ಟು ಎಡಕ್ಕೆ ಹೊಡೆದುಕೊಂಡು ಕೆಸರು ರಾಡಿ ಸೆಗಣಿ ರೊಚ್ಚೆ ತುಂಬಿರುವ ಹಳ್ಳಿಹಾದಿಯಲ್ಲಿ ನಮ್ಮ ಜಮೀನಿಗೆ ಹೋಗಬೇಕು. ಅಲ್ಲಿ ಕಾರ್ ಓಡೀತೇ? ಹೂತು ಹೋಗದೇ? ಮೊಸಳೆ ಹಿಡಿದೆಳೆದಾಗ ಕರಿಯ ಮೊರೆ ಕೇಳಿ ಹರಿಬಂದು ರಕ್ಷಣೆ ನೀಡಿದನಂತೆ. ಆದರೆ ಕಲಿಯುಗದಲ್ಲಿ ಅದೆಲ್ಲ ನಡೆದೀತೇ? ದಾಸವಾಣಿ ಮೊಳಗಿತು, "ಎಲ್ಲಿರುವನೋ ಹರಿ ಎಂಬ ಸಂಶಯವೇಕೆ?" ಹೀಗೆ ಎಣಿಕೆ ಹಾಕುತ್ತಿದ್ದಂತೆಯೇ ಅಪ್ಪುಕಳದ ಶಹರು ಬಂದೇ ಬಂತು. ಆ ತನಕ, ಸುಮಾರು ಒಂದೂವರೆ ತಾಸು, ಎಡೆಬಿಡದೆ ಮಿಡಿದಿದ್ದ ಎಂಜಿನ್ ಅಲ್ಲಿ ಇದ್ದಕ್ಕಿದ್ದಂತೆ ನಿಶ್ಶಬ್ದವಾಯಿತು. ಇನ್ನೂ ಇಳಿಜಾರೇ ಇದ್ದುದರಿಂದ ಜಟ್ಕಾ ಸ್ಟಾರ್ಟ್ ಪ್ರಯತ್ನಿಸಿದೆ. ಸ್ಟಾರ್ಟರ್ ಎಳೆದೆ. ಚೋಕ್ ಕೊಟ್ಟೆ, ಸ್ವಿಚ್ ಕೀಲಿ ಮೇಲೆ ಕೈ ಪರಡಿದೆ. ಆದರೆ ಎಂಜಿನ್ನಿಗೆ ಜೀವ ಬರಲಿಲ್ಲ. ಕಾರಿನಿಂದ ಇಳಿದೆ. ನನಗೆ ಸೊಂಟವಿದೆ, ಮಂಡಿಕೀಲುಗಳೂ ಇವೆ ಎಂದು ಚೆನ್ನಾಗಿ ತಿವಿದು ಹೇಳುವಂತೆ ಅವು ನೋಯುತ್ತಿದ್ದುವು. ಕಾರಿನ ಬಾನೆಟ್ ಮುಟ್ಟಿದೆ. ಅದು ಕಾದು ಕರಗಲು ಸನ್ನದ್ಧವಾಗಿದ್ದ ಕಬ್ಬಿಣವಾಗಿತ್ತು. ಮಳೆಯ ನಿರಂತರ ಅಭಿಷೇಕವೂ ಅದರ ಕಾವನ್ನು ತಗ್ಗಿಸಿರಲಿಲ್ಲ.

ಉಳಿದಿದ್ದ ದೂರ ಕೇವಲ ಅರ್ಧ ಕಿಮೀ ಮಾತ್ರ. ನಡೆದೇ ಹೋದೆವು. ಅಲ್ಲಿಯ ವಠಾರದಲ್ಲಿ ನಾರಾಯಣ ಮಲಗಿದ್ದರೆ ಸರಿ, ಇಲ್ಲವಾದರೆ? ಈ ಯೋಚನೆ ಬೇಕಾಗಲಿಲ್ಲ. ನಾಯಿಗಳು ಬಗುಳಿದುವು, ಕೋಳಿಗಳು ಕೊಕ್ಕೊಕ್ಕೊಕ್ಕೋ ಕೂಗಿ ರಂಪ ಎಬ್ಬಿಸಿದುವು, ಹಂದಿಗಳು ಡುರುಕುತ್ತ ಎಡ್ಡ ತಿಡ್ಡ ಓಡಿದುವು. ಕಾಲ್ನಡೆಗಳು ಘೂಕಾರ ಮಾಡಿ ಮಲೆತುವು. ಒಕ್ಕಲಿನ ಗಂಡಸರು ಹೆಂಗಸರು ಲಾಂದ್ರ ಹಿಡಿದು ಹೊರಗೆ ಬಂದು ಬೊಬ್ಬೆ ಅಬ್ಬರಿಸಿದರು. ಯಾರೋ ಕಳ್ಳರು ಹಂದಿ ಕೋಳಿಗಳನ್ನು ಲಪಟಾಯಿಸಲು ಬಂದಿರಬೇಕೆಂದು ಅವರ ಊಹೆ. ಚಿಕ್ಕಮ್ಮ ಕೂಗಿ ಹೇಳಿದರು ತಾವು ಯಾರೆಂದು.
"ಓ ಅಮ್ಮಾ ನೀವಾ? ಏನು ಈ ಹೊತ್ತಿನಲ್ಲಿ? ಮನೇಲೆಲ್ಲಾ ಚೆನ್ನಾಗಿದ್ದಾರಾ?"
"ನಮ್ಮ ನಾರಾಯಣಸ್ವಾಮೀ. . .?"
ಕೂರಲಗಿನ ಮೇಲೆ ನಿಂತಿದ್ದೇವೆ. ಯಶಸ್ವಿಯಾಗಿ ದಾಟುತ್ತೇವೋ? ಸಿಗಿದು ಉದುರುತ್ತೇವೋ? ಒಕ್ಕಲಿನವರ ಉತ್ತರವನ್ನು ಅವಲಂಬಿಸಿದೆ.
"ನಾರಾಯಣಸ್ವಾಮೀ? ಬಂಗ್ಲೆಯೊಳಗೆ ಮಲಗಿದ್ದಾರಲ್ಲ!"

ಅಳುವ ಕಡಲೊಳು ತೇಲಿ ಬರುತಲಿದೆ
ನಗೆಯ ಹಾಯಿದೋಣಿ
ಆಶೆ ಬೂದಿ ತಳದಲ್ಲು ಕೆರಳುತಿವೆ
ಕಿಡಿಗಳೆನಿತೊ ಮರಳಿ
ಮುರಿದು ಬಿದ್ದ ಮನದ ಕೊರಡೊಳೂ
ಹೂವು ಹೂವು ಅರಳಿ
– ಗೋಪಾಲಕೃಷ್ಣ ಅಡಿಗ

ಬೆಂಗಳೂರಿನಲ್ಲಿ ನವ ಅರುಣೋದಯ
ಅಧ್ಯಾಯ ಮೂವತ್ತೊಂದು

೧೯೬೫ರ ಬೇಸಗೆ ರಜೆ ಆರಂಭದಲ್ಲೇ ನಾನು ಬೆಂಗಳೂರು ನಿವಾಸಿಯಾದುದು ಎಲ್ಲ ರೀತಿಗಳಲ್ಲಿಯೂ ಅನುಕೂಲವಾಯಿತು: ಮಕ್ಕಳ ಶಿಕ್ಷಣ, ಮಹಾನಗರದ ಬಿರುಸು ಬದುಕಿಗೆ ನಮ್ಮ ದೈನಂದಿನ ಚಟುವಟಿಕೆಗಳ ಹೊಂದಾಣಿಕೆ, ನನ್ನ ಸಂಗೀತಾಸಕ್ತಿಯ ಪೋಷಣೆ ಮುಂತಾದವು. ಕಾಲೇಜಿನ ಹೆಸರು Government Arts and Science College, ಸಂಕ್ಷೇಪವಾಗಿ GAS College, ಕಟಕಿಗಳ ಮಾತಿನಲ್ಲಿ ಗ್ಯಾಸ್ ಕಾಲೇಜ್! ಅಂದಾಜು ೨೦೦೦ ವಿದ್ಯಾರ್ಥಿಗಳು, ಸುಮಾರು ೧೨೦ ಮಂದಿ ಉಪನ್ಯಾಸಕರು ಮತ್ತು ಇತರ ಸಿಬ್ಬಂದಿ, ಇದರ ವ್ಯಾಪ್ತಿ 'ಕಾವೇರಿಯಿಂದಮಾ ಗೋದಾವರಿ'ವರೆಗೆ ಹಬ್ಬಿತ್ತು: ಎದುರಿಗೆ ವಿಧಾನವೀಥಿ, ಹಿಂದಕ್ಕೆ ನೃಪತುಂಗಮಾರ್ಗ, ಎಡಕ್ಕೆ ಜಿಲ್ಲಾ ನ್ಯಾಯಾಲಯ ಮತ್ತು ಬಲಕ್ಕೆ ವಿಶ್ವವಿದ್ಯಾಲಯ ಎಂಜಿನಿಯರಿಂಗ್ ಕಾಲೇಜ್. ಶುದ್ಧ ಹಳ್ಳಿ ಮನೋಧರ್ಮದವನಾದ ನನಗೆ ಈ 'ದಿಲ್ಲಿ'ಯಲ್ಲಿ ಮೊದಲು ಮೂಡಿದ್ದು ಭಯ. ಆದರೆ ಈಸಲೇ ಬೇಕು, ಮತ್ತು ಈಸಿ ಜೈಸಲೇ ಬೇಕಲ್ಲವೇ?



ಪ್ರಾಂಶುಪಾಲ ಆರ್.ಆರ್. ಉಮರ್ಜಿಯವರ ಎದುರು ಮೊದಲ ಬಾರಿಗೆ ಕುಳಿತು ನನ್ನ ಹಾಜರಿ ವರದಿ ಸಲ್ಲಿಸಿದಾಗ ಅವರಾಡಿದ ನುಡಿ ತುಂಬ ಉತ್ತೇಜಕವಾಗಿತ್ತು, "ನಿಮ್ಮ ವಿಚಾರ ಪೂರ್ತಿ ಮಾಹಿತಿ ತಿಳಿದು ಸಂತೋಷವಾಗಿದೆ. ಆರ್ಮಿಯಲ್ಲಿಯ ಉಚ್ಚ ಅಧಿಕಾರ ತೊರೆದು ಮತ್ತೆ ಶಿಕ್ಷಕ ವೃತ್ತಿಗೆ ಮರಳಿ ಬಂದಿರುವಿರಿ. ಈ ಕಾಲೇಜನ್ನು ಉನ್ನತ ಶೈಕ್ಷಣಿಕ ಮಟ್ಟಕ್ಕೆ ಒಯ್ಯುವಲ್ಲಿ ನಿಮ್ಮ ಅನುಭವ ಮತ್ತು ಸಕ್ರಿಯ ಪಾತ್ರ ಖಂಡಿತ ಉಪಯೋಗಕ್ಕೆ ಒದಗಲಿವೆ. ಹೊಸ ಯೋಜನೆಗಳಿಗೆ ಮುಕ್ತ ಸ್ವಾಗತವಿದೆ."

"ಮುಖ್ಯ ವೃತ್ತಿಗೆ ಸಂಬಂಧಿಸಿದ ಎಲ್ಲ ಹೊಣೆಗಳ ಜೊತೆಗೆ ಇತರ ಚಟುವಟಿಕೆಗಳಲ್ಲಿಯೂ ಭಾಗಿಯಾಗಬೇಕೆಂಬ ಬಯಕೆ ಇದೆ. ಏನು ಹಾದಿ?"

"ಇಂಗ್ಲಿಷ್ ಪ್ರಾಧ್ಯಾಪಕ ಎಚ್.ಜಿ. ಸೂರ್ಯನಾರಾಯಣರಾಯರನ್ನು ನೋಡಿ ಮುಂದಿನ ಯೋಜನೆ ತಯಾರಿಸಿ."

ಪ್ರಾಂಶುಪಾಲರ ಈ ಹರಕೆ ನುಡಿಗಳಿಂದ ಹುರುಪುಗೊಂಡು ಎಚ್‌ಜಿಎಸ್‌ರನ್ನು ಅವರ 'ಗುಹೆ'ಯಲ್ಲೇ ಕಂಡೆ. It was a case of love at first sight! ಪ್ರಥಮ ದರ್ಶನದಲ್ಲೇ ಪ್ರೇಮೋತ್ಸರ್ಜನೆ. ಹಿಂದೆ ಎನ್‌ಸಿಸಿಯಲ್ಲಿ ಬಾಳಿಗರ ಒಡನಾಟದಂತೆ ಇಲ್ಲಿ ಎಚ್‌ಜಿಎಸ್‌ರ ಸಾಹಚರ್ಯ ನನಗೊದಗಿದ್ದೊಂದು ವಿಶೇಷ ಯೋಗ. ಗೋಪಾಲಕೃಷ್ಣ ಅಡಿಗರ ಅಮರ ನುಡಿಗಳಲ್ಲಿ "ಅದೃಶ್ಯ ಲೋಕದ ಅನೂಹ್ಯ ರೂಪದ ಅನಂತ ಕಾಲದ ಯಾತ್ರಿಕರೇ! ಮಣ್ಣಿನ ಮನದಲಿ ಹೊನ್ನನೆ ಬೆಳೆಯುವ ಅಪೂರ್ವ ತೇಜದ ಮಾಂತ್ರಿಕರೇ!"

ತತ್ಪೂರ್ವ ನಾನು ಬಳ್ಳಾರಿಯಲ್ಲಿದ್ದಾಗ ಸೇನಾಜೀವನದ ಕೃತಕತೆ ಮತ್ತು ಅಂತರ್ಗತ ಸೂಕ್ಷ್ಮ ಭ್ರಷ್ಟಾಚಾರಗಳಿಂದ ರೋಸಿಹೋಗಿ ಉಚ್ಚ ಅಧಿಕಾರಿಗಳಿಗೆ "ಈ ಹುದ್ದೆಯಲ್ಲಿ ಮುಂದುವರಿಯಲು ನನ್ನ ಮನಸ್ಸಾಕ್ಷಿ ಒಪ್ಪುತ್ತಿಲ್ಲ" ಎಂದು ನೇರ ಚುಚ್ಚುನುಡಿಯ ಪತ್ರ ಬರೆದು ಅದರ ಧೃತರಾಷ್ಟ್ರಾಲಿಂಗನದಿಂದ ವಿಮೋಚಿತನಾಗಿದ್ದೆ. ಬೆಂಗಳೂರಿನ ಎನ್‌ಸಿಸಿ ವರಿಷ್ಠರ ವಲಯದಲ್ಲಿ ಈ ಬಿಚ್ಚುನುಡಿ ಸಾಕಷ್ಟು ಬಿಸಿಬಿಸಿ ಚರ್ಚೆಗೆ ಗ್ರಾಸವಾಗಿತ್ತೆಂದು ಮುಂದೊಂದು ದಿನ ತಿಳಿಯಿತು. ನಮ್ಮ ಕಾಲೇಜಿಗೆಂದೇ ಒಂದು ಎನ್‌ಸಿಸಿ ತುಕ್ಕಡಿ ನಿಯೋಜಿತವಾಗಿತ್ತು: 12 Mysore Battalion NCC, ಸಂಕ್ಷೇಪವಾಗಿ '೧೨ನೇ ಮೈಸೂರು.' ಮೇಜರ್ ಎಂ.ಆರ್. ನಾರಾಯಣಸಿಂಗ್ ಎಂಬ ದ್ವಿತೀಯ ಮಹಾಯುದ್ಧದ ಯೋಧ ಇದರ ಕಮಾಂಡರ್. ಅನುಭವ, ದರ್ಜೆ, ದೃಷ್ಟಿ ವೈಶಾಲ್ಯ, ದೈಹಿಕ ಗಾತ್ರ ಒಂದೊಂದರಲ್ಲಿಯೂ ಇವರು ಬಲು ಎತ್ತರದ ವ್ಯಕ್ತಿ. ಇವರ ಆಡಳಿತಾಧಿಕಾರಿ ನನ್ನ ಮಿತ್ರ ಕ್ಯಾಪ್ಟನ್ ಎಚ್.ಎನ್. ಅಶ್ವತ್ಥನಾರಾಯಣ, ಕಾಲೇಜ್ ಸೇವೆಯಿಂದ ಪೂರ್ಣಕಾಲೀನ ಎನ್‌ಸಿಸಿ ಅಧಿಕಾರಿಯಾಗಿ ಹೋದವರು. ಅಶ್ವತ್ಥರನ್ನು ನೋಡಲೆಂದು ಅವರ ಕಚೇರಿಗೆ ಹೋದೆ. ಬಳ್ಳಾರಿಯಲ್ಲಿದ್ದಾಗ ಹಿಂದೊಮ್ಮೆ ಪರಿಚಯವಾಗಿದ್ದ ನಾರಾಯಣಸಿಂಗ್‌ರಿಗೂ ಸೌಹಾರ್ದ ಭೇಟಿ ನೀಡಿದೆ.

"ನಾನೇ ನಿಮ್ಮನ್ನು ಬಂದು ನೋಡಬೇಕೆಂದಿದ್ದೆ. ಎರಡನೇ ಯೋಚನೆ ಮಾಡದೆ ನೀವು ನಮ್ಮ ೧೨ನೇ ಮೈಸೂರಿಗೆ ಹಿರಿಯ ಭಾಗಕಾಲೀನ ಎನ್‌ಸಿಸಿ ಅಧಿಕಾರಿಯಾಗಿ ಸೇರಲು ದಯವಿಟ್ಟು ಸಮ್ಮತಿಸಬೇಕು. ದೇಶಕಟ್ಟುವ ಈ ಪವಿತ್ರ ಕರ್ತವ್ಯದಲ್ಲಿ ನಾವಿಬ್ಬರು ನಾರಾಯಣರ ಜೊತೆಗೆ ನೀವು ಮೂರನೆಯ ನಾರಾಯಣರಾಗಿ ಸೇವಾನಿರತರಾಗಬೇಕು." ಸಿಂಗ್‌ರ ಕಳಕಳಿ, ಅಶ್ವತ್ಥರ ಒತ್ತಾಯ ಮತ್ತು ಅಯಾಚಿತವಾಗಿ ನನ್ನೆದುರು ತೆರೆದುಕೊಂಡಿದ್ದ ಹೊಸ ಹಸುರು ಎಲ್ಲ ಸೇರಿ ಆ ಗಳಿಗೆ ನಾನು ಮತ್ತೆ ಕಪ್ಪಕ್ಕೆ ಕೆಡೆದೆ? ಅಥವಾ ಗಲ್ಲು ಕಂಬಕ್ಕೆ ಕೊರಳು ಒಡ್ಡಿದೆ? ಇಲ್ಲ. ಇದು ಮನುಕುಲದ "ದಾರಿ ಯಾವುದಯ್ಯಾ ವೈಕುಂಠಕೆ" ಎಂಬ ಚಿರಂತನ ಪ್ರಶ್ನೆಗೆ ಉತ್ತರವಿತ್ತಿತೆಂದು ಆಗ ನನಗೆ ಗೊತ್ತಿರಲಿಲ್ಲ. 'ಮುಗಿಯದ ಪಯಣ'ದ ಇನ್ನೊಂದು ಸೋಪಾನದ ಆರಂಭವದು.

ಆ ನಾಲ್ಕು ವರ್ಷಗಳಂದು, ೧೯೬೫–೬೯, ನಾರಾಯಣತ್ರಯರು ಎನ್‌ಸಿಸಿಯಲ್ಲಿ ಏನು ಸಾಧಿಸಿದರೆಂಬುದರ ವಿವರಗಳನ್ನು ತಿಳಿಯಲು ಓದಿ 'ಎನ್‌ಸಿಸಿ ದಿನಗಳು' ಪುಸ್ತಕ. ಒಂದು ನಿದರ್ಶನ ಮುಂದಿನ ಕೆಲವು ಅಧ್ಯಾಯಗಳ ವಸ್ತು.

ಒರತೆಯ ಉಗಮ

(ಭೌತ ಶಿಖರಾರೋಹಣ)
ಅಧ್ಯಾಯ ಮೂವತ್ತೆರಡು

ಬೆಂಗಳೂರಿನ ಸರಕಾರೀ ಕಾಲೇಜಿನ ವಿದ್ಯಾರ್ಥಿಗಳಿಗೆ ಎನ್‌ಸಿಸಿ ಶಿಕ್ಷಣವೀಯುವ ಸಂಸ್ಥೆಯ ಹೆಸರು ೧೨ನೇ ಮೈಸೂರು ಬೆಟಾಲಿಯನ್ ಎನ್‌ಸಿಸಿ ಎಂದು ಹಿಂದೆ ಹೇಳಿದ್ದೇನೆ. ಸುಮಾರು ೧೨೦೦ ಕ್ಯಾಡೆಟ್ಟುಗಳಿರುವ ಈ ಬೆಟಾಲಿಯನ್ ದಕ್ಷ ಮತ್ತು ಸಮರ್ಥ ವ್ಯವಹಾರಕ್ಕೆ ಮತ್ತು ನವಸಾಹಸ ಪ್ರದರ್ಶನಕ್ಕೆ ರಾಜ್ಯದಲ್ಲಿಯೇ ಪ್ರಸಿದ್ಧವಾಗಿತ್ತು. ಕಾಲೇಜು ಮತ್ತು ಎನ್‌ಸಿಸಿ ಸಂಸ್ಥೆ ಇವುಗಳ ಅಧಿಕಾರಿಗಳ ಸುಮಧುರ ಬಾಂಧವ್ಯ ಸಹಕಾರಗಳಿಂದ ವಿದ್ಯಾರ್ಥಿಗಳ ಸರ್ವಾಂಗೀಣ ಪ್ರಗತಿ ಸಾಧ್ಯವಾಗಿತ್ತು.

ಈ ಬೆಟಾಲಿಯನ್ನಿನಲ್ಲಿ ವಿವಿಧ ಅಖಿಲ ಭಾರತೀಯ ಎನ್‌ಸಿಸಿ ಕ್ಯಾಂಪುಗಳಿಗೆ ಹೋಗಿ ಶಿಕ್ಷಣ ಪಡೆದು ವಿಜಯಶಾಲಿಗಳಾಗಿ ಕೀರ್ತಿ ತಂದ ಕ್ಯಾಡೆಟ್ಟುಗಳು ಬಲುಮಂದಿ ಇದ್ದರು. ಇಂಥ ಕ್ಯಾಂಪುಗಳಲ್ಲಿ ಸುಪ್ರಸಿದ್ಧವಾದದ್ದು ಡಾರ್ಜಿಲಿಂಗ್ ಮತ್ತು ಮನಾಲಿಯಲ್ಲಿಯ ಹಿಮಾಲಯ ಪರ್ವತಾರೋಹಣ ಸಂಸ್ಥೆಗಳು ನಡೆಸುವ ಪರ್ವತಾರೋಹಣ ಶಿಬಿರಗಳು. ನಮ್ಮ ಬೆಟಾಲಿಯನ್ನಿನಲ್ಲಿ, ಇಂಥ ಶಿಬಿರ ಭಾಗಿಗಳಾಗಿ ಮರಳಿದವರ ಸಂಖ್ಯೆ ಹತ್ತನ್ನು ಮೀರಿತ್ತು. ಇತರ ಯಾವ ಬೆಟಾಲಿಯನ್ನಿನಲ್ಲೂ ಇಷ್ಟೊಂದು ಪ್ರಮಾಣದಲ್ಲಿ ಕ್ಯಾಡೆಟ್ಟುಗಳು ಕೇಂದ್ರೀಕೃತವಾಗಿರಲಿಲ್ಲ. ಇವರೆಲ್ಲರೂ ಚೈತನ್ಯದ ಬುಗ್ಗೆಗಳು. ಇವರು ತಮ್ಮ ಸಾಹಸ ಪ್ರದರ್ಶನ ಕತೆಗಳನ್ನು ರಂಗುರಂಗಾಗಿ ವರ್ಣಿಸುತ್ತಿದ್ದಾಗ ಸೋಮಾರಿಗಳೂ ನಿದ್ದೆಗಣ್ಣರೂ ಕಿವಿನಿಮಿರಿಸಿ ಆಲಿಸುತ್ತಿದ್ದರು. ಹಿಮಾಲಯದ ಪ್ರಕೃತಿ ಸೌಂದರ್ಯ, ಹಿಮಗಡ್ಡೆಗಳ ಚಿರನೂತನ ರುದ್ರ ಗಾಂಭೀರ್ಯ, ಆ ಪ್ರಪಾತಗಳ ಗಭೀರತೆ, ಅವನ್ನು ಇಳಿದು ಏರಿ ಎತ್ತರ ಎತ್ತರಕ್ಕೆ ಹೋಗುವ ಪ್ರತಾಪ, ಪ್ರಪಾತಗಳನ್ನು ನೈಲಾನ್ ಹಗ್ಗಗಳ ಸಹಾಯದಿಂದ ಜಿಗಿದಿಳಿಯುವ ರೋಮಾಂಚಕ ಅನುಭವ – ಒಂದೇ ಎರಡೇ – ಹಿಮಾಲಯ ಎಷ್ಟು ಎತ್ತರವೊ ಬಿತ್ತರವೊ ಅಲ್ಲಿಯ ಅನುಭವವೂ ಅಷ್ಟೇ.

"ನಾನೆಂದು ಅಲ್ಲಿಗೆ ಹೋಗುವುದು?" ಈ ಪ್ರಶ್ನೆ ಪ್ರತಿಯೊಬ್ಬನ ಮುಂದೆಯೂ ಎದ್ದು ನಿಲ್ಲುತ್ತಿತ್ತು. ಆದರೆ ನಮಗೆ ದೊರೆಯುತ್ತಿದ್ದ ಅವಕಾಶ ಮತ್ತು ಸ್ಥಾನಗಳು ವರ್ಷಕ್ಕೆ ಮೂರು ಅಥವಾ ನಾಲ್ಕು. ಹೋಗಲು ಬಯಸುತ್ತಿದ್ದವರ ಸಂಖ್ಯೆ ನೂರಾರು. ಏನೇ ಇರಲಿ, ಸಾಹಸಪ್ರವೃತ್ತಿ ನಮ್ಮ ಹುಡುಗರಲ್ಲಿ ಭದ್ರವಾಗಿ ಬೇರೂರಿತ್ತು. ಪಂಗುಗಳೂ ಗಿರಿಲಂಘನ ಮಾಡಲು ಉತ್ಸುಕರಾಗಿದ್ದರು! 'ಪಂಗುಂ ಲಂಘಯತೇ ಗಿರಿಂ!'

ಆಡಳಿತೆಯ ಮತ್ತು ಶಿಕ್ಷಣದ ಸೌಕರ್ಯಕ್ಕಾಗಿ ನಮ್ಮ ಬೆಟಾಲಿಯನ್ನನ್ನು ಎಂಟು ತಂಡಗಳಾಗಿ ವಿಂಗಡಿಸಲಾಗಿತ್ತು. ಪ್ರತಿಯೊಂದು ತಂಡದ ಹೆಸರು ಕಂಪೆನಿ. ಕಂಪೆನಿಯ ಮೇಲಧಿಕಾರಿ ಒಬ್ಬ ಎನ್‌ಸಿಸಿ ಆಫೀಸರ್ (ಈತ ಕಾಲೇಜಿನಲ್ಲಿ ಲೆಕ್ಚರರೂ ಹೌದು). ಇವರೆಲ್ಲರ ಮೇಲೆ ಬೆಟಾಲಿಯನ್ ಕಮಾಂಡಿಂಗ್ ಆಫೀಸರ್. ಇವರು ಸೈನ್ಯದಿಂದ ಈ ಕೆಲಸ ನಡೆಸಲು ನಿಯೋಜಿತರಾಗಿ ಬಂದವರು.

ಪ್ರತಿ ಆರೋಗ್ಯವಂತ ಕಾಲೇಜು ವಿದ್ಯಾರ್ಥಿಯೂ ಕಡ್ಡಾಯವಾಗಿ ಎನ್‌ಸಿಸಿ ಶಿಕ್ಷಣ ಪಡೆಯಲೇಬೇಕೆಂಬುದು ಅಂದಿನ (೧೯೬೬) ನೀತಿ. ಕಡ್ಡಾಯದ ಗುಡಿಯಲ್ಲಿ ಮೊದಲ ಬಲಿ ಕುತೂಹಲ. ಮನುಷ್ಯ ಅಲ್ಲಿ ಯಾಂತ್ರಿಕತೆಯ ನೀರಸ ಕ್ರಿಯೆ ನಡೆಸಲು ತೊಡಗುತ್ತಾನೆ. ಪೆರೇಡಿನಲ್ಲಿ ನನ್ನ ಅನುಭವ ಇದು – ಕುತೂಹಲವಿರುವ ಕೆಲವರನ್ನು ಇಲ್ಲದಿರುವ ಹಲವರ

ಜತೆಗೆ ಸೇರಿಸಿ ಶಿಕ್ಷಣವೀಯುವಾಗ ಇಲ್ಲದವರು ಇದ್ದವರನ್ನೂ ಕೆಡಿಸುತ್ತಿದ್ದ ಸಂದರ್ಭಗಳೇ ಹೆಚ್ಚು. ಗ್ರೆಷಾಮ್ ನಿಯಮ ಪ್ರತ್ಯಕ್ಷವಾಗುತ್ತಿತ್ತು. "ಕಪ್ಪು ಹಣ ಬಿಳಿ ಹಣವನ್ನು ಮಲಿನಗೊಳಿಸುತ್ತದೆ." ಆದ್ದರಿಂದ ಕುತೂಹಲಿಗಳಿಗೆ ಪ್ರತ್ಯೇಕವಾದ, ಕಡ್ಡಾಯವಲ್ಲದ, ವಿಶೇಷ ಶಿಕ್ಷಣವೀಯಲು ಒಂದು ಸ್ಪೆಶಲ್ ಕಂಪೆನಿ ತೊಡಗಬೇಕು ಎಂದು ಮೇಲಧಿಕಾರಿಗಳು ಮನಗಂಡರು. ಹೀಗೆ ನಮ್ಮ ಬೆಟಾಲಿಯನ್ನಿನಲ್ಲಿಯೂ ಸ್ಪೆಶಲ್ ಕಂಪೆನಿ ಆರಂಭವಾಯಿತು. ಸ್ವಂತ ಇಚ್ಛೆಯಿಂದ ಬರುವವರಿಗೆ ಮಾತ್ರ ಇಲ್ಲಿ ಪ್ರವೇಶ. ಇಲ್ಲಿಯ ಶಿಕ್ಷಣವೂ ಹೊಸತು, ಹುಡುಗರ ಸಹಜ ಸಾಹಸ ಪ್ರವೃತ್ತಿಯನ್ನು ವಿಕಾಸಗೊಳಿಸಲು ಪ್ರೇರಕವಾಗುವಂಥದು.

ಪ್ರತಿ ಆದಿತ್ಯವಾರ ಬೆಳಗ್ಗೆ ಪೆರೇಡು. ಹುಡುಗರೇನೋ ಬಂದರು. ಆದರೆ ಅವರಿಗೆ ಕುತೂಹಲಜನಕ ನೂತನ ಉಪಯುಕ್ತ ಶಿಕ್ಷಣ ಏನನ್ನು ನೀಡುವುದು? ಇದು ನಮ್ಮ ಎದುರಿದ್ದ ದೊಡ್ಡ ಪ್ರಶ್ನೆ. ಬೇಡ ಎಂದು ಅವರನ್ನು ನಿವಾರಿಸುವುದು ಬಲು ಸುಲಭ; ಬೇಕು ಎಂದು ನಡೆಸುವುದು ಪ್ರಯಾಸಕರ. ಸ್ವಲ್ಪ ಕಾಲ ಪೌರ ರಕ್ಷಣೆಯನ್ನು ಬೋಧಿಸಿದೆವು. ಆದರೆ ಏಕೋ ಜೀವಸ್ಪಂದನವಾಗಲಿಲ್ಲ. ಒಂದೆರಡು ವಾರ ಬಯಲು ಗುಡ್ಡ ಅಲೆದು ಬಂದೆವು. ಆದರೆ ಎಲ್ಲೆಲ್ಲಿಯೂ ಜನಪ್ರವಾಹ, ಕೊಳಕು ಹರಿಯುತ್ತಿದ್ದ ನಗರದಲ್ಲಿ ಇದೂ ರುಚಿಸಲಿಲ್ಲ. ಕ್ರಮರಹಿತ ಅಲೆದಾಟ ದಣಿವಿಗೆ ಆಹ್ವಾನ. ಇಷ್ಟಾಗುವಾಗ ಆಗಸ್ಟ್ ೧೯೬೬ ಉರುಳುತ್ತಿತ್ತು. ನಮ್ಮ ಹಿರಿಯ ಹುಡುಗರು ಪಿಂಟೋ, ಬಾಬಾ, ಶ್ರೀಧರನ್ ಮೊದಲಾದವರು ಒಂದು ಬೆಳಗ್ಗೆ ನನ್ನನ್ನು ಕಂಡು ಸೂಚಿಸಿದರು, "ನಮ್ಮ ಸ್ಪೆಶಲ್ ಕಂಪೆನಿ ಶಿಲಾರೋಹಣ ಶಿಲಾವರೋಹಣ ಕಲೆಯನ್ನೇಕೆ ಕಲಿಸಬಾರದು?" ಇಂಗ್ಲಿಷಿನಲ್ಲಿ ಮಾತಾಡಿದ ಅವರು ಬಳಸಿದ ಪದಗಳು ದೊಡ್ಡವು: rock climbing and rock rappling. ಸರಳ ಕನ್ನಡದಲ್ಲಿ ಬಂಡೆ ಏರುವುದು, ಬಂಡೆ ಇಳಿಯುವುದು. ಬಂಡೆಯೂರಿನವ ನಾನು. ದಿನಬೆಳಗಾದರೆ ಎರಡು ಬಂಡೆಗಳ ಮಂಡೆ ಏರಿ ತುಳಿದು ಇಳಿಯದೇ ಒಂದೆಡೆಯಿಂದ ಇನ್ನೊಂದೆಡೆಗೆ ಹೋಗುವಂತಿರಲಿಲ್ಲ. ಅಷ್ಟೇಕೆ ಮನೆ ಹಂಡೆಗೆ ನೀರು ತರಬೇಕಾದರೆ ಬಂಡೆಯ ಬುಡಕ್ಕೆ ಇಳಿಯಲೇಬೇಕಿತ್ತು.

"ಅದೂ ಒಂದು ಕಲೆಯೇ?" ಎಂದು ಸ್ವಾಭಾವಿಕ ಆಶ್ಚರ್ಯದಿಂದ ಕೇಳಿದೆ.

"ಈ ಆದಿತ್ಯವಾರ ಪ್ರಯತ್ನಿಸೋಣ ಸರ್. ನಾವು ಕೆಲವರು ಹಿಮಾಲಯದಲ್ಲಿ ಕಲಿತವರಿದ್ದೇವೆ. ನಮಗೂ ಒಂದು ರಿಫ್ರೆಶರ್ ಆದ ಹಾಗಾಯಿತು" ಎಂದು ಪಿಂಟೋ ಹೇಳಿದ.

"ಯಾವುದನ್ನೂ ನಾವು ಕ್ರಮಬದ್ಧವಾಗಿ ಮಾಡಬೇಕು. ಆದ್ದರಿಂದ ಯಾರಿಗೆಲ್ಲ ಈ ವಿಚಾರದಲ್ಲಿ ಕುತೂಹಲವಿದೆಯೋ ಅವರೆಲ್ಲ ನಾಳೆ ಸಾಯಂಕಾಲ ಕಾಲೇಜಿನ ಹಿಂದಿರುವ ಕಲ್ಲು ಬಂಡೆಗಳ ಮೇಲೆ ಸಭೆ ಸೇರಬೇಕು. ಮುಂದಿನ ಮಾರ್ಗ ಯೋಚಿಸೋಣ" ಎಂದೆ.

ಮರುದಿನ ಸಾಯಂಕಾಲ ಬಂಡೆಗಳ ಮೇಲೆ ಕುಳಿತವರು ನಾವೊಂದಿಪ್ಪತ್ತು ಜನ. ಮಾತುಭಾರಿ ಪಿಂಟೋ ಶಿಲಾರೋಹಣವನ್ನು ಕುರಿತು ಪದ ಉರುಳಿಸಿದ. ಉಳಿದವರಿಗೆ ಅರ್ಥವಾಯಿತೋ ಇಲ್ಲವೋ ನನಗಂತೂ ಆಗಲಿಲ್ಲ. ತಲೆದೂಗಿದರು. ಏನಾದರೂ ಮಾಡಲೇಬೇಕೆಂಬ ಉತ್ಸಾಹದ ಅಮಲಿನಲ್ಲಿ ಅವರಿಗೆ ಹಿಮಾಲಯ ಪರ್ವತವೊಂದೇ ಎಲ್ಲ ಮಾತಿನ ಹಿನ್ನೆಲೆಯಲ್ಲಿಯೂ ಕಾಣುತ್ತಿತ್ತು. ಅಂತೂ ಮುಂದಿನ ಆದಿತ್ಯವಾರದಿಂದ ನಾವು ಶಿಲಾರೋಹಣ ಸಾಹಸ ಕಾರ್ಯ ತೊಡಗುವುದೆಂದು ನಿರ್ಧರಿಸಿದೆವು.

"ಹಾಗಾದರೆ" ಎಂದು ನಾನು ಸಮಾರೋಪ ಭಾಷಣ ಬಿಗಿದೆ, "ಮುಂದಿನ ಆದಿತ್ಯವಾರ ಬೆಳಗ್ಗೆ ೬.೪೫ ಗಂಟೆಗೆ ನಾವಿಲ್ಲಿ ಸೇರುವುದು, ಮುಂದುವರಿಸುವುದು. ಪಿಂಟೋ, ಬಾಬಾ, ಶ್ರೀಧರನ್ ಮುಂದಾಳುಗಳು. ಉಳಿದವರು ಅವರ ಅನುಯಾಯಿಗಳು. ನಾನು ನಿಮ್ಮೆಲ್ಲರ ಹಿಂದೆ; ಮುಂದೆ ಅಲ್ಲ. ಇಲ್ಲಿ ಸೇರಿರುವ ನಾವೆಲ್ಲರೂ ಸ್ವಯಂಸ್ಫೂರ್ತಿಯಿಂದ ಬಂದವರು ಎಂದು ಚೆನ್ನಾಗಿ ನೆನಪಿನಲ್ಲಿರಲಿ. ಆದ್ದರಿಂದ ನಮ್ಮ ಶಿಸ್ತು, ವರ್ತನೆ ಸದಾ ೦–೧ಆಗಿರಬೇಕು."

ಇದಕ್ಕೆ ಮೊದಲು ನಾನು ನಮ್ಮ ಬೆಟಾಲಿಯನ್ ಮುಖ್ಯಾಧಿಕಾರಿ ಮೇಜರ್ ನಾರಾಯಣ್ ಸಿಂಗ್ ಅವರಿಗೆ ಸ್ಥೂಲವಾಗಿ ಇದರ ವಿಚಾರ ತಿಳಿಸಿದ್ದೆ. "ಬಹಳ ಸಂತೋಷ. ನನ್ನ ಬೆಂಬಲ ಸದಾ ಇದೆ. ಆದರೆ ಸುವ್ಯವಸ್ಥಿತವಾಗಿ ಮುಂದುವರಿಯಬೇಕು. ವೈಮಾನಿಕ ತಿಳಿಯದ ಎತ್ತರದಲ್ಲಿ ಹಾರುವಾಗ ಹೇಗೆ ಹೋಗುತ್ತಾನೆ? ಪ್ರತಿ ಅಂಗುಲದಲ್ಲಿಯೂ ಹೊಸ ರೋಮಾಂಚಕ ಅನುಭವವಿರುವುದರ ಜೊತೆಗೆ ಅಪಾಯದ ತೀವ್ರತೆಯೂ ಏರಿರುವುದು ಎಂದು ತಿಳಿದು ಮುಂದೆ ನುಗ್ಗುತ್ತಾನೆ. ನಾವು ಹೊಸದಾರಿ ತುಳಿಯುವಾಗ, ಎನ್‌ಸಿಸಿಯಲ್ಲಿ ಹೊಸ ಸಂಪ್ರದಾಯ ಸ್ಥಾಪಿಸುವಾಗ ನಮ್ಮ ಒಂದು ಪುಟ್ಟ ತಪ್ಪು ಕೂಡ ಇಡೀ ಉದ್ದೇಶವನ್ನು ನಾಶಮಾಡಿಬಿಡಬಹುದು, ಮಾತ್ರವಲ್ಲ, ಭವಿಷ್ಯದಲ್ಲಿ ಬೇರೆ ಯಾರೂ ಇಂಥ ಸಾಹಸಕ್ಕೆ ಪುನಃ ತೊಡಗದಂತೆ ದೊಡ್ಡ ಆತಂಕವಾಗಿಯೂ ಪರಿಣಮಿಸಬಹುದು" ಎಂದು ಎಚ್ಚರಿಕೆಯ ಮಾತಾಡಿದ್ದರು.

ಸಾಹಸಗಳ ಮೊತ್ತವೇ ಅವರ ಜೀವನ. ಅರವತ್ತೈದು ಪ್ರಾಯ ಮೀರಿದ ಈ ದೀರ್ಘ ಆಜಾನುಬಾಹು ವ್ಯಕ್ತಿತ್ವದ ಕಣಕಣವೂ ಮಿಲಿಟರಿಯ ಶಿಕ್ಷಣ ರಂಗದಲ್ಲಿ, ಯುದ್ಧ ಕ್ಷೇತ್ರದಲ್ಲಿ, ಹಿಮಾಲಯದ ಎತ್ತರದಲ್ಲಿ, ಬರ್ಮಾ ಮಲಯಗಳ ದಟ್ಟ ಕಾಡುಗಳಲ್ಲಿ ಪ್ರದರ್ಶಿಸಿದ ದೈಹಿಕ ಮತ್ತು ಮಾನಸಿಕ ಸಾಹಸ ಕಾರ್ಯಗಳಿಗೆ ಸಾಕ್ಷಿಯಾಗಿತ್ತು. ಎರಡನೆಯ ಮಹಾಯುದ್ಧ, ಅನಂತರ ಹೈದರಾಬಾದ್ ಪೊಲೀಸ್ ಆಚರಣೆ ಇವುಗಳಲ್ಲಿ ಭಾಗವಹಿಸಿದ ವೀರರಿವರು. ಹೊಸಪೇಟೆಯಿಂದ ಮುಂದೆ ತುಂಗಭದ್ರೆಗೆ ಇರುವ ರೈಲ್ವೇ ಸೇತುವೆಯನ್ನು ಇವರು ಪೊಲೀಸ್ ಆಚರಣೆ ಸಂದರ್ಭದಲ್ಲಿ ರಕ್ಷಿಸಿದ ಸಾಹಸ ಕೇಳಿದವರಿಗೆ ಮರೆಯಲಾಗದ ವಿದ್ಯುದನುಭವ.
"ಸೈನಿಕರಾದರೆ ಅದೇ ಅವರ ವೃತ್ತಿ. ಆದ್ದರಿಂದ ಎಷ್ಟೋ ಸಂದರ್ಭಗಳಲ್ಲಿ ಜನ ನಷ್ಟವಾದರೂ ನಾವು ಗುರಿ ಸಾಧಿಸಲೇಬೇಕು ಎಂಬ ನಿರ್ಧಾರ ತೆಗೆದುಕೊಳ್ಳಬೇಕಾಗುವುದು. ಕ್ಯಾಡೆಟ್ಟುಗಳು ಸೈನಿಕರಲ್ಲ. ಇಲ್ಲಿ ಸಾಹಸಪ್ರದರ್ಶನವಾಗಬೇಕು. ಆದರೆ ಯಾವ ಅಪಾಯವನ್ನೂ ನಾವು ಎದುರಿಸಲು ತಯಾರಿಲ್ಲ." ಇದು ಅವರ ತರ್ಕಸರಣಿ.

ಕಲ್ಲು ಕೊನರಿತು
ಅಧ್ಯಾಯ ಮೂವತ್ಮೂರು

ಮುಂದಿನ ಆದಿತ್ಯವಾರ. ಬೆಳಗ್ಗಿನ ೬.೪೫ ಗಂಟೆ. ನಾವೆಲ್ಲರೂ ಸುಮಾರು ಹದಿನೈದು ಮಂದಿ ಕಾಲೇಜಿನ ಹಿಂಬದಿಯಲ್ಲಿ ಸೇರಿದೆವು. ಮಳೆಗಾಳಿ ಬೀಸಿ ನಮಗೆ ನವಚೇತನ ಊಡುತ್ತಿತ್ತು. ಆದರೆ ೭ ಗಂಟೆಯಾದರೂ ನಾಯಕತ್ರಯರ ಸುಳಿವೇ ಇಲ್ಲ. ಕನ್ನಡಿಗರು ಆರಂಭಶೂರರೇ? ಆರಂಭವೇ ಆಗಲಿಲ್ಲವಲ್ಲ. ಕಾರಣವನ್ನು ಊಹಿಸಲು ನನಗೆ ಕಷ್ಟವಾಗಲಿಲ್ಲ. ನಮ್ಮ ಹಿಂದಿನ ಕಲ್ಲ ಮೇಲಿನ ಸಭೆಯಾದ ಮರುದಿವಸ ಹಿಮಾಲಯದ ಪರ್ವತಾರೋಹಣ ಶಿಬಿರ ಸೇರಲು ಒಬ್ಬ ಕ್ಯಾಡೆಟ್ಟನನ್ನು ಆಯ್ದು ಕಳಿಸಬೇಕೆಂದು ನನಗೆ ಆದೇಶ ಬಂದಿತು. ಶ್ರೀಧರನ್ ತನ್ನನ್ನು ಆಯಬೇಕೆಂದು ಕೋರಿಕೆ ಸಲ್ಲಿಸಿದ್ದ. ಆದರೆ ನಾನವನಿಗೆ ಸ್ಪಷ್ಟವಾಗಿ ನನ್ನ ನಿಲವನ್ನು ಹೇಳಿದ್ದೆ. "ನೀನು ಬಿಎಸ್ಸಿ ಕೊನೆಯ ವರ್ಷದಲ್ಲಿದ್ದೀಯೆ. ನನ್ನ ವಿದ್ಯಾರ್ಥಿ ಕೂಡ. ತಿಂಗಳು ನಾಲ್ಕು ದಿನ ಪಾಠ ಬಿಟ್ಟು ಬಲುದೂರ ಹೋಗುವುದು ಶ್ರೇಯಸ್ಕರ ಅಲ್ಲ. ಅದೂ ಅಲ್ಲದೆ ಮುಂದಿನ ವರ್ಷ ನೀನು ನಮ್ಮೊಡನೆ ಇಲ್ಲದಿರುವುದರಿಂದ ಇಂಥ ವಿಶೇಷ ಅಪೂರ್ವ ಶಿಕ್ಷಣ ಒಬ್ಬ ಜೂನಿಯರ್ ಹುಡುಗನಿಗೆ ಕೊಡಿಸುವುದು ಸರಿಯೆಂದು ತಿಳಿದಿದ್ದೇನೆ."

ಅವನಿಗೆ ಸ್ವಾಭಾವಿಕವಾಗಿಯೇ ಈ ವಾದ ಹಿತವಾಗಲಿಲ್ಲವೆಂದು ಅವನ ಮುಖಭಾವದಿಂದ ವ್ಯಕ್ತವಾಯಿತು. ಬಾಬಾ ಅವನ ಮಿತ್ರ. ಆದರೆ ಪಿಂಟೋನಿಗೇನಾಯಿತು? ಏನೇ ಇರಲಿ. ನಾವು ಹಿರಿಯರು ತೆಗೆದುಕೊಂಡ ನಿರ್ಧಾರ ಬೆಟಾಲಿಯನ್ನಿನ ಅಧಿಕೃತ ನಿರ್ಧಾರ. ಅದರ ಗೌರವ ಆ ನಿರ್ಧಾರವನ್ನು ಕಾರ್ಯಗತಗೊಳಿಸುವುದರಲ್ಲಿದೆ. ಎಡರು ತೊಡರುಗಳನ್ನು ನಾವು ಎದುರಿಸದಿದ್ದರೆ ಇನ್ನಾರು ಎದುರಿಸುವವರು? ಬಂದ ಹುಡುಗರನ್ನು ಕಟ್ಟಿಕೊಂಡು ನಾನೇ ಅಲೆದೆ. ಶಿಲಾರೋಹಣ ಅವರೋಹಣಗಳನ್ನು ಕುರಿತು ಒಂದು ಕಿರುಹೊತ್ತಗೆಯನ್ನು ಓದಿಕೊಂಡು ಹೋಗಿದ್ದುದು ಸ್ವಲ್ಪ ಪ್ರಯೋಜನ ನೀಡಿತು. ಲಾಲ್ ಬಾಗಿನ ಹೊರವಲಯದ ಕಡಿದಾದ ಬಂಡೆಗಳನ್ನು ಕ್ರಮಬದ್ಧವಾಗಿ ಏರಿ, ಇಳಿದು – ಅದಕ್ಕಿಂತ ಹೆಚ್ಚಾಗಿ ಕೈಕಾಲು ಮೈಗಳನ್ನು ಕಲ್ಲಿಗೆ ತರಿದುಕೊಂಡು – ಕಲ್ಲುಬಂಡೆ ಕಾಣುವಷ್ಟು ನುಣ್ಣಗಲ್ಲ, ಮೃದು ಖಂಡಿತ ಅಲ್ಲ ಎಂದು ಅರಿತುಕೊಂಡೆವು. ಗೆಲುವಿನ ಸೂಚನೆಯಿಂದ ಮರಳಿದೆವು.

ಸೋಮವಾರ ನಾನು ನಾಯಕತ್ರಯರನ್ನು ನೋಡಿದೆ. ಪಿಂಟೋನಿಗೆ ಬಹುಶಃ ಏಳಲು ತಡವಾಗಿರಬೇಕು. ಆದ್ದರಿಂದ ಬರದಿದ್ದುದಕ್ಕೆ ಸರಿಯಾದ ಕಾರಣ ಕೊಡದೇ "ಸಾರಿ ಸರ್. ಇನ್ನು ಮುಂದೆ ಹೀಗಾಗದು" ಎಂದ. ಅಂತೆಯೇ ನಡೆದುಕೊಂಡ. ಉಳಿದಿಬ್ಬರು, "ನಮಗೇನೋ ಮನಸ್ಸಿಗೆ ನೋವಾಯಿತು ಸರ್" ಎಂದು ಅರೆಹಲ್ಲು ಗೀರಿದರು. ನಾನು ಬಿರುಸಾಗಿಯೇ ಅಂದೆ "೧೨ನೇ ಮೈಸೂರು ನಮ್ಮೆಲ್ಲರಿಗಿಂತಲೂ ದೊಡ್ಡದು ಎಂದು ನಾವೆಲ್ಲರೂ ತಿಳಿದಿರತಕ್ಕದ್ದು. ಅದರ ನಿರ್ಧಾರ ಕಾರ್ಯಗತವಾಗಿಯೇ ಆಗುವುದು. ನಿಮ್ಮ ಕ್ರಮ ಸರಿಯಲ್ಲ."

ಮುಂದೆ ಎಂದೂ ಇಂಥ ಸನ್ನಿವೇಶ ಪುನರಾವರ್ತಿಸಲಿಲ್ಲ. ವಿದ್ಯಾರ್ಥಿಗಳೊಡನೆ ನಿಕಟ ಮತ್ತು ದೀರ್ಘಕಾಲದ ಸಂಬಂಧದಿಂದ ಒಂದು ವಿಚಾರ ಅರಿತಿದ್ದೇನೆ: ನಮ್ಮ ಧ್ಯೇಯ ಧೋರಣೆಗಳು ನ್ಯಾಯಸಮ್ಮತವಾಗಿ ಸ್ಪಷ್ಟವಾಗಿ ಇರಬೇಕು. ಅವುಗಳ ನಿರ್ವಹಣೆಯಲ್ಲಿ ಖಚಿತತೆ ದೃಢತೆ ಇರಬೇಕು. ಆಗ ಸಮಸ್ಯೆಗಳು ವೈಯಕ್ತಿಕ ಒಲವು ತಿರಸ್ಕಾರಗಳ ಸಮತಳದಿಂದ ಉನ್ನತ ಮಟ್ಟದಲ್ಲಿರುವ, ನಿಷ್ಪಕ್ಷಪಾತವಾಗಿ ಗುಣಾವಗುಣಗಳನ್ನು ನಿಷ್ಕರ್ಷೆ ಮಾಡುವ, ಉದಾತ್ತ ಸಮತಳಕ್ಕೆ ವರ್ಗಾಯಿಸಲ್ಪಡುವುವು. ಅಲ್ಲಿ ಪರಿಹಾರ ಸುಲಭ. ನಾವು ನಿರ್ಲಿಪ್ತರಾಗಿ ಉಳಿಯಬಹುದು.

ಮುಂದಿನ ಎರಡು ಮೂರು ಭಾನುವಾರ ಮುಗಿಯುವಾಗ ನಮ್ಮ ಹುಡುಗರ ಸಂಖ್ಯೆ ಮೂವತ್ತಕ್ಕೇರಿತು. ಇನ್ನೂ ಬರುವವರಿದ್ದರು. ಆದರೆ ಕೂಟದಲ್ಲಿ ಶಿಸ್ತು ಕಾಪಾಡಿಕೊಳ್ಳುವ ಉದ್ದೇಶದಿಂದ ಉಳಿದವರನ್ನು ಸೇರಿಸಿಕೊಳ್ಳಲಿಲ್ಲ. "೧೨ನೇ ಮೈಸೂರಿನ ಟೈಮ್ ಎಂದರೆ ರೆಡಿಯೋ ಟೈಮ್" ಎಂಬುದು ಹುಡುಗರಿಗೆ ಆ ಅಲ್ಪಾವಧಿಯಲ್ಲಿ ಚೆನ್ನಾಗಿ ಮನವರಿಕೆ ಆಯಿತು. ಪ್ರತಿ ಆದಿತ್ಯವಾರ ೭ ಗಂಟೆಗೆ ನಾವು ಹೊರಡಬೇಕು, ೧೫ ಮಿನಿಟು ಮೊದಲೇ ಕಾಲೇಜಿನ ಹಿಂದೆ ಸೇರಬೇಕು. ಈ ೧೫ ಮಿನಿಟಿನ ಅವಕಾಶ ಅನಿವಾರ್ಯ ಕಾರಣಗಳಿಂದ ತಡವಾಗಿ ಬರುವವರಿಗಾಗಿ ಮತ್ತು ನಮ್ಮ ಕಾರ್ಯಕ್ರಮವನ್ನು ಅಳವಡಿಸಿಕೊಳ್ಳಲಿಕ್ಕಾಗಿ. ಏಳು ಗಂಟೆಗೆ ಸರಿಯಾಗಿ ನಮ್ಮ ನಡಿಗೆ ತೊಡಗಿಯೇ ಬಿಡುತ್ತಿತ್ತು. ತಡವಾಗಿ ಬಂದವರಿಗೆ ಒಂದೇ ಉತ್ತರ, "ಸಾರಿ, ನೀವು ಮುಂದಿನವಾರ ಬನ್ನಿ."
"ಸೈಕಲ್ ಪಂಚರ್ ಆಯಿತು ಸರ್, ಬಸ್ ದೊರೆಯಲಿಲ್ಲ ಸರ್..."
"ನೀವು ಯಾಕೆ ತಡವಾಗಿ ಬಂದಿರಿ ಎಂಬುದನ್ನು ಸಮರ್ಥಿಸಲು ನೂರೆಂಟು ನಿಜ ಕಾರಣಗಳಿರಬಹುದು. ಇನ್ನೂ ಅಷ್ಟು ಕಾರಣಗಳನ್ನು ಸೃಷ್ಟಿಸಲು ನೀವು ಶಕ್ತರು ಎಂದು ನನಗೆ ತಿಳಿದಿದೆ. ಆದರೆ ಅವೆಲ್ಲವನ್ನೂ ನಿವಾರಿಸಿ ಕ್ಲುಪ್ತವೇಳೆಯಲ್ಲಿ ಬರುವುದರಲ್ಲಿಯೇ ನಿಮ್ಮ ಹಿರಿಮೆಯಿದೆ. ಮುಂದಿನ ವಾರ ಸರಿಯಾಗಿ ಬನ್ನಿ. ತಡವಾದರೆ ಬರಲೇಬೇಡಿ."

ಕಾಲನಿಷ್ಠೆಯ ಸಮಸ್ಯೆ ಮುಂದೆಂದೂ ನಮಗೆದುರಾಗಲಿಲ್ಲ. ಇಲ್ಲಿ ಎರಡು ವಿಚಾರ ಉಂಟು: ಒಂದು, ಅದರಿಂದ ಆತ್ಮಸಂಸ್ಕಾರವಾಗುವುದು; ಇನ್ನೊಂದು, ಅದು ನಾವು ಇತರರಿಗೆ, ಅವರ ಸಂವೇದನಾಶಕ್ತಿಗೆ ಪ್ರಕಟಿಸುವ ಗೌರವ, ನಮ್ಮ ಆಂತರಂಗಿಕ ಸಂಸ್ಕೃತಿಯ ಬಾಹಿರಂಗಿಕ ರೂಪ. ಜೀವನದ ಎಲ್ಲ ರಂಗಗಳಲ್ಲಿಯೂ ಇದು ಸ್ವಾಭಾವಿಕವಾಗಿಯೇ ಬರುವಂತಾಗಬೇಕು. ನಮ್ಮ ಶಿಕ್ಷಣದ ಒಂದು ಉದ್ದೇಶ ಕಾಲನಿಷ್ಠೆಯ ಪ್ರಜ್ಞೆ ಹುಡುಗರಿಗೆ ಬರುವಂತೆ ಮಾಡುವುದು. ಪೆರೇಡ್ ಗ್ರೌಂಡಿನಲ್ಲಿ ಈ ಕುರಿತು ನಾವು ಕರುಣಾವಂತರಾಗುವುದು ಕರುಣೆಯ ದುರುಪಯೋಗ ಮಾಡಿದಂತೆ. ಅದರಿಂದ ಕ್ಯಾಡೆಟ್ಟುಗಳ ಭವಿಷ್ಯವನ್ನು ಅಷ್ಟು ಹಾಳು ಮಾಡಿದಂತೆ.

೧೨ನೇ ಮೈಸೂರಿನ ಶಿಲಾರೋಹಿಗಳು
ಅಧ್ಯಾಯ ಮೂವತ್ನಾಲ್ಕು

ಲಕ್ಷ್ಮೀನಾರಾಯಣ (ಲಕ್ಷ್ಮಿ) ನಮ್ಮ ವಿದ್ಯಾರ್ಥಿ, ಕ್ಯಾಡೆಟ್. ಒರತೆ ಉಗಮಿಸುವ ಕಾಲದಲ್ಲಿ ಅವನು ಹಿಮಾಲಯದ ಮಂಜುಗಡ್ಡೆಗಳ ಮೇಲೆ ಏರಿ ಏರಿ ಹೋಗುತ್ತಿದ್ದ. ಅಲ್ಲಿ ಶಿಕ್ಷಣ ಪಡೆಯುತ್ತಿದ್ದ. ಸೆಪ್ಟೆಂಬರ್ ತರುಣದಲ್ಲಿ ಅವನು ಅಲ್ಲಿಂದ ಯಶಸ್ವಿಯಾಗಿ ಮರಳಿ ಬಂದ. ಅವನಿಗೆ ಅತ್ಯುಚ್ಚ ಪ್ರಶಸ್ತಿ ದರ್ಜೆ ಬಂದಿದ್ದುವು. ಹಿಂದೆ ಯಾವ ಕ್ಯಾಡೆಟ್ಟೂ ಸಾಧಿಸದ ವಿಕ್ರಮವನ್ನು ಅವನು ಅಲ್ಲಿ ಸಾಧಿಸಿ ತೇನ್ಸಿಂಗ್ ಮೊದಲಾದವರಿಂದ ಮೆಚ್ಚುಗೆ ಪತ್ರ ಪಡೆದು ಮರಳಿದ್ದ. ಅವನು ಬಂದಂದಿನಿಂದ ನಮ್ಮ ಶಿಲಾರೋಹಿಗಳ ಕೂಟಕ್ಕೆ ಒಂದು ಸ್ಪಷ್ಟ ಆಕಾರ ಮಾತು ಧೋರಣೆ ಒದಗಿದುವು.

ಲಕ್ಷ್ಮಿ ಮರಳಿದ ಪ್ರಥಮ ಆದಿತ್ಯವಾರ ನಾವು ಆರೇಳು ಮೈಲು ದೂರ ಕಲ್ಲು ಬಂಡೆಗಳನ್ನರಸಿ ನಡೆಯುತ್ತ ಹೋದೆವು. ಹೆಬ್ಬಾಳದ ಸಮೀಪದಲ್ಲಿ ಒಂದು ದೇವರ ಗುಡಿಯಿದೆ. ಅದರ ಆವರಣದಲ್ಲಿರುವ ಕಲ್ಲು ಬಂಡೆ ನಮ್ಮ ಶಿಕ್ಷಣಕ್ಕೆ ಸರಿಯಾಗಿ ಕಡೆದಂತಿತ್ತು. ಇದಕ್ಕೆ ವಿಶ್ವೇಶ್ವರಯ್ಯ ಬಂಡೆ ಎಂಬ ಹೆಸರಿತ್ತು. ದಿವಾನ್ ವಿಶ್ವೇಶ್ವರಯ್ಯ ಪ್ರತಿ ಸಂಜೆ ಇಲ್ಲಿವರೆಗೆ ನಡೆದು ಬಂದು ಇದರ ಮೇಲೆ ವಿರಮಿಸಿ ಹಿಂತಿರುಗುತ್ತಿದ್ದರಂತೆ. ಇದು ೨೦ ಅಡಿ ಎತ್ತರದ ಕಡಿದಾದ ಕಲ್ಲು. ಇದನ್ನು ನೆಟ್ಟಗೆ ಏರುವುದು ಸಾಧ್ಯವೇ ಇಲ್ಲ ಎಂದು ನಮಗೆ ತೋರಿತ್ತು. ಆದರೆ ಲಕ್ಷ್ಮಿ ಇದನ್ನು ಮಂಗ ಏರುವಷ್ಟು ಸುಲಭವಾಗಿ ಹಗುರವಾಗಿ ಏರಿದ. ಅಷ್ಟೇ ಸುಲಭವಾಗಿ ಅಲ್ಲಿಂದ ಇಳಿದೂ ಬಿಟ್ಟ! ಮುಂದೆ ಕಲ್ಲು ಹತ್ತುವ ಕಲೆಯನ್ನು ಹೆಜ್ಜೆ ಹೆಜ್ಜೆಯಾಗಿ ವಿವರಿಸತೊಡಗಿದ.

"ಕಲ್ಲುಗಳಲ್ಲಿ ಎರಡೇ ವಿಧ: ಹತ್ತಿರುವ ಕಲ್ಲು, ಹತ್ತದಿರುವ ಕಲ್ಲು. ಹತ್ತಲಾಗದ ಕಲ್ಲೆಂಬುದು ಇಲ್ಲ. ಕಲ್ಲುಗಳು ನಿಸರ್ಗದಲ್ಲಿ ಹಲವಾರು ಬಗೆಯಲ್ಲಿ ರೂಪುಗೊಂಡಿರುವುವು. ಅವು ನಮ್ಮ ಸೌಕರ್ಯಕ್ಕನುಗುಣವಾಗಿ ನಿರ್ಮಾಣವಾಗಿರುವುದಿಲ್ಲ. ಆದ್ದರಿಂದ ನಾವು ಹತ್ತಬೇಕಾದ ಕಲ್ಲಿನ ಸೂಕ್ಷ್ಮಾವಲೋಕನ ಬಲು ಅಗತ್ಯ. ಕಲ್ಲಿನ ಪ್ರತಿ ಗೀರು, ಬಿರುಕು, ಉಬ್ಬು, ತಗ್ಗು ನಮಗೆ ಒಂದೊಂದು ಅರ್ಥ ನೀಡುವುದು. ಅದನ್ನನುಸರಿಸಿ ನಮ್ಮ ಹತ್ತುವ ಮತ್ತು ಇಳಿಯುವ ಕ್ರಮಗಳನ್ನು ಅಳವಡಿಸಿಕೊಳ್ಳಬೇಕು." ಇದು ಅವನು ಕಲಿಸಿದ ಪ್ರಥಮ ಪಾಠ.

ಈ ಸಿದ್ಧಾಂತದ ಪ್ರಕಾರ ಆ ಕಲ್ಲನ್ನು ಅವನು ವಿವರಿಸಿ, ನಿಧಾನವಾಗಿ ಹತ್ತಿ ಮೇಲೆ ಹೋಗಿ, ಇತರರನ್ನೂ ಹತ್ತುವಂತೆ ಹುರಿದುಂಬಿಸಿ ಒಂದು ಹೊಸ ದೃಷ್ಟಿ ನಮಗಿತ್ತ. ಹಲವಾರು ಹುಡುಗರು ತುದಿಗೇರಿದರು. ಅವರ ಅಭಿಮಾನಕ್ಕೆ ಪಾರವೇ ಇಲ್ಲ. ಆಗದಿದ್ದವರು, ಸ್ಥೂಲಕಾಯರು ಪುನಃ ಪುನಃ ಮೇಲೇರಿ ಜಾರಿದವರು ಕಲ್ಲಿನಲ್ಲಿಯೇ ದೋಷ ಹುಡುಕತೊಡಗಿದರು. ಆ ದಿನ ನಮ್ಮ ಶಿಕ್ಷಣ ತುಂಬ ಯಶಸ್ವಿಯಾಯಿತು. ನಿಜವಾಗಿಯೂ ಶಿಲಾರೋಹಿಗಳ ಕೂಟವಾಯಿತು.

ಬಳಸುದಾರಿಗಾಗಿ ಅಥವಾ ಏಣಿಯಿಟ್ಟು ಬಂಡೆ ತುದಿಗೇರಿದವರಿಗೆ, ಅಥವಾ ನೆರಳಿನಲ್ಲಿ ಆರಾಮವಾಗಿ ಒರಗಿ, "ಕಲ್ಲೇರುವುದೇಕೆ? ಅದರಲ್ಲಿಯೂ ಒಂದು ಆಟವಿದೆಯೇ?" ಎನ್ನುವ ನಿರಾಶಾವಾದಿಗಳಿಗೆ, ನಿಷ್ಕ್ರಿಯಾವಂತರಿಗೆ, "ದೇವರೇ! ಅವರಿಗೆ ತಾವೇನೆನ್ನುತ್ತೇವೆ ಎಂಬುದರ ಪರಿವೆಯೇ ಇಲ್ಲ" ಎನ್ನಬೇಕಾಗುತ್ತದೆ. ನಮ್ಮ ಯಾವ ಆಟವಾದರೂ ಇಷ್ಟೇ ಅಲ್ಲವೇ? ಕ್ರಿಕೆಟ್ ಆಡದಿದ್ದರೆ, ನೋಡದಿದ್ದರೆ ಏನು? ಈಸದಿದ್ದರೆ ಏನು? ನಾವು ಸಾಯುತ್ತೇವೆಯೇ? ಸಾಹಸ ಭಾಗಿತ್ವದಿಂದ ಲಭಿಸುವ ಆತ್ಮತೃಪ್ತಿ, ಆತ್ಮವಿಶ್ವಾಸವೇ ಅದರ ಫಲ. ಪರೋಕ್ಷವಾಗಿ ಅದು ಜೀವನದ ಇತರ ರಂಗಗಳಲ್ಲಿಯೂ ಸಹಾಯಕವಾಗುವುದು.

ಮುಂದಿನವಾರ ಲಕ್ಷ್ಮಿ ಸೂಚಿಸಿದ, "ಕಡಿದಾದ ಆಳವಾದ ಬಂಡೆಯನ್ನು ಜಿಗಿಯಲು ಅಥವಾ rapple ಮಾಡಲು ನಮಗೆ ನೈಲಾನ್ ಹಗ್ಗ ಮತ್ತು ಇತರ ಹಲವಾರು ಸಾಧನಗಳು ಬೇಕು. ನೀವು ತರಿಸಿಕೊಡಬೇಕು ಸರ್." ಬೆಂಗಳೂರಿನಲ್ಲೆಲ್ಲಿಯೂ ಶಿಲಾರೋಹಣ, ಅವರೋಹಣಗಳಿಗಾಗಿಯೇ ತಯಾರಾದ ವಿಶೇಷ ತರದ ನೈಲಾನ್ ಹಗ್ಗ ದೊರೆಯಲಿಲ್ಲ. ತಾತ್ಕಾಲಿಕ ಉಪಯೋಗಕ್ಕೆಂದು ದಪ್ಪದ ಹತ್ತಿ ಹಗ್ಗಗಳನ್ನು ಖರೀದಿಸಿದೆವು. ವಿಶ್ವೇಶ್ವರಯ್ಯ ಬಂಡೆಯನ್ನೇ ಪ್ರಾರಂಭಿಕರಿಗೆ ಶಿಕ್ಷಣವೀಯಲು ಆಯ್ದುಕೊಂಡೆವು. ಇಲ್ಲಿ ಪ್ರತಿ ಆದಿತ್ಯವಾರವೂ ನಾನಾ ನಮೂನೆಯ ರ್‍ಯಾಪ್ಲಿಂಗ್ (ಹಗ್ಗಗಳ ಸಹಾಯದಿಂದ ಬಂಡೆ ಇಳಿಯುವುದು) ಕ್ರಮಗಳನ್ನು ಅಭ್ಯಸಿಸತೊಡಗಿದೆವು.

ಬಂಡೆ ಜಿಗಿತ
ಅಧ್ಯಾಯ ಮೂವತ್ತೈದು

ಬಂಡೆಯ ಆಳ ಎಷ್ಟುಂಟೋ ಅದರ ಮೂರರಷ್ಟು ಉದ್ದದ ವಿಶಿಷ್ಟ ನೈಲಾನ್ ಹಗ್ಗವೂ (ರ್ಯಾಪ್ಲಿಂಗ್ ಹಗ್ಗ ಎಂದು ಇದರ ಹೆಸರು) ಸುಮಾರು ಒಂದೂವರೆಯಷ್ಟು ಉದ್ದದ ಇನ್ನೊಂದು ವಿಧದ ನೇಯ್ಗೆಯ ನೈಲಾನ್ ಹಗ್ಗವೂ (ಬಿಲೇ ಹಗ್ಗ) ಅತಿ ಮುಖ್ಯ ಆವಶ್ಯಕತೆಗಳು. ಉಳಿದವು ಲೋಹದ ಕೊಣಿಕೆಗಳು (ಕೆರಾಬಿನರ್ಸ್), ಹಗ್ಗದ ಕೊನೆಯಿಲ್ಲದ ಸಣ್ಣ ಸುರುಳಿಗಳು – ಸ್ಲಿಂಗ್ಸ್, ಕೈಗವಸುಗಳು, ಪಿಟನ್ಸ್ (ಒಂದು ಕೊನೆಯಲ್ಲಿ ಹಗ್ಗ ಸರಿಯಲು ತೂತಿರುವ ವಿವಿಧಾಕಾರದ ಲೋಹದ ಬಂಡೆಮೊಳೆಗಳು. ಇವನ್ನು ಬಂಡೆಯ ಬಿರುಕಿನೊಳಗೆ ಹೊಡೆದು ಭದ್ರವಾಗಿ ನೆಲೆಗೊಳಿಸಬಹುದು; ಹಲವಾರು ಪಿಟನ್ನುಗಳ ತೂತಗಳಿಗಾಗಿ ಹಾಯಿಸಿ ಕಟ್ಟಿದ ನೈಲಾನ್ ಹಗ್ಗ ಶಿಲಾರೋಹಿಯ ಯಾವುದೇ ಚಟುವಟಿಕೆಗೆ ಭದ್ರ ಆಧಾರವಾಗುವುದು) ಮತ್ತು ಸುತ್ತಿಗೆಗಳು. ನೈಲಾನ್ ಹಗ್ಗ ದೊರೆಯದಿದ್ದರೆ ಹತ್ತಿ ಹಗ್ಗವನ್ನು ಉಪಯೋಗಿಸಬಹುದು. ಆದರೆ ಇಲ್ಲಿ ಹಗ್ಗ ಕಡಿದುಹೋಗಿ ಜಿಗಿಯುವಾತ ಗಾಸಿಗೊಳ್ಳುವ ಅಪಾಯ ಬಲು ಹೆಚ್ಚು. ರ್ಯಾಪ್ಲಿಂಗ್ ಹಗ್ಗದ ಎರಡು ಕೊನೆಗಳನ್ನೂ ಸೇರಿಸಿ ಹಿಡಿದು ಅದನ್ನು ಸಮಭಾಗ ಮಾಡಬೇಕು. ಎರಡು ಕೊನೆಗಳನ್ನು ಬಂಡೆಯ ಮೇಲಿನಿಂದ ಕೆಳಕ್ಕೆ ಇಳಿಬಿಡಬೇಕು. ಹಗ್ಗದ **U** ಆಕಾರದ ಕೇಂದ್ರವನ್ನು ಬಂಡೆಯ ಅಂಚಿನಿಂದ ಮೇಲಕ್ಕಿರುವ ಭದ್ರ ಆಧಾರಕ್ಕೆ ಕಟ್ಟಬೇಕು. ಇದು ಅಲ್ಲಿರುವ ಭಾರೀ ತುಂಡು ಬಂಡೆಯೋ ಮರದ ಕಾಂಡವೋ ಪಿಟನ್ನುಗಳ ಸರಣಿಯೋ ಇರಬಹುದು, ಅಂತೂ ಮೇಲಿನ ಹಿಡಿತ ಅತಿ ಭದ್ರವಾಗಿರತಕ್ಕದ್ದು. ಕೆಳಕ್ಕೆ ಚಾಚಿದ ಖಾಲಿ ಕೊನೆಗಳು ಬಂಡೆಯ ಬುಡದಿಂದ ಹತ್ತಡಿಯಾದರೂ ಮುಂದೆ ಹೋಗುವಷ್ಟು ಉದ್ದವಿರಬೇಕು. ರ್ಯಾಪ್ಲಿಂಗ್ ಹಗ್ಗ ಗಟ್ಟಿಯಾಗಿ ಕಟ್ಟಲ್ಪಟ್ಟಿದೆಯೋ ಇಲ್ಲವೋ ಎಂದು ಪರೀಕ್ಷಿಸಲು ಅದರ ಒಂದೊಂದು ಕೊನೆಯನ್ನೂ ನಾಲ್ಕೈದು ಮಂದಿ ಗಟ್ಟಿಯಾಗಿ ಹಿಡಿದು ಒಟ್ಟಿಗೆ ಹಲವಾರು ಸಲ ಜಗ್ಗಬೇಕು. ಹಗ್ಗದ ಭದ್ರತೆಯೂ ಇದರಿಂದ ಪರೀಕ್ಷೆಗೊಳಪಡುವುದು. ಇಷ್ಟಾದ ಮೇಲೆ ರ್ಯಾಪಲ್ ಮಾಡುವಾತ (ಅಂದರೆ ಜಿಗಿವಾತ) ಬಂಡೆಯ ಮೇಲೆ ಮುಂದಿನ ಹೆಜ್ಜೆ ಇಡುತ್ತಾನೆ. ಅವನು ಷರಾಯಿ ಧರಿಸಿರುವುದು ಉತ್ತಮ. ಮೈಮೇಲೆ ಜೆರ್ಸಿ ಪುಲ್ಲೋವರ್ ಅಥವಾ ಪೂರ್ಣ ತೋಳಿನ ಷರಟನ್ನು ತೊಟ್ಟುಕೊಂಡಿರಬೇಕು. ಕೈಗಳಿಗೆ ಗವಸು, ಸ್ಲಿಂಗನ್ನು ಕಾಲುಗಳ ಹೊರಗಾಗಿ ಸರಿಸಿ ಸೊಂಟದೆಡೆಗೆ ತರುವನು, ಹಿಂದಿನ ಭಾಗವನ್ನು ಕೆಳಗಿನಿಂದ ಮುಂದಕ್ಕೆ ತಂದು, ಮುಂದಿನ ಭಾಗಕ್ಕೆ ಜೋಡಿಸಿ ಹಿಡಿದು ಕೆರಾಬಿನಾರಿನಿಂದ ಅವನ್ನು ಪೋಣಿಸುವನು. ರ್ಯಾಪ್ಲಿಂಗ್ ಹಗ್ಗವನ್ನೂ ಇದೇ ಕೆರಾಬಿನಾರಿಗೆ ಪೋಣಿಸಿ, ಇಳಿವಾತನ ಎಡಮಗ್ಗುಲಿಗಾಗಿ ಕೆಳಗೆ ಬಿಡಲಾಗುವುದು. ಅವನ ಸೊಂಟಕ್ಕೆ ಪ್ರತ್ಯೇಕ ಇನ್ನೊಂದು ಹಗ್ಗವನ್ನು (ಬಿಲೇ ಹಗ್ಗ) ಸುತ್ತಿ ಕಟ್ಟಿ ಅದನ್ನು ಬಂಡೆಯ ಮೇಲೆ ಭದ್ರವಾಗಿ ಕುಳಿತುಕೊಂಡ 'ರಕ್ಷಕ' (ಬಿಲೇ ಮ್ಯಾನ್) ಹಿಡಿದುಕೊಳ್ಳುತ್ತಾನೆ. ಇಳಿವಾತ ರ್ಯಾಪ್ಲಿಂಗ್ ಹಗ್ಗವನ್ನು ಕೆರಾಬಿನಾರಿನ ಮುಂದೆ ಬಲಗೈಯಲ್ಲೂ ಹಿಂದೆ ಎಡಗೈಯಲ್ಲೂ ಹಿಡಿದುಕೊಂಡು, ತನ್ನ ಕೊಳ್ಳ ಜಿಗಿತವನ್ನು ನಿಯಂತ್ರಿಸಿಕೊಳ್ಳುತ್ತಾನೆ. ಆತ ಇಳಿಯುತ್ತ ಹೋದಂತೆ ಬಿಲೇಕಾರನು ಆ ಹಗ್ಗವನ್ನು ಕ್ರಮೇಣ ಸಡಿಲವಾಗಿ ಬಿಡುತ್ತ ಹೋಗುತ್ತಾನೆ. ಇಳಿವಾತ ಹತೋಟಿ ತಪ್ಪಿ ಕಂಗಾಲಾದರೆ ಮಾತ್ರ ಬಿಲೇಕಾರ ಹಗ್ಗ ಬಿಗಿಹಿಡಿದು ಸಮತೋಲನ ಕಾಯ್ದಿಟ್ಟುಕೊಳ್ಳಲು ಸಹಾಯ ಮಾಡುತ್ತಾನೆ. ಇಳಿವಾತ ಗಾಬರಿಯಿಂದ ಏನೂ ಮಾಡಲಾರದವನಾಗಿ ಪ್ರಪಾತದ ಮಧ್ಯೆ ನೇಲುತ್ತಿದ್ದರೆ ಬಿಲೇಕಾರ ಹಗ್ಗವನ್ನು ಬಲು ಜಾಗರೂಕತೆಯಿಂದ ಸಡಿಲಗೊಳಿಸುತ್ತ ಗುಂಡುಕಲ್ಲನ್ನು ಬಾವಿಗಿಳಿಸಿದಂತೆ ಅವನನ್ನು ಬಂಡೆಯ ತಳಕ್ಕೆ ಇಳಿಸುತ್ತಾನೆ. ಜಿಗಿವಾತನ ಪ್ರಾಣ ರಕ್ಷಿಸಲು ಮತ್ತು ಅವನಿಗೆ ಧೈರ್ಯ ನೀಡಲು ಬಿಲೇ ಹಗ್ಗ ಅವಶ್ಯ. ಇದನ್ನು ನಿಯಂತ್ರಿಸುವವರ ಪಾತ್ರ ಬಲು ಮುಖ್ಯ. ಅವಗಣನೆಯಲ್ಲಿ, ಜಿಗಿವಾತ ಪ್ರಪಾತದ ತಳಕ್ಕೆ ಧೊಪ್ಪನೆ ಬಿದ್ದು ಪ್ರಾಣಾಪಾಯವೂ ಸಂಭವಿಸಬಹುದು. ಜೊತೆಯಲ್ಲಿಯೇ ಬಿಲೇಕಾರನನ್ನು ಹಗ್ಗ ಜಗ್ಗಿ ಬಂಡೆಯ ತಳಕ್ಕೆ ಕೆಡೆದೂ ಪ್ರಾಣಾಪಾಯ ಸಂಭವಿಸಬಹುದು.

ಹೀಗೆ ಸಕಲ ರಕ್ಷಣೆಗಳಿಂದ ಕೂಡಿ ಜಿಗಿವಾತ ಪ್ರಪಾತದ ಅಂಚಿಗೆ ಹಿಂದೆ ಹಿಂದೆ ನಡೆದು ಬರುವನು – ದುರ್ಯೋಧನ ವೈಶಂಪಾಯನ ಸರೋವರ ಹೊಕ್ಕಂತೆ, ಅಂದರೆ ಅವನ ಬೆನ್ನು ಪ್ರಪಾತದೆಡೆಗೆ ತಿರುಗಿರುವುದು. ಮೊದಲೇ ಹೇಳಿದಂತೆ ಹಗ್ಗ ಹಿಡಿದ ಆತನ ಎಡಗೈ ಹಿಂದಕ್ಕೂ ಬಲಗೈ ಮುಂದಕ್ಕೂ ಚಾಚಿರುವುವು. ಆತ ಹಿಂದೆ ಹಿಂದೆ ನಡೆದಂತೆ ಹಗ್ಗ ಕೆರಾಬಿನರ್ ಒಳಗೂ ಎರಡು ಕೈಗವುಸುಗಳ ನಡುವೆ ನಿಯಂತ್ರಿತವಾಗಿ ಜಾರುತ್ತದೆ. ನೈಲಾನ್ ಹಗ್ಗ ಹಗುರ, ಬಲು ಗಟ್ಟಿ ಮತ್ತು ನುಣುಪಾಗಿ ಜಾರುವುದು. ಆದ್ದರಿಂದ ರ್ಯಾಪ್ಲಿಂಗಿಗೆ ಅದೇ ಸರ್ವಶ್ರೇಷ್ಠ. ಜಿಗಿವಾತ ಬಂಡೆಯ ಅಂಚಿಗೆ ಬಂದು ಹಿಂದೆ ಹಿಂದೆ ಬಗ್ಗುತ್ತಾನೆ. ಈಗ ಅವನ ದೇಹವಿಡೀ ನೆಟ್ಟಗಿದ್ದು, ಬಂಡೆಯ

ಮೇಲ್ಭಾಗದಲ್ಲಿ ಕುಳಿತು ನೋಡುವವರಿಗೆ ಕೆಳಗಿನ ನೆಲಕ್ಕೆ ಸಮಾಂತರವಾಗಿರುವಂತೆ ಕಾಣುವುದು. ತನ್ನ ಭಾರದಿಂದ ಅವನು ಇನ್ನೂ ಮಾಲುವ ಮೊದಲೇ ಬಂಡೆಗೊಂದು ಬಲವಾದ ಒತ್ತವಿತ್ತು ದೂರಕ್ಕೆ ಚಿಮ್ಮುತ್ತಾನೆ. ಅಷ್ಟರಲ್ಲಿಯೇ ಹಗ್ಗವನ್ನು ತುಸು ಸಡಿಲಬಿಟ್ಟು ಎಂಟು ಹತ್ತಡಿ ಕೆಳಕ್ಕೆ ಸರ್ರನೆ ಜಾರಿರುತ್ತಾನೆ. ದೇಹ ಆಂದೋಲಿಸಿ ಕಾಲುಗಳು ಪುನಃ ಪ್ರಪಾತದ ಮೈಗೆ ಬಂದು ಬಡಿವಾಗ, ಹಗ್ಗ ತುಸು ಬಿಗಿಹಿಡಿದು ಇನ್ನೊಂದು ಒದೆತ. ಪುನಃ ಎಂಟು ಹತ್ತಡಿ ಜಾರಿಕೆ – ಈ ಕ್ರಮದಲ್ಲಿ ಅವನು ಎಷ್ಟು ಆಳವನ್ನು ಬೇಕಾದರೂ (ರ್‍ಯಾಪ್ಲಿಂಗ್ ಹಗ್ಗದ ಉದ್ದದ ಮಿತಿ ಅವಲಂಬಿಸಿ) ಜಿಗಿದಿಳಿಯಬಹುದು. ಎಡಗೈ ಹಿಡಿತ ಅವನಿಗೆ ಭದ್ರತೆಯ ಪ್ರಜ್ಞೆ ನೀಡುವುದು. ಬಲಗೈ ಹಿಡಿತ ದಿಕ್ಕು ನಿರ್ದೇಶನ ಮಾಡುವುದು. ಅವನು ಹೀಗೆ ಮಿತಿಯಲ್ಲಿ ಜಿಗಿವಾಗ ಬಿಲೇಕಾರರು ಆ ಹಗ್ಗವನ್ನು ಸುಲಭವಾಗಿ ಜಾರಗೊಡುವರು. ಇಳಿವಾತನ ಹದ ತಪ್ಪಿದ ಅರಿವಾದರೆ ಮಾತ್ರ ಅದನ್ನು ಜಗ್ಗಿ ಹಿಡಿಯುತ್ತಾರೆ.

ಅದು ಒಂದು ನಮೂನೆ. ಇಳಿಯುವ ಕ್ರಮಗಳಲ್ಲಿ ಹಲವಾರು ವಿಧಗಳಿವೆ. ತತ್ತ್ವ ಒಂದೇ. Stomach rapelling ಮತ್ತು ಗಾಯಗೊಂಡವನ ರಕ್ಷಣೆ ಇವುಗಳ ಪೈಕಿ ಅತಿಕಠಿಣ. ಹೊಟ್ಟೆ ರ್‍ಯಾಪ್ಲಿಂಗಿನಲ್ಲಿ ಇಳಿವಾತ (ಇದರಲ್ಲಿ ಜಿಗಿತವಿಲ್ಲ, ನಡಿಗೆ ಮಾತ್ರ) ಬಂಡೆಯ ನೆತ್ತಿಯಿಂದ ಪ್ರಪಾತದ ತಳದೆಡೆಗೆ ಮುಖ ಮಾಡಿ ನಡೆಯುತ್ತಾನೆ. ಮುಂದೆ ಅದರ ಅಂಚಿನಿಂದ ಕೆಳಗೆ ಸರಿಯುತ್ತಿದ್ದಂತೆ ದೇಹವನ್ನು ಬಂಡೆಗೆ ಲಂಬವಾಗಿಯೂ ನೆಲಕ್ಕೆ ಸಮಾಂತರವಾಗಿಯೂ ಇಟ್ಟುಕೊಳ್ಳುತ್ತಾನೆ. ಇಲ್ಲಿ ಇಳಿ ಹಗ್ಗದ ಎರಡೆಳೆಗಳನ್ನು ಪ್ರತ್ಯೇಕಿಸಿ ಇಳಿವಾತ ನಡುವೆ ಇರುತ್ತಾನೆ. ಹಗ್ಗಗಳನ್ನು ತನ್ನ ಹೊಟ್ಟೆಯ ಮೇಲೆ ಎದುರುಬದಿರು ಹಾಯಿಸಿ, ಉಜ್ಜಿ ಸರಿಯುವಂತೆ ಮಾಡಿ, ಕೇವಲ ಹಸ್ತದಲ್ಲಿ ನಿಯಂತ್ರಿಸುತ್ತಾನೆ. ಈ ಕ್ರಮದಲ್ಲಿ ನೆಲದ ಪ್ರತಿಯೊಂದು ಪುಟ್ಟ ಕಲ್ಲೂ ಗಿಡವೂ ಭಯಂಕರವಾಗಿ ಆತನನ್ನು ತಿವಿಯಲು, ನುಂಗಲು ಬಂದಂತೆ ಭಾಸವಾಗುವುದು. ಗಾಯಗೊಂಡವನನ್ನು ಬೆನ್ನ ಮೇಲೆ ಉಪ್ಪು ಮೂಟೆಯಂತೆ ಹೊತ್ತು ಹೊಟ್ಟೆ ರ್‍ಯಾಪ್ಲಿಂಗ್ ಕ್ರಮದಿಂದ ಇಳಿಯುವುದು ಇನ್ನೂ ಕಠಿಣ ಸಾಹಸ.

ಹೀಗೆ ರ್‍ಯಾಪ್ಲಿಂಗ್ ಅತಿ ಅಪಾಯಕರವಾದ, ಆದ್ದರಿಂದ ಅಷ್ಟೇ ರೋಮಾಂಚಕವಾದ ಆಟ ಕೂಡ. ಇದರಲ್ಲಿ ಭಾಗವಹಿಸುವವರಿಗೆ ಭಾರೀ ದೇಹ ದಾರ್ಢ್ಯವೇನೂ ಬೇಕಾಗಿಲ್ಲ. ಹತ್ತು ಹದಿನೈದು ಅಡಿ ಆಳದ ಬಂಡೆಗಳಲ್ಲಿ ಜಿಗಿವ ಕ್ರಮಗಳನ್ನು ಅಭ್ಯಾಸ ಮಾಡಿ ಧೈರ್ಯ ಸಂಪಾದಿಸಿಕೊಂಡರೆ ಮುಂದೆ ಆಳ ಹೆಚ್ಚಿದಂತೆ ಅಧಿಕಾಧಿಕ ಉಲ್ಲಾಸ ಪಡೆಯಬಹುದು. ಧೈರ್ಯವಾಗಿ ದುಮುಕದವನಿಗೆ, ಸ್ವಲ್ಪವಾದರೂ ಬಂಡೆಯ ಪ್ರೇಮಮಯ ಮೃದು ಸ್ಪರ್ಶದ ಅನುಭವ ಪಡೆಯದವನಿಗೆ ಈ ವಿದ್ಯೆ ಕರಗತವಾಗದು. ಮೈ ನೆನೆಸಿಕೊಳ್ಳದೇ ಗುಟುಕು ನೀರು ಕುಡಿಯದೇ ಈಸು ಕಲಿಯುವುದು ಸಾಧ್ಯವೇ?

ಇಲ್ಲಿ ನಾವು ಕಲಿಯುವ ಪಾಠ ಎರಡು. ಬಂಡೆಯೊಡನೆ ಸೆಣಸಾಟ ಸಲ್ಲದು. ವಿನಯಶೀಲರಾಗಿ ಅದರ ಮೈಗನುಗುಣವಾಗಿ ವರ್ತಿಸಿದರೆ ಬಂಡೆ ನಮ್ಮನ್ನು ಅದರ ಮಂಡೆಯ ಮೇಲೆ ಹೊತ್ತು ಕುಣಿಯಬಿಡುವುದು. ಇನ್ನೊಂದು ಪಾಠ. ಬಂಡೆ ಜಿಗಿವಾಗ ಮನಃಸ್ಥೈರ್ಯವೇ ನಿಜವಾದ ಪ್ರೇರಕಶಕ್ತಿ. ಅಪಾಯಕ್ಕೂ ಸುರಕ್ಷಿತತೆಗೂ ನಡುವೆ ಪ್ರತಿಯೊಬ್ಬನ ಮನಸ್ಸು ಒಂದು ದುರ್ಗಮಾಭೇದ್ಯ ಕೋಟೆಯನ್ನು ಸೃಜಿಸಿರುವುದು. ಬಂಡೆಯ ಅಂಚನ್ನು ತಲಪುವಷ್ಟು ಹೊತ್ತು ನಮಗೆ ಈ ಕೋಟೆ ಎಷ್ಟು ದಪ್ಪವಾದದ್ದು, ಉಕ್ಕಿನಂತಹದು ಎಂಬುದರ ಅರಿವೇ ಇರುವುದಿಲ್ಲ. ಅಲ್ಲಿ ತಲಪುತ್ತಿದ್ದಂತೆಯೇ ಇದು ಸ್ಪಷ್ಟವಾಗಿ ಹೇಳುತದೆ, "ನಾನಿಲ್ಲಿ ಅಡ್ಡ ನಿಂತಿದ್ದೇನೆ. ನಿನ್ನನ್ನು ಮುಂದೆ ಹೋಗಲು ಬಿಡುವುದಿಲ್ಲ. ಹೋಗಲೇ ಬೇಕಾದರೆ ನನ್ನನ್ನು ಭೇದಿಸಿ ಹೋಗು, ನೋಡೋಣ, ನಿನ್ನ ಸಾಮರ್ಥ್ಯ." ಲಂಕಾ ಪ್ರವೇಶಕ್ಕೆ ಮೊದಲು ವೀರ ಹನುಮಂತ ಸಿಂಹಿಕೆಯನ್ನು ಎದುರಿಸಿ ಸಂಹರಿಸಿ ಮುಂದುವರಿಯಬೇಕಾಯಿತಲ್ಲವೇ? ಬಹಳ ಮಂದಿ ಈ ಭಿತ್ತಿಯನ್ನು ಒಡೆಯಲಾಗದೇ ಹೆದರಿ, ಥರಥರನೆ ನಡುಗಿ ಕುಸಿದು, ಅಂಚಿನಿಂದ ಮೇಲಕ್ಕೆ ತೆವಳಿಯಾದರೂ ಬಂದುಬಿಡುತ್ತಾರೆ. ಅದನ್ನು ಒಡೆದವನಿಗೆ ಮಾತ್ರ ಮುಂದಿನ ಸಾಹಸದ ಸಂತೋಷಾನುಭವ. ಈ ನಡುಬಾನಿನಲ್ಲಿ ಸರ್ರನೆ ಜಾರಿ, ಕುಪ್ಪಳಿಸಿ, ಜಾರಿ ಇಳಿಯುವ ಅನುಭವಕ್ಕೆ ಸಮಾನವಾದದ್ದು, ನಾನು ಸ್ವಾನುಭವದಿಂದ ತಿಳಿದಂತೆ, ಕಾರ್ ಚಾಲನೆಯಲ್ಲಿದೆ. ಗಂಟೆಗೆ ಸುಮಾರು ೫೦ ಮೈಲಿನ ಮಿತಿವರೆಗೆ ಕಾರನ್ನು ನಾವೇ ಪ್ರಯತ್ನಪೂರ್ವಕವಾಗಿ ಚಾಲನೆ ಮಾಡುತ್ತಿದ್ದೇವೆ ಎಂಬ ಭಾವನೆ ಬರುವುದು. ಈ ಮಿತಿ ದಾಟಿದ ಮೇಲೆ ಬೇರೊಂದು ಅನುಭವವಾಗುವುದು: ನೆಲ, ಗಿಡ, ಮರ, ಆವರಣ, ದಾರಿ ಎಲ್ಲ ಅತಿ ವೇಗದಿಂದ ನಮ್ಮ ಸುತ್ತಲೂ ಹಿಂದಕ್ಕೆ ಜಾರುತ್ತಿವೆ. ನಾವು ಇವುಗಳ ಮಧ್ಯೆ ತೇಲುತ್ತ ಸ್ವಚ್ಛಂದವಾಗಿ ವಿಹರಿಸುತ್ತಿದ್ದೇವೆ. ಇದು ವಾಯುಲಘಿಮಾನುಭವ (levitation). ಇಂಥ ಅನುಭವ ಬಂಡೆ ಜಿಗಿವಾಗ ನಮಗಾಗುವುದು. ನಿಸರ್ಗವನ್ನು

ಔನ್ನತ್ಯದಿಂದ ವೀಕ್ಷಿಸುವ ಕ್ರಮವಿದು. ಶ್ರೇಷ್ಠನಟ ಪಾತ್ರ ತಾದಾತ್ಮ್ಯಹೊಂದಿದಾಗ ಇಂಥದೇ ಭಾವದೀಪ್ತನಾಗಿರುವನೆಂದು ಕೇಳಿದ್ದೇನೆ.

ವಾರವಾರ ನಮ್ಮ ಹುಡುಗರು ಮೈಲುಗಟ್ಟಲೆ ನಡೆದು ಬಂಡೆ ಏರಿ ಜಿಗಿದು ಈ ಆಟಗಳಲ್ಲಿ ಬಲು ನಿಷ್ಣಾತರಾದರು. ಇಂಥ ಒಂದು ರವಿವಾರ ಅವರಿಂದಲೇ ಸೂಚನೆ ಬಂದಿತು, "ನಾವಿಷ್ಟೆಲ್ಲ ಹಾರಾಡುತ್ತಿದ್ದೇವಲ್ಲ. ಈ ವರ್ಷ ಮುಗಿಯುವ ಮೊದಲು ಏನಾದರೊಂದು ಸಾಹಸ ಪ್ರದರ್ಶನ ನಡೆಸಬೇಕು."

ನಮ್ಮ ದೊರೆಗಳು (ಮೇಜರ್ ನಾರಾಯಣ ಸಿಂಗ್) ರಾಮನಗರ, ಸಾವನದುರ್ಗ, ಶಿವಗಂಗೆ, ನಂದಿಬೆಟ್ಟ ಎಲ್ಲಿಯಾದರೊಂದೆಡೆ ಒಂದೆರಡು ದಿವಸ ಶಿಬಿರ ನಡೆಸಿ ಕಲಿತ ವಿದ್ಯೆಯೆಲ್ಲವನ್ನೂ ಚೆನ್ನಾಗಿ ಅಭ್ಯಸಿಸಿ ಮರಳಬಹುದೆಂದು ಸಲಹೆಯಿತ್ತರು. ಆದರೆ ನನಗೆ ತಿಳಿದಿದ್ದಂತೆ ಕುದುರೆಮುಖವೇ ಗಂಡುಗಲಿಗಳಿಗೆ ಸರಿಯಾದ ಸ್ಥಳ. ಅಲ್ಲಿ ಸಾಹಸಪ್ರಿಯರಿಗೆ, ನಿಸರ್ಗ ಪ್ರೇಮಿಗಳಿಗೆ, ಇತಿಹಾಸ ಪ್ರಸಿದ್ಧ ಸ್ಥಳ ವೀಕ್ಷಕರಿಗೆ ರಸದೂಟವಿದೆ. ಹತ್ತು ವರ್ಷಗಳ ಹಿಂದೊಮ್ಮೆ ಅಲ್ಲಿ ನಾನು ಹತ್ತಿಪ್ಪತ್ತು ಹುಡುಗರನ್ನು ಕಟ್ಟಿಕೊಂಡು (ಆಗ ನಾನು ಮಡಿಕೇರಿಯಲ್ಲಿದ್ದೆ) ಅಲೆದಿದ್ದೆ. ಅಂದು ಇದ್ದದ್ದು ಉತ್ಸಾಹ ಒಂದೇ. ಅದರ ಜೊತೆಗೆ ಕ್ರಮಬದ್ಧ ಯೋಜನೆಯನ್ನು ಹೊಂದಿಸಿಕೊಂಡು ಹೆಚ್ಚಿನ ಆನಂದ, ಜ್ಞಾನ ಪಡೆಯಲು ತಿಳಿವಳಿಕೆ ಸಾಕಾಗಿರಲಿಲ್ಲ. ಹೀಗಾಗಿ 'ಎಂಕು ಪಣಂಬೂರಿಗೆ ಹೋಗಿ ಬಂದಂತೆ' ನಾವೂ ಕುದುರೆಮುಖಕ್ಕೆ ಹೋಗಿಬಂದಿದ್ದೆವು. ಆ ಶಿಖರ ನನ್ನ ಮನಸ್ಸಿನ ಮೇಲೆ ಎಂದೂ ಮಾಸದ ಮುದ್ರೆಯೊತ್ತಿತ್ತು. ಇನ್ನೊಮ್ಮೆ ಸರಿಯಾಗಿಯೇ ಬರುತ್ತೇನೆ ಎಂದುಕೊಂಡಿದ್ದೆ.

ಕುದುರೆಮುಖದ ಕರೆ
ಅಧ್ಯಾಯ ಮೂವತ್ತಾರು

ಈಗ ಕಾಲ ಸನ್ನಿಹಿತವಾಗಿತ್ತೋ ಏನೋ. ಕುದುರೆಮುಖ ಕೆನೆಯಿತು. ನಾನು ಹುಡುಗರಿಗೆ ಅದರ ಸಾಹಸವನ್ನು ವಿವರಿಸಿದೆ. ಅದು ಎಲ್ಲಿ ಉಂಟು, ಏನು ಎಂದು ಇವರು ಯಾರಿಗೂ ತಿಳಿಯದು. ಆದರೂ ಹುಡುಗಾಟಿಕೆಯ ಉತ್ಸಾಹದಿಂದ ಹಾರಾಡಿದರು. ಅಂದಿನಿಂದಲೇ ಕುದುರೆಮುಖದ ಕನಸನ್ನು ಕಾಣತೊಡಗಿದರು. ಇದು ಅಕ್ಟೋಬರ್ (೧೯೬೬) ಸುಮಾರಿಗೆ. ದೊರೆಗಳು ಈ ಯೋಜನೆಯನ್ನು ಸ್ವಾಗತಿಸಿದರು. ಸುಮಾರು ೩೦ ಕ್ಯಾಡೆಟ್ಟುಗಳು, ೧೦ ದಿವಸಗಳ ಶಿಬಿರ. ವೆಚ್ಚವೆಷ್ಟಾದೀತೆಂದು ಅಂದಾಜು ಮಾಡಲು ನನಗೆ ಹೇಳಿದರು. ಅದೇ ವೇಳೆಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಟಿ. ಆರ್. ಜಯರಾಮನ್ ನಮ್ಮ ಕಾಲೇಜಿನ ವಿದ್ಯಾರ್ಥಿ ಸಂಘದ ಉದ್ಘಾಟನಾ ಭಾಷಣ ಮಾಡುತ್ತ ಹೀಗೆಂದರು: "ವಿದ್ಯಾರ್ಥಿಗಳು ಇಂದು ಪೂರ್ಣ ವ್ಯಕ್ತಿತ್ವ ಪಡೆದು ವಿಕಸಿಸಬೇಕು. ಪಾಠ ಪ್ರವಚನದ ಜತೆಗೆ ಸಾಹಸಪ್ರಿಯತೆ, ಆಟ ಓಟಗಳು ಬೆಳೆಯಬೇಕು. ಅವರ ಯಾವುದೇ ವಿಧದ ರಚನಾತ್ಮಕ ಸಾಹಸಕ್ರಿಯೆಯನ್ನೂ ಬೆಂಗಳೂರು ವಿಶ್ವವಿದ್ಯಾಲಯ ಸಹಾನುಭೂತಿಯಿಂದ ಪರಿಶೀಲಿಸುವುದು."

ನಾನು ಈ ಒಂದು ಆಶ್ವಾಸನೆಯ ಎಳೆ ಹಿಡಿದು ಮೊದಲು ಒಬ್ಬನೇ ಹೋಗಿ ಅವರನ್ನು ಭೇಟಿ ಮಾಡಿದೆ. ನಮ್ಮ ಕುದುರೆಮುಖ ಯೋಜನೆಯ ರೂಪರೇಖೆಗಳನ್ನು ವಿವರಿಸಿದೆ. ನಮಗೆ ಯೂನಿವರ್ಸಿಟಿಯಿಂದ ಧನಸಹಾಯ ದೊರೆಯಬಹುದೇ ಹೇಗೆ ಎಂದು ಮನವಿ ಮಾಡಿದೆ. "ಅದರ ಪೂರ್ಣ ಮಾಹಿತಿಯಿರುವ ಪತ್ರವನ್ನು ನಮಗೆ ಕೊಡಿ. ಸಹಾನುಭೂತಿಯಿಂದ ಪರಿಶೀಲಿಸುತ್ತೇವೆ" ಎಂದರು. ದೊರೆಗಳಿಗೆ ಈ ಸಂತೋಷದಾಯಕ ಸುದ್ದಿ ತಿಳಿಸಿದೆ ಮತ್ತು ಸುಮಾರು ಒಂದೂವರೆ ಸಾವಿರ ರೂಪಾಯಿಯ ಯೋಜನೆ ತಯಾರಿಸಿದೆ. ಅದನ್ನು ನೋಡಿದ ಅವರು ನಕ್ಕು, "ಇಲ್ಲೇ ನೀನು ಅತಿ ಜಿಗುಟಾಗಿರುವುದು! ವ್ಯಕ್ತಿಗಳಿಗೆ ಸಾವಿರ, ಸಾವಿರದೈನೂರು ದೊಡ್ಡ ಹಣ. ಆದರೆ ಇಲ್ಲಿ ಕೊಡುತ್ತಿರುವುದು ಯೂನಿವರ್ಸಿಟಿ. ಹೋಗುತ್ತಿರುವವರು ೩೦–೪೦ ಮಂದಿ ಹುಡುಗರು. ಅವರ ಆಹಾರದ ಖರ್ಚೇ ಸುಮಾರು ಸಾವಿರದೈನೂರು ಆಗದಿರದು. ವಾಹನ, ಇತರ ಖರ್ಚು ಒಟ್ಟು ರೂ ೩೦೦೦ದ ಅಂದಾಜು ನಾನು ಮಾಡುತ್ತೇನೆ. ಅಲ್ಲದೇ ಇಂಥ ಸಂದರ್ಭದಲ್ಲಿ ಸ್ವಲ್ಪ ಶಿಕ್ಷಣ ಸಾಮಗ್ರಿಗಳನ್ನು ಖರೀದಿಸುವ ಯೋಜನೆಯೂ ಸೇರಬೇಕು. ೨೦೦ ಅಡಿ ಉದ್ದದ ನೈಲಾನ್ ಹಗ್ಗ ಒಂದೊಂದಕ್ಕೂ ೧೬೫ರಿಂದ ೨೦೦ ರೂಪಾಯಿ ಬೆಲೆಯಿದೆ. ಆದ್ದರಿಂದ ಸಾಮಗ್ರಿಗಳ ಬೆಲೆ ೨೦೦೦ ರೂಪಾಯಿಯಾದರೂ ಇರತಕ್ಕದ್ದು. ಹೀಗೆ ೫೦೦೦ ರೂಪಾಯಿ ಮುಂಗಡವಾಗಿ ನಾವು ಯಾಚಿಸಬೇಕು. ಕೇಳುವಾಗ ಧಾರಾಳವಾಗಿರೋಣ, ಸರಿಯಾದ ಲೆಕ್ಕ ಕೊಟ್ಟರೆ ಆಯಿತು" ಎಂದು ವಿವರಿಸಿದರು.

ಒರತೆ ತೊರೆಯಾದಾಗ
ಅಧ್ಯಾಯ ಮೂವತ್ತೇಳು

ಮುಂದಿನ ವಾರ ನಮ್ಮ ಯೋಜನೆಯ ಪತ್ರ ಸಮೇತ ನಾವು ಕುಲಪತಿಗಳನ್ನು ನೋಡಿದೆವು. ಅವರು ನಮಗೆ ಆಶ್ಚರ್ಯವಾಗುವಂತೆ, ನೀವು ಮುಂದುವರಿಸಿ, ಈ ಮೊಬಲಗು ನಿಮಗೆ ಸಿಕ್ಕುತ್ತದೆ" ಎಂದುಬಿಟ್ಟರು! ಆ ಗಳಿಗೆಯಲ್ಲಿ ನಾವು ಮೂಕವಿಸ್ಮಿತರಾದೆವು. ಪಾರ್ಕಲಾಂ ಮಂತ್ರ ಪಠನದ ಈ ಕಾಲದಲ್ಲಿ, ನೂರಾರು ಸಲ ಕಂಬದಿಂದ ಮೇಜಕ್ಕೆ ಅಲೆಯದೇ ಯಾವ ಕೆಲಸವೂ ಆಗದ ಈ ದಿನಗಳಲ್ಲಿ, ಮೊದಲೇ ನಾವೇಕೆ ಈ ಯೋಜನೆಯನ್ನು ಮಂಡಿಸಲಿಲ್ಲ ಎನ್ನುವಂಥ ಸವಾಲು. ಬಲು ಸಂತೋಷದಿಂದ ಹಿಂತಿರುಗಿದೆವು.

ಇಂಗ್ಲಿಷಿನಲ್ಲಿ ಹೇಳುವಂತೆ ಚೆಂಡು ಈಗ ನಮ್ಮ ರಂಗದಲ್ಲಿದೆ. ನಮ್ಮ ಮೇಲೆ ವಿಶ್ವವಿದ್ಯಾಲಯ ವಹಿಸಿರುವ ವಿಶ್ವಾಸ ಗುರುತರವಾದದ್ದು. ಇದುವರೆಗೆ ನಾವು ಮಾಡಿದ್ದು ಚಂದ, ನವ ಸಂಪ್ರದಾಯದ ಲೇಪ ಅದಕ್ಕೆ. ಆದರೆ ಈಗ ವಿಶ್ವವಿದ್ಯಾಲಯದ ವಿಶ್ವಾಸ, ಕ್ಯಾಡೆಟ್ಟುಗಳ ಉತ್ಸಾಹ ಇವನ್ನು ವ್ಯವಸ್ಥಿತವಾಗಿ ಒಂದುಗೂಡಿಸಿ ಉತ್ತಮ ಫಲಿತಾಂಶ ತರುವುದು ನಮ್ಮ ಹೊಣೆಗಾರಿಕೆ, ಮುಂದಿರುವ ಹೆಜ್ಜೆಗಳು: ಶಿಬಿರದ ಸ್ಥಳ ಪರಿಶೀಲನೆ, ಹೊರಡುವ ದಿವಸ ನಿರ್ಣಯ, ಕ್ಯಾಡೆಟ್ಟುಗಳ ಆಯ್ಕೆ, ಶಿಕ್ಷಣ ಸಾಮಗ್ರಿ ಮತ್ತು ಇತರಾವಶ್ಯಕತೆಗಳ ಏರ್ಪಾಡು.

ಸ್ಥಳ ಪರಿಶೀಲನೆಗಾಗಿ ನಾನೂ ದೊರೆಗಳು ಎನ್ಸಿಸಿ ಕಾರಿನಲ್ಲಿ ಚಾರ್ಮಾಡಿ ಮಾರ್ಗವಾಗಿ ಧರ್ಮಸ್ಥಳ, ಬೆಳ್ತಂಗಡಿ ತಲಪಿದೆವು. ಸ್ಥಳ, ಜನ, ಸನ್ನಿವೇಶ ಇವುಗಳ ನಿಕಟ ಪರಿಚಯ ಬೆಳೆಸಿಕೊಂಡು ಜನವರಿ (೧೯೬೭) ಅಂತ್ಯದಲ್ಲಿ ಶಿಬಿರ ನಡೆಸುವುದು ಯೋಗ್ಯ ಎಂದು ನಿರ್ಣಯಿಸಿದೆವು. ಅದಕ್ಕಿಂತ ಮೊದಲು ಆಳೆರಡೆತ್ತರ ಬೆಳೆದಿರುವ ಹುಲ್ಲಿನ ಕಡಲಿನಲ್ಲಿ ಬೆಟ್ಟ ಹತ್ತುವುದು ಅಸಾಧ್ಯ. ಮಧ್ಯೆ ಎಲ್ಲಿಯಾದರೂ ಕಾಡಿಗೆ ಬೆಂಕಿ ಬಿದ್ದರೆ ಖಾಂಡವ ದಹನದ ಪುನರಾವರ್ತನೆಯೇ ಆಗಬಹುದು. ದಿವಸ ಮುಂದುವರಿಸಿದರೆ ಸೀನಿಯರ್ ವಿದ್ಯಾರ್ಥಿಗಳಿಗೆ ದೊಡ್ಡ ಪರೀಕ್ಷೆ ಹತ್ತಿರವಾಗುವುದು. ಆದ್ದರಿಂದ ತೊಂದರೆ. ಏಪ್ರಿಲ್, ಮೇ ಕುದುರೆಮುಖದ ಬುಡದಲ್ಲಿ ಕುದಿವ ಕುಲುಮೆಯಂಥ ಸೆಕೆ, ಮೇಲೆ ಮೋಡ, ಮಳೆ. ಜನವರಿ ೨೦ರಿಂದ ೨೯ರವರೆಗೆ ಹತ್ತು ದಿವಸ ಶಿಬಿರ ನಡೆಸುವುದು ಎಂದು ನಿಶ್ಚೈಸಿದೆವು.

ನಮಗೆ ಯೂನಿವರ್ಸಿಟಿ ಸಹಾಯ ದೊರೆತ ಶುಭ ಸಮಾಚಾರ ವಿದ್ಯಾರ್ಥಿಲೋಕದಲ್ಲಿ ವಿದ್ಯುದ್ವೇಗದಿಂದ ಪಸರಿಸಿತು. ಕನಸಿನ ಕುದುರೆಮುಖ ವಾಸ್ತವತೆಗೆ ಬರುವುದೆಂದು ಅವರಿಗೀಗ ಖಚಿತವಾಯಿತು. ನೂರಾರು ಹುಡುಗರು, ಬೇರೆ ಕಾಲೇಜಿನವರು ಸಹ, ದಿನ ದಿನ ಬಂದು ನನ್ನನ್ನು ಬೇಡತೊಡಗಿದರು, ತಾವೂ ಕುದುರೆಮುಖದ ತಂಡದವರನ್ನು ಸೇರುವುದಾಗಿ ಮತ್ತು ಹಣದ ಕೊರತೆಯನ್ನು ಪೂರೈಸುವುದಾಗಿ ಮಾತು ಕೊಟ್ಟರು. ನಮ್ಮ ತರುಣರ ಆಸೆ ಆಕಾಂಕ್ಷೆ ಸಹಜವಾದದ್ದು. ನಮಗೆ ಅಭಿಮಾನ ಉಂಟುಮಾಡುವಂಥಾದ್ದು. ಆದರೆ ನಮ್ಮ ಮುಂದಿದ್ದ ಗುರಿಸಾಧನೆಯಲ್ಲಿ ನಾವು ಕೆಲವು ಸ್ವಯಂ ನಿರ್ಮಿತ ನಿಯಮಾವಳಿಗಳಿಂದ ಬಂಧಿತರಾಗದೇ ಹೋದರೆ, ಒಂದು ಕ್ರಮ ಅನುಸರಿಸದೇ ಮುಂದುವರಿದರೆ, ಕುದುರೆಮುಖ ಸಾಹಸ, ಕುದುರೆ ಮುಖ ಜಾತ್ರೆಯಾದೀತು, ದುರಂತವೂ ಘಟಿಸೀತು. ಈ ದೃಷ್ಟಿಯಿಂದ ನಮ್ಮ ಕಾಲೇಜಿನ ಕ್ಯಾಡೆಟ್ಟುಗಳಿಗೆ ಮಾತ್ರ ಇದರಲ್ಲಿ ಪ್ರವೇಶವೆಂದು ವಿಧಿಸಿದೆವು. ಕೆಲವು ರಾಜಕಾರಣಿಗಳೊಡನೆ ಕಟುವಾಗಿ ವಾದಿಸಲೂಬೇಕಾಯಿತು, "ಕುದುರೆಮುಖ ಅಲ್ಲಿದೆ, ಯೂನಿವರ್ಸಿಟಿ ಇಲ್ಲಿದೆ. ನೀವು ಪ್ರತ್ಯೇಕವಾಗಿ ನಮಗಿಂತಲೂ ಉತ್ತಮವಾದ ಸಾಹಸವನ್ನೇಕೆ ವ್ಯವಸ್ಥೆಗೊಳಿಸಬಾರದು?"
ಸಾಮಾನ್ಯವಾಗಿ ಜನ, ತಿಳಿದೋ ತಿಳಿಯದೆಯೋ ಕೆಲಸಮಾಡದೆ ಅದರ ಫಲ ಸವಿಯಬೇಕೆಂಬ ಬುದ್ಧಿಯವರು. ಇನ್ನು ನಮ್ಮ ಹುಡುಗರೇ ಆದರೂ ಮೊದಲು ಕರೆದ ಮೀಟಿಂಗಿಗೆ ನಾಲ್ಕುನೂರರವರೆಗೆ ಬಂದರು. ಕಾಲೇಜಿನ ಸಭಾಂಗಣದಲ್ಲಿ, ಪಂಖಗಳ ಅಡಿಯ ತಂಪು ಹವೆಯಲ್ಲಿ ಸುಖಾಸೀನರಾದ ಅವರು ಕುದುರೆಮುಖದ ರಂಗು ರಂಗಾದ ವರ್ಣನೆಯನ್ನು ಏಕಾಗ್ರತೆಯಿಂದ ಆಲಿಸಿ ಕನಸು ಕಾಣತೊಡಗಿದರು. "ಕುದುರೆಮುಖ ಗಂಡು ಗಂಡುಗಳಿಗೆ ಮಾತ್ರ. ನಿಮ್ಮಲ್ಲಿ ಯಾರಿಗೆ ಏರಲು ಸಾಧ್ಯವಿಲ್ಲ, ಕೈ ಎತ್ತಿ" ಎಂದು ಸಮಾರೋಪಿಸಿದೆ. ಬಂದವರು ನಾಲ್ಕುನೂರು, ಎಲ್ಲರೂ ಗಂಡು ಗಂಡುಗಳೇ; ಕೈ ಎತ್ತಿದವರು ಯಾರೂ ಇಲ್ಲ. "ಬಹಳ ಸಂತೋಷ. ನನಗೆ ತುಂಬ ಹೆಮ್ಮೆ, ಇಂಥ ಕಠಿಣ ಶಿಬಿರಕ್ಕೆ ಬರಲು ನೀವು ಕೆಲವು ನಿಯಮಗಳನ್ನು ಪಾಲಿಸಲೇಬೇಕು: ಮುಂದಿನ ಆದಿತ್ಯವಾರ ೧೨ನೇ ಮೈಸೂರಿನ ೬.೪೫ ಗಂಟೆ ಬೆಳಗ್ಗೆ ಕಾಲೇಜು ಹಿಂದೆ ಸಮವಸ್ತ್ರಧಾರಿಗಳಾಗಿ ಸೇರತಕ್ಕದ್ದು; ೧೫ರಿಂದ ೨೦ ಮೈಲುಗಳವರೆಗಿನ ದೀರ್ಘ ನಡಿಗೆ. ಇದರಲ್ಲಿ ಜಯಪ್ರದರಾಗುವ ಮೊದಲಿನ ೬೦ ಅಥವಾ ೭೦ ಕ್ಯಾಡೆಟ್ಟುಗಳಿಗೆ ಮುಂದಿನ ಹೆಜ್ಜೆ ವಿವರಿಸಲಾಗುವುದು."

ಗಂಡುಗಳ ಆಯ್ಕೆ
ಅಧ್ಯಾಯ ಮೂವತ್ತೆಂಟು

ಆ ಆದಿತ್ಯವಾರ ಬಂದವರು ೧೧೦. ಎರಡು ಮಿನಿಟ್ ತಡವಾಗಿ ಬಂದವರಿಗೆ ಮುಂದಿನ ವರ್ಷದ (?) ಶಿಬಿರ! ಇನ್ನು, ೧೫ ಮೈಲು ನಡಿಗೆ ಊಹಿಸಿದಷ್ಟು ಸುಲಭವಲ್ಲ, ಸೈಕಲ್, ಆಟೋ, ಸಿಟಿ ಬಸ್ ಸಂಸರ್ಗಗಳಿಂದ ವಿಕಸಿಸುವ ಹುಡುಗರಿಗೆ ಇದೊಂದು ಭಯಂಕರಾನುಭವ! ಬಹಳಷ್ಟು ಮಂದಿ ನಡುದಾರಿಯಲ್ಲಿ ಮನೆಯೆಡೆಗೆ ಕವಲೊಡೆದು ಕಾಣದಾದರು. ಯಶಸ್ವಿಯಾಗಿ ನಡಿಗೆ ಪೂರೈಸಿದ ಮೊದಲಿನ ೬೦ ಮಂದಿಯನ್ನು ಆರಿಸಲಾಯಿತು. ಉಳಿದವರು 'ದ್ರಾಕ್ಷಿ ಹುಳಿ' ಎಂದು ಮುಖ ಸಿಂಡರಿಸಿದರು.

ಈ ೬೦ ಮಂದಿಗೆ ಎರಡನೆಯ ಹೆಜ್ಜೆ ಬಂಡೆ ಏರುವುದು, ಇಳಿಯುವುದರಲ್ಲಿ ಶಿಕ್ಷಣ ಮತ್ತು ಪರೀಕ್ಷೆ. ಬಂಡೆಯ ಅಂಚಿಗೆ ಬಂದ ಹಲವಾರು ಹುಡುಗರು ಹಿಂದೆ ಸರಿದರು. ಹೀಗೆ ಸಂಖ್ಯೆ ೪೦ಕ್ಕೆ ಇಳಿಯಿತು. ಇವರ ಪೈಕಿ ಮೂರು ಹುಡುಗರು ವೈದ್ಯಕೀಯ ಪರೀಕ್ಷೆಯಲ್ಲಿ ಉತ್ತೀರ್ಣರಾಗಲಿಲ್ಲ. ಈ ರೀತಿಯಲ್ಲಿ ನಮ್ಮ ಬೆಟ್ಟೆ ಚಿನ್ನವನ್ನು ಪುಟ ಹಾಕಿ ಶುದ್ಧ ಮಾಡಿದೆವು. ಇವರಲ್ಲಿ ಪ್ರತಿಯೊಬ್ಬನೂ ೧೦ ರೂಪಾಯಿ ಪ್ರವೇಶ ಧನವೀಯಬೇಕು ಮತ್ತು ಸ್ವಂತ ಖರ್ಚಿನಿಂದ 'ಹಂಟರ್ ಬೂಟು'ಗಳನ್ನು ಕೊಂಡುಕೊಳ್ಳಬೇಕೆಂದೂ ವಿಧಿಸಿದ್ದೆವು. ತಂದೆ ತಾಯಿಯರಿಂದ ಬರಹದಲ್ಲಿ ಅಪಾಯದ ಸರ್ಟಿಫಿಕೇಟು ತರಿಸಿಕೊಂಡೆವು. ಇದರ ಪ್ರಕಾರ ಹುಡುಗ ಸ್ವಂತ ಇಚ್ಛೆಯಿಂದ ಮತ್ತು ತಂದೆತಾಯಿಯರ ಅನುಮತಿಯ ಮೇರೆಗೆ ಶಿಬಿರಕ್ಕೆ ಬರುವವನು; ಅಲ್ಲಿ ಯಾವ ಅಥವಾ ಹೇಗೆ, ಎಂಥ ಅಪಾಯ ಸಂಭವಿಸಿದರೂ ಹುಡುಗನಾಗಲೀ ಅವನ ತಂದೆತಾಯಿಯರಾಗಲೀ ಸರಕಾರವನ್ನು ಪರಿಹಾರಧನ ಯಾಚಿಸುವಂತಿಲ್ಲ. ಇದರರ್ಥ ವ್ಯವಸ್ಥೆಗೊಳಿಸುವ ನಾವು ಹಿರಿಯರು ಬೇಜವಾಬ್ದಾರಿಕೆಯಿಂದ ವರ್ತಿಸಬಹುದೆಂದಲ್ಲ. ಹುಡುಗರನ್ನು ಕಾಲೇಜಿಗೆ, ಶಿಬಿರಕ್ಕೆ ಕಳಿಸಿದರೆ ತಮ್ಮ ಹೊಣೆಗಾರಿಕೆ ಮುಗಿಯಿತೆಂದು ತಿಳಿಯುವ, ಪರಮೋಸದಿಂದ ಅಥವಾ ಎಷ್ಟೋ ಸಲ ಹುಡುಗನ ತಿಳಿಗೇಡಿತನದಿಂದ ಅವನಿಗೇನಾದರೂ ಅಪಾಯ ಸಂಭವಿಸಿದರೆ ಮೊದಲು ಸಂಸ್ಥೆಯಲ್ಲಿ ದೋಷ ಹುಡುಕುವ ಹಿರಿಯರಿಗೆ ಅವರ ಪಾತ್ರವನ್ನು ಸ್ಪಷ್ಟಪಡಿಸಲು ಇಂಥ ಸರ್ಟಿಫಿಕೇಟು ಅತ್ಯಗತ್ಯ. ಮನೆಯಲ್ಲಿ ಕಲಿಸದ ಶಿಸ್ತು, ಸದ್ವರ್ತನೆಗಳನ್ನು ಕಾಲೇಜು ಕ್ಲಾಸುಗಳಲ್ಲಿ, ಎನ್‌ಸಿಸಿ ಪೆರೇಡ್ ಗ್ರೌಂಡಿನಲ್ಲಿ ಕಲಿಸಲು ಸಾಧ್ಯವಿಲ್ಲ. ನೀತಿ: ನಿಮ್ಮ ಪುತ್ರರತ್ನ ಪುರುಷ ಸಿಂಹನಾಗಬೇಕೆಂಬುದು ನಿಮ್ಮ ಅಪೇಕ್ಷೆಯಾದರೆ ನೀವು ಕನಿಷ್ಠ ನರಶೃಗಾಲವಾದರೂ ಆಗಿರಬಾರದು!

ಸಾವನದುರ್ಗದ ಜಾರುಬಂಡೆಯ ಮೇಲೆ
ಅಧ್ಯಾಯ ಮೂವತ್ತೊಂಬತ್ತು

ಡಿಸೆಂಬರ್ ೨೫ರಿಂದ ಜನವರಿ ೩ರ ತನಕ ನಮ್ಮ ಬೆಟಾಲಿಯನ್ ವಾರ್ಷಿಕ ಶಿಕ್ಷಣ ಶಿಬಿರ ನಡೆಸಲು ಬೆಂಗಳೂರಿನ ಹೊರವಲಯಕ್ಕೆ ಸಾಗಿತು. ಅಲ್ಲಿಂದ ೨೪ ಮೈಲು ದೂರದಲ್ಲಿ ಸಾವನದುರ್ಗವಿದೆ. ಶಿಬಿರದ ಪ್ರಾರಂಭದಲ್ಲಿ ದೊರೆಗಳೆಂದರು, "ನೀನು ಆರಿಸಿರುವ ಶಿಲಾರೋಹಿಗಳನ್ನು ಅಲ್ಲಿಗೆ ಲಾರಿಯಲ್ಲಿ ಕರೆದುಕೊಂಡು ಹೋಗಿ ಒಂದು ದಿನವಿಡೀ ಅಭ್ಯಾಸ ಮಾಡಿ ಬಾ. ನಾವಿಬ್ಬರೂ ಈ ಕ್ಯಾಂಪನ್ನು ಒಂದೇ ಸಲ ಬಿಟ್ಟು ಹೋಗುವುದು ಸರಿಯಲ್ಲವಾದ್ದರಿಂದ ನೀನೊಬ್ಬನೇ ಹೋಗು."

೨೪ ಹುಡುಗರ ತಂಡ. ಹೈಸ್ಕೂಲಿನಲ್ಲಿ ಓದುತ್ತಿದ್ದ ನನ್ನ ಹಿರಿಮಗ ಅಶೋಕನೂ ಸ್ವಯಂಪ್ರೇರಿತನಾಗಿ ಶಿಬಿರದ ಶಿಸ್ತಿಗೆ ಬದ್ಧವಾಗಿ ಇದರಲ್ಲಿದ್ದ. ಬುತ್ತಿ ಊಟ ಕಟ್ಟಿಕೊಂಡು ಬೆಳಗ್ಗಿನ ೬ ಗಂಟೆಗೆ ಕ್ಯಾಂಪಿನಿಂದ ಹೊರಟೆವು. ೮ ಗಂಟೆಗೆ ದುರ್ಗದ ಬುಡ ತಲಪಿದೆವು. ನೆಲದಿಂದ ನೇರವಾಗಿ ಆಗಸಕ್ಕೆ ಚಾಚಿರುವ ಆ ಭೀಮಾಕಾರದ ಕರಿಯ ಕಲ್ಲುಗುಡ್ಡೆಯ ಎತ್ತರ ೨೦೦೦ ಅಡಿಗಿಂತಲೂ ಹೆಚ್ಚು ಇರಬೇಕೆಂದು ಅಂದಾಜು. ಅದರ ಶಿಖರದಲ್ಲಿಯ ಬಸವನೆಡೆಗೆ ಏರಲು ನೆಲದಿಂದ ಬಳಸು ಕಾಲುದಾರಿಯಿದೆ. ಆದರೆ ನಾವು ಹೋದುದು ನೇರವಾಗಿ ಆ ಕಡಿದಾದ ಶಿಲಾರೋಹಣ ಮಾಡಲೆಂದು; ಹೇಗಾದರೂ ಕೊಡಿ ತಲಪುವುದಲ್ಲ. ಸಾಹಸ ಪ್ರಯೋಗದಿಂದ ಶಿಖರಾರೋಹಣ ನಮ್ಮ ಗುರಿ. ನಮ್ಮ ಬೆನ್ನ ಮೇಲೆ ಹ್ಯಾವರ್ ಸ್ಯಾಕಿನಲ್ಲಿ ಬುತ್ತಿ, ಮೂಸುಂಬಿ, ಸ್ವಲ್ಪ ಬಟ್ಟೆ. ಲಕ್ಷ್ಮಿ ಮೊದಲಾದ ವಿದ್ಯಾರ್ಥಿ ನಾಯಕರು ನೈಲಾನ್ ಹಗ್ಗಗಳ ಹೊರೆ ಹೊತ್ತಿದ್ದರು. ನಾವು ಕಾಲಿಗೆ ಬೂಟು ಧರಿಸಿದ್ದುದು ತಪ್ಪು, ಬಂಡೆ ಏರಲು ಇದು ದೊಡ್ಡ ಪ್ರತಿಬಂಧ. ಬೂಟಿನಡಿಯ ದೊರಗು ಮತ್ತು ಅಲ್ಲಿ ಹೊಡೆದಿರುವ ಆಣಿಗಳು ಬಂಡೆಯ ಮೇಲೆ ಜಾರಿ ನಮಗೆ ಎಲ್ಲಿಯೂ ದೃಢವಾಗಿ ನಿಲ್ಲುವುದು ಸಾಧ್ಯವಾಗಲಿಲ್ಲ. ಮೊದಲಿನ ೫೦ ಗಜ ನೇರವಾಗಿ ಏರುವಾಗ, ಏರಿಕೆ ಅಷ್ಟೇನೂ ತೀವ್ರವಾಗಿರದೆ ಬೂಟುಗಳಿಂದ ತೊಂದರೆಯಾಗಲಿಲ್ಲ. ಆದರೆ ಮುಂದೆ ಹತ್ತಬೇಕಾದರೆ ಬರೇ ಕಾಲಿನ ನಡಿಗೆಯೊಂದೇ ಗತಿ. ಬೂಟುಗಳನ್ನು ಕಳಚಿ ಒಂದರ ಲೇಸನ್ನು ಇನ್ನೊಂದಕ್ಕೆ ಕಟ್ಟಿ ಹೆಗಲ ಮೇಲೆ ಬೂಟುಮಾಲೆ ಧರಿಸಿದೆವು. ಮುಂದಕ್ಕೆ ಕೈಕಾಲುಗಳ ಸಹಾಯದಿಂದ ತೆವಳಿ ಹತ್ತಿದೆವು. ಬಿರುಕುಗಳಿಗೆಲ್ಲ ಕೈಕಾಲು ತುರುಕಿ ದೇಹವನ್ನು ಮೇಲೆ ಮೇಲೆ ಸಾಗಿಸಿದೆವು. ಒಂದು ಘಟ್ಟಕ್ಕೆ ಬರುವಾಗ ಮೇಲೆ ಹತ್ತುವುದು ಸಾಧ್ಯವೇ ಇಲ್ಲ ಎಂದಾಯಿತು. ಕಲ್ಲು ಸ್ವಲ್ಪ ಒಳಕ್ಕೆ ನುಗ್ಗಿ ಮತ್ತೆ ನಮ್ಮ ಮೇಲೆಯೇ ಉಬ್ಬಿ ಚಾಚಿತ್ತು. ಆದ್ದರಿಂದ ಬದಿಗೆ ಸರಿದು ಈ ಉಬ್ಬನ್ನು ಬಳಸಿ ಹತ್ತಬೇಕು. ಸ್ವಲ್ಪ ವಿಶ್ರಮಿಸೋಣ ಎಂದು ಬಂಡೆಯ ಮೇಲೆ ಕುಳಿತು ನೋಡುತ್ತೇವೆ – ನಾವು ಹತ್ತಿದ ಎತ್ತರ ಮತ್ತು ಏರಿಕೆಯ ತೀವ್ರತೆ ಭಯ ಹುಟ್ಟಿಸುವಂತಿದ್ದುವು. ನೆಲ ಅಷ್ಟು ದೂರ ಅಷ್ಟು ಕೆಳಗೆ ಇತ್ತು. ಅದನ್ನೇ ದಿಟ್ಟಿಸುತ್ತ ಕುಳಿತರೆ ನೆಲ ನಮ್ಮನ್ನು ನುಂಗಲು ಬರುವುದೋ ಎನ್ನುವ ದಿಗಿಲು ಹುಟ್ಟಿಸುತ್ತಿತ್ತು. ನೆಲ ನೋಡುತ್ತಿದ್ದಂತೆಯೇ ಮುಂದಿನ ಹಾದಿಯ ದುರ್ಗಮತೆಯ ಅರಿವೂ ಹೆಚ್ಚಾಯಿತು. ಮೇಲೆ ನೂರಾರು ಅಡಿ ಇನ್ನೂ ಕಡಿದಾಗಿ ಸಾಗಬೇಕು. ಈ ಮಧ್ಯೆ ಬಂಡೆ ಬಿಸಿಲಿನಿಂದ ಕಾದು ಅಲ್ಲಿ ಕುಳಿತಿರುವುದು ಅಸಾಧ್ಯವಾಯಿತು. ಬರಿಗಾಲು ಬರಿಗೈ ಸುಡತೊಡಗಿದುವು. ಹೀಗಾಗಿ ಚಲಿಸದೇ ಉಪಾಯವಿಲ್ಲ. ಲಕ್ಷ್ಮಿ, ಮೋಹನರು ಅಲ್ಲಿ ಅಡ್ಡ ಬಳಸು ದಾರಿಯಲ್ಲಿ ಮುಂದುವರಿದರು. ಮೂರು ಪತ್ಯೇಕ ನೈಲಾನ್ ಹಗ್ಗಗಳನ್ನು ತೆಗೆದುಕೊಂಡು ಆರೇಳು ಜನರ ಮೂರು ತಂಡಗಳಾಗಿ ನಮ್ಮನ್ನು ವಿಂಗಡಿಸಿ ಒಂದೊಂದು ತಂಡದವರನ್ನು ಒಂದೊಂದು ಹಗ್ಗದಿಂದ ಬಂಧಿಸಲಾಯ್ತು. ಮೊದಲಿನವನು ಸಾಹಸಿ, ಗಟ್ಟಿಮುಟ್ಟಾದವನಾಗಿರುವುದು ಅಗತ್ಯ. ಹಗ್ಗದ ಒಂದು ಕೊನೆಯನ್ನು ಅವನ ಸೊಂಟಕ್ಕೆ ಕಟ್ಟಲಾಗುವುದು. ಸುಮಾರು ಹತ್ತಡಿ ದೂರದಲ್ಲಿ ಇನ್ನೊಬ್ಬ. ಹೀಗೆ ಆರೇಳು ಜನರ ಒಂದು ಮಾನವ ಸರಪಳಿ ನಿರ್ಮಾಣವಾಗುವುದು. ಮೊದಲಿನವನು ತೆವಳಿ ಹರಿದು ಒಂದು ನೆಲೆಯಲ್ಲಿ ಸಾಕಷ್ಟು ಭದ್ರವಾಗಿ ನಿಲ್ಲುತ್ತಾನೆ. ಎರಡನೆಯವನಿಗಿಂತ ಹತ್ತು ಅಡಿ ಮುಂದೆ ಅವನು ಹೋಗುವಂತಿಲ್ಲವಷ್ಟೆ. ಹಾಗೆ ಸರಿಯುವಾಗ ಅವನನ್ನು ಹಿಂದಿನವನು ಹಗ್ಗದ ಹಿಡಿತದಿಂದ ಜಾರದಂತೆ ರಕ್ಷಣೆ ಕೊಡಲು (ಬಿಲೇ) ಸಾಧ್ಯವಾಗುತ್ತದೆ. ಮೊದಲನೆಯವನು ನಿಂತೊಡನೆ ಅವನು ಎರಡನೆಯವನನ್ನು ಬಿಲೇ ಮಾಡುತ್ತಾನೆ. ಇವನನ್ನು ಮೂರನೆಯವನು ಸಹ ಬಿಲೇ ಮಾಡುತ್ತಿರುತ್ತಾನೆ. ಮುಂದೆ ಮೂರನೆಯವನು ತೆವಳುತ್ತಾನೆ. ಈ ಮಧ್ಯೆ ಒಂದೇ ಕಡೆ ಮೂರು ಜನ ಸೇರುವುದು ಅಪಾಯಕರವಾದರೆ ಮೊದಲೆನೆಯವನು ಮುಂದೆ ಹೋಗಬಹುದು. ಮುಖ್ಯ ತತ್ತ್ವವಿಷ್ಟು: ಒಂದು ಸಲಕ್ಕೆ ಒಬ್ಬ ಮಾತ್ರ ತೆವಳುತ್ತಿರಬೇಕು. ಉಳಿದವರು ಇರುವಲ್ಲಿಯೇ ಭದ್ರವಾಗಿ ಬಂಡೆಗೆ ಅಂಟಿಕೊಂಡಿರಬೇಕು.

ಇದರಿಂದ ಸರಿಯುತ್ತಿರುವವನ ಕಾಲು ಜಾರಿ ಸಮತೋಲ ತಪ್ಪಿದ ಸಂದರ್ಭದಲ್ಲಿ ಉಳಿದವರು ಅವನನ್ನು ಹಿಡಿತದಲ್ಲಿಟ್ಟು ರಕ್ಷಿಸಲು ಸಾಧ್ಯವಾಗುವುದು.

ಇದೊಂದು ಬಗೆಯ ಟಪ್ಪೆ ಸರಿತ (relay movement), ಸಹಜೀವನ, ಸಹಕಾರ ಪದಗಳ ಸರಿಯಾದ ಅರ್ಥ ಅಪಾಯಕರ ಪ್ರಪಾತದೆದುರು ತಿಳಿಯುವಷ್ಟು ಚೆನ್ನಾಗಿ ಬೇರೆಲ್ಲಿಯೂ ಅರಿವಿಗೆ ಬರದು. ಮೇಲಿನ ಕ್ರಮದ ಚಲನೆಗೆ ಕಂಬಳೀಹುಳು ಸರಿತ ವಿಧಾನ ಎಂದು ಹೆಸರು. ದೊಡ್ಡ ಕಂಬಳೀಹುಳುವಿನ ವಿಧಾನದಲ್ಲಿ ಒಂದು ಗಂಟೆ ಸರಿದು ಬೆಟ್ಟದ ಎರಡು ಮೈಸೇರಿದ ನಿರಿಗೆ ಪ್ರದೇಶವನ್ನು ತಲಪಿದೆವು. ಇಂಥ ಒಂದು ಸರಪಳಿಯಲ್ಲಿ ಅಶೋಕ ಮತ್ತು ನಾನು ಕೂಡ ಇದ್ದೆವು. ಉರುಳಿದರೆ ಒಂದೇ ಬುಟ್ಟಿಯಲ್ಲಿ ಎಲ್ಲ ಮೊಟ್ಟೆಗಳನ್ನು ಇಡಬಾರದು ಎನ್ನುವ ಗಾದೆಗೆ ಇನ್ನೊಂದು ಪುರಾವೆ ಸಿಕ್ಕಿದಂತಾಗುತ್ತಿತ್ತು.

ನಿರಿಗೆಯಲ್ಲಿ ಸ್ವಲ್ಪ ನೆರಳಿತ್ತು. ೧೦೦೦ ಅಡಿ ಎತ್ತರದಲ್ಲಿದ್ದೇವೆ. ಎಡಗಡೆ ಬಲಗಡೆ ಬೆಟ್ಟದ ಉಬ್ಬು ಪ್ರದೇಶಗಳು. ಅಗ್ರಭಾಗ ಇನ್ನೊಂದು ಸಾವಿರ ಅಡಿ ಮೇಲೆ. ಒಂದೋ ಈ ನಿರಿಗೆಯಲ್ಲೇ ಮೇಲೆ ಹೋಗಬೇಕು, ಇಲ್ಲ ಕೆಳಕ್ಕೆ ಇಳಿಯಬೇಕು. ಪುನಃ ಇನ್ನೊಂದು ಮೈಗೆ ಹೋಗುವುದು ಆ ಬಿಸಿಲಿನ ಝಳದಲ್ಲಿ ಸಾಧ್ಯವಿಲ್ಲ. ಮೇಲಿನ ಸಾವಿರ ಅಡಿ ಉಗ್ರವಾಗಿತ್ತು. ನೀರು ಹರಿದು ಹರಿದು ನಿರಿಗೆ ಬಲು ನುಣುಪಾಗಿತ್ತು.ನಮ್ಮ ಬಳಗದಲ್ಲಿ ಅಶೋಕನ ಸಮೇತ ಎಂಟು ಜನ ಮಾತ್ರ ಈ ಕೊನೆಯ ಸಾಹಸ ನಿರ್ವಹಿಸಲು ಶಕ್ತರು ಎಂದು ನನಗೆ ಇಷ್ಟರಲ್ಲಿ ಮನವರಿಕೆಯಾಗಿತ್ತು. ಅವರನ್ನು ಆರಿಸಿ ಲಕ್ಷ್ಮಿಯ ನೇತೃತ್ವದಲ್ಲಿ ಕಂಬಳೀಹುಳು ಕ್ರಮದಲ್ಲಿ ಮೇಲೆ ಹೋಗಲು ಕಳಿಸಿದೆ. ಉಳಿದವರಲ್ಲಿ ಹಲವರಿಗೆ ಮುಖ ಕಪ್ಪಿಟ್ಟಿತು. ಅವರೆಲ್ಲರೂ ಮೇಲೇರಲು ಅತ್ಯುತ್ಸುಕರಾಗಿದ್ದರು. ಪ್ರತಿಯೊಬ್ಬನೂ ಸಾಹಸ ಪ್ರದರ್ಶನ ಮಾಡಲು ಮುನ್ನುಗ್ಗುವುದು ಸಹಜವೇ. ಅಪಾಯ ಸನ್ನಿವೇಶದಲ್ಲಿ ಮುಂದಾಳುವಿನ ಎದುರು ಹೆಜ್ಜೆ ಹೆಜ್ಜೆಗೆ ಏಳುವ ಪ್ರಶ್ನೆ ಇದೇ: ವೈಯಕ್ತಿಕ ದಾಕ್ಷಿಣ್ಯಕ್ಕೆಡೆಗೊಡದೇ ನಿಷ್ಪಕ್ಷಪಾತವಾಗಿ ನಿರ್ಧರಿಸಬೇಕು. ಒಂದು ವಿಷಯ ಮುಂದಾಳು ಚೆನ್ನಾಗಿ ತಿಳಿದಿರತಕ್ಕದ್ದು: ಇಂಥ 'ಸ್ವಯಂಕೃತಾಪರಾಧ'ಗಳಲ್ಲಿ ಎಲ್ಲವೂ ಸುಗಮವಾಗಿ ಎಲ್ಲರೂ ಸುರಕ್ಷಿತವಾಗಿ ಮರಳಿದರೆ ಹೊಗಳುವವರು ಕೇವಲ ಕೆಲವರು. ಉಳಿದವರು ಒಂದೋ ತಾತ್ಸಾರ ಮನೋವೃತ್ತಿ ಪ್ರದರ್ಶಿಸುತ್ತಾರೆ, ಇಲ್ಲಾ ಮತ್ಸರಿಗಳಾಗುತ್ತಾರೆ. ಏನಾದರೂ ಅಲ್ಪಸ್ವಲ್ಪ ಪರಮೋಸದಿಂದಲೇ ಆದರೂ ಅಪಾಯ ಘಟಿಸಿದರೆ, ಸಹಾನುಭೂತಿ, ಸಹಾಯ ನೀಡುವವರು ಬೆರಳೆಣಿಕೆಯಲ್ಲಿ ಕೂಡ ಸಿಕ್ಕುವುದಿಲ್ಲ. ಆದರೆ ದೋಷಾರೋಪಣೆ ಮಾಡುವವರು, ಧರ್ಮಾರ್ಥ ಸಲಹೆ ಸೂಚನೆ ನೀಡುವವರು ವಿಪುಲವಾಗಿರುತ್ತಾರೆ. ನಾನು–ಮೊದಲೇ–ಹೇಳಲಿಲ್ಲವೇ–ಮನೋಧರ್ಮೀ ಸರ್ವಜ್ಞರಿವರು! ಇದೆಲ್ಲ ಗೊತ್ತಿದ್ದೂ ಮೆರವಣಿಗೆ ಸಾಗಿಯೇ ಇರುತ್ತದೆ ಅನ್ನಿ. ಇಂಥ ಅಪಾಯ ಎದುರಿಸಿ ಜಯ ಲಭಿಸುವಾಗ ನಮಗೊದಗುವ ಕೃತಾರ್ಥತೆ ಅದನ್ನು ಅನುಭವಿಸಿದವರಿಗೇ ಗೊತ್ತು. "ಬಂಡೆ ಏರುವುದೇಕೆ? ಏರದಿದ್ದರೆ ಅಥವಾ ಬಳಸುದಾರಿಯಿಂದ ಏರಿದರೆ ಆಗದೇ?" ಎಂದು ಏರದವನು ಏರಿದವನನ್ನು ಪ್ರಶ್ನಿಸಿದಾಗ, "ಅದು ಇರುವುದರಿಂದ ಏರಿದೆ. ಏರಿ ಮೇಲೆ ಸೇರಿದ ಮೇಲೆ ಏಕೆ ಏರಿದೆ ಎಂಬುದರ ಅರಿವಾಯಿತು" ಎಂದನಂತೆ. ಕೃತಾರ್ಥತೆಗಾಗಿ ಬಂಡೆ ಏರಬೇಕು.

ಇಳಿಯುವವರ ಜತೆಗೆ ನಾನೂ ಇದ್ದೆ. ಎಷ್ಟೋ ಸಲ ಕಡಿದಾದ ಬಂಡೆ ಇಳಿಯುವುದು ಏರುವುದಕ್ಕಿಂತಲೂ ಕಷ್ಟ. ನಮಗಿಲ್ಲಿ ಅಂಥ ಅನುಭವವಾಯಿತು. ಕಾಲು ಕೆಳಗೆ ಇಳಿಬಿಟ್ಟು ಕುಳಿತು ಕೈಕಾಲುಗಳ ಸಹಾಯದಿಂದ ಜಾರಿ ಇಳಿಯುವುದೊಂದೇ ದಾರಿ. ಒಂದೊಂದು ಸಲಕ್ಕೆ ೫೦ ಅಡಿ, ೬ ಅಡಿ ದೂರ ಜಾರುತ್ತ ಜಾರುತ್ತ ಆ ೧೦೦೦ ಅಡಿಯನ್ನು ಮುಗಿಸಿದೆವು. ಜಾರುವಿಕೆಯ ಅನುಭವ ಸೊಗಸಾಗಿತ್ತು. ಇಳಿದು ನಿಂತಾಗ ನಮಗೆ ಲಭಿಸಿದ ಬೆಟ್ಟದ ಪ್ರಸಾದ ಗೊತ್ತಾಯಿತು – ನಮ್ಮೆಲ್ಲರ ಖಾಕಿ ಪ್ಯಾಂಟಿನ ಪೃಷ್ಠಭಾಗ ಹರಿದು ಛಿದ್ರವಿಚ್ಛಿದ್ರವಾಗಿತ್ತು! ಸದ್ಯ ನಾವು ಪೇಟೆಯಲ್ಲಿಲ್ಲವಲ್ಲ. ಹಿಂತಿರುಗುವುದು ನಮ್ಮ ಲಾರಿಯಲ್ಲೇ ತಾನೆ ಎಂದು ಸಮಾಧಾನದ ನಿಟ್ಟುಸಿರುಬಿಟ್ಟೆವು. ಮುಂದೆ ಅರ್ಧ ತಾಸಿನಲ್ಲಿ ಬಳಸುದಾರಿಗಾಗಿ ಹತ್ತಿ ಶಿಖರದಲ್ಲಿ ಉಳಿದವರನ್ನು ಸಂಧಿಸಿದೆವು.

ಸಾವನದುರ್ಗದ ತಳದಲ್ಲಿ ನಿಂತು ನಾವು ತೆವಳಿ ಏರಿದ ದಾರಿ ನೋಡಿದಾಗ ಭಯವಾಯಿತು. ತೀರ ದುಡುಕಿದ್ದೆವು. ಹಗ್ಗ ಕಟ್ಟಿಕೊಳ್ಳುವ ಮೊದಲೇ ಯಾರಾದರೂ ಜಾರಿದ್ದರೆ ಮತ್ತೆ ಅವನ ಆಸೆ ಮುಗಿದಂತೆಯೇ. ಕೃತಾರ್ಥತೆಯ ಸಂತೋಷದೊಡನೆ ಈ ನೆನವರಿಕೆ ನನ್ನಲ್ಲಿ ಈಗಲೂ ಚಳಿ ಹುಟ್ಟಿಸುತ್ತದೆ.

ಯೂನಿವರ್ಸಿಟಿಯಿಂದ ಧನಸಹಾಯ ಮುಂಗಡವಾಗಿ ಲಭಿಸಿತು. ಸರಕಾರದಿಂದ ಎನ್‌ಸಿಸಿ ವಿಭಾಗದ ಮೂಲಕ ಒಂದು ಸಾವಿರ ರೂಪಾಯಿ ಶಿಕ್ಷಣ ಸಾಮಗ್ರಿ ಕೊಳ್ಳಲು ದೊರೆಯಿತು. ಡಾರ್ಜಿಲಿಂಗಿನ ಹಿಮಾಲಯ ಪರ್ವತಾರೋಹಣ ಸಂಸ್ಥೆಗೆ ಬರೆದು ನೈಲಾನ್ ಹಗ್ಗ, ಗವಸು ಮುಂತಾದವನ್ನು ತರಿಸಿಕೊಂಡೆವು. ಅಲ್ಲಿಂದ ಒಬ್ಬ ನುರಿತ ಶಿಕ್ಷಕನನ್ನು ನಮ್ಮ ಕುದುರೆಮುಖ ಶಿಬಿರದಲ್ಲಿ ಸಹಾಯಕನಾಗಿ ಬರಲು ಪತ್ರ ಬರೆದೆವು. ಅವನು ಜನವರಿ ೧೫ರ ಸುಮಾರಿಗೆ ಬೆಂಗಳೂರಿಗೆ ಬಂದು ತಲಪಬೇಕಾಗಿತ್ತು. ಮೈಸೂರು ಸರಕಾರದ ವೈದ್ಯ, ಆಹಾರ, ಅರಣ್ಯ ಮುಂತಾದ ಇಲಾಖೆಗಳಿಗೆ ಕಾಗದ ಬರೆದು ಅವರ ಸಹಕಾರ, ಸಹಾಯ ಯಾಚಿಸಿದೆವು. ಎಲ್ಲ ಕಡೆಗಳಿಂದಲೂ ನಮಗೆ ಸಹಕಾರ, ಪ್ರೋತ್ಸಾಹ ಒದಗಿದುವು. ಜನವರಿ ೩ರಂದು ವಾರ್ಷಿಕ ಶಿಕ್ಷಣ ಶಿಬಿರ ಮುಗಿಸಿ ಮರಳುವಾಗ ಕುದುರೆಮುಖ ಕೈ ಅಳತೆ ದೂರದಲ್ಲಿರುವಂತೆ ಭಾಸವಾಯಿತು.

ಬರಸಿಡಿಲು ಬಡಿಯಿತು
ಅಧ್ಯಾಯ ನಲ್ವತ್ತು

ಹೀಗೆ ನಮ್ಮ ವಿಶಿಷ್ಟ ಪ್ರಯತ್ನಗಳೂ ನಾಟಕವೊಂದರಲ್ಲಿ ಸನ್ನಿವೇಶಗಳು ಮೊದಲೇ ನಿಯಮಿಸಿದಂತೆ ಅನಾವರಣಗೊಳ್ಳುವ ರೀತಿಯಲ್ಲಿ, ಕುದುರೆಮುಖದೆಡೆಗೆ ಸಂಗಮಿಸಿ ಹರಿಯುತ್ತಿದ್ದುವು. ಈ ಘಟನಾಪರಂಪರೆಗಳನ್ನು ಅವುಗಳಿಂದ ಪ್ರತ್ಯೇಕವಾಗಿ ನಿಂತು ಸಿಂಹಾವಲೋಕಿಸುವಾಗ ನನಗೇ ಆಶ್ಚರ್ಯವಾಗುತ್ತಿತ್ತು. ಯಾವ ಶಕ್ತಿ ಒಂದು ಕಡೆ ನಮಗೆ ಪ್ರೇರಣೆ, ಚೇತನ ನೀಡಿ ಇವನ್ನು ನಮ್ಮಿಂದ ನಿರ್ವಹಿಸುವಂತೆ ಮಾಡುತ್ತಿದ್ದಿತೋ ಅದೇ ಶಕ್ತಿ ಇನ್ನೊಂದು ಕಡೆ ಒಂದು ದೊಡ್ಡ ದುರಂತ, ದುಃಖಮಯ ಘಟನೆಗೂ ಅದೇ ವೇಳೆ ಪೀಠಿಕೆ ಹಾಕುತ್ತಿದ್ದಿತು.

ನಮ್ಮ ಶಿಕ್ಷಣ ಮುಗಿದ ದಿವಸ ದೊರೆಗಳು, "ಸ್ವಲ್ಪ ಅರ್ಜೆಂಟಾಗಿ ನಾನು ಬೆಂಗಳೂರಿಗೆ ಹೋಗಬೇಕಾಗಿದೆ. ನನ್ನ ಮಗನ ಬಟ್ಟೆಗೆ ಬೆಂಕಿ ತಗಲಿ ಅವನನ್ನು ಆಸ್ಪತ್ರೆಗೆ ದಾಖಲಿಸಿದ್ದಾರಂತೆ. . ." ಎಂದು ಗಡಿಬಿಡಿಯಿಂದ ಹೋದರು. ಬೆಂಗಳೂರಿಗೆ ಮರಳಿದ ಮೇಲೆ ನಾವು ವಿಚಾರಿಸಿದಾಗ ಆತನ ಮೈಗೆ ಮೇಲಿಂದ ಮೇಲೆ ಸ್ವಲ್ಪ ಮಾತ್ರ ಬೆಂಕಿಯ ಉರಿ ಹತ್ತಿತ್ತು, ಅಪಾಯವೇನೂ ಇಲ್ಲ ಎಂದು ಅವರೇ ವೈದ್ಯರ ಅಭಿಪ್ರಾಯವನ್ನು ತಿಳಿಸಿದರು. ಮಗ ಸ್ವತಃ ಎಂಬಿಬಿಎಸ್ ಪರೀಕ್ಷೆಯನ್ನು ಆ ಹಿಂದೆ ಪಾಸು ಮಾಡಿದ್ದ ತರುಣ. ಜನವರಿ ಎರಡನೇ ವಾರದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಪದವಿ ಪ್ರದಾನ ಸಮರಂಭದಲ್ಲಿ ಡಿಗ್ರಿ ಪಡೆಯಬೇಕಿತ್ತು. ಆಸ್ಪತ್ರೆ ಅವನ ಮನೆಯಂತೆಯೇ ಇದ್ದುದರಿಂದ ಅಲ್ಲಿ ಉತ್ತಮ ವೈದ್ಯಕೀಯ ಚಿಕಿತ್ಸೆ ದೊರೆಯುತ್ತಿತ್ತು. ಬೇಗನೆ ಅವನು ಗುಣ ಹೊಂದುತ್ತಾನೆ ಎಂದು ನಾವೆಲ್ಲರೂ ತಿಳಿದಿದ್ದೆವು. ಆದರೆ ಪರಿಸ್ಥಿತಿ ತದ್ವಿಪರೀತವಾಗಿತ್ತು. ಸುಟ್ಟ ಗಾಯ ಹೊರಗಿನಿಂದ ತೀವ್ರವಾಗಿರಲಿಲ್ಲ, ನಿಜ. ಅದರ ಶಾಖ ಮಾತ್ರ ಒಳಗಿನ ಕೋಮಲ ಭಾಗಗಳಿಗೆ ಜಖಂ ಮಾಡಿರಬೇಕು. ದಿನೇ ದಿನೇ ಪರಿಸ್ಥಿತಿ ಉಲ್ಬಣಿಸುತ್ತ ಹೋಯಿತು. ಹಗಲೂ ಇರುಳೂ ದೊರೆಗಳು ಮಗನ ಜತೆಯಲ್ಲಿಯೇ ಇರಬೇಕಾದ ಸನ್ನಿವೇಶ. "ಯುದ್ಧರಂಗದಲ್ಲಿ ಗುಂಡುಗಳ ಮಳೆಯ ನಡುವೆ, ಜನ ಮಿಡತೆಗಳಂತೆ ಬೀಳುತ್ತಿದ್ದಾಗ ನಾನು ಬದುಕಿ ಬಂದದ್ದು ಈ ಪರಿಸ್ಥಿತಿ ನೋಡಲೆಂದೇ?" ಎಂದು ಉದ್ಗರಿಸಿದಾಗ, "ಜಪಾನೀ ಕೈದಿಯಾಗಿ ಹಲವು ವರ್ಷವಿದ್ದ ನಾನು, ಅವರ ಚಿತ್ರಹಿಂಸೆಗೊಳಗಾಗಿಯೂ ಖಾಯಿಲೆ ಕಸಾಲೆಗೆ ಸಿಕ್ಕಿಯೂ ಉಳಿದು ಬಂದುದು ಈ ದುಃಖ ಅನುಭವಿಸಲೆಂದೇ?" ಎಂದು ರೋದಿಸಿದಾಗ ಉತ್ತರ ಕೊಡಬಹುದಾದ ಶಕ್ತಿ (?) ಉತ್ತರವೀಯಲಿಲ್ಲ. ಉತ್ತರ ಕೊಡಲಾಗದ ನಾವು ದಿಗಂತವನ್ನು ನೋಡಿ ಬಿಸುಸುಯ್ದೆವು. ಅವರಾಗಿಯೇ ಒಂದು ದಿನ ಹೇಳಿದರು, "ಈ ಪರಿಸ್ಥಿತಿಯಲ್ಲಿ ನಾನು ಕುದುರೆಮುಖ ಶಿಬಿರಕ್ಕೆ ಬರುವಂತಿಲ್ಲ. ಅದರ ಕೊನೆಯ ಹಂತದ ಏರ್ಪಾಡನ್ನೂ ಮಾಡುವಂತಿಲ್ಲ. ನೀನೀ ವಿಶಿಷ್ಟ ಹೊಣೆಗಾರಿಕೆಯನ್ನೂ ಹೊತ್ತು ಮುಂದುವರಿಸಿಕೊಂಡು ಹೋಗಬೇಕು."

ನಾನೆಂದೆ, "ಈ ಶಿಬಿರವನ್ನು ನಡೆಸುವ ನಡೆಸದಿರುವ ಪ್ರಶ್ನೆ ನನಗೆ ಬರುವುದೇ ಇಲ್ಲ. ನಾವು ಒಂದು ಕೂಟವಾಗಿ ಸ್ವಸಂತೋಷದಿಂದ ಆಯ್ದುಕೊಂಡ ಸಾಹಸವಿದು. ಇದರಲ್ಲಿ ಮುಖ್ಯ ಸೂತ್ರಧಾರರಾದ ನೀವೇ ಬಂದು ನಮ್ಮೊಡನೆ ಇದ್ದು ನಮ್ಮ ಚಟುವಟಿಕೆಗಳಿಗೆ ಆಧಾರ, ಸ್ಥಿರತೆ ನೀಡದಿದ್ದರೆ ಅಂಥ ಶಿಬಿರ ಬರೀ ಯಾಂತ್ರಿಕ ಎನಿಸುತ್ತದೆ. ಯಾಂತ್ರಿಕತೆ, ಉತ್ಸಾಹಹೀನತೆ ಇಂಥ ಸ್ವಯಂಸ್ಫೂರ್ತ ಶಿಬಿರಗಳಲ್ಲಿ ಎಲ್ಲಿಯೂ ತಲೆದೋರಬಾರದು. ಮತ್ತೆ ನೀವಿಲ್ಲಿ

ಈ ವಿಷಾದಮಯ ವಾತಾವರಣದಲ್ಲಿರುವಾಗ ನಾವು ಅಲ್ಲಿ ಹೇಗೆ ಸಂತೋಷದಿಂದಿರುವುದು? ಅಲ್ಲದೇ ನಿಮಗೆ, ನಿಮ್ಮ ಮಗನ ಚಿಂತೆಯೊಡನೆ ಕುದುರೆಮುಖಕ್ಕೆ ಹೋದ ೩೭ ಮಕ್ಕಳ ಚಿಂತೆಯೂ ಸೇರುವುದು. ದೂರವಿದ್ದಾಗ ಚಿಂತೆ ಹೆಚ್ಚಷ್ಟೆ. ಆದ್ದರಿಂದ ಈ ಶಿಬಿರವನ್ನು ಮುಂದೂಡೋಣ. ನಿಮ್ಮ ಕುಮಾರ ಅಪಾಯದಿಂದ ಪಾರಾದ ಮೇಲೆ ಸಂತೋಷದಿಂದ ನಡೆಸೋಣ."

ನಮ್ಮನ್ನು ಹಿಂದೆ ಸಾವನದುರ್ಗಕ್ಕೆ ಕಳಿಸಿದ ಇವರು, ಖುದ್ದು ನಾನೇ ಹುಡುಗರ ಜತೆಯಲ್ಲಿ ಹೋಗಿದ್ದರೂ ನಾವು ಮರಳುವತನಕ ಆಹಾರ, ವಿಶ್ರಾಂತಿ ಸರಿಯಾಗಿ ಪಡೆಯದೇ ಅಸಹಾಯಕರಾಗಿ ಉದ್ವಿಗ್ನತೆಯಿಂದ ಚಡಪಡಿಸುತ್ತಿದ್ದರಂತೆ. ಆ ಕಡೆಯಿಂದ ಬರುವ ಪ್ರತಿ ಬಸ್ಸನ್ನೂ ತಡೆದು ನಮ್ಮ ವಿಚಾರ ಪ್ರಶ್ನಿಸುತ್ತಿದ್ದರಂತೆ. ನಾವು ಮರಳುವಾಗ ರಾತ್ರಿ ೧೧ ಗಂಟೆಯಾಗಿತ್ತು. ರಾತ್ರಿ ಏರಿದಂತೆ ಅವರ ಉದ್ವಿಗ್ನತೆ ಏರಿತಂತೆ. ನಾವು ಹಿಂತಿರುಗಿದ ಮೇಲೆಯೇ ಅವರು ಶಾಂತರಾದರು. ಕ್ಯಾಂಪಿನ ಪ್ರತಿ ಮಗುವೂ ತನ್ನ ಮಗುವೆಂದೇ ತನ್ನ ರಕ್ಷಣೆಯಲ್ಲಿ ಇರುವ ಪವಿತ್ರ ನಿಧಿಯೆಂದೇ ಅವರ ವಿಶ್ವಾಸಪೂರ್ವಕ ನಂಬಿಕೆ. ಅದೇ ರೀತಿಯ ವರ್ತನೆ. ಇಂಥವರು ನಮ್ಮನ್ನು ೨೦೦ ಮೈಲು ದೂರದ ಕುದುರೆಮುಖದ ಅಜ್ಞಾತ ಔನ್ನತ್ಯದ ಅಪಾಯದೆಡೆಗೆ ಕಳಿಸಿ ಇಲ್ಲಿ ಸುಮ್ಮನೆ ಕುಳಿತಾರೇ?

ಅವರು ಒಪ್ಪಲಿಲ್ಲ, "ನಾವು ನಿಶ್ಚೈಸಿದ ತಾರೀಕಿಗೆ ಹೊರಡಲೇಬೇಕು. ಮಗನ ಅಂದಿನ ಪರಿಸ್ಥಿತಿ ನೋಡಿ ನಿಮ್ಮ ಜೊತೆಯಲ್ಲಿ ಅಲ್ಲಿಯವರೆಗೆ ಬಂದು ಒಂದೆರಡು ದಿನವಿದ್ದು ಹಿಂತಿರುಗುತ್ತೇನೆ. ಇಲ್ಲ, ಶಿಬಿರ ನಡೆಯುತ್ತಿರುವಾಗ ನಡುವೆ ಬಂದು ಸೇರಿಕೊಳ್ಳುತ್ತೇನೆ. ಬೆಟಾಲಿಯನ್ ಕೈಗೊಂಡ ನಿರ್ಧಾರ ನನ್ನೊಬ್ಬನ ಹಿತಾಸಕ್ತಿಗಳನ್ನು ಅನುಸರಿಸಿ ಬದಲಾಗಬಾರದು."

ಅವರ ಮಗನ ಪರಿಸ್ಥಿತಿ ಅತಿ ಚಿಂತಾಜನಕವಾಗಿತ್ತು. ನನಗಾಗಲೀ ನಮ್ಮ ಹುಡುಗರಿಗಾಗಲೀ ಯಾರಿಗೂ ಉತ್ಸಾಹವಿರಲಿಲ್ಲ. "ಬೆಟಾಲಿಯನ್ ಕಮಾಂಡರನ್ನು ಬಿಟ್ಟು ಬೆಟಾಲಿಯನ್ ಇಲ್ಲ. ಈ ಸಂದರ್ಭದಲ್ಲಿ ನಾನು ಗುರುತರ ಹೊಣೆ ಹೊರಲಾರೆ. ಆದ್ದರಿಂದ ಶಿಬಿರವನ್ನು ಮುಂದೂಡುವುದೊಂದೇ ಮಾರ್ಗ" ಎಂದು ನಾನು ಹಠ ಹಿಡಿದೆ. ಅವರು ಏನೂ ಅನ್ನಲಿಲ್ಲ. ಹುಡುಗರನ್ನು ಪ್ರತ್ಯೇಕವಾಗಿ ಭೇಟಿಯಾಗಿ ಸಂಗತಿ ವಿವರಿಸಿದೆ. ಅವರಿಗೆಲ್ಲ ಹತಾಶೆ ಆಯಿತು, ನಿಜ. ಆದರೆ ನನ್ನ ನಿರ್ಧಾರವನ್ನು ಅವರು ಪೂರ್ತಿಯಾಗಿ ಅನುಮೋದಿಸಿದರು.

ಕುಮಾರ ಉಳಿಯಲಿಲ್ಲ. ಶಿಬಿರ ಮುಂಡೂಡುವ ನಿರ್ಧಾರ ಕೈಗೊಂಡೊಡನೆ (ಜನವರಿ ೧೦) ನಾವು ಡಾರ್ಜಿಲಿಂಗಿಗೆ ತಂತಿ ಕಳಿಸಿದೆವು. ಶೆರ್ಪಾ ಶಿಕ್ಷಕ ಬರುವುದು ಬೇಡವೆಂದು. ಆದರೆ ಅಷ್ಟರಲ್ಲಿಯೇ ಅಲ್ಲಿಂದ ಒಬ್ಬನಲ್ಲ, ಉತ್ಸಾಹೀ ತರುಣರಿಬ್ಬರು ಹೊರಟು ಬಿಟ್ಟಿದ್ದರು. ಆ ದುರ್ದಿನದ ಬೆಳಗ್ಗೆ (ಜನವರಿ ೧೫) ಅವರೂ ಬಂದಿಳಿಯಬೇಕೇ. ದೈವದ ಕ್ರೂರ ಪ್ರಹಾರವೆಂದರೆ ಇದೇ. ಅವರ ಖರ್ಚು ವೆಚ್ಚವಿತ್ತು ದುಃಖದಿಂದ ಹಿಂದೆ ಕಳಿಸಿದೆವು. ಬೇರಾವ ಮಾರ್ಗವೂ ಇರಲಿಲ್ಲ.

ತೊರೆ ಹರಿಯಿತು
ಅಧ್ಯಾಯ ನಲ್ವತ್ತೊಂದು

ಜನವರಿ ಕೊನೆಯ ವಾರದಲ್ಲಿ ದೊರೆಗಳು ಆಫೀಸಿಗೆ ಬಂದರು. ಈಗ ಅವರಲ್ಲಿ ಮೊದಲಿನ ಗೆಲುವಿಲ್ಲ. ದೃಷ್ಟಿ ಅಂತರ್ಮುಖಿಯಾಗಿದೆ. ಕರ್ತವ್ಯ ನಿರ್ವಹಣೆಯೊಂದೇ ಜೀವನದ ಪರಮಪದವಿ ಪಡೆಯುವ ದಾರಿ ಎಂದು ತಿಳಿದು ಅನುಷ್ಠಾನಕ್ಕೆ ತಂದವರಿವರು. ಕಚೇರಿಯ ಫೈಲುಗಳನ್ನೂ ಹಳೆಯ ಕಾಗದ ಪತ್ರಗಳನ್ನೂ ಓದುತ್ತಿದ್ದರು. ಫೋನಿಗೆ ಉತ್ತರ ಕೊಡುತ್ತಿದ್ದರು. ನಾನು ಸುಮ್ಮನೆ ಅವರೆದುರು ಕುಳಿತಿದ್ದೆ. ಏನನ್ನು ಹೇಗೆ ಮಾತಾಡಲಿ? ಅವರೇ ತೊಡಗಿದರು,
"ಹಾಗಾದರೆ ಇನ್ನು ಮುಂದಿನ ದಾರಿ ಏನೆಂದು ಯೋಚನೆ ಮಾಡಿದ್ದೀಯೆ?"
"ಈಗಿನ ಸನ್ನಿವೇಶದಲ್ಲಿ. . ."
"ಸನ್ನಿವೇಶ ಮುಗಿಯಿತಲ್ಲ, ಯೂನಿವರ್ಸಿಟಿಗೆ, ಹುಡುಗರಿಗೆ ಕೊಟ್ಟ ಮಾತು ನಾವು ಉಳಿದವರು ಪೂರೈಸಲೇಬೇಕಷ್ಟೆ."
"ಆದರೆ ನೀವೀಗ ನಿಮ್ಮ ಮನೆ ಮಠ ಬಿಟ್ಟು ಅಷ್ಟು ದೂರ ಬರುವುದು ಸಾಧ್ಯವೇ, ಸರಿಯೇ? ಆರೋಗ್ಯ ಸರಿಯಾಗಿ ಉಳಿದೀತೇ?"

"ಸ್ವಲ್ಪ ಹೊರಗೆ ಹೋಗಿ ಬರುವುದೇ ಹಿತಕರ. ಹುಡುಗರ ಸಹವಾಸ ಈಗ ಮನಸ್ಸಿಗೆ ಅಗತ್ಯವಾದ ಟಾನಿಕ್." ಕ್ಯಾಲೆಂಡರ್ ನೋಡಿ, ತಿರುವಿ ಫೆಬ್ರುವರಿ ೧೧ರಿಂದ ೨೦ರ ತನಕ ಶಿಬಿರ ನಡೆಸುವುದೆಂದು ನಿಶ್ಚೈಸಿದೆವು. ಮತ್ತೆ ಪುನಃ ಬೇರೆ ಬೇರೆ ಇಲಾಖೆಗಳಿಗೆ ಪತ್ರ ಬರೆದೆವು. ಶೆರ್ಪಾಗಳಿಗೆ ಮಾತ್ರ ಬರೆಯಲಿಲ್ಲ.

ಕಾಗದದ ಕುದುರೆಮುಖ
ಅಧ್ಯಾಯ ನಲ್ವತ್ತೆರಡು

ಮುಂದಿದ್ದ ಅವಧಿ ೧೨ ದಿವಸ ಮಾತ್ರ. ಆಗಬೇಕಾಗಿದ್ದ ಕೆಲಸ ಅಗಾಧವಾಗಿತ್ತು. ಆಹಾರ ಸಾಮಗ್ರಿಗಳ ಶೇಖರಣೆ; ಡೇರೆ ಮತ್ತು ಶಿಕ್ಷಣ ಸಾಮಗ್ರಿಗಳ ಕ್ರಮಬದ್ಧ ಜೋಡಣೆ; ಎರಡು ಮಿಲಿಟರಿ ಲಾರಿಗಳನ್ನು ಓಡಿಸಲು ಮಿಲಿಟರಿ ಅಧಿಕಾರಿಗಳಿಂದ ಅನುಮತಿ; ಅಡುಗೆಯವರ ಏರ್ಪಾಡು; ಹುಡುಗರಿಗೆ ಪೋಷಾಕು, ಸರಂಜಾಮು ಕೊಟ್ಟು ಅವರನ್ನು ಸಿದ್ಧಪಡಿಸುವುದು. ಇವುಗಳಲ್ಲಿ ಯಾವುದೇ ಒಂದು ಸರಿಯಾಗಿ ಆಗದಿದ್ದರೂ ಶಿಬಿರ ನಡೆಯುವಂತಿಲ್ಲ.

ನಮ್ಮ ಬೆಟಾಲಿಯನ್ನಿನ ಬೆನ್ನೆಲುಬು, ಎಲ್ಲಿಯೂ ಎಂದೂ ಪ್ರತ್ಯೇಕವಾಗಿ ಪ್ರಕಾಶಕ್ಕೆ ಬರದೇ, ಆದರೆ ಎಲ್ಲೆಲ್ಲಿಯೂ ತಮ್ಮ ದಕ್ಷತೆಯ ಕುರುಹನ್ನು ಬೀರುವ ಅಡ್ಮಿನಿಸ್ಟ್ರೇಟಿವ್ ಆಫೀಸರ್ ಕ್ಯಾಪ್ಟನ್ ಎಚ್.ಎನ್. ಅಶ್ವತ್ಥನಾರಾಯಣ. ಒಂದು ಸಾವಿರದಷ್ಟು ದೊಡ್ಡ ಕ್ಯಾಂಪೂ ಅಶ್ವತ್ಥರಿಗೆ ಲೀಲಾಜಾಲ. ಆಹಾರ ಮತ್ತು ಇತರ ಏರ್ಪಾಡುಗಳು ಸಂಪೂರ್ಣವಾಗಿ ಅವರವೇ. ೧೨ನೇ ಮೈಸೂರಿನ ಕ್ಯಾಂಪ್ ಎಂದರೆ ಅಶ್ವತ್ಥರ ಕ್ಯಾಂಪು. ಅದಕ್ಕೆ ಬರಲು ಬೇರೆ ಬೆಟಾಲಿಯನ್ನಿನ ಹುಡುಗರಿಗೂ ತವಕ. ಅಷ್ಟು ಪುಷ್ಕಳ ಮತ್ತು ಸಮೃದ್ಧ ಆಹಾರವನ್ನಿವರು ಒದಗಿಸುವರು. ನಿಜವಾದ ಕ್ಯಾಂಪು ನಡೆಸಿ ಮುಗಿಯುವಾಗಲೇ ಅದರ ಲೆಕ್ಕಪತ್ರಗಳ ಪರಿಶೋಧನೆಯೂ (audit) ಆಗಬೇಕು. ಯುದ್ಧರಂಗದ ವೀರಾಧಿವೀರರು ಈ ಪರಿಶೋಧನೆಯ ಕಾಗದದ ಯುದ್ಧದಲ್ಲಿ ಬಸವಳಿದು, "ಕ್ಯಾಂಪು ಆಡಿಟ್ಟಿಗಾಗಿಯೋ ಆಡಿಟ್ ಕ್ಯಾಂಪಿಗಾಗಿಯೋ?" ಎಂದು ಕೇಳುವ ಪರಿಸ್ಥಿತಿ ಹೆಚ್ಚು. ಅಶ್ವತ್ಥರಿಗೆ ಇಲ್ಲಿಯೂ ತೊಂದರೆ ಇಲ್ಲ. ಇವರ ಕೆಲಸ ಕಾರ್ಯ ಅಷ್ಟೊಂದು ಕ್ರಮಬದ್ಧವಾದುದರಿಂದ ಎಡಗಾಲಾದ ಮೇಲೆ ಬಲಗಾಲು ಮುಂದಕ್ಕೆ ತಂತಾನೇ ಹೋಗುವಂತೆ ನಿಜ ಕ್ಯಾಂಪೂ ಪೇಪರ್ ಕ್ಯಾಂಪೂ ಎರಡೂ ಇವರಿಗೆ ಸಮಾನ ಸುಲಭವೇ.

ಅಶ್ವತ್ಥರಿಗೆ ಬೆಟಾಲಿಯನ್ ಕೆಲಸ ಉಸಿರು ಕಟ್ಟಿಸುವಷ್ಟು ಇದ್ದುದರಿಂದ ಕುದುರೆಮುಖದ ವಿಚಾರದಲ್ಲಿ ತೊಂದರೆ ಇದುವರೆಗೆ ಕೊಟ್ಟಿರಲಿಲ್ಲ. ಈಗ ಆಹಾರದ ವ್ಯವಸ್ಥೆ ಮಾಡಲು ಇವರೇ ಸರಿಯೆಂದು ಇದನ್ನೂ ಅಡುಗೆಯವರನ್ನು ದೊರಕಿಸಿಕೊಡುವ ಹೊಣೆಯನ್ನೂ ಇವರಿಗೆ ವಹಿಸಲಾಯಿತು. "ಮಾಡೋಣ" ಎಂಬ ಹಸನ್ಮುಖ ವಾಣಿ ಮಾತ್ರ ಇವರಿಂದ ಬಂದ ಉತ್ತರ. ಲಾರಿಯ ಏರ್ಪಾಡನ್ನು ಒಂದೂರಿಂದ ಇನ್ನೊಂದೂರಿಗೆ ಹೊರಡಿಸುವ ಮುನ್ನ ಲಾರಿ ಭಾರದ ಪತ್ರ ವ್ಯವಹಾರ ನಡೆಸಿರಬೇಕು. ಉಳಿದಿದ್ದ ೧೦-೧೨ ದಿವಸಗಳಲ್ಲಿ ಪತ್ರಗಳೊಡನೆ ದೊರೆಗಳೇ ನಡೆಯದಿದ್ದರೆ ಅನುಮತಿ ಸಕಾಲದಲ್ಲಿ ದೊರೆಯಲಾರದು. ಒಂದು ವಾರವಿರುವಾಗಲೇ ಎರಡು ಲಾರಿಗಳ ಚಾಲನೆಗೂ ಅನುಮತಿ ದೊರೆಯಿತು. ಒಂದು ಲಾರಿ ನಮ್ಮ ಬೆಟಾಲಿಯನ್ನಿನದೇ; ಇನ್ನೊಂದು ಬೇರೆ ಒಂದು ಬೆಟಾಲಿಯನ್ನಿನದು. ಉಳಿದ ಸಮಸ್ಯೆಗಳ ಪರಿಹಾರ ನನ್ನ ಮಟ್ಟದಲ್ಲಿ ಪಡೆಯಲು ಸಾಧ್ಯವಿತ್ತು. ಹೀಗೆ ನಾವು ಮೂರು ದಾರಿಗಳ ಮೂಲಕ ಕುದುರೆಮುಖದ ಶಿಖರದೆಡೆಗೇರುವ ಪ್ರಯತ್ನದಲ್ಲಿ ನಿತ್ಯ ನಿರತರಾಗಿದ್ದೆವು.

ಈ ಮಧ್ಯೆ ದೈವ (?) ಎರಡನೇ ಪರೀಕ್ಷೆಯನ್ನು ದೊರೆಗಳ ಮುಂದೆ ಒಡ್ಡಿತು. ಅವರ ತೊಂಬತ್ತರ ಸಮೀಪದ ಆರಡಿ ಮೂರಿಂಚು ಎತ್ತರದ ಭೀಮಸದೃಶ ತಂದೆ, ಮೊಮ್ಮಗನ ಅಕಾಲ ನಿಧನದಿಂದ ಬಲುಗಾಸಿಗೊಂಡ ಹಿರಿಯ ಚೇತನ, ಒಂದು ದಿವಸ ಕುರ್ಚಿಯಲ್ಲಿ ಕುಳಿತಿದ್ದಂತೆಯೇ ತಲೆತಿರುಗಿ ಕೆಳಗೆ ಬಿದ್ದರು. ಆಗ ಅವರ ಕಾಲಿನ ಮೂಳೆ ಮುರಿಯಿತು. ಮನಸ್ಸು, ದೇಹಗಳ ನೋವು, ಪ್ರಾಯ ೯೦. ಇನ್ನು ಮೂಳೆ ಕೂಡುವುದು ಉಂಟೇ? ಆದರೂ ಪ್ರಯತ್ನ ಮಾಡಲೇಬೇಕು. ನೋವಾದರೂ ಉಪಶಮನವಾದೀತು. ಪುನಃ ಆಸ್ಪತ್ರೆಯ ಯಾತ್ರೆ ದೊರೆಗಳಿಗೆ ಪ್ರಾಪ್ತಿಯಾಯಿತು. ಪ್ರಾಣಾಪಾಯವಿದ್ದಂತೆ ತೋರಲಿಲ್ಲ. ಆದರೆ ೯೦ರ ಪಕ್ವ ಪರಿಸ್ಥಿತಿಯಲ್ಲಿ ಏನೂ ಆಗಬಹುದು.

"ಈ ಸಲ ಏನೇ ಆದರೂ ಕ್ಯಾಂಪು ನಡೆದೇ ತೀರಬೇಕು" ಎಂದು ಅವರಾಗಿಯೇ ನನಗೆ ಹೇಳಿದರು. ಮನೆಯಲ್ಲಿ ವೃದ್ಧೆ ತಾಯಿ, ಆಸ್ಪತ್ರೆಯಲ್ಲಿ ಜಖಂಗೊಂಡ ತಂದೆ, ಮಧ್ಯೆ ಎಡೆತಡೆಯಿರದ ಹೊಣೆಗಾರಿಕೆಗಳ ಪರಂಪರೆ. ಅವರ ಧೀರೋದಾತ್ತ ವ್ಯಕ್ತಿತ್ವ ಇವುಗಳಿಗೆಲ್ಲ ಸಮತೂಕವಾಗಿ ಎದ್ದು ನಿಂತು ಕರ್ತವ್ಯ ನಿರ್ವಹಿಸಿತು.

ನಮ್ಮ ಲಾರಿಯೇನೋ ಸರಿಯಾಗಿತ್ತು. ಬೇರೆ ಬೆಟಾಲಿಯನ್ನಿನ ಲಾರಿ ಮಿಲಿಟರಿ ವರ್ಕ್‌ಷಾಪಿಗೆ ಆ ಮೊದಲೇ ರಿಪೇರಿಗಾಗಿ ಹೋಗಿತ್ತು. ಎರಡು ಮೂರು ದಿವಸಗಳಲ್ಲಿ ಎಲ್ಲ ಸರಿಯಾಗುವುದೆಂದು ಕಾರ್ಯಾಗಾರದವರು ಆಶ್ವಾಸನೆಯಿತ್ತಿದ್ದರು. ಆದರೂ ದೊರೆಗಳು ಪ್ರತಿದಿನ ತಂದೆಯವರೊಡನೆ ಕಳೆದಷ್ಟೇ ಹೊತ್ತು ಮಿಲಿಟರಿ ಕಾರ್ಯಾಗಾರದಲ್ಲಿಯೂ ಕಳೆಯುತ್ತಿದ್ದರು. ರಿಪೇರಿಯ ಪ್ರಗತಿ ಏನೂ ಸಾಲದು, ಲಾರಿಯಲ್ಲಿರುವ ನ್ಯೂನತೆಗಳು ಹಲವಾರು ಎಂದೇ ಪ್ರತಿ ದಿನದ ವರದಿ. ನಾವು ೧೧ರ ಬೆಳಗ್ಗೆ ಹೊರಟು ಇಡೀ ದಿವಸ ಲಾರಿ ಪ್ರಯಾಣದಲ್ಲಿ ವ್ಯರ್ಥ ಮಾಡುವುದಕ್ಕಿಂತ ೧೦ರ ಸಾಯಂಕಾಲವೇ ಹೊರಟು ಹೋಗುವುದು. ಮಧ್ಯರಾತ್ರಿಯ ತನಕವೂ ಚಾಲನೆ ಮಾಡಿ ಬೇಲೂರು ಸೇರಿ ಅಲ್ಲಿ ತಂಗುವುದು ಎಂದು ನಿರ್ಧರಿಸಿದೆವು. ರಾತ್ರಿ ಪ್ರಯಾಣ ಲಾರಿ ಎಂಜಿನ್ನುಗಳಿಗೂ ಒಳ್ಳೆಯದು, ದಾರಿಯಲ್ಲಿ ಬೇಲೂರನ್ನೂ ನೋಡಿದ ಹಾಗೆ ಆಯಿತು. ಇದು ನಮ್ಮ ಯೋಜನೆ.

ದಿನ ಉರುಳಿದಂತೆ ಒಂದು ಕಡೆ ದೊರೆಗಳ ತಂದೆಯವರ ಆರೋಗ್ಯ ಗಾಬರಿ ಹುಟ್ಟಿಸುವಂಥ ಸ್ಥಿತಿಗೆ ಮುಟ್ಟಿತು. ಇನ್ನೊಂದು ಕಡೆ ವರ್ಕ್‌ಷಾಪಿನಲ್ಲಿದ್ದ ಲಾರಿ ಇನ್ನೂ ಓಡುವ ಸ್ಥಿತಿಗೆ ಬಂದಿರಲಿಲ್ಲ – ದ್ವಿವಿಧ ಪರೀಕ್ಷೆ.

೧೦ನೆಯ ತಾರೀಕು ಬಂದೇಬಿಟ್ಟಿತು. ಸಾಯಂಕಾಲ ಬೀಳ್ಕೊಡುವ ಮೀಟಿಂಗಿನ ಸಿದ್ಧತೆ ಮುಗಿದಿದೆ. ಆಹಾರ, ಸಾಮಾನು, ಸರಂಜಾಮು ಎಲ್ಲವೂ ಕ್ರಮಬದ್ಧವಾಗಿ ಲಾರಿಗೆ ಹಾರಲು ತಯಾರಾಗಿವೆ. ಒಂದು ಲಾರಿಯನ್ನು ಲೋಡ್ ಮಾಡಿಯಾಯಿತು. ಹುಡುಗರೆಲ್ಲರೂ ಉತ್ಸಾಹದಿಂದ ಬಂದು ಕಾಲೇಜಿನಲ್ಲಿ ಜಮಾಯಿಸುತ್ತಿದ್ದಾರೆ. ನವಹರ್ಷ ಅನುಭವಿಸುವ ಕುತೂಹಲ ಅವರ ಮುಖಗಳ ಮೇಲೆ ನಲಿದಾಡುತ್ತಿದೆ. ಬೆಟಾಲಿಯನ್ ಆಫೀಸಿಗೆ ಫೋನ್ ಮಾಡಿದಾಗ ದೊರೆಗಳಿರಲಿಲ್ಲ. ಅಶ್ವತ್ಥರೆಂದರು, "ಲಾರಿಯಿನ್ನೂ ಹೊರಗೆ ಬರುವ ಲಕ್ಷಣವಿಲ್ಲ. ಅವರ ತಂದೆಯವರ ಸ್ಥಿತಿ ಭಯಂಕರವಾಗಿದೆ. ಜೊತೆಗೆ ದೊರೆಗಳನ್ನು ಬಳ್ಳಾರಿಗೆ ವರ್ಗಾಯಿಸುವ ಆರ್ಡರೂ ಬಂದಿದೆ. ನಿಮ್ಮ ಕ್ಯಾಂಪಿನ ಕೊನೆಯ ದಿವಸ ಅವರು ಹೊಸಬರಿಗೆ ಹೊಣೆ ವಹಿಸಿಕೊಡಬೇಕು. ಆದ್ದರಿಂದ ಅವರು ಹೇಗೆ ಬರುತ್ತಾರೋ ನಾ ಕಾಣೆ. ಈ ಆಡಳಿತೆಯ ಬದಲಾವಣೆಯ ಸಂದರ್ಭದಲ್ಲಿ ನಾನೂ ಹೊರಡುವಂತಿಲ್ಲ."
ಹರ್ಷಸೌಧಕ್ಕೆ ಕಳಶ ಇಡುವಂಥ ಸುದ್ದಿ! ಒಂದೇ ಎರಡೇ? ಅವುಗಳ ಪರಂಪರೆಯೇ.

ಸಭೆ ೪ ಗಂಟೆ ಸಾಯಂಕಾಲಕ್ಕೆ ಸೇರಬೇಕು. ಅಪರಾಹ್ಣ ೨ ಗಂಟೆ ತನಕವೂ ಹೊಸ ಸುದ್ದಿ ಏನೂ ಬರಲಿಲ್ಲ. ಏನೇ ಆಗಲಿ ಒಂದು ಲಾರಿಯಲ್ಲಿ ಸಾಮಾನೆಲ್ಲ ಹೇರಿ ಆಗುವಷ್ಟು ಹುಡುಗರನ್ನು ಕರೆದುಕೊಂಡು ಹೊರಟೇ ಬಿಡುವುದು. ಉಳಿದವರು ಮರುದಿವಸ ಬೆಳಗ್ಗೆ ಬಸ್‌ನಲ್ಲಿ ಹೊರಟು ಬೆಳ್ತಂಗಡಿಗೆ ಸಂಜೆ ತಲಪಬೇಕು. ಬೇರಾವ ಮಾರ್ಗವೂ ಇಲ್ಲ ಎಂದು ನಿಶ್ಚೈಸಿದ್ದೆ. ಇಷ್ಟಾಗುವಾಗ ಕಾಲೇಜಿನ ಹಿಂದುಗಡೆ ಗೇಟಿನಿಂದ ದೊರೆಗಳು ಹರ್ಷವದನರಾಗಿ ಮೇಲೆ ಬರುವುದನ್ನು ಕಂಡೆ.

"ಪರೀಕ್ಷೆಯಲ್ಲಿ ಗೆದ್ದಂತಾಯಿತು" ಎಂದರು. ಮುಂದುವರಿಯುತ್ತ, "ಮೊದಲು ವರ್ಕ್‌ಷಾಪ್ ನೋಡಿದೆ. ಲಾರಿ ಇನ್ನೊಂದು ವಾರದ ಮೇಲಾದರೂ ಹೊರಡುವುದೋ ಇಲ್ಲವೋ ಸಂದೇಹ. ಅಲ್ಲಿಂದ ಸೀದಾ ಗ್ರೂಪ್ ಕಮಾಂಡರರ ಹತ್ತಿರ ಹೋದೆ. ಪರಿಸ್ಥಿತಿ ವಿವರಿಸಿದೆ. ಅವರ ಹತೋಟಿಯಲ್ಲಿರುವ ಬೇರಾವುದಾದರೂ ಬೆಟಾಲಿಯನ್ ಲಾರಿ ಕೊಡಿಸಲು ವಿನಂತಿಸಿದೆ. ಅವರ ಅನುಮತಿಯಿಂದ ನನ್ನ ಹಳೆಯ ಮಿತ್ರ, ಸಹೋದ್ಯೋಗಿ ಈಗ ಒಂದನೇ ಮೈಸೂರಿನ ಓಸಿ ಮೇಜರ್ ಎಂ.ಎಸ್. ಖಾನ್‌ರಿಗೆ ಫೋನ್ ಮಾಡಿದೆ: 'ಖಾನ್! ನಾನು ತೊಂದರೆಯಲ್ಲಿದ್ದೇನೆ. ೧೨ ದಿವಸಗಳವರೆಗೆ ಈಗಿಂದೀಗಲೇ ಕುದುರೆಮುಖಕ್ಕೆ ಹೋಗಿ ಬರಲು ನಿಮ್ಮ ಲಾರಿ ಬೇಕು' ಎಂದೆ. 'ಕಳಿಸಿಕೊಡುತ್ತೇನೆ' ಒಂದೇ ಉತ್ತರ ಅವರದು. ನಾನವರ ಆಫೀಸಿಗೆ ಹೋಗುವಷ್ಟರಲ್ಲಿಯೇ ಅವರು ಡ್ರೈವರ್ ಲಾರಿ ಎಲ್ಲವನ್ನೂ ಸಿದ್ಧಪಡಿಸಿ ಹೊರಡಿಸಿ ಬಿಟ್ಟಿದ್ದರು. ಲಾರಿ ಡ್ರೈವರ್ ರಜೆಯಲ್ಲಿದ್ದುದರಿಂದ ಕಾರ್ ಡ್ರೈವರ್ ಲಿಂಗೋಜಿಯನ್ನು ಈ ಲಾರಿಯಲ್ಲಿ ಕಳಿಸಿದ್ದಾರೆ. ಈ ಲಿಂಗೋಜಿಯೂ ನನ್ನ ಹಳೆಯ ಅನುಯಾಯಿ."

ಕಾಲೇಜಿನ ಹಿಂದೆ ಅನ್ಸಾರಿ (ನಮ್ಮ ಡ್ರೈವರ್) ಲಾರಿಯೂ ಲಿಂಗೋಜಿ ಲಾರಿಯೂ ಭರದಿಂದ ಹೇರಲ್ಪಟ್ಟವು. ಸಭೆ ಪ್ರಾರಂಭವಾಗುವ ಮೊದಲು ದೊರೆಗಳು ಇನ್ನೊಂದು ಮಾತು ಹೇಳಿದರು, "ನಾನು ನಿಮ್ಮೊಡನೆ ಬರುತ್ತೇನೆ. ಅಲ್ಲಿ ಒಂದೆರಡು ದಿನವಿದ್ದು ಹಿಂತಿರುಗುತ್ತೇನೆ. ಈ ದಿವಸ ಬೆಳಗ್ಗೆ ನನ್ನ ತಂದೆಯವರನ್ನೇ ಕೇಳಿಬಿಟ್ಟೆ: 'ಎರಡೂ ಕರ್ತವ್ಯಗಳೇ, ಎರಡೂ ಅತಿಮುಖ್ಯವಾದವೇ, ಯಾವುದನ್ನು ನಿರ್ವಹಿಸಲಿ, ಯಾವುದನ್ನು ನಿರ್ವಹಿಸದಿರಲಿ' ಎಂದು.

ಅವರು ಸ್ಪಷ್ಟವಾಗಿ ಹೇಳಿದರು, 'ನೀನು ಹೋಗು, ಕ್ಯಾಂಪನ್ನು ಪೂರ್ಣವಾಗಿ ಸರಿಯಾಗಿ ನಡೆಸು. ನೀನು ಹಿಂತಿರುಗಿ ಬರುವವರೆಗೂ ನನಗೇನೂ ಆಗುವುದಿಲ್ಲ' ಎಂದು. ಈಗ ನಾನು ಲಘುವಾಗಿದ್ದೇನೆ."
ಒಳ್ಳೆಯ ಕೆಲಸಕ್ಕೆ ನೂರೆಂಟು ವಿಘ್ನಗಳು. ಅವನ್ನು ಯಶಸ್ವಿಯಾಗಿ ಎದುರಿಸಿದರೆ ನೂರೊಂಬತ್ತನೆಯದು ಜಯ.

ಮೀಟಿಂಗಿನಲ್ಲಿ ಪ್ರಿನ್ಸಿಪಾಲ್ ಆರ್. ಆರ್, ಉಮರ್ಜಿಯವರು ಮತ್ತು ಸಹೋದ್ಯೋಗಿಗಳು ಸಾಹಸಪ್ರಿಯರಿಗೆ ಶುಭ ಕೋರಿದರು. ಕಾಲೇಜಿಗೆ, ಬೆಟಾಲಿಯನ್ನಿಗೆ, ಯೂನಿವರ್ಸಿಟಿಗೆ ಜಯ ಜಯಕಾರ ಘೋಷಿಸಿ ಅದು ಅಂತ್ಯವಾಯಿತು.

ಕುದುರೆಮುಖದ ರಾವುತರು
ಅಧ್ಯಾಯ ನಲ್ವತ್ಮೂರು

೩೭ ಕ್ಯಾಡೆಟ್ಟುಗಳು, ಇಬ್ಬರು ಅಡುಗೆಯವರು, ಇಬ್ಬರು ಡ್ರೈವರ್, ಒಬ್ಬ ಸೇವಕ, ಸುಬೇದಾರ್ ಖಾನ್ವಿಲ್ಕರ್ ಸೇರಿದಂತೆ ನಾಲ್ಕು ಮಂದಿ ಮಿಲಿಟರಿ ಶಿಕ್ಷಕರು, ನಾಲ್ವರು ಎನ್‌ಸಿಸಿ ಆಫೀಸರುಗಳು (ನಿಸಾರ್ ಅಹಮದ್, ಕೆಂಡಗಣ್ಣ ಸ್ವಾಮಿ, ಶಿವಪ್ಪ ಮತ್ತು ನಾನು) ಮತ್ತು ಮುಖ್ಯ ನಾಯಕರು ಮೇಜರ್ ನಾರಾಯಣ ಸಿಂಗ್ (ದೊರೆಗಳು) – ಹೀಗೆ ೫೧ ಜನರ ತಂಡ ಸ್ವಯಂ ಪೂರ್ಣವಾಗಿ ಎರಡು ಲಾರಿಗಳಲ್ಲಿ ವಿಂಗಡಿಸಲ್ಪಟ್ಟು ಕುದುರೆಮುಖದೆಡೆಗೆ ಹೊರಟಿತು. ಅಶ್ವತ್ಥರು ಎಲ್ಲವನ್ನೂ ಅತ್ಯುತ್ತಮವಾಗಿ ಒದಗಿಸಿಕೊಟ್ಟ ಕರ್ತವ್ಯಧೀರರು. "ಸಾಧ್ಯವಾದರೆ ಒಂದು ದಿನದ ಮಟ್ಟಿಗಾದರೂ ನಡುವೆ ಬರುತ್ತೇನೆ" ಎಂದು ನಮ್ಮನ್ನು ಬೀಳ್ಕೊಟ್ಟರು. ಶಿಲ್ಪಿ ದೇವಾಲಯ ನಿರ್ಮಿಸುತ್ತಾನೆ. ಆದರೆ ಪ್ರವೇಶೋತ್ಸವ ಮಾಡುವವರು ಬೇರೆ. ದುಡಿಮೆ ಯಶಸ್ವಿಯಾಗಿ ಪೂರೈಸಿದುದೇ ಆತನ ಪ್ರತಿಫಲ, ಸಂತೃಪ್ತಿ.

ನಮ್ಮ ತಂಡದ ಪ್ರಮುಖ ಸದಸ್ಯರನ್ನು ಕುರಿತು ನಾಲ್ಕು ಮಾತು ಹೇಳುವುದು ಅಗತ್ಯ.
ನಿಸಾರ್ ಅಹಮದ್ ಅವರನ್ನು ಕನ್ನಡ ಜನ ಶ್ರೇಷ್ಠ ಆಧುನಿಕ ಕವಿ, 'ಕುರಿಗಳು ಸಾರ್, ನಾವು ಕುರಿಗಳು' ಪದ್ಯದ ಕರ್ತೃ ಎಂದು ತಿಳಿದಿರುವರೇ ವಿನಾ ಅವರೊಬ್ಬರು ಕಾಲೇಜ್ ಲೆಕ್ಚರರ್, ಎನ್‌ಸಿಸಿ ಆಫೀಸರ್ ಎಂದು ತಿಳಿದಿಲ್ಲ. ಅವರು ನನ್ನನ್ನು "ಗುರುಗಳೇ" ಎಂದು ಸಂಬೋಧಿಸುವುದೂ ನಾನವರನ್ನು "ಕವಿಗಳೇ" ಎಂದು ಹರಸುವುದೂ ಸ್ವಾಭಾವಿಕವಾಗಿ ಹೋಗಿವೆ. ಭಾವಜೀವಿ, ತುಂಬ ಮಮತೆಯ ಹೃದಯ. ಫಕ್ಕನೆ ಸಿಟ್ಟಿಗೆದ್ದು ಏನನ್ನಾದರೂ ಹೇಳುವರು. ಮರುಗಳಿಗೆಯಲ್ಲಿ ಮೊದಲಿಗಿಂತಲೂ ಆತ್ಮೀಯವಾಗಿ ಮಾತಾಡುವರು. ಕೆಲಸದಲ್ಲಿ ನಿಷ್ಣಾತರು. ಹುಡುಗರಿಗೆ ಅಚ್ಚುಮೆಚ್ಚಿನ ಗುರುಗಳು. ಯಾವುದಾದರೊಂದು ತಿರಸ್ಕಾರದ ವಿಚಾರ ಉದ್ಗರಿಸುವಾಗ "ಕತ್ತೆ ಸ್ವರೂಪ" ಎನ್ನುವ ಉಪ್ಪಿನಕಾಯಿಯನ್ನು ಇವರು ಚಪ್ಪರಿಸುವುದನ್ನು ಕೇಳುವುದು ಬಲು ಮೋಜಿನದಾಗಿರುತ್ತದೆ. ಇವರು ಮದುವೆಯಾಗಿ ಒಂದು ವರ್ಷವಾಗುತ್ತ ಬಂದಿದೆ. ಹೆಂಡತಿಯನ್ನು ತವರ್ಮನೆಗೆ ಕಳಿಸಿದ್ದಾರೆ. ಶುಭ ಸಮಾಚಾರ ಯಾವ ಗಳಿಗೆಯಲ್ಲಿಯೂ ಬರಬಹುದು. ನಮ್ಮ ಲಾರಿ ಹೊರಡುವ ತನಕವೂ ಅವರು ಬರುವ, ಬರದಿರುವ ವಿಚಾರದಲ್ಲಿ ಅರೆಮನಸ್ಕರಾಗಿದ್ದರು. ಕವಿ ಹೃದಯ ಹೋಗು ಅನ್ನುತ್ತಿದೆ. ಸಂಸಾರೀ ಭಾವ ಇಲ್ಲೇ ಇರು ಅನ್ನುತ್ತಿದೆ. ಹೇಗೂ ಟ್ರಂಕ್ ಫೋನ್ ಸೌಕರ್ಯವಿದೆ. ಯಾವಾಗ ಬೇಕಾದರೂ ಹಿಂತಿರುಗಿ ಹೋಗಬಹುದು ಎನ್ನುವ ಆಶ್ವಾಸನೆ ಮೇರೆಗೆ ನಮ್ಮೊಡನೆ ಬಂದರು.

ಶಿವಪ್ಪ – ಬರೀ ಶಿವಪ್ಪ ಅಲ್ಲ, ನಮ್ಮ ಶಿವಪ್ಪ. ಇವರ 'ಏಕಾಂತ' (ಕವನ ಸಂಕಲನ) ಫಕ್ಕನೆ ಇವರನ್ನು ಕನ್ನಡ ನಾಡಿನ ದೊಡ್ಡ ತರುಣ ಕವಿಗಳ ಸಾಲಿನಲ್ಲಿ ಕೂರಿಸಿದೆ. ಸಾತ್ವಿಕ ಸ್ವಭಾವ. ಯಾವುದರಲ್ಲೂ ದುಡುಕಿಲ್ಲ. ಎಲ್ಲವನ್ನೂ ಶ್ರದ್ಧೆಯಿಂದ ಅನುಭವಿಸಿ ಎಂದಾದರೊಮ್ಮೆ ಅಭಿಪ್ರಾಯ ನೀಡುವ ಅಥವ ಕವನ ಬರೆಯುವ ಕವಿಯಿವರು. ಇವರ ಕರ್ತವ್ಯ ದಕ್ಷತೆಯೂ ಹಾಗೆ – ಅವರ ಕವನದ 'ಲಯಬದ್ಧ ತೂಗಾಟ'ದಂತೆ. ಅಲ್ಲಿ ಗಲಾಟೆ ಗೊಂದಲವಿಲ್ಲ. ತುಂಬ ಆತ್ಮೀಯ ಮಿತ್ರ. ಎಷ್ಟೋ ಸಲ ಅಂದುಕೊಂಡಿದ್ದೇನೆ; ಇವರ ವಿನಯ ಸೌಜನ್ಯ ಎಂಥ ಉನ್ನತ ಶ್ರೇಣಿಯವು ಎಂದು. ನಿಸಾರರ ಪರಮಮಿತ್ರ. ಅವರಿಂದ ತುಂಬ ಪ್ರಭಾವಿತರಾಗಿದ್ದರೂ ಕವನದಲ್ಲಿ ಸ್ವಂತ ಮಾರ್ಗವನ್ನು ತುಳಿದಿರುವ ಓಜಸ್ವಿ. ನಿಸಾರ್ ಮತ್ತು ಶಿವಪ್ಪ ಯಮಳ ನಕ್ಷತ್ರಗಳಂತೆ. ಶಿವಪ್ಪ ಸದಾ ಶಿವಂ.

ಕೆಂಡಗಣ್ಣಸ್ವಾಮಿ – 'ಪೆಸರ್ ಕೇಳಿ ಬಲ್ಲೆಯೇನ್?' ಹೆಸರು ಕೇಳಿ ಹೆದರಬೇಡಿ ಅದರ ಹೊಸತನದಿಂದಾಗಲೀ ಅರ್ಥದಿಂದಾಗಲೀ. 'ಕರುಣೆಗೊಂದು ಕೋಡವನ್ ಎದೆಯೊಲುಮೆಗೆ ಬೀಡವನ್.' ನಾನು ಪ್ರಥಮವಾಗಿ ಈ ಮಿತ್ರರನ್ನು ನೋಡಿದಾಗ ಇವರ ಹೆಸರು, ದಡೂತಿ ಗಾತ್ರ, ಎಣಿಕೆಯ ಮಾತು ಇವುಗಳಿಂದ ಆಕರ್ಷಿತನಾದೆ. (ಸ್ವಲ್ಪ

ಭಯವೂ ಸೇರಿತ್ತೋ ಏನೋ!) ನಮ್ಮ ಒಡನಾಟ ಎನ್‌ಸಿಸಿಯಲ್ಲಿಯೂ ಹೊರಗೂ ಹೆಚ್ಚಿದಂತೆ ತುಂಬ ಹಿರಿಯ ಆದರ್ಶವಿಟ್ಟುಕೊಂಡಿರುವ ಸಜ್ಜನ ಇವರು ಎಂಬುದನ್ನು ಅರಿತುಕೊಂಡೆ. ಇವರ ಚುಟುಕುಗಳು, ತಿಳಿ ವ್ಯಂಗ್ಯದ ನುಡಿಗಳು ರಸಿಕತೆಯ ನಿದರ್ಶನಗಳು. ಇವರೂ ನಿಸಾರರಂತೆ ಒಂದು ವರ್ಷದ ಹಿಂದೆ ಮದುವೆಯಾದ ನವವರ. ಬೆಂಗಳೂರಿನಲ್ಲಿ ಇನ್ನೂ ಮನೆ ಮಾಡದೇ (ಆದ್ದರಿಂದ ನಮಗೆ ಮದುವೆಯ ಬಾಬತು ಸಿಹಿ ಹಂಚದೇ) ಭೀಷ್ಮ ಪರ್ವದಲ್ಲಿಯೇ ಇದ್ದರು.

ಮಹಾರಾಷ್ಟ್ರ ರೆಜಿಮೆಂಟಿನ ಸುಬೆದಾರ್ ಖಾನ್ವಿಲ್ಕರ್ ಮತ್ತು ಅವರ ಬೆಂಬಲಿಗರಾದ ಮೂವರು ಎನ್ಸಿಓಗಳು ಪ್ರತಿಯೊಬ್ಬರೂ ದಕ್ಷತೆ, ವಿಶ್ವಾಸಾರ್ಹತೆಯ ಪ್ರತೀಕಗಳು. ಯಾವ ಕೆಲಸವನ್ನು ಎಷ್ಟು ಹೊತ್ತಿಗೂ ಮಾಡಲು ಕಂಕಣ ಬದ್ಧರಾಗಿ ನಿಂತವರು. ಎಲ್ಲ ಸಾಮಾನು ಸರಂಜಾಮುಗಳೂ ಇವರ ಹೊಣೆಗಾರಿಕೆಯಲ್ಲಿದ್ದುವು. “ನಾಳೆ ಬೆಳಗ್ಗೆ ಟೀ ಮತ್ತು ಉಪ್ಪಿಟ್ಟು” ಎಂದರೆ ಸಾಕು. ಅದರ ವಿವರಗಳನ್ನು ಅವರೇ ಪರಿಶೀಲಿಸಿ ಆ ಹೊತ್ತಿಗೆ ಅವನ್ನು ಒದಗಿಸಿಕೊಡುವರು. ಮರುಸವಾಲು, ವಾದ ಎಂಬುದು ಇವರಿಗೆ ಗೊತ್ತಿಲ್ಲ. ಅಂಥ ಉನ್ನತ ಮಟ್ಟದ ಶಿಸ್ತು.

ದೋಣಿ ಸಾಗಲಿ ಮುಂದೆ ಹೋಗಲಿ
ಅಧ್ಯಾಯ ನಲ್ವತ್ನಾಲ್ಕು

ಫೆಬ್ರುವರಿ ೧೦ರ ಸಂಜೆ (೧೯೬೭) ಬೆಂಗಳೂರಿನ ಹೆದ್ದಾರಿಗಳಲ್ಲಿ “ಬೆಂಗಳೂರು ಯೂನಿವರ್ಸಿಟಿಗೆ ಜಯವಾಗಲಿ, ಸರಕಾರಿ ಕಾಲೇಜಿಗೆ ಜಯವಾಗಲಿ, ೧೨ನೇ ಮೈಸೂರಿಗೆ ಜಯವಾಗಲಿ, ಕುದುರೆಮುಖ ಆರೋಹಣ ಸಾಹಸಕ್ಕೆ ಜಯವಾಗಲಿ” ಎನ್ನುವ ಘೋಷಣೆಗಳು ಎಲ್ಲರ ಗಮನವನ್ನು ಓಡುತ್ತಿದ್ದ ಎರಡು ಎನ್‌ಸಿಸಿ ಲಾರಿಗಳೆಡೆಗೆ ಸೆಳೆದುವು. ಸಮವಸ್ತ್ರ ಧರಿಸಿದ, ನವಹರ್ಷ ಹರಿಸುವ, ನಗುಮೊಗದ ಆ ೩೭ ಕ್ಯಾಡೆಟ್ಟುಗಳು ಅತಿ ದೂರದ ಅತಿ ಎತ್ತರದ ಕುದುರೆಮುಖದೆಡೆಗೆ ಆಗ ಸಾಹಸ ಪ್ರದರ್ಶನಕ್ಕಾಗಿ ಧಾವಿಸುತ್ತಿದ್ದರು. ಬೆಂಗಳೂರು ನಗರ ವಿದ್ಯುದ್ದೀಪದ ಕಡಲಿನಲ್ಲಿ ಕಂತಿದ್ದಾಗ, ಈ ಕಡಲಿನ ಸಾರವೇ ಪಶ್ಚಿಮಾಕಾಶದಲ್ಲಿ ಅತ್ಯಂತ ಪ್ರಭಾನ್ವಿತ ಶುಕ್ರ, ಬುಧ, ಚಂದ್ರ ಆಗಿ ಸಾಲಾಗಿ ಕಂಗೊಳಿಸುತ್ತಿದ್ದಾಗ ನಮ್ಮ ಲಾರಿಗಳು ಕತ್ತಲೆಯ ಮೊತ್ತವನ್ನು ಸೀಳಿ ಮುಂದುವರಿದುವು. ಲಾರಿಯ ಒಳಗೆ ಎಲ್ಲರೂ ಕುಳಿತಿರಬೇಕು, ಬದಿಯ ಚೌಕಟ್ಟಿನ ಮೇಲೆ ಪರಂಗಿ ಮಣೆಯಂತೆ ಕುಳಿತರಲೇಬಾರದು. ಹೀಗೆ ಕುಳಿತಿದ್ದರೆ ಬೆನ್ನು ಲಾರಿಯ ರೇಖೆಯಿಂದ ಹೊರಗೆ ಚಾಚಿರುತ್ತದೆ. ಎರಡು ವಾಹನಗಳು ಸಂಧಿಸುವಾಗ ಅಥವಾ ಒಂದನ್ನು ಇನ್ನೊಂದು ಹಿಂದೆ ಹಾಕಿ ಓಡುವಾಗ ಅಪಾಯ ಸಂಭವಿಸಬಹುದು.

ರಾತ್ರಿಯ ೮ ಗಂಟೆ ದಾಟಿದಾಗ ಕುಣಿಗಲ್ಲಿನ ಪ್ರವಾಸೀ ಮಂದಿರ ತಲಪಿದೆವು. ನಾವು ತಂದಿದ್ದ ಮೊಸರನ್ನ, ಚಿತ್ರಾನ್ನ ಎಲ್ಲವನ್ನೂ ಅಲ್ಲಿ ತಿಂದು ಪುನಃ ಲಾರಿಗಳನ್ನೇರಿದೆವು. ಮಿಣುಕು ದೀಪಗಳಂತೆ ಲಾರಿಗಳು ಕತ್ತಲೆಯ ಗರ್ಭವನ್ನು ಹರಿದುವು. ಎಷ್ಟೋ ಮೈಲುಗಳಿಗೊಮ್ಮೆ ಎದುರಿನಿಂದ ಬರುತ್ತಿದ್ದ ಯಾವುದೋ ಲಾರಿ, ಹಳ್ಳಿಯ ಸಮೀಪದ ಪೋಲಿನಾಯಿಗಳ ಬೊಗಳುವಿಕೆ ಅಲ್ಲದಿದ್ದರೆ ನಮ್ಮ ಲಾರಿಗಳು ಒಂದೇ ಶ್ರುತಿ ಮಿಡಿಯುತ್ತ ಧಾವಿಸಿದುವು. ದಾರಿ ನೆಟ್ಟಗೆ. ನಾನೂ ದೊರೆಗಳೂ ಹಿಂದಿನ ಲಾರಿಯ ಮುಂದಿನ ಸೀಟಿನಲ್ಲಿದ್ದೆವು. ಇದ್ದಕ್ಕಿದ್ದ ಹಾಗೆ ನಮ್ಮನ್ನು ಎದುರಿನಿಂದ ಇದ್ದಲು ಮೂಟೆ ಹೇರಿದ್ದ ಒಂದು ಭಾರೀ ಲಾರಿ ದಾಟಿ ಹೋಯಿತು. ಅದರಿಂದ ವಿಪರೀತ ಮಸಿ, ಮಸಿಹುಡಿ ಸುರಿಯುತ್ತಿದ್ದುವು. ಮಾತ್ರವಲ್ಲ, ಅಲ್ಲೆಲ್ಲ ಮಸಿಯ ಧೂಳು ತುಂಬಿ ನಮಗೆ ದಾರಿ ಕಾಣಿಸದಂತಾಯಿತು. ಇಷ್ಟರಲ್ಲಿಯೇ ನಮ್ಮ ಮುಂದಿನ ಲಾರಿ ರಸ್ತೆ ಬದಿಗೆ ನಿಂತಿತ್ತು. “ಆಕ್ಸಿಡೆಂಟ್” ಎಂದು ಅಲ್ಲಿಂದ ಯಾರೋ ಕೂಗಿದರು. ನಮಗೆ ನೆತ್ತರು ಹೆಪ್ಪುಗಟ್ಟಿತು. ಲಾರಿಯ ಬದಿಯ ಚೌಕಟ್ಟಿನ ಮೇಲೆ ಸುತ್ತಿದ್ದ ಟಾರ್ಪಾಲಿನ್ನಿಗೆ ಇದ್ದಲು ಲಾರಿಯಿಂದ ಹೊರಗೆ ಚಾಚಿದ್ದ ಮೂಟೆಗಳು ಢಿಕ್ಕಿ ಹೊಡೆದು ಟಾರ್ಪಾಲಿನ್ ಹರಿದು ಹೋಗಿತ್ತು. ಅದರ ಮೂಲಕ ಒಳಗೆ ಕುಳಿತವರಿಗೆ ಸಾಕಷ್ಟು ಮಸಿಯ ಅಭಿಷೇಕವಾಗಿತ್ತು. ಢಿಕ್ಕಿ ಹೊಡೆದ ಲಾರಿ, ನಿಂತರೆ ಅಪಾಯವೆಂದು, ಚೆಲ್ಲುತ್ತಿದ್ದ ಮಸಿಯನ್ನು ಲೆಕ್ಕಿಸದೇ ಓಡಿಯೇ ಹೋಗಿತ್ತು. ಸದ್ಯ ಯಾರಿಗೇನೂ ಅಪಾಯವಾಗಿರಲಿಲ್ಲ. ಚೌಕಟ್ಟಿನ ಮೇಲೆ ಯಾರಾದರೂ ಕುಳಿತಿದ್ದರೆ ಆ ಗಳಿಗೆಯಲ್ಲಿ ಭೀಕರ ದುರಂತ ಸಂಭವಿಸಿರುತ್ತಿದ್ದುದರಲ್ಲಿ ಸಂದೇಹವೇ ಇಲ್ಲ.

ಚಳಿಗಾಳಿ ಕೊರೆಯುತ್ತಿತ್ತು. ರಾತ್ರಿ ಏರುತ್ತಿತ್ತು. ಲಾರಿಯೊಳಗೆ ಕುಳಿತವರಿಗೇನೂ ಸುಖವಲ್ಲ. ಸಾಮಾನು ಸರಂಜಾಮುಗಳ ನಡುವೆ ಹೇಗೆ ಕುಳಿತರೂ ಮೈ ಕೈ ನೋವು ತಪ್ಪಿದ್ದಲ್ಲ. ಅಂತೂ ೧ ಗಂಟೆಗೆ ಯಾವುದೋ ಒಂದು ಪಟ್ಟಣ ಸೇರಿದೆವು. ರಸ್ತೆ ದೀಪಗಳು ಉರಿಯುತ್ತಿದ್ದುವು. ಇತಿಹಾಸ ಪ್ರಸಿದ್ಧ ಬೇಲೂರು ಪಟ್ಟಣವದು. ಅಲ್ಲಿಯ

ಪ್ರವಾಸೀ ಮಂದಿರದ ಅಂಗಳದಲ್ಲಿ ಲಾರಿಗಳನ್ನು ನಿಲ್ಲಿಸಿ ಮಂದಿರದ ಜಗಲಿ, ಕೋಣೆ ಎಲ್ಲ ನಾವೇ ವ್ಯಾಪಿಸಿಕೊಂಡೆವು. ಚಳಿ, ನಿದ್ರೆ, ಆಯಾಸ ಮುಪ್ಪುರಿಗೊಂಡು ಹುಡುಗರನ್ನು ಕಾಡುತ್ತಿದ್ದುವು. ಕಿಟ್ ಬ್ಯಾಗ್ ಬಿಡಿಸಿದೆವು. ಡರಿ, ಬ್ಲಾಂಕೆಟ್ ಹರಡಿದೆವು. ಕಾಲು ಚಾಚಿದ್ದೊಂದೇ ಗೊತ್ತು. ಪ್ರವಾಸೀ ಮಂದಿರದ ಹೊರವಲಯದಲ್ಲಿ ಯಕ್ಷಗಾನ ಬಯಲಾಟ ನಡೆಯುತ್ತಿತ್ತು. ಆ ರಾಕ್ಷಸರ ಗರ್ಜನೆ, ಚಂಡೆ ಮದ್ದಳೆಗಳ ಸಿಂಹನಾದ ಯಾವುದೂ ನಮ್ಮನ್ನು ಎಚ್ಚರದಿಂದಿಡಲು ಶಕ್ತವಾಗಲಿಲ್ಲ. ಮಲಗುವ ಮುನ್ನ ಸೀನಿಯರ್ ಅಂಡರ್ ಆಫೀಸರ್ (ಕ್ಯಾಡೆಟ್ಟುಗಳಲ್ಲಿ ಪರಮೋನ್ನತ ಪದವಿ – ಅವರ ಮುಂದಾಳು) ಬಾಬಾ ಪ್ರಸಾದನಿಗೆ ಆದೇಶ ಕೊಟ್ಟೆ. "೬ ಗಂಟೆಗೆ ಹಾಸಿಗೆ ಚಾ, ೬–೩೦ ಗಂಟೆ ತನಕ ದೇವಾಲಯ ದರ್ಶನ. ಕೂಡಲೇ ಉಪಾಹಾರ. ೮ ಗಂಟೆಗೆ ಮುಂದಿನ ಪ್ರಯಾಣ." 'ಹಾಸಿಗೆಯಿಂದ ಚಾಲನ ಮಾಡಿಸುವಂಥಾದ್ದು ಇಂತೆಂದು ಹಾಸಿಗೆ ಚಾ' ಇದು ಇಂಗ್ಲಿಷಿನ ಬೆಡ್ ಟೀಯ ತದ್ಭವದ ವ್ಯುತ್ಪತ್ತಿ. ಬೆಳಗ್ಗೆ ಬೇಗ ಏಳಿ ಅಂದರೆ ಆಗಿನ ಮನಸ್ಥಿತಿಯಲ್ಲಿ ಯಾರಿಗೂ ಇಷ್ಟವಾಗಲಾರದು. ಹಾಸಿಗೆ ಚಾ ಎನ್ನುವ ಸಕ್ಕರೆ ಗುಳಿಗೆಯೊಳಗೆ ಇದೇ ಕಹಿ ವಿಚಾರವನ್ನು ತುಂಬಿದರೆ ಅದರ ಪರಿಣಾಮ ಅಷ್ಟೊಂದು ಅಹಿತಕರವಾಗದು.

ನಮ್ಮ ಯಾತ್ರೆಯ ಪ್ರಥಮ ಪ್ರಾತಃಕಾಲ ಬೇಲೂರಿನ ಶಿಲಾಸಂಗೀತ ಶ್ರವಣದಿಂದ ಪ್ರಾರಂಭವಾಯಿತು.
"ಜಕಣಾಚಾರಿಯ ಕಲೆಯ ಬಲೆಯಲ್ಲಿಯೇ ಹತ್ತು ದಿವಸಗಳನ್ನೂ ಕಳೆಯಬಾರದೇ?" ಎಂದನು ಮುಕುಂದ.
"ವಿಶ್ವಕರ್ಮನ ಕವಿತೆಯೇ ನಮಗೆ ಕುದುರೆಮುಖದ ಮೇಲೆ ಕಾದಿರುವಾಗ. . ." ಎಚ್ಚರಿಸಿದನು ಚಂದ್ರಶೇಖರ.
ಹುಡುಗರೇನೋ ಮರಳಿದರು. ಆದರೆ ಕವಿದ್ವಯರನ್ನು ಕಲ್ಪನೆಯ ಭಾವನಾಪ್ರಪಂಚದಿಂದ ಉಪಾಹಾರದ ಮೃತ್ತಿಕಾಪ್ರಪಂಚಕ್ಕೆ ಎಳೆದು ತರಲು ಎರಡೆರಡು ಸಲ ಜನರನ್ನು ಅಟ್ಟಬೇಕಾಯಿತು. ಭಾವಪಾರವಶ್ಯದಲ್ಲಿ ಕಾಲ ಕಾಲವಾಗಿರುತ್ತದೆ.

ಬೇಲೂರಿನಿಂದ ಮುಂದೆ ಮಲೆನಾಡಿನ ತಂಪು. ಹಚ್ಚ ಹಸುರಿನ ಹರವು. ಬಿಸಿಲು ಬೆಳದಿಂಗಳು. ಡೊಂಕು ಡೊಂಕಾದ ದಾರಿ ಕಾಫಿ ತೋಟಗಳನ್ನು ಬಳಸಿ ಕಿತ್ತಳೆ ಮರಗಳ ಸಾಲಿನೆಡೆಗಾಗಿ ಸಾಗುವ ಮೇಖಲೆ. ಸಮೀಪದ ದಾರಿ ಎಂದು ಎಡಗಡೆಯ ಕವಲು ದಾರಿಗಾಗಿ ಹೋದದ್ದು ಹಳ್ಳಿಗಾಡಿನ ಧೂಳರಾಶಿಗಾಗಿ ಮುಂದುವರಿಯಿತು. ಧೂಳು ತಿಂದ ಹಿಂದಿನ ಲಾರಿಯವರಿಗೆ ಹಸುರು ಅರಸಿನವಾಯಿತು. ಟಾರ್ಪಾಲಿನ್ ಮುಚ್ಚಿದ್ದ ಲಾರಿಯ ಹಿಂಭಾಗ ಗಾಳಿ ಸಂಚಾರವಿಲ್ಲದೇ ಕುಳಿತಿರಲು ಕಷ್ಟವೆಂದೆನ್ನಿಸಿತು. ಬಯಲು ಸೀಮೆಯ ಹುಡುಗರು ವಾಂತಿ ಮಾಡಿದರು! ಪ್ರಕೃತಿ ಸೌಂದರ್ಯ ಹುಚ್ಚು ಹೊಳೆ ಹರಿದಿರುವಾಗ ಮುಸುಕೆಳೆದು ಕೂರುವುದುಂಟೇ! ಟಾರ್ಪಾಲಿನ್ ಬಿಚ್ಚಿದ ಮೇಲೆ ಅದೆಷ್ಟೋ ಸುಖವಾಯಿತು. ಅತಿ ದೂರದ ಬಾನಿನ ನೀಲಿಯ ಮೇಲೆ ರೇಖಾಚಿತ್ರಗಳಾಗಿ ಕಾಣುತ್ತಿದ್ದ ಪರ್ವತಶ್ರೇಣಿಗಳು ಕ್ರಮೇಣ ಸ್ಪಷ್ಟವಾಗತೊಡಗಿದುವು. ಚಾರ್ಮಾಡಿ ಘಾಟಿನ ಮೇಲೆ ನಾವಿದ್ದೆವು. ಒಂದೊಂದು ಗ ತಿರುಗಾಸಿಗೂ ನಡುವೆ ಮಹಾ ಪ್ರಪಾತ. ಮಲೆನಾಡಿನ ತೊರೆ ದುಮುಕುವ ಹಿಸ್‌ನಾದ. ಒಂದು ಸಲ ಬಲಗಡೆಗೆ ಎತ್ತರದ ಬೆಟ್ಟ, ಎಡಗಡೆಗೆ ಆಳವಾದ ಕಣಿವೆ ಇದ್ದರೆ ಇನ್ನೊಂದು ಸಲ ಇದು ತಿರುಗಾಮುರುಗಾ ಆಗುವುದು. ಹೀಗೆ ಹದಿನಾರೋ ಹದಿನೇಳೋ ಗ ತಿರುಗಾಸುಗಳು ಮುಗಿದಾಗ ನಾವು ಚಾರ್ಮಾಡಿಯ ತಳ ಸೇರಿದ್ದೆವು.

ಮುಂದಿನ ದಾರಿ ದಕ್ಷಿಣ ಕನ್ನಡ ಜಿಲ್ಲೆಯ ತೆಂಗುಕಂಗುಗಳ ಗೇರುಬಾಳೆಗಳ ನಡುವಿನ ಹಾಡು. 'ಪಡುವಣ ಕಡಲಿನ ತೆಂಗಿನ ಮಡಲಿನ ಮರೆಯಲಿ ಮೆರೆಯುವ' ನಾಡು. ಎಲ್ಲೆಂದರಲ್ಲಿ ದಟ್ಟವಾಗಿ ಬೆಳೆದಿದ್ದ ಕಾಡು. ಮರಗಳೆಡೆಯಿಂದ ಸೂರ್ಯ ಕೊರೆಯುತ್ತಿದ್ದ. ನಮ್ಮ ಲಾರಿಗಳ ನಿನದದ ವಿನಾ ಬೇರೆಲ್ಲೆಲ್ಲೂ ನೀರವ ಶಾಂತಿ. ಬೆಂಗಳೂರಿನ ಹುಡುಗರನ್ನು ದಕ್ಷಿಣ ಕನ್ನಡದ ಕಡಲತಡಿಯ ಸೆಕೆ ಬೇಯಿಸುತ್ತಿತ್ತು. ಲಾರಿ ನಿಂತಾಗಲೆಲ್ಲ ಇದರ ಅರಿವು ಹೆಚ್ಚಾಗುತ್ತಿತ್ತು. ಮುರಕಲ್ಲಿನ ಆ ಕೆಮ್ಮಣ್ಣು ಈ ಸೆಕೆಯ ಭಾವನೆಯನ್ನು ಹೆಚ್ಚು ಮಾಡುತ್ತಿತ್ತು. ರಸ್ತೆ ಬದಿಯ ಗಿಡ ಮರಗಳ ಎಲೆಗಳು ಕೆಂಧೂಳಿನಿಂದ ಅದೇ ಬಣ್ಣಕ್ಕೆ ತಿರುಗಿದ್ದುವು. ನೀರು ಹರಿಯುವುದು ಕಂಡಲ್ಲೆಲ್ಲ ನಾವಿಲ್ಲಿಯೇ ತಂಗಬಾರದೇ, ಈ ನೀರಿನೊಳಗೇ ಬಿದ್ದುಕೊಂಡು ಇರಬಾರದೇ ಎಂಬ ಭಾವನೆ ಬರುತ್ತಿತ್ತು.

ಸೂರ್ಯ ನೆತ್ತಿಗೇರುವ ಮೊದಲೇ ಉಜಿರೆ ಸೇರಿದೆವು. ಬೆಂಗಳೂರು – ಚಾರ್ಮಾಡಿ – ಮಂಗಳೂರು ಮಾರ್ಗದಲ್ಲಿ ಉಜಿರೆಯೊಂದು 'ಜಂಕ್ಷನ್'. ಅಲ್ಲಿಂದ ಎಡಗಡೆಗೆ ೬ ಮೈಲು ಮುಂದೆ ಹೋದರೆ ಪವಿತ್ರ ಕ್ಷೇತ್ರ ಧರ್ಮಸ್ಥಳ ಬರುವುದು. ಉಜಿರೆಯಿಂದ ಸೀದಾ (ಮಂಗಳೂರಿನೆಡೆಗೆ) ಮುಂದೆ ಹೋದರೆ ೨ ಮೈಲು ದೂರದಲ್ಲಿ, ಬೆಳ್ತಂಗಡಿ ತಲಪುವ ಮೊದಲೇ ಬಲಗಡೆಗೆ ಒಂದು ಹಳ್ಳಿ ದಾರಿಯಿದೆ. ಇದರಲ್ಲಿ ೭ ಮೈಲು ದೂರ ಸಾಗುವಾಗ ನಾವೂರು

ಎನ್ನುವ ಕುಗ್ರಾಮ ಬರುವುದು. ಅದು ಕುದುರೆಮುಖದ ತಳ. ಉಜಿರೆಯಿಂದ ನಾವೂರಿಗೆ ಕಾಲುದಾರಿಗಾಗಿಯೂ ಹೋಗಬಹುದು. ಧರ್ಮಸ್ಥಳ, ಕುದುರೆಮುಖ ಶ್ರೇಣಿ ಎದುರು ಬದಿರಾಗಿವೆ.

ಉಜಿರೆಯಲ್ಲಿ ಧರ್ಮಸ್ಥಳದ ಹೆಗಡೆಯವರೊಂದು ಗುರುಕುಲಾಶ್ರಮ, ಒಂದು ಬೋರ್ಡಿಂಗ್, ಒಂದು ಕಾಲೇಜ್ ಎಲ್ಲವನ್ನೂ ಸ್ಥಾಪಿಸಿದ್ದಾರೆ. ಇವೆಲ್ಲ ಇರುವ ಆವರಣದ ಹೆಸರು ಸಿದ್ಧವನ. ಸಿದ್ಧವನದ ಮುಂದೆ ಲಾರಿಗಳು ಓಡುತ್ತಿದ್ದಾಗ ಒಬ್ಬ ಜೂನಿಯರ್ ಡಿವಿಶನ್ ಎನ್‌ಸಿಸಿ ಸಮವಸ್ತ್ರಧಾರಿ ಬಾಲಕ ಸುಟಿಯಾಗಿ ನಿಂತು ಕೈ ಅಡ್ಡ ಹಿಡಿದು ಲಾರಿಗಳನ್ನು ನಿಲ್ಲಿಸಿದ. ಸೆಲ್ಯೂಟ್ ನೀಡಿ, "ಮೇಜರ್ ಮುತ್ತಪ್ಪನವರು ಇಲ್ಲಿಯೇ ಒಳಗೆ ನಿಮಗಾಗಿ ಕಾಯುತ್ತಿದ್ದಾರೆ, ಸರ್! ಬರಬೇಕಂತೆ" ಎಂದ.

ಮೇಜರ್ ಮುತ್ತಪ್ಪನವರು ಮಂಗಳೂರಿನ ಎನ್‌ಸಿಸಿಯ ಮುಖ್ಯಾಧಿಕಾರಿಗಳು, ನನಗೆ ಕಳೆದ ೧೨–೧೩ ವರ್ಷಗಳಿಂದಲೂ ಪರಿಚಿತರು, ಮಿತ್ರರು. ಅವರು ಬೆಂಗಳೂರಿನ ಎನ್‌ಸಿಸಿ ಮುಖ್ಯ ಕಚೇರಿಯಲ್ಲಿ ವರಿಷ್ಠಾಧಿಕಾರಿಗಳಾಗಿದ್ದಾಗ ತಮ್ಮ ದಕ್ಷತೆ, ಕಾರ್ಯ ಧುರಂಧರತೆಗಳಿಂದ ಸರ್ವಜನಪ್ರಿಯರಾಗಿದ್ದರು. ಮೇಜರ್ ನಾರಾಯಣ್ ಸಿಂಗ್ ಮತ್ತು ಮೇಜರ್ ಮುತ್ತಪ್ಪ ಇವರ ಗೆಳೆತನ ಎಷ್ಟೋ ದಶಕಗಳದು. ನಾವು ಬರುವ ವಿಚಾರ ತಿಳಿದು ಮುತ್ತಪ್ಪನವರು ತಾವಾಗಿಯೇ ಉಜಿರೆಗೆ ಬಂದಿದ್ದರು. ಹಳೆಯ ಮಿತ್ರರ ಅಪೂರ್ವ ಸಮಾಗಮ. ಸಂತೋಷವೋ ದುಃಖವೋ ತಿಳಿಯದು. ದೊರೆಗಳ ಸಂಕಟ ಮುತ್ತಪ್ಪನವರಿಗೆ ಗೊತ್ತಿತ್ತು.

ಮುತ್ತಪ್ಪನವರೊಂದಿಗೆ ಇನ್ನೂ ಮೂವರು ತರುಣರಿದ್ದರು. ಟೆರಿಲಿನ್ ಪ್ಯಾಂಟ್, ಷರ್ಟ್, ಟೈಧಾರಿಗಳು. ಸುಟಿಯಾಗಿ ನಿಂತು ಹಸನ್ಮುಖದಿಂದ ನಮ್ಮನ್ನು ನೋಡುತ್ತಿದ್ದರು.
"ಬನ್ನಿ, ಇವರು ಮಿ. ಪ್ರಭಾಕರ್, ಈ ಕಾಲೇಜಿನ ಪ್ರಿನ್ಸಿಪಾಲ್, ಇವರು ಮಿ. ಶೆಣೈ ಇಲ್ಲಿಯ ಎನ್‌ಸಿಸಿ ಆಫೀಸರ್, ಇವರು ಡಾ. ಪೂಜಾರರು, ಮಂಗಳೂರಿನಿಂದ ಬಂದಿದ್ದಾರೆ. ನಿಮ್ಮೊಡನೆಯೇ ಇರಲೆಂದು ಸರಕಾರ ಇವರನ್ನು ಕಳಿಸಿದೆ. ಆರ್ಡರ್ಲೀ ಬಂದಿದ್ದಾನೆ, ಔಷಧಿಗಳೂ ಬಂದಿವೆ" ಮೇಜರ್ ಮುತ್ತಪ್ಪನವರು ಪರಿಚಯಿಸಿದರು.

ಅಲ್ಲಿ ಹೆಚ್ಚು ಹೊತ್ತು ಕಳೆಯದೇ ಕೂಡಲೇ ಧರ್ಮಸ್ಥಳದೆಡೆಗೆ ಲಾರಿ ಓಡಿಸಿದೆವು. ದಾರಿಯಲ್ಲಿ ನೇತ್ರಾವತಿ ನದಿಯಲ್ಲಿ ಹತ್ತು ಮಿನಿಟಿದ್ದು ಕೈಕಾಲು ಮುಖ ತೊಳೆದುಕೊಂಡು ಶುಚಿರ್ಭೂತರಾಗಿ ಹೋದೆವು. ಮಹಾಪೂಜೆಗೆ ತಡವಾಯಿತೋ ಏನೋ ಎಂಬ ತವಕದಿಂದ ತ್ವರೆಯಿಂದ ಓಡಿದ ನಮಗೆ ಪೂಜೆ ಮಂಗಳಾರತಿ ದರ್ಶನ ಲಭಿಸಿದುವು. ನಾವು ಬರುವ ವಿಚಾರ ಧರ್ಮಾಧಿಕಾರಿ ರತ್ನವರ್ಮ ಹೆಗ್ಗಡೆಯವರಿಗೆ ಮೊದಲೇ ಬರೆದಿದ್ದೆವು. ಅವರ ಚಿರಂಜೀವಿ ವೀರೇಂದ್ರ ಕುಮಾರರು ನಮ್ಮ ಕಾಲೇಜಿನ ವಿದ್ಯಾರ್ಥಿ ಆಗಿದ್ದುದು ನಮಗೆ ಹೆಚ್ಚಿನ ಆತ್ಮೀಯತೆ ತಂದುಕೊಟ್ಟಿತ್ತು.

ಧರ್ಮಸ್ಥಳದ ಶ್ರೀ ಮಂಜುನಾಥೇಶ್ವರಸ್ವಾಮಿ ದೇವಾಲಯ. ಆ ಪವಿತ್ರ ಕ್ಷೇತ್ರ ಹಿಂದೂಗಳಿಗೂ ಜೈನರಿಗೂ ಸಮಾನವಾಗಿ ಪುಣ್ಯ ಕ್ಷೇತ್ರವಾಗಿದೆ. ಜೈನ ಪರಂಪರೆಯ ಹೆಗ್ಗಡೆಯವರ ಖಾಸಗಿ ಸಂಸ್ಥೆ ಈ ದೇವಾಲಯ ಮತ್ತು ಇದಕ್ಕೆ ಸಂಬಂಧಿಸಿದ ವಿಶಿಷ್ಟ ಆಸ್ತಿಪಾಸ್ತಿ. ಲಕ್ಷಾಂತರ ಭಕ್ತಾದಿಗಳು ವರ್ಷವಿಡೀ ಬಂದು ಹೋಗುವ ಈ ಪವಿತ್ರ ಕ್ಷೇತ್ರದ ಆಡಳಿತವನ್ನು ಹೆಗ್ಗಡೆಯವರು ಸ್ವತಃ ನಿರ್ವಹಿಸುತ್ತಾರೆ. ಉಳಿದುಕೊಳ್ಳಲಿಕ್ಕೆ ಬೇಕಾದ ಛತ್ರಗಳು, ಕಟ್ಟಡಗಳು ಮುಂತಾದವು ಇಲ್ಲಿವೆ. ಮಹಾಪೂಜೆಯ ಕಾಲದಲ್ಲಿಯೂ ಬೇರೆ ನಿಶ್ಚಿತ ವೇಳೆಗಳಲ್ಲಿಯೂ ಹೆಗ್ಗಡೆಯವರು ಭಕ್ತರಿಗೆ ದರ್ಶನವೀಯುತ್ತಾರೆ. ಅವರ ಹಾಲೆ ಅಹವಾಲೆಗಳನ್ನು, ಕಷ್ಟ ಸಂಕಟಗಳನ್ನು ಆಲಿಸುತ್ತಾರೆ. ಯುಕ್ತ ಪರಿಹಾರ ಸೂಚಿಸುತ್ತಾರೆ. ಇಲ್ಲಿ ನಾವು ಕಾಣುವುದು ಭಕ್ತರಿಗೆ ಆ ಸ್ಥಳದಲ್ಲಿ, ದೇವರಲ್ಲಿ, ದೇವರ ಮೂರ್ತ ಹೆಗ್ಗಡೆಯವರಲ್ಲಿರುವ ಅನನ್ಯ ಭಕ್ತಿ. ಆ ಗಳಿಗೆಯಲ್ಲಿ ಭಕ್ತರಿಗೆ ಹೆಗ್ಗಡೆಯವರ ವಾಣಿ ಶ್ರೀ ಮಂಜುನಾಥಸ್ವಾಮಿಯ ಆಜ್ಞೆ, ಅದನ್ನು ಅವರು ಶಿರಸಾವಹಿಸುತ್ತಾರೆ, ಕಲ್ಯಾಣ ಹೊಂದುತ್ತಾರೆ. ಭಕ್ತಿ, ಶ್ರದ್ಧೆ, ನಂಬಿಕೆ ಎನ್ನುವ ಗುಣಗಳ ಸಮತಳದಲ್ಲಿ ನಡೆದು ಮಂಜುನಾಥ ಸ್ವಾಮಿಯ ಸನ್ನಿಧಿಯಲ್ಲಿ ತೃಪ್ತಿ, ಸಂತೋಷ ಹೊಂದುವ ಈ ಜನತೆಯ ವಿಶ್ವಾಸ ಅಪಾರವಾದದ್ದು, ಅಚಲವಾದದ್ದು. ಅಂತೆಯೇ ಅವರ ಭಕ್ತಿಯ ಪ್ರತೀಕವಾಗಿ ಆ ದೇವಲಯ ಅತಿ ಪುರಾತನವಾದದ್ದೂ ಮಹಿಮಾಪೂರ್ಣವಾದದ್ದೂ ಆಗಿದೆ. ಇಂಥ ಪುನೀತ ದಿವ್ಯ ಸ್ಥಳ, ಅಲ್ಲಿಯ ಚಿರಂತನ ಚೇತನ ನಮ್ಮ ಸಾಹಸ ಕೃತ್ಯದ ಮೇಲೆ ಒಂದು ದೈವಿಕ ಪ್ರಭೆ ಬೀರಿದುವು. ದೇವರ ಪ್ರಸಾದವಾದ ಊಟವನ್ನು ಮುಗಿಸಿಕೊಂಡು ನಾವೂರಿಗೆ ಹೊರಟೆವು. ಮುತ್ತಪ್ಪನವರು ಮಂಗಳೂರಿಗೆ ಮರಳಿದರು. ಡಾಕ್ಟರರೂ ಅವರ ಆರ್ಡರ್ಲಿಯೂ ನಮ್ಮ ಪಂಗಡ ಸೇರಿದರು. ಈಗ ನಮ್ಮ ಸಂಖ್ಯೆ ೫೩ಕ್ಕೇರಿತು.

ನಮ್ಮ ನಾವೂರು ಪ್ರಯಾಣ ಅಥವಾ ಕುದುರೆಮುಖದೆಡೆಗಿನ ಲಾರೀ ಪಯಣದ ಕೊನೆಯ ಅಂಕ, ಸುಮಾರು ೧೫ ಮೈಲುಗಳಷ್ಟು ದೂರ. ಪ್ರಾರಂಭವಾದದ್ದು ನಡುಹಗಲಿನ ೨ ಗಂಟೆಗೆ. ನಾವು ೪ ಗಂಟೆಗೆ ಮೊದಲೇ ನಾವೂರು ಸೇರಿ ಶಿಬಿರ ಹೂಡಬೇಕು ಎನ್ನುವುದು ನಮ್ಮ ಕಾರ್ಯಕ್ರಮ. ಅಲ್ಲಿ ಮೆಂಗಿಲ ಶೇಣವ ಎನ್ನುವ ಮಾರ್ಗದರ್ಶಿಗೂ



ಅರಣ್ಯ ಇಲಾಖೆಯ ಅಧಿಕಾರಿಗಳಿಗೂ ನಮ್ಮನ್ನು ಕಾದಿರಲು ಕಾಗದ ಬರೆದಿದ್ದೆವು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವುದು ಎರಡೇ ಋತುಗಳು: ಬೇಸಗೆ, ಬಿರುಬೇಸಗೆ. ಫೆಬ್ರುವರಿಯ ನಡು ಹಗಲಿನ ಬಿಸಿಲ ಝಳ ತೀವ್ರವಾಗಿತ್ತು. ಧರ್ಮಸ್ಥಳ – ಉಜಿರೆಯ ಹಾವು ಹರಿವಂಥ ಹಳ್ಳಿ ಮಾರ್ಗ, ಎದುರಿಗೆ ದೂರದಲ್ಲಿ ಆಕಾಶವನ್ನೇ ಎತ್ತಿ ಹಿದಿದಿರುವ ಪರ್ವತಶ್ರೇಣಿ. ಈಶ್ವರ ದೇವಾಲಯದ ಮುಂದಿರುವ ನಂದಿಯಂತೆ ಈ ಶ್ರೇಣಿಯ ಎದುರು ನಮಗೆ ಕೈದೂರದಲ್ಲಿ ನೀಳವಾಗಿ ಸೆಟೆದು ನಿಂತಿರುವ ಹೆಬ್ಬಂಡೆ ಜಮಾಲಾಬಾದ್. ಅದೊಂದು ಗಿರಿದುರ್ಗ. ಪರ್ವತ ಶ್ರೇಣಿಯಲ್ಲಿ ಅತಿ ಎತ್ತರವಾಗಿರುವೆಡೆಯಲ್ಲಿ ಕತ್ತರಿಯಿಂದ ಕತ್ತರಿಸಿ ಇಟ್ಟಂಥ ಸ್ಪಷ್ಟಾಕೃತಿಯ ಶಿಖರ ಕುದುರೆಮುಖ. ಆ ಭವ್ಯನೋಟ ನಮ್ಮನ್ನು ಪುಳಕಿತಕಾಯರನ್ನಾಗಿಸಿತು. ಕುದುರೆಮುಖದ ಗೆರೆ ಅಲ್ಲಿಂದ ಬೆನ್ನಿನವರೆಗೆ ಇಳಿದು ಕೇಸರದ ರೇಖೆ ಸ್ಪಷ್ಟವಾಗಿ ಕಾಣುವುದು. ಆಕಾಶದ ನೀಲಿ ಪರದೆಯ ಮೇಲೆ ಕುಂಚಿಸಿದ್ದ ಚಿತ್ರವಿದು. ಲಾರಿ ಸಾಗಿದಂತೆ ಕಲ್ಪನೆಯ ಲಂಗುಲಗಾಮಿಲ್ಲದ ಕುದುರೆ ಆ 'ಹಯವದನ'ದ ಮೇಲೆ ನಾಗಾಲೋಟದಿಂದ ವಿಹರಿಸಿ, ಆಗಲೇ ಹಾರಿಹೋಗಿ ಕುಳಿತಂತೆ ಊಹಿಸಿತು. ಹೀಗೆ ಕಲ್ಪನೆ ಗಗನವೇರಿದಾಗ ವಾಸ್ತವತೆ ರಸ್ತೆಯಲ್ಲಿ ಕುಂಟುತ್ತಿತ್ತು. ಲಿಂಗೋಜಿಯ ಲಾರಿ ನಿಂತೇ ಬಿಟ್ಟಿತು. ಧರ್ಮಸ್ಥಳದಿಂದ ಮೂರು ಮೈಲು ಬಂದಿದ್ದೆವಷ್ಟೆ. ಇನ್ನೂ ೧೨ ಮೈಲು ಉಳಿದಿದ್ದುವು.

ಲಾರಿ ಚಾಲೂ ಆಗುತ್ತದೆ. ಆದರೆ ಗಿಯರ್ ಹಾಕಲು ಸಾಧ್ಯವಿಲ್ಲ. ಆದ್ದರಿಂದ ಅದು ಓಡುವುದಿಲ್ಲ. ಗಿಯರ್ ಸ್ಟಕ್–ಅಪ್ ಆಯಿತು. ಅಂದರೆ ಗಿಯರ್ ಅಲ್ಲಾಡದ ಕೊರಡಾಯಿತು. ಅನ್ಸಾರಿ, ಲಿಂಗೋಜಿ ಸೇರಿ ಗಿಯರ್ ಪೆಟ್ಟಿಗೆ ಬಿಚ್ಚಿದರು. ಒಳಗೆ ಗಿಯರ್–ಲಿವರ್ ಮುರಿದೇ ಹೋಗಿದೆ. ದೊಡ್ಡದಾಗಿಯೇ ಪೆಟ್ಟು ಹೊಡೆದಿತ್ತು. ಅಲ್ಲಿ ಆಗ ದುರಸ್ತಿಗೊಳಿಸಿ ಹೊರಡುವ ಪರಿಸ್ಥಿತಿ ಅಲ್ಲ. ಮಂಗಳೂರಿನಿಂದಲೇ ಮೆಕಾನಿಕ್ ಬರಬೇಕೋ ಏನೋ. ಉಜಿರೆ ಹತ್ತಿರವೇ ಇದೆಯಷ್ಟೆ. ಅಲ್ಲಿಯೂ ಮೆಕಾನಿಕ್ ಇದ್ದರೆ ಬೇಗನೆ ಸರಿಪಡಿಸಬಹುದು ಎಂಬ ಆಸೆ. ಹೇಗೂ ವೇಳೆಯ ಪ್ರಶ್ನೆ. ಆದ್ದರಿಂದ ಲಿಂಗೋಜಿ ಲಾರಿಯ ಜನ ಮತ್ತು ಸಾಮಾನನ್ನು ಅಲ್ಲಿಯೇ ಬಿಟ್ಟು ಅನ್ಸಾರಿ ಲಾರಿಯನ್ನು ನಾವೂರಿಗೆ ಓಡಿಸಿದೆವು. ಅದರಲ್ಲಿ ದೊರೆಗಳು, ನಾನು, ಶಿವಪ್ಪ, ಖಾನ್ವಿಲ್ಕರ್ ಇದ್ದೆವು. ನಿಸಾರ್, ಕೆಂಡಗಣ್ಣ ಸ್ವಾಮಿ, ಹರೂನ್ ಎಲ್ಲರೂ ಅಲ್ಲಿಯೇ ನಿಂತರು. ಅನ್ಸಾರಿ ಲಾರಿಯ ಹುಡುಗರಿಗೆ ಹೇಗೂ ತಾವು ಬಚಾವು ಎಂಬ ಸಂತೋಷ. ಲಿಂಗೋಜಿಯ ಹುಡುಗರಿಗೆ ದುಃಖ. "ಬೇಗನೆ ಹಿಂದೆ ಬರುತ್ತೇವೆ. ನಿಮ್ಮನ್ನೂ ಕೊಂಡೊಯ್ಯುತ್ತೇವೆ. ಮೊದಲು ಹೋದವರಿಗೆ ಕ್ಯಾಂಪು ಪ್ರಾರಂಭಿಸುವ ಕೆಲಸ ಬೇಕಾದಷ್ಟು ಇರುವುದು. ನೀವಿಲ್ಲಿ ಆರಾಮವಾಗಿದ್ದರಾಯಿತಲ್ಲ" ಎಂದು ಸಮಾಧಾನ ಹೇಳಿ ನಾವು ಮುಂದುವರಿದೆವು. ದೊರೆಗಳು (ತಾತ) ಧರ್ಮಸ್ಥಳದಲ್ಲಿ ಪ್ರಾರ್ಥನೆ ಮಾಡಿಯೂ ಹೀಗಾಯಿತಲ್ಲ ಎಂದು ಸ್ವಾಮಿಯವರು ಒಂದು ಚುಟುಕ ಗೀಚಿದರು:

ಧರ್ಮಸ್ಥಳದ ಮಂಜ್ನಾಥಾ
ಕಾಪಾಡಪ್ಪಾ ಅನವರತಾ!
ಅಂದ್ಕಂಡ್ ಹೊರಟ್ರೆ ನಮ್ತಾತಾ
ಲಾರೀ ಕೊಟ್ಟು ದೊಡ್ಲಾತಾ

ನಾವೂರಿನ ತಳ ಶಿಬಿರ
ಅಧ್ಯಾಯ ನಲ್ವತ್ತೈದು

ನಾವು ಧೂಳಿನ ಕಿರುದಾರಿಯಾಗಿ ಹೋಗಿ ನಾವೂರನ್ನು ತಲಪಿದಾಗ ಸಾಯಂಕಾಲದ ೫ ಗಂಟೆಯಾಗಿತ್ತು. ಯಾವೂರು? ನಾವೂರು! ಊರೆಲ್ಲಿ ಬಂತು. ಕುದುರೆಮುಖ ಶ್ರೇಣಿಯ ಬುಡದ ತಪ್ಪಲು ಪ್ರದೇಶ. ನಡು ಮಧ್ಯಾಹ್ನವೂ ಬೆಟ್ಟದ ಕಾಡುಗಳ ಮರೆಯಲ್ಲಿರುವ ಈ 'ಊರಿ'ನಲ್ಲಿ ಕತ್ತಲು. ಇನ್ನು ಊರೆಂದರೆ ಅಲ್ಲಿದ್ದ ಅರಣ್ಯ ಇಲಾಖೆಯ ನಿರ್ಜನ ಪ್ರವಾಸಿ ಮಂದಿರ ಒಂದೇ. ಅದರಿಂದ ಆರೇಳು ಫರ್ಲಾಂಗ್ ದೂರದಲ್ಲಿ ಬಯಲಿನಲ್ಲಿ ಹರಡಿದ್ದ ನಾಲ್ಕೈದು ಗುಡಿಸಲುಗಳು. ಇಂಗ್ಲಿಷ್ ಹೆಸರು ಕೇಳಿ ಸುಂದರ ಪ್ರವಾಸೀ ಮಂದಿರ, ಆಧುನಿಕ ನಲ್ಲಿ ನೀರಿನ ಸೌಕರ್ಯ, ವಾಷ್ ಬೇಸಿನ್, ವಿದ್ಯುದ್ದೀಪಗಳ ಮೆರುಗು, ಬಟ್ಲರುಗಳ ಸಮೂಹ ಎಂದೆಲ್ಲ ಯೋಚಿಸಿದರೆ ಕುದುರೆಮುಖ ಕೆನೆದೀತು, ನಿಮಗೇನೂ ಅನುಭವವಿಲ್ಲವೆಂದು. ಹಳ್ಳಿಯವರ ಸರಳ ಭಾಷೆಯಲ್ಲಿ ಹಂಚು ಹಾಕಿದ ಮನೆ ಬಂಗ್ಲೆ. ಆದ್ದರಿಂದ ನಾವೂರಿನ ಈ ಕಟ್ಟಡ ಬಂಗ್ಲೆ. ಹಿಂದಿನ ಕಾಲದಲ್ಲಿ ಸಾರಿಗೆ ಸಂಪರ್ಕ ತೀರ ಕಡಿಮೆ ಇದ್ದಾಗ ಬೆಳ್ತಂಗಡಿಯಿಂದ ನಾವೂರಿಗೆ ಒಂದು ದಿವಸದಲ್ಲಿ ಹೋಗಿ ಕೆಲಸ ಮುಗಿಸಿ ಮರಳುವುದು ಸಾಧ್ಯವಾಗುತ್ತಿರಲಿಲ್ಲ. ಹೀಗಾಗಿ ನಾವೂರಿನಲ್ಲಿಯೇ ಠಾಣ್ಯ ಹೂಡುವುದು ಅವಶ್ಯವಾಗುತ್ತಿತ್ತು. ಅರಣ್ಯ ಇಲಾಖೆಯ ಅಧಿಕಾರಿಗಳ ತಾತ್ಕಾಲಿಕ ತಂಗುದಾಣವಿದು. ಆದ್ದರಿಂದ ಒಂದು ಕಾಲದಲ್ಲಿ ವೈಭವದಿಂದ ಮೆರೆದಿರಬಹುದಾದ ಈ ದೊಡ್ಡ ಹಂಚಿನ ಮನೆ (ಬಂಗ್ಲೆ) ಇಂದು ಹಾಳು ಹಾಳುಗರೆಯುತ್ತಿತ್ತು:

> ಅರೆಮುರಿದು ಒರಗಿಹವು ಗುಡಿಸಲುಗಳೆಲ್ಲ
> ಸರಿಮಾಡಿ ಹುಲ್ಲು ಹೊದಿಸುವವರೊಬ್ಬರಿಲ್ಲ
> –ಕುವೆಂಪು

ನಾವು ಡಿಸೆಂಬರಿನಲ್ಲಿ ಸ್ಥಳ ಪರಿಶೀಲನೆಗಾಗಿ ಬಂದಿದ್ದಾಗ ಇಲ್ಲಿ ಯಾರೂ ಇರಲಿಲ್ಲ. ಆದರೂ ಬಾಗಿಲುಗಳ ಚಿಲಕ ಭದ್ರವಾಗಿ ಹಾಕಿ ಬೀಗಗಳು ಜಡಿಯಲ್ಪಟ್ಟಿದ್ದುವು. ಒಂದೆರಡು ದಶಕಗಳ ತುಕ್ಕು, ಗೆದ್ದಲು ಅಲ್ಲೆಲ್ಲ ವ್ಯಾಪಿಸಿದ್ದುವು. ಬಾಗಿಲನ್ನು ಮುಟ್ಟುವುದೇ ತಡ ಅರೆಬಿಯನ್ ನೈಟ್ಸ್ ಕತೆಯಲ್ಲಿ ಕುಪ್ಪಿಯ ದಿಮ್ಮಿ ತೆಗೆದೊಡನೆ ಬೃಹದಾಕಾರದ ಭಯಂಕರ ರಾಕ್ಷಸ – ಜಿನ್ನೈ, ನೆಗೆಯುವಂತೆ ಕದದ ಹಲಗೆ ಮುರಿದು ಬಿತ್ತು. ಶಿಶುನಾಳ ಶರೀಫರು ಹಾಡಿದಂತೆ

ಮುರುಕು ಜಂತಿ ಹುಳುಕು ತೊಲೆಯು
ಮುರಿದು ಕೊರಿದು ಕೀಲಸಂದು
ಮುರಕಚಪ್ಪರ ಜೇರುಗಿಂಡಿ
ಮೇಲಕೇರಿ ಮೆಟ್ಟಲಾರೆ
ಸೋರುತಿಹುದು ಮನೆಯಮಾಳಿಗೆ ಅಜ್ಞಾನದಿಂದ

ಒಳಗೆ ಹಿಂದಿನ ಶತಮಾನದ ನಾಲ್ಕೆಂಟು ಮೇಜು, ಕುರ್ಚಿ, ಮೇಲೆ ಜೋಲುತ್ತಿದ್ದ ಪಂಖಾ, ಒಂದಿಂಚು ದಪ್ಪದ ಧೂಳು ಕಾಲಿಟ್ಟಲ್ಲೆಲ್ಲ. ಗೋಡೆಯ ಮೇಲೆ ಆಧುನಿಕ ಚಿತ್ರಕಲೆಯನ್ನು ಗೆದ್ದಲು ಹುಳುಗಳು ಕೊರೆದಿದ್ದುವು. ಜೇಡರ ಹುಳುಗಳ ತಂತಿಗಳು ಅಖಂಡವಾಗಿ ಹೆಣೆದುಕೊಂಡಿದ್ದುವು. ಮಾಡಿನ ಹಂಚುಗಳು ಒಂದು ಕಾಲದಲ್ಲಿ ಬಿಡಿಬಿಡಿಯಾಗಿ ಜೋಡಿಸಲ್ಪಟ್ಟಿದ್ದರೂ ಮಳೆಬಿಸಿಲು ಅವುಗಳ ಮೇಲೆ ಬಿದ್ದು ಪಾಚಿ, ಕಸ, ಧೂಳು ಮುಂತಾದವುಗಳ ಅಖಂಡ ಲೇಪ ಅವುಗಳಿಗೆ ಹಚ್ಚಿದಂತಾಗಿ ಇಡಿಯ ಮಾಡೇ ಮಸಿಯ ಒಂದು ಹಲಗೆಯಾಗಿತ್ತು. ಹೀಗೆ ಎರಕಗೊಂಡ ಆ ಹಂಚುಗಳ 'ಹಲಗೆ' ಕೆಳಗಿನ ಬಾರಿಪಟ್ಟಿ, ಪಕಾಸು, ದಾರವಂದಗಳನ್ನು ಭದ್ರವಾಗಿ ಹಿಡಿದಿತ್ತು. ಏಕೆಂದರೆ ಮರದ ಬಹ್ವಂಶ ಒಂದೋ (ಗೆದ್ದಲೆ ತಿಂದು) ಕುಷ್ಠರೋಗಗ್ರಸ್ತವಾಗಿತ್ತು, ಇಲ್ಲ ಮಾಯವಾಗಿತ್ತು. ಕಾಡಿನ ಬುಡವಾದರೂ ಕದಿವವನಿಗೆ ಕೈಗೆ ಸಿಕ್ಕಿದ ಬಾರಿಪಟ್ಟಿ, ಕೊಯ್ದು ಮರ ಕೈಯಲ್ಲಿರುವ ಒಂದು ಹಕ್ಕಿಯಂತೆ, ಕಾಡಿನ ಪೊದೆಯಲ್ಲಿರಬಹುದಾದ ಎರಡು ಹಕ್ಕಿಗಳ ಆಸೆ ಅವನಿಗಿಲ್ಲ. ನಮ್ಮ ಈ 'ಪ್ರಥಮ ಚುಂಬನ'ದ ಅನುಭವದಿಂದ ಒಂದು ಸಂಗತಿ ನಿರ್ಧರಿಸಿದ್ದೆವು – ಬಂಗ್ಲೆ ಎಲ್ಲರಿಗೂ ಎಲ್ಲ ಕಾಲದಲ್ಲಿಯೂ ಅಪ್ರವೇಶ್ಯ – ಠಣಾಣ ಠಜಿ ಭಠಣಾಟಿಛ. ಈ ಬಂಗ್ಲೆಗೆ ಒಂದು ಔಟ್ ಹೌಸೂ ಉಂಟು! ಪೀಸಾನಗರದ ವಾಲುಗೋಪುರವನ್ನೇ ಥೇಟ್ ಮೀರಿಸುವಂತಿದ್ದ ಇದರ ಗೋಡೆಗಳು ಮಾಡಿನ ಆಧಾರದಿಂದಲೇ ಒತ್ತಟ್ಟಿಗೆ ನಿಂತಿದ್ದುವು. ನೀರಿನ ಆಸರೆ ಅಲ್ಲಿಂದ ಒಂದು ಫರ್ಲಾಂಗ್

ದೂರದಲ್ಲಿ – ಬೆಟ್ಟದಿಂದ ಹರಿದು ಬರುತ್ತಿದ್ದ ಝರಿ. ಫೆಬ್ರುವರಿ ಮಾರ್ಚ್ ತನಕವೂ ಅದು ಆರಲಾರದೆಂದು ಊಹಿಸಿದ್ದೆವು. ಆದರೆ ಅದರ ಪಕ್ಕದಲ್ಲಿ ಶಿಬಿರ ಹೂಡಲು ಸರಿಯಾದ ಸ್ಥಳವಿರಲಿಲ್ಲ. ಹೀಗಾಗಿ ಬಂಗ್ಲೆಯ ಅಂಗಳದಲ್ಲಿ ಶಿಬಿರ, ನೀರನ್ನು ಝರಿಯಿಂದ ಹೊತ್ತು ತರುವುದು ಎಂದು ನಮ್ಮ ಪೂರ್ವ ಯೋಜನೆಯಿತ್ತು. ಡಿಸೆಂಬರಿನಲ್ಲಿ ನಾವು ಬಂಗ್ಲೆಯ ಪರಿಶೀಲನೆಯಿಂದ ಮರಳಿದ ಅನಂತರ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಅದರ ಸ್ಥಿತಿಯನ್ನು ಕುರಿತು ಪತ್ರ ಬರೆದಿದ್ದೆವು. ಮತ್ತು ಸಾಧ್ಯವಾದರೆ ಅದನ್ನು ದುರಸ್ತಿಗೊಳಿಸಬೇಕೆಂದೂ ಕೋರಿದ್ದೆವು.

ಬಂಗ್ಲೆಯ ಹಿಂದೆ ಅನ್ಸಾರಿ ನಿಂತ: ನಾವೆಲ್ಲ ಲಾರಿಯಿಂದ ದುಮುಕಿದೆವು. ನಮ್ಮನ್ನು ಸ್ವಾಗತಿಸಲು ಯಾರೂ ಇಲ್ಲ. ಕಾಡು ಹಾಳುಗರೆಯುತ್ತಿತ್ತು. ನಮ್ಮ ಕೆಲಸವನ್ನು ನಾವೇ ಮಾಡಬೇಕು. ಒಂದಿಷ್ಟು ಟೀ ಕಾಸೋಣವೆಂದರೆ ಚಹಾ ಪುಡಿಯೂ ಅಡುಗೆಯವರೂ ಲಿಂಗೋಜಿ ಲಾರಿಯಲ್ಲಿ. ಸಕ್ಕರೆ ಮಾತ್ರ ಈ ಲಾರಿಯಲ್ಲಿ. ಇನ್ನು ಅವರು ಬಂದ ಮೇಲೆಯೇ ಮುಂದಿನ ದಾರಿ. ನೀರು ತಂದು ಕುಡಿಯೋಣವೆಂದರೆ ಬಕೆಟುಗಳೆಲ್ಲ ಆಚೆ ಲಾರಿಯೊಳಗೆ. ಧರ್ಮಸ್ಥಳದಾ ಮಂಜ್ನಾಥಾ, ಕಾಪಾಡಪ್ಪಾ ಅನವರತಾ! ಉಳಿದ ದಾರಿಯೊಂದೇ – ಆದಷ್ಟು ಬೇಗ ಅನ್ಸಾರಿಯನ್ನು ಹಿಂದಿರುಗಿಸಿಕೊಂಡು ಹೋಗಿ ಅವರೆಲ್ಲರನ್ನು ತರುವುದು.

ಮೆಂಗಿಲ ಶೇಣವ ಎನ್ನುವ ಸ್ಥಳೀಯನೊಬ್ಬನ ಮನೆಯ ದಾರಿಯನ್ನು ತೋರಿಸಿ ಅವನನ್ನು ಕರೆತರಲು ಹುಡುಗರನ್ನು ಕಳಿಸಿಯಾಯ್ತು. ನಾನು ಅನ್ಸಾರಿ ಲಾರಿಯಲ್ಲಿ ಹಿಂದಕ್ಕೆ ಹೊರಟೆ. ದೊರೆಗಳೂ ಡಾಕ್ಟರರೂ ಶಿಬಿರದಲ್ಲಿಯೇ ಉಳಿದರು. ಲಿಂಗೋಜಿ ಲಾರಿಯಿದ್ದ ಸ್ಥಳವನ್ನು ನಾನು ತಲಪಿದಾಗ ಸಂಜೆ ೭ ಗಂಟೆಯಾಗಿತ್ತು. ಸುಮಾರು ಮೂರು ಗಂಟೆಗಳ ಕಾಲ ಅವರೆಲ್ಲರೂ ಆ ಮಾರ್ಗ ಮಧ್ಯೆ ಗಾಳಿಗೋಳಗಳನ್ನು ಹಾರಿಸುತ್ತ ಕಾಲ ಕಳೆದಿದ್ದರು. ನಾನು ತಲಪಿದೊಡನೆಯೇ ಹುಡುಗರ ಕೂಡಿಟ್ಟಿದ್ದ ಹತಾಶೆ, ಆಯಾಸ ಪ್ರವಾಹ ಕಟ್ಟೆಯೊಡೆದು ಹರಿದುವು. ಉದ್ದುದ್ದ ಮೋರೆ ಮಾಡಿ ಗೋಗರೆದರು. ತಪ್ಪು ನನ್ನದೆಂದು ಅದರ ಅರ್ಥವಲ್ಲ. ಕೇಳುವವನು ನಾನಿದ್ದೇನೆಂದು ಇಂಗಿತ. “ಇದೂ ಶಿಕ್ಷಣದ ಒಂದಂಗವೆಂದು ತಿಳಿಯಬೇಕು. ನೀವು ಮೊದಲೇ ಅಲ್ಲಿಗೆ ಹೋಗಿ ಏನು ಪಟೇಲ್ತಿಕೆ ಮಾಡಬೇಕಿತ್ತೇ? ಅದಿರಲಿ – ಮಾರ್ಗಮಧ್ಯೆ ಬಿಸಿಲಿನ ತಂಪು ಕೃಪೆಯಲ್ಲಿ ಕಲ್ಪನೆಯನ್ನು ಅದುಮಿಟ್ಟು ಶೂನ್ಯವಾಗಿ ದಿಗಂತವನ್ನು ನೋಡುವ ಅನುಭವ ಬೇಕೆಂದರೂ ಲಭಿಸೀತೇ?” ಎಂದು ನಾನು ಪಾಟೀಸವಾಲು ಹಾಕಿದೆ.
“ಬೆಂಗಳೂರು ಸಿಟಿ ಬಸ್ ಕಾಯುವಾಗ, ಸರ್?”
“ಆದರೆ ಅಲ್ಲಿ ದಿಗಂತವೆಂದರೆ ಮುಂದಿನ ಮನೆಯ ಕಕ್ಕಟ್ಟು ಅಥವಾ ಹೆಚ್ಚೆಂದರೆ ಅದರೊಳಗಿರುವ...”
ನಗೆಗಡಲು ಮೊಗೆಯಿತು. ಸ್ವಾಮಿಯವರ ಪ್ರತಿಭೆ ಮಿಂಚಿತು:

ಒಂದು ಲಾರಿಯು ದೂರ ಸಾಗಿರಲು ಮುಂದೆ
ಕೆಲಸವಿಲ್ಲದೆ ಕುಳಿತೆ ನಾನಿಲ್ಲೆ ಹಿಂದೆ
ಕೇಪಳೆಯ ಹಣ್ಣು ಮುರಕಲ್ಲಿನಾ ಮಣ್ಣು
ನೋಡ ಸಾಲದು ನಮ್ಮ ಒಂದು ಜತೆ ಕಣ್ಣು!

ಲಾರಿಗಳ ಬೆನ್ನು ಬೆನ್ನುಗಳನ್ನು ಸೇರಿಸಿದೆವು. ಲಿಂಗೋಜಿಯು ಅನ್ಸಾರಿಗೆ ವರ್ಗವಾದ. ಹುಡುಗರೆಲ್ಲರೂ ಅನ್ಸಾರಿ ಲಾರಿಯಲ್ಲಿ. ಇದಕ್ಕೆ ಲಿಂಗೋಜಿ ಲಾರಿಯನ್ನು ಕಟ್ಟಿ ಮಂದಗಮನದಿಂದ ಮುಂದೆ ಸುಂದರಾಂಗರ ಮೆರವಣಿಗೆ ಮೆರೆಯಿತು. ಐದಾರು ಮೈಲು ದೂರದ ಬೆಳ್ತಂಗಡಿ ತಲಪುವಾಗ ಕತ್ತಲೆ ಪೂರ್ಣ ಕವಿದಿತ್ತು. ಅಲ್ಲಿದ್ದ ‘ಜಗತ್ಪ್ರಸಿದ್ಧ’ ವರ್ಕ್‌ಷಾಪಿನಲ್ಲಿ ಅಥವಾ ಲಾರೀ ದವಖಾನೆಯಲ್ಲಿ ಲಿಂಗೋಜಿ ಲಾರಿ, ಲಿಂಗೋಜಿ, ಹರೂನ್ ಇವರನ್ನು ಬಿಟ್ಟು ಉಳಿದವರು ನಾವೂರಿನೆಡೆಗೆ ಹೊರಟೆವು. ಅಷ್ಟರಲ್ಲಿ ಅಲ್ಲಿಗೆ ದೊರೆಗಳು (ನಾವೂರಿನಿಂದ ೭ ಮೈಲಿದೆ) ಯಾರದೋ ಕಾರಿನಲ್ಲಿ ಬಂದರು. ಅವರು ಪೋಸ್ಟಾಫೀಸಿನಲ್ಲಿ ತಮ್ಮ ತಂದೆಯವರ ಆರೋಗ್ಯ, ಶ್ರೀಮತಿ ನಿಸಾರರ ಆರೋಗ್ಯ ಮುಂತಾದ ವಿವರ ಸಂಗ್ರಹಿಸಿಡಲು ಬೇಕಾದ ಏರ್ಪಾಡು ಮಾಡಿ ನಮ್ಮ ಲಾರಿಯನ್ನೇರಿದರು.

“ನೀನು ಇಷ್ಟು ತಡಮಾಡಬಾರದಿತ್ತು. ಲಿಂಗೋಜಿಯನ್ನು ಅಲ್ಲಿಯೇ ಬಿಟ್ಟು ಹುಡುಗರನ್ನು ಮೊದಲು ಸಾಗಿಸಿಬಿಡಬೇಕಾಗಿತ್ತು” ಅವರೆಂದರು.
“ಸರಿಯೇ. ಆದರೆ ಲಿಂಗೋಜಿಯ ಅವಸ್ಥೆ?”
“ಪುನಃ ಅನ್ಸಾರಿಯನ್ನು ಓಡಿಸಬಹುದಿತ್ತು.”

“ಒಂದರ್ಧ ಗಂಟೆಯ ಉಳಿತಾಯಕ್ಕಾಗಿ ಎಷ್ಟು ಪೆಟ್ರೋಲ್ ಖರ್ಚು. ಅಲ್ಲದೇ ಅಷ್ಟು ಬೇಗ ಹೋಗಿ ಇವರು ಮಾಡುವುದಾದರೂ ಏನು? ನಮ್ಮ ಹಾಗೆ ತಾನೇ?” ನಾನೊಪ್ಪಲಿಲ್ಲ.
“ಇಲ್ಲ, ಹುಡುಗರು ನಮ್ಮ ಹಾಗಲ್ಲ. ಬಲು ಕೋಮಲ. ಶ್ರಮ, ತಾಪ ವಿಪರೀತವಾಗಿರುವಾಗ ಒಂದೊಂದು ನಿಮಿಷವೂ ಯುಗದಂತಾಗುವುದು. ಹೊಣೆ ಹೊತ್ತವರಿಗೆ ಅದರ ಭಾರದಿಂದಾಗಿ ಇದು ಗೊತ್ತಾಗುವುದಿಲ್ಲ. ಆದರೆ ಹೊರದ ಹುಡುಗರಿಗೆ ಇದು ಅಸಹನೀಯವಾಗುವುದು.”

“ಸರಿ, ಮುಂದಿನ ತಿಳುವಳಿಕೆಗಾಯಿತು” ಎಂದು ನಾನು ಮುಗಿಸಿದೆ. Noted for future guidance! ಅವರೆಂದದ್ದು ಎಷ್ಟು ಸರಿಯೋ ನಾನು ಮಾಡಿದ್ದೂ ಅಷ್ಟೇ ಸರಿ ಎಂದು ತಿಳಿದಿದ್ದೇನೆ. ಯಾವ ಇಬ್ಬರು ವ್ಯಕ್ತಿಗಳೂ ಒಂದೇ ವಿಷಯ ಕುರಿತು ಏಕಪ್ರಕಾರ ಅಭಿಪ್ರಾಯ ನೀಡುವುದು ಸಾಧ್ಯವಿಲ್ಲ.

ಹೀಗೆ ಮಾತು, ವಾದ, ನಗು ಮುಂದುವರಿದಂತೆ ಲಾರಿ ನಾವೂರು ಬಂಗ್ಲೆಯನ್ನು ಪುನಃ ಪ್ರವೇಶಿಸಿತು. ದೊರೆಗಳೆಂದರು, “ಒಂದು ಹೇಳಲು ಮರೆತುಬಿಟ್ಟಿದ್ದೆ. ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ಬಂಗ್ಲೆ ಮತ್ತು ಔಟ್‌ಹೌಸ್‌ಗಳನ್ನು ರಿಪೇರಿ ಮಾಡಿಸಿದ್ದಾರೆ. ಅವು ಈಗ ಅಪಾಯರಹಿತವಾಗಿದೆ. ಆದರೆ ನೀರಿನ ಸಮಸ್ಯೆ ಪ್ರಬಲವಾಗಿದೆ. ಡಿಸೆಂಬರಿನಲ್ಲಿ ಹರಿಯುತ್ತಿದ್ದ ಕಿರು ತೊರೆ ಈಗ ಹನಿ ಹನಿ ತೊಟ್ಟಿಕ್ಕುತ್ತಿದೆ. ಅದರ ದಾರಿಯಲ್ಲಿ ಸ್ವಲ್ಪ ಮೇಲೆ ಹೋಗಿ ಗುಂಡಿ ತೋಡಿ ನಾವು ಕುಡಿಯುವ ನೀರು ಸಂಗ್ರಹಿಸಬೇಕು. ಬೇರೆ ಉಪಾಯವಿಲ್ಲ. ಅಲ್ಲಿಂದ ಇಲ್ಲಿಗೆ ಹೊತ್ತು ತರುವುದು ಪ್ರಯಾಸಕರವಾದರೂ ಹುಡುಗರಿರುವುದರಿಂದ ಈ ಸಮಸ್ಯೆ ನಿವಾರಿಸಬಹುದು. ಆದರೆ ನೀರು ಸಂಗ್ರಹಿಸಿಡಲು ದೊಡ್ಡ ಬಾನಿಯೇ ಇಲ್ಲವಲ್ಲ?”

ಇದು ಹೇಗೆಯೇ ಇರಲಿ. ನಾವೂರು ಬಂಗ್ಲೆ ಆಗ ಅತಿ ಸಂಭ್ರಮದ ಚಟುವಟಿಕೆಯ ಜೇನುಗೂಡಾಗಿತ್ತು. ಗ್ಯಾಸ್ ಲೈಟ್‌ಗಳು, ಲಾಂದ್ರಗಳು, ಟಾರ್ಚ್ ಲೈಟುಗಳು ಅಲ್ಲಿ ಬೆಳಕಿನ ಹೊನಲು ಹರಿಸಿದುವು. ಹುಡುಗರ ಒಂದು ತಂಡ ನೀರು ತಂದಿತು. ಇನ್ನೊಂದು ಸೌದೆ ಆಯ್ದಿತು. ಮತ್ತೊಂದು ಸಾಮಾನು ಸರಂಜಾಮುಗಳನ್ನು ಔಟ್ ಹೌಸಿನಲ್ಲಿ ಶೇಖರಿಸಿ ವ್ಯವಸ್ಥಿತವಾಗಿ ಜೋಡಿಸುವ ಜಂಬ್ರದಲ್ಲಿ ಜಾಂಬ್ರೆ ಮತ್ತು ಖಾನ್ವಿಲ್ಕರರಿಗೆ ಸಹಾಯ ಮಾಡಿತು. ಅಡುಗೆಯವರು ಪುಟ ನೆಗೆಯುತ್ತಿದ್ದ ರಬ್ಬರ್ ಚಂಡಿನಂತೆ. ಲಾರಿಯಿಂದಿಳಿದ ಅರ್ಧ ಗಂಟೆಯ ಒಳಗೆಎ ಅವರು ಟೀ, ಅವಲಕ್ಕಿ ಉಪ್ಪುಕರಿಯನ್ನು ತಯಾರು ಮಾಡಿ ಹಂಚಿಯೇ ಬಿಟ್ಟರು. ಅಮೃತ ಹೇಗುಂಟೋ ನನಗೆ ಗೊತ್ತಿಲ್ಲ. ಆದರೆ ಅದು ನಾವೂರಿನ ಈ ಪ್ರಥಮ ಟೀಗಿಂತ ಹೆಚ್ಚು ರುಚಿಕರವಾಗಿದ್ದಿರಲಾರದು ಎಂದು ನಂಬಿದ್ದೇನೆ. ಇನ್ನು ರತ್ನ ಹೇಳಿದಂತೆ ಆ ಗಳಿಗೆಯನ್ನು ಪರಮಾತ್ಮ ನನ್ನೆದುರು ಬಂದು ನಿಂತು, “ನಿನಗೆ ಚಿರಂಜೀವಿತ್ವ ನೀಡುವ ಆದರೆ ಕಹಿಯಾದ ಅಮೃತ ಸಾಕೋ ಅಥವಾ ನಾವೂರಿನ ಈ ಮರ್ತ್ಯ ಟೀ ಸಾಕೋ?” ಎಂದು ಪ್ರಶ್ನಿಸಿದರೆ “ಹೋಗಯ್ಯಾ, ಹೋಗು ಟೀನೇ ಸಾಕು. ನಿನ್ನಮೃತ ಮೃತವಾಗಲಿ” ಎಂದು ನಾನು ಮಾತ್ರವಲ್ಲ ನಾವೆಲ್ಲರೂ ಏಕ ಕಂಠದಿಂದ ಒದರಿ ಬಿಡುತ್ತಿದ್ದೆವು. ಹೊಟ್ಟೆಯ ಒಳಗೆ ಖಾರದ ಅವಲಕ್ಕಿಯ ಟೈಮ್ ಬಾಂಬೂ ಸುಮಧುರ ಟೀಯ ಹೈಡ್ರೋಜನ್ ಬಾಂಬೂ ಏಕ ಕಾಲದಲ್ಲಿ ಕೆಲಸ ಮಾಡಿ ಚೈತನ್ಯದ್ವಯವನ್ನು ಪ್ರವಹಿಸಿದುವು. ರಾತ್ರಿ ೯ ಗಂಟೆ ಆಗಲೇ ಆಗಿದ್ದರೂ ನಮಗೆ ಆಗ ಮುಗಿದದ್ದು ಸಾಯಂಕಾಲದ ಟೀ ಅಷ್ಟೆ. ಊಟದ ಏರ್ಪಾಡು ಭರದಿಂದ ಸಾಗಿತು.

ಡಾಕ್ಟರ್ ಪೂಜಾರರು ಬಲು ಸುಟಿ ತರುಣ. ಎಂಬಿಬಿಎಸ್ ಡಿಗ್ರಿಧರರಾಗಿ ಮುಂದಿನ ಎಂಎಸ್ ಪದವಿ ಓದುತ್ತಿದ್ದ ಸರ್ಕಾರೀ ವೈದ್ಯ. ಅವರು ನೀರನ್ನು ಕೂಲಂಕಷವಾಗಿ ಪರಿಶೀಲಿಸಿ, “ಈ ನೀರನ್ನು ಕುದಿಸಿ, ಸೋಸಿ ಕುಡಿಯಬೇಕು. ಬರಿಯ ಬ್ಲೀಚಿಂಗ್ ಪೌಡರ್ ಹಾಕಿದರೆ ಸಾಲದು. ಹಾಗೇ ಕುಡಿದರೆ ಡಿಸೆಂಟ್ರಿ ಬರಬಹುದು” ಎಂದರು.
ಇದನ್ನು ಕೇಳಿದ ಅತ್ಯುತ್ಸಾಹಿ ಜಗನ್ನಾಥ ಶಾಸ್ತ್ರಿ, “ಸಾರ್! ತೋಡಿನ ಮೇಲೆ ಬೆಂಕಿ ಹಾಕಿಬಿಡೋಣ. ಆಗ ಕುದ್ದ ನೀರೇ ನಮಗೆ ಸಿಗುವುದಷ್ಟೆ” ಎಂಬ ಶಾಸ್ತ್ರೀಯ ಸೂಚನೆ ನೀಡಿದ.
“ಆಗ ತೋಡಿನಲ್ಲಿರುವ ಮೀನುಗಳ ಪಾಡು?” ಗುರು ಕೇಳಿದ.
“ಮರ ಹತ್ತಿಬಿಡುತ್ತವೆ ಕಾಣಮ್ಮ” ಶ್ರೀನಿವಾಸ ಕೂಡಿಸಿದ.
“ಮರ ಹತ್ತಲು ಅವೇನು ಎಮ್ಮೆ ಕರುಗಳೇ?” ನಾನು ಮುಗಿಸಿದೆ.
ಕುಡಿಯುವ ನೀರಂತೂ ಹೇಗೋ ಆಗುವುದು. ಆದರೆ ಸ್ನಾನ ಮಾಡಲು? ಬೆಂಗಳೂರಿನ ತಂಪಿನಿಂದ ಬಂದ ಹಸುಗೂಸುಗಳು ನಾವೂರಿನ ಸೆಕೆಯಿಂದ ಚಂಡಿಪಿಂಡಿಯಾಗಿ ಕಂಗಾಲಾಗಿದ್ದರು.

ಬಾಬಾ, ಶ್ರೀಧರನ್, ಲಕ್ಷ್ಮಿ ಮೊದಲಾದವರು ಸೇರಿ ಶಿಬಿರಾಗ್ನಿಯನ್ನು ಭರದಿಂದ ಸಿದ್ಧಗೊಳಿಸಿದರು. ವಿಶಾಲವಾದ ಅಂಗಳವಿದೆ. ಬಂಗ್ಲೆಯ ಚಾವಡಿಯ ಮುಂದೆ ಗುಂಡಿ ತೋಡಿ ಮರದ ಭಾರೀ ಕಾಂಡಗಳನ್ನು ಒಟ್ಟಿದರು. ಅದೊಂದು ಗೋಪುರಾಕೃತಿಗೆ ಬಂದು ಎಲ್ಲವೂ ತಯಾರಾದೊಡನೆಯೇ ದೊರೆಗಳನ್ನು ವಿಧಿ, ಮಂತ್ರ, ತಂತ್ರಪೂರ್ವಕ ಅಲ್ಲಿಗೆ ಆಮಂತ್ರಿಸಲಾಯಿತು. ಅವರು ಸಾಂಕೇತಿಕವಾಗಿ ಅದಕ್ಕೆ ಅಗ್ನಿ ಸ್ಪರ್ಶಿಸುವುದರ ಮೂಲಕ ಶಿಬಿರಾಗ್ನಿಯನ್ನು ಅಧಿಕೃತವಾಗಿ ಉದ್ಘಾಟಿಸಿದರು. ಅಲ್ಲಿ ಭಾಷಣ ಆಲಿಸುವ (ಕೇಳುವವರು ಸಹಿಸಲೇಬೇಕಾದ) ಮೂಕಸಂಕಟವಿಲ್ಲ. ಆದರೆ ಆಶು ಭಾಷಣದ ಮುಗ್ಧತೆ, ಸೌಂದರ್ಯ ಇದ್ದುವು. ಭಾಷಣಕಾರರು, ನರ್ತನಕಾರರು ಹುಡುಗರೇ. ಕೇಳುವವರು ನಾವೆಲ್ಲ. "ನೋಟಕರುಂ ಆಟಕರೇ!" ಉತ್ಸಾಹ ಮೂಡಿದರೆ ನಾವೂ ಅವರೊಡನೆ ಅವರಂತೆ ಹಾಡು ಅರಚುತ್ತ ನಲಿಯಬಹುದು. ದಿನದ ಶಿಸ್ತಿನ ಬಿಗಿಯಿಂದ ಬಿಸಿಗೊಂಡ ದೇಹಯಂತ್ರಕ್ಕೆ ಇದೊಂದು ಬಗೆಯ ತೈಲಾಭ್ಯಂಜನ. ಕೀಲುಗಳು ನಗುವೆಂಬ ಹೆರೆಯೆಣ್ಣೆಯಿಂದ ಸಡಿಲಗೊಂಡು ಹಗುರವಾಗಿ, ಯಂತ್ರ ಮರುದಿವಸದ ಕಾರ್ಯಕ್ಕೆ ಮೊದಲಿನ ಲವಲವಿಕೆಯಿಂದ ಪುನಃ ಸಿದ್ಧವಾಗುವುದು. ದೊಡ್ಡವರಾದ ನಮಗೆ ಆಗ ಪ್ರಾಯದ ಹೊಣೆಗಾರಿಕೆಯ ಭಾರವನ್ನು ಮರೆತು ಹಗುರಾಗಿ ಎಳೆಯರಾಗಿ ನಲಿಯುವ ಸೌಕರ್ಯವಿದೆ.

ತಾಳ್ಯಾಕ ತಂತ್ಯಾಕ
ರಾಗದ ಚಿಂತ್ಯಾಕ
ಹೆಜ್ಜ್ಯಾಗ ಗೆಜ್ಜ್ಯಾಗ
ಕುಣಿಯೋಣು ಬಾರಾ ಕುಣಿಯೋಣು ಬಾ!
– ಅಂಬಿಕಾತನಯದತ್ತ

ಮೆಂಗಿಲ ಶೇಣವ
ಅಧ್ಯಾಯ ನಲ್ವತ್ತಾರು

ಶಿಬಿರಾಗ್ನಿಯ ಭೀಕರ ಕೆನ್ನಾಲಗೆಯ ಕುಣಿತ. ಕಿಡಿಗಳು ಲಟಪಟನೆ ಚಟಾಯಿಸಿ ಅಂತರಿಕ್ಷಕ್ಕೆ ನೆಗೆದು ಅಲ್ಲಿ ಸಿಕ್ಕಿಹಾಕಿಕೊಂಡು ನಕ್ಷತ್ರಗಳಾಗುವ ಸೊಗಸು, ಹುಡುಗರ ಹಾರಾಟ, ಸಂತೋಷದ ಕೇಕೆಗಳು. ಅಲ್ಲಿ ಹುಡುಗರೊಡನೆ ಹುಡುಗನಾಗಿ ಬೆರೆತು ಕುಣಿದು ನಲಿಯುತ್ತಿರುವ ಈ ಅಜ್ಜನಾರು? ಕಾಲಿಗೆ ತುಳುನಾಡಿನ ಮೆಟ್ಟು. ಮೊಳಕಾಲಿನಿಂದ ಮೇಲೆ ಎತ್ತಿ ಕಟ್ಟಿರುವ ಬೈರಾಸು. ಮೈಮೇಲೊಂದು ಜುಬ್ಬ. ತಲೆಗೆ ಕೆಂಪು ಎಲೆವಸ್ತ್ರದ ಮುಂಡಾಸು. ಕೈಗೆ ಆಧಾರವಾಗಿ ಊರುಗೋಲು. ಬಚ್ಚಬಾಯಿಯನ್ನು ಮುಚ್ಚುವ, ಮುಖದ ಮೇಲೆದ್ದು ಕಾಣುವ ಬಿಳಿಯ ಹುಲಿ ಮೀಸೆ. ಕಣ್ಣುಗಳಿಂದ ಆತ್ಮವಿಶ್ವಾಸ, ಪ್ರೀತಿ ಮಿಂಚುವ ಕಾಂತಿ.

"ಅಜ್ಜಾ ಅಜ್ಜಾ, ಕತೆ ಹೇಳು ಅಜ್ಜಾ" ಎಂದನು ಮೀಸೆ ಅಣ್ಣಯ್ಯಪ್ಪ.
"ಕುಣಿಯೋಣು ಬಾರಾ" ಎಂದನು ಪಿಂಟೋ.
ಶ್ರೀಧರ ಹಾಡಿದ, ಬಾಬಾ ದನಿ ಸೇರಿಸಿದ. ಉಳಿದವರು ಆಲಾಪನೆ ಮಾಡಿದರು. ತಟ್ಟೆಗಳು ತಮಟೆಗಳಾದುವು. ಅಂಗೈಗಳು ತಾಳ ಬಡಿದುವು. ೬೭ ವರ್ಷದ ಅಜ್ಜ, ಪಿಂಟೋ, ಲಕ್ಷ್ಮಿ, ಮೋಹನ ಮೊದಲಾದವರು ಬೆಂಕಿಯ ಸುತ್ತಲೂ ಕುಣಿದದ್ದೇ ಕುಣಿದದ್ದು, ಹಾಡಿದ್ದೇ ಹಾಡಿದ್ದು.
"ಬೆಟ್ಟ ಈ ರಾತ್ರಿಯೇ ಏರಬಹುದೋ ಅಜ್ಜಾ?" "ಓ ಖಂಡಿತಾ!" "ನಮಗೆ ದಾರಿ ತಪ್ಪಿದರೆ?" "ದಾರಿ ತಪ್ಪುವುದು ಎಂಥಾದ್ದು?" "ನಿಮಗೆ ಈ ಪ್ರಾಯದಲ್ಲಿ ಕೂಡುವುದೋ?" "ಅದು ನೋಡುವಾ!"
ಅಜ್ಜನ ಹೆಸರು ಮೆಂಗಿಲ ಶೇಣವ. ಕುದುರೆಮುಖದ ಕೂಸು. ನನಗೆ ಅವನ ಪರಿಚಯ ಹತ್ತು ವರ್ಷಗಳ ಹಿಂದಿನದು. ಅಂದೂ ಅವನೇ ನಮಗೆ 'ಗೈಡ್' ಮಾರ್ಗದರ್ಶಕ. ಡಿಸೆಂಬರಿನಲ್ಲಿ ದೊರೆಗಳೂ ನಾನೂ ನಾವೂರಿಗೆ ಬಂದಿದ್ದಾಗ ಮೆಂಗಿಲ ಶೇಣವನ ಮನೆಗೆ ಹೋಗಿದ್ದೆವು. ಬಂಗ್ಲೆಯಿಂದ ಮುಕ್ಕಾಲು ಮೈಲು ಕಾಲುದಾರಿಯಲ್ಲಿ ಹೋಗಿ ಒಂದು ಉಬ್ಬುಲು ದಾಟಿ ಇನ್ನೊಂದು ತೋಡನ್ನು ಪಾಲದ ಮೂಲಕ ಹಾಯ್ದು ಹೋದರೆ ಅವನ ಗುಡಿಸಲು:
ಬಳಿಯೊಳೆ ಕೆರೆ, ತೊರೆ, ಮರಬಳ್ಳಿಯ ಹೊರೆ,
ಜೀವದ ತುರುಗಳ ಮೇವುಗಳು
ಅಂಗಳದಲಿ ಹುಲ್ಲೊಟ್ಟಿಲ ತೊಟ್ಟಿಲ
ಏರಿ ಮೆರೆವ ಕರುಮಂದೆಗಳು –ಕಡೆಂಗೋಡ್ಲು

ನಾವು ಸಮವಸ್ತ್ರಧಾರಿಗಳಾಗಿ ಅಕಸ್ಮಾತ್ತಾಗಿ ಅಲ್ಲಿಗೆ ಹೋಗಿದ್ದುದರಿಂದ ಚಿಕ್ಕಪುಟ್ಟ ಕೋಮಣಧಾರೀ ಮಕ್ಕಳು ಹೆದರಿ ಓಡಿ ಅಡಗಿದರು. ಹಿರಿಯ ಮಗಳು ಹುಲ್ಲುಮೆದೆ ಒಟ್ಟುತ್ತಿದ್ದವಳು ಅವಾಕ್ಕಾಗಿ ಬೆರಗಾಗಿ ನಿಂತಳು.

"ಮೆಂಗಿಲ್ ಸೋಜಾ ಇಲ್ಲವಾ?" ನಾನು ಮಾತಾಡಿದೆ.

ಅಂತೂ ಕನ್ನಡ ಭಾಷೆ ಕೇಳಿ ಅವಳ ಗಾಬರಿ ಕಡಿಮೆಯಾಗಿರಬೇಕು.

"ಓ" ಎಂದು ಕಿವಿಯೆಡೆ ಕೈ ಹಿಡಿದಳು.

ಪುನಃ ಗಟ್ಟಿಯಾಗಿ ಕೂಗಿ ಹೇಳಿದೆ.

"ನಾನಿಲ್ಲಿ ಇದ್ದೇನೆ" ಎಂದು ಮುದುಕ ಹೊರಗೆ ಚಿಮ್ಮಿದ. ದೊಡ್ಡ ಲಂಗೋಟಿಯೊಂದೇ ಅವನ ಮೈಮೇಲಿದ್ದ ವಸ್ತ್ರ. ತಲೆಯ ಮೇಲೆ ಮುಟ್ಟಾಳೆ. ಕೈಯಲ್ಲಿ ಖಾಲಿ ಮಾಡಿದ ಗೊಬ್ಬರದ ಕುಕ್ಕೆ. ಸುತ್ತಲೂ ಗೊಬ್ಬರದ, ಹಸಿಹುಲ್ಲು ಕೊಳೆತ ವಾಸನೆ. "ಚಿಂದಿಯನುಟ್ಟೇ ಹಾಳೆಯ ತೊಟ್ಟೇ ಇದೆ ಸಿಂಗರವೆಂದೆಸೆಯುವರು."

"ಏನು ಮೆಂಗಿಲ ಸೋಜಾ! ನನ್ನನ್ನು ಗೊತ್ತಾಯಿತಾ?"

"ಮೆಂಗಿಲ ಸೋಜಾ ಅಲ್ಲ, ಮೆಂಗಿಲ ಶೇಣವ" ಎಂದು ತಿದ್ದಿದ. ನನ್ನ ಹತ್ತಿರ ಬಂದು, ಕಣ್ಣರಳಿಸಿ ನೋಡಿ ಮೇಲೆ ಕೆಳಗೆ ಪುನಃ ನೋಡಿ, "ಹ್ಞಾ ನೋಡಿದ್ದೇನೆ. ಆದರೆ ಈ ಕಣ್ಣು ಈಗ ಮೊದಲಿನಷ್ಟು ಶುದ್ಧ ಇಲ್ಲ ಸ್ವಾಮಿ."

"ಅಂತೂ ಎಲ್ಲಿ ಯಾವಾಗ ನೋಡಿದ್ದು?"

"ಎಲ್ಲಿ? ಮತ್ತೆಲ್ಲಿ ನೋಡಿದ್ದರೆ ಇಲ್ಲಿಯೇ. ನಮಗೆ ಸ್ವಾಮಿ ಪ್ರತಿ ವರ್ಷವೂ ಜನ ಬಂದು ಬಂದು ಹೋಗುತ್ತಾರೆ. ಎಲ್ಲರಿಗೂ ಗೈಡು ನಾನೇ. ಹಾಗಾಗಿ ಹೆಸರು ಮಿನಿ ನೆನಪು ಉಳಿಯೋದಿಲ್ಲ."

ಕುದುರೆಮುಖದ ಅಧ್ಯಕ್ಷನಿವ. ಅಧ್ಯಕ್ಷರನ್ನು ನಮಗೆ ಗೊತ್ತಿರುವುದು. ಆದರೆ ಅವರಿಗೆ ನಮ್ಮೆಲ್ಲರನ್ನೂ ಗೊತ್ತಿರಬೇಕೆಂದಿಲ್ಲವಷ್ಟೆ.

"ನೀವೆಲ್ಲ ಕ್ಷೇಮವೇ? ಹೆಂಡತಿ ಮಕ್ಕಳು?"

"ಕ್ಷೇಮ ಎಂಥಾದ್ದು? ನೋಡಿ ಸ್ವಾಮಿ, ಅವಳು ಹೋಗಿ ಎಂಟು ವರ್ಷ ಆಯಿತು. ಎಂಟು ಮಕ್ಕಳೂ ನಾನೂ ಇದ್ದೇವೆ."

"ಅಯ್ಯೋ ಪಾಪ."

"ಪಾಪ ಎಂದರೆ ಮಾಡುವುದೇನು ಸ್ವಾಮಿ? ನನಗೆ ನಿಮಗೆ ಪ್ರೋಗ್ರಾಮು ಉಂಟು. ಕಾಲರಾಯನಿಗುಂಟೋ! ಕರೆದಾಗ ಹೋಗಲೇಬೇಕಷ್ಟೆ."

"ಏನಾಗಿತ್ತು?"

"ಹೇಳುವಂಥಾದ್ದು ಏನೂ ಇಲ್ಲ. ಈ ಹುಡುಗ ಹುಟ್ಟಿದಾಗ ನೋಡಿ ಜ್ವರ ಬಂತು. ಎಂಥ ಸುಡುಗಾಡು ಜ್ವರವೋ ಅದು ಬಿಟ್ಟಿತು. ಆದರೆ ಮತ್ತೆ ಅವಳು ಅವಳಾಗಿ ಉಳಿಯಲಿಲ್ಲ. ಯಾರೂ ಅವಳಿಗೆ ಗುರ್ತೇ ಆಗಲಿಲ್ಲ. ಮಗುವಿಗೆ ಮೊಲೆ ಹಾಲು ಊಡಲಿಲ್ಲ. ಅವಳೂ ಆಹಾರ ತೆಗೆದುಕೊಳ್ಳಲಿಲ್ಲ. ಹಳ್ಳಿ ಔಷಧಿ, ಮದ್ದು ಮಂತ್ರ ಹರಕೆ ಆಯಿತು. ನಮ್ಮ ಪಾದ್ರಿಗಳು ಸಹ ಔಷಧಿ ಕೊಟ್ಟರು. ಆದರೆ ತೆಗೆದುಕೊಳ್ಳಬೇಕಲ್ಲ. ಬೆಳ್ತಂಗಡಿಯಿಂದ ಡಾಕ್ಟ್ರನ್ನು ಕರೆದು ತಂದು ಸೂಜಿ ಮದ್ದೂ ಕೊಟ್ಟಾಯಿತು. ಆದರೇನು ಮಾಡೋದು ಸ್ವಾಮಿ, ಉಪ್ವಾಸನೇ ಬಿದ್ದು ಹೋಗಿಬಿಟ್ಟಳು."

"ಆಗ ಮಗೂಗೆ?"

"ಮಗೂಗೆ ಎರಡು ತಿಂಗಳಾಗಿರಲಿಲ್ಲ. ಮತ್ತೆ ನೋಡಿ ಹೀಗೇ ಬೆಳೆಸಿಕೊಂಡು ಬಂದೆವು."

ಹುಡುಗ ಸುಟಿಯಾಗಿ ಮುದ್ದಾಗಿ ಇದ್ದ. ತಾಯಿಯನ್ನು ಕಾಣದ ಶಿಶು ಪಾಪ.

"ಮಕ್ಕಳಿಗೆ ಮದುವೆ ಏನಾದರೂ?"

"ದೊಡ್ಡವನು ಅಪ್ಪು, ಇಲ್ಲೇ ಇದ್ದಾನೆ. ಇನ್ನೂ ಹುಡುಗ. ಅವನಕ್ಕ ಮಂಗ್ಳೂರಿನಲ್ಲಿ ನಮ್ಮ ಜನದ ಮನೆಯಲ್ಲಿ ಕೆಲಸಕ್ಕಿದ್ದಾಳೆ. ಮದುವೆಯಿಲ್ಲ. ಇವಳು ಅವನ ತಂಗಿ. ಕಿವಿ ಸೋರಿ ಸೋರಿ ಕೇಳಿಸೋದೇ ಇಲ್ಲ. ಮದುವೆ ಬೇಡಾಂತಲೇ ಇದ್ದಾಳೆ. ಉಳಿದವರು ಚಿಕ್ಕವರು ನೋಡಿ."

"ಪಾಪ ಎಂಥ ಕಷ್ಟವಾಯಿತು."

"ಏನು ಮಾಡೋದು, ಆಯುಷ್ಯ ಇದ್ದಷ್ಟು ದಿವಸ ನಾನು ದುಡಿಯಬೇಕಷ್ಟೆ?"

ಅಜ್ಜನನ್ನು ಕರೆದುಕೊಂಡು ಬಂಗ್ಲೆಗೆ ಬಂದೆ. ಬರುತ್ತ, "ಅದಿರಲಿ, ನಿಮ್ಮ ಮನೆಗೆ ಬಂದವನಿಗೆ ಕಾಫಿ, ತಿಂಡಿ, ಸೀಯಾಳ ಕೊಡಬೇಡವೇ?" ಎಂದು ಕೆಣಕಿದೆ.

"ಖಂಡಿತಾ! ಆದರೆ ನೀವು ದೊಡ್ಡವರು ತೆಕ್ಕೊಳ್ಳುತ್ತೀರೋ ಇಲ್ಲವೋ! ಮತ್ತೆ ನಮ್ಮದೆಂಥಾ ಕಾಫಿ."

"ನೀವು ಕೊಟ್ಟು ನೋಡಿ."

"ಹಾಗಾದರೆ ಊಟ ನಮ್ಮಲ್ಲಿ. ಬಡವರ ಗಂಜಿ."
ದೊರೆಗಳೂ ನಾನೂ ಮೆಂಗಿಲನೊಡನೆ ಕುದುರೆಮುಖದ ಮ್ಯಾಪ್ ಹಿಡಿದು ಮಾತಾಡಿದೆವು. ಸುಮಾರು ೧೦೦–೧೫೦ ಚದರ ಮೈಲು ವ್ಯಾಪಿಸಿದ್ದ ಆ ಪ್ರದೇಶದ ಪ್ರತಿ ಬೆಟ್ಟ, ಕೊರಕಲು, ದಿಬ್ಬ, ಹಳ್ಳಿ ಇವುಗಳ ಹೆಸರು, ವಿವರ, ಎತ್ತರ, ದೂರ ಎಲ್ಲ ಅವನಿಗೆ ಬಾಯಿ ಪಾಠ. ಕುದುರೆಮುಖದ ಶಿಶುವಲ್ಲವೇ!
"ನಾವು ಜನವರಿಯಲ್ಲಿ ಬರುತ್ತೇವೆ. ಹತ್ತು ದಿವಸ ಇರುತ್ತೇವೆ. ನಿಮ್ಮ ಸಹಾಯಬೇಕು. ಮೇಲೆ ಬಂದು ದಾರಿ ತೋರಿಸಬೇಕು."
"ಆಗಬಹುದು. ಮೊದಲೇ ಬರುವ, ಟೈಮು ತಿಳಿಸಿಬಿಡಿ."
ಅದೇ ಪ್ರಕಾರ ನಾವು ದಿವಸ, ಟೈಮು ತಿಳಿಸಿದ್ದೆವು. ಆದರೂ ನಮ್ಮ ಮೊದಲಿನ ಲಾರಿ ಬಂದಾಗ ಮೆಂಗಿಲ ಶೇಣವ ಅಲ್ಲಿರಲಿಲ್ಲ. ಈಗ ಬಂದು ಸೇರಿದ್ದಾನೆ. ಬಹುಶಃ ನಾವು ಹೇಳಿ ಕಳಿಸಿದ ಮೇಲೆ ಬಂದಿರಬೇಕು. ನಮ್ಮನ್ನು 'ಡೋಂಗಿ ಮಂದಿ' ಎಂದು ತಿಳಿದಿದ್ದನೋ ಏನೋ!
ಅವನನ್ನು ಕರೆದು, "ಅಲ್ಲ ಶೇಣವ, ನಾವು ಬರುತ್ತೇವೆ ಎಂದು ಮೊದಲೇ ಬರೆದಿದ್ದರೂ ನೀವು ಯಾಕೆ ನಾವಿಲ್ಲಿಗೆ ಬಂದಾಗ ಇರಲಿಲ್ಲ?" ಎಂದು ತಪ್ಪು ಹುಡುಕಲು ಕೆಣಕಿದೆ.
"ಹೌದೋ ಸ್ವಾಮಿ! ನೀವು ಕೊಟ್ಟ ಟೈಮು ನಾಲ್ಕು ಗಂಟೆ. ನಾನು ಬಂದು ೩ರಿಂದ ೫ರವರೆಗೂ ಕಾದೆ. ನೀವು ಬರಲಿಲ್ಲ. ತಡವಾಗಿ ಬಂದರೆ ಮತ್ತೆ ಹೇಗೂ ಗೊತ್ತಾಗುವುದಲ್ಲ ಎಂದು ಮನೆಗೆ ಹೋದೆ."
೧೨ನೇ ಮೈಸೂರು ಟೈಮು ಎಂದು ಜಂಬ ಮಾಡುತ್ತಿದ್ದ ನನಗೆ ಅಜ್ಜನಿಂದ ಪಾಠ ಕಲಿಯುವಂತಾಯಿತು.

ಮೆಂಗಿಲ ಶೇಣವ ದೊರೆಗಳ ಕಾಲದಿಂದಲೂ ಕುದುರೆಮುಖದ 'ಶೆರ್ಪಾ' ಆಗಿದ್ದಾತ. ಅವನ ಜೀವನಾನುಭವ, ಕುದುರೆಮುಖ ಶ್ರೇಣಿಯ ಪ್ರತಿ ಏರು, ತಗ್ಗು, ಬಂಡೆ, ಕಾಡು ಇವುಗಳ ಬಗೆಗಿನ ಜ್ಞಾನದಷ್ಟೇ ವಿಶಾಲವೂ ಆಳವೂ ಆಗಿತ್ತು. ಒಂದೊಂದು ಮಾತೂ ಈ ಅನುಭವದ ಕಡಲಿನಿಂದ ಹೊರಬರುತಿದ್ದ ಮುತ್ತು. ಇವನೇ ನಮ್ಮ ಮುಖ್ಯ ಶೆರ್ಪಾ. ಇವನ ಅನುಯಾಯಿಗಳಾಗಿ ಇನ್ನೂ ಮೂವರನ್ನು ನೇಮಿಸಿದೆವು.

ಫಾರೆಸ್ಟ್ ಗಾರ್ಡ್ ಪೂಜಾರಿಯೂ ಹಾಜರಾಗಿದ್ದ. ಅವನು ಸದಾ ನಮ್ಮ ಸೇವೆಗೆ ಸೊಂಟಗಟ್ಟಿ ಮಿಲಿಟರಿ ಸಲಾಮು ಕೊಡುತ್ತ ನಿಂತಿದ್ದ. ಆ ಖಾಕಿ ಸಮವಸ್ತ್ರ ಧರಿಸಿದ ಅವನು ಹಳ್ಳಿಗರಿಗೆ ಘನ ಸರಕಾರದ ಪ್ರತಿನಿಧಿ. ಅವನ ದರ್ಪ ಪ್ರಭಾವ ಅಷ್ಟು. ನಮ್ಮೆದುರು ಅವನ ವಿನಯ ಮರ್ಯಾದೆಯೂ ಅಷ್ಟೇ.
"ಸೌದೆ ಬೇಕಲ್ಲ, ಪೂಜಾರಿ."
"ಆಯ್ತು ಸರ್."
"ನಮಗೆ ಎರಡು ಜನ ಬೇಕಲ್ಲ ಪೂಜಾರಿ."
"ಆಯ್ತು ಸರ್."
"ನೀನು ಇಲ್ಲಿಯೇ ಇದ್ದು ಸಹಾಯ ಮಾಡುತ್ತಿರಬೇಕು. ಊಟ ನಮ್ಮೊಡನೆ."
"ಆಯ್ತು ಸರ್."
"ನೀರಿನವಸ್ಥೆ ಏನು ಪೂಜಾರಿ!"
"ಆಯ್ತು ಸರ್. ತೋಡಿನಿಂದ ತರುವುದು ಸರ್."
ಪೂಜಾರಿಯ ಭಾಷೆಯಲ್ಲಿ "ಆಯ್ತು" ಎನ್ನುವುದು ಸಮ್ಮತಿಸೂಚಕ "ಹೂಂ"ನ ಪರ್ಯಾಯ ಪದ. ತಾಂಬೂಲ ರಕ್ತ ರಾಗರಂಜಿತ ಬಾಯಿಯ ಪೂಜಾರಿಯನ್ನು ಫಾರೆಸ್ಟ್ ಡಿಪಾರ್ಟ್‌ಮೆಂಟ್ ನಮ್ಮ ಸಹಾಯಕ್ಕಾಗಿ ಸದಾ ಅಲ್ಲಿಯೇ ಉಳಿಯಬೇಕೆಂದು ವಿಧಿಸಿತ್ತು.

ರಾತ್ರಿ ೧೦ ಗಂಟೆಗೆ ನಾವೂರಿನ ಪ್ರಥಮ ಊಟ: ಸಾರು, ಹಪ್ಪಳ, ಪಲ್ಯ, ಮುದ್ದೇಹುಳಿ, ಉಪ್ಪಿನಕಾಯಿ. ಅದರ ರುಚಿ ಶೇಣವನ ನುಡಿಮುತ್ತಿನಲ್ಲಿ "ಗೇರುಹಣ್ಣಿನ ಗಂಗಸರಕ್ಕಿಂತಲೂ ಮಿಗಿಲು." ಶಿಬಿರಾಗ್ನಿಯ ಸುತ್ತಲೂ ಎಲ್ಲರೂ ಕುಳಿತು ತೃಪ್ತಿಯಿಂದ ಊಟ ಮಾಡುತ್ತಿದ್ದ ಆ ದೃಶ್ಯ ಕೃತಕೃತ್ಯತೆಯ ಕುರುಹು. ಆ ಊಟವನ್ನು ನಾವು ಸಂಪಾದಿಸಿದ್ದೆವು. ಅದರ ರುಚಿಯೂ ಅಷ್ಟೇ ಹೆಚ್ಚು.

ಡೇರೆಗಳನ್ನು ಆ ರಾತ್ರಿ ಎರಡು ಕಾರಣಗಳಿಗಾಗಿ ಹೊಡೆಸಲಿಲ್ಲ. ಒಂದು, ನಾವು ಎಲ್ಲರೂ ಒಟ್ಟು ಸೇರುವಾಗ ರಾತ್ರಿ ತೀರ ಮೀರಿತ್ತು. ಮತ್ತೆ ಡೇರೆ ನಿಲ್ಲಿಸಿ, ನೆಲ ಸಮತಟ್ಟು ಮಾಡಿ, ಡೇರೆಗಳ ಸುತ್ತಲೂ ಹಾವು–ಕಂದಕ ತೋಡಲು (ಡೇರೆಗಳಿರುವ ಪ್ರದೇಶದ ಸುತ್ತಲೂ ಆಯತಾಕಾರವಾಗಿ ಇರಬೇಕು. ಹೊರಗಿನಿಂದ ಹರಿದುಕೊಂಡು ಬರುವ ಹಾವು

ಇದರೊಳಗೆ ಬೀಳುವುದು. ಕಡಿದಾದ ಬದಿಯಿಂದ ಏರುವುದು ಅದಕ್ಕೆ ಸಾಧ್ಯವಿಲ್ಲದಿರುವುದರಿಂದ ಡೇರೆಯಲ್ಲಿರುವವರು ಸುರಕ್ಷಿತರಾಗಿರುತ್ತಾರೆ) ಅವಕಾಶವಿರಲಿಲ್ಲ. ಇದಕ್ಕಿಂತ ಮುಖ್ಯವಾದ ಕಾರಣ ಎರಡನೆಯದು. ಬಂಗ್ಲೆಯ ಜಗಲಿ ಕೋಣೆಗಳು ಬಲು ವಿಶಾಲವಾಗಿದ್ದುವು. ಬಂಗ್ಲೆಯೂ ರಿಪೇರಿಗೊಳಿಸಲ್ಪಟ್ಟು ಸಾಕಷ್ಟು ಭದ್ರವಾಗಿತ್ತು. ರಾತ್ರಿ ಮಲಗುವಾಗ ೧೨ ಗಂಟೆ. ಹುಡುಗರೆಲ್ಲರೂ ದಣಿದಿದ್ದರು. ಆದರೂ ಶಿಸ್ತು ಮೀರಲು ಸಾಧ್ಯವಿಲ್ಲವಲ್ಲ. ಮರುದಿವಸದ ಉಪಾಹಾರಕ್ಕೆ ಬೇಕಾಗುವ ನೀರು ಸಂಗ್ರಹಿಸಲೇ ಬೇಕಾಯಿತು. ಮೇಲಾಗಿ ಕಾರ್ಯಕ್ರಮ ಪ್ರಕಟಿಸಲೂ ಬೇಕಾಗಿತ್ತು.

"ನಾಳೆ ೧೨ನೆಯ ತಾರೀಕು ಕ್ರಮ ಪ್ರಕಾರ ಶಿಕ್ಷಣದ ಆರಂಭ. ೫.೩೦ ಗಂಟೆಗೆ ಹಾಸಿಗೆ ಚಾ. ೬ ಗಂಟೆಗೆ ಉಪಾಹಾರ. ನಿಮ್ಮಲ್ಲಿ ನಾಲ್ವರು ಕ್ಯಾಡೆಟ್ ಶಿಕ್ಷಕರ ಹೊರತಾಗಿ ಉಳಿದ ೩೩ ಮಂದಿಯನ್ನು ೧೧ ಮಂದಿಯ ಮೂರು ಸಮಭಾಗಗಳಾಗಿ ಮಾಡಲಾಗಿದೆ" ಎಂದು ಆಯಾ ಭಾಗಗಳ ಹುಡುಗರ ಹೆಸರುಗಳನ್ನು ಓದಿ ಹೇಳಿದೆ. "ಒಂದನೆಯ ಪಂಗಡ ನಾಳೆ ಶಿಬಿರದಲ್ಲಿಯೇ ಇದ್ದು ಇಲ್ಲಿಯ ವಿಶಿಷ್ಟ ಕಾರ್ಯ ನಡೆಸಬೇಕು. ಎರಡನೆಯದು ಶಿವಪ್ಪನವರ ಮುಂದಾಳುತನದಲ್ಲಿ ಕುದುರೆಮುಖದ ಸರಹದ್ದಿನವರೆಗೆ ಹೋಗಿ ಅಲೆದು ಸಂಜೆಗೆ ಹಿಂತಿರುಗಬೇಕು. ಮೂರನೆಯದು ಜಮಾಲಾಬಾದಿಗೆ ಹೋಗಿ ಬರಬೇಕು. ನಮ್ಮ ನಾಲ್ವರು ವಿದ್ಯಾರ್ಥಿ ಶಿಕ್ಷಕರೂ ನಾನೂ ಜಮಾಲಾಬಾದಿಗೆ ಹೋಗಿ ಬರುತ್ತೇವೆ. ನಿಸಾರ್ ಮತ್ತು ಸ್ವಾಮಿಯವರು ಶಿಬಿರದ ಕರ್ತವ್ಯ ನಿರ್ವಹಿಸುತ್ತಾರೆ. ೬.೩೦ ಗಂಟೆಗೆ ಪ್ರತಿಯೊಂದು ಪಂಗಡವೂ ಅದರದರ ಕರ್ತವ್ಯದಲ್ಲಿ ಲೀನವಾಗಿ ಹೋಗಬೇಕು. ಸಮಯ ೧೨ನೇ ಮೈಸೂರಿನ ಸಮಯ ಎಂಬುದು ನೆನಪಿರಲಿ, ಸಂಶಯ ಉಂಟೇ?"

"ಡ್ರೆಸ್ ಸಾರ್?"

"ಸದಾ ಸಮವಸ್ತ್ರ, ಸಮವಸ್ತ್ರ, ಸ್ವರ್ಗಕ್ಕೂ ಹಸುರು ಕಂದೀಲು."

"ಆದರೆ ಈಗಲೇ ತಡವಾಯಿತಲ್ಲ, ಸರ್."

"ನಾನು ಹೇಳಿದ್ದು ನಾಳಿನ ಕಾರ್ಯಕ್ರಮ. ಅದರ ವಿಚಾರ ಪ್ರಶ್ನೆ ಉಂಟೋ ಎಂದು ಕೇಳಿದ್ದು. ಅಸಂಬದ್ಧ ಪ್ರಲಾಪದ ಅಪಸ್ವರ ಬೇಡ."

ಒಂದನೇ ರಾತ್ರಿ. ದೀರ್ಘ ಪ್ರಯಾಣಾನಂತರ ಚಾಪಾರ್ಯಿಶಾಯಿಯಾಗುವ ನಟ್ವಿರುಳು. ಬೆಳಗ್ಗೆ ಸ್ವಲ್ಪ ತಡವಾಗಿ ಏಳಬಹುದೋ ಏನೋ ಎಂದು ನಿರೀಕ್ಷಿಸಿದವರಿಗೆ ೫.೩೦ ಗಂಟೆಯ ಹಾಸಿಗೆ ಚಾ ಸುದ್ದಿ ಬಲು ಕಹಿಯಾಗಿರಬೇಕು.

ನಾವು ಊಟ ಮಾಡುವ ಮೊದಲು ಒಂದು ಸಣ್ಣ ಘಟನೆ ನಡೆಯಿತು. ನಾನು ಡಾಕ್ಟರರನ್ನು ಕುರಿತು, "ಕ್ಯಾಂಪ್ ಜೀವನ. ನೀವು ಬಂದದ್ದು ನಮಗೆ ಹತ್ತಾನೆ ಬಲ ಬಂದ ಹಾಗೆ. ನಿಮಗೆ ಕಷ್ಟ ಆದರೂ ನಮಗೆ ಧೈರ್ಯವಾಯಿತು. ಸ್ವಲ್ಪ ದಯವಿಟ್ಟು ಹೊಂದಿಕೊಳ್ಳಿ" ಎಂದೆ.

"ನಾನು ಈ ಮೊದಲೇ ಎನ್‌ಸಿಸಿ ಕ್ಯಾಂಪ್ ಒಂದಕ್ಕೆ ಹೋಗಿದ್ದೇನೆ. ನೀವೆಲ್ಲ ಇರುವಾಗ ನನಗೇನೂ ತೊಂದರೆಯಿಲ್ಲ."

"ಸಂತೋಷವಾಯಿತು. ಈಗ ಊಟಕ್ಕೆ ತಯಾರಾಗಿದೆಯಲ್ಲ. ನೀವು ಪ್ಲೇಟ್ ಏನಾದರೂ ತಂದಿದ್ದೀರಾ?"

ನಮ್ಮ ಮಾತನ್ನು ಕೇಳುತ್ತಿದ್ದವನು ಅವರ ಆರ್ಡರ್ಲಿ. ಅವನು ಉತ್ತರ ಕೊಟ್ಟ, "ಡಾಕ್ಟ್ರು ಪ್ಲೇಟು ಗೀಟು ತರುವ ಕ್ರಮವಿಲ್ಲ."

"ಏನು, ಏನಂದಿರಿ?"

"ಅವರು ಹೇಗೆ ಪ್ಲೇಟು ತರುವುದು?" ಆರ್ಡರ್ಲಿ ಅಂದ.

"ಮತ್ತೆ ಹೇಗೆ ಊಟ ಮಾಡುತ್ತಾರೆ?" ನನಗೆ ಕುತೂಹಲವಾಯಿತು.

"ಅವರು ಡಾಕ್ಟ್ರು. ಅವರು ಯಾಕೆ ತರಬೇಕು? ಅದು ನೀವು ಒದಗಿಸಿಕೊಡಬೇಕು."

ಅವನ ಮಾತಿನ ಠೀವಿ ಅದುವರೆಗಿನ ಹುಳಿ ವರ್ತನೆ ನನ್ನನ್ನು ರೇಗಿಸಿತು.

"ನಿನ್ನ ಹತ್ತಿರ ಮಾತಾಡಿದೆನಾ? ಅಧಿಕ ಪ್ರಸಂಗ ಬೇಡ. ನಿನ್ನ ಡಾಕ್ಟರರೇನು ಸ್ವರ್ಗದಿಂದ ಬಂದವರಾ?"

ಡಾಕ್ಟರರ ಕಡೆಗೆ ತಿರುಗಿ ಹೇಳಿದೆ, "ಕ್ಷಮಿಸಿ. ಇದು ನಿಮಗೆ ಅನ್ವಯವಾಗುವುದಿಲ್ಲ. ಈ ಸಣ್ಣ ಮನುಷ್ಯನ ಮಾತು ನೋಡಿ."

ಡಾಕ್ಟರರು ಸೀದಾ ಅವನಿಗೆ ಬಿರುನುಡಿದರು, "ನಿನ್ನನ್ನು ಸರಕಾರ ಇಲ್ಲಿಗೆ ಆರ್ಡರ್ ಕೊಟ್ಟು ಕೆಲಸ ಮಾಡಲು ಕಳಿಸಿದೆ, ಮದುವೆ ಮನೆಗೆಂದಲ್ಲ. ನೀನು ಸರಿಯಾಗಿರದಿದ್ದರೆ ನಾನೇ ನಿನ್ನನ್ನು ಹಿಂದೆ ಕಳಿಸಿಬಿಡುತ್ತೇನೆ."

ಆ ಗಳಿಗೆಯಿಂದ ಅವನಂಥ ವಿಧೇಯನನ್ನು, ಮನಃಪೂರ್ವಕವಾಗಿ ದುಡಿಯುವವನನ್ನು ನಾನು ನೋಡಲಿಲ್ಲ.

ಡಾಕ್ಟರರೂ ಅವರ ಆರ್ಡರ್ಲಿಯೂ ಬಂಗ್ಲೆಯ ಬಲಬದಿಯ ಕೋಣೆಯಲ್ಲಿ ಮಲಗಿದರು. ಅದೇ ಆಸ್ಪತ್ರೆಯೂ ಆಯಿತು. ಎಡಬದಿಯ ಕೋಣೆ ದೊರೆಗಳಿಗೆ, ಮುಂದಿನ ಮತ್ತು ಹಿಂದಿನ ವಿಶಾಲ ಜಗಲಿಗಳಲ್ಲಿ ಹುಡುಗರು

ಮಲಗಿದರು. ಹೀಗೆ ನಾಲ್ಕು ಕಡೆಗಳಲ್ಲಿ ಸಂರಕ್ಷಣೆ ಪಡೆದ ನಡುವಣ ಹಾಲ್ 'ಮಂತ್ರಿ ಸಂಪುಟ'ವಾದ ನಾವು ನಾಲ್ವರಿಗೆ: ಶಿವಪ್ಪ, ನಿಸಾರ್, ಸ್ವಾಮಿ ಮತ್ತು ನಾನು. ಹಾಗಿದ್ದರೂ 'ಪರೀಕ್ಷಿದ್ರಾಜನೂ ನಿಂಬೇ ಹಣ್ಣೂ' ಕತೆ ಸ್ವಾಮಿಯವರ ನೆನಪಿಗೆ ಬಂದಿತು. ದಕ್ಷಿಣ ಕನ್ನಡದಲ್ಲಿ ತುಂಬ ಹಾವು, ಸರ್ಪಗಳಿವೆ ಎಂದು ಅವರು ಕೇಳಿದ್ದರು. ಅದರಲ್ಲಿಯೂ ನಾವು ಈಗ ಕಾಡಿನ ಮಧ್ಯೆ ಬೇರೆ ಇದ್ದೇವೆ. ಹೀಗಾಗಿ ಸ್ವಾಮಿ ಮುರುಕು ಬಾಗಿಲುಗಳ ಹರಕು ಬಿರುಕುಗಳಿಗೆಲ್ಲ ಚಿಂದಿ ಚೂರುಗಳನ್ನು ತುಂಬಿಸಿ ಭದ್ರ ಮಾಡಿದರು. ಕಿಟಿಕಿ ಪಡಿಗಳನ್ನು ಮುಚ್ಚಿದರು. ಮೊದಲೇ ಸೆಕೆ. ಇದರಿಂದ ಗಾಳಿ ಸಂಚಾರ ಬಂದ್ ಆಯಿತು.

"ಏನು ಸ್ವಾಮಿ ಇದು?"

"ಹೋಗ್ಲಿ ಬಿಡಿ ಸಾರ್, ಜೀವ ಮುಖ್ಯ ಅಲ್ಲವಾ?"

ಹೀಗೆ ಮಾತಾಡುತ್ತಿದ್ದಂತೆಯೇ ಲಯಬದ್ಧ ಗೊರಕೆಯ ತಾನವನ್ನು ಶಿವಪ್ಪ ನುಡಿಸಿದರು. ಸ್ವಾಮಿ ಮರುದನಿಗೈದರು. ಬೆಂಗಳೂರಿನಿಂದ ಯಾವ ಮುಹೂರ್ತದಲ್ಲಾದರೂ ಬರಬಹುದಾದ ತಾರಿನ ಸುದ್ದಿ 'ಕಲ್ಪಾಂತರಗಳ ಸಂಕ್ಷಿಪ್ತಾಕೃತಿ'ಯ ಆಗಮನದ ಶುಭ ಸಮಾಚಾರ – ಇದನ್ನು ನೆನೆಯುತ್ತ ನಿಸಾರರು ಸಿಗರೇಟ್ ಸುರುಳಿ ಉಗುಳಿದರು. ನಿದ್ರೆ ಬಂತೋ ಬರಲಿಲ್ಲವೋ, ಬಾಬಾ ಪ್ರಸಾದನ ಬಿಗಿಲು ನಮ್ಮನ್ನು ಬೈರಿಗೆಯಂತೆ ಕೊರೆದೆಬ್ಬಿಸಿತು.

ನಮ್ಮ ವಿದ್ಯಾರ್ಥಿ ಶಿಕ್ಷಕರು
ಅಧ್ಯಾಯ ನಲ್ವತ್ತೇಳು

ನಮ್ಮ ವಿದ್ಯಾರ್ಥಿ ಶಿಕ್ಷಕರು ಲಕ್ಷ್ಮೀನಾರಾಯಣ, ಪಿಂಟೋ, ಮೋಹನ ಮತ್ತು ಜಯರಾಮ. ಇವರು ಹಿಮಾಲಯದ ಪರ್ವತಾರೋಹಣ ಸಂಸ್ಥೆಯಲ್ಲಿ ತರಬೇತಿ ಹೊಂದಿ ಬಂದ ಕ್ಯಾಡೆಟ್ಟುಗಳು. ಮೊದಲಿನ ಮೂವರೂ ಎ ದರ್ಜೆ ಪಡೆದವರು. ಇವರಲ್ಲಿ ಸರ್ವಸಮರ್ಥ – all rounder, ಲಕ್ಷ್ಮಿ. ಇವನು ಮುಖ್ಯ ಶಿಕ್ಷಕ. ಗಾಂಧಾರಿ ಮೆಣಸಿನಂತೆ (ಕುಬ್ಜ ಗಾತ್ರ, ಗರಿಷ್ಠ ಖಾರ ಇರುವ ಮೆಣಸಿನಕಾಯಿ) ಸ್ವರೂಪ ಚಟುವಟಿಕೆಯೂ ಹಾಗೆಯೇ. ಕಡಿದಾದ ಕಲ್ಲು ಬಂಡೆ, ಆಳವಾದ ಪ್ರಪಾತ ಎಲ್ಲವೂ ಇವನಿಗೆ ಬಯಲಿನ ಮೇಲೆ ನಡೆದಷ್ಟೇ ಸುಲಭ. ವೈಜ್ಞಾನಿಕವಾಗಿ ವಿಚಾರಗಳನ್ನು ವಿವರಿಸಿ ಹೇಳಿಕೊಟ್ಟು, ಸ್ವತಃ ಮಾಡಿತೋರಿಸಿ ಇತರರಿಂದ ಮಾಡಿಸುವುದರಲ್ಲಿ ಅತಿ ನಿಸ್ಸೀಮ. ಕ್ಲಾಸಿನಲ್ಲಿ ಇವನು ನನ್ನ ಶಿಷ್ಯನಾಗಿದ್ದರೂ ಶಿಲಾರೋಹಣದಲ್ಲಿ ನಾವೆಲ್ಲರೂ ಇವನ ಶಿಷ್ಯರೇ. ಇವನಿಗೆ ಸರಿಯಾದ ಅನುಯಾಯಿ ಮೋಹನ. ಸದಾ ಕಾರ್ಯತತ್ಪರ, ಸುಟಿ, ಚಟುವಟಿಕೆ, ಜೊತೆಗೆ ನಗುಮೊಗ. ಇವನು ಸೊಗಸಾದ ಹಾಡುಗಾರನೂ ಹೌದು. ಹುಡುಗರಿಗೆ ಇವನ ಮೇಲೆ ಅಮಿತ ವಾತ್ಸಲ್ಯ. ಲಕ್ಷ್ಮಿಯೊಡನೆ ಭಯ. ಬಂಡೆಯ ಮೇಲೆ ಲಕ್ಷ್ಮಿ, ಕೆಳಗೆ ಮೋಹನ ಹೀಗೆ ಇವರ ಜೊತೆ ನಡೆಯುತ್ತಿತ್ತು. ವಿ.ಜೆ. ಪಿಂಟೋ ಇಂಗ್ಲಿಷ್ ಭಾಷೆಯ ವರ್ಸಟೈಲ್ ಜೀನಿಯಸ್, ಕಮ್ಯೂನಿಸ್ಟ್ ಭಾಷೆಯ ಥಿಯೊರೆಟಿಶಿಯನ್. ಯಾವ ಸಾಹಸವನ್ನಾದರೂ ಚೆನ್ನಾಗಿಯೇ ಪ್ರದರ್ಶಿಸಬಲ್ಲವನಾದರೂ, ಅದರ ವಿವರ ತಿಳಿಸಿ ಹೇಳುವುದರಲ್ಲಿ, ಹಾಗೆ ಹೇಳುವಾಗ ಅದರ ಅಪಾಯಾಂಶವನ್ನು ಸ್ವಲ್ಪ ವಿವರಿಸಿ ತಿಳಿಸುವುದರಲ್ಲಿ ಇವನಿಗೆ ಅಧಿಕಾಸಕ್ತಿ.

"ನಿಮಗೆ ಈ ಕಲ್ಲಿನಿಂದ ಹಾರಲೇಬೇಕೇನಪ್ಪಾ? ಆದರೆ ನೋಡಿ ಕಾಲು ಜಾರೋದು, ನೀವು ಹೆದರೋದು, ಏಕೆ ಬೇಡದ ಉಸಾಬರಿ? ನಿಮಗೆ ಧೈರ್ಯ ಇಲ್ಲದಿದ್ರೆ ಮೇಲೇ ಸುಮ್ಮನೆ ಇದ್ದುಬಿಡಿ. ಅದರಲ್ಲಿ ಅಪಮಾನವೇನೂ ಇಲ್ಲ. ನೋಡಿ ನಾನು ಹಿಮಾಲಯದಲ್ಲಿ ಇದ್ದಾಗ ಹೀಗೇ ಒಂದು ಪ್ರಸಂಗ. . ." ಇದು ಪಿಂಟೋ ಮಾತಿನ ಸರಣಿ.

"ಏಯ್ ಇಲ್ನೋಡೋ! ನೀನು ಹಾರು ಸುಮ್ಮನೆ. ಏನೂ ಆಗೋದಿಲ್ಲ. ನಾನಿದ್ದೇನೆ. ನೂಕಿಬಿಡ್ತೀನಿ ನೋಡು. ನೀನೆಲ್ಲೋ ಶುದ್ಧ ಹೆಣ್ಣು ಕಾಣಮ್ಮ." ಇದು ಲಕ್ಷ್ಮಿಯ ಮಾತಿನ ಝರಿ, ಪ್ರಭುಸಮ್ಮಿತಿ.

"ನೋಡು ಕಾಲು ಮೆತ್ತಗಿಡು. ಹೀಗೆ, ಹೀಗೆ. ಈಗ ಎಲ್ಲ ಸರಿಯಾಯಿತು. ಭಯವಾಗುವುದಿಲ್ಲ. ಚೆನ್ನಾಗಿ ಮಾಡಿದೆ, ಹಾಗೆ ಬಾ, ನಾಬಂದೆ, ಬಂದೆ" ಇದು ಮೋಹನನ ಹಿತವಾಣಿ, ಕಾಂತಾಸಮ್ಮಿತಿ.

"ವಂಡರ್ಫುಲ್, ವೆರಿಗುಡ್, ಷಾಭಾಸ್, ಏಯ್ ಹಾರಿಬಿಡು – ಹಾಗೆ, ಹಾಗೆ" ದೂರದಿಂದ ನಿಂತು ಉಚಿತವೋ ಅನುಚಿತವೋ ಸದಾ ಅತಿಶಯೋಕ್ತಿಯ ಉದ್ಗಾರದ ಮಳೆಗರೆಯುವ ಹುಡುಗ ಜಯರಾಮ. ಇವನಿನ್ನೂ ಎಳೆಗೂಸು. ಹಿಮಾಲಯದಿಂದ ಮರಳಿದ ತರುಣದಲ್ಲಿ ತೀರ ಬಿಸಿ ಬಿಸಿಯಾಗಿದ್ದ. ಬಿಲೇ ಗಿಲೇ ಯಾವುದೂ ಬೇಡ, ಎಲ್ಲಿ ಬೇಕಾದಲ್ಲಿ ಹಾರುತ್ತೇನೆ ಎಂದು ಹೊರಟ. ಆ ಒಂದು ಆದಿತ್ಯವಾರ ನಾವು ಶೇಷಾದ್ರಿಪುರದ ಶಿವಾನಂದ ಸ್ಟೋರ್ಸ್ ಎದುರಿನ ಬಂಡೆಗಳಲ್ಲಿ ಏರುವುದನ್ನೂ ಜಿಗಿಯುವುದನ್ನೂ ಅಭ್ಯಸಿಸುತ್ತಿದ್ದೆವು. ಹುಡುಗರನ್ನು ನಾಲ್ಕು ತಂಡ ಮಾಡಿ ಒಂದನ್ನು ಜಯರಾಮನ ವಶ ಬಿಟ್ಟು ನಾನು ಉಳಿದವರ ಮೇಲುಸ್ತುವಾರಿಕೆ ನೋಡಲು ಆ ಕಡೆ ಸರಿದಿದ್ದೆ. ಮುಂದಿನ ಗಳಿಗೆಯಲ್ಲಿ, "ಜಯರಾಮ ಬಿದ್ದ, ಭಯಂಕರ ಅಪಾಯವಾಗಿದೆ" ಎಂದು ಹುಡುಗರ ಬೊಬ್ಬೆ ಕೇಳಿಸಿತು. ನನಗೆ

ಹೆದರಿಕೆಯಾಯಿತು. ಹೋಗಿ ನೋಡಿದೆ. ಹತ್ತಡಿ ಎತ್ತರದ ಬಂಡೆ. ಬಿಲೇ ಇಲ್ಲದೇ stomach rappling ಮಾಡಿ ತೋರಿಸಲು ಹೊರಟಿದ್ದಾನೆ. ಇದು ನಮ್ಮ ಆಜ್ಞೆಗೆ ವಿರೋಧ – ಬಿಲೇ ಇಲ್ಲದೆ ಯಾರೂ ಯಾವ ಸಾಹಸವನ್ನೂ ಮಾಡಿ ತೋರಿಸತಕ್ಕದ್ದಲ್ಲ. ವಿದ್ಯಾರ್ಥಿ ಶಿಕ್ಷಕನೇ ಇದನ್ನು ಉಲ್ಲಂಘಿಸಿದ್ದ. ಇಳಿಯುವಾಗ ಕೈ ಜಾರಿತು. ಬಿದ್ದ, ಮುಖ ಕೆಳಗಾಗಿ ಬಿದ್ದ. ಒಂದು ಕಣ್ಣಿನ ಪಕ್ಕಕ್ಕೆ ಗಾಯವಾಗಿ ಆ ಕಣ್ಣು ಮುಚ್ಚಿಹೋಗಿತ್ತು. ಅವನಿಗೆ ಜ್ಞಾನವಿರಲಿಲ್ಲ. ಎದೆ ಮುಂತಾದ ಕೋಮಲ ಭಾಗಗಳಿಗೆ ಪುಣ್ಯವಶಾತ್ ಪೆಟ್ಟಾಗಿರಲಿಲ್ಲ. ನೋಡಿದವರೆಂದರು ಐದಡಿ ಇಳಿದ ಮೇಲೆ ಹೀಗಾಯಿತೆಂದು. ಸದ್ಯ ಇದ್ದುದರಲ್ಲಿ ಇದೊಂದು ಧೈರ್ಯ. ನೀರು ಚಿಮುಕಿಸಿದೆವು. ಜ್ಞಾನ ಬಂದಿತು. ದೊಡ್ಡ ರಸ್ತೆ ಸಮೀಪದಲ್ಲೇ ಇದ್ದುದರಿಂದ ಅವನನ್ನು ಅಲ್ಲಿವರೆಗೆ ನಡೆಸಿಕೊಂಡು ಹೋಗಿ ಆಟೋರಿಕ್ಷಾದಲ್ಲಿ ಕೂರಿಸಿ ನಾನೇ ಸರ್ಕಾರೀ ಆಸ್ಪತ್ರೆಗೆ ಸಾಗಿಸಿದೆ. ಬೆಂಗಳೂರು ನಗರ – ಅಷ್ಟರೊಳಗೇ ಅಲ್ಲಿ ಭಾರೀ ಜನಸಂದಣಿ ಸೇರಿತ್ತು. ಇನ್ನು ಅವರ ಮಾತು ಕತೆ, ಅಂತೆ, ಕಂತೆ ಸಾಹಿತ್ಯದಲ್ಲಿ ರಂಗುರಂಗಾಗಿ ಕಂಡೀತು; ಸಂಬಂಧಿಸದವರಿಗೆ ವಿನೋದವಾಗಿಯೂ ತೋರೀತು. ಆದರೆ ಆ ದುರ್ಭರ ಪ್ರಸಂಗದಲ್ಲಿ ಸ್ವತಃ ಭಾಗಿಗಳಾದ ನಮಗೆ, ಇರುವ ವೇದನೆಯ ಜೊತೆಗೆ, ಇದೊಂದು ನಿವಾರಣೀಯ ಕಿರಿಕಿರಿಯೂ ಆಗಿತ್ತು. ಮುಂದಿನ ಒಂದು ಗಂಟೆ ಆಸ್ಪತ್ರೆಯಲ್ಲಿ. ಸುದೈವದಿಂದ ಅವನಿಗೆ ಹೇಳುವಂಥ ಅಪಾಯವೇನೂ ಆಗಿರಲಿಲ್ಲ. ಅಲ್ಲಿಯ ವಿಶಿಷ್ಟ ಪ್ರಥಮ ಚಿಕಿತ್ಸೆ ಮುಗಿದ ಅನಂತರ ಅವನನ್ನು ನನ್ನ ಜೊತೆಯಲ್ಲೇ ಕಳಿಸಿಕೊಟ್ಟರು. ಆ ಬಂಡೆಯನ್ನು ಜಯರಾಮ ಬಂಡೆ ಎಂದು ಈಗ ನಾವು ಕರೆಯುತ್ತೇವೆ. ಎಲ್ಲ ಸುಖಾಂತವಾದುದರಿಂದ ಈ ಜಯರಾಮ ಬಂಡೆ ವಿನೋದದ – ಬಂಡೆಗೆ ಮಂಡೆ ಹೆಟ್ಟಬೇಡ – ಪ್ರತೀಕವಾಗಿದೆ. ಈ ಅನುಭವದ ಅನಂತರ ಜಯರಾಮ ಪಿಂಟೋಗಿಂತಲೂ ಹತ್ತುಪಟ್ಟು ಥಿಯೊರೆಟಿಶಿಯನ್ ಆದ. ತಮಾಷೆ ಹಾಗಿರಲಿ. ನಮ್ಮ ನಾಲ್ವರು ಶಿಕ್ಷಕರು ಸಹಕರಿಸಿ ದುಡಿದು ಹಗಲು ಇರುಳು ಎಂಬುದನ್ನು ಪರಿಗಣಿಸದೆ ಸದಾ ನನ್ನ ಬೆಂಬಲಕ್ಕಿದ್ದು ಕುದುರೆಮುಖ ಸಾಹಸವನ್ನು ಯಶಸ್ವಿಗೊಳಿಸಿದರು. ಅವರ ಉತ್ಸಾಹದ ಚಿಲುಮೆ ನಮಗೆಲ್ಲರಿಗೂ ನವಸ್ಫೂರ್ತಿ ನೀಡುವ ಚೈತನ್ಯವಾಗಿತ್ತು.

೧೨ನೇ ತಾರೀಕಿನಂದು ನಾವು ಎದ್ದಾಗ ೫ ಗಂಟೆ, ಸೆಕೆಯಳಿದು ಹಿತಕರವಾದ ಹವೆ, ನಿದ್ರೆಗೆ ಸೊಗಸಾಗಿ ಜೋಗುಳ ಹಾಡುವ ತಂಗಾಳಿ ಪಸರಿಸಿತ್ತು. ಆದರೆ ಕರ್ತವ್ಯವಿದೆಯಲ್ಲ. ಜಾಂಬ್ರೆ ಆಗಲೇ ಬಂದು "ಟೀ ರೆಡೀ ಸಾಬ್" ಎಂದು ಸೆಲ್ಯೂಟ್ ಮಾಡಿದ್ದ. ಅಡುಗೆಯವರು ಉಪಾಹಾರ ತಯಾರಿಸುತ್ತಿದ್ದರು. ಮಧ್ಯಾಹ್ನದ ಬುತ್ತಿಯನ್ನು (ಚಪಾತಿ, ಪಲ್ಯ) ತಿಮ್ಮಪ್ಪ, ಗುರು, ಶಾಸ್ತ್ರಿ, ಅಣ್ಣಯ್ಯಪ್ಪ ಕಟ್ಟುತ್ತ ಕುಳಿತಿದ್ದರು. ನೀರು ತರಲು ತೋಡಿನೆಡೆಗೆ ಒಂದು ತಂಡ ಹೊರಟಿತು. ಮೆಂಗಿಲ ಶೇಣವನ ಗುಂಪು, ಪೂಜಾರಿ ಎಲ್ಲರೂ ಆಗಲೇ ಸಿದ್ಧರಾಗಿದ್ದರು. ನಿಸಾರರೂ ನಾನೂ ಬಯಲಿನೆಡೆಗೆ ಹೋದೆವು. ಆಕಾಶ ವಿಶಾಲ, ನಿರಭ್ರ, ನಕ್ಷತ್ರಗಳ ದೇದೀಪ್ಯಮಾನ ಚಿತ್ರ ಅತಿ ಮೋಹಕವಾಗಿತ್ತು.

"ಗುರುಗಳೇ ಈ ನಕ್ಷತ್ರಗಳನ್ನು ಕುರಿತು ನೀವು ಸ್ವಲ್ಪ ನನಗೆ ಹೇಳಬೇಕು" ಎಂದರು ನಿಸಾರರು.

"ಕವಿಗಳಿಗೆ ಈ ಶುಷ್ಕ ವಾಸ್ತವಿಕತೆಯಿಂದ ಪ್ರಯೋಜನವೇನು?" ನಾನು ಕೆಣಕಿದೆ.

"ಛೇ ಛೇ! ಹಾಗೆಂದರೇನು? ವಾಸ್ತವಿಕತೆಯಿಂದ ಪ್ರಭಾವಿತನಾದ ಕವಿ ಮತ್ತೆ ಕಲ್ಪನಾಲೋಕದಲ್ಲಿ ಅದಕ್ಕೆ ಬೇರೆ ರೂಪವಿತ್ತು ಪುನಃ ವರ್ಣಿಸುತ್ತಾನೆ."

"ಆಗಲಿ ಹೇಳುತ್ತೇನೆ. ನೀವು ನನಗೆ ಕವಿತೆ ಬರೆಯುವ ಡ್ರಿಲ್ಲನ್ನು ಹೇಳಿಕೊಡಬೇಕು."

ನನ್ನ ಈ ಕೆಣಕು ನುಡಿ ಅವರಿಗೆ ಚುಚ್ಚಿತು. ಕವಿತೆ ಬರೆಯುವುದೂ ಒಂದು ಡ್ರಿಲ್ಲು, ಇನ್ನೊಬ್ಬನ ಆಜ್ಞೆಯನ್ನು ಹಿಂದೆ ಮುಂದೆ ಯೋಚಿಸದೇ ನಿರ್ವಹಿಸುವ ಒಂದು ಯಾಂತ್ರಿಕ ಥ್ರಿಲ್ಲು ಎಂದು ಸೂಚಿಸಿದ್ದು ಅವರದೇ ಒಂದು ಪದ್ಯದ ಭಾವವನ್ನು ತಿರುಗಾ ಮುರುಗಾ ಮಾಡಿ –

ಅಧಿಕಾರಿ ಬಂದೊಡನೆ ನನಗರಿಯದಂತೆಯೇ ಸಾರುವುದು
ಬಲಗೈ ಸಲಾಮ; ಪರತಂತ್ರ ನಾನಿನ್ನೂ,
ಹೊಟ್ಟೆಪಾಡ ಗುಲಾಮ

ಆ ಕಡೆಯಿಂದ ಶಿವಪ್ಪನವರ ಸಿಗರೇಟ್ ಕೇಳಿಸಿತು. ಸ್ವಾಮಿಯವರು ಟಾರ್ಚ್ ಲೈಟನ್ನು ಅಂಗುಲ ಅಂಗುಲಕ್ಕೆ ಬೀರುತ್ತ ಅಲ್ಲಿ ಯಾವ ತರದ ಉರಗವೂ ಇಲ್ಲವೆಂದು ಸ್ಪಷ್ಟ ಮಾಡಿಕೊಂಡನಂತರ ಮುಂದುವರಿದು ಬರುತ್ತಿದ್ದರು.

"ಎಲೈ ವನಸ್ಥಳಂಗಳಿರ! ಎಲೈ ಕಾಡುಮೃಗಂಗಳಿರ! ಎಲೈ ಉರಗಂಗಳಿರ ಲಾಲಿಸಿರಿ! ಮಹಾಸ್ವಾಮಿ ಕೆಂಡಗಣ್ಣಸ್ವಾಮಿಯವರಿಲ್ಲಿರ್ಪನ್ನವರೆಗೀಕ್ಷೇತ್ರಂ ನಿಮಗೌಟಾಫ್ ಬೌಂಡ್ಸ್ – ಲಕ್ಷ್ಮಣನ ಗೀಟನ್ನಿಲ್ಲಿ ಎಳೆದಿರ್ಪೆಂ. ನೀಮೇನಾದರೂಮಿತ್ತ ಆಗಮಿಸುತ್ತಿರ್ಪೊಡೆ 'ಉರಗಂ ನಾಂ ಬರುತಿರ್ಪೆಂ' ಎಂದು ಕೂಗಿ ಬಂದಪುದು. . ." ಎಂದು ಮಂತ್ರಘೋಷವನ್ನು ಶಿವಪ್ಪ ಬಜಾಯಿಸಿದರು.

"ಏನೋ ಶಿವಪ್ಪ! ನೀನು ಮಹಾಶೂರ. ನಿನ್ನೆ ರಾತ್ರಿ ಆ ಮಾವಿನ ಮರದವರೆಗೆ ಹೋಗಿಬರಬೇಕಾದರೆ ಹಿಂದೊಬ್ಬ ಮುಂದೊಬ್ಬ ನಿನಗೆ. ನೀನೇನು ನನ್ನನ್ನು ಚೇಷ್ಟೆ ಮಾಡುವುದು?" ಸ್ವಾಮಿ ಮಾರ್ನುಡಿದರು. ಫಲಿತಾಂಶವಿಷ್ವೇ: ಇಬ್ಬರ ಹೂರಣವೂ ಹೊರಬಿತ್ತು.

ಶಿಬಿರ ಅಷ್ಟರಲ್ಲಿಯೇ ಜೀವ ಸ್ಪಂದನದಿಂದ ಲಕಲಕಿಸುತ್ತಿತ್ತು. ಉಪಾಹಾರ ಮುಗಿಯಿತು. ಪ್ಯಾಕೆಟ್ ಲಂಚ್ ಕಟ್ಟಿಕೊಂಡು ಹೊರಡಬೇಕಾದವರು ಅದರ ಸಮೇತ ಹಾಜರಾದರು. ಮೂರು ಪಂಗಡಗಳಾಗಿ ಹುಡುಗರು ೬.೨೦ಕ್ಕೆ ನಿಂತರು. ಜನ, ಸಾಮಗ್ರಿ, ಆರೋಗ್ಯ ಎಲ್ಲವೂ ಕೂಲಂಕಷವಾಗಿ ಪರಿಶೀಲನೆಗೊಳಪಡಲು ಈ ೧೦ ಮಿನಿಟು ಅವಶ್ಯ. ತಡವಾಗಿ ಬರುವಾತನಿಗೆ ಈ ಅವಕಾಶ ಚುಚ್ಚಿ ಹೇಳುತ್ತದೆ "ನೀನು ತಡ, ನೀನು ಸೋಮಾರಿ" ಎಂದು.
ಜಮಾಲಾಬಾದಿಗೆ ಹೋಗಬೇಕಾದವರು ೧೧ ಮತ್ತು ೪ ಶಿಕ್ಷಕರು, ಹೀಗೆ ೧೫. ಕುದುರೆಮುಖದ ಸರಹದ್ದಿಗೆ ೧೧, ಶಿಬಿರದಲ್ಲಿ ೧೧. ಜಮಾಲಾಬಾದಿನ ತಂಡದಲ್ಲಿ ಮೂರು ಮಂದಿ ಕಡಿಮೆಯಿದ್ದರು. ಯಾರವರು?
ಮುಕುಂದನಿಗೆ ವಾಂತಿ, ತಲೆನೋವು ಎಂದು ಡಾಕ್ಟರರ ವಶದಲ್ಲಿದ್ದ. ಇನ್ನಿಬ್ಬರು? ಹಾಸಿಗೆ ಚಾ ಹೊತ್ತಿನಲ್ಲಿ ನೋಡಿದ್ದೆನೆಂದನೊಬ್ಬ. ಬೊಬ್ಬೆ ಹೊಡೆದು ಹೆಸರು ಹಿಡಿದು ಕೂಗಿದನಿನ್ನೊಬ್ಬ. ಆದರೆ ಆ ಹೆಸರಿನವನು ಅಲ್ಲಿಯೇ ಇದ್ದುದರಿಂದ "oversmart ಆಗದಿರು ಎಲೆ ನನ್ನ ಕಂದಾ!" ಎಂದು ಹೇಳಿಸಿಕೊಂಡ. ನನ್ನ ಹತ್ತಿರ ಹೇಗೂ ಹಾಜರು ಪಟ್ಟಿ ಇದೆಯಲ್ಲ. ಅವರ ಹೆಸರು ತಿಳಿಯಿತು.
೬.೨೫ಕ್ಕೆ ದೊರೆಗಳಿಗೆ ವರದಿಯೊಪ್ಪಿಸಿ ಆಯಿತು.
"ಆ ಇಬ್ಬರು ಹುಡುಗರು ಏನಾದರು?"
"ಸರ್, ಅವರನ್ನು ಹಾಸಿಗೆ ಚಾ ಹೊತ್ತಿನಲ್ಲಿ ಕಂಡವರು ಬಹಳ ಮಂದಿ ಇದ್ದಾರೆ. ಕಾಡಿಗೆಲ್ಲೋ ಹೋಗಿರಬೇಕು ವಿಚಾರಿಸುತ್ತೇನೆ."
"ವಿಚಾರಿಸಿ ಅವರಿಗೆ ಶಿಕ್ಷೆ ನೀಡಬೇಕು. ಉಳಿದವರು ಮುನ್ನಡೆಯಲಿ."
೬.೩೦ಕ್ಕೆ ಸರಿಯಾಗಿ ೧೨ನೇ ಮೈಸೂರು ಮೂರು ಭಾಗಗಳಾಗಿ ಕವಲೊಡೆದು ಹೊರಟಿತು. ನನ್ನ ಶಾಖೆಯಲ್ಲಿ (ಜಮಾಲಾಬಾದ್) ಇಬ್ಬರು ಕಡಿಮೆ. ನಾವು ಬಂಗ್ಲೆಯ ಅಂಗಳ ದಾಟುವಾಗ ಆ ಬುದ್ಧಿವಂತರಿಬ್ಬರೂ ಓಡಿ ಓಡಿ ಮೇಲುಸಿರು ಬಿಡುತ್ತ ಬಂದರು. ನಮ್ಮ ತಂಡವನ್ನು ಸೇರಲು ಅನುಮತಿ ಕೋರಿದರು. ತಾವು ಬಹಿರ್ದೇಶಕ್ಕೆ ಹೋಗಿದ್ದುದಾಗಿ ತಿಳಿಸಿದರು.
"ಮಿತ್ರರೇ! ೧೨ನೇ ಮೈಸೂರಿನ ಅರ್ಥಕೋಶದಲ್ಲಿ ಎರಡು ಪದಗಳಿಗೆ ಸ್ಥಾನವಿಲ್ಲ – ಒಂದು ತಡವಾಗುವಿಕೆ; ಇನ್ನೊಂದು ಆಯಾಸ. ಇದಕ್ಕೆ ಅಪವಾದವಾದ ನೀವು ಈ ಮೂರು ದಿವಸವೂ ಶಿಬಿರ ಕೈದಿಗಳಾಗಿ ದುಡಿಯಬೇಕು."
"ಕೇವಲ ಒಂದು ಮಿನಿಟ್ ತಡ, ಸರ್."
"ಮಹಾಸ್ವಾಮಿ! ತಡದಲ್ಲಿ ಎರಡು ಮಿನಿಟಿನ ತಡ, ಎರಡು ಗಂಟೆಯ ತಡ ಎಂದು ತರತಮವಿಲ್ಲ. ಪ್ರಪಾತದಂಚಿನಲ್ಲಿ ಅರ್ಧ ಇಂಚು, ಕಾಲು ಇಂಚು ಎಂದಿಲ್ಲ. ಒಂದೋ ನೀವು ಈ ಕಡೆ ಸುರಕ್ಷಿತವಾಗಿದ್ದೀರಿ, ಇಲ್ಲ, ಆ ಕಡೆ ಹೊಂಡದಲ್ಲಿ ಬಿದ್ದಿದ್ದೀರಿ; ತ್ರಿಶಂಕುತ್ವವಿಲ್ಲ. ಹಾಗೆಯೇ ಕಾಲದ ವಿಚಾರವೂ. ಕೇವಲ ಸೆಕೆಂಡುಗಳ ತಡವಾಗುವಿಕೆಯಿಂದ ಯುದ್ಧಗಳೇ ಕಳೆದುಹೋಗಿವೆ."

ಅವರನ್ನು ಸೇರಿಸಿಕೊಳ್ಳಲಿಲ್ಲ. ಹುಡುಗರಲ್ಲಿ ಅನೇಕರಿಗೆ, ಇದನ್ನೋದುವ ಹಲವರಿಗೆ, ಇಂಥ ನಿಷ್ಠುರತೆ ಅಗತ್ಯವೇ, ಹುಡುಗರೊಡನೆ ಸ್ವಲ್ಪ ಸಹನೆ, ತಾಳ್ಮೆಯಿಂದ ವರ್ತಿಸಬೇಡವೇ ಎಂದು ತೋರಿದರೆ ತಪ್ಪಿಲ್ಲ. ಜಾತ್ರೆಗೆ ಹೋಗುವಾಗ, ಮದುವೆ ಮುಂಜಿ ಮುಂತಾದ ಕೌಟುಂಬಿಕ ಸಂತೋಷ ಸಮಾರಂಭಗಳಲ್ಲಿ ಭಾಗಿಯಾಗುವಾಗ ತಡವಾಗಿ ಬರುವುದೂ ಚಂದ, ಅವ್ಯವಸ್ಥೆಯಿಂದ ನಡೆದುಕೊಳ್ಳುವುದೂ ಚಂದ, ಏನು ಮಾಡಿದರೂ ಮಾಡದಿದ್ದರೂ ಚಂದ. ಅಲ್ಲಿ ಪ್ರೀತಿ ವಿಶ್ವಾಸಗಳು ಪ್ರಧಾನವಾಗಿರುವ ಪ್ರಪಂಚ. ನಾವು ವ್ಯಕ್ತಿಗಳ ಭವಿಷ್ಯ, ಜೀವಗಳೊಡನೆ ಆಟವಾಡುವುದಿಲ್ಲ. ಇಲ್ಲಿ ಹಾಗಲ್ಲ, ಇದೊಂದು ಉಚ್ಚ ಮಿಲಿಟರಿ ಶಿಕ್ಷಣ ಶಿಬಿರ. ಆರಿಸಿ ಬಂದ, ಹೊಣೆ ಸಂಪೂರ್ಣ ಅರಿತು ಯಾರೊಡನೆ ಕಾರ್ಯವೆಸಗುತ್ತೇವೆ ಎಂದು ತಿಳಿದ ಕ್ಯಾಡೆಟ್ಟುಗಳ ತಂಡ. ಇಲ್ಲಿ ಶಿಸ್ತು, ಕ್ರಮಬದ್ಧತೆ, ನಿಯಮಪಾಲನೆ ಪ್ರಧಾನ; ಪ್ರೀತಿ ವಿಶ್ವಾಸ ಎರಡನೇ ಸ್ಥಾನ. ಇಂಥಲ್ಲಿ ತಪ್ಪಿಗೆ ಆ ಕ್ಷಣ ಶಿಕ್ಷೆ ಆಗದಿದ್ದರೆ, ಒಂದನೆಯದಾಗಿ, ವ್ಯವಸ್ಥೆಯ ಹಿಡಿತ ಸಡಿಲವಾಗುವುದು. ಎರಡನೆಯದಾಗಿ, ಸಂಬಂಧಿಸಿದ ಹುಡುಗರಿಗೂ (ಇತರರಿಗೂ) "ತಪ್ಪು ಮಾಡಿದರೂ ದಕ್ಕುತ್ತದೆ" ಎಂದು ಪರೋಕ್ಷವಾಗಿ ವಿಷದ ಬೀಜ ಬಿತ್ತಿದಂತಾಗುವುದು. ಇನ್ನೂ ಒಂದು ವಿಚಾರವಿದೆ – ಎಲ್ಲವೂ ಟಾಪ್ ಗಿಯರಿನಲ್ಲಿ ನಡೆಯಬೇಕಾದ ಇಂಥ ಪ್ರಸಂಗಗಳಲ್ಲಿ ಪ್ರತಿ ನಟ್ಟೂ ಬೋಲ್ಟೂ ಜಾಯಿಂಟೂ ಅದರದರ ಕಾಯವನ್ನು ಆಗಿಂದಾಗಲೇ ನಿರ್ವಹಿಸದಿದ್ದರೆ ಇಡೀ ಎಂಜಿನ್ ಕೆಟ್ಟು ನಿಂತು ಹೋಗುವುದು. ಇಬ್ಬರು ಹುಡುಗರು ತಡವಾಗಿ

ಬಂದುದರಿಂದ ನಮ್ಮ ಎಷ್ಟು ಕಾಲ, ಸಹನೆ ಅಪವ್ಯಯವಾದುವು! ಕಾಲನಿಷ್ಠೆ, ಕ್ರಮಬದ್ಧ ಕಾರ್ಯ ನಿರ್ವಹಣೆ – ಇವೆರಡು ಜೀವನದ ವಿಶಿಷ್ಟ ರಂಗಗಳಲ್ಲಿಯೂ ಸರ್ವರಿಗೂ ಬಂದರೆ ದಾರಿದ್ರ್ಯ, ದುರ್ಭಿಕ್ಷೆ ಎಲ್ಲಿ ಉಳಿದಾವು?

ಜಮಾಲಾಬಾದಿನ ಮಾನಸ ಸರೋವರ
ಅಧ್ಯಾಯ ನಲ್ವತ್ತೆಂಟು



ಕುದುರೆಮುಖ ಪರ್ವತ ಶ್ರೇಣಿಯ ಬುಡದಲ್ಲಿ ನಾವೂರು ಬಂಗ್ಲೆ. ಇದರ ಎತ್ತರ ಸಮುದ್ರ ಮಟ್ಟದಿಂದ ೪೮೦ ಅಡಿ. ಬಂಗ್ಲೆಯು ಶ್ರೇಣಿಗೆ ಮುಖ ಮಾಡಿದೆ. ಜಗಲಿಯ ಮೇಲೆ ನಿಂತು ಶ್ರೇಣಿಯನ್ನು ನೋಡುವಾಗ ಎಡಗಡೆಗೆ, ಅಂದರೆ ಬೆಳ್ತಂಗಡಿ ಕಡೆಗೆ ಜಮಾಲಾಬಾದ್ ಇದೆ. ಬೆಳ್ತಂಗಡಿಯಿಂದ ಜಮಾಲಾಬಾದಿಗೆ, ನಾವೂರು ಬಂಗ್ಲೆಯನ್ನು ಬಿಟ್ಟು, ನೇರ ಹೋಗುವುದು ಸಾಧ್ಯ. ಕುದುರೆಮುಖ ಶಿಖರದ ಎತ್ತರ ೬೨೫೭ ಅಡಿ, ಜಮಾಲಾಬಾದಿನ ಎತ್ತರ ೧೭೮೮ ಅಡಿ. ಬೆಳ್ತಂಗಡಿಯ ಎತ್ತರ ೪೫೦ ಅಡಿ. ಜಮಾಲಾಬಾದ್ ಒಂಟಿ ಹೆಬ್ಬಂಡೆ ನೀಳವಾಗಿ ಸೆಟೆದು ನಿಂತಂತೆ ಇರುವುದರಿಂದ ಬೆಳ್ತಂಗಡಿಯ ವಲಯದಲ್ಲಿ ಎಲ್ಲಿಯೇ ನಿಂತರೂ ಮೊದಲು ನಮ್ಮ ಗಮನ ಸೆಳೆಯುವುದು ಈ 'ಪೀಸಾ ನಗರದ ವಾಲುವ ಗೋಪುರ', 'ಪ್ಯಾರಿಸ್ ನಗರದ ಐಫೆಲ್ ಟವರ್'. ಇದರ ಹಿನ್ನೆಲೆಯ ಬಾನಪಟದಲ್ಲಿ ಕುದುರೆಮುಖ ಶ್ರೇಣಿ ಮತ್ತೆ ಗೋಚರಿಸುವುದು. ಆದರೆ ಕಣ್ಣ ಸಮೀಪದ ನುಸಿ ದೂರದ ಆನೆಗಿಂತ ನಮಗೆ ದೊಡ್ಡದಲ್ಲವೇ? ಬೆಳ್ತಂಗಡಿ ಕಡೆಯಿಂದ ನೋಡುವಾಗ ಜಮಾಲಾಬಾದಿನ ಬಲಭಾಗ ಬೋಳುಬಂಡೆ. ಅತಿ ನೆಟ್ಟಗೆ, ಗೂಳಿಯ ಬೆನ್ನ ಮೇಲಿನ ಡುಬ್ಬದಂತೆ ನಿಂತಿದೆ. ಅದರಿಂದ ಕ್ರಮೇಣ ಎಡಗಡೆಗೆ ಕಾಡು ಮರಗಳಿಂದ ಕೂಡಿದ ಇಳಿಜಾರು ಇದೆ. ಒಟ್ಟಾಗಿ ನೋಡುವಾಗ ಕುದುರೆಮುಖದೆಡೆಗೆ ಮುಖ ಮಾಡಿ ನಿಂತಿರುವ ಆನೆಯಂತೆ ಜಮಾಲಾಬಾದ್ ಕಾಣುವುದು. ಸಾವನದುರ್ಗಕ್ಕಿಂತ ಜಮಾಲಾಬಾದ್ ಸ್ವಲ್ಪ ಕಡಿಮೆ ಎತ್ತರ.

ನಾವೂರು ಬಂಗ್ಲೆಯಿಂದ ಜಮಾಲಾಬಾದಿನ ಬುಡದವರೆಗೆ ಕಾಲು ದಾರಿಯಲ್ಲಿ ಕಾಡುಗದ್ದೆಗಳ ಮೂಲಕ ೬ ಮೈಲು ನಡೆಯಬೇಕು. ನಮ್ಮ ಪಟಾಲಮ್ ೧೫ ಜನ ಸಮವಸ್ತ್ರಧಾರಿಗಳಾದ ಹುಡುಗರು, ಖಾನ್ವಿಲ್ಕರ್ ಮುಂದೆ, ಹಿಂದೆ ನಾನು. ಮಾರ್ಗದರ್ಶನ ಶೆರ್ಪಾ ನಮಗಿಂತೆಲ್ಲ ಮುಂದೆ, ಹೀಗೆ ನಡೆಯಿತು. ಸಾಲಾಗಿ ನಾವು ಆ ಶುಭ ಪ್ರಾತಃ ಕಾಲ ನಡೆಯುತ್ತಿದ್ದಾಗ, ಆ ಚೇತನದ ತುಂಬು ಹೊಳೆಯಲ್ಲಿ ತೇಲುತ್ತಿದ್ದಾಗ, ದಾರಿಯೇ ನಮ್ಮ ಕಾಲಡಿಯಲ್ಲಿ ಜಾರಿ ಹೋಗುತ್ತಿದ್ದಂತೆ ಭಾಸವಾಗುತ್ತಿತ್ತು. ತೆಂಗಿನ ಮರಗಳು ಗೌರವ ರಕ್ಷೆ ನೀಡಿದುವು. ಬಾಳೇ ಗಿಡಗಳು ಉದ್ದವಾದ ಎಲೆಗಳನ್ನು ಮೇಲೆ, ಕೆಳಗೆ ತೊನೆದಾಡಿಸಿ ಬೀಸಣಿಗೆ ಬೀಸಿದುವು. ಕಾಡು ಗುಲಾಬಿ, ಗೋರಟೆ, ಕಣಗಿಲೆ ಹೂಗಳ ಮಿಶ್ರ ಚಿತ್ರ, ಅನಾನಸಿನ ಸಾಲುಗಳ ವರ್ಣವೈವಿಧ್ಯ ಕಣ್ಣಿಗೆ ಹಬ್ಬ. (ನನ್ನ ಕಣ್ಣಿನಿಂದ ತಪ್ಪಿಸಿದವರಿಗೆ ಬಾಯಿಗೂ ಸಹ!) ದನಕರುಗಳು ಹೆದರಿ ಓಡಿದುವು. ನಾಯಿಗಳು ಬೊಗಳಿ ಬಾಲ ಮಡಚಿ ನಾಗಾಲೋಟಕಿತ್ತುವು. ಬೇಸಾಯಗಾರರು ಕುತೂಹಲದಿಂದ ಮನೆಗಳಿಂದ ಹೊರಗೆ ಬಂದು ನಿಂತು ನಮ್ಮನ್ನು ದಿಟ್ಟಿಸಿದರು.

"ಜಮಾಲಾಬಾದುಕು ನಾಣ ಏತು ದೂರ ಉಂಡಿಯೇ" ಎಂದು ಮುರುಕು ತುಳುವಿನಲ್ಲಿ ತಾತಯ್ಯನೊಬ್ಬನನ್ನು ಪ್ರಶ್ನಿಸಿದಾಗ, "ಗಡಾಯಿಕಲ್ಲೋ ಸ್ವಾಮೀ? ಅದು ಓ ಇಲ್ಲಿಯೇ" ಎಂದು ಅವನು ಶುದ್ಧ ಕನ್ನಡದಲ್ಲಿಯೇ ಉತ್ತರವಿತ್ತ. ಆದರೆ ನಮ್ಮ ಪ್ರಶ್ನೆಗೆ ಉತ್ತರ ದೊರೆಯಲಿಲ್ಲ. ನಮ್ಮ ಎದುರು ಅದು 'ದಿಟ ಪ್ರಶ್ನೆ, ದಿಟ್ಟ ಪ್ರಶ್ನೆ'ಯಾಗಿ ನಿಂತಿದೆ. ದೂರ ಎಷ್ಟು? ಒಂದು ಮೈಲೇ ಎರಡು ಮೈಲೇ ಎಂದು ತಿಳಿಯಲು ಪ್ರಶ್ನಿಸಿದರು, "ಓ ಇಲ್ಲಿಯೇ" ಉತ್ತರ. ಹಳ್ಳಿಗರ ಓ ಇಲ್ಲಿಯೇ ಅಳತೆಗೋಲಿನ ಉದ್ದ ೨ ಫರ್ಲಾಂಗಿನಿಂದ ೨ ಮೈಲಿಯವರೆಗೆ ಎಷ್ಟೂ ಆಗಬಹುದು.

ಆ ಮನೆಗಳ ಸ್ವಚ್ಛತೆ, ಅಂಗಳ ನೆಲಗಳ ಚೊಕ್ಕಟತನ, ಅಂಗಳದ ಕರೆಯಲ್ಲಿ ಓರಣವಾಗಿ ಮೆದೆಯೊಟ್ಟಿದ್ದ ಹುಲ್ಲುಮುಂಡ, ಅದರ ಬದಿಗಿದ್ದ ತೊಂಡೆ, ಬಸಳೇ ಚಪ್ಪರ, ಸಣ್ಣ ಹೂದೋಟ – ಇವೆಲ್ಲ ತುಂಬ ಆಕರ್ಷಣೀಯವಾಗಿದ್ದುವು. ಬಡತನವೋ ಸಿರಿವಂತಿಕೆಯೋ ನಾಗರಿಕತೆಯೋ ಅಲ್ಲವೋ ಬದುಕನ್ನು ಅಚ್ಚುಕಟ್ಟಾಗಿ ರೂಪಿಸಿಕೊಂಡಿದ್ದವರಿವರು ಎಂಬುದು ತಿಳಿಯಿತು. ಬೆಂಗಳೂರಿನ ನಮ್ಮ ಹುಡುಗರಿಗೆ ಇದು ಹೊಸ ಅನುಭವ.

ಜಮಾಲಾಬಾದ್ ಅಥವಾ ಸ್ಥಳೀಯರ ಭಾಷೆಯಲ್ಲಿ ಗಡಾಯಿಕಲ್ಲು ಇತಿಹಾಸಪ್ರಸಿದ್ಧವಾದ ಒಂದು ಗಿರಿದುರ್ಗ. ಇಂಪಿರಿಯಲ್ ಗಜೆಟಿಯರಿನಲ್ಲಿ ಇದರ ಬಗ್ಗೆ ಉಲ್ಲೇಖವಿದೆ (೧೯೦೮): "೧೭೮೮ ಅಡಿ ಎತ್ತರಕ್ಕೆ ನೇರವಾಗಿ ನಿಂತಿರುವ ಕಡಿದಾದ ಬಂಡೆಯಿದು. ಕುದುರೆಮುಖ ಸಾಲಿನಿಂದ ಪ್ರತ್ಯೇಕವಾಗಿ ನಿಂತಿದೆ. ೧೭೮೪ರಲ್ಲಿ ಮಂಗಳೂರಿನಿಂದ ಮರಳುತ್ತಿದ್ದ ಟಿಪ್ಪು ಸುಲ್ತಾನನು ಈ ಬಂಡೆಯ ಸ್ಥಾನ, ದುರ್ಗಮತೆಗಳನ್ನು ಅನುಲಕ್ಷಿಸಿ ಇದರ ಮೇಲೊಂದು ಕೋಟೆ ನಿರ್ಮಿಸಿ ಭದ್ರಪಡಿಸಿದ. ಅವನ ಪ್ರೀತಿಯ ತಾಯಿ ಜಮಾಲಾಬಾಯಿಯ ನೆನಪಿಗಾಗಿ ಇದನ್ನು ಜಮಾಲಾಬಾದ್ ಎಂದು ಹೆಸರಿಸಿದ. ಇದರ ತಳದಲ್ಲಿರುವ ಪಟ್ಟಣವನ್ನು ತನ್ನ ಪ್ರತಿನಿಧಿ ಅಧಿಕಾರಿಯ ನಿವೇಶನವಾಗಿ ಮಾಡಿದ. ಇದರ ಹೆಸರು ನರಸಿಂಹ ಅಂಗಡಿ. ಅದು ಈಗ ಉಳಿದಿಲ್ಲ. ೧೭೯೯ರಲ್ಲಿ ಬ್ರಿಟಿಷರು ಈ ಗಿರಿದುರ್ಗವನ್ನು ಸ್ವಾಧೀನಪಡಿಸಿಕೊಂಡರು. ಆದರೆ ಮುಂದೆ ಸ್ವಲ್ಪ ಅವಧಿಯಲ್ಲಿ ಅದು ಅವರ ಕೈಯಿಂದ ತಪ್ಪಿಹೋಗಿ ವಿರೋಧಿ ಗುಂಪಿನವರ ಕೈವಶವಾಯಿತು. ಮುಂದಿನ ಮೂರು ತಿಂಗಳ ದೀರ್ಘ ಕಾಲ ಈ ಕೋಟೆಯ ಸುತ್ತಲೂ ಮುತ್ತಿಗೆ ಹಾಕಿ ಪ್ರತಿಬಂಧಿಸಿದುದರ ಪರಿಣಾಮವಾಗಿ ಮೇಲಿನವರು ಶರಣಾಗತರಾಗ ಬೇಕಾಯಿತು. ಇದು ನಡೆದುದು ೧೮೮೦ರಲ್ಲಿ."

ಇನ್ನೊಂದು ಪುಸ್ತಕದಲ್ಲಿ (ಸೌತ್ ಕೆನರಾ ಡಿಸ್ಟ್ರಿಕ್ಟ್ ಮ್ಯಾನುಯಲ್) ಇನ್ನಷ್ಟು ವಿವರವಿದೆ: "ಕದಂಬರ ಸಂತತಿ ನಿರ್ನಾಮಹೊಂದಿದ ಅನಂತರ ಬಂದ ತೌಳವ ಪ್ರಭುತ್ವದಲ್ಲಿ ನರಸಿಂಹನೆಂಬ ಬ್ರಾಹ್ಮಣನು ಪ್ರಭುತ್ವದ ಸ್ಥಳೀಯ ಪ್ರತಿನಿಧಿ (ಗವರ್ನರ್) ಆಗಿದ್ದ. ಅವನ ಅರಮನೆ ಕಲ್ಲಿನ ಬುಡದಲ್ಲಿತ್ತು. ಅದರ ಅವಶೇಷ ಈಗ ಏನೂ ಇಲ್ಲ. ಈ ಪ್ರದೇಶ ನರಸಿಂಹನ ಹೆಸರಿನಿಂದಲೇ ಪ್ರಸಿದ್ಧವಾಯಿತು. ಅತ್ಯುನ್ನತ ಮತ್ತು ಕಡಿದಾದ ಕಲ್ಲಿನ ಮೇಲೆ ಇರುವ ದುರ್ಗ. ಅಪಾಯದ ಒಂದು ಕಿರುದಾರಿಯ ವಿನಾ ಬೇರೆಲ್ಲ ಕಡೆಗಳಿಂದಲೂ ಅಗಮ್ಯ. ಈ ದಾರಿಯ ದುರ್ಗದ ಮೇಲೆ ಕುಳಿತವರ ದೃಷ್ಟಿಯ ಅಡಿಯಲ್ಲಿಯೇ ಇದೆ. ಆದ್ದರಿಂದ ದುರ್ಗವನ್ನು ಕಿರುದಾರಿ ಮೂಲಕ ಏರುವುದು ಅಥವಾ ಇಳಿಯುವುದು ಅತ್ಯಪಾಯದ ಮಾರ್ಗ. ಮೇಲೆ ಕುಳಿತ ಸೈನ್ಯದ ಒಂದು ಪುಟ್ಟ ತುಕ್ಕಡಿಯೂ ಕೆಳಗಿನ ಪಟಾಲಮ್ಮನ್ನೇ ನಡುಗಿಸಬಹುದು."

ಜಮಾಲಾಬಾದ್ ಗಡಾಯಿ ಹಳ್ಳಿಯಲ್ಲಿರುವುದರಿಂದ ಅಲ್ಲಿಯವರ ಭಾಷೆಯಲ್ಲಿ ಇದರ ಹೆಸರು ಗಡಾಯಿಕಲ್ಲು. ಬಯಲು ಮುಗಿದು ಕ್ರಮೇಣ ಏರು ಪ್ರಾರಂಭವಾಗುವಾಗ ಇಂದು ಮಹಾ ಪ್ರವೇಶದ್ವಾರ ನಮ್ಮನ್ನು ಸ್ವಾಗತಿಸುವುದು. ಕಲ್ಲು ಚಪ್ಪಡಿಗಳಿಂದ ನಿರ್ಮಿತವಾದ ಈ ಬಾಗಿಲು ಈಗ ಹಾಳುಗರೆಯುತ್ತಿದೆ. ನಮ್ಮ ತಂಡದ ಇತಿಹಾಸ ದಫ್ತರ ಕೀಟಗಳಾದ ಜಯರಾಜ, ಅಣ್ಣಯ್ಯಪ್ಪ ಜಮಾಲಾಬಾದಿನ ಗತವೈಭವವನ್ನು ಕುರಿತು ಭವ್ಯ ಗ್ರಂಥ ಬರೆಯುವ ದಿವ್ಯ ಯೋಜನೆಗೆ ವಿಷಯ ಸಂಗ್ರಹ ಮಾಡಬೇಕೆಂದು ನಿರ್ಧರಿಸಿದ್ದಾರೆ. ಇನ್ನು ರಸಾಯನ ವಿಜ್ಞಾನ ಭಯಂಕರ ಅನಂತರಾಜು ಮತ್ತು ರಾಮಶಿವಣ್ಣ ಜಮಾಲಾಬಾದ್ ಇಡೀ ಕಬ್ಬಿಣದ ಅದುರಿನಿಂದ ತುಂಬಿರಬಹುದೇ ಎಂದು ಸಂದೇಹಿಸುತ್ತಿದ್ದಾರೆ. ಅವರ ವರದಿ ಕುದುರೆಮುಖ ತಪ್ಪಲಿನ ಕಬ್ಬಿಣದ ಅದುರಿನ ವಿಚಾರದಲ್ಲಿ ಜಪಾನೀ ತಜ್ಞರು ಮಂಡಿಸಿರುವ ವರದಿಗಿಂತ ಅಧಿಕ ವಿಸ್ತೃತವೂ ಬೃಹತ್ತೂ ಆಗುವ ಲಕ್ಷಣವಿದೆ. ಭೂಗರ್ಭ ವಿಜ್ಞಾನಸಮುದ್ರ ತಿಮಿಂಗಿಲ ಜಗನ್ನಾಥ ಶಾಸ್ತ್ರಿ ಮತ್ತು ರಂಗನಾಥ ಜಮಾಲಾಬಾದ್ ಅಗ್ನಿ ಪರ್ವತವಾಗಿದ್ದಿರಬಹುದೇ, ಎಂದು ಇದು ಭೂಗರ್ಭದಿಂದ ಹೊರಕ್ಕೆ ಚಾಚಿತು, ಆದ್ದರಿಂದ ಭೂಮಿಯ ವಯಸ್ಸೇನು ಎನ್ನುವ ಘನ ಸಮಸ್ಯೆಯ ಪರಿಹಾರಕ್ಕಾಗಿ ನಾನಾ ಬಗೆಯ ಕಲ್ಲು, ಮುಳ್ಳು ಸಂಗ್ರಹಿಸಿ ಅವುಗಳ ಮಧ್ಯೆ ಸಿಕ್ಕಿ ಹಾಕಿಕೊಂಡು ಹೊರಗೆ ಬರುವ ಹಾದಿ ಹುಡುಕುತ್ತಿದ್ದಾರೆ. ಚಂದ್ರಮಂಡಲಕ್ಕೆ ಜಿಗಿಯಲು ಜಮಾಲಾಬಾದಿನ ಶಿಖರ ಅಮೆರಿಕಾದ ಕೇಪ್ ಕೆನ್ನೆಡಿಗಿಂತಲೂ

ಉತ್ತಮವಲ್ಲವೇ ಎಂಬ ವಿಚಾರ ಪ್ರಭಾಕರ ರೆಡ್ಡಿಯನ್ನು ಪೀಡಿಸುತ್ತಿದೆ. ಉಳಿದ ಪಾಮರರಿಗೆ ಕಂಡದ್ದು ಇಷ್ಟು – ದುರ್ಗದ ಅವಶೇಷವಾಗಿ ಅಲ್ಲಲ್ಲಿ ಮೆಟ್ಟಲುಗಳು, ಕಡಿದಾದ ಏರು, ಶಿಖರದಿಂದ ಸ್ವಲ್ಪ ಕೆಳಗೆ ಒಂದು ಪ್ರವೇಶದ್ವಾರ ಮತ್ತು ವಾಸಯೋಗ್ಯವಾದ ಕಲ್ಲಿನ ಮನೆ ಇವೆ. ಅದರ ಗೋಡೆಗಳು ಮಾಮೂಲಿನಂತೆ ಅದುವರೆಗೆ ಬಂದಿದ್ದ ಅಸಂಖ್ಯಾತ ಪ್ರವಾಸಿಗಳ ಕೆತ್ತನೆ ಕೆಲಸಗಳಿಂದ, ಚಿತ್ರದ ಕುಸುರುಗಳಿಂದ ಶೋಭಿಸುತ್ತಿದ್ದುವು. ಕೂಲಂಕಷವಾಗಿ ಪರಿಶೀಲಿಸಿದಾಗ ೧೯೫೫ರಿಂದ ಹಿಂದೆ ಯಾವ ಪ್ರವಾಸಿಗನೂ ಅಲ್ಲಿಗೆ ಬಂದಿದ್ದುದು ಉಲ್ಲೇಖಿತವಾದದ್ದು ಕಾಣಲಿಲ್ಲ. "ಹಾಗಾದರೆ ೧೯೫೦ರಿಂದೀಚೆಗೆ ಮಾತ್ರ ಜನ ಬಂದಿರಬಹುದೇ?" ಎಂದು ಸಂಶೋಧಕ ಮನಃಪ್ರವೃತ್ತಿಯ ಶ್ರೀಧರ ಪ್ರಶ್ನಿಸಿದ. "ಅದರರ್ಥ ಹಳೆಯ ದಫ್ತರಗಳ ಮೇಲೆ ಹೊಸ" ದಫ್ತರ ಕುಳಿತಿದೆ. ವಾಸಾಂಸಿ ಜೀರ್ಣಾನಿ..."

ಬೆಟ್ಟದ ತುಂಬ ಬೆಳೆದಿದ್ದ ಹುಲ್ಲಿಗೆ ಬೆಂಕಿ ಬಿದ್ದಿದ್ದುದರಿಂದ ಬಂಡೆ ಬೋಳಾಗಿತ್ತು. ಒಂದು ಪಾರ್ಶ್ವ ಮಾತ್ರ ಕುರುಚಲು ಕಾಡು ತುಂಬಿತ್ತು. ಮೆಟ್ಟಲು ದಾರಿಗಿಂತ ಅಂಕುಡೊಂಕು ದಾರಿಯೇ ಹಿತವಾಯಿತು. ಬೆಟ್ಟ ಏರುವಾಗ ಮೆಟ್ಟಲುಗಳ ನಿಯಂತ್ರಿತವಾದ ನಡಿಗೆ ಕಾಲುಗಳಿಗೆ ಬೇಗ ನೋವುಂಟುಮಾಡುವುದು. ಬದುಕು ಕೂಡ ಹಾಗೆಯೇ – ಎಲ್ಲವೂ ಡ್ರಿಲ್ಲಾದರೆ ಜೀವನ ನೀರಸ ಮತ್ತು ಭಾರವಾಗುವುದು ಎಂದು (ಮರುದಿನ ಹೋಗಿಬಂದ) ನಿಸಾರರು ಹೇಳಿದರು. ಮೇಲೆ ಮೇಲೆ ಏರಿದಂತೆ ನಮ್ಮ ದಿಗಂತ ಇನ್ನಷ್ಟು ವಿಸ್ತಾರವಾಯಿತು. ಗದ್ದೆ, ಬಯಲು, ತೋಟ, ಕೆರೆ, ಹೊಳೆ, ಮನೆ, ಗುಡ್ಡ ಎಲ್ಲವೂ ಪರದೆಯ ಮೇಲೆ ಬಿಡಿಸಿದ ಚಿತ್ತಾರಗಳಾದುವು. ನಾವೂ ಬಂಗ್ಲೆ ಇನ್ನೊಂದು ಪುಟ್ಟ ಡುಬ್ಬದ ಆಚೆ ಬದಿಗೆ ಅಡಗಿಹೋಯಿತು. ೧೧ ಗಂಟೆಯ ಸುಮಾರಿಗೆ ನಾವು ಕೊಡಿ ತಲಪಿದೆವು. ಅಲ್ಲೇನಿದೆ? ಸುಟ್ಟ ನೊಜೆ ಹುಲ್ಲಿನ ಗಟ್ಟಿ ಬುಡಗಳು. ಕುಳಿತರೆ ಚುಚ್ಚುವುವು. ತಡೆಯಲಾಗದಷ್ಟು ಸೆಕೆ. ಆದರೂ ನಾವು ಸಾಧಿಸಿದ ಪ್ರಥಮ ವಿಜಯವೆಂದು ಸಂತೋಷ ಉಕ್ಕುತ್ತಿತ್ತು. ಹೊಗೆ ಬಾಂಬು ಸುಟ್ಟೆವು. ಮದ್ದುಗುಂಡು ಹೊಟ್ಟಿಸಿದೆವು. ೧೨ನೇ ಮೈಸೂರಿಗೆ ಜಯಕಾರ ಕೂಗಿದೆವು. ವಾಟರ್ ಬಾಟಲಿನಲ್ಲಿ ತಂದಿದ್ದ ನೀರು ಖರ್ಚಾಗಿ ಹೋಯಿತು. ದಾಹ ವಿಪರೀತ, ಮುಂದೆಲ್ಲಿಗೆ ಹೋಗುವುದು?

"ಓ ಇಲ್ಲಿಯೇ ನೀರು ಸಿಕ್ಕುತ್ತದೆ" ಎಂದ ನಮ್ಮ ಶೆರ್ಪಾ. "ಓ ಇಲ್ಲಿಯೇ" ಬೆಟ್ಟದ ಬುಡವೇ ಆಗಿರಬಹುದೆಂದು ನನಗೆ ಸಂದೇಹ. ಆದರೆ ಅವನು ತೋರಿಸಿದ್ದು ಶಿಖರದಿಂದ ಹಿಂದೆ ಸ್ವಲ್ಪ ತಗ್ಗಿನಲ್ಲಿ; ನಾವು ಬಂದ ಜಾಡಿನಲ್ಲಿ ಅಲ್ಲ. ಶಿಖರವನ್ನು ಆನೆಯ ನೆತ್ತಿಯೆಂದರೆ ನಾವು ಹತ್ತಿ ಬಂದ ಹಾದಿ ಮುಂಗಾಲು ಕಿವಿಗಳ ಎಡೆಗಾಗಿ. ಬೆನ್ನಿನ ಮೇಲೆ ಸ್ವಲ್ಪ ದೂರ ನಡೆದರೆ ನೀರ್ದಾಣವಿದೆಯೆಂದು ಅರ್ಥವಾಯಿತು. ಆ ಕಡೆ (ಕೆಳಗಿನಿಂದ ಕಾಣುತ್ತಿರಲಿಲ್ಲ) ತುಂಬ ಮರಗಿಡಗಳು ಸೊಂಪಾಗಿ ಬೆಳೆದಿದ್ದುದರಿಂದ ಆಸೆ ಚಿಗುರಿತು.

ಮುಂದೆ ಎರಡು ಫರ್ಲಾಂಗ್ ನಡೆದು ಒಂದು ಇರುಕಿನೊಳಗೆ ಇಳಿದೆವು. ಅಲ್ಲಿಯೇ ಮಾಯಾಲೋಕ ಫಕ್ಕನೆ ಮಿಂಚಿತು. ತಿಳಿಗೊಳ. ಸುತ್ತಲೂ ಹೆಬ್ಬಂಡೆಗಳ ಕಡಿದಾದ ಗೋಡೆ ಸೃಷ್ಟಿನಿರ್ಮಿತ. ಹೆಬ್ಬಂಡೆಗಳನ್ನು ತಾಗಿ ಮರಗಾಡು. ಒಂದು ದಂಡೆಯ ಮರಗಳ ಕೊಂಬೆಗಳು ಎದುರು ದಂಡೆಯ ಮರಗಳ ಕೊಂಬೆಗಳೊಡನೆ ಸೇರಿ ಹೆಣೆದು ಅಲ್ಲೊಂದು ಹಸುರು ಹಂದರ ಹಾಸಿದಂತಾಗಿತ್ತು. ಅದರಡಿಯಲ್ಲಿ ತಂಪು, ನೀರವ, ನೀರಿನಾಸರೆ. ಹುಡುಗರ ಉತ್ಸಾಹಕ್ಕೆ ಮಿತಿಯಿಲ್ಲ. ಇಂಥ ಸಂದರ್ಭದಲ್ಲಿಯೇ ಒತ್ತಬೇಕು ಶಿಸ್ತಿನ ಬಿರಿಯನ್ನು – ಬಲವಾಗಿಯೇ. ಮೊದಲೇ ಮಂಗಗಳು: ಮತ್ತೆ ದಣಿವು, ದಾಹ. ಮೇಲೆ ಅನಾಯಾಸವಾಗಿ ಎದುರಾದ ಅಚ್ಛೋದ ಸರೋವರ. ಯಕ್ಷಪ್ರಶ್ನಾ ಪ್ರಸಂಗದ ಪೂರ್ವಾರ್ಧದ ಪುನರಾವರ್ತನೆ ಆಗಬೇಡವೆಂದಿದ್ದರೆ ಲಗಾಮನ್ನು ಬಲವಾಗಿಯೇ ಜಗ್ಗಬೇಕು.

"ನೀರಿಗೆ ಯಾರೂ ಇಳಿಯತಕ್ಕದ್ದಲ್ಲ. ಬಕೆಟಿನಲ್ಲಿ ನೀರು ತಂದು ದಂಡೆಯಿಂದ ದೂರನಿಂತು ಕೈ ಮುಖ ತೊಳೆಯತಕ್ಕದ್ದು ಮತ್ತು ಸೋಸಿ ನೀರು ಕುಡಿಯಬಹುದು" ಇದು ನನ್ನ ಆಜ್ಞೆ.

"ಕ್ರೂರ ನಕ್ರಾಕುಲದೊಳಿಡಿದಿರ್ದ ಪೆರ್ಮಡು ಗಭೀರ ನಿರ್ಮಲ ಜಲದೊಳೆಸೆವಂತೆ" ಆ ಕೊಳವಿತ್ತು. ನಮ್ಮ 'ಅಚ್ಚ ಸಂಸ್ಕೃತಿ'ಯ ಸಲ್ಲಕ್ಷಣವೆಂದರೆ ನೀರು ಕಂಡೊಡನೆ ಹಿಂದೆ ಮುಂದೆ ನೋಡದೆ ಅದಕ್ಕೆ ದುಮುಕಬೇಕು. ಬೇರೆಯವರ ಕಷ್ಟ ಸುಖದ ಪರಿವೆಯಿಲ್ಲದೇ ನಮ್ಮ ವಿಶಿಷ್ಟ ಪ್ರವೃತ್ತಿಗಳನ್ನೂ ಅಲ್ಲಿಯೇ ನಿರ್ವಹಿಸಬೇಕು. Vandalism is our national trait. ನಾನು ಕಠಿಣವಾಗಿ ಹೀಯಾಳಿಸುತ್ತಿದ್ದೇನೆ ಎಂದು ನಿಮಗೆ ಕಂಡರೆ ದಯವಿಟ್ಟು ನಮ್ಮ ಪುಣ್ಯ ಕ್ಷೇತ್ರಗಳಿಗೆ ಹೋಗಿ ನೋಡಿ. ಅಲ್ಲಿಯ ಕೆರೆ, ಕೊಳ, ಹೊಳೆಗಳನ್ನು ಸಂದರ್ಶಿಸಿ ಬನ್ನಿ. ಅಲ್ಲಿಯ ಪ್ರವಾಸೀ ಮಂದಿರಗಳಲ್ಲಿ ಉಳಿದಿದ್ದು ಅನುಭವಿಸಿ. ಭಗವದ್ಭಕ್ತಿಯೂ ಸಾಮಾಜಿಕ ಶುಚಿತ್ವ ಪ್ರಜ್ಞೆಯೂ ಪರಸ್ಪರ ಸಂಬಂಧವಿಲ್ಲದವು ಎಂದು ನಮ್ಮ ಜನ ತಿಳಿದಿರುವಂತೆ ತೋರುವುದು.

ಆ ಸಮಯದಲ್ಲಿ ಒಂದು ಹಳೆಯ ಕತೆ ನೆನಪಿಗೆ ಬಂದಿತು. ಗಂಭೀರವಾಗಿ ಹೇಳಿದೆ, "ನಾನು ಇಲ್ಲಿಯ ಸ್ಥಳಪುರಾಣವನ್ನೂ ಮಹಿಮೆಯನ್ನೂ ಅಭ್ಯಸಿಸಿ ಬಂದಿದ್ದೇನೆ. ಆ ಪ್ರಕಾರ ಈ ಕೊಳವನ್ನು ಮಹರ್ಷಿ ಋಷ್ಯಶೃಂಗರು ನಿರ್ಮಿಸಿದ್ದಂತೆ. ಇದರ ವೈಶಿಷ್ಟ್ಯವೇನೆಂದರೆ ಬಲದಂಡೆಯ ನೀರು ಬಲು ಸವಿ. ಅದನ್ನು ಮಾತ್ರ ಕುಡಿಯಿರಿ. ಎಡದಂಡೆಯ ನೀರು ಚಪ್ಪೆ, ರುಚಿಯಿಲ್ಲ."
ಬಲದಂಡೆಯ ನೀರನ್ನು ತಂದಾಯಿತು. ಬಾಯಿಯಿಂದ (ಮೋಟಾರ್ ಎಂಜಿನ್ನಿನ ರೇಡಿಯೇಟರಿನಿಂದ) ನೀರು ತುಳುಕುವವರೆಗೆ ಅದನ್ನು ಕುಡಿದರು ಹುಡುಗರು. ಏದುತ್ತ ಸೇಂಕುತ್ತ, "ಹೌದು ಸರ್ ಬಹಳ ಸವಿ" ಎಂದು ಬಾಯಿ ಚಪ್ಪರಿಸಿದರು. ಬುತ್ತಿಯುಂಡಾಯಿತು. ಆ ಚಪಾತಿ ಬಟಾಟೆ ಪಲ್ಯ, ಆ ಮೂಸುಂಬಿ, ಆ ಸನ್ನಿವೇಶ, ಆ ಸವಿನೀರು ಅದರ ರುಚಿ ಅಲ್ಲಿಗೇ ಮೀಸಲು. ದೇಹ, ಮನಸ್ಸು ತಣಿದನಂತರ, "ಈಗ ಎಡದಂಡೆಯ ನೀರನ್ನು ಬೇಕಾದರೆ ಕುಡಿದು ಪರೀಕ್ಷಿಸಿ" ಎಂದೆ.
ಕುಡಿದವರು, "ಬರೀ ಚಪ್ಪೆ, ಏನೂ ರುಚಿಯಿಲ್ಲ."
ಅವರಿಗಚ್ಚರಿ. ಒಂದೇ ಕೊಳ, ಎರಡು ಬಗೆಯ ರುಚಿಗಳ ನೀರು? ನನ್ನನ್ನು ಪ್ರಶ್ನಾರ್ಥಕವಾಗಿ ದಿಟ್ಟಿಸಿದರು. ನಾನೆಂದೆ "ಹಸಿವು ಸವಿ, ತೇಗು ಅಲ್ಲ."

೧೨ ಗಂಟೆ ದಾಟಿತ್ತು. ಇನ್ನು ಹಾರಾಟ ನಡೆಯಬೇಕಷ್ಟೆ. ನಮ್ಮ ತಂಡದ ಒಬ್ಬ ಪ್ರಮುಖ ಸದಸ್ಯ ವೆಂಕಟೇಶ. ಇವನು ಹಳೆಯ ಸ್ಕೌಟ್ ಹುಲಿ. ಅತ್ಯಂತ ತೀಕ್ಷ್ಣಮತಿ. ರೇಡಾರ್, ಟೆಲಿವಿಷನ್ ಉಪಕರಣಗಳನ್ನು ಸ್ವತಃ ತಯಾರಿಸಿರುವ ನಿಪುಣ. ಓದಿನಲ್ಲಿ ಹೇಗೋ ಹಾಗೆ ಎನ್‌ಸಿಸಿ ಚಟುವಟಿಕೆಗಳಲ್ಲಿಯೂ ಗಟ್ಟಿಗ. ಇವನ ಚುರುಕು ನಡೆ, ಮಿಂಚಿನಂಥ ಬುದ್ಧಿ, ಸತತ ಕ್ರಿಯಾಶೀಲತೆ ಇವನ್ನು ಕಂಡ ಸ್ನೇಹಿತರು ವೆಂಕಟೇಶನನ್ನು ಕಾಸ್ಮಿಕ್ ರೇ ಎಂದು ಅರ್ಥಪೂರ್ಣವಾಗಿ ಕರೆಯುತ್ತಿದ್ದರು. ಕಾಸ್ಮಿಕ್ ಎಂದೇ ಅವನನ್ನು ಕರೆಯುವುದು ರೂಢಿಯಾಗಿ ಹೋಯಿತು. ನಿಜವಾದ ಹೆಸರೇ ಮರೆತುಹೋಗುವಷ್ಟು ಪ್ರಬಲವಾಯಿತು ಈ ಅನ್ವರ್ಥನಾಮ.

"ಇಲ್ಲೊಂದು ಹೊಸ ಪ್ರಯೋಗ ಮಾಡೋಣ ಸಾರ್" ಎಂದ ಕಾಸ್ಮಿಕ್. "ಮಾಡೋಣ" ಎಂದರೆ ತಾನು ಮಾಡುತ್ತೇನೆ, ಅನುಮತಿಯಿದೆಯೇ ಎಂದು ಅರ್ಥ.
"ಏನು ನಿನ್ನ ಯೋಜನೆ ವಿವರಿಸು" ಎಂದೆ.
"ರಿವರ್ ಕ್ರಾಸಿಂಗ್, ಸಾರ್."
"ರಿವರ್ ಎಲ್ಲಿದೆಯಯ್ಯ?"
"ನೀವೇನು ಸಾರ್? ಬೋರ್ಡಿನ ಮೇಲೆ ವಿಶ್ವದಗೋಳವನ್ನು ಗೀಚಿ let us imagine ಎಂದು ಖಗೋಳ ವಿಜ್ಞಾನವನ್ನೇ ಹೇಳಿಕೊಡುತ್ತೀರಿ. ಹಾಗಿರುವಾಗ!"
"ಆಗಲಿ ಅಷ್ಟು ಕಠಿಣವಲ್ಲ ಇಲ್ಲಿಯ ಕಲ್ಪನೆ. ಲೇಕ್ ಕ್ರಾಸಿಂಗ್ ಎಂದು ಬದಲಾಯಿಸಿರಿ ನಿಮ್ಮ ಯೋಜನೆಯ ಹೆಸರು."
"ಸರಿ ಸಾರ್. ಸರೋವರೋಲ್ಲಂಘನ" ಅವನು ಸಂಸ್ಕೃತ ಪಂಡಿತನೂ ಹೌದು.
"ಬಹಳ ಸುಲಭ. ಈ ದಂಡೆಯ ಮೇಲೆಯೇ ನಡೆದರೆ ಆ ಕಡೆಗೆ ತಲಪಿರುತ್ತೇವೆ. ಇದೇನು ಮಹಾ!"
"ನೀವೇನು ತಮಾಷೆ ಮಾಡುತ್ತೀರಿ, ಸಾರ್. ಹಗ್ಗ ಕಟ್ಟಿ ಈ ೪೦ ಅಡಿ ಉದ್ದದ ಕೊಳವನ್ನು ಹಗ್ಗದಡಿಯಲ್ಲಿ ಜಾರಿ ದಾಟೋಣ."
"ಆಗಲಿ ಮುಂದುವರಿಸಿ, ಆದರೆ ನಾನು ಹಸುರು ಕಂದೀಲು ತೋರಿಸದೇ ನೀವು ದಾಟಲು ತೊಡಗತಕ್ಕದ್ದಲ್ಲ."

ನಾವುಕುಳಿತಿದ್ದ ದಂಡೆಯಲ್ಲಿ ಕೊಳದಿಂದ ೨೦–೨೫ ಅಡಿ ಎತ್ತರದಲ್ಲಿ ಭದ್ರ ಮರವೊಂದರ ಕಾಂಡಕ್ಕೆ ಎರಡು ನೈಲಾನು ಹಗ್ಗಗಳನ್ನು ಬಿಗಿದು ಕಟ್ಟಿದರು. ಅವನ್ನು ದಂಡೆಯ ಮೇಲಕ್ಕಾಗಿ ಬಿಚ್ಚುತ್ತ ಕೊಂಡೊಯ್ದು ಎದುರು ದಂಡೆಯಲ್ಲಿ ೧೦ ಅಡಿ ಎತ್ತರದಲ್ಲಿ ಇನ್ನೊಂದು ಕಾಂಡಕ್ಕೆ ಬಿಗಿಯಾಗಿ ಕಟ್ಟಿದರು. ಈಗ ಇಳಿಜಾರಾದ ಹಗ್ಗದ ಸೇತುವೆಯೊಂದು ಕೊಳದ ಅಡ್ಡ ನಿರ್ಮಾಣವಾದ ಹಾಗಾಯಿತು. ಹಗ್ಗ ಭದ್ರವಾಗಿದೆಯೆಂದು ಸ್ಥಿರವಾದ ಬಳಿಗೆ ಮೊದಲು ಮೋಹನನ್ನು ಕೊಳ ದಾಟಲು ಬಿಡಲಾಯಿತು – ಕಾಸ್ಮಿಕ್ ನಿರ್ದೇಶಕ; ಲಕ್ಷ್ಮಿ ಮೊದಲಾದವರು ಸಹಾಯಕರು. ಪಿಂಟೋ, ಜಯರಾಮ ನನ್ನೊಡನೆ ದಂಡೆಯಲ್ಲಿ ಕುಳಿತು ನೋಡತೊಡಗಿದರು.

ಮೋಹನನ ಸೊಂಟಕ್ಕೆ ಒಂದು ಹಗ್ಗ ಸುತ್ತಿ ಅದನ್ನೂ ಹಗ್ಗದ ಸೇತುವೆಯನ್ನೂ ಕೆರಾಬಿನಾರಿನಿಂದ ಪೋಣಿಸಲಾಯಿತು. ಕೈಗಳಿಗೆ ಗವಸು. ಸೇತುವೆಯನ್ನು ಭದ್ರವಾಗಿ ಹಿಡಿದುಕೊಂಡು ತಲೆ ಮುಂದೆ ಕಾಲು ಹಿಂದಾಗಿ ನಿಂತು ಕಟ್ಟಿದ ಮರಕ್ಕೆ ಬಲವಾಗಿ ಒದ್ದು ಅವನು ಜಾರಲು ತೊಡಗಿದ. ಸೇತುವೆ ಇಳಿಜಾರಾಗಿದ್ದುದರಿಂದ ಇದು ಸಾಧ್ಯವಾಯಿತು. ಕೆರಾಬಿನರ್ ಮತ್ತು ಕೈಗಳು ಅವನನ್ನು ಭದ್ರವಾಗಿ ಸೇತುವೆಗೆ ಬಂಧಿಸಿವೆ. ಕಾಲುಗಳನ್ನು ನೆಟ್ಟಗೆ ಚಾಚಿದ. ಹೀಗೆ ಅಂಗಾತ ಮಲಗಿದ ಮೋಹನ ಜಾರಿಹೋಗುತ್ತಿದ್ದಂತೆಯೇ ಸೇತುವೆಯ ಹಗ್ಗದ ಬಿಗಿತ ಸಾಲದೇ ಅದು ಭಾರದಿಂದ ಜಗ್ಗಿತು. ಜಗ್ಗಿದ್ದು ಸ್ವಲ್ಪ ಹೆಚ್ಚೇ ಆಗಿ ಮೋಹನನಿಗೆ ನೀರಿನಲ್ಲಿ ಒಂದು ಮುಳುಗಾಟವಾಯಿತು. ಅವನ ಸಮವಸ್ತ್ರವೆಲ್ಲ ಒದ್ದೆ. ಎದುರು ದಂಡೆ ತಲಪಿಯೇ ಬಿಟ್ಟ. ಬಟ್ಟೆಯನ್ನು ಕಳಚಿ ಒಣಗಲು ಹರಗಿದ. ಮುಂದೆ ಸ್ನಾನ ಮಾಡದೇ ವಿಧಿಯಿರಲಿಲ್ಲ.
"ಸ್ನಾನ ಮಾಡಲಾ ಸಾರ್?"
"ನೀರಿನ ಆಳವೆಷ್ಟುಂಟೋ? ಗೊಸರಿರಬಹುದು. ಅದಿರಲಿ ನಿನಗೆ ಈಸಲು ಬರುವುದೋ?"
"ನನಗೆ ಬರುತ್ತದೆ" ಏಳೆಂಟು ಜನ ಕೂಗಿ ಹೇಳಿದರು.
ಶ್ರೀಧರನ್ ಇದ್ದವರಲ್ಲಿ ಧಾಂಡಿಗ. ಅವನು ಮೊದಲು ಈಸಬೇಕು, ಸೊಂಟಕ್ಕೆ ಹಗ್ಗ ಕಟ್ಟಿಕೊಂಡು ಅದನ್ನು ದಂಡೆಯಲ್ಲಿ ನಿಂತವರು ಬಿಲೇ ಮಾಡಬೇಕು. ಶ್ರೀಧರನ್ ಕೊಳದ ಬೇರೆ ಬೇರೆ ಭಾಗಗಳಲ್ಲಿ ನಿಂತು ನೀರಿನ ಆಳ ತಿಳಿಸಬೇಕು. ಇದು ಮುಂದಿನ ಯೋಜನೆ. 'ಹುಡುಗರ ತಂಡದೊಡನೆ ಹೋದಾಗ ನೀರು ನಿಮ್ಮ ಪ್ರಥಮ ವೈರಿ' ಎಂದು ನಮ್ಮ ಶಿಸ್ತು ಸಂಹಿತೆಯಲ್ಲಿ ಹೇಳಿದೆ. ಆದರೂ ಇಲ್ಲಿಯ ಸನ್ನಿವೇಶ ಅಷ್ಟೊಂದು ಮೋಹಕವಾಗಿತ್ತು. ೪೦ ಅಡಿ ಉದ್ದ ಸುಮಾರು ೩೦ ಅಡಿ ಅಗಲದ ಆ ಕೊಳದಲ್ಲಿ ನೀರಿನ ಆಳ ಎಲ್ಲಿಯೂ ೮ ಅಡಿಗಿಂತ ಜಾಸ್ತಿ ಇರಲಿಲ್ಲ. ಆದರೆ ತಳದಲ್ಲಿ ಕೊಳೆತ ಎಲೆಗಳ ಕಸಕಡ್ಡಿಗಳ ಬಲವಾದ ಸುಸ್ತರವೇ ನೆಲಸಿತ್ತು. ನಮ್ಮ ಹುಡುಗರು ಈಸಲು ತೊಡಗಿದೊಡನೆಯೇ ಶತಶತಮಾನಗಳ ಇತಿಹಾಸದ ಮಡ್ಡಿಯನ್ನು ಕಲಕಿದಂತಾಯಿದು: "ಶತಮಾನಂಗಳ ಸಂಗ್ರಹ ಸಂಸ್ಕೃತಿ!"

ಮುಂದೆ ಹಗ್ಗದಲ್ಲಿ ಜಾರಿದ ಹುಡುಗರು ಅಂಡರ್ವೇರ್ನಲ್ಲಿದ್ದರು. ಅವರೆಲ್ಲರೂ ಸೇತುವೆ ಮಧ್ಯದ ನೀರಿನ ಸೇಚನೆಯನ್ನು ಹೊಸ ಆಟವೆಂದು ಆಡಿದರು. ನಾವೆಲ್ಲರೂ ಮನದಣಿಯೆ ಈ ಆಟ ಆಡಿದೆವು. ಥಿಯೊರೆಟಿಶಿಯನ್ ಪಿಂಟೊ "ಯಾಕ್ರಪ್ಪಾ, ದೇಹ ಬಿಸಿಯಾಗಿರುವಾಗ ಇದು ಸರಿಯಲ್ಲ" ಎಂದು ಮುಂತಾಗಿ ಹೇಳುತ್ತಿದ್ದ. ನಾನು ಅವನನ್ನು ಬಲವಾಗಿಯೇ ಕೆಣಕಿದೆ, "ಪಿಂಟೋ! ನೀನು ಆ ಆಟವಾಡಿದರೆ ನಾನೂ ಆಡುತ್ತೇನೆ. ನಿನಗೆ ಧೈರ್ಯವಿಲ್ಲ!" ಎದ್ದರೆ ಆಳಲ್ಲ ಪಿಂಟೋ. ಜಾಂಬವಂತನ ಕೆಲಸ ನಾನು ಮಾಡಿದೊಡನೆ (ನನ್ನ ರೂಪ ಹಾಗಿಲ್ಲ!) ಪಿಂಟೋ ಹನುಮಂತನಾದ. ಸಾಗರೋಲ್ಲಂಘನ ಮಾಡಿಯೇ ಬಿಟ್ಟ. ನಾನೂ ಅವನ ಹಿಂದೆ ಧಾವಿಸಿದೆ. ಆದರೆ ಏನು ಮಾಡಿದರೂ ಎಷ್ಟು ಕೆಣಕಿದರೂ ಈಸದಿದ್ದವರು ಇಬ್ಬರು – ವಾಸು, ಕಾರಣ ಈಸುಬಾರದು; ಆದರೆ ಅವನು ಹಗ್ಗದಲ್ಲಿ ಜಾರಿ ನೀರಿನಲ್ಲಿ ಮುಳುಗಿ ಮಿಂದು ಮೇಲೆದ್ದ. ಇನ್ನೊಬ್ಬ ಜಯರಾಮ, ಕಾರಣ ಶೀತ ಎಂದು ಮುಂತಾಗಿ ಆಗ ಬುರುಡೆ ಹೊಡೆದ. ಹಿಂದಿನಿಂದ ತಿಳಿಯಿತು: ಆತ ಅಂಡರ್‌ವೇರೇ ಧರಿಸಿರಲಿಲ್ಲವಂತೆ! ಮುಂದೆ ರ್‍ಯಾಪ್ಲಿಂಗ್ ನಡೆಯಬೇಕಲ್ಲ. ಶಿಲಾರೋಹಣ ಹೇಗೂ ಆಗಿದೆ. ರ್‍ಯಾಪ್ಲಿಂಗ್ ಮಾಡಲು ಅನುಕೂಲವಾದ ಒಂದು ಕಡಿದಾದ ಬಂಡೆ ಸಮೀಪದಲ್ಲಿಯೇ ದೊರೆಯಿತು. ಕೊಳದಿಂದ ಹೊರಟ ವಾನರಸೇನೆ ಅದರ ಬುಡದಲ್ಲಿ ಬೀಡುಬಿಟ್ಟಿತು. ಅದರ ಎತ್ತರ ೩೦ ಅಡಿ. ಅಲ್ಲಿ ಮನಸ್ವೀಯಾಗಿ ನಾನಾ ವಿಧದ ರ್‍ಯಾಪ್ಲಿಂಗ್ ಆಟ ಆಡಿ ಹಿಂದಕ್ಕೆ ಹೊರಡುವಾಗ ೫ ಗಂಟೆ ದಾಟಿ ಹೋಗಿತ್ತು. ಹಸಿವು ಬಾಯಾರಿಕೆ ತೀವ್ರವಾದುವು. ದೂರ ನಡೆದಷ್ಟೂ ಮುಗಿಯುವುದಿಲ್ಲ ಎಂದು ಭಾಸವಾಯಿತು. ಭಾರವಾದ ದೇಹಗಳನ್ನು, ಸೆಟೆದು ನಿಂತ ಕಾಲುಗಳಿಂದ ಎಳೆದುಕೊಂಡು ಹೋಗಿ ಬಂಗ್ಲೆ ತಲಪುವಾಗ ೮ ಗಂಟೆ ರಾತ್ರಿ ಮೀರಿತ್ತು. ದೊರೆಗಳು ಉದ್ವಿಗ್ನರಾಗಿದ್ದರು. ನಾವು ಸುರಕ್ಷಿತವಾಗಿ ಹೆಮ್ಮೆಯಿಂದ ಮರಳಿ ಬಂದುದು ಅವರಿಗೆ ಸಂತೋಷವೀಯಿತಾದರೂ ಅವರ ಭಾವನೆಯನ್ನು ನಮಗೆ ತಿಳಿಸಿಯೇ ಬಿಟ್ಟರು.

"ನೀವು ಸಂತೋಷಪಡಿ, ಸಾಹಸಪ್ರದರ್ಶನ ಮಾಡಿ. ಅದಕ್ಕಾಗಿಯೇ ನಾವಿಲ್ಲಿಗೆ ಬಂದದ್ದು. ಆದರೆ ಕತ್ತಲೆಗೆ ಮೊದಲು ಹಿಂದೆ ಬರಲೇಬೇಕು. ಇಲ್ಲವಾದರೆ ಇಲ್ಲಿ ನಾನು ಏನೆಂದು ತಿಳಿಯಬೇಕು? ಪ್ರತಿಯೊಂದು ಮಗುವಿನ ಜೀವನವೂ ನನ್ನ ಪವಿತ್ರ ಹೊಣೆಯಲ್ಲವೇ?"

ನಿಮ್ಮ ಊಟ ಇಲ್ಲಿದೆ
ಅಧ್ಯಾಯ ನಲ್ವತ್ತೊಂಬತ್ತು

ನಾವೆಲ್ಲರೂ ಬಿಸಿ ಬಿಸಿ ಟೀ ಕುಡಿಯುತ್ತಿದ್ದಂತೆಯೇ ದೊರೆಗಳೆಂದರು, "ನೀರಿನ ಸಮಸ್ಯೆಯನ್ನು ಪರಿಹರಿಸಿಬಿಟ್ಟೆ."
ನನಗೆ ಆಶ್ಚರ್ಯವೂ ಸಂತೋಷವೂ ಆದುವು. ಅವರೇ ಮುಂದುವರಿಸಿದರು, "ನೀವೆಲ್ಲರೂ ಹೋದ ಬಳಿಕ ಉಳಿದವರು ಟೆಂಟ್ ಕೆಲಸ, ಶುಚಿತ್ವ ಕಾರ್ಯ, ನೀರು ತರುವುದು ಮುಂತಾದವನ್ನು ಮಾಡುತ್ತಿದ್ದರು. ನಿಸಾರರೂ ಸ್ವಾಮಿಯವರೂ ಆ ಹೊಣೆವಹಿಸಿಕೊಂಡರು. ನನಗೆ ಮತ್ತೇನು ಕೆಲಸ? ಹುಡುಗರು ನೀರನ್ನು ಸಂಗ್ರಹಿಸಿಡಲು ಪಾತ್ರೆಗಳೇ ಇಲ್ಲವಲ್ಲ. ಬೆಳ್ತಂಗಡಿಗೆ ಹೋಗಿ ಎರವಲಾಗಿ ತರೋಣ, ಲಿಂಗೋಜಿಯನ್ನು ವಿಚಾರಿಸಿದಂತೆಯೂ ಆಯಿತು, ಬೆಂಗಳೂರಿಗೆ ಟ್ರಂಕ್ ಫೋನ್ ಮಾತಾಡಿದಂತೆಯೂ ಆಯಿತು ಎಂದು ಹೊರಟುಬಿಟ್ಟೆ.
"ಬೆಂಗಳೂರಿನಲ್ಲಿ ತಂದೆಯವರ ಪರಿಸ್ಥಿತಿ ಹಾಗೆಯೇ ಇದೆ ಎಂದು ತಿಳಿದು ಇದ್ದುದರಲ್ಲಿ ಸಮಾಧಾನ ಆಯಿತು. ಲಾರಿಗೆ ಹೊಸ ಬಿಡಿ ಭಾಗ ತರಲೇಬೇಕು. ಅದಕ್ಕಾಗಿ ಮಂಗಳೂರಿಗೆ ಯಾರನ್ನಾದರೂ ಕಳಿಸಬೇಕು. ನಾಳೆಯ ದಿನ ಹರೂನನ್ನು ಕಳಿಸುವುದು ಎಂದು ನಿಶ್ಚೈಸಿದ್ದೇನೆ.
"ಇವೆರಡು ಕೆಲಸ ಮುಗಿದನಂತರ ದೊಡ್ಡ ಹಂಡೆ ಅಥವಾ ಗುಡಾಣಗಳು ಎಲ್ಲಿ ಎರವಲಾಗಿ ದೊರೆಯಬಹುದು ಎಂದು ತಿಳಿಯಲು ಬೆಳ್ತಂಗಡಿ ಇಡೀ ಅಲೆದಾಡಿದೆ. ಒಂದು ಮಸೀದಿಯಲ್ಲಿ ಅವು ದೊರೆಯುತ್ತವೆಂದು ತಿಳಿಯಿತು. ಅಲ್ಲಿಗೆ ಹೋದೆ. ಅಧಿಕಾರಿಗಳನ್ನು ಕಂಡೆ. ನಮ್ಮ ಕತೆಯನ್ನು ಹೇಳಿದೆ. ಬಗೆ ಬಗೆಯಲ್ಲಿ ಕೇಳಿಕೊಂಡೆ. ಆದರೆ 'ಎಂಟು ಹತ್ತು ದಿವಸಗಳವರೆಗೆ ನಿಮಗೆ ಕೊಡಲು ಸಾಧ್ಯವೇ ಇಲ್ಲ' ಎಂಬುದೊಂದೇ ಅವರ ಉತ್ತರ. 'ಅಷ್ಟು ದೂರದಿಂದ, ಬೆಂಗಳೂರಿನಿಂದ ನಿಮ್ಮೂರಿಗೆ ಮಕ್ಕಳು ಬಂದಿದ್ದಾರಪ್ಪಾ. ಇಷ್ಟು ಉಪಕಾರ ನೀವು ಮಾಡಬಾರದೇ?' ಅವರ ಮನಃಪರಿವರ್ತನೆಯಾಗಲೇ ಇಲ್ಲ. ಅಲ್ಲಿಂದ ಬೇಸರಗೊಂಡು ಹೊರಟೆ. ಇನ್ನೊಂದು ಕಡೆ ವಿಚಾರಿಸುವಾಗ, ಅಲ್ಲಿಯೇ ಸಮೀಪದಲ್ಲಿ ಅಂದರೆ ಜಮಾಲಾಬಾದಿನ ಬುಡದಲ್ಲಿ ಒಬ್ಬ ಶ್ರೀಮಂತರ ಮನೆಯಿದೆ. ಅವರಲ್ಲಿ ದೊರೆತರೂ ದೊರೆಯಬಹುದು ಎಂದು ತಿಳಿಯಿತು. ನನಗೆ ಧೈರ್ಯವಿರಲಿಲ್ಲ. ಆದರೂ ಪ್ರಯತ್ನ ಮಾಡಿಯೇ ಬಿಡೋಣವೆಂದು ಹೊರಟೆ. ಆ ಹಳ್ಳಿ ಧೂಳಿನ ದಾರಿ. ಸೆಕೆಯೋ ಸೆಕೆ. ಹುಡುಗರಿಬ್ಬರೂ ಲಾರಿಯಲ್ಲಿದ್ದಾರೆ. ಮನೆಯಿಂದ ದೂರದಲ್ಲಿ ಲಾರಿ ನಿಲ್ಲಿಸಿ ಅವರಲ್ಲಿಗೆ ನಡೆದುಕೊಂಡು ಹೋದೆ. ವಿಶಾಲವಾದ ದೊಡ್ಡ ಅರಮನೆ. ಯಜಮಾನರ ಹೆಸರು ನಡುಗುತ್ತು ಚಂದ್ರಯ್ಯ ಆಜ್ರಿ ಎಂದು ಮತ್ತೆ ತಿಳಿಯಿತು. ಅಲ್ಲಿ ಹಳ್ಳಿಯ ಹಳೆ ಕಾಲದ ಸಮೃದ್ಧ ವಾತಾವರಣ. ನನ್ನ ವೇಷ, ಭೂಷಣ, ನಾನು ಹೋದ ಮಧ್ಯಾಹ್ನದ ಬಿಸಿಲಿನ ಹೊತ್ತು ಯಾವುದೂ ಅಲ್ಲಿಗೆ ಒಪ್ಪುವಂತಿರಲಿಲ್ಲ. ಹೋದೆ. ಮೆಟ್ಟಲಿನಲ್ಲಿ ನಿಲ್ಲುವಾಗಲೇ ಒಳಗಿನಿಂದ ಬಂದ ಯುವಕರೊಬ್ಬರು 'ನಮಸ್ಕಾರ, ಬನ್ನಿ ಕುಳಿತುಕೊಳ್ಳಿ' ಎಂದು ಹಳೆಯ ಪರಿಚಯವಿದ್ದವರಂತೆ ಸ್ವಾಗತಿಸಿದರು. 'ನನಗೆ ವೇಳೆ ಇಲ್ಲ. ನಾನು ಬಂದದ್ದು. . .' ಎಂದು ಹೇಳುತ್ತಿದ್ದಂತೆಯೇ 'ಅದೆಲ್ಲವನ್ನೂ ಆಮೇಲೆ ವಿಚಾರಿಸೋಣ. ನೀವು ಮೇಲೆ ಬನ್ನಿ. ಕುಳಿತುಕೊಳ್ಳಿ' ಎಂದು ಒತ್ತಾಯ ಮಾಡಿದರು. ಇದೇನಪ್ಪಾ ಕಾಲ ಮೀರುತ್ತಿದೆ. ಇಲ್ಲಿಯೂ ನಕಾರವಾದರೆ ಎಂದುಕೊಂಡೆ. ಮುಂದಿನ ಗಳಿಗೆಯಲ್ಲಿ ಒಳಗಿನಿಂದ ಇನ್ನೊಬ್ಬರು ತಂಬಿಗೆ, ನೀರು ಟವೆಲ್ ತಂದರು. ಹಿಂದೆಯೇ ಷರಬತ್ತು ತಂದರು. 'ನೀವು ಲಾರಿಯಲ್ಲಿ ಬಂದದ್ದು ಕಂಡೆ. ಅದರಲ್ಲಿರುವ ಎಲ್ಲರನ್ನೂ ಬರಹೇಳಿ' ಎಂದು ಅಲ್ಲಿಗೆ ಜನ ಕಳಿಸಿದರು. ನನಗೆ ಬಹಳ ಸಂಕೋಚವಾಯಿತು. ಷರಬತ್ತು ಕುಡಿಯುತ್ತ – ಆ ಸೆಕೆ ಆ ಬಳಲಿಕೆಗೆ ಅದು ಅದ್ಭುತವಾಗಿತ್ತು. ನಾನು ಅಲ್ಲಿಗೆ ಬಂದಿದ್ದುದರ ಕಾರಣ ಹೇಳಿದೆ. ನನಗೆ ಎರಡು ಹಂಡೆ ಬೇಕೆಂದೂ ಕೇಳಿಕೊಂಡೆ. ಅವರು ಅದಕ್ಕೆ ಉತ್ತರ ಕೊಡಲಿಲ್ಲ. ನಮ್ಮ ಬಳಗದವರಿಗೂ ಉಪಚಾರ ನಡೆಯಿತು. ನನಗೆ ಹೊತ್ತಾಗುವುದೆಂದು ಆತುರ. ಇವರು ಪಾತ್ರೆಯ ವಿಚಾರ ಮಾತಾಡುವುದೇ ಇಲ್ಲವಲ್ಲ ಎಂದು ಕಾತರ. 'ಸ್ವಾಮೀ ಪಾತ್ರೆ ತಮ್ಮಲ್ಲಿ ದೊರೆಯಬಹುದೇ?' ಎಂದು ಪುನಃ ಪ್ರಶ್ನಿಸಿದರೆ 'ಅದು ಆಮೇಲೆ ನೋಡೋಣ. ಈಗ ನೀವು ಊಟ ಮಾಡಬೇಕಲ್ಲ' ಎಂದರು. 'ಇಲ್ಲ ಕ್ಷಮಿಸಬೇಕು. ನಮಗೆ ಊಟ ಕ್ಯಾಂಪಿನಲ್ಲಿ ತಯಾರಾಗಿದೆ. ಅಲ್ಲಿ ಕಾಯುತ್ತಿದ್ದಾರೆ. ನಾವು ಹೋಗಬೇಕು. ಪಾತ್ರೆ ದಯವಿಟ್ಟು. . .' 'ಅದು ಹೇಗೆ? ನಿಮ್ಮ ಊಟ ಇಲ್ಲಿ ಎಂದು ಮೊದಲೇ ಗೊತ್ತಾಗಿದೆಯಲ್ಲ! ಈಗ ಇಲ್ಲಿಯೇ ಊಟ ಮಾಡಬೇಕು' ಎಂದರು.

"ನಮ್ಮ ದುಸ್ತು ನೋಡಿ ಬೆಂಚು ಕುರ್ಚಿ ತಯಾರು ಮಾಡಿದರು. ಎಲೆ ಹಾಕಿದರು. ಅಣ್ಣ ತಮ್ಮಂದಿರು ಸೇರಿ ಬಡಿಸಲು ತೊಡಗಿಯೇ ಬಿಟ್ಟರು. ಪಂಚಭಕ್ಷ್ಯ ಪರಮಾನ್ನ ಭೋಜನವೆಂದರೆ ಅದು. ಅವರ ಹಿರಿಯ ಸಂಬಂಧಿಕರೊಬ್ಬರಿಗೆ ಆ

ಮಧ್ಯಾಹ್ನ ಔತಣ ಏರ್ಪಡಿಸಿ ಮನೆಯವರೆಲ್ಲರೂ ಊಟಕ್ಕೆ ಕುಳಿತಿದ್ದರಂತೆ. ನಾವು ಊಟ ಮಾಡುತ್ತಿದ್ದಂತೆಯೇ ಅವರೆಲ್ಲರೂ ಬಂದರು. ಅವರ ಪ್ರೀತಿ ವಿಶ್ವಾಸ, ಉಪಚಾರಗಳಿಗೆ ಮಿತಿಯೇ ಇಲ್ಲ. ಊಟವಾದ ಮೇಲೆ ನನ್ನನ್ನು ಅವರ ಮನೆಯ ಉಗ್ರಾಣಕ್ಕೆ ಕರೆದುಕೊಂದು ಹೋಗಿ 'ನಿಮಗೆ ಬೇಕಾದ ಪಾತ್ರ ಆರಿಸಿಕೊಳ್ಳಿ. ಬೇಕಾದಷ್ಟು ದಿವಸ ಇಟ್ಟುಕೊಂಡು ಆಮೇಲೆ ತಂದುಕೊಡಿ' ಎಂದರು. ಹೀಗೆ ನಮಗೆ ಈ ಹಂಡೆಗಳು ದೊರೆತುವು.

"ನಾನು ಪಾತ್ರೆ ತೆಗೆದುಕೊಂಡು ಮರಳುತ್ತಿದ್ದಂತೆಯೇ ಯೋಚನೆ ಮಾಡಲು ತೊಡಗಿದೆ – ಒಂದು ಕಾಲದಲ್ಲಿ ದೊಡ್ಡ ದೊಡ್ಡ ಅಧಿಕಾರಿಗಳು ಬಂದಿಳಿದುಕೊಳ್ಳುತ್ತಿದ್ದ ಈ ಬಂಗ್ಲೆಯಲ್ಲಿ ಅವರು ನೀರಿಗೇನಾದರೂ ಏರ್ಪಾಡು ಮಾಡಿರಲಾರರೇ? ಬೆಟ್ಟದ ಬುಡ, ತೋಡಿದಲ್ಲಿ ನೀರು ದೊರೆಯಬೇಕು – ಬಾವಿ ಅಗೆಸಿರಲೇಬೇಕು ಎಂದು ನನ್ನ ತರ್ಕ. ಡಾಕ್ಟರರೊಡನೆ ಈ ವಿಚಾರ ಮಾತಾಡಿದೆ. ಅವರು ಇಡೀ ಕಾಂಪೌಂಡನ್ನು ಸುತ್ತಿ ನೋಡಿದರು. ನನ್ನ ಊಹೆ ಸರಿಯಾಗಿತ್ತು. ಈ ಔಟ್ ಹೌಸಿನ ಹಿಂದೆ ೧೦೦ ಗಜ ದೂರದಲ್ಲಿದ್ದ ಹಾಳುಬಾವಿಯನ್ನು ಅವರು ಹುಡುಕಿದರು. ಬಗ್ಗಿ ನೋಡಿದೆವು, ಕಲ್ಲು ಕಟ್ಟಿದ್ದಾರೆ, ಅಡಿಯಲ್ಲಿ ನೀರು ಹೊಳೆಯುತ್ತಿದೆ. ಕಂಬ ಕಟ್ಟಿಸಿ, ಹಗ್ಗ ರಾಟೆ ಹಾಕಿ, ನೀರು ಸೇದಿದೆವು. ಸಮೃದ್ಧಿಯಾಗಿದೆ, ಶುದ್ಧವಾಗಿದೆ. ಡಾಕ್ಟರರೂ ಸರ್ಟಿಫಿಕೇಟ್ ಕೊಟ್ಟರು. ನೀರನ್ನು ಶುದ್ಧಪಡಿಸಲು ಬಾವಿಗೇ ಬ್ಲೀಚಿಂಗ್ ಪೌಡರ್ ದ್ರವವನ್ನು ಸುರಿದರು. ಈಗ ಕುಡಿಯಲು, ಸ್ನಾನ ಮಾಡಲು ಬೇಕಾದಷ್ಟು ನೀರು ಸಮೀಪದಲ್ಲಿಯೇ ಇದೆ."

ಒಂಟಿ – ವಾಂತಿಗುಡ್ಡೆಯ ಮೇಲೆ
ಅಧ್ಯಾಯ ಐವತ್ತು

ಶಿವಪ್ಪನವರ ತಂಡ ಮೆಂಗಿಲ ಶೇಣವನೊಡಗೂಡಿ ಕುದುರೆಮುಖದ ಸರಹದ್ದಿಗೆ ಹೋಗಿ ಮರಳಿತ್ತು. ಅವರು ಹೋದ ಬೆಟ್ಟದ ಹೆಸರು ಒಂಟಿಗುಡ್ಡೆ. ಇದನ್ನು ಓಂತಿಗುಡ್ಡೆ ವಾಂತಿಗುಡ್ಡೆಯೆಂದೂ ಕರೆಯುತ್ತಾರೆ. ಇದು ಆ ಭಾಗದಲ್ಲಿ ಒಂಟಿಯಾಗಿ ನಿಂತಿರುವುದರಿಂದ ಒಂಟಿಗುಡ್ಡೆ. ಓತಿಕೇತ ಓಡಲು ನಿಂತಿರುವ ಭಂಗಿಯಲ್ಲಿರುವುದರಿಂದ ಓಂತಿ ಗುಡ್ಡೆ. ಇನ್ನು ಕನ್ನಡದ ಒಂಟಿ, ವೊಂಟಿಯಾಗಿ ಇಂಗ್ಲಿಶಿನಲ್ಲಿ vonti ಆಗಿ ಕನ್ನಡಕ್ಕೆ ಮರಳುವಾಗ ವಾಂತಿ ಆದುದಾಗಿರಲೂಬಹುದು. "ಭೂದೇವಿಯ ವಾಂತಿ ಈ ಸಾಲಲ್ಲವೇ?" ಎಂದನೊಬ್ಬ ಜೀಯಾಲಜಿ ಪಂಡಿತ.

ಮುಂದಿನ ಎರಡು ದಿವಸ (೧೩, ೧೪) ತಂಡಗಳನ್ನು ಬದಲಾವಣೆಗೊಳಿಸುವುದರ ಮೂಲಕ ಎಲ್ಲರಿಗೂ ಎಲ್ಲ ಶಿಕ್ಷಣಗಳೂ ಲಭಿಸಿದುವು. ನಿಸಾರ್, ಸ್ವಾಮಿ, ಶಿವಪ್ಪ ಒಂದೊಂದು ದಿವಸ ಒಂದೊಂದು ತಂಡದೊಡನೆ ಹೋಗಿ ಮರಳಿದರು. ಒಂಟಿಗುಡ್ಡೆಯಿಂದ ಕುದುರೆಮುಖ, ಅದರೆದುರಿನ ಜಮಾಲಾಬಾದ್ ಎರಡನ್ನೂ ನೋಡಿದ ಕೆಂಡಗಣ್ಣಸ್ವಾಮಿ ದೂರದ ಊರಿನಲ್ಲಿರುವ ತನ್ನ ಪ್ರೇಯಸಿಯ ಸುಂದರ ವದನವನ್ನು ಸ್ಮರಿಸುತ್ತ ಹೀಗೆಂದು ಬರೆದರು:
ಜಮಾಲಾಬಾದೇ ನಂಗೊಂದ್ ಶಾಲೆ
ಆನೆ ತರ ಕಣೆ ಅದರ್ ತಲೆ!
ಕುದ್ರೇಮುಖದ್ಮೇಲ್ನಿಂತು ನೋಡಿದ್ರೆ – ಬಾಲೆ!
ಜಮಾಲಾಬಾದ್ – ಮಡ್ವೆ ನಿನ್ಮುಖದ್ಮೇಲೆ!

ಮುಕುಂದನ ಖಾಯಿಲೆ ಜಾಸ್ತಿಯಾಯಿತು. ಯಾವ ಆಹಾರವೂ ದಕ್ಕಲಿಲ್ಲ. ವಾಂತಿ, ವಾಂತಿ, ಹೊಟ್ಟೆನೋವು. ಅವನನ್ನು ಮಂಗಳೂರಿನ ದೊಡ್ಡ ಆಸ್ಪತ್ರೆಗೆ ಕಳಿಸುವುದು ಅಗತ್ಯವೆಂದು ಡಾಕ್ಟರರೆಂದರು. ಆದರೆ ಹುಡುಗ ಹೋಗಲೊಪ್ಪಲಿಲ್ಲ. ಹೇಗಾದರೂ ಮುಂದಿನ ಒಂದೆರಡು ದಿವಸಗಳಲ್ಲಿ ಹುಷಾರಾಗುವುದಾಗಿ ಆಸೆಯಿಟ್ಟುಕೊಂಡಿದ್ದ. ನಮ್ಮ ಬಳಗದ ಅತ್ಯುತ್ಸಾಹೀ ಹುಡುಗ ಇವನು. ಮೂರ್ತಿ ಕಿರಿದಾದರೂ ಹಿರಿ ಸಾಮರ್ಥ್ಯವಂತ. ಡಾಕ್ಟರರ ಊಹೆ ಅವನಿಗೆ ಅಪ್ಪೆಂಡಿಸೈಟಿಸ್ ಇರಬಹುದೆಂದು. ಅವನನ್ನು ಸೋಮವಾರ ಹರೂನನೊಂದಿಗೆ ಮಂಗಳೂರಿಗೆ ಕಳಿಸಿದೆವು. ಅಲ್ಲಿ ಅದು ಅಪ್ಪೆಂಡಿಸೈಟಿಸ್ ಹೌದೆಂದು ದೃಢವಾಯಿತು. ಶಸ್ತ್ರಚಿಕಿತ್ಸೆ ಒಡನೆ ನಡೆಸಬೇಕೆಂದು ಅವನ ವಾರೀಸುದಾದರರಿಗೆ (ಬೆಂಗಳೂರಿಗೆ) ತಿಳಿಸಲಾಯಿತು. ಅವರು ಕೂಡಲೇ ಕಾರಿನಲ್ಲಿ ಮಂಗಳೂರಿಗೆ ಧಾವಿಸಿ ಬಂದು ಮುಕುಂದನನ್ನು ಬೆಂಗಳೂರಿಗೆ ಕರೆದುಕೊಂಡು ಹೋದರು. ಆಶ್ಚರ್ಯವೆಂದರೆ ಆಗ ಅವನ ಖಾಯಿಲೆ ಕಡಿಮೆಯಾಗಿತ್ತು. ಮುಂದೆ ಶಸ್ತ್ರ ಚಿತ್ಸೆಯಿಲ್ಲದೇ ಅವನು ಹುಷಾರಾಗಿಯೂ ಬಿಟ್ಟ. ಪಾಪ, ಶಿಬಿರ ಮಾತ್ರ

ತಪ್ಪಿಹೋಯಿತು. ಬೆಂಗಳೂರಿನಿಂದ ವಿಶೇಷ ಸುದ್ದಿ – ದೊರೆಗಳಿಗೆ, ನಿಸಾರರಿಗೆ – ಬರದಿದ್ದುದರಿಂದ ನಮ್ಮ ಕ್ಯಾಂಪು ಬಲು ಬಿರುಸಿನಿಂದ ಸಂತೋಷದಿಂದ ಮುಂದುವರಿಯಿತು.

ಕಾಸ್ಮಿಕ್‌ರೇ ತಯಾರಿಸಿದ ಕುಂಬಳಕಾಯಿ ಹಲ್ವ
ಅಧ್ಯಾಯ ಐವತ್ತೊಂದು

ನಮ್ಮ ಸಂಶೋಧನಾಪಂಡಿತ ಕಾಸ್ಮಿಕ್‌ರೇ ಆ ಒಂದು ದಿವಸ ಕೇಳಿದ, "ಸಕ್ಕರೆ ಕುಂಬಳಕಾಯಿ ಹಲ್ವ ಮತ್ತು ಬಂಡೆ ಚಪಾತಿ ತಿಂದಿದ್ದೀರಾ ಸಾರ್?"
"ಕಾಶೀ ಹಲ್ವ ತಿಂದಿದ್ದೇನೆ. ಅದೂ ಬೂದಿಗುಂಬಳಕಾಯಿಯಿಂದ ಮಾಡುವುದು. ಇನ್ನು ಬಂಡೆ ಚಪಾತಿ ತಿನ್ನುವುದೇ?"
"ಕಾದ ಬಂಡೆಯ ಮೇಲೆ ಚಪಾತಿ ಬೇಯಿಸಿ ತಿನ್ನಬಹುದು. ಅದನ್ನು ಕುದುರೆಮುಖದ ಮೇಲೆ ಹೋದಾಗ ಮಾಡಿ ತೋರಿಸುತ್ತೇನೆ. ನೀವು ನನಗೆ ಒಂದೆರಡು ಸಕ್ಕರೆ ಕುಂಬಳಕಾಯಿ ತರಿಸಿಕೊಟ್ಟರಾಗಬಹುದು."
ಬೆಳ್ತಂಗಡಿಗೆ ಹೋದ ಅನ್ವಾರಿಗೆ ಸಕ್ಕರೆ ಕುಂಬಳಕಾಯಿ ಎಲ್ಲಿಯೂ ದೊರೆಯಲಿಲ್ಲ. ಪುನಃ ಹೋದಾಗ ಚೀನೀಕಾಯಿ ತೆಗೆದುಕೊಂಡು ಬಾ ಎಂದೆ. ಒಂದಲ್ಲ ನಾಲ್ಕು ತಂದ. ಒಂದೇ ವಸ್ತು, ಬೆಂಗಳೂರು ಭಾಷೆ ಈ ಊರ ಜನರಿಗೆ ತಿಳಿಯಲಿಲ್ಲ.

ಕಾಸ್ಮಿಕ್, ಶ್ರೀನಿವಾಸ, ವಾಸು ಹಲ್ವದ ಪಾಕಶಾಸ್ತ್ರಿಗಳು. ಅವರು ಬಲು ಶ್ರದ್ಧೆಯಿಂದ ಅದರ ತೊಟ್ಟು ಕತ್ತರಿಸಿ, ಅಲ್ಲಿ ತೂತ ಕೊರೆದು, ಒಳಗಿನ ಬೀಜ, ಸುಂಗು ಎಲ್ಲವನ್ನೂ ಹೊರ ತೆಗೆದರು. ಈಗ ಚೀನೀಕಾಯಿ ಬರೀ ಗುಳವಿರುವ ಬುರುಡೆಯಾಯಿತು. ಅದರೊಳಗೆ ಬೆಲ್ಲ, ತೆಂಗಿನಕಾಯಿ, ಕಸಕಸೆ, ಏಲಕ್ಕಿ ಪಾಕವನ್ನು ಓರಣವಾಗಿ ತುಂಬಿಸಿ ತೊಟ್ಟಿನ ಮುಚ್ಚಳ ಮುಚ್ಚಿದರು. ಶಿಬಿರಾಗ್ನಿಯ ಸ್ಥಳದಲ್ಲಿ ಎರಡಡಿ ಆಳದ ಹೊಂಡ ತೋಡಿ ವಿಧಿಪೂರ್ವಕವಾಗಿ ಹೂರಣಪೂರ್ಣ ಚೀನೀಕಾಯಿಯನ್ನು ಅದರೊಳಗೆ ಸ್ಥಾಪಿಸಿ ಮಂತ್ರ ಪೂರ್ವಕವಾಗಿ ಮಣ್ಣುಮುಚ್ಚಿ ಅಭಿಷೇಕ ಮಾಡಿ ಅದರ ಮೇಲೆ ಶಿಬಿರಾಗ್ನಿ ಹೊತ್ತಿಸಿದರು. ಅಗ್ನಿಯ ಸುತ್ತಲೂ ಕೋಲಾಟ, ಬಯಲಾಟ, ಹಾಡುಗಬ್ಬ, ಕತೆಗಳ ಹೊನಲು ಹರಿಯಿತು. ಬೆಂಕಿ ಎಷ್ಟು ಹೊತ್ತು ಉರಿಯಬೇಕೆಂದು ಯಾರಿಗೂ ಖಚಿತವಾಗಿ ತಿಳಿದಿರಲಿಲ್ಲ. ಈಗಾಗಲೇ ಮೇಲಿನ ಶಾಖದಿಂದ ಚೀನೀಕಾಯಿ ಕಪ್ಪಾಗಿ ಹೋಗಿರಬಹುದೆಂದು ಎಲ್ಲರಿಗೂ ತವಕ ಉಂಟಾಯಿತು.
"ಹಸಿವಾಗುತ್ತಿದೆ, ಹಲ್ವ ಬೇಕು" ಎಂದೊರಲಿದ ಸೋಮಯ್ಯ.
ಬೆಂಕಿ ಎಳೆದರು, ಕೆದಕಿದರು. ರಾಶಿ ರಾಶಿ ನೀರು ಸುರಿದರು. ಅಲ್ಲೆಲ್ಲ ಬೂದಿ ಹೊಗೆ, ಅಂಗಳವೆಲ್ಲ ಹೇಸಿಗೆ. ನೆಲ ತಣ್ಣಗೆ ಮೆತ್ತಗಾದ ಮೇಲೆ ಕೆಸರಿನ ಹೊಂಡದಿಂದ ಚೀನೀ ಕಾಯಿಯನ್ನು ನಿಧಿ ಉತ್ಖನಿಸುವ ಗಾಂಭೀರ್ಯದಿಂದ ಎತ್ತಿದರು. ಅದು ಕಪ್ಪಾಗಿ ಹೋಗಿರಲಿಲ್ಲ.
"ಅಬ್ಬಾ! ಇದು ಫಸ್ಟ್ ಕ್ಲಾಸಾಗಿ ಬೆಂದಿದೆ" ಎಂದು ಉದ್ಗರಿಸಿದ ಕಾಸ್ಮಿಕ್, ಶೀನಿ, ವಾಸು ಮತ್ತು ಅವನ ಬೆಂಬಲಿಗರು.

ತೊಟ್ಟಿನ ಮುಚ್ಚಳ ಕಳಚಿದ. ಒಳಗಡೆ ಬೆಟ್ಟನಿಟ್ಟ. ಹೂರಣ ಅಂಟಿ ಚುರುಚುರು ಎಂದಾಗ ಬೆಟ್ಟು ಸ್ವಾಭಾವಿಕವಾಗಿಯೇ ಬಾಯಿಗೆ ಧಾವಿಸಿತು. ಹಂದಿಯ ಮಾಂಸವನ್ನು ತಿನ್ನಲು ಆದಿಮಾನವ ಕಂಡು ಹಿಡಿದದ್ದು ಈ ಕ್ರಮದಲ್ಲಿಯೇ ಅಂತೆ. ಗುಡಿಸಲಿಗೆ ಅಕಸ್ಮಾತ್ತಾಗಿ ಬೆಂಕಿ ಬಿದ್ದಾಗ, ಒಳಗೆ ಕಟ್ಟಿ ಹಾಕಿದ್ದ ಹಂದಿಗಳು ಜೀವಂತ ಬೆಂದು ಹೋದುವು. ಆದಿಮಾನವ ಅವನ್ನು ಮುಟ್ಟಿದ, ಮಾಂಸ ಅಂಟಿ ಬೆಟ್ಟು ಸುಟ್ಟಿತು, ಬಾಯಿಗೆ ಧಾವಿಸಿತು. ಮುಂದೆಷ್ಟೋ ವರ್ಷ ಗುಡಿಸಲೊಳಗೆ ಹಂದಿಯನ್ನು ಕಟ್ಟಿಹಾಕಿ ಹೊರಾಗಿನಿಂದ ಬೆಂಕಿಯಿಕ್ಕಿ ಆ ಸುಟ್ಟ ಹಂದಿಯನ್ನು ತಿನ್ನುವ ಪಾಶವೀಕ್ರಮ (ಸುಡುವ ಕ್ರಮ ಮಾತ್ರ ಪಾಶವೀ, ಕೊಂದು ತಿನ್ನುವುದು ಖಂಡಿತವಾಗಿಯೂ ಅಲ್ಲ) ರೂಢಿಯಲ್ಲಿತ್ತಂತೆ! ಹಂದಿಯ ಕತೆಯಿಂದ ಹೂರಣದ ಕತೆಗೆ ಹೊರಳೋಣ.
"ಆಹಾ!" ಎಂದನು ಕಾಸ್ಮಿಕ್.
ಪಿಂಟೋ ದೊರೆ ಸ್ಪೂನಿನ (ಚಮಚ ಅಲ್ಲ) ಸಹಾಯದಿಂದ ಹಲ್ವದ ತುಣುಕು ತಿಂದು "ಭಲೆ!" ಎಂದು ಮರೆಯಾದ. ಲಕ್ಷ್ಮಿ ಅದರೊಳಗಿದ್ದ ತೀರ್ಥ ಕುಡಿದು "ಏನು ಅಮೃತೋಪಮ!" ಎಂದು ಕತ್ತಲೆಯಲ್ಲಿ ಕರಗಿದ.
ಗೌಡ ಮಾತ್ರ ಕೇಳಿದ, "ಹಲ್ವ ಕಹಿ ಅಲ್ವಾ?"
ರೆಡ್ಡಿ ಅನುಮೋದಿಸಿದ, "ತೀರ್ಥ ಬರೀ ಹೊಗೆ ಪದಾರ್ಥ" ಎಂದು ಉಗಿದ.
ಅಣ್ಣಯ್ಯಪ್ಪ, "ಲಕ್ಷ್ಮಿ ತೀರ್ಥವನ್ನು ಉಗಿದು ಬಾಯಿತೊಳೆಯುತ್ತಿದ್ದುದನ್ನು ನೋಡಿದೆ" ಎಂದು ಗುಳ್ಳೆಯನ್ನು ಒಡೆದ.

"ಬೆಲ್ಲ ಸವಿಯಾಗಿಲ್ಲ" ಕಾಸ್ಮಿಕ್.
"ಬೆಂಕಿಗೆ ಶಾಖ ಸಾಲದು" ಶ್ರೀನಿವಾಸ.
"ಆತುರ ಸದಾ ಹಾನಿಕರ" ವಾಸು.
"ಈ ಊರಿನವರಿಗೆ ಸಕ್ಕರೆ ಕುಂಬಳಕಾಯಿ ಬೆಳೆಸಲಿಕ್ಕೆ ಬರುವುದಿಲ್ಲ. ಶುದ್ಧ ಅನಾಗರಿಕರು!" ಎಂದು ನಾನು ಮಾತು ಮುಗಿಸಿದೆ.
ಬಂಡೆ ಚಪಾತಿಯ ಮಾತು ಮುಂದೆಂದೂ ಮರುಕೊಳಿಸಲಿಲ್ಲ.

ನಾಂದೀ ಮಹೋತ್ಸವ – ಹಿಂದಿನ ರಾತ್ರಿ
ಅಧ್ಯಾಯ ಐವತ್ತೆರಡು

ಹದಿನಾಲ್ಕರ ಇರುಳು ಬಲು ಸಂಭ್ರಮದ ರಾತ್ರಿ, ಕಲಿಗಳು ಗಂಡುಗಲಿಗಳಾಗುವ ಅದೇ ಮೊದಲಿನ ನಾಂದಿ. ಸಾಹಸ ಪ್ರದರ್ಶನದ ಶುಭ ನಿರೀಕ್ಷಣೆಯ ಸುಂದರ ಸ್ವಪ್ನ ಕಾಣುತ್ತಿರುವ ಸಂಧಿ. ನಾಳೆ ಮದುವೆಯೆಂದರೆ ಇಂದು ಮದುವೆ ಮನೆ ಹೇಗಿದ್ದೀತೋ ಹಾಗೆ. ಮರು ಮುಂಜಾನೆ ೬ ಗಂಟೆಗೆ ನಾವು ಕುದುರೆಮುಖ ಶಿಖರಾರೋಹಣ ತೊಡಗಬೇಕು. ಆ ಸಾಹಸಕ್ಕೆ ಮೀಸಲಾದದ್ದು ಮೂರು ದಿವಸ – ಒಂದು ಆರೋಹಣ, ಒಂದೂವರೆ ದಿವಸ ಅಲ್ಲಿಯೇ ವಾಸ, ಮೂರನೆಯ ಅಪರಾಹ್ನ ಅವರೋಹಣ. ಆಹಾರ, ಪಾತ್ರೆ, ಬಟ್ಟೆ, ಶಿಕ್ಷಣ ಸಾಮಗ್ರಿ ಎಲ್ಲವೂ ತಲೆ ಹೊರೆಯಲ್ಲಿಯೇ ಮೇಲಕ್ಕೆ ಹೋಗಬೇಕು. ಭಾರ ಹೊತ್ತು ನಡೆಯುವುದೂ ಹುಡುಗರ ಶಿಕ್ಷಣದ ಒಂದು ಅಂಗ. ಹಿಮಾಲಯದಲ್ಲಿ ೪೦ ಪೌಂಡು ಭಾರ ಹೊರಿಸುತ್ತಾರೆಂದ ಪಿಂಟೋ. ಇದು ಹಿಮಾಲಯವಲ್ಲ. ಇಲ್ಲಿ ಹತ್ತುವವರು ಲಕ್ಷ್ಮಿ ಪಿಂಟೋಗಳಲ್ಲ. ಆದ್ದರಿಂದ ಚಿಕ್ಕ ಜನರಿಗೆ, ಚಿಕ್ಕ ಗುಡ್ಡೆಗೆ, ಚಿಕ್ಕ ಭಾರ. ಹೊತ್ತುಕೊಂಡು ಹೋಗಬೇಕಾದ ವಿಶಿಷ್ಟ ಸಾಮಗ್ರಿಗಳನ್ನೂ ಅಡುಗೆಯವರ ಸಲಹೆಯಂತೆ ಒಂದುಗೂಡಿಸಿದೆವು: ಅಕ್ಕಿ, ತರಕಾರಿ, ಚಾ, ಸಕ್ಕರೆ, ಎಣ್ಣೆ, ಹಾಲು ಡಬ್ಬಿ ಇತ್ಯಾದಿ. ಶಿಕ್ಷಣ ಸಾಮಗ್ರಿ, ರೈಫಲ್, ಔಷಧಿಗಳು, ಪಾತ್ರೆ, ಪದಾರ್ಥ – ಒಂದೇ, ಎರಡೇ? ಯಾವುದನ್ನೂ ಬಿಡುವಂತಿಲ್ಲ. ಇವಿಷ್ಟಲ್ಲದೇ ಹುಡುಗರ ಸ್ವಂತ ವಸ್ತುಗಳು – ಕಂಬಳಿ, ಡರಿ, ಊಟದ ತಟ್ಟೆ, ಜೆರ್ಸಿ, ಬಟ್ಟೆ ಇತ್ಯಾದಿ. ವೈಯಕ್ತಿಕ ವಸ್ತುಗಳನ್ನುಳಿದು ಬೇರೆ ಎಲ್ಲವನ್ನೂ ಜೋಡಿಸಿ ಆಯಿತು. ಅವುಗಳ ಪಟ್ಟಿಯೂ ಸಿದ್ಧವಾಯಿತು. ನೂರರಷ್ಟು ಬೇರೆ ಬೇರೆ ಹೆಸರುಗಳಿದ್ದುವು. ಅಕ್ಕಿಯಿಂದ ಹಪ್ಪಳದವರೆಗೆ, ಕೈ ಮಚ್ಚಿನಿಂದ ಸೀಮೆ ಸುಣ್ಣದವರೆಗೆ.

ಸಂಜೆ ಹುಡುಗರನ್ನು ಒಟ್ಟುಗೂಡಿಸಿ, ವಿಷಯ ವಿವರಿಸಿ, ಬರಲು ಸಾಧ್ಯವಾಗದವರು ತಳದಲ್ಲಿಯೇ ಉಳಿಯಬೇಕೆಂದು ಸ್ಪಷ್ಟಪಡಿಸಲಾಯ್ತು. "ಕುದುರೆಮುಖ ಗಂಡುಗಳಿಗೆ ಮಾತ್ರ. ಯಾವುದೇ ಕಾರಣದಿಂದ ನಿಮ್ಮಲ್ಲೆ ಕೆಲವರಿಗೆ ಮೇಲೇರುವುದು ಸಾಧ್ಯವಿಲ್ಲವೆಂದೆನ್ನಿಸಿದರೆ ದಯವಿಟ್ಟು ಪ್ರಾಮಾಣಿಕವಾಗಿ ಹಾಗೆ ತಿಳಿಸಿ ಇಲ್ಲಿಯೇ ಉಳಿಯಿರಿ. ನಡಿಗೆ ದೀರ್ಘ, ಏರು ಕಡಿದು, ಭಾರ ಅತಿ – ಅಂಥಲ್ಲಿ ನಡುದಾರಿಯಲ್ಲಿ ನೀವು ನೀಳಮೊಗ ಮಾಡಿದರೆ, ಏರುಬ್ಬಸ ಬಿಟ್ಟರೆ ಮೊದಲು ನನಗೆ ಬರುವುದು ಕಡುಕೋಪ, ಕರುಣೆ ಅಲ್ಲ. ಧೈರ್ಯ, ಸ್ವಂತೇಚ್ಛೆ ಇರುವವರು ಮಾತ್ರ ಬರಬೇಕು."

ಮೂವತ್ತಾರು ಮಂದಿಯಲ್ಲಿ ಐದು ಜನ ತಾವಾಗಿಯೇ ಹಿಂದೆ ನಿಂತರು. ಸಾಮಗ್ರಿ – ಕ್ಯಾಡೆಟ್ ವಿತರಣ ಪಟ್ಟಿಯನ್ನು ಮೊದಲೇ ಬರೆದು ಸಿದ್ಧಪಡಿಸಿಕೊಂಡು ಅದರ ಪ್ರಕಾರ ಅವರಿಗೆ ಎಲ್ಲವನ್ನೂ ಹಂಚಿಕೊಳ್ಳಲಾಯಿತು. ಅವನ್ನು ಹುಡುಗರ ಬೆನ್ನ ಮೇಲಿನ ಹ್ಯಾವರ್ಸ್ಯಾಕಿನೊಳಗೆ ತುಂಬಿಸಿ ಪ್ಯಾಕ್ ಮಾಡಿಯೂ ಆಯಿತು. ಕೋಟ್ ತೊಡುವಷ್ಟು ಸುಲಭವಾಗಿ ಇದನ್ನು ಹಾಕಿಕೊಳ್ಳಬಹುದು, ಕಳಚಿಡಬಹುದು. ಮೂರು 'ಶೆರ್ಪಾ'ರನ್ನು – ಅಂದರೆ ಒಟ್ಟು ಏಳು – ನೇಮಿಸಿಕೊಂಡೆವು. ಅಕ್ಕಿ, ಹಿಟ್ಟು, ಸಕ್ಕರೆ ಮುಂತಾದ ಆಹಾರ ಪದಾರ್ಥ ಅವರ ತಲೆಯ ಮೇಲೆ. ಹುಡುಗರಿಗೆ ಡರಿ, ಬ್ಲಾಂಕೆಟನ್ನು ಕಟ್ಟುವ ವಿಧಾನವನ್ನೂ ತೋರಿಸಿಕೊಡಲಾಯಿತು. ಬೆಟ್ಟ ಏರುವಾಗ ಭಾರ ಬೆನ್ನ ಮೇಲೆ ಬೀಳಬೇಕು, ಜೋಲುತ್ತಿರಬಾರದು. ಬಗ್ಗಿ ನಡೆಯುವಾಗ ಇದರಿಂದ ಸುಲಭವಾಗುವುದು. ಜೋಲುತ್ತಿದ್ದರೆ ಅಥವಾ ಕೈಗಳಿಂದ ನೇಲುತ್ತಿದ್ದರೆ ಬಲು ಬೇಗ ಹೆಗಲಿಗೆ ಇಲ್ಲ ಕೈಗಳಿಗೆ ತ್ರಾಸವಾಗುವುದು. ಮುಖ್ಯ ಇಷ್ಟು: ಕೈಗಳು ಖಾಲಿಯಾಗಿರಬೇಕು. ಆಕಾಶಯಾನಕ್ಕೆ ಗಗನಯಾತ್ರಿಯನ್ನು ಉಡಾಯಿಸುವಾಗ ವಹಿಸುವಷ್ಟೇ ಜಾಗರೂಕತೆ ಇಲ್ಲಿ ವಹಿಸಬೇಕು. ನಡುದಾರಿಯಲ್ಲಿ ಯಾವ ತೊಂದರೆಯೂ ಎದುರಾಗ ಕೂಡದು.

ಡಾಕ್ಟರರು ಮೊದಲು ತಾನು ಬರಲಾರೆ, ಬರಲು ಸಾಧ್ಯವಾಗಲಾರದು ಎಂದವರು ೧೪ರ ರಾತ್ರಿ ನಮ್ಮೆಲ್ಲರ ಪ್ರೋತ್ಸಾಹ ಕಂಡು (ಸ್ವಾರ್ಥವೂ ಇತ್ತು) ಸಂತೋಷದಿಂದ ತಾವೂ ಬರುವುದಾಗಿ ಹೇಳಿದರು. ಅಡುಗೆಯವರನ್ನು ಮೊದಲೇ ಪುಸಲಾಯಿಸಿದ್ದೆವು. ನಮ್ಮ ಹೊಟ್ಟೆಯ, ಆರೋಗ್ಯದ ಹೊಣೆಯನ್ನು ಬೇರೆಯವರು ಹೊತ್ತರೆ ನಮಗೆ ಮಾಡಲಾಗದಿರುವ ಮಹಾಕಾರ್ಯ ಯಾವುದು? ಈ ಭೀಮ ಗೋತ್ರಜರು ಮೈಸೂರು ಪಾಕ, ಬಾದುಷಾ, ಚೌಚೌ ಮಾಡಿ ಮೂರು ದೊಡ್ಡ ಡಬ್ಬಿಗಳಲ್ಲಿ ತುಂಬಿಸಿದರು. ರಾತ್ರಿಯಿಡೀ ನಿದ್ರೆಗೆಟ್ಟು ಬೆಳಗ್ಗಿನ ಉಪಾಹಾರ, ಮಧ್ಯಾಹ್ನದ ಆಹಾರ ಸಿದ್ಧಪಡಿಸಿದರು.

ಹೀಗೆ ೧೫ರಂದು ಮೇಲೆ ಹೋಗುವವರು ೩೧ ಹುಡುಗರು, ಶಿವಪ್ಪ, ನಾನು, ಡಾಕ್ಟರರು, ಅವರ ಆರ್ಡರ್ಲೀ, ಅಡುಗೆಯವರಿಬ್ಬರು, ಖಾನ್ವಿಲ್ಕರಾದಿಯಾಗಿ ಮೂವರು ಸೇನಾ ಸಿಬ್ಬಂದಿ ಜೊತೆಗೆ ಬಂದು ಸೇರಿದ ನನ್ನ ಭಾವ ಪುತ್ತೂರಿನ ಗೌರೀಶಂಕರ, ಸೇವಕರು ೭ ಜನ – ೪೮ ಜನರ ತಂಡ ಕುದುರೆಯೊತ್ತಿದೊಡನೆ ಕುದುರೆಮುಖದ ನೆತ್ತಿಗೆ ನೆಗೆಯಲು ಸಿದ್ಧಬಂದೂಕಿಗಳಾಗಿ ೧೪ರ ರಾತ್ರಿ ಮಲಗಿದೆವು.

ಆರೋಹಣ ಪರ್ವ
ಅಧ್ಯಾಯ ಐವತ್ಮೂರು

ಬುಧವಾರ, ೧೫ನೇ ಫೆಬ್ರುವರಿ, ಶುಭ ಪ್ರಾತಃ ಕಾಲದ ೫.೩೦ ಗಂಟೆ. ಹೂಗಳು ಪರಿಮಳ ಹಾಡಿದುವು. ನಮ್ಮ ೪೮ ಮಂದಿಯ ತಂಡ ವಿಶಿಷ್ಟ ಸಾಮಗ್ರಿಗಳನ್ನೊಳಗೊಂಡು, ಪ್ರತಿಯೊಬ್ಬನೂ ಕೈಯಲ್ಲಿ ದೊಡ್ಡ ಬಡಿಗೆ ಹಿಡಿದು, ಮೇಲೇರಲು ಸಿದ್ಧವಾಗಿ ನಿಂತಿತು. ಪುನಃ ಕೂಲಂಕಷವಾಗಿ ಪರಿಶೀಲಿಸಿದ ಬಳಿಕ ದೊರೆಗಳಿಗೆ ವರದಿ ಸಲ್ಲಿಸಿದೆ. ಅವರು ಹೀಗೆಂದರು, “ನನಗೆ ಅತ್ಯಂತ ಹೆಮ್ಮೆಯ ದಿನವಿಂದು. ನಮ್ಮ ಆರೆಂಟು ತಿಂಗಳುಗಳ ಕನಸು ನನಸಾಗುತ್ತಿರುವ, ದೀರ್ಘ ಶ್ರಮ ಫಲವೀಯುವ ಸುಮುಹೂರ್ತ ಈಗ ಬಂದಿದೆ. ನಿಮ್ಮ ಸಾಹಸ ಜಯಪ್ರದವಾಗಲಿ. ನಿಮಗೆ ಮಂಗಳವಾಗಲಿ. ಹೋಗಿ ಸುಖವಾಗಿ ಮರಳಿ ಬನ್ನಿ. ನಾನಿನ್ನು ನಿಮ್ಮನ್ನು ಸ್ವಾಗತಿಸುವುದು ಬೆಂಗಳೂರಿನಲ್ಲಿಯೇ.”

೧೨ನೇ ಮೈಸೂರು ಹೊರಟಿತು.
ಜಯಜಯಕಾರ ಗಿರಿಗಹ್ವರಗಳಲ್ಲಿ ಅನುರಣಿತವಾಗುತ್ತಿದ್ದಂತೆ, ತುಪಾಕಿ, ಸಿಡಿಮದ್ದುಗಳ ಆಸ್ಫೋಟನೆ ದಿಕ್ಕುಗಳನ್ನು ಭೇದಿಸುತ್ತಿದ್ದಂತೆ ೧೨ನೇ ಮೈಸೂರು ಹೊರಟಿತು.
ತಂಗಾಳಿ ಮೃದುವಾಗಿ ತೀಡುತ್ತಿದ್ದಂತೆ, ಸ್ವಚ್ಛಾಕಾಶದಲ್ಲಿ ತೀಕ್ಷ್ಣ ನಕ್ಷತ್ರಗಳು ಮಂಗಳ ಹಾಡುತ್ತಿದ್ದಂತೆ, ಗಗನದೆಡೆಗೆ ೧೨ನೇ ಮೈಸೂರು ಹೊರಟಿತು.

ಮಧ್ಯಾಕಾಶದಲ್ಲಿ ವೃಶ್ಚಿಕ ರಾಶಿ ಪ್ರಶ್ನಾರೂಪದಲ್ಲಿ ನಿಂತಿತ್ತು. ಧನೂರಾಶಿಯ ಕಿರಿ ಚಮಚ ಮಕ್ಕಳಿಗೆ ಹಾಲೂಡಿಸುವ ಭಂಗಿಯಲ್ಲಿತ್ತು. ಕಾಡು ನಿಶ್ಶಬ್ದ. ಪೂರ್ವ ದಿಗಂತದಲ್ಲಿ ಕ್ಷಣ ಕ್ಷಣ ಷೋಡಶಿಯ ಮುಖವರ್ಣವಿನ್ಯಾಸ ನಲಿಯುತ್ತಿತ್ತು. ಈ ಸಮಯದಲ್ಲಿ ೧೨ನೇ ಮೈಸೂರು ಹೊರಟಿತು.

ದೊರೆಗಳು ಬಲುದೂರ ಬಂದು ನಮ್ಮನ್ನು ಬೀಳ್ಕೊಟ್ಟರು. ಸಾಗರೋಲ್ಲಂಘನ ಪ್ರಾರಂಭದ ಹನುಮಂತನ ಮನಸ್ಥಿತಿ ನಮ್ಮದಾಗಿತ್ತು. ಸ್ವಾಮಿ, ನಿಸಾರರು ತಳದ ಶಿಬಿರಾಧಿಪತಿಗಳಾಗಿ ನಿಂತರು. ನಿಸಾರರೆಂದರು,

ಅಲ್ಲಿ ನಾಡಿನೆತ್ತರದಲಿ
ನಕ್ಷತ್ರಗಳ ಚಿರವಿಲಾಪದಲ್ಲಿ ಸಾಹಸಗೈವ ನಿಮಗೆ
ಇದೊ ವಂದನೆ – ಅಭಿ
ವಂದನೆ.

"ಹೋಗ್ಬಿಟ್ಟು ಬನ್ನಿ ಸಾರ್! ಈ ಕಡೆ ಚಿಂತೆ ಮಾಡಲೇಬೇಡಿ. ನಿಮಗೇನು ಸಹಾಯ ಬೇಕಾದರೂ ಹೇಳಿ ಕಳಿಸಿ" ಎಂದು ಕರುಣಾರ್ದ್ರ ಹೃದಯದಿಂದ ಸ್ವಾಮಿಯವರೆಂದರು. ದೈಹಿಕ ಕಾರಣಗಳಿಂದ ಬರಲಾಗದ ಹುಡುಗರ ಮೋರೆ ನೋಡಿದಾಗ ಕಿಂದರಿ ಜೋಗಿಯ ಹಿಂದೆ ಹೋಗಲಾರದೇ ಉಳಿದುಹೋದ ಹುಡುಗನ ನೆನಪು ಬರುತ್ತಿತ್ತು. "ಏನ್ಮಾಡೋದ್ಸಾಮೀ! ಲಾರಿ ಐತೆ. ಇಲ್ಲಿ ಡೂಟಿ ನೋಡ್ಬೇಕಲ್ಲಾ. ಇಲ್ಲವಾದ್ರೆ ನಾನೂ ಬಂದ್ಬಿಡೋವೆ. ಇದೆಲ್ಲ ಏನು ಮಹಾ" ಎಂದು ಉದ್ಗಾರವೆತ್ತಿದ ಅನ್ಸಾರಿ. ಅವನು ಮಲಯಾ ಬರ್ಮ ಜಂಗಲುಗಳಲ್ಲಿ ತಿಂಗಳುಗಟ್ಟಳೆ ಅಲೆದು (ಎರಡನೇ ಮಹಾಯುದ್ಧದಲ್ಲಿ) ಇಂಡಿಯಾಕ್ಕೆ ಮರಳಿಬಂದ ದಿಟ್ಟ.

ದೊರೆಗಳ ತಂದೆಯವರ ಪರಿಸ್ಥಿತಿ ಸ್ವಲ್ಪ ಕೆಟ್ಟಿತ್ತಂತೆ. ಹಾಗಾಗಿ ಅವರು ಅದೇ ದಿನ ಬೆಂಗಳೂರಿಗೆ ಮರಳುವವರಿದ್ದರು. "ಸಾಧ್ಯವಾದರೆ ಅಶ್ವತ್ಥರನ್ನು ಕಳಿಸುತ್ತೇನೆ, ವರ್ಗ ಬೇರೆ ಇದೆಯಲ್ಲ. ಇನ್ನುಳಿದುದನ್ನೆಲ್ಲ ನೀನೇ ಸುಧಾರಿಸಬೇಕು" ಎಂದು ಮರಳಿದರು.

ನಮ್ಮ ಕುದುರೆಮುಖ ಗೂಡ್ಸ್ ಬಂಡಿಯ ಎಂಜಿನ್ ಶಿವಪ್ಪ. ಐಗಿ (last vehicle) ನಾನು, ಕಂಬಿ ಮೆಂಗಿಲ ಶೇಣವ. ಈ ಬಂಡಿ ಇರುವೆಗಳ ಸಾಲಿನಂತೆ ಆ ಕತ್ತಲೆಯಲ್ಲಿ ಕಾಡಿನ ತರಗೆಲೆಗಳ ಮೇಲೆ ಹರಿಯುತ್ತ ಸಾಗಿತ್ತು. ಅರುಣೋದಯ ಕಾಲದಲ್ಲಿ ಕಾಡು ಮಸಿಗಪ್ಪು, ಲಾಂದ್ರ ಟಾರ್ಚುಗಳ ಬೆಳಕು ಕತ್ತಲೆಯೊಡನೆ ಕಣ್ಣು ಮುಚ್ಚಾಲೆಯಾಟವಾಡುತ್ತ ಕತ್ತಲೆಯ ವೈಭವವನ್ನು ಇನ್ನೂ ಹೆಚ್ಚಗೆ ತಿಳಿಯಲು ಸಹಾಯ ಮಾಡುತ್ತಿದ್ದುವು:

ಕತ್ತಲೊಡನೆ ಪಂತವಿಲ್ಲವವಕೆ
ಅದರೊಡನಜ್ಜಿಯಾಟದ ಬಯಕೆ! – ಪುತಿನ

ದೂರದಲ್ಲಿ ಕಾಡು ಮರಗಳ ಮರೆಯಲ್ಲಿ ಬೆಟ್ಟಗಳ ಅಂಚಿನಿಂದಾಚೆಗೆ ಬಣ್ಣಗಳ ಆಂದೋಳನವೇ ನಡೆದಿತ್ತು. ಆ ವರ್ಣಪಟಲದ ಸಂಚಾರ ತೀವ್ರವಾದಂತೆ ಕತ್ತಲೆಯಾಟ ತಗ್ಗತೊಡಗಿತು. ಬೆಳ್ಳನೆ ಬೆಳಗಾಯಿತು! ನಕ್ಷತ್ರಚಿತ್ರಗಳು ಯಕ್ಷಗಾನ ಬಯಲಾಟದಲ್ಲಿ ಬಣ್ಣದ ವೇಷಧಾರಿಗಳು ರಾತ್ರಿ ಮುಗಿಯುವಾಗ ಕಾಣುವಂತೆ ತೇಜೋಹೀನವಾಗಿ ಕಂಡುವು. ಸ್ವಲ್ಪ ಹೊತ್ತಿನಲ್ಲಿಯೇ ರಂಗಸ್ಥಳದಲ್ಲೇ ಅಂತರ್ಧಾನವಾದುವು. ಮೆಂಗಿಲ ಶೇಣವ, "ಓ ಹೋ ಹೋ ಹೋಯ್" ಎಂದು ಕೇಕೆಯಿಡುತ್ತ ಹಿಂದಿನವರ ಮರುಕೂಗನ್ನು ಆಲಿಸುತ್ತ ಮುಂದೆ ಮುಂದೆ ದೊಣ್ಣೇ ಬೀಸಿ ಬೀಸಿ ನಡೆದ. ತಲೆಯ ಮೇಲೆ ಅವನಿಗೂ ಒಂದು ಹೊರೆಯಿತ್ತು. ಕಾಡಿನ ನರುಗಂಪು, ಮುಂಜಾವಿನ ಚೈತನ್ಯದ ಮಾದಕತೆ ಇವುಗಳಿಂದ ಒಂದು ಗಂಟೆಯ ನಿರಂತರ ನಡಿಗೆ ನಮಗೆ ತಿಳಿದದ್ದು ನೀರ ಬುಗ್ಗೆಯ ಸಮೀಪ ಹರಡಿ ಕುಳಿತಾಗಲೇ. ಮೆಂಗಿಲ ಶೇಣವನ ಅಳತೆಯ ಪ್ರಕಾರ ನಾವು ನಡೆದದ್ದು ಕೇವಲ ಒಂದೇ ಮೈಲು!

ಟೊಮೆಟೋ, ಬಿಸ್ಕತ್, ನೀರು ಸೇವಿಸಿ ಹೊಸ ಹುರುಪಿನಿಂದ ಮುಂದಿನ ಪ್ರಯಾಣ ತೊಡಗಿದೆವು. ಬೆಳ್ಳಂ ಬೆಳಗು ಸೂರೆಹೋಗಿತ್ತು. ಕುರುಚಲು ಗಿಡ, ಮುಳ್ಳು, ಪೊದೆ ಎಲ್ಲವನ್ನೂ ದಾಟಿ ಗೊಂಡಾರಣ್ಯದ ನಡುವೆ ದಾರಿ ಸಾಗಿತ್ತು. ಎಲ್ಲಿವರೆಗೋ ಜೀಪ್ ಹೋಗಲು ಮಾಡಿದ ಬಳಸು ದಾರಿ ಬೆಟ್ಟದ ಮೈಯನ್ನು ಆಧರಿಸಿ ಆವರಿಸಿ ಹರಿಯುತ್ತಿತ್ತು. ಆದರೆ ನಮ್ಮದು ನೇರ ಕಾಲ್ದಾರಿ. ಜೀಪ್ ದಾರಿಯ ಎರಡು ಫರ್ಲಾಂಗನ್ನು ನಾವು ನೂರು ಹೆಜ್ಜೆಗಳಲ್ಲಿ ನೇರವಾಗಿ ಹತ್ತಿ ಮುಗಿಸುತ್ತಿದ್ದೆವು. ಆದರೆ ಎಂಥ ಹೆಜ್ಜೆಗಳವು! ಸ್ವಲ್ಪ ಮುಂದಕ್ಕೆ ಬಗ್ಗಿ ಊರುಗೋಲನ್ನೂರಿ ಹೆಜ್ಜೆಗೂ ಉಸಿರಾಟಕ್ಕೂ ಲಯ ಹೊಂದಿಸಿ ನಿಧಾನವಾಗಿ ನಡೆಯಲು ಹೊರಟರೆ ಎಷ್ಟು ದೂರ ನಡೆದರೂ ಆಯಾಸವಾಗುವುದಿಲ್ಲ. ಉಸಿರು ಸೇದಿ ಮೇಲೆ ಮೇಲೆ ಬರುವುದಿಲ್ಲ. ಬೆಟ್ಟವೇರುವಾಗಲಂತೂ ಆರಂಭ ಶೂರತ್ವ ಸಲ್ಲದೇ ಸಲ್ಲದು. ಇಲ್ಲಿ ಬೇಕಾದದ್ದು ಮಿಂಚುಳ್ಳಿ ಚಿಮ್ಮಿಕೆಯಲ್ಲ, ಗಜಗಂಭೀರ ಗಮನ.

ದೈತ್ಯಾಕಾರದ ಮರಗಳೆಡೆಯಿಂದ ದೂರದ ಚಿಕ್ಕ ಚಿಕ್ಕ ದಿಬ್ಬಗಳ ಮೇಲೆ ಸೂರ್ಯ ಕುಣಿಯುತ್ತಿದ್ದುದನ್ನು ಕಂಡೆವು. ಎತ್ತರದ ಹಲವಾರು ಬೋಳು ಗುಡ್ಡೆಗಳು 'ರಸಮೂರ್ಛೆ'ಯಲ್ಲಿ ಮಲಗಿದ್ದುವು. ಸುತ್ತಲಿನ ಕಾಡು ನಡೆಯಲಿರುವ ದಾರಿ ಮತ್ತು ಏರಲಿರುವ ಎತ್ತರ ಬಹಳ ಉಂಟು ಎಂದು ಎಚ್ಚರಿಸುತ್ತಿತ್ತು. ನಮ್ಮ ಮೇಲೆಯೇ ಇದ್ದ ಶಿಖರ ನಮಗೆ ಕಾಣುತ್ತಿರಲಿಲ್ಲ. ಏಕೆಂದರೆ ನಾವು ಬೆಟ್ಟದ ಮೈ ಮೇಲಿನ ಕೊರಕಲು ಕಾಡು ಮೇಡುಗಳಲ್ಲಿ ನಮ್ಮ ತಲೆ ಕೆಡಿಸಿಕೊಂಡಿದ್ದೆವು. ಈ ಗೊಂದಲದ ಮಧ್ಯೆ ದಾರಿಯು ಇಲ್ಲ. ಆದರೆ ದಾರಿ ಮಾಡಿ ದಿಕ್ಕು ತಪ್ಪದಂತೆ ಕೊಂಡೊಯ್ಯುತ್ತಿದ್ದವ ಮೆಂಗಿಲ ಶೇಣವ. ಬೆಟ್ಟ ಏರುವಾಗ ದಿಕ್ಕು, ದಾರಿ ತಪ್ಪುವುದು ಬಲು ಸುಲಭ. ಅಸಂಖ್ಯ ಕಾಲು ದಾರಿಗಳು ಅಲ್ಲಿ ಸಂಧಿಸುತ್ತಿರುತ್ತವೆ. ಈ ತಂತೀ ಒಂದರಿಯಲ್ಲಿ ಅತ್ಯಲ್ಪ ವ್ಯತ್ಯಾಸವಾದರೂ ನಾವು ಎಲ್ಲಿಗೋ ಹೋಗಿರುತ್ತೇವೆ. ಎಷ್ಟೋ ಸಲ ಹೊರಟಲ್ಲಿಗೇ ಮರಳಿ ಬಂದು ಭೂಮಿ ಉರುಟು ಎನ್ನುವುದನ್ನು ಚೆನ್ನಾಗಿ ತಿಳಿದುಕೊಂಡಿರುತ್ತೇವೆ. ಇನ್ನೊಂದು ಗಂಟೆ ಚುರುಕಾಗಿ ನಡೆದೆವು. ಗಂಟೆ ೮ ದಾಟಿತ್ತು. ಪುನಃ ಐದು ಮಿನಿಟುಗಳ ವಿರಾಮ.

"ಈಗೆಷ್ಟು ದೂರ, ಅಜ್ಜಾ?"
"ಎರಡರಿಂದ ಎರಡೂವರೆ ಮೈಲಿನ ಒಳಗೆ, ಹ್ಞಾಂ"
"ಅಷ್ಟೇ!?"
"ಮತ್ತೆಂಥಾದ್ದು! ನೀವು ಹೀಗೆ ನಡೆದರೆ ಸಾಯಂಕಾಲ ಹೇವಳಕ್ಕೆ."
ಹತ್ತು ಮೈಲು ಸುತ್ತಿ ಹತ್ತುವಾಗ ಹೇವಳ ಗ್ರಾಮ. ಅಲ್ಲಿ ನಾವು ಮಧ್ಯಾಹ್ನದ ಊಟ ತೀರಿಸಬೇಕೆಂದು ಯೋಜನೆ. ಆದ್ರೆ ಈ ಹುಡುಗರ ನಡಿಗೆ ಬಲು ನಿಧಾನವಾಯಿತಲ್ಲ. ಆಗ ವಿರಾಮ ಸಮಯವಾಗಿದ್ದರೂ ಹುಡುಗರು ಕೂರಲಿಲ್ಲ.
"ಆಡುಪಾಂಬೇ" (ಪುನ್ನಾಗವರಾಳಿ) ರಾಗದಲ್ಲಿ –
ಕಾಡಿಗ್‌ಹೋಗುವೆವು, ವಿ–
ಶ್ವೇಶ್ವರನ ನೋಡೆ,
ಕಾಡು ಬಂತು ಕತ್ತಲೆ ಆಯಿತು
ಕಳ್ಳರು ಬಂದರು
ಅಯ್ಯೋ ಕಚಿಪಿಚಿಕಚಿಪಿಚಿ!
–ಎಂದು ಅಭಿನಯಪೂರ್ವಕವಾಗಿ ಹಾಡಿದರು, ಕುಣಿದರು. ಪಾಪ, ವಿಧವೆಯರಂತೆ. ಪುಣ್ಯಸಂಪಾದನೆಗಾಗಿ ಹೋಗುತ್ತಿದ್ದಾಗ ಹೀಗಾಗಬೇಕೆ? ಕಚಿಪಿಚಿ ಎಂದು ಎಲ್ಲರೂ ಚೆಲ್ಲಾಪಿಲ್ಲಿಯಾಗಿ ಹರಡಿ ಹೋಗುವಾಗಲಂತೂ ನಮಗೆ ಬಲು ಸಂಕಟವಾಯಿತು. ಶೇಣವನೂ ಇವರ ಜತೆ ಕುಣಿದು ಅಭಿನಯಿಸಿದ.

ಮುಂದಿನ ನಡಿಗೆ ಇನ್ನಷ್ಟು ಚುರುಕಾಗಬೇಕೆಂದು ಆದೇಶ ಕಳಿಸಿದೆ. "ಆ ಅಜ್ಜನ ಹುರುಪು ನಮಗೆ ಬರಬಾರದೇ" ಎಂದು ಮೂದಲಿಸಿದೆ. ಬೆಟ್ಟ ಏರಲು ಅಭ್ಯಾಸವಿರಬೇಕು. ದಿನ ಬೆಳಗಾದರೆ ಸೈಕಲ್, ಸಿಟಿಬಸ್, ಪೇಟೆಯ ಧೂಳು, ಹೊಗೆ ಇವುಗಳ ಮಧ್ಯೆ ಬೆಳೆಯುವ ಮಕ್ಕಳು, ಮನೆಯಲ್ಲೂ ಇಕ್ಕಟ್ಟು, ಶಾಲೆ ಕಾಲೇಜುಗಳಲ್ಲಿಯೂ ಕಿಷ್ಕಿಂದೆ, ರೇಷನ್ ಇಂಥ ವಾತಾವರಣದಿಂದ ಒಮ್ಮೆಲೇ ಮುಕ್ತರಾಗಿ ಅರಣ್ಯ ಪರ್ವತಗಳ ಹುಚ್ಚುಹೊಳೆಗೆ ಬಿದ್ದರೆ ತತ್ತರಿಸಿ ಹೋಗುತ್ತಾರೆ. ಒಂದು ಸಲ ಮುಳುಗಿ ನೀರು ಕುಡಿದ ಹೊರತು ಸಾಹಸವೆಂದರೇನೆಂದೂ ತಿಳಿಯದ ದುರ್ಬಲಿಗಳಾಗಿರುತ್ತಾರೆ. ನಡಿಗೆ ಚುರುಕಾಯಿತು. ಏರು ಕಡಿದಾಯಿತು. ಹೊತ್ತ ಸಾಮಾನಿನ ಭಾರ ಹೆಚ್ಚಾಯಿತು.

"ವೇಗ ಒಂದು ವಿಧದ ಶಕ್ತಿ ಪ್ರಕಾರವಷ್ಟೆ. ಶಕ್ತಿಗೆ ದ್ರವ್ಯರಾಶಿಯಿದೆಯಲ್ಲವೇ ಸಾರ್ ಐನ್ಸ್ಟೈನ್ ಪ್ರಕಾರ? ಆದ್ದರಿಂದ ನಮ್ಮ ನಡಿಗೆಯ ವೇಗ ಹೆಚ್ಚಾದಂತೆ ಸಾಮಾನಿನ ಭಾರ ಹೆಚ್ಚಾಗುವುದು ಈ ಕಾರಣದಿಂದಾಗಿರಬಹುದೇ?" ಎಂದು ಕಾಸ್ಮಿಕ್ ಪ್ರಶ್ನಿಸಿದ.
"ಖಂಡಿತವಾಗಿಯೂ ಅಲ್ಲ ಎರಡನೆಯ ಪ್ರಶ್ನೆಗೆ, ಮೊದಲನೆಯ ಪ್ರಶ್ನೆಗೆ ಅಷ್ಟೇ ಖಂಡಿತವಾಗಿ ಹೌದು."
"ಅಂದರೆ, ಸಾರ್?"
"ಐನ್ಸ್ಟೈನರ ವೇಗ – ಶಕ್ತಿ – ರಾಶಿ ಅರಿವಾಗುವುದು ಬೆಳಕಿನ ವೇಗ ಅಥವಾ ಅದರ ಸಮೀಪದ ವೇಗದಲ್ಲಿ ಮಾತ್ರ. ನಮಗೀಗ ಭಾರ ಹೆಚ್ಚಾದಂತೆ ಅನ್ನಿಸುವುದು, ಒಂದು, ಹೊತ್ತ ಸಾಮಾನಿನ ಒತ್ತಡ ಹೆಚ್ಚಾಗುವುದರಿಂದ ಮತ್ತು ಎರಡು, ಮನಸ್ಸಿನೊಳಗೆ ನಾವೇನೋ ಮಹಾ ಸಾಧಿಸುತ್ತಿದ್ದೇವೆ ಎಂಬ ಭ್ರಮೆ ಮೂಡುವುದರಿಂದ."

ಐನ್‌ಸ್ಟೈನೋ ನಾನ್‌ಸ್ಟೈನೋ ಭಾರದಿಂದ ಹುಡುಗರು ತೊನೆದಾಡಿದರು. ಹ್ಯಾವರ್ ಸ್ಯಾಕ್ ಕುಸಿಯಿತು. ಪಕ್ಕಕ್ಕೆ ಕಟ್ಟಿದ್ದ ಬ್ಲಾಂಕೆಟ್ ಡರಿಗಳ ಗಂಟು ಸಡಿಲವಾಗಿ ಜಾರಿದುವು. ಶ್ರೀಧರನ್, ವಾಸು ಅಡ್ಡಗಾಲಿಡುತ್ತ ಹಿಂದೆ ಹಿಂದೆ ಉಳಿದರು. ಇವರ ಜೊತೆಗೆ ನಾಗರಾಜ, ಜಗನ್ನಾಥ, ಚಂದ್ರಶೇಖರ. ಗೂಡ್ಸ್ ಬಂಡಿ ತುಂಡಾಯಿತು. ಪ್ರತಿಯೊಬ್ಬನಿಗೂ ನಿರಖಾದ ಸ್ಥಾನವನ್ನು ಮೊದಲೇ ವಿಧಿಸಿದ್ದೆವು. ಹಾಗೆ ಮಾಡದಿದ್ದರೆ ಉದ್ದವಾದ ಅಂಕುಡೊಂಕಾದ ದಾರಿಯಲ್ಲಿ ಯಾರೋ ಒಬ್ಬ ಮಧ್ಯೆ ಜಾರಿದರೆ, ಬಿದ್ದರೆ ಇಲ್ಲ ಕಣ್ಣು ತಪ್ಪಿಸಲು ನೋಡಿದರೆ ಪತ್ತೆ ಹಚ್ಚುವುದು ಸಾಧ್ಯವಿಲ್ಲ. ಈ ತರುಣರು ಹೀಗೆ ಹಿಂದೆ ಹಿಂದೆ ನಿಂತು ಅಳುಮೋರೆಯಿಂದ ಇತರರ ಮುನ್ನಡೆಗೆ ಅಡ್ಡಿ ಮಾಡಿದಾಗ ನನಗೆ ಬಂದದ್ದು ಮರುಕ ಖಂಡಿತ ಅಲ್ಲ – ಸಿಟ್ಟು.
"ಸ್ವಲ್ಪ ವಿಶ್ರಾಂತಿ ಪಡೆದು ಹಿಂದಿನಿಂದ ಬರುತ್ತೇನೆ" ಎಂದನೊಬ್ಬ.
"ನಿನ್ನೆ ಏನು ಹೇಳಿದ್ದು? ೧೨ನೇ ಮೈಸೂರಿಗೆ ವಿಶ್ರಾಂತಿ ಪದ ಗೊತ್ತಿಲ್ಲ. ನಿನಗೆ ಎರಡೇ ದಾರಿ – ಒಂದೋ ಈ ಕ್ಷಣ ಹಿಂದೆ ಹೋಗಿ ತಳದ ಶಿಬಿರದಲ್ಲಿ ವಿಶ್ರಾಂತಿ ಪಡೆ. ಇಲ್ಲ ಚುರುಕಾಗಿ ಲೈನಿನಲ್ಲಿ ನಡೆ. ಕೂಟಕ್ಕೆ ಸಾಮೂಹಿಕವಾಗಿ ದೊರೆಯದ ವಿಶ್ರಾಂತಿ ನಿನಗೆ ಪ್ರತ್ಯೇಕವಾಗಿ ಸಿಕ್ಕಲಾರದು. ನಿನ್ನ ಭಾರವನ್ನು ನೀನೇ ಹೊರತಕ್ಕದ್ದು. ನರಪೇತಲರು ಇಲ್ಲಿ ಬೇಡ."

ಆಯಾಸವೆನ್ನುವುದು ಮನಸ್ಸಿನ ಒಂದು ಸ್ಥಿತಿಯೇ ವಿನಾ ದೇಹದ್ದಲ್ಲ ಎಂದು ನಾನು ಪ್ರಾಯೋಗಿಕವಾಗಿ ಕಂಡುಕೊಂಡಿದ್ದೇನೆ. ಯುಕ್ತಾಹಾರ, ಯುಕ್ತವಿಹಾರ – ಶ್ರಮವೆಲ್ಲಿಂದ ಬರಬೇಕು! ಮನಸ್ಸು ದೇಹವಿಜ್ಞಾನಗಳನ್ನು ಅಭ್ಯಾಸ ಮಾಡಿದವರು ಒಂದು ವಿಚಾರವನ್ನು ಖಚಿತವಾಗಿ ಹೇಳಿದ್ದಾರೆ: ಒಬ್ಬ ಮನುಷ್ಯ ಸಾಮಾನ್ಯವಾಗಿ ಅವನ ಮನಸ್ಸಿನ ಮತ್ತು ದೇಹದ ಶಕ್ತಿಗಳ ಅರ್ಧದಷ್ಟನ್ನೂ ಸರಿಯಾಗಿ ಉಪಯೋಗಿಸುತ್ತಿಲ್ಲ. ಇವು ಅತ್ಯಂತ ಸೊಗಸಾದ ರಚನೆಗಳು ಎಂದು, ಗಾಣದೆತ್ತಿನ ದಾರಿಯಿಂದ ಸ್ವಲ್ಪ ಹೊರಗೆ ಅವನು ಚಲಿಸಿದರೆ ಅತ್ಯಾಯಾಸಗೊಂಡಂತೆ ಭಾವಿಸುತ್ತಾನೆ.

ಇಪ್ಪತ್ತರ ಹರೆಯದವರು ಸ್ವಯಂಸ್ಫೂರ್ತಿಯಿಂದ ಸಾಹಸ ಪ್ರದರ್ಶನಕ್ಕಾಗಿಯೇ ಸಾಕಷ್ಟು ಅಭ್ಯಾಸ ಮಾಡಿ ಬಂದ ಹುಡುಗರು ಅದೆಂಥ ಚೇತನದ ಚಿಲುಮೆಗಳಾಗಿರಬೇಡ? ಇಂಥವರಿಗೆ ವಿಶ್ರಾಂತಿಯೇ? ಈ ಹಿನ್ನೆಲೆಯಲ್ಲಿ ಆ ಎತ್ತರದಲ್ಲಿ ಕರುಣೆ ಅನುಕಂಪ ಪದಗಳಿಗೆ ಅರ್ಥ ಬೇರೆ. ಸ್ಫೂರ್ತಿ ಸಾಂಕ್ರಾಮಿಕವಲ್ಲ. ಆಯಾಸ ಹೌದು. ಆಯಾಸಗೊಂಡವರ ಪತ್ತೆ ಮತ್ತೆ ಆಗಲಿಲ್ಲ. ಅಲ್ಲಲ್ಲಿ ಏರುಬ್ಬಸ ಬಿಡುತ್ತ ಕುಳಿತದ್ದೂ ಕಾಣಲಿಲ್ಲ.

ಕಾಡಿನ ಸೆರಗು ದಾಟಿ, ಚಿಕ್ಕಪುಟ್ಟ ಗುಡ್ಡೆಗಳ ಕಲ್ಲು ರಾಶಿಗಳ ತಲೆ ತುಳಿದು ನಡಿಗೆ ಮುಂದುವರಿಯಿತು. ಅಲ್ಲೆಲ್ಲ ಆಳೆತ್ತರ ಬೆಳೆದಿದ್ದ ಹುಲ್ಲು ಕೇವಲ ಕೆಲವೇ ದಿನಗಳ ಹಿಂದೆ ಬೆಂಕಿಬಿದ್ದು ಸುಟ್ಟು ಮಸಿಯಾಗಿತ್ತು. ಆ ನಿರ್ಜನ ಪ್ರದೇಶದಲ್ಲಿ ಹುಲ್ಲು ಹುಟ್ಟುವುದೇಕೋ? ಸುಟ್ಟು ಹೋಗುವುದೇಕೋ? ದಾರಿಯಲ್ಲಿ (ದಾರಿಯಿಲ್ಲ – ನಡೆದದ್ದೇ ದಾರಿ) ಎಲ್ಲಿಯೂ ಜನವಸತಿ ಇಲ್ಲ. ಯಾವ ತರಹದ ಬೇಸಾಯವೂ ಇಲ್ಲ. ನಾಗರಿಕತೆಯ ಜಾಡ್ಯವೇ ಅಲ್ಲಿಲ್ಲ. ಒಂದು ಕೊರಕಲಿಗಾಗಿ ಸಾಗುವಾಗ 'ಈ ದಾರಿಗಾಗಿ ಬರುವವರು ಮನೆಯಲ್ಲಿ ಹೆಂಡತಿ ಮಕ್ಕಳಿಗೆ ಹೇಳಿ ಬರುವುದು ಒಳ್ಳೆಯದು. ಕ್ರೂರ ಮೃಗಗಳಿವೆ – ಎಚ್ಚರಿಕೆ!' ಎಂದು ಬಲವಾಗಿ ಕೆತ್ತಲ್ಪಟ್ಟಿತ್ತು. ಹೇಗೂ ನಾವು ದೊಡ್ಡ ಪಟಾಲಾಮ್. ಮೇಲಾಗಿ ರೈಫಲ್ ಇದೆಯಲ್ಲ. ಅಂತೂ ಆ ಬರೆಹದ ಹಿಂದೆ ಕತೆ ಅಡಗಿರಬಹುದು. ಮುಂದೆ ನಿಂತಾಗ ಶೇಣವನನ್ನು ಕೇಳಿದರಾಯಿತು ಎಂದುಕೊಂಡೆ.

೧೨ ಗಂಟೆ ದಾಟಿತು. ನಮ್ಮ ಪ್ರಯಾಣ ಕಾಲ ೬ ಗಂಟೆಯನ್ನು ಮೀರಿತ್ತು. ಬೋಳು ಗುಡ್ಡೆಯ ಮೇಲೆ ಎಲ್ಲಿಗೋ ಏನೋ ಗೊತ್ತಿಲ್ಲದೇ ನಡೆಯುತ್ತಿದ್ದೇವೆ. ಕಾಡುಗಳ ನೆರಳಿನಿಂದ ಪಾರಾಗಿ ಬಂದಿದ್ದೇವೆ. ಎದುರಿಗೆ ಗುಡ್ಡೆ ಗುಡ್ಡೆಗಳ ರಾಶಿ. ಹಿಂದೆ ಇಳಿದಿಳಿದು ಮಾಯವಾಗುವ ಕಾಡಿನ ಹಸುರು, ಕೊರಕಲಿನ ಮಾಯೆ.

"ಅಜ್ಜಾ! ದೂರವಿನ್ನೆಷ್ಟು?"

"ಓ ಇಲ್ಲಿಯೇ – ಅದು ನೋಡಿ ಗದ್ದೆ ಅಲ್ಲವೋ? ಅದರ ಆಚೆ ಬದಿ ಹೇವಳ ಮನೆ."

"ಹಾಗಾದರೆ ೧೦ ಮೈಲು ಬಂದಂತಾಯಿತೇ?"

"ಒಂದು ಅಡಿಯೂ ಕಮ್ಮಿ ಸುತರಾಂ ಇಲ್ಲ." ಮೆಂಗಿಲ ಶೇಣವನ ಖಂಡಿತ ವಾಣಿ.

"ಅಲ್ಲ, ಹಿಂದೆ ನೀವು ಹೇಳಿದ ದೂರ ಎಲ್ಲ ತಪ್ಪೇ? ಒಳ್ಳೇ ಜೋಕುಗಾರರಪ್ಪ ನೀವು!"

ಹೀಗೆ ಹುಡುಗರಿಗೆ ಹುರಿದುಂಬಿಸಿ, ನಡೆದ ದೂರವನ್ನು ಕಡಿಮೆಯೆಂದು ಹೇಳಿ ಬೆಳಗ್ಗಿನ ತಂಪಿನಲ್ಲಿ ದೂರ ದೂರ ಚುರುಕಾಗಿ ನಡೆಸಿ ದೂರ ತಿಳಿಯದಂತೆ ನಾಲ್ಕು ಸಾವಿರ ಅಡಿ ಎತ್ತರಕ್ಕೆ ತಲಪಿಸಿದ ಮೆಂಗಿಲ ಶೇಣವ. ಅಲ್ಲಿ ಕಾಫಿ ತೋಟ, ಏಲಕ್ಕಿ ಫಸಲು, ಬಾಳೆ ಮರ, ಕಿತ್ತಳೆ, ಸಾಲು ಗದ್ದೆ ಇದ್ದುವು. ಮಲೆನಾಡಿನ ಒಣ ದನಗಳ ಹಿಂಡು ಗಾಬರಿಯಿಂದ ಚಲ್ಲಾಪಿಲ್ಲಿಯಾಯಿತು. 'ಕ್ರೂರ ಮೃಗಗಳಿವೆ' ಕಂಡ ಬೆಂಗಳೂರು ಹುಡುಗರು ಹೆದರಿದರು. ನಾಡ ಕೋಣಗಳನ್ನು ಕಂಡು ಕಾಡುಕೋಣಗಳೆಂದು ನಡುಗಿದರು. ಕೆಲವರು ಸಂತೋಷಪಟ್ಟರು. ಬಾಣೆಯಿಂದ ನೀರಿಗೆ ಇಳಿದು ಗದ್ದೆಯೇರಿ ಮುಂದೆ ನಡೆದೆವು.

ತಲೆಯೆತ್ತಿ ನೋಡಿದರೆ ಆಕಾಶದೆತ್ತರದಲ್ಲಿ ಭೀಕರವಾದ ಕಲ್ಲು ಬಂಡೆಯೊಂದು ಬೆಟ್ಟದ ಸಾಲಿನಿಂದ ಹೊರಕ್ಕೆ ಚಾಚಿ ನಿಂತಿದೆ. ಅಂತ್ಯ ಅನಂತದೆಡೆಗೆ ಕೈಚಾಚಿ ನಿಂತಂತಿದೆ ಕುದುರೆಮುಖದ ಹೆಬ್ಬಂಡೆ. ಆಕಾಶದ ತೆಳು ನೀಲಿಯನ್ನು ಗಾಸಿಗೊಳಿಸಿದ ಕಗ್ಗಲೆಯಂತಿದೆ. ನೋಡ ನೋಡುತ್ತಿದ್ದಂತೆಯೇ ಅದು ಗಿರಗಿರನೆ ತಿರುಗಿ ನಮ್ಮ ಮೇಲೆ ಬೀಳುವುದೋ ಎಂಬ ಭಾವ ಮೂಡಿಸುತ್ತಿತ್ತು. ಇನ್ನೊಂದು ಗಳಿಗೆ ಅದರ ಪ್ರಬಲಾಕರ್ಷಣೆಯಿಂದ, ನಾವು ಹತ್ತಿ ರೇಕುಗಳಿಗಿಂತ ಹಗುರ ಕ್ಷುದ್ರರಾದವರು, ಅಲ್ಲಿಗೆ ನೇರ ಹಾರಿ ಸೇರಲಾರೆವೇ ಎನ್ನಿಸುತ್ತಿತ್ತು. ಎಷ್ಟು ಹತ್ತಿರ ಅಷ್ಟು ಎತ್ತರ! ತದ್ದೂರೇ ತದ್ವಂತಿಕೇ! ನರಪಿಪೀಲಿಕೆ ಹಿಮಾಲಯದ ಔನ್ನತ್ಯ ಅಳೆಯುವುದುಂಟೇ? ಎದುರಾಗಿ ನಿಂತಾಗ ನಮ್ಮ ಎಡಗಡೆಗೆ ಕುದುರೆಮುಖದ ಹೆಬ್ಬಂಡೆ ಚಾಚಿದೆ. ಅಲ್ಲಿಂದ ಹಿಂದೆ, ಅಂದರೆ ಬಲಗಡೆಗೆ ಆ ಪರ್ವತ ಸಾಲು ಕ್ರಮೇಣ ಇಳಿದಿಳಿದು ಹೋಗಿರುವುದು. ಬಂಡೆಯಿಂದ ಕೆಳಗೆ ಭೀಕರ ಪ್ರಪಾತ. ಅಲ್ಲಿಗಾಗಿ ಏರುವಂತಿಲ್ಲ. ಬಹುಶಃ ಕಂಬಳೀಹುಳು ಕ್ರಮದಿಂದ ಸಾಧ್ಯವಾದೀತು. ಹತ್ತಿರ ಹೋಗಿ ನೋಡಿ ಹೇಳಬೇಕಷ್ಟೆ. ಕುದುರೆಮುಖ ಶ್ರೇಣಿಯ ಹಿಂಬದಿಯ ಅಥವಾ ನಮಗೆ ಕಾಣದ ಆಚೆ ಬದಿಯ ಇಳಿಜಾರಿನ ತಪ್ಪಲಲ್ಲಿ ದಟ್ಟಡವಿ ಬೆಳೆದು ನಿಂತಿದೆ. ಆ ಸಹಸ್ರಾರು ಮರಗಳ ಎತ್ತರದ ಕೊಂಬೆ ರೆಂಬೆಗಳು ಒಂದಕ್ಕೊಂದು ಹೆಣೆದುಕೊಂಡಿದ್ದಂತೆ ಆ ಕಡೆಯಿಂದ ಚಾಚಿಕೊಂಡಿದ್ದುದು ಕಾಣುತ್ತಿತ್ತು. ಈ ಹಸುರಿನ ಗುಚ್ಛ ಶಿಖರದಿಂದ ಬಲಕ್ಕೆ ಶ್ರೇಣಿಯ ಗಡಿರೇಖೆಯ ಉದ್ದಕ್ಕೂ ತೊಡಿಸಿದ ಆಭರಣದಂತೆ ಇತ್ತು. ಬಂಡೆಯೇ ಕುದುರೆಯ ಮುಖ. ಅದರ ಹಿಂದಿನ ಪರ್ವತರೇಖೆ ಅದರ ಕುತ್ತಿಗೆಯ ಇಳಿಜಾರು. ಇದರ ಮೇಲೆ ಚಾಚಿದ್ದ ಹಸುರಿನ ಗುಚ್ಛಪರಂಪರೆ ಕುದುರೆ ಕತ್ತಿನ ಮೇಲಿನ ಅಯಾಲನ್ನು ನೆನಪಿಗೆ ತರುತ್ತಿತ್ತು. ಈ ಕುದುರೆಮುಖಕ್ಕೆ ಕಡಿವಾಣ ಹಾಕಲು ಸಾಧ್ಯವೇ? ಅದರ ಬೆನ್ನ ಮೇಲೇರಿ ಸವಾರಿ ಮಾಡಲು ಸಾಧ್ಯವೇ? ಯಾರು? ಪರ್ವತವನ್ನೇರುವುದು ಅದು ಅಲಿರುವುದರಿಂದ ಎಂಬ ಮಾತಿನ ಸಂಪೂರ್ಣಾರ್ಥ ನಮಗಲ್ಲಿ ಆಯಿತು.

ಕುದುರೆಮುಖ ನಮ್ಮನ್ನು ಬಾ ಬಾ ಎಂದು ಕರೆಯುತ್ತಿತ್ತು. ನಾವು ತನ್ಮಯತೆಯಿಂದ ತೇಲುತ್ತಿದ್ದೆವು ಅದರೆಡೆಗೆ. ಆಗಲೇ 'ಕಾಲಿಟ್ಟನು ಗೊಸರಿಗೆ ಕೃಷ್ಣಪ್ಪ!' "ಆಕಾಶದಲ್ಲಿ ದೃಷ್ಟಿಯಿರಲಿ, ಮೋಡಗಳ ಮೇಲೆ ಸಂಚರಿಸುತ್ತಿರು, ಆದರೆ ನೆಲವನ್ನು ಮರೆಯಬೇಡ" ಎಂದು ಅವನಿಗೂ (ಇತರರಿಗೂ) ಬುದ್ಧಿವಾದ ಹೇಳಿದರು ಕವಿ ಶಿವಪ್ಪ. ಪಾಪ, ದೊಡ್ಡಜೀವ ಕೃಷ್ಣಪ್ಪ. ಅವನನ್ನು ಜವುಗು ನೆಲದಿಂದ ಹೊರಗೆಳೆದಾಗ ಅವನ ಶೂ ಅಲ್ಲಿಯೇ ಸಮಾಧಿಯಾಗಿತ್ತು!

"ಅಲ್ಲಿ ಮಲ್ಲಿಗೆಯ ವನದಲ್ಲಿ, ಮಾಂದಳಿರ ನೆಲೆಯಲ್ಲಿ, ಕಿತ್ತಳೆಯ ಬುಡದಲ್ಲಿ, ಕುದುರೆಮುಖದ ತಳದಲ್ಲಿ" ಇದ್ದ ಬಂಗ್ಲೆ (ಹಂಚು ಹೊದಿಸಿದ ಮನೆಯೇ ಬಂಗ್ಲೆ ಎಂಬುದನ್ನು ನೆನಪಿನಲ್ಲಿಡಬೇಕು) ಮಿಸ್ಟರ್ ಸೈಮನ್ ಲೋಬೋ ಪ್ರಭು ಉರುಫ್ ಸಿಂಹ ಪುರ್ಬುಗಳದು. ಕುದುರೆಮುಖದ ಹುಲಿ ಮೆಂಗಿಲ ಶೇಣವ. ಈ ಸಿಂಹ ಹೇಗಿರಬಹುದೋ ಎಂದು ಹುಡುಗರು ವಿಸ್ಮಯಾತುರಗಳಿಂದ ನೋಡುತ್ತಿದ್ದರು. ಬಂಗ್ಲೆಯ ಕ್ರಮ ಅನಿರೀಕ್ಷಿತ. ಅದೊಂದು ಹಳೆಯ ಮನೆ, ಹಂಚು ಹಾಕಿದ್ದೇನೋ ಹೌದು. ಅದರ ಮುಂಭಾಗದಲ್ಲಿ ಸೆಗಣಿ ಸಾರಿಸಿ ಚೊಕ್ಕಟವಾಗಿದ್ದ ವಿಶಾಲ ಅಂಗಳದಲ್ಲಿ ನಾವು

ಹರಡಿ ಕುಳಿತೆವು. ಭಾರಗಳನ್ನು ಕಳಚಿದೆವು. ಬದಿಯ ಹುಲ್ಲುಮುಂಡಕ್ಕೆ ಒರಗಿ ಹಾಸಿಗೆ ಮಾಡಿಕೊಂಡವರು ಅನೇಕರು. ಸಿಗರೇಟು ಸೇದಲೇ ಬೇಕಾದವರು ಹುಲ್ಲುಮುಂಡದಾಚೆಗೆ ಮರೆಯಾದದ್ದು ಗೊತ್ತಾಯಿತು.

"ಸ್ವಲ್ಪ ದೂರ ಹೋಗಿ. ಹುಲ್ಲಿಗೆ ಬೆಂಕಿ ಹಿಡಿದುಬಿಟ್ಟೀತು ಜಾಗ್ರತೆ" ಎಂದು ಜಾಗರೂಕತೆಯ ನುಡಿ ಹೇಳುವುದೊಂದೇ ಉಳಿದಿದ್ದ ಹಾದಿ. ಹಲವಾರು ಪುಟ್ಟ ಮಕ್ಕಳು, ಎಲ್ಲರೂ ಲಂಗೋಟಿಧಾರಿಗಳು, ಮುದ್ದುಮುದ್ದಾಗಿ ಆರೋಗ್ಯಕರವಾಗಿ ಬೆಳೆದಂಥವರು ನಮ್ಮೆದುರಿನಲ್ಲಿ ನಿಂತು ಬೆರಗಾಗಿ ನೋಡುತ್ತಿದ್ದರು. ಅಷ್ಟರಲ್ಲಿ ಸಾಕ್ಷಾತ್ ಸಿಂಹ ಪುರ್ಬುಗಳು ಪ್ರತ್ಯಕ್ಷರಾದರು. ಹುಡುಗರ ನಿರೀಕ್ಷೆಯ ಹಿಮಾಲಯ ಗೋಪುರ ಶಾಂತ ಸಾಗರದ ತಳ ಸೇರಿತು! ೬೦ಕ್ಕೆ ಕಡಿಮೆ ಪ್ರಾಯವಲ್ಲದ ದೃಢಕಾಯದ ಬೇಸಾಯಗಾರ, ಕೋಮಣ(ಕೌಪೀನ)ಧಾರಿ. ತಲೆಯ ಮೇಲೆ ಮುಟ್ಟಾಳೆ.
"ನಮಸ್ಕಾರ ಸ್ವಾಮಿ" ಎಂದು ನಮ್ಮನ್ನು ಸ್ವಾಗತಿಸಿದ. ಅವನ ಕೈಯಲ್ಲಿ ಒಂದು ವರ್ಷ ಪ್ರಾಯದ ಕೈಗೂಸು ನಲಿಯುತ್ತಿತ್ತು. ಶೇಣವ ಹಿಂದಿನಿಂದ ಪುರ್ಬುವಿನ ವಂಶವೃಕ್ಷ ವಿವರಿಸಿದ – ಪುರ್ಬುವಿನ ಪ್ರಾಯ ೬೩. ಈಗ ಇರುವುದು ನಾಲ್ಕನೆಯ ಹೆಂಡತಿ, ಪ್ರಾಯ ೩೬. ಅವನಿಗೆ ಹುಟ್ಟಿದ ಮಕ್ಕಳ ಒಟ್ಟು ಸಂಖ್ಯೆ ೪೦. ಬದುಕಿ ಉಳಿದವರು ೨೮. ದೊಡ್ಡವರೆಲ್ಲರೂ ಕೆಲಸದ ಮೇಲೆ, ಮದುವೆಯಾಗಿ ಎಲ್ಲೆಲ್ಲಿಯೋ ಹೋಗಿದ್ದಾರೆ. ಮನೆಯಲ್ಲಿರುವವರು ಈಗಿನ ಹೆಂಡತಿ ಮತ್ತು ಆಕೆಯ ಎಂಟು ಮಕ್ಕಳು, ಎಂದು ಮುಂತಾಗಿ. "ಏನು ಮಾಡುವುದು ಸ್ವಾಮೀ! ಈ ಮಲೆನಾಡಿನಲ್ಲಿ ಹೆಣ್ಣುಗಳಿಗೂ ದನಗಳಿಗೂ ಬರಕತ್ತೇ ಇಲ್ಲ" ಎಂದು ಇನ್ನೊಂದು ನುಡಿಮುತ್ತು ಉದುರಿಸಿದ ಶೇಣವ.

ಪುರ್ಬು ನನಗೆ ಹಳೆಯ ಪರಿಚಿತ. ನಾನು ಹತ್ತು ವರ್ಷಗಳ ಹಿಂದಿನ ಘಟನೆಯನ್ನು ಅವನ ನೆನಪಿಗೆ ತಂದೆ. ಆಗ ಅವನೂ ನಮ್ಮೊಡನೆ ಶಿಖರಕ್ಕೆ ಬಂದಿದ್ದ. ನಮ್ಮ ಜೊತೆ ಬಂದಿದ್ದ ಸೈನ್ಯದ ಅಧಿಕಾರಿ ಕ್ಯಾಪ್ಟನ್ ದೊರೈರಾಜರೂ ಶೇಣವನೂ ಪುರ್ಬುವೂ ಮುಂದೆ ಮುಂದೆ ನಡೆದಿದ್ದರು ಬೇಟೆಯ ಆಸೆಯಿಂದ. ಕುದುರೆಮುಖದ ಬೆನ್ನನ್ನು ತಲಪಿದಾಗ, ಆ ತಿರುಗಾಸನ್ನು ಫಕ್ಕನೆ ತಿರುಗಿ ಆಚೆ ಮಗ್ಗುಲಿನ ವೈಶಾಲ್ಯವನ್ನು ಕಂಡಾಗ ಅಲ್ಲಿಯ ಹುಲ್ಲಿನ ಹೊದಿಕೆಯ ವಿಸ್ತಾರದಲ್ಲಿ ಸ್ವಚ್ಛಂದವಾಗಿ ಮೇಯುತ್ತಿದ್ದ ಕಾಟಿಗಳ ಹಿಂಡನ್ನು ನೋಡಿದೆವು. ನಮ್ಮನ್ನು ಅವರು ಅಲ್ಲಿಯೇ ಕುಳಿತಿರಲು ಸಂಜ್ಞೆ ಮೂಲಕ ವಿಧಿಸಿ ಕಾಟಿ ಹಿಂಡಿಗೆ ಕಾಣದಂತೆ ಬಳಸು ದಾರಿಯಿಂದ ಕಾಡು ಸೇರಿದರು. ಹಿಂದೆ ಹೇಳಿದ ಅಯಾಲಿನ ಕಾಡದು. ಕಾಡಿನಿಂದ ಹೊರಗೆ ದಾಟಿ ಕಾಟಿಗಳ ಹಿಂಡು ಮೇಯುತ್ತಿದ್ದ ಇಳಿಜಾರಿನ ತುತ್ತ ತುದಿ ತಲಪಿದರು. ಆ ಗಡಿಗೆರೆಯನ್ನು ತೆವಳಿ ಹರಿದು ದಾಟಿ ಒಂದು ಅನುಕೂಲ ಪ್ರದೇಶಕ್ಕೆ ಬಂದರು. ನಮಗೆ ಕುಳಿತಲ್ಲಿಂದಲೇ ಅವರ ತೆವಳು ಸರಿತ ಮತ್ತು ಕಾಟಿಗಳ ಸ್ವಚ್ಛಂದ ವಿಹಾರ ಎರಡೂ ತೋರುತ್ತಿದ್ದುವು. ಶಿಸ್ತಿನ ಬಿಗಿಯಿಲ್ಲದಿದ್ದರೆ ಆ ಗಳಿಗೆಯಲ್ಲಿ ಏನಾದರೂ ಸದ್ದು ಮಾಡಿ ಕಿರುಚಿ ಕಾಟಿಗಳನ್ನು ಓಡಿಸಿ ಬಿಡುತ್ತಿದ್ದೆ. ಆದರೆ ಬಂದವರು ಮೇಲಧಿಕಾರಿ. ಮುಂದಿನ ವಿಷ ಗಳಿಗೆಯಲ್ಲಿ ರೈಫಲ್ ಹೊಟ್ಟಿತು. ಹಿಂಡು ದಿಕ್ಕಾಪಾಲಾಗಿ ಕಂಗಾಲಾಗಿ ಚದರಿ ಹೋಯಿತು. ಇಲ್ಲ, ಕುದುರೆಮುಖದ ಶಿಖರ ಕಳಚಿ ಬಿದ್ದಂತೆ ಒಂದು ಭಾರೀ ಕಾಟಿ ಉರುಳಿ ಬಿದ್ದು ವಿಲವಿಲನೆ ಒದ್ದಾಡಿ ರಕ್ತದ ಕಾರಂಜಿ ಹಾರಿಸಿ ನಿಶ್ಚೇಷ್ಟಿತವಾಯಿತು. ಮತ್ತೊಂದು ಗುಂಡಿನ ಸದ್ದೂ ಕೇಳಿಸಿತು. ಬಹುಶಃ ಭದ್ರತೆಗಾಗಿ ಸತ್ತ ಕಾಟಿಗೇ ಪುನಃ ಹೊಡೆದುದಾಗಿರಬೇಕು. ನಾನಲ್ಲಿಗೆ ಹೋಗಲೇ ಇಲ್ಲ – ಅಂಥ ದೃಶ್ಯ ನೋಡುವುದು ನನಗೆ ಸಾಧ್ಯವಿಲ್ಲ. ಹುಡುಗರು ಓಡಿದರು. ನಮ್ಮ ಇಪ್ಪತ್ತು ಹುಡುಗರಿಗೆ ಆ ಪರ್ವತ ದೇಹವನ್ನು ಒಂದು ಮಗ್ಗುಲಿನಿಂದ ಇನ್ನೊಂದು ಮಗ್ಗುಲಿಗೆ ಮಗುಚುವುದು ಅತಿ ಪ್ರಯಾಸಕರವಾಯಿತಂತೆ. ಅದನ್ನು ಸುಲಿದು ಚರ್ಮ ಮಾಂಸಗಳನ್ನು ಪುರ್ಬು, ಶೇಣವ ಇವರ ಸಂಬಂಧಿಕರು ಒಯ್ದರು. ಕೋಡನ್ನು ಕ್ಯಾಪ್ಟನ್ನರು ತೆಗೆದುಕೊಂಡರು. ಈ ದುರ್ಘಟನೆಯನ್ನು ಬರೆಯುವಾಗ ಇಂದಿಗೂ ನನ್ನ ಲೇಖನಿ ಕುಂಟುತ್ತದೆ; ಹೃದಯವಿಕಾರವಾಗುತ್ತದೆ. ಕಾನೂನು, ನ್ಯಾಯ, ನೀತಿ ಯಾವ ದೃಷ್ಟಿಯಿಂದ ನೋಡಿದರೂ ನಾವು ಮಾಡಿದ್ದು ಘೋರ ಪಾಪ. ಭೂಮಿಯ ಮೇಲೆ ವಾಸವಾಗಿರಲು ಮನುಷ್ಯನಿಗಿರುವಷ್ಟೇ ಹಕ್ಕು ಆ ಪ್ರಾಣಿಗೂ ಇದೆ. ಅದು ನಮ್ಮ ಮೇಲೆ (ಆತ್ಮರಕ್ಷಣೆಗಾಗಿ ಮಾತ್ರ) ಏರಿ ಬಂದಿದ್ದರೆ, ಬರ್ನಾರ್ಡ್ ಶಾ ಎಂದಿರುವಂತೆ, ಅದನ್ನು ಭೀಕರ ಕ್ರೌರ್ಯ ಎನ್ನುತ್ತಿದ್ದೆವು. ಆದರೆ ನಾವದನ್ನು ಹೊಡೆದದ್ದು ಬೇಟೆ, ಆಟ, ವಿನೋದ – ತೋಳ ಕುರಿಮರಿ ನ್ಯಾಯ.

ಪುರ್ಬು ಘಟನೆಯನ್ನು ಚೆನ್ನಾಗಿ ತಿಳಿದಿದ್ದ, ಅಲ್ಲದೇ ತಿಂದಿದ್ದನಷ್ಟೆ! "ಸ್ವಾಮೀ! ಮತ್ತೆ ಯಾರೂ ಬರಲಿಲ್ಲ ಆ ರೀತಿ. ಈ ಸಲ ರೈಫಲ್ ಮಿನಿ ತಂದಿದ್ದೀರಾ?" ಆಸೆಯ ಪ್ರಶ್ನೆ.
"ತಂದಿದ್ದೇವೆ. ಆದರೆ ರಕ್ಷಣೆಗಾಗಿ ಮಾತ್ರ. ಬೇಟೆ ಖಂಡಿತ ಆಡುವುದಿಲ್ಲ."
"ನನಗೂ ಬರಲು ಸಾಧ್ಯವಿಲ್ಲ ಸ್ವಾಮೀ. ಈಗ ಮುದುಕನಾದೆ. ಆಗಾದರೆ ಆರೋಗ್ಯ ಚೆನ್ನಾಗಿತ್ತು. ಕಳೆದ ವರ್ಷ ಮಳೆಗಾಲದಲ್ಲಿ ನಾನು ಬದುಕಿ ಉಳಿದದ್ದೇ ಹೆಚ್ಚು. ನೀವು ಬಂದಾಗ ದಾರಿಯಲ್ಲಿ ಒಂದು ಎಚ್ಚರಿಕೆಯ ಮಾತು

ಬರೆದಿದ್ದ ಬಂಡೆಯನ್ನು ನೋಡಿದಿರಷ್ಟೆ. ಅಲ್ಲಿ ನಾನು ಒಬ್ಬನೇ ಬರುತ್ತಿದ್ದಾಗ ಒಂದು ಕಾಡುಕೋಣ ಫಕ್ಕನೆ ನನ್ನ ಮೇಲೆಯೇ ಏರಿ ಬರಬೇಕೇ? ನಾನು ಕೋವಿ ಹಿಡಿದಿರಲಿಲ್ಲ. ಅಲ್ಲದೇ ಅಷ್ಟು ಹತ್ತಿರದಿಂದ ಏನೂ ಮಾಡುವಂತಿರಲಿಲ್ಲ. ಏನೋ ನಿಮ್ಮನ್ನು ನೋಡಬೇಕೆಂದು ದೇವರು ಬರೆದಿದ್ದ. ಅಲ್ಲಿಯೇ ಕೂತು ಹೋದೆ. ಅದು ನನ್ನ ಮೇಳೆ ನುಗ್ಗಿ ಕೊಂಬಿನಿಂದೆತ್ತಿ ಹಳ್ಳಕ್ಕೆ ಎಸೆದುಬಿಟ್ಟಿತು. ಆದರೆ ನಾನು ಬೀಳುವಲ್ಲಿ ಹುಲ್ಲಿನ ರಾಶಿ, ಕೆಸರು, ಎಲೆ ಇದ್ದುದರಿಂದ ಮೂಳೆ ಮುರಿಯದೇ ಉಳಿದುಕೊಂಡೆ. ಬಹಳ ಕಷ್ಟ ಸ್ವಾಮೀ."
ಆದರೆ ನನ್ನ ಮನಸ್ಸು ಬೇರೆಯೇ ಮಿಡಿಯುತ್ತಿತ್ತು. "ಹೌದು ಆ ನಿರಪರಾಧಿಯ ಎಷ್ಟೊಂದು ಬಂಧು ಬಳಗದವರನ್ನು ನೀನು ಅಮಾನುಷವಾಗಿ ಕೊಂದು ತಿನ್ನಲಿಲ್ಲ? ಅದು ನಿನ್ನ ಮೇಲೆ ಸೇಡು ತೀರಿಸಲೆಂದೇ ನುಗ್ಗಿರಬೇಕು. ಆದರೂ ನಿನ್ನಷ್ಟು ಕ್ರೂರಿ ಅದಲ್ಲ, ಜೀವಸಹಿತ ಬಿಟ್ಟಿತಲ್ಲ."

ನಾವು ಕೆಳಗಿನಿಂದಲೇ ತಂದಿದ್ದ ಚಿತ್ರಾನ್ನ, ಸಿಹಿ ತಿಂಡಿ, ಷರಬತ್ತು, ಹಣ್ಣು ಎಲ್ಲವನ್ನೂ ಆ ಸುಂದರ ವಾತಾವರಣದಲ್ಲಿ ಕಬಳಿಸಿದೆವು. ಇದೇ ನಮ್ಮ ಮಧ್ಯಾಹ್ನದ ಊಟ. ಬಂಗ್ಲೆಯೊಳಗೆ ಹೋಗಿ ನಲ್ಲಿ ನೀರು ಹಿಡಿದು ತಂದ ತಿಮ್ಮಪ್ಪ ಹೇಳಿದ, "ಸರ್ ಇಲ್ಲಿ ಪೈಪ್ ವಾಟರ್ ಸಪ್ಲೈ ಉಂಟು!" "ಹೌದೌದು! ಮಂಗಳೂರಿನ ನೀರು ಸಪ್ಲೈ ಕಂಪೆನಿ ಇಲ್ಲಿವರೆಗೆ ಪೈಪು ಹಾಕಿದೆ" ಮೆಂಗಿಲ ಶೇಣವನ ತಟಕ್ಕನೆ ಉತ್ತರ. ತಿಮ್ಮಪ್ಪ ನಂಬಿದ. ಮುಂದೆ ಬೆಟ್ಟ ಏರುವಾಗಲೇ ತಿಳಿದದ್ದು; ಬೆಟ್ಟದ ಝರಿಗೆ ಪುರ್ಬು ನಳಿಗೆ ಜೋಡಿಸಿದ್ದ ಅಷ್ಟೆ.

ಊಟ ಮುಗಿದ ಮೇಲೆ ಜೊಂಪು ಹಿಡಿವ ಮೊದಲೇ ಅಲ್ಲಿಂದ ಮುಂದಕ್ಕೆ ಹೊರಟೆವು. ಪಿಂಟೋ, ಜಯರಾಮ, ರಾಮಕೃಷ್ಣ ಮೊದಲಾದವರು ಅಲ್ಲಿಯೇ ಶಿಬಿರ ಸ್ಥಾಪಿಸಿ ಮರುದಿನ ಬೆಳಗ್ಗೆ ಲಗ್ಗೆ ಹತ್ತಿದರಾಗದೇ ಎಂದು ಸೂಚಿಸಿದರು. ಸೂಚನೆಯ ಹಿನ್ನೆಲೆಯಲ್ಲಿದ್ದ ಧ್ವನಿ ಅವರಿಗೆ ವಿಶ್ರಾಂತಿ ಬೇಕೆಂಬುದು. ನಾನೆಂದೆ, "ನಮಗಿರುವ ಅವಧಿಯಲ್ಲಿ ಇಂದೇ ಅಲ್ಲಿಗೆ ಹೋಗಬೇಕು. ಹೋದಮೇಲೆ ನೀವು ಒಪ್ಪುತ್ತೀರಿ, ಈ ನಿರ್ಧಾರ ಸರಿಯಾದದ್ದು ಎಂದು."

ಎರಡು ಗಂಟೆಗೆ ಸಿಂಹ ಪುರ್ಬು ಮನೆಯಿಂದ ಗೂಟ ಕಿತ್ತೆವು. ಮುಂದಿನ ದಾರಿಯ ದೂರ ೫ ಮೈಲು, ಹತ್ತಬೇಕಾದ ಎತ್ತರ ಸುಮಾರು ೩೦೦೦ ಅಡಿ. ಕುದುರೆಮುಖ ಹತ್ತಿರ ಕಂಡರೂ ಎರಡು ಬೆಟ್ಟ ಏರಿ ಇಳಿದು ಅಲ್ಲಿಗೆ ಹೋಗಬೇಕು. ಕುದುರೆಮುಖದ ಔನ್ನತ್ಯದ ಮುಂದೆ ಅವು ಕಲ್ಲುರಾಶಿಗಳು. ಆದರೆ ನಮಗೆ ಅವೇ ದಿಗ್ಬಂಧನ. ಏರಿಕೆ ಅತಿ ದುರ್ಗಮವಾಯಿತು. ಸಾವನದುರ್ಗಕ್ಕೆ ಸಮಾನವಾದಂತೆ ಅನ್ನಿಸಿತು. ಆದರೆ ಇದು ನಡು ಹಗಲ ಕೆಂಡ ಬಂಡೆಯಲ್ಲ. ಜೊಂಡು, ಮರಳು, ಕಲ್ಲಿನ ಹರಳು ಕೂಡಿದ್ದ ರಾಶಿ. ಹೀಗಾಗಿ ಜಾರುವ ಬೀಳುವ ಭಯ ಇರಲಿಲ್ಲ. ಅದುವರೆಗೆ, "ಏರುವೆಯಾ ನಮ್ಮೆತ್ತರಕ್ಕೆ? ನಾವೇ ಎತ್ತರ" ಎಂದು ಮೆರೆಯುತ್ತಿದ್ದ ದಿಗ್ಭಿತ್ತಿಗಳು ಕ್ರಮೇಣ ಕಾಲ ಕೆಳಗೆ ಕುಸಿಯುತ್ತಿದ್ದುವು. ನಮ್ಮ ಶ್ರಮ ಸಾಹಸಗಳ ಮುಂದೆ ಅವು ಮಣಿಯುತ್ತಿದ್ದುವು. ಮೊದಲು ಅವುಗಳಿಗೆ ಹೆದರಿ ಮೇಲೆ ನೋಡುತ್ತಿದ್ದ ನಮಗೆ ಈಗ ಆತ್ಮ ವಿಶ್ವಾಸದಿಂದ, ನವಸಾಧನೆಯಿಂದ ಕೆಳಗೆ ನೋಡುವ ಧೈರ್ಯ ಬಂದಿತು. ದೂರದಿಂದ ಭೀಕರ; ಹತ್ತಿರದಿಂದ ಪ್ರಿಯಕರ. ಏರುತ್ತಿದ್ದಂತೆ ಬೆಟ್ಟದ ಮೈಯಲ್ಲಿಯೇ ಲೀನರಾದ ನಮಗೆ ಮೂಗಿಗಿಂತ ಮುಂದೆ ಕಾಣುವುದೇ ಇಲ್ಲ. ಹಿಂದೆ ಮಾತ್ರ ನೋಡಬಾರದು. ನಡೆ ಮುಂದೆ. ಶಿಖರದಿಂದ ಎತ್ತರವಾದ ಶಿಖರಕ್ಕೆ ಸಾಗಿದಾಗ ವಿಶ್ವಸಾಕ್ಷಾತ್ಕಾರ. ಇದು ಪರ್ವತದ ಸೂತ್ರ.

ಕುದುರೆಮುಖ ಆಕಾಶಕ್ಕೆ ಮಸಿ ಮೆತ್ತಿದ ಭಯಂಕರತೆ ಪಡೆಯಿತು. ನೇರವಾಗಿ ಅದನ್ನು ಲಗ್ಗೆ ಹತ್ತುವುದು ಸಾಧ್ಯ ಹಗ್ಗಗಳ ಸಹಾಯದಿಂದ. ಆದರೆ ನಮ್ಮ ಆಗಿನ ಪರಿಸ್ಥಿತಿಯಲ್ಲಿ ಅಲ್ಲ. ಅದಕ್ಕೆ ಬೇರೆಯೇ ಕಾರ್ಯಕ್ರಮ ರೂಪಿಸಿ ಪುರ್ಬು ಮನೆಯಲ್ಲಿ (ಪಿಂಟೋ ಸೂಚಿಸಿದಂತೆ) ತಂಗಬೇಕು. ಅಲ್ಲಿಂದ ಅರುಣೋದಯದಲ್ಲಿ ಹೊರಡಬೇಕು.

ನಮ್ಮ ಶಿಸ್ತಿನ ಪರಿಪಾಲನೆ ಆ ಹಿರಿತನದ ಸಾಮೀಪ್ಯದಲ್ಲಿ ಕಷ್ಟಕರವಾಯಿತು. ಯಾರೂ ಲೈನನ್ನು ಮುರಿದು ಹೋಗಬಾರದು. ಅಡ್ಡದಾರಿ ಹಿಡಿಯಬಾರದು ಎಂದು ಕಟ್ಟಾಜ್ಞೆ ವಿಧಿಸಿದ್ದರೂ ಕುದುರೆಮುಖ ಸಮೀಪವಾದಂತೆ ಹುಡುಗರ ಉತ್ಸಾಹ ಮೇರೆ ಮೀರಿತು. ವೈಯಕ್ತಿಕ ಹಿರಿಮೆ ಸಾಧಿಸುವ ಅಪೇಕ್ಷೆ ಹೆಚ್ಚಾಯಿತು. ನಾನು ಸ್ವಲ್ಪ ಸಡಿಲಗೊಳಿಸಿದೆ – ಸಾಹಸಪ್ರಿಯರು ಮುಂದೆ ಹೋದರೆ ಹೋಗಲಿ, ಆ ದಾರಿಯಲ್ಲಿ ಹೇಗೂ ಅಪಾಯವೇನೂ ಇಲ್ಲ ಎಂಬ ಧೈರ್ಯದಿಂದ. ತರುಣರಿಗೆ ಈಗ ಮುದುಕ ಮೆಂಗಿಲ ಶೇಣವ ಬಳಸು ದಾರಿಯಲ್ಲಿ ಹೋಗುತ್ತಿದ್ದಾನೆ ಎಂದೆನ್ನಿಸಿತು. ನಿಜ ಸ್ಥಿತಿಯೂ ಹಾಗೆಯೇ. ಕುದುರೆಮುಖದ ಶ್ರೇಣಿಗೆ ಬಂದ ಮೇಲೆ (ಅದು ಎಡಗಡೆಗೆ ಚಾಚಿದೆ) ಬಲಗಡೆಗಾಗಿ (ಅಂದರೆ ಬಂಡೆಯಿಂದ ದೂರ ದೂರ) ಏರುತ್ತ ಹೋಗಿ ಸ್ವಲ್ಪ ಬಳಸಾದರೂ ಕಠಿಣವಲ್ಲ. ಆದರೆ ನಮ್ಮ

ಧೀರರಿಗೆ ಎಡಗಡೆಯ ಹತ್ತಿರದ ಎತ್ತರದ ಬಂಡೆ ಹೆಚ್ಚು ಆಕರ್ಷಣೀಯವಾಯಿತು. ಅಜ್ಜ ಬಳಲಿದ್ದಾನೆ. ಭಾರ ಹೊತ್ತಿದ್ದಾನೆ, ತ್ರಾಣವಿಲ್ಲ. ಹೋದರೆ ಹೋಗಲಿ ನಾವು ಸೀದಾ ಹೋಗುತ್ತೇವೆಂದು ಹೊರಟರು ಕೆಲವರು.

ಗುಂಡಿಗೆ ಬಿದ್ದರು ಶೇಷಯ್ಯ
ಅಧ್ಯಾಯ ಐವತ್ನಾಲ್ಕು

ಕಡಿದಾದ ಬೆಟ್ಟಗಳ ನಡುವೆ ಈ ಸೀದಾ ಮಾರ್ಗಗಮನ ಎನ್ನುವುದೊಂದು ಬಿಸಿಲ್ಗುದುರೆ. ಬೆಟ್ಟದ ಮೈಯಲ್ಲಿ ಬಳಸಿ ನಡೆದು ಒಂದು ಮಗ್ಗುಲಿನಿಂದ ಇನ್ನೊಂದು ಮಗ್ಗುಲಿಗೆ ತಗ್ಗಾಗಿರುವಲ್ಲಿ ದಾಟಬೇಕೇ ವಿನಾ ಶಿಖರದಿಂದ ಶಿಖರಕ್ಕೆ ಜಿಗಿಯುವುದಲ್ಲ. ಹೀಗೆ ಶಿಖರಾಭಿಮುಖವಾಗಿಯೇ ಹೋಗುವಾತ ಬೆಟ್ಟವೇರಿ ಕಣಿವೆಯಿಳಿದು ದಾರಿ ತಪ್ಪಿ ಕಷ್ಟಪಟ್ಟು ಗುರಿ ತಲಪುವಾಗ (ತಲಪಿದರೆ) ಬಳಸು ದಾರಿಯವನಿಗಿಂತ ಹೆಚ್ಚು ಶ್ರಮ ಪಟ್ಟಿರುತ್ತಾನೆ, ಕಾಲಹರಣ ಮಾಡಿರುತ್ತಾನೆ, ಅಪಾಯ ಎದುರಿಸಿರುತ್ತಾನೆ. ಕಣಿವೆಯ ತಳದಲ್ಲಿ ನೀರಿನ ಆಸರೆಯಿರುವುದು. ಅಲ್ಲಿಗೆ ಕಾಡು ಪ್ರಾಣಿಗಳು ಖಂಡಿತ ಬರುತ್ತವೆ. ಹಾವುಗಳ ಭಯವೂ ಇದೆ. ಇಷ್ಟಾಗುವಾಗ ಸಾಯಂಕಾಲವೂ ಸಮೀಪಿಸಿದರೆ ಅವನ ಕುಂಭ ಪೂರ್ಣವಾದಂತೆಯೇ.

ಇಲ್ಲಿ ಇದಕ್ಕೊಂದು ಉದಾಹರಣೆ ಬರೆಯುವುದು ವಿಹಿತ. ಆರು ವರ್ಷಗಳ ಹಿಂದೆ, ಆಗ ನಾನು ಮಡಿಕೇರಿಯಲ್ಲಿದ್ದೆ. ಅಲ್ಲಿಂದ ರಾಜಾಸೀಟ್ ಬೆಟ್ಟದ ಸಾಲಿನ ಮೇಲೆಯೇ ನಡೆದರೆ ಸುಮಾರು ಆರು ಮೈಲು ದೂರದಲ್ಲಿ ನಿಶಾನಿಮೊಟ್ಟೆ ಎಂಬ ಸಾಕಷ್ಟು ಎತ್ತರದ ಬೆಟ್ಟದ ಕೊಡಿ ತಲಪುತ್ತೇವೆ. ಮಡಿಕೇರಿಯಿಂದ ಸುಮಾರು ೩೦೦ ಅಡಿ ಮಾತ್ರ ಎತ್ತದರದಲ್ಲಿದೆ ಅ ಶಿಖರ. ಕಾರಣ, ಮಡಿಕೇರಿಯ ಬೆಟ್ಟದ ಮೇಲಿನ ಪಟ್ಟಣ. ಸರಕಾರದ ವಿವಿಧ ಇಲಾಖೆಗಳಲ್ಲಿ ಹಿರಿಯ ಅಧಿಕಾರಿಗಳಾಗಿದ್ದ ಶ್ರೇಷ್ಠ, ಶೇಷಯ್ಯ, ಜ್ವಾಲಣ್ಣ ಮತ್ತು ಪ್ರಭಾಚಂದ್ರ ಇವರೂ ಕಾರ್ಪೊರೇಷನ್ ಬ್ಯಾಂಕ್ ಏಜಂಟ್ ಪುರಾಣಿಕ ಇವರೂ ನನ್ನ ಸ್ನೇಹಿತರಾಗಿದ್ದರು. ನಮ್ಮ ಎನ್‌ಸಿಸಿ ದಳದವರ ನಿಶಾನಿಮೊಟ್ಟೆ ಸಾಹಸವನ್ನು ಅವರಿಗೆ ವಿವರಿಸುತ್ತಿದ್ದೆ. "ನಾವೂ ಒಂದು ಸಲ ಹೋಗಬೇಕು" ಇದು ಅವರ ಆಸೆ. ಅವರೆಲ್ಲರೂ ೪೦ರ ತಪ್ಪು ಮಗ್ಗುಲಲ್ಲಿದ್ದವರು. ಒಬ್ಬರಿಗೆ ನಡೆಯಲು ಕಷ್ಟ. ಸ್ಥೂಲಗಾತ್ರ, ಇನ್ನೊಬ್ಬರಿಗೆ ಬೆಟ್ಟ ಏರುವುದು ಇಳಿಯುವುದು ಎರಡೂ ಪ್ರಯಾಸವೇ, ತ್ರಾಣವಿಲ್ಲ. ಮತ್ತೊಬ್ಬರಿಗೆ ಔನ್ನತ್ಯದ ಭಯ. ಬೆಟ್ಟದ ಮೇಲೆ ನಿಂತರೆ ಥರಥರನೆ ನಡುಗುವರು. ಶೇಷಯ್ಯ ಮಾತ್ರ ಇವಕ್ಕೆಲ್ಲ ಅಪವಾದ. ಅಷ್ಟು ಮಾತ್ರವಲ್ಲ. ಪ್ರಾಯದಲ್ಲಿ ನನಗಿಂತ ಹಿರಿಯರಾಗಿದ್ದರೂ ಅವರೊಡನೆ ಯಾವ ವಿಧವಾದ ಸ್ಪರ್ಧೆಯಲ್ಲಿಯೂ ನಾನು ಗೆಲ್ಲುತ್ತಿರಲಿಲ್ಲ. ಅವರನ್ನು ಪಾದರಸ, ವಿದ್ಯುತ್ತು ಎಂದು ಕರೆಯುತ್ತಿದ್ದೆವು. ಹೇಗೂ ಇರಲಿ, ಈ ಪಾದರಸವನ್ನೂ ಅತಿಭಾರದ ಸೀಸದ ಗಟ್ಟಿಗಳನ್ನೂ ಸ್ನೇಹದ ದಾರದಿಂದ ಪೋಣಿಸಿ ನಿಶಾನಿಮೊಟ್ಟೆಯೆಡೆಗೆ ಹೊರಟೆವು. ಸಾಧಾರಣವಾಗಿ ಮಡಿಕೇರಿಯಿಂದ ಎರಡು ಗಂಟೆಗಳ ದಾರಿ ಅದು. ಆದರೆ ಈ ಹಿರಿಯ ಕಡಿವಾಣಗಳಿಂದ ನಮಗೆ ದಾರಿ ನಾಲ್ಕು ಗಂಟೆ ತೆಗೆದುಕೊಂಡಿತು. ಇದನ್ನು ತಿಳಿದೇ ನಾವು ೧೧ ಗಂಟೆಗೆ ಮಡಿಕೇರಿಯಿಂದ ಹೊರಟಿದ್ದೆವು. ಶೇಷಯ್ಯ ಲಂಗುಲಗಾಮಿಲ್ಲದ ಕುದುರೆ. ಇನ್ನೊಬ್ಬ ಮಿತ್ರ ಪಟ್ಟು ಹಿಡಿದುನಿಂತ ಕತ್ತೆ. ಇವರ ಮಧ್ಯೆ ರಾವುತ ನಾನು. ಅಂತೂ ೩ ಗಂಟೆ ಅಪರಾಹ್ಣ ನಿಶಾನಿ ಮೊಟ್ಟೆಯ ಮೇಲೆ ಒಟ್ಟಾಗಿ ಸೇರಿದೆವು – ದಾರಿ ನನಗೆ ಮಾತ್ರ ಗೊತ್ತಿದ್ದುದರಿಂದ. ಅಲ್ಲಿಂದ ಸ್ವಲ್ಪ ಕಡಿದಾದ ಕಾಲುದಾರಿಯಲ್ಲಿ ೨೦೦೦ ಅಡಿಗಳಷ್ಟು ಆಚೆ ಮಗ್ಗುಲಿಗೆ ಇಳಿದು ತಪ್ಪಲು ಸೇರಿ ಮುಂದೆ ಸುಮಾರು ೫ ಮೈಲು ನಡೆದರೆ ಮಡಿಕೇರಿ–ಮಂಗಳೂರು ಬಸ್ ದಾರಿಯನ್ನು ಜೋಡುಪಾಲ ಎಂಬಲ್ಲಿ ತಲಪುತ್ತೇವೆ. ಅಲ್ಲಿಗೆ ಶ್ರೇಷ್ಠರ ಕಾರನ್ನು ಅವರ ಡ್ರೈವರ್ ತಂದಿರುತ್ತಾನೆ. ಅದನ್ನೇರಿ ನಾವು ಮಡಿಕೇರಿಗೆ ಮರಳುವುದು – ಇದು ಮುಂದಿನ ಯೋಜನೆ.

ನಿಶಾನಿಮೊಟ್ಟೆಯನ್ನು ಇಳಿಯಲು ತೊಡಗಿದೆವು! ದೂರದಲ್ಲಿ ಮಂಗಳೂರು ರಸ್ತೆ ಹೆಬ್ಬಾವು ಬಿದ್ದಂತೆ ಮಲಗಿದೆ. ಬಳಸುದಾರಿ ಶೇಷಯ್ಯನಿಗೆ ಇಷ್ಟವಾಗಲಿಲ್ಲ. ಪಾದರಸವನ್ನು ಕೆಣಕುವುದೇ ಶ್ರೇಷ್ಠನ ಹಿರಿಯ ಆಟ. "ಶೇಷಯ್ಯ! ಈ ಒಳದಾರಿಯನ್ನು ನೀವೇಕೆ ಶೋಧಿಸಬಾರದು?" ಅವರ ಪ್ರಶ್ನೆ.
"ಜೀಟಿ! ಮಂಗಳೂರು ದಾರಿ ಇಲ್ಲಿಯೇ, ಕಾಲಕೆಳಗೆ ಕಾಣುತ್ತಿದೆ. ಬನ್ನಿ ಷಾರ್ಟ್ ಕಟ್ ಮಾಡೋಣ" ಶೇಷಯ್ಯನೆಂದರು.

"ಬೆಟ್ಟದ ಅನುಭವ ನಿಮಗಿಲ್ಲ. ಇಲ್ಲಿ ಷಾರ್ಟ್ ಕಟ್ ಮರಣಕ್ಕೆ ಸ್ಟ್ರೇಟ್ ಕಟ್, ಅಂದರೆ ಹಾರ್ಟ್ ಫಟ್ ಆಗಬಹುದು. ಗಂಟೆಯೂ ೩ ದಾಟಿದೆ. ನನ್ನ ಹಿಂದೆಯೇ ಬನ್ನಿ!" ನಾನೆಂದೆ.
"ಜೀಟಿ ಹೇಡಿ" ಶ್ರೇಷ್ಠನ ಇನ್ನೊಂದು ಅಸ್ತ್ರ.
"ಬೇಡ ಶೇಷಯ್ಯ" ಪ್ರಭಾಚಂದ್ರ.

ಶೇಷಯ್ಯ ಸದಾ ಟಾಪ್‌ಗಿಯರ್, ಶ್ರೇಷ್ಠನ full accelerator ಜೊತೆಗೆ. ನೀವು ಬರದಿದ್ದರೆ ಬೇಡ. ನಾನು ನೋಡಿ ನಿಮಗಿಂತ ಮೊದಲು ಬಸ್ ದಾರಿ ತಲಪಿರುತ್ತೇನೆ." ಶೇಷಯ್ಯ ಧಡ ಧಡನೆ ದುಮುಕುತ್ತ ಇಳಿಯತೊಡಗಿದರು. ಈಗ ಶ್ರೇಷ್ಠನಿಗೂ ಗಾಬರಿಯಾಯಿತು.
"ಬೇಡ ಬೇಡ. ಹಿಂದೆ ಬನ್ನಿ, ಮುಂದೆಂದಾದರೂ ನೋಡೋಣ" ಎಂದು ಕೂಗಿದರು. ಎಷ್ಟು ಕೂಗಿದರೂ ಶೇಷಯ್ಯ ಹಿಂದೆ ಬಾರ, ರಾಮಬಾಣದಂತೆ.
"ನಿಮಗೇಕೆ ಇಷ್ಟು ಹೆದರಿಕೆ? ಬನ್ನಿ ನನ್ನ ಹಿಂದೆ,"ಮತ್ತೆ ಶೇಷಯ್ಯನ ಪಂಥಾಹ್ವಾನ.
"ಹೆದರಿಕೆ ಧೈರ್ಯ ಪ್ರಶ್ನೆ ಇವಲ್ಲ. ಕೂಟದ ಶಿಸ್ತಿನ ವಿಚಾರ. ನಮ್ಮ ಜೊತೆಯಲ್ಲಿರುವಾಗ ನಿಮಗೆ ಪ್ರಾಣ ಕಳೆದುಕೊಳ್ಳುವ ಅಧಿಕಾರವಿಲ್ಲ. ನೀವು ಬರುತ್ತೀರೋ ಇಲ್ಲವೋ?" ಎಂದು ತಾರಶ್ರುತಿಯಲ್ಲಿ ಅರಚಿದೆ.

ಆದರೆ ಪಾದರಸ ಓಡಲು ತೊಡಗಿದರೆ ಹಿಡಿಯಲು ಸಿಕ್ಕುವುದೇ? ಶೇಷಯ್ಯ ನಗು ನಗುತ್ತ ಇಳಿದಿಳಿದೇ ಹೋದರು. ಮುಂದಿನ ಕ್ಷಣ ನಾವೂ ಅವರೂ ಬೆಟ್ಟದ ಬೇರೆ ಬೇರೆ ಮೈಗಳಲ್ಲಿ ನಡೆಯುತ್ತಿದ್ದೆವು. ಮತ್ತೊಂದು ಹತ್ತು ಹೆಜ್ಜೆ ಮುಂದೆ ಹೋಗುವಾಗ ಅವರಿಗೂ ನಮಗೂ ಮಧ್ಯೆ ಬೆಟ್ಟದ ಉಬ್ಬು ಅಡ್ಡ ಬಂದಿತು. ಇನ್ನೊಂದು ಗಳಿಗೆ ಅವರು ನಮ್ಮ ದೃಷ್ಟಿಯಿಂದ ಮರೆಯಾದರು. ಏನು ಬಂತಪ್ಪಾ ಈ ಮಾರಾಯನಿಗೆ ಎಂದು ನಾವು ಚಿಂತೆಯಿಂದಲೇ ಮುಂದೆ ನಡೆಯುತ್ತಿದ್ದೆವು. ಅಷ್ಟರಲ್ಲಿಯೇ ಭಯಂಕರ ಚೀತ್ಕಾರ: "ನಾರಾಯಣರಾವ್, ನಾರಾ. . ." ಎಂದು ಬೆಟ್ಟದ ಯಾವುದೋ ಮೂಲೆಯಿಂದ ಕರ್ಕಶ ಧ್ವನಿ ತಿವಿದು ನಮ್ಮನ್ನು ಕದಡಿಬಿಟ್ಟಿತು. ನೀರೊಳಗೆ ಮುಳುಗಿ ಹೋಗುವವನ, ಹೆಬ್ಬಾವಿನ ಹಿಡಿತಕ್ಕೆ ಸಿಕ್ಕಿದವನ, ಹುಲಿಯಿಂದ ಅಪ್ಪಳಿಸಲ್ಪಟ್ಟವನ ಕರುಣಾಕ್ರಂದನವದು, "ಹಾ ಲಕ್ಷ್ಮಣಾ!"

ನಮಗೆ ದಿಗ್ಭ್ರಮೆಯಾಯಿತು. ನಿಶಾನಿಮೊಟ್ಟೆಯೇ ಒಡೆದಂತಾಯಿತು. "ಶೇಷಯ್ಯಾ ಶೇಷಯ್ಯಾ" ಎಂದು ತಾರ ಸ್ಥಾಯಿಯಲ್ಲಿ ಮೇಲೇರಿ ಕೆಳಗಿಳಿದು ಎಲ್ಲ ದಿಕ್ಕಿಗೆ ತಿರುಗಿ ಕಿರುಚಿದೆವು. ಕಾಡುಮೇಡುಗಳು ಕಣಿವೆ ತೆಮರುಗಳು ಮರುದನಿಗೈದವು – ಶೇಷಯ್ಯಾ. ಶೇಷಯ್ಯ ಇಲ್ಲ. ಶೇಷಯ್ಯ ಇಲ್ಲದೇ ಊರಿಗೆ ಮರಳುವುದು ಹೇಗೆ? ಇದೇನು ಅವಸ್ಥೆ ಒದಗಿತು. ಆಲೋಚನೆ ಮಾಡಲಾಗದೇ ಮಾತಾಡಲಾರದೇ ಮುಂದುವರಿಯಲಾಗದೇ ಶೂನ್ಯ ದೃಷ್ಟಿಯನ್ನು ಚೆಲ್ಲುತ್ತ ನಿಂತುಕೊಂಡೆವು. ಗಂಟೆ ೫ ಆಗಿತ್ತು. ಸೂರ್ಯ ಆಗಲೇ ದೂರದ ಬೆಟ್ಟದ ಹಿಂದೆ ಮರೆಯಾಗಿದ್ದ. ಕರಿನೆರಳು ಕರಾಳವಾಗಿ ದೌಷ್ಟ್ಯದ ಪ್ರತೀಕವಾಗಿ ಹರಡಿತ್ತು. ದಾರಿ ಇನ್ನೂ ನಾಲ್ಕು ಮೈಲಿದ್ದಿರಬಹುದು. ಮತ್ತೆ ಮುಂದಿನ ನಿರ್ಧಾರ ಕೈಗೊಂಡೆವು. ಅದರ ಪ್ರಕಾರ ನಾನೊಬ್ಬನೆ ಮುಂದೆ ಓಡಿ ಓಡಿ ಹೋಗಿ ದಾರಿ ಸೇರಬೇಕು. ಅಲ್ಲಿ ಶ್ರೇಷ್ಠನ ಕಾರಿನಲ್ಲಿ ಕುಳಿತು ಮಡಿಕೇರಿಗೆ ಹೋಗಿ ಜನ, ಲೈಟು, ಡಾಕ್ಟರರು, ಬೇಟೆಗಾರರು ಎಲ್ಲರನ್ನೂ ಕರೆತರಬೇಕು. ರಾತ್ರಿಯಿಡೀ ಆ ಭೀಕರ ಏಕಾಂತತೆಯಲ್ಲಿ ಶೇಷಯ್ಯನನ್ನು ಹುಡುಕಬೇಕು. ಉಳಿದವರು ಅಲ್ಲಿಯೇ ಒಬ್ಬರಿಗೊಬ್ಬರು ಕಾಣುವಷ್ಟು ದೂರದಲ್ಲಿ ಹರಡಿ ಕಾಲುದಾರಿಯಲ್ಲಿಯೇ ಮುಂದೆ ನಿಧಾನವಾಗಿ ಇಳಿಯುತ್ತ ಶೇಷಯ್ಯ ನಾಮಸ್ಮರಣೆ ಗಟ್ಟಿಯಾಗಿ ಮಾಡುತ್ತ ಅರಸುತ್ತ ಸಾಗಬೇಕು. ಬೆಟ್ಟದ ತಳದಲ್ಲಿ ಕುಳಿತಿರಬೇಕು – ನಾನು ಬರುವ ತನಕ. ನಾನು ಒಂದು ಮೈಲು ಓಡಿದೆ. ಓಡಿದೆನೋ ಹಾರಿದೆನೋ ಅಂತೂ ಬೆಟ್ಟದ ಬುಡಕ್ಕೆ ಬಂದಿದ್ದೆ. ಅಷ್ಟರಲ್ಲಿಯೇ ದೂರದ ಕಣಿವೆಯಿಂದ ಕೇಕೆ ಹಾಕಿ ಕರೆಯುತ್ತಿದ್ದಾರೆ ಶೇಷಯ್ಯ, "ನಾ ಫಸ್ಟು!" ಪಂಥದಲ್ಲಿ ಅವರು ಗೆದ್ದದ್ದು ನಿಜ. ಹತ್ತಿರ ಹೋಗಿ ನೋಡಿದೆ: ಮೈ ಕೈ ತೀರ ಗಾಯ, ಕೆಸರು. ಬಟ್ಟೆ ಹರಿದು ಹೋಗಿದೆ. ಆ ಗಳಿಗೆಯಲ್ಲಿ ಮೊದಲ ಭಾವ "ಎಲಾ ಪ್ರಾಣೀ" ಎನ್ನುವ ತಿರಸ್ಕಾರ. ಕೂಡಲೇ ಅಮಿತ ಸಂತೋಷ. ಈ ತುಮುಲಗಳ ನಡುವೆ ನನಗೆ ಮಾತೇ ಹೊರಡಲಿಲ್ಲ. ಅಂತೂ ಅವರು ಶೇಷಯ್ಯ ಹೌದೆಂದು ಸಮೀಪದಿಂದ ಖಚಿತವಾದ ಮೇಲೆ, "ಏನು ನಿಮ್ಮ ಕತೆ? ಬಹಳ ಹೆದರಿಸಿ ಬಿಟ್ಟಿರಪ್ಪ" ಎಂದು ನಿಟ್ಟುಸಿರು ಬಿಟ್ಟೆ. "ನಾನು ನಿಮ್ಮಿಂದ ಮುಂದೆ ಇಳಿದಂತೆ ಆ ಬೆಟ್ಟ ನನ್ನನ್ನು ಜೋರು ಜೋರಾಗಿ ನೂಕತೊಡಗಿತು. ನಡೆಯುವುದು ಕಷ್ಟವಾಗಿ ಓಡತೊಡಗಿದೆ. ಮುಂದೆ ಆಳೆರಡೆತ್ತರ ಹುಲ್ಲು ರಾಶಿಯೊಳಗೆ ಸಿಕ್ಕಿಹಾಕಿಕೊಂಡು ದಿಕ್ಕು ತಪ್ಪಿಹೋಯಿತು. ಅಂತೂ ಕೆಳಗೆ ಕೆಳಗೆಂದು ಕಾಲು ಹಾಕಿದೆ. ಒಂದೆಡೆ ಕಾಲಿಟ್ಟೆ – ಧಡೀರನೆ ಕುಸಿದು ಜಾರಿ ಪಾತಾಳಕ್ಕೆ ಬಿದ್ದೆ. ಆಗಲೇ ನಿಮ್ಮ ಹೆಸರನ್ನು ಕೂಗಿ ಕರೆದದ್ದು. ಆ ಆಳದಲ್ಲಿ ನೀರು ಕೆಸರು ಕೊಳೆತ ಎಲೆ ತುಂಬಿದ್ದುದರಿಂದಲೂ ಜಾರಿದ ಪ್ರಪಾತದ ಮೈ ಎಲ್ಲ ಹುಲ್ಲೇ ಮುಚ್ಚಿದ್ದುದರಿಂದಲೂ ನನಗೇನೂ ಅಪಾಯವಾಗಲಿಲ್ಲ. ನಾನೊಂದು ದಟ್ಟವಾದ ಕಾಡಿನ ಬುಡದಲ್ಲಿ ಬಿದ್ದಿದ್ದೆ. ಮೇಲೆ ನೋಡಿದರೆ ೩೦ ಅಡಿಯಾದರೂ

ನಾನು ಕುಸಿದಿರಬೇಕೆಂದು ತೋರಿತು. ಪೂರ್ಣ ಕತ್ತಲೆ, ದಾರಿ ಎಲ್ಲಿಯೂ ಇಲ್ಲ. ನೀರು ಯಾವ ಕಡೆ ಹರಿಯುತ್ತಿದೆ ಎಂದು ಕೈಯಿಂದ ಪರಡಿ ತಡವಿ ಪರಿಶೀಲಿಸಿದೆ. ಅದರ ಗತಿಯ ಕಡೆಗೆ ತೆವಳಿ ಹರಿದು ಗಿಡಗಳನ್ನು ಮುರಿದು ಮುಂದುವರಿದೆ. ಹೀಗೆ ಎಷ್ಟೋ ಹೊತ್ತು ಸರಿಯುವಾಗ ಕಾಡಿನಿಂದ ಹೊರಗೆ ಬಂದೆ ಮತ್ತೆ ಇಲ್ಲಿಗೆ ತಲಪಿದೆ. ಇಲ್ಲಿಯ ಕಾಲ್ದಾರಿ ಎಲ್ಲ ನೋಡಿ ನೀವಿಲ್ಲಿಗೆ ಬಂದೇ ಬರುವಿರಿ ಎಂದು ಇಲ್ಲಿಯೇ ನಿಂತೆ!"

ಕುದುರೆಮುಖದೆಡೆಗೆ ಮರಳೋಣ
ಅಧ್ಯಾಯ ಐವತ್ತೈದು

ಕುದುರೆಮುಖದ ಶಿಖರದೆಡೆಗೆ ಸೀದಾ ನಡೆಯಲು ಅಡ್ಡ ತಿರುಗಿದವನು ಕಾವೇರಿಯಪ್ಪ. ಇವನು ಕೊಡಗಿನ ಚತುರ. ನಮ್ಮ ತಂಡದ ಮೂಕ ಸದಸ್ಯ. ಇವನಾಯಿತು, ಇವನ ಕೆಲಸವಾಯಿತು. ಒಳ್ಳೆಯ ಶಿಸ್ತುಗಾರ, ದಕ್ಷ, ಸಮರ್ಥ. ಇವನನ್ನು ಹುಡುಗರು ಬ್ರಹ್ಮಗಿರಿ ಎಂದು ಸಾರ್ಥಕವಾಗಿ ಕರೆಯುತ್ತಿದ್ದರು. ಕುದುರೆಮುಖ ಇವನಿಗೆ ತವರ್ಮನೆ ಇದ್ದ ಹಾಗೆ. ಅದರ ಶ್ರೇಣಿಗೆ ಬಂದೊಡನೆ ನೇರದಾರಿ ತುಳಿದ. ಹಿಂದೆ ನೋಡಲಿಲ್ಲ. ಮೇಲೆ ನೋಡಲಿಲ್ಲ. ಹುಳು ಗೋಡೆಯ ಮೇಲೆ ಹರಿವಂತೆ ಏರತೊಡಗಿದ. ಲಕ್ಷ್ಮಿ, ಶ್ರೀಧರನ್, ಪಿಂಟೋ ಮೊದಲಾದವರು ಅವನ ಹಿಂದೆ ಹೊರಟರು. ಉಳಿದವರು ಬಲು ಹಿಂದೆ ಬಿದ್ದರು. ನಾನು ಎಲ್ಲರಿಗಿಂತಲೂ ಹಿಂದೆ ಇದ್ದರೂ ಇಡೀ ದೃಶ್ಯ ನನ್ನೆದುರು ಪ್ರಕಾಶಕ್ಕೆ ಬರುವಂತಿತ್ತು. ಸಿನಿಮಾ ಚಿತ್ರಪಟದ ಮೇಲೆ ಘಟನಾಪರಂಪರೆಗಳು ನಡೆಯುವಂತೆ. ಮೆಂಗಿಲಶೇಣವನ ಹಿಂದೆ ನಡೆದವರೂ ಸಾಕಷ್ಟು ಮಂದಿ. ಹಿಂದೆ ಇದ್ದ ನಾನು (ಪ್ರಾಯ ೪೨) ಯಾವ ದಾರಿಯಲ್ಲಿ ನಡೆಯಬೇಕು? ಸಂದಿಗ್ಧ ಪರಿಸ್ಥಿತಿ, ಪಕ್ವ ಪ್ರಾಯದ ಅನುಭವದ ದಾರಿಯೇ? ತರುಣ ಧಮನಿಯ ದಿಟ್ಟತನದ ಹಾದಿಯೇ? ಶಿಸ್ತಿನ ಪಥವೇ? ಸಾಹಸದ ನೂತನ ಮಾರ್ಗವೇ? ಇಂಥಲ್ಲೆಲ್ಲ ನಮ್ಮ ಗುರಿಯ ಸಾಧನೆ ಮುಖ್ಯ. ಗುರಿ ಎಂದರೆ ಕೊಡಿ ತಲಪುವುದು. ಆದ್ದರಿಂದ ನೇರ ದಾರಿಯೇ ಸರಿ ಎಂದು ನಾನೂ ಎಡಕ್ಕೆ ತಿರುಗಿದೆ. ಹುಡುಗರಾಗಲೇ ಶ್ರೇಣಿಯ ಅಂಚು ತಲಪಿ ಮರೆಯಾಗಿದ್ದರು. ಈಗ ಶಿಖರ ಕಾಣುತ್ತಿಲ್ಲ. ಮೇಲೆ ನೋಡಿದಷ್ಟು ಎತ್ತರಕ್ಕೆ ಕಲ್ಲು, ಮಣ್ಣು, ಜೊಂಡುಗಳ ರಾಶಿ. ಹಿಂದೆ ನೋಡುವಂತಿಲ್ಲ. ಹತ್ತಿದಷ್ಟೂ ಮುಗಿಯದು. ಒಂದುಹೆಜ್ಜೆಗೆ ಒಂದು ಚಮಚ ಬೆವರಿನಂತೆ ಹರಿದು ಮೈ ಎಲ್ಲ ಒದ್ದೆ. ದಾರಿ ತಪ್ಪಿ ಹೋಯಿತೇ? ಬೇರೆಲ್ಲಿಗಾದರೂ ಏರುತ್ತಿರುವೆನೇ? ಗಂಟೆ ೪.೩೦ ದಾಟಿತ್ತು. ಆದ್ದರಿಂದ ಅಪಾಯವೇನೂ ಇಲ್ಲ. ನಾನು ನೆಲದವರೆಗೆ ಬಗ್ಗಿ ತೆವಳುತ್ತಿದ್ದೆ. ಇದ್ದಕ್ಕಿದ್ದಂತೆ ಕುರುಡನಿಗೆ ಕಣ್ಣು ಬಂದರೆ ಆಗಬಹುದಾದಂಥ ಅನುಭವ. ಎಲ್ಲೆಲ್ಲಿಯೂ ಬೆಳಕಿನ ಕಡಲು. ವಿಶಾಲ ವಿಶ್ವ ನೋಡನೋಡುತ್ತಿದ್ದಂತೆಯೇ ತೆರೆ ತೆರೆಯುತ್ತ ವಿಸ್ತಾರವಾಗಿ ಹರಡಿ ಹೋಯಿತು. ಆ ಮೊದಲೇ ತಲಪಿದ್ದ ಹುಡುಗರು ಜಯ ಘೋಷಣೆ ಮಾಡಿದರು. ೧೨ನೇ ಮೈಸೂರು ಈಗ ಅಧಿಕೃತವಾಗಿ ಕುದುರೆಮುಖದ ಹೆಬ್ಬಂಡೆಯ ಮೇಲೆ ಜಯಭೇರಿ ಬಾರಿಸಿತು! ಆ

ಗಳಿಗೆಯಲ್ಲಿ ಭಾವಪಾರವಶ್ಯದಿಂದ ಮನಸ್ಸಿನಲ್ಲಿ ಯೋಚನೆ ಕೈದಾಯಿತು. ೬೨೫೭ ಅಡಿ ಎತ್ತರದ ಮೇಲೆ ನಾವಿದ್ದೆವು. ಆ ಮಹೌನ್ನತ್ಯ ನಮಗೆ ಮಣಿದಿತ್ತು ಎನ್ನುವುದು ದಾರ್ಷ್ಟ್ಯದ ಮಾತು. ನಾವದನ್ನು ಸಮರ್ಥ ಪ್ರಯತ್ನದಿಂದ ಸಾಧಿಸಿದ್ದೆವು. ಅಲ್ಲಿ ಮೂಡಿದ ಭಾವ ಒಂದು ವಿಧದ ಸಮಾಧಿ ಸ್ಥಿತಿ. ಅಲ್ಲಿಗೆ ಹೋಗಿ ಅದನ್ನು ಅನುಭವಿಸಬೇಕೇ ವಿನಾ ಅಲ್ಲಿಂದ ಹಿಂತಿರುಗಿದ ನಮ್ಮ ಕೆಳಗಿನ ಮಟ್ಟದಲ್ಲಿ ಕಲ್ಪನಾದಾರಿದ್ರ್ಯ ಮುಸುಕಿದಾಗಿನ ವಿವರಣೆಯಿಂದಲ್ಲ. ವಾಸ್ತವತೆಯ ಮೂಕಾಶ್ಚರ್ಯಗಳ ಪ್ರತಿಬಿಂಬ ಸಾಹಿತ್ಯವಾಗುವುದು ಸಾಧ್ಯವಿಲ್ಲ. ನಾವು ಅಲ್ಲಿ ಕುಳಿತು ಭಾವೋದ್ವೇಗದಲ್ಲಿ ಅನಂತವನ್ನು ಅಳೆಯಲು ಪ್ರಯತ್ನಿಸುತ್ತಿದ್ದೆವು. ನಮ್ಮ ದೃಗನುಭವಗಳ ಮಿತಿಯಿಂದ ಅನಂತವು ಮಿತಿಗೆ ಒಳಪಡುತ್ತಿತ್ತೇ ವಿನಾ ಅನಂತದ ಸ್ವಾಭಾವಿಕ ಗುಣದಿಂದಲ್ಲ. ನಡೆದು ಬಂದ ದಾರಿ ದೂರದ ಕಣಿವೆಯಲ್ಲಿ ನುಸುಳಿ ಮಸಳಿ ಮಾಯವಾಗಿತ್ತು. ಎರಡು ದಿವಸಗಳಾ ಹಿಂದ ನಾವು ಏರಿದ್ದ ಬಂಡೆ, ಎಷ್ಟು ದೊಡ್ಡ ಗುಂಡುಕಲ್ಲು ಬಂಡೆ ಎಂದು ನಮಗೆ ಭಾವನೆ ತರಿಸಿದ್ದ ಜಮಾಲಾಬಾದ್, ಈಗ ಪ್ರಯಾಸದಿಂದ ಕಾಣಬಹುದಾದ ಮಣ್ಣು ಹೆಂಟೆಯಾಗಿತ್ತು. ಔನ್ನತ್ಯದ ಮಹಿಮೆಯೇ ಇದು. ಸಾಹಸದಿಂದ ಅದನ್ನೇರಿ ಅದರಲ್ಲಿ ಒಂದಾದರೆ ನಾವೂ ಹಿರಿಯರಾಗುತ್ತೇವೆ. ಅಲ್ಲಿ ಮೂಡುವುದು ಸಮರ್ಪಣ ಭಾವ. ನಾವು ಇವನ್ನು ಸಾಧಿಸಿದೆವು ಎಂದು ಅನ್ನಿಸುವುದಿಲ್ಲ – ಈ ಔನ್ನತ್ಯದ ಚೇತನ ನಮ್ಮನ್ನು ಅಲ್ಲಿಗೆ ಆಕರ್ಷಿಸಿ ಬರಸೆಳೆಯಿತು ಎಂದೆನ್ನಿಸುವುದು. ದೃಷ್ಟಿದಿಗಂತ ವಿಸ್ತಾರವಾಗುವುದು.

ಮರುಕ್ಷಣ ಉಳಿದವರ ಚಿಂತೆ. ದೂರದರ್ಶಿಯಿಂದ ನೋಡಿದರೆ ಅವರ ಸುಳಿವು ಎಲ್ಲಿಯೂ ಕಾಣುವುದಿಲ್ಲ. ಮೆಂಗಿಲ ಶೇಣವ, ಅಡುಗೆಯವರು, ಸೇವಕರು, ೧೭ ಕ್ಯಾಡೆಟ್ಟುಗಳು ಮತ್ತು ಶಿವಪ್ಪ ಆ ತಂಡದಲ್ಲಿದ್ದುದರಿಂದ ನಾವೇ 'ಮೈನಾರಿಟಿ'ಯಲ್ಲಿದ್ದೆವು. ಅಲ್ಲದೇ ನಾವು ಉಳಿದುಕೊಳ್ಳಬೇಕಾದ ಪ್ರದೇಶ ಆ ಕಡೆ ಎಲ್ಲೋ ಇದೆ ಎಂದು ಹಿಂದಿನ ಅನುಭವದಿಂದ ತಿಳಿದಿತ್ತು. ನಾವು ಕುಳಿತಿದ್ದ ಬಂಡೆಯಷ್ಟೇ ಅಥವಾ ಅದಕ್ಕಿಂತ ಸ್ವಲ್ಪ ಎತ್ತರವಾದ ಇನ್ನೆರಡು ಶಿಖರಗಳು ನಮಗೆ ಸಮೀಪದಲ್ಲೇ ಇದ್ದುವು. ದಿಟ್ಟಿಸಿ ನೋಡುತ್ತಿದ್ದಂತೆಯೇ ಅವು ನಮಗಿಂತ ಎತ್ತರವೆಂಬ ಭಾವನೆ ದೃಢವಾಯಿತು. ಹಾಗಾದರೆ ನಾವು ಏರಿದ್ದು ಕೃತ್ರಿಮ ಕುದುರೆಮುಖವೇ? ಶೇಣವನ ತಂಡ ಕಾಡನ್ನು ಸುತ್ತುವರಿದು ನಮಗಿಂತ ಮೊದಲೇ ಅಲ್ಲಿಗೇ ತಲಪಿರಬಹುದೇ? ಆಚೆ ಕಡೆಯ ಮೈಯ್ಯಲ್ಲಿ ಬರುತ್ತಿರುವರೋ ಏನೋ? ನಮ್ಮ ಕಾವೇರಿಯಪ್ಪ, ಮೋಹನ ಅಲ್ಲಿಗೆ ಧಾವಿಸಿದರು. ಆದರೆ ನೂರು ಇನ್ನೂರು ಅಡಿ ಇಳಿದು ಮತ್ತೆ ಅಷ್ಟೇ ಹತ್ತಬೇಕಾದ ಪ್ರಮೇಯ. ಅವರಿಗೆ ಆ ದೂರ ತಲಪಲು ೨೦ ಮಿನಿಟು ಬೇಕಾಯಿತು. ಕಾಣಲು ಇಷ್ಟು ಹತ್ತಿರ, ನಡೆದರೆ ಅಷ್ಟು ದೂರ, ಬೆಟ್ಟಗಳ ಅವಸ್ಥೆಯೇ ಹೀಗೆ.

ಮುಂದೆ ಸ್ವಲ್ಪ ಹೊತ್ತಿನಲ್ಲಿ ನಾವು ಕುಳಿತಿದ್ದ ಬಂಡೆಯ ಶ್ರೇಣಿಯಲ್ಲಿ ದೂರದ ತಗ್ಗಿನಿಂದ ಪರ್ವತರೇಖೆಯನ್ನು ಆ ಕಡೆಯಿಂದ ಈ ಕಡೆಗೆ ದಾಟಿ ಕೆಲವರು ಹರಿಯುತ್ತಿರುವುದು ಕಂಡಿತು – ಬಿಳಿ ಚುಕ್ಕಿಗಳ ಚಲನೆ ಮಾತ್ರ ಗುರುತಿಸಿದೆವು. ದೂರದರ್ಶಿಯಿಂದ ನೋಡಿದಾಗ ಶೇಣವನನ್ನು ಕಂಡು ಧೈರ್ಯವಾಯಿತು. ಹಿಂದೆ ಹುಡುಗರೂ ಇದ್ದರು. ಅವರು ಯಾರೂ ಗಂಟು ಹೊತ್ತಿರಲಿಲ್ಲ. ಆದ್ದರಿಂದ ಆ ತಗ್ಗಿನಲ್ಲಿಯೇ ನಾವು ತಂಗಬೇಕಾದ ಪ್ರದೇಶವಿದೆ ಎಂದು ಖಾತ್ರಿಯಾಯಿತು. ನಾವು ಅವರೆಡೆಗೆ ಓಡಲು ತೊಡಗಿದೆವು. ಅಂದರೆ ಕುದುರೆ ಮುಖದ ಕತ್ತಿನಮೇಲೆ ನಿಬಿಡಾರಣ್ಯದ (ಅಯಾಲು) ಅಂಚಿನಲ್ಲಿ ಇಳಿದೆವು.

"ಹ್ಹಾ! ನಾವು ಬಂಗ್ಲೆಗೆ ಹೋಗಿ ಟೀ ಕಾಯಿಸಲು ಏರ್ಪಾಡು ಮಾಡಿ ನೀವೆಲ್ಲಿದ್ದೀರೆಂದು ಹುಡುಕಲು ಬಂದದ್ದು!" ೬೦೦೦ ಅಡಿ ಎತ್ತರದಲ್ಲಿಯೂ ಶೇಣವನಿಗೆ ಅದೇ ಹುರುಪು, ಅದೇ ಮಿಂಚು, ಅದೇ ಆತ್ಮೀಯತೆ. ಎಲ್ಲರೂ ಅಲ್ಲಿಗೆ ನಡೆದೆವು. ಶಿಖರದಿಂದ ಮುಕ್ಕಾಲು ಮೈಲು ದೂರದಲ್ಲಿ, ಸುಮಾರು ೫೦೦ ಅಡಿ ತಗ್ಗಿನಲ್ಲಿ ಬಂಗ್ಲೆಗಳ ಭಗ್ನಾವಶೇಷಗಳಿವೆ. ೨೦ನೆಯ ಶತಮಾನದ ತರುಣದಲ್ಲಿ ಮಂಗಳೂರಿನಲ್ಲಿರುತ್ತಿದ್ದ ವಿದೇಶೀ ಪಾದ್ರಿಗಳು ಬೇಸಗೆಯಲ್ಲಿ ಬಂದು ತಂಗಲು ಅಲ್ಲಿ ಬಂಗ್ಲೆಗಳನ್ನೂ ಪ್ರಾರ್ಥನೆಗಾಗಿ ಇಗರ್ಜಿಯನ್ನೂ ಕಟ್ಟಿಸಿದ್ದರು. ಮಂಗಳೂರು ಇಟ್ಟಿಗೆ, ಹಂಚು, ಮರದ ಭಾರೀ ತೊಲೆಗಳಿಂದ ಸುಭದ್ರವಾಗಿ ಅವನ್ನು ರಚಿಸಿದ್ದರಂತೆ. ನಾನು ಹತ್ತು ವರ್ಷಗಳ ಹಿಂದೆ ಹೋಗಿದ್ದಾಗ ಇಗರ್ಜಿಯ ಗೋಡೆಯ ಮೇಲೆ ಏಸುಕ್ರಿಸ್ತನ ಅವತಾರ ಸಂಬಂಧವಾದ ವಿವಿಧ ತೈಲ ಚಿತ್ರಗಳನ್ನು ನೋಡಿ ವಿಸ್ಮಿತನಾಗಿದ್ದೆ. ಅವರ ಸೌಂದರ್ಯ ದೃಷ್ಟಿ ಮತ್ತು ಸಾಹಸ ಪ್ರಿಯತೆ ನಿಜವಾಗಿಯೂ ಶ್ಲಾಘನೀಯ. ಏಕಾಂತವಾಗಿ ನಿಸರ್ಗದಲ್ಲಿ ತನ್ಮಯತೆ ಹೊಂದುವುದರಲ್ಲಿ ಮಹದಾನಂದವನ್ನು ಅವರು ಪಡೆಯುತ್ತಿದ್ದರು. ಮೆಂಗಿಲ ಶೇಣವನ ಹೇಳಿಕೆಯ ಪ್ರಕಾರ ೧೯೫೦ರಿಂದೀಚೆಗೆ ವಿದೇಶೀ ಪಾದ್ರಿಗಳು ಬರಲಿಲ್ಲ. ದೇಶೀ ಪಾದ್ರಿಗಳಿಗೆ ಇದು ಬೇಕಾಗಲಿಲ್ಲ. ಬಂಗ್ಲೆಗಳು ಹಾಳುಬಿದ್ದುವು. ಗಾಳಿ, ಮಳೆ, ಕಾಡುಬೆಂಕಿ ಎಂಬ ನೈಸರ್ಗಿಕ ವಿಘಾತಕ ಶಕ್ತಿಗಳು ಒಂದು ಕಡೆ.

ಅಪೂರ್ವಕ್ಕೆ ಬರುತ್ತಿದ್ದವರ ಸ್ವಂತ ಹಿತಸಾಧನೆಯ ನಾಶಕೃತ್ಯ ಇನ್ನೊಂದು ಕಡೆ; ಆ ಕಾಡಿನ ನಡುವೆಯೂ ಇವರಿಗೆ ಬೆಂಕಿ ಮಾಡಲು ಸಿಕ್ಕಿದ್ದು ಮರದ ತೊಲೆಗಳು. ಬೆಂಕಿ ಮಾಡಿದ್ದು ನೆಲ ಹಾಸಿನ ಮೇಲೆ. ಇವುಗಳಿಂದ ಹತಿಗೊಂಡ ಮೇಲೆ ಉಳಿದಿದ್ದೇನು? ಹಾಳುಗರೆಯುತ್ತ ಹಾಮಾಸು ಹಿಡಿದಿರುವ ತುಂಡು ಗೋಡೆಗಳು. ಚದರಿ ಬಿದ್ದಿರುವ ಇಟ್ಟಿಗೆಯ ತುಂಡುಗಳು. ಬಂಗ್ಲೆಗಳ ನೆಲವನ್ನೂ ಅಡಿಪಾಯವನ್ನೂ ಕಾಡು ಕಬಳಿಸಿವೆ. ಹೀಗಾಗಿ ಅಲ್ಲಿ ಕೂರಲು ಸಹ ಸಾಧ್ಯವಿಲ್ಲ. ಅಂಗಳದ ಅವಸ್ಥೆ ಇನ್ನೂ ಕಠಿಣ – ನೊಜೆ ಹುಲ್ಲಿನ ದೊಡ್ಡ ದೊಡ್ಡ ದಿಂಡುಗಳು ಬೆಳೆದಿದ್ದುದರಿಂದ ಅಲ್ಲಿ ಕೂರುವುದು ಅಥವಾ ಮಲಗುವುದು ಕಲ್ಲು ರಾಶಿಯ ಮೇಲೆ ಕುಳಿತಷ್ಟೇ ಸುಖ! ಆದರೂ ನಮ್ಮ ಶೇಣವನ ಪಂಗಡ ಅಲ್ಲಿಯೇ ಬಂದು ಬೀಡುಬಿಟ್ಟಿತ್ತು – ನ್ಯಾಯವೇ, ನಿರ್ಧಾರವನ್ನು ತೆಗೆದುಕೊಳ್ಳಬೇಕಾದವ ನಾನಾದ್ದರಿಂದ ತಾತ್ಕಾಲಿಕವಾಗಿ ಹೊರೆಯನ್ನು ಅಲ್ಲಿ ಇಳಿಸಿ ಅಲ್ಲಿಯೇ ಚಹಾ ಕಾಸಲು ಏರ್ಪಾಡು ಮುಂದುವರಿದಿತ್ತು. ಹರೂನ್ ಮತ್ತು ಅಡುಗೆಯವರು ಸೇರಿ ಕೆಳಗಿನ ಒಂದು ಫರ್ಲಾಂಗ್ ದೂರದ ತೊರೆಯಿಂದ ನೀರು ತರಿಸಿ ಟೀ ಮಾಡಿಟ್ಟಿದ್ದರು. ಕುಡಿಯುವಷ್ಟು ಚಹಾ, ತಿನ್ನುವಷ್ಟು ಮೈಸೂರುಪಾಕ, ಬಾದುಶಾ, ಚೌಚೌ. ಅವುಗಳ ರುಚಿ ಕುದುರೆಮುಖದ ಶಿಖರದ ಮೇಲಿನ ಪ್ರಥಮಾನುಭವದಷ್ಟೆ ಮಧುರವಾದದ್ದು. ಮುಂದಿನ ನಿರ್ಧಾರ? ಆ ಅಂಗಳದಲ್ಲಿ ನೆಲೆಯೂರುವುದು ಸಾಧ್ಯವಿಲ್ಲ. ನೀರು ತರುವುದೊಂದು ರಾಜಸೂಯವೇ. ಎಂದೇ ಎಲ್ಲಿ ನೀರಿನ ಸೆಲೆಯಿದೆಯೋ ಅಲ್ಲಿ ನಮ್ಮ ನೆಲೆವನೆ ಎಂದು ನಿಶ್ಚೈಸಿ ಅಲ್ಲಿಂದ ಗಂಟುಮೂಟೆ ಕಿತ್ತುಕೊಂಡು ಕೆಳಗಿಳಿದೆವು.

ಕುದುರೆಮುಖದ ಪರ್ಣ ಕುಟೀರ
ಅಧ್ಯಾಯ ಐವತ್ತಾರು

ನಾವೀಗ ಕುದುರೆಮುಖ ಶ್ರೇಣಿಯ ವನರಾಶಿಯ ಮಗ್ಗುಲಿನ ಇಳಿಜಾರಿನಲ್ಲಿದ್ದೇವೆ. ನಮಗೂ ಶಿಖರಕ್ಕೂ ನಡುವೆ ಗೊಂಡಾರಣ್ಯ ಬೆಳೆದಿದೆ. ಕುದುರೆಮುಖ ಆಚೆ ಮಗ್ಗುಲಲ್ಲಿ (ನಾವು ಏರಿಬಂದ ವಲಯ) ಒಂದು ಚಿಕ್ಕ ಗಿಡವೂ ಇಲ್ಲ. ಈಚೆ ಮಗ್ಗುಲಲ್ಲಿ ಗೊಂಡಾರಣ್ಯ! ಕಾರಣವಿಷ್ಟೇ – ಆಚೆ ಮಗ್ಗುಲಲ್ಲಿ ಗಾಳಿ ಬೆಂಕಿಗಳ ಹೊಡೆತ ವಿಪರೀತ. ಹಾಗಾಗಿ ಬೆಳೆಯುವ ಸಸ್ಯ ಒಂದೇ, ನೊಜೆಹುಲ್ಲು. ನಿಜ, "ಹುಲ್ಲಾಗು ಬೆಟ್ಟದಡಿ!"

ಕುರುಚಲು ಗಿಡಗಳನ್ನು ನಿವಾರಿಸಿಕೊಂಡು ಕೆಳಗೆ ಇಳಿದಂತೆ ದೊಡ್ಡದೊಂದು ಗೊಸರು ಭೂಮಿ. ಅದನ್ನಿಡೀ ನೊಜೆ ಹುಲ್ಲಿನ ದಿಂಡುಗಳು ಆಕ್ರಮಿಸಿವೆ. ಇದರ ದೂರದ ಅಂಚು ಗೊಂಡಾರಣ್ಯ. ಅಲ್ಲೇ ಒಂದು ಕಿರುತೊರೆ ಕುಪ್ಪಳಿಸಿ ದಾಟಿದೆವು. ಅದು (ನಮ್ಮ ಎಡಗಡೆಯ) ಕುದುರೆಮುಖ ಶಿಖರದಲ್ಲಿ ಹುಟ್ಟಿ ಕಾಡಿನೆಡೆಗಾಗಿ ಹರಿದುಬರುತ್ತಿದ್ದ ತೀರ್ಥ. ಅದರ ದಂಡೆಯಲ್ಲಿ ನೂರು ಜನ ಸುಖವಾಗಿ ಕೂರುವಷ್ಟು ವಿಶಾಲವಾದ ಹಾಸುಗಲ್ಲು ಹಬ್ಬಿತ್ತು. ಇದರಿಂದ ಮುಂದೆ ದಿಬ್ಬದಲ್ಲಿ ಯಾರೋ ಪುಣ್ಯಾತ್ಮರು ಹಿಂದೆ ಬಂದಿದ್ದವರು, ಕಡಿದು ಸಿದ್ಧಪಡಿಸಿದ್ದ ಮಣ್ಣಿನ ವಿಶಾಲವಾದ ಎರಡೆರಡು ವೇದಿಕೆಗಳು. ಇವನ್ನು ಆವರಿಸುವಂತೆ ಬೆಳೆದಿರುವ ಕಾಡು ಮರಗಳು! ಬಂಡೆ ಕಲ್ಲು ಮತ್ತು ಮಣ್ಣಿನ ವೇದಿಕೆಗಳ ಮೇಲೆ ಮರಗಳ ಕೊಂಬೆಗಳು ನಿಬಿಡವಾಗಿ ಹರಡಿ ನೈಸರ್ಗಿಕ ಮಾಡನ್ನು ನಿರ್ಮಿಸಿದ್ದವು. ನೀರು, ಅದರ ಪಕ್ಕದಲ್ಲಿ ಕುಳಿತು ಮಜಾ ಮಾಡಲು ಹಾಸುಗಲ್ಲು, ಅದರ ಇನ್ನೊಂದು ಬದಿಯಲ್ಲಿ ತಂಗಲು ಪರ್ಣಕುಟೀರ – ಬೇರೇನು ಬೇಕು? ಹಿಂದೆ ಬಂದವರು ಆ ವೇದಿಕೆಗಳ ಮೇಲೆ ಬೇಕಾದಷ್ಟು ನೊಜೆ ಹುಲ್ಲನ್ನು ಕೊಯ್ದು ಹಾಸಿದ್ದರು. ಹೀಗಾಗಿ ನಮಗೆಲ್ಲ ಸುಪ್ಪತ್ತಿಗೆಯ ಸೌಭಾಗ್ಯವೂ ಲಭಿಸಿತು. ನೀರಂಚಿನಲ್ಲಿ ಒಲೆ ಹೂಡಿದೆವು. ಅಲ್ಲಿಯೇ ಸಮೀಪದಲ್ಲಿ ಉಗ್ರಾಣ ಸ್ಥಾಪಿಸಿದೆವು. ಬೆಟ್ಟವನ್ನೇರುವ ಮೊದಲು ಪಟ್ಟಿಯ ಪ್ರಕಾರ ಕೊಟ್ಟಿದ್ದ ಸಾಮಗ್ರಿಗಳೆಲ್ಲವನ್ನೂ ಅದೇ ಪ್ರಕಾರ ಹಿಂದೆ ಪಡೆದು ಶೇಖರಿಸಿದೆವು. ಸಾಮೂಹಿಕವಾಗಿ ನಿರ್ವಹಿಸುವ ಯಾವ ಚಟುವಟಿಕೆಯಲ್ಲಿಯೂ ವೈಯಕ್ತಿಕವಾದ ಹೊಣೆಗಾರಿಕೆಯನ್ನು ಸ್ಪಷ್ಟವಾಗಿ ಮೊದಲೇ ವಿಧಿಸದಿದ್ದರೆ ಕಠಿಣ ಸನ್ನಿವೇಶ ಒದಗಿ ಬಂದಾಗ ಎಲ್ಲರೂ ಧರ್ಮಾರ್ಥ ವಿಪುಲ ಸೂಚನೆ ನೀಡುವವರೇ. ಎಲ್ಲರೂ ಮನಸ್ಸಿನಲ್ಲಿ ಮುಂದಾಳುವನ್ನು ಶಪಿಸುವವರೇ, ಪಟ್ಟಿಯನ್ನು ಮಾಡದೇ ಸಾಮಗ್ರಿಗಳನ್ನು ಹಾಗೆಯೇ ಕೈಗೆ ಬಂದಂತೆ ಹುಡುಗರ ಬೆನ್ನಮೇಲೆ ಹೇರಿದ್ದಿದ್ದರೆ, ಮೊದಲನೆಯದಾಗಿ ಭಾರದ ಸಮವಾದ ಹಂಚುವಿಕೆ ಆಗಿರುತ್ತಿರಲಿಲ್ಲ. ಇದರಿಂದ ಹೆಚ್ಚು ಭಾರ ಹೊರಬೇಕಾದವರಲ್ಲಿ ಅತೃಪ್ತಿ ಮೂಡಿರುತ್ತಿತ್ತು. ಎರಡನೆಯದಾಗಿ ಬಿಸ್ಕೆಟ್, ಕಿತ್ತಳೆಹಣ್ಣು, ಟೊಮೆಟೋ, ಸಿಹಿ ತಿಂಡಿಯಂಥ ಜಿಹ್ವಾಕರ್ಶಕ ವಸ್ತುಗಳನ್ನು ಹೊತ್ತವರು ಕೆಲವರಾದರೂ ತಮ್ಮ ಬಾಹ್ಯ ಭಾರವನ್ನು ಆಂತರಿಕವನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸಿದ್ದರೆ ಆಶ್ಚರ್ಯವೆನಿಸುತ್ತಿರಲಿಲ್ಲ. ಅದು ಕನಕದಾಸರಲ್ಲದವರಿಗೆ ಇರುವ ಸಹಜ ದೌರ್ಬಲ್ಯ.

ಕುದುರೆಮುಖದ ತೀರ್ಥ ಮಂಜುಗಡ್ಡೆಯಷ್ಟು ಕೋಟ. ಅತಿ ಶುಭ್ರ. ಡಾಕ್ಟರು ಮಹಾಶಯರೆಂದರು, "ಈ ನೀರಿಗೆ ಯಾವ ಬ್ಲೀಚಿಂಗ್ ಪೌಡರೂ ಬೇಡ." ನಮ್ಮ ಹೊಸ ಎಲೆವನೆ, ನೊಜೆ ಹಾಸಿಗೆ, ಬಂಡೆ ಪಕ್ಕದ ಒಲೆ ಎಲ್ಲ ಸಿದ್ಧವಾದಾಗ ಸಂಜೆ ೬ ದಾಟಿತ್ತು. ೨೦ ಪೌಂಡು ಭಾರದ 'ಸಿಂದಬಾದನ ಮುದುಕ'ನನ್ನು ಕಳೆದುಕೊಂಡ ಮತ್ತು ಬೆಟ್ಟದ ಚಿಲುಮೆಯಿಂದ ಚೇತನ ಹೀರಿದ ನಾವೆಲ್ಲರೂ ಸೂರ್ಯಾಸ್ತಮಾನ ನೋಡಲು ಶಿಖರದೆಡೆಗೆ ಧಾವಿಸಿದೆವು.

೬೨೫೭ ಅಡಿ ಎತ್ತರದ ಆ ಬಂಡೆ ಮಂಡೆಯ ಮೇಲೆ ನಾವಿದ್ದೇವೆ – ಅಂತ್ಯದ ಕರಗಳ ಅಂಚಿನಲ್ಲಿ ನಾವು ಕುಳಿತಿದ್ದೇವೆ. ಕೆಳಗಿನಿಂದ ಕಾಣುವ ಭೀಕರತೆ ಈಗ ಅದಕ್ಕಿಲ್ಲ. ನಮ್ಮ ದೃಷ್ಟಿ ಹೋಗುವವರೆಗೆ ಎಲ್ಲಿಯೂ ನಮಗಿಂತ ಎತ್ತರದ ಶಿಖರವಿಲ್ಲ. ಸಮೀಪದ ಎರಡು ಶಿಖರಗಳೂ ಈಗ ಇದಕ್ಕಿಂತ ತಗ್ಗಾಗಿಯೇ ಕಂಡುವು. ನಮ್ಮ ದೃಷ್ಟಿ ದಿಗಂತ ಆ ಔನ್ನತ್ಯದಲ್ಲಿ ಅತಿಶಯವಾಗಿ ವಿಸಾರವಯಿತು. ಕಾಡು ಗುಡ್ಡ ಹೊಳೆ ಮುಂತಾದವು ನಕ್ಷೆಯ ಮೇಲಿನ ಎಳೆಗಳು. ಶಿವಪ್ಪ ಬರೆದರು:
ಭೂಮಂಡಲದ ರಾಶಿ ಬಣ್ಣ ಬಣ್ಣಗಳ ವೈವಿಧ್ಯ
ಕರ್ತಾರನ ಕಮ್ಮಟ

ದೃಷ್ಟಿ ದೂರಸಾಗಿದಂತೆ ಭೂಮಿ ಸಾಗರವನ್ನು ಸ್ವಾಗತಿಸಿ ಮುದ್ದಿಸುವ ಮಹಾವೃತ್ತ ಕಾಣಿಸಿತು. ಅದರಾಚೆ ನೀರು, ಕಡು ನೀಲಿಯನ್ನು ಮೆತ್ತಿದಂತೆ, ಅದರ ಮೇಲೆ ನೂರೆನೂರೆಯಾಗಿ ಪ್ರತಿಬಿಂಬಿಸುವ ತೆರೆ ಅದು ನೀರಿನ ರಾಶಿಯೆಂದು ತಿಳಿಸುವುದು. ಮತ್ತು ಮುಂದುವರಿದರೆ ಈ ಕಡುನೀಲಿ ಆಕಾಶದ ತೆಳು ನೀಲಿಯನ್ನು ಸಂಧಿಸುವ ಇನ್ನೊಂದು ಮಹಾವೃತ್ತ. ಅದರಿಂದಾಚೆಗೆ ಏನುಂಟೋ ಕುದುರೆಮುಖದಿಂದ ಕಾಣುವುದಿಲ್ಲ. ಮೇಲೆ ಗೋಳಾಕಾರದ ತಿಳಿ ನೀಲಿ ಬಣ್ಣದ ಬಾನು – ಕೆಳಗೆ ನರಪೇತಲನಾದ ನಾನು!

'ಗಗನವನು ನೋಡು ಮೈ ನೀಲಿಗಟ್ಟುವವರೆಗೆ' ಎಷ್ಟೊಂದು ಸಾರ್ಥಕ ನುಡಿ. ಅಂಥ ನೀಲ ಪರದೆಗೆ ಅಂಟಿಸಿದ ಕೆಂಪು ತಗಡು ಸೂರ್ಯ. ಸೂರ್ಯ ರಶ್ಮಿ ಈಗ ಕಣ್ಣು ಕುಕ್ಕುವುದಿಲ್ಲ. ಸೂರ್ಯಬಿಂಬ ಅದರ ಬದಿಗಳಲ್ಲಿ ಉದ್ದುದ್ದವಾಗಿ 'ದೇವರ ಪೆಪ್ಪರ್ ಮಿಂಟ್'ನಂತೆ ಕಾಣುವುದು ಸಹಜ. ತೆಳು ನೀಲಿ ತನ್ನ ದಿನದ ಗಳಿಕೆಯ ಕಾಣಿಕೆಯಾಗಿ ಕಡು ನೀಲಿಗೆ ನೀಡುವ ಹೊಂಬಟ್ಟಲು ಸೂರ್ಯ. ಚಿನ್ನದ ಡಾಲರ್ ನಾಳಿನ ತೂತಿಗೆ ಜಾರುತಿದೆ ಎಂದನಂತೆ ನವ್ಯ ಕವಿ! ಸೂರ್ಯನ ಪ್ರತಿಬಿಂಬ ಸಮುದ್ರದಲ್ಲಿ ಕಾಣಲಿಲ್ಲ. ಆದರೆ ಸಮುದ್ರದ ಗೆರೆ ಸೂರ್ಯ ಬಿಂಬವನ್ನು ಕ್ರಮೇಣ ಸೆಳೆಯಿತು. ಹೋಗಿಯೇ ಬಿಟ್ಟಿತು. ಆ ಕೊನೆಯ ಚುಕ್ಕಿಯೂ ಇನ್ನಿಲ್ಲ. 'ಕುರುಕುಲಾರ್ಕನುಮರ್ಕನುಮಸ್ತಮಿಸಿದಂ' ಎಂದು ಹೇಳಿದ ಮಹಾಕವಿಯ ಉಪಮೆ ಎಷ್ಟೊಂದು ಉಚಿತ. ಆಗ ಸಾಯಂಕಾಲ ಮುಗಿಯಿತು.
ಇಂತಹ ಸುಂದರ ಸಾಯಂಕಾಲದಿ
ಜೀವಿಸುವುದಕಿಂತಲು ಬೇರೆಯ ಗುರಿ ಜೀವಕೆ ಬೇಕಿಲ್ಲ –ಕುವೆಂಪು ಕ್ಷಮೆ ಕೋರಿ

ಸಂಜೆಯಾಯಿತು:
ಒಂದದ ಪಗಲಿರುಳೆರಡರ
ಸಂದುಗಳು ವರುಣಶಿಲ್ಪಿ ರಕ್ತಾಂಬರದಿಂ
ಸಂದಿಸಿ ಪೊಲ್ದವೊಲೆಸೆದುದು
ಮಂದೈಸಿದ ಸಂಜೆಗೆಂಪು ಪಡುವಣ ದೆಸೆಯೊಳ್ –ರನ್ನ
ಪಡುವಣ ತೆರೆಯಲ್ಲಿ ಶುಕ್ರ, ಬುಧ, ಶನಿ ಒಟ್ಟಾಗಿ ಶಾಂತಿ ಬೀರಿ ನಕ್ಕವು. ಮಹಾವ್ಯಾಧ, ಮಹಾಶ್ವಾನಗಳೊಡಗೂಡಿ ವೃಷಭವನ್ನು ನೀರಿನೆಡೆಗೆ ಅಟ್ಟುವ ಚಿರಂತನ ನಾಟಕ ಆಗ ಪ್ರದರ್ಶಿತವಾಗತೊಡಗಿತು. ಡಯಾನಾ ದೇವಿ (ಚಂದ್ರ)

ತನ್ನ ಪ್ರೇಮಿ ಮಹಾವ್ಯಾಧನ ಸಮಾಗಮಕ್ಕಾಗಿ ಮಂದಹಾಸದ ಪ್ರಭೆಯನ್ನು ಸೂಸಿ ಬರುತ್ತಿದ್ದ ಇನ್ನೊಂದು ನಾಟಕವೂ ಸಿದ್ಧವಾಗುತ್ತಿತ್ತು. ಮಿಥುನ ರಾಶಿಯ ಹೊಸ್ತಿಲಲ್ಲಿ ನಿಂತಿದ್ದ ಬೆಳಕಿನ ಉಂಡೆ ಗುರು ಇನ್ನೊಂದು ಅದ್ಭುತ ದೃಶ್ಯ.

ರಜನಿಯಲಿ ಝುಗಝುಗಿಸುತಿರುವ ನಕ್ಷತ್ರಗಳು
ಸಪ್ತರ್ಷಿಮಂಡಲವು, ವ್ಯಾಧ, ಕೃತ್ತಿಕೆ, ರೋಹಿಣಿ,
ಕ್ಷೀರ ಪಥ ಗುರು ಶುಕ್ರ ಇಲ್ಲಿದೆ ನಭೋಮಂಡಲ
ಇಲ್ಲಿ ನೆರೆದಿಹುದಯ್ಯ ನಕ್ಷತ್ರದಕ್ಷೋಹಿಣಿ —ವಿ. ಕೃ. ಗೋಕಾಕ

ಉತ್ತರದೆಡೆಗೆ ತಿರುಗಿದರೆ ಅಲ್ಲೊಂದು ಭರತನಾಟ್ಯದ ವಿನ್ಯಾಸವೇ ಪ್ರದರ್ಶಿತವಾಗುತ್ತಿತ್ತು. ಬಲಗಡೆ ಮೂಡುತ್ತಿರುವ ಸಪ್ತರ್ಷಿಮಂಡಲ, ಎಡಗಡೆ ಕಂತುತ್ತಿರುವ ಕುಂತೀ – ಇವೆರಡರ ನಡುವೆ ಇರುವ ಶಾಶ್ವತ ಧ್ರುವ ನಕ್ಷತ್ರಕ್ಕೆ ಚಾಮರ ಬೀಸುವ ಭಂಗಿಯಲ್ಲಿ ನಿಂತಿದ್ದುವು. ಒಂದೊಂದು ಮನೋಹರ ದೃಶ್ಯ ನೋಡಲೂ ವ್ಯಕ್ತಿಯ ಆಯುರ್ಮಾನ ಸಾಲದು. ಆಕಾಶದಿಂದ ಭೂಮಿಗೆ ಇಳಿದರೆ ಅಲ್ಲಿ ಇನ್ನೊಂದು ವಿಧದ ಬೆರಗು ಸಿದ್ಧವಾದಂತ್ತಿತ್ತು. ನಮಗಿಂತ ಕೆಳಮಟ್ಟಗಳಲ್ಲಿ ದೂರ ದೂರದ ಬೆಟ್ಟದ ಸಾಲುಗಳಿಗೆ ಕಾಡು ಬೆಂಕಿ ಬಿದ್ದಿತ್ತು. ಅವುಗಳ ಮೈಮೇಲೆ ವಿಪುಲವಾಗಿ ಬೆಳೆದಿದ್ದ ಹುಲ್ಲಿನ ಬಣಬೆಗಳು ಚಿಟಿಮಿಟಿ ಉರಿದು ಭೀಕರ ಕೆನ್ನಾಲಗೆ ಚಾಚಿದ್ದುವು. ಆ ಕತ್ತಲೆಯಲ್ಲಿಯೂ ಕರಾಳ ಹೊಗೆಯನ್ನು ಆಕಾಶದೆಡೆಗೆ ಕಾರುತ್ತಿದ್ದುದು ಕಾಣುತ್ತಿತ್ತು. ಅಲ್ಲಿ ಪ್ರವಹಿಸುತ್ತಿದ್ದ ಬೆಳಕು ನವರಾತ್ರಿಯ ಮೈಸೂರರಮನೆಯ ವೈಭವಕ್ಕಿಂತ ಮಿಗಿಲು. ಕನ್ನಂಬಾಡಿಯ ಬೆಳಕಿನ ಹೊಳೆ ಇದರ ಮುಂದೆ ಸೂರ್ಯನ ಮುಂದಿನ ಸೊಡರು. 'ಸರಿಯೇ ಸೂರ್ಯಗೆ ಕೋಟಿ ಮಿಂಚುಂಬುಳುಗಳ್?' ಇದು ದೇವರ ದೀಪಾವಳಿ ಕಾಣೋ. ಆ ದೃಶ್ಯ ರುದ್ರ ಮನೋಹರ. ಒಂದು ಕಡೆ ಬೆಂಕಿಯ ಗೆರೆ ಪರ್ವತರಾಜನಿಗೆ ಚಿನ್ನದ ಹಾರ ತೊಡಿಸಿದಂತೆ. ಇನ್ನೊಂದು ಕಡೆ ಪರ್ವತದ ಸುಪ್ತ ಪ್ರೇಮ ಹೃದಯಾಕಾರದಲ್ಲಿ ವ್ಯಕ್ತವಾಗಿತ್ತು. ಮತ್ತೊಂದು ಕಡೆ ಪಲ್ಲಕ್ಕಿಯ ಕಮಾನಿನಂತೆ. ಬೇರೊಂದು ಕಡೆ ದಕ್ಷಿಣ ಭಾರತದ ಸುವರ್ಣ ರೇಖಾಚಿತ್ರ! ಉಳಿದ ಕಡೆ ಆಕಾರರಹಿತ ಆದರೂ ಸಾಕಾರ. ಬೆಂಕಿಯ ನಾಲಗೆ ಬೆಟ್ಟಗಳನ್ನು ನೆಕ್ಕುತ್ತಿತ್ತು. ನಿಜ, ಸಿರಿವಂತರೂ ಬಡವರೂ ಬೀಗವಿಕ್ಕಿರುವ ಎರಡು ಸಂದೂಕಗಳು, ಒಂದರ ಕೀಲಿ ಇನ್ನೊಂದರೊಳಗೆ.

ಎಂಟು ಗಂಟೆಗೆ ನಾವು ಆಶ್ರಮಕ್ಕೆ ಮರಳಿದೆವು. ಪಾಯಸ, ಚಿತ್ರಾನ್ನ, ಕೇಸರಿಬಾತ್, ತಿಳಿಸಾರು, ಸಾಂಬಾರು, ಅನ್ನ, ಚಪಾತಿ – ಸಾಕ್ಷಾತ್ ನಳ, ವಲಲರು ಅಲ್ಲಿ ಸಂಗಮಿಸಿದ್ದರು. ಊಟವಾಯಿತು – ಶಿಬಿರಾಗ್ನಿ. "ಬೆಂಗಳೂರದು, ನಮ್ಮ ಬೆಂಗಾಳೂರದು ಬಲು ದೂಊರಾ..." ಪಿಂಟೋ ಕೆನೆದ. ಚಂದ್ರಶೇಖರ ಬಾಬು ಮಲೆಯಾಳೀ ಹಾಡು ಕಳುಕಿದ, ಕುಣಿದರು, ಕತೆ ಹೇಳಿದರು, ನಕ್ಕು ನಲಿದರು. ಮಲಗುವ ಮುನ್ನ ಕಾಡು ಮೃಗಗಳಿಂದ ರಕ್ಷಣೆಗಾಗಿ ಸಶಸ್ತ್ರ ಪಹರೆಯನ್ನು ಏರ್ಪಾಡು ಮಾಡಲು ಮರೆಯಲಿಲ್ಲ. ಆದರೆ ಶಸ್ತ್ರಧಾರಿಗಳು ಮಾತ್ರ ಖಾನ್ವಿಲ್ಕರರು. ಪ್ರಭಾಕರ ರೆಡ್ಡಿ ದೊಡ್ಡ ಶಿಕಾರಿಗಾರನಂತೆ. ಬಗೆಬಗೆಯಾಗಿ ಬೇಡಿದ – ರಾತ್ರಿ ಸಂಗಡಿಗರೊಡನೆ ಶಿಕಾರಿಗೆ ಹೋಗಿಬರುವುದಾಗಿ, ರೈಫಲ್ ಕೊಡಬೇಕೆಂದು. "ನನ್ನ ಮುಂದಾಳುತನದಲ್ಲಿ ಅದು ಅಸಾಧ್ಯ – ಬೇಟೆಗೆ ನಾನು ಬದ್ಧ ವೈರಿ" ಎಂದು ಅವನನ್ನು ಹತಾಶೆಗೊಳಿಸಲಾಯಿತು. ಆ ನಿರಪರಾಧಿ ಕಾಟಿಯನ್ನು ನಾವು ಕೊಂದ ದೃಶ್ಯವನ್ನು ಎಂದೂ ಮರೆಯಲಾರೆ.

ಮರುದಿನ ಮಾಮೂಲಿನಂತೆ ೬.೩೦ಕ್ಕೆ ಉಪಾಹಾರ, ೭ಗಂಟೆಗೆ ಹೊರಟೆವು. ಒಂದು ತಂಡ ಬಂಡೆ ಜಾರಲು, ಏರಲು. ಇನ್ನೊಂದು ತಂಡ ಕಾಡು ಅಂಡಲೆಯಲು. ಶಿವಪ್ಪ, ಶೇಣವ, ಡಾಕ್ಟರರು ಎರಡನೆಯವರ ಜೊತೆ ಹೋದರು. ನಾನು ಮೊದಲಿನವರ ಸಂಗಡ ಹೋದೆ. ಊಟದ ಹೊತ್ತಿಗೆ ನಾವು ಮರಳಬೇಕು. ಊಟವಾದನಂತರ ತಂಡಗಳ ಬದಲಾವಣೆ. ಇದು ಕಾರ್ಯಕ್ರಮ.

ಅದೃಷ್ಟವಶಾತ್ ನಮಗೆ ಅನುಕೂಲವಾದ ಸ್ಥಳ ಬೇಗನೆ ದೊರೆಯಿತು. ಅಲ್ಲಿ ಕುದುರೆಮುಖದ ಶ್ರೇಣಿ ಫಕ್ಕನೆ ಕೊನೆಗೊಂಡು ಕೆಳಕ್ಕೆ ಸುಮಾರು ೫೦ ಅಡಿ ಆಳದ ನೆಗೆತ. ಬಳಸಿಕೊಂಡು ಹೋಗಿ ಅದರ ತಳ ಸೇರಬಹುದು. ತಳದಿಂದ ಸೀದಾ ಮೇಲೆ ಏರಲು ಸಾಧ್ಯವಾಗುವಂಥ

ಒಂದು ಕಡಿದಾದ ಕೊರಕಲೂ (ಚಿಮ್ನಿಯಂತೆ) ಅಲ್ಲಿಯೇ ಇತ್ತು. ಹೀಗಾಗಿ ಇದೊಂದೇ ಸ್ಥಳದಲ್ಲಿ ನಮಗೆ ಬಂಡೆ ಏರುವುದು, ಜಿಗಿಯುವುದು ಎರಡನ್ನೂ ಮಾಡಲು ಸಾಧ್ಯವಿತ್ತು. ಆದರೆ ೫೦ ಅಡಿ ಆಳ ಜಿಗಿಯಲು ನಿಲ್ಲುವ ವೇದಿಕೆ (ಅಂದರೆ ಪ್ರಪಾತದ ಅಂಚು) ನೆಲದಿಂದ ಸ್ವಲ್ಪ ಹೊರಕ್ಕೆ ಚಾಚಿರುವುದರಿಂದ ಅಲ್ಲಿಗೆ ಸಕಲ ರಕ್ಷಣಾಪೂರ್ವಕವಾಗಿಯೇ ಹೋಗಿ ನಿಂತಾಗ ಎಂಥ ಗಂಡೆದೆಯೂ ಒಂದು ಸಲ ಹಿಂದೆ ಮುಂದೆ ಯೋಚಿಸುವಂತಿತ್ತು. ಲಕ್ಷ್ಮಿ, ಮೋಹನರು ಇಲ್ಲಿ ಕುಪ್ಪಳಿಸಿ ನೆಗೆದು ಭದ್ರವಾಗಿದೆ ಎಂದರು. ಪಿಂಟೋ ಮೇಲುಗಡೆ ಕುಳಿತು, ಜಿಗಿವವರನ್ನು ಬಿಲೇ ಮಾಡುತ್ತಿದ್ದ. ಅವನ ಬಳಿಯಲ್ಲೇ ಲಕ್ಷ್ಮಿ ಕುಳಿತು ಚಿಮ್ನಿ ಕಲ್ಲನ್ನೇರುವವರನ್ನು ಬಿಲೇ ಮಾಡುತ್ತಿದ್ದ. ಇವರ ಸಹಾಯಕ್ಕೆ ಬೇರೆ ಇಬ್ಬರನ್ನು ಪ್ರತ್ಯೇಕ ಪ್ರತ್ಯೇಕವಾಗಿ ಕೂರಿಸಿ ಸುಬೆದಾರ್ ಖಾನ್ವಿಲ್ಕರರನ್ನು ಅಲ್ಲಿ ಉಸ್ತುವಾರಿಕೆಗೆ ಬಿಟ್ಟು ನಾನು ಕೆಳಗೆ ಬಂದೆ. ಮೊದಲು ಒಬ್ಬ ಜಿಗಿಯಬೇಕು. ಹೀಗೆ ಕೆಳಗೆ ಬಂದಾತ ಚಿಮ್ನಿಯ ಮೂಲಕ ಮೇಲೇರಿ ಹೋಗಬೇಕು. ಸಂಶಯಾತ್ಮರು (ವಿನಶ್ಯತೀ) ಈ ಯಾವುದನ್ನೂ ಮಾಡಬಾರದೆಂದು ಕಡ್ಡಾಯವಾಗಿ ವಿಧಿಸಿದೆ. ಇದುವರೆಗಿನ ನಮ್ಮ ಎಲ್ಲ ಸಾಹಸಗಳಿಗಿಂತಲೂ ಇದು ಹೆಚ್ಚು ಅಪಾಯಕಾರಿಯಾದದ್ದು. ಮೂರು ನಾಲ್ಕು ಜನ ಸರಿಯಾಗಿಯೇ ಮಾಡಿದರು. ಆದ್ದರಿಂದ ಧೈರ್ಯ ಬಂದಿತು ಇತರರಿಗೆ. ನನಗೆ ಸಹ. ನಾನೂ ಹೊರಟೆ. ಪ್ರಪಾತದ ಅಂಚಿಗೆ ಬಂದಾಗ ಎದೆ ನಡುಗಿತು. ಮೈಬೆವರಿತು. ಕಾರಣ ಏನೂ ಇಲ್ಲ. ಹಿಂದೆ ಹಾರಿದ್ದೇನೆ. ಆದರೆ ಇಂಥ ಆಳವನ್ನಲ್ಲ. ಆದರೂ ಮಾನ, ಪ್ರತಿಷ್ಠೆ ಇವೆಯಲ್ಲ. ಹೊರಟಮೇಲೆ ಆದದ್ದಾಗಲಿ, ಪ್ರಾಣ ಭಯವಿಲ್ಲ ಎಂದು ಜಿಗಿದೇ ಬಿಟ್ಟೆ. ಜಿಗಿದ ಕೋನ ಸರಿಯಾಗಲಿಲ್ಲ. ಸಮತೋಲ ತಪ್ಪಿತು. ಇಡೀ ದೇಹ ಬಲಗಡೆಗೆ ಲೋಲಕದಂತೆ ತೂಗಾಡಿ ಬಡಿಯಿತು. ಕಾಲು ಚಾಚಿದ್ದುದರಿಂದ ಅಲ್ಲಿ ನಿಂತೆ. ಇದನ್ನು ನೋಡುತ್ತಿದ್ದ ನನ್ನ ಭಾವ ಶಂಕರ "ಇದು ಭಯಂಕರ" ಎಂದು ಉದ್ಗರಿಸಿದ. (ಅಕ್ಕನ ಚಿಂತೆ?) ನನ್ನ ತಪ್ಪಿನಿಂದ ಭಯಂಕರವಾಯಿತಷ್ಟೆ. ಮತ್ತೆ ಸರಿಯಾಗಿ ನಿಂತು ಜಿಗಿದೆ. ಸರಿಯಾಗಿಯೇ ಕೆಳಗೆ ಬಂದೆ. ಸದ್ಯ, ಮರ್ಯಾದೆ ಉಳಿಯಿತು. ಚಿಮ್ನಿ ಏರಲು ನಾನು ಹೊರಡಲಿಲ್ಲ. ಐದಡಿ ಹತ್ತಿದ ಅನಂತರಾಜು ಕುಸಿದುಬಿದ್ದ. ಬಿಲೇ ಇದ್ದುದರಿಂದ ತೊಂದರೆ ಆಗಲಿಲ್ಲ. ಹತ್ತಡಿ ಹತ್ತಿದ ನಾಗರಾಜ ಸಾಧ್ಯವಿಲ್ಲ ಎಂದು ಕೆಳಗಿಳಿದ. ನಮ್ಮ ಮಾತುಭಾರೀ ಜಗನ್ನಾಥ ಶಾಸ್ತ್ರಿ, "ನಾನು ನೋಡಿ ಸಾರ್, ಬೆಸ್ಟ್ ಡೆಮೋನ್ಸ್ಟ್ರೇಷನ್ ಕೊಟ್ಟೇ ಬಿಡುತ್ತೇನೆ" ಎಂದ.

"ಅದು ಮಾತಾಡಿದಷ್ಟು ಸುಲಭ ಅಲ್ಲ" ನಾನೆಂದೆ.

"ನಿಂಗಾಗೋದಿಲ್ಲ ಕಣೋ" ಲಕ್ಷ್ಮಿ ರೇಗಿಸಿದ.

ಶಾಸ್ತ್ರಿ ಏರಿಯೇ ಬಿಟ್ಟ. ಲಕ್ಷ್ಮಿ ಮೇಲಿನಿಂದ (ಇವನಿಗೆ ಏರುತ್ತಿರುವವನನ್ನು ಕಾಣುವುದಿಲ್ಲ. ಹಗ್ಗದ ಹಿಡಿತದಿಂದ ಏರುವವನನ್ನು ನಿಯಂತ್ರಿಸಬೇಕು) ಬಿಲೇ ಹಿಡಿದಿದ್ದ. ಶಾಸ್ತ್ರಿ ಮಾತು ಆಡುತ್ತಲೇ ಗಲಭೆ ಮಾಡುತ್ತಲೇ ಏರತೊಡಗಿದ. ನಾನು ಹೇಳಿದೆ, "ಏಕಾಗ್ರತೆಯಿಂದ ಏರಪ್ಪ, ಬೇರೆ ಕಡೆ ಗಮನವೀಯಬೇಡ."

೧೦–೧೨ ಅಡಿ ಏರಿರಬಹುದು, "ಸಾರ್, ಸಾರ್! ನಾಳೆ ದಿವಸದ ಪ್ರೋಗ್ರಾಮ್ ಏನು?" ನನ್ನ ಕಡೆಗೆ ತಿರುಗಿ ಕೇಳಿದ. ಹಿಡಿದ ಕಲ್ಲಿನ ಹಿಡಿತ ತಪ್ಪಿತು. "ಓ ಬಿದ್ದೆ ಬಿದ್ದೆ" ಎಂದು ಚೀತ್ಕರಿಸಿ ಧಿಡೀರನೆ ನೆಗೆದೇ ಬಿಟ್ಟ. ಯಾವ ಬಿಲೇ ಹಗ್ಗವೂ ಎಂಥ ಬಿಲೇಕಾರನೂ ಇಂಥ ಹುಚ್ಚು ನೆಗೆತವನ್ನು ನಿಯಂತ್ರಿಸುವುದು ಸಾಧ್ಯವಿಲ್ಲ. ಪ್ರತಿಯೊಬ್ಬನೂ ಅವನವನ ಪಾಲಿನ ಕರ್ತವ್ಯವನ್ನು ಶಿಸ್ತಿನಿಂದ ನಿರ್ವಹಿಸಲೆಂದೇ ಅವರಿಗೆ ಪೂರ್ವ ಶಿಕ್ಷಣವಿತ್ತು ಇಂಥಲ್ಲಿಗೆ ಕರೆದುಕೊಂಡು ಹೋಗುವುದು. ಆದರೂ ಪ್ರಾಯದ ಪ್ರಭಾವ, ನರನನ್ನು ಮೀರಿಸಿದ ವಾನರ. ಆ ದುರ್ಧರ ಪ್ರಸಂಗದಲ್ಲಿ ಮೂರು ಭೀಕರ ದುರಂತಗಳು ಸಂಭವಿಸದೇ ಇದ್ದದ್ದು ಪವಾಡವೆಂದು, ಅದೃಷ್ಟವೆಂದು ತಿಳಿದಿದ್ದೇನೆ. ಬಿದ್ದ ಶಾಸ್ತ್ರಿಗೆ ಎದೆಗೋ ತಲೆಗೋ ಬಲವಾಗಿ ಪೆಟ್ಟಾಗಬಹುದಿತ್ತು. ಅದೇ ಗಳಿಗೆಯಲ್ಲಿ ನಿರಪರಾಧಿ ತಿಮ್ಮಪ್ಪ ಅಲ್ಲೇ ಅಡ್ಡ ದಾಟುತ್ತಿದ್ದ. ಅವನ ತಲೆಯ ಮೇಲೆ ಹಠಾತ್ತಾಗಿ ಈ ಕಲ್ಲುಗುಂಡು ಶಾಸ್ತ್ರಿ ಕೆಡೆದ. ಒಂದೆರಡು ಗಂಟೆ ಹೊತ್ತು ತಿಮ್ಮಪ್ಪ ನೋವಿನ ಬಾಧೆಯಿಂದ ನರಳುತ್ತಿದ್ದ. ಅವನಿಗೂ ಅಪಾಯ ಸಂಭವಿಸದೇ ಇದ್ದದ್ದು ಅದೃಷ್ಟ. ಇನ್ನು ಬಿಲೇ ಮಾಡಲು ಕುಳಿತಿದ್ದ ಸಾಕ್ಷಾತ್ Chief Instructor ಹಿಮಾಲಯದ ಕಲಿ ಲಕ್ಷ್ಮೀನಾರಾಯಣ ಬಿಲೇ ಹಗ್ಗವನ್ನು ತನ್ನ ಹೆಗಲಿಗಾಗಿ ಸುತ್ತಿ ಅದರ ಕೊನೆಯನ್ನು ಹಿಂದೆ ಇಳಿಬಿಟ್ಟಿದ್ದ. ಹಿಂದೆ ಯಾರೂ ಹಿಡಿದಿತ್ತಿಲ್ಲ; ಇವನು ಬೇಡವೆಂದು ಹೇಳಿದ್ದನಂತೆ! ಶಾಸ್ತ್ರಿ ದುಮುಕಿದ್ದು ಹಠಾತ್ತನೆ. ಆ ಜಗ್ಗಿನಿಂದ ಬಿಲೇ ಹಗ್ಗ ಲಕ್ಷ್ಮಿಗೆ ಯಮಪಾಶದಂತೆ ಸುತ್ತಿ (ಜಾರದೇ) ಅವನನ್ನು ಗಾಳಿಗೆ ಸಿಕ್ಕ ತರಗೆಲೆಯಂತೆ ಎಳೆದುಬಿಟ್ಟಿತು. ಅವನು ಕುಳಿತಿದ್ದದ್ದು ಪ್ರಪಾತದ ಅಂಚಿನಿಂದ ಕೇವಲ ಎರಡಡಿ ಹಿಂದೆ. ಹುಡುಗ ಬುದ್ಧಿವಂತನೋ ಅಲ್ಲವೋ ಅವನು ಹಿಡಿತ ಬಿಟ್ಟು ಕೈಕಾಲು ಚಾಚಿ ನೆಲದಮೇಲೆ ಹೊರಳಿಬಿಟ್ಟ. ಲಕ್ಷ್ಮಿಯ ತಲೆ ಪ್ರಪಾತದಂಚಿನಲ್ಲಿ ನೆಲಕ್ಕೆ ಅಪ್ಪಳಿಸಿದ್ದು ಕೆಳಗಿನಿಂದ ನನಗೆ ಕಂಡಿತು. ಇನ್ನೊಂದಡಿ ಮುಂಡೆ ಬಂದಿದ್ದರೆ ಅವನು ೫೦ ಅಡಿ ಕೆಳಗೆ. ಆದರೆ ಅಷ್ಟರಲ್ಲಿಯೇ ಶಾಸ್ತ್ರಿ ನೆಲ ಸೇರಿದ್ದರಿಂದ ಲಕ್ಷ್ಮಿ ಬಚಾವ್. "ಬಂಡೆಯೊಡನೆ ಸೆಣಸಬೇಡಿ ಮಂಡೆಗಟ್ಟಿಗರೇ ಮಂಡೆಗೆಟ್ಟವರೇ ಭಂಡ ಗಂಡುಗಳೇ!"

ಆ ಕ್ಷಣವೇ ನಾನು ಚಿಮ್ನಿಯನ್ನು ನಿಲ್ಲಿಸಿದೆ.

ಸಂಜೆ ಪುನಃ ಸೂರ್ಯಾಸ್ತಮಾನ ವೀಕ್ಷಣೆ. ಹೊಸ ನಾಟಕ. ನಿತ್ಯನೂತನತೆಯೇ ನಿಸರ್ಗದ ರಹಸ್ಯ – ನವನವೋನ್ಮೇಷಶಾಲಿನಿ. ನಾವು ಹಿಂತಿರುಗಿ ಹೋದಾಗ ಬಂಡೆಕಲ್ಲಿನ ಮೇಲೆ ಮೋಹನ ಅಂಗಾತ ಬಿದ್ದುಬಿಟ್ಟಿದ್ದಾನೆ. ಕೈಕಾಲು ಎಲ್ಲ ಕೊರಡಿನಂತೆ. ಕಣ್ಣುಗಳು ಮುಚ್ಚಿಹೋಗಿವೆ. ಬಾಯಿಯಿಂದ ನೊರೆ ಬರುತ್ತಿದೆ. ಅಪಸ್ಮಾರ? ಹುಡುಗರು ಸುತ್ತಲೂ ಸೇರಿದ್ದಾರೆ. ಗಾಳಿ ಹಾಕಿದರು ಕೆಲವರು. “ಇದು ಆಟ, ನಿಜವಲ್ಲ” ಎಂದರು ಬೇರಿಬ್ಬರು.
ನಾನೆಂದೆ, “ಮೋಹನಾ! ಇದು ಆಟವಾದರೆ ಭಯಂಕರವಾದ ಆಟ. ಇದನ್ನು ಆಡಬಾರದು. ಅದೂ ಇಂಥ ಸ್ಥಳದಲ್ಲಿ ಖಂಡಿತವಾಗಿಯೂ ಆಡತಕ್ಕದ್ದಲ್ಲ. ಎದ್ದು ಬಿಡು ಸಾಕು. ನನಗೆ ಭಯವಾಗಿದೆ.”
ಮೋಹನ ಏಳಲಿಲ್ಲ. ಮೊಸಳೆ ಬಂದ ಕತೆಯೇ? ಆಟ ವಾಸ್ತವವಾಯಿತೇ? ಸ್ವಲ್ಪ ಹಿಂದಿನಿಂದ ಬರುತ್ತಿದ್ದ ಡಾಕ್ಟರರಿಗೆ ತ್ವರೆಯಾಗಿ ಬರಲು ಹೇಳಿಕಳಿಸಲಾಯ್ತು. ಮೋಹನ ಯಥಾಸ್ಥಿತಿ. ಡಾಕ್ಟರರು ಬಂದರು. ಕಣ್ಣು ರೆಪ್ಪೆ ಅಗಲಿಸಿ ನೋಡಿದರು.
“ಇನ್ನು ಮುಂದೆ ಈ ಹುಚ್ಚುಬೇಡ. ಏಳು” ಎಂದು ಬಾರು ಕೋಲಿನಿಂದ ಬೆನ್ನಿಗೆರಡು ಬಾರಿಸಿದರು. ಚಂಗನೆ ನೆಗೆದ. ಮೋಹನ ಸರಿಯಾದ. ಬಾಯಿಗೆ ಟೂತ್ಪೇಸ್ಟ್ ಹಾಕಿ ನೊರೆ ಬರಿಸಿದ್ದಂತೆ. ನಾನವನನ್ನು ಚೆನ್ನಾಗಿ ಥಳಿಸಿದೆ.

ಮರುದಿನ, ಅಂದರೆ ಮೂರನೆಯ ದಿನ, ಬೆಟ್ಟ ಕಾಡುಗಳ ಹಿಂದಿನಿಂದ ಸೂರ್ಯೋದಯವಾಗುವುದನ್ನು ನೋಡಲು ಶಿಖರಕ್ಕೆ ಧಾವಿಸಿದೆವು. ಚಿನ್ನದ ಡಾಲರ್ ಅಲ್ಲಿ ಮೇಲೇರಿ ಬರುವುದು ಇನ್ನೊಂದು ಮನೋಹರ ದೃಶ್ಯ. ಆ ಬೆಳಗ್ಗೆ ಅವರವರ ಮನ ಬಂದಂತೆ ಐದೈದು ಜನರ ಗುಂಪಾಗಿ ಅಡ್ಡಾಡಿ ಬರಲು ಸ್ವಾತಂತ್ರ್ಯವಿತ್ತೆ. ಶಿವಪ್ಪ, ಗೌರೀಶಂಕರ ಉಪಾಹಾರವಾದೊಡನೆ ಒಬ್ಬ ಶೆರ್ಪಾ ಜೊತೆ ನಾವೂರಿಗೆ ಹಿಂತಿರುಗಿದರು. ಮೆಂಗಿಲ ಶೇಣವನ ಜೊತೆಯಲ್ಲಿ ನಾನೊಬ್ಬನೇ ಹೊರಟೆ. ಡಾಕ್ಟರರೂ ಖಾನ್ವಿಲ್ಕರರೂ ಪರ್ಣಕುಟೀರದಲ್ಲಿ ಬೇರೆ ಹುಡುಗರೊಡನೆ ಆಡುತ್ತ ಹರಟುತ್ತ ಕುಳಿತರು. ಕುದುರೆಮುಖದ ಗೊಂಡಾರಣ್ಯದೊಳಕ್ಕೆ ನಾನೂ ಶೇಣವನೂ ಹೊಕ್ಕೆವು. ಸಾಲಾಗಿ ನಿಂತಿರುವ ತಳವಾರರಂಥ ಮರಗಾಡು. ಅದರಲ್ಲಿ ಪೊದೆಯಿಲ್ಲ. ಕುರುಚಲು ಇಲ್ಲ. ಹೀಗಾಗಿ ಯಾವ ಕಡೆಗೆ ಬೇಕಾದರೂ ಅಲೆಯುವ ಸೌಕರ್ಯವಿತ್ತು. ಅದರೊಳಗೆ ಸೂರ್ಯನ ಬಿಸಿಲು ಧಗೆ ಪ್ರವೇಶಿಸುವಂತೆಯೇ ಇಲ್ಲ. ನಮ್ಮ ನಡಿಗೆ ವಾಸನೆಗಳಿಗೆ ಹೆದರಿದ ಯಾವುದೋ ಪ್ರಾಣಿಗಳು ಧಡಧಡನೆ ಧಾವಿಸಿದ ಸದ್ದು ಮಾತ್ರ ನಮಗೆ ಕೇಳಿಸಿತು. ಕಾಡಿನ ಒಂದು ಅಂಚಿನಲ್ಲಿ ಬಂಡೆಗಳ ಮೇಲೆ ದುಮುಕುವ ಜಲಪಾತ; ನೈಸರ್ಗಿಕ ಕಾಮನಬಿಲ್ಲು, “ತೆಕ್ಕನೆ ಮೈಮನ ಮರೆ’ಸುವಂಥ ದೃಶ್ಯ. ಕಾಡನ್ನು ಸುತ್ತಿ ಬೆಟ್ಟದ ಇನ್ನೊಂದು ಮಗ್ಗುಲಿಗೆ ಬಂದರೆ ನಾವು ಕುದುರೆಮುಖದ ಜೊತೆಗಾರನಾದ ಗೋಮುಖದ (೬೧೨೨ ಅಡಿ) ಮೇಲಿದ್ದೇವೆ. ಇವೆರಡರ ಮಧ್ಯೆ ಇರುವ ಇನ್ನೊಂದು ಶಿಖರ ಗುಂಡುಕಲ್ಲು (೬೧೦೦ ಅಡಿ). ಕುದುರೆಮುಖ, ಗುಂಡುಕಲ್ಲು, ಗೋಮುಖ ಸಾಲಾಗಿ ದಕ್ಷಿಣ–ಪಶ್ಚಿಮ ದಿಕ್ಕಿಗೆ ಮುಖಮಾಡಿ ನಿಂತಿರುವ ಶಿಖರಗಳು. ನಾವೂರು ಕಡೆಯಿಂದ ಬರುವಾಗ ಅತಿ ಸಮೀಪದ ಅತಿ ಎತ್ತರದ ಕುದುರೆಮುಖ ಮೊದಲು ಕಾಣುವುದರಿಂದ ಉಳಿದ ಶಿಖರಗಳು ಅಲ್ಲಿಗೆ ಅದೃಶ್ಯ.

ಕುದುರೆಮುಖದ ಕೆಳಗೆ ಬೋಳು ಬೆಟ್ಟಗಳ ರಾಶಿ, ಬಯಲು ಸೀಮೆ. ಆದರೆ ಗೋಮುಖದ ಕೆಳಗಿನ ದೃಶ್ಯ ಲಕ್ಷಾಂತರ ನವಪಲ್ಲವ ಖಚಿತ ವೃಕ್ಷರಾಶಿ, ಒಂದರ ಮೇಲೊಂದು ಬಿದ್ದಂತೆ. ಆ ಚಿಗುರುಗಳ ವರ್ಣವೈವಿಧ್ಯ, ಪರ್ಣ ಸೌರಭ್ಯ, ನೊರೆನೊರೆಯಾಗಿ ಕುಸುರು ಕುಸುರಾಗಿ ಮೊಸರುಗಡಲಿನ ಬೆಣ್ಣೆಯಂತೆ ತೇಲಿಬರುವ ರಮಣೀಯ ದೃಶ್ಯ ಇನ್ನೊಂದು ಮರೆಯಲಾಗದ ಅನುಭವ. ಸೃಷ್ಟಿಕರ್ತ ಅತಿ ಸುಂದರ ವಿಶಾಲರತ್ನಗಂಬಳಿಯನ್ನು ಅಲ್ಲಿ ಆಚ್ಛಾದಿಸಿದಂತೆ ಇತ್ತು.

೧೨ ಗಂಟೆ ಮಧ್ಯಾಹ್ನ ಊಟ ಮುಗಿಸಿ ಹಿಂದೆ ಹೊರಡುವುದು ನಮ್ಮ ಕಾರ್ಯಕ್ರಮ. ನಾನು ಹಿಂತಿರುಗಿ ಬರುವುದನ್ನು ಎಲ್ಲರೂ ಕಾತರರಾಗಿ ಕಾಯುತ್ತಿದ್ದರು. ವ್ಯಕ್ತ ಸಂತೋಷ ಅವರ ಮುಖದ ಮೇಲೆ ಲಾಸ್ಯವಾಡಿತು.
ಡಾಕ್ಟರರೆಂದರು, "ಮತ್ತೇನಾಯಿತು?"
"ಏನು?" ನಾನೆಂದೆ.
"ಅದೇ ನೀವು ಕೂಗಿದರಲ್ಲ?"
"ಇಲ್ಲವಲ್ಲ!?"
"ತಮಾಷೆ ಮಾಡಬೇಡಿ, ಸಾರ್" ಡಾಕ್ಟರರು.
"ಡಾಕ್ಟ್ರೇ! ನಿನ್ನೆ ರಾತ್ರಿ ಮೋಹನನ ತಮಾಷೆ ನೋಡಿ ಹೆದ್ರಿ ಹೋದೆ. ಅದಕ್ಕೆ ಮೊದಲು ಲಕ್ಷ್ಮಿಯ ತಮಾಷೆಯೂ ನನ್ನನ್ನು ಅಲುಗಿಸಿತು. ಇನ್ನು ನಾನೇ ಮಾಡುವೆನೇ? ಈಗ ಮಾಡುತ್ತಿರುವವರು ನೀವು" ನನಗೆ ಸಮಸ್ಯೆ.
"ಅಲ್ಲ ಸರ್, ಬೈಸನ್ ಏನಾದರೂ!"
"ಹತ್ತು ವರ್ಷಗಳ ಹಿಂದೆ."
"ಅಲ್ಲ, ಇವತ್ತು?"
"ಹೌದು".
"ಅದೇ ನಾವು ಹೇಳುತ್ತಿರುವುದು!"
"ಹೌದು, ಅದರ ಲದ್ದಿ ಕಂಡೆ!"
"ಅಲ್ಲ ಸರ್, ನಿಮ್ಮ ಮೇಲೇನಾದರೂ?"
"ಹೌದು ಏರಿ ಬಂತು."
"ಅದೇ ನಾವು ಹೇಳುತ್ತಿರುವುದು, ಮತ್ತೇನಾಯತು?"
"ಈ ಭೀಕರ ಕಾನನಾಂತರದೊಳ್ ನಾನುಂ ಮೇಣ್ ಮೆಂಗಿಲ ಶೇಣವನುಂ ಪೋಗುತ್ತಿರ್ಪಾ ಸಮಯದೊಳ್ ಕೂರ್ಗಣೆಯಂತೆ ಎತ್ತಣಿಂದಲೋ ಬಂದು ಫಕ್ಕನೆ ಮೇಲೆರಗಿದುದೈ. . ."
"ಏನು, ಏನು?"
"ಒಂದು ದೊಡ್ಡ ಸೊಳ್ಳೆ!"
ಎಲ್ಲರೂ ನಕ್ಕರು. ಏನು ಕತೆ ಎಂದು ಡಾಕ್ಟರರನ್ನು ಕೇಳಿದಾಗ ಅವರೆಂದರು, "ನೀವು ಕಾಡಿನೊಳಗೆ ನುಗ್ಗಿ ಹೋದ ಸ್ವಲ್ಪ ಹೊತ್ತಿನ ಬಳಿಕ ಅದೇ ದಿಕ್ಕಿನಿಂದ ನಿಮ್ಮ ಸ್ವರ ಕೇಳಿಸಿತು "Bison, bison help, help" ಎಂದು. ಖಾನ್ವಿಲ್ಕರ್, ನಾನು ಬೇರೆ ಹುಡುಗರು ಎಲ್ಲರೂ ಕೇಳಿ ನಡುಗಿದೆವು. ರೈಫಲ್ ಹಿಡಿದರು ಖಾನ್ವಿಲ್ಕರ್. ನಾವೆಲ್ಲರೂ ಅವರ ಹಿಂದೆ ಬೊಬ್ಬೆ ಹೊಡೆಯುತ್ತ ಓಡಿದೆವು. ಕಾಡೆಲ್ಲ ಅಲೆದೆವು. ನಿಮ್ಮ ಹೆಸರನ್ನೂ ಶೇಣವನ ಹೆಸರನ್ನೂ ಕೂಗಿ ಕರೆದೆವು. ಎಲ್ಲಿಯೂ ಸುದ್ದಿಯಿಲ್ಲ, ಸದ್ದಿಲ್ಲ. ದಿಗ್ಭ್ರಮೆಗೊಂಡ ನಾವು ಈಗ ತಾನೆ ಮರಳಿದೆವು."
ಮುಂದೆ ವಿಚಾರಿಸಿದಾಗ ಸತ್ಯ ಸಂಗತಿ ತಿಳಿಯಿತು. ಗುರು, ವಾಸು, ಶ್ರೀನಿವಾಸ, ಶಾಸ್ತ್ರಿ ಆಡಿದ ಆಟ ಇದು. ನನ್ನ ಸ್ವರವನ್ನು ಯಶಸ್ವಿಯಾಗಿ ಅನುಕರಿಸಿದ್ದರು. ಮೋಹನನ್ನು ಪ್ರೀತಿಯಿಂದ ಥಳಿಸಿದಂತೆ ಇವರಿಗೂ ಸಹಸ್ರನಾಮಾರ್ಚನೆ ಮಾಡಿದೆ! ಅಪಾಯಕಾರಿ ಪ್ರಾಯೋಗಿಕ ತಮಾಷೆಯನ್ನು ಅಂಥ ಸನ್ನಿವೇಶಗಳಲ್ಲಿ ಪ್ರದರ್ಶಿಸಲೇಬಾರದು.

ಅವರೋಹಣ ಪರ್ವ
ಅಧ್ಯಾಯ ಐವತ್ತೇಳು

ಹನ್ನೆರಡು ಗಂಟೆಗೆ ನಾವು ಕುದುರೆಮುಖದ ಕೊನೆಯೂಟ ಮುಗಿಸಿದೆವು.
ಮಲಗು ಮಗುವೆ! ಮಲಗು
ಕುದುರೆಮೊಗವೆ
ಅಲುಗದಿರು ಅಗಲದಿರು ಇ–
ನ್ನೊಮ್ಮೆ ಬರುವವರೆಗೆ
ಎಂದು ಸಾಮೂಹಿಕ ಗಾನ ಹಾಡಿದೆವು. ಮತ್ತೆ ಅವರೋಹಣ, ಕಡಿಮೆ ಭಾರ. ನ್ಯೂಟನ್ನನ ಸಹಕಾರ, ಸಾಯಂಕಾಲದ ೬ ಗಂಟೆಗೆ ಮೊದಲೇ ನಾವೂರು ಬಂಗ್ಲೆಯ ಸರಹದ್ದು ತಲಪಿದೆವು. ಇಳಿಯುವಾಗಲೂ ಗಂಟೆ ಗಂಟೆಗೆ ಟೀ ತಿಂಡಿಗಳ ಸಮಾರಾಧನೆ, "ಇನ್ನು ಬೇಡ ನಮಗೆ" ಎಂದು ಹುಡುಗರು ಹೇಳುವವರೆಗೂ ಸರದಿ.

ನಾವೂರು ಬಂಗ್ಲೆ ಸಮೀಪವಾದಂತೆ ಕುಶಾಲುತೋಪು ಹೊಟ್ಟಿಸಿದೆವು. ಹೊಗೆ ಬಾಂಬು ಎಸೆದೆವು. ಜಯಕಾರ ಕೂಗಿದೆವು. ನಮ್ಮ ಗೂಡ್ಸ್ ಬಂಡಿಯೀಗ ಏರೋಪ್ಲೇನ್ ವೇಗದಲ್ಲಿ ಮನ್ನುಗ್ಗುತ್ತಿದ್ದುದರಿಂದ ಲೈನು ಮುರಿಯಿತು. ಹಿಂದೆ ಇದ್ದ ನಾನು ಲಗುಬಗೆಯಿಂದ ಕಾಲು ಚಾಚಿ ನಡೆಯುತ್ತಿದ್ದೆ. ಶಿಬಿರ ಸೇರಿದ ಮೇಲೆ ಹುಡುಗರ ಲೆಕ್ಕ ತೆಗೆದುಕೊಳ್ಳಬೇಕಷ್ಟೆ. ಆಗಲೇ ನನ್ನ ಬೆನ್ನನ್ನು ವಿಶ್ವಾಸದಿಂದ ತಡವಿ, "ಅಭಿನಂದನೆಗಳು. ಬಹಳ ಸಂತೋಷ" ಎಂದರು. ಹಿಂತಿರುಗಿ ನೋಡುತ್ತೇನೆ: ಸಾಕ್ಷಾತ್ ದೊರೆಗಳು ಅವತರಿಸಿದ್ದರು! ಅವರ ವಿಶ್ವಾಸದ, ಪ್ರೇಮದ ವಿದ್ಯುದಾಲಿಂಗನದಲ್ಲಿ ನಾವೆಲ್ಲರೂ ಅಯಸ್ಕಾಂತಗಳಾಗಿ ಎಲ್ಲರನ್ನೂ ಆಕರ್ಷಿಸಿದೆವು.

"ಬೆಂಗಳೂರಿಗೆ ಹೋದೆ, ನಿದ್ರೆ ಬರಲಿಲ್ಲ. ತಂದೆಯವರನ್ನು ಪುನಃ ಕೇಳಿದೆ. 'ಹೋಗಿ ಅವರ ಜೊತೆಯಲ್ಲಿ ತಿರುಗಿ ಬಾ. ಅಲ್ಲಿವರೆಗೂ ನನಗೇನೂ ಆಗುವುದಿಲ್ಲ' ಎಂದರು. ಬಂದುಬಿಟ್ಟೆ. ನಿಮ್ಮ ಗುರುರಾಜರಾಯರೂ ಬಂದಿದ್ದಾರೆ, ನೋಡಿ ಅವರಿಗೆಷ್ಟು ಪ್ರೇಮ ಹುಡುಗರ ಮೇಲೆ."

ಕರ್ತವ್ಯ, ಸ್ವಹಿತ ಇವುಗಳ ನಡುವೆ ಪೈಪೋಟಿ ಉಂಟಾದಾಗ ಕರ್ತವ್ಯದ ಕಠಿಣ ಮಾರ್ಗ ಅನುಸರಿಸುವುದರಿಂದ ಮಾತ್ರ ಮಹಾಕಾರ್ಯ ಸಾಧ್ಯ. ಅವರೇ ನಿಜವಾದ ಧುರೀಣರು. ಅವರು ಬಂದುದರಿಂದ ಅಭಿಮಾನದ ಸೌಧಕ್ಕೆ ಗೋಪುರವಿಟ್ಟಂತಾಯಿತು. ಅವರೊಡನೆ ಪ್ರೊ. ಗುರುರಾಜರಾಯರು ಬಂದದ್ದು, ಪ್ರಿನ್ಸಿಪಾಲ್ ಉಮರ್ಜಿಯವರ ಶುಭಾಶಯ ತಂದದ್ದು ನಮಗೆ ಬಲು ಹೆಮ್ಮೆಯ ಮತ್ತು ಸಂತಸದ ಸಂಗತಿ. ನಿಸಾರ್ ಮತ್ತು ಸ್ವಾಮಿ – ನಾವೂರಾಧಿಪತಿಗಳು ನಮ್ಮ ವಿಶಿಷ್ಟಾವಶ್ಯಕತೆಗಳನ್ನೂ ಪೂರೈಸಿದ್ದರು. ಇಂಥ ಒಂದು ಸಾಹಸದಲ್ಲಿ ಎಲ್ಲರಿಗೂ ಶಿಖರ ಸೇರುವುದು ಸಾಧ್ಯವಿಲ್ಲ. ಬೇರೆ ಹೊಣೆಗಾರಿಕೆ ಹೊತ್ತವರು ಅವುಗಳಿಂದ ಬಂಧಿತರಾಗಿ ನಿಲ್ಲಬೇಕಾಗುತ್ತದೆ. ಮೇಲೆ ಬಂದು, ನಮಗಿಂತೆಲ್ಲ ಚೆನ್ನಾಗಿ ಸೃಷ್ಟಿ ಸೌಂದರ್ಯ ನೋಡಿ ಅನುಭವಿಸಿ ಸಂತೋಷಪಡಲು ಅರ್ಹತೆಯಿದ್ದ ಈ ಮಿತ್ರರು ಮಾಡಿದ ತ್ಯಾಗ ಸಾಮಾನ್ಯವಾದದ್ದಲ್ಲ.

ಆ ರಾತ್ರಿ ನಾವು ನಿದ್ರಿಸಲಿಲ್ಲ: ಹಾಡಿದ್ದು, ಕುಣಿದದ್ದು, ವನಭೋಜನ ಉಂಡದ್ದು, ಮರುದಿವಸದ ಧರ್ಮಸ್ಥಳದ ಕಾಲ್ನಡಿಗೆಯ ಪ್ರಯಾಣಕ್ಕಾಗಿ ಸಿದ್ಧತೆ ಮಾಡಿದ್ದು...

ಮರುದಿನ – ೧೮ನೆಯ ತಾರೀಕು, ಶಿಬಿರದ ಎಂಟನೆಯ ದಿವಸ – ಡೇರೆಗಳನ್ನು ಕಿತ್ತು ಪ್ಯಾಕ್ ಮಾಡಿದಾಗ, ಗಂಟು ಮೂಟೆಗಳನ್ನು ಲಾರಿಯಲ್ಲಿ ಓರಣವಾಗಿ ಜೋಡಿಸಿಟ್ಟಾಗ, ಕೊನೆಯ ಟೀ ತಿಂಡಿ ಸೇವಿಸಿ ನಾವೂರು ಬಂಗ್ಲೆಯಿಂದ ಹೊರಟಾಗ, ಕುದುರೆಮುಖದ ನೆರಳಿನಿಂದ ದೂರ ದೂರ ಸರಿದಾಗ, ಮನಸ್ಸಿನಲ್ಲಿ ಮೂಡಿದ ಹಿರಿಯ ಭಾವ ಕೃತಜ್ಞತೆ, ಸಮರ್ಪಣ ಭಾವ. ಬಂಗ್ಲೆಯ ಆವರಣದ ಚೂತವನಕ್ಕಾಗಮಿಸಿದ್ದ ಚೈತ್ರ ಮಾಸವಿನ್ನೆಂದು ಪುನರಾಗಮಿಸುವುದೋ?

ಸಾಗರಂ ಸಾಗರೋಪಮಂ
ಅಧ್ಯಾಯ ಐವತ್ತೆಂಟು

೧೪ ಮಾರ್ಚ್ ೧೯೬೭, ಕಾಲೇಜಿನಲ್ಲಿ ಅತಿ ಸಂಭ್ರಮದ ದಿವಸ. ವಿಶ್ವವಿದ್ಯಾಲಯದ, ಕಾಲೇಜಿನ, ಎನ್‌ಸಿಸಿಯ ಇತಿಹಾಸದಲ್ಲಿ ಅಂದು 'ಕುದುರೆಮುಖ ದಿವಸ.' ಆ ವೀರರಿಗೆ ಪದವೀಪ್ರದಾನ ಮಾಡುವ ಶುಭ ದಿವಸ. ತುಂಬಿದ ಸಭೆಯ ಅಧ್ಯಕ್ಷತೆಯನ್ನು ಪ್ರಿನ್ಸಿಪಾಲ್ ಆರ್.ಆರ್. ಉಮರ್ಜಿಯವರು ವಹಿಸಿದ್ದರು. ಪದವೀಪ್ರದಾನ ಮಾಡಲು ಮುಖ್ಯ ಅತಿಥಿಗಳಾಗಿ ಕುಲಪತಿ ವಿ.ಕೆ ಗೋಕಾಕರು ದಯಮಾಡಿಸಿದ್ದರು. ಮಾಜಿ ಕುಲಪತಿ ಟಿ.ಆರ್ ಜಯರಾಮನ್, ಎನ್‌ಸಿಸಿ ಡೈರೆಕ್ಟರ್ ಏರ್ ಕಮ್ಮೊಡೋರ್ ಎಸ್.ಕೆ. ಭಕ್ಷಿ ಮೊದಲಾದ ಸೇನಾಗಣ್ಯರು ಉಪಸ್ಥಿತರಿದ್ದರು. ಡಾಕ್ಟರ್ ಗೋಕಾಕರು ತಮ್ಮ ಕವಿವಾಣಿಯಿಂದ ಕುದುರೆಮುಖ ಸಾಹಸಕ್ಕೆ ಒಂದು ನೂತನ ಆಯಾಮ ನೀಡಿದರು, "ನಿಮ್ಮ ಸಾಹಸದ ಇತಿಹಾಸ ಒಂದು ಸುಂದರ ಕಾವ್ಯದಂತಿದೆ. ಎಲ್ಲಿ ಶ್ರದ್ಧಾಸಕ್ತಿಯುತ ಪರಿಶ್ರಮವಿದೆಯೋ ಅಲ್ಲಿ ಸೌಂದರ್ಯವಿದೆ. ವಿದ್ಯಾರ್ಥಿ ಜೀವನದ ಈ ನೂತನಾಧ್ಯಾಯವನ್ನು ನೀವು ಬರೆದು ಪುಸ್ತಕ ರೂಪದಲ್ಲಿ ತಂದರೆ ಅದನ್ನು ವಿಶ್ವವಿದ್ಯಾಲಯ ಸಂತೋಷದಿಂದ ಪ್ರಕಟಿಸುವುದು.



"ಬೆಟ್ಟವನ್ನೇರಿದ್ದೀರಿ. ಅಡೆತಡೆಗಳನ್ನು ನಿವಾರಿಸಿ ಹತ್ತಿದ್ದೀರಿ. ಮೇಲೆ ಹೋದಂತೆ ನಿಮ್ಮ ದೃಷ್ಟಿ ದಿಗಂತ ವಿಸ್ತಾರವಾಗುವುದು. ಜೀವನದ ಪ್ರತಿ ರಂಗದಲ್ಲಿಯೂ ಹೀಗೆಯೇ. ರಸಾಯನ ವಿಜ್ಞಾನದಲಿ ಒಂದು ಸಂಶೋಧನೆ ನಡೆಸುವಾಗ, ಗಣಿತದಲ್ಲಿ ಒಂದು ಸಮೀಕರಣ ಬಿಡಿಸುವಾಗ ಎದುರಾಗುವ ಜಟಿಲ ಸಮಸ್ಯೆಗಳು ಅವೆಷ್ಟೋ. ಅವನ್ನು ಬಗೆಹರಿಸಿಕೊಂಡು ಮುಂದುವರಿದರೆ ನೀವು ಕೃತಕೃತ್ಯರಾಗುತ್ತೀರಿ. ಜ್ಞಾನ ಶಿಖರ ತಲಪುತ್ತೀರಿ. ಇಲ್ಲಿಯೂ ಹಾಗೆಯೇ.

"ನಿಮ್ಮ ಈ ಮಹಾಸಾಧನೆ straight from the horse's mouth ಎಂಬಂತೆ ಕುದುರೆಮುಖದಿಂದಲೇ ಬಂದಿರುವ ಈ ಸಾಹಸದ ವರ್ಣನೆ ನಮಗೆಲ್ಲ ಹೆಮ್ಮೆ ತಂದಿದೆ. ನೀವು ಮುಂದೆಯೂ ಇಂಥ ಸಾಹಸ ನಡೆಸಬೇಕು. ವಿಶ್ವವಿದ್ಯಾಲಯಕ್ಕೆ, ದೇಶಕ್ಕೆ ಕೀರ್ತಿ ತರಬೇಕು."

"ಕಾಲೇಜಿನ ಪ್ರಗತಿಯಲ್ಲಿ ಕುದುರೆಮುಖ ಸಾಹಸ ಬಲು ದೊಡ್ಡ, ದಿಟ್ಟ ಹೆಜ್ಜೆ. ನಿಮ್ಮ ಈ ಸ್ತುತ್ಯರ್ಹ ಕಾರ್ಯ ಕಾಲೇಜಿಗೂ ನನಗೂ ಬಹಳ ಸಂತೋಷ ನೀಡಿದೆ. ಕಾಲೇಜು ಸದಾ ನಿಮ್ಮ ಬೆಂಬಲಕ್ಕಿದೆ" ಎಂದು ಪ್ರೊ. ಆರ್.ಆರ್. ಉಮರ್ಜಿ ಹರಸಿದರು.

ಚಾರಣಿಗರೆದುರಿನಲಿ ತೆರೆದಿಹವು ನೂರೆಂಟು
ದಾರಿಗಳು ಕಡು ಕಠಿಣವಾದುದನ್ನಾಯುವನು
ಧೀರ, ಗುರಿ ಸೇರಿದೊಡೆ ನವಮಾರ್ಗವೊದಗುವುದು
ಸೇರದಿರೆ ಸಾಹಸಕೆ ಚ್ಯುತಿಯುಂಟೆ? ಅತ್ರಿಸೂನು॥

ಗಣಿತ ವಿಭಾಗ: ಕಾಲೇಜಿನೊಳಗಿನ ಜೇನುಗೂಡು
ಅಧ್ಯಾಯ ಐವತ್ತೊಂಬತ್ತು

೧೯೬೦ರ ದಶಕಾರಂಭದಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಅಸ್ತಿತ್ವಕ್ಕೆ ಬಂದಿತು. ಇದರ ಆಡಳಿತ ಕಚೇರಿ ನಮ್ಮ ಕಾಲೇಜ್ ಎದುರಿಗಿದ್ದ ಸೆಂಟ್ರಲ್ ಕಾಲೇಜಿನ ವಿಶಾಲ ಹರವಿನ ಒಂದು ಭವ್ಯ ಸೌಧದಲ್ಲಿತ್ತು. ಆಧುನಿಕ ಕನ್ನಡದ ಹಿರಿಚೇತನ ಮತ್ತು ಇಂಗ್ಲಿಷ್ ವಿದ್ವಾಂಸ ವಿ.ಕೃ. ಗೋಕಾಕರು (ಪ್ರಾಯಶಃ ೧೯೬೬ರ ವೇಳೆಗೆ) ಇದರ ಕುಲಪತಿಗಳಾಗಿ ನೇಮನಗೊಂಡರು. ಆಗ ಕನ್ನಡದಲ್ಲಿ ಕಾಲೇಜ್ ಪಠ್ಯಪುಸ್ತಕಗಳನ್ನು ವಿಶ್ವವಿದ್ಯಾಲಯ ಪ್ರಕಟಿಸುವ ವಿಷಯ ಬಿಸಿ ಬಿಸಿ ಚರ್ಚೆಯ ವಸ್ತು. ವಿಜ್ಞಾನ ಪಠ್ಯಪುಸ್ತಕಗಳನ್ನು ಬರೆಯುವವರು ಯಾರು? ಅವು ಯಾರಿಗೆ ಬೇಕಾಗಿವೆ? ಪ್ರಕಾಶಕರೆಲ್ಲಿ? ಕಾಲೇಜ್ ಶಿಕ್ಷಣ ಮಾಧ್ಯಮ ಇಂಗ್ಲಿಷ್ ಆಗಿರುವಾಗ ಇವುಗಳಿಗೆ ಬೇಡಿಕೆ ಇದೆಯೇ? ಇಂಥ ಪ್ರಶ್ನೆಗಳು ಸಾಕಷ್ಟು ರಾಜಕೀಯ ಮತ್ತು ಜಾತೀಯ ರಂಗು ಕೂಡ ಪಡೆದು ಜನಮನಗಳಿಗೆ ಕ್ಷೋಭೆ ಉಂಟುಮಾಡಿದ್ದುವು.
ಕನ್ನಡದ ಅಭಿವೃದ್ಧಿ ಬಗ್ಗೆ ತೀವ್ರ ಕಳಕಳಿಯಿದ್ದ ಕುಲಪತಿಗಳು ವಿಶ್ವವಿದ್ಯಾಲಯದ ಎಲ್ಲ ವಿಜ್ಞಾನಾಧ್ಯಾಪಕರ ಸಭೆ ಏರ್ಪಡಿಸಿ "ಮುಂದಿನ ಶೈಕ್ಷಣಿಕ ವರ್ಷದಿಂದ ಪದವಿ ತರಗತಿಗಳಿಗೆ, ಮುಖ್ಯವಾಗಿ ವಿಜ್ಞಾನ ವಿಭಾಗಗಳಲ್ಲಿ, ವಿಶ್ವವಿದ್ಯಾಲಯವೇ ಕನ್ನಡದಲ್ಲಿ ಪಠ್ಯಪುಸ್ತಕಗಳನ್ನು ಪ್ರಕಟಿಸಲಿದೆ" ಎಂಬ ಹೇಳಿಕೆ ಘೋಷಿಸಿದರು. ವಿಶ್ವವಿದ್ಯಾಲಯದ ಗಣಿತ ಮುಖ್ಯಸ್ಥ ಎಫ್.ಜೆ. ನರೊನ್ಹಾ ಇದಕ್ಕೆ ದನಿಗೂಡಿಸಿ, "ಪಿಯುಸಿ ಗಣಿತ ಪಠ್ಯಪುಸ್ತಕವನ್ನು ದ್ವಿಭಾಷಿಕವಾಗಿ ರಚಿಸಲು ಈಗಾಗಲೇ ಕ್ರಮ ಕೈಗೊಂಡಿದ್ದೇವೆ" ಎಂದು ಆಶ್ವಾಸಿಸಿದರು ಕೂಡ. ಇವೆಲ್ಲ ಸಂಗತಿಗಳೂ ಪತ್ರಿಕೆಗಳ ಮೂಲಕ ನನಗೆ ತಿಳಿದುಬಂದುವು (೧೯೬೭ರ ಆರಂಭ).

ಅದೇ ಸಂಜೆ ನರೊನ್ಹಾರಿಂದ ನನಗೆ ಬುಲಾವ್ ಬಂದಿತು. ಅವರೆಂದರು, "ನಮ್ಮ ವಿಭಾಗದ ವತಿಯಿಂದ ಒಂದು ಪಠ್ಯಪುಸ್ತಕ ಸಮಿತಿಯನ್ನು ರಚಿಸಿದ್ದೇವೆ. ಇದರ ಒಬ್ಬ ಸದಸ್ಯರಾಗಿ ನಿಮ್ಮನ್ನು ಆಹ್ವಾನಿಸಬೇಕೆಂದು ಸಿಎನ್ಎಸ್ ಅವರು ಒತ್ತಾಯಿಸಿದ್ದಾರೆ. ಅವರಿಗೆ ನಿಮ್ಮ ಪರಿಚಯ ಹೇಗೆ? ನೀವು ಅವರ ಒಬ್ಬ ಮಾಜಿ ವಿದ್ಯಾರ್ಥಿಯೇ?"
ನನಗೆ ರೋಮಾಂಚನವಾಯಿತು. ಅಂತಾರಾಷ್ಟ್ರೀಯ ಖ್ಯಾತಿವೇತ್ತ ಡಾಕ್ಟರ್ ಸಿ.ಎನ್.ಶ್ರೀನಿವಾಸ ಅಯ್ಯಂಗಾರ್ ಎಂಬ ಗಣಿತ ಪ್ರಚಂಡರಿಗೆ ನನ್ನ ಇರವು ಹೇಗೆ ಗೊತ್ತು? ನಾನು ಓದಿದ್ದು ಮದ್ರಾಸಿನಲ್ಲಿ, ಅವರು ಸೇವೆ ಸಲ್ಲಿಸಿ ನಿವೃತ್ತರಾದದ್ದು ಮೈಸೂರು ಸಂಸ್ಥಾನದಲ್ಲಿ. ನಾನೇನೂ ಸಂಶೋಧನೆ ಮಾಡಿರಲಿಲ್ಲ, ನಾವಿಬ್ಬರೂ ಎಂದೂ ಭೇಟಿ ಆಗಿರಲಿಲ್ಲ -- ಆದರೂ ಅವರು ನನ್ನ ಹೆಸರು ಸೂಚಿಸಿದ್ದಾರೆ! ಇದರ ರಹಸ್ಯವೇನು?

ಮೊದಲ ಸಭೆ. ಸಕಾಲದಲ್ಲಿ ಹಾಜರಾದೆ. ಸಿಎನ್ಎಸ್‌ರನ್ನು ನೋಡಲು ನಾನೆಷ್ಟು ಉತ್ಸುಕನಾಗಿದ್ದೆನೋ ಅಷ್ಟೇ ಕುತೂಹಲಿ ಅವರೂ ಆಗಿದ್ದರು ನನ್ನನ್ನು ಕಾಣಲು. ಅರುವತ್ತು ದಾಟಿದ್ದ ಆ ಜ್ಞಾನ ವಯೋವೃದ್ಧ ಗಣಿತಮೇರುವನ್ನು ಕಂಡಾಗ ನನ್ನಲ್ಲಿ ಮೊಳೆತದ್ದು ಪೂಜ್ಯಭಾವ, ಭಯವಲ್ಲ. ನನ್ನ ಎರಡೂ ಕೈಗಳನ್ನು ಗಾಢವಾಗಿ ಹಿಡಿದುಕೊಂಡು, "ಇನ್ನು ನಮ್ಮ ಕೆಲಸ ಸಕಾಲದಲ್ಲಿ ಸುಂದರವಾಗಿ ಆಗಿಯೇ ಆಗುತ್ತದೆ" ಎಂದು ಉದ್ಗರಿಸಿದರು! ಮುಂದುವರಿಯುತ್ತ ಅವರೇ ವಿವರಣೆ ಕೂಡ ನೀಡಿದರು, "ನೀವು ಪ್ರಕಟಿಸುತ್ತಿರುವ ಜನಪ್ರಿಯ ವಿಜ್ಞಾನ ಲೇಖನಗಳನ್ನು 'ಕಸ್ತೂರಿ,' 'ಸಂಯುಕ್ತಕರ್ನಾಟಕ,' 'ಪ್ರಜಾವಾಣಿ,' 'ಸುಧಾ' ಮುಂತಾದ ಪತ್ರಿಕೆಗಳಲ್ಲಿ ಆಸಕ್ತಿಯಿಂದ ಓದಿ ನಿಮ್ಮ ಬಗೆಗಿನ ಎಲ್ಲ ಮಾಹಿತಿಗಳನ್ನೂ ಸಂಗ್ರಹಿಸಿದ್ದೇನೆ."

೧೯೬೭–೬೮ರ ಶೈಕ್ಷಣಿಕ ವರ್ಷಾರಂಭದಲ್ಲೇ ಪಿಯುಸಿ ಗಣಿತಪಠ್ಯ ಪ್ರಕಟವಾಯಿತು. ಇದರಲ್ಲಿ ಇಂಗ್ಲಿಷ್ ಪಾಠ ಎಡಪುಟಗಳಲ್ಲಿಯೂ ಸಂವಾದೀ ಕನ್ನಡ ಪಾಠ ಬಲಪುಟಗಳಲ್ಲಿಯೂ ಮುದ್ರಣವಾಗಿತ್ತು. ಗಣಿತ ಪರಿಕಲ್ಪನೆಗಳ ವ್ಯಾಖ್ಯೆಯಲ್ಲಿ ಸ್ಪಷ್ಟತೆ, ಪಾರಿಭಾಷಿಕ ಪದಗಳ ಬಳಕೆಯಲ್ಲಿ ಶಿಷ್ಟತೆ ಹಾಗೂ ಶೈಲಿಯಲ್ಲಿ ಲವಲವಿಕೆ ತರಲು ಸಮಿತಿಯ ಸದಸ್ಯರೆಲ್ಲರೂ ಪ್ರತಿ ದಿನವೂ ಸಿಎನ್‌ಎಸ್‌ಅವರ ಸಮಕ್ಷಮ ಚರ್ಚಿಸಿ ಮುನ್ನಡೆದೆವು. ಆ ಮೊದಲೇ ಮುದ್ರಣಕಾರ್ಯದಲ್ಲಿ ಸಾಕಷ್ಟು ಅನುಭವ ಗಳಿಸಿದ್ದ ನಾನು ಮುದ್ರಣಾಲಯ–ಸಮಿತಿ ಸದಸ್ಯರ ನಡುವಿನ ಸೇತುವೆಯೂ ಮುಖ್ಯ ಕರಡು ತಿದ್ದಕನೂ ಆದೆ.

೧೯೬೫ರ ಮಾರ್ಚಿಯಲ್ಲಿ ನಾನು ಬೆಂಗಳೂರು–ನಿವಾಸಿಯಾದದ್ದು ಸರಿಯಷ್ಟೆ. ಆಕಾಶಯುಗದ ಉಷಃಕಾಲವದು. ಯಾವುದೇ ಕ್ಷಣದಲ್ಲಿ ಮಾನವ ಚಂದ್ರನ ಮೇಲೆ ಕಾಲಿಡಬಹುದು ಎಂದು ಇಡೀ ಪ್ರಪಂಚ ನಿರೀಕ್ಷಿಸುತ್ತಿದ್ದ ದಿನಗಳವು. ಇನ್ನು ಆಕಾಶವಿಜ್ಞಾನ ನನ್ನ ಪರಮಾಸಕ್ತಿಯ ವಿಷಯ. ಎಂದೇ ಅಂದು ನಾನು ಆಕಾಶಯಾನ, ನಕ್ಷತ್ರಲೋಕ, ಈ ಕ್ಷೇತ್ರಗಳಲ್ಲಿಯ ವಿಜ್ಞಾನಿಗಳ ಜೀವನಚಿತ್ರ ಮುಂತಾದವುಗಳ ಬಗ್ಗೆ ವಿಪುಲವಾಗಿ ಕನ್ನಡದಲ್ಲಿ ಲೇಖನಗಳನ್ನು ಬರೆಯುತ್ತಿದ್ದೆ, ಗ್ರಾಮೀಣ ಪ್ರದೇಶಗಳಿಗೆ ಹೋಗಿ ಭಾಷಣಗಳನ್ನೂ ಮಾಡುತ್ತಿದ್ದೆ. ಅಲ್ಲದೇ ಶಿವರಾಮ ಕಾರಂತರು 'ವಿಜ್ಞಾನಪ್ರಪಂಚ'ದ ನಾಲ್ಕು ಬೃಹತ್ಸಂಪುಟಗಳನ್ನು ಕನ್ನಡದಲ್ಲಿ ಬರೆದು ಮುದ್ರಣಕ್ಕೆ ಸಿದ್ಧಪಡಿಸುತ್ತಿದ್ದ ದಿನಗಳಂದು (೧೯೫೯–೬೪) ಅವರ ಬಗೆಗಿನ ಗೌರವದಿಂದ (ನನ್ನ ತಂದೆಯವರ ಸಹಪಾಠಿಯಾಗಿ ಕಾರಂತರು ನಮ್ಮ ಕುಟುಂಬ ಮಿತ್ರರಾಗಿದ್ದರು) ಮತ್ತು ಈ ವಿನೂತನ ಮಹಾಸಾಹಸದ ಬಗೆಗಿನ ಅಭಿಮಾನದಿಂದ, ಖುದ್ದು ನನ್ನ ಅಪೇಕ್ಷೆ ಮೇರೆಗೆ, ಅವರ ಒಬ್ಬ ಆಪ್ತ ಸಹಾಯಕನಾಗಿ ಕೆಲಸಮಾಡಿ ಅಪಾರ ಅನುಭವ ಕೂಡ ಗಳಿಸಿದ್ದೆ. ಸಿಎನ್‌ಎಸ್‌ರಂಥ ಹಿರಿ ಚೇತನ ಎಲ್ಲ ರೀತಿಗಳಲ್ಲಿಯೂ ಕಿರಿಯನಾಗಿದ್ದ ನನ್ನನ್ನು ಗುರುತಿಸಿ ಪ್ರೋತ್ಸಾಹಿಸಿದ್ದು ಅವರ ಔದಾರ್ಯಕ್ಕೆ ಹಿಡಿದ ಕನ್ನಡಿ –– "ಕರುಣೆಗೊಂದು ಕೋಡವನ್ ಎದೆಯೊಲುಮೆಗೆ ತಾಣವನ್" (ಕುವೆಂಪು).

ಆರ್. ಗುರುರಾಜರಾವ್ ನಮ್ಮ ಇಲಾಖೆಯ ಮುಖ್ಯಸ್ಥರು. ಬಹುಮುಖ ವ್ಯಕ್ತಿತ್ವದ ಹಿರಿಯರಿವರು: ಗಣಿತಪಟು, ಉತ್ತಮ ಬೋಧಕ, ಆಡಳಿತೆಯಲ್ಲಿ ಪ್ರಾಂಶುಪಾಲರ ಬಲಗೈ, ಆಡಳಿತೆಯ ಜಟಿಲತೆಗಳನ್ನು ಲೀಲಾಜಾಲವಾಗಿ ಪರಿಹರಿಸಬಲ್ಲ ಕುಶಲಿ, ಎಲ್ಲಕ್ಕೂ ಮಿಗಿಲಾಗಿ ಸಹೃದಯ. ಆಗ ಮಧ್ಯವಯಸ್ಕನಾಗಿದ್ದ ನನಗಿವರು ಹಿರಿಯಣ್ಣ, ಹೊಸತಾಗಿ ಸೇವೆಗೆ ಸೇರಿದ ಟಿ. ಶ್ರೀವೆಂಕಟರಮಣ, ಟಿ.ಪಿ. ಸುಬ್ಬ ಪಕ್ಕಾಲ, ಎಂ.ಕೆ. ಇಂದಿರಾದೇವಿ ಮೊದಲಾದವರಿಗೆ ಮಾರ್ಗದರ್ಶಕ. ಇಲಾಖೆಯಲ್ಲಿ ಒಟ್ಟು ಸುಮಾರು ೧೦ ಮಂದಿ ಉಪನ್ಯಾಸಕರಿದ್ದೆವು.

ದಿನಾಂಕ ೩೧–೩–೧೯೬೫ರಂದು ನಾನು ರಾಯರ ಮುಂದೆ ಮೊದಲ ಬಾರಿಗೆ ಅಧಿಕೃತವಾಗಿ ಹಾಜರಾದೆ. ಮುಂದಿನ ಶೈಕ್ಷಣಿಕ ವರ್ಷ (೧೯೬೫–೬೬) ನನಗೆ ನಿಗದಿಸಲಾಗಿರುವ ತರಗತಿ–ಪಾಠ ವಿವರಗಳು ಬೇಕೆಂದು ಕೋರಿದೆ. "ಎರಡನೆಯ ಮೇಜರ್ ಗಣಿತ ತರಗತಿಯ ಬಿ ವಿಭಾಗದ ವಿದ್ಯಾರ್ಥಿಗಳು ತುಂಟರು, ಸಿ ವಿಭಾಗದವರು ನಿರಾಸಕ್ತರು. ಇವರಿಗೆ ಸ್ಟ್ಯಾಟಿಕ್ಸ್, ಡೈನಮಿಕ್ಸ್ ಮತ್ತು ಅಸ್ಟ್ರಾನಮಿ ಎಂಬ ಉಕ್ಕಿನ ಕಡಲೆಗಳನ್ನು ಪಾಠಮಾಡಬಲ್ಲಿರಾ?"
"ನೀವು 'ಮಾಡಬಲ್ಲಿರಾ' ಎಂದು ಕೇಳಬಾರದು, 'ಮಾಡಿ' ಎನ್ನಬೇಕು. ಅಂಥ ಮಕ್ಕಳೇ ನನಗೆ ಬಲು ಪ್ರೀತಿಯವರು. ಇನ್ನು ಆ ವಿಷಯಗಳಂತೂ ನನಗೆ ಬಲು ಪ್ರಿಯವಾದವು."
ನಾವು ಭಾರತೀಯರು ಪ್ರೀತಿಸಿ ಮದುವೆಯಾಗುವುದಲ್ಲ, ಮದುವೆಯಾಗಿ ಪ್ರೀತಿಸುವುದು. ಎಂದೇ ನಮ್ಮ ಕುಟುಂಬಗಳು ವಿವಾಹವಿಚ್ಛೇದನವನ್ನು ಎದುರಿಸುವುದು ವಿರಳಾತಿವಿರಳ. ನನ್ನದು ಇದೇ ತತ್ತ್ವ ವೃತ್ತಿ ಕುರಿತಂತೆ ಕೂಡ. ಜೂನ್ ಆಖೈರಿನಲ್ಲಿ ಆ ತರಗತಿಗಳನ್ನು ನಾನು ಮೊದಲ ಬಾರಿಗೆ ಭೇಟಿ ಆದಾಗ ಗುರುರಾಜರಾಯರ ವಿವರಣೆ ನಿಜವೆಂಬುದು ಗೊತ್ತಾಯಿತು. ಅವರೆಲ್ಲರೂ ತೀಕ್ಷ್ಣ ಮತಿಗಳು, ಮಾಮೂಲೀ ಪಾಠಗಳು ಅವರಿಗೆ ಹಿಡಿಸುತ್ತಿರಲಿಲ್ಲ, ಹೀಗಾಗಿ ಮೇಷ್ಟ್ರುಗಳನ್ನು ಗೋಳುಹೊಯ್ದುಕೊಳ್ಳುತ್ತಿದ್ದರು ಎಂಬುದು ಶೀಘ್ರದಲ್ಲಿ ಅರಿವಿಗೆ ಬಂತು. ತದನುಗುಣವಾಗಿ ಬೋಧನ ಕ್ರಮವನ್ನು ಮಾರ್ಪಡಿಸಿದೆ ಸುಹಾಸ ಮತ್ತು ಗಣಿತ ಪರಿಕಲ್ಪನೆಗಳ ಇತಿಹಾಸ ಸಹಿತ. ಮೂರನೆಯ ದಿನದಿಂದ ಅವರೆಲ್ಲರೂ ನನ್ನ ನೆಚ್ಚಿನ ಬಂಟರಾದರು. ಅನೇಕರು ಗಣಿತದ ವಿವಿಧ ಪ್ರಕಾರಗಳಲ್ಲಿ ಉನ್ನತ ಸಂಶೋಧನೆ ಮಾಡಲು ಕೂಡ ಹೋದರು.

ಬಿಎ ವಿದ್ಯಾರ್ಥಿಗಳಿಗೆ ಜನರಲ್ ಸೈನ್ಸ್ ಎಂಬ ವಿಷಯ ಕಡ್ಡಾಯವಾತ್ತು. ಸಾಧಾರಣವಾಗಿ ಆರ್ಟ್ಸ್ ಮತ್ತು ಕಾಮರ್ಸ್ ವಿದ್ಯಾರ್ಥಿಗಳು ಮಾಮೂಲೀ ತರಗತಿ ಶಿಸ್ತಿಗೆ ಮಣಿಯುವವರಲ್ಲ. ಜೊತೆಗೆ ಈ ಜನರಲ್ ಸೈನ್ಸ್ ಎಂಬ ವೃಥಾ ಹೊರೆಯನ್ನು ಸರ್ವಥಾ ಇಷ್ಟಪಡದವರು. ವಿಜ್ಞಾನ ಅಧ್ಯಾಪಕರೇ ಆ ಪಾಠಗಳನ್ನು ಬೋಧಿಸಬೇಕಾಗಿತ್ತು. ಯುವ

ಉಪನ್ಯಾಸಕರಿಗೆ ಆ ಕ್ಲಾಸುಗಳು ಸಿಂಹ ಸ್ವಪ್ನಗಳಾಗಿರುತ್ತಿದ್ದುವು. ಇಂಥ 'ರೌಡಿ'ಗಳ ತರಗತಿಗೆ ನನ್ನನ್ನು ಖಗೋಳ ವಿಜ್ಞಾನದ ಮೂಲಪಾಠಗಳನ್ನು ಕಲಿಸಲು ನಿಯೋಜಿಸಿದರು.

ಸುಮಾರು ೬೦ ಮಂದಿ ಒಲ್ಲದ ವಿದ್ಯಾರ್ಥಿಗಳ ಗಡಣ, ಅವರಿಗೆ ಬೇಡವಾದ ವಿಷಯದ ಬಗ್ಗೆ ಅರ್ಥವಾಗದ ಭಾಷೆಯಲ್ಲಿ (ಇಂಗ್ಲಿಷ್) ತಿಳಿಯಹೇಳಲು ನಾನು! ನೇರ ಕನ್ನಡದಲ್ಲಿ ಒಂದು ಕತೆ ಹೇಳಿದೆ.

"ಇರುಳ ಆಗಸದಲ್ಲಿ ಮಿನುಗುವ ಅರಿಲುಗಳ ಸಂಖ್ಯೆ ಎಷ್ಟು?" ಮಂತ್ರಿ ಬೀರಬಲನಿಗೆ ಅರಸ ಅಕ್ಬರ್ ಹಾಕಿದ ಪ್ರಶ್ನೆ.

"ಈ ರಾತ್ರಿ ಪೂರ್ತಿ ಎಣಿಸಿ ನಾಳೆ ಬೆಳಗ್ಗೆ ತಮಗೆ ಅರಿಕೆ ಮಾಡುತ್ತೇನೆ, ಪ್ರಭು!"

ಬೀರಬಲ್ ಅಂದು ರಾತ್ರಿ ತುಸು ಬೇಗನೆ ಮಲಗಿ ಮರುಮುಂಜಾನೆ ತಡವಾಗಿ ಎದ್ದು ಆಸ್ಥಾನಕ್ಕೆ ಸಕಾಲದಲ್ಲಿ ಹೋದ. ಆತನ ಹಿಂದೆ ನಾಲ್ವರು ಪಟುಭಟರು ಹಿರಿಭಾರದ ಭಾರೀಮೂಟೆ ಹೊತ್ತು ತಂದು ದರ್ಬಾರಿನಲ್ಲಿ ಭಯಭಕ್ತಿ ಸಹಿತ ಪ್ರತಿಷ್ಠಾಪಿಸಿದರು.

"ನಕ್ಷತ್ರಸಂಖ್ಯೆ ಬಲು ಹಿರಿದು, ಮಹಾರಾಜ! ಅದನ್ನು ಈ ಮೂಟೆಯೊಳಗೆ ಹಿಡಿದಿಟ್ಟಿದ್ದೇನೆ. ತಾವೇ ಪರಾಂಬರಿಸೋಣವಾಗಲಿ" ಬೀರಬಲ್ ವಿವರಣೆ ನೀಡಿದ.

ಹಾಗೆ ಮಾಡಿದಾಗ ರಾಜ ಕಂಡದ್ದೇನು? ತುಂಬಿ ಬಿರಿವ ಮರಳ ಕಣಗಳ ನಿಬಿಡ ರಾಶಿ! ಕಣಗಳ ಎಣಿಕೆ ಹೇಗೆ ಅಸಾಧ್ಯವೋ ನಕ್ಷತ್ರಗಳ ಎಣಿಕೆ ಕೂಡ ಹಾಗೆ ಎಂಬುದು ಧ್ವನಿ.

ಬಿಎ ಕ್ಲಾಸಿನ 'ರೌಡಿ'ಗಳು ಮಂತ್ರಮುಗ್ಧರಾಗಿ ಆಲಿಸಿದರು. "ಇದು ಬರೀ ಮಾತಿನ ಚಮತ್ಕಾರ" ಎಂದನೊಬ್ಬ. "ಹಾಗಾದರೆ ಖುದ್ದು ನೀವೇ ಏಕೆ ಈ ಸಾಹಸ ಪ್ರದರ್ಶಿಸಬಾರದು? ಹಿಂದೆ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಗಳಾಗಿದ್ದ ನಾನು ಮತ್ತು ನನ್ನ ಓರಗೆಯವರು ಇದನ್ನು ಮಾಡಿ ಗೆದ್ದಿದ್ದೇವೆ. ನಿಮ್ಮಂಥ ವೀರಾಧಿವೀರರಿಗೆ ಇದೊಂದು ಆಟ. ಆಡಲು ಧೈರ್ಯವುಂಟೇ?"

ಇಡೀ ಕ್ಲಾಸ್ "ಯೆಸ್ ಸರ್! ಖಂಡಿತ" ಎಂದು ಘೋಷಿಸಿತು. ಮುಂದೆ ಅವರು ಖುದ್ದು ಸೈನ್ಸ್ ವಿದ್ಯಾರ್ಥಿಗಳಿಗಿಂತಲೂ ಹೆಚ್ಚು ವಿಧೇಯರಾದರು. ಅವರ ಸಾಲಿನಲ್ಲಿ ಡಿ. ವೀರೇಂದ್ರಕುಮಾರ್ ಎಂಬ ಒಬ್ಬ ತರುಣ ತೇಜಸ್ವಿಯೂ ಕೆ. ಭೀಮಪ್ಪ ನಾಯಕ ಎಂಬ ಧಡೂತಿಕಾಯನೂ ಇದ್ದರೆಂಬುದು ಭವಿಷ್ಯದ ಎರಡು ಭಿನ್ನ ಸಂದರ್ಭಗಳಲ್ಲಿ ಎರಡು ವಿಭಿನ್ನ ನೆಲೆಗಳಲ್ಲಿ ಅಕಸ್ಮಾತ್ತಾಗಿ ಪ್ರಕಟವಾದಾಗ ನನಗೊಂದು ಬಗೆಯ ಧನ್ಯತಾಭಾವ ಬಂತು. ಯುಕ್ತ ವೇಳೆಯಲ್ಲಿ ಅವನ್ನು ವಿವರಿಸುತ್ತೇನೆ.

ನನ್ನ ಈ 'ಯಶಸ್ಸು' ಕಾಲೇಜ್ ಡೈರೆಕ್ಟರ್ ಜಯಲಕ್ಷಮ್ಮಣ್ಣಿಯವರ ವರೆಗೂ ಹರಡಿತೆಂಬುದು ಅವರಿಂದ ನನಗೊಂದು ಅನಿರೀಕ್ಷಿತ ಕರೆ ಬಂದಾಗ ತಿಳಿಯಿತು. ನನ್ನಿಂದೇನಾದರೂ ತಪ್ಪಾಗಿದೆಯೋ ಎಂಬ ಅಳುಕಿನಿಂದ ಹೋದೆ. ಇಲ್ಲ! ಅವರು ನನ್ನ ಪ್ರಯೋಗ ವಿಧಾನವನ್ನು ಹೊಗಳಿ ಇದೇ ಪ್ರಯೋಗವನ್ನು ಆರ್‌ಸಿಕಾಲೇಜ್ ಆಫ್ ಕಾಮರ್ಸ್‌ನಲ್ಲಿಯೂ ಮಾಡಬೇಕೆಂದು ಆದೇಶಿಸಿದರು. ಅದು ಕೂಡ ಸರ್ಕಾರೀ ಕಾಲೇಜೇ.

ಹೊಸ ಉತ್ಸಾಹದಿಂದ ಹೋದೆ. ಆದರೆ ಆ ಅರುವತ್ತಕ್ಕೂ ಹೆಚ್ಚು ಶ್ರೀಮಂತ ಬುದ್ಧಿವಂತ ಆದರೆ ನಿರಂಕುಶ ಮಂಗಗಳು ನನ್ನನ್ನು -- ಪೂರ್ತಿ ಅಪರಿಚಿತನನ್ನು --'ಸ್ವಾಗತಿಸಿದ' ಪರಿ ನನ್ನ ಮಿಲಿಟರಿ ವ್ಯಕ್ತಿತ್ವಕ್ಕೂ ಹಿರಿ ಸವಾಲಾಯಿತು:

ಏರಿರದ ಬಂಡೆಗಳು ಧರೆಯೊಳಗೆ ನೂರಾರು
ಏರಲಾಗದ ಬಂಡೆ ಸೃಷ್ಟಿಯೊಳಗಿಲ್ಲವೋ!
ಧೀರನಿದನೆದುರಿಸುತ ಬಂಡೆಮಂಡೆಯ ತುಳಿದು
ಹಾರಿಸುವ ವಿಜಯದ ಪತಾಕೆಯನು ಅತ್ರಿಸೂನು

ನಗುನಗುತ್ತ ತರಗತಿಯನ್ನು ಪ್ರವೇಶಿಸಿದೆ. ಒಕ್ಕೊರಲಿನಿಂದ ಅವರು ಕೂಗಿದರು, ``Down with general science. Go back GTN!'' ಮತ್ತೆ ಈ ಘೋಷಣೆ ತಾರಸ್ಥಾಯಿಯಲ್ಲಿ ಮುಂದುವರಿಯಿತು. ಅಷ್ಟು ಹೊತ್ತೂ ನಾನು ಹಸನ್ಮುಖನಾಗಿಯೇ ಅವರೆದುರು ನಿಂತಿದ್ದೆ. ಅವರಿಗೆ ಕೂಗಿ ಕೂಗಿ ಬಚ್ಚಿದಾಗ ನಾನು ದನಿಗೂಡಿಸಿದೆ, ``Friends, RCC-yans and my dear children! Lend me your ears.''

``You've twisted Mark Antony's funeral speech!''

``No, not at all. Listen to me further. I come to bury superstitions, not to praise general science. The evil that teachers do lives after them....'' ಇಷ್ಟು ಹೇಳುವಾಗ ಅವರು ಸುಸ್ತು, "ಅಳುವ ಕಡಲಿನಲಿ ತೇಲಿ" ಬಂದಿತಾ ಮಂದಹಾಸಾ! ಮುಂದೆ ಅವರನ್ನು ನನ್ನ ವಶಕ್ಕೆ ತೆಗೆದುಕೊಂಡು ಇಡೀ ಪಠ್ಯ

ಪಟ್ಟಿಯನ್ನು ಆತ್ಮೀಯ ವಾತಾವರಣದಲ್ಲಿ ಪೂರೈಸಿದೆ. ವರ್ಷದ ಕೊನೆಯ ಪಾಠ. ಇಡೀ ಕ್ಲಾಸ್ ಏಕವ್ಯಕ್ತಿಯಂತೆ ಎದ್ದು ನಿಂತು ನನಗೆ ಪ್ರೀತಿಯ ಶುಭ ವಿದಾಯ ಹೇಳಿತು, ನೆನಪಿನ ಕಾಣಿಕೆಯನ್ನೂ ನೀಡಿತು.

ಸರ್ಕಾರೀ ಕಾಲೇಜಿನ ನರಕೇಂದ್ರ ಅಂತೆಯೇ ಪ್ರಾಂಶುಪಾಲರ ಮಂತ್ರಿಸಂಪುಟ ಆ ಮೂರು ವರ್ಷ (೧೯೬೫–೬೮) ಗಣಿತ ವಿಭಾಗವಾಗಿತ್ತು. ನಿಸ್ಪೃಹ ಮತ್ತು ಪ್ರೀತಿಯ ಈ ಭಾಂಡದಲ್ಲಿ ನಾವೆಲ್ಲರೂ ಕೂಡಿ ಮಾಡಿದ ಪ್ರಯೋಗಗಳು ಮತ್ತು ಕಲಿತ ಜೀವನ ಮೌಲ್ಯಗಳು ಅವೆಷ್ಟೋ. ಮುಖ್ಯವಾದ ಕೆಲವನ್ನು ಹೆಸರಿಸುವುದಾದರೆ:
ಉಪಾಧ್ಯಾಯರಲ್ಲಿ ಶ್ರೇಷ್ಠರು, ಮಧ್ಯಮರು ಅಥವಾ ಕನಿಷ್ಠರು ಇರಬಹುದು, ಆದರೆ
ಕೆಟ್ಟ ವಿದ್ಯಾರ್ಥಿ ಹುಟ್ಟಲೇ ಇಲ್ಲ (ಕುವಿದ್ಯಾರ್ಥಿ ನಜಾಯತಿ).
ಸಮಷ್ಟಿಹಿತಕ್ಕೆ ಬದ್ಧವಾದ ವ್ಯಷ್ಟಿಯೂ ವ್ಯಷ್ಟಿಹಿತವನ್ನು ರಕ್ಷಿಸುವ ಸಮಷ್ಟಿಯೂ ಒಟ್ಟಾಗಿ ಬೆಳಗುತ್ತವೆ.
ಕನಿಷ್ಠ ವ್ಯಷ್ಟಿಯ ತ್ರಾಣಮಾನಕವೇ ಸಮಷ್ಟಿಯ ನಿಜ ತ್ರಾಣ.
ಋಷಿವಾಕ್ಯ ವಿಜ್ಞಾನಕಲೆಯೊಡನೆ ಸೇರಿರಲು ಜಸವು ಜನಜೀವನಕೆ ಮಂಕುತಿಮ್ಮ.
ನಮ್ಮ ಪ್ರಾಚೀನ ಚಿಂತಕರಾದರೂ ನೀಡಿದ ಧ್ಯೇಯವಾಕ್ಯ ಇದೇ ಅಲ್ಲವೇ? "ಸಹನಾವವತು ಸಹನೌ ಭುನಕ್ತು ಸಹವೀರ್ಯಂಕರವಾವಹೈ ತೇಜಸ್ವಿನಾವಧೀತಮಸ್ತುಮಾವಿದ್ವಿಷಾವಹೈ ಓಂ ಶಾಂತಿಃ ಶಾಂತಿಃ ಶಾಂತಿಃ."

ಇನ್ನು ಕಾಲೇಜಿನ ಪಾಠೇತರ ವಿಭಾಗಗಳಲ್ಲಿ ನಾವು ಕೈಗೊಂಡ ಹಲವಾರು ರಚನಾತ್ಮಕ ಕಾರ್ಯಗಳಲ್ಲಿ ಹೆಸರಿಸಬೇಕಾದವು: ಅಧ್ಯಾಪಕ ಸಂಘದ (ಸ್ಟಾಫ್ ಕ್ಲಬ್) ಮೂಲಕ ಏರ್ಪಡಿಸಿದ ವಿವಿಧ ಶೈಕ್ಷಣಿಕ ಕ್ರಿಯಾಕಲಾಪಗಳು, ಆಸಕ್ತ ಅಧ್ಯಾಪಕರಿಗೆ ತುಪಾಕಿ ತರಬೇತಿ ನೀಡಲು (ಎನ್‌ಸಿಸಿ ನೆರವಿನಿಂದ) ರೈಫ಼ಲ್ ಕ್ಲಬ್‌ನ ಸ್ಥಾಪನೆ, ಆಯ್ದ ವಿದ್ಯಾರ್ಥಿ ಘಟಕಗಳ ಮೂಲಕ ಸಮಾಜಸೇವೆ, ನಾಟಕ, ಸಂಗೀತ ಮುಂತಾದ ಕಲಾಪ್ರದರ್ಶನಗಳು, ಕಾಲೇಜ್ ವಾರ್ಷಿಕ ಸಂಚಿಕೆಯ ಸಂಪಾದನೆ ಮತ್ತು ಮುದ್ರಣ, ಸಾವನದುರ್ಗ, ನಂದಿಬೆಟ್ಟ, ರಾಮನಗರದ ಗುಹೆಗಳು ಮುಂತಾದೆಡೆಗಳಿಗೆ ಶೈಕ್ಷಣಿಕ ಪ್ರವಾಸಗಳು ಇತ್ಯಾದಿ. "ಕಾಲೇಜ್ ಕುರಿತು ಯಾವುದೇ ಪ್ರಶ್ನೆ, ವಿಚಾರಣೆ ಅಥವಾ ಸಮಸ್ಯೆ ಇದ್ದರೆ ಗಣಿತ ವಿಭಾಗವನ್ನು ಸಂಪರ್ಕಿಸಿ" -- ಇದು ಅಂದು ವಿದ್ಯಾರ್ಥಿಗಳಲ್ಲಿ ಪ್ರಚಲಿತವಾಗಿದ್ದ ಘೋಷಣೆ.

ಯಾವುದೇ ಸಂಸ್ಥೆ ಅಥವಾ ವ್ಯಕ್ತಿ ಸದಾ ಉತ್ಸರ್ಪಿಣೀ ಪರ್ವದಲ್ಲಿಯೇ ಇರುವುದಿಲ್ಲ. ೧೯೬೮–೬೯ನೆಯ ಶೈಕ್ಷಣಿಕ ವರ್ಷಾರಂಭದಲ್ಲಿ ಪ್ರಾಂಶುಪಾಲ ಉಮರ್ಜಿಯವರು ಸರ್ಕಾರೀ ಸೇವೆ ಬಿಟ್ಟು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸ್ಟ್ಯಾಟಿಸ್ಟಿಕ್ಸ್ ವಿಭಾಗದ ಮುಖ್ಯಸ್ಥರಾಗಿ ತೆರಳಿದರು, ಹೊಸ ಪ್ರಾಂಶುಪಾಲರು ಬಂದರು, ಇತ್ತ ಗುರುರಾಜರಾಯರಿಗೆ ವರ್ಗವಾಯಿತು. ಹೀಗಾಗಿ ನಮ್ಮ ನರಕೇಂದ್ರ ವಿಘಟಿತವಾಯಿತು. ಹೊಸ ಪ್ರಾಂಶುಪಾಲರಿಗೆ ನಮ್ಮಂಥ 'ಹಳೆಹುಲಿ'ಗಳ ಬಗ್ಗೆ ವಿಶ್ವಾಸವಿರಲಿಲ್ಲ (ಪೂರ್ವಗ್ರಹ), ಇನ್ನು ಇತರರನ್ನು ಸಂಘಟಿಸಿ ಆಡಳಿತೆಯನ್ನು ಸುಸೂತ್ರವಾಗಿ ನಿರ್ವಹಿಸುವ ಚಾಕಚಕ್ಯ ತಿಳಿದಿರಲಿಲ್ಲ. ಫಲ? 'ಮಾರಿಗೌತಣ'ವಾಯಿತೆಮ್ಮಯ ಒಲುಮೆ ನಲ್ಮೆಯ ಜೇನುಗೂಡು. ಈ ಅರಾಜಕತೆಗೆ ಖುದ್ದು ಪ್ರಾಂಶುಪಾಲರೇ ತಲೆದಂಡ (ಅವರನ್ನೊಬ್ಬ ಅತೃಪ್ತ ವಿದ್ಯಾರ್ಥಿ ಕೊಲೆಗೈದ) ತೆರಬೇಕಾಯಿತು (೧೯೬೯–೭೦). ಆದರೆ ಆ ವೇಳೆಗೆ ನಾನು ವಿಶ್ವಕೋಶವೆಂಬ ಹರಿಗೋಲು ಏರಿದ್ದೆ.

ಕನ್ನಡದ ಆಸ್ತಿ ಮಾಸ್ತಿಯವರೊಂದಿಗೆ ರಸಯಾನ
ಅಧ್ಯಾಯ ಅರವತ್ತು



"ದೊಡ್ಡದಾಗಿ ಬದುಕಿ ಬಾಳಿ, ದೊಡ್ಡವರ ಪರಿಚಯ ಮಾಡಿಕೊಂಡು, ಅವರ ಸಂತೋಷಗಳನ್ನು ತಮ್ಮ ಬಳಿಗೆ ಬಂದವರಿಗೆ ದಾನ ಮಾಡಿ ಒಂದು ಜೀವನವನ್ನು ಕೃತಾರ್ಥವಾಗಿ ಮಾಡಿಕೊಂಡಿರುವ ಮಾಸ್ತಿಯವರ ಬದುಕು ಒಂದು ಮಹಾಕೃತಿ. ಇಂಥಲ್ಲಿ ಬಾಳು, ಕೃತಿ ಸಮರಸ, ಸಮಸತ್ತ್ವವಾಗುತ್ತವೆ; ಫಲಿಸುತ್ತವೆ." – ವಿಸೀ

ರಾಜ್ಯ ಸರಕಾರದಿಂದ ಪ್ರಶಸ್ತಿ ಪಡೆದ (೧೯೬೬) ಸಾಹಿತಿಗಳಿಗೆ ಒಂದು ಅಭಿನಂದನ ಸಮಾರಂಭವನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಸಭಂಗಣದಲ್ಲಿ ಏರ್ಪಡಿಸಿದ್ದರು (೧೦-೩-೧೯೬೬). ಆಗ ಭಾಷಣ ಮಾಡಲು ಆಹ್ವಾನಿತರಾದವರಲ್ಲಿ ನಾನೂ ಒಬ್ಬ. ಸಭೆಗೆ ಆಗಮಿಸಿದ್ದ ಮಾಸ್ತಿಯವರನ್ನು ಪರಿಷತ್ತಿನ ಅಧ್ಯಕ್ಷರು ವೇದಿಕೆಗೆ ಕರೆದೊಯ್ದು ನಾಲ್ಕು ಆಶೀರ್ವಚನ ಹರಸಬೇಕೆಂದು ಕೋರಿದರು. ಸಮಾರಂಭ ಮುಗಿದ ತರುವಾಯ ಮಾಸ್ತಿಯವರು ನನ್ನೆಡೆಗೆ ಬಂದು ಮೆಲು ಮಾತಿನಲ್ಲಿ, "ನಿಮ್ಮ ಯೋಜನೆ ಸರಿಯಾದದ್ದು, ಔಚಿತ್ಯಪೂರ್ಣವಾದದ್ದು" ಎಂದರು. ಆದದ್ದಿಷ್ಟು: ಆರು ಸಾಹಿತಿಗಳಿಗೆ ಅಂದು ಶುಭಾಶಂಸನೆ. ಆರು ಜನ ಭಾಷಣಕಾರರು. ಇವರಲ್ಲಿ ಕೆಲವರಿಗೆ ವಿಷಯ ಸರಿಯಾಗಿ ತಿಳಿಯದೇ ಅಥವಾ ತಿಳಿದದ್ದನ್ನು ಹೇಳುವಾಗ ಭಾಷೆ ಸರಿಯಾಗಿ ಹೊಂದದೇ ರಸಭಂಗವಾಗಿತ್ತು. ನಾನು ಹೇಳಬೇಕಾದುದನ್ನು ಬರೆದುಕೊಂಡು ಹೋಗಿ ಓದಿದ್ದೆ.

"ನೀವು ನಮ್ಮ 'ಜೀವನ' ಪತ್ರಿಕೆಗೆ ಹಿಂದೆ ಕತೆಗಳನ್ನು ಬರೆಯುತ್ತಿದ್ದವರಲ್ಲವೇ?" ಮಾಸ್ತಿಯವರ ಮಾತು.
"ಹೌದು ಸ್ವಾಮೀ." ಇದು ೧೯೫೧-೫೨ರ ಮಾತು. ಅವರ ಪ್ರಖರ ಜ್ಞಾಪಕ ಶಕ್ತಿ ನಿಜವಾಗಿಯೂ ಅದ್ಭುತ. ಇಲ್ಲಿಗೇ ಮುಗಿಯಲಿಲ್ಲ.
"ನೀವು ಮಡಿಕೇರಿಯವರು, ತಿಮ್ಮಪ್ಪಯ್ಯನವರ ಮಗ. ಈಗ ಇಲ್ಲೇ ಕೆಲಸದಲ್ಲಿದ್ದೀರೆಂದು ಕೇಳಿದೆ. ಬಿಡುವು ಮಾಡಿಕೊಂಡು ಮನೆಗೆ ಬನ್ನಿ. ತಿಮ್ಮಪ್ಪಯ್ಯನವರು ಚೆನ್ನಾಗಿದ್ದಾರಾ? ಈಗಲೂ ಸೈಕಲ್ ಬಿಡುತ್ತಾರಾ?" ಅವರ ಈ ಸಹಜ ವಿನಯ ಸೌಜನ್ಯಗಳಿಗೆ ಮಾರುಹೋದೆ. ಅವರ ಪರಿಚಿತ ಸಹಸ್ರರಲ್ಲಿ ದೂರದ ಅಂಚಿನಲ್ಲಿದ್ದ ನಮ್ಮ ವಿಷಯದ ಅವೆಷ್ಟು ಬಿಡಿ ವಿವರಗಳ ನೆನಪು ಅವರಿಗೆ! ಆ ವೇಳೆಗೆ ನಾನು ಬೆಂಗಳೂರಿನಲ್ಲಿ ನೆಲಸಿ ಒಂದು ವರ್ಷ ಸಂದಿತ್ತು. ನನ್ನ ಮನೆ ಮಾಸ್ತಿಯವರ ಮನೆಯ ಸಮೀಪದಲ್ಲಿಯೇ ಇದ್ದರೂ ಅಳುಕಿನಿಂದ ಅವರನ್ನು ನೋಡಲು ಅದುವರೆಗೂ ಹೋಗಿರಲಿಲ್ಲ. ಚಿಕ್ಕಂದಿನಿಂದಲೂ ನಾನು ಮಾಸ್ತಿ, ಕಾರಂತ, ಸಿಕೆವಿ, ವಿಸೀ ಮೊದಲಾದ ಮಹನೀಯರ ಉಜ್ವಲ ಭಾಷಣಗಳನ್ನು ಕೇಳಿ ಅವರ ವಿಚಾರಧಾರೆಗೂ ಕನ್ನಡದ ಸೊಗಸಿಗೂ ಮಾರುಹೋಗಿದ್ದೆ; ಅವರ ಕೃತಿಗಳನ್ನು ಓದಿ ಪ್ರಭಾವಿತನಾಗಿದ್ದೆ. ಜೊತೆಯಲ್ಲೇ ಅವರೆಲ್ಲರೂ ನನಗೆ ಅತಿ ಅಲಭ್ಯರು ಎಂಬ ಭಾವವೂ ಬೆಳೆದು ಬಂದಿತ್ತು.

ಮುಂದಿನ ಆದಿತ್ಯವಾರ ಅವರ ಮನೆಗೆ ಹೋದೆ. ನಡುಕೋಣೆಯಲ್ಲಿ ಮುದ್ರಿತ ಫಾರ್ಮುಗಳ ರಾಶಿ ಮಧ್ಯೆ ಮಾಸ್ತಿ ತುದಿಗಾಲಿನಲ್ಲಿ ಕುಳಿತಿದ್ದರು. ಹುಲುಸಾದ ಬೆಳೆ ಬಂದಿದೆ; ಕಟಾವಾಗಿ ಕಣಕ್ಕೆ ತಂದಿದ್ದಾರೆ; ಸುತ್ತಲೂ ಮೆದೆಯೊಟ್ಟಿದ್ದಾರೆ; ನಡುವೆ ತೃಪ್ತ ರೈತ ಕುಳಿತಿದ್ದಾನೆ. ಇಂಥ ಒಂದು ಪೂರ್ಣ ದೃಶ್ಯವನ್ನು ಕಂಡೆ. ಒಂದೊಂದು ಒಟ್ಟಿನಿಂದಲೂ ಒಂದೊಂದು ಫಾರ್ಮನ್ನು ಅವರು ಕ್ರಮಬದ್ಧವಾಗಿ ತೆಗೆಯುವರು, ಓರಣವಾಗಿ ಜೋಡಿಸುವರು, ಅಲ್ಲಿಗೆ ಒಂದು ಪುಸ್ತಕವಾಯಿತು. ಅದನ್ನು ಎಚ್ಚರಿಕೆಯಿಂದ ಬೇರೆಯಾಗಿ ಇಡುವರು. ನನ್ನನ್ನು ಕಂಡವರೇ ಎದ್ದು ನಿಂತು, "ಬಂದಿರಾ! ಬನ್ನಿ" ಎಂದು ಸ್ವಾಗತಿಸಿ ಒಳ ಹಜಾರಕ್ಕೆ ಕರೆದೊಯ್ದರು. ನನ್ನನ್ನು ಮೊದಲು ಕೂರುವಂತೆ ಮಾಡಿ ಮತ್ತೆ ತಾವು ಕುಳಿತರು. ಪಕ್ಕದ ಗೋಡೆಯಲ್ಲಿ ರವೀಂದ್ರನಾಥ ಠಾಕೂರರ ಸ್ವಹಸ್ತ ಲಿಖಿತ Thou hast made me known to friends whom I knew not... ಚರಣಕ್ಕೆ ಚೌಕಟ್ಟು ಕಟ್ಟಿ ತೂಗಲಾಗಿತ್ತು. ಸ್ವತಃ ಕವಿಗಳೇ ಅದನ್ನು ಮಾಸ್ತಿಯವರಿಗೆ ಬರೆದು ಕೊಟ್ಟುದಂತೆ.

ಹಿಂದಿನ ದಿನಗಳನ್ನು ಮಾಸ್ತಿಯವರು ಸ್ಮರಿಸಿಕೊಂಡರು. 'ಚಿಕ್ಕವೀರರಾಜೇಂದ್ರ' ಕಾದಂಬರಿಯನ್ನು ಬರೆಯುವ ಮುನ್ನ ಮಡಿಕೇರಿಗೆ ತಾವು ಹೋದದ್ದು; ಅಪ್ಪುಕಳದ ಅರಮನೆ, ಉಡುವತ್ತುಮೊಟ್ಟೆ ಇಲ್ಲೆಲ್ಲ ನನ್ನ ತಂದೆಯವರ ನೆರವಿನಿಂದ ಅಂಡಲೆದು ವಿಷಯ ಸಂಗ್ರಹ ಮಾಡಿದ್ದು ಮುಂತಾದವನ್ನೆಲ್ಲ ಸಂತೋಷದಿಂದ ಹೇಳಿದರು.
"ತಿಮ್ಮಪ್ಪಯ್ಯನವರಿಗೆ ಹೇಳಿ, ಈ ಪ್ರಾಯದಲ್ಲಿ (೬೭) ಅವರು ಸೈಕಲ್ ತುಳಿಯುವುದು ಒಳ್ಳೆಯದಲ್ಲ, ನಾನು ಹೇಳಿದ್ದೇನೆ ಎಂದು."
ನಾನು ಎದ್ದೆ, "ನಿಮಗೆ ನನ್ನಿಂದ ಏನಾದ್ರೂ ಆಗಬೇಕಾಗಿದ್ದರೆ ಹೇಳಿ, ಕರಡು ತಿದ್ದುವುದು, ಮುದ್ರಣಾಲಯಕ್ಕೆ ಹೋಗುವುದು ಇವನ್ನೆಲ್ಲ ನಾನು ಸಂತೋಷವಾಗಿ ಮಾಡಬಲ್ಲೆ."
ಅವರು ತಮ್ಮ ಆತ್ಮೀಯ ಮಲ್ಲಿಗೆ ಮೊಗ್ಗು ಅರಳುವ ನಗು ಸೂಸಿ ನುಡಿದರು, "ಇವೆಲ್ಲವೂ ನನಗೆ ಬಲು ಪ್ರಿಯವಾದ ಕೆಲಸಗಳು. ಹೊತ್ತು ಹೋಗುತ್ತದೆ. ಜೊತೆಗೆ ಆರೋಗ್ಯವೂ ಚೆನ್ನಾಗಿರುತ್ತದೆ, ನೋಡಿ."
"ಇಲ್ಲ, ಇಲ್ಲ. ಈ ಕೆಲಸಗಳಿಂದ ನಿಮಗೆ ಬಿಡುವು ದೊರೆತರೆ ಇನ್ನಷ್ಟು ಸೃಜನಾತ್ಮಕ ಕಾರ್ಯ ನಡೆಸಬಹುದು. ಆ ದೃಷ್ಟಿಯಿಂದ ಹಾಗೆ ಹೇಳಿದೆ."
"ಇವೆಲ್ಲವೂ ಒಂದೇ ಸೃಜನಾತ್ಮಕ ಕಾರ್ಯದ ವಿವಿಧ ಭಾಗಗಳು. ಇವು ಚೆನ್ನಾಗಿದ್ದರೆ ತಾನೇ ಅದು ಚೆನ್ನ?"
ಅವರ ಮಾತೇ ಹಾಗೆ, ತೋರ್ಕೆಗೆ ಬಲು ಸರಳ. ಯೋಚಿಸಿದಷ್ಟೂ ಅದರಿಂದ ಹೆಚ್ಚಿನ ಅರ್ಥ ಸ್ಫುರಣವಾಗುತ್ತದೆ. ಎಚ್ಚೆಸ್ಕೆಯವರೆಂದಂತೆ, ಮಾಸ್ತಿಯವರನ್ನು ಮೊದಲ ಬಾರಿಗೆ ನೋಡಿದ ಯಾರಿಗಾದರೂ ಇವರ ಸಾಹಿತ್ಯ ಸಿದ್ಧಿಯ ಅರಿವಾಗುವುದಿಲ್ಲ. ಇವರ ಲೇಖನಿಗೂ ಮೂರ್ತಿಗೂ ಅಷ್ಟೊಂದು ವ್ಯತ್ಯಾಸ."

ಇನ್ನೆರಡು ವಾರ ಕಳೆದ ಮೇಲೆ ಪುನಃ ಅವರ ಮನೆಗೆ ಹೋದೆ, "ನನ್ನಿಂದ ಏನಾದರೂ ಕೆಲಸ ಆಗಬೇಕೆ" ಎಂದು ಕೇಳಲು. ಅವರು ಒಂದು ಕ್ಷಣ ಯೋಚಿಸಿದರು. ನೇರವಾಗಿ ಮಾತಾಡಿದರು, "ಒಂದು ವಿಚಾರ ನಾನು ನಿಮ್ಮಲ್ಲಿ ಪ್ರಸ್ತಾವಿಸಿದರೆ ಅದು ಸರಿಯೋ ಅಲ್ಲವೋ ತಿಳಿಯದು."
"ನೀವು ಅಂಥ ಯಾವ ಸಂಕೋಚವನ್ನೂ ನನ್ನ ವಿಷಯದಲ್ಲಿ ಇಟ್ಟುಕೊಳ್ಳಬೇಡಿ. ನನ್ನಿಂದ ಆಗುವಂಥ ಕೆಲಸವಾದರೆ ಹೇಳಿ, ಖಂಡಿತ ಸಂತೋಷದಿಂದ ಮಾಡಲು ಪ್ರಯತ್ನಿಸುತ್ತೇನೆ."
"ನನ್ನ ಜೀವನ ಬೆಳೆದು ಬಂದ ಬಗೆಯನ್ನು ಬರೆಯಬೇಕೆಂದು ಹಿಂದೊಮ್ಮೆ ಮನಸ್ಸಾಯಿತು. ನಾನು ಹೇಳಿದುದನ್ನು ಬರೆದುಕೊಳ್ಳುವ ಮಹನೀಯರೊಬ್ಬರು ಅಂದು ಸಿಕ್ಕಿದ್ದರು. ಆದರೆ ಮಧ್ಯೆ ವಿಘ್ನ ಬಂದು ಕೆಲವು ವರ್ಷಗಳ ಹಿಂದೆ ಆ ಕೆಲಸ ನಿಂತುಹೋಯಿತು. ಈಗ ಆ ಕೆಲಸವನ್ನು ನೀವು ಮುಂದುವರಿಸುವುದಾದರೆ ಬಹಳ ಸಂತೋಷ."
"ಸಂತೋಷದಿಂದ ಮಾಡುತ್ತೇನೆ ಸ್ವಾಮೀ."
"ಇಲ್ಲಪ್ಪ, ನೀವು ಯೂನಿವರ್ಸಿಟಿ ಪ್ರೊಫೆಸರ್. ನಾನು ಹೇಳಿದ್ದನ್ನು ನೀವು ಬರೆದುಕೊಳ್ಳುವುದೆಂದರೇನು! ಇದು ಸರಿಯೇ? ನಾನೇನೋ ನೀವು ಕೇಳಿದ್ದಕ್ಕೆ ಹೇಳಿಬಿಟ್ಟೆ."
"ಈ ಕೆಲಸವನ್ನು ನನಗೆ ನೀವು ಒಪ್ಪಿಸಿರುವುದೇ ಅನುಗ್ರಹ ಎಂದು ತಿಳಿಯುವವ ನಾನು. ಆದ್ದರಿಂದ ಈ ವಿಚಾರ ತಾವು ಎಳ್ಳಷ್ಟೂ ಸಂಕೋಚಪಡಬಾರದು. ಒಂದೇ ವಿಚಾರ. ಕಾಲೇಜು ಇರುವ ದಿವಸಗಳಂದು ನಾನು ರಾತ್ರಿ ವೇಳೆಯಲ್ಲೂ ರಜಾ ದಿವಸಗಳಲ್ಲಿ ನೀವು ಹೇಳಿದ ವೇಳೆಯಲ್ಲೂ ಬಂದು ಬರೆದುಕೊಳ್ಳುತ್ತೇನೆ."
"ಸಂಜೆ ಹೊತ್ತು ನೀವು ದಣಿದು ಮನೆಗೆ ಮರಳುತ್ತೀರಿ. ನನಗೂ ಕ್ಲಬ್ ಇದೆ. ರಜಾ ದಿನಗಳಲ್ಲಿ ಮಾತ್ರ ನಡೆಯಲಿ, ಹೇಳಿ. ನಿಧಾನವಾಗಿಯೇ ಮುಂದುವರಿಯಲಿ. ಅಪರಾಹ್ನ ೩ ಗಂಟೆಗೆ ಆರಂಭಿಸೋಣವೇ?"

“ಆಗಬಹುದು. ಮುಂದಿನ ಆದಿತ್ಯವಾರ ಬರುತ್ತೇನೆ.” ಮಹತ್ತನ್ನು ಸಾಧಿಸಿದಾಗ ಒದಗುವ ಉತ್ಸಾಹದ ನಡೆಯಿಂದ ಪುಟಿಯುತ್ತ ಮನೆಗೆ ಮರಳಿದೆ.

ಮುಂದಿನ ಆದಿತ್ಯವಾರ. ೨ ಗಂಟೆ ೫೯ ಮಿನಿಟಿಗೆ ಸರಿಯಾಗಿ ನಾನು ಅವರ ಗೇಟಿನ ಬಳಿಗೆ ಹೋದೆ. ಹೊರ ಜಗಲಿಯಲ್ಲಿ ಬಾಗಿಲಿನ ಹಿಂದೆ ನನ್ನ ಬರವನ್ನೇ ಕಾಯುತ್ತ ನಿಂತಿದ್ದರು ಅಜ್ಜಯ್ಯ. “ನಮಸ್ಕಾರ ದಯಮಾಡಿ” ಅವರದೇ ಮೊದಲ ಮಾತು. ನಾನು ಚಪ್ಪಲಿಗಳನ್ನು ಜಗಲಿಯ ಮೂಲೆಯಲ್ಲಿ ಇಡಲು ಹೋದಾಗ ಅವರೆಂದರು, “ಬೇಡಿ, ಇಲ್ಲಿಡಬೇಡಿ. ಪೇಟೆ ಕದ್ದು ಬಿಡುತ್ತಾರೆ. ಒಳಗೇ ಇಡುವಿರಂತೆ.” ನಡುಮನೆಯಲ್ಲಿ ಬಾಗಿಲ ಮರೆಯಲ್ಲಿ ಇಟ್ಟೆ. ನಾನುಮುಂದೆ ನಡೆಯಬೇಕು, ಅವರು ಹಿಂದೆ ಬರಬೇಕು – “ಭಕ್ತಜನ ಮುಂದೆ ನೀನವರ ಹಿಂದೆ” ಎಂಬ ದಾಸವಾಣಿಯ ಪ್ರತ್ಯಕ್ಷರೂಪವದು. ನಡುಮನೆ ದಾಟಿ ಒಳಕೋಣೆ ಹಾದು ಮೆಟ್ಟಲು ಏರಿ ಮಹಡಿ ತಲಪಿದ್ದಾಯಿತು. ಅಲ್ಲೆಲ್ಲ ಪುಸ್ತಕಗಳ ರಾಶಿ. ಬೀರುಗಳಲ್ಲಿ ಓರಣವಾಗಿಟ್ಟ ಹಲವಾರು ಗ್ರಂಥಗಳು. ಒಂದು ಸೋಫದ ಮೇಲೆ ನನ್ನನ್ನು ಕೂರಲು ಹೇಳಿದರು. ಅವರು ನಿಂತೇ ಇರುವಾಗ ನಾನು ಹೇಗೆ ಕೂರಲಿ? ಭುಜ ತಟ್ಟಿ ಕೂರಿಸಿ ಎದುರಿಗೆ ಒಂದು ಕಾಲುಮಣೆ ತಂದಿಟ್ಟರು. ಹಿಂದೆಂದೋ ಬರೆಸಿದ್ದ ಸುಮಾರು ೪೦ ಪುಟಗಳಷ್ಟು ವಿಷಯವನ್ನು ನನಗೆ ಕೊಟ್ಟು, “ಹೀಗೆ ಮೇಲಿಂದ ಮೇಲೆ ನೋಡಿ. ಇದೇ ಧಾಟಿಯಲ್ಲಿ ಮುಂದುವರಿಸಬೇಕು” ಎಂದರು. ಬರೆಯುವ ಕಾಗದ ಸಿದ್ಧವಾಯಿತು. ಮುಂದಿನ ಐದು ನಿಮಿಷಗಳಲ್ಲಿ ಅವರು ತಯಾರಾಗಿ ನನ್ನ ಎದುರಿನ ಕುರ್ಚಿಯಲ್ಲಿ ಕುಳಿತರು. ವೀರನಾರಾಯಣನೆ ಕವಿ! ಲಿಪಿಕಾರ ಮಾತ್ರ ಕುಮಾರವ್ಯಾಸ ಅಲ್ಲ!

ಈ ಘಟನೆಯನ್ನು ಕುರಿತು ‘ಭಾವ’ ಗ್ರಂಥದ ಮುನ್ನುಡಿಯಲ್ಲಿ ಮಾಸ್ತಿಯವರು ಬರೆದಿರುವ (೧೭–೧೨–೧೯೬೮) ಮಾತುಗಳಿವು, “ಮೂರು ವರ್ಷಗಳ ಹಿಂದೆ ಗೆಳೆಯ ಶ್ರೀ ಜಿ.ಟಿ. ನಾರಾಯಣರಾವ್ ಇದರ ಪ್ರಸ್ತಾಪ ತೆಗೆದು ನಾನು ಹೇಳುವುದಾದರೆ ತಾವು ಬರೆದುಕೊಳ್ಳುವುದಾಗಿ ಮಾತುಕೊಟ್ಟರು. ತುಂಬ ಹಿಂದು ಮುಂದು ನೋಡಿ ಇವರು ಈ ಕೆಲಸವನ್ನು ಮಾಡುವುದನ್ನು ನಾನು ಒಪ್ಪಿದೆನು. ವಾರದಲ್ಲಿ ಒಂದು ದಿನ, ಭಾನುವಾರ, ಕೆಲವು ವಾರ ಮಧ್ಯೆ ಬರಬಹುದಾದ ರಜಾದಿನ, ತಪ್ಪದೆ ಬಂದು ಹೇಳಿದ್ದನ್ನು ಬರೆದುಕೊಂಡು ಈ ಮಿತ್ರರು ಹಲವು ತಿಂಗಳಲ್ಲಿ ಪುಸ್ತಕದ ಹಸ್ತಪ್ರತಿಯ ಆರು ನೂರು ಪುಟವನ್ನು ಸಿದ್ಧ ಮಾಡಿದರು.”

ಅವರು ಅರೆತೆರೆದ ಕಣ್ಣುಗಳಿಂದ ಧ್ಯಾನಸ್ಥರಾಗಿರುವಂತೆ ಕುಳಿತಿರುತ್ತಿದ್ದರು. ದೃಷ್ಟಿ ಅಂತರ್ಮುಖಿಯಾಗಿ ಹಿಂದೆ ನಡೆದ ಸಂಗತಿಗಳನ್ನು, ಚಲನ ಚಿತ್ರದಲ್ಲಿ ಕಾಣುವಂತೆ, ನೋಡುತ್ತಿದ್ದಿರಬೇಕು. ಬಾಯಿ ಆ ಚಿತ್ರಕ್ಕೆ ಸರಿಹೊಂದುವ ಮಾತನ್ನು ಸಾವಕಾಶವಾಗಿ ಪೋಣಿಸುತ್ತಿತ್ತು. ಅರ್ಥಕ್ಕೆ ಲೋಪ ಬರದಂತೆ ಬರೆದುಕೊಳ್ಳಲು ಅನುಕೂಲಿಸುವಂತೆ ವಾಕ್ಯಗಳನ್ನು ಒಡೆದು ಹೇಳುವರು. ಸ್ವಲ್ಪ ತಡೆದು ಮುಂದುವರಿಸುವರು. ನಾನು ತಲೆ ಅಡಿ ಹಾಕಿ ಲೆಕ್ಕಣಿಕೆಯನ್ನು ಹರಿಯಬಿಡುತ್ತಿದ್ದೆ. ಇನ್ನೊಮ್ಮೆ ಹೇಳಿ ಎಂದು ಕೇಳುವ ಅವಕಾಶವೇ ಒದಗುತ್ತಿರಲಿಲ್ಲ – ಅಷ್ಟರ ಮಟ್ಟಿಗೆ ಪರೇಂಗಿತಜ್ಞರು ಮಾಸ್ತಿಯವರು. ಇನ್ನು ಆ ವಾಕ್ಯಗಳೋ ಸಹಜವಾಗಿ ಒಪ್ಪಪಡೆದು ಪೂರ್ಣ ಸಿದ್ಧವಾಗಿ ಕೋದ ಶಬ್ದ ಮುತ್ತುಗಳ ಸುಂದರ ಮಾಲೆಗಳೇ ಸರಿ. ಅವು ತಾವೇ ತಾವಾಗಿ ಹೊರಹೊಮ್ಮಬೇಕು. ಠಾಕೂರರ ಮಾತು, This little flute of a reed thou hast carried over hills and dales, and has breathed through it melodies eternally new ಇದರ ಪೂರ್ಣ ಅರ್ಥ ಮಾಸ್ತಿಯವರ ಸಮ್ಮುಖದಲ್ಲಿ ನನಗೆ ನಿರಂತರವಾಗಿ ಆಗುತ್ತಿತ್ತು. ‘ಪದವಿಟ್ಟಳುಪದೊಂದಗ್ಗಳಿಕೆ’ಯನ್ನು ನಾನು ಪ್ರತ್ಯಕ್ಷ ಕಂಡದ್ದು ಅಲ್ಲಿ. ಬಿಡು ವೇಳೆಯಲ್ಲಿ ನಾನು ಕೇಳಿದ್ದುಂಟು, “ಇದರ ರಹಸ್ಯವೇನು?” ಎಂದು. “ಮೊದಲು ಅನುಭವ, ಮತ್ತೆ ಮನದಲ್ಲಿ ಅದರ ಮಂಥನ ಸಾಕಷ್ಟು ಆಗಿರುತ್ತದೆ, ನಾನು ನಂಬಿರುವ ದೈವ ಅಪ್ಪಣೆ ಕೊಡಿಸಿದಂತೆ ಮಾತು ಹೊರಡುತ್ತದೆ.”

‘ಭಾವ’ದ ಮೂರನೆಯ ಸಂಪುಟದಲ್ಲಿ ಇದನ್ನು ಮಾಸ್ತಿಯವರೇ ವಿವರಿಸಿದ್ದಾರೆ: “ಬರಬರುತ್ತ ನನ್ನ ಮನಸ್ಸಿಗೆ ನನ್ನ ಒಂದೊಂದು ಉಸಿರೂ ನನಗೆ ದೈವದ ಅನುಗ್ರಹದಿಂದ ಬರುತ್ತಿದೆ, ನನ್ನ ಒಂದೊಂದು ಎಣಿಕೆಯೂ ಅದೇ ಮೂಲದಿಂದ ಬರುತ್ತಿದೆ, ಮಾತೆಲ್ಲ ಬರುವುದೂ ಅಲ್ಲಿಂದಲೇ, ಎಲ್ಲ ಕ್ರಿಯೆಯ ಪ್ರೇರಣೆ ಅಲ್ಲಿಂದಲೇ ಬರುತ್ತಿದೆ ಎನ್ನುವುದು ಮನದಟ್ಟಾಯಿತು.”

'ಭಾವ'ವನ್ನು ಬರೆದುಕೊಳ್ಳಲು ಅವರು ನನಗೆ ಹೇಳುತ್ತಿದ್ದಾಗ ಸಾಮಾನ್ಯವಾಗಿ ಅವರ ಮುಖದ ಮೇಲೆ ವಿಶೇಷ ಪರಿವರ್ತನೆಯನ್ನಾಗಲೀ ಭಾವವನ್ನಾಗಲೀ ನಾನು ಕಾಣುತ್ತಿರಲಿಲ್ಲ. ಆದರೆ ಎರಡು ಸಲ ವಿಶೇಷವಾಗಿ ನಾನು ಗಮನಿಸಿದ ಉದ್ವೇಗವನ್ನು ಇಲ್ಲಿ ಉಲ್ಲೇಖಿಸಬೇಕು.

ಮೊದಲನೆಯದು ಅವರ ದೊಡ್ಡ ಸೋದರಮಾವ ವೆಂಕಟರಾಮ ಅಯ್ಯಂಗಾರ್ಯರನ್ನು ಕುರಿತ ನೆನಪು. ಮಾಸ್ತಿಯವರ ವಿದ್ಯಾಭ್ಯಾಸ ನಡೆದದ್ದು ತೀರ ಬಡತನದಲ್ಲಿ. ಬಲು ಸುಟಿಯೂ ಬುದ್ಧಿವಂತನೂ ಆಗಿದ್ದ ಈ ಹುಡುಗ ಜೀವನದಲ್ಲಿ ಬಹಳ ಎತ್ತರ ಏರುತ್ತಾನೆ ಎಂದು ಹಿರಿಯರಿಗೆ ಈತನಲ್ಲಿ ಅಪಾರ ಅಭಿಮಾನ, ವಿಶ್ವಾಸ. ವೆಂಕಟರಾಮ ಅಯ್ಯಂಗಾರ್ಯರು ಪೊಲೀಸ್ ಜಮೆದಾರ್. ಬರುತ್ತಿದ್ದ ಪಗಾರದಲ್ಲಿ ಅವರ ಸಂಸಾರವನ್ನೇ ನೆಮ್ಮದಿಯಿಂದ ಸುಧಾರಿಸಿಕೊಂಡು ಹೋಗುವುದು ಕಷ್ಟಕರವಾಗಿದ್ದಾಗ ಅಳಿಯನ ವಿದ್ಯಾಭ್ಯಾಸಕ್ಕೂ ಈ ದಂಪತಿಗಳು ಅಷ್ಟಷ್ಟು ಹಣವನ್ನು ಪೂರೈಸುತ್ತಿದ್ದುದು ಸಾಮಾನ್ಯ ತ್ಯಾಗವೇನಲ್ಲ. ಮೈಸೂರಿನಲ್ಲಿ ವಾರಾನ್ನ ನಡೆಸಿ ಈತನ ವಿದ್ಯಾರ್ಜನೆ ನಡೆಯುತ್ತಿತ್ತು. "ಶಾಲೆಯಲ್ಲಿ ತರಗತಿಗೆ ಫಸ್ಟ್ ಆದೆನಾದರೂ . . . ಫ್ರೀಶಿಪ್ ಸಿಕ್ಕದ್ದರಿಂದ ನಾನು ಮಾವ ವೆಂಕಟರಾಮ ಅಯ್ಯಂಗಾರ್ಯರಿಗೆ ಒಂದು ಹೊರೆ ಆದೆನು. ಮಾವನಿಗೆ ಈ ಹೊರೆಯನ್ನು ಹೊರುವುದು ಸುಲಭವಾಗಿರಲಿಲ್ಲ. ಅವರ ತಮ್ಮ, ನನ್ನ ಚಿಕ್ಕ ಸೋದರಮಾವ, ಬೆಂಗಳೂರಿನಲ್ಲಿ ಓದುತ್ತ ಇದ್ದುದರಿಂದ ಅಲ್ಲಿಗೆ ತಿಂಗಳು ಸ್ವಲ್ಪ ಹಣ ಹೋಗಬೇಕಾಗಿತ್ತು. ಹೀಗಾಗಿ ನನ್ನ ಹಿರಿಯ ಮಾವ ತಮ್ಮ ಸಣ್ಣ ಸಂಬಳದಿಂದ ದೊಡ್ಡ ಒಂದು ಭಾಗವನ್ನು ನಮ್ಮ ವಿದ್ಯೆಗಾಗಿ ವೆಚ್ಚ ಮಾಡಬೇಕಾಯಿತು. ಆಗ ನನಗೆ ಇದು ಅಷ್ಟಾಗಿ ಮನಮುಟ್ಟಲಿಲ್ಲ. ಈಗ ಮುಟ್ಟುತ್ತಿದೆ. ಬರುತ್ತಿದ್ದ ಇಪ್ಪತ್ತು ರೂಪಾಯಿಯಲ್ಲಿ ಈ ನನ್ನ ಮಾವ ಏನಿಲ್ಲವೆಂದರೂ ಆರೂವರೆ ರೂಪಾಯಿಯಷ್ಟು ಹಣವನ್ನು ನನಗೆ ತನ್ನ ತಮ್ಮನಿಗೆ ತಿಂಗಳು ತಿಂಗಳೂ ಕಳುಹಿಸುತ್ತಿದ್ದರಲ್ಲ! ಇವರು ವಾತ್ಸಲ್ಯ ತೋರಿದರು: ತಮ್ಮನಿಗೆಂದು, ಸೋದರಳಿಯನಿಗೆಂದು ಈ ದೊಡ್ಡ ರೀತಿಯಲ್ಲಿ ನಡೆದರು. ಆದರೆ ಗಂಡ ಹೀಗೆ ನಡೆದುಕೊಂಡರೆ ಅವರ ಹೆಂಡತಿ, ನನ್ನ ಸೋದರತ್ತೆ, ಅದನ್ನು ಒಪ್ಪಿಕೊಂಡು ಸಮಾಧಾನವಾಗಿ ಇದ್ದರಲ್ಲ. ಇದನ್ನು ನೆನೆದರೆ ನನಗೆ ಆ ಗಂಡ ಎಷ್ಟು ಹಿರಿಯ ಸ್ವಭಾವದ ಮನುಷ್ಯ, ಅವರ ಈ ಹೆಂಡತಿ ಅಷ್ಟೇ ಹಿರಿಯ ಸ್ವಭಾವದ ಸ್ತ್ರೀ ಅನ್ನಿಸುತ್ತದೆ. ನಾನೀಗ ವಯಸ್ಸಾದ ಮನುಷ್ಯ – ಅವರ ದಿನ ಮುಗಿದು ಅವರಿಬ್ಬರೂ ದೇವರ ಸನ್ನಿಧಿಯನ್ನು ಸೇರಿದ್ದಾರೆ. ನನ್ನ ನಮನದಿಂದ ಅವರಿಗೆ ಆಗಬೇಕಾದದ್ದು ಏನೂ ಇಲ್ಲ. ಆದರೂ ಇಲ್ಲಿ ಈ ಕೃತಜ್ಞತೆಯನ್ನು ನಮನವನ್ನು ನನ್ನ ತೃಪ್ತಿಗಾಗಿ ಒಪ್ಪಿಸುತ್ತೇನೆ. ವಾತ್ಸಲ್ಯಮೂರ್ತಿ ಆ ಮಾವ, ತ್ಯಾಗರೂಪಿಣಿ ಆ ಅತ್ತೆ, ನನ್ನ ಮನಸ್ಸಿಗೆ ಲೋಕವನ್ನು ಕಾಯುವ ದೈವ ಒಂದಿದೆ ಎನ್ನುವುದಕ್ಕೆ ಪ್ರಮಾಣವಾಗಿ ನೆನಪಾಗಿ ಉಳಿದಿದ್ದಾರೆ. ಆ ಮಾವನಿಗೆ ನಮೋ! ಆ ಅತ್ತೆಗೆ ನಮೋ!"

ಎರಡನೆಯದು ಅವರ ತಾತ ಕೊನೆಯುಸಿರೆಳೆದುದನ್ನು ಹೇಳಿದಾಗ. "ಹತ್ತೇ ನಿಮಿಷದ ಹಿಂದೆ ಎದ್ದು ಕುಳಿತು ಆಚಾರವಾಗಿ ಜಲಶಂಕೆ ತೀರಿಸಿಕೊಂಡ ಈ ಮೈಯಿಂದ ಇಷ್ಟು ಬೇಗನೆ ಉಸಿರು ಹೊರಟುಹೋದೀತೆಂದು ನಾವು ನಂಬದೇ ಹೋದೆವು. ಆದರೇನು? ಉಸಿರು ಹೋಗಿತ್ತು. ಒಂದು ನೋವಿಲ್ಲ, ಒಂದು ನುಡಿ ಇಲ್ಲ; ಬೇನೆ ಆಯಾಸ ಲವಲೇಶ ಇಲ್ಲ. ತಾತನಿಗೆ ಕೊನೆಯ ಕ್ಷಣದವರೆಗೆ ಬುದ್ಧಿ ತಿಳಿಯಾಗಿತ್ತು. 'ತೀರ್ಥ ತಾ' ಎಂದಾಗ ತಾನು ಇನ್ನು ಕೆಲವು ಕ್ಷಣದಲ್ಲಿ ತೀರಿಕೊಳ್ಳುವೆನೆಂದೂ ತಿಳಿದಿತ್ತು. ದೈವದ ನಂಬಿಕೆಯಲ್ಲಿ ಎಂಬತ್ತು ವರ್ಷ ಬಾಳಿದ್ದ ಮುದುಕ ದೈವದ ನಂಬಿಕೆಯಲ್ಲೇ ನಿಂತ ಮನಸ್ಸಿನಲ್ಲಿ ಸಮಾಧಾನವಾಗಿ ದೇಹ ಬಿಟ್ಟರು. ಅನಾಯಾಸ ಮರಣ ವಿನಾ ದೈನ್ಯ ಜೀವನ ಪೂರ್ವಿಕರ ಬಯಕೆ. ತಾತನ ಜೀವನ ಬಡವನ ಜೀವನ ಆಗಿತ್ತು. ಆದರೂ ಅದರಲ್ಲಿ ದೈನ್ಯವಿರಲಿಲ್ಲ. ಎಂದರೂ ಒಟ್ಟು ಆ ಜೀವನವನ್ನು ನಾನು ಕಾಣೆನು. ಮರಣವನ್ನೋ ಹತ್ತಿರದಲ್ಲೇ ಇದ್ದು ಪ್ರತ್ಯಕ್ಷ ನೋಡಿದೆನು. ಅದು ತೀರ ಅನಾಯಾಸದ ಮರಣ. ಅವರು ನಂಬಿದ್ದ ದೈವ ಕೊನೆಯ ಕ್ಷಣದಲ್ಲಿ ಅವರ ಜೀವನವನ್ನು ಕೈ ಹಿಡಿದು ಕರೆದುಕೊಂಡು ತನ್ನ ಪಾದವನ್ನು ಸೇರಿಸಿಕೊಂಡಿತು."

ಈ ವಿವರಗಳನ್ನು ಹೇಳುವಾಗ ಅವರ ಧ್ವನಿಯಲ್ಲಿ ಹೆಚ್ಚಿನ ಮಾರ್ದವತೆ ಗಮನಾರ್ಹವಾಗಿ ಮೂಡುತ್ತಿತ್ತು. ದೃಷ್ಟಿ ಇನ್ನಷ್ಟು ಅಂತರ್ಮುಖಿಯಾಗುತ್ತಿತ್ತು. "Yes, very good and simple souls. They sacrificed so that we may prosper" ಎಂದು ಸ್ವಗತವಾಗಿ ಹೇಳುತ್ತ ಕಣ್ಣಂಚನ್ನು ಒರೆಸಿಕೊಳ್ಳುತ್ತಿದ್ದರು. ಅನುಕಂಪಕ್ಕೆ ಮೃದುತ್ವಕ್ಕೆ ಪರ್ಯಾಯನಾಮ ಮಾಸ್ತಿ.



ಅವರು ಈ ಆತ್ಮವೃತ್ತವನ್ನು ಹೇಳುತ್ತಿದ್ದಾಗ ಅವರಾಗಲೀ ನಾನಾಗಲೀ ಗಡಿಯಾರ ನೋಡಿದವರಲ್ಲ. ನೋಡುವ ಆವಶ್ಯಕತೆಯೇ ಇರಲಿಲ್ಲ. ಯಾವುದೋ ಒಂದು ಘಟ್ಟಕ್ಕೆ ಬರಬೇಕು. ಆಗ ಅವರು "ಇನ್ನು ಮುಂದಿನ ಸಲ ಹೇಳುತ್ತೇನೆ" ಎಂದು ವರ್ತಮಾನ ಪ್ರಪಂಚಕ್ಕೆ ಇಳಿಯುವರು. ಆಗ ಗಂಟೆ ಸರಿ ಸುಮಾರಾಗಿ ೪ ಆಗಿರುತ್ತಿತ್ತು. "ಇಲ್ಲ ಸ್ವಾಮೀ. ನಾನು ಇನ್ನೂ ಒಂದೆರಡು ಗಂಟೆ ಬರೆದುಕೊಳ್ಳಬಲ್ಲೆ."

"ಇದು ನಿಮಗೆ ಹಿಡಿಸುತ್ತದೆಯೇ?"

"ಬಲು ಚೆನ್ನಾಗಿ. ಒಂದು ಜೀವ ಅವೆಷ್ಟು ಪ್ರಭಾವಗಳಿಂದ ಪೋಷಿತವಾಗಿ ಸ್ವಂತಿಕೆಯನ್ನು ಬೆಳೆಸಿಕೊಂಡು ಮೇಲೆ ಬರುತ್ತದೆ ಎಂಬುದು ತುಂಬ ಕುತೂಹಲಕಾರಿಯಾಗಿದೆ."

"ತುಂಬ ಸಂತೋಷ. ನಿಮ್ಮ ಈ ಪ್ರತಿಕ್ರಿಯೆ ನನಗೊಂದು ಟಾನಿಕ್ಕಿನಂತೆ. ಮುಂದಿನ ಸಲ ಹೇಳುತ್ತೇನೆ. ಹಿಂದಿನ ಸಂಗತಿಗಳನ್ನು ಒಂದೇ ಸಲ ಹೊರಗೆಳೆಯಬಾರದು. ದೈವ ನಡೆಸಿದಂತೆ ಮುಂದುವರಿಯಲಿ." ಅವರು ಏಳುವರು.

ನಾನು ಎರಡೋ ಮೂರೋ ಗಂಟೆ ಕಾಲವೇ ಕುಳಿತು ಅಲುಗಾಡದೇ ಬರೆಯಬಲ್ಲೆ. ಆದರೂ ನನಗೆ ಹೊರೆಯಾಗಬಾರದು, ಇದು ಅವರ ಇಂಗಿತ. ಆದರೆ ಅದನ್ನು ಹೇಳಲಾರರು, ಕಾರ್ಯತಃ ಮಾಡಿ ತೋರಿಸುವರು. ಆಗ ಅವರ ಸಾಯಂಕಾಲದ ಉಪಾಹಾರದ ವೇಳೆ, ಘಮಘಮಿಸುವ ದೋಸೆ, ತುಪ್ಪ, ಅಯ್ಯಂಗಾರ್ ಚಟ್ನಿ, ಕಾಫಿ ಬರುತ್ತವೆ. ನನಗೂ ಅವನ್ನು ಅವರ ಸೌಭಾಗ್ಯವತಿ ಪಂಕಜಮ್ಮನವರು ತಂದುಕೊಡುತ್ತಾರೆ. ಕೊಡುವ ಆ ಅಮ್ಮನ ಕೈ ತುಂಬ ದೊಡ್ಡದು. ಮೊದಲ ವಾರ ಅವನ್ನೆಲ್ಲ ರುಚಿಯಾಗಿ ತಿಂದೆ. ಆದರೆ ಮತ್ತೆ ಹೇಳಿದೆ, "ಇದು ನನ್ನ ಆಹಾರದ ನಿಯಮಕ್ಕೆ ಸರಿ ಹೊಂದುವುದಿಲ್ಲ. ಸಾಯಂಕಾಲ ತಿಂಡಿ ತಿಂದರೆ ಅಪಥ್ಯವಾಗುತ್ತದೆ. ಇಲ್ಲಿಗೆ ಬರುವ ಮುನ್ನ ಟೀ ಸೇವಿಸಿ ಹೊರಡುವುದು ವಾಡಿಕೆ. ಹೀಗೆ ಹೇಳಿದೆ ಎಂದು ತಾವು ಬೇಸರಿಸಬಾರದು."

"ಆಹಾರದ ವಿಷಯ ನಿಯಮವಿರುವುದು ಬಲು ಸರಿಯಾದ ಕ್ರಮ. ನಾನು ಅದನ್ನು ಒಪ್ಪತಕ್ಕವನೇ. ಆದರೆ ಮನೆಯಾಕೆಗೂ ನನಗೂ ನಿಮ್ಮನ್ನು ಹಾಗೆಯೇ ಕಳಿಸುವುದು ಒಪ್ಪದಲ್ಲ!"

"ಒಂದು ಗಂಟೆ ಕಾಲ ತಮ್ಮೊಡನೆ ಕಳೆಯುವ ಈ ಸಂತೋಷವೇ ನನಗೆ ಯೋಗ್ಯ ಪ್ರತಿಫಲ."

"ನಾರಾಯಣ ರಾವ್! ನಿಮ್ಮ ಈ ದೃಷ್ಟಿಯನ್ನು ನಾನು ಮೆಚ್ಚುತ್ತೇನೆ. ಹಾಗೆಯೇ ಆಗಲಿ, ಸಂತೋಷ."

ಅವೆಷ್ಟೋ ವಾರಗಳು ಹೀಗೇ ಸಂದುವು. ನನ್ನ ಒಡನಾಟ ಅವರಿಗೆ ತುಂಬ ಹಿಡಿಸುತ್ತಿತ್ತೆಂದು ಪ್ರತಿಸಲವೂ ನನಗೆ ಅನ್ನಿಸುತ್ತಿತ್ತು. ಅದೇ ನನಗೆ ಪರಮಾನಂದಕರ ಪ್ರತಿಫಲ. ಒಂದು ಆದಿತ್ಯವಾರ ನಾನು ಹತ್ತು ಮಿನಿಟು ಮುಂಚಿತವಾಗಿ (ಅಂದರೆ ೨ ಗಂಟೆ ೫೦ ಮಿನಿಟಿಗೆ) ಅವರ ಮನೆಗೆ ಹೋದೆ – ಹಿಂದಿನ ವಾರ ಬರೆದದ್ದನ್ನು ಇನ್ನೊಮ್ಮೆ ಓದಿಕೊಳ್ಳಬೇಕು ಎಂಬ ಉದ್ದೇಶದಿಂದ. ಅಜ್ಜಯ್ಯನ ಮಾಮೂಲು ದರ್ಶನ ಆಗಲಿಲ್ಲ. ಇನ್ನೂ ಎಂಟೊಂಬತ್ತು ನಿಮಿಷಗಳು ಉಳಿದಿದ್ದವಷ್ಟೆ. ಆದರೆ ಈ ವೇಳೆಗೆ ಮನೆಯವನೇ ಆಗಿಹೋಗಿದ್ದ ನನಗೆ ನನ್ನ ಕೆಲಸದೆಡೆಗೆ ಸಾಗಲು ಅಡಚಣೆ ಏನೂ ಇರಲಿಲ್ಲ. ಮನೆ ನಾಯಿಗೆ ನನ್ನ ಗುರುತಿದ್ದುದರಿಂದ ಬಾಲ ಆಡಿಸಿತು. ಪಂಜರದ ಗಿಳಿ ಹಿಂದೆ ಮುಂದೆ ತಿರುಗಿ ನಾನು ಬಂದುದಕ್ಕೆ ಹರ್ಷ ವ್ಯಕ್ತಪಡಿಸುವಂಥ ಧ್ವನಿ ಹೊರಡಿಸಿತು. ಮಹಡಿಗೆ ಹೋದೆ. ಅಜ್ಜಯ್ಯನ ಹಾಸಿಗೆ ಖಾಲಿ. ಅವರು ವಿಶ್ರಾಂತಿ ತಿಳಿದೆದ್ದು ಶೌಚಕ್ರಿಯೆಗೆ ಹೋಗಿರಬೇಕೆಂದು ಊಹಿಸಿಕೊಂಡೆ. ಹಿಂದಿನ ಬರವಣಿಗೆಯ ಹಾಳೆಗಳನ್ನು ತೆಗೆದುಕೊಂಡು ಓದುತ್ತ ಕುಳಿತೆ. ಗಂಟೆ ಮೂರು ಹೊಡೆದದ್ದು ಕೇಳಿಸಿತು. ಮತ್ತೆ ಐದು ನಿಮಿಷಗಳೂ ಸಂದುವು. ಇವರೇಕೆ ಇನ್ನೂ ಬರಲಿಲ್ಲ ಎಂದು ಎದ್ದು ನೋಡುವಾಗಲೇ ಅವರು ಬಂದರು, ಅದೇ ಮಂದಹಾಸ, "ಹೋದೆ, ನಿಂತೆ, ನೋಡಿದೆ, ಕಾದೆ. ನೀವು ಬರಲಿಲ್ಲ. ಪಾಪ ಏನೋ ತೊಂದರೆ ಆಗಿರಬೇಕು ಎಂದು ಹಿಂತಿರುಗಿದೆ. ಅಲ್ಲೇ ಹೊರಜಗಲಿ ಮೂಲೆಯಲ್ಲಿ ನಿಮ್ಮ ಚಪ್ಪಲಿ ಕಂಡೆ. ಓ ಮೊದಲೇ ಬಂದಿದ್ದಾರೆ ಅಂದುಕೊಂಡು ಬಂದೆ. ನನ್ನ ಗಡಿಯಾರ ತಪ್ಪಾಗಿರಲೂಬಹುದು."

"ಇಲ್ಲ ಇಲ್ಲ. ನಿಮ್ಮ ವಾಚೂ ನನ್ನ ವಾಚೂ ಸರಿಯಾದ ಕಾಲವನ್ನೇ ತೋರಿಸುತ್ತಿವೆ. ನಾನೇ ಒಂದಷ್ಟು ಹೊತ್ತು ಮೊದಲೇ ಬಂದೆನಷ್ಟೇ."

ಅಂದಿನ ಬೈಠಕ್ಕು ಮುಗಿದು ಮರಳುತ್ತಿದ್ದಾಗ ನಾನು ಕಂಡದ್ದೇನು? ನನ್ನ ಚಪ್ಪಲಿಗಳು ನಡುಮನೆಯಲ್ಲಿ ಭದ್ರವಾಗಿ ಉಪಸ್ಥಿತವಾಗಿದ್ದುವು. ಎಣೆಯಿಲ್ಲದ ಅವರ ಈ ಸೌಜನ್ಯಕ್ಕೆ ಒಂದೇ ಒಂದು ಉಪಮೆ ಆಗ ನನಗೆ ಹೊಳೆದದ್ದು, "ರಾಜರಾಜರ ಗಂಡ ಶಬರಿ ಎಂಜಲನುಂಡ" (ಮೈಶೇಅ).

ನನ್ನ ಹಳೆಯ ಸಂಗೀತಮಿತ್ರರಾದ ಕಾಂಚನ ವೆಂಕಟಸುಬ್ರಹ್ಮಣ್ಯ ಅಯ್ಯರ್ ಮತ್ತು ಅವರ ಬಳಗದವರು ೧೯೬೭ ಡಿಸೆಂಬರಿನಲ್ಲಿ ಅಕಸ್ಮಾತ್ತಾಗಿ ನನ್ನ ಮನೆಗೆ ಬಂದರು. ಇವರು ಸಂಗೀತ ವಿದ್ವಾಂಸರು. ದಕ್ಷಿಣ ಕನ್ನಡ ಜಿಲ್ಲೆಯ ಉಪ್ಪಿನಂಗಡಿಯ ಸಮೀಪದ ಕಾಂಚನ ಎಂಬ ಗ್ರಾಮದಲ್ಲಿ ಒಂದು ಸಂಗೀತ ಶಾಲೆಯನ್ನು ಸ್ಥಾಪಿಸಿ ಅದನ್ನು ಗುರುಕುಲ ಕ್ರಮದಲ್ಲಿ ನಡೆಸುತ್ತಿದ್ದರು. ಮುಂದಿನ ತ್ಯಾಗರಾಜ ಆರಾಧನಾ ಮಹೋತ್ಸವಕ್ಕೆ (ಜನವರಿ ೧೯೬೮) ಅಧ್ಯಕ್ಷರೂ ಮುಖ್ಯ ಅತಿಥಿಗಳೂ ಆಗಿ ಪೂಜ್ಯ ಮಾಸ್ತಿಯವರನ್ನು ಬರಮಾಡಿಕೊಳ್ಳಬೇಕೆಂಬುದು ಅವರ ಹಂಬಲ. ಅಜ್ಜಯ್ಯನವರನ್ನು ಒಪ್ಪಿಸುವ ಹೊಣೆ ನನ್ನದಾಗಬೇಕೆಂದು ಅವರ ಆಸೆ. ಮಾಸ್ತಿಯವರ ಮನೆಗೆ ಹೋದೆವು.
"ನಾನು ಸಭೆ ಭಾಷಣ ಇವನ್ನೆಲ್ಲ ಬಿಟ್ಟು ಬಹಳ ಕಾಲವಾಯಿತು. ಅದೂ ಅಷ್ಟು ದೂರದ ಪ್ರಯಾಣವನ್ನು ಈ ವಯಸ್ಸಿನಲ್ಲಿ (೭೭) ಮಾಡಲಾರೆ" ಎಂದರು ಮಾಸ್ತಿ.
ಆದರೆ ಕಾಂಚನದವರು ಸುಲಭವಾಗಿ ಸೋಲೊಪ್ಪುವವರಲ್ಲ. ನಾನು ಅಸಹಾಯಕನಾಗಿ ಸುಮ್ಮನೆ ಕುಳಿತಿದ್ದೆ. ಮಾಸ್ತಿಯವರು ಕೊನೆಗೆ ಅಂದರು, "ನಮ್ಮ ನಾರಾಯಣರಾವ್ ಜೊತೆಯಲ್ಲಿ ಬರುವುದಾದರೆ ನಾನು ಬರುತ್ತೇನೆ."
ನನಗೆ ಈ ಯಾತ್ರೆ ಬಲು ಪ್ರಿಯ. ಮಡಿಕೇರಿ ನನ್ನೂರು. ಪುತ್ತೂರು ನನ್ನ ಮಾವಂದಿರ ಊರು. ಉಪ್ಪಿನಂಗಡಿ, ಕಾಂಚನ ಮುಂತಾದ ವಲಯಗಳೆಲ್ಲವೂ ನನಗೆ ಚಿರಪರಿಚಿತ. ಈ ದಾರಿಯಲ್ಲಿ ಪೂಜ್ಯರನ್ನು ಒಂದು ಸಂಗೀತ ಸಮಾರಂಭಕ್ಕೆ ಕೊಂಡೊಯ್ಯುವುದು ಭಾಗ್ಯವೆಂದುಕೊಂಡೆ. ಕಾಂಚನದಲ್ಲಿ ಆ ಸಮಾರಂಭದಂದು ಸಂಗೀತ ಹಾಡಲು ಆಹ್ವಾನಿತ ಗಾನಪಟುಗಳಾಗಿ ನನ್ನ ಮಿತ್ರರೂ ಶ್ರೇಷ್ಠ ಸಂಗೀತ ವಿದ್ವಾಂಸರೂ ಆದ (ಬೆಂಗಳೂರಿನ) ಕುರೂಡಿ ವೆಂಕಣ್ಣಾಚಾರ್ಯರು ಬರುವವರಿದ್ದರು. ಇವರೆಲ್ಲರನ್ನೂ ಒಂದು ಬಾಡಿಗೆ ಕಾರಿನಲ್ಲಿ ಕರೆದು ತರುವ ಹೊಣೆಯನ್ನು ನನಗೆ ವಹಿಸಿ ಕಾಂಚನದವರು ಊರಿಗೆ ಮರಳಿದರು.

ಇದು ನಡೆದು ನಾಲ್ಕೈದು ವಾರಗಳುರುಳಿದುವು. ಒಂದು ಶನಿವಾರ ರಾತ್ರಿ ೧೦ ಗಂಟೆಯ ವೇಳೆ ಮಹಡಿಯ ಮೇಲಿನ ನನ್ನ ಮನೆಯ ಹೊರಬಾಗಿಲನ್ನು ಯಾರೋ ಬಲು ಮೃದುವಾಗಿ ತಟ್ಟುತ್ತಿದ್ದಂತೆ ಭಾಸವಾಯಿತು. ಸದಾ ಕದನ ಕುತೂಹಲಿಗಳಾಗಿದ್ದ ನನ್ನ ಮಕ್ಕಳು "ಯಾರದು?" ಎಂದು ಗರ್ಜಿಸಿದರು.
"ನಾನು, ಮಾಸ್ತಿ ಬಂದಿದ್ದೇನೆ ತಾಯಿ" ಎಂದು ಮೆಲುನುಡಿ ನನ್ನ ಹೆಂಡತಿಗೆ ಕೇಳಿಸಿದಾಗ ನಮ್ಮ ಸ್ಥಿತಿ ಏನಾಗಿರಬೇಡ! 'ಸದಾ ಇವರು ಹೀಗೆಯೇ' ಒಳಕೋಣೆಯಿಂದ ಓಡಿ ಬಂದೆ ಗಾಬರಿಯಾಗಿ, "ಏನು ಸ್ವಾಮಿ, ಇಷ್ಟು ಹೊತ್ತಿನಲ್ಲಿ ಇಲ್ಲಿವರೆಗೆ? ಹೇಳಿ ಕಳಿಸಿದ್ದರೆ ನಾನೇ ಬರುತ್ತಿದ್ದೆನಲ್ಲ?" ನನ್ನ ಮಾತು.
"ಸರಿಯಪ್ಪ, ನಾಳೆ ಅಲ್ಲಿಗೆ ಹೋಗಬೇಕಷ್ಟೆ, ಏನು ಏರ್ಪಾಡು ಎಂದು ಹೇಳಲಿಲ್ಲವಲ್ಲ?"
"ಎಲ್ಲಿಗೆಂದು ತಿಳಿಯಲಿಲ್ಲವಲ್ಲ?"
"ಅದೇ ಕಾಂಚನಕ್ಕೆ; ಕಾರ್ಯಕ್ರಮವೇನಾದರೂ ರದ್ದಾಯಿತೇನು?"
"ಅದು ನಾಳೆ ಅಲ್ಲ, ಮುಂದಿನ ಆದಿತ್ಯವಾರ. ನಾಳೆ ನಾಡಿದ್ದಾಗಿ ನಾನೇ ತಮ್ಮಲ್ಲಿಗೆ ಬಂದು ಎಲ್ಲ ವಿವರವನ್ನು ಹೇಳುವವನಿದ್ದೆ."
ಮಾಸ್ತಿ ನಕ್ಕರು. ನಿಸಾರ್ ಅಹಮದರ ಮಾತಿನಲ್ಲಿ –

ಕೂಗು ಹುಸಿಮುನಿಸುಗಳ ನಡುವೆ ತುಟಿಗಳ ಮೊಗ್ಗೆ
ಬಿರಿಸಿ ನಕ್ಕಾಗಿವರು ಥೇಟ್ ಜುಲಯ್ ತಿಂಗಳಿನ ಶಿವಮೊಗ್ಗೆ:
ಚಣಕ್ಕಷ್ಟು ಚಳಿನೂಲು, ಒಂದಿಷ್ಟು ಹೂ ಬಿಸಿಲು
ಹೊರಗೆ ಕಚಪಿಚ ಕೆಸರು, ಒಳಗೆ ಬೆಚ್ಚನೆ ಸೂರು.

ಅವರೆಂದರು, "ಕಾಲವನ್ನು ಕಾಯ್ದಿಟ್ಟು ನೆನಪಿಸುವ ನನ್ನ ಮಿದುಳಿನ ಭಾಗ oversmart ಆಗಿಬಿಟ್ಟಿದೆ." ತಾವೂ ನಕ್ಕರು ನಮ್ಮನ್ನೂ ನಗಿಸಿದರು. ಅಲ್ಲಿಂದ ಆ ಕಿಷ್ಕಿಂಧೆ ಮೆಟ್ಟಲು ದ್ವಾರ ಇಳಿಯುವಾಗ ನಾನು ಮುಂದೆ ಅವರು ಹಿಂದೆ. ರಸ್ತೆಗೆ ಬಂದೆವು. ನನ್ನನ್ನು ಹಿಂದೆ ಹೋಗಲು ಹೇಳಿದರು. "ತಾವು ಬರಿ ತಲೆಯನ್ನು ಬಿಟ್ಟುಕೊಂಡು ಈ ರಾತ್ರಿ ಹೋಗುವುದು ತರವಲ್ಲ. ಶೀತವಾದೀತು" ಎಂದೆ. ಅವರು ವಸ್ತ್ರ ಸುತ್ತಿಕೊಂಡರು. ಅವರ ಗೇಟ್‌ವರೆಗೂ ಜೊತೆಯಲ್ಲಿ ಹೋಗಿ

ಹಿಂತಿರುಗಲು ಹೊರಟೆ. "ಒಳ್ಳೇದಪ್ಪ, ಹುಷಾರಗಿ ಹೋಗಿ. ಶೀತ ಆದೀತು" ಎಂದು ಎಚ್ಚರ ಹೇಳಿ ನಿಂತರು. ನಾನು ರಸ್ತೆಯ ತಿರುಗಾಸಿನಲ್ಲಿ ಮರೆ ಆಗುವವರೆಗೂ ಅವರು ಹಾಗೆಯೇ ನಿಂತಿದ್ದರು.

ನಮ್ಮ ಕಾಂಚನ ಪ್ರಯಾಣದ ಕಾರ್ಯಕ್ರಮ ಸಿದ್ಧವಾಯಿತು. ಗೆಳೆಯರೂ ಸಾಹಿತ್ಯ ಪ್ರೇಮಿಗಳು ಆದ ಗುಂಡ್ಮಿ ರಾಮಕೃಷ್ಣ ಐತಾಳರ ಕಾರು. ಪಯಣಿಗರು ಶ್ರೀ ಮತ್ತು ಶ್ರೀಮತಿ ಮಾಸ್ತಿಯವರು, ವೆಂಕಣ್ಣಾಚಾರ್ ಮತ್ತು ಅವರ ಮಗ, ಐತಾಳರು, ನಾನು ಮತ್ತು ನನ್ನ ಇಬ್ಬರು ಚಿಕ್ಕಮಕ್ಕಳು, ಕಾರಿನ ಡ್ರೈವರ್. ಅಂಬಾಸಿಡರ್ ಕಾರಿಗೂ ಇದು ತುಂಬಲಾರದ ಬಳಗ. ವೃದ್ಧ ದಂಪತಿಗಳಿಗೆ ಇದರಿಂದ ದೀರ್ಘ ಪ್ರಯಾಣ ಖಂಡಿತವಾಗಿಯೂ ತ್ರಾಸವಾಗುತ್ತದೆ. ಆದರೆ ಸ್ವತಃ ಮಾಸ್ತಿಯವರೇ ಇವರೆಲ್ಲರೂ ಬರುವುದನ್ನು ಸಂತೋಷದಿಂದ ಸ್ವಾಗತಿಸಿದ್ದರು. ಅವರ ಔದಾರ್ಯ ಶ್ರೀಮಂತಿಕೆ ಆ ಮಟ್ಟದ್ದು.

ನಾವು ಬೆಂಗಳೂರನ್ನು ಬಿಟ್ಟದ್ದು ಬೆಳಗ್ಗೆ ೬–೩೦ ಗಂಟೆಗೆ. ಹಳೇ ಮೈಸೂರಿನ ಗಡಿ ದಾಟಿ ಕೊಡಗನ್ನು ಪ್ರವೇಶಿಸುವವರೆಗೂ ದಾರಿ ಪಕ್ಕದ ಪ್ರತಿಯೊಂದು ಹಳ್ಳಿ, ಅದರ ಹೆಸರಿನ ಐತಿಹ್ಯ, ಅಲ್ಲಿಯ ವೈಶಿಷ್ಟ್ಯ, ಅಲ್ಲಿಗೆ ಹೋಗಲಿರುವ ದಾರಿ ಇವನ್ನು ಮಾಸ್ತಿಯವರು ವಿವರಿಸುತ್ತಿದ್ದಾಗ ನಮ್ಮ ಬೆರಗು ಹಲವು ಬಗೆಯದು – ಅವರ ನೆನಪಿನ ಹರವು, ಆಳ, ಅವರು ವಿವರಿಸುವ ಕೌಶಲ, ಅವರ ಹಿಂಗದ ಉತ್ಸಾಹ ಒಂದೊಂದೂ ನಮಗೆ ಪವಾಡದಂತೆ ಕಾಣುತ್ತಿತ್ತು. ಶ್ರೀರಂಗಪಟ್ಟಣದ ಬಳಿ ಒಳದಾರಿ ಹಿಡಿದು ಹುಣಸೂರು ಮಾರ್ಗದೆಡೆಗೆ (ಇದು ಕೃಷ್ಣರಾಜ ಸಾಗರದ ಮೂಲಕ ಹೋಗುತ್ತದೆ) ಹೋಗುತ್ತಿದ್ದಾಗ ಹಾದಿ ತಪ್ಪಿತು. ಆಗ ಜೊಂಪಿನಿಂದ ತಿಳಿದೆದ್ದು ಸರಿದಾರಿ ತೋರಿಸಿದವರು ಮಾಸ್ತಿ! ಅಂದು ಮಧ್ಯಾಹ್ನದ ಊಟ ಶುಂಠಿಕೊಪ್ಪದ ಮಂಜುನಾಥಯ್ಯನವರಲ್ಲಿ. ಮಂಜುನಾಥಯ್ಯ ದಂಪತಿಗಳ, ಅವರ ಮಕ್ಕಳ, ಮೊಮ್ಮಕ್ಕಳ ಯೋಗಕ್ಷೇಮವನ್ನು ಅಜ್ಜಯ್ಯ ವಿಚಾರಿಸಿಕೊಂಡ ಬಗೆ ಅದ್ವಿತೀಯವಾದದ್ದು. ಇತರರ ವಿಚಾರದಲ್ಲಿ ಅಷ್ಟೊಂದು ಸವಿವರ ಆಸಕ್ತಿ ಇವರಿಗೆ. ನನ್ನ ತಂದೆಯವರೂ ಆಹ್ವಾನಿತರಾಗಿ ಅಲ್ಲಿಗೆ ಬಂದಿದ್ದುದು ಮಾಸ್ತಿಯವರಿಗೆ ಬಲು ಪ್ರಿಯವಾಯಿತು. "ಈಗಲು ಸೈಕಲ್ ಬಿಡುತ್ತೀರಾ? ಬಿಡಬೇಡಿ ಎಂದು ನಾನು ಹೇಳಿದೆ ಎಂದು ನಿಮಗೆ ತಿಳಿಸಲು ನಿಮ್ಮ ಮಗನೊಡನೆ ಹೇಳಿದ್ದೆ. ಈ ಪ್ರಾಯದಲ್ಲಿ ಸ್ವಲ್ಪ ಎಚ್ಚರ ತಪ್ಪಿದರೂ ಪ್ರಮಾದವಾಗುತ್ತದೆ."

ಅದೇ ಸಾಯಂಕಾಲ ನಾಲ್ಕು ಗಂಟೆಗೆ ನಾವು ಪುತ್ತೂರು ತಲಪಿದೆವು. ಮೊಕ್ಕಾಂ ನನ್ನ ಮಾವಂದಿರಾದ ಎ.ಪಿ. ಸುಬ್ಬಯ್ಯನವರಲ್ಲಿ. ಇವರು ಮಾಸ್ತಿಯವರ ಹಳೆಯ ಸಾಹಿತ್ಯ ಮಿತ್ರರು. ಸುದೀರ್ಘ ಪ್ರಯಾಣಾನಂತರ ಮಾಸ್ತಿ ಕಾರಿನಿಂದ ಹಗುರಾಗಿ ಇಳಿಯುವಾಗ, ಮುಂಜಾನೆಯ ಉತ್ಸಾಹದಿಂದಲೇ ಮಾತಾಡುವಾಗ ಯಾರಿಗಾದರೂ ಅವರ ಆರೋಗ್ಯ ಆಶ್ಚರ್ಯವನ್ನೂ ಹೆಮ್ಮೆಯನ್ನೂ ತರುವಂತಿತ್ತು. ನಮ್ಮ ಮಾವನ ಮನೆಯಲ್ಲಿ ಒಂದು ಸಾಹಿತಿಗಳ ಕೂಟವೇ ಸೇರಿತು. ಆದರೆ ಪುರಸೊತ್ತೆಲ್ಲಿ? ಆಗಲೇ ಮಾಸ್ತಿ ಕರ್ಣಾಟಕ ಸಂಘದ ಸಭೆಗೆ ದಯಮಾಡಿಸಬೇಕಾಗಿತ್ತು. ಅದಾದ ತರುವಾಯ ರೋಟರಿ ಕ್ಲಬ್ಬಿನಲ್ಲಿ ಭಾಷಣ. ಕೊನೆಯದಾಗಿ ವೆಂಕಣ್ಣಾಚಾರ್ಯರ ಸಂಗೀತ ಸಭೆಯ ಅಧ್ಯಕ್ಷತೆ. ಇವನ್ನೆಲ್ಲ ಅದೇ ಮಾಸ್ತಿ–ದಿವ್ಯ–ಸಂಸ್ಪರ್ಷದಿಂದ ನೆರವೇರಿಸಿ ರಾತ್ರಿ ೧೦ ಗಂಟೆಗೆ ಅಜ್ಜಯ್ಯ ಮರಳಿದರು. ಬಾಸ್ವೆಲ್ ಮತ್ತೆ ಹುಟ್ಟಲಿಲ್ಲವಲ್ಲ, ಮಾಸ್ತಿಯವರಂಥ ಜಾನ್ಸನ್ನರ ದೈನಂದಿನ ಮಾತು ಕತೆ ಆಖ್ಯಾನಗಳು ಕ್ಷಣಿಕ ಘಟನೆಗಳಾಗಿ ಮಿಂಚಿ ಬೆಳಗಿ ಮರೆಯಾಗಿ ಹೋಗುವುವಲ್ಲ ಎಂದು ಪದೇ ಪದೇ ನನಗೆ ಅನಿಸುತ್ತಿತ್ತು.

ಶಿವರಾಮ ಕಾರಂತರು, ಮಾಸ್ತಿ ಪುತ್ತೂರಿಗೆ ಬರುವಾಗ, ತಾವು ಪೂರ್ವಯೋಜಿತ ಕಾರ್ಯಕ್ರಮಾನುಸಾರ ಪರ ಊರಿಗೆ ಹೋಗಬೇಕಾಗಿರುವುದನ್ನು ಕುರಿತು ಇವರಿಗೆ ಮೊದಲೇ ತಿಳಿಸಿದ್ದರು. ಮಾಸ್ತಿ ಎಂದರು, "ಲೀಲಾ ತಾಯಿಯವರನ್ನು ನೋಡಿ ಮಾತಾಡಿಸಿಕೊಂಡು ಬರಬೇಕು."
ಸೋಮವಾರ ಬೆಳಿಗ್ಗೆ 'ಬಾಲವನ'ಕ್ಕೆ ಹೋಗಿ ಲೀಲಾ ಕಾರಂತರನ್ನು ನೋಡಿ ಮಾತಾಡಿದ್ದಾಯಿತು. ಅಲ್ಲಿಂದ ವಿವೇಕಾನಂದ ಕಾಲೇಜಿಗೆ ಲೀಲಾ ತಾಯಿಯವರ ಸಹಿತ ನಮ್ಮ

ಮೆರವಣಿಗೆ ಸಾಗಿತು. ಆ ಹೃಸ್ವ ಪಯಣದ ವೇಳೆ ಮಾಸ್ತಿ ಏನೋ ಲಘು ಹಾಸ್ಯ ಬೀರಿದರು. ಆಗ ಉಕ್ಕಿ ಬಂದ ನಗುವಿನ ಕಾರಣವಾಗಿ ಲೀಲಾ ತಾಯಿಯವರ ತಾಂಬೂಲ ರಸ ತುಂಬಿದ್ದ ಬಾಯಿ ಬಿರಿದು ಎದುರಿನ ಸಾಲಿನಲ್ಲಿ ಕುಳಿತಿದ್ದ ನನ್ನ ಬೆನ್ನಿನ ಮೇಲೆ ಸಮೃದ್ಧ ಲಾಲಾರಸದ ಅಭಿಷೇಕವಾಯಿತು. ತಾಯಿಯವರಿಗೆ ತುಂಬ ಮುಜುಗರವಾಯಿತು, ಬಲು ಪೇಚಾಟಪಟ್ಟುಕೊಂಡರು. "ಏನೂ ಚಿಂತೆ ಮಾಡಬೇಡಿ ತೊಳೆದರಾಯಿತು" ಎಂದು ನಾನು ಸಮಾಧಾನ ಹೇಳಿದೆ. ಆಗ ಮಾಸ್ತಿ ನುಡಿದರು, "ಅಯಾಚಿತವಾಗಿ ಗುರು ಪತ್ನಿಯ ಉಚ್ಛಿಷ್ಟ ಲಭಿಸಿರುವ ನೀವು ಅದೃಷ್ಟವಂತರು!" ಎಂಥ ಸುಸಂಸ್ಕೃತ ಸ್ಪರ್ಶ!

ಕಾಲೇಜಿನಲ್ಲಿ ವಿದ್ಯಾರ್ಥಿಗಳ ಮಹಾಸಭೆಯನ್ನು ಉದ್ದೇಶಿಸಿ ಮಾಸ್ತಿ ಭಾಷಣ ಮಾಡಿದರು. ತರುವಾಯ ಕಾಂಚನದೆಡೆಗೆ ಕಾರನ್ನು ಓಡಿಸಿದೆವು. ಅಂದು ಬೆಳಗ್ಗೆ ೧೧-೩೦ ಗಂಟೆಗೆ ಸರಿಯಾಗಿ ತ್ಯಾಗರಾಜರ ಪಂಚರತ್ನ ಕೀರ್ತನೆಗಳ ಸಾಮೂಹಿಕ ಹಾಡುಗಾರಿಕೆ ಪ್ರಾರಂಭ. ಆ ಮೊದಲೇ ನಾವು ಕಾಂಚನವನ್ನು ತಲಪಿರಬೇಕು ಎಂಬುದು ಕಾರ್ಯಕ್ರಮ. ಆದರೆ ಒಂದಷ್ಟು ನಿಮಿಷ ತಡವಾಗಿಯೇ ಸಭಾಮಂದಿರವನ್ನು ತಲಪಿದೆವು. ಕ್ಲುಪ್ತ ವೇಳೆಗೆ ಸಾಮೂಹಿಕ ಗಾನ ಪ್ರಾರಂಭವಾಗಿದ್ದುದರಿಂದ ನಮ್ಮನ್ನು ಬರಮಾಡಿಕೊಳ್ಳಲು ಗಣ್ಯರು ಯಾರೂ ಎದುರಿಗಿರಲಿಲ್ಲ. ಆ ಸೆಖೆಯಲ್ಲಿ ಕಾರಿನಿಂದ ಇಳಿದ ಅಜ್ಜಯ್ಯ ಮಂದಿರದ ಹೊರಜಗಲಿಯಲ್ಲಿ ಕಾಲು ಚಾಚಿ ಕುಳಿತರು. "ಒಳಗೆ ಬನ್ನಿ" ಎಂದು ಯಾರೋ ಕರೆದರು. ಆದರೆ ಅದು ಸಭಾ ಮರ್ಯಾದೆಗೆ ಭಂಗವೆಂದು ಇವರು ಒಪ್ಪಲಿಲ್ಲ. ನಾವೆಲ್ಲರೂ ಅಲ್ಲೇ ಜಗಲಿಯಲ್ಲಿ ಹರಡಿ ಕುಳಿತೆವು. "ಎಂದರೋ ಮಹಾನುಭಾವುಲು" ಆಗ ಒಳಗಿನಿಂದ ಪ್ರವಹಿಸುತ್ತಿದ್ದುದು ಅರ್ಥಗರ್ಭಿತವೆಂದು ನನಗನ್ನಿಸಿತು. ಮಾಸ್ತಿಯವರು ಆ ಸಂಗೀತ ಸುಖ ಸವಿಯುತ್ತ ಮೃದುವಾಗಿ ತಾಳ ಹಾಕುತ್ತ ತನ್ಮಯರಾದರು. ಕೀರ್ತನೆಯ ಕಾರ್ಯಕ್ರಮ ಮುಗಿದ ತರುವಾಯ ಕಾಂಚನದ ಯಜಮಾನರು ಮಂದಿರದಿಂದ ಹೊರಬಂದು ಮಾಸ್ತಿಯವರನ್ನೂ ನಮ್ಮೆಲ್ಲರನ್ನೂ ಸ್ವಾಗತಿಸಿದರು. ಭೋಜನಾನಂತರ ಮಹಾಸಭೆ. ಅದಕ್ಕೆ ಅಧ್ಯಕ್ಷರು ಇವರೇ. ಕಾಂಚನ ಗುರುಕುಲದ ಶಿಷ್ಯ ಶಿಷ್ಯೆಯರಿಂದ ಸಂಗೀತ, ಮಾಸ್ತಿಯವರ ಭಾಷಣ, ಕೊನೆಗೆ (ರಾತ್ರಿ ೯-೩೦ ಗಂಟೆಗೆ) ಅಂದಿನ ಮುಖ್ಯ ಸಂಗೀತಗಾರರೂ ಆಹ್ವಾನಿತರೂ ಆದ ವೆಂಕಣ್ಣಾಚಾರ್ಯರಿಂದ ಸಂಗೀತ. ಇವಿಷ್ಟು ಮುಗಿದು ರಾತ್ರಿಯ ೧೧ ಗಂಟೆಗೆ ಕಾಂಚನದವರ ಮನೆಗೆ ಮರಳುವಾಗ ನನಗೆ ಬಹಳ ಸಂಕಟವಾಗಿತ್ತು; ಈ ಹಿರಿಯರನ್ನು ಇಲ್ಲಿವರೆಗೆ ಕರೆದು ತಂದು ಅಚಾತುರ್ಯವೆಸಗಿದೆನೇ ಎಂದು. ನನಗೆ ಮಾಸ್ತಿಯವರ ಎಣೆಯಿಲ್ಲದ ಸೌಜನ್ಯದ ಅರಿವಾದದ್ದು ಅಲ್ಲಿ. ಮಾತಿನಲ್ಲಾಗಲೀ ಯಾವುದೇ ಕೃತಿಯಲ್ಲಾಗಲೀ ಕೊನೆಗೆ ನೋಟದಲ್ಲಾಗಲೀ ಅವರು ಅಸಮಾಧಾನದ ರೇಖೆಯನ್ನೂ ತೋರ್ಪಡಿಸಲಿಲ್ಲ. "ಒಳ್ಳೆಯದನ್ನು ನೋಡಿ, ಒಳ್ಳೆಯದನ್ನು ಕೇಳಿ, ಒಳ್ಳೆಯದನ್ನು ಹೇಳಿ" – ಇದು ಅವರ ಜೀವನ ಮಂತ್ರ. ಮರುದಿನ ಅಲ್ಲಿಂದ ಹಿಂದಕ್ಕೆ ಹೊರಟಾಗ ತೀರ ನಾಚಿಕೆ ಅಪಮಾನಗಳಿಂದ ನಾನು ಅವರಿಗೆ ಹೇಳಿದೆ, "ನನಗೂ ತಿಳಿದಿರಲಿಲ್ಲ ಹೀಗೆಂದು. ತಾವು ಮನ್ನಿಸಬೇಕು."
"ಏನು ಏನಾಯ್ತು? ಎಲ್ಲವೂ ಚೆನ್ನಾಗಿ ಆಯಿತಲ್ಲ!" ಅವರ ಪ್ರತಿಕ್ರಿಯೆ ಬಗ್ಗೆ ಪುತಿನ ಬರೆದಿರುವ ಮಾತು ಗಮನಾರ್ಹವಾಗಿದೆ. "ಗೂಢವಾಗಿ ದಾನ, ಮನೆಗೆ ಬಂದವರ ಸಂಕೋಚ ಮುರಿಯುವಂಥ ಸಂಭ್ರಮದ ಆತಿಥ್ಯ, ಪ್ರಿಯವನ್ನು ಮಾಡಿದರೂ ಹೇಳದೇ ಮೌನವಾಗಿ ಇದ್ದುಬಿಡುವುದು, ಪರರ ಗುಣಗಳನ್ನು ಪ್ರಶಂಸಿಸುವುದು, ಸಿರಿಬಂದಾಗ ಗರ್ವ ಪಡದಿರುವುದು, ಹೆರರ ಅವಗುಣಗಳ ಬಗ್ಗೆ ಅನಾಸ್ಥೆಯಿಂದಿರುವುದು – ಈ ಅಸಿಧಾರಾವ್ರತವನ್ನು ಪುಣ್ಯವಂತರಾದ ಆತ್ಮಶಾಲಿಗಳು ಮಾತ್ರ ನಡೆಸಬಲ್ಲರು. ಮಾಸ್ತಿಯವರು ಈ ಅಸಿಧಾರವ್ರತಿಗಳ ಸಾಲಿಗೆ ಸೇರತಕ್ಕವರು."

'ಭಾವ'ದ ಬರವಣಿಗೆಯ ಗತಿ ತೀರ ನಿಧಾನವಾಗಿತ್ತು. ಆದರೆ ನಾನು ಬೇರೆ ಏನೂ ಮಾಡುವಂತಿರಲಿಲ್ಲ. ಬರವಣಿಗೆಯ ಒಂದು ಘಟ್ಟ ಮುಟ್ಟಿದಾಗ ಮಾಸ್ತಿಯವರ ಪತ್ನಿ ಪಂಕಜಮ್ಮನವರೂ ಅಶ್ವತ್ಥನಾರಾಯಣ ಎಂಬ ತರುಣ ಮಿತ್ರರೂ ಪ್ರತಿ ದಿನವೂ ಅದನ್ನು ಬರೆದುಕೊಳ್ಳಲು ಒದಗಿ ಬಂದದ್ದು ಒಂದು ಪುಣ್ಯ. ಆದಿತ್ಯವಾರದ ನನ್ನ ಪಾಲಿನ ಸುಖ ನನಗೇ ಮೀಸಲಾಗಿರಬೇಕು ಎಂದು ಕೋರಿದೆ. ಹಾಗೆ ಹೋದಾಗಲೆಲ್ಲ ಹಿಂದೆ ಇತರರು ಬರದಿಟ್ಟುದನ್ನು ನಾನು ಕುತೂಹಲದಿಂದ ಓದುತ್ತಿದ್ದೆ.
"ಗಟ್ಟಿಯಾಗಿಯೇ ಓದಿರಂತಲ್ಲ. ನಾನೂ ಕೇಳುತ್ತೇನೆ" ಎನ್ನುವರು ಮಾಸ್ತಿ. ನಾನು ಓದಬೇಕು, ಅವರು ಆಲಿಸಬೇಕು. "Does it interest you, Narayana Rao?" ಎಂದು ಪದೇ ಪದೇ ಪ್ರಶ್ನಿಸುತ್ತಿದ್ದರು. ದಾಕ್ಷಿಣ್ಯಕ್ಕಾಗಿ ನಾನು ಕಷ್ಟಪಡಬಾರದು ಎಂಬುದು ಅವರ ಮನೋಗತ. ನಾನು ಅ ಘಟನೆಗಳ ಸ್ವಾರಸ್ಯವನ್ನು ಅವನ್ನು ನಿರೂಪಿಸಿರುವ ಭಾಷೆಯ ನವುರನ್ನು ಎಳೆ ಎಳೆಯಾಗಿ ಬಿಡಿಸಿ ನನಗೆ ಅವು ಹೇಗೆ ಮನೋಜ್ಞವಾಗಿದೆ ಎಂದು ಹೇಳುವಾಗ ಅವರು ಮೆಚ್ಚು ನಗು ಸೂಸುತ್ತ "Because you have absolute love for me" ಎನ್ನುವರು.

“ಸಾಹಿತ್ಯರಂಗದಲ್ಲಿ ಬರುವ ಕೆಟ್ಟ ಪುಸ್ತಕಗಳನ್ನು ನೀವು ಖಂಡಿಸಿ ನಾಲ್ಕು ಮಾತುಗಳನ್ನು ಏಕೆ ಹೇಳಬಾರದು” ಎಂದು ಒಮ್ಮೆ ಕೇಳಿದೆ.
“ಬರೆದಾತ ಅದು ಕೆಟ್ಟ ಪುಸ್ತಕ ಆಗಬೇಕೆಂದು ಬರೆದನೇ? ಅದನ್ನು ಸಾರ್ವಜನಿಕವಾಗಿ ಖಂಡನೆ ಮಾಡಿ ಅವನಿಗೆ ನಾನೇಕೆ ನೋವುಂಟುಮಾಡಬೇಕು? ಹೀಗೆ ಮಾಡಿದರೆ ಮುಂದೆ ಎಂದೂ ಅವನಿಂದ ಒಳ್ಳೆಯ ಪುಸ್ತಕ ಬರಲಾರದು. ಕಾಲವೇ ಕೆಟ್ಟ ಪುಸ್ತಕವನ್ನು ತಳ್ಳಿ ಹಾಕಿಬಿಡುವುದು.”
“ಅಂಥ ಒಬ್ಬ ಲೇಖಕ ನಿಮ್ಮ ಎದುರೇ ಬಂದು ಅಭಿಪ್ರಾಯ ಕೇಳಿದರೆ ಏನು ಮಾಡುತ್ತೀರಿ?”
“ಖಂಡಿತವಾಗಿಯೂ ಅವನಿಗೆ ಬಿಡಿಸಿ ಹೇಳುತ್ತೇನೆ. ಅವನು ಎಲ್ಲಿ ತಪ್ಪಿದ್ದಾನೆ ಎಂಬುದನ್ನು ನನಗೆ ತಿಳಿದಂತೆ ವಿವರಿಸುತ್ತೇನೆ. ಇಲ್ಲಿಯೂ ಅವನಿಗೆ ನೋವುಂಟು ಮಾಡುವುದು ನನ್ನ ಉದ್ದೇಶವಲ್ಲ.”

ಒಮ್ಮೆ ಸಂಭಾಷಣೆ ವೇಳೆ ಮಾಸ್ತಿ ಆನುಷಂಗಿಕವಾಗಿ ನುಡಿದರು, “ನೀವು ಸಂಗೀತ ಪ್ರಿಯರಾಗದಿದ್ದರೆ ಉತ್ತಮ ಶೈಲಿವಿದರಾಗಲಾರಿರಿ.” ಈ ಒಗಟು ಮಾತನ್ನು ಬಿಡಿಸಿ ಹೇಳಲು ಕೋರಿದಾಗ ಅವರು ನೀಡಿದ ವಿವರಣೆ! “ಸಂಗತ ಪದಗಳ ಸುಮಧುರ ಜೋಡಣೆಯೇ ಸಂಗೀತ. ಸುಂದರ ಶೈಲಿ ಎಂದರೆ ಇದೇ. ನೀವು ಗದ್ಯಲಯ ಗಳಿಸಬೇಕಾದರೆ ಸಂಗೀತಪ್ರಿಯರಾಗಲೇ ಬೇಕು.”

ಒಂದು ಸಲ ಗೆಳೆಯ ವೆಂಕಣ್ಣಾಚಾರ್ಯರು ‘ಶ್ರೀನಿವಾಸ’ರ ಹಾಡುಗಳನ್ನು ಶುದ್ಧ ಕರ್ನಾಟಕ ಸಂಗೀತ ಶೈಲಿಯಲ್ಲಿ ೩ ತಾಸು ಹಾಡಿದರು. ಇದು ನಡೆದದ್ದು ಮಾಸ್ತಿಯವರ ಮನೆಯಲ್ಲೇ. ಈ ಹಾಡುಗಳು ಸಮರ್ಥರ ಬಾಯಿಯಲ್ಲಿ ಶಾಸ್ತ್ರೀಯ ಹಾಡುಗಾರಿಕೆಗೆ ಅವೆಷ್ಟು ಪರಿಪೂರ್ಣವಾಗಿ ಒಗ್ಗುತ್ತವೆ ಎಂಬುದು ನಮಗಾಗ ತಿಳಿಯಿತು.

ಹೀಗೆ ಬೆಳೆದು ಬಂದ ನಮ್ಮ ಬಾಂಧವ್ಯದ ಪರಿಣಾಮವಾಗಿ ನಮಗೆ ತಿಳಿಯದೇ ನಾವು ಮಾಸ್ತಿ ಕುಟುಂಬದ ಆಂತರ್ಯದ ಸದಸ್ಯರಾದೆವು. “ಮುದುಕರಾದ ನಮ್ಮನ್ನು ನೀವೆಲ್ಲರೂ ವಿಚಾರಿಸಿಕೊಂಡು ನಡೆಸಿಕೊಂಡು ಹೋಗಬೇಕು. ನಮಗೆ ಇನ್ನು ಯಾರಿದ್ದಾರೆ?’ ಎಂದು ವೃದ್ಧ ದಂಪತಿಗಳು ತುಂಬಿದ ಮನದಿಂದ ಆಗಾಗ ಹೇಳುವುದಿತ್ತು.

೧೯೬೮ರ ತರುಣದಲ್ಲಿ ಒಂದು ವಿಶೇಷ ಘಟನೆ ನಡೆಯಿತು. ಮೈಸೂರು ವಿಶ್ವವಿದ್ಯಾನಿಲಯದ ದೇ. ಜವರೇಗೌಡರಿಂದ ನನಗೆ ಒಂದು ಆಹ್ವಾನ ಬಂದಿತು. ನಾನು ‘ಕನ್ನಡ ವಿಶ್ವಕೋಶ’ದ ವಿಜ್ಞಾನ ಸಂಪಾದಕನಾಗಿ ಅವರ ಸಂಸ್ಥೆಯನ್ನು ಸೇರಬೇಕೆಂಬುದು ಅದರ ಸಾರ. ಈ ವಿಚಾರವನ್ನು ಮಾಸ್ತಿಯವರೊಡನೆ ಪ್ರಸ್ತಾವಿಸಿದೆ. “ಜವರೇಗೌಡರು ಹಿಡಿದ ಕೆಲಸ ಸಾಧಿಸುವ ಖ್ಯಾತಿವಂತ. ಕನ್ನಡಕ್ಕಾಗಿ ತುಂಬ ದುಡಿಯುತ್ತಿದ್ದಾರೆ. ನೀವು ಹೋಗಿ ಅವರ ಕೈಗಳನ್ನು ಬಲಗೊಳಿಸಬೇಕು. ನಿಮ್ಮಿಂದ ಈ ಕೆಲಸ ಆಗುತ್ತದೆ” ಎಂದರು. ಮತ್ತೆ ಸ್ವಲ್ಪ ತಡೆದು, “ಆದರೆ ಇದರಿಂದ ಅನಿವಾರ್ಯವಾಗಿ ನಿಮ್ಮಿಂದ ನಾನು ದೂರವಾಗಬೇಕಾಗುತ್ತದೆ. ಆದರೆ ಕನ್ನಡದ ಕೆಲಸ ಬೇರೆಲ್ಲವಕ್ಕಿಂತಲೂ ದೊಡ್ಡದು. ನೀವು ಒಪ್ಪಿಕೊಳ್ಳಿ” ಎಂದು ಖಚಿತವಾಗಿ ನಿರ್ದೇಶಿಸಿದರು. ನಾನು ಒಪ್ಪಿ ನಿರ್ವಹಿಸಬೇಕಾಗಿದ್ದ ಇತರ ಹೊಣೆಗಾರಿಕೆಗಳ ಪರಿಣಾಮವಾಗಿ ಆ ಗಳಿಗೆಯಲ್ಲಿ ದೇಜಗೌರ ಕರೆಯನ್ನು ಮನ್ನಿಸುವ ಸ್ಥಿತಿಯಲ್ಲಿ ಇರಲಿಲ್ಲ. ಮುಂದೆ ಕಾಲ ಪಕ್ವವಾದಾಗ (ಜೂನ್ ೧೯೬೯) ಮೈಸೂರಿಗೆ ಹೊರಟು, ಆಶೀರ್ವಾದ ಪಡೆಯಲು ಮಾಸ್ತಿಯವರಲ್ಲಿಗೆ ಹೋದೆವು.
“ಈಗ ಹತ್ತು ವರ್ಷಗಳ ಹಿಂದೆಯೇ ಆಗಬೇಕಿದ್ದ ಕೆಲಸವದು. ‘ವಿಶ್ವಕೋಶ’ದ ನಿರ್ಮಾಣ ಇನ್ನು ಖಂಡಿತ ಬೇಗ ಬೇಗ ಆಗುತ್ತದೆ” ಎಂಬ ಪ್ರವಾದಿ ನುಡಿ ಆಡಿದರು. ಅವರ ಈ ಪ್ರೀತ್ಯಭಿಮಾನಗಳಿಗೆ ಏನು ಹೇಳಲಿ! ಪುತಿನರವರ ಮಾತೇ ಸರಿ, “ಪೂಜ್ಯ ಮಾಸ್ತಿಯವರನ್ನು ನೆನೆದಾಗ ನನ್ನಂತ ಅನೇಕರ ಹೃದಯ ಕೃತಜ್ಞತೆಯಿಂದ ನಮ್ರವಾಗುತ್ತದೆ. ನಮ್ಮ ನಾಡು, ನಮ್ಮ ಜನ, ನಮ್ಮ ಸಂಸ್ಕೃತಿಗಳಿಗೆ ಅವರಷ್ಟು ಒಲಿದಿರುವವರು ವಿರಳ.”

ಮಾಸ್ತಿ ೧೯೧೬ರಷ್ಟು ಹಿಂದೆಯೇ ಕನ್ನಡದ ಕೆಲಸ ಕುರಿತು ತಳೆದಿದ್ದ ಸ್ಪಷ್ಟ ನಿಲವನ್ನು ಅವರ ಮಾತಿನಲ್ಲಿಯೇ ನೋಡಬಹುದು, “ಇಂಥ ಕೆಲಸವನ್ನು ಮಾಡಿ ಎಂದು ನಾವು ಹೇಳಬಹುದಾದದ್ದು ಆಧುನಿಕ ವಿಚಾರಗಳನ್ನು ಬಲ್ಲ ಈಗಿನ ಜನತೆಗೆ ಮಾತ್ರ. ಇವರಲ್ಲಿ ಒಂದು ಪ್ರಾರ್ಥನೆ ಮಾಡುತ್ತೇನೆ. ಆ ಪ್ರಾರ್ಥನೆ ಇದು. ಈ ವಿದ್ಯಾವಂತ ಜನ ಜೀವನದಲ್ಲಿ ನೆಲಸಿದ ಒಡನೆ ಆರಂಭದ ಕೆಲವು ವರ್ಷಗಳನ್ನು, ಎಂದರೆ ಅದರಲ್ಲಿ ತಮಗಿರುವ ವಿರಾಮ ಕಾಲವನ್ನು, ಕನ್ನಡವನ್ನು ಚೆನ್ನಾಗಿ ಅಭ್ಯಾಸ ಮಾಡುವುದಕ್ಕೂ ಜೊತೆಗೆ ತಮ್ಮ ಅಭಿರುಚಿಯ ವಿಷಯವೊಂದರಲ್ಲಿ ಹೊಸ ತಿಳುವಳಿಕೆಯನ್ನು ಗ್ರಹಿಸುವುದಕ್ಕೂ ವಿನಿಯೋಗಿಸಬೇಕು. ಅಭ್ಯಾಸದ ಗ್ರಹಣದ ಈ ಕೆಲಸವು, ಎಂದರೆ ಸುಮಾರು

ಹತ್ತು ವರ್ಷಗಳ ಅನಂತರ, ಇವರು ನಮ್ಮ ಸಾಹಿತ್ಯಕ್ಕೆ ತಮ್ಮಿಂದಾದ ಸೇವೆಯನ್ನು ಸಲ್ಲಿಸಲು ತೊಡಗಬೇಕು. ಇವರಲ್ಲಿ ಕೆಲವರಿಗೆ ಬಂಕಿಂಚಂದ್ರರಂತೆ, ರವೀಂದ್ರನಾಥರಂತೆ ಕೃತಿಕಾರರಾಗುವ ಭಾಗ್ಯ ಇರಬಹುದು. ಭಾಗ್ಯ ಇತ್ತೇ ಸಂತೋಷ, ಇಲ್ಲವೇ ನಷ್ಟವಿಲ್ಲ. ಇವರ ಈ ಕಾರ್ಯ ತಳಹದಿ ಹಾಕುತ್ತದೆ. ಉತ್ತಮ ಕೃತಿರಚನೆ ಸುಲಭವಾಗುತ್ತದೆ, ಮುಂದೆ ಬರುತ್ತದೆ."
(ಮಾಸ್ತಿಯವರನ್ನು ಕುರಿತ ಈ ಮುಂದಿನ ಆಖ್ಯಾನಕವನ್ನು ದೇಜಗೌರವರ 'ತೀನಂಶ್ರೀ' ಗ್ರಂಥದಿಂದ ಆಯ್ದಿದೆ.)

ಮಾಸ್ತಿಯವರು ಹೇಳಿದ್ದೆಂದು ಬರೆದುಕೊಂಡಿರುವ ಮತ್ತೊಂದು ಕತೆ ತುಂಬ ಧ್ವನಿಪೂರ್ಣವಾಗಿದೆ. ಆ ಕತೆಯನ್ನು ಕೆ.ಎಚ್. ರಾಮಯ್ಯನವರು ಮಾಸ್ತಿಯವರಿಗೆ ಎಂದೋ ಹೇಳಿದ್ದರಂತೆ: "ನಮ್ಮ ಜನ ಗೂಡ್ಸ್ ಬಂಡಿಗಳ ಹಾಗೆ, ವಿಶ್ವೇಶ್ವರಯ್ಯನವರು ಒಳ್ಳೆ ಎಂಜಿನ್ ಹಾಗೆ. ಎಂಜಿನ್ ಬಂಡಿಗಳನ್ನು ಒಂದು ಸಲ ಎಳೆಯಿತು, ಇವು ಜಗ್ಗಲಿಲ್ಲ. ಇನ್ನೊಂದು ಸಲ ಎಳೆಯಿತು, ಜಗ್ಗಲಿಲ್ಲ. ಮತ್ತೊಂದು ಸಲ ಎಳೆದಾಗ ಎಂಜಿನ್ನೇ ಕಳಚಿಕೊಂಡು 'ಹೊರಟೇ ಹೋಯಿತು.' ಬಂಡಿಗಳು ಇದ್ದ ಕಡೆಯೇ ಇದ್ದುಬಿಟ್ಟವು. ಇಷ್ಟು ಕತೆಯನ್ನು ಹೇಳುವಾಗ ಮುಂದಿನ ವಿಸ್ತರಣ ಆ ಕ್ಷಣದಲ್ಲಿ ಮಾಸ್ತಿಯವರಿಗೆ ಹೊಳೆಯಿತಂತೆ. "ಬಂಡಿಗಳು ಯಾಕೆ ಕದಲಲಿಲ್ಲ ಗೊತ್ತೇ? ಎಂಜಿನ್ ಕೊಕ್ಕೆ (hook) ಬಂಡಿಗಳಿಗೆ ಸರಿಯಾಗಿ ತಗಲಿರಲಿಲ್ಲ! ಈ ಕೊಕ್ಕೆ ಯಾವುದು? ಕನ್ನಡ ಮಾತು. ವಿಶ್ವೇಶ್ವರಯ್ಯನವರು ತಮ್ಮ ಉದ್ದೇಶಗಳನ್ನು ಧ್ಯೇಯಗಳನ್ನು ಜನಕ್ಕೆ ತಿಳಿಯುವ ಹಾಗೆ ಕನ್ನಡದಲ್ಲಿ ಹೇಳಿ ಜನಸಾಮಾನ್ಯರ ಮನಸ್ಸಿಗೆ ಹತ್ತಿಸಿದ್ದರೆ ಅವರ ಪ್ರಗತಿಯ ಭಾವನೆಗಳಲ್ಲಿ ಜನಗಳೂ ಭಾಗಿಗಳಾಗುತ್ತಿದ್ದರು. ಆದರೆ ವಿಶ್ವೇಶ್ವರಯ್ಯನವರ ಭಾವನೆಗಳೆಲ್ಲ, ಆಲೋಚನೆಯೆಲ್ಲ ಇಂಗ್ಲಿಷಿನಲ್ಲಿ; ಜನ ಸಾಮಾನ್ಯಕ್ಕೂ ಅವರಿಗೂ ಬಿಗಿಯಾದ ಸಂಬಂಧ ಏರ್ಪಡಲಿಲ್ಲ."

ನನ್ನ ಕಾರ್ಯಕ್ಷೇತ ಮೈಸೂರಾದರೂ (ಜೂನ್ ೧೯೬೯ರಿಂದ) ವಿಶ್ವಕೋಶದ ಮುದ್ರಣ ಕಾರ್ಯಕ್ಕೆ ಆಗಾಗ ನಾನು ಬೆಂಗಳೂರಿಗೆ ಹೋಗಬೇಕಾಗುತ್ತಿತ್ತು. ಹೀಗೆ ಒಂದು ಸಲ ಹೋಗಿದ್ದಾಗ ರಂ.ಶ್ರೀ. ಮುಗಳಿಯವರ ಬಳಿಗೆ ಹೋಗಿದ್ದೆ (ಬೆಂಗಳೂರು ವಿಶ್ವವಿದ್ಯಾಲಯ). "ನಿಮಗೆ ಗೊತ್ತೇ? ಮಾಸ್ತಿಯವರ ಮನೆಯವರು ಇಂದು ಮುಂಜಾನೆ ತೀರಿಕೊಂಡರಂತೆ" ಎಂದು ಅವರು ಹೇಳಿದಾಗ ನನಗೆ ತೀವ್ರ ಆಘಾತವಾಯಿತು. ಆಗ ಅಪರಾಹ್ಣದ ೩ ಗಂಟೆ. ಗೆಳೆಯ ರಾಮಕೃಷ್ಣ ಐತಾಳರೂ ಇನ್ನಿಬ್ಬರು ಮಿತ್ರರೂ ಆ ಕ್ಷಣವೇ ಮಾಸ್ತಿಯವರ ಮನೆಗೆ ಹೋದೆವು. ಅವರನ್ನು ನಾವು ಹೇಗೆ ಮಾತಾಡಿಸುವುದು ಸಾಂತ್ವನ ನುಡಿಗಳನ್ನು ಹೇಗೆ ಹೇಳುವುದು ಎಂದು ತಿಳಿಯದೇ ಅಳುಕಿನಿಂದ ಮನೆಯನ್ನು ಪ್ರವೇಶಿಸಿದೆವು.

ಚಿರಪರಿಚಿತ ಗಿಳಿ ಪಂಜರದೊಳಿರಲಿಲ್ಲ. ನಾಯಿ ಬಗುಳಲೂ ಇಲ್ಲ, ಬಾಲ ಆಡಿಸಲೂ ಇಲ್ಲ. ಮೂಕಶೋಕ ಸಾರ್ವತ್ರಿಕವಾಗಿ ವ್ಯಾಪಿಸಿ ಮಹಾತಾಯಿಯ ನಿರ್ಗಮನದಿಂದ ಉಂಟಾದ ಶೂನ್ಯವನ್ನು ಸಂಕೇತಿಸುತ್ತಿತ್ತು. ನಡುಮನೆ, ಅದೇ ಸೋಫಾ. ಮಾಸ್ತಿ ಎಂದಿನಂತೆ ಅದರ ಎಡ ಅಂಚಿನಲ್ಲಿ ಕುಳಿತಿದ್ದಾರೆ. ಉತ್ತರ ಕ್ರಿಯೆಗಳು ಆ ಬೆಳಗ್ಗೆಯೇ ಮುಗಿದು ಹೋಗಿದ್ದುವು. ಅವರು ಮುಖವನ್ನು ಕೈಗಳಿಂದ ಮುಚ್ಚಿಕೊಂಡಿದ್ದರು. "ಬಂದಿರಾ! ಬನ್ನಿ ಕೂತುಕೊಳ್ಳಿ." ಅದೇ ನಯ ಆತ್ಮೀಯತೆ.
"ಬಹಳ ಸಂಕಟವಾಯಿತು ಕೇಳಿ."
"ಇದುವರೆಗೆ ನಾವು ಒಂದೇ ಬಂಡಿಗೆ ಹೂಡಿದ ಎತ್ತು ಮತ್ತು ಹಸುವಾಗಿ ಅದನ್ನು ಎಳೆಯುತ್ತಿದ್ದೆವು. ದೈವ ಹಸುವನ್ನು ಬರಮಾಡಿಕೊಂಡಿತು. ಎತ್ತು ಆ ದೈವದ ಅಪ್ಪಣೆ ಕಾಯುತ್ತ ಬಂಡಿಯನ್ನು ಎಳೆಯುತ್ತ ಮುಂದೆ ಸಾಗುತ್ತಿರಬೇಕು."
"ತುಂಬ ಪರಿಪಕ್ವವಾದ ಜೀವ. ಪುಣ್ಯವಂತ ಜೀವ. ಹಿಂದೂ ಮಹಿಳೆ ಇದಕ್ಕಿಂತ ಹೆಚ್ಚಿನದೇನನ್ನು ಬಯಸುತ್ತಾಳೆ."
"ನಿಜ ನಿಜ. ದೊಡ್ಡದಾಗಿ ಬಾಳಿದಳು. ದೊಡ್ಡ ಮನೆ ನಡೆಸಿದಳು."
ಅಷ್ಟರಲ್ಲಿ ಬಲು ಸೂಟಿಯಾಗಿ ಉಡುಪು ಧರಿಸಿದ್ದ ಒಬ್ಬ ತರುಣ ಲಗುಬಗೆಯಿಂದ ಒಳಗೆ ಬಂದ, "ನಮಸ್ಕಾರ ಸಾರ್. ತಾವೇ ಮಾಸ್ತಿಯವರಲ್ಲವೇ?" ಉತ್ಸಾಹ ತುಳುಕುತ್ತಿತ್ತು ಧ್ವನಿಯಲ್ಲಿ.
"ನಮಸ್ಕಾರ, ಹೌದಪ್ಪಾ ನಾನೇ ಮಾಸ್ತಿ. ಕೂತುಕೊಳ್ಳಿ."
"ಕೇಂದ್ರ ಅಕಾಡಮಿಯಿಂದ ತಮಗೆ ಬಹುಮಾನ ಬಂದಿತಲ್ಲ ಸಾರ್! 'ಸಣ್ಣ ಕತೆಗಳು' ಆ ಪುಸ್ತಕದ ಒಂದು ಪ್ರತಿ ಬೇಕೆಂದು ನಾನು ಎಲ್ಲ ಅಂಗಡಿಗಳನ್ನೂ ತಲಾಸು ಮಾಡಿದೆ ಸಾರ್."
"ಆಮೇಲೆ?"
"ಎಲ್ಲಿಯೂ ದೊರೆಯಲಿಲ್ಲ, ಸಾರ್."
"ಹೌದಪ್ಪಾ ಅವರೇಕೆ ಅದನ್ನಿಡುತ್ತಾರೆ? ಅವರಿಗೆ ಅದು ಖರ್ಚಾಗದ ಮಾಲು, ಮಾರಿಬರುವ ಲಾಭವೂ ಕಡಿಮೆ."

“ನಾನು ಸತ್ಯಶೋಧನ ಪುಸ್ತಕ ಭಂಡಾರಕ್ಕೆ ಹೋದಾಗ ನಿಮ್ಮಲ್ಲಿ ಅದು ದೊರೆಯಬಹುದೆಂದು ಹೇಳಿ ನಿಮ್ಮ ವಿಳಾಸ ಕೊಟ್ಟರು ಸಾರ್. ಹಾಗಾಗಿ ಬಂದೆ. ತಮ್ಮಲ್ಲಿ ಅದು ಸಿಕ್ಕಬಹುದೇ?”
ಮಗಳನ್ನು ಕರೆದು ಆ ಪುಸ್ತಕದ ಒಂದು ಪ್ರತಿಯನ್ನು ತರಿಸಿದರು. ಆತನಿಗೆ ಕೊಟ್ಟಾಗ, “ಇದರ ಬೆಲೆ ಎಷ್ಟು ಸಾರ್?” ಎಂದು ಅವನು ಕೇಳಿದ.
“ಅದರ ಒಳಗೆ ಬರೆದಿದೆ ನೋಡಿ.”
ಎರಡು ರೂಪಾಯಿ ನೋಟೊಂದನ್ನು ಹೊರತೆಗೆದು ಅವರಿಗೆ ಕೊಡಲು ಹೋದ. ಅಲ್ಲೇ ಮೇಜಿನ ಮೇಲಿಡಲು ಸೂಚಿಸಿದರು. ಪುನಃ ಮಗಳನ್ನು ಕರೆದು ಆತನಿಗೆ ರಶೀತಿಯನ್ನೂ ಎಂಟಾಣೆ ಬಾಕಿಯನ್ನೂ ಕೊಡಲು ಹೇಳಿದರು. ಕೆಲಸ ಮುಗಿಯಿತು. “ತುಂಬ ಉಪಕಾರವಾಯಿತು ಸಾರ್, ಬರುತ್ತೇನೆ. ನಮಸ್ಕಾರ ಸಾರ್” ತರುಣ ಎದ್ದ.
“ಒಳ್ಳೇದಪ್ಪ, ನಮಸ್ಕಾರ.”
‘ದುಃಖೇಶ್ವನುದ್ವಿಗ್ನಮನಾಃ’ (ದುಃಖಗಳಲ್ಲಿ ಉದ್ವೇಗವಿಲ್ಲದ ಮನಸ್ಸುಳ್ಳವನು) ಎಂಬುದರ ಈ ಪರಮೋತ್ಕೃಷ್ಟ ನಿದರ್ಶನವನ್ನು ಕಂಡ ನಮ್ಮ ಮನಃಸ್ಥಿತಿ ಹೇಗಿದ್ದಿರಬೇಡ?

ಮಾಸ್ತಿಯವರೊಡನೆ ನಾನು ಕಳೆದ ಒಂದೊಂದು ನಿಮಿಷವೂ ರಸಯಾತ್ರೆಯೇ. ಇಂಥ ಪರಿಪಕ್ವ ಸುಸಂಸ್ಕೃತ ಕಲಾಭಿಜ್ಞ ಜೀವ ನಿಜವಾಗಿಯೂ ಈ ನೆಲದ ಮೇಲೆ ಎಲ್ಲರಂತೆ ಬಾಳಿ ಬದುಕಿತ್ತೇ, ಎಲ್ಲರಂತೆ ಸುಖದುಃಖ ಅನುಭವಿಸಿಯೂ ಆ ಹಿರಿಮೆ ಉಳಿಸಿಕೊಂಡಿತ್ತೇ ಎಂದು ಶತಮಾನಗಳ ತರುವಾಯ ಜನ ಆಶ್ಚರ್ಯಪಡುವಂಥ ಚೇತನ ಅವರದು.

ಒಮ್ಮೆ ಮಾಸ್ತಿ ಹೇಳಿದರು, “ಉಡುಪಿಯ ಪೂರ್ಣಪ್ರಜ್ಞ ಕಾಲೇಜಿಗೊಬ್ಬ ಪ್ರಾಂಶುಪಾಲರು ಬೇಕಾಗಿದ್ದಾರೆ, ಅರ್ಹರ ಹೆಸರನ್ನು ಸೂಚಿಸಬೇಕೆಂದು ಹಿರಿಯ ಸ್ವಾಮೀಜಿ ನನ್ನನ್ನು ಕೇಳಿದ್ದಾರೆ. ನಿಮ್ಮ ಹೆಸರನ್ನು ಸೂಚಿಸಬಯಸುತ್ತೇನೆ. ಇದನ್ನೊಂದು ಸವಾಲೆಂದು ನೀವು ಒಪ್ಪಿ ಮುಂದುವರಿಯಬೇಕೆಂದು ನನ್ನ ಸಲಹೆ.”
ಅವರ ಕಳಕಳಿಗೆ ಶರಣಾಗಿ ಮರುದಿನ ನನ್ನ ನಿರ್ಧಾರ ತಿಳಿಸುವೆನೆಂದು ಹೇಳಿದೆ. ನನ್ನ ಕಾಲೇಜ್ ಶಿಕ್ಷಣವಾದದ್ದೂ ಮುಂದೆ ೬ ವರ್ಷ ವೃತ್ತಿ ಅನುಭವ ಗಳಿಸಿದ್ದೂ ಧಾರ್ಮಿಕ ಸಂಸ್ಥೆಗಳ ಒಡೆತನದಲ್ಲಿದ್ದ ಕಾಲೇಜುಗಳಲ್ಲಿ. ೧೯೫೩ರಿಂದೀಚೆಗೆ ಸರ್ಕಾರೀ ಕಾಲೇಜುಗಳಲ್ಲಿ ಸೇವೆ. ಉಪನ್ಯಾಸಕರನ್ನು ನಡೆಸಿಕೊಳ್ಳುವುದರ ಬಗ್ಗೆ ಇವೆರಡರ ನಡುವಿನ ವ್ಯತ್ಯಾಸದ ಅರಿವು ನನಗೆ ಚೆನ್ನಾಗಿತ್ತು. ಅಲ್ಲಿ ನಾವು ಜೀತದ ಆಳುಗಳೆಂಬ ಅಳುಕು ನನ್ನನ್ನು ಮಾತ್ರವಲ್ಲ ನನಗಿಂತ ಎಷ್ಟೋ ಹಿರಿಯರನ್ನು ಕೂಡ ಬಾಧಿಸುತ್ತಿತ್ತು. “ಇವನಾರವ, ಇವನಾರವ, ಇವನಾರವನೆಂದೆನಿಸದಿರಯ್ಯಾ; ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದೆನಿಸಯ್ಯಾ, ಕೂಡಲಸಂಗಮದೇವಾ, ನಿಮ್ಮ ಮನೆಯ ಮಗನೆಂದೆನಿಸಯ್ಯಾ” ಎಂಬ ಸೂಕ್ತಿ ಆಚರಣೆಯಲ್ಲಿ ಮಾತ್ರ ಪ್ರಕಟವಾಗುತ್ತಿರಲಿಲ್ಲ. ಸರ್ಕಾರೀ ಕಾಲೇಜುಗಳಲ್ಲಾದರೋ ಹೆಚ್ಚುಕಡಿಮೆ ಅರಾಜಕತೆಯ ಅಂಚು ತಲಪಿದ್ದ ಮುಕ್ತತೆ! ಎಂದೇ ಇವುಗಳಲ್ಲಿ ವಿಹರಿಸಿ ವಿವಿಧ ಪ್ರಯೋಗಮಾಡಿ ಬೆಳೆದಿದ್ದ ನನಗೆ ಈ ಏರು ಹರೆಯದಲ್ಲಿ (೪೦) ಮತ್ತೆ ‘ಧರ್ಮತುರಂಗ’ನಿವಾಸಿಯಾಗುವ ಬಯಕೆ ಖಂಡಿತ ಇರಲಿಲ್ಲ. ನನ್ನ ನಿಲವನ್ನು ಮಾಸ್ತಿಯವರಿಗೆ ನಯವಾಗಿ ಹೇಳಿ ಈ ‘ಗಂಡಾಂತರ’ದಿಂದ ಪಾರಾದೆ.

ಸರ್ ಸಿ. ವಿ ರಾಮನಾಯಣ!
ಅಧ್ಯಾಯ ಅರವತ್ತ ಒಂದು

ಮಿತ್ರ–ಸಹೋದ್ಯೋಗಿ–ಕವಿ ನಿಸಾರ್ ಅಹಮದ್‌ರ ನುಡಿಗಳಲ್ಲಿ, ‘ಇದು ಸೃಷ್ಟಿ, ಕಪಿ ಮುಷ್ಟಿ, ಮಂತ್ರ ಮರೆತ ಆಲಿಬಾಬನೆದುರಲಿ ಮುಚ್ಚಿರುವ ಗವಿಬಾಗಿಲು.’ ಬೆಂಗಳೂರಿನಲ್ಲಿ ನಾನಿದ್ದ ಆ ನಾಲ್ಕು ವರ್ಷಗಳಲ್ಲಿ, ೧೯೬೫–೬೯, ನನ್ನ ಅನುಭವ ಮಾತ್ರ ‘ಮಂತ್ರವರಿತು ಉಚ್ಚರಿಸಿದ ಆಲಿಬಾಬ ಕಂಡ ದಿವ್ಯ ದೃಶ್ಯ ಬೆಂಗಳೂರು!’ ಅಂದರೆ ಆಗ ತಂತಾವೇ ನನಗೊದಗಿದ ಅವಕಾಶಗಳು ಅಸಂಖ್ಯ. ಆ ಪೈಕಿ ರಾಮನ್ ದರ್ಶನ ಸಂದರ್ಶನ ಮತ್ತು ಸಿಎನ್‌ಎಸ್ ಸಹಯೋಗ ಮುಖ್ಯವಾದವು.

ಆ ಶುಭ ಮುಂಜಾನೆ ನನಗೆ ಮೈಸೂರು ವಿಶ್ವವಿದ್ಯಾನಿಲಯದ ಪ್ರತಿಷ್ಠಿತ ತ್ರೈಮಾಸಿಕ ‘ಪ್ರಬುದ್ಧ ಕರ್ನಾಟಕ’ದ ಸಂಪಾದಕ ಜೆ.ಆರ್.ಲಕ್ಷ್ಮಣರಾಯರಿಂದ ಅನಿರೀಕ್ಷಿತವಾಗಿ ಒಂದು ಪತ್ರ ಬಂತು. ಅದರ ಸಾರ: ಈ ಪತ್ರಿಕೆ ಸದ್ಯವೇ ತನ್ನ ಚಿನ್ನದ ಹಬ್ಬ ಆಚರಿಸಲಿದೆ, ತದಂಗವಾಗಿ ವಿಶೇಷ ಬೃಹತ್ಸಂಪುಟವನ್ನು ಪ್ರಕಟಿಸಲು ಯೋಜಿಸಿದೆ, ಇದಕ್ಕೆ ನಾನು ಸರ್ ಸಿ.ವಿ.ರಾಮನ್ ಅವರ ಜೀವನ ಮತ್ತು ಸಾಧನೆ ಬಗ್ಗೆ ಒಂದು ಲೇಖನ ಬರೆದು ಕಳಿಸಬೇಕು.

ಲಕ್ಷ್ಮಣರಾಯರು ಕನ್ನಡದ ಹಿರಿಯ ವಿಜ್ಞಾನಲೇಖಕರೆಂದು ಮಾತ್ರ ನನಗೆ ಗೊತ್ತಿತ್ತು. ಪರಿಚಯವಿರಲಿಲ್ಲ. ಅವರ ‘ಪರಮಾಣು ಚರಿತ್ರೆ’ ೧೯೫೦ರ ದಶಕದಲ್ಲಿ ಪ್ರಕಟವಾದುದನ್ನು ಓದಿ ಮೆಚ್ಚಿದ್ದೆ. ಇನ್ನು ನಾನಂತೂ ಮೈಸೂರು ವಿಶ್ವವಿದ್ಯಾನಿಲಯದ ಕಕ್ಷೆಗೆ ಪೂರ್ತಿ ಹೊರಗಿನವ. ಇತ್ತ ರಾಮನ್? ಜಗತ್ತಿನ ಒಬ್ಬ ಶ್ರೇಷ್ಠ ಮತ್ತು ಜೀವಂತ ಭೌತವಿಜ್ಞಾನಿ, ಬೆಂಗಳೂರುನಿವಾಸಿ ಎಲ್ಲ ನಿಜ. ಆದರೆ ಈ ಗುರುತರ ಹೊಣೆ ಹೊರಲು ನನ್ನ ಸಾಮರ್ಥ್ಯ? ಋಣಾತ್ಮಕವಲ್ಲದಿದ್ದರೂ ಶೂನ್ಯವಂತೂ ಹೌದು. ಆದ್ದರಿಂದ ಲಕ್ಷ್ಮಣರಾಯರ ಕೋರಿಕೆಗೆ ನನ್ನ ತತ್‌ಕ್ಷಣದ ಪ್ರತಿಕ್ರಿಯೆ ನಕಾರ. ಆದರೂ ಈ ಕೆಲಸವನ್ನು ಅವರು ನನ್ನಿಂದಲೇ ಮಾಡಿಸಿದರು. ಹೇಗೆ?

ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ನಿಸರ್ಗ ತನ್ನದೇ ನಿಗೂಢ ಕಾರಣಕ್ಕಾಗಿ ಹನುಮಂತ–ಸಾಮರ್ಥ್ಯವನ್ನು ಗರ್ಭಿಸಿಟ್ಟಿರುತ್ತದೆ, ಇನ್ನೆಲ್ಲೋ ಒಬ್ಬ ಜ್ಞಾನ–ವಯೋವೃದ್ಧ–ಸಹೃದಯ ಜಾಂಬವಂತನನ್ನೂ ಸೃಷ್ಟಿಸಿರುತ್ತದೆ, ಯುಕ್ತ ಮುಹೂರ್ತದಲ್ಲಿ, ಅಂದರೆ ಹಿರಿ ಸವಾಲೊಂದು ಹಠಾತ್ತನೆ ಎದುರಾದಾಗ, ಈ ಜಾಂಬವಂತ ಆ ಹನುಮಂತನಿಗೆ ಕುಮ್ಮಕ್ಕು ಕೊಡುತ್ತಾನೆ. ಆಗ ಏನಾಗುತ್ತದೆ?

ಕುಮ್ಮಕ್ಕು ಕೊಟ್ಟಾಗ ಕಪಿ ಕಡಲ ಜಿಗಿಯುವುದು
ಕಿಮ್ಮತ್ತು ಹೂಡದೇ ಯಶವಿಲ್ಲ, ಕಾರ್ಯದಲಿ
ಗಮ್ಮತ್ತು ಗಳಿಸುವುದೆ ನಿಜತೃಪ್ತಿ – ಚಿಂತಿಸುತ
ಸುಮ್ಮನೆಯೆ ಕಾಲವನು ಕಳೆಯದಿರು ಅತ್ರಿಸೂನು

ತಮಿಳು ನಾಡಿನ ತಿರುಚಿನಾಪಳ್ಳಿಯಲ್ಲಿ ಮಧ್ಯಮವರ್ಗದ ಕುಟುಂಬವೊಂದರಲ್ಲಿ ರಾಮನ್ ಜನಿಸಿದರು (೭ ನವಂಬರ್ ೧೮೮೮). ಇವರ ಪೂರ್ಣ ಹೆಸರು ಚಂದ್ರಶೇಖರ ವೆಂಕಟ ರಾಮನ್. ತಂದೆ ಚಂದ್ರಶೇಖರ ಅಯ್ಯರ್, ತಾಯಿ ಪಾರ್ವತಿ ಅಮ್ಮಾಳ್. ಚಂದ್ರಶೇಖರ ಅಯ್ಯರರು ಸ್ಥಳೀಯ ಎಸ್‌ಪಿಜಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದರು. ಗಣಿತ ಮತ್ತು ಭೌತ ವಿಜ್ಞಾನ ಇವರು ಕಲಿಸುತ್ತಿದ್ದ ವಿಷಯಗಳು. ಖಗೋಳ ಹಾಗೂ ಸಂಗೀತ ಶಾಸ್ತ್ರಗಳಲ್ಲಿ ಅಪಾರ ಆಸಕ್ತಿ. ಕಾಲ ಮತ್ತು ಪರಿಸರಗಳಿಗೆ ಮೀರಿದ ಮನೋಧರ್ಮ ಈ ಮಹನೀಯರದು. ದೂರದ ವಿಶಾಖಪಟ್ಟಣದ ಮಿಸೆಸ್ ಎವಿಎನ್ ಕಾಲೇಜಿನಿಂದ ಗಣಿತ ಮತ್ತು ಭೌತವಿಜ್ಞಾನಗಳ ಪ್ರಾಧ್ಯಾಪಕತ್ವದ ಆಹ್ವಾನ ಬಂದಾಗ (೧೮೯೨) ಸಾಹಸ ಪ್ರವೃತ್ತಿಯ ಅಯ್ಯರರು ಪತ್ನಿ, ಅಣುಗ ರಾಮನ್ ಸಮೇತ ಅಕ್ಷರಶಃ ಅಲ್ಲಿಗೆ ಗಾಡಿ ಕಟ್ಟಿದರು. ತಮಿಳುನಾಡಿನ ಒರತೆ ತೆಲುಗುದೇಶದಲ್ಲಿ ನೀರು ಹೀರಿ ಬೆಳೆಯತೊಡಗಿತು. ಮಗನ ಅಸಾಧಾರಣ ಮೇಧಾಶಕ್ತಿಯನ್ನು ಗುರುತಿಸಿದ್ದ ತಂದೆ ತಾಯಿ ಆತನಿಗೆ ಯುಕ್ತ ಪ್ರೋತ್ಸಾಹ ನೀಡಿದರು. ಈತ ಭವಿಷ್ಯದಲ್ಲಿ ಮಹಾಪುರುಷನಾಗುತ್ತಾನೆ ಎಂದು ಅವರು ಕನಸು ಕಂಡದ್ದು ಸ್ವಾಭಾವಿಕವೇ.

ಮಿಸೆಸ್ ಎವಿಎನ್ ಕಾಲೇಜಿನಲ್ಲಿ ತಂದೆಯ ಶಿಷ್ಯನಾಗಿ ರಾಮನ್ನರ ವಿದ್ಯಾಭ್ಯಾಸ ಮುಂದುವರಿಯಿತು. ಹದಿನಾಲ್ಕನೆಯ ವಯಸ್ಸಿನಲ್ಲಿ ಎಫ್‌ಎ ಪರೀಕ್ಷೆಯನ್ನು ಉತ್ತಮ ಶ್ರೇಣಿಯಲ್ಲಿ ಮುಗಿಸಿದರು (೧೯೦೨). ಬಿಎ ಪದವಿಗೆ ಅಭ್ಯಸಿಸುವ ಸೌಕರ್ಯ ವಿಶಾಖಪಟ್ಟಣದಲ್ಲಿ ಆಗ ಇರಲಿಲ್ಲ. ಇದಕ್ಕಾಗಿ ಅವರು ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜನ್ನು ಜನವರಿ ೧೯೦೩ರಲ್ಲಿ ಪ್ರವೇಶಿಸಿದರು. ಇಲ್ಲಿವರೆಗಿನ ಅವರ ಜೀವನ ಇತರ ಎಲ್ಲ ಪ್ರತಿಭಾವಂತ ವಿದ್ಯಾರ್ಥಿಗಳ ಮಾದರಿಯಲ್ಲಿಯೇ ವಿಕಾಸಗೊಂಡಿತ್ತು.

ಮದ್ರಾಸ್ ಮಹಾನಗರದ ಪ್ರೌಢ ಕಾಲೇಜಿನ ಪರಿಸರದಲ್ಲಿ ಈ ಪ್ರತಿಭೆ ಪ್ರವಹಿಸಿದ್ದು ಅಸಂಖ್ಯಾತ ಕವಲುಗಳಾಗಿ – ಆಯ್ಕೆ ಮಾಡಿಕೊಂಡಿದ್ದ ವಿಜ್ಞಾನ ವಿಷಯಗಳು ಪ್ರಥಮಾಕರ್ಷಣೆ, ನಿಜ; ಆದರೆ ಇಂಗ್ಲಿಷ್ ಸಾಹಿತ್ಯ, ಭಾರತೀಯ ಇತಿಹಾಸ, ವೇದಂತ, ಪುರಾಣ ಇವುಗಳಲ್ಲೆಲ್ಲ ಇವರಿಗೆ ಅದಮ್ಯ ಕುತೂಹಲ ಆಸಕ್ತಿಗಳಿದ್ದುವು. ಓದು, ಗ್ರಹಿಕೆ ಅತಿಕ್ಷಿಪ್ರ. ಸಾಮಾನ್ಯರು ಒಂದು ದಿವಸವಿಡೀ ಓದಿದರೂ ಗ್ರಹಿಸದಿದ್ದುದಕ್ಕಿಂತ ಹೆಚ್ಚು ಸಾರವನ್ನು ಈ ತರುಣ ಕೇವಲ ಗಂಟೆಗಳ ಕಾಲದಲ್ಲಿ ಬುದ್ಧಿಗತ ಮಾಡಿಕೊಳ್ಳುತ್ತಿದ್ದನಲ್ಲದೆ ಅದನ್ನು ಕುರಿತು ಸಮರ್ಥವಾಗಿ ಚರ್ಚಿಸಲೂ ಸಿದ್ಧನಾಗಿರುತ್ತಿದ್ದ. ಆದ್ದರಿಂದ ರಾಮನ್ ತಮ್ಮ ಪ್ರಾಧ್ಯಾಪಕರ ಪ್ರೀತಿ ವಿಶ್ವಾಸಗಳನ್ನು ಗಳಿಸಿದುದು ತೀರ ಸ್ವಾಭಾವಿಕ. ಇದರಿಂದ ಇವರಿಗೆ ಕೆಲವು

ಪಾಠ ಮತ್ತು ಪ್ರಯೋಗ ತರಗತಿಗಳಿಂದ ವಿನಾಯತಿ ದೊರೆಯಿತು. ಈ ಗಳಿಕೆ ವೇಳೆಯನ್ನು ತಮ್ಮ ವಿಶೇಷಾಸಕ್ತಿಯ ವಿಷಯಗಳ ಅಭ್ಯಾಸಕ್ಕೋಸ್ಕರ ವಿನಿಯೋಗಿಸಿಕೊಂಡರು.

ಭೌತವಿಜ್ಞಾನದ ಕಾಂತಕ್ಷೇತ್ರ ಈ ಹಸಿಕಬ್ಬಿಣವನ್ನು ಪ್ರಬಲವಾಗಿ ಆಕರ್ಷಿಸಿತು. ಇದು ಕಬ್ಬಿಣವಲ್ಲ, ಉಕ್ಕು – ಚಿರಕಾಂತಕ್ಷೇತ್ರ ಪಡೆಯಲು ಅರ್ಹತೆ ಇದ್ದ ಲೋಹ. ರಾಮನ್ ಹೆಸರಿಗೆ ಬಿಎ ವಿದ್ಯಾರ್ಥಿ. ಆದರೆ ಇವರ ಅರಿವು ಬಲು ಎತ್ತರಮಟ್ಟದ್ದು. ಉಚ್ಚ ಮೌಲ್ಯದ ಎಲ್ಲ ಗ್ರಂಥಗಳೂ ಇವರ ಮಿದುಳಿನ ಹಸಿವೆಗೆ ಉಣಿಸು. ಸ್ವಂತ ಪ್ರಯೋಗ ಮಾಡಿ ಹಲವಾರು ತತ್ತ್ವಗಳ ಸತ್ಯಾಸತ್ಯವನ್ನು ಪರೀಕ್ಷಿಸಿ ನೋಡಬೇಕೆಂದು ಇವರಿಗೆ ತೀವ್ರ ದಾಹವಿತ್ತು. ಆದರೆ ಸ್ನಾತಕ ವರ್ಗದ ಭೂರಿಯಲ್ಲಿ ಈ ಸರ್ವಂಕಷತೆಗೆ ಯೋಗ್ಯ ಪುರಸ್ಕಾರ ಲಭಿಸಲಿಲ್ಲ. ಬಿಎ ಪರೀಕ್ಷೆ ಮುಗಿಯಿತು (೧೯೦೪). ಆಗ ಇವರೇರಿದ ಎತ್ತರ ಇತರಾರೂ ಏರಿರದುದು – ಇವರೊಬ್ಬರೇ ಪ್ರಥಮ ದರ್ಜೆ ಪಡೆದವರು, ವಿಶ್ವವಿದ್ಯಾನಿಲಯದ ಚಿನ್ನದ ಪದಕ ಇವರಿಗೇ ಮೀಸಲು. ಇಷ್ಟು ಮಾತ್ರವಲ್ಲ. ಅತ್ಯುತ್ತಮ ಇಂಗ್ಲಿಷ್ ಪ್ರಬಂಧಕ್ಕಾಗಿ ಕಾಲೇಜಿನ ಒಂದು ವಿಶೇಷ ಬಹುಮಾನ ಸಹ ದೊರೆಯಿತು – ಹದಿನಾರು ವರ್ಷದ ಪ್ರತಿಭಾನ್ವಿತ ರಾಮನ್.

ಸ್ನಾತಕೋತ್ತರದಾರಿ ಸ್ಪಷ್ಟವಾಗಿ ಭೌತವಿಜ್ಞಾನದೆಡೆಗೆ ಟಿಸಿಲೊಡೆಯಿತು. ಅಲ್ಲಿಯ ಸೋಪಾನಗಳು ಎರಡು – ಎಂಎ ಪ್ರಥಮ ವರ್ಷ ಮತ್ತು ದ್ವಿತೀಯ ವರ್ಷ. ಪ್ರೆಸಿಡೆನ್ಸಿ ಕಾಲೇಜಿನಲ್ಲಿಯೇ ಓದು ಮುಂದುವರಿಯಿತು. ಭೌತ ಜಗತ್ತಿನ ಒಂದೊಂದು ವಿದ್ಯಮಾನವೂ ಈ ತರುಣನಿಗೆ ಕುತೂಹಲಕಾರಿಯಾದದ್ದು ಮಾತ್ರವಲ್ಲ, ಹೊಸ ಸವಾಲನ್ನೂ ಒಡ್ಡುತ್ತಿತ್ತು. ಯಾವ ನೈಸರ್ಗಿಕ ವಿದ್ಯಮಾನವೇ ಆಗಲಿ, ಅದು ಹಾಗೆ ಇರಬೇಕಾದದ್ದು ಸೃಷ್ಟಿ ನಿಯಮವೆನ್ನುವ ಜಡ ಮನೋಭಾವ ಇವರದಲ್ಲ. ಅದು ನಿಜವೇ ಇರಬಹುದು, ಆದರೆ ಅದು ಬೇರೆ ರೀತಿ ಏಕೆ ಇರಬಾರದು ಎಂಬುದು ಇವರ ಮೂಲ ಪ್ರಶ್ನೆ. ಇಂಥ ಚಿಕಿತ್ಸಕ ದೃಷ್ಟಿಯಿಂದ ನೋಡಿದಾಗ ಮಾತ್ರ ಸೃಷ್ಟಿ ಲಕ್ಷಣದಲ್ಲಿ ಹುದುಕಿರುವ ಗಹನ ಸತ್ಯಗಳು ಆವಿಷ್ಕಾರಗೊಳ್ಳುತ್ತವೆ.

ರಾಮನ್ನರ ಪಾದರಸ ಬುದ್ಧಿ ನೆಲೆ ಅರಸಿ ಅಲೆಯುತ್ತಿದ್ದಾಗ ಯುಕ್ತ ಸನ್ನಿವೇಶ ತಾನಾಗಿಯೇ ಒದಗಿಬಂತು – ಇವರ ಸಹಪಾಠಿಯೊಬ್ಬ ಧ್ವನಿಗೆ ಸಂಬಂಧಿಸಿದ ಒಂದು ಪ್ರಯೋಗ ಮಾಡಿದ. ಫಲಿತಾಂಶಗಳು ಅಸಂಗತವಾಗಿದ್ದುವೆಂದು ಅವನಿಗೆ ಅನಿಸಿತು. ಪ್ರೊಫೆಸರರೊಡನೆ ಸಂದೇಹ ಚರ್ಚಿಸಿದಾಗ ಸಮರ್ಪಕ ಪರಿಹಾರ ದೊರೆಯಲಿಲ್ಲ. ಪ್ರಯೋಗ ಒಡ್ಡಿದ್ದ ಅಡ್ಡಗೋಡೆ ರಾಮನ್ನರ ಕುಶಾಗ್ರಮತಿಗೆ ಸವಾಲಾಯಿತು. ವಿಷಯವನ್ನು ಅವರು ಕೂಲಂಕಷವಾಗಿ ಪ್ರಾರಂಭದಿಂದಲೂ ವಿವೇಚಿಸಿದರು. ಸಮಗ್ರವಾಗಿ ಪರಿಶೀಲಿಸಿದರು – ಈಗ ಅಸಾಂಗತ್ಯಗಳು ಉಳಿದಿರಲಿಲ್ಲ. ಅದೇ ಸಮಸ್ಯೆ, ನೋಡಿದ ದೃಷ್ಟಿ ಬೇರೆ, ಈ ಜಾಣ್ಮೆ ಫಲ ನೀಡಿತ್ತು. ತಾವೇ ಪ್ರಯೋಗವನ್ನು ಮಾಡಿ ಸಾಕಷ್ಟು ವಿವರಗಳನ್ನು ಸಂಗ್ರಹಿಸಿ ಶಿಷ್ಟ ಗ್ರಂಥಗಳ ತೀರ್ಮಾನಗಳೊಡನೆ ಹೋಲಿಸಿ ತಮ್ಮ ನಿಲವಿನ ಯಥಾರ್ಥ್ಯವನ್ನು ದೃಢಪಡಿಸಿಕೊಂಡರು. ಇಂಗ್ಲೆಂಡಿನ ಸುಪ್ರಸಿದ್ಧ ಭೌತವಿಜ್ಞಾನ ವಿದ್ವಾಂಸ ರ್‍ಯಾಲೆ ಅವರೊಡನೆ ರಾಮನ್ ತಮ್ಮ ಈ ಸುಧಾರಣೆಯನ್ನು ಕುರಿತು ಪತ್ರ ವ್ಯವಹಾರ ನಡೆಸಿದರು. ಲಾರ್ಡ್ ರ್‍ಯಾಲೆ ಈ ತರುಣ ವಿಜ್ಞಾನಿಯ ಸಾಹಸವನ್ನು ಮೆಚ್ಚಿ ಪ್ರಶಂಸಿಸಿದರು. ಪ್ರಯೋಗ ಪರಿಣತಮತಿ ರಾಮನ್ನರ ವ್ಯಕ್ತಿತ್ವದ ಲಘು ರೇಖೆಯನ್ನು ಇಲ್ಲಿ ಕಾಣುತ್ತೇವೆ.

ಬೆಳಕಿನ ವಿಚಾರವಾಗಿ ಹೆಚ್ಚು ಹೆಚ್ಚು ಬೆಳಕು ಪಡೆಯಬೇಕು ಎಂದು ಇವರಿಗೆ ಕುತೂಹಲ. ಹಲವಾರು ಪ್ರಯೋಗಗಳನ್ನು ಮಾಡಿ ಲಭ್ಯ ವಿವರಗಳನ್ನು ಕ್ರಮಬದ್ಧವಾಗಿ ಅಳವಡಿಸಿ ವಿವರಣೆಗಳನ್ನೂ ತೀರ್ಮಾನಗಳನ್ನು ಬರೆದು ಪ್ರಬಂಧ ರಚಿಸಿ ಅವನ್ನು ಪರಿಶೀಲನೆಗೋಸ್ಕರ ತಮ್ಮ ಗುರುಗಳಾಗಿದ್ದ ಪ್ರೊ ಜೋನ್ಸರಿಗೆ ಕೊಟ್ಟರು. ಅದರ ಒಂದು ಪ್ರತಿಯನ್ನು ಲಂಡನ್ನಿನ 'ಫಿಲಸಾಫಿಕಲ್ ಮ್ಯಾಗಝೀನ್' ಎಂಬ ವಿಜ್ಞಾನ ಪತ್ರಿಕೆಗೆ ಪ್ರಕಟಣೆಯ ಸಲುವಾಗಿ ಕಳಿಸಿದರು. ಅದು ಸ್ವೀಕೃತವಾದಾಗ ಈ ತರುಣನಿಗೆ ಆದ ಸಂತೋಷ, ದೊರೆತ ಕುಮ್ಮಕ್ಕು ಅಪಾರ. ನವಂಬರ್ ೧೯೦೬ರ ಸಂಚಿಕೆಯಲ್ಲಿ ವಿದ್ಯಾರ್ಥಿ ರಾಮನ್ನರ (ಪ್ರಾಯ ಹದಿನೆಂಟು) ಪ್ರಥಮ ಸಂಶೋಧನ ಪತ್ರ On the obliquity factor in Diffraction ಪ್ರಕಟವಾಯಿತು. ಪ್ರಾಯೋಗಿಕ ಭೌತವಿಜ್ಞಾನದಲ್ಲಿ ಹೊಸ ಜಾಡು ಹಿಡಿದು ನಡೆಯಲು ಇದೊಂದು ಬುನಾದಿ ಕಲ್ಲು. ಇವರ ಮುಂದಿನ ಸಂಶೋಧನ ಪತ್ರ ಅಚ್ಚಾದದ್ದು ಸುಪ್ರಸಿದ್ಧ ಬ್ರಿಟಿಷ್ ವಿಜ್ಞಾನ ಪತ್ರಿಕೆ 'ನೇಚರ್'ನಲ್ಲಿ.

ಇಳಿವಯಸ್ಸಿನಲ್ಲಿ ರಾಮನ್ ರಚಿಸಿದ ಗ್ರಂಥ 'ಫಿಸಿಯಾಲಜಿ ಆಫ್ ವಿಶನ್' (೧೯೬೮), ಇದರ ಪ್ರಥಮ ಅಧ್ಯಾಯದಲ್ಲಿ ಇವರು ಬರೆದಿರುವ ಕೆಲವು ಮಾತುಗಳನ್ನು ಇಲ್ಲಿ ಉಲ್ಲೇಖಿಸಬಹುದು "...ಮೇಲಿನ ಪರಿಚ್ಛೇದದಲ್ಲಿ ನಮೂದಿಸಿರುವ ಯಾವ ಪರಿಕಲ್ಪನೆಗಳನ್ನೂ ಪರಿಸ್ಥಿತಿಯ ವಾಸವಾಂಶಗಳೊಡನೆ ಸಮನ್ವಯಗೊಳಿಸಲು ಬರುವುದಿಲ್ಲವೆಂದು ಈ ಲೇಖನ ಪರಿಶೀಲನೆಗಳಿಂದ ಗೊತ್ತಾಗಿದೆ. ಇವು ದೃಷ್ಟಿಯ ಸ್ವಭಾವವನ್ನು ಕುರಿತು ಒಂದು ಹೊಸ ಚಿತ್ರವನ್ನೂ ನಮ್ಮ ದೃಗನುಭವಗಳಿಗೆ ಹೊಸ ಅರ್ಥಗಳನ್ನೂ ರೂಪಿಸಿವೆ..." 'ನಮ್ಮ ದೃಗನುಭವಗಳಿಗೆ ಹೊಸ ಅರ್ಥರೂಪಣೆ' ಇದು ಪ್ರಾಯೋಗಿಕ ವಿಜ್ಞಾನಿ ರಾಮನ್ನರ ಜೀವನ ಸಂಗೀತದ ಪಲ್ಲವಿ.

ಪ್ರೊ ಜೋನ್ಸರಿಗೆ ರಾಮನ್ ಅಚ್ಚುಮೆಚ್ಚಿನ ಶಿಷ್ಯ. ಎಂಎ ಪರೀಕ್ಷೆಯನ್ನು ಬರೆದೊಡನೆಯೇ (೧೯೦೭), ಫಲಿತಾಂಶ ಬರುವ ಮುನ್ನವೇ, ಇವರನ್ನು ಯೂರೋಪಿಗೆ ಉನ್ನತ ವ್ಯಾಸಂಗದ ಸಲುವಾಗಿ ಕಳಿಸಬೇಕೆಂದು ನಿರ್ಧರಿಸಿದರು. ಉನ್ನತ ಭೌತವಿಜ್ಞಾನದ (ಸಮಗ್ರವಾಗಿ ವಿಜ್ಞಾನದ) ಅಭ್ಯಾಸ ಮತ್ತು ಸಂಶೋಧನೆಗಳಿಗೆ ಅಂದು ಭಾರತದಲ್ಲಿ ಅವಕಾಶವಿರಲಿಲ್ಲ, ಭವಿಷ್ಯವೂ ಇರಲಿಲ್ಲ. ಏನಿದ್ದರೂ ಗ್ರೇಟ್ ಬ್ರಿಟನ್, ಯೂರೋಪ್‌ಗಳೇ ವಿಜ್ಞಾನಿಗಳ ಕಾಶಿ. ಆದ್ದರಿಂದ ಜೋನ್ಸ್ ತಮ್ಮ ಶಿಷ್ಯನ ನಾಳೆಯನ್ನು ಕುರಿತು ತಳೆದ ನಿಲವು ಸಮರ್ಪಕವಾಗಿಯೇ ಇತ್ತು. ಸರಕಾರ ಈ ಶಿಫಾರಸನ್ನು ಅಂಗೀಕರಿಸಿತು. ಆದರೆ ವೈದ್ಯಕೀಯ ಪರೀಕ್ಷೆಯ ಅಡಚಣೆ ದಾಟುವಾಗ ರಾಮನ್ ಸೋಲು ಅನುಭವಿಸಿದರು. ವರದಿಯ ಸಾರಾಂಶ ಹೀಗಿತ್ತು – ರಾಮನ್ ಕೃಶಾಂಗಿ, ದಕ್ಷಿಣ ಭಾರತದ ಬೆಚ್ಚಗಿನ ವಾತಾವರಣದಲ್ಲಿ ವಿಶಿಷ್ಟವಾದ ಆಹಾರ, ಜೀವನ ಕ್ರಮ ಮುಂತಾದವನ್ನು ಬೆಳೆಸಿಕೊಂಡು ಬಂದಿದ್ದ ತರುಣ: ಈತ ಯೂರೋಪಿನ ತೀವ್ರ ವಾತಾವರಣ ಮತ್ತು ಭಿನ್ನ ಪರಿಸರದಲ್ಲಿ ಬದುಕಿ ಉಳಿಯಲಾರ. ಯೂರೋಪ್ ಪ್ರವಾಸ, ಆದ್ದರಿಂದ ಉನ್ನತ ವ್ಯಾಸಂಗ (?) ಎಲ್ಲವೂ ರದ್ದಾದವು.

ಆ ಬ್ರಿಟಿಷ್ ವೈದ್ಯನಿಂದ ತಮಗೆ ಆದರ ಮಹದುಪಕಾರವನ್ನು ರಾಮನ್ ಅಹಮದಾಬಾದಿನಲ್ಲಿ ಇಂಡಿಯನ್ ಅಕಾಡೆಮಿ ಆಫ್ ಸೈನ್ಸಿನ ೧೯೬೮ರ ವಾರ್ಷಿಕಾಧಿವೇಶನದಲ್ಲಿ ಸ್ಮರಿಸುತ್ತ ಅದರಿಂದ ಹೇಗೆ ತಾವು ಭಾರತದಲ್ಲಿಯೇ ಉಳಿದು ಸ್ವಸಾಮರ್ಥ್ಯದಿಂದ ಸಂಶೋಧನೆ ನಡೆಸುವುದು ಸಾಧ್ಯವಾಯಿತೆಂಬುದನ್ನು ವಿನೋದಮಿಶ್ರಿತವಾಗಿ ಹೇಳಿದರು.

೧೯೦೭ರಷ್ಟು ಹಿಂದಿನ ಭಾರತ. ಸ್ವದೇಶೀಯವಾದದ್ದು ಯಾವುದರಲ್ಲೂ ಮೌಲ್ಯವಿಲ್ಲದಿರಲು ಸಾಧ್ಯವಿಲ್ಲ ಎಂಬುದಾಗಿ ಗಣ್ಯ ಜನ ನಂಬುತ್ತಿದ್ದ ಕಾಲ. ಅಂದು ವಿಜ್ಞಾನವನ್ನೇ – ಇದನ್ನು ನೇಟಿವ್ ವಿಜ್ಞಾನ ಎಂದು ವ್ಯಂಗ್ಯ ಮಿಶ್ರಿತವಾಗಿ ಕರೆಯುವುದಿತ್ತು – ವೃತ್ತಿಯಾಗಿ ಆಧರಿಸಬೇಕೆಂದು ಬಯಸಿದ ಧೀಮಂತನಿಗೆ ತೆರೆದ ದಾರಿಗಳೇ ಇರಲಿಲ್ಲ. ಇದ್ದದ್ದು ಬೇರೆ ಒಂದು – ಅಖಿಲ ಭಾರತೀಯ ಸ್ಪರ್ಧಾಪರೀಕ್ಷೆಗೆ ಕುಳಿತು ಉಚ್ಚ ಶ್ರೇಣಿಯಲ್ಲಿ ಉತ್ತೀರ್ಣನಾಗಿ ಸರಕಾರದ ವರಿಷ್ಠಾಧಿಕಾರಿಯಾಗಿ ಅಧಿಕಾರ, ಹಣ, ಸುಖ, ಸಂತೃಪ್ತಿ ಪಡೆಯುವುದು. ಹಣದಿಂದ ಸಕಲ ಇಷ್ಟಾರ್ಥ!

ತಮ್ಮ ಮೊದಲ ಪ್ರಯತ್ನ ವಿಫಲಗೊಂಡ ತರುವಾಯ ಜೋನ್ಸರು ಶಿಷ್ಯನಿಗೆ ತೋರಿಸಿದ್ದು ಈ ಸುಲಭ ದಾರಿಯನ್ನು. ಸ್ಪರ್ಧಾಪರೀಕ್ಷೆಗೆ ಕೂರಲು ಸಹ ಸರಕಾರದ ಪರವಾನಿಗೆ ಬೇಕಾಗಿತ್ತು. ಜೋನ್ಸರ ಪ್ರೇರಣೆಯಿಂದ ಮದ್ರಾಸು ಸರಕಾರ ರಾಮನ್ನರ ಹೆಸರನ್ನು ಸೂಚಿಸಿತು. ಪರೀಕ್ಷೆ ಕೋಲ್ಕಟದಲ್ಲಿ. ಪರೀಕ್ಷೆಯ ವಿಷಯಗಳು ಚರಿತ್ರೆ, ಅರ್ಥಶಾಸ್ತ್ರ, ಸಂಸ್ಕೃತ ಮುಂತಾದವು. ಇದ್ದ ಅವಕಾಶ ಕೆಲವೇ ದಿವಸಗಳು, ಕಲಿತ ಭೌತವಿಜ್ಞಾನ ಮತ್ತು ಕಲಿಯಬೇಕಾಗಿದ್ದ ಮಾನವಿಕ ವಿಷಯಗಳು – ಉಭಯ ಸಾಮಾನ್ಯವಾದದ್ದು ಏನು? ತೋರ್ಕೆಗೆ ಏನೂ ಇಲ್ಲ. ಅಂತರ್ಗತವಾಗಿದ್ದದ್ದು ರಾಮನ್ನರ ನಿಶಿತ ಪ್ರತಿಭೆ; ಅದು ಒದಗಿಸುವ ಕಸೂತಿಯ ಸಂಕೀರ್ಣದಲ್ಲಿ ಎಳೆಗಳನ್ನು ಎಳೆಗಳ ಗೋಜಲಿನಲ್ಲಿ ಕಸೂತಿಯನ್ನೂ ನೋಡುವ ದೃಷ್ಟಿ. ಪರೀಕ್ಷೆ ನಾಳೆ. ಇಂದು ಮದ್ರಾಸಿನಿಂದ ತಂತಿ ಬಂತು – ಎಂಎ ಡಿಗ್ರಿ ಪರೀಕ್ಷೆಯಲ್ಲಿ ಮೊದಲ ದರ್ಜೆ ಮೊದಲ ಸ್ಥಾನ ಗಿಟ್ಟಿಸಿ, ವಿಶ್ವವಿದ್ಯಾಲಯದ ಇತಿಹಾಸದಲ್ಲಿ ಆತನಕ ಯಾರೂ ಗಳಿಸದಿದ್ದಷ್ಟು ಅಂಕಗಳನ್ನು ಪಡೆದು ದಾಖಲೆ ಸ್ಥಾಪಿಸಿದ್ದರು. ಭೌತದೇವಿಯ ಭಂಡಾರದ ಮುದ್ರೆಯನ್ನೊಡೆದಿದ್ದರು ರಾಮನ್, ಇದರಿಂದ ಅವರಿಗೆ ದೊರೆತ ನೂಕುಬಲ ಅಥವ ಕುಮ್ಮಕ್ಕು ಅಪಾರ.

ಫೆಬ್ರುವರಿ ೧೯೦೭ರಲ್ಲಿ ಅವರು ಇಂಡಿಯನ್ ಆಡಿಟ್ಸ್ ಅಂಡ್ ಅಕೌಂಟ್ಸ್ ಸರ್ವಿಸ್ (ಐಎ ಅಂಡ್ ಎಎಸ್) ಪರೀಕ್ಷೆ ಬರೆದರು. ಭಾರತದಲ್ಲಿಯೇ ಇದ್ದುಕೊಂಡು ಬರೆಯಬಹುದಾಗಿದ್ದ ಪರೀಕ್ಷೆ ಇದೊಂದೇ. ಐಸಿಎಸ್, ಅಂದರೆ ಇಂಡಿಯನ್ ಸಿವಿಲ್ ಸರ್ವಿಸ್, ಪರೀಕ್ಷೆ ಬರೆಯಲು ಯೂರೋಪಿಗೆ ಹೋಗಬೇಕಾಗಿತ್ತು. ಪರೀಕ್ಷೆಯ ಫಲಿತಾಂಶ ನಿರೀಕ್ಷೆಯನ್ನು ದೃಢೀಕರಿಸಿತು – ಪ್ರಥಮಸ್ಥಾನ. ಹೆಬ್ಬೆಟ್ಟೆಂದೂ ತೋರುಬೆಟ್ಟಾಗದು.

ಜೂನ್ ೧೯೦೭, ಚಂದ್ರಶೇಖರ ವೆಂಕಟರಾಮನ್ ಭಾರತ ಸರಕಾರದ ಅರ್ಥಶಾಖೆಯ ಉಚ್ಚ ಅಧಿಕಾರಿ – ಅಸಿಸ್ಟೆಂಟ್ ಅಕೌಂಟೆಂಟ್ ಜನರಲ್, ಆಗಿ ನೇಮನಗೊಂಡರು. ಕಾರ್ಯಕ್ಷೇತ್ರ ಕೋಲ್ಕಟ. ಹತ್ತೊಂಬತ್ತರ ಕೌಮಾರ್ಯದಲ್ಲಿ ಲಭಿಸಿದ ಯಶಸ್ಸು, ಪ್ರಾಪ್ತವಾದ ಹೊಣೆಗಾರಿಕೆ, ಏರಿದ ಎತ್ತರ ಅಪೂರ್ವವಾದವು ನಿಜ, ಆದರೆ ಇಲ್ಲಿ ಅವರು ಇಟ್ಟ ಹೆಜ್ಜೆ ಅದ್ವಿತೀಯವಲ್ಲ. ಸಮಾನಪ್ರತಿಭೆಯ ಬೇರೆ ಯಾರೂ ಈ ದಾರಿಯಲ್ಲಿ ಸಾಗಬಹುದಿತ್ತು. ಹುದ್ದೆ ಖಾತ್ರಿಯಾದೊಡನೆಯೇ ರಾಮನ್ ಬಾಳಸಂಗಾತಿಯನ್ನು ಅರಸಿ ಲೋಕಸುಂದರಿ ಎಂಬ ಕನ್ಯೆಯನ್ನು ಸ್ವಂತೇಚ್ಛೆಯಿಂದ ಆಯ್ದು ಮದುವೆ (೬ ಮೇ ೧೯೦೭) ಆದರು. ಇವರ ವಿವಾಹ ಅಂದಿನ ದಿವಸಗಳಲ್ಲಿ ಸ್ವಲ್ಪಮಟ್ಟಿಗೆ ಸಂಪ್ರದಾಯದ ವಿರುದ್ಧವಾಗಿತ್ತು. ಉದಾತ್ತ ಧ್ಯೇಯವಾದಿಗಳು ರಾಮನ್. ಆರ್ಥಿಕ ಅಂತಸ್ತಿಗಿಂತ ಬುದ್ಧಿಶ್ರೀಮಂತಿಕೆಯೇ ಹಿರಿದೆಂದು ಭಾವಿಸಿದ್ದವರು ಲೋಕಸುಂದರಿ. ಇಲ್ಲಿಗೆ ರಾಮನ್ ಜೀವನದ ಒಂದು ಘಟ್ಟ ಮುಗಿಯುತ್ತದೆ.

ವಧೂಪರೀಕ್ಷೆಗೆಂದು ಯುವಕ ರಾಮನ್ ಆಕೆಯ ಮನೆಗೆ ಹೋದರು (೧೯೦೭). ಮನೆಯೊಳಗೆ ಕಾಲಿಡುವ ಮೊದಲೇ ಮೆಲು ಗಾಳಿಯಲ್ಲಿ ತೇಲಿಬಂದ ನಾದ ವೀಣೆಯದು, ಜೊತೆಗೆ ವೀಣಾನಿಂದಿತ ಶಾರೀರದ್ದು – ಲೋಕಸುಂದರಿ ವೀಣೆ ನುಡಿಸುತ್ತ ಹಾಡುತ್ತಿದ್ದರು. 'ರಾಮ ನೀ ಸಮಾನಮೆವರೋ' ಎಂಬ ತ್ಯಾಗರಾಜರ ಕೃತಿಯನ್ನು! ಆಗಲೇ ರಾಮನ್

ಎಮ್ಮವರು ಬೆಸಗೊಂಡರೆ ಶುಭಲಗ್ನವೆನ್ನಿರಯ್ಯಾ
ರಾಶಿಕೂಟ ಋಣಸಂಬಂಧವುಂಟೆಂದು ಹೇಳಿರಯ್ಯಾ
ಚಂದ್ರಬಲ ತಾರಾಬಲ ಉಂಟೆಂದು ಹೇಳಿರಯ್ಯಾ
ನಾಳಿನ ದಿನಕಿಂದಿನ ದಿನ ಲೇಸೆಂದು ಹೇಳಿರಯ್ಯಾ
ಕೂಡಲ ಸಂಗಮ ದೇವನ ಪೂಜಿಸಿದ ಫಲ ನಿಮ್ಮದಯ್ಯಾ!

ಎಂದಿರಬೇಕು. ನೂತನ ದಂಪತಿಗಳು ಕೋಲ್ಕಟದಲ್ಲಿ ಬಿಡಾರ ಹೂಡಿದರು. ಅಲ್ಲಿಯ ಇಗರ್ಜಿಯಲ್ಲಿ ಪ್ರತಿ ಆದಿತ್ಯವಾರ ಸೇರುತ್ತಿದ ಪ್ರಾರ್ಥನಾ ಸಭೆಗೆ ರಾಮನ್ ಹಾಜರಾಗುತ್ತಿದ್ದರು. ಉದ್ದೇಶ: ಪಾಶ್ಚಾತ್ಯ ಸಂಗೀತ ಶ್ರವಣ. ಆದರೆ ಈ ಸೂಕ್ಷ್ಮ ಅರಿಯದ ಇವರ ಕರ್ಮಠ ಬ್ರಾಹ್ಮಣ ಬಾಣಸಿಗ ತಮಿಳುನಾಡಿಗೆ ಪಲಾಯನಗೈದು ರಾಮನ್ ದಂಪತಿಗಳು ಕ್ರಿಶ್ಚಿಯನರಾಗಿ ಮತಾಂತರಗೊಂಡರೆಂಬ ವದಂತಿ ಹಬ್ಬಿಸಿದ್ದಿತ್ತು. ಕೋಣನ ಮುಂದೆ ಕಿನ್ನರಿ ಬಾರಿಸತಕ್ಕದ್ದಲ್ಲ!

ರಾಮನ್ ದಂಪತಿಗಳಿಗೆ ಇಬ್ಬರು ಗಂಡುಮಕ್ಕಳು. ಹಿರಿಮಗ ಚಂದ್ರಶೇಖರನ್ ವಕೀಲರಾಗಿದ್ದಾರೆ. ಅವರ ತಮ್ಮ ರಾಧಾಕೃಷ್ಣನ್ ಆಸ್ಟ್ರೇಲಿಯಾದಲ್ಲಿ ಖಭೌತ ವಿಜ್ಞಾನಿಯಾಗಿದ್ದರು. ತಮ್ಮ ತಂದೆಯವರ ಮರಣಾನಂತರ ಇವರು ರಾಮನ್ ಇನ್ಸ್ಟಿಟ್ಯೂಟಿನ ನಿರ್ದೇಶಕತ್ವ ವಹಿಸಿಕೊಂಡಿದ್ದಾರೆ (೧೯೭೦).

ಜ್ಞಾನಪಿಪಾಸುಗಳು ಅಕ್ಷರಶಃ ಗರಬಡಿದವರಂತೆ ಇರುತ್ತಾರೆ. ಅಧಿಕಾರ ಮತ್ತು ಸಂಪತ್ತು ಒದಗಿಸುವ ಪ್ರತಿಷ್ಠೆ ಅಥವಾ ಸ್ಥಾನಭದ್ರತೆ ಇವರಿಗೆ ನೆಮ್ಮದಿ ನೀಡುವುದಿಲ್ಲ. ಗರಕ್ಕೆ (ಗ್ರಹ) ಶಾಂತಿ ಅದು ಬೇಡುವ ಅಥವಾ ಸೂಚಿಸುವ ದಾರಿಯಲ್ಲಿ ನಡೆಯುವುದರಿಂದ ಮಾತ್ರ ಲಭಿಸೀತಷ್ಟೆ. ರಾಮನ್ನರ ಅಧಿಕಾರ ಜೀವನದಲ್ಲಿ ಅವರ ವಿಜ್ಞಾನದ ತೊರೆ ಒಂದು ಕ್ಷಣ ಬತ್ತಿದಂತೆ ತೋರಿತು. ಆದರೆ ಅದು ನೆಲದಡಿಯಲ್ಲಿ ಹರಿಯುತ್ತಲೇ ಇತ್ತು.

ಒಂದು ಸಂಜೆ ಅವರು ಕಚೇರಿಯಿಂದ ಮನೆಗೆ ಮರಳುತ್ತಿದ್ದಾಗ 'ದಿ ಇಂಡಿಯನ್ ಅಸೋಸಿಯೇಷನ್ ಫಾರ್ ದಿ ಕಲ್ಟಿವೇಷನ್ ಆಫ್ ಸೈನ್ಸ್' ಎಂದು ಅಂಕಿತವಾಗಿದ್ದ ದೊಡ್ಡ ನಾಮಫಲಕ ಅವರ ಗಮನ ಸೆಳೆಯಿತು (೨೧೦ ಬೌಬಝಾರ್ ಸ್ಟ್ರೀಟ್, ಕೋಲ್ಕಟ). ಆ ಸಂಸ್ಥೆಯನ್ನು ಹೊಕ್ಕರು. ಅದರ ಸ್ಥಾಪಕರು ಮಹೇಂದ್ರಲಾಲ್ ಸರ್ಕಾರ್. ಅವರ ಮಗ ಅಮೃತಲಾಲ್ ಸರ್ಕಾರರನ್ನು ಅಂದು ರಾಮನ್ ಭೇಟಿ ಮಾಡಿ, ಕಛೇರಿ ಕೆಲಸ ಇಲ್ಲದ ವೇಳೆ –

ಎಂದರೆ ಕೆಲಸದ ದಿವಸಗಳಲ್ಲಿ ಬೆಳಗ್ಗೆ ಮತ್ತು ಸಾಯಂಕಾಲ, ರಜಾ ದಿವಸಗಳಲ್ಲಿ ಪೂರ್ತಿ – ತಮಗೆ ಅಲ್ಲಿ ವ್ಯಾಸಂಗ ಮತ್ತು ಸಂಶೋಧನೆ ಮುಂದುವರಿಸಲು ಎಡೆಮಾಡಿಕೊಡಬೇಕೆಂದು ಕೋರಿದರು.

ಆ ಸನ್ನಿವೇಶದ ಮೌಲಿಕತೆ ಹೀಗಿತ್ತು: ಮಹಾವಿಜ್ಞಾನಿಗೆ ಒಂದು ಪ್ರಯೋಗಶಾಲೆ ಬೇಕಾಗಿತ್ತು; ಪ್ರಯೋಗಶಾಲೆಗೆ ಒಬ್ಬ ಕರ್ತೃತ್ವಶಾಲಿಯ ಆವಶ್ಯಕತೆಯಿತ್ತು. ರಾಮನ್ನರ ಕೋರಿಕೆ ಸುಲಭವಾಗಿ ಮಂಜೂರಾದದ್ದು ಆಶ್ಚರ್ಯವಲ್ಲ. ಆ ಎರಡು ವರ್ಷಗಳ ಕಾಲ ಬಲುವೇಗದಿಂದ ಉರುಳಿತು. ಕಚೇರಿ ಕೆಲಸ, ವಿಜ್ಞಾನದ ಕೆಲಸ – ಇವೆರಡರ ನಡುವೆ ಆಂದೋಲಿಸುತ್ತಿದ್ದ ರಾಮನ್ ತಮ್ಮ ಅನುಯಾಯಿಗಳ ಮೇಲೆ ಮಾಡಿದ ಪರಿಣಾಮ ಮಹತ್ತರವಾದದ್ದು. ರಾಮನ್ನರ ವೈಯಕ್ತಿಕ ಶಿಸ್ತು ಮತ್ತು ಶ್ರದ್ಧೆ, ಕ್ರಮಬದ್ಧ ಮುನ್ನಡೆ, ಅಚ್ಚುಕಟ್ಟು ಕೆಲಸ, ಹಿಂಗದ ಕುತೂಹಲ – ಇವು ಇತರರಿಗೆ ಆದರ್ಶಪ್ರಾಯವಾದುವು, ಅವರ ಮೆಚ್ಚುಗೆ ಗಳಿಸಿದುವು. ಧ್ವನಿ ಕಂಪನಗಳು ಮತ್ತು ಸಂಗೀತೋಪಕರಣಗಳು ಇವನ್ನು ಕುರಿತು ಅವರು ಸಂಶೋಧನೆ ಮಾಡುತ್ತಿದ್ದರು. ಇಷ್ಟರಲ್ಲಿಯೇ (೧೯೦೯) ಅವರನ್ನು ಕೇಂದ್ರ ಸರಕಾರ ಅಸಿಸ್ಟೆಂಟ್ ಅಕೌಂಟೆಂಟ್–ಜನರಲ್ ರಂಗೂನಿಗೆ ವರ್ಗಾಯಿಸಿತು. ವಿಜ್ಞಾನದ ಹೃದಯವನ್ನು ಕೊಲ್ಕಟದಲ್ಲಿಯೇ ಬಿಟ್ಟು ರಂಗೂನಿಗೆ ತೆರಳಿದರು.

ರಂಗೂನಿನಲ್ಲಿ ಅವರು ಅಧಿಕಾರದಲ್ಲಿದ್ದ ಅವಧಿಯಲ್ಲಿ ನಡೆದ ಒಂದು ಘಟನೆ ಅವರ ವ್ಯಕ್ತಿತ್ವದ ಒಂದು ಮುಖವನ್ನು ಚೆನ್ನಾಗಿ ಎತ್ತಿತೋರಿಸುತ್ತದೆ. ಅವರ ಮೇಲಧಿಕಾರಿ ಅಕೌಂಟೆಂಟ್–ಜನರಲ್ ಆಗಿದ್ದಾತ ಆಳುವ ಆಂಗ್ಲ ಪ್ರಭುಗಳ ಸಂತಾನದವ, ಗರ್ವ ಅಹಂಕಾರಗಳ ಮುದ್ದೆ. ಅವನ ಮುಸುಡಿನಲ್ಲಿ ನೇಟಿವುಗಳನ್ನು ಕಂಡರೆ ತಿರಸ್ಕಾರ ಅರಿಯುತ್ತಿತ್ತು. ಆತನ ಒಂದು ಹುಕುಮನ್ನು ರಾಮನ್ ಟೀಕಿಸಿ ಷರಾ ಬರೆದಿದ್ದರು. ಇದರಿಂದ ರೌದ್ರಾವತಾರ ತಾಳಿದ ಪ್ರಭು ರಾಮನ್ನರ ಕೋಣೆಗೆ ದಡಬಡಾಯಿಸಿ ಬಂದು ಆ ಪತ್ರವನ್ನು ಅವರ ಮೇಜಿನ ಮೇಲೆ ಕುಕ್ಕಿ, ಅಲ್ಲಿದ್ದ ಕೆಂಪುಶಾಯಿಯ ಕುಪ್ಪಿ ಹೆಕ್ಕಿ, "ಮಿಸ್ಟರ್ ರಾಮನ್! 'ಈ ಕುಪ್ಪಿಯಲ್ಲಿ ಕಪ್ಪು ಶಾಯಿ ಇದೆ' ಎಂದು ನಾನು ಹೇಳಿದರೆ, 'ಅದು ಕಪ್ಪುಶಾಯಿ ಖಂಡಿತವಾಗಿಯೂ ಖರೆ ಸಾರ್' ಎಂದು ಹೇಳಬೇಕಾದದ್ದು ನಿಮ್ಮ ಕರ್ತವ್ಯ, ತಿಳಿಯಿತೇ?" ಎಂದು ಜರೆದು ಮಾತಾಡಿದ.
ಅಭಿಮಾನಧನ ರಾಮನ್ ಸೆಟೆದೆದ್ದು ಮಾರಸ್ತ್ರ ಎಸೆದರು, "ನೀವು ಹಾಗೆ ಹೇಳಿದ್ದಾದರೆ 'ನೀವು ಕುರುಡರು ಅಥವಾ ಹುಚ್ಚರು ಅಥವಾ ಎರಡೂ' ಎಂದು ಹೇಳಬೇಕಾದದ್ದು ನನ್ನ ಕರ್ತವ್ಯ."

ರಂಗೂನಿನಲ್ಲಿ ರಾಮನ್ ಹೆಚ್ಚು ಕಾಲ ಇರಲಿಲ್ಲ. ೧೯೧೦ರ ಮಾರ್ಚ್‌ನಲ್ಲಿ ಅವರ ತಂದೆ ತೀರಿಕೊಂಡರು. ಆರು ತಿಂಗಳ ರಜೆಯಲ್ಲಿ ಮದ್ರಾಸಿಗೆ ಮರಳಿದರು. ತಮ್ಮ ತಂದೆಯವರ ಉತ್ತರಕ್ರಿಯೆ ಮುಗಿದ ಅನಂತರ ಉಳಿದ ದಿವಸಗಳನ್ನು ಮದ್ರಾಸು ವಿಶ್ವವಿದ್ಯಾಲಯದ ಪ್ರಯೋಗಶಾಲೆಯಲ್ಲಿ ಕಳೆದರು. ಈ ಐದಾರು ತಿಂಗಳ ಅವಧಿ ಅವರಿಗೆ ತಮ್ಮ ಅನ್ವೇಷಣೆಯನ್ನು ಮುಂದುವರಿಸಲು ಬಹಳ ಉಪಯುಕ್ತವಾಯಿತು. ರಜೆ ಮುಗಿದ ತರುವಾಯ ಅವರು ರಂಗೂನಿಗೆ ಮರಳಬೇಕಾಗಲಿಲ್ಲ. ಈಗ ಅವರು ನಾಗಪುರದ ಕಚೇರಿಯ ಮುಖ್ಯಸ್ಥರು, ಡೆಪ್ಯೂಟಿ ಅಕೌಂಟೆಂಟ್–ಜನರಲ್ ದರ್ಜೆ (೧೯೧೦ ಪ್ರಾಯ ೨೨).

ಅಂದು ಬಿಳಿಯರ ಉಕ್ಕಿನ ಜಾಲ ತೀರ ಕೆಳಮಟ್ಟದ ಅಧಿಕಾರಿಗಳವರೆಗೂ ಸಾಂದ್ರವಾಗಿ ಹರಡಿತ್ತು. ಅಖಿಲ ಭಾರತೀಯ ಸ್ಪರ್ಧಾಪರೀಕ್ಷೆಯಲ್ಲಿ ಜಯಶೀಲರಾಗಿದ್ದ ಬೆರಳೆಣಿಕೆಯ 'ನೇಟಿವ್'ಗಳಿಗೆ ಮಾತ್ರ ಉನ್ನತ ಅಧಿಕಾರಿಗಳಾಗಲು ಸಾಧ್ಯವಿತ್ತು. ಇಂಥವರನ್ನು ಮೂರು ವಿಧದ ಕಿರುಕುಳಗಳು ಬಾಧಿಸುತ್ತಿದ್ದುವು – ವೈಸ್‌ರಾಯ್ ಮುಂತಾದ ವರಿಷ್ಠ ಅಧಿಕಾರಿಗಳ ದೃಷ್ಟಿಯಲ್ಲಿ ನಂಬಿಕೆಗೆ ಅರ್ಹತೆ ಪಡೆದಿರದ ಆದರೆ ತಾಳಿಕೊಳ್ಳಬೇಕಾದ ತಾಬೆದಾರರಿವರು; ಕೈಕೆಳಗಿನ ಬಿಳಿ ನೌಕರರ ವರ್ಣಮತ್ಸರದ ಫಲವಾಗಿ ಅವರ ವಿಶ್ವಾಸ ಸಹಕಾರ ಗಳಿಸದ ಉನ್ನತ ಅಧಿಕಾರಿಗಳಿವರು; ಬಾರತೀಯರ ದೃಷ್ಟಿಯಲ್ಲಿ ತ್ರಿಶಂಕುಗಳಿವರು.

ನಾಗಪುರಕ್ಕೆ ರಾಮನ್ ಬಂದಾಗ ಈ 'ಹುಡುಗ'ನನ್ನು ಬಿಳಿಯ ತಾಬೆದಾರರು ಒಪ್ಪಲಿಲ್ಲ. ಅವರ ದರ್ಪ ದಬ್ಬಾಳಿಕೆ ವಿಷಮ ಸ್ಥಿತಿಯೈದಿದ್ದುವು. ಮಾನವ ಗತಿವಿಜ್ಞಾನದ ಈ ನೂತನ ಪ್ರಯೋಗಶಾಲೆಯಲ್ಲಿ ರಾಮನ್ ನಡೆಸಿದ ಪ್ರಯೋಗಗಳೂ ಪ್ರಯೋಗ ವಿಧಾನಗಳೂ ಬೇರೆಯೇ. ಪಟ್ಟಭದ್ರ ಹಕ್ಕುಗಳಿದ್ದು ಅವುಗಳ ಒತ್ತುಗಂಬಗಳಿಂದಲೇ ತಮ್ಮ ಸ್ಥಾನಗಳ ನೆಲೆ ಕಾಪಾಡಿಕೊಂಡು ಬಂದಿದ್ದ ಹಲವಾರು ಅಧಿಕಾರಿಗಳಿಗೆ ರಾಮನ್ನರ ಋಜುಮಾರ್ಗ ಸಹಿಸಲಾಗಲಿಲ್ಲ. ರಾಮನ್ ಅನನುಭವಿ, ತರುಣ, ನೇಟಿವ್ ಅಧಿಕಾರಿ ಎಂದು ಮುಂತಾಗಿ ಅವಹೇಳನೆ ಮಾಡುವ ದೂರು

ಕಾಗದಗಳನ್ನು ಕೈಕೆಳಗಿನ ಆಂಗ್ಲ ಮತ್ತು ಇತರ ಅಧಿಕಾರಿಗಳು ವರಿಷ್ಠಾಧಿಕಾರಿಯಾದ ಅಕೌಂಟೆಂಟ್ ಜನರಲ್‌ರಿಗೆ ಕಳಿಸಿದರು. ಅವರು ನ್ಯಾಯಪರರಾಗಿದ್ದುದೊಂದು ಸುದೈವ. ಪರಿಸ್ಥಿತಿಯನ್ನು ಸರಿಯಾಗಿ ವಿಮರ್ಶಿಸಿ ತಿಳಿದುಕೊಂಡು ಅವರು ರಾಮನ್ನರ ನ್ಯಾಯನಿಷ್ಠುರತೆ, ದಕ್ಷತೆ, ದಿಟ್ಟತನಗಳನ್ನು ಪ್ರಶಂಸಿಸಿ ಯುಕ್ತ ಆದೇಶ ಹೊರಡಿಸಿದರು. ಕಚೇರಿ ಕೆಲಸ ಸುಸೂತ್ರವಾಯಿತು. ನಾಗಪುರದಿಂದ ಕೊಲ್ಕಟಕ್ಕೆ ನವಂಬರ್ ೧೯೧೧ರಲ್ಲಿ ವರ್ಗಪಡೆದು ಆ ಆತ್ಮೀಯ ಮತ್ತು ಪ್ರಿಯ ನಗರವನ್ನು ರಾಮನ್ ಪುನಃ ಪ್ರವೇಶಿಸಿದರು. ಹೀಗೆ ಹೃದಯ ಮತ್ತು ದೇಹ ಮತ್ತೆ ಒಂದುಗೂಡಿದವು.

ಆಗ ಕೊಲ್ಕಟ ವಿಶ್ವವಿದ್ಯಾಲಯದ ಕುಲಪತಿ ಆಗಿದ್ದವರು ಸುಪ್ರಸಿದ್ಧ ಆಡಳಿತಗಾರ ವಿದ್ಯಾಕಾರಣಿ ಸರ್ ಆಶುತೋಷ ಮುಖರ್ಜಿಯವರು. ಈ ದೇಶದ ಪ್ರಗತಿ ವೈಜ್ಞಾನಿಕ ಮನೋಧರ್ಮದ ಬೆಳೆವಣಿಗೆಯಿಂದ ಮಾತ್ರ ಸಾಧ್ಯ ಎಂಬುದನ್ನು ಚೆನ್ನಾಗಿ ಮನಗಂಡಿದ್ದ ಅವರು ೧೯೧೪ರಲ್ಲಿ ವಿಶ್ವವಿದ್ಯಾಲಯದ ವಿಜ್ಞಾನ ಕಾಲೇಜನ್ನು ಪ್ರಾರಂಭಿಸಿದರು. ಉದಾರಿಗಳೂ ಶ್ರೀಮಂತರೂ ಆದ ಸರ್ ತಾರಕಾನಾಥ ಪಲಿತರೂ ಡಾ ರಾಸ್ ಬಿಹಾರಿ ಘೋಷರೂ ಈ ಕಾಲೇಜಿಗೆ ಮುಕ್ತಕರಗಳಿಂದ ಧನಸಹಾಯ ಮಾಡಿದ್ದರು. ಪಲಿತರ ಗೌರವಾರ್ಥ ಕೊಲ್ಕಟ ವಿಶ್ವವಿದ್ಯಾಲಯದಲ್ಲಿ ಅವರ ಹೆಸರಿನಲ್ಲಿ ಭೌತವಿಜ್ಞಾನದ ಒಂದು ಪೀಠವನ್ನು (chair – ಪ್ರಾಧ್ಯಾಪಕತ್ವ) ಪ್ರಾರಂಭಿಸಲಾಗಿತ್ತು. ಅಂದರೆ, ವಿಜ್ಞಾನದ ಅಭಿವೃದ್ಧಿಗೋಸ್ಕರ ಹಣ ಒದಗಿ ಬಂತು; ಹುದ್ದೆ ಏರ್ಪಟ್ಟಿತು. ಆದರೆ ಸತ್ತ್ವನೀಡಬಲ್ಲ ಸಮರ್ಥ ಎಲ್ಲಿದ್ದಾನೆ?

ಆಶುತೋಷ ಬಾಬುಗಳು ಸಂಸ್ಥೆಗಳ ಸ್ಥಾಪನಾಚಾರ್ಯರು, ಕನಸುಗಾರರು. ಗುಣ ಎಲ್ಲಿದ್ದರೂ ಅದನ್ನು ಅರಸಿ ಹೋಗಿ ತಮ್ಮ ಸಂಸ್ಥೆಗಳಿಗೆ ಆಹ್ವಾನಿಸಿ ಕರೆದು ತರುವ ಆಚಾರ್ಯಪುರುಷರು. ಅವರ ಅರ್ಜುನಲಕ್ಷ್ಯ ರಾಮನ್ನರ ಮೇಲೆ ಬಿತ್ತು. ಈ ಹಿಂದೆಯೇ ಇವರ ವಿಜ್ಞಾನದಾಹ, ಪ್ರಯೋಗಶೀಲತೆ ಮತ್ತು ಅಸಾಧಾರಣ ಚೈತನ್ಯಗಳನ್ನು ತಿಳಿಯುವ ಯೋಗ ಆಶುತೋಷರಿಗೆ ಒದಗಿತ್ತು. ಪಲಿತ್ ಪೀಠದ ಆಹ್ವಾನ ಬಂದಾಗ (೧೯೧೭) ರಾಮನ್ ತಮ್ಮ ಜೀವನ ಪಥದ ಇನ್ನೊಂದು ಕೈಗಂಬದ ಬಳಿ ನಿಂತಿದ್ದರು. ಅದರಲ್ಲಿದ್ದುದು ಎರಡು ತೋರುಗೈಗಳು. ಸ್ಪಷ್ಟ ಭವಿಷ್ಯವಿರುವ ಅಧಿಕಾರಮಾರ್ಗವನ್ನು ಒಂದು ತೋರಿಸುತ್ತಿತ್ತು. ಅದರಲ್ಲೇ ಮುಂದುವರಿದುದಾದರೆ ಭಾರತದ ಅಕೌಂಟೆಂಟ್–ಜನರಲ್ ಆಗಿ, ಎಂದರೆ ವರಿಷ್ಠ ಅಧಿಕಾರಸ್ಥಾನವನ್ನೇರಿ ರಾರಾಜಿಸಬಹುದು; ತೋರ ನಿವೃತ್ತಿವೇತನ ಪಡೆದು ನಿಶ್ಚಿಂತವಾಗಿ ಜೀವನ ಸಂಧ್ಯೆಯನ್ನು ಕಳೆಯಬಹುದು. ಇನ್ನೊಂದು ತೋರಿಸುತ್ತಿದ್ದುದು ಅಸ್ಪಷ್ಟ ಭವಿಷ್ಯದ ವಿಜ್ಞಾನ ಮಾರ್ಗವನ್ನು; ಇದರಲ್ಲಿ 'ಅಧಿಕಾರ' ಇಲ್ಲ; ದೊರೆಯುವ ಆರ್ಥಿಕ ಸಂಭಾವನೆ ಕಡಿಮೆ; ತಿರುಗಾಸಿನಿಂದ ಮುಂದೆ ಏನಿದೆಯೋ ಗೊತ್ತಿಲ್ಲ. ವಿಜ್ಞಾನ ಅವರ ಪ್ರಥಮ ಪ್ರೇಮ. ಅದರ ಪೋಷಣೆಯೊಂದೇ ಅವರಿಗೆ ನೆಮ್ಮದಿ ನೀಡಬಲ್ಲ ವೃತ್ತಿ.

ಪಲಿತ್ ಪೀಠವನ್ನು ರಾಮನ್ ಸ್ವೀಕರಿಸಿದಾಗ ಆಶುತೋಷ ಬಾಬುಗಳು ಆಡಿದ ಮಾತು ಗಮನಾರ್ಹವಾಗಿದೆ. "ಸರ್ ತಾರಾನಾಥರಿಂದ ದತ್ತಿಯಾಗಿರುವ ಭೌತವಿಜ್ಞಾನದ ಪೀಠ ಅಲಂಕರಿಸಲು ಶ್ರೀ ಚಂದ್ರಶೇಖರ ವೆಂಕಟರಾಮನ್ ಬಂದಿರುವುದು ನಮ್ಮ ಅದೃಷ್ಟ. ಅತ್ಯಂತ ಕಠಿಣ ಸನ್ನಿವೇಶಗಳಲ್ಲಿಯೂ ಬಿಡುವಿರದ ಕೆಲಸದ ಮಧ್ಯೆಯೂ ಈ ಮಹನೀಯರು ದುಡಿದು ಪ್ರಸಿದ್ಧಿಸಿರುವ ಸಂಶೋಧನ ಪತ್ರಗಳು ಯೂರೋಪಿನಲ್ಲೆಲ್ಲ ಇವರಿಗೆ ಖ್ಯಾತಿ ತಂದಿವೆ. ಆರ್ಥಿಕವಾಗಿ ಲಾಭದಾಯವಲ್ಲದ ಈ ಹುದ್ದೆಯನ್ನು ಸ್ವೀಕರಿಸುವಲ್ಲಿ ಶ್ರೀ ರಾಮನ್ನರು ಪ್ರದರ್ಶಿಸಿರುವ ತ್ಯಾಗಮನೋಧರ್ಮ ಮತ್ತು ಸಾಹಸ ಪ್ರವೃತ್ತಿ ಅಭಿನಂದನಾರ್ಹ. ವಿದ್ಯಾಮಂದಿರದಲ್ಲಿ ಸತ್ಯಾನ್ವೇಷಣೆ ಮಾಡಲು ಬರುವ ವಿಜ್ಞಾನಿಗಳಿಗೆ ಎಂದೂ ಕೊರತೆ ಬರಲಾರದು ಎಂದು ಈ ಒಂದು ನಿದರ್ಶನ ಧೈರ್ಯ ನೀಡುತ್ತದೆ."

ಸಮರ್ಥ ವಿಜ್ಞಾನಿಗಳು ದಕ್ಷ ಆಡಳಿತಗಾರರಾಗಿವುದು ಸಾಧ್ಯವೇ ಎಂಬುದೊಂದು ಬೌದ್ಧಿಕ ಪ್ರಶ್ನೆ. ವಿಜ್ಞಾನವೆಂದರೆ ನಿಸರ್ಗದೊಡನೆ ವ್ಯವಹಾರ. ಇಲ್ಲಿ ಗೊತ್ತಿರುವ ಅಥವಾ ಯುಕ್ತ ವಿಧಾನಗಳಿಂದ ಗೊತ್ತುಮಾಡಬಹುದಾದ, ವಿಧಿನಿಯಮಗಳೊಡನೆ ಒಡನಾಟ. ಆಡಳಿತೆಯಾದರೋ ವ್ಯಕ್ತಿಗಳೊಡನೆ ವ್ಯವಹಾರ; ಇಲ್ಲಿ ಒಂದೊಂದು ಘಟನೆಯೂ ಅತಿ ಸಂಕೀರ್ಣ; ನಿಷ್ಕೃಷ್ಟವಾಗಿ ಅದರ ಪೂರ್ವೋತ್ತರಗಳನ್ನು ಅರಿಯುವಂತಿಲ್ಲ. ರಾಮನ್ನರ ಉದಾಹರಣೆ ಮೇಲಿನ ಪ್ರಶ್ನೆಗೆ ಸಾಧ್ಯವಿದೆ ಎಂಬ ಉತ್ತರ ನೀಡುವುದು. ಜೂನ್ ೧೯೦೭ರಿಂದ ೧೯೧೭ರ ತನಕ ಭಾರತೀಯ ಅರ್ಥಖಾತೆಯ ಅಧಿಕಾರಿಗಳಾಗಿದ್ದ ಅವರು ಸಾಧಿಸಿದ ಹಿರಿಮೆಯನ್ನು ಲಕ್ಷಿಸಿದ ಭಾರತ ಸರಕಾರದ ವಿತ್ತ ಸದಸ್ಯ ಹೃತ್ಪೂರ್ವಕ ಧನ್ಯವಾದಗಳನ್ನು ರಾಮನ್ನರಿಗೆ ಅರ್ಪಿಸಿದ್ದು ಇತ್ತು. ಹಣ ಚಲಾವಣೆ, ಉಳಿತಾಯ ಖಾತೆ, ಜೀವವಿಮೆ, ಸಾರ್ವಜನಿಕ ಹಣಕಾಸಿನ ವ್ಯವಹಾರ, ಸರ್ಕಾರದ ಖಾತೆಗಳ ಲೆಕ್ಕಪತ್ರಗಳ ತಪಾಸಣೆ ಮತ್ತು ಪರಿಶೋಧನೆ – ಇವೇ

ವಿವಿಧ ರಂಗಗಳಲ್ಲಿ ರಾಮನ್ ಮುದ್ರೆ (ರಾಮನ್ ಪರಿಣಾಮ?) ಸ್ಪಷ್ಟವಾಗಿ ಬಿದ್ದಿತ್ತು. ಏಕಕಾಲದಲ್ಲಿ ಉಭಯ ಕ್ಷೇತ್ರಗಳಲ್ಲಿಯೂ ಅದ್ವಿತಿಯರಾಗಿ ದುಡಿದ ಸವ್ಯಸಾಚಿಗಳಿವರು.

ಪಲಿತ್ ಪೀಠಸ್ಥರಾದ ರಾಮನ್ನರ ದುಡಿಮೆ ಪುನಃ ಎರಡು ಕ್ಷೇತ್ರಗಳಲ್ಲಿ ಮುಂದುವರಿಯಿತು – ಕೊಲ್ಕಟ ವಿಶ್ವದ್ಯಾಲಯದಲ್ಲಿ ಹಾಗೂ ಇಂಡಿಯನ್ ಅಸೋಸಿಯೇಶನ್ನಿನಲ್ಲಿ. ಎರಡನೆಯದರ ಪ್ರಯೋಗಮಂದಿರ ತಾನೇ ಅವರ ಆಡುಂಬೊಲ! ೧೯೧೯ರಲ್ಲಿ ಈ ಸಂಸ್ಥೆಯ ಕಾರ್ಯದರ್ಶಿ ಅಮೃತಲಾಲ್ ಸರ್ಕಾರರು ಗತಿಸಿದಾಗ ಆ ಸ್ಥಾನಕ್ಕೆ ರಾಮನ್ನರೇ ಚುನಾಯಿತರಾದರು. ಭಾರತೀಯ ವಿಜ್ಞಾನ ಯೂರೋಪಿಯನ್ ವಿಜ್ಞಾನದೊಡನೆ ಭುಜಕೊಟ್ಟು ನೆಟ್ಟಗೆ ನಿಲ್ಲಬೇಕಾದರೆ ಭಾರತೀಯತ್ವವೊಂದೇ ಸಾಲದು; ಅತ್ಯಾಧುನಿಕ ಪ್ರಯೋಗ ಮಂದಿರ ಕೂಡ ಬೇಕೇಬೇಕು ಎಂದು ಅವರಿಗೆ ಮನವರಿಕೆಯಾಯಿತು. ಇದನ್ನು ಕಾರ್ಯಗತಗೊಳಿಸಲು ಹಣ ಬೇಕು, ದುಡಿಯುವ ಜನ ಬೇಕು. ಸಮರ್ಥ ವ್ಯಕ್ತಿಗಳ ಆಯ್ಕೆ, ಹಣದ ಸದ್ವಿನಿಯೋಗ ಹಾಗೂ ದತ್ತಿ ದಾನಗಳ ಸಂಗ್ರಹ – ಹೀಗೆ ಮೂರು ಮುಖವಾಗಿ ರಾಮನ್ನರ ಪ್ರತಿಭೆ ಹರಿದು ಪ್ರಪಂಚದ ವಿಜ್ಞಾನಪಟದಲ್ಲಿ ಕೊಲ್ಕಟಕ್ಕೆ ಒಂದು ಸ್ಥಾನ ದೊರೆಯುವಂತೆ ಮಾಡಿತು. ಆದರೆ ಅಂತಿಮವಾಗಿ, ಪ್ರಯೋಗ ಮಂದಿರವಲ್ಲ – ಅದೊಂದು ಸಾಧನ ಮಾತ್ರ – ಅದರಿಂದ ಪ್ರಕಟವಾಗುವ ಫಲಿತಾಂಶವಷ್ಟೆ ಯೋಗ್ಯತೆಯ ಸೂಚ್ಯಂಕ? ಈ ದಿಶೆಯಲ್ಲಿ ರಾಮನ್ ಮತ್ತು ಅವರ ಅನುಯಾಯಿಗಳು ಬರೆದು ಪ್ರಕಟಿಸಿದ ಅಸಂಖ್ಯ ಸಂಶೋಧನ ಪ್ರಬಂಧಗಳು ಅಂತಾರಾಷ್ಟ್ರೀಯ ಖ್ಯಾತಿಯನ್ನು ಈ ಆಶ್ರಮಕ್ಕೆ ತಂದುವು. ಆದರೆ ಇದರ ಆಚಾರ್ಯಪುರುಷ ರಾಮನ್ ಇನ್ನೂ 'ನೇಟಿವ್' ವಿಜ್ಞಾನಿಯೇ! ಯೂರೋಪಿನ ಗಂಗೆಯಲ್ಲಿ ಮಿಂದು ಪುನೀತರಾಗಿ ಮರಳಿಬಂದ ಆಧುನಿಕ ವಿಜ್ಞಾನಿ ಅಲ್ಲ.

ಸಮುದ್ರೋಲ್ಲಂಘನ!
ಅಧ್ಯಾಯ ಅರವತ್ತ ಎರಡು

ಆಶುತೋಷ ಬಾಬುಗಳ ಪ್ರೀತಿಯ ಒತ್ತಾಯ ಅನಿರಾಕರಣೀಯವಾಯಿತು. ಯೂರೋಪ್ ಪ್ರವಾಸವನ್ನು ರಾಮನ್ ಒಪ್ಪಿಕೊಂಡು ೧೯೧೨ರ ಬೇಸಗೆಯಲ್ಲಿ ಗ್ರೇಟ್ ಬ್ರಿಟನ್ನಿಗೆ ಹೋದರು. ಆಕ್ಸ್‌ಫರ್ಡಿನಲ್ಲಿ ನಡೆದ ಬ್ರಿಟಿಷ್ ಸಾಮ್ರಾಜ್ಯದ ವಿಶ್ವವಿದ್ಯಾಲಯಗಳ ಕಾಂಗ್ರೆಸಿನಲ್ಲಿ ಇವರೊಬ್ಬ ಪ್ರತಿನಿಧಿ. ಅಂದಿನ ಭೌತವಿಜ್ಞಾನ ಆಕಾಶದಲ್ಲಿ ಮಹಾ ನಕ್ಷತ್ರಗಳೆಂದು ಪ್ರಪಂಚ ವಿಖ್ಯಾತರಾಗಿದ್ದ ಸರ್ ಜೆ. ಜೆ ತಾಮ್ಸನ್ (೧೮೫೬–೧೯೪೦, ಭೌತವಿಜ್ಞಾನ ನೊಬೆಲ್ ಪ್ರಶಸ್ತಿ ಪುರಸ್ಕೃತ ೧೯೦೬) ಇವರ ಸ್ನೇಹಲಾಭ ರಾಮನ್ನರಿಗೆ ಒದಗಿದ್ದೊಂದು ಅಪೂರ್ವ ಅನುಭವ. ಲಂಡನ್ನಿಗೆ ಸಾಮಾನ್ಯವಾಗಿ ಮೊದಲ ಸಾರಿ ಹೋದವರು ಅಲ್ಲಿಯ ವಿವಿಧ ಇತಿಹಾಸ ಪ್ರಸಿದ್ಧ ಸ್ಮಾರಕಗಳನ್ನೂ ಸ್ಥಳಗಳನ್ನೂ ನೋಡುವುದರಲ್ಲಿ ಸಾಕಷ್ಟು ಕಾಲ ವಿನಿಯೋಗಿಸುವುದು ವಾಡಿಕೆ. ಆದರೆ ಇವಾವುವೂ ರಾಮನ್ನರಿಗೆ ಬೇಕಾಗಲಿಲ್ಲ. ಅವರ ಆಸಕ್ತಿಯನ್ನು ತೀವ್ರವಾಗಿ ಪ್ರೇರಿಸಿದ್ದು ಸೇಂಟ್ ಪಾಲ್ ಇಗರ್ಜಿ ಗೋಪುರದೊಳಗಿನ ಪಿಸುಗುಟ್ಟುವ ಗ್ಯಾಲರಿ ಪರಿಣಾಮ. ಧ್ವನಿ ವಿಜ್ಞಾನದ ಈ ಹೊಸ ಸವಾಲಿನ ಪರಿಹಾರದಲ್ಲಿಯೇ ಅವರು ವೇಳೆ ಸದ್ವಿನಿಯೋಗಿಸಿದರು.

ವಿದೇಶ ಪ್ರಯಾಣ ರಾಮನ್ನರ ಜೀವನದಲ್ಲಿ ಒಂದು ತಿರುಗುಬಿಂದು. ಸಾಗರಯಾನ ಕಾಲದಲ್ಲಿ ಪ್ರಶಾಂತ ಮೆಡಿಟರೇನಿಯನ್ ಸಮುದ್ರದ ನೀಲ ವಿಸ್ತಾರದ ಸೌಂದರ್ಯ ಅವರ ಲಕ್ಷ್ಯವನ್ನು ಸೆರೆಹಿಡಿಯಿತು. ಅದರ ವೈಜ್ಞಾನಿಕ ಕಾರಣದ ಶೋಧನೆ ಅವರ ಗೀಳಾಯಿತು. ವಿವಿಧ ದ್ರವ್ಯಮಾಧ್ಯಮಗಳಲ್ಲಿ ಬೆಳಕಿನ ಚದರಿಕೆ ಹೇಗಾಗುತ್ತದೆ ಎಂಬುದರ ಕ್ರಮಬದ್ಧ ಅನ್ವೇಷಣೆಯನ್ನು ಅಂದು ಪ್ರಾರಂಭಿಸಿದರು. ಅವರ ನೊಬೆಲ್ ಭಾಷಣದ (ಸ್ಟಾಕ್‌ಹೋಮ್, ೧೧ ಡಿಸೆಂಬರ್ ೧೯೩೦) ಪೀಠಿಕಾ ಪರಿಚ್ಛೇದದ ಒಂದೆರಡು ಮಾತುಗಳನ್ನು ಇಲ್ಲಿ ಉದ್ಧರಿಸಬಹುದು, "ಯಾವುದೇ ಒಂದು ನೈಸರ್ಗಿಕ ವಿದ್ಯಮಾನದ ಅಧ್ಯಯನ ಜ್ಞಾನದ ಹೊಸತೊಂದು ಶಾಖೆಯ ಪರ್ವಬಿಂದು ಆಗುವುದನ್ನು ವಿಜ್ಞಾನದ ಚರಿತ್ರೆಯಲ್ಲಿ ಅನೇಕಬಾರಿ ನೋಡುತ್ತೇವೆ – ೧೯೨೧ರ ಬೇಸಗೆಯಲ್ಲಿ ನಾನುಯೂರೋಪಿಗೆ ಸಾಗರ ಯಾನ ಮಾಡುತ್ತಿದ್ದಾಗ ಮೆಡಿಟರೇನಿಯನ್ ಸಮುದ್ರದ ಅದ್ಭುತ ನೀಲವರ್ಣವೈವಿಧ್ಯವನ್ನು ವೀಕ್ಷಿಸುವ ಸುಯೋಗ ಲಭಿಸಿತು. ಸೂರ್ಯನ ಬೆಳಕನ್ನು ನೀರಿನ ಅಣುಗಳು ಚದರಿಸುವುದರಿಂದ ಇದು ತಲೆದೋರುವುದು ಅಸಂಭವನೀಯವಲ್ಲ ಎಂದು ನನಗೆ ಹೊಳೆಯಿತು. ಈ ವಿವರಣೆಯನ್ನು ಪರೀಕ್ಷಿಸಲು ದ್ರವಗಳಲ್ಲಿ ಬೆಳಕಿನ (ವಿಕಿರಣ) ವರ್ತನೆ ಕುರಿತ ನಿಯಮಗಳ ಅನ್ವೇಷಣೆ ಆವಶ್ಯವೆನ್ನಿಸಿತು. ಸೆಪ್ಟೆಂಬರ್ ೧೯೨೧ರಲ್ಲಿ ನಾನು ಕೊಲ್ಕಟಕ್ಕೆ ಮರಳಿದೊಡನೆಯೇ ಈ ಗುರಿಯನ್ನು ಲಕ್ಷದಲ್ಲಿಟ್ಟು ಪ್ರಯೋಗಗಳನ್ನು ಪ್ರಾರಂಭಿಸಿದೆವು."

ಪಲಿತ್ ಪ್ರಾಧ್ಯಾಪಕತ್ವ, ಇಂಡಿಯನ್ ಅಸೋಸಿಯೇಶನ್ ಫಾರ್ ದಿ ಕಲ್ಟಿವೇಶನ್ ಆಫ್ ಸೈನ್ಸಿನ ಕಾರ್ಯದರ್ಶಿತ್ವ, 'ಜ್ಞಾನದ ಹೊಸತೊಂದು ಶಾಖೆಯ ಪರ್ವಬಿಂದು'ವಿನಿಂದ ಮುನ್ನಡೆ – ಇವೆಲ್ಲವನ್ನೂ ಏಕಕಾಲದಲ್ಲಿ ಸಮರ್ಥವಾಗಿ ರಾಮನ್ ನಿರ್ವಹಿಸಿದರು. ಕೊಲ್ಕಟ ಆಶ್ರಮ ಎಂದರೆ ರಾಮನ್ ಆಶ್ರಮ, ಎಂದರೆ ಬೆಳಕನ್ನು ಕುರಿತು ಹೊಸ ಪ್ರಯೋಗ ಚಿಂತನೆ ನಡೆಸುತ್ತಿರುವ ವಿಶಿಷ್ಟ ಶಕ್ತಿಕೇಂದ್ರ ಎಂದು ಪಾಶ್ಚಾತ್ಯ ವಿದ್ವಾಂಸರು ಗೌರವದಿಂದ ನೋಡುತ್ತಿದ್ದರು. ಆರುನೂರಕ್ಕಿಂತ ಹೆಚ್ಚು ಸಂಶೋಧನ ಪತ್ರಗಳು ಈ ತನಕ ರಾಮನ್ ಆಶ್ರಮದಿಂದ ಪ್ರಕಟಗೊಂಡಿದ್ದುವು.

ಈ ಅಯಾಚಿತ ಪ್ರಸಿದ್ಧಿಯ ಫಲವಾಗಿ ರಾಮನ್ನರ ಅಂತಾರಾಷ್ಟ್ರೀಯ ವ್ಯವಹಾರಗಳು ಬಹುವಾಗಿ ಬೆಳೆದುವು. ಇಂಗ್ಲೆಂಡಿನ ಪ್ರಧಾನ ವಿಜ್ಞಾನ ಸಂಸ್ಥೆ ರಾಯಲ್ ಸೊಸೈಟಿ ೧೯೨೪ರಲ್ಲಿ ತನ್ನ ಫೆಲೋ (FRS) ಪದವಿ ನೀಡಿ ಇವರನ್ನು ಗೌರವಿಸಿತು. ಇದನ್ನು ಪಡೆದ ಭಾರತೀಯರಲ್ಲಿ ಇವರು ನಾಲ್ಕನೆಯವರು (ಉಳಿದ ಮೂವರು ಎ. ಕುರ್ಸೆಟ್ಜೀ ೧೮೪೧, ಶ್ರೀನಿವಾಸ ರಾಮಾನುಜನ್ ೧೯೧೮, ಜಗದೀಶಚಂದ್ರ ಬೋಸ್ ೧೯೨೦). ಅದೇ ವರ್ಷ ಬ್ರಿಟಿಷ್ ಅಸೋಸಿಯೇಶನ್ ಫಾರ್ ದಿ ಅಡ್ವಾನ್ಸ್‌ಮೆಂಟ್ ಆಫ್ ಸೈನ್ಸಿನ ವತಿಯಿಂದ ಏರ್ಪಡಿಸಲಾದ ಕೆನಡಾ ಪರ್ಯಟನೆಯಲ್ಲಿ ಭಾಗವಹಿಸಲು ರಾಮನ್ನರಿಗೆ ಕರೆ ಬಂತು. ಟೊರೊಂಟೋದಲ್ಲಿ ಈ ಸಂಸ್ಥೆಯ ವಾರ್ಷಿಕಾಧಿವೇಶನ ನಡೆಯುವುದಿತ್ತು. ಇದರೊಡನೆ ಇಂಟರ್ನ್ಯಾಶನಲ್ ಕಾಂಗ್ರೆಸ್ ಆಫ್ ಮ್ಯಾಥ್‌ಮ್ಯಾಟಿಕ್ಸ್ ಸಹ ಸಮಾವೇಶಗೊಂಡಿತ್ತು. ಆ ಮಹಾಧಿವೇಶನದಲ್ಲಿ ರಾಮನ್ ಬೆಳಕಿನ ಚದರಿಕೆ ಕುರಿತು ಮೂಲಭೂತ ಸಮಸ್ಯೆಗಳನ್ನು ಎತ್ತಿ ಸಂಶೋಧನಾತ್ಮಕ ಚರ್ಚೆಯನ್ನು ಉದ್ಘಾಟಿಸಿದರು. ಪಶ್ಚಿಮ ಗೋಳಾರ್ಧದ ಈ ಸಭೆಗೆ ಆಗಮಿಸಿದ್ದ ಹಲವಾರು ಅಮೆರಿಕನ್ ಹಾಗೂ ಯೂರೋಪಿಯನ್ ವಿಜ್ಞಾನಿಗಳ ಸ್ನೇಹವನ್ನು ರಾಮನ್ ಇಲ್ಲಿ ಸಂಪಾದಿಸಿದರು.

ಟೊರೊಂಟೋದ ಅಧಿವೇಶನದ ಚರ್ಚೆ ಮುಗಿದು ನಿಯೋಗಿಗಳು ಹೊರಗೆ ಬರುತ್ತಿದ್ದಾಗ, "ಪ್ರೊ ರಾಮನ್! ನಿಮ್ಮನ್ನು ಭೇಟಿ ಆಗಲು ಮತ್ತು ನಿಮ್ಮ ಪರಿಚಯ ಬೆಳೆಸಿಕೊಳ್ಳಲು ನನಗೆ ಅತಿ ಸಂತೋಷವಾಗುತ್ತಿದೆ" ಎಂದು ಸ್ನೇಹ ಹಸ್ತ ಮುಂದೆ ಬಂದಿತು. ಸುಪ್ರಸಿದ್ಧ ಭೌತ ವಿಜ್ಞಾನಿ ಪ್ರೊ ಆರ್. ಎ ಮಿಲಿಕನ್ (ಅಮೆರಿಕ, ೧೮೬೮–೧೯೫೩. ನೊಬೆಲ್ ಪ್ರಶಸ್ತಿ ಪುರಸ್ಕೃತ ೧೯೨೩) ಈ ಸೌಹಾರ್ದಯುತ ಮಾತುಗಳಿಂದ ರಾಮನ್ನರನ್ನು ಸ್ವಾಗತಿಸಿದರು. ಪೌರಸ್ತ್ಯ ಮತ್ತು ಪಾಶ್ಚಾತ್ಯ ಮಹಾಮತಿಗಳ ಮಧುರ ಮಿಲನವದು. ಆಲ್ಬರ್ಟ್ ಐನ್‌ಸ್ಟೈನ್ (೧೮೭೯–೧೯೫೫, ಭೌತವಿಜ್ಞಾನದ ನೊಬೆಲ್ ಪ್ರಶಸ್ತಿ ಪುರಸ್ಕೃತ ೧೯೨೧) ಮತ್ತು ಎಚ್. ಎ ಲೊರೆಂಟ್ಸ್ (೧೮೫೩–೧೯೨೮, ಭೌತವಿಜ್ಞಾನದ ನೊಬೆಲ್ ಪ್ರಶಸ್ತಿ ಸಹಪುರಸ್ಕೃತ ೧೯೦೨) ಇವರಂಥ ಮಹಾವಿಜ್ಞಾನಿಗಳನ್ನು ಗೌರವ ಆಚಾರ್ಯರೆಂದು ಪರಿಗಣಿಸಿದ್ದ ಆ ಸಂಸ್ಥೆಯಲ್ಲಿ ರಾಮನ್ನರಿಗೂ ಅದೇ ಗೌರವ ಸ್ಥಾನವನ್ನು ನೀಡಲಾಯಿತು. ಏಷ್ಯದ ಈ ವಿಜ್ಞಾನಿಯನ್ನು ಸ್ವಾಗತಿಸಲು ತಮಗೆ ತುಂಬ ಸಂತೋಷವಾಗುವುದೆಂದು ಮಿಲಿಕನ್ ನುಡಿದರು.

ಕೆನಡಾ ದೇಶದಲ್ಲಿ ಮಾಡಿದ ದೀರ್ಘಯಾತ್ರೆ ರಾಮನ್ನರಿಗೆ ಬಹಳ ಪ್ರಯೋಜನಕಾರಿಯಾಯಿತು. ಹಿಮಪ್ರವಾಹದಿಂದ ಪ್ರತಿಫಲಿತವಾಗುತ್ತಿದ್ದ ಬೆಳಕಿನ ನಾನಾ ವರ್ಣವಿನ್ಯಾಸ ಅವರ ನಿಶಿತ ಮತಿಗೆ ಸವಾಲು ಒಡ್ಡಿತು. ಹಿಮಪ್ರವಾಹ ಹಸುರು–ನೀಲಿ ಬಣ್ಣ ಪಸರಿಸುತ್ತಿತ್ತು. ಆದರೆ ಹಿಮಗಡ್ಡೆಯನ್ನು ಹಿಡಿದು ನೋಡಿದಾಗ ಅದು ಸಂಪೂರ್ಣ ಪಾರಕವಾಗಿತ್ತು (transparent). ಪಾರಕವಸ್ತು ಒಟ್ಟಾಗಿ ಪ್ರವಹಿಸುವಾಗ ಹಸುರು–ನೀಲಿ ಬಣ್ಣವನ್ನೇಕೆ ಪಸರಿಸಬೇಕು? ರಾಮನ್ ಎದುರು ನಿಂತ ಪ್ರಶ್ನೆ ಇದು. ಇದರ ಸಮರ್ಥನೆಗಾಗಿ ಅವರೊಂದು ವಾದ ಮಂಡಿಸಿದರು. ಅದರ ಪ್ರಕಾರ ಸೂರ್ಯರಶ್ಮಿ ಹಿಮಗಡ್ಡೆಯನ್ನು ಅಡ್ಡ ಹಾಯುವಾಗ ರೋಹಿತದ (spectrum) ಸ್ವಲ್ಪ ಭಾಗ ಮಾತ್ರ ಹರಡಲ್ಪಡುವುದು, ಆದ್ದರಿಂದ ಹಿಮ ಪ್ರವಾಹಕ್ಕೆ ಆ ಬಣ್ಣ ಬರುವುದು ಎಂದಿತ್ತು.

ಮುಂದೆ ರಾಮನ್ ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಪ್ರವಾಸ ಕೈಗೊಂಡರು. ಫ್ರಾಂಕ್ಲಿನ್ ಇನ್‌ಸ್ಟಿಟ್ಯೂಟಿನಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸಿದರು (೧೯೨೪). ಅಮೆರಿಕದಿಂದ ಭಾರತಕ್ಕೆ ಮರಳುವ ಹಾದಿಯಲ್ಲಿ ಅವರು ಸಂದರ್ಶಿಸಿದ ಸ್ಥಳಗಳು ಇಂಗ್ಲೆಂಡ್, ನಾರ್ವೇ, ಡೆನ್ಮಾರ್ಕ್, ಜರ್ಮನಿ ಇತ್ಯಾದಿ. ಅಲ್ಲಿಯ ಪ್ರಯೋಗ ಮಂದಿರಗಳನ್ನೂ ಪ್ರಯೋಗಶೀಲ ವಿಜ್ಞಾನಿಗಳನ್ನೂ ಭೇಟಿ ಮಾಡಿದರು. ಪ್ರೊ ನೀಲ್ಸ್ ಬೋರ್‌ರನ್ನು (೧೮೮೫–೧೯೬೨, ಡೇನಿಷ್ ಭೌತ ವಿಜ್ಞಾನಿ, ನೊಬೆಲ್ ಪ್ರಶಸ್ತಿ ಪುರಸ್ಕೃತ ೧೯೨೨) ಅವರ ಡೆನ್ಮಾರ್ಕಿನ ಪ್ರಯೋಗಶಾಲೆಯಲ್ಲಿ ಸಂದರ್ಶಿಸಿದರು.

ಅದೇ ಬೇಸಗೆಯಲ್ಲಿ (೧೯೨೫) ರಾಮನ್ ಪುನಃ ಯೂರೋಪ್ ಪ್ರವಾಸ ಕೈಗೊಂಡರು. ಈ ಸಲ ರಷ್ಯನ್ ಅಕಾಡೆಮಿ ಆಫ್ ಸೈನ್ಸಸಿನ ಇನ್ನೂರನೆಯ ಹುಟ್ಟುಹಬ್ಬದ ಸಮಾರಂಭದಲ್ಲಿ ಭಾಗಿಗಳಾಗಲು ಆಹ್ವಾನ ಬಂದಿತ್ತು. ಈ ಪ್ರಯಾಣದಲ್ಲಿ ರಾಮನ್ ಲೆನಿನ್‌ಗ್ರಾಡ್, ಮಾಸ್ಕೊ ಮುಂತಾದ ನಗರಗಳಿಗೆ ಭೇಟಿ ನೀಡಿದರು. ಯಾವ ಸಭೆ ಇರಲಿ, ಯಾವ ವ್ಯಕ್ತಿ ಇರಲಿ ಅವರ ಮಾತಿನ ಪಲ್ಲವಿ ಅದೇ, ಬೆಳಕಿನ ಚದರಿಕೆ – ಅದರ ಹುಚ್ಚು, ಗುಂಗು ಅವರ ಸಮಸ್ತ ವ್ಯಕ್ತಿತ್ವವನ್ನೂ ಆವರಿಸಿಬಿಟ್ಟಿದ್ದುವು. ರಾಮನ್ನರ ಭಾಷಣಗಳನ್ನು ಕೇಳುವಾಗ ಒಂದಷ್ಟು ಹೊತ್ತು ಅವರ ಕೈಚಲನೆ ಮೇಲೆ ಲಕ್ಷ್ಯ ಕೇಂದ್ರೀಕರಿಸಿದರೆ ವಿನೋದಶೀಲ ಅನುಭವ ಆಗುತ್ತದೆ. ಆ ದಿವಸಗಳಲ್ಲಿ ಭಾಷಣ ಕೇಳಿದವರು, "ಬೆಳಕಿನ ಚದರಿಕೆಯ ಪರಿಣಾಮ ನೋಡಿ" ಎಂದು ರಾಮನ್ನರ ಕೈಕರಣಗಳನ್ನು ಅನುಕರಿಸುವುದಿತ್ತು.

ರಾಮನ್ ಆಶ್ರಮದ ಮುನ್ನಡೆ ಮಹತ್ಸಾಧನೆಯ ಎಡೆಗೆ ಸಾಗಿತ್ತು. ಅಪೂರ್ವ ಸಿದ್ಧಿಯೊಂದು ಕೈಗೂಡಲು ರಂಗಸ್ಥಳ ಸುಸಜ್ಜಿತವಾಗಿತ್ತು. ಅದನ್ನು ಹೇಳುವ ಮೊದಲು ಜಿ.ಎಸ್. ಪರಮಶಿವಯ್ಯನವರು ನಿರೂಪಿಸಿರುವ ('ಕಸ್ತೂರಿ' ಜನವರಿ ೧೯೮೧) ಒಂದು ಸುಂದರ ಸನ್ನಿವೇಶವನ್ನು ಇಲ್ಲಿ ಹೇಳಬೇಕು.

೧೯೨೮ರ ಪ್ರಥಮ ಪಾದ. ೧೯೨೭–೨೮ರ ಕಾಲೇಜು ವರ್ಷ ಮುಗಿಯುತ್ತ ಬರುತ್ತಿದ್ದಂತೆ ಎಲ್ಲ ಕಾಲೇಜುಗಳಲ್ಲಿಯೂ ವಿವಿಧ ಸಂಘಗಳ ಸಮಾರೋಪ ಸಮಾರಂಭಗಳ ಗಡಿಬಿಡಿಯ ಕಾವು ಏರುತ್ತಿತ್ತು. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಬಿಎಸ್ಸಿ ಕೊನೆಯ ವರ್ಷದ ವಿದ್ಯಾರ್ಥಿ ಆಗಿದ್ದ ಪರಮಶಿವಯ್ಯ ಅಲ್ಲಿಯ ವಿಜ್ಞಾನಸಂಘದ ಕಾರ್ಯದರ್ಶಿಯೂ ಆಗಿದ್ದರು. ರಾಮನ್ನರನ್ನೇ ತಮ್ಮ ಸಂಘದ ಸಮಾರೋಪ ಭಾಷಣ ನೀಡಲು ಆಹ್ವಾನಿಸಬೇಕೆಂಬುದು ಇವರ ಆಸೆ. ಆ ಮೊದಲೇ ಇವರು ರಾಮನ್ನರ ಪರಿಚಯ ಹಾಗೂ ವಿಶ್ವಾಸ ಗಳಿಸಿಕೊಂಡಿದ್ದರು. ಈ ಧೈರ್ಯದಿಂದ ತಮ್ಮ ಇಚ್ಛೆಯನ್ನು ಕಾಲೇಜಿನ ಪ್ರಾಧ್ಯಾಪಕರ ಮುಂದೆ ವ್ಯಕ್ತಪಡಿಸಿದರು. ಪ್ರಾಧ್ಯಾಪಕರು ಇವರ ಹಂಬಲವನ್ನು over-ambitious (ಅತಿ ಆಶಾವಾದ) ಎಂದು ಪರಿಗಣಿಸಿದರೂ ಪರಮಶಿವಯ್ಯ ತಮ್ಮ ಪಟ್ಟು ಮಾತ್ರ ಸಡಿಲಿಸಲಿಲ್ಲ. ಮಾರ್ಚ್ ೧೫ನೆಯ ತಾರೀಕು ರಾಮನ್ ಬೆಂಗಳೂರಿಗೆ ಕೊಲ್ಕಟದಿಂದ ಯಾವುದೋ ಕಾರ್ಯಕ್ರಮಕ್ಕಾಗಿ ಆಗಮಿಸಿದ್ದರು. ಪರಮಶಿವಯ್ಯ ಹಳೆಯ ಪರಿಚಯದ ಸಲುಗೆಯಿಂದ ಅವರನ್ನು ಭೇಟಿಯಾಗಿ ತಮ್ಮ ಕೋರಿಕೆಯನ್ನು ಆಗ್ರಹಪೂರ್ವಕ ಬಿನ್ನವಿಸಿದರು. ರಾಮನ್ ಒಂದುಕ್ಷಣ ಯೋಚಿಸಿದರಂತೆ, "ಮರುದಿವಸ ಹೇಗೂ ಸೌತ್ ಇಂಡಿಯನ್ ಸೈನ್ಸ್ ಅಸೋಸಿಯೇಶನ್ನಿನ ಆಶ್ರಯದಲ್ಲಿ ಭಾಷಣ ಮಾಡುವವನಿದ್ದೇನೆ. ಅದರೊಂದಿಗೆ ಪರಮಶಿವಯ್ಯನವರ ಕಾರ್ಯಕ್ರಮವನ್ನು ಲಗತ್ತಿಸಿ ಎರಡನ್ನೂ ಒಂದೇ ಸಲ ಮುಗಿಸಿಬಿಡಬಹುದು" ಎಂದು ಸೂಚಿಸಿದರು. ಆ ಸಭೆಯಾದರೂ ನಡೆಯಲಿದ್ದುದು ಸೆಂಟ್ರಲ್ ಕಾಲೇಜಿನ ಆವರಣದಲ್ಲಿಯೇ.

ಮಾರ್ಚ್ ೧೬, ಶುಕ್ರವಾರ ಬೆಂಗಳೂರು ಸೆಂಟ್ರಲ್ ಕಾಲೇಜಿನ ಗಣಿತ ವಿಭಾಗದ ಪ್ರಾಂಗಣ. ರಾಮನ್ ಭಾಷಣದ ಶೀರ್ಷಿಕೆ 'ನೂತನ ವಿಕಿರಣ' (A new Radiation) ಭಾಷಣ ಆರಂಭವಾಯಿತು. "ಅಣುಗಳಿಂದಲೂ ಪರಮಾಣುಗಳಿಂದಲೂ ಆಗುತ್ತಿರುವ ಒಂದು ಹೊಸ ನಮೂನೆಯ ವಿಕಿರಣ ಅಥವಾ ಬೆಳಕಿನ ಉತ್ಸರ್ಜನೆ ಕುರಿತು ಈ ಸಂಜೆ ಮಾತಾಡಬೇಕೆಂದಿದ್ದೇನೆ. ಕೊಲ್ಕಟದಲ್ಲಿ ನಾವು ನಡೆಸಿದ ಪರಿಶೋಧನೆಗಳ ಪರಿಣಾಮವೇ ಈ ಆವಿಷ್ಕಾರ. ಆದ್ದರಿಂದ ಇದರ ಮಹತ್ವವೇನೆಂದು ಶ್ರುತಪಡಿಸಲು ಆ ಚರಿತ್ರೆಯನ್ನು ವಿಶದೀಕರಿಸುತ್ತೇನೆ." ಹೀಗೆ ಮುಂದುವರಿಸಿದ ಈ ಮಾಂತ್ರಿಕ, 'ನೈಸರ್ಗಿಕ ವಿದ್ಯಮಾನದ ಅಧ್ಯಯನ'ದಿಂದ 'ಜ್ಞಾನದ ಹೊಸ ಶಾಖೆ'ಗೆ ಕೇಳುಗರನ್ನು ಕೊಂಡೊಯ್ದು ಅದನ್ನು ಹಂತಹಂತವಾಗಿ ವಿವರಿಸಿದರು. ಸಭೆಯ ಮುಂದೆ ಅವರು ತೆರೆದಿಟ್ಟದ್ದು ಪ್ರಾಯೋಗಿಕ ಭೌತವಿಜ್ಞಾನದಲ್ಲಿ ಆಗಿದ್ದ ಒಂದು ಮೂಲಭೂತ ಆವಿಷ್ಕಾರವನ್ನು – ಅದೇ ಜಗತ್ಪ್ರಸಿದ್ಧ ರಾಮನ್ ಪರಿಣಾಮ. ಅದರ ಸಾರಾಂಶವನ್ನು ಮಾತ್ರ ಇಲ್ಲಿ ಬರೆಯಬಹುದಷ್ಟೆ.

ನಮ್ಮ ಕಣ್ಣಿಗೆ ಒಂದೇ ಬಣ್ಣದ್ದರಂತೆ ಕಾಣುವ (ಕೆಂಪು, ನೀಲಿ, ಹಳದಿ ಇತ್ಯಾದಿ) ಬೆಳಕಿನ ಕಿರಣದಂಡವನ್ನು ಅಶ್ರಗದ (ಶಿಥಿಲ) ಮೂಲಕ ಹಾಯಿಸಿ ಬಿಳಿ ತೆರೆಯ ಮೇಲೆ ಬೀಳಿಸಿದರೆ ಅಲ್ಲಿ ಪ್ರಕಾಶಮಾನವಾದ ಕೆಲವು ಬಣ್ಣದ ಗೆರೆಗಳು ಕಾಣುವುವು. ಅವೆಲ್ಲವೂ ಮೂಲ ಬೆಳಕಿನ 'ಬಣ್ಣ'ದವೇ ಎಂಬಂತೆ ಕಂಡರೂ ಬಣ್ಣದ 'ಛಾಯೆ'ಗಳಲ್ಲಿ ಒಂದಕ್ಕೊಂದಕ್ಕೆ ಸ್ವಲ್ಪ ವ್ಯತ್ಯಾಸವಿರುತ್ತದೆ. ಇವುಗಳ ಒಟ್ಟು ಹೆಸರು ರೋಹಿತ, ಅಂದರೆ ಮೂಲಬೆಳಕು ಈ ವಿವಿಧ ಛಾಯೆಗಳ ಸಂಯುಕ್ತ. ಅಶ್ರಗ ಅದನ್ನು ವಿಭಜಿಸಿದೆ. ಆ ಒಂದೊಂದು ಘಟಕವೂ ಬೇರೆಬೇರೆ ಅಲೆಯುದ್ದ (wave length) ಉಳ್ಳದ್ದು. ಆದ್ದರಿಂದ ರೋಹಿತದಲ್ಲಿ ಬೇರೆಬೇರೆ ಸ್ಥಾನವನ್ನು ತಲಪಿವೆ.

ಈಗ ಅದೇ ಬೆಳಕನ್ನು ಅಶ್ರಗದ ಮೂಲಕ ಹಾಯಿಸುವ ಮೊದಲು ಪಾರಕ ಪದಾರ್ಥವೊಂದರ ಮೂಲಕ ಹರಿಸಿ, ಅನಂತರ ಅದರ ರೋಹಿತವನ್ನು ಪಡೆದರೆ, ಅದರಲ್ಲಿ ಮೊದಲಿದ್ದ ಗೆರೆಗಳ ಜೊತೆಗೆ ಕೆಲವು ಹೊಸಗೆರೆಗಳು ಕಂಡುಬರುತ್ತವೆ. ಅಂದರೆ ಮೂಲ ಬೆಳಕಿನಲ್ಲಿ ಯಾವ ಯಾವ ಅಲೆಯುದ್ದದ ಬೆಳಕಿನ ರಶ್ಮಿಗಳಿದ್ದುವೋ ಅವುಗಳಲ್ಲದೆ ಬೇರೆ ಅಲೆಯುದ್ದವಿರುವ ರಶ್ಮಿಗಳು ಸಹ ಉದ್ಭವಿಸಿವೆ. ಇವು ಪಾರಕ ಪದಾರ್ಥದ ಕೊಡುಗೆಗಳೆಂಬುದು ಸ್ಪಷ್ಟ. ಇದೇ ರಾಮನ್ ಪರಿಣಾಮ.

ಪಾರಕ ಪದಾರ್ಥದಲ್ಲಿಯ ಅಣುಗಳು ಮೂಲ ಬೆಳಕಿನಿಂದ ಸ್ವಲ್ಪ ಶಕ್ತಿಯನ್ನು ಹೀರಿ ದೀರ್ಘ ಅಲೆಯುದ್ದವುಳ್ಳ ಬೆಳಕಿನ ರಶ್ಮಿಯನ್ನು ಉತ್ಪತ್ತಿಗೈಯ್ಯಬಹುದು; ಇಲ್ಲವೇ ಅದಕ್ಕೆ ಸ್ವಲ್ಪ ಶಕ್ತಿಯನ್ನು ಒದಗಿಸಿ ಹ್ರಸ್ವ ಅಲೆಯುದ್ದದ ಬೆಳಕಿನ ರಶ್ಮಿಗಳನ್ನು ಉಂಟುಮಾಡಬಹುದು. ಮೊದಲನೆಯದನ್ನು ಸ್ಟೋಕ್ಸ್ ಗೆರೆಗಳೆಂದೂ ಎರಡನೆಯವನ್ನು ಪ್ರತಿ ಸ್ಟೋಕ್ಸ್ ಗೆರೆಗಳೆಂದೂ (antistokes) ಎರಡನ್ನೂ ಒಟ್ಟಿಗೆ ರಾಮನ್ ಗೆರೆಗಳೆಂದೂ ಕರೆಯುತ್ತಾರೆ. ಬೆಳಕಿನ ಅಲೆಯುದ್ದದಲ್ಲಾಗುವ ಈ ವ್ಯತ್ಯಾಸಕ್ಕೂ ಪಾರಕ ಪದಾರ್ಥದ ಅಣುರಚನೆಗೂ ನಿಕಟ ಸಂಬಂಧವಿದೆ. ಆದ್ದರಿಂದ ರಾಮನ್ ಗೆರೆಗಳ ಪರೀಕ್ಷೆಯಿಂದ ಪದಾರ್ಥದ ಅಣುರಚನೆಯ ಬಗ್ಗೆ ಹೆಚ್ಚಿನ ತಿಳಿವಳಿಕೆ ಲಭಿಸುತ್ತದೆ.

ಈ ಇತಿಹಾಸ ಪ್ರವರ್ತಕ ಭಾಷಣದ ಕೊನೆಯಲ್ಲಿ ರಾಮನ್ ತಮ್ಮ ನಿಕಟ ಸಹವರ್ತಿಗಳ ಸೇವೆಯನ್ನು ಹೆಚ್ಚುಹೆಚ್ಚಾಗಿ ಸ್ಮರಿಸುತ್ತ ಅವರಿಗೆ ಗೌರವವನ್ನು ಸಲ್ಲಿಸುತ್ತ, "ನಾವೀಗ ಪ್ರಾಯೋಗಿಕ ಸಂಶೋಧನೆಯ ಅತ್ಯಂತ ವಿಸ್ಮಯಕರ ಪ್ರದೇಶದ ಅಂಚಿನಲ್ಲಷ್ಟೇ ನಿಂತಿದ್ದೇವೆ ಎಂಬುದು ಸ್ಪಷ್ಟ. ವಿಕಿರಣ ಹಾಗೂ ತರಂಗಸಿದ್ಧಾಂತ, ಎಕ್ಸ್ ಕಿರಣ ದೃಕ್ ವಿಜ್ಞಾನ, ಅಣು ಹಾಗೂ ಪರಮಾಣು ರೋಹಿತಗಳು, ಪ್ರತಿದೀಪ್ತಿ ಹಾಗೂ ಚದರಿಕೆ, ಉಷ್ಣಗತಿ ವಿಜ್ಞಾನ ಹಾಗೂ ರಸಾಯನ ವಿಜ್ಞಾನ ಇವುಗಳಿಗೆ ಸಂಬಂಧಿಸಿದಂಥ ವಿವಿಧ ಸಮಸ್ಯೆಗಳ ಮೇಲೆ ಇದು ಬೆಳಕು ಚೆಲ್ಲುವ ನಿರೀಕ್ಷೆ ಉಂಟು. ಇದರ ಅನ್ವೇಷಣೆ ಇನ್ನು ಬಾಕಿ ಇದೆ ...ನೂತನ ವಿಕಿರಣದ ರೇಖಾರೋಹಿತವನ್ನು ಮೊದಲು ನೋಡಿದ್ದು ೧೯೨೮ ಫೆಬ್ರುವರಿ ೨೮ರಂದು... ಮರುದಿನ ಇದನ್ನು ಪ್ರಕಟಿಸಲಾಯಿತು" ಎಂದು ಮುಕ್ತಾಯಗೊಳಿಸಿದರು. ರಾಮನ್ ಪರಿಣಾಮ ಆವಿಷ್ಕಾರವಾದದ್ದು ಕೊಲ್ಕಟದಲ್ಲಿ; ಆದರೆ ಲೋಕಕ್ಕೆ ಪ್ರಕಟವಾದದ್ದು ಬೆಂಗಳೂರಿನಲ್ಲಿ.

ವಿಜ್ಞಾನಲೋಕಕ್ಕೆ ಈ ಆವಿಷ್ಕಾರ ನಿರೀಕ್ಷಿತವಾಗಿಯೇ ಇತ್ತು. ಕಾರಣ, ತಮ್ಮ ಸಂಶೋಧನೆಗಳ ಪ್ರತಿಯೊಂದು ಹೊಸ ಸೋಪಾನವನ್ನೂ ರಾಮನ್ 'ನೇಚರ್' ವಿಜ್ಞಾನ ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದರು. ಇದರಿಂದ ಆಸಕ್ತ ವಿಜ್ಞಾನಿಗಳು ತಾವು ಪ್ರವೇಶಿಸಲಿರುವ ವಿಸ್ಮಯಲೋಕವನ್ನು ಕುತೂಹಲದಿಂದ ಎದುರುನೋಡುತ್ತಿದ್ದುದು ಸಹಜವೇ. ರಾಮನ್ ಪರಿಣಾಮದ ಪ್ರಕಟಣೆ ಅವರ ಮುಂದೆ ಆ ಲೋಕವನ್ನು ತೆರೆದಿಟ್ಟಿತು.

ದೃಗ್ವಿಜ್ಞಾನದಲ್ಲಿ ಪ್ರಸಿದ್ಧ ಪ್ರಾಯೋಗಿಕ ವಿಜ್ಞಾನಿಯಾಗಿದ್ದ ಆರ್. ಡಬ್ಲ್ಯು. ವುಡ್ ಎಂಬಾತ ರಾಮನ್ ಪರಿಣಾಮದ ಪ್ರಯೋಗಗಳನ್ನು ಪರಿಷ್ಕೃತ ಸಂಕೀರ್ಣ ಉಪಕರಣಗಳ ನೆರವಿನಿಂದ ತಪಾಸಿಸಿ ಆ ತೀರ್ಮಾನದ ಋಜುತ್ವವನ್ನೂ ನಿಖರತೆಯನ್ನೂ ಕಂಡುಕೊಂಡ. ಆತ 'ನೇಚರ್' ಪತ್ರಿಕೆಗೆ ಕಳಿಸಿದ ತಂತಿ ಹೀಗಿತ್ತು, "ಅತಿ ತೀವ್ರ ಏಕವರ್ಣೀ (mono-chromatic) ಬೆಳಕಿನಿಂದ ಬೆಳಗಿಸಿದ ಪಾರಕ ವಸ್ತುಗಳು ಅಲೆಯುದ್ದವನ್ನು ಮಾರ್ಪಡಿಸಿ ಬೆಳಕನ್ನು ಚದರಿಸುತ್ತವೆ ಎಂಬ ಪ್ರೊ ರಾಮನ್ನರ ಉಜ್ವಲ ಹಾಗೂ ಆಶ್ಚರ್ಯಕರ ಆವಿಷ್ಕಾರವನ್ನು ತಾಳೆ ನೋಡಿದ್ದೇನೆ. ಅಲ್ಲದೆ ಪರಿಷ್ಕೃತ ಉಪಕರಣಗಳನ್ನು ಉಪಯೋಗಿಸಿಕೊಂಡು ಅವರ ಆವಿಷ್ಕಾರದ ಪ್ರತಿಯೊಂದು ವಿವರವನ್ನೂ ಪರಿಶೀಲಿಸಿದ್ದೇನೆ. ಬೆಳಕಿನ ಚದರಿಕೆಯನ್ನು ದೀರ್ಘಕಾಲ ತಾಳ್ಮೆಯಿಂದ ರಾಮನ್ ಪರಿಶೀಲಿಸಿದುದರ ಪರಿಣಾಮವಾಗಿ ಲಭಿಸಿದ ಈ ಬಲು ಸುಂದರ ಆವಿಷ್ಕಾರ ಬೆಳಕಿನ ಶಕಲ ಸಿದ್ಧಾಂತದ (quantum theory) ಬಗ್ಗೆ ಈ ತನಕ ದೊರೆತಿರುವ ಅತ್ಯಂತ ತೃಪ್ತಿಕರ ಪುರಾವೆಗಳಲ್ಲಿ ಒಂದೆಂದು ನನಗೆ ತೋರುತ್ತದೆ."

ರಾಮನ್ ಪರಿಣಾಮ ಭೌತ ವಿಜ್ಞಾನದಲ್ಲಿ ನೂತನ ಅಧ್ಯಾಯವನ್ನು ಪ್ರವರ್ತಿಸಿತು. ಆಕಾಶದ ಬಣ್ಣ, ಸೂರ್ಯ ಮತ್ತು ನಕ್ಷತ್ರಕಿರಣಗಳ ವಿಭಜನೆ ಈ ರಂಗದಲ್ಲಿ ಹೊಸ ದೃಷ್ಟಿ ನೀಡಿತು. ಬೆಳಕು ವಿದ್ಯುತ್ಕಾಂತ ತರಂಗಗಳ ಒಂದು ಬಗೆ. ಇತ್ತ ಪಾರಕ ವಸ್ತುಗಳಲ್ಲಿ ಬೆಳಕಿನ ಚದರಿಕೆ ಕೂಡ ವಿದ್ಯುತ್ಕಾಂತ ತರಂಗಗಳ ಒಂದು ವೈಶಿಷ್ಟ್ಯವೇ ಆಗಿರಬೇಕು ಎಂದು ಸಂಶೋಧನೆ ಮುಂದುವರಿಯಿತು. ರಾಮನ್ ಪರಿಣಾಮದ ಎಕ್ಸ್ ಕಿರಣವಲಯದ ರೂಪಾಂತರವೂ ಇದೆ. ಎಕ್ಸ್ ಕಿರಣಗಳನ್ನು ಅನಿಲದ ಮೂಲಕ ಹರಿಸಿದರೆ ಹೊಸತೊಂದು ವಿಕಿರಣ ದೊರೆಯುವುದು. ಇದು ಕಾಂಪ್ಟನ್ ಪರಿಣಾಮ (೧೯೨೩). ಕಾಂಪ್ಟನ್ ಪರಿಣಾಮದ ಶೋಧನೆ ಬಲು ಪ್ರಯಾಸಕರವಾದದ್ದು. ಕಾಣುವ ಬೆಳಕಿನಿಂದ ಲಭಿಸುವ

ರಾಮನ್ ಪರಿಣಾಮ (೧೯೨೮) ಇದಕ್ಕಿಂತ ಸುಲಭ ಹತ್ಯಾರು. ಇದರ ಬಳಕೆ ಭೌತ ವಿಜ್ಞಾನದ ಪ್ರಗತಿಗೆ ಒಳ್ಳೆಯ ಸೌಕರ್ಯ ಒದಗಿಸಿತು.

೧೯೫೩ ಮಾರ್ಚ್ ೧೬ರಂದು ರಾಮನ್ ಪರಿಣಾಮ ಆವಿಷ್ಕಾರದ ಬೆಳ್ಳಿ ಹಬ್ಬವನ್ನು ಭಾರತದಲ್ಲಿ ಆಚರಿಸಲಾಯಿತು. ಆ ಸಮಯದಲ್ಲಿ ಐನ್‌ಸ್ಟೈನ್‌ರಿಂದ ಒಂದು ಹೇಳಿಕೆ ಪಡೆಯಲಾಗಿತ್ತು ('ದಿ ಹಿಂಡೂ' ೧೬–೩–೧೯೫೩). ಅದರ ಸಾರ ಹೀಗಿತ್ತು, "ಒಂದು ವಿಚಾರದಲ್ಲಿ, ಹೇಗಿದ್ದರೂ ಆಧುನಿಕ ಭೌತ ವಿಜ್ಞಾನ ಒಂದು ಮಾದರಿ ಆಗಿರಬಹುದು. ಅನುಭವಜನ್ಯ ಜ್ಞಾನ ಹಾಗೂ ದ್ರವ್ಯದ ರಚನೆ ಮತ್ತು ಸರಳ ಘಟನೆಗಳು – ಇವನ್ನು ಕುರಿತ ಮೂಲಭೂತ ಭಾವನೆಗಳ ಪ್ರಗತಿ ಎಲ್ಲ ರಾಷ್ಟ್ರಗಳೂ ಪಾಲ್ಗೊಳ್ಳುವ ಒಂದು ಅಂತಾರಾಷ್ಟ್ರೀಯ ಕ್ರಿಯೆ. ಈ ದಿಶೆಯಲ್ಲಿ ಸಿ.ವಿ ರಾಮನ್ ದ್ರವ್ಯದ ಒಳಗಡೆ ಒಂದು ಫೋಟಾನಿನ ಶಕ್ತಿ ಭಾಗಶಃ ಪರಿವರ್ತನೆ ಆಗುವ ಸಾಧ್ಯತೆ ಇದೆ ಎಂಬುದನ್ನು ಪ್ರಥಮವಾಗಿ ಕಂಡುಕೊಂಡರು ಮತ್ತು ಪ್ರಾಯೋಗಿಕವಾಗಿ ತೋರಿಸಿದರು. ಈ ಆವಿಷ್ಕಾರವಾದ ಸಮಯದಲ್ಲಿ ಬರ್ಲಿನ್ನಿನ ಫಿಸಿಕ್ಸ್ ಕಲೋಕ್ವಿಯಮ್ಮಿನಲ್ಲಿ ಸೇರಿದ್ದ ನಮ್ಮೆಲ್ಲರ ಮೇಲೆ ಮಾಡಿದ ಧನಾತ್ಮಕ ಪರಿಣಾಮವನ್ನು ಈಗಲೂ ನಾನು ಚೆನ್ನಾಗಿ ಸ್ಮರಿಸಿಕೊಳ್ಳಬಲ್ಲೆ." ಮುಂದುವರಿಯುತ್ತ ರಾಮನ್ನರ ಕೊಡುಗೆ ಅಮೂಲ್ಯವಾದದ್ದೆಂದು ಹೇಳಿದರು.

ರಾಮನ್ ಪರಿಣಾಮದ ಪ್ರಥಮ ದಶಕದಲ್ಲಿ (೧೯೨೮–೩೮) ಅದನ್ನು ಕುರಿತ ೧೭೦೦ ಸಂಶೋಧನ ಪತ್ರಗಳು ಪ್ರಕಟಗೊಂಡುವು. ಪ್ರಪಂಚದ ಪ್ರತಿಯೊಂದು ರಾಷ್ಟ್ರವೂ ಈ ಮೂಲಭೂತ ಆವಿಷ್ಕಾರವನ್ನು ಕುರಿತು ತೀವ್ರ ಆಸಕ್ತಿ ತಳೆದಿತ್ತು. ಇವುಗಳ ಪೈಕಿ ಜರ್ಮನಿ, ಅಮೆರಿಕ ಸಂಯುಕ್ತ ಸಂಸ್ಥಾನಗಳು, ಫ್ರಾನ್ಸ್, ಇಟಲಿ, ಬೆಲ್ಜಿಯಮ್ ಮತ್ತು ಜಪಾನ್ ಅಗ್ರಗಣ್ಯ ರಾಷ್ಟ್ರಗಳು. ಬೆಳ್ಳಿ ಹಬ್ಬದ ವೇಳೆಗೆ ೩೦೦೦ ಸಂಶೋಧನ ಪತ್ರಗಳು ಪ್ರಕಟವಾಗಿದ್ದುವು. ಇವುಗಳಲ್ಲಿ ಭಾರತದ ಮತ್ತು ಅಮೆರಿಕ ಕೊಡುಗೆ ಸುಮಾರು ಅರ್ಧದಷ್ಟು, ಲಂಡನ್ನಿನ ರಾಯಲ್ ಸೊಸೈಟಿ ಆ ದಶಕದ (೧೯೨೧–೩೦) ಮೂರು ಅಥವಾ ನಾಲ್ಕು ಅತ್ಯುತ್ಕೃಷ್ಟ ಪ್ರಾಯೋಗಿಕ ಭೌತವಿಜ್ಞಾನ ಸಂಶೋಧನೆಗಳಲ್ಲಿ ರಾಮನ್ ಪರಿಣಾಮ ಒಂದು ಎಂದು ವರದಿ ಮಾಡಿತು. ಈ ಪ್ರಚಂಡ ವಿಜಯದಿಂದ ರಾಮನ್ನರ ಖ್ಯಾತಿ ಏರಿತು; ಜೊತೆಗೆ ಅವರಿಗೆ ದೊರೆತ ಬಹುಮಾನ ಗೌರವಗಳ ಸಂಖ್ಯೆಯೂ ಏರಿತು – ಬ್ರಿಟಿಷ್ ಸರ್ಕಾರದ ನೈಟ್ (ಖುಡಿ) ಪದವಿ (೧೯೨೯), ಅಣುರೋಹಿತಗಳನ್ನು ಕುರಿತು ಚರ್ಚೆಯನ್ನು ಉದ್ಘಾಟಿಸಲು ಫ್ಯಾರಡೇ ಸೊಸೈಟಿಯಿಂದ ಆಹ್ವಾನ, ರೋಮ್‌ನ ವಿಜ್ಞಾನ ಸಂಘದಿಂದ Matteucci ಪದಕ (೧೯೩೦), ಫ್ರೀ ಬರ್ಗ್ ವಿಶ್ವವಿದ್ಯಾಲಯದ ಗೌರವ ಡಾಕ್ಟೋರೇಟ್ ಪದವಿ (೧೯೩೦), ಗ್ಲಾಸ್ಗೊ ವಿಶ್ವವಿದ್ಯಾಲಯ (೧೯೩೨), ಕೊಲ್ಕಟ, ಮುಂಬಯಿ, ಮದರಾಸು, ಬನಾರಸ್, ಡಾಕ್ಕಾ, ಪಾಟ್ನಾ, ಮೈಸೂರು ಮೊದಲಾದ ವಿವಿಧ ಭಾರತೀಯ ವಿಶ್ವವಿದ್ಯಾಲಯಗಳ ಗೌರವ ಡಾಕ್ಟೊರೇಟ್ ಪದವಿಗಳು, ಅಂತಾರಾಷ್ಟ್ರೀಯ ಲೆನಿನ್ ಬಹುಮಾನ (೧೯೫೭), ಫ್ರೆಂಚ್ ಅಕಾಡೆಮಿ ಆಫ್ ಸೈನ್ಸಸ್ಸಿನ ವಿದೇಶೀ ಸದಸ್ಯತ್ವ (೧೯೪೯), ಸೋವಿಯತ್ ಅಕಾಡೆಮಿ ಆಫ್ ಸೈನ್ಸಸ್ಸಿನ ವಿದೇಶೀ ಸದಸ್ಯತ್ವ (೧೯೫೭), ಭಾರತ ಗಣರಾಜ್ಯದ ಪ್ರಥಮ ರಾಷ್ಟ್ರೀಯ ಪ್ರಾಧ್ಯಾಪಕತ್ವ (೧೯೪೯), ಭಾರತರತ್ನ ಪ್ರಶಸ್ತಿ (೧೯೫೪), ಇತ್ಯಾದಿ. ಗೌರವ ಪರಂಪರೆಯಲ್ಲಿ ಕಳಶಪ್ರಾಯವಾದದ್ದು ೧೯೩೦ರಲ್ಲಿ ದೊರೆತ ಭೌತವಿಜ್ಞಾನದ ನೊಬೆಲ್ ಪಾರಿತೋಷಿಕ.

೧೮೯೫ರಲ್ಲಿ ಆಲ್ಫ್ರೆಡ್ ನೊಬೆಲ್ ಮಹಾಶಯನ ಔದಾರ್ಯದಿಂದ ಈ ನಿಧಿ ಪ್ರಾರಂಭವಾಯಿತು. ಇದರ ವಿತರಣೆ ಕುರಿತು ಆತ ವಿಧಿಸಿರುವ ನಿಯಮದ ಪ್ರಕಾರ, "...ಮೂಲಧನದ ಮೇಲೆ ಬರುವ ಬಡ್ಡಿಯನ್ನು ಐದು ಸಮಭಾಗ ಮಾಡಿ ಒಂದು ಭಾಗವನ್ನು ಭೌತವಿಜ್ಞಾನದಲ್ಲಿ ಹಿಂದಿನ ವರ್ಷ ಮಹಾಸಂಶೋಧನೆ ಮಾಡಿದ... ವ್ಯಕ್ತಿಗೆ ಕೊಡಬೇಕು. ಹೀಗೆ ಪಾರಿತೋಷಿಕ ನೀಡುವಾಗ ವ್ಯಕ್ತಿಯ ಯೋಗ್ಯತೆಯೊಂದೇ ನಿರ್ಣಾಯಕವಾಗಿರಬೇಕೇ ವಿನಾ ಆತನ ರಾಷ್ಟ್ರ, ವರ್ಣ ಮುಂತಾದವಲ್ಲ."

ಸ್ವೀಡನ್ನಿನಲ್ಲಿ ನೊಬೆಲ್ ಪಾರಿತೋಷಿಕ ಪಡೆಯಲು ಹೋದಾಗ ರಾಮನ್ ತಮ್ಮ ಹೆಸರಿನ ಪರಿಣಾಮವನ್ನು ವಿಜ್ಞಾನಿಗಳ ಎದುರು ಪ್ರದರ್ಶಿಸಿದರು. ದ್ರವವಸ್ತುಗಳ ಮೂಲಕ ಬೆಳಕು ಹಾಯುವಾಗ ಅದರ ಚದರಿಕೆ ಕುರಿತ ಈ ಪ್ರಾಯೋಗಿಕ ವಿವರಣೆಗೆ ಅವರು ಅಂದು ಅಲ್ಕೊಹಾಲನ್ನು ಆಯ್ದುಕೊಂಡಿದ್ದರು. ಪ್ರಯೋಗ, ಭಾಷಣ ಎಲ್ಲ ಮುಗಿದುವು. ಎಲ್ಲರೂ ಸಾಮೂಹಿಕ ಭೋಜನಕ್ಕಾಗಿ ಕುಳಿತರು. ವಿದೇಶೀ ಸಂಪ್ರದಾಯದಂತೆ ಮದ್ಯಪಾನವೂ (ಆಲ್ಕೊಹಾಲ್) ಎಂದಿನಂತೆ ನಡೆದಿತ್ತು. ಅವರ ಒತ್ತಿಗೆ ಕುಳಿತಿದ್ದ ವಿಜ್ಞಾನಿಯೊಬ್ಬರು ರಾಮನ್ನರನ್ನು ಕೆಣಕಿದರು, "ಸರಿ ಈ ತನಕ ನೀವು ತೋರಿಸಿದ್ದು ಅಲ್ಕೊಹಾಲಿನ ಮೇಲೆ ರಾಮನ್ ಪರಿಣಾಮವನ್ನು. ಈಗ ರಾಮನ್ ಮೇಲೆ

ಅಲ್ಕೊಹಾಲ್ ಪರಿಣಾಮ ನೋಡಲು ನಮಗೆ ಅನುಮಾಡಿಕೊಡಿ!" ನಗುವಿನ ಅಲೆ ಎದ್ದಿತು. ಆದರೆ ಸಂಪ್ರದಾಯನಿಷ್ಠ ರಾಮನ್ ಈ ಕೋರಿಕೆಯನ್ನು ಈಡೇರಿಸಲಿಲ್ಲ.

ಕೊಲ್ಕಟ ನಗರ ಅವರ ಸಂಶೋಧನ ಕ್ಷೇತ್ರವಾದರೂ ಬೆಂಗಳೂರು ಅವರ ಪ್ರೀತಿಯ ನಗರ. ೧೯೨೭ರಿಂದಲೂ ಅವರು ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸಿನ ವರಿಷ್ಠ ಆಡಳಿತ ಸಭೆಯ ಸದಸ್ಯರಾಗಿದ್ದರು. ಸಂಸ್ಥೆಯ ಪ್ರಗತಿ ಕುರಿತು ಅವರಿಗೆ ಅಪಾರ ಆಸಕ್ತಿ. ಅದೊಂದು ನಿಜಕ್ಕೂ ಅಖಿಲ ಭಾರತೀಯ ಸಂಸ್ಥೆಯಾಗಬೇಕು, ಅದರ ಎಲ್ಲ ಪ್ರಾಧ್ಯಾಪಕರೂ ಭಾರತೀಯರೇ ಆಗಬೇಕು, ಈ ವಿಧಾನವೊಂದರಿಂದಲೇ ಭಾರತೀಯರಿಗೆ ತಮ್ಮ ಬಾಂಧವರ ಶಕ್ತಿ ಸಾಮರ್ಥ್ಯ ಕುರಿತು ವಿಶ್ವಾಸ ಅಭಿಮಾನ ಮೂಡಲು ಸಾಧ್ಯ ಎಂದು ರಾಮನ್ ದೃಢವಾಗಿ ನಂಬಿದ್ದರು. ವಿದೇಶೀ ದೇವಾಲಯದ ಪ್ರದಕ್ಷಿಣೆಯ ವಿನಾ ಇಲ್ಲಿ ಮೂಲಭೂತ ಸಂಶೋಧನೆ ಸಾಧ್ಯವಿಲ್ಲ ಎನ್ನುವ ನಿರಭಿಮಾನಿಗಳಿಗೆ ಈ ಸಂಸ್ಥೆ ಯೋಗ್ಯ ಸವಾಲಾಗಬೇಕು ಎಂಬುದು ಅವರ ಆಸೆ.

ರಾಮನ್ನರ ಜೀವನದ ಚಿತ್ರಗಳಲ್ಲಿ ಲಿಖಿತವಾಗದ ಒಂದು ಅಂಶವೆಂದರೆ ಕೊಲ್ಕಟದಿಂದ ಅವರ ನಿರ್ಗಮನದ ಕಾರಣ. ಅವರ ಯಶಸ್ಸು ಅಂತಾರಾಷ್ಟ್ರೀಯ ಸ್ಥಾನಮಾನವನ್ನು ಭಾರತೀಯ ವಿಜ್ಞಾನರಂಗಕ್ಕೆ ತಂದುಕೊಟ್ಟಿದ್ದಾಗ, ಅವರೇ ಕಟ್ಟಿದ ಮಂದಿರವನ್ನು ತೊರೆದು ದೂರದ ಬೆಂಗಳೂರಿಗೆ ಹೋಗಿ ಹೊಸ ಮಂದಿರದಲ್ಲಿ ಹೊಸತಾಗಿ ಕೆಲಸ ಆರಂಭಿಸಬೇಕಾಯಿತು. ಅದು ಅವರಿಗೆ ಪ್ರಿಯವಾದ ಕಾರ್ಯವಾಗಿರಲಿಲ್ಲವಾದರೂ ಅನಿವಾರ್ಯವಾಯಿತು. ಆಶುತೋಷ ಮುಖರ್ಜಿಯವರ ನಿಧನದ (೨೫ ಮೇ ೧೯೨೪) ತರುವಾಯ ಕೊಲ್ಕಟದ ಹವೆ ಬದಲಾಯಿತು.

"ಪ್ರಾಂತೀಯ ಸಂಕುಚಿತ ಮನೋಭಾವನೆಗಳಿಂದ ಅಲ್ಲಿಯ ವಾಸ್ತವ್ಯ ನನಗೆ ಅಸಹನೀಯವಾಯಿತು. ವಿಜ್ಞಾನಿಗೆ ಬೇಕಾದದ್ದೇನು? ವಿಶಾಲ ಮನೋಬುದ್ಧಿ ಇರುವ ನಿರ್ಮಲ ವಾತಾವರಣ. ಅವನ ಪ್ರತಿಭೆ ಆರ್ಥಿಕ ಬಂಧನಗಳಿಂದ ಮತ್ತು ಆಡಳಿತೆಯ ಆತಂಕಗಳಿಂದ ಕುಂಠಿತವಾಗುತ್ತದೆ. ಜೊತೆಗೆ ಇತರ ಅವೈಜ್ಞಾನಿಕ ಕ್ಷುದ್ರ ಕಾರಣಗಳೂ ಒಂದುಗೂಡಿದರೆ ವಿಜ್ಞಾನಿಯ ಸಮಾಧಿ ಆದಂತೆಯೇ. ರಾಮನ್ನರನ್ನು ಅಲ್ಲಿಂದ ಅವರು ಅಟ್ಟಿದಾಗ ಭಾರತೀಯ ವಿಜ್ಞಾನ ಆರು ಅಡಿ ಆಳದಲ್ಲಿ ಹುಗಿಯಲ್ಪಟ್ಟಿತು. ನೊಬೆಲ್ ಪಾರಿತೋಷಿಕ ನನಗೆ ಬಂದದ್ದು ಮುಖ್ಯವಲ್ಲ. ಇಷ್ಟು ದೊಡ್ಡ ದೇಶ, ಪುರಾತನ ಸಂಸ್ಕೃತಿಯ ತವರೂರು, ಇಲ್ಲಿಯ ಜನ ಬೇರೆ ಯಾರಿಗಿಂತಲೂ ಬುದ್ಧಿವಂತಿಕೆಯಲ್ಲಾಗಲೀ ಸಾಹಸಪ್ರಿಯತೆಯಲ್ಲಾಗಲೀ ಕಡಿಮೆಯವರಲ್ಲ. ಆದರೂ ೧೯೩೦ರಿಂದೀಚೆಗೆ ಪುನಃ ಇಂಥ ಪಾರಿತೋಷಿಕಗಳು ನಮ್ಮ ದೇಶಕ್ಕೆ ಬರಲಿಲ್ಲವಲ್ಲ ಎಂದು ನನಗೆ ವ್ಯಥೆ ಆಗುತ್ತಿದೆ" ಎಂದು ಉದ್ವಿಗ್ನತೆಯಿಂದ ನನ್ನೊಡನೆ ಹೇಳಿದರು (೧೯೬೮).

೧೯೩೩ರಲ್ಲಿ ರಾಮನ್ ಕೊಲ್ಕಟದಿಂದ ಬೆಂಗಳೂರಿಗೆ ಬಂದರು. ಈಗ ಅವರು ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸಿನ ನಿರ್ದೇಶಕರು. ಅಂದರೆ ವರಿಷ್ಠ ಅಧಿಕಾರಿಗಳು. ಈ ಸ್ಥಾನವನ್ನು ಅಲಂಕರಿಸಿದ ಪ್ರಥಮ ಭಾರತೀಯರಿವರು. ಇದು ಆಡಳಿತೆಯ ಮತ್ತು ಸಂಶೋಧನೆಯ ಸಮಾನ ಹೊಣೆಗಾರಿಕೆ ಇದ್ದ ಹುದ್ದೆ. ಇಲ್ಲಿ ಭೌತವಿಜ್ಞಾನದ ಒಂದು ಹೊಸ ವಿಭಾಗವನ್ನೇ ಪ್ರಾರಂಭಿಸಿ ಅದರಲ್ಲಿ ಸಕಲ ಆಧುನಿಕ ಉಪಕರಣಗಳೂ ದೊರೆಯುವಂತೆ ಏರ್ಪಡಿಸಲಾಯಿತು. ಪ್ರಪಂಚದ ಅತ್ಯುತ್ಕೃಷ್ಟ ರೋಹಿತ ಪ್ರಯೋಗ ಮಂದಿರಗಳಲ್ಲಿ ಇದೂ ಒಂದು. ದೃಗ್ವಿಜ್ಞಾನ ವಿಶೇಷ ಕುತೂಹಲ ಕ್ಷೇತ್ರ. ತಮ್ಮ ಜನಪ್ರಿಯ ವಿಜ್ಞಾನ ಭಾಷಣಗಳಲ್ಲಿ ರಾಮನ್ನರು 'ಸ್ಫಟಿಕಗಳ ರಾಜ ವಜ್ರ' ಎಂದು ಪರಿಚಯಿಸುತ್ತಿದ್ದುದು ವಾಡಿಕೆ.

೧೯೩೪ರಲ್ಲಿ ರಾಮನ್ ನೇತೃತ್ವದಲ್ಲಿ ಇಂಡಿಯನ್ ಅಕಾಡೆಮಿ ಆಫ್ ಸೈನ್ಸಸ್ ಸಂಸ್ಥೆ ಸ್ಥಾಪಿತವಾಯಿತು. ಇವರೇ ಅದರ ಉಸಿರು ಮತ್ತು ಒಡಲು. ಅದರ ಉದ್ದೇಶಗಳಿಷ್ಟು – ಪ್ರಥಮ ದರ್ಜೆಯ ಸಂಶೋಧನ ಪತ್ರಗಳ ಪ್ರಕಟಣೆ; ವಿಜ್ಞಾನಸಂಬಂಧ ಸಮಸ್ಯೆಗಳ ಚರ್ಚೆಗೆ ಹೊಸ ವೇದಿಕೆ ಒದಗಿಸುವುದು ಮತ್ತು ಭಾರತದ ವೈಜ್ಞಾನಿಕ ಹಾಗೂ ಔದ್ಯಮಿಕ ಸಂಶೋಧನೆಗಳ ಸಂಘಟನೆ. ಈ ಉದ್ದೇಶ ಸಿದ್ಧಿಸಲು ಸಂಶೋಧನ ಮಾಸಿಕವನ್ನೂ (ಪ್ರೊಸೀಡಿಂಗ್ಸ್ ಆಫ್ ದಿ ಇಂಡಿಯನ್ ಅಕಾಡೆಮಿ) ಪ್ರಾರಂಭಿಸಲಾಯಿತು. ಇದೇ ವೇಳೆ (೧೯೩೫) ಅಂದಿನ ಮೈಸೂರು ಸರಕಾರ ವಿಜ್ಞಾನದ ಮುನ್ನಡೆಗೋಸ್ಕರ ಒಂದು ದಿಟ್ಟ ಮುನ್ನಡಿಯಿಟ್ಟಿತು: ಇಂಡಿಯನ್ ಅಕಾಡೆಮಿ ಆಫ್ ಸೈನ್ಸಸ್ ಸಂಸ್ಥೆಗೆ ಬೆಂಗಳೂರು ನಗರದ ಹೊರವಲಯದಲ್ಲಿ ಮೊದಲು ೧೯, ತರುವಾಯ ೫, ಹೀಗೆ ಒಟ್ಟು ೨೪ ಎಕರೆ ವಿಸ್ತೀರ್ಣದ ಪ್ರಶಸ್ತ ಭೂಮಿಯನ್ನು ದಾನವಾಗಿ ಮಂಜೂರು ಮಾಡಿತು. ಕೆಲವು ವರ್ಷಾನಂತರ ಪಕ್ಕದ ೫ ಎಕರೆ ಸ್ಥಳವನ್ನು ರಾಮನ್ ತಮ್ಮ ಸಂಸ್ಥೆಗಾಗಿ ಖರೀದಿಸಿದರು. ಆ ತನಕ ಬೇರೆ ಪ್ರಯೋಗಮಂದಿರಗಳಲ್ಲಿ ತಮ್ಮ ಸಂಶೋಧನೆಯನ್ನು ನಡೆಸಿದ್ದ ಈ ಕನಸುಗಾರನಿಗೆ ಇನ್ನು ಸ್ವಂತ ಕಲ್ಪನಾನುಸಾರ ನಿರ್ಮಿಸಬಹುದಾದ ವಿಜ್ಞಾನಮಂದಿರದಲ್ಲಿ ಸಂಶೋಧನೆ

ಮುಂದುವರಿಸಲು ಅವಕಾಶ ಕೂಡಿ ಬಂತು. ಅಕಾಡೆಮಿಯ ಆಡಳಿತ ವರ್ಗ ಹೊಸ ಸಂಶೋಧನ ಮಂದಿರ ಕಟ್ಟುವಲ್ಲಿ ರಾಮನ್ನರಿಗೆ ಪೂರ್ಣ ಸ್ವಾತಂತ್ರ್ಯ ಕೊಟ್ಟಿತು. ಇಂಡಿಯನ್ ಇನ್ಸ್ಟಿಟ್ಯೂಟಿನ ನಿರ್ದೇಶಕರಾಗಿದ್ದಾಗಲೇ ಈ ಕೆಲಸವನ್ನು ಇವರು ವಹಿಸಿಕೊಂಡು ದಕ್ಷತೆಯಿಂದ ಹೊಣೆ ನಿರ್ವಹಿಸತೊಡಗಿದರು. ರಾಮನ್ ಮಂದಿರದ ಕಟ್ಟಡಗಳ ಕೆಲಸ ೧೯೪೩ರಲ್ಲಿ ಆರಂಭವಾಗಿ ೧೯೪೭ರಲ್ಲಿ ಮುಗಿಯಿತು. ಕಚೇರಿ ಕೆಲಸವಾಗಲಿ, ಹೊಸತೊಂದು ಪ್ರಯೋಗಕ್ಕೆ ಉಪಕರಣಗಳನ್ನೂ ವಿಧಾನವನ್ನೂ ಅಳವಡಿಸುವುದಾಗಲಿ, ಹೊಸ ಮಂದಿರದ ನಿರ್ಮಾಣವಾಗಲಿ – ಎಲ್ಲೆಲ್ಲಿಯೂ ರಾಮನ್ ಶಿಸ್ತುಗಾರ, ಸೌಂದರ್ಯಪ್ರಿಯ ಮತ್ತು ಕರ್ತೃತ್ವಶಾಲಿ. ಯಾವ ಒಂದು ಸೂಕ್ಷ್ಮ ವಿವರವನ್ನೂ ಅವರು ಸನ್ನಿವೇಶದ ಸೆಳೆತಕ್ಕೆ ಬಿಡರು; ಅಷ್ಟೇ ಅಲ್ಲ ಸಮಗ್ರತೆಯ ಪ್ರಜ್ಞೆಯನ್ನೂ ಕಳೆದುಕೊಳ್ಳರು.

೧೯೩೩ರಿಂದ ೧೯೩೭ರ ಕೊನೆಯತನಕ ರಾಮನ್, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸಿನ ನಿರ್ದೇಶಕರಾಗಿ ಕೆಲಸ ಮಾಡಿದರು. ಗವರ್ನಿಂಗ್ ಕೌನ್ಸಿಲ್ಲಿನೊಡನೆ ಮತಭೇದ ಉಂಟಾದುದರಿಂದ ನಿರ್ದೇಶಕತ್ವಕ್ಕೆ ರಾಜೀನಾಮೆಯಿತ್ತರು. ಆದರೂ ಮುಂದಿನ ಒಂಬತ್ತು ವರ್ಷ ಪರ್ಯಂತ ಭೌತವಿಜ್ಞಾನ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದರು. ಈ ಅವಧಿಯಲ್ಲಿ ಅಕಾಡೆಮಿಯೂ ಪರಿಪುಷ್ಟವಾಗಿ ಬೆಳೆಯಿತು. ಬಹುಶಃ ಏಕಕಾಲದಲ್ಲಿ ಎರಡು ಕೆಲಸಗಳ ಹೊಣೆ (ಹೊರೆ) ಈ ಚೇತನಕ್ಕೆ ಬೇಕೇಬೇಕಾಗಿತ್ತು ಎಂದು ತೋರುವುದು. ಇಂಡಿಯನ್ ಇನ್ಸ್ಟಿಟ್ಯೂಟಿನಿಂದ ನಿವೃತ್ತರಾದ ತರುವಾಯ, ೧೯೪೮, ಅಕಾಡೆಮಿಯ ಪ್ರಯೋಗಾಲಯಕ್ಕೆ ತಮ್ಮ ಕಾರ್ಯಕ್ಷೇತ್ರವನ್ನು ವರ್ಗಾಯಿಸಿದರು. ಅದರ ಆಡಳಿತವರ್ಗ ಸರ್ವಾನುಮತದಿಂದ ಈ ಮಂದಿರವನ್ನು ರಾಮನ್ ರಿಸರ್ಚ್ ಇನ್ಸ್ಟಿಟ್ಯೂಟ್ ಎಂದೇ ಹೆಸರಿಸಿತು.

ಇದರಲ್ಲಿ ರಾಮನ್ ಸ್ವಹಸ್ತದಲ್ಲಿ ಬರೆದು ರುಜು ಮಾಡಿ (ಇಂಗ್ಲಿಷ್) ಇಟ್ಟಿರುವ ಸಂದೇಶ ಹೀಗಿದೆ, "ನಮ್ಮ ಪ್ರಾಚೀನ ರಾಷ್ಟ್ರಕ್ಕೆ ತಕ್ಕುದಾದಂಥ ವಿಜ್ಞಾನ ಸಂಶೋಧನ ಕೇಂದ್ರವನ್ನು ಅಸ್ತಿತ್ವಕ್ಕೆ ತರಬೇಕೆಂಬುದು ನನ್ನ ತೀವ್ರ ಅಭಿಲಾಷೆ. ಈ ಕೇಂದ್ರದಲ್ಲಿ ನಮ್ಮ ದೇಶದ ತೀಕ್ಷ್ಣಮತಿಗಳು ವಿಶ್ವರಹಸ್ಯಗಳನ್ನು ಶೋಧಿಸಬೇಕು; ಮತ್ತು ಹಾಗೆ ಮಾಡುವುದರ ಮೂಲಕ ವಿಶ್ವದ ಚಟುವಟಿಕೆಗಳನ್ನು ನಿಯಂತ್ರಿಸುವ ಅತೀತ ಶಕ್ತಿಯನ್ನು ಗ್ರಹಿಸಲು ನಮಗೆ ನೆರವಾಗಬೇಕು. ಆತನ ದಿವ್ಯ ಕೃಪೆಯಿಂದ ನಮ್ಮ ದೇಶಪ್ರೇಮಿಗಳೆಲ್ಲರೂ ಈ ಕಾರಣವನ್ನು ಪೋಷಿಸುವ ವಿಧಾನವನ್ನು ಕಂಡಾಗ ಮಾತ್ರ ಈ ಗುರಿ ಸಿದ್ಧಿಸೀತು."
ಇಸವಿ ೧೯೬೭ರಲ್ಲಿ ನಾನು ಕಂಡ ದೃಶ್ಯವನ್ನೂ ಪಡೆದ ಅನುಭವವನ್ನೂ ಮುಂದಿನ ಅಧ್ಯಾಯದಲ್ಲಿ ವಿವರಿಸುತ್ತೇನೆ.

ಸಿಂಹದ ಗವಿ ಹೊಕ್ಕ ಮೇಕೆ!
ಅಧ್ಯಾಯ ಅರವತ್ತ ಮೂರು

ಅಂತಾರಾಷ್ಟ್ರೀಯ ಖ್ಯಾತಿ ಪಡೆದಿರುವ ಇಂಡಿಯನ್ ಅಕಾಡೆಮಿ ಆಫ್ ಸೈನ್ಸಸ್ ಬೆಂಗಳೂರಿನ ಹೆಬ್ಬಾಳದಲ್ಲಿದೆ. ವಿಜ್ಞಾನದ ವಿದ್ಯಾರ್ಥಿಗಳಿಗೂ ಬೆಂಗಳೂರಿನ ನಾಗರಿಕರಿಗೂ ಇದು ರಾಮನ್ ಇನ್ಸ್ಟಿಟ್ಯೂಟ್ ಎಂದೇ ಪರಿಚಿತವಾಗಿದೆ. ಇದನ್ನು ಪ್ರವೇಶಿಸುವಾಗ ಮೊದಲು ನಮ್ಮ ಕಣ್ಣು ಕುಕ್ಕುವ ಫಲಕ ಭಯಾಕಾರಕವೇ ಎಂದೆನ್ನಬಹುದು: `The Institute is not open to Visitors. Please do not disturb us.' 'ಬಾಗಿಲೊಳು ಕೈ ಮುಗಿದು ಒಳಗೆ ಬಾ ಯಾತ್ರಿಕನೆ' ಎನ್ನುವ ಭಾವದ ನೇರರೂಪ, ಚುಚ್ಚುರೂಪ ಎನ್ನಿಬೇಕಾದರೆ. ಗಿಡಮರ ಹೂದೋಟಗಳಿಂದ ತುಂಬಿರುವ ವಿಶಾಲ ಆವರಣ ರಚಿಸುವ ಪ್ರಶಾಂತ ವಾತಾವರಣ. ಪ್ರತಿ ಅಂಗುಲವೂ ರಾಮನ್ನರ ಸೌಂದರ್ಯಪ್ರಿಯತೆಗೆ ಹೇಗೊ ನಿಸರ್ಗದ ಚೆಲುವಿಗೂ ಹಾಗೆ ಸಾಕ್ಷಿ. ಬೆಂಗಳೂರಿನ ಗಲಭೆ ಗೊಂದಲ ಇಲ್ಲಿಲ್ಲ; ಕಲುಷಿತ ವಾತಾವರಣವೂ ಇಲ್ಲ. ಕಕ್ಕಟ್ಟು ದಾಟಿ ಒಳಗೆ ಕಾಲಿಟ್ಟೊಡನೆ ಎಡಗಡೆ ಎಲೆಗಳ ಅಡಿಯಲ್ಲಿ ಸಂಸ್ಥೆಯ ಕಚೇರಿ ಇದೆ. ಈ ಕಡೆ ಹೋಗದೆ ನೇರದಾರಿಯ ಮೇಲೆ ಸ್ವಲ್ಪ ದೂರ ನಡೆಯುವಾಗ ಬಲಗಡೆ ಇರುವ ಮಹಾಸೌಧ ವಿಜ್ಞಾನಿಯ ಚಟುವಟಿಕೆಯ ರಂಗ, ಆತನ ಕನಸಿನ ನನಸು. ಎಡಗಡೆ ಒಂದು ಆಕಾಶ ವೀಕ್ಷಣ ಗೋಪುರವೂ ಇದೆ. ಇವೆರಡನ್ನೂ ಬಿಟ್ಟು ಅದೇ ದಾರಿಯಲ್ಲಿ ಮುನ್ನಡೆದರೆ ರಾಮನ್ನರ ಭವ್ಯ ನಿವಾಸ ಎದುರಾಗುತ್ತದೆ. ಅಲ್ಲಿಯ ಚೇತನ ಲೋಕಸುಂದರಿ ರಾಮನ್ – ಮಹಾವಿಜ್ಞಾನಿಯ ಸಮರ್ಥ ಪತ್ನಿ.

ಇಡೀ ನಿವೇಶನದಲ್ಲಿ ಅತಿ ಎತ್ತರವಾದ ಹಾಗೂ ರಾಜಮಾರ್ಗದಿಂದ ಅತಿ ದೂರವಾದ ಪಾಯದ ಮೇಲೆ ವಿಜ್ಞಾನಮಂದಿರ ನಿಂತಿದೆ. ಇಲ್ಲಿ ಕೆಲಸ ಮಾಡುವ ಯಾವ ವಿಜ್ಞಾನಿಗೂ ಆತನ ಉಪಕರಣಕ್ಕೂ ನಗರದ ಗಲಭೆ ಕಂಪನಗಳು ತಟ್ಟದಂಥ ಏರ್ಪಾಡು ಇದು. ವಿಶಾಲ ಅಂಗಳ. ಎದುರು ಎತ್ತರ ತಳಪಾಯ. ಮೆಟ್ಟಲು ಏರಿದರೆ ಉದ್ದ ಜಗಲಿ, ಕಟ್ಟಡದ ಎಡಕೊನೆಯಲ್ಲಿ ಮುಖ್ಯಪ್ರವೇಶದ್ವಾರವಿದೆ; ಅಲ್ಲೇ ಉಪ್ಪರಿಗೆ ಏರಲು ಪಾವಟಿಗೆ ಸಾಲೂ ಉಂಟು. ಜಗಲಿಯ ಬಲಕೊನೆಯಲ್ಲಿ ಅಂಗಳಕ್ಕೆ ಚಾಚಿರುವ ಒಂದು ಕೊಠಡಿಯೇ ರಾಮನ್ನರ ಅಧಿಕೃತ ಕೊಠಡಿ. ಏಕ ಅಂತಸ್ತಿನ ಈ ಸೌಧದಲ್ಲಿ ಪ್ರಯೋಗ ಕೊಠಡಿಗಳು ಮತ್ತು ಪುಸ್ತಕ ಭಂಡಾರ ನೆಲ ಹಂತದಲ್ಲಿವೆ. ಮಹಡಿಯ ಮೇಲೆ ವಸ್ತು ಸಂಗ್ರಹಾಲಯ, ಮತ್ತು ಇನ್ನೂರು ಮಂದಿ ಕುಳಿತು ಆಲಿಸುವಂಥ ಭಾಷಣ ಮಂದಿರ ಇವೆ.

ರಾಮನ್ ತಮ್ಮ ತನುಮನ ಧನಗಳನ್ನು ಅಕ್ಷರಶಃ ಅರ್ಪಿಸಿ ಕಟ್ಟಿಸಿರುವ ಈ ಮಹಾಮಂದಿರ ಒಂದು ದೇಗುಲ. ಇದರ ದರ್ಶನ ಯಾರಿಗೂ ಜೀವನದಲ್ಲಿ ಒಂದು ಅಪೂರ್ವಾನುಭವ. ಅದೂ ರಾಮನ್ನರೇ ನಮ್ಮನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಕರೆದೊಯ್ಯುತ್ತ ಒಂದೊಂದೂ ಉಪಕರಣದ ವೈಶಿಷ್ಟ್ಯವನ್ನು ಅವರ ವಿಶಿಷ್ಟ ಶೈಲಿಯಲ್ಲಿ ಭಾವಭಂಗಿ ಸಮೇತ ವಿವರಿಸಬೇಕು. ಆಗಾಗ "Do you follow what I say? Do you see that?" ಎಂದು ಮುಂತಾಗಿ ಕೈಗಳನ್ನು ಕೊಡಹಿ ಕಣ್ಣುಗಳಿಂದ ಮಿಂಚು ಬೀರಿ ತುಟಿಗಳ ಮೇಲೆ ತುಂಟ ನಗೆ ಸೂಸಿ ಪ್ರಶ್ನಿಸಬೇಕು – ಇದು ವರ್ಣನಾತೀತ. ಒಬ್ಬ ವ್ಯಕ್ತಿ, ಒಂದು ಜೀವಮಾನಕಾಲದಲ್ಲಿ ಇಷ್ಟನ್ನು ಇಷ್ಟು ಅಚ್ಚುಕಟ್ಟಾಗಿ ನಿರ್ಮಿಸುವುದು ಸಾಧ್ಯವೇ, ಮೇಲಾಗಿ ಆತ ಮೂಲಭೂತ ಸಂಶೋಧನೆಗಳಲ್ಲಿ ತೀವ್ರ ಆಸಕ್ತಿ ತಳೆದು ಅಲ್ಲಿ ಗಮನಾರ್ಹ ಕೊಡುಗೆಗಳನ್ನು ನೀಡುವುದು ಕೂಡ ಶಕ್ಯವೇ ಎಂದು ಸಾಮಾನ್ಯರಿಗೆ ಸಂದೇಹ ಬಂದರೆ ಅದಕ್ಕೆ ಉತ್ತರ, ಹೌದು – ರಾಮನ್. ಪುಸ್ತಕ ಪ್ರೇಮಿಗಳು ಈ ಗ್ರಂಥಾಲಯದಲ್ಲಿ ಕಾಣುವುದೇನು? ಇದೊಂದು ಅತ್ಯಾಧುನಿಕ ಸಮಗ್ರ ವಿಜ್ಞಾನಗ್ರಂಥ ಸಂಗ್ರಹ ಮಾತ್ರವಲ್ಲ. ಪ್ರತಿಯೊಂದು ಗ್ರಂಥದ ಮೇಲೂ ರಾಮನ್ ನಿಶಿತಮತಿಯ ಕ್ಷೇಪ – ಎಂದರೆ ರಾಮನ್ ಪರಿಣಾಮವನ್ನು ನೋಡಬಹುದು.

ಪರಮಶಿವಯ್ಯನವರ ಮಾತಿನಲ್ಲಿ, "ದಿನದ ಕೆಲಸ ಮುಗಿಸಿ ಮಲಗುವ ಮುಂದೆ ಪ್ರತಿ ರಾತ್ರಿ ಹೊಸತೊಂದು ಭೌತವಿಜ್ಞಾನ ಪುಸ್ತಕವನ್ನು ಓದುವ ನಿಯಮವನ್ನು ಅವರು ಸರ್ವಥಾ ತಪ್ಪಿಸುತ್ತಿರಲಿಲ್ಲ. ಬೆಳಗಾವಿಗೆ ಅವರು ಬಂದಾಗ ರೋಟರಿಯಲ್ಲಿ ಭಾಷಣ ಮುಗಿಸಿ ಬಿಡಾರಕ್ಕೆ ಮರಳಿದ್ದು ರಾತ್ರಿ ೧ ಗಂಟೆಗೆ. ನಾನು ನೇರವಾಗಿ ಮಲಗುವುದಕ್ಕೆ ಹೊರಟೆ. ಒಡನೆಯ ಬಂತು ಅವರ ಗುರುದಂಡದ ಪ್ರಹಾರ 'ಬಲು ದೊಡ್ಡ ಮನುಷ್ಯನಾಗಿ ಬಿಟ್ಟೆ; ನಿತ್ಯರಾತ್ರಿ ಒಂದು ಹೊಸ ಭೌತವಿಜ್ಞಾನ ಪುಸ್ತಕ ಓದಬೇಕೆಂದು ನಾನು ಹೇಳಿದ್ದನ್ನು ಮರೆತೇ ಬಿಟ್ಟೆಯಲ್ಲ!' ಹೀಗೆಂದು ಹೇಳಿ ತಮ್ಮ ಟ್ರಂಕಿನಿಂದ ಅದೇ ಪ್ರಕಟವಾಗಿದ್ದ ಸ್ಲೇಟರ್ ಮತ್ತು ಫ್ರಾಂಕ್ ವಿರಚಿತ Introduction to theoretical physics ಪುಸ್ತಕವನ್ನು ತೆಗೆದು ನನಗೆ ಕೊಟ್ಟರು, ತಾವು ಇನ್ನೊಂದನ್ನು ಹಿಡಿದುಕೊಂಡು ಕುಳಿತರು. ಓದು ಮುಗಿಸುವಾಗ ಬೆಳಗಿನ ೪ ಗಂಟೆ."

A (Antropology)ಯಿಂದ Z (Zoology)ವರೆಗಿನ ಅವರ ಆಸಕ್ತಿಯ ವಿಶ್ವಕೋಶ ವ್ಯಾಪ್ತಿ ಒಂದು ಪವಾಡವೇ ಸರಿ. ಗ್ರಂಥಭಂಡಾರದಿಂದ ವಸ್ತು ಸಂಗ್ರಹಾಲಯವನ್ನು ಪ್ರವೇಶಿಸಿದಿರೋ ಅಲ್ಲೊಂದು ಡಿಸ್ನಿ ಮಾಯಾಲೋಕ ಕಾಣುವಿರಿ. ರಾಮಾಯಣದ ಸ್ವಯಂ ಪ್ರಭೆಯ ಪ್ರಪಂಚ. ಹಕ್ಕಿಗಳು, ಕೀಟಗಳು, ಉರಗಗಳು, ಪತಂಗಗಳು ವಿವಿಧ ಶಿಲೆಗಳು, ಹರಳುಗಳು, ವಜ್ರಗಳು – ಒಂದೇ ಎರಡೇ? ದಿವಸಗಟ್ಟಲೆ ನೋಡಿ ಪರೀಕ್ಷಿಸಿದರೂ ಮುಗಿಯದ ಸಂಗ್ರಹವಿದು. ವಜ್ರ ಪರೀಕ್ಷೆ ರಾಮನ್ನರ ಅಸಂಖ್ಯಾತ ಆಸಕ್ತಿಗಳ ಪೈಕಿ ಒಂದು. ಒಂದು ಕಾಲದಲ್ಲಿ ಇದರ ಹುಚ್ಚು ಅವರನ್ನು ವಿಪರೀತವಾಗಿ ಆವರಿಸಿತ್ತು. ನೊಬೆಲ್ ಪಾರಿತೋಷಿಕದ (೧೯೩೦ರಲ್ಲಿ ಇದರ ಮೌಲ್ಯ ಸುಮಾರು ೪೦,೦೦೦ ಡಾಲರುಗಳು) ಬಹ್ವಂಶವನ್ನು ಸಂಶೋಧನೆಗೋಸ್ಕರ ವಿವಿಧ ನಮೂನೆಯ ವಜ್ರಗಳ ಖರೀದಿಗಾಗಿಯೇ ವಿನಿಯೋಗಿಸಿದ್ದರು. ಒಂದು ಶತಮಾನಕ್ಕಿಂತ ಹಿಂದೆ ಫ್ಯಾರಡೇ ಆವಿಷ್ಕರಿಸಿದ ಮತ್ತು ಆತನ ಹೆಸರಿನಿಂದಲೇ ಕರೆಯಲಾಗಿರುವ ವಜ್ರಗಳಲ್ಲಿಯ (ಫ್ಯಾರಡೇ) ಆವರ್ತನೆಯನ್ನು ನಿಖರವಾಗಿ ಅಳೆದ ಕೀರ್ತಿ ರಾಮನ್ನರದು. ಮಂದಿರದ ಮೂಲಕ ಸಾಗುವಾಗ ಒಂದೊಂದು ಸಂಗ್ರಹವನ್ನೂ ಕುರಿತು ರಾಮನ್ ನೀಡುವ ಆತ್ಮೀಯ ವಿವರಣೆಗಳು ತುಂಬ ಮೋಹಕ. ಇದನ್ನು ಅವರು ಎಲ್ಲಿ ಕೊಂಡರು, ಅದನ್ನು ಯಾರು ಅವರಿಗೆ ಉಡುಗೊರೆಯಾಗಿ ನೀಡಿದರು. ಈ ಕಲ್ಲಿನ ಕತೆ ಏನು, ಈ ವಜ್ರದ ಇತಿಹಾಸ ಏನು, ಈ ಹಕ್ಕಿಯ ವಂಶದ ರಹಸ್ಯ ಏನು – ಮುಂತಾದ ಸಂಗತಿಗಳನ್ನು ಅವರ ಮಾತಿನಲ್ಲೇ

ಕೇಳುವಾಗ ಇವರೇನು ಭೌತ ವಿಜ್ಞಾನಿಯೋ ಕೀಟ ವಿಜ್ಞಾನಿಯೋ ಭೂಗರ್ಭ ವಿಜ್ಞಾನಿಯೋ ಎಂದು ನಮಗೆ ಅನ್ನಿಸಿದರೆ ಆಶ್ಚರ್ಯವಿಲ್ಲ.

ಇಲ್ಲಿಗೇ ಮುಗಿಯುವುದಿಲ್ಲ. ನಮ್ಮನ್ನು ಅವರು ಒಂದು ಚಿಕ್ಕ ಕೋಣೆಗೆ ಕರೆದೊಯ್ಯುವರು. ಅಲ್ಲಿ ಕನ್ನಡಿ ಕಪಾಟುಗಳ ಒಳಗೆ ಓರಣವಾಗಿ ಅಳವಡಿಸಿರುವ ಯದ್ವಾತದ್ವಾ ಆಕಾರಗಳ ಹಲವಾರು ಕಲ್ಲುಗಳನ್ನು ನೋಡಲು ಹೇಳುತ್ತಾರೆ. ಹಗಲು ಬೆಳಕಿನಲ್ಲಿ ಅವನ್ನು ಕಾಣುವ ನಮ್ಮ ಮುಖದಲ್ಲಿ ಮೂಡುವುದು ನಗು, ಈ ಮುದುಕನ ಹವ್ಯಾಸ ನೋಡಿ – ರಸ್ತೆ ಬದಿಯ ಜಲ್ಲಿ ಕಲ್ಲುಗಳಿಗೆ ಬೆಟ್ಟಗುಡ್ಡಗಳ ಹರವಿನಲ್ಲಿ ಯಾದೃಚ್ಛಿಕವಾಗಿ ಹರಡಿ ಬಿದ್ದಿರುವ ಭೂರಿ ಶಿಲೆಗಳಿಗೆ ಈ ರಾಜಸನ್ಮಾನವೇ ಎಂದು. ರಾಮನ್ ಕದ ಮುಚ್ಚುತ್ತಾರೆ. ಕಿಟಕಿಗಳಿಗೆ ಕಪ್ಪು ಪರದೆ ಎಳೆಯುತ್ತಾರೆ. ಈಗ ನಾವು ಕಗ್ಗತ್ತಲ ಕೋಣೆಯ ಅಖಂಡತೆಯಲ್ಲಿ ಅಸ್ತಿತ್ವ ಕಳೆದುಕೊಂಡಿರುತ್ತೇವೆ. ಟಿಕ್ ಶಬ್ದ – ಕಪಾಟುಗಳ ಒಳಗೆ ಯಾವುದೋ ಬಣ್ಣದ ವಿದ್ಯುದ್ದೀಪಗಳು ಬೆಳಕು ಹರಿಸುತ್ತವೆ. ಆ ಬೆಳಕಿನಲ್ಲಿ ನಾವು ಕಾಣುವುದೇನು – ವಿಶ್ವಕರ್ಮನಿಂದಲೂ ನಿರ್ಮಿಸಲು ಸಾಧ್ಯವಾಗದ ಆಭರಣದ ಕುಸುರಿ ಕೆಲಸಗಳು, ವರ್ಣ ವೈವಿಧ್ಯಗಳು. ಇವನ್ನೆಲ್ಲ ಆ ಕಲ್ಲುಗಳ ಮೇಳೆ ಬಿಡಿಸಿದವರಾರೋ? ಆ ಬಣ್ಣದ ಬೆಳಕು ನಂದಿತು, ಬೇರೆ ಬಣ್ಣದ ಬೆಳಕು ಸೂಸಿತು. ಅವೇ ಕಲ್ಲುಗಳು, ಅವೇ ಸ್ಥಾನಗಳು. ಆದರೆ ಈಗಿನ ನೋಟ ಬೇರೆಯೇ. ಬೆಳಕು ಎಂಥ ವಿಸ್ಮಯ ರಚನೆ ಎಂಬುದನ್ನೆಲ್ಲ ರಾಮನ್ ದಂಡೆ ಮೀರಿದ ಉತ್ಸಾಹದಿಂದ ವಿವರಿಸಿ, ದೊಗಲೆ ಶರಾಯಿಯನ್ನು ಮೇಲೆಳೆದು ಕೋಟಿನ ತೋಳುಗಳನ್ನು ಕುಲುಕುವಾಗ ನಮ್ಮಲ್ಲಿ ಮೂಡುವ ಭಾವ ಕೃತಕೃತ್ಯತೆ.

ಅಂದಮಾತ್ರಕ್ಕೆ ರಾಮನ್ ಬದುಕಿದ್ದಾಗ ಸುಲಭ ಲಭ್ಯರಿದ್ದರೆಂದಾಗಲೀ ಯಾರು ಬೇಕಾದರೂ ಅವರನ್ನು ಹೋಗಿ ನೋಡಿ ಇವೆಲ್ಲ ಅನುಭವಗಳನ್ನು ಪಡೆದು ಬರಬಹುದಿತ್ತೆಂದಾಗಲೀ ಭಾವಿಸಬೇಕಾಗಿಲ್ಲ. 'ಪ್ರಬುದ್ಧ ಕರ್ಣಾಟಕ'ದ ಚಿನ್ನದ ಸಂಚಿಕೆಗೋಸ್ಕರ ಸಿ.ವಿ ರಾಮನ್ ಅವರ ಜೀವನಚಿತ್ರವನ್ನು ನಾನು ಬರೆದುಕೊಡಬೇಕೆಂಬ ಕೋರಿಕೆ ಪತ್ರ ಬಂದದ್ದು ಸರಿಯಷ್ಟೆ (ಈ ರಾಮನ್–ತ್ರಿವಳಿ ಕಂತಿನ ಮೊದಲ ಭಾಗ ನೋಡಿ). ನಾನಾಗ ಬೆಂಗಳೂರಿನ ಸರಕಾರಿ ಕಾಲೇಜಿನಲ್ಲಿ ಗಣಿತ ಉಪನ್ಯಾಸಕಾರನಾಗಿದ್ದೆ. ಭೌತ ವಿಜ್ಞಾನದ ವಿದ್ಯಾರ್ಥಿಯಲ್ಲದ ನನಗೆ ರಾಮನ್ನರ ವೈಜ್ಞಾನಿಕ ಸಾಧನೆಗಳನ್ನು ಕುರಿತು ತಿಳಿದಿದ್ದುದು ಸಾಮಾನ್ಯ ಓದುಗನಿಗೆ ತಿಳಿದಿದ್ದಷ್ಟು ಮಾತ್ರ. ಅವರನ್ನೇ ಸಂದರ್ಶಿಸಿ ನೇರ ಮಾಹಿತಿ ಪಡೆದರೆ ಜೀವನಚಿತ್ರಕ್ಕೆ ಹೆಚ್ಚಿನ ನೈಜತೆ ಬರುವುದೆಂದು ಮನಗಂಡು ಅವರ ಭೇಟಿಗಾಗಿ ರಾಮನ್ ಇನ್ಸ್‌ಟಿಟ್ಯೂಟಿಗೆ ಹೋದೆ. ಮೊದಲು ಸಂಸ್ಥೆಯ ಕಾರ್ಯದರ್ಶಿಯವರನ್ನು ನೋಡಿದಾಗ ದೊರೆತ ಅನುಭವ ಆಶಾದಾಯಕವಾಗಿರಲಿಲ್ಲ. ಅವರ ಮಾತಿನ ಸಾರವಿಷ್ಟೆ, "ರಾಮನ್ ಯಾರಿಗೂ ಭೇಟಿ ನೀಡಲು ಇಷ್ಟಪಡುವುದಿಲ್ಲ. ಅದೂ ವಿಜ್ಞಾನಕ್ಕೆ ಸಂಬಂಧಿಸಿದ ವಿಚಾರದಲ್ಲಿ ಮಾತಾಡಲು ಅವರಿಗೆ ಪುರಸೊತ್ತಿಲ್ಲ."

"ನೀವೇ ನನ್ನ ಪ್ರಶ್ನೆಗಳಿಗೆ ಉತ್ತರ ನೀಡಿ, ಆಗದೇ?" ನನ್ನ ಮುಂದಿನ ಯೋಚನೆ.

"ಅವರ ಅಪ್ಪಣೆ ಇಲ್ಲ."

ಅಂತೂ ನನ್ನ ಒತ್ತಾಯಕ್ಕೆ ಮಣಿದ ಕಾರ್ಯದರ್ಶಿ ಒಂದು ಸಲಹೆ ನೀಡಿದರು – ಲೋಕಸುಂದರಿ ರಾಮನ್ ಜೊತೆ ನಾನು ಪ್ರಸ್ತಾವಿಸಿ ಮುಂದುವರಿಸಬಹುದೆಂದು. ಶ್ರೀಮತಿಯವರಲ್ಲಿಯೂ ನನಗೆ ಕಾದಿದ್ದುದು ಹತಾಶೆಯೇ – ಯಾವುದೇ ವಿವರವನ್ನು ನೀಡಲು ಅವರು ನಿರಾಕರಿಸಿದರು. ಕೊನೆಗೆ ಅವರು ಕೂಡ ನನ್ನ ಬೇಡಿಕೆಯನ್ನು ನಿರಾಕರಿಸಲೂ ಆಗದೆ ನಿವಾರಿಸಲೂ ಆಗದೆ ತಾವು ಪತಿಯೊಡನೆ ಮಾತಾಡಿ ನನಗೆ ಪತ್ರ ಬರೆಯುವುದಾಗಿ ತಿಳಿಸಿದರು.

ಪತ್ರ ಬರಲಿಲ್ಲ. ನಾನೇ ಪುನಃ ಹೋದೆ. ಈ ಸಲ ಶ್ರೀಮತಿಯವರು ಮನೆಯಲ್ಲಿರಲಿಲ್ಲ. ಹೇಗೂ ಬಂದಿದ್ದೇನೆ. ಪ್ರಯೋಗಮಂದಿರಕ್ಕೆ ಹೋಗಿ ಭೇಟಿಯ ತಾರೀಕನ್ನು ನಿಶ್ಚೈಸಿ ಬರೋಣ ಎಂಬ ಹುಚ್ಚು ಧೈರ್ಯದಿಂದ ಆ ಕಡೆಗೆ

ನಡೆದೆ. ಮೌನವೇ ನಿಂತಿದ್ದಂತಿತ್ತು ಆ ಮಂದಿರ. ಜಗಲಿಯ ಬಲಪಾರ್ಶ್ವದ ಕೊಠಡಿಯೊಂದನ್ನು ಉಳಿದು ಮಿಕ್ಕೆಲ್ಲ ಪಡಿಗಳಿಗೂ ಬೀಗ. ಅದರ ಪಕ್ಕದ ಒಂದು ಕೋಣೆಯಲ್ಲಿ ಗುಮಾಸ್ತ ಬೆರಳಚ್ಚು ಒತ್ತುತ್ತಿದ್ದುದನ್ನು ಕಂಡೆ. ಆತನೆಡೆಗೆ ಸಾಗಿ ನಾನು ಬಂದ ಉದ್ದೇಶ ಹೇಳಿದೆ. ನನ್ನ ಹೆಸರು ಬರೆದಿದ್ದ ಚೀಟಿ ತೆಗೆದುಕೊಂಡು ಆತ ಕೊಠಡಿ ಒಳಹೊಕ್ಕ. ನಾನು ಅದರ ಕದದ ಎದುರಿನ ಜಗಲಿಯ ಮೇಲೆ ನಿಂತಿದ್ದೆ. ಗುಮಾಸ್ತನ ಹಿಂದೆಯೇ ಅಲ್ಲಿಗೆ ನಡೆದು ಬಂದರು ರಾಮನ್. ಅಸಹನೆಯನ್ನು ಬೀರುವ ತೀಕ್ಷ್ಣ ನೋಟದಿಂದ ನನ್ನನ್ನು ಇರಿದಂತಾಯಿತು. ನನ್ನ ವಿನೀತ ಮನಸ್ಸಿನ ವಂದನೆಯನ್ನು ಸ್ವೀಕರಿಸಿದರೋ ಇಲ್ಲವೋ ತಿಳಿಯಲಿಲ್ಲ. ಮುಂದಿನ ಸಂಭಾಷಣೆ ನಡೆದದ್ದು ಇಂಗ್ಲಿಷಿನಲ್ಲಿ, ಸಾರಾಂಶ:

"ಏನು ಏನು ಏನು ಬೇಕು ನಿಮಗೆ!" ಅವರ ಮಾತು.

"ನಾನು ಮೈಸೂರು ವಿಶ್ವವಿದ್ಯಾಲಯ..."

"ಏನು? ಮೈಸೂರು ವಿಶ್ವವಿದ್ಯಾನಿಲಯ? ನನಗೂ ಅದಕ್ಕೂ ಏನೂ ಸಂಬಂಧವಿಲ್ಲ. ನೀವು ತೊಲಗಬಹುದು" (You may get out)

"ಒಂದು ಸುವರ್ಣಸಂಚಿಕೆ..."

"ಪತ್ರಿಕೆಗೂ ನನಗೂ ಏನೂ ಸಂಬಂಧವಿಲ್ಲ, ನೀವು ತೊಲಗಬಹುದು."

"ಇದು ವಾರ್ತಾಪತ್ರಿಕೆ ಅಲ್ಲ. ನೋಡಿ ನನಗೆ ಬಂದಿರುವ ಪತ್ರ" ಎಂದು ಮೈಸೂರು ವಿಶ್ವವಿದ್ಯಾನಿಲಯದಿಂದ ಅಧಿಕೃತವಾಗಿ ಬಂದಿದ್ದ ಪತ್ರವನ್ನು ಅವರ ಎದುರು ಹಿಡಿದೆ.

"ಇದನ್ನೆಲ್ಲ ಓದಿ ಕಾಲಹರಣ ಮಾಡಲು ನಾನು ತಯಾರಿಲ್ಲ. ನೀವು ತೊಲಗಬಹುದು."

"ತಮ್ಮಂಥ ಜಗದ್ವಿಖ್ಯಾತ ವಿಜ್ಞಾನಿಗಳ ಜೀವನಚರಿತ್ರೆ ಈ ವಿಶೇಷ ಸಂಚಿಕೆಯಲ್ಲಿ ಬರಬೇಕು."

"ಸ್ವಾಮಿ! ಈ ಪೇಪರಿನವರೊಡನೆ ನನಗೆ ಯಾವ ವ್ಯವಹಾರವೂ ಬೇಕಾಗಿಲ್ಲ. ನೀವು ತೊಲಗಬಹುದು..."

"ನಮ್ಮ ಓದುಗರಿಗೆ ನಿಮ್ಮ ಜೀವನಚರಿತ್ರೆ ಖಂಡಿತ ಉತ್ಸಾಹದಾಯವಾಗುತ್ತದೆ. ತಮ್ಮ ಸಂದರ್ಶನ ಭಾಗ್ಯವನ್ನು ನನಗೆ ಕರುಣಿಸಬೇಕು."

ಹೀಗೆಯೇ 'ನೀವು ತೊಲಗಬಹುದು' ಪಲ್ಲವಿಯ ಸುತ್ತಲೂ ನಮ್ಮ ಮಾತು ಅಲ್ಲಿ ನಿಂತುಕೊಂಡೇ ಮುಂದುವರಿಯಿತು. ಆದರೆ ನನ್ನ ನಚಿಕೇತ ಪ್ರಯತ್ನದ ಎದುರು – ಬಹುಶಃ ನಾನೊಬ್ಬ ಖದೀಮನಲ್ಲ ಎಂದು ಅವರಿಗೆ ಅನ್ನಿಸಿತೋ ಏನೋ – ಅವರು ಕ್ರಮೇಣ ಹಿಂಜರಿಯುತ್ತಿದ್ದುದು ನನಗೆ ತಿಳಿಯದಿರಲಿಲ್ಲ. ನನಗೇ ಆಶ್ಚರ್ಯವಾಗುವಂತೆ ಅವರ ಮುಂದಿನ ವರ್ತನೆ. ಕೊಠಡಿಯೊಳಗೆ ಬರಹೇಳಿದರು. ಅವರ ಆಸನದ ನೇರಿದಿರು ಕುರ್ಚಿಯ ಮೇಲೆ ಕೂರಲು ಹೇಳಿದರು. ಅವರು ಕೂರುವ ಮೊದಲೇ ನಾನು ಹೇಗೆ ಕೂರಲಿ ಎಂದು ನಿಂತೇ ಇದ್ದೆ. ಆದರೆ ಅವರೊಂದು ಬಲು ದೊಡ್ಡ ಮಾತು ಹೇಳಿ ನನ್ನನ್ನು ಪೂರ್ಣವಾಗಿ ಗೆದ್ದುಬಿಟ್ಟರು, "ನೀವು ಬಂದವರು; ಮೊದಲು ನೀವು ಕೂರಬೇಕು."

ನಾನು ಕುಳಿತೆನೋ ಕುಸಿದು ಹೋದೆನೋ ಅಂತು ರಾಮನ್ ಎದುರು ಇದ್ದದ್ದು ಹೌದು. ನನ್ನ ಕೈಯಲ್ಲಿದ್ದ ವಿಶ್ವವಿದ್ಯಾನಿಲಯದ ಪತ್ರವನ್ನು ಅವರು ಆಗ ಓದಿದರು. ಅವರೇ ಮಾತು ಮುಂದುವರಿಸಿದರು, "ಸರಿ, ಸುವರ್ಣ ಸಂಚಿಕೆಗಾಗಿ ನನ್ನ ಜೀವನಚಿತ್ರ ಬರೆಯಬೇಕೆಂಬುದು ನಿಮ್ಮ ಇರಾದೆ. ಆದರೆ ನನ್ನ ಜೀವನಚರಿತ್ರೆ ನನಗೆ ಏನೇನೂ ಮಹತ್ತ್ವದ್ದಾಗಿ ತೋರುವುದಿಲ್ಲ. ಎಲ್ಲರಂತೆ ಹುಟ್ಟಿದೆ, ಓದಿದೆ, ಇತ್ಯಾದಿ."

"ಹಾಗೆನ್ನಬಾರದು. ನೀವು ನಡೆದುಬಂದ ದಾರಿ, ಏರಿರುವ ಎತ್ತರ ಮುಂದಿನ ಜನಾಂಗಕ್ಕೆ ಒಂದು ಆದರ್ಶ, ದಾರಿ ನಡೆಯಲು ಕೈದೀವಿಗೆ. ನೀವು ಬದುಕಿ ಬಾಳಿರುವ ಈ ಸುದಿನಗಳಲ್ಲಿ ನಿಮ್ಮ ಮಾತುಗಳು ನೇರವಾಗಿ ಅವರಿಗೆ ಮುಟ್ಟಬೇಕು ಎಂಬುದು ನಮ್ಮೆಲ್ಲರ ಹಂಬಲ. ಆದ್ದರಿಂದ ನೀವು ನಿಮ್ಮ ಜೀವನ ಬೆಳೆದು ಬಂದ ಬಗೆಯನ್ನು ನನಗೆ ಹೇಳಬೇಕೆಂದು ಬೇಡುತ್ತೇನೆ."

"ಸ್ವಾಮೀ! ನನ್ನ ವಿಜ್ಞಾನ ಜೀವನವೇ ನನ್ನ ಜೀವನ. ಈ ಮಂದಿರವೆಲ್ಲವೂ ನನ್ನ ಜೀವನ. ಇಂಥ ನನ್ನ ಜೀವನವನ್ನು ಕುರಿತು ಬರೆಯ ಬೇಕಾದರೆ ನೀವು ಭೌತವಿಜ್ಞಾನದ ಎಂಎಸ್ಸಿ ಪದವೀಧರರಾದರೂ ಆಗಿರಬೇಕು. ನೀವು ಕಲಿತಿರುವ ವಿಷಯವೇನು?"

"ಗಣಿತ."

"ಹಾಗಾದರೆ ಈ ಕೆಲಸ ನಿಮಗೆ ಬೇಡ. ರಾಮನ್ ಪರಿಣಾಮ, ರಾಮನ್ ಲೇಸರ್ ವಿಷಯವೆಲ್ಲ ನಿಮಗೆ ತಿಳಿಯಲು ಸಾಧ್ಯವಿಲ್ಲ. ಆದ್ದರಿಂದ ನೀವಿನ್ನು ತೊಲಗಬಹುದು" ಅವರೆದ್ದರು.

ನಾನೂ ಅನಿವಾರ್ಯವಾಗಿ, ಇಂಥ ಹಠಾತ್ ರಂಗಬದಲಾವಣೆಗೆ ತಯಾರಾಗಿರದಿದ್ದುದರಿಂದ, ಏಳಲೇಬೇಕಾಯಿತು.

"ಅದನ್ನು ನಾನು ತಿಳಿಯದೇ ಬಂದದ್ದು ಅಪರಾಧ. ಇನ್ನೊಮ್ಮೆ ಕಲಿತು ಬರುತ್ತೇನೆ. ತಾವು ಕೃಪೆ ಮಾಡಬೇಕು."

ಆ ಸಲ ನಾನು ಮರಳಿದೆ. ಮನಃಪೂರ್ವಕವಾದ ನಮ್ಮ ಮೆಚ್ಚುಗೆಯ ಮಾತು ವರ್ತನೆ ಅವರಿಗೆ ಅಪ್ರಿಯವಲ್ಲ ಎಂದು ಅನ್ನಿಸಿ ಧೈರ್ಯ ತಳೆದೆ. ಕೆಲವು ವಾರ ಪರ್ಯಂತ ನಾನು ರಾಮನ್ ಪರಿಣಾಮಕ್ಕೆ ಸಂಬಂಧಿಸಿದ ಜ್ಞಾನ ಸಂಪಾದಿಸಲು ಶ್ರಮವಹಿಸಿ ಓದಿದೆ. ನಮ್ಮ ಕಾಲೇಜಿನ ಭೌತವಿಜ್ಞಾನ ಪ್ರಾಧ್ಯಾಪಕರೊಡನೆ ವಿಚಾರವಿನಿಮಯ ನಡೆಸಿ ಸಂಶಯಗಳನ್ನು ಪರಿಹರಿಸಿಕೊಂಡೆ. ಈ ಮಧ್ಯೆ ರಾಮನ್ ಜೀವನದ ಮುಖ್ಯ ವಿವರಗಳನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ಬರೆಯಬೇಕಾಗಿದ್ದ ಲೇಖನದ ರೂಪರೇಷೆ ಸಿದ್ಧಪಡಿಸಿದೆ. ಈಗ ಅವರ ಅಲೆಯುದ್ದದಿಂದ ಪೂರ್ಣ ಭಿನ್ನ ನಾನಲ್ಲ ಎಂದು ಧೈರ್ಯ ತಳೆದು ಪುನಃ ಅವರನ್ನು ನೋಡಲು ಹೋದೆ. ತತ್ಪೂರ್ವ ಅವರಿಗೆ ದೂರವಾಣಿಸಿದಾಗ ಅಪರಾಹ್ಣ ೩ ಗಂಟೆಗೆ ಬರಲು ಹುಕುಂ ಆಯಿತು. ನಾನು ೨.೫೮ ಗಂಟೆಗೆ ಅವರ ಜಗಲಿ ಏರುತ್ತಿದ್ದಾಗ ಅವರು ಅಲ್ಲೇ ನಿಂತಿದ್ದು ನನ್ನನ್ನು ಕಾಯುತ್ತಿದ್ದರು.

"Well Sir, you are on time!" ಎಂದು ನನ್ನನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು. "ಏನಿದೆಲ್ಲ ಫೈಲ್, ಪತ್ರ" ಎಂದು ನಾನು ಹಿಡಿದಿದ್ದ ದಫ್ತರಗಳತ್ತ ದೃಷ್ಟಿ ಹಾಯಿಸಿದರು. ತೋರಿಸಿದೆ – ರಾಮನ್ ಪರಿಣಾಮ ಕುರಿತು ನಾನು ಸಂಗ್ರಹಿಸಿದ್ದ ವಿವರಗಳನ್ನು ಅವರ ಮುಖ ಪ್ರಸನ್ನತೆಯಿಂದ ಅರಳಿತು. ಪುನಃ ಹಿಂದಿನಂತೆ, ಎದುರುಬದಿರಾಗಿ ಕುಳಿತೆವು. ನಾನೇ ಮೊದಲು ಕುಳಿತದ್ದು ಅವರ ಅಪ್ಪಣೆ ಮೇರೆಗೆ. ಅವರು ಮಾತಾಡಿದರು ಬಲು ರಭಸದಿಂದ. ನಾನು ಮಾತಾಡದೇ ಟಿಪ್ಪಣಿ ಗೀಚುತ್ತ ಥಾನು ತಿರುವುತ್ತ ಮುನ್ನಡೆದೆ. ನಮ್ಮ ದೇಶದ ಪ್ರಾಚೀನತೆ, ಸಂಸ್ಕೃತಿ ಪರಂಪರೆ, ನಮ್ಮ ಜನರ ಸಹಜ ಕೌಶಲ, ಆದರೂ ನಮ್ಮ ಸರ್ಕಾರದ (ಸ್ವತಂತ್ರ ಭಾರತ ಸರ್ಕಾರದ) ಅನಾಸ್ಥೆ, ನಿಷ್ಕ್ರಿಯತೆ, ಅದರಿಂದ ಆಗುತ್ತಿರುವ ಪ್ರತಿಭಾ ಪಲಾಯನ, ವಿದೇಶೀ ಮುದ್ರೆ ಪಡೆಯದೇ ಜ್ಞಾನರಂಗದಲ್ಲಿ ಮೇಲೇರಲು ಇಂದಿಗೂ ಎದುರಾಗುವ ಅಡಚಣೆಗಳು, ಹೋಗಿ ಮರಳಿದವರಿಗೂ ಇಲ್ಲಿರುವವರಿಗೂ ಒಮ್ಮೆ ಉನ್ನತ ಸ್ಥಾನ ಗಿಟ್ಟಿಸಿಕೊಂಡರೆ ಮತ್ತೆ ಜ್ಞಾನದ ವಿಚಾರ ತಲೆದೋರುವ ಪೂರ್ಣ ವಿರಾಮ, ಅಂತರ ಪ್ರಾಂತೀಯ ಮತ್ಸರಗಳು, ಜಾತಿ ಕಲಹಗಳು, ದೇಶದಲ್ಲಿ ಪ್ರಾಮಾಣಿಕತೆಗೆ ರಿಕ್ತತೆ – ಒಂದೇ ಎರಡೇ ರಾಮನ್ ವಿಚಾರದಾರೆ ಅಸಿಧಾರೆಯಂತೆ ಕತ್ತರಿಸುತ್ತ ಸಾಗಿತು. ಅವರ ಮುಖ ವಿಷಾದ ಛಾಯೆಯಿಂದ ಗಂಭೀರವಾಗಿತ್ತು. ಆಗಾಗ, "Do you see that, Sir? "Do you follow what I am saying, Sir?" ಎಂದು ಕೈಕೊಡಹಿ ಪ್ರಶ್ನೆ ಹಾಕುತ್ತಿದ್ದರು. ನಾನು ಯಥೋಚಿತವಾಗಿ "Yes Sir, I see that." "Yes sir, I do follow what you say" ಎನ್ನುತ್ತಿದ್ದೆ.

ಭಾರತ ಸರಕಾರ ಕೆಲವು ವರ್ಷಗಳ ಹಿಂದೆ ಮಿತವ್ಯಯದ ಹೆಸರಿನಲ್ಲಿ ವಿಜ್ಞಾನರಂಗದ ಮೇಲೆ ಖೋತಾ ಕಣ್ಣನ್ನು ಹಾಯಿಸಿದಾಗ ರಾಮನ್ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸಿ ಸರಕಾರದ ಆ ಅವಿವೇಕ ಯೋಜನೆಯನ್ನು ಯಶಸ್ವಿಯಾಗಿ ವಿರೋಧಿಸಿದುದನ್ನು ಅವರ ನೆನಪಿಗೆ ತಂದೆ. ಅವರೇನೂ ಅನ್ನಲಿಲ್ಲ. ಮಾತಾಡುತ್ತ ಮಾತಾಡುತ್ತ ಉದ್ವೇಗದಿಂದ ಎದ್ದು ನಿಲ್ಲುತ್ತಿದ್ದರು, ಕೋಟಿನ ತೋಳುಗಳನ್ನು ಸರಿಪಡಿಸಿ ಪುನಃ ಕೂರುತ್ತಿದ್ದರು. "Yes Sir, I have spoken enough. But please don't write all that" ಎಂದರು. ತಾವು ಹೇಳಿದ ವ್ಯಕ್ತಿಗಳ ಹೆಸರು, ನಿರೂಪಿಸಿದ ಹಲವಾರು ಕಹಿ ಘಟನೆಗಳ ವಿವರ ಎಲ್ಲಿಯೂ ಬರಬಾರದು. ಅವನ್ನೆಲ್ಲ ಎದುರಿಸಿ ಜಯಿಸಿ ತಾವೀಗ ಸ್ವತಂತ್ರರಾಗಿರುವಾಗ ಹಳೆಯ ಸಂಗತಿಗಳನ್ನು ಕುರಿತು ಯಾವ ವಿಧವಾದ ಚರ್ಚೆಗೂ ತಾವು ಸಿದ್ಧವಿಲ್ಲವೆಂದೂ ಹೇಳಿದರು. ಯಾವ ವಿದೇಶೀ ನೆರವೂ ಇಲ್ಲದೆ ಈ ಪ್ರಾಚೀನ ದೇಶ ಐನ್ಸ್ಟೈನರನ್ನೂ ಮೀರಿಸಬಲ್ಲ ಮೇಧಾವಿಗಳನ್ನು ಸೃಷ್ಟಿಸಬಲ್ಲದು ಎಂಬುದು ಅವರ ಅಚಲ ನಂಬಿಕೆ.

ಅವರಿಗೆ ದೊರೆತ ವಿವಿಧ ಪಾರಿತೋಷಿಕಗಳನ್ನು ನೋಡಲು ಅಪೇಕ್ಷಿಸಿದೆ. ರಾಮನ್ ಎದ್ದರು. ಆ ಕೊಠಡಿ, ಅದರೊಳಗಿನ ಇನ್ನೊಂದು ಕೊಠಡಿ, ಅವುಗಳಲ್ಲಿದ್ದ ಹಲವಾರು ಕಪಾಟುಗಳು ಎಲ್ಲವನ್ನೂ ತೆರೆದು ಪ್ರತಿಯೊಂದು ಪ್ರಶಸ್ತಿಯನ್ನೂ ಹೊರ ತೆಗೆದು ತೋರಿಸಿದರು. ಆದರೆ ಎಲ್ಲಿಯೂ ನನ್ನ ಸಹಾಯವನ್ನು ಅವರು ಪಡೆಯಲಿಲ್ಲ, ಮಾತ್ರವಲ್ಲ, ಅದನ್ನು ಸ್ಪಷ್ಟವಾಗಿ ನಿರಾಕರಿಸಿದರು ಕೂಡ. ನನಗೆ ಕೆಲವು ಕಿರುಹೊತ್ತಗೆಗಳನ್ನೂ ಅವರು ರುಜುಹಾಕಿದ್ದ ಒಂದು ಛಾಯಾಚಿತ್ರವನ್ನೂ ಕೊಟ್ಟು, "ಇನ್ನು, ನೀವು ತೊಲಗಬಹುದು" (Now you may get out) ಎಂದು ಆತ್ಮೀಯವಾಗಿ ನುಡಿದರು.
"ನಾನು ಲೇಖನ ಬರೆದ ಮೇಲೆ ಅದನ್ನು ತಂದು ನಿಮಗೆ ಓದಿ ಹೇಳುತ್ತೇನೆ" ಎಂದೆ.
"ಅಗತ್ಯವಿಲ್ಲ. ನನಗೆ ಕನ್ನಡ ಬರುವುದಿಲ್ಲ, ವೇಳೆಯೂ ಇಲ್ಲ."

ನಾನು ಹೊರಗೆ ಬಂದಾಗ ಕತ್ತಲು ಕವಿದಿತ್ತು. ಇವರೇನು ಇನ್ನೂ ಮನೆಗೆ ಮರಳಲಿಲ್ಲ ಎಂದು ನೋಡಲು ಶ್ರೀಮತಿ ರಾಮನ್ ಅಲ್ಲಿಗೆ ಬಂದಿದ್ದರು. ಇನ್ನೊಬ್ಬ ಮಿತ್ರರ ಹೇಳಿಕೆಯಂತೆ ಪ್ರಯೋಗದಲ್ಲೋ ವಿವರಣೆಯಲ್ಲೋ ರಾಮನ್ ತನ್ಮಯರಾಗಿಬಿಟ್ಟರೆಂದರೆ ಅವರಿಗೆ ಕಾಲದ ಪರಿವೆಯೇ ಇರುತ್ತಿರಲಿಲ್ಲವಂತೆ. ಶ್ರೀಮತಿಯವರಂತೂ ಕಾಫಿ ಬಿಸಿ ಮಾಡಿ ಬಿಸಿ ಮಾಡಿ ಕಾಯುತ್ತಲೇ ಇರಬೇಕಂತೆ.

"ನನ್ನ ಈ ದೂರದರ್ಶಕ ನೋಡಿದ್ದೀರಾ? ಇನ್ನೊಮ್ಮೆ ಬನ್ನಿ ತೋರಿಸುತ್ತೇನೆ. ಯಾವಾಗ ಬೇಕಾದರೂ ಬನ್ನಿ" ಎಂದು ಹೇಳಿ ಅಂಗಳದ ಪಕ್ಕದ ದಾರಿಯಲ್ಲಿ ನನ್ನನ್ನು ಪುನಃ ಬೀಳ್ಕೊಟ್ಟರು. ಆ ವೃದ್ಧ ದಂಪತಿಗಳು ಅವರ ಮನೆಯೆಡೆಗೆ ಸಾಗುತ್ತಿದ್ದಂತೆ ರಾಮನ್ನರ ಬಿಳಿ ರುಮಾಲಿನ ಲಯವಿನ್ಯಾಸ ಅವರ ಚಲನೆಯ ಗತಿಯನ್ನು ಮಸಕು ಮಸಕಾಗಿ ಪ್ರತೀಕಿಸಿದಂತೆ ನನ್ನ ಮನದಲ್ಲಿ ಮೂಡಿದ ಭಾವವೇನು? ನಿಸಾರ್ ಅಹಮದ್ ಬರೆದಿರುವಂತೆ,

ಸಂದ ಜೀವನದೊಂದು ರೀತಿಯಂತೆ
ಸರಳ ಸದಭಿರುಚಿಯ ಖ್ಯಾತಿಯಂತೆ

ಲೇಖನ ತಯಾರಿಸಿದೆ. ಅವರ ಮತ್ತು ಅವರ ಪ್ರಯೋಗಮಂದಿರದ ಛಾಯಾಚಿತ್ರಗಳು ನನಗೆ ಬೇಕಾಗಿವೆ, ಫೊಟೋಗ್ರಾಫರ್ ಸಮೇತ ಬರುತ್ತೇನೆ ಎಂದು ಬೇಡಿದೆ. ೨ ಗಂಟೆಗೆ ಬರಲು ಆಣತಿಯಾಯಿತು. ನಾವು ಅವರ ಮಂದಿರ ತಲಪಿದ ವೇಳೆಯಲ್ಲೇ ಹಾರ್ವರ್ಡ್ ವಿಶ್ವವಿದ್ಯಾಲಯದ ಪ್ರೊ ಅಲನ್ ರಾಬಿನ್ಸನ್, ಅವರ ಪತ್ನಿ ಮತ್ತು ಇಂಡಿಯನ್ ಇನ್ಸ್ಟಿಟ್ಯೂಟಿನ ಡಾ। ಪಿ.ಎಲ್ ಭಾಟ್ನಗರ್ ಇವರೂ ಬಂದಿದ್ದರು. ನಮ್ಮೆಲ್ಲರನ್ನೂ ರಾಮನ್ ಅವರ ಪ್ರಯೋಗಮಂದಿರದ ಒಂದೊಂದು ಅಂಗುಲಕ್ಕೂ ಕರೆದೊಯ್ದು ಎಲ್ಲ ಬಿಡಿ ವಿವರಗಳನ್ನು ಉತ್ಸಾಹದಿಂದ ವಿವರಿಸಿದರು. ಒಂದೊಂದು ಕೋಣೆಯ ಒಂದೊಂದು ಕಪಾಟಿನ ಬೀಗವನ್ನೂ ಅವರೇ ತೆರೆಯಬೇಕು, ಅವರೇ ಮುಚ್ಚಬೇಕು. ನನ್ನ ನೆರವನ್ನು ಅವರು ಒಪ್ಪಲಾರರು, "ನಮ್ಮ ಕೆಲಸವನ್ನು ನಾವೇ ಮಾಡಬೇಕು" ಎಂದು ತುಂಟ ನಗುವಿನಿಂದ ಮಾತನ್ನು ತೇಲಿಸಿದರು. ಅತಿಥಿಗಳು ನಿರ್ಗಮಿಸಿದ ತರುವಾಯ ನನ್ನೊಡನೆ ಮಾತಾಡಲು ಕುಳಿತರು. ನಾನು ಬರೆದು ಸಿದ್ಧಪಡಿಸಿದ್ದ ಲೇಖನ ಓದಲೇ ಎಂದು ಕೇಳಿದಾಗ, "ನನಗೆ ಇದು ಅರ್ಥವಾಗದು. ನೀವೇನೂ ಬೈದು ಬರೆದಿರಲಾರಿರಿ" ಎಂದು ನಕ್ಕು, "ಲೇಡಿ ರಾಮನ್ನರಿಗೆ ಓದಿ ಹೇಳಿ, ಅವರಿಗೆ ಕನ್ನಡ ಅರ್ಥವಾಗುತ್ತದೆ" ಎಂದರು.

"ನಿಮ್ಮ ಈ ಪ್ರಯೋಗಮಂದಿರ ಏಕೆ ಖಾಲಿ ಇದೆ? ಸಂಶೋಧನೆ ಮಾಡಲು ಯಾರೂ ಮುಂಬರುವುದಿಲ್ಲವೇ" ಎಂದು ಕೇಳಬಾರದ ಒಂದು ಪ್ರಶ್ನೆ ಕೇಳಿಬಿಟ್ಟೆ. ಅವರಿಗೆ ಬೇಸರವಾಯಿತೋ ಏನೋ. ಆದರೂ ಉತ್ತರಿಸಿದರು, "ನಮ್ಮ ತರುಣರಲ್ಲಿ ಶ್ರದ್ಧೆ ಇಲ್ಲ. ಪರೀಕ್ಷೆ, ಉದ್ಯೋಗ, ವಿರಾಮ. ಹೆಚ್ಚೆಂದರೆ ವಿದೇಶಯಾನ, ಮರಳಿಕೆ, ಉದ್ಯೋಗ, ವಿರಾಮ. ಈ ವಿರಾಮ ನಮ್ಮ ದೇಶವನ್ನು ಕೊಲ್ಲುತ್ತಿರುವ ಮಹಾವ್ಯಾಧಿ."

ಇದರ ವಿಚಾರವಾಗಿ ಲೇಡಿ ರಾಮನ್ ನನಗೊಂದು ವಿವರಣೆ ನೀಡಿದರು. "ಅವರನ್ನು ನೋಡಲು ಬರುತ್ತಿದ್ದವರಲ್ಲಿ ಬಹುಮಂದಿ ಇದೇ ಅಪ್ರಿಯ ಪ್ರಶ್ನೆ ಕೇಳುತ್ತಿದ್ದರು. ಆಗ ನಮ್ಮ ಯಜಮಾನರು ತುಂಬ ನೊಂದುಕೊಳ್ಳುತ್ತಿದ್ದರು. ಇಲ್ಲಿ ನಾನು ಬಂದಿರುವುದು ಏಕಾಂತದಲ್ಲಿ ಸ್ವತಂತ್ರವಾಗಿ ಸಂಶೋಧನೆ ನಡೆಸಲೆಂದು. ಈಗ ನಾನು ಶಿಷ್ಯರನ್ನು ಸ್ವೀಕರಿಸಿ ಅವರ ಜೊತೆ ಎಡೆಬಿಡದೆ ದುಡಿಯುವ ಸ್ಥಿತಿಯಲ್ಲಿದ್ದೇನೆಯೇ ಎಂದು ಅವರು ಹೇಳುತ್ತಿದ್ದುದಿತ್ತು."

ರಾಮನ್ನರೊಡನೆ ನನ್ನ ಮಾತು ಮುಂದುವರಿಯಿತು, "ನಿಮ್ಮ ಈ ಚಟುವಟಿಕೆಯ ಮತ್ತು ದೃಢ ಆರೋಗ್ಯದ ರಹಸ್ಯವೇನು?"

"ನಾನು ಯೂರೋಪಿಗೆ ಹೋಗಲು ವೈದ್ಯಕೀಯವಾಗಿ ನಾಲಾಯಕ್ ಆಗಿದ್ದೆ ಒಂದು ಕಾಲದಲ್ಲಿ ಎಂದು ನಿಮಗೆ ಗೊತ್ತಿದೆಯಷ್ಟೆ! ಒಳ್ಳೇದೇ ಆಯಿತು ಬಿಡಿ. ಇಲ್ಲೇ ನನಗೆ ಸಂಶೋಧನೆ ಮುಂದುವರಿಸಲು ಸಾಧ್ಯವಾಯಿತು. ನಾನು

ಆಹಾರ, ವಿಶ್ರಾಂತಿಗಳಲ್ಲಿ ಬಲು ಮಿತನಾಗಿದ್ದೇನೆ. ಹೊರಗೆ ಅಕಾಲದಲ್ಲಿ ಎಲ್ಲಿಯೂ ತಿನ್ನುವುದಿಲ್ಲ. ಇಷ್ಟೇ ನನ್ನ ಆರೋಗ್ಯದ ರಹಸ್ಯ."

೧೯೬೯ರಲ್ಲಿ ನಡೆದ ಒಂದು ರಸಪ್ರಸಂಗವನ್ನು ಇಲ್ಲಿ ಉಲ್ಲೇಖಿಸಬಹುದು. ರಾಷ್ಟ್ರಪತಿ ಬೆಂಗಳೂರಿಗೆ ಆಗಮಿಸಿದಾಗ ಅವರ ಗೌರವಾರ್ಥ ರಾಜ್ಯಪಾಲರು ರಾತ್ರಿ ೮ ಗಂಟೆಗೆ ಭೋಜನ ಏರ್ಪಡಿಸಿದ್ದರು. ಪ್ರತಿಷ್ಠಿತ ಆಹ್ವಾನಿತರಲ್ಲಿ ರಾಮನ್ನರೂ ಒಬ್ಬರು. ಆದರೆ ಇವರು ಆ ಭೋಜನಕ್ಕೆ ಹೋಗಲಿಲ್ಲ. ರಾಜ್ಯಪಾಲರಿಗೆ ರಾಮನ್ನರೇ ಹೇಳಿದರು, "ನಾನು ೭.೩೦ ಗಂಟೆಗೆ ಮಲಗುವವನು. ನಿಮ್ಮ ಭೋಜನಕಾಲದಲ್ಲಿ ಗಾಢ ನಿದ್ರೆಯಲ್ಲಿದ್ದೆ ನೋಡಿ. ಆದ್ದರಿಂದ ಬರಲಿಲ್ಲ."

ನಾನು ಲೇಡಿ ರಾಮನ್ ಬಳಿ ಹೋದೆ. ಅವರು ನನ್ನ ಲೇಖನವನ್ನು ಓದಿಸಿ ಕೇಳಿ ಯುಕ್ತ ಸಲಹೆಗಳನ್ನು, ಹಲವಾರು ಕಡೆ ಕೆಲವೊಂದು ತಿದ್ದುಪಡಿಗಳನ್ನು, ಸೂಚಿಸಿ ಸಹಾಯ ನೀಡಿದರು. ಎಲ್ಲ ಮುಗಿದ ಮೇಲೆ, "ನೀವು ತುಂಬ ಶ್ರಮವಹಿಸಿದ್ದೀರಿ. ನನ್ನೊಡನೆ ಕಾಫಿ ತೆಗೆದುಕೊಳ್ಳಿ" ಎಂದು ಅವರೇ ಕಾಫಿ ತಯಾರಿಸಿಕೊಟ್ಟರು. ಅದನ್ನು ಸೇವಿಸಿ ಇನ್ನೇನು ಹೊರಡಬೇಕು ರಾಮನ್ ಬಂದರು, "ಓಹೋಹೋ ನೀವೇನು ನಮ್ಮ ಮನೆಯವರೇ ಆಗಿಬಿಟ್ಟಿರಲ್ಲವೇ" ಎಂದು ತಿಳಿನಗುವಿನ ಸವಿಹೊನಲು ಹರಿಸಿದರು.

೧೯೬೯ರ ಜೂನಿನಲ್ಲಿ ಮುದ್ರಿತ ಲೇಖನದ ನಕಲಿನೊಂದಿಗೆ ಅವರ ಮಂದಿರಕ್ಕೆ ಹೋದೆ. ಬೆಳಗ್ಗೆ ೭ ಗಂಟೆಗೆ ಮನೆಯಲ್ಲಿ ವಿಚಾರಿಸಿದಾಗ ಅವರು ವಾಯುವಿಹಾರಾರ್ಥ ತೋಟಕ್ಕೆ ಹೋಗಿದ್ದಾರೆಂದೂ ನಾನು ಅಲ್ಲಿಗೇ ಹೋಗಿ ಅವರನ್ನು ನೋಡಬಹುದೆಂದೂ ಶ್ರೀಮತಿ ರಾಮನ್ ಹೇಳಿದರು. ನಾನು ಹಾಗೆ ಮಾಡಲಿಲ್ಲ. ಮನೆ ಮುಂದಿನ ನೇರದಾರಿಯ ಅಂಚಿನಲ್ಲಿ ಅವರ ಆಗಮನವನ್ನು ಕಾದು ನಿಂತೆ. ದೂರದಲ್ಲಿ ಗಿಡ ಮರಗಳ ಅಡಿಯಲ್ಲಿ ಅವರು ನಿಂತು ನೋಡಿ ಮುಂದುವರಿಯುತ್ತಿದ್ದುದನ್ನು ಕಂಡೆ. ಹೀಗೆಯೇ ಸಾಕಷ್ಟು ಹೊತ್ತು ಕಳೆದು ಆ ತರುವಾಯ ನಾನು ನಿಂತಿದ್ದ ದಾರಿಗೆ ಬಂದು ಮನೆ ಕಡೆಗೆ ಅಂದರೆ ನನ್ನತ್ತ ನಡೆಯಲಾರಂಭಿಸಿದರು. ಬೋಳುತಲೆ, ಉಟ್ಟಿದ್ದ ಧೋತರದ ಬಿಳಿಸೆರಗು ಉದ್ದದ ನಿಲುವಂಗಿಯ ಅಂಚನ್ನು ದಾಟಿ ಸೂಸುತ್ತಿತ್ತು. ಕೈಯಲ್ಲಿ ಒಂದು ಬೆತ್ತ. ಸಾಕಷ್ಟು ಸಮೀಪ ಬಂದಾಗ ನಾನು ವಂದನೆ ಅರ್ಪಿಸಿದೆ. "Good morning, Sir! I think I recognize you" ಎಂದರು. ನಾನು ಸೂಕ್ಷ್ಮವಾಗಿ ಹಿಂದಿನ ಸನ್ನಿವೇಶವನ್ನು ವಿವರಿಸಿದೆ. ಒಂದು ವರ್ಷ ದಾಟಿಹೋಗಿತ್ತಷ್ಟೆ. ನಾನು ಬಂದಿದ್ದ ಉದ್ದೇಶವನ್ನು ವಿವರಿಸಿದೆ. ಹಿಡಿದಿದ್ದ ಮುದ್ರಿತ ಲೇಖನವನ್ನು ಅವರಿಗೆ ನೀಡಿದೆ.

"ಇದನ್ನು ಕೊಡಲೆಂದೇ ಇಲ್ಲಿವರೆಗೆ ಬಂದಿರಾ! ಅಂಚೆಯಲ್ಲಿ ಕಳಿಸಬಹುದಿತ್ತಲ್ಲ – ಆಗಲಿ, ನಾನು ನಿಮ್ಮೊಡನೆ ಸ್ವಲ್ಪ ಕಾಲ ಕಳೆಯಲು ಸಿದ್ಧನಿದ್ದೇನೆ. ಸಾಮಾನ್ಯವಾಗಿ ನಾನೀಗ ಮನೆಗೆ ಹೋಗಿ ಸ್ನಾನ ಉಪಾಹಾರ ತೀರಿಸಿ ಬರುವುದು ವಾಡಿಕೆ" ಎಂದವರೇ ಪ್ರಯೋಗಮಂದಿರದೆಡೆಗೆ ನಡೆಯತೊಡಗಿದರು. ನಾನು ಹಿಂಬಾಲಿಸಿದೆ. ಹಿಂದಿನಂತೆಯೇ ಎಲ್ಲ – ಅವರೇ ಕೊಠಡಿ ಕದ ತೆರೆದರು. ಕಿಟಕಿ ಪಡಿಗಳನ್ನೆಲ್ಲ ಬಿಡಿಸಿ ಕೊಣಿಕೆಗಳನ್ನು ಪೋಣಿಸಿದರು. ಮತ್ತೆ ತಮ್ಮ ಆಸನದೆಡೆಗೆ ಬಂದರು, ನನ್ನನ್ನು ಕೂರಹೇಳಿ ತಾವು ಕುಳಿತರು.

"ಈಗ ನಿಷ್ಕೃಷ್ಟ ಗಂಟೆ ಎಷ್ಟು?" ಎಂದು ಪ್ರಶ್ನಿಸಿದರು.

"೭.೩೫ ಎಂದು ನನ್ನ ವಾಚ್..."

"ಹೌದು ಹೌದು – ಯಾವುದೇ ಎರಡು ವಾಚುಗಳು ಎರಡು ಹೆಂಗಳೆಯರಂತೆ. ಅವು ಎಂದೂ ಹೊಂದಿ ಇರಲಾರವು" ಎಂದು ದರಹಾಸ ಸೂಸಿದರು. ದೂರವಾಣಿ ವಿನಿಮಯ ಕೇಂದ್ರಕ್ಕೆ ದೂರವಾಣಿಸಿ, "ನೋಡಿ! ಆ ಮಹಿಳೆ ಹೇಳುತ್ತಾಳೆ ಈಗ ಗಂಟೆ ೭.೩೪" ಎಂದು ಲಘು ಹಾಸ್ಯ ಬೀರಿದರು. ಈ ಸಲ ನನ್ನಿಂದ ಲೇಖನವನ್ನು ಅಲ್ಲಲ್ಲಿ ಓದಿಸಿ ಕೇಳಿದರು. ಇಂಗ್ಲಿಷಿನಲ್ಲಿ ನಾನು ಅದನ್ನು ವಿವರಿಸಬೇಕಾಯಿತು. ಮುದ್ರಿತವಾಗಿದ್ದ ಚಿತ್ರಗಳನ್ನು ನೋಡಿ ಮಂದಸ್ಮಿತರಾದರು. "ಚೆನ್ನಾಗಿವೆ, ಇದು ನನ್ನ ಅಮೂಲ್ಯ ಸಂಗ್ರಹಗಳನ್ನು ಸೇರುತ್ತದೆ. ನಿಮ್ಮ ಹತ್ತಿರ ಇನ್ನೊಂದು ಪ್ರತಿ ಇದೆಯೇ?"

"ಇಲ್ಲಿ ಇಲ್ಲ. ಮೈಸೂರಿಗೆ ಮರಳಿದ ಮೇಲೆ ಕಳಿಸಬಲ್ಲೆ."

"ನೀವು ಬೆಂಗಳೂರಿನ ಒಂದು ಕಾಲೇಜಿನಲ್ಲಿದ್ದೀರೆಂದು ತಿಳಿದಿದ್ದೆ."

"ಕಳೆದ ವರ್ಷ ಇಲ್ಲಿದ್ದದ್ದು ಹೌದು. ಈಗೆರಡು ವಾರಗಳಿಂದ ಮೈಸೂರಿನಲ್ಲಿ ಬೇರೆ ಕೆಲಸದಲ್ಲಿದ್ದೇನೆ."

"ಲೇಡಿ ರಾಮನ್ ಇಂಥ ಪ್ರತಿಗಳನ್ನೆಲ್ಲ ಸಂಗ್ರಹಿಸಿಡುತ್ತಾರೆ. ಅವರಿಗಾಗಿ ಒಂದನ್ನು ಕಳಿಸಿಕೊಡಿ."

ರಾಮನ್ನರ ಶಿಷ್ಯವಾತ್ಸಲ್ಯ ಅಪಾರ. ತಮ್ಮ ಎಲ್ಲ ಸಂಶೋಧನಪತ್ರಗಳಲ್ಲೂ ಎಲ್ಲ ಭಾಷಣಗಳಲ್ಲೂ ಅವರು ಸಹೋದ್ಯೋಗಿಗಳ ಹೆಸರುಗಳನ್ನು ಸ್ಮರಿಸದೇ ಎಂದೂ ಇರಲಾರರು. ರಾಮನ್ ತಮ್ಮ ಹೆಸರಿನ ಪರಿಣಾಮವನ್ನು ಮೊತ್ತಮೊದಲಾಗಿ ಸಾರ್ವಜನಿಕ ಸಭೆಯಲ್ಲಿ ಪ್ರಕಟಿಸಿದಾಗ (೧೬ ಮಾರ್ಚ್ ೧೯೨೮) ಕೊನೆಯಲ್ಲಿ ಆಡಿದ ಮಾತು, "...ಈ ಸಂಶೋಧನೆಯಲ್ಲಿ ಕೆ.ಎಸ್ ಕೃಷ್ಣನ್ ನೀಡಿದ ಅಮೂಲ್ಯ ಸಹಕಾರವನ್ನೂ ಎಸ್. ವೆಂಕಟೇಶ್ವರನ್ ನೀಡಿದ ನೆರವನ್ನೂ ನಾನು ಸ್ಮರಿಸಬೇಕು."

ರಾಮನ್ನರ ಪ್ರಮುಖ ಶಿಷ್ಯರಲ್ಲೊಬ್ಬರಾದ ಆರ್.ಎಸ್. ಕೃಷ್ಣನ್ ಹೀಗೆ ಬರೆದಿದ್ದಾರೆ (೧೯೫೩) "ಅವರ ವೈಯಕ್ತಿಕ ಕೊಡುಗೆಗಳೇ ಅತ್ಯಂತ ಗಮನಾರ್ಹವಾದರೂ ಅವರ ಹೆಚ್ಚಿನ ಯಶಸ್ಸನ್ನು ವಿದ್ಯಾರ್ಥಿಗಳ ಒಂದು ತಂಡಕ್ಕೇ ಸ್ಫೂರ್ತಿದಾಯಕವಾಗಿ ಭೌತ ವಿಜ್ಞಾನದ ಒಂದು ನಿರ್ದಿಷ್ಟ ಸಂಶೋಧನಾ ಶಾಲೆಯನ್ನು ಭಾರತದಲ್ಲಿ ನಿರ್ಮಿಸಿರುವುದರಲ್ಲಿ ಕಾಣಬಹುದು. ಈ ಹಿಂದಿನ ೩೫ ವರ್ಷಗಳಲ್ಲಿ ೧೫೦ಕ್ಕೂ ಮಿಕ್ಕಿದ ತರುಣರನ್ನು... ಗಣಿತಜ್ಞರು, ಭೌತವಿಜ್ಞಾನಿಗಳು, ರಸಾಯನ ವಿಜ್ಞಾನಿಗಳು ಮತ್ತು ಭೂಗರ್ಭ ವಿಜ್ಞಾನಿಗಳು – ಸಂಶೋಧನ ಕ್ಷೇತ್ರಕ್ಕೆ ರಾಮನ್ ಆವಾಹಿಸಿದ್ದಾರೆ – ತಮ್ಮ ಶಿಷ್ಯರ ಕಾರ್ಯದಲ್ಲಿ ಅವರಿಗೆ ಸದಾ ಅಪಾರ ಆಸಕ್ತಿ. ಸರಳ ಹಾಗೂ ನಿರಾಡಂಬರಿಗಳಾದ ಅವರು ಪ್ರಯೋಗಮಂದಿರದಲ್ಲಿ ಯಾವನೇ ಕೆಲಸಗಾರನಿಗೂ ಯಾವಾಗಲೂ ಸುಲಭವಾಗಿ ದೊರೆಯುತ್ತಾರೆ... ಶಿಷ್ಯರಿಗೆ ತಮ್ಮ ಗುರುವನ್ನು ಕುರಿತು ಇರುವ ಗೌರವ ಹಾಗೂ ಮೆಚ್ಚುಗೆಗಳಿಗೆ ಕಾರಣ ಶಿಷ್ಯನ ಭಾವನೆಗಳನ್ನು ಅಥವಾ ಸ್ವತಂತ್ರ ಚಿಂತನೆಯನ್ನು ನಿಷ್ಪಾಕ್ಷಿಕವಾಗಿ ಗುರುತಿಸಿ ಮುಕ್ತ ಕಂಠದಿಂದ ಪ್ರಶಂಸಿಸುವ ರಾಮನ್ನರ ಹಿರಿತನ. ಅವರು ಬಲು ಧಾರಾಳ ಮನಸ್ಕರು. ಮೂಲ ಸಂಶೋಧನೆಯ ಹಲವಾರು ಪರಿಚ್ಛೇದಗಳನ್ನೇ ಅವರು ತೆರೆದ ಮನಸಿನಿಂದ ಕೊಟ್ಟುಬಿಡುತ್ತಿದ್ದರು. ಕಡಿಮೆ ದರ್ಜೆಯ ಯಾವನೇ ವ್ಯಕ್ತಿ ಹೀಗೆ ಮಾಡಲಾರ."

ಪ್ರತಿ ವರ್ಷವೂ ಗಾಂಧೀ ಜನ್ಮದಿವಸದಂದು (ಅಕ್ಟೋಬರ್ ೨) ರಾಮನ್ ಮಂದಿರದಲ್ಲಿ ಇಂಡಿಯನ್ ಅಕಾಡೆಮಿ ಆಫ್ ಸೈನ್ಸಸ್ ಸದಸ್ಯರಿಗೂ ಆಹ್ವಾನಿತ ಸಾರ್ವಜನಿಕರಿಗೂ ಜನಪ್ರಿಯ ವಿಜ್ಞಾನದ ಆಧುನಿಕ ವಿಷಯವೊಂದನ್ನು ಕುರಿತು ರಾಮನ್ ಭಾಷಣ ನೀಡುತ್ತಿದ್ದುದು ವಾಡಿಕೆ. ೧೯೭೦ ಅಕ್ಟೋಬರ್ ೨ರಂದು ಅವರು ಆಯ್ದುಕೊಂಡ ವಿಷಯ Cochlea and the perception of Sound. ಅತಿ ಸಂಕೀರ್ಣ ಹಾಗೂ ಆಧುನಿಕ ವಿಜ್ಞಾನ ಪರಿಕಲ್ಪನೆಗಳನ್ನು ಅತಿ ಸುಲಭವಾಗಿ ಮನೋಜ್ಞವಾಗಿ ಮತ್ತು ಲಘು ವಿನೋದ ಮಿಶ್ರಿತವಾಗಿ ಸರ್ವರಿಗೂ ಗ್ರಾಹ್ಯವಾಗುವಂತೆ ಅಭಿವ್ಯಕ್ತಿಸುವ ರಾಮನ್ – ಕೌಶಲವೇ ಈ ಭಾಷಣಗಳ ವೈಶಿಷ್ಟ್ಯ. ಸಂಶೋಧನೆಗಳು ಹೇಗೆ ಸುಲಭೋಪಕರಣಗಳಿಂದ ಸಾಧ್ಯವಾಗಬೇಕೆಂದು ಅವರು ನಂಬಿ ಆಚರಿಸುತ್ತಿದ್ದರೋ ಹಾಗೆ ಸಂಶೋಧನೆಗಳ ಫಲವಾದ ಸಿದ್ಧಾಂತ ನಿರೂಪಣೆಯೂ ಅಷ್ಟೇ ಸುಲಭವಾಗಿ ತಿಳಿಭಾಷೆಯಲ್ಲಿ ಆಗಬೇಕೆಂದು ನಂಬಿ ಅದರ ಮಾದರಿಯನ್ನು ತಾವೇ ಹಾಕಿಕೊಡುತ್ತಿದ್ದರು. ವಯಸ್ಸು ೮೨ರಲ್ಲಿ ಸಹ ಸುಹಾಸ ಪ್ರಜ್ಞೆಯನ್ನೂ ಕ್ಷಿಪ್ರ ಗ್ರಹಣ ಸಾಮರ್ಥ್ಯವನ್ನೂ ಉಳಿಸಿಕೊಂಡಿದ್ದುದೊಂದು ಇವರ ದೊಡ್ಡ ಆಸ್ತಿ.

ರಾಮನ್ನರ ಅಸಂಖ್ಯ ಭಾಷಣಗಳಿಂದ ಒಂದೆರಡು ಮಾದರಿಗಳನ್ನು ಆಯ್ದು ಇಲ್ಲಿ ಬರೆದಿದೆ:
೧೯೨೬ರಲ್ಲಿ ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಪದವಿ ಪ್ರದಾನ ಸಮಾರಂಭದಲ್ಲಿ ಹೇಳಿದುದು, "... ನಾವಿಂದು ವೇದಕಾಲದಲ್ಲಿ ಜೀವಿಸುತ್ತಿಲ್ಲ. ಆಧುನಿಕ ಯುಗದಲ್ಲಿದ್ದೇವೆ. ಸಂಶೋಧನೆಯ ಯುಗದಲ್ಲಿದ್ದೇವೆ. ಕಲ್ಪನೆ ಹೊಸ ಹೊಸ ಕ್ಷೇತ್ರಗಳಲ್ಲಿ ವಿಹರಿಸಿ ಸಂಶೋಧನೆ ನಡೆಸಿ ನಿಸರ್ಗದ ನಿಗೂಢ ಸಮಸ್ಯೆಗಳನ್ನು ಬಗೆಹರಿಸುವ ದಾರಿಯಲ್ಲಿದ್ದೇವೆ. ವ್ಯಕ್ತಿಯ ಸಕಲ ಶಕ್ತಿಗಳೂ ಈ ದಾರಿಯಲ್ಲಿ ಕೇಂದ್ರೀಕೃತವಾಗಿವೆ. ಇಂಥ ಮಾನವ ಶಕ್ತಿಯ ಪ್ರವಾಹದ ವೇಳೆ ಭಾರತದಲ್ಲಿರುವ ನಾವು ದಂಡೆಯಲ್ಲಿ ನಿಂತು ಬೆರಗಾಗಿ ನೋಡುತ್ತಿರಬಾರದು. ಹೀಗೆ ನಿಂತರೆ ನಾವು ಅಸಮರ್ಥರು, ಗೂಡಿನಲ್ಲಿ ಬೀಗ ಹಾಕಿಸಿಟ್ಟುಕೊಳ್ಳಲು ಮಾತ್ರ ಯೋಗ್ಯರು ಎಂದು ಒಪ್ಪಿಕೊಂಡಂತೆ. ಆರ್ಥಿಕವಾಗಿಯೂ ರಾಜಕೀಯವಾಗಿಯೂ ಅದು ನಮ್ಮ ಸರ್ವನಾಶ."

ಇನ್ನೊಮ್ಮೆ ಹೀಗೆ ಹೇಳಿದರು, "ಸಂಶೋಧನೆ ಎಂದರೇನು? ಜ್ಞಾನದ ಅನ್ವೇಷಣೆ. ಆದ್ದರಿಂದ ವಿದ್ಯಾಭ್ಯಾಸದ ಪ್ರತಿ ಅಂಗದಲ್ಲಿಯೂ ಸಂಶೋಧನೆಗೆ ಪ್ರಥಮ ಸ್ಥಾನವಿರಬೇಕು. ಇಂದು ಜ್ಞಾನ ಎಂದರೆ ಗ್ರಂಥಗಳಿಗೆ ಸೀಮಿತವಾಗಿರುವ ಗತ ಜ್ಞಾನ ಅಲ್ಲ – ಅದು ಜೀವಂತವಾಗಿರುವ ಮತ್ತು ಸದಾ ವರ್ಧಿಸುತ್ತಿರುವ ಸತ್ತ್ವ."

ಸರ್ ಬಿರುದು (ನೈಟ್ ಪದವಿ) ಬಂದಾಗ (೧೯೨೯) ಅವರನ್ನು ಕೊಲ್ಕಟದಲ್ಲಿ ಸತ್ಕರಿಸಲಾಯಿತು. ಆ ಸಂದರ್ಭದಲ್ಲಿ ಅವರು ಹೇಳಿದ ಮಾತು, "ನಾನು ನನ್ನ ವಿಜ್ಞಾನ ಜೀವನವನ್ನು ಈಗ ತಾನೇ ಆರಂಭಿಸುತ್ತಿದ್ದೇನೆ. ಯಾವಾತ ವಿಜ್ಞಾನದಿಂದ ಕೀರ್ತಿ, ಧನಲಾಭ ಆಗುವುದೆಂದು ಆ ಕ್ಷೇತ್ರದಲ್ಲಿ ಕೆಲಸ ಮಾಡುವನೋ ಅವನಿಗೆ ಅವು ಬಿಸಿಲ್ಗುದುರೆಗಳಾಗುವುವು. ವಿಜ್ಞಾನವನ್ನು ವಿಜ್ಞಾನಕ್ಕಾಗಿಯೇ ಅಭ್ಯಸಿಸುವ ಅನ್ವೇಷಕನಿಗೆ ಮಾತ್ರ ವಿಜ್ಞಾನದ ಅಲಭ್ಯ ಫಲಗಳು ಲಭಿಸುವುವು. ಗೌರವ, ಕೀರ್ತಿ, ಪಾರಿತೋಷಿಕ ಮುಂತಾದವು ಆ ದಾರಿಯಲ್ಲಿ ದೊರೆಯಬಹುದಾದ ಕೇವಲ ಆಕಸ್ಮಿಕಗಳು."

೧೯೨೯ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪದವೀಪ್ರದಾನ ಸಮಾರಂಭದಲ್ಲಿ ಹೇಳಿದ ಮಾತು, "ಬೌದ್ಧಿಕ ಮೌಲ್ಯಗಳನ್ನು ತಿಳಿಯುವುದರ ಜೊತೆಗೆ ಸಾಮಾಜಿಕ ಪ್ರಜ್ಞೆಯನ್ನೂ ಉನ್ನತ ಸಂಸ್ಕೃತಿ ಒಳಗೊಂಡಿದೆ. ಸುಸಂಕೃತ ವ್ಯಕ್ತಿಗೆ ಅರ್ಥಹೀನ ತತ್ತ್ವ, ಗೊಡ್ಡು ಸಿದ್ಧಾಂತ, ಕುರುಡುನಂಬಿಕೆಗಳಿಂದ ಏನೂ ಪ್ರಯೋಜನವಿಲ್ಲ. ದೇಶವನ್ನು ದುರ್ಬಲಗೊಳಿಸುವ ಮತೀಯ ವೈಷಮ್ಯ, ಜಾತೀಯ ಕಲಹ ಇವನ್ನು ಪುರಸ್ಕರಿಸುವ ನೆಲೆ ವಿಶ್ವವಿದ್ಯಾಲಯವಾದರೆ ಅದು ಜ್ಞಾನದ ದೇವಾಲಯವಾಗುವುದರ ಬದಲು ಅಜ್ಞಾನದ ಕ್ರಿಮಿಕೀಟಗಳನ್ನು ಉತ್ಪಾದಿಸುವ ಕೊಳಚೆಗುಂಡಿಯಾಗುವುದು. ವೈಯಕ್ತಿಕ ಯೋಗ್ಯತೆ, ಸಾಮರ್ಥ್ಯ, ಶೀಲ ಇವೇ ವಿಶ್ವವಿದ್ಯಾಲಯದಲ್ಲಿ ಜಯದೆಡೆಗೆ ರಹದಾರಿಯಾಗಬೇಕು. ವಿವಿಧ ಅಭಿಪ್ರಾಯ ಭಾವನೆಗಳ ಸಮನ್ವಯಕ್ಷೇತ್ರ ವಿಶ್ವವಿದ್ಯಾಲಯವಾಗಬೇಕು. ಪರಸ್ಪರ ಸೌಹಾರ್ದ, ಸಹಿಷ್ಣುತೆ ಇಲ್ಲಿರಬೇಕು. ನಮ್ಮ ವಿಶ್ವವಿದ್ಯಾಲಯಗಳು ಇಂಥ ಉದಾತ್ತ ಧ್ಯೇಯಗಳಿಂದ ಪ್ರೇರಿತವಾದರೆ ದೇಶದ ಸಮಸ್ಯೆಗಳನ್ನು ಪರಿಹರಿಸಲು ಅವು ಬೇರೆ ಎಲ್ಲ ಸಂಸ್ಥೆಗಳಿಗಿಂತಲೂ ಹೆಚ್ಚು ಸಮರ್ಥವಾಗಬಲ್ಲವು."

ಒಂದು ಭಾಷಣದಲ್ಲಿ ರಾಮನ್ ಹೀಗೆಂದು ಹೇಳಿದ್ದಾರೆ "ಆವಿಷ್ಕಾರ (Discovery) ಎಂಬ ಪದವೇ ಒಂದು ನಾಟಕೀಯ ಹಾಗೂ ಉದ್ದೀಪಿತ ಘಟನೆಯನ್ನು ಸೂಚಿಸುತ್ತದೆ. ಉದಾಹರಣೆಗೆ, ಗದ್ದೆ ಉಳುವಾಗ ೫೦ ಕ್ಯಾರಟಿನ ವಜ್ರ ದೊರೆತರೆ ಹೇಗಾದೀತು, ಹಾಗೆ. ವಿಜ್ಞಾನದ ಇತಿಹಾಸದಲ್ಲಿ ಇಂಥ ನಾಟಕೀಯ ಆವಿಷ್ಕಾರಗಳಿಗೆ ವಿಪುಲ ಉದಾಹರಣೆಗಳಿವೆ. ಘಟನೆ ಜರಗಿದ ತತ್ಕ್ಷಣವೇ ಆ ವಿಜ್ಞಾನಿಯ ವೈಯಕ್ತಿಕ ವರ್ತನೆಯಲ್ಲಿ ಅದರ ನಾಟಕೀಯತೆಯೂ ಉದ್ದೀಪನೆಯೂ ವಿಶಿಷ್ಟವಾಗಿ ಅಭಿವ್ಯಕ್ತಿಗೊಂಡಿರುತ್ತವೆ." ಆರ್ಕಿಮಿಡೀಸನ ಇತಿಹಾಸಪ್ರಸಿದ್ಧ ಉದ್ಗಾರ 'ಯುರೀಕಾ'ವನ್ನು ಅವರು ಉದಾಹರಿಸಿದ್ದಾರೆ. ಅಂದ ಮಾತ್ರಕ್ಕೆ ಇಂಥ ಆವಿಷ್ಕಾರಗಳೇನೂ ಅಪಾತ್ರರಿಗೆ ಲಭಿಸಿದ ಆಕಸ್ಮಿಕಗಳಲ್ಲ.

"ಒಂದು ವೈಜ್ಞಾನಿಕ ಆವಿಷ್ಕಾರ ಆಕಸ್ಮಿಕ ಘಟನೆ ಎಂದೇ ಭಾವಿಸುವುದಾದರೆ ಅದು ಅರ್ಹ ವ್ಯಕ್ತಿಗಲ್ಲದೇ ಬೇರೆ ಯಾರಿಗೂ ಒದಗಿಬರುವುದಿಲ್ಲ. ಆದ್ದರಿಂದ ವೈಜ್ಞಾನಿಕ ಆವಿಷ್ಕಾರ ಆಕಸ್ಮಿಕವಲ್ಲ ಎಂಬುದು ಸ್ಪಷ್ಟ. ವಿಜ್ಞಾನದಲ್ಲಿ ಆವಿಷ್ಕರ್ತೃ ಸದಾ ಜ್ಞಾನ ಹಾಗೂ ಸತ್ಯಾನ್ವೇಷಿಯಾಗಿಯೇ ಇರುತ್ತಾನೆ. ತಾನು ಆಯ್ದ ಒಂದು ಕ್ಷೇತ್ರದಲ್ಲಿ ನಿಷ್ಠಾಪೂರ್ವಕ ದುಡಿಮೆಯಿಂದ ಸ್ಫೂರ್ತಿ ಪಡೆದು ಒಂದಲ್ಲ ಒಂದು ದಿವಸ ಎಳ್ಳಷ್ಟಾದರೂ ಹೊಸತನ್ನು ಕಂಡೇನು ಎಂಬ ವಿಶ್ವಾಸದಿಂದ ಮುಂದುವರಿಯುತ್ತಿರುವನು."

ವಿಜ್ಞಾನವೇ ತನ್ನ ಮತ ಎಂದು ಘೋಷಿಸಿ ಅದೇ ಧರ್ಮವನ್ನು ಕೊನೆ ಉಸಿರಿನ ತನಕವೂ ಪಾಲಿಸುತ್ತ ಬಂದಿದ್ದ ಈ ವಿಜ್ಞಾನಿಗೆ ದೇವರನ್ನು ಕುರಿತು ಏನು ಭಾವನೆ ಇತ್ತು? ೧೯೩೬ರಲ್ಲಿ ನಡೆದ ಒಂದು ಘಟನೆ ಟೆಂಡೂಲ್ಕರರ 'ಮಹಾತ್ಮ' ಗ್ರಂಥದ ನಾಲ್ಕನೆಯ ಸಂಪುಟದಲ್ಲಿ ವರದಿ ಆಗಿದೆ.

೧೯೩೬ರ ಮೇ ಮೂರನೆಯ ವಾರ. ಮಹಾತ್ಮಗಾಂಧಿ ನಂದಿಬೆಟ್ಟದ ಮೇಲೆ ವಿಶ್ರಾಂತಿ ಪಡೆಯಲು ತಂಗಿದ್ದಾರೆ. ಸ್ವಿಟ್ಸರ್‌ಲೆಂಡಿನ ಒಬ್ಬ ಕ್ರಿಶ್ಚಿಯನ್ ವಿಜ್ಞಾನಿಯನ್ನು ರಾಮನ್ ಮಹಾತ್ಮಾಜಿಯವರಿದ್ದಲ್ಲಿಗೆ ಕರೆದುಕೊಂಡು ಹೋಗಿದ್ದಾರೆ. ಮಾತು ವಿಜ್ಞಾನದಿಂದ ಮತಗಳೆಡೆಗೆ ಹೊರಳಿದೆ. ಕ್ರಿಶ್ಚಿಯನ್ ಮತೀಯರು ತಮ್ಮ ಮತವನ್ನು ಕುರಿತು ತಾಳಿದ್ದ ಸರ್ವೋತ್ಕೃಷ್ಟತೆಯ ಮನೋಭಾವ ತಮಗೆ ಇನ್ನೂ ಅರ್ಥವಾಗಿಲ್ಲವೆಂದು ಸಕಾರಣವಾಗಿ ಗಾಂಧೀಜಿ ವಾದ ಮಂಡಿಸಿದ್ದಾರೆ.

ಕ್ರಿಶ್ಚಿಯನ್ ವಿಜ್ಞಾನಿ ಗಾಂಧೀಜಿಗೆ ಒಂದು ಸವಾಲು ಹಾಕಿದ್ದಾರೆ, "ನಾವು ನೀವು ಒಂದಾಗುವುದು ಸಾಧ್ಯವಿಲ್ಲವೆಂದಾದರೆ ಏರುತ್ತಿರುವ ನಾಸ್ತಿಕತೆಯ ವಿರುದ್ಧವಾದರೂ ಒಟ್ಟಾಗಿ ಹೋರಾಡಬಹುದಲ್ಲ?"

ಇಷ್ಟು ಹೊತ್ತು ತೆಪ್ಪಗೆ ಆಲಿಸುತ್ತಿದ್ದ ರಾಮನ್ ನುಡಿದಿದ್ದಾರೆ, "ನಾನು ನಿಮ್ಮ ಪ್ರಶ್ನೆಗಳಿಗೆ ಉತ್ತರ ಕೊಡುತ್ತೇನೆ. ದೇವರು ಇರುವುದಾದರೆ ಆತನನ್ನು ವಿಶ್ವದಲ್ಲಿ ನೋಡಲು ನಾವು ಹವಣಿಸಬೇಕು. ಅವನು ಅಲ್ಲಿ ಇಲ್ಲದಿದ್ದರೆ ಆತನ ಅರಸಿಕೆ

ವ್ಯರ್ಥ ಶ್ರಮ. ಅನೇಕ ವಲಯಗಳಲ್ಲಿ ನನ್ನನ್ನೊಬ್ಬ ನಾಸ್ತಿಕ ಎಂದು ನೋಡುವುದಿದೆ. ಆದರೆ ನಾನು ಹಾಗಿಲ್ಲ. ಖಗೋಳ ವಿಜ್ಞಾನ ಹಾಗೂ ಭೌತವಿಜ್ಞಾನಗಳಲ್ಲಿ ದಿನೇ ದಿನೇ ಆಗುತ್ತಿರುವ ಆವಿಷ್ಕಾರಗಳು ದೇವರ ಅಸ್ತಿತ್ವದ ಪುನಃ ಪುನಃ ಅಭಿವ್ಯಕ್ತಿಗಳು ಎಂದು ನನ್ನ ನಂಬಿಕೆ. ಮಹಾತ್ಮಾಜಿಯವರೇ! ಮತಗಳು ಐಕ್ಯವನ್ನು ಸಾಧಿಸಲಾರವು. ಸಂಪೂರ್ಣ ಸಾಹಚರ್ಯೆಗೆ ವಿಜ್ಞಾನ ಅತ್ಯುತ್ಕೃಷ್ಟ ಸಂದರ್ಭವನ್ನು ಒದಗಿಸುತ್ತದೆ. ವಿಜ್ಞಾನದ ಎಲ್ಲ ವ್ಯಕ್ತಿಗಳೂ ಸಹೋದರರು.
"ಹಾಗಾದರೆ ವಿಲೋಮೋಕ್ತಿಯ ವಿಚಾರವೇನು?" ಗಾಂಧೀಜಿ ಮುಂದುವರಿಸುತ್ತ "ವಿಜ್ಞಾನದ ವ್ಯಕ್ತಿಗಳಲ್ಲದವರೆಲ್ಲ ಸಹೋದರರಲ್ಲ?" ಎಂದು ಕೇಳಿದರು.
ತಮ್ಮ ವಾದ ತಮಗೇ ಮರುಕಳಿಸಿದ್ದು ರಾಮನ್ನರಿಗೆ ಗೊತ್ತಾಯಿತು, "ಆದರೆ ಎಲ್ಲರೂ ವಿಜ್ಞಾನದ ವ್ಯಕ್ತಿಗಳಾಗಬಹುದು" ಎಂದು ಪಡಿನುಡಿದರು.

ರಾಮನ್ನರನ್ನು ಕುರಿತು ಪ್ರಚಲಿತವಿರುವ ಆಖ್ಯಾನಕಗಳು (anecdotes) ಅಸಂಖ್ಯ. ಅವುಗಳ ಪೈಕಿ ಅಧಿಕೃತ ಮೂಲಗಳಿಂದ ಸಂಪಾದಿಸಿದ ಕೆಲವನ್ನು ಇಲ್ಲಿ ಬರೆದಿದೆ. ಇಲ್ಲಿ ಅಂತರ್ಗತವಾಗಿರುವ ಭಾವ ಒಂದೇ – ವಿಜ್ಞಾನ ಅವರ ಮತ, ಕಡುನಿಷ್ಠೆ ಪಥ, ಸುಹಾಸ ಪ್ರಜ್ಞೆ ವ್ರತ, ಧ್ರುವತಾರೆ ಋತ.

ಇಸವಿ ೧೯೦೧. ಸ್ಥಳ ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜ್. ಇಂಗ್ಲಿಷ್ ಸಾಹಿತ್ಯದ ಪ್ರಾಧ್ಯಾಪಕರಾಗಿದ್ದ ಪ್ರೊ ಇ.ಎಚ್ ಇಲಿಯಟ್ ಒಬ್ಬ ಅಣುಗನನ್ನು ಕುರಿತು ಆಶ್ಚರ್ಯದಿಂದ ಪ್ರಶ್ನಿಸುತ್ತಿದ್ದಾರೆ, "ನೀನು ಬಿಎ ವಿದ್ಯಾರ್ಥಿ ಎಂಬುದು ನಿಜವೇ?"
"ಹೌದು ಸಾರ್!"
"ನಿನಗೆಷ್ಟು ವಯಸ್ಸು?"
"ಹದಿಮೂರು ಸಾರ್!" ಆತ್ಮವಿಶ್ವಾಸದಿಂದ ಉತ್ತರವಿತ್ತರು ಭಾವೀ ಸರ್ ಸಿ.ವಿ ರಾಮನ್.

ಕೆಲವು ವರ್ಷಗಳು ಸಂದಿವೆ (೧೯೦೭). ಕೊಲ್ಕಟ ರೇಲ್ವೇ ನಿಲ್ದಾಣದಲ್ಲಿ ಪ್ರತಿಷ್ಠಿತ ಅಧಿಕಾರಿಗಳ ಒಂದು ಗುಂಪು ನಿಂತಿದೆ. ಅವರು ಹಿಡಿದಿರುವ ಹಾರತುರಾಯಿಗಳನ್ನು ನೋಡಿದರೆ ಉಚ್ಚ ಅಧಿಕಾರಿಯೊಬ್ಬನನ್ನು ನಿರೀಕ್ಷಿಸುತ್ತಿದ್ದಂತೆ ಭಾಸವಾಗುತ್ತಿತ್ತು. ಮದ್ರಾಸಿನಿಂದ ಬರಬೇಕಾಗಿದ್ದ ಬಂಡಿ ಬಂದಿತು. ಅಧಿಕಾರಿಗಳು ಪ್ರಥಮ ದರ್ಜೆಯ ಡಬ್ಬಿ ಅರಸಿ ಓಡಿದರು. ಆದರೆ ತಾವು ಕಲ್ಪಿಸಿಕೊಂಡಿದ್ದಂಥ ಉಚ್ಚ ಅಧಿಕಾರಿ ಯಾರೂ ಅದರಿಂದ ಇಳಿದಂತೆ ತೋರಲಿಲ್ಲ; ಹತಾಶರಾದರು. ಅದೇ ಡಬ್ಬಿಯಿಂದ ಪುಸ್ತಕಗಳ ಗಂಟು ಸಮೇತ ಆಗತಾನೇ ಇಳಿಯುತ್ತಿದ್ದ ತರುಣನನ್ನು ಕೇಳಿದರು.
"ಶ್ರೀ ಸಿ.ವಿ ರಾಮನ್ ಎನ್ನುವ ಅಧಿಕಾರಿ ಈ ಡಬ್ಬಿಯಲ್ಲಿ ಬಂದಿರುವರೇ?"
"ನಾನೇ ಅವನು!"

೧೯೩೦ರಲ್ಲಿ ನೊಬೆಲ್ ಪಾರಿತೋಷಿಕ ಲಭಿಸಿದಾಗ ರಂಗೂನಿನಲ್ಲಿ ರಾಮನ್ನರನ್ನು ಗೌರವಿಸಲಾಯಿತು. ಆ ಸಂದರ್ಭದಲ್ಲಿ ಅವರು ಹೇಳಿದ ಒಂದು ಮಾತು, "ನಮ್ಮ ಹಲವಾರು ತರುಣರು ಇಂಗ್ಲೆಂಡಿಗೆ ಐಸಿಎಸ್, ಬ್ಯಾರಿಸ್ಟರ್ ಅಥವಾ ಬೇರಾವುದಾದರೂ ಉನ್ನತ ಪದವಿಗಳಿಸಲು ಹೋಗುತ್ತಾರೆ. ಸಾಮಾನ್ಯವಾಗಿ ಅವರು ವಿಫಲರಾಗುತ್ತಾರೆ. ಆದರೂ ಬಹು ಸಂದರ್ಭಗಳಲ್ಲಿ ಅವರು ತಮ್ಮ ಐಐಆಯನ್ನೇನೋ ಚೆನ್ನಾಗಿಯೇ ಸಂಪಾದಿಸಿರುತ್ತಾರೆ," ರಾಮನ್ ನಿಧಾನಿಸಿದರು. ಸಭೆ ಇದು ಹೇಗೆ ಸಾಧ್ಯ ಎಂದು ಚಿಂತಿಸುತ್ತಿತ್ತು, ಮಾತು ಮುಂದುವರಿಯಿತು. "LLD ಎಂದರೆ ನನ್ನ ಅರ್ಥ Land Lady's Daughter!"

ಕೊಲ್ಕಟ ನಗರದಲ್ಲಿ ಪ್ರಯೋಗಶೀಲ ರಾಮನ್ ಸಿಂಹದಾಪುಗಳನ್ನು ಇಟ್ಟು ನಡೆಯುತ್ತಿದ್ದ ದಿವಸಗಳು. ಒಂದು ರಾತ್ರಿ ಅವರಿಗೆ ಯಾವುದೋ ವೈಜ್ಞಾನಿಕ ಸಮಸ್ಯೆ ಗಾಢವಾಗಿ ಅಂಟಿಕೊಂಡಿತು. ಮನೆ, ಊಟ, ನಿದ್ರೆ ಮರೆತು ಅದರ ಪರಿಹಾರಾನ್ವೇಷಣೆಯಲ್ಲಿಯೇ ಪ್ರಯೋಗಮಂದಿರದಲ್ಲಿ ರಾತ್ರಿಯ ಬಹು ಭಾಗ ಕಳೆದರು. ತಡವಾಗಿ ಮನೆಗೆ ಮರಳಿದಾಗ ಕಂಡದ್ದೇನು? ಅವರ ತರುಣ ಪತ್ನಿ ತಾನೂ ಊಟ ನಿದ್ರೆ ಮಾಡದೆ ಪತಿಯ ಬರವನ್ನು ಕಾದು ಕುಳಿತಿದ್ದರು. ರಾಮನ್ನರಿಗೆ ತತ್‌ಕ್ಷಣ ಸ್ಫೋಟಿಸಿದ್ದು ಅಸಹನೆ, ಕೂಗಾಡಿದರು. ಅಪರಾತ್ರಿಯ ಈ ರಂಪ ಕೇಳಿ ನೆರೆಕರೆಯವರು ಓಡಿ ಬಂದು ದಂಪತಿಗಳ ಸಾತ್ತ್ವಿಕ ಕೋಪವನ್ನು ಶಮನಿಸಿದರು.

ಎಸ್.ಆರ್ ರಂಗನಾಥನ್ ಮದ್ರಾಸು ವಿಶ್ವವಿದ್ಯಾಲಯದ ಗ್ರಂಥಾಲಯ ಮುಖ್ಯರಾಗಿದ್ದಾಗ ರಾಮನ್ ಅಲ್ಲೊಂದು ಉಪನ್ಯಾಸ ಕೊಟ್ಟರು. ವಿಷಯ 'ಗ್ರಂಥಾಲಯ ಅದರ ಉಪಯೋಗಗಳು.' ಭಾಷಣ ಪ್ರಾರಂಭ ಮಾಡಿದ ಬಗೆ ಹೀಗಿತ್ತು, "ಎರಡು ವರ್ಷಗಳ ಹಿಂದೆ ಬೇರೆ ಒಂದು ಸ್ಥಳದಲ್ಲಿ ಒಮ್ಮೆ ವಿನೋದಕ್ಕಾಗಿ ಒಂದು ಮಾತು ಹೇಳಿದೆ '೫,೦೦,೦೦೦ ಪುಸ್ತಕಗಳನ್ನು ಓದುವುದೆಂದರೆ ಅದೆಂಥ ತಲೆ ನೋವು ಎಂಬುದನ್ನು ಕಲ್ಪಿಸಿಕೊಳ್ಳಿ.' ಅದೇ ಧಾಟಿಯಲ್ಲಿ ಮುಂದುವರಿಸುತ್ತ 'ಗ್ರಂಥಾಲಯಗಳನ್ನು ಆಗಾಗ ಸುಟ್ಟು ಹಾಕುವುದೊಂದೇ ಜ್ಞಾನವರ್ಧನೆಯ ಅತ್ಯುತ್ತಮ ಮಾರ್ಗ' ಎಂದು ಸಹ ಸೂಚಿಸಿದೆ. ಸ್ಥಳೀಯ ನಗೆ ಪತ್ರಿಕೆಗಳು ಈ ಸೂಚನೆಯನ್ನು ಚೆನ್ನಾಗಿಯೇ ಸ್ವೀಕರಿಸಿದುವು. ಮುಂದೆ ಕೆಲವೇ ದಿವಸಗಳಲ್ಲಿ ಲೇಡಿ ರಾಮನ್ ನನಗೆ ಇಂಥ ಒಂದು ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಅಣಕುಚಿತ್ರವನ್ನು ತೋರಿಸಿದರು. ಅದರಲ್ಲಿ ನನ್ನನ್ನು ಒಬ್ಬ ಪಂಜು ದಾಳಿಗಾರನನ್ನಾಗಿ ಕಾಣಿಸಿದ್ದರು. ನಾನು ಕೈಯಲ್ಲಿ ಉರಿಯುವ ದೊಂದಿ ಹಿಡಿದು ಇದೇ ಗ್ರಂಥ ಭಂಡಾರವನ್ನು ಸುಡಲು ಧಾವಿಸುತ್ತಿದ್ದೆ. ಈ ತಮಾಷೆ ನೋಡಲು ಮಕ್ಕಳ ಒಂದು ಪಡೆಯೇ ಕೆಲೆಕೆಲೆಯುತ್ತ ನನ್ನನ್ನು ಹಿಂಬಾಲಿಸುತ್ತಿತ್ತು. ಎಸ್.ಆರ್ ರಂಗನಾಥನ್ ನನ್ನ ಎದುರು ಮಂಡಿಯೂರಿ ನಿಂತು ಹಾಗೆ ಮಾಡಬಾರದಾಗಿ ಅಂಗಲಾಚಿ ಬೇಡುತ್ತಿದ್ದರು. ಈಗ ಅದೇ ನಾನು ಗ್ರಂಥಾಲಯಗಳ ಸರ್ವೋತ್ಕೃಷ್ಟತೆಯನ್ನು ಕುರಿತು ನಿಮ್ಮೆದುರು ಮಾತಾಡಲು ನಿಂತಿದ್ದೇನೆ! ಯಾವ ಮೋರೆಯಿಂದ ಆರಂಭಿಸಲಿ?"

ಚೆನ್ನೈಯಲ್ಲಿ ಪ್ರತಿಷ್ಠಿತರ ಒಂದು ಸಭೆ (೧೯೩೯). ಸೈಕ್ಲೊಟ್ರೋನ್ ವಿಷಯ ರಾಮನ್ನರ ಭಾಷಣ. ಈ ಸಾಧನ ಏನೆಂದು ವಿವರಿಸುವ ಅಧಿಕೋತ್ಸಾಹದಲ್ಲಿ ಇವರು ಎದುರಿನ ಸಾಲಿನಲ್ಲಿ ಮಂಡಿಸಿದ್ದ ಹಿರಿಯ ವ್ಯಕ್ತಿಯೊಬ್ಬರ ಊರುಗೋಲನ್ನು ಸೆಳೆದುಕೊಂಡರು. ಅದನ್ನು ತಮ್ಮ ತಲೆಯ ಮೇಲೆ ಗಿರಗಿರನೆ ತಿರುಗಿಸುತ್ತ ಹೀಗೆಂದರು, "ಈಗ ನೋಡಿ ಮಹಾಶಯರೇ! ನಾನು ಈ ಕೋಲನ್ನು ಕೈಬಿಟ್ಟರೆ ಅದು ನಿಮ್ಮಲ್ಲಿ ಹಲವಾರು ಮಂದಿಯ ಮಂಡೆ ಒಡೆಯುವುದರಲ್ಲಿ ಸಂದೇಹವಿಲ್ಲ. ಆದರೆ ನಾನು ಹಾಗೆ ಮಾಡುವುದಿಲ್ಲ ಎಂದಿಟ್ಟುಕೊಳ್ಳಿ. ಸೈಕ್ಲೊಟ್ರೋನ್ ಕೆಲಸ ಮಾಡುವ ವಿಧಾನ ಹೀಗೆ!"

ಎಚ್.ಜೆ ಭಾಭಾ ರಾಮನ್ನರ ಶಿಷ್ಯ. ತಾವೇ ರಂಗಿಸಿದ್ದ ರಾಮನ್ ತೈಲಚಿತ್ರವನ್ನು ಅವರು ತಮ್ಮ ಗುರುಗಳಿಗೆ ಕೊಟ್ಟರು. ಅದನ್ನು ರಾಮನ್ ಬಲು ಮೆಚ್ಚುಗೆಯಿಂದ ನೋಡುತ್ತಿದ್ದಂತೆ ಭಾಭಾ ಹೇಳಿದರು, "ಒಬ್ಬ ವಿಜ್ಞಾನಿಯಿಂದ ಇನ್ನೊಬ್ಬ ವಿಜ್ಞಾನಿಯ ಚಿತ್ರವಿದು." ಕೂಡಲೇ ಬಂತು ರಾಮನ್ ವಾಣಿ "ಅಲ್ಲ ಅಲ್ಲ – ಒಬ್ಬ ಕಲಾವಿದನಿಂದ ಇನ್ನೊಬ್ಬ ಕಲಾವಿದನ ಕುಂಚನ."

ಒಂದು ಕಡೆ ರಾಮನ್ ಹೇಳಿದ್ದಾರೆ, "ಬೌದ್ಧಿಕ ಸೌಂದರ್ಯವೇ ಶ್ರೇಷ್ಠತಮ ಸೌಂದರ್ಯ. ನಿಸರ್ಗ ನಿರೂಪಣೆಗೋಸ್ಕರವೇ ಮೀಸಲಾಗಿರುವ ಮನುಷ್ಯನ ಸೌಂದರ್ಯ ಹಾಗೂ ಬುದ್ಧಿಕ್ರಿಯೆಗಳ ಬೆಸುಗೆಯೇ ವಿಜ್ಞಾನ. ಆದ್ದರಿಂದ ಇದು ಪರಮೋತ್ಕೃಷ್ಟ ಸೃಜನಶೀಲ ಕಲೆ."

ದಂತಗೋಪುರಗಳಲ್ಲಿ ಸೀಮಿತರಾಗಿರುವ ವಿಜ್ಞಾನಿಗಳು ಮಣ್ಣಿನ ಲೋಕಕ್ಕೆ ಇಳಿಯಬೇಕೆಂದು ಪ್ರಧಾನಮಂತ್ರಿ ಜವಾಹರಲಾಲ್ ನೆಹರೂ ಒಮ್ಮೆ ಕರೆ ನೀಡಿದರು. ಇದನ್ನು ಖಂಡಿಸುತ್ತ ರಾಮನ್ ಹೇಳಿದರು, "ವಾಸ್ತವವಾಗಿ ದಂತಗೋಪುರಗಳಲ್ಲಿರುವವರೇ ಗಮನಾರ್ಹರು. ಅವರೇ ಮಣ್ಣಿನ ಸಾರ. ಮಾನವ ಜನಾಂಗದ ಉಳಿವು ಹಾಗೂ ಪ್ರಗತಿ ಅವರನ್ನೇ ಅವಲಂಬಿಸಿದೆ." ತಮಗೆ ಈ ಟೀಕೆಯಿಂದ ಖಂಡಿತವಾಗಿಯೂ ಅಸಮಾಧಾನವಾಗಲಿಲ್ಲವೆಂದು ನೆಹರೂ ಆಶ್ವಾಸಿಸಿದರೆಂದು ರಾಮನ್ ಮುಂದೊಂದು ದಿವಸ ಹೇಳಿದರು.

ಇಂಡಿಯನ್ ಸೈನ್ಸ್ ಕಾಂಗ್ರೆಸ್ಸಿನ ವಾರ್ಷಿಕ ಅಧಿವೇಶನಗಳಿಗೆ ರಾಮನ್ ಹೋಗುತ್ತಿರಲಿಲ್ಲ. ರಾಮನಿಲ್ಲದ ರಾಮಾಯಣ ಉಂಟೇ? ಈ ವಿಷಯವನ್ನು ವಿ.ಟಿ ಶ್ರೀನಿವಾಸನ್ ಎಂಬವರು ರಾಮನ್ನರ ಗಮನಕ್ಕೆ ತಂದಾಗ ಇವರ ಉತ್ತರ, "ಸೈನ್ಸ್ ಕಾಂಗ್ರೆಸ್ಸುಗಳನ್ನು ರಾಜಕಾರಣಿಗಳು ಉದ್ಘಾಟನೆ ಮಾಡುವಂಥ ಬೇರೆ ಯಾವುದೇ ದೇಶದ ಉದಾಹರಣೆಯನ್ನು ನೀವು ನನಗೆ ಹೇಳಬಲ್ಲಿರಾ? ಹದಿನೇಳು ವರ್ಷಗಳಿಂದಲೂ, ಪ್ರತಿ ವರ್ಷವೂ ಅವಿಚ್ಛಿನ್ನವಾಗಿ, ಅದನ್ನು ಉದ್ಘಾಟಿಸಲು ಭಾರತದ ಪ್ರಧಾನಮಂತ್ರಿಯೊಬ್ಬರನ್ನು ಮಾತ್ರ ಇಂಡಿಯನ್ ಸೈನ್ಸ್ ಕಾಂಗ್ರೆಸ್ಸಿನ ವ್ಯವಸ್ಥಾಪಕರು ಯೋಚಿಸಬಲ್ಲವರಾಗಿದ್ದಾರೆ. ಮತ್ತೆ ಈಗ ಅವರ ಮಗಳನ್ನು ಆಹ್ವಾನಿಸಿದ್ದಾರೆ. ಆತ್ಮಾಭಿಮಾನ ಇರುವ ವಿಜ್ಞಾನಿಗಳು ಹೇಗೆ ತಾನೇ ಸೈನ್ಸ್ ಕಾಂಗ್ರೆಸ್ಸಿನಲ್ಲಿ ರಾಜಕಾರಣಿಗಳು ಗಳಹುವ ಪೊಳ್ಳುಮಾತುಗಳನ್ನು ಕೇಳಿಕೊಂಡಿರುವರು ಎಂಬುದು ನನಗೆ ಅರ್ಥವಾಗುವುದಿಲ್ಲ. ಇಂಡಿಯನ್ ಅಕಾಡೆಮಿ ಆಫ್ ಸೈನ್ಸಸ್ಸಿನ ಪ್ರಾರಂಭಕ್ಕೆ ಇದೊಂದು ಪ್ರೇರಣೆ ಆಗಿತ್ತು."

Philosophy of vision ಎಂಬ ಅವರ ಈಚಿನ (೧೯೬೮) ಪುಸ್ತಕವನ್ನು ಕುರಿತು ವಿ.ಟಿ ಶ್ರೀನಿವಾಸನ್ನರೊಡನೆ ರಾಮನ್ ಹೇಳಿದ ಮಾತು, "ಈ ಪುಸ್ತಕದಲ್ಲಿ ನಿರೂಪಿತವಾಗಿರುವ ಆವಿಷ್ಕಾರಗಳು ಯುಗಪ್ರವರ್ತಕ ಸ್ವಭಾವದಿಂದ ಕೂಡಿವೆ. ಆದರೆ ಇವನ್ನು ಗ್ರಹಿಸಲು ನೊಬೆಲ್ ಪಾರಿತೋಷಿಕ ಸಮಿತಿಗೆ ಇನ್ನೊಂದು ಇಪ್ಪತ್ತು ವರ್ಷಗಳ ಕಾಲಾವಧಿಯೇ ಬೇಕಾದೀತು. ಆಗ ನಾನು ಬದುಕಿರುವುದಿಲ್ಲ."

ರಾಮನ್ ಉತ್ತಮ ಪುಸ್ತಕ ಪ್ರಿಯರು. ವಿಜ್ಞಾನೇತರ ಪುಸ್ತಕಗಳಲ್ಲೂ ಅವರ ಆಸಕ್ತಿ ಅಪಾರವಾಗಿತ್ತು. ಸ್ಟೀವನ್ಸನ್ (ಕಿಡ್‌ನ್ಯಾಪ್ಡ್), ಎಡ್ವಿನ್ ಅರ್ನಾಲ್ಡ್ (ಲೈಟ್ ಆಫ್ ಏಸ್ಯಾ), ಮಾರ್ಟಿನ್ ಮತ್ತು ಲೂಕಾಸ್ (ಪ್ರವಾಸ ಗ್ರಂಥಗಳು) ಮೊದಲಾದವರು ರಾಮನ್ನರ ನೆಚ್ಚಿನ ಸಾಹಿತಿಗಳು. ಸಂಗೀತಪ್ರೇಮಿಗಳಾದ ರಾಮನ್ ಒಮ್ಮೆ ಹೇಳಿದರು, "ನನಗೆ ದೀರ್ಘ ಕಾಲ ಬದುಕಬೇಕೆಂದು ಹಂಬಲವಿದೆ – ನಾನು ಕೇಳಬೇಕೆಂದಿರುವ ಎಲ್ಲ ಸಂಗೀತವನ್ನು ಇನ್ನೂ ಆಲಿಸಿರುವುದಿಲ್ಲ."

ಫೆಬ್ರುವರಿ ೧೯೭೦ರಲ್ಲಿ ಎಂ.ಎನ್ ರುದ್ರಬಸವರಾಜ್ ಎಂಬವರಿಗೆ ಅಕಸ್ಮಾತ್ತಾಗಿ ರಾಮನ್ನರ ಪ್ರಥಮ ಭೇಟಿ ಬೆಂಗಳೂರಿನ ಒಂದು ಅಂಗಡಿಯಲ್ಲಿ ಆಯಿತು. ಮಾತು ಮುಂದುವರಿದಾಗ ರಾಮನ್ ಹೇಳಿದರು, "ನನಗೆ ಈಗಲೇ ಸಾಯಲು ಇಷ್ಟವಿಲ್ಲ. ಇನ್ನೂ ಕೆಲವು ವರ್ಷ ಬದುಕಬೇಕೆಂಬ ಆಸೆ ಇದೆ."
ರುದ್ರಬಸವರಾಜ್, "ತಾವು ವಿಜ್ಞಾನಪ್ರಪಂಚಕ್ಕೆ ನೀಡಬೇಕಾಗಿರುವ ಕೊಡುಗೆ ಇನ್ನೂ ಬೇಕಾದಷ್ಟಿದೆ, ಸಾರ್ ಮತ್ತು..." ರಾಮನ್ನರ ಚಟುವಟಿಕೆಯನ್ನು ಮೆಚ್ಚುತ್ತ ನುಡಿದರು.
"ಅಲ್ಲಲ್ಲ ಅದಕ್ಕಾಗಿ ಅಲ್ಲ" ಎಂದು ತನ್ನ ಭುಜ ಕುಲುಕಿ ಹೇಳಿದರು, "ಭಾರತ ಸರಕಾರ ನನ್ನ ರಾಷ್ಟ್ರೀಯ ಪ್ರಾಧ್ಯಾಪಕತ್ವವನ್ನು ಇನ್ನೊಂದು ಅವಧಿಯ ತನಕ ಮುಂದುವರಿಸಿದೆ. ಆ ತನಕ ನನಗೆ ಬದುಕಬೇಕೆಂದಿದೆ. ನನಗೆ ಈಗಲೇ ಸಾಯಲು ಏಕೆ ಇಷ್ಟವಿಲ್ಲ ಎಂಬುದು ನಿಮಗೆ ಈಗ ತಿಳಿಯಿತೇ?"

೧೯೭೦ರ ಗಾಂಧೀಜಿ ಜನ್ಮದಿವಸ ಭಾಷಣದಲ್ಲಿ ರಾಮನ್, "ಇದು ಬಹುಶಃ ಈ ಮಾಲೆಯಲ್ಲಿ ನನ್ನ ಕೊನೆಯ ಭಾಷಣ" ಎಂದು ಹೇಳಿದರೆಂದು ವರದಿ ಆಗಿದೆ. ೧೯೭೦ರ ನವೆಂಬರ್ ೫ರ ದೈನಿಕಗಳಲ್ಲಿ ಬಂದ ಒಂದು ಚುಟುಕು ಸುದ್ದಿ ಪ್ರಪಂಚದ ಲಕ್ಷ್ಯವನ್ನು ಬೇರೆ ಒಂದು ಕಾರಣಕ್ಕಾಗಿ ಬೆಂಗಳೂರಿನೆಡೆಗೆ ಸೆಳೆಯಿತು: "ಮೂರು ದಿವಸಗಳ ಹಿಂದೆ ಸಿ.ವಿ. ರಾಮನ್ನರಿಗೆ (೮೨) ಲಘು ಹೃದಯಾಘಾತವಾಯಿತು. ಅವರೀಗ ನಗರದ ಒಂದು ವೈದ್ಯಚಿಕಿತ್ಸಕ ಕೇಂದ್ರದಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾರೆ."

ಅವರ ಹುಟ್ಟುಹಬ್ಬ ಅದೇ ತಿಂಗಳ ೭ರಂದು. ಆದ್ದರಿಂದ ಆ ಮೊದಲೇ ಕೆಲವು ಪತ್ರಿಕಾ ಪ್ರತಿನಿಧಿಗಳು ರಾಮನ್ನರನ್ನು ಸಂದರ್ಶಿಸಿ ಸಂದೇಶಯಾಚನೆ ಮಾಡಿದ್ದರು. "ವಿಜ್ಞಾನವೇ ನನ್ನ ಮತ. ಕೊನೆಯತನಕವೂ ಅದನ್ನೇ ನಾನು ಪಾಲಿಸುವವ – ಭಾರತೀಯ ವಿಜ್ಞಾನಿಗಳಿಗೆ ತಮ್ಮ ಸಂಶೋಧನೆಗಳನ್ನು ಮುಂದುವರಿಸಲು ಸಾಕಷ್ಟು ಸೌಕರ್ಯಗಳಿಲ್ಲವೆಂಬುದನ್ನು ಒಪ್ಪಲಾರೆ" ಎಂದು ತಮ್ಮ ಮೇಜದ ಸೆಳೆಖಾನೆ ಎಳೆದು ಅದರಿಂದ ಪುಟ್ಟ ಪೆಟ್ಟಿಗೆಯನ್ನು ಹೊರತೆಗೆದು ತೋರಿಸುತ್ತ, "ನೋಡಿ – ಇದಿಷ್ಟೇ ನನ್ನ ಹತ್ಯಾರು" ಎಂದರು. "ನನ್ನ ಆಜನ್ಮ ಸಂಶೋಧನ ಕಾರ್ಯವಾದ ಬೆಳಕಿನ ಸಿದ್ಧಾಂತ ಹಾಗೂ ಬಣ್ಣಗಳು – ಇವನ್ನು ಮುಂದುವರಿಸಲು ಇಲ್ಲಿಯ ಸ್ವಾತಂತ್ರ್ಯ ನನಗೆ ಬಲು ಪ್ರಿಯವಾಗಿದೆ."

ಎಂಬತ್ತಮೂರನೆಯ ಹುಟ್ಟು ಹಬ್ಬದಂದು, ೭ ನವಂಬರ್ ೧೯೭೦, ತುಂಬು ಪ್ರಾಯದ ಈ ನಿಷ್ಠಾವಂತ ವಿಜ್ಞಾನಿ ಪೂರ್ಣ ಗುಣಮುಖರಾಗಿದ್ದರು. ಪ್ರಪಂಚಕ್ಕೆ ಈ ಕ್ಷಿಪ್ರ ಮರುಗಳಿಕೆ ಎಷ್ಟು ವಿಸ್ಮಯಕಾರಿಯಾಗಿತ್ತೋ ಅಷ್ಟೇ ಸಂತೋಷದಾಯಕವೂ ಆಗಿತ್ತು. ಚಿಕಿತ್ಸಕ ಕೇಂದ್ರದ (ಸೇಂಟ್ ಮಾರ್ತಾಸ್ ಹಾಸ್ಪಿಟಲ್) ವೈದ್ಯ ವೃಂದ ಈ ದ್ವಿಗುಣಿತ ಶುಭದಿವಸವನ್ನು ಸಂಭ್ರಮದಿಂದ ಆಚರಿಸಬೇಕು, ರಾಮನ್ನರಿಗೆ ಬಲುಪ್ರಿಯವಾದ ಹೂಗಳಿಂದ ಅವರ ಕೊಠಡಿಯನ್ನು ಸಿಂಗರಿಸಿ, ಅವರಿಗೆ ಪುಷ್ಪಗುಚ್ಛಗಳನ್ನು ತಮ್ಮ ಶುಭಕಾಮನೆಗಳ ಪ್ರತೀಕವಾಗಿ ಅರ್ಪಿಸಬೇಕು ಎಂದೆಲ್ಲ ಯೋಜನೆ ಹಮ್ಮಿಕೊಂಡಿತ್ತು. ಇದನ್ನು ತಿಳಿದ ರಾಮನ್ (ಇವರಿಗೆ ಹುಟ್ಟು ಹಬ್ಬದ ಆಚರಣೆಯನ್ನು ಕುರಿತು ಏನೂ ನಂಬಿಕೆ ಇರಲಿಲ್ಲ) ವೈದ್ಯರ ಮೇಲೆ ಸಾತ್ತ್ವಿಕ ಕ್ರೋಧ ತಳೆದರು, "ಅವನ್ನು ಇರುವಲ್ಲೇ ಬಿಟ್ಟುಬಿಡಿ. ಹೂಗಳನ್ನು ಕೀಳದೇ

ಅವುಗಳ ಚೆಲುವನ್ನು ನೀವು ಸವಿಯಬಹುದು." ಸಭೆ ಸಮಾರಂಭಗಳಲ್ಲಿ ರಾಮನ್ನರಿಗೆ ಪುಷ್ಪಹಾರ ತೊಡಿಸಿದಾಗ ಅವರದನ್ನು ಕತ್ತಿನಿಂದ ತೆಗೆದಿಡುವ ಸಂಪ್ರದಾಯವನ್ನು ಪಾಲಿಸುತ್ತಿರಲಿಲ್ಲ.

ಎಂಬತ್ತಮೂರನೆಯ ವಸಂತದಲ್ಲಿ ಪಾದಾರ್ಪಣೆ ಮಾಡಿದ ಆರೋಗ್ಯವಂತ ರಾಮನ್ ಸ್ವಧಾಮಕ್ಕೆ ನವಂಬರ್ ೮ರಂದು ಮರಳಿದರು. ಆದರೆ ಈ ಹಣತೆಯಲ್ಲಿ ಎಣ್ಣೆ ತೀರುತ್ತ ಬಂದಿತ್ತು. ೨೦ರ ಬೆಳಗ್ಗೆ ಹಠಾತ್ತಾಗಿ ಅವರ ಪರಿಸ್ಥಿತಿ ಉಲ್ಬಣಗೊಂಡಿತು. ಆದರೆ ಅಷ್ಟೇ ಚುರುಕಾಗಿ ಅಂದು ರಾತ್ರಿಯಾಗುವಾಗ ಚೇತರಿಸಿಕೊಂಡಿದ್ದರು. ಈ ವೇಳೆಗೆ ಅವರ ಎರಡನೆಯ ಮಗ ವಿ. ರಾಧಾಕೃಷ್ಣನ್ ಆಸ್ಟ್ರೇಲಿಯಾದಿಂದ ಬಂದು ತಂದೆ ತಾಯಿಯರೊಡನೆ ಸೇರಿದ್ದರು. ರಾಮನ್ ಮಾತಾಡಿದರು. ಮಾತಾಡಿದ ವಿಷಯ ವಿಜ್ಞಾನ, ಗಾಂಧಿ, ಏಸುಕ್ರಿಸ್ತ ಮತ್ತು ಸತ್ಯ. ತೋರಿಕೆಗೆ ಇವು ವಿಭಿನ್ನವೆಂದು ಭಾಸವಾದರೂ ಇವುಗಳ ಮೂಲ ಅಮೂರ್ತ ಗುಣ ಒಂದೇ – ಸತ್ಯ. ಈ ಸತ್ಯಾನ್ವೇಷಕ ವಿಜ್ಞಾನಿ ಮರುದಿನ, ೨೧ ನವೆಂಬರ್ ೧೯೭೦, ಮುಂಜಾನೆ ೭.೨೭ ಗಂಟೆಗೆ ಚಿರಂತನ ಸತ್ಯದಲ್ಲಿ ಲೀನವಾಗಿ ಹೋದರು. ಭಾರತೀಯ ವಿಜ್ಞಾನ ನವೋದಯದ ನಿರ್ಮಾಪಕ ಮತ್ತು ನಾಯಕನ ಭಸ್ಮಾವಶೇಷ ರಾಮನ್ ಮಂದಿರದ ನಿಸರ್ಗದ ಚೆಲುಮೆಯಲ್ಲಿ ಅಂದೇ ಸಾಯಂಕಾಲ ವಿಲೀನವಾಗಿ ಹೋಯಿತು.

ಇನ್ನೂ ರಾಮನ್ ಯುಗದ ಸಂಜೆಗೆಂಪಿನಲ್ಲೇ ಇರುವ ೨೧ನೆಯ ಶತಮಾನದ ಭಾರತೀಯರು ಈ ಮಹಾವಿಜ್ಞಾನಿಯ ಕೊಡುಗೆಯ ಪೂರ್ಣ ಮೌಲ್ಯಮಾಪನ ಮಾಡಲಾರರು. ಆದರೆ ಅವರ ಜೀವನದರ್ಶನದ ಕೆಲವು ಪ್ರಮುಖ ಸೂತ್ರಗಳನ್ನು ಗುರುತಿಸುವುದು ಅಪ್ರಕೃತವಾಗದು:

ರಾಮನ್ ಮತ್ತು ರಾಮನ್ ಆಧುನಿಕ ಭಾರತ ವಿಜ್ಞಾನದ ಶ್ರೇಷ್ಠ ಪ್ರತೀಕಗಳು.

ಅತೀತ ನಿಷ್ಠೆಯಿರದೆ ಯಾವ ಮಹಾಸಾಧನೆಯೂ ಸಿದ್ಧಿಸದು. ಬೌದ್ಧಿಕವಾಗಿ ಯಾವ ಭಾರತೀಯ ವಿಜ್ಞಾನಿಯೂ ಪ್ರಪಂಚದ ಇತರ ಯಾವುದೇ ಜನಾಂಗದ ವಿಜ್ಞಾನಿಯ ಎದುರು ತಲೆ ತಗ್ಗಿಸಬೇಕಾಗಿಲ್ಲ.

ಕುತೂಹಲಭರಿತ ನಿಸರ್ಗಾನ್ವೇಷಣೆ ಮಾತ್ರ ವಿಶ್ವರಹಸ್ಯಗಳನ್ನು ಆವಿಷ್ಕರಿಸಬಲ್ಲದು.

ವಿಜ್ಞಾನ ಗಮನದಲಿ ವಿಶ್ವವೇ ಚಿರನಿಕಷ
ಪ್ರಾಜ್ಞಮತಿ ಸೃಷ್ಟಿನಿಯಮಾನ್ವೇಷಣೆಯ ಮಹಾ
ಯಜ್ಞದಲಿ ತಾದಾತ್ಮ್ಯವೈದಿರೆ ಸ್ಫುರಿಸುವಾ
ಅಜ್ಞೇಯತೆಯ ಮಿನುಗು ವಿಜ್ಞಾನ ಅತ್ರಿಸೂನು.

ಕನ್ನಡ ವಾಲ್ಮೀಕಿಯ ಸನ್ನಿಧಾನದಲ್ಲಿ
ಅಧ್ಯಾಯ ಅರವತ್ತ ನಾಲ್ಕು

ಗಣಿತಮೇರು ಸಿಎನ್ಎಸ್ ಅವರ ಮಾರ್ಗದರ್ಶನ ನನಗೆ ಒದಗಿದ ಮಧುರ–ರಸ–ಸರಸ ಸನ್ನಿವೇಶವನ್ನು ಹಿಂದೆ ವಿವರಿಸಿದ್ದೇನೆ [ನೋಡಿ: ಅಧ್ಯಾಯ ೫೯] ಇದರ ಪರಿಣಾಮವಾಗಿ 'ಕನ್ನಡ ವಾಲ್ಮೀಕಿ ರಾಮಾಯಣ' ಪ್ರಕಟವಾಯಿತು. ಈ ಮಹತ್ಕಾರ್ಯವನ್ನು ಸಿ.ಎನ್.ಎಸ್ ನುಡಿಗಳಲ್ಲಿ ಶ್ರೀರಾಮ ನನ್ನಿಂದ ಹೇಗೆ ಮಾಡಿಸಿದ ಎಂಬ ಸಂಗತಿಯನ್ನು 'ಫರ್ಮಾ ಯಕ್ಷ ಪ್ರಶ್ನೆ ಮತ್ತು ಇತರ ವಿಜ್ಞಾನ ಲೇಖನಗಳು' ಪುಸ್ತಕದಲ್ಲಿ [ಮೊದಲ ಮುದ್ರಣದಲ್ಲಿ 'ಗಣಿತ ಗಗನ ಗಮನ' ಎಂದಿದ್ದದ್ದು ಈಗ ಹೆಚ್ಚುವರಿ ಲೇಖನ ಹಾಗೂ ಪರಿಷ್ಕರಣ ಕಂಡು, ರೂ ಅರವತ್ತಕ್ಕೆ ಲಭ್ಯ] ಬರೆದಿದ್ದೇನೆ. ಅದರ ಪೂರ್ಣ ಪಾಠ:

ನಮ್ಮ ಕತೆ ೧೯ನೆಯ ಶತಮಾನದ ಕೊನೆಯ ವರ್ಷಗಳಲ್ಲಿ ಆರಂಭವಾಗುತ್ತದೆ. ಅಂದು ಮೈಸೂರು ಸಂಸ್ಥಾನದ ಗುಂಡ್ಲುಪೇಟೆ ತೆರಕಣಾಂಬಿ ಪ್ರದೇಶದಲ್ಲಿ ನಾರಣೈಂಗಾರ್ ಎಂಬ ಯುವಕರೊಬ್ಬರಿದ್ದರು. ಇವರ ಹಿರಿಯರಿಗೆ ಹೇಳಿಕೊಳ್ಳುವ ಆಸ್ತಿಯಾಗಲಿ ವೃತ್ತಿಯಾಗಲಿ ಇರಲಿಲ್ಲ. ಬಡತನದ ಪರಿಸರದಲ್ಲಿ ಬೆಳೆದರು. ವಂಶಪಾರಂಪರ್ಯವಾಗಿ ಬಂದಿದ್ದ ದೈವಭಕ್ತಿ ಮತ್ತು ಕರ್ತವ್ಯಶ್ರದ್ಧೆ ಮಾತ್ರ ಇವರ ಬಂಡವಾಳ. ನಾರಣೈಂಗಾರ್ಯರ ಬದುಕಿನ ಬಳ್ಳಿ ಹೊಸ ಬೆಳಕನ್ನು ಅರಸಿ ಅದರ ಕಡೆಗೆ ಹಬ್ಬಬೇಕೆಂದು ತವಕಿಸುತ್ತಿದ್ದುದು ಸಹಜವೇ. ಅದೇ ವೇಳೆ ತಲೆದೋರಿದ ನಿಸರ್ಗದ ಮುನಿಸು, ಊರಿನಿಂದ ಇವರ ನಿರ್ಗಮನವನ್ನು ತ್ವರೆಗೊಳಿಸಿತು. ಆ ವಲಯದಲ್ಲೆಲ್ಲ ಭೀಕರ ಕ್ಷಾಮ. ಹುಟ್ಟುನಾಡನ್ನು ಬಿಟ್ಟ ಇವರು ಹಲವಾರು ತೀರ್ಥಕ್ಷೇತ್ರಗಳಲ್ಲಿ ಅಲೆದರು. ಶಿಲ್ಪಕಲೆಯ ತವರುಮನೆಯೂ ಚೆನ್ನಕೇಶವ ದೇವರ ಪವಿತ್ರ ಸ್ಥಾನವೂ ಆದ ಬೇಲೂರಿನ ಅಯಸ್ಕಾಂತತ್ವ ಆಸ್ತಿಕ ನಾರಣೈಂಗಾರ್ಯರಿಗೆ ಬಲುಪ್ರಿಯವೆನಿಸಿತು. ಇವರು ಅಲ್ಲೇ ನೆಲಸಿದರು.

ಕೃಷಿ ಮತ್ತು ಪೌರೋಹಿತ್ಯಗಳಿಂದ ಜೀವನರಥವನ್ನು ನಡೆಸತೊಡಗಿದರು. ಯುಕ್ತ ಕಾಲದಲ್ಲಿ ಯೋಗ್ಯ ಕನ್ಯೆಯನ್ನು ಅರಸಿ ಮದುವೆ ಆಗಿ ಗೃಹಸ್ಥರೂ ಆದರು. ಕೈಯಲ್ಲಿ ನಾಲ್ಕು ಕಾಸು ಕೂಡಿಬಂದುದರಿಂದ ಕೃಷಿಯ ಸ್ವತಂತ್ರ ವೃತ್ತಿಯನ್ನು ಅವಲಂಬಿಸಬೇಕೆಂದು ಬಯಸಿದರು. ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನ ಕನ್ನೇಹಳ್ಳಿಯಲ್ಲಿ ಸುಮಾರು ೪೦ ಎಕ್ರೆ ಕಾಫಿತೋಟ ಖರೀದಿಸಿ ಅಲ್ಲೇ ತಮ್ಮ ಪತ್ನೀ ಸಮೇತ ಬಿಡಾರ ಹೂಡಿದರು.

ನಾರಣೈಂಗಾರ್ ದಂಪತಿಗಳ ಮೊದಲ ಕೂಸೇ ಮುಂದೆ ಮಹಾಗಣಿತ ವಿದ್ವಾಂಸ, ಪ್ರಾಧ್ಯಾಪಕೋತ್ತಮ, ಆಸ್ತಿಕ ಶಿರೋಮಣಿ, ಕನ್ನಡ ವಾಲ್ಮೀಕಿ ಎಂದು ಖ್ಯಾತನಾಮರಾದ ಡಾಕ್ಟರ್ ಸಿ.ಎನ್. ಶ್ರೀನಿವಾಸ ಅಯ್ಯಂಗಾರ್ಯರು. (೧೯೦೧–೭೭) ಬಾಲಕ ಶ್ರೀನಿವಾಸನ ಜನನವಾದದ್ದು ೧೯೦೧ ಫೆಬ್ರುವರಿ ೨೧ರಂದು (ಶಾರ್ವರಿ ಸಂವತ್ಸರ, ಫಾಲ್ಗುಣ ಶುದ್ಧ ತದಿಗೆ). ಕನ್ನೇಹಳ್ಳಿಯ ಹಚ್ಚಹಸುರಿನ ಹುಚ್ಚು ಕಡಲಿನ ನಡುವೆ ಹುಟ್ಟಿದ ಈ ಅಣುಗ

ಸ್ವಪ್ರಯತ್ನದಿಂದಲೂ ನಿಷ್ಠೆಯಿಂದಲೂ ಎಲ್ಲಕ್ಕೂ ಮಿಗಿಲಾಗಿ (ಅವರೇ ಬೇರೆ ಒಂದು ಸಂದರ್ಭದಲ್ಲಿ ಹೇಳಿರುವಂತೆ) ಭಗವತ್ಕೃಪೆಯಿಂದಲೂ ಸಾಧನೆ ಸಿದ್ಧಿಗಳ ನಿಚ್ಚಣಿಕೆಯ ಪಾವಟಿಗೆಗಳನ್ನು ಏರುತ್ತ ಸಾಗಿ ಮರೆಯಾದ ಸಾಹಸಗಾಥೆ ಒಂದು ಮಹಾಕಾವ್ಯ.

ಶ್ರೀನಿವಾಸ ಅಯ್ಯಂಗಾರ್ಯರ ತಾಯಿ ಇನ್ನಿಬ್ಬರು ಮಕ್ಕಳನ್ನು ಹಡೆದು ಕೊನೆಯ ಹೆರಿಗೆಯಲ್ಲಿ ತೀರಿಕೊಂಡರು. ಇತ್ತ ಕೊನೆಯ ಕೂಸಾದರೂ (ಗಂಡು) ಹೆಚ್ಚು ಕಾಲ ಉಳಿಯಲಿಲ್ಲ. ನಾರಣೈಂಗಾರ್ಯರ ತಲೆಯ ಮೇಲೆ ಬಾನೇ ಕಳಚಿ ಬಿದ್ದಂತಾಯಿತು. ಮಲೆನಾಡಿನ ಪ್ರತಿಕೂಲ ಹವೆಯೂ ಮನೆಯೊಳಗಿನ ಕ್ಲೇಶಪರಂಪರೆಯೂ ಒಟ್ಟಾಗಿ ಇವರ ಆರೋಗ್ಯವನ್ನು ಹದಗೆಡಿಸಿದುವು. ಮಕ್ಕಳ ಲಾಲನೆ ಪಾಲನೆಗೋಸ್ಕರವಾದರೂ ತಾನು ಬದುಕಿರಬೇಕಾದದ್ದು ಅತ್ಯಗತ್ಯ ಎಂದು ಇವರಿಗೆ ಸ್ಪಷ್ಟವಾಯಿತು. ಹೀಗಾಗಿ ಕನ್ನೇಹಳ್ಳಿಯ ತಮ್ಮ ಆಸ್ತಿಯನ್ನು, ದೊರೆತ ಅಲ್ಪ ಬೆಲೆಗೆ ಮಾರಿ, ಎರಡು ಹಸುಗೂಸುಗಳ ಸಮೇತ ಚಿಕ್ಕಮಗಳೂರಿಗೆ ನಿರ್ಗಮಿಸಿದರು. ಅಲ್ಲೊಂದು ಮನೆ ಮಾಡಿ, ಈ ಮಕ್ಕಳಿಗೆ ತಂದೆಯೂ ತಾಯಿಯೂ ತಾನೇ ಆಗಿ, ಸಬ್ಬಲ್ಲು ಮುರಿದ ತಮ್ಮ ಬಾಳಬಂಡಿಯನ್ನು ಮತ್ತೆ ಹಾದಿಗೆ ಹೂಡಿದರು. ಮುಂದೆ ಕೆಲವೇ ದಿವಸಗಳಲ್ಲಿ ಇನ್ನೊಂದು ಮಗು (ಹೆಣ್ಣು) ಮಾರಿ ಬೇನೆಗೆ ಬಲಿ ಆಯಿತು. ಈಗ ಮನೆಯಲ್ಲಿ ಉಳಿದವರು ಇಬ್ಬರೇ – ಕಾಯಿಲೆ ಸಂಕಟಗಳಿಂದ ನರಳುತ್ತಿದ್ದ ತಂದೆ, ಇನ್ನೂ ಕಣ್ಣು ತೆರೆಯುತ್ತಿದ್ದ ಮಗ ಶ್ರೀನಿವಾಸ.

ತಾಯಿ ಎಂಬ ವಸ್ತುವನ್ನು ಈ ಬಾಲಕ ತಿಳಿದವನಲ್ಲ. ತಂದೆಯಾದರೋ ತನ್ನ ಜಂಜಡಗಳ ನಡುವೆ ಅಡುಗೆ ಮಾಡಿ ಬಡಿಸಿದ್ದೇ ಈ ಮಗುವಿಗೆ ಪಂಚಭಕ್ಷ್ಯ ಪರಮಾನ್ನ. ಪ್ರತಿಭೆಯ ತಿರಿ ಮುರುಟಲು ಇದಕ್ಕಿಂತ ಹೆಚ್ಚಿನ ಹೊಡೆತ ಇನ್ನೇನು ಬೇಕು? ಆದರೆ ನಾರಣೈಂಗಾರ್ಯರು ತಮ್ಮ ಕಂದನಿಗೆ ಯಾವುದಕ್ಕೂ ಕೊರತೆ ಮಾಡಲಿಲ್ಲ. ಕಡು ಬಡವ ತನ್ನ ನಿಧಿಯನ್ನು ಕಾಪಾಡುವ ಜತನದಿಂದ ತಮ್ಮ ವಂಶದ ಈ ಏಕಮಾತ್ರ ಕಂದನನ್ನು ಇವರು ಪೋಷಿಸತೊಡಗಿದರು.

ಚಿಕ್ಕಮಗಳೂರು (ಸಿ) ನಾರಣೈಂಗಾರ್ (ಎನ್) ಶ್ರೀನಿವಾಸ ಅಯ್ಯಂಗಾರ್ (ಎಸ್) – ಇದು ಅವರ ಪೂರ್ಣ ಹೆಸರು; ಸಂಕ್ಷೇಪವಾಗಿ ಸಿಎನೆಸ್. ಪ್ರಾಪ್ತ ವಯಸ್ಸಿನಲ್ಲಿ ತಂದೆ ಇವರನ್ನು ಶಾಲೆಯ ಮೆಟ್ಟಿಲು ಹತ್ತಿಸಿದರು. ಮನೆಯಲ್ಲಿ ವೈದಿಕ ಸಂಪ್ರದಾಯ, ಶಾಲೆಯಲ್ಲಿ ಸಾಂಪ್ರದಾಯಿಕ ವಿದ್ಯಾಭ್ಯಾಸ – ಹೀಗೆ ಸಿಎನೆಸ್ ಅವರ ಬೆಳೆವಣಿಗೆ ಮುಂದುವರಿಯಿತು. ಇವರು ತಮ್ಮ ಹನ್ನೊಂದನೆಯ ವಯಸ್ಸಿನಲ್ಲಿ, ಇತರ ಮಕ್ಕಳಂತೆಯೇ ಲೋವರ್ ಸೆಕೆಂಡರಿ ತರಗತಿಗೆ (ಅಂದರೆ ಇಂದಿನ ಏಳನೆಯ ದರ್ಜೆ) ಉತ್ತೀರ್ಣರಾದರು.

ಆಗಿನ ಪದ್ಧತಿಯಂತೆ ಈ ತರಗತಿಯಲ್ಲಿ ವಿದ್ಯಾರ್ಥಿಗಳು ಒಂದೋ ಸಂಸ್ಕೃತವನ್ನು ಇಲ್ಲವೇ ಆರೋಗ್ಯಶಾಸ್ತ್ರವನ್ನು ಐಚ್ಛಿಕ ವಿಷಯವಾಗಿ ಕಲಿಯಬೇಕಾಗಿತ್ತು. ನಾರಣೈಂಗಾರ್ಯರು ತಮ್ಮ ಮಗನಿಗೆ ಸಂಸ್ಕೃತವನ್ನು ಆಯ್ದುಕೊಳ್ಳಲು ಸಲಹೆ ನೀಡಿದರು. ಬಾಲಕನಿಗೆ ತಂದೆ ಹೇಳಿದ್ದೇ ಪರಮವಾಕ್ಯ. ಆದರೆ ೧೯೧೨ರ ದಿನಗಳಲ್ಲಿ ಚಿಕ್ಕಮಗಳೂರಿನ ಲೋವರ್ ಸೆಕೆಂಡರಿ ತರಗತಿಯಲ್ಲಿ ಸಂಸ್ಕೃತ ಭಾಷೆಗೆ ಏನು ಪ್ರೋತ್ಸಾಹವಿದ್ದಿರಬಹುದು? ಮುರುಕು ಕೋಣೆ, ಮುದುಕ ಮಾಷ್ಟ (ಮಾಷ್ಟ್ರು ಪದದ ಹೀನಾಯ ರೂಪ, ಅಧ್ಯಾಯ ೨೪ ನೋಡಿ), ಹರಕು ಪುಸ್ತಕ, ತಿರುಕ ವಿದ್ಯಾರ್ಥಿ! ಈ ಪುಸ್ತಕವಾದರೂ ರಾಜಧಾನಿಯಿಂದ ಚಿಕ್ಕಮಗಳೂರಿಗೆ ಐತರಲು ಅವೆಷ್ಟೋ ತಿಂಗಳುಗಳ ವಿಳಂಬ. ಇನ್ನು ತರಗತಿಯಲ್ಲಿ ಸಂಸ್ಕೃತವನ್ನು ಆಯ್ದ ವಿದ್ಯಾರ್ಥಿಗಳು ಎಷ್ಟು ಮಂದಿ? ಒಬ್ಬನೇ ಒಬ್ಬ, ನಮ್ಮ ಶ್ರೀನಿವಾಸ ಮಾತ್ರ.

ಸಂಸ್ಕೃತ ಪಂಡಿತರು ತಡವಾಗಿ ತರಗತಿಗೆ ಬಂದು, ಸಾಕಷ್ಟು ಕಾಲ ಕುರ್ಚಿಶಾಯಿಗಳಾಗಿ ಗೊರೆದು, ತಿಳಿದೆದ್ದ ಬಳಿಕ ಒಂದಿಷ್ಟು ವ್ಯಾಕರಣ ಮತ್ತು ಭಾಷಾಂತರವನ್ನು ಗೋಗರೆದು ಕ್ಷಿಪ್ರವಾಗಿ ನಿಷ್ಕ್ರಮಿಸುತ್ತಿದ್ದರು. ಈ ರೀತಿಯಲ್ಲಿ ಮೊದಲ ಮೂರು ತಿಂಗಳುಗಳೂ ಸಂದುಹೋದುವು. ಆ ವೇಳೆಗೆ ಚಿಕ್ಕಮಗಳೂರಿಗೆ ಬೆಂಗಳೂರಿನಿಂದ ವರ್ಗವಾಗಿ ಬಂದ ಪೊಲಿಸ್ ಅಧಿಕಾರಿಯೊಬ್ಬರ ಮಗ ಇದೇ ತರಗತಿಗೆ ಪ್ರವೇಶ ಪಡೆದ. ಈಗ ಶ್ರೀನಿವಾಸನಿಗೆ ಒಬ್ಬ ಸಹಪಾಠಿ ದೊರೆತಂತಾಯಿತು. ಈತ ಬೆಂಗಳೂರಿನಿಂದ ಬರುವಾಗಲೇ ತನ್ನೊಡನೆ ತರಗತಿಗೆ ಬೇಕಾದ ಪಠ್ಯಪುಸ್ತಕ ತಂದಿದ್ದ. ಈ ವಿದ್ಯಾರ್ಥಿಗಳು ಪಂಡಿತರಿಗೆ ಇನ್ನು ಮುಂದಾದರೂ ಪಾಠ ಮಾಡಬೇಕೆಂದು ಮನವಿ ಮಾಡಿಕೊಂಡರು. ಪಠ್ಯಪುಸ್ತಕ ದೊರೆತದ್ದು ಮುಖ್ಯ ಕಾರಣವೋ ಪೊಲಿಸ್ ಅಧಿಕಾರಿಯ ಮಗ ವಿದ್ಯಾರ್ಥಿಯಾಗಿ ಬಂದದ್ದು ಮುಖ್ಯ ಕಾರಣವೋ ಅಂತೂ ಅಂದಿನಿಂದ ಸಂಸ್ಕೃತ ಸಾಹಿತ್ಯದ ಕ್ರಮಬದ್ಧ ಪಾಠಪ್ರವಚನ ಪ್ರಾರಂಭವಾದುವು.

ಇವರು ಕಲಿಯಬೇಕಾಗಿದ್ದ ಪದ್ಯ ವಿಭಾಗದಲ್ಲಿ ವಾಲ್ಮೀಕಿ ರಾಮಾಯಣದ ಸುಂದರ ಕಾಂಡದ ನಾಲ್ಕು ಸರ್ಗಗಳಿದ್ದುವು: ೫೦ ರಿಂದ ೫೩ರವರೆಗಿನವು. ಎಂಥವರಿಗೂ, ಅದೂ ವಿಶೇಷವಾಗಿ ಎಳೆಯ ಮನಸ್ಸುಗಳಿಗೆ, ಬಲು

ಸ್ವಾರಸ್ಯಕರವಾಗುವ ಸರ್ಗಗಳಿವು. ಲಂಕೆಯಲ್ಲಿ ಸೀತೆಯನ್ನು ಪತ್ತೆ ಹಚ್ಚಿದ ಬಳಿಕ ಚೈತ್ಯಾಲಯವನ್ನು ಹಾಳುಗೆಡವಿ ಅನೇಕ ರಾಕ್ಷಸರನ್ನು ಕೊಂದ ಹನುಮಂತನನ್ನು ಬ್ರಹ್ಮಾಸ್ತ್ರದಿಂದ ಕಟ್ಟಿ ಸೆರೆ ಹಿಡಿದು ರಾವಣನ ಮುಂದೆ ನಿಲ್ಲಿಸಿದ್ದಾರೆ. ಅಲ್ಲಿ ನಡೆದ ರಾವಣ – ಹನುಮಂತರ ವಾಗ್ವಾದದಿಂದ ತೊಡಗಿ ಮುಂದೆ ರಾಕ್ಷಸರು ಹನುಮಂತನ ಬಾಲಕ್ಕೆ ಬೆಂಕಿ ಇಟ್ಟು ಮೆರವಣಿಗೆ ಮಾಡುವವರೆಗಿನ ಕತೆ ಈ ಸರ್ಗಗಳಲ್ಲಿವೆ. ಶ್ರೀನಿವಾಸನ ಹಚ್ಚ ಮನಸ್ಸಿನ ಮೇಲೆ ಈ ದೃಶ್ಯ ಶಾಶ್ವತ ಮತ್ತು ಹೊಚ್ಚ ಹೊಸ ಅಚ್ಚು ಒತ್ತಿತ್ತು; ಮತ್ತು ರಾಮಾಯಣದ ವಿಚಾರ ತೀವ್ರ ಆಸಕ್ತಿ ಮೊಳೆಯುವಂತೆ ಮಾಡಿತು. ಮನೆಯಲ್ಲಿ ಮೂಲರಾಮಾಯಣದ ಆರು ಕಾಂಡಗಳನ್ನೂ ಒಳಗೊಂಡಿದ್ದ ತೆಲುಗು ಲಿಪಿಯ ಗ್ರಂಥವಿತ್ತು. ಶ್ರೀನಿವಾಸ ಇದನ್ನೇ ಆತುರದಿಂದ ಸೆಳೆದುಕೊಂಡು ಪಠಿಸತೊಡಗಿದ. ಬಾಲಕಾಂಡದಿಂದಲೇ ಪ್ರಾರಂಭ.

ನಾರಣ್ಯೆಂಗಾರ್ಯರು ಮಗನ ಈ ಗೀಳನ್ನು ಗಮನಿಸಿದರು, "ಅದೇನಪ್ಪಾ! ನೀನು ಅಷ್ಟೊಂದು ಏಕಾಗ್ರತೆಯಿಂದ ಓದುತ್ತಿರುವುದು?"
"ಶಾಲೆಯಲ್ಲಿ ಸುಂದರಕಾಂಡದ ಒಂದು ಭಾಗ ಬೋಧಿಸುತ್ತಿದ್ದಾರೆ. ಇಡೀ ರಾಮಾಯಣವನ್ನು ಮೊದಲಿನಿಂದ ಓದಬೇಕು ಎಂಬ ಆಸೆ ಹುಟ್ಟಿತು. ಹೀಗಾಗಿ ಬಾಲಕಾಂಡದಿಂದಲೇ ಆರಂಭಿಸಿದ್ದೇನೆ."
"ಪವಿತ್ರವಾದ ರಾಮಾಯಣವನ್ನು ಹಾಗೆಲ್ಲ ಓದಬಾರದು, ಮಗೂ! ನಿನಗೆ ಆಸಕ್ತಿ ಇದ್ದರೆ ನಾಳೆ ಬೆಳಗ್ಗೆ ಆಹ್ನಿಕಾನಂತರ ಅದರ ಪಾರಾಯಣದ ವಿಧಿ ಹೇಳಿಕೊಡುತ್ತೇನೆ. ಅಲ್ಲಿಂದ ಮುಂದಕ್ಕೆ ನಿತ್ಯವೂ ಅದೇ ರೀತಿ ಓದುತ್ತಾ ಮುಂದುವರಿಸು."
ಮರುಮುಂಜಾನೆ ತಂದೆ ಶಾಸ್ತ್ರೋಕ್ತವಾಗಿ ರಾಮಾಯಣ ಪಾರಾಯಣ ವಿಧಿಯನ್ನು ಮಗನಿಗೆ ಬೋಧಿಸಿದರು. ಈತನಾದರೂ ಅದೆಂಥ ಸತ್ಪಾತ್ರ! ಅದೇ ತನ್ನ ಜೀವನದ ಏಕೈಕ ಉದ್ದೇಶವೋ ಎಂಬಂತೆ ಅಂದಿನಿಂದ ಎಡೆಬಿಡದೆ ಪ್ರತಿ ದಿನವೂ ರಾಮಾಯಣ ವಾಚನ ಮಾಡುತ್ತ ಸಾಗಿದ. ಎರಡು ವರ್ಷ ಪರ್ಯಂತ ಈ ಅಧ್ಯಯನ ಮುಂದುವರಿಯಿತು. ಇವನಿಗಾಗ ವಯಸ್ಸು ಹದಿಮೂರು ವರ್ಷ.

ರಾಮಾಯಣ ಪಾರಾಯಣ ಒಂದೊಂದು ಸಲ ಮುಗಿದ ಬಳಿಕವೂ ಶ್ರೀರಾಮ ಪಟ್ಟಾಭಿಷೇಕವನ್ನು ವಿಧ್ಯುಕ್ತವಾಗಿ ನೆರವೇರಿಸುವುದು ಸಂಪ್ರದಾಯ. ಅದೂ ಈ ಬಾಲಕ ಮೊದಲ ಸಲ ಪಾರಾಯಣವನ್ನು ಮುಗಿಸಿರುವಾಗ ಅದರ ಸಂಭ್ರಮ ಕೇಳಬೇಕೇ? ಶ್ರೀರಾಮ ದೇವಸ್ಥಾನದಲ್ಲಿಯೇ ಈ ಮಹಾಕಾರ್ಯ ನಡೆಯಬೇಕೆಂದು ಹಿರಿಯರು ಅಪೇಕ್ಷಿಸಿದರು. ಚಿಕ್ಕಮಗಳೂರಿಗೆ ಎರಡು ಮೈಲು ದೂರದಲ್ಲಿರುವ ಹಿರೇಮಗಳೂರಿನ ಶ್ರೀರಾಮದೇವರ ಸನ್ನಿಧಿಯಲ್ಲಿ ಬಾಲಕ ಶ್ರಿನಿವಾಸನಿಂದ ಮೊದಲ ಶ್ರೀರಾಮ ಪಟ್ಟಾಭಿಷೇಕ ಸಮಾರಂಭ ಜರಗಿತು. ಅದಕ್ಕೆ ಆಹ್ವಾನಿತರಾಗಿ ಆತನ ಶಾಲೆಯ ಉಪಾಧ್ಯಾಯರೆಲ್ಲರೂ ಬಂದಿದ್ದರು. ಮಹಾಮಂಗಳಾರತಿಯ ಮೊದಲು ಪಾರಾಯಣಕಾರ ಇಡಿ ಕತೆಯನ್ನು ಹೇಳುವುದು ಕ್ರಮ. ಇದನ್ನೇ ಶ್ರೀನಿವಾಸ ಕೂಡ ಮಾಡಬೇಕೆಂದು ಅವರೆಲ್ಲರೂ ಅಪೇಕ್ಷಿಸಿದರು. ಹೀಗಾಗಿ ೧೩ ವಯಸ್ಸಿನ ಈ ತರುಣ ಆಶುಭಾಷಣ ಮಾಡಿ ರಾಮಾಯಣದ ಕತೆ ಹೇಳಬೇಕಾಯಿತು.

ಶ್ರೀನಿವಾಸ ಅಯ್ಯಂಗಾರ್ಯರ ಜೀವನನದಿಗೆ ರಾಮಾಯಣದ ಕೊಡುಗೆಯೂ ರಾಮಾಯಣಕ್ಕೆ ಇವರ ಕೊಡುಗೆಯೂ ಮಹತ್ತರವಾದವು:
ರಾಮಾಯಣವಿವರನು ಕಡೆಯಿತೋ ಮುಂದದಿಂದ
ರಾಮಾಯಣವನಿವರೆ ಮರುಬರೆದರೋ ಒಗಟ
ರಾಮಚಂದ್ರನೆ ಪರಿಹರಿಸಬೇಕು – ಪರಿಕಿಸಲು
ರಾಮಚೇತನವಿವರ ಪ್ರೇರಣೆಯೊ ಅತ್ರಿಸೂನು

ಸಿಎನೆಸ್ ಓದಿನಲ್ಲಿ ಬಲು ಜಾಣರು. ಇವರು ಶಾಲೆಯ ಪ್ರತಿಯೊಂದು ಕೆಲಸವನ್ನೂ ಬಲು ಶ್ರದ್ಧೆಯಿಂದ ನಿರ್ವಹಿಸುತ್ತಿದ್ದರು. ಪಾಠದ ಎಲ್ಲ ವಿಷಯಗಳೂ ಇವರಿಗೆ ಕುತೂಹಲಭರಿತವಾಗಿದ್ದುವು. ಆದರೆ ಇವರ ಹೆಚ್ಚಿನ ಒಲವು ಗಣಿತದೆಡೆಗಿತ್ತು. ಇಂಥ ಒಬ್ಬ ನಿಷ್ಠಾವಂತ ವಿದ್ಯಾರ್ಥಿ ಪ್ರತಿಯೊಂದು ತರಗತಿಯಲ್ಲಿಯೂ ಮುಂದಿನ ಸಾಲಿನಲ್ಲಿಯೇ ಇರುತ್ತಿದ್ದುದು ಆಶ್ಚರ್ಯವಲ್ಲ. ೧೯೧೬ರಲ್ಲಿ ಇವರು ಮೈಸೂರು ಸಂಸ್ಥಾನದ ಎಸ್ಎಸ್ಎಲ್ಸಿ

ಪರೀಕ್ಷೆಯಲ್ಲಿ, ಇಡೀ ಸಂಸ್ಥಾನಕ್ಕೆ ಮೂರನೆಯ ಸ್ಥಾನ ಪಡೆದು, ಉತ್ತೀರ್ಣರಾದರು. ಅಲ್ಲಿಗೆ ಚಿಕ್ಕಮಗಳೂರಿನ ವಿದ್ಯಾಭ್ಯಾಸ ಮುಗಿಯಿತು. ಮುಂದೆ ಕಾಲೇಜು ವ್ಯಾಸಂಗ ಮಾಡಲು ಬೆಂಗಳೂರು ಅಥವಾ ಮೈಸೂರು ನಗರ ಆಶ್ರಯಿಸಬೇಕಾಗಿತ್ತು. ತಂದೆ ತಮ್ಮ ಉಳಿದ ಚಿಕ್ಕಪುಟ್ಟ ಜಮೀನುಗಳನ್ನೆಲ್ಲ ಮಾರಿ ಮಗನೊಡನೆ ಬೆಂಗಳೂರು ನಗರ ಸೇರಿದರು.

ಬೆಂಗಳೂರಿನ ಗವರ್ನಮೆಂಟ್ ಕಾಲೇಜಿಯೇಟ್ ಹೈಸ್ಕೂಲಿನಲ್ಲಿ (ಮುಂದೆ ಇದನ್ನು ೧೯೨೫ರ ಅಂದಾಜಿಗೆ ಗವರ್ನಮೆಂಟ್ ಆರ್ಟ್ಸ್ ಕಾಲೇಜ್ ಮತ್ತು ಗವರ್ನಮೆಂಟ್ ಸೈನ್ಸ್ ಕಾಲೇಜ್ ಎಂಬ ಎರಡು ಕಾಲೇಜುಗಳಾಗಿ ವಿಭಾಗಿಸಿದರು) ಎಂಟ್ರನ್ಸ್ ಕ್ಲಾಸನ್ನು ಸೇರಿದರು. ಎಸ್ಸೆಸ್ಸೆಲ್ಸಿಯಲ್ಲಿ ಉನ್ನತ ಸ್ಥಾನ ಪಡೆದಿದ್ದುದರಿಂಡ ಇವರಿಗೆ ರೂಪಾಯಿ ೧೮ರ ಮಾಸಿಕ ವಿದ್ಯಾರ್ಥಿ ವೇತನ ಸುಲಭವಾಗಿ ಲಭಿಸಿತು. ೧೯೧೭ರಲ್ಲಿ ಇವರು ಪ್ರವೇಶ ಪರೀಕ್ಷೆ ಮುಗಿಸಿ ಸ್ನಾತಕ ವ್ಯಾಸಂಗಕ್ಕಾಗಿ ಸೆಂಟ್ರಲ್ ಕಾಲೇಜನ್ನು ಪ್ರವೇಶಿಸಿದರು.

ಶ್ರೀನಿವಾಸ ಅಯ್ಯಂಗಾರ್ಯರನ್ನು ಇಲ್ಲಿಯ ತನಕವೂ ರಕ್ಷಿಸಿಕೊಂಡು ಬಂದಿದ್ದ ಅವರ ತಂದೆಯವರ ಭದ್ರ ಕವಚ ಈಗ ಸಡಿಲವಾಗತೊಡಗಿತ್ತು. ನಾರಣೈಂಗಾರ್ಯರ ಜೀವನದ ಘನೋದ್ದೇಶ ಪರಿಪೂರ್ಣವಾಗುವ ಘಟ್ಟ ಸನ್ನಿಹಿತವಾಗುತ್ತಿತ್ತು. ತಮ್ಮ ಮಗನ ಅಭಿವೃದ್ಧಿಯನ್ನು ಕಾಣುವುದರಲ್ಲೇ ಜೀವ ಹಿಡಿದುಕೊಂಡಿದ್ದ ಅವರು ೧೯೧೮ರ ಇನ್‌ಫ್ಲುಯೆಂಜಾ ಪಿಡುಗಿಗೆ ಬಲಿಯಾಗಿ ಅಸುನೀಗಿದರು. ಹದಿನೇಳು ವಯಸ್ಸಿನ ಸಿಎನೆಸ್ ತಬ್ಬಲಿ ಆದರು, ವಿಶಾಲ ಜಗತ್ತಿನಲ್ಲಿ ತನ್ನವರು ಎಂದು ಹೇಳಿಕೊಳ್ಳಬಹುದಾದಂಥ ಯಾರೂ ಇಲ್ಲದ ಅನಾಥರಾದರು. ಆದರೆ ಇವರು ಧೃತಿಗೆಡಲಿಲ್ಲ. "ಅನಂತರ ಶ್ರೀರಾಮನೇ ನಾನಾ ವ್ಯಕ್ತಿಗಳ ಮೂಲಕ ನನಗೆ ಸಹಾಯವನ್ನು ಒದಗಿಸುತ್ತ ನನ್ನ ಬೆನ್ನ ಹಿಂದೆ ನಿಂತು ಕಾಪಾಡಿದನು; ಈಗಲೂ ಹಾಗೆಯೇ ಕಾಪಾಡುತ್ತಿರುವನು" ಎಂದು ಇವರು ತಮ್ಮ ಜೀವನದ ಕೊನೆಯ ವರ್ಷದಲ್ಲಿ ಕೃತಾರ್ಥತೆಯ ಶಿಖರವನ್ನು ಏರಿದ್ದಾಗ, ಹೇಳಿದ್ದುಂಟು.

೧೯೧೭ರಿಂದ ೧೯೨೦ರ ತನಕ ಸೆಂಟ್ರಲ್ ಕಾಲೇಜಿನಲ್ಲಿ ಇವರ ವ್ಯಾಸಂಗ ಸಾಗಿತು. ಆಗ ಸಿಎನೆಸ್ ಅವರಿಗೆ ಪ್ರೊ। ಎ. ಆರ್. ಕೃಷ್ಣಶಾಸ್ತ್ರಿಗಳು (೧೮೯೦–೧೯೬೮), ಮತ್ತು ಪ್ರೊ. ಬೆಳ್ಳಾವೆ ವೆಂಕಟನಾರಣಪ್ಪನವರು (೧೮೭೨–೧೯೪೩) ಗುರುಗಳಾಗಿದ್ದರೆನ್ನುವುದನ್ನು ಇಲ್ಲಿ ಸ್ಮರಿಸಬೇಕು. ಸ್ನಾತಕ ಪರೀಕ್ಷೆಯಲ್ಲಿ ಶ್ರೀನಿವಾಸ ಅಯ್ಯಂಗಾರ್ಯರಿಗೆ ಉತ್ತಮ ಅಂಕಗಳು ದೊರೆತದ್ದರಿಂದ ಅಂದಿನ ನಿಯಮಾನುಸಾರ ವಿಶ್ವವಿದ್ಯಾಲಯ ಇವರಿಗೆ ಬಿಎಸ್ಸಿ (ಅಂದಿನ ಆನರ್ಸ್) ಪ್ರಥಮ ದರ್ಜೆಯ ಪದವಿ ನೀಡಿತು. ಇವರ ಅಧ್ಯಯನದ ಪ್ರಧಾನ ವಿಷಯ ಗಣಿತ. ಇದನ್ನೇ ಇನ್ನಷ್ಟು ವಿಶಿಷ್ಟವಾಗಿ ವ್ಯಾಸಂಗಿಸಿ ಉನ್ನತ ಹಂತ ಏರಬೇಕೆಂಬುದು ಇವರ ಆಸೆ. ಆದರೆ ಅಂದು ಮೈಸೂರು ಸಂಸ್ಥಾನದಲ್ಲಿ ಸ್ನಾತಕೋತ್ತರ ಅಧ್ಯಯನಕ್ಕೆ ಅವಕಾಶವಿರಲಿಲ್ಲ. ನೆರೆಯ ಮದ್ರಾಸು ವಿಶ್ವವಿದ್ಯಾಲಯದಲ್ಲಿ ಮೈಸೂರಿನ ವಿದ್ಯಾರ್ಥಿಗಳಿಗೆ ಪ್ರವೇಶ ದೊರೆಯುವುದು ಬಲು ಅಸಂಭವನೀಯವಾಗಿತ್ತು. ಹೀಗಾಗಿ ಸಿಎನೆಸ್ ದೂರದ (ಅಂದಿಗಂತೂ ಬಲು ದೂರದ) ಕೊಲ್ಕಟ ನಗರಕ್ಕೆ ಎಂಎಸ್ಸಿ ವ್ಯಾಸಂಗ ಮಾಡಲು ತೆರಳಿದರು (೧೯೨೦). ಈ ಪ್ರತಿಭಾನ್ವಿತ ವಿದ್ಯಾರ್ಥಿಗೆ ಮೈಸೂರು ಸರ್ಕಾರ ರೂಪಾಯಿ ಐವತ್ತರ ಮಾಸಿಕ ವಿದ್ಯಾರ್ಥಿ ವೇತನ ಮಂಜೂರು ಮಾಡಿದ್ದರಿಂದ ಆ ಮಹಾ ನಗರದ ವಾಸ್ತವ್ಯ ತಕ್ಕಮಟ್ಟಿನ ನೆಮ್ಮದಿ ಒದಗಿಸಿತ್ತು. ಅಂದು ಕೊಲ್ಕಟ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದವರು ಸುಪ್ರಸಿದ್ಧ ವಿದ್ಯಾಕಾರಣಿ ಆಶುತೋಷ ಮುಖರ್ಜಿ. ಅಧ್ಯಾಪಕ ವೃಂದದಲ್ಲಿಯೂ ವಿದ್ಯಾರ್ಥಿವೃಂದದಲ್ಲಿಯೂ ಸಾಕಷ್ಟು ಸಂಖ್ಯೆಯ ಮೇಧಾವಿಗಳು ಅಲ್ಲಿ ಆಗ ಒಂದುಗೂಡಿದ್ದುದರಿಂದ ಆ ವಿಶ್ವವಿದ್ಯಾಲಯವೊಂದು ಉನ್ನತ ಬೌದ್ಧಿಕ ಕೇಂದ್ರವೇ ಆಗಿತ್ತು. ಇಂಥ ಮಹಾವಿದ್ಯಾಕೇಂದ್ರದಲ್ಲಿ ತನಗೆ ಅಧ್ಯಯನಾವಕಾಶ ದೊರೆತದ್ದು ಪರಮ ಸೌಭಾಗ್ಯವೆಂದು ಸಿಎನೆಸ್ ಭಾವಿಸಿದ್ದರು. ನಿಜಸಂಗತಿ ಏನೆಂದರೆ ಆ ವಿಶ್ವವಿದ್ಯಾಲಯಕ್ಕೆ ಇಂಥ ಒಬ್ಬ ಸೃಜನಶೀಲ ಚಿಂತನಕಾರ ಲಭಿಸಿದ್ದು ಕೂಡ ಒಂದು ಸುಯೋಗವೇ ಆಗಿತ್ತು.

ಎಂಎಸ್ಸಿ ವ್ಯಾಸಂಗವೇನೋ ಚೆನ್ನಾಗಿ ಮುಂದುವರಿಯಿತು. ೧೯೨೨ರ ನವಂಬರಿನಲ್ಲಿ ಇನ್ನೇನು ಕೊನೆಯ ಪರೀಕ್ಷೆ ಬರೆಯಬೇಕು, ಆ ವೇಳೆಗೆ ಸಿಎನೆಸ್ ಅವರ ಆರೋಗ್ಯ ಹಠಾತ್ತನೆ ಕೆಟ್ಟು ಹೋಯಿತು. ಮೊದಲ ದಿನದ ಪರೀಕ್ಷೆ ಬರೆದು ಮರಳುತ್ತಿದ್ದಂತೆ ಕಾಲಿನ ಸ್ನಾಯುಗಳ ಒಳಗೆ ತೀವ್ರ ವೇದನೆ ಪ್ರಾರಂಭವಾಯ್ತು. ಮರುದಿನ ಈ ನೋವು ಹೆಚ್ಚಾಯಿತೇ ವಿನಾ ಕಡಿಮೆ ಆಗಲಿಲ್ಲ. ಸಮೀಪದ ಒಬ್ಬ ವೈದ್ಯರಿಂದ ಒಂದಿಷ್ಟು ಔಷಧಿ ಪಡೆದು ಸೇವಿಸಿ ಬಲು ಪ್ರಯಾಸದಿಂದ ಪರೀಕ್ಷಾಮಂದಿರಕ್ಕೆ ನಡೆದು ಅಂದಿನ ಪತ್ರಿಕೆ ಬರೆದು ಮರಳಿದರು. ಈಗ ನಡೆಯಲೂ ಆಗದಷ್ಟು ಉಲ್ಬಣಸ್ಥಿತಿಗೆ ವ್ಯಾಧಿ ವಿಷಮಿಸಿತ್ತು. ಕೈಬೆರಳುಗಳಿಂದ ಲೇಖನಿ ಹಿಡಿಯುವುದೂ ಇವರಿಗೆ ಸಾಧ್ಯವಾಗುತ್ತಿರಲಿಲ್ಲ. ಇನ್ನು ಪರೀಕ್ಷೆ ಬರೆಯುವುದು ಹೇಗೆ? ಇವರ ಅಂಗೋಪಾಂಗಗಳೆಲ್ಲವೂ ವಾತ ರೋಗಗ್ರಸ್ತವಾಗಿದ್ದುವು. ಪುಣ್ಯವಶಾತ್,

ಅಂದು ಸಂಜೆ ಮೈಸೂರಿನ ವೈದ್ಯಕೀಯ ಮಿತ್ರರೊಬ್ಬರು ಸಿಎನೆಸ್‌ರನ್ನು ನೋಡಲು ಇವರ ಕೊಠಡಿಗೆ ಬಂದರು. ತಮ್ಮ ಮಿತ್ರರ ಈ ದುಸ್ಥಿತಿಯನ್ನು ಅವರಿಗೆ ನೋಡಲಾಗಲಿಲ್ಲ. ಒಡನೆಯೇ ರೋಗಿಯನ್ನು ಅವರು ತಮ್ಮ ಪ್ರಾಧ್ಯಾಪಕ ವೈದ್ಯರ ದವಾಖಾನೆಗೆ ಸಾಗಿಸಿದರು. ಆ ವೈದ್ಯ ಇವರ ಕೈಕಾಲುಗಳಿಗೂ ದೇಹದ ಇತರ ಭಾಗಗಳಿಗೂ ಹದವಾಗಿ ವಿದ್ಯುತ್ ಶಾಖ ಕೊಟ್ಟು ನೋವನ್ನು ಹತೋಟಿಗೆ ತಂದರು. ಮರುದಿನ ಮುಂಜಾನೆಯೂ ಇದೇ ಶುಶ್ರೂಷೆ ನೀಡಲಾಯಿತು. ಇದರಿಂದ ತಾತ್ಕಾಲಿಕ ಉಪಶಮನ ದೊರೆತು ಆ ದಿನ ಪರೀಕ್ಷೆ ಮಾತ್ರ ಹೇಗೋ ಬರೆಯುವುದು ಸಾಧ್ಯವಾಯಿತು, ಅಷ್ಟೆ. ಈ ರೀತಿ ಪ್ರತಿದಿನವೂ ಎರಡಾವರ್ತಿ ಬೆಳಗ್ಗೆ ಮತ್ತು ಸಾಯಂಕಾಲ ವಿದ್ಯುತ್ ಶಾಖ ಪಡೆದು ನೋವನ್ನು ಕಡಿಮೆ ಮಾಡಿಕೊಳ್ಳುವುದು, ಮತ್ತು ಆಯಾ ದಿವಸದ ಪರೀಕ್ಷೆ ಉತ್ತರಿಸುವುದು – ಹೀಗೆ ಆ ದಿವಸಗಳೆಲ್ಲವೂ ಸಾಗಿದುವು. ಇನ್ನು ಪರೀಕ್ಷಾ ಕೇಂದ್ರವಿದ್ದುದು ವಿಶ್ವವಿದ್ಯಾಲಯ ಸೌಧದ ಆರನೆಯ ಮಹಡಿಯಲ್ಲಿ. ವಿಶ್ವವಿದ್ಯಾಲಯದ ನೌಕರರು ಬಲು ಅಕ್ಕರೆಯಿಂದ ಈ ವಾತಪೀಡಿತ ತರುಣನನ್ನು ವಿದ್ಯುತ್ ಎತ್ತುಗಕ್ಕೆ ಒಯ್ದು ನಿಲ್ಲಿಸಿ ಆರನೆಯ ಮಹಡಿಗೆ ಸಾಗಿಸಿ ಪರೀಕ್ಷಾಂಗಣದವರೆಗೆ ಎತ್ತಿಕೊಂಡೇ ಹೋಗಿ ಕೂರಿಸಿ ಬರೆಯಲು ಅಣಿ ಮಾಡಿಕೊಡುತ್ತಿದ್ದರು. ಪರೀಕ್ಷೆ ಮುಗಿದ ಬಳಿಕ ಇವರನ್ನು ಕೊಠಡಿಗೆ ಕಳಿಸಲು ಕೂಡ ಇದೇ ರೀತಿ ನೆರವಾಗುತ್ತಿದ್ದರು. ಒಂದು ದಿವಸ ಎತ್ತುಗ ಕೆಟ್ಟು ಹೋಗಿದ್ದಾಗ ನೌಕರರು ತಮ್ಮ ಈ 'ದೇವರಿ'ಗೆ ಅಕ್ಷರಶಃ ಪಲ್ಲಕಿ ಸೇವೆಯನ್ನೇ ಸಲ್ಲಿಸಿದರು. ಕುರ್ಚಿಯಲ್ಲಿ ಕೂರಿಸಿ ಆ ಆರು ಮಹಡಿಗಳ ಎತ್ತರಕ್ಕೂ ಹೊತ್ತುಕೊಂಡೇ ಹೋಗಿದ್ದರು! ಹೀಗೆ ಆ ದುರ್ದಿನಗಳು, ಆ ಪರೀಕ್ಷಾದಿನಗಳು, ಸಂಪೂರ್ಣ ಪರಾಧೀನತೆಯಲ್ಲೇ ಕಳೆದು ಹೋದುವು.

"ಪರೀಕ್ಷೆಯೂ ವ್ಯಾಧಿಯೂ ನನಗೆ ನಿರಂತರವಾಗಿ ಆ ಹತ್ತು ದಿವಸ ಪರ್ಯಂತ ಸಂಗಾತಿಗಳಾಗಿದ್ದುವು. ಹನ್ನೊಂದನೆಯ ದಿವಸ ಪರೀಕ್ಷೆ ಮುಗಿದಿತ್ತು; ವ್ಯಾಧಿ ಮಾಯವಾಗಿತ್ತು! ಕೊಲ್ಕಟದ ರಸ್ತೆಗಳಲ್ಲಿ ಎಂದಿನಂತೆ ತಿರುಗಾಡುತ್ತಿದ್ದೆ!" ಎಂಬುದಾಗಿ ಸಿಎನೆಸ್ ಹಲವಾರು ದಶಕಗಳ ತರುವಾಯ ಬರೆದಿದ್ದಾರೆ.

ಎಂಎಸ್ಸಿ ಪರೀಕ್ಷೆಯ ಫಲಿತಾಂಶ ಬಂತು: ಅವರು ಪ್ರಥಮ ದರ್ಜೆ ಪ್ರಥಮ ಸ್ಥಾನ ಪಡೆದಿದ್ದರು; ಜೊತೆಗೆ ಕೊಲ್ಕಟ ವಿಶ್ವವಿದ್ಯಾಲಯದ ಇತಿಹಾಸದಲ್ಲೇ ಗರಿಷ್ಠ ಅಂಕಗಳನ್ನು (ಗಣಿತ ವಿಭಾಗದಲ್ಲಿ) ಕೂಡ ಗಳಿಸಿ ದಾಖಲೆ ಸ್ಥಾಪಿಸಿದ್ದರು! ಇಲ್ಲಿಗೆ ಅವರ ಜೀವನದಲ್ಲಿ ಒಂದು ಮುಖ್ಯ ಘಟ್ಟ ಮುಗಿಯುತ್ತದೆ (೧೯೨೨).

ಇಂಥ ಹಿರಿಮೆ ಮತ್ತು ಪದವಿ ಗಳಿಸಿದವರು ಆ ದಿವಸಗಳಲ್ಲಿ ಸಮಗ್ರ ಭಾರತದಲ್ಲಿಯೂ ಬಲು ಮಂದಿ ಇರಲಿಲ್ಲ. ಆದರೆ ಇದರ ಅರಿವು ಕೂಡ ಈ ಮಹಾಶಯರಿಗೆ ಇತ್ತೋ ಏನೋ ಸಂಶಯವೇ. ಆ ದಿವಸಗಳನ್ನು ಕುರಿತು ಅವರೇ ಒಮ್ಮೆ ಹೇಳಿದ ಮಾತು, "ಅನಂತ ಜ್ಞಾನದ ನಿರಂತರಾನ್ವೇಷಣೆಯಲ್ಲಿ ನಾನು ಆಗ ಒಂದನೆಯ ಹೆಜ್ಜೆಯನ್ನು ಸರಿಯಾದ ಹಾದಿಯಲ್ಲಿ ಇರಿಸಿದ್ದೆನೆಂಬ ಆಶ್ವಾಸನೆ ಮಾತ್ರ ಈ ಫಲಿತಾಂಶ."

೧೯೨೩ ಅನಾವರಣಗೊಂಡಾಗ ನಾವು ತರುಣ ಲೆಕ್ಚರರ್ ಶ್ರೀನಿವಾಸ ಅಯ್ಯಂಗಾರ್ಯರನ್ನು ನೋಡುತ್ತೇವೆ. ಸ್ಥಳ ಮೈಸೂರಿನ ಮಹಾರಾಜ ಕಾಲೇಜು. ಮಧ್ಯಮಗಾತ್ರದ ನಿಲವು. ಕೃಶವಾದರೂ ಸದೃಢಕಾಯ. ಎಣ್ಣೆಗಪ್ಪು ಮೈಬಣ್ಣ, ತುಂಬು ಮುಖ, ದಪ್ಪ ಮಸೂರಗಳ ಕನ್ನಡಕದ ಮೂಲಕ ಬರುವ ದೃಷ್ಟಿ ಬಲು ನೇರ. ಅದರಲ್ಲಿ ಕಾಂತಿಯ ಜೊತೆಗೆ ವಿನವಂತಿಕೆ ಮತ್ತು ಶಾಂತಿಯ ಸುರಿಮಳೆ, ಮಾತು ಮುತ್ತು, ಗಂಭೀರ. ಉನ್ನತ ಮಟ್ಟದ ಮತ್ತು ಯಾರನ್ನೂ ನೋಯಿಸದ ತಮ್ಮದೇ ಧಾಟಿಯಲ್ಲಿ ಹರಿಸುವ ನಿಷ್ಣಾತ ಸಂಭಾಷಣಕಾರ. ಒನಪು ಒಯ್ಯಾರಗಳಿಗಾಗಲೀ ಕೊಂಕು ಕುಹಕಗಳಿಗಾಗಲೀ ಅವರ ವರ್ತನೆಯಲ್ಲಿ ಎಂದೂ ಅವಕಾಶವಿಲ್ಲ. ಮಂದ್ರ ಶ್ರುತಿಯಲ್ಲಿ ಸ್ಪಷ್ಟ ಉಚ್ಚಾರಣೆಯಿಂದ ಅವರು ನುಡಿದರೆಂದರೆ ಅದು ಗಣಿತ ಪ್ರಮೇಯಗಳಂತೆ ಸಿದ್ಧವಾಕ್ಯಗಳೇ. ನಡಿಗೆ ಬಲು ಚುರುಕು. ಅದರಲ್ಲಿಯೂ ಸರಳತೆಯೇ ಪ್ರಧಾನ ಲಕ್ಷಣ. ನಡೆನುಡಿಗಳು ಹೇಗೋ ಹಾಗೆ ಬಗೆಯೂ. ಇಂಥ ಒಬ್ಬ ತರುಣ ಅಧ್ಯಾಪಕ ಆಸಕ್ತ ವಿದ್ಯಾರ್ಥಿಗಳ ಆದರ್ಶ ಮತ್ತು ಆರಾಧ್ಯ ವ್ಯಕ್ತಿಯಾದದ್ದರಲ್ಲಿ ಏನೂ ಆಶ್ಚರ್ಯವಿಲ್ಲ. ನಿಷ್ಠಾವಂತ ಉಪಾಧ್ಯಾಯ, ಶಿಷ್ಯರ ವಿಚಾರದಲ್ಲಿ ಅಪಾರ ಸಹನೆ ಆಸಕ್ತಿ ವಹಿಸಿ ಬೋಧಿಸುವ ಮಾರ್ಗದರ್ಶಿ ಇವರೆಂಬ ಹಿರಿಮೆ ಸಹಜವಾಗಿ ಇವರಿಗೆ ಲಭಿಸಿತು. ಮರುವರ್ಷ (೧೯೨೪) ಇವರು ಗಣಿತದ ಅಸಿಸ್ಟೆಂಟ್ ಪ್ರೊಫೆಸರ್ ಆಗಿ ಬಡ್ತಿ ಪಡೆದರು. ಜೊತೆಯಲ್ಲೇ ಇವರಿಗೆ ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ ವರ್ಗವೂ ಆಯಿತು. ಅಂದಿನಿಂದ ಮುಂದಕ್ಕೆ ಸಿಎನೆಸ್ ಕಾರ್ಯಕ್ಷೇತ್ರ (೧೯೫೮–೧೯೬೫ ಅವಧಿಯ ಧಾರವಾಡ ವಾಸ್ತವ್ಯವನ್ನು ಬಿಟ್ಟರೆ) ಬೆಂಗಳೂರು ನಗರವೇ.

೧೯೨೬ರ ತರುಣದಲ್ಲಿ ಸಿಎನೆಸ್ ಮದುವೆ ಆಗಿ ಗೃಹಸ್ಥರಾದರು.
ಈ ಹಿರಿಯರಿಗೆ ಜೀವನದಲ್ಲಿ ಅಧಿಕಾರದ ಆಸೆ ಆಕಾಂಕ್ಷೆಗಳಿರಲಿಲ್ಲವೇ? ಪ್ರಾಧ್ಯಾಪಕ ವೃತ್ತಿಗೆ ಅಂದು ಇದ್ದುದೇನಿದ್ದರೂ ಗೌರವ ಮಾತ್ರ. ಹಣಕಾಸಿನ ಸೌಲಭ್ಯ ಕಡಿಮೆ. ಅಧಿಕಾರವೋ ಶೂನ್ಯ. ಮೇಧಾವಿ ತರುಣನಿಗೆ, ಉನ್ನತ ಪದವೀಧರನಿಗೆ ಬರೀ ಗೌರವದಿಂದ ಜೀವನದಲ್ಲಿ ಆರ್ಥಿಕ ಸಮತೋಲ ಒದಗುವುದು ಸಾಧ್ಯವಿಲ್ಲವಷ್ಟೇ?

ಅಂದು ಯುವ ಪದವೀಧರರ ಪ್ರಥಮಾಕರ್ಷಣೆ ಇಂಡಿಯನ್ ಆಡಿಟ್ಸ್ ಅಂಡ್ ಅಕೌಂಟ್ಸ್ ಪರೀಕ್ಷೆ. ಇದಕ್ಕೆ ಭಾರತದಲ್ಲಿಯೇ ಪರೀಕ್ಷಾ ಕೇಂದ್ರವನ್ನು ಆಯುವ ಸೌಕರ್ಯವಿತ್ತು. ಸಿಎನೆಸ್ ಈ ಪರೀಕ್ಷೆಗೆ ಕೂರಲು ನಿಶ್ಚಯಿಸಿದರು. ಅಭ್ಯರ್ಥನ ಪತ್ರದಲ್ಲಿ ತಮ್ಮ ಒಲವು ಯಾವ ವಿಭಾಗಕ್ಕೆ – ಸೈನ್ಯ ವಿಭಾಗಕ್ಕೋ ನಾಗರಿಕ ವಿಭಾಗಕ್ಕೋ ಅಥವಾ ಇವೆರಡಕ್ಕೋ – ಎಂಬುದನ್ನು (ಪರೀಕ್ಷೆಗೆ ಮೊದಲೇ) ಸೂಚಿಸಬೇಕಿತ್ತು. ಬಹುಶಃ ಸೈನ್ಯವಿಭಾಗ ತಮ್ಮ ಪ್ರವೃತ್ತಿಗೆ ಸರಿಹೊಂದಲಾರದು ಎಂದು ಭಾವಿಸಿ ನಾಗರಿಕ ವಿಭಾಗಕ್ಕೆ ಮಾತ್ರ ಇವರು ತಮ್ಮ ಒಲವನ್ನು ಸೂಚಿಸಿದ್ದರು. ಪರೀಕ್ಷೆ ಬರೆದುದಾಯಿತು (೧೯೨೩). ಫಲಿತಾಂಶವೂ ಬಂತು – ಸಿಎನೆಸ್ ಎರಡನೆಯ ಸ್ಥಾನ ಪಡೆದಿದ್ದರು. ಆ ವರ್ಷ ಖಾಲಿ ಇದ್ದ ಹುದ್ದೆಗಳು ಮೂರು, ನಾಗರಿಕ ವಿಭಾಗದಲ್ಲಿ ಒಂದು, ಅದಾದ ಮೇಲೆ, ಸೈನ್ಯ ವಿಭಾಗದಲ್ಲಿ ಎರಡು. ಎಂದೇ ಇವರಿಗೆ ನಾಗರಿಕ ಹುದ್ದೆ ದೊರೆಯಲಿಲ್ಲ. ಸೈನ್ಯದ ಹುದ್ದೆ ದಕ್ಕಲಿಲ್ಲ. "ಹೀಗಾಗಿ ನನಗೆ ಕಾಲೇಜಿನ ಕೆಲಸವೇ ಗಟ್ಟಿಯಾಗಿ ಉಳಿಯಿತು. ಆಗ ನಾನು ಆ ತಪ್ಪು ಮಾಡಿದ್ದರೆ ಕೈ ತುಂಬ ರೊಕ್ಕ ಬಂದಿರುತ್ತಿತ್ತು. ಆದರೆ ನನ್ನ ಜೀವನಪಥ ಏನಾಗುತ್ತಿತ್ತೋ ಹೇಳಬಲ್ಲವರಾರು" ಎಂಬುದಾಗಿ ಸಿಎನೆಸ್ ಬರೆದಿದ್ದಾರೆ. ಇವರು ಹುಟ್ಟಿನಿಂದಲೇ ಸಂಶೋಧಕರು, ಅಧ್ಯಾಪಕರು, ಸೌಜನ್ಯವಂತರು. ಇಂಥವರು ಆಡಿಟ್ ವಿಭಾಗದ ನೀರಸ ಅಂಕೆ ಅಂಶಗಳ ಅಂಕುಡೊಂಕುಗಳಲ್ಲಿ ಅಡಗಿಹೋಗದಿದ್ದುದು ರಾಮಾನುಜನ್ ನಾಡಿನ ಸೌಭಾಗ್ಯ.

ಮುಂದೆ ೧೯೨೮ರ ಸುಮಾರಿಗೆ ಸೆಂಟ್ರಲ್ ಕಾಲೇಜಿನಲ್ಲಿ ಗಣಿತ ಎಂಎಸ್ಸಿ ಪ್ರಾರಂಭವಾದಾಗ ಆ ತರಗತಿಗಳಿಗೆ ಪಾಠ ಮಾಡುವ ಸುಯೋಗ ಇವರಿಗೆ ಸಹಜವಾಗಿ ಲಭಿಸಿತು. ಇದರಿಂದ ಇವರ ಗಣಿತಾಸಕ್ತಿಗೆ ಸಾಣೆ ಹಿಡಿದಂತಾಯಿತು. ತಾವು ಗಣಿತದಲ್ಲಿ ಉನ್ನತ ಸಂಶೋಧನೆ ಮಾಡಿ ತಮ್ಮ ಜ್ಞಾನಕ್ಷಿತಿಜವನ್ನು ವಿಸ್ತರಿಸಿಕೊಳ್ಳಬೇಕೆಂದು ಬಯಸಿದರು. ಇಂಥ ಕಾರ್ಯಕ್ಕೆ ಎರಡು ಮುಖ್ಯ ಅನುಕೂಲತೆಗಳು ಬೇಕು: ತಜ್ಞ ವಿದ್ವಾಂಸನೊಬ್ಬನಿಂದ ಸಮರ್ಥ ಮಾರ್ಗದರ್ಶನ; ಮತ್ತು ಆಧುನಿಕ ಗ್ರಂಥಭಂಡಾರಕ್ಕೆ ಮುಕ್ತ ಪ್ರವೇಶ. ಆದರೆ ಅಂದಿನ ಸೆಂಟ್ರಲ್ ಕಾಲೇಜಿನಲ್ಲಿ ಇವೆರಡೂ ಅಲಭ್ಯವಾಗಿದ್ದುವು. ಅಲ್ಲದೇ ಸಂಶೋಧನ ಪ್ರಬಂಧಗಳನ್ನು ಸ್ವೀಕರಿಸಿ ಪರಿಶೀಲಿಸಿ ಡಾಕ್ಟೊರೇಟ್ ಪದವಿ ನೀಡಲು ಬೇಕಾದ ಏರ್ಪಾಡು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಆರಂಭವಾಗಿರಲಿಲ್ಲ. ಜ್ಞಾನಪಿಪಾಸುಗಳಾದ ಸಿಎನೆಸರ ಧೃತಿ ಈ ಯಾವ ಬಾಹ್ಯ ಕೊರತೆಗಳಿಂದಲೂ ಕುಂದಲಿಲ್ಲ. ತಾವೇ ತಮ್ಮ ಸಂಶೋಧನ ಮಾರ್ಗ ರೂಪಿಸಿಕೊಂಡು ಪ್ರಾಧ್ಯಾಪಕತ್ವದ ಸಮಸ್ತ ಹೊಣೆಗಳ ನಡುವೆ, ಸಂಶೋಧನೆಯನ್ನೂ ಮುಂದುವರಿಸಿದರು.

ಸಂಶೋಧನೆ ಎಂದರೇನು? ಸಂಶೋಧಕನಾಗಬಯಸುವಾತ ಆ ತನಕ ತನ್ನ ಶಾಸ್ತ್ರ ವಿಭಾಗದಲ್ಲಿ ಸಂಗ್ರಹವಾಗಿರುವ ಜ್ಞಾನವನ್ನು ಮೊದಲು ಅರಿತುಕೊಳ್ಳಬೇಕು. ಇದರಿಂದ ಆತನಿಗೆ ಜ್ಞಾನದ ವರ್ತಮಾನ ಮಟ್ಟ ಏನೆಂದು ಗೊತ್ತಾಗುವುದು. ಆಗ ಸಹಜವಾಗಿ ಈ ಜ್ಞಾನದಲ್ಲಿಯ ಅರೆಕೊರೆಗಳು ಮತ್ತು ಇನ್ನೂ ಪರಿಹರಿಸಲಾಗಿಲ್ಲದ ಸಮಸ್ಯೆಗಳು ವೇದ್ಯವಾಗುತ್ತವೆ. ಇವುಗಳ ಪೈಕಿ ತನಗೆ ಕುತೂಹಲಕಾರಿಯಾದ ಒಂದು ಸಮಸ್ಯೆಯನ್ನು ಆಯ್ದು ಅದರ ಒಡಪನ್ನು ಅರಸುವ ಹಾದಿಯಲ್ಲಿ ಆತ ನಿರಂತರವಾಗಿ ಪಯಣಿಸಬೇಕು. ಇದೇ ಸಂಶೋಧನೆ. ಇದರಲ್ಲಿ ಪರಿಹಾರ ದೊರೆತೇ ದೊರೆಯುವುದೆಂದೇನೂ ಭರವಸೆ ಇಲ್ಲ; ತಿಳಿಯದ ಎತ್ತರ ಏರಲು ಬಯಸುವ ಪರ್ವತಾರೋಹಿಯ ನಡೆಯಂತೆ. ಈ ಪ್ರಯತ್ನದಲ್ಲಿ ಆತ ದಾರಿ ತಪ್ಪಬಹುದು. ಆತನಿಗೆ ಹೊಸ ಗುರಿ ಎದುರಾಗಬಹುದು, ಕುರುಡುಕೊನೆ ತಲಪಿ ಇಡಿ ಪ್ರಯತ್ನವೇ ವಿಫಲವಾಗಬಹುದು. ಅನಿರೀಕ್ಷಿತ ಮೂಲೆಯಿಂದ ಹಠಾತ್ತನೆ ಬೆಳಕು ಬರಲೂಬಹುದು. ಇಂಥ ಮಾರ್ಗಕ್ಕೆ ಇಳಿದ ಅನ್ವೇಷಕ ತಪಸ್ವಿ ಆಗಿರಬೇಕು, ತನ್ನ ಉದ್ದೇಶ ಸಾಧನೆಯ ವಿಚಾರದಲ್ಲಿ 'ಹುಚ್ಚ'ನೇ ಆಗಿರಬೇಕು, ವಲ್ಮೀಕವಾಸಿಯೇ ಆಗತಕ್ಕದ್ದು.

ಶ್ರೀನಿವಾಸ ಅಯ್ಯಂಗಾರ್ಯರ ಪ್ರತಿಭೆಗೆ ಸಂಶೋಧನೆಯ ಮಾರ್ಗ ಹಿಡಿಯದೇ ಇರುವುದು ಸಾಧ್ಯವಾಗುತ್ತಿರಲಿಲ್ಲ. ಸ್ವಪ್ರಯತ್ನದಿಂದಲೇ ಇವರ ಸಂಶೋಧನಪ್ರಬಂಧ ಸಿದ್ಧವಾಯಿತು. ಇದನ್ನೇ ತಮ್ಮ ಮಾತೃ ವಿಶ್ವವಿದ್ಯಾಲಯಕ್ಕೆ (ಕೊಲ್ಕಟ) ಪರಾಮರ್ಶೆಗೋಸ್ಕರ ಅರ್ಪಿಸಿದರು. ವಾಡಿಕೆಯಂತೆ ವಿಶ್ವವಿದ್ಯಾಲಯ ಇದನ್ನು ಮೂವರು ಜಗದ್ವಿಖ್ಯಾತ ಗಣಿತ ವಿದ್ವಾಂಸರಿಗೆ ಮೌಲ್ಯಮಾಪನೆಗಾಗಿ ಕಳಿಸಿಕೊಟ್ಟಿತು: ಉನ್ನತ ಗಣಿತ ಪ್ರಪಂಚದಲ್ಲಿ ಹಿರಿಹೆಸರುಗಳಾಗಿದ್ದ ಎ.ಆರ್

ಫೋರ್ಸೈತ್, ಡಿ.ಇ ಲಿಟ್ಲ್‌ವುಡ್ ಮತ್ತು ಇ.ಟಿ ವ್ಹಿಟೇಕರ್. ಇವರು ಸಿಎನೆಸ್‌ರ ಪ್ರಬಂಧವನ್ನು ಬಲುವಾಗಿ ಮೆಚ್ಚಿ ಇದರ ಕರ್ತೃವಿಗೆ ಪಿಎಚ್‌ಡಿಗಿಂತಲೂ (ಡಾಕ್ಟರ್ ಆಫ್ ಫಿಲಾಸಫಿ) ಉನ್ನತ ಮಟ್ಟದ ಡಿಎಸ್ಸಿ (ಡಾಕ್ಟರ್ ಆಫ್ ಸೈನ್ಸ್) ಪದವಿಯನ್ನೇ ನೀಡಬೇಕೆಂದು ಶಿಫಾರಸು ಮಾಡಿದರು. ಇದರ ಮೇರೆಗೆ ಕೊಲ್ಕಟ ವಿಶ್ವವಿದ್ಯಾಲಯ ೧೯೩೭ರಲ್ಲಿ ಸಿಎನೆಸ್‌ರಿಗೆ ಡಿಎಸ್ಸಿ ಪದವಿ ಪ್ರದಾನಿಸಿತು. ಇವರ ನಿರಂತರ ಜ್ಞಾನಾನ್ವೇಷಣೆಯ ಪ್ರಯಾಣದಲ್ಲಿ ಈ ಪದವಿ ಒಂದು ಮಜಲು, ಮುಂದೆ ಸಾಗಲಿರುವ ಬಹುದೂರವನ್ನು ತೋರಿಸಲು ಎತ್ತಿ ಹಿಡಿದ ಕೈಮರ.

ಈ ಪ್ರೋತ್ಸಾಹದಿಂದ ಉದ್ದೀಪಿತರಾದ ಸಿಎನೆಸ್ ತಮ್ಮ ಸುತ್ತ ಸಮರ್ಥ ಶಿಷ್ಯರ ಒಂದು ತಂಡವನ್ನೇ ಆಕರ್ಷಿಸುವಲ್ಲಿ ಯಶಸ್ವಿಗಳಾದರು. ಯಾವ ಸಂಶೋಧನೆಯೂ ನಿರ್ವಾತದಲ್ಲಿ ವಿಶೇಷ ಪ್ರಗತಿ ಸಾಧಿಸಲಾರದು. ಸಮಾನ ಆಸಕ್ತಿ ತಳೆದಿರುವ ಹಲವಾರು ಬುದ್ಧಿಗಳ ಮಿಳನ ಅದಕ್ಕೆ ಅತ್ಯಾವಶ್ಯಕ. ಆಗ ಮಾತ್ರ ಅಭಿಪ್ರಾಯಗಳ ಸತತ ವಿನಿಮಯ, ನಿರ್ಭೀತ ಚರ್ಚೆ ಹಾಗೂ ಮಂಥನ ಮತ್ತು ಫಲಿತಾಂಶಗಳ ಜೇನು ಪ್ರವಹಿಸಿದ್ದು, ತರುಣ ಸಂಶೋಧಕರ ಪೀಳಿಗೆಯೇ ಮೈದಳೆದದ್ದು – ಇವೆಲ್ಲವೂ ಅವರ ವ್ಯಕ್ತಿತ್ವಕ್ಕೂ ಪ್ರವೃತ್ತಿಗೂ ಅನುಗುಣವಾಗಿಯೇ ಇದ್ದುವು. ಅಖಿಲ ಭಾರತ ಗಣಿತ ನಕಾಶೆಯಲ್ಲಿ ಬೆಂಗಳೂರಿಗೆ ಆ ದಿನಗಳಲ್ಲಿ (೧೯೩೦–೬೦) ಒಂದು ಹಿರಿಯ ಸ್ಥಾನವಿತ್ತು. ಇದನ್ನು ದೊರಕಿಸಿ ಕೊಡುವಲ್ಲಿ ಶ್ರೀನಿವಾಸ ಅಯ್ಯಂಗಾರ್ಯರ ಮತ್ತು ಅವರ ಅನುಯಾಯಿಗಳ ಪಾತ್ರ ಬಲು ದೊಡ್ಡದು. ಸ್ವತಃ ಸಿಎನೆಸ್‌ರ ಹಲವಾರು ಸಂಶೋಧನ ಪ್ರಬಂಧಗಳು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಗಣ್ಯ ಗಣಿತ ನಿಯತಕಾಲಿಕೆಗಳಲ್ಲಿ ಆಗಾಗ ಪ್ರಕಟವಾಗಿ ಬೆಂಗಳೂರಿಗೆ ಅಪಾರ ಕೀರ್ತಿ ತಂದಿವೆ:

ಹಳೆಯದನು ತೊರೆದು ಹೊಸಬೆಳಕನರಸುವವ ಋಷಿ
ಋಷಿ ಕಂಡ ಬೆಳಕನ್ನು ಬೀರುವವನಾಚಾರ್ಯ
ಆಚಾರ್ಯ ಕಾಣಿಸಿದ ಪಥದಿ ನಡೆವವ ಶಿಷ್ಯ
ಶಿಷ್ಯ ಋಶಿಯಾಗುವುದೆ ಋಜುವಿದ್ಯೆ ಅತ್ರಿಸೂನು

ಸಿಎನೆಸ್‌ರ ಆಸಕ್ತಿ ಕೇವಲ ಆಧುನಿಕ ಗಣಿತವೊಂದಕ್ಕೆ ಸೀಮಿತವಾಗಿರಲಿಲ್ಲ. ಭಾರತದ ಭವ್ಯ ಗಣಿತ ಪರಂಪರೆಯನ್ನು ಶಾಸ್ತ್ರೀಯವಾಗಿ ಅಭ್ಯಸಿಸಬೇಕೆಂದು ಅವರು ಬಯಸಿದರು. ಆದರೆ ಕಾಲಾನುಗುಣ್ಯ ರಚಿತವಾದ ಒಂದೇ ಒಂದು ಜ್ಞೇಯನಿಷ್ಠ ಗ್ರಂಥವೂ ಅವರಿಗೆ ದೊರೆಯಲಿಲ್ಲ. "ಭಾರತದ ಪ್ರಾಚೀನ ಗಣಿತ, ಖಗೋಳ ವಿಜ್ಞಾನಗಳು ಉನ್ನತ ಮಟ್ಟಕ್ಕೆ ಏರಿದ್ದುವು. ಪ್ರಪಂಚ ಕತ್ತಲಿನಲ್ಲಿ ತೊಳಲುತ್ತಿದ್ದಾಗ ಭಾರತ ಬೆಳಕನ್ನು ಬೀರಿತು" ಎಂದು ಮುಂತಾದ ಭಾವಪ್ರಧಾನ ನಿರೂಪಣೆಗಳೇ ಅಧಿಕ. ಇಂತಹವುಗಳಿಂದ ನಿರಪೇಕ್ಷ ಮೌಲ್ಯ ಆಯ್ದು ನಿರೂಪಿಸಲು ಅತ್ಯಧಿಕ ಶ್ರಮ ಹಾಗೂ ಚಿಕಿತ್ಸಕ ಒಳನೋಟ ಬೇಕಾಗುತ್ತವೆ. ಈ ಕಾರ್ಯವನ್ನು ನೆರವೇರಿಸಲು ಸಿಎನೆಸ್ ಟೊಂಕ ಕಟ್ಟಿದರು. ಹರಿದು ಹಂಚಿ ಹೋಗಿದ್ದ, ಅನೇಕ ವೇಳೆ ನಶಿಸಿ ಹೋಗಿದ್ದ, ಹಲವಾರು ಆಕರ ಸಾಮಗ್ರಿಗಳನ್ನು ಶೋಧಿಸಿ ಮೊದಲು ತಾವು ವಿಷಯವನ್ನು ಸರಿಯಾಗಿ ತಿಳಿದುಕೊಂಡು ಬಳಿಕ ಶಾಸ್ತ್ರೀಯವಾದ ಒಂದು ಚೌಕಟ್ಟಿನ ಒಳಗೆ ಅದನ್ನು ಪುನಃ ಸ್ಥಾಪಿಸಲು ಭಗೀರಥ ಸಾಹಸ ಮಾಡಿದರು ಮತ್ತು ನಚಿಕೇತ ಪ್ರಯತ್ನ ಹೂಡಿದರು (ಮೊದಲನೆಯದು ಭೌತ ಎರಡನೆಯದು ಬೌದ್ಧಿಕ). ಇದರ ಫಲವಾಗಿ ೧೯೪೫ರ ವೇಳೆಗೆ ಇವರು 'ಗಣಿತ ಶಾಸ್ತ್ರದ ಚರಿತ್ರೆ' ಎಂಬ ಹಸ್ತಪ್ರತಿಯನ್ನು ಕನ್ನಡದಲ್ಲಿ ತಯಾರಿಸಿದರು. ಇದನ್ನು ೧೯೫೮ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿತು. ಈ ಗ್ರಂಥದ ಮೊದಲ ಅರ್ಧದಲ್ಲಿ ಗಣಿತದ ಸಮಗ್ರ ಇತಿಹಾಸದ ಸಂಕ್ಷೇಪ ವರದಿ ಉಂಟು. ಎರಡನೆಯದರಲ್ಲಿ ಭಾರತ ಕುರಿತಂತೆ ಇದೇ ಇತಿಹಾಸದ ವಿವರಣೆ ಇದೆ. ಇವೇ ಮೂಲ ಸಾಮಗ್ರಿಗಳನ್ನು ಆಧರಿಸಿ ಇಂಗ್ಲಿಷಿನಲ್ಲಿ ಒಂದು ಗ್ರಂಥ ಬರೆದು ಪ್ರಕಟಿಸಿದರು (೧೯೬೭). ಅದರ ಹೆಸರು Ancient Indian Mathematics. ಭಾರತೀಯ ಗಣಿತದ ನಿಷ್ಕೃಷ್ಟ ಇತಿಹಾಸ ತಿಳಿಯಲು ಬಯಸುವ ಪ್ರತಿಯೊಬ್ಬ ಜಿಜ್ಞಾಸುವಿಗೂ ಈ ಗ್ರಂಥಗಳು ಅತ್ಯುಪಯುಕ್ತ ಒಡನಾಡಿಗಳು.

ಪ್ರಾಚೀನ ಭಾರತೀಯ ಗಣಿತದ ಮೌಲ್ಯಮಾಪನೆಯನ್ನು ಇವರು ಅದೆಷ್ಟು ಜ್ಞೇಯನಿಷ್ಠವಾಗಿ ಮಾಡಿರುವರು ಎನ್ನುವುದನ್ನು ಈ ಮುಂದೆ ಉದ್ಧರಿಸಿರುವ ಒಂದು ಪರಿಚ್ಛೇದದಿಂದ ತಿಳಿಯಬಹುದು: "ಅಂಕಗಣಿತದ ಸಂಖ್ಯಾಕ್ರಮ ಬಹಳ ಹಿಂದೆ ಭಾರತದಲ್ಲಿ ಹುಟ್ಟಿ ಪಾಶ್ಚಾತ್ಯ ದೇಶಗಳಿಗೆ ನಿಧಾನವಾಗಿ ಹೇಗೆ ಹರಡಿತು ಎಂದು ವಿವರಿಸಿದ್ದೇವೆ. ಇಂದು ಸಾರ್ವತ್ರಿಕವಾಗಿರುವ ಸಂಖ್ಯಾಕ್ರಮವೂ ಅಂಕಗಣಿತದ ಮುಖ್ಯ ವಿಧಾನಗಳೆಲ್ಲವೂ (ದಶಮಾಂಶಗಳ ಹೊರತಾಗಿ) ಭಾರತೀಯರಿಂದ ಬಂದವು ಎಂದು ಮತ್ತೊಮ್ಮೆ ಹೇಳಬೇಕಾಗಿಲ್ಲ. ಇಂದಿನ ಗಣಿತದಲ್ಲಿ ಭಾರತೀಯರ ಹೆಸರು ನಿಂತಿರುವುದು ಮುಖ್ಯವಾಗಿ ಇವುಗಳಲ್ಲಿ ಮಾತ್ರ. ಬೀಜಗಣಿತದ ಚಿಹ್ನಾಕ್ರಮವೂ ಮೂಲಭಾವನೆಗಳೂ

ಅಂಕುರಿಸಿದುದು ಭಾರತದಲ್ಲಿಯೇ. ಬಹಳ ಕಾಲದವರೆಗೆ ಪಾಶ್ಚಾತ್ಯರ ಬೀಜಗಣಿತವು ಭಾರತೀಯ ಬೀಜಗಣಿತದ ಮಟ್ಟಕ್ಕೆ ಬರಲಿಲ್ಲ. . . ಗಣಿತದ ಬಾಲ್ಯಸ್ಥಿತಿಯಲ್ಲಿ ಹೊಸ ಭಾವನೆಗಳೂ ಅವಶ್ಯಕವಾಗಿದ್ದುವು. ನಿಖರವಾದ ತರ್ಕವೂ ಬೇಕಾಗಿದ್ದಿತು. ಭಾರತೀಯರಲ್ಲಿ ಭಾವನೆಗಳು ಅದ್ಭುತವಾಗಿ ಹುಟ್ಟಿದುವು: ಋಣ ಸಂಖ್ಯೆಗಳು, ಅನಂತ, ತಾತ್ಕಾಲಿಕ. ಇವು ಸಂಕೀರ್ಣ ಭಾವನೆಗಳು. ರೇಖಾ ಗಣಿತಕ್ಕೆ ಬೀಜಗಣಿತವನ್ನು ಸಹಾಯಕವಾಗಿ ಉಪಯೋಗಿಸಿದರು. ಕೆಲವು ಬೀಜಗಣಿತದ ಲೆಕ್ಕಗಳನ್ನು ರೇಖಾಗಣಿತದಿಂದ ಮಾಡಿದುದು ಇವು ಶ್ಲಾಘನೀಯವು. ಯೂರೋಪಿನಲ್ಲಿ ಹೀಗೆ ಒಂದು ಶಾಖೆಯಿಂದ ಇನ್ನೊಂದು ಶಾಖೆಗೆ ಸಹಾಯವಾಗುವಂತೆ ಸಂಬಂಧವೇರ್ಪಡಿಸಿದುದು ಬಹಳ ಕಾಲದ ತರುವಾಯ. ಇಷ್ಟು ಶ್ಲಾಘನೀಯವಾದ ಭಾವನೆಗಳೂ ವಿಧಾನಗಳೂ ಇದ್ದರೂ ಉತ್ತಮವಾದ ತಾರ್ಕಿಕ ಭಾವವಿಲ್ಲದುದೇ ಭಾರತೀಯ ಗಣಿತದ ಪ್ರಗತಿಯು ನಿಂತು ಹೋಗಿರುವುದಕ್ಕೆ ಮುಖ್ಯ ಕಾರಣವೆನ್ನಬಹುದು."

ಐತಿಹಾಸಿಕ ಕಾರಣಗಳಿಂದಾಗಿ ಈ ಶತಮಾನದ ನಮ್ಮ ವಿದ್ಯಾರ್ಥಿಗಳಿಗೆ ಭಾರತೀಯ ವಿಜ್ಞಾನ ಪರಂಪರೆಯೊಡನೆ ಸಂಪರ್ಕ ಕಡಿದುಹೋಯಿತು. ಇತ್ತ ಪಾಶ್ಚಾತ್ಯ ವಿಜ್ಞಾನ ಮತ್ತು ಅದರ ವಿಧಾನಗಳು ಸಾರ್ವತ್ರಿಕವಾಗಿ ಬಳಕೆಗೆ ಬಂದುವು. ಇಂಗ್ಲಿಷ್ ಸರ್ವತ್ರ ಶಿಕ್ಷಣ ಮಾಧ್ಯಮವಾಯಿತು. ಇದು ಎಂಥ ಪ್ರಕೋಪ ಸ್ಥಿತಿಗೆ ಮುಟ್ಟಿತೆಂದರೆ ವಿಶ್ವವಿದ್ಯಾಲಯಗಳ ಪದವಿ ಪಡೆದ ಸಾಮಾನ್ಯ ಎಲ್ಲ ಜನರೂ, ಇಂಗ್ಲಿಷ್ ಒಂದೇ ಜ್ಞಾನದೇವಾಲಯದ ಬೀಗ ತೆರೆಯಬಲ್ಲ ಕೀಲಿ, ದೇಶೀಯ ಭಾಷೆ ಯಾವುದಕ್ಕೂ ಈ ಸಾಮರ್ಥ್ಯ ಇಲ್ಲ ಎಂದು ಪ್ರಾಮಾಣಿಕವಾಗಿ ನಂಬಿದರು. ಇದು ೧೯೩೦–೪೦ರಲ್ಲಿದ್ದ ಪರಿಸ್ಥಿತಿ. ಪಾಶ್ಚಾತ್ಯ ವಿಜ್ಞಾನ ಶಿಕ್ಷಣವನ್ನು ಪಡೆದಿದ್ದವರ ಸಂಖ್ಯೆ ಆಗ ಬಲು ಕಡಿಮೆ. ಹೀಗಾಗಿ ಸಮಗ್ರ ರಾಷ್ಟ್ರದ ಬೌದ್ಧಿಕ ಜೀವನದಲ್ಲಿ ಕೃತಕವೂ ಅನಾರೋಗ್ಯಕರವೂ ಆದ ಒಂದು ಏರುಪೇರು ತಲೆದೋರಿತ್ತು. ಬೌದ್ಧಿಕ ಜೀವನದ (ಆದ್ದರಿಂದ ರಾಷ್ಟ್ರ ನಾಯಕತ್ವದ) ಹಿರಿತನ ಕೆಲವರಲ್ಲೇ ಕೇಂದ್ರೀಕೃತಕವಾಗಿ ಬಹುಸಂಖ್ಯಾತ ಪ್ರಜೆಗಳು ತಮಗೆ ಇಂಗ್ಲಿಷ್ ಬರದಿದ್ದುದರ, ಇಲ್ಲವೇ ಅದಕ್ಕೆ ಪ್ರವೇಶ ದೊರೆಯದಿದ್ದುದರ, ಏಕೈಕ ಕಾರಣದಿಂದ ಒಂದು ವಿಧವಾದ ಕತ್ತಲೆಯಲ್ಲೇ ದಿನ ತಳ್ಳಬೇಕಾಗಿದ್ದ ವಿಷಮ ಪರಿಸ್ಥಿತಿ ಅಂದಿನದು. ಆ ವೇಳೆಗೆ ಮೈಸೂರು ವಿಶ್ವವಿದ್ಯಾನಿಲಯ ಜ್ಞಾನ ಪ್ರಸಾರದ ಅಂಗವಾಗಿ ಹೊಸ ಒಂದು ಉದಾರ ನೀತಿ ತಳೆಯಿತು; ಇದರ ಪ್ರಕಾರ ಆಧುನಿಕ ವಿಜ್ಞಾನವನ್ನು ಹಳ್ಳಿಹಳ್ಳಿಗೆ ಕೂಡ ಕೊಂಡೊಯ್ಯಬೇಕು, ಇದು ತೀರ ಸಹಜವಾಗಿ ಕನ್ನಡದ ಮೂಲಕ ಆಗಬೇಕು. ಸಮರ್ಥ ಪ್ರಾಧ್ಯಾಪಕರು ಹಾಗೂ ಇತರ ವಿದ್ವಾಂಸರು ಭಾಷಣ ನೀಡುವುದರ ಮೂಲಕ, ಮತ್ತು ಅದೇ ವಿಷಯಗಳ ಮೇಲೆ ಹೊತ್ತಗೆಗಳನ್ನು ಬರೆದು ಕೊಡುವುದರ ಮೂಲಕ ಈ ಜ್ಞಾನಯಜ್ಞದಲ್ಲಿ ಭಾಗವಹಿಸಬೇಕು. ವಿಶ್ವವಿದ್ಯಾನಿಲಯ ಈ ಹೊತ್ತಗೆಗಳನ್ನು ಪ್ರಕಟಿಸಿ ಜನತೆಗೆ ಸುಲಭ ಬೆಲೆಗೆ ಒದಗಿಸಬೇಕು.

ಶ್ರೀನಿವಾಸ ಅಯ್ಯಂಗಾರ್ಯರು ಈ ಪ್ರಯೋಗದಲ್ಲಿ ತುಂಬ ಉತ್ಸಾಹದಿಂದ ಭಾಗವಹಿಸಿದರು. ಅವರು ೧೯೩೩ರಲ್ಲಿ 'ಖಗೋಲಶಾಸ್ತ್ರ' ಕುರಿತು ಕನ್ನಡದಲ್ಲಿ ಉಪನ್ಯಾಸ ನೀಡಿದ್ದು ಮಾತ್ರವಲ್ಲ ಅದೇ ವಿಷಯದ ಮೇಲೆ ಹೊತ್ತಗೆಯನ್ನು ಬರೆದು ಕೊಟ್ಟರು ಕೂಡ. ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕ ಮಾಲೆಯ ಮೊದಲನೆಯ ಪುಷ್ಪವೇ ಇದು: 'ಖಗೋಲಶಾಸ್ತ್ರ ಪ್ರವೇಶ'. ಇದರಲ್ಲಿ ಸಿಎನೆಸ್ ಅದೆಷ್ಟು ಸ್ಪಷ್ಟವಾಗಿ ನೂತನ ಗಹನ ವಿಷಯವನ್ನು ಪ್ರಾರಂಬಿಸಿದ್ದಾರೆ ಎನ್ನುವುದನ್ನು ಮುಂದಿನ ಪರಿಚ್ಛೇದದಲ್ಲಿ ಉದ್ಧರಿಸಿರುವ ವಾಕ್ಯಗಳು ಶ್ರುತಪಡಿಸುತ್ತವೆ:

"ಮೋಡವಿಲ್ಲದ ಒಂದು ರಾತ್ರಿ ಆಕಾಶವನ್ನು ನೋಡಿದರೆ ನೂರಾರು ನಕ್ಷತ್ರಗಳು ಬೇರೆ ಬೇರೆ ಬಣ್ಣಗಳನ್ನೊಳಗೊಂಡು ಮಿನುಗುಟ್ಟುತ್ತ ಮಿರುಗುವ ದೃಶ್ಯದಿಂದ ಯಾರಿಗೆ ತಾನೇ ಆಶ್ಚರ್ಯವೂ ಆನಂದವೂ ಆಗಲಾರದು! ಇದನ್ನು ವರ್ಣಿಸುವ ಕವಿಗಳೆಷ್ಟೊಂದು ಮಂದಿ! ಆದರೆ ಯಾವ ಕವಿ ತಾನೇ ತನ್ನ ವರ್ಣನೆಯಿಂದ ತೃಪ್ತಿಗೊಳ್ಳಬಲ್ಲನು! ನಮಗೆ ಈಗ ಕವಿತಾವರ್ಣನೆ ಬೇಡ, ವಿಷಯಸಂಗ್ರಹಕ್ಕಾಗಿ ನೋಡೋಣ. ನಕ್ಷತ್ರಗಳನ್ನೆಲ್ಲ ಭೂಮಿಯ ಮೇಲೆ ಕವಿಚಿರುವ ಆಕಾಶವೆಂಬ ನೀಲಿ ಬಣ್ಣದ ಒಂದು ದೊಡ್ಡ ಟೋಪಿಯ ಮೇಲೆ ಅಲ್ಲಲ್ಲೇ ಪೋಣಿಸಿದ್ದಾರೆಂಬ ಭಾವ ಬರುತ್ತದೆಯಲ್ಲವೇ? ಆದರೆ ವಾಸ್ತವವಾಗಿ ಆಕಾಶವೆಂದರೇನು? ಭೂಮಿಯ ಮೇಲೆ ಸಾವಿರಾರು ಮೈಲಿಗಳವರೆಗೂ ವ್ಯಾಪಿಸಿರತಕ್ಕ ಅಂತರಿಕ್ಷವೆಂಬ ವಾಯುಮಂಡಲವಿದೆ. ಇದರ ಹೊರಗೆ, ಗ್ರಹಗಳು, ನಕ್ಷತ್ರಗಳು ಮುಂತಾದವನ್ನು ಬಿಟ್ಟರೆ ಇನ್ನು ಬೇರೆ ಏನೂ ಇಲ್ಲ ಎಂದು ಸದ್ಯಕ್ಕೆ ಭಾವಿಸಬಹುದು. ಎಂದರೆ ಭೂಮಿಯ ಅಂತರಿಕ್ಷವನ್ನು ದಾಟಿ ಹೋದಮೇಲೆ ಭೂಮಿಗೂ ಯಾವುದೇ ಒಂದು ನಕ್ಷತ್ರಕ್ಕೂ ನಡುವೆ ಯಾವುದೊಂದು ಪದಾರ್ಥವೂ ಇಲ್ಲ ಎಂದು ಸದ್ಯಕ್ಕೆ ಭಾವಿಸೋಣ. ಆದ್ದರಿಂದ ಭೂಮಿಯ ಮೇಲೆ ಯಾವ ಟೋಪಿಯೂ ಇಲ್ಲ. ನಕ್ಷತ್ರಗಳನ್ನೆಲ್ಲ ಯಾವುದಕ್ಕೂ ಅಂಟಿಸಿಲ್ಲ. ನಮ್ಮ ಬುದ್ಧಿಯಿಂದ ಮಾತ್ರವೇ ಗ್ರಹಿಸಲು ಸಾಧ್ಯವಾದ ಮೂಲಭಾವಗಳಲ್ಲಿ ದೇಶ (space) ಮತ್ತು ಕಾಲ (time) ಎಂಬವು ಮುಖ್ಯವಾದವು. ನಮ್ಮ ಇಂದ್ರಿಯಗಳಿಗೆ ಗೋಚರಿಸುವ ಮತ್ತು ನಮಗೆ ಗೋಚರಿಸದೆ ಊಹಾಶಕ್ತಿಯಿಂದ ತಿಳಿಯಬಹುದಾದ ದೇಶವನ್ನೆಲ್ಲ ಒಟ್ಟುಗೂಡಿ ವಿಶ್ವವೆಂದು (universe) ಕರೆಯುತ್ತೇವೆ. ಈ ವಿಶ್ವದ

ಪರಿಮಾಣಗಳನ್ನಾಗಲಿ ವಿಶ್ವದಲ್ಲಿರತಕ್ಕ ವಸ್ತುಗಳ ಸಂಖ್ಯೆಯನ್ನಾಗಲಿ ನಮ್ಮಿಂದ ಊಹಿಸಲು ಸಾಧ್ಯವಿಲ್ಲ. ಇಂಥ ಅಗಾಧವಾದ ವಿಶ್ವದಲ್ಲಿ ಭೂಮಿಯೆಂಬ ಒಂದು ಸಣ್ಣ ವಸ್ತುವಿನ ಮೇಲೆ ನಾವು ಹುಳುಗಳೋಪಾದಿಯಲ್ಲಿ ಹರಿದಾಡುತ್ತಿದ್ದೇವೆ. ವಿಶ್ವದಲ್ಲಿ ಅಲ್ಲಲ್ಲೇ ದೂರ ದೂರದಲ್ಲಿ ಇರತಕ್ಕ ಪದಾರ್ಥಗಳ ಪೈಕಿ ಎಲ್ಲೋ ಕೆಲವು ನಕ್ಷತ್ರಗಳು ಮಾತ್ರ ನಮ್ಮ ಕಣ್ಣಿಗೆ ಕಾಣುತ್ತವೆ."

ಸಿಎನೆಸ್‌ರ ವಿಷಯ ಪ್ರತಿಪಾದನೆ ಹಾಗೂ ಶೈಲಿಗಳಿಗೆ ಇನ್ನೂ ಒಂದು ಉದಾಹರಣೆಯನ್ನು ಉಲ್ಲೇಖಿಸಬಹುದು:
"ಗಣಿತಶಾಸ್ತ್ರದ ಬೆಳೆವಣಿಗೆಯಲ್ಲೂ ಅಭ್ಯಾಸದಲ್ಲೂ ಮುಖ್ಯವಾಗಿ ಗಮನ ಕೊಡತಕ್ಕ ವಿಷಯಗಳು ಎರಡು – ತರ್ಕಪೂರಿತವಾದ ವಾದ ಮತ್ತು ನಿಖರತ್ವವನ್ನು ಸಾಧಿಸಬೇಕೆಂಬ ಉದ್ದೇಶ. ಗಣಿತಶಾಸ್ತ್ರವನ್ನು ಅಭ್ಯಾಸ ಮಾಡುವುದರಿಂದ ಸಾಮಾನ್ಯ ಜನಗಳಿಗೆ ಮುಖ್ಯವಾಗಿ ಆಗುವ ಪ್ರಯೋಜನಗಳು ಇವುಗಳೇ. ಇತರ ವಿಜ್ಞಾನ ಶಾಸ್ತ್ರಗಳಲ್ಲಿ ವಿಚಾರ ಮಾಡಲ್ಪಡುವ ವಿಷಯಗಳಿಗೆ ಸಮಗ್ರವಾದ ತರ್ಕವನ್ನೂ ಸಾಧ್ಯವಾದಷ್ಟು ನಿಖರತ್ವವನ್ನೂ ಒದಗಿಸಿಕೊಡುವುದೇ ಆ ಶಾಸ್ತ್ರಗಳಿಗೆ ಗಣಿತವು ಮಾಡುವಂಥ ಸೇವೆ. ಭೌತಶಾಸ್ತ್ರ, ರಸಾಯನಶಾಸ್ತ್ರ, ಭೂಗರ್ಭ ಶಾಸ್ತ್ರ, ಮನಶ್ಶಾಸ್ತ್ರ ಮುಂತಾದ ಸಾಮಾಜಿಕ ಶಾಸ್ತ್ರಗಳಲ್ಲೂ ಕೂಡ ಗಣಿತದ ಈ ಸೇವೆಯನ್ನು ನೋಡಬಹುದು. ಒಂದೊಂದು ವೇಳೆ ಇತರ ಶಾಸ್ತ್ರಗಳ ಆವಶ್ಯಕತೆಗಳು ಗಣಿತಕ್ಕೆ ಹೊಸ ಭಾವನೆಗಳನ್ನು ಕೊಟ್ಟು ಗಣಿತದ ಶಾಖೆಗಳು ಬೆಳೆದಿವೆ. ಗಣಿತಶಾಸ್ತ್ರಜ್ಞನು ಹೊಸ ಹೊಸ ಮೂಲ ಭಾವನೆಗಳನ್ನು ಅವನಿಗೆ ಸಹಜವಾಗಿ ತೋರುವ ರೀತಿಯಲ್ಲಿ ಕಲ್ಪಿಸುತ್ತ ತರ್ಕದ ಮೇಲೆ ಗಮನವಿಟ್ಟು ಗಣಿತವನ್ನು ಬೆಳೆಸುವನು. ಮೂಲಭಾವನೆಗಳು ಜಟಿಲವಾದಷ್ಟೂ ಅವುಗಳಿಂದ ಉತ್ಪನ್ನವಾಗುವ ಗಣಿತವೂ ಕಟುವಾಗುವುದು. ಈ ರೀತಿಯಾಗಿ ಗಣಿತವು ಅನಂತವಾಗಿ ಬೆಳೆಯುತ್ತ ಹೋಗಬಹುದು. ಇಂಥ ಗಣಿತ ಶೋಧನೆಗಳೆಲ್ಲ ಇತರ ಶಾಸ್ತ್ರಗಳಿಗೆ ಉಪಯುಕ್ತವಾಗಬೇಕಾದ ಆವಶ್ಯಕತೆ ಇಲ್ಲ. ಆದರೆ, ವಿಜ್ಞಾನಶಾಸ್ತ್ರಗಳು ಬೆಳೆಯುತ್ತ ಹೋಗುವಾಗ ಯಾವ ಸಂದರ್ಭಗಳಲ್ಲಿಯೂ ಅದುವರೆಗೆ ಉಪಯೋಗವಾಗದೇ ಇದ್ದ ಗಣಿತ ಅಭಿಪ್ರಾಯಗಳೂ ಸಂಶೋಧನೆಗಳೂ ಉಪಯೋಗಕ್ಕೆ ಬರಬಹುದು. ಆದರೆ ಇಂಥ ಸಾಂದರ್ಭಗಳು ಗಣಿತದ ಎಲ್ಲ ವಿಷಯಗಳಿಗೂ ಬರಲಾರವು. ಈ ವಿಧವಾದ ಉಪಯುಕ್ತತೆಯನ್ನು ಗಣಿತಶಾಸ್ತ್ರಜ್ಞನು ಗುರಿಯಾಗಿಟ್ಟುಕೊಂಡಿರುವುದೂ ಇಲ್ಲ."

ಆಧುನಿಕ ವಿಜ್ಞಾನದ ಗಹನ ಪರಿಕಲ್ಪನೆಗಳನ್ನು ಕನ್ನಡ ಭಾಷೆಯಲ್ಲಿ ನಿರೂಪಿಸುವುದು ಸಾಧ್ಯವೇ ಎಂಬ ಸಂಶಯಾತ್ಮರಿಗೆ ಸಿಎನೆಸ್ ಪ್ರತ್ಯಕ್ಷ ಪ್ರಯೋಗದಿಂದ ಭ್ರಮನಿರಸನ ಮಾಡಿದ್ದಾರೆ. ವಿಷಯ ಬಲ್ಲವನಿಗೆ ಮತ್ತು ಅದನ್ನು ಇತರರಿಗೆ ತಿಳಿಸಿ ಸಂತೋಷಿಸಬೇಕೆಂಬ ಆಸೆ ಇರುವಾತನಿಗೆ ಭಾಷಾ ಮಾಧ್ಯಮ ಖಂಡಿತವಾಗಿಯೂ ಅಡ್ಡ ಬರುವುದಿಲ್ಲ. ಕನ್ನಡದಲ್ಲಿ ಶಾಸ್ತ್ರೀಯ ಹಾಗೂ ಜನಪ್ರಿಯ ವಿಜ್ಞಾನ ವಾಙ್ಮಯವನ್ನು ರಚಿಸುವ ದಿಶೆಯಲ್ಲಿ ಕೆಲಸ ಮಾಡಿದ ಮೊದಲಿಗರಲ್ಲಿ ಶ್ರೀನಿವಾಸ ಅಯ್ಯಂಗಾರ್ಯರಿಗೆ ಹಿರಿಯ ಸ್ಥಾನ ಉಂಟು:

ವಿಷಯಬಲ್ಲಾತಂಗೆ ಸಂವಹನವತಿ ಸುಲಭ
ಭಾಷೆಯಲಿ ಭಾವನೆಯನರುಹುವೀ ಯಜ್ಞದಲಿ
ದೇಶ ಕಾಲಾತೀತ ಜ್ಞಾನ ಪ್ರವಹಿಸಿ ಸಂ–
ದೇಶ ಬೀರುವುದು: ಅರಿವೊಂದೇ ಗುರು ಅತ್ರಿಸೂನು

ಭಾರತೀಯ ಗಣಿತಶಾಸ್ತ್ರಕ್ಕೆ, ವಿಶೇಷವಾಗಿ ಖಗೋಳ ವಿಜ್ಞಾನಕ್ಕೆ, ಶ್ರೀನಿವಾಸ ಅಯ್ಯಂಗಾರ್ಯರು ಸಲ್ಲಿಸಿದ ಸೇವೆ ದ್ವಾರಕಾ ಶಂಕರಾಚಾರ್ಯರ ಲಕ್ಷ್ಯವನ್ನು ಇವರತ್ತ ಸೆಳೆಯಿತು. ಇದರ ಫಲವಾಗಿ ಸಿಎನೆಸ್‌ರಿಗೆ ಅಖಿಲ ಕರ್ನಾಟಕ ಜ್ಯೋತಿಷಿಕ ಸಂಘದ ತೃತೀಯ ಸಮ್ಮೇಳನದ ಅಧ್ಯಕ್ಷತೆಯ ಗೌರವ ಲಭಿಸಿತು (೧೯೪೭). ಇದೇ ಸಮ್ಮೇಳನದಲ್ಲಿ ಶಂಕರಾಚಾರ್ಯರು ಅಯ್ಯಂಗಾರ್ಯರಿಗೆ 'ಗಣಿತ ಕಳಾನಿಧಿ' ಎನ್ನುವ ಬಿರುದನ್ನು ಅನುಗ್ರಹಿಸಿದರು.

ಭಾರತದಲ್ಲಿ ಒಬ್ಬ ಗಣಿತ ವಿದ್ವಾಂಸನಿಗೆ ದೊರೆಯಬಹುದಾದ ಪರಮ ಗೌರವಗಳಲ್ಲಿ ಒಂದು ಭಾರತೀಯ ಗಣಿತಸಂಘದ (Indian Mathematical Society) ವಾರ್ಷಿಕ ಸಮ್ಮೇಳನದ ಅಧ್ಯಕ್ಷ ಪದವಿ. ಆಂಧ್ರ ಪ್ರದೇಶದ ವಾಲ್ಟೇರಿನಲ್ಲಿ ನಡೆದ ಈ ಸಂಘದ ೨೮ನೆಯ ವಾರ್ಷಿಕ ಸಮ್ಮೇಳನಾಧ್ಯಕ್ಷತೆಗೆ ಶ್ರೀನಿವಾಸ ಅಯ್ಯಂಗಾರ್ಯರನ್ನು ಆಹ್ವಾನಿಸಿ ಗೌರವ ಸಲ್ಲಿಸಲಾಯಿತು (೧೯೬೨). ಕನ್ನಡ ಸಾಹಿತ್ಯ ಪರಿಷತ್ತು ತನ್ನ ಚಿನ್ನದ ಹಬ್ಬವನ್ನು ೧೯೭೦ರಲ್ಲಿ ಆಚರಿಸಿತು. ಆ ವೇಳೆ, ಸಿಎನೆಸ್ ಕನ್ನಡ ವಿಜ್ಞಾನ ವಾಙ್ಮಯ ನಿರ್ಮಾಣಕ್ಕೆ ಸಲ್ಲಿಸಿದ ಕೊಡುಗೆಯನ್ನು ಮೆಚ್ಚಿ, ಪರಿಷತ್ತು ಸಾರ್ವಜನಿಕವಾಗಿ ಅವರನ್ನು ಗೌರವಿಸಿತು.

'ಕನ್ನಡ ವಾಲ್ಮೀಕಿ ರಾಮಾಯಣ'ದ ಕರ್ತೃವಾದ ಶ್ರೀನಿವಾಸ ಅಯ್ಯಂಗಾರ್ಯರನ್ನು ಕನ್ನಡ ಜನ ಬಗೆ ಬಗೆಯಾಗಿ ಪ್ರಶಂಸಿಸಿ ಗೌರವಿಸಿದೆ. ಕನ್ನಡ ವಾಲ್ಮೀಕಿ ಎಂದೇ ಇವರನ್ನು ಅರ್ಥಪೂರ್ಣವಾಗಿ ಕರೆದಿದೆ. ಬೌದ್ಧಿಕ ರಂಗದಲ್ಲಿ ಸಿಎನೆಸ್ ಸಲ್ಲಿಸಿದ ಸೇವೆ ಬಹುಮುಖವಾದದ್ದು, ಬಹುಕಾಲ ಉಳಿಯುತ್ತದೆ. ಪ್ರಾಧ್ಯಾಪಕರಾಗಿ ಅವರು ಪ್ರಾಚೀನ ಋಷಿಸದೃಶ ಗುರುಗಳು, ಉನ್ನತ ಸಂಶೋಧನ ಮಾರ್ಗದರ್ಶಿಗಳು, ಪ್ರೀತಿಯ 'ನಮ್ಮೇಷ್ಟ್ರು' ಎಂದು ಶಿಷ್ಯಪ್ರಿಯರಾದವರು. ಅವರ ಸೇವಾವಧಿ ೧೯೨೩ರಿಂದ ೧೯೫೫ರವರೆಗೂ, ಅಂದರೆ ೩೨ ವರ್ಷಗಳಷ್ಟು

ದೀರ್ಘಕಾಲ ವಿಸ್ತರಿಸಿತ್ತು. ವ್ಯಕ್ತಿಶಃ ಇವರು ಬಲು ನಿಷ್ಠಾವಂತ ಮತ್ತು ಪ್ರಾಮಾಣಿಕ ಕ್ರಿಯಾಶೀಲರಾಗಿದ್ದರು. ಆದರೆ ಇವರಿಗೆ ತಮ್ಮ ವೃತ್ತಿಯಲ್ಲಿ ಅನುಗುಣವಾದ ಬಡ್ತಿಯಾಗಲೀ ಪ್ರೋತ್ಸಾಹವಾಗಲೀ ದೊರೆಯಲಿಲ್ಲ. ಲೌಕಿಕ ಯಶಸ್ಸು ಕುರಿತಂತೆ ಇವರು ಪೂರ್ಣ ನಿರ್ಮೋಹಿಗಳು, ನಿಶ್ಚಲ ತತ್ತ್ವಾನ್ವೇಷಣೆಯೊಂದೇ ಲಕ್ಷ್ಯ. ೧೯೫೫ರಲ್ಲಿ ಸೆಂಟ್ರಲ್ ಕಾಲೇಜಿನ ಪ್ರಿನ್ಸಿಪಾಲರಾಗಿ (ಕೇವಲ ೨೦ ದಿವಸಗಳ ಅವಧಿ) ನಿವೃತ್ತರಾದರು. ಮುಂದಿನ ಮೂರು ವರ್ಷ (೧೯೫೫–೫೮) ಬೆಂಗಳೂರಿನ ನ್ಯಾಶನಲ್ ಕಾಲೇಜಿನಲ್ಲಿ ಗೌರವ ಪ್ರೊಫೆಸರ್ ಆಗಿದ್ದರು. ಆ ವೇಳೆಗೆ ಕರ್ನಾಟಕ ವಿಶ್ವವಿದ್ಯಾಲಯದಿಂದ ಕರೆ ಬಂದು ಅಲ್ಲಿಯ ಸ್ನಾತಕೋತ್ತರ ಗಣಿತ ವಿಭಾಗ ಪ್ರಾರಂಭಿಸಲೋಸ್ಕರ ಧಾರವಾಡಕ್ಕೆ ತೆರಳಿದರು. ೧೯೬೩ರ ತನಕ ಅಲ್ಲಿದ್ದು ಸಾಕಷ್ಟು ಸಂಖ್ಯೆಯಲ್ಲಿ ಸಂಶೋಧನ ಶಿಷ್ಯರನ್ನು ತರಬೇತುಗೊಳಿಸಿ ಗಣಿತವಿಭಾಗಕ್ಕೆ ಅಂತಸ್ತನ್ನೂ ವ್ಯಾಪ್ತಿಯನ್ನೂ ತಂದುಕೊಟ್ಟು ನಿವೃತ್ತರಾದರು. ಮುಂದಿನ ಎರಡು ವರ್ಷ (೧೯೬೩–೬೫) ಅಲ್ಲಿಯೇ ವಿಶ್ವವಿದ್ಯಾಲಯ ಧನಾಯೋಗ ನಿಯೋಜಿತ (University Grants Commission, ಸಂಕ್ಷೇಪವಾಗಿ ಯುಜಿಸಿ) ಪ್ರಾಧ್ಯಾಪಕರಾಗಿದ್ದರು. ೧೯೬೫–೬೬ರಲ್ಲಿ ನಿವೃತ್ತರಾಗಿ ಬೆಂಗಳೂರಿನ ಸ್ವಗೃಹದಲ್ಲಿದ್ದಾಗ ಪುನಃ ಯುಜಿಸಿ ಪ್ರಾಧ್ಯಾಪಕತ್ವದ ಆಹ್ವಾನ ಇವರಿಗೆ ಬಂದಿತು. ಈ ಸಲ ಇವರು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ (ಸೆಂಟ್ರಲ್ ಕಾಲೇಜ್) ಗೌರವ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು (೧೯೬೬–೬೭). ೧೯೬೭ರಲ್ಲಿ ಪೂರ್ಣವಾಗಿ ನಿವೃತ್ತರಾದರೂ ಆಸಕ್ತ ಸಂಶೋಧಕರಿಗೆ ಯುಕ್ತ ಮಾರ್ಗದರ್ಶನವನ್ನು ತಮ್ಮ ಕೊನೆ ಉಸಿರಿನ ತನಕವೂ ಮುಕ್ತ ಮನಸ್ಸಿನಿಂದ ನೀಡುತ್ತಿದ್ದರು.

'ಕನ್ನಡ ವಿಶ್ವಕೋಶ ಯೋಜನೆ' ಪ್ರಾರಂಭವಾದಂದಿನಿಂದಲೂ (೧೯೫೬) ಅದರ ಗಣಿತ ಉಪಸಮಿತಿಯ ಅಧ್ಯಕ್ಷರಾಗಿ ಶ್ರೀನಿವಾಸ ಅಯ್ಯಂಗಾರ್ಯರು ವಿಷಯಗಳ ಹಾಗೂ ಲೇಖಕರ ಆಯ್ಕೆಯಲ್ಲಿ ಉನ್ನತ ಮಾರ್ಗದರ್ಶನವಿತ್ತಿದ್ದಾರೆ, ಶಿಷ್ಟ ಮಾನಗಳನ್ನು ರೂಪಿಸಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಪಠ್ಯಪುಸ್ತಕ ಸಮಿತಿಯ ಗಣಿತ ವಿಭಾಗದ ಸದಸ್ಯರಾಗಿ (೧೯೬೭–೭೨) ಸಿಎನೆಸ್ ಶ್ರೇಷ್ಠ ಮಟ್ಟದ ಗಣಿತ ಗ್ರಂಥಗಳ ಪ್ರಕಟಣೆಗೆ ನೆರವಾದರು. ಸ್ವತಃ ತಾವೇ ಆಧುನಿಕ ಬೀಜಗಣಿತದ ಮೇಲೆ ಉತ್ತಮವಾದ ಒಂದು ಆಕರ ಗ್ರಂಥವನ್ನು ಕೂಡ ಬರೆದು ಕೊಟ್ಟಿದ್ದಾರೆ.

ಈ ದ್ರಷ್ಟಾರರ ಸಮಸ್ತ ಚಟುವಟಿಕೆಗಳಲ್ಲಿಯೂ ನಾವು ಗುರುತಿಸುವುದು ಎರಡು ಮುಖ್ಯ ಲಕ್ಷಣಗಳನ್ನು: ಸಿಎನೆಸ್‌ರ ಶ್ರದ್ಧಾಪೂರ್ವಕ ನಿರಂತರ ಕಾರ್ಯಶೀಲತೆ; ನಿಷ್ಠಾವಂತ ತರುಣ ಕ್ರಿಯಾಶೀಲರ ತಂಡ ರಚಿಸುವಲ್ಲಿಯ ಅವರ ದೂರದೃಷ್ಟಿ ಹಾಗೂ ಔದಾರ್ಯ. ತಮ್ಮ ತರುಣ ಸಹೋದ್ಯೋಗಿಗಳ ಲೇಖನಗಳು ನಿರೀಕ್ಷಿತ ಗುಣಮಟ್ಟ ಮುಟ್ಟದಿದ್ದ ಸಂದರ್ಭಗಳಲ್ಲಿ ಸ್ವತಃ ತಾವೇ ಆ ಲೇಖನಗಳನ್ನು ತಿದ್ದಿ ಪರಿಷ್ಕರಿಸಿ ಹಿಂದಕ್ಕೆ ಕೊಡುತ್ತಿದ್ದುದು ಇವರ ಕ್ರಮ, ಹಿರಿಮೆ. ಔದಾರ್ಯಕ್ಕೆ ಪರ್ಯಾಯ ನಾಮ ಸಿಎನೆಸ್.

ಈ ಹಿಂದೆ ಹೇಳಿದಂತೆ ಇಸವಿ ೧೯೬೭ರಲ್ಲಿ ಬೆಂಗಳೂರಿನ ಸರಕಾರೀ ಕಾಲೇಜಿನಲ್ಲಿ ನಾನು ಗಣಿತ ಉಪನ್ಯಾಸಕನಾಗಿದ್ದೆ. ಮಾರ್ಚ್ ತಿಂಗಳ ಒಂದು ದಿವಸ ಬೆಂಗಳೂರು ವಿಶ್ವವಿದ್ಯಾಲಯದ ಗಣಿತ ವಿಭಾಗದ ಮುಖ್ಯಸ್ಥರಿಂದ ನನಗೆ ಕರೆಬಂತು: ಪದವಿಪೂರ್ವ ತರಗತಿಗೆ ನೂತನ ಪಠ್ಯಪಟ್ಟಿ ಅನುಸಾರ ಇಂಗ್ಲಿಷ್–ಕನ್ನಡ ಎರಡು ಭಾಷೆಗಳಲ್ಲಿಯೂ ಗಣಿತ ಪಠ್ಯಪುಸ್ತಕವನ್ನು ಬರೆದು ಪ್ರಕಟಿಸಲು ತಮ್ಮ ವಿಭಾಗ ನಿರ್ಧರಿಸಿದೆ ಎಂದು ತಿಳಿಸಿ, ಇದಕ್ಕಾಗಿ ನೇಮಿತವಾಗಿರುವ ಸಮಿತಿಯಲ್ಲಿ ನಾನೊಬ್ಬ ಸದಸ್ಯನಾಗಿರಬೇಕೆಂದು ಅವರು ಕೋರಿದರು. ಅಲ್ಲದೇ ನನ್ನ ಹೆಸರನ್ನು

ಸಿಎನೆಸ್ ಅವರೇ ಸೂಚಿಸಿದ್ದರೆಂದೂ ತಿಳಿಸಿದರು. ಸಿಎನೆಸ್ ಶಿಷ್ಯ, ಸಹೋದ್ಯೋಗಿ, ಕೊನೆಗೆ ಪರಿಚಿತನೂ ಅಲ್ಲದಿದ್ದ ನನ್ನ ಹೆಸರನ್ನು ಸೂಚಿಸುವಲ್ಲಿ ಅವರು ತಮ್ಮ ಸಹಜ ಔದಾರ್ಯ ಪ್ರದರ್ಶಿಸಿದ್ದರಷ್ಟೆ. ಸಮಿತಿಯ ಮೊದಲ ಸಭೆಯಲ್ಲೇ ನಮ್ಮ ಪರಸ್ಪರ ಪರಿಚಯವಾದದ್ದು. ಆ ಗಳಿಗೆಯಲ್ಲೇ ಸಿಎನೆಸ್ ನನ್ನ ಬಗ್ಗೆ ಅಪಾರ ವಾತ್ಸಲ್ಯ ತಳೆದರು. ಅಂದಿನಿಂದ ಮುಂದೆ ಪ್ರತಿ ಮಂಗಳ ವಾರದ ಅಪರಾಹ್ಣ ಅವರನ್ನು 'ಹುಲಿಗಾದ್ರಿ ಸೇವಾ'ದಲ್ಲಿ (ಬೆಂಗಳೂರಿನ ಮಲ್ಲೇಶ್ವರ ಬಡಾವಣೆಯಲ್ಲಿರುವ ಅವರ ನಿವಾಸ) ನಾನು ಭೇಟಿ ಮಾಡುವುದು ವಾಡಿಕೆಯಾಯಿತು. ಅವರ ಸಾನ್ನಿಧ್ಯದಲ್ಲಿ ಹೆಚ್ಚಿನ ನಿರ್ದುಷ್ಟತೆ ಪಡೆದೆ. ಸಾಮಾನ್ಯ ಲೋಹವನ್ನು ಚಿನ್ನವಾಗಿ ದ್ರವ್ಯಾಂತರಿಸಬಲ್ಲ ಸಿಎನೆಸ್‌ರ ಪರುಷಸ್ಪರ್ಶ ಒಂದು ವಿಶೇಷ ರಸಾನುಭವ.

೧೯೬೯ ಜನವರಿಯ ಒಂದು ಮಂಗಳ ವಾರದ ಬೈಠಕ್ಕಿನಲ್ಲಿ ಸಿಎನೆಸ್ ತಮ್ಮ ಸಹಜ ಮತ್ತು ನೇರ ಶೈಲಿಯಲ್ಲಿ ಮಾತು ಪ್ರಾರಂಭಿಸಿದರು, "ನಿಮ್ಮೊಡನೆ ಒಂದು ಮಹತ್ತ್ವದ ವಿಷಯ ಮಾತಾಡಬೇಕಾಗಿದೆ." ನಾನು ಕೇಳಲು ಉತ್ಸುಕನಾಗಿ ಕಣ್ಣು ಅರಳಿಸಿದೆ. ಅವರು ಮುಂದುವರಿಸಿದರು, "ಶ್ರೀಮದ್ವಾಲ್ಮೀಕಿ ರಾಮಾಯಣವನ್ನು ಕನ್ನಡ ಗದ್ಯಕ್ಕೆ ಪದಶಃ ಅನುವಾದಿಸಬೇಕೆಂಬ ಪ್ರೇರಣೆ ಶ್ರೀರಾಮನಿಂದ ಬಂತು. ಹದಿನಾಲ್ಕು ವರ್ಷಗಳ ಹಿಂದೆ ತೊಡಗಿದ ಈ ಕಾರ್ಯ ಈಗ ಮುಗಿಯುವ ಘಟ್ಟ ತಲಪಿದೆ. ಇದು ಮುದ್ರಣಗೊಂಡು ಜನತೆಗೆ ಆದಷ್ಟು ಸುಲಭ ಬೆಲೆಗೆ ದೊರೆಯುವಂತಾದರೆ ನಾನು ಧನ್ಯ. ಬೇರೆ ಯಾವ ಲಾಭವೂ ನನಗೆ ಬೇಡ. ಸಾವಿರಾರು ರೂಪಾಯಿಗಳ ಮೂಲಧನ ಹೂಡಿ ಮುಂದುವರಿಸಬೇಕಾದ ಈ ಪ್ರಕಟಣ ಕಾರ್ಯ ಆರ್ಥಿಕವಾಗಿ ನನ್ನ ಶಕ್ತಿಗೆ ಮೀರಿದ್ದು." ಹೀಗೆ ಹೇಳಿ ಅನುವಾದದ ಹಸ್ತಪ್ರತಿಗಳ ಬೆಟ್ಟವನ್ನೇ ನನ್ನೆದುರು ತಂದಿಟ್ಟರು.

"ನಾನೇನು ಮಾಡಬೇಕೆಂಬುದು ತಮ್ಮ ಅಪೇಕ್ಷೆ?"

"ಇದರ ಮುದ್ರಣದ ಹೊಣೆ ನಿಮ್ಮದು. ದೇವರು ಇದನ್ನು ನಿಮ್ಮಿಂದ ಮಾಡಿಸುತ್ತಾನೆ. ನಿಮ್ಮಲ್ಲಿ ಈ ಸಾಮರ್ಥ್ಯವಿದೆ."

"ನನಗೆ ದೇವರಲ್ಲಿ ನಂಬಿಕೆ ಇಲ್ಲ! ನಾನೊಬ್ಬ ನಾಸ್ತಿಕ."

"ನಿಮ್ಮ ವ್ಯಕ್ತಿತ್ವವನ್ನು ನಾನು ಕಂಡಿರುವಂತೆ ನೀವೊಬ್ಬ ಆಸ್ತಿಕ ಶ್ರೇಷ್ಠ. ಆದರೆ ಆ ವಿಚಾರ ಈಗಬೇಡ. ನನ್ನಲ್ಲಿ ನಿಮಗೆ ನಂಬಿಕೆ ಇದೆಯಷ್ಟೆ?"

"ಧಾರಾಳವಾಗಿ!"

"ಹಾಗಾದರೆ ಈ ಮುದ್ರಣ ಸೇವೆ ನಡೆಯಲಿ!"

"ಪ್ರಯತ್ನ ಮಾಡೋಣ."

ನನ್ನ ಸಾಮರ್ಥ್ಯದ ಅರಿವಿನಿಂದ ಈ ಉದ್ಗಾರ ಹೊರಟದ್ದಲ್ಲ. ಆ ಹಿರಿಯ ಚೇತನ ಅಷ್ಟೊಂದು ವಾತ್ಸಲ್ಯವನ್ನು ನನ್ನ ಮೇಲೆ ಹರಿಸಿ ಹರಸುವಾಗ ಬೇರೆ ಏನು ತಾನೇ ಹೇಳಲು ಸಾಧ್ಯ?

ಆದಿಕಾವ್ಯ, ಶ್ರೇಷ್ಠ ಧರ್ಮಗ್ರಂಥ, ಉನ್ನತ ಆದರ್ಶಗಳ ವಾಸ್ತವಿಕ ಚಿತ್ರಣ, ಭಾರತೀಯ ಸಂಸ್ಕೃತಿಯ ಭಂಡಾರ ಎಂದು ಮುಂತಾಗಿ ಪ್ರಸಿದ್ಧವಾಗಿರುವ ವಾಲ್ಮೀಕಿ ರಾಮಾಯಣ ಹೇಗೆ ಬಾಲಕ ಶ್ರೀನಿವಾಸನನ್ನು ಆಕರ್ಷಿಸಿತು ಎಂಬ ವಿಷಯ ಹಿಂದೆ ಪ್ರಸ್ತಾವಿಸಿದೆ. ಮೊದಲ ಪಾರಾಯಣ ಮುಗಿದು ಪಟ್ಟಾಭಿಷೇಕ ಮಾಡಿದಾಗ ಈ ತರುಣನ ಪ್ರಾಯ ಕೇವಲ ೧೩ ವರ್ಷ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ಆಗ ಮೂಡಿದ ಆಸಕ್ತಿ ಶ್ರೀನಿವಾಸ ಅಯ್ಯಂಗಾರ್ಯರ ಜೀವನದ ಉದ್ದಕ್ಕೂ ಸದಾ ವರ್ಧಿಸುತ್ತಲೇ ಇದ್ದು ಅವರ ಸಮಗ್ರ ಜೀವನವನ್ನೂ ಪ್ರಭಾವಿಸಿತು.

ಬಹಳ ವರ್ಷಗಳ ತರುವಾಯ (೧೯೫೦ರ ಸುಮಾರಿಗೆ) ಸಿಎನೆಸ್ ಬೆಂಗಳೂರಿನ ಮಲ್ಲೇಶ್ವರ ನಿವಾಸಿಗಳಾಗಿದ್ದಾಗ ಒಂದು ಘಟನೆ ಸಂಭವಿಸಿತು. ಅಲ್ಲಿಯ ಶ್ರೀರಾಮ ಮಂದಿರದಲ್ಲಿ ಆಗ ಏರ್ಪಡಿಸಿದ್ದ ರಾಮಾಯಣದ ಮೇಲಿನ ಕೆಲವು ವಿಶೇಷೋಪನ್ಯಾಸಗಳನ್ನು ಇವರು ಆಲಿಸಿದರು. ಆಗ ಇವರಲ್ಲಿ ಹೊಸತೊಂದು ಆಸೆ ಅಂಕುರಿಸಿತು; ತಾನೂ ರಾಮಾಯಣವನ್ನು ವಿಮರ್ಶಾತ್ಮಕವಾಗಿ ಅಧ್ಯಯಿಸಿ ವಿಶೇಷೋಪನ್ಯಾಸಗಳನ್ನು ನೀಡಬೇಕೆಂಬ ಬಯಕೆ. ಇದರ ಫಲವಾಗಿ ಇವರು ಮುಂದೆ ಕೆಲವೇ ತಿಂಗಳುಗಳ ತರುವಾಯ ೨೪ ಉಪನ್ಯಾಸಗಳ ಒಂದು ಮಾಲಿಕೆಯನ್ನೇ ನೀಡಿ ಪಟ್ಟಾಭಿಷೇಕ ಮಾಡಿದರು (ಮಾರ್ಚ್ ೭, ೧೯೫೩). ಕನ್ನಡದಲ್ಲಿ ವಾಲ್ಮೀಕಿ ರಾಮಾಯಣದ ಪದಶಃ ಗದ್ಯಾನುವಾದ ಗ್ರಂಥ ದೊರೆಯದಿರುವುದರ ಕೊರತೆ ಆಗ ಇವರಿಗೆ ಚೆನ್ನಾಗಿ ಮನವರಿಕೆ ಆಯಿತು. ಇದನ್ನು ಪರಿಹರಿಸಲು ಸಾಧ್ಯವಾಗುವಷ್ಟು ಪ್ರಯತ್ನ ತಾವು ಮಾಡಲೇಬೇಕೆಂದು ಇವರು ಸಂಕಲ್ಪಿಸಿದರು. ಆದರೆ ಕಾಲೇಜಿನ ಹೊಣೆಗಾರಿಕೆ ಮತ್ತು ಕಣ್ಣುಗಳ ದೌರ್ಬಲ್ಯ ಇವುಗಳಿಂದಾಗಿ ಈ ಕೆಲಸವನ್ನು ಒಡನೆ ಆರಂಭಿಸಲು ಸಾಧ್ಯವಾಗಲಿಲ್ಲ. ಅಂತೂ ಇಂತೂ ಬರವಣಿಗೆಯ ಆರಂಭ ಆದದ್ದು ೧೯೫೫ನೆಯ ಇಸವಿ ಗಾಯತ್ರಿ ಹಬ್ಬದಂದು. ಆದರೆ ಇದು ನಿರಾತಂಕವಾಗಿ ಏನೂ

ಮುಂದೆ ಸಾಗಲಿಲ್ಲ. ಶ್ರೀರಾಮನ ವನವಾಸ ಅವಧಿಯಷ್ಟೇ ಕಾಲ, ಒಮ್ಮೆ ವೇಗವಾಗಿ ಒಮ್ಮೆ ನಿಧಾನವಾಗಿ ಒಮ್ಮೆ ಸ್ಥಗಿತವಾಗಿ, ಈ ಯಜ್ಞ ಮುಂದುವರಿಯಿತು. ಇದು ಮುಗಿದದ್ದು ೧೯೬೯ರಲ್ಲಿ.

ಇದರ ಮುದ್ರಣ ವಿಚಾರ ಇವರ ಮನಸ್ಸಿಗೆ ಒಮ್ಮೊಮ್ಮೆ ಬಂದದ್ದುಂಟು. ಆದರೆ ಆಗೆಲ್ಲ ಅವರು, "ಬರೆಯುವುದು ನನ್ನ ಕೆಲಸ. ಅದನ್ನು ಹೊರಗೆಡಹಲು ಶ್ರೀರಾಮನೇ ಹೇಗೋ ದಾರಿ ತೋರಿಸುತ್ತಾನೆ" ಎಂಬ ದೃಢನಂಬಿಕೆಯಿಂದ ಮುದ್ರಣದ ಪ್ರಶ್ನೆಯನ್ನು ಅಷ್ಟಾಗಿ ತಲೆಗೆ ಹಚ್ಚಿಕೊಳ್ಳದೆಯೇ ಬರೆದು ಮುಗಿಸಿದರು.

ಸಿಎನೆಸ್‌ರಿಗೆ ಪ್ರಕಟಣೆಯ ವಿಚಾರವಾಗಿ ನಾನು ನೀಡಿದ ಧಿಡೀರ್ ಆಶ್ವಾಸನೆ ಒಂದು ಪವಾಡದ ರೀತಿಯಲ್ಲಿ ಕಾರ್ಯರೂಪಕ್ಕೆ ಇಳಿದು ಬಂದಿತು. ಅವರ ಶಿಷ್ಯರೂ ಅಭಿಮಾನಿಗಳೂ ಸೇರಿ ಕರ್ನಾಟಕದ ಸುಪ್ರಸಿದ್ಧ ಪ್ರಕಾಶಕರಾದ ಡಿವಿಕೆ ಮೂರ್ತಿಯವರ ನೇತೃತ್ವದಲ್ಲಿ ೧೬೦೦ ಪುಟಗಳ ಈ ಮಹಾಗ್ರಂಥವನ್ನು ಅಭೂತಪೂರ್ವವಾಗಿ ಮುದ್ರಿಸಿ ಪ್ರಕಟಿಸುವುದು ಸಾಧ್ಯವಾಯಿತು. (ಇದು ಸದ್ಯ ೨೦೧೧ರ ಎಂಟನೇ ಮುದ್ರಣದಲ್ಲಿ, ಕೇವಲ ರೂ ಎಂಟ್ನೂರಕ್ಕೆ ಮಾರುಕಟ್ಟೆಯಲ್ಲಿ ಲಭ್ಯ. ಡಿವಿಕೆ ಮೂರ್ತಿಯವರು ಕೀರ್ತಿಶೇಷರಾದರೂ ಅವರ ಪ್ರಕಾಶನವೇ ಇದನ್ನು ಮುಂದುವರಿಸಿದೆ.)

ಮೂಲ ವಾಲ್ಮೀಕಿ ರಾಮಾಯಣದಲ್ಲಿ ಬರುವ ನಿರೂಪಣೆ, ವರ್ಣನೆ ಹಾಗೂ ಧಾಟಿಗಳಿಗೆ ಒಂದಿಷ್ಟೂ ಊನಬರದಂತೆ ನಿಖರವಾಗಿ ಮಾಡಿರುವ ಪದಶಃ ಅನುವಾದವಿದು. ಅಂದರೆ ಮೂಲದ ಒಂದೊಂದು ಶ್ಲೋಕದ ಸಮಸ್ತ ಭಾವಭಾವನೆಗಳೂ ಸಾಧ್ಯವಾದಲ್ಲಿ ಪದಗಳೂ ಕನ್ನಡ ಗದ್ಯದ ಮರ್ಯಾದೆಗೆ ಹೊಂದುವಂತೆ ಬಟ್ಟಿ ಇಳಿದಿರುವ ಸಾರವೇ 'ಕನ್ನಡ ವಾಲ್ಮೀಕಿ ರಾಮಾಯಣ.' ಸುಂದರಕಾಂಡದಿಂದ ಆಯ್ದ ಒಂದು ಉದಾಹರಣೆಯನ್ನು ಪರಿಶೀಲಿಸಬಹುದು (ಸರ್ಗ ೬೫, ಶ್ಲೋಕ ೨೧–೨೭).

ವಿಜ್ಞಾಪ್ಯಶ್ಚ ನರವ್ಯಾಘ್ರೋ ರಾಮೋ ವಾಯುಸುತ ತ್ವಯಾ
ಅಖಿಲೇನೇಹ ಯದ್ದೃಷ್ಟಮಿತಿ ಮಾಮಾಹ ಜಾನಕಿ ॥ ೨೧ ॥
ಅಯಂ ಚಾಸ್ಮೈ ಪ್ರದಾತವ್ಯೋ ಯತ್ನಾತ್ಸುಪರಿರಕ್ಷತ:
ಬ್ರುವತಾ ವಚನಾನ್ಯೇವಂ ಸುಗ್ರೀವಸ್ಯೋಪಶೃಣ್ವತಃ ॥ ೨೨ ॥
ಏಷ ಚೂಡಾಮಣಿಃ ಶ್ರೀಮಾನ್ಮಯಾ ಸತೇ ಯತ್ನರಕ್ಷಿತಃ
ಮನಃ ಶಿಲಾಯಾಸ್ತಿಲಕೋ ಗಂಡಪಾರ್ಶ್ವೇ ನಿವೇಶಿತಃ
ತ್ವಯಾ ಪ್ರಣಷ್ಟೇ ತಿಲಕೇ ತಂ ಕಿಲ ಸ್ಮರ್ತುಮರ್ಹಸಿ ॥ ೨೩ ॥
ಏಷ ನಿರ್ಯಾತಿತಃ ಶ್ರೀಮಾನ್ಮಾಯಾತೇ ವಾರಿಸಂಭವಃ
ಏತಂ ದೃಷ್ಟ್ವಾ ಪ್ರಮೋದಿಷ್ಯೇ ವ್ಯಸನೇ ತ್ವಾಮಿವಾನಘ ॥ ೨೪ ॥
ಜೀವಿತಂ ಧಾರಾಯಿಷ್ಯಾಮಿ ಮಾಸಂ ದಶರಥಾತ್ಮಜ
ಊರ್ಧ್ವಂ ಮಾಸಾನ್ನ ಜೀವೇಯಂ ರಕ್ಷಸಾಂ ವಶಮಾಗತಾ ॥ ೨೫ ॥
ಇತಿ ಮಾಮಬ್ರವೀತ್ ಸೀತಾ ಕೃಶಾಂಗೀ ಧರ್ಮಚಾರಿಣೀ
ರಾವಣಾಂತಃಪುರೇ ರುದ್ಧಾ ಮೃಗೀವೋತ್ಫುಲ್ಲಲೋಚನಾ ॥ ೨೬ ॥
ಏತದೇವ ಮಯಾಖ್ಯಾತಂ ಸರ್ವಂ ರಾಘವ ಯದ್ಯಥಾ
ಸರ್ವಥಾ ಸಾಗರಜಲೇ ಸಂತಾರಃ ಪ್ರವಿಧೀಯತಾಮ್॥ ॥ ೨೭ ॥

"ಎಲೈ ವಾಯುಪುತ್ರನೇ, ಇಲ್ಲಿ ನೋಡಿದ್ದನ್ನು ನೀನು ಸಂಪೂರ್ಣವಾಗಿ ನರಶ್ರೇಷ್ಠನಾದ ರಾಮನಿಗೆ ವಿಜ್ಞಾಪಿಸತಕ್ಕದ್ದು' ಎಂಬುದಾಗಿಯೂ ನನಗೆ ಸೀತೆ ಹೇಳಿದಳು." ಸುಗ್ರೀವನಿಗೆ ಕೇಳಿಬರುವಂತೆ ಈ ಮಾತುಗಳನ್ನು ಹೇಳುತ್ತಾ, "ಯತ್ನದಿಂದ ಬಹಳ ಜಾಗ್ರತೆಯಾಗಿ ಕಾಪಾಡಿದ್ದ ಇದನ್ನೂ ಅಭಿಜ್ಞಾನ ಸೂಚಕವಾಗಿ ಆತನಿಗೆ ಕೊಡತಕ್ಕದ್ದು, ಸಂಪತ್ಕರವಾದ ಈ ಚೂಡಾಮಣಿಯನ್ನು ನಾನು ಬಹಳ ಜಾಗರೂಕತೆಯಿಂದ ಕಾಪಾಡಿರುವೆನು. ಒಂದು ದಿನ

ನಿನ್ನಿಂದ (ನನ್ನ) ತಿಲಕವು ಅಳಿಸಿಹೋದಾಗ ಮಣಿಶಿಲೆಯ ತಿಲಕವನ್ನು ನೀನು ನನ್ನ ಕೆನ್ನೆಯ ಮೇಲೆ ಇಟ್ಟೆ. ಅದನ್ನು ಜ್ಞಾಪಕಕ್ಕೆ ತಂದುಕೊ. ನೀರಿನಲ್ಲಿ ಹುಟ್ಟಿದ ಕಾಂತಿಯುಕ್ತವಾದ ಈ ಮಣಿಯನ್ನು ನಿನಗೆ ಕಳಿಸಿಕೊಟ್ಟಿರುವೆನು. ಎಲೈ ನಿರ್ದೋಷಿಯೇ, ನೀನು ಗುರುತಾಗಿ ಕಳಿಸಿರುವ ಆಭರಣವನ್ನು ನೋಡುತ್ತ ನನ್ನ ವ್ಯಸನದಲ್ಲಿ ನಿನ್ನನ್ನು ಕಂಡಂತೆ ಆನಂದಿಸುತ್ತಿರುವೆನು. ದಶರಥಪುತ್ರನೇ, ಇನ್ನೂ ಒಂದು ತಿಂಗಳು ಪ್ರಾಣವನ್ನು ರಕ್ಷಿಸಿಕೊಂಡಿರುವೆನು. ರಾಕ್ಷಸಿಯರ ವಶಕ್ಕೆ ಸಿಕ್ಕಿರುವ ನಾನು ತಿಂಗಳನಂತರ ಬದುಕಿರಲಾರೆನು' ಎಂದಳು. ಈ ಪ್ರಕಾರ ಕೃಶಳಾದ ದೇಹವುಳ್ಳವಳೂ ಧರ್ಮವನ್ನು ಅನುಷ್ಠಿಸುತ್ತಿರುವವಳೂ ಹರಿಣಿಯಂತೆ ಅರಳಿದ ಕಣ್ಣುಗಳುಳ್ಳವಳೂ ಆದ ಸೀತೆಯು ರಾವಣನ ಅಂತಃಪುರದಲ್ಲಿ ಬಂಧಿತಳಾಗಿ ನನಗೆ ಹೇಳಿದಳು. ಎಲೈ ರಾಮನೇ, ಇದೆಲ್ಲವನ್ನೂ ಆಕೆ ಹೇಳಿರುವಂತೆಯೇ ಹೇಳಿರುವೆನು. ಸರ್ವಥಾ ಸಮುದ್ರದ ನೀರನ್ನು ದಾಟುವುದಕ್ಕಾಗಿ ಏರ್ಪಾಡನ್ನು ಮಾಡುವವನಾಗು."

'ಕನ್ನಡ ವಾಲ್ಮೀಕಿ ರಾಮಾಯಣ' ಮೂಲ ವಾಲ್ಮೀಕಿ ರಾಮಾಯಣದ ಪದಶಃ ಸರಳ ಕನ್ನಡ ಗದ್ಯಾನುವಾದವಾಗಿ ಎಂಥ ಸಾರ್ಥಕ ಕೃತಿ ಆಗಿದೆ ಎನ್ನುವುದನ್ನು ಮೇಲಿನ ಉದಾಹರಣೆಯಿಂದ ತಿಳಿಯಬಹುದು. ಸಂಸ್ಕೃತ ಬಲ್ಲವರಿಗೆ ಈ ಗ್ರಂಥ ಮೂಲವನ್ನು ಇನ್ನಷ್ಟು ವಿಶದವಾಗಿ ಬಿಂಬಿಸುವ ಕೈಗನ್ನಡಿ. ಸಂಸ್ಕೃತ ಅರಿಯದ ಕನ್ನಡಿಗರಿಗಾದರೋ ಆದಿಕವಿಯ ರಸವಂತಿಕೆಯನ್ನೂ ಆತ ಹದವರಿತು ಮಾಡಿರುವ ಪದಪ್ರಯೋಗಗಳನ್ನೂ ಸವಿಯಲು ಇದು ನೇರ ಹಾದಿ. ಮೂಲ ಶ್ಲೋಕಗಳನ್ನು ಹತ್ತಿರ ಇಟ್ಟುಕೊಂಡು ಅಧ್ಯಯನ ಮಾಡಿದ್ದೇ ಆದರೆ ಸಂಸ್ಕೃತ ಭಾಷೆಯ ಸೊಗಸು ಸೊಬಗು ಸೊಗಡುಗಳನ್ನು ಕನ್ನಡದ ಮೂಲಕ ಸವಿಯಬಹುದು. ಈ ಮಹಾಗ್ರಂಥದ ಉದ್ದಕ್ಕೂ ಸಿಎನೆಸ್ ನೀಡಿರುವ ವಿಚಾರಪೂರ್ಣ ಟಿಪ್ಪಣಿಗಳು ಆದಿ ಕವಿಯ ದಿವ್ಯಜ್ಞಾನ ದೃಷ್ಟಿಯನ್ನು ಆಧುನಿಕ ವಿಜ್ಞಾನ ದೃಷ್ಟಿ ಹೇಗೆ ಅರಸಿ ಅರ್ಥವಿಸಿದೆ ಎನ್ನುವುದಕ್ಕೆ ಉತ್ಕೃಷ್ಟ ನಿದರ್ಶನಗಳು.

ಪ್ರಪಂಚ ಇರುವವರೆಗೂ ಕನ್ನಡ ಭಾಷೆ ಉಳಿದಿರುತ್ತದೆ. ಕನ್ನಡ ಭಾಷೆ ಇರುವವರೆಗೂ ಸಿಎನೆಸರ ಈ ಧ್ರುವ ಕೃತಿ ಉಳಿದಿರುತ್ತದೆ. ಕನ್ನಡ ವಾಲ್ಮೀಕಿ ರಾಮಾಯಣ ಇರುವವರೆಗೂ ಶ್ರೀನಿವಾಸ ಅಯ್ಯಂಗಾರ್ಯರ ಹೆಸರು ಉಳಿದಿರುತ್ತದೆ.

ಕನ್ನಡ ವಾಲ್ಮೀಕಿ ರಾಮಾಯಣ ಅನಾವರಣ ಮಹೋತ್ಸವ ಮುಗಿದಿದೆ (೧೯೭೨). ಕೃತಾರ್ಥ ಸಿಎನೆಸ್ ನನ್ನ ಬಳಿಸಾರಿ, "ಈಗಲಾದರೂ ದೇವರನ್ನು ನಂಬುತ್ತೀರೋ?" ಎಂದು ಆತ್ಮೀಯವಾಗಿ ಕುಟುಕಿದರು!
"ಈಗ ಕೂಡ ನಾನು ನಂಬುವುದು ನಿಮ್ಮನ್ನೇ, ನೀವು ಪ್ರತಿನಿಧಿಸುತ್ತಿರುವ ಜೀವನ ಮೌಲ್ಯವನ್ನು, ಅಂತೆಯೇ ಈ ಮೇರುಕೃತಿ ಗರ್ಭಿಸಿಕೊಂಡಿರುವ ಜೀವನ ಸೌಂದರ್ಯೋಲ್ಲಾಸಗಳನ್ನೇ! ಮೂರ್ತರೂಪದ, ನಾಮರೂಪದ ಅಥವಾ ವೈಯಕ್ತಿಕ ವೈಶಿಷ್ಟ್ಯದ ಯಾವ ದೇವರನ್ನೂ ಅಲ್ಲ."

ಹುಲಿಗಾದ್ರಿ ಸೇವಾದ ಸಂತ ಶ್ರೀನಿವಾಸ ಅಯ್ಯಂಗಾರ್ಯರು ಧಾರ್ಮಿಕ ಪ್ರವೃತ್ತಿಯವರು, ಆಸ್ತಿಕ ಶಿರೋಮಣಿಗಳು. ಅವರು ಎಂದೂ ತಮ್ಮ ಅಭಿಪ್ರಾಯಗಳನ್ನು ಇತರರ ಮೇಲೆ ಹೇರಲು ಪ್ರಯತ್ನಿಸಿದವರಲ್ಲ. ದೇವರನ್ನು ನಂಬದವರೊಡನೆ ನಂಬಿಕೆಯ ಮಹಿಮೆಯನ್ನು ಕುರಿತು ವಾದಜಾಲ ಬೀಸಿದವರಲ್ಲ.
"ನಿಮ್ಮ ಆಸ್ತಿಕ ದೃಷ್ಟಿಯನ್ನೂ ವೈಜ್ಞಾನಿಕ ದೃಷ್ಟಿಯನ್ನೂ ಹೇಗೆ ಸಮನ್ವಯಗೊಳಿಸುತ್ತೀರಿ" ಎಂದು ಅವರನ್ನು ಪ್ರಶ್ನಿಸಿದ್ದೆ.
"ಏನೋ ಒಂದು ತಪ್ಪು ಕಲ್ಪನೆಯಿಂದ ಈ ಪ್ರಶ್ನೆ ಕೇಳುತ್ತಿದ್ದೀರಿ. ಇವೆರಡು ದೃಷ್ಟಿಗಳು ಪರಸ್ಪರ ಸಂಬಂಧ ಇಲ್ಲದವು ಅಥವಾ ವಿರುದ್ಧವಾದವು ಎಂದು ನೀವು ತಿಳಿದಿರುವ ಹಾಗಿದೆ. ವಾಸ್ತವವಾಗಿ ಇವು ಒಂದೇ ನಾಣ್ಯದ ಎರಡು ಮುಖಗಳಂತೆ, ಒಂದಕ್ಕೊಂದು ಪೂರಕ. ಒಂದಿಲ್ಲದೇ ಇನ್ನೊಂದಿಲ್ಲ. ಒಂದಿದ್ದಾಗ ಇನ್ನೊಂದು ಇದ್ದೇ ಇರುತ್ತದೆ."
"ತಪ್ಪು ತಿಳಿಯಬೇಡಿ. ಸೂರ್ಯಗ್ರಹಣದ ದಿವಸ ನೀವು ತರ್ಪಣ ಬಿಡುತ್ತೀರಿ. ಆದರೆ ಅದೇ ಸೂರ್ಯಗ್ರಹಣ ಕೇವಲ ಒಂದು ಖಗೋಳೀಯ ಘಟನೆ ಎಂದು ಕೂಡ ನೀವೇ ಬೋಧಿಸುತ್ತೀರಿ. ಇವೆರಡು ನಿಲವುಗಳ ನಡುವೆ ಸಾಮರಸ್ಯ ಹೇಗೆ ತರುತ್ತೀರಿ?"
"ನನ್ನ ವ್ರತಾಚರಣೆ ಕೇವಲ ವೈಯಕ್ತಿಕ. ಅದು ಪರಂಪರೆಯಲ್ಲಿ ನನಗಿರುವ ಶ್ರದ್ಧೆಯಿಂದ ಬಂದದ್ದು. ಅದರಿಂದ ನನಗೆ ನೆಮ್ಮದಿ ದೊರೆಯುವುದು ಮಾತ್ರವಲ್ಲ, ನನ್ನ ವೈಜ್ಞಾನಿಕ ಚಿಂತನೆಗೆ ಹೆಚ್ಚಿನ ಬೆಂಬಲವೂ ದೊರೆಯುತ್ತದೆ. ಅಲ್ಲದೇ ಅದನ್ನು ಇತರರ ಮೇಲೆ ನಾನು ಹೇರುವುದಿಲ್ಲ."
ನಿಜ, ಸಮಾಜಕ್ಕೆ ಪೀಡಕವಲ್ಲದ, ಬದಲು ಸ್ವಂತ ವ್ಯಕ್ತಿತ್ವವನ್ನು ಉತ್ತಾರಿಸಬಲ್ಲ ವೈಯಕ್ತಿಕ ನಂಬಿಕೆಯ ಬಗ್ಗೆ ಗೌರವ ತಳೆಯುವುದು ಶ್ರೇಯಸ್ಕರವೆಂದು ಅವರಿಂದ ಕಲಿತೆ.

ಫೆಬ್ರುವರಿ ೧೯, ೧೯೭೨ರಂದು ಕನ್ನಡ ವಾಲ್ಮೀಕಿ ರಾಮಾಯಣದ ಅನಾವರಣ ಸಮಾರಂಭ ಜರಗಿತು. ಇದಾದ ಬಳಿಕ ಪದೇ ಪದೇ ಸಿಎನೆಸ್ "ನನ್ನ ಜೀವನದ ಉದ್ದೇಶವನ್ನು ಶ್ರೀರಾಮ ಸಫಲಗೊಳಿಸಿದ್ದಾನೆ. ಇನ್ನು ಬದುಕಿ ನಾನು ಸಾಧಿಸಬೇಕಾದದ್ದು ಏನೂ ಇಲ್ಲ. ಶ್ರೀರಾಮಪಾದವನ್ನು ಸುಲಭವಾಗಿ ಸೇರುವುದೊಂದೇ ಈಗ ನನಗೆ ಉಳಿದಿರುವ ಆಸೆ" ಎನ್ನುತ್ತಿದ್ದರು.

"ಇಲ್ಲ, ನಿಮಗಿನ್ನೂ ೭೧ ವರ್ಷ ವಯಸ್ಸು. ದೈಹಿಕ ಮತ್ತು ಮಾನಸಿಕ ಆರೋಗ್ಯ ಹಾಗೂ ಚಟುವಟಿಕೆಗಳು ಉತ್ಕೃಷ್ಟ ಮಟ್ಟದಲ್ಲಿವೆ. ಶಿಷ್ಯರಿಗೆ ಮಾರ್ಗದರ್ಶನ ಮಾಡುತ್ತ ಅವರ ಉತ್ಕರ್ಷವನ್ನು ನೋಡಿ ಹಿಗ್ಗುತ್ತ ನೀವು ನೂರ್ಕಾಲ ಮೀರಿ ಬದುಕಬೇಕು" ಎಂಬುದಾಗಿ ನಾವು ಯಾರಾದರೂ ಹೇಳಿದಾಗ ಅವರು ಮೂಕರಾಗಿಬಿಡುತ್ತಿದ್ದರು. ಮಾತನ್ನು ಮತ್ತೂ ನಾವು ಮುಂದುವರಿಸಿದರೆ "ಶ್ರೀರಾಮನ ಇಚ್ಛೆ" ಎಂದು ಅದನ್ನು ಮೊಟಕು ಮಾಡುತ್ತಿದ್ದರು.

ಪ್ರಾಸ್ಟೇಟ್ ಗ್ರಂಥಿಯ ವ್ಯಾಧಿ ಸಿಎನೆಸ್‌ರನ್ನು ಇಳಿವಯಸ್ಸಿನಲ್ಲಿ ಬಾಧಿಸತೊಡಗಿತ್ತು. ಯುಕ್ತ ವೇಳೆಯಲ್ಲಿ ಶಸ್ತ್ರಚಿಕಿತ್ಸೆ ಮಾಡಿಸುವುದೇ ಇದಕ್ಕೆ ಯೋಗ್ಯ ಮತ್ತು ಪರಿಣಾಮಕಾರೀ ಚಿಕಿತ್ಸೆ. ಆದರೆ ಸಿಎನೆಸ್ ಈ ವ್ಯಾಧಿಯ ವಿಚಾರ ತಮ್ಮ ಮಡದಿ ಮಕ್ಕಳೊಡನೆ ಕೂಡ ಪ್ರಸ್ತಾವಿಸಿರಲಿಲ್ಲ. ಕ್ರಮಬದ್ಧ ಆಹಾರ, ವ್ಯಾಯಾಮ ಮುಂತಾದ ವಿಧಿನಿಯಮಗಳಿಂದ ವ್ಯಾಧಿಯನ್ನು ಹಿಡಿತದಲ್ಲಿರಿಸಿಕೊಂಡಿದ್ದರು. ೧೯೭೨ ಮಳೆಗಾಲದಲ್ಲಿ ಇವರಿಗೆ ತೀವ್ರವಾದ ಶೀತಜ್ವರ ಬಂದು ದೇಹ ಸಾಮರ್ಥ್ಯ ಬಲುವಾಗಿ ಉಡುಗಿಹೋಯಿತು. ಅದೇ ವೇಳೆಗೆ ಪ್ರಾಸ್ಟೇಟ್ ಗ್ರಂಥಿಯ ವ್ಯಾಧಿ ಉಲ್ಬಣಿಸಿತು ಕೂಡ. ವೈದ್ಯರು ಬಂದರು. ಔಷಧಿ ಕೊಟ್ಟರು. ರೋಗ ಹತೋಟಿಗೆ ಬಂದು ದೇಹಾರೋಗ್ಯ ಸುಧಾರಿಸಿದ ಬಳಿಕ ಶಸ್ತ್ರ ಚಿಕಿತ್ಸೆ ಆಗಲೇಬೇಕು ಎಂದರು. ಸಿಎನೆಸ್ ಗುಣಮುಖರಾಗುತ್ತಿದ್ದಂತೆ ತೋರಿತು. ಮುಖದ ಮೇಲೆ ಪ್ರಸನ್ನ ಭಾವ ಮೂಡಿತು. ಮನೆ ಮಂದಿಯನ್ನೂ ಬಂಧುಬಳಗದವರನ್ನೂ ನೋಡಿ ಮಾತಾಡಿದರು, ಮೃದುಹಾಸ ಸೂಸಿದರು.

ಸೆಪ್ಟೆಂಬರ್ ೨೧ರಂದು (೧೯೭೨) ಮಧ್ಯಾಹ್ನದ ಊಟ ಮಾಡುತ್ತಿದ್ದಾಗ ತೀವ್ರವಾಗಿ ಹೃದಯಾಘಾತವಾಯಿತು. ನೇಸರು ಆಗಲೇ ಹುಲಿಗಾದ್ರಿ ಸೇವಾದ ಈ ಬೆಳಕನ್ನು ತನ್ನೆಡೆಗೆ ಸೆಳೆದು ಪಡುವಲಿಗೆ ಹೊರಳಿತ್ತು.

ತರಣಿಯ ಹೊಂಗದಿರೀ ಜಗವನು ಬಿಡಿಸುವ ಹೊತ್ತಿನೊಳು
ಮರಣದ ಮಾತೇಕೆಲೆ, ಮನವೆ ನುಡಿ ನುಡಿ ಬೇರೆಯದ
ಭುವನವನೆತ್ತಿದೆ ಗಿರಿಧರನೊಲು ಕರಣಗಳಂಚೊಳು ಜೀವ
ಭವಲೀಲಾಕೌತುಕಿ ವಿಶ್ವಂಭರನುತ್ಸವ ಸುಹೃದ.
ಸಾವೇ ಕೊನೆ ಮಾತಲ್ಲವೊ, ಮರುಳೆ ಜೀವವು ಅಲ್ಲ
ನೋವಲ್ಲವು ನಲವಲ್ಲವು ಬಂಧನ ಬಿಡುಗಡೆಯಲ್ಲ
ಒಂದಿಲ್ಲದೆ ಮತ್ತೊಂದಿಲ್ಲದ ಪರಿ ಹೊಂದಿರುವಿವಕೂ
ಹಿಂದಿರುವಾನಂದದ ಹನಿಯುರುಳಿತು ಮೂಡಲೊಳಿದೆಕೋ!
–ಪುತಿನ

ಕನ್ನಡ ಪಠ್ಯ ಪುಸ್ತಕ ಸಮಿತಿ
ಅಧ್ಯಾಯ ಅರವತ್ತ ಐದು

೧೯೬೮ರ ಫೆಬ್ರುವರಿ ತಿಂಗಳು. ವಿಶ್ವವಿದ್ಯಾಲಯದ ಕುಲಸಚಿವ ಪಿ. ಮಲ್ಲಿಕಾರ್ಜುನಪ್ಪನವರಿಂದ ನನಗೊಂದು ತುರ್ತು ಕರೆ. ಹೋಗಿ ಅವರೆದುರು ಕುಳಿತೆ. ನಾನು ಮಡಿಕೇರಿಯಲ್ಲಿದ್ದಾಗ ಇವರು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾಗಿ ನಮ್ಮ ಕಾಲೇಜಿಗೆ ಭೇಟಿ ನೀಡಿದ್ದರು. ಸಹಕಾರ ಸಂಘಕ್ಕೂ ಬಂದು ಅದರ ಕಾರ್ಯವೈಖರಿ ನೋಡಿ ತುಂಬ ಮೆಚ್ಚುಗೆ ವ್ಯಕ್ತಪಡಿಸಿ, "ಪ್ರತಿಯೊಂದು ಕಾಲೇಜಿನಲ್ಲಿಯೂ ಇಂಥ ಸಂಘವಿದ್ದರೆ ವಿದ್ಯಾರ್ಥಿಗಳಿಗೆಷ್ಟು ಅನುಕೂಲ" ಎಂದಿದ್ದರು. ಆಗ ನಮ್ಮಿಬ್ಬರ ನಡುವೆ ಗಾಢ ವಿಶ್ವಾಸ ಮೈದಳೆದಿತ್ತು. ಅದೇ ಹಿಂದಿನ ಸಲಿಗೆಯಿಂದ ಹೇಳಿದರು, "ಈಗ ವಿಶ್ವವಿದ್ಯಾಲಯ ನಿಮಗೊಂದು ಹೆಚ್ಚಿನ ಹೊಣೆ ವಹಿಸಬೇಕೆಂದು ತೀರ್ಮಾನಿಸಿದೆ. ದಯವಿಟ್ಟು ಒಪ್ಪಿಕೊಳ್ಳಿ."

ಆ ಹೊಸ ಕೆಲಸದ ವಿವರವಿತ್ತರು. ರಾಜ್ಯಭಾಷೆಗಳಲ್ಲಿ ಕಾಲೇಜ್ ಪಠ್ಯಪುಸ್ತಕಗಳನ್ನು ಪ್ರಕಟಿಸುವ ಸಲುವಾಗಿ ಕೇಂದ್ರ ಸರ್ಕಾರ ಪ್ರತಿಯೊಂದು ರಾಜ್ಯಕ್ಕೂ ರೂ. ೧ ಕೋಟಿ ಸಹಾಯಧನ ಮಂಜೂರಿಸಿದೆ. ಹೀಗೆ ತನಗೆ ದೊರೆತ ಬಳುವಳಿಯನ್ನು ಕರ್ನಾಟಕ ಸರ್ಕಾರ ಇಲ್ಲಿಯ ನಾಲ್ಕು (ಮೈಸೂರು, ಕರ್ನಾಟಕ, ಕೃಷಿ ಮತ್ತು ಬೆಂಗಳೂರು) ವಿಶ್ವವಿದ್ಯಾಲಯಗಳಿಗೆ ಸಮವಾಗಿ ವಿತರಿಸಿ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಪ್ರಕಟಣೆಯ ಕೆಲಸ ತೊಡಗಲು ಆದೇಶ ನೀಡಿದೆ. ಈ ಪ್ರಕಾರ ಬೆಂಗಳೂರು ವಿಶ್ವವಿದ್ಯಾಲಯ ಕನ್ನಡ ಪಠ್ಯಪುಸ್ತಕ ಸಮಿತಿಯನ್ನು ಕನ್ನಡ ಪ್ರಾಧ್ಯಾಪಕ ಮತ್ತು ಇಲಾಖಾಮುಖ್ಯಸ್ಥ ರಂ.ಶ್ರೀ. ಮುಗಳಿಯವರ ಅಧ್ಯಕ್ಷತೆಯಲ್ಲಿ ರಚಿಸಿದೆ. ಇದರ ಗೌರವ ಸಂಯೋಜಕನಾಗಿ ನಾನು ಸೇವೆ ಸಲ್ಲಿಸಬೇಕು. "ಈ ಕೆಲಸ ನಿಮ್ಮಿಂದ ಖಂಡಿತ ಕೈಗೂಡುತ್ತದೆ" ಎಂದರು. ನನಗೆ ಅದರ ತಲೆ ಬುಡ ಒಂದೂ ಅರ್ಥವಾಗಲಿಲ್ಲ. ಒಂದು ಸಂದೇಹ ಎತ್ತಿದೆ, "ಆದರೆ ನಾನು ಸರ್ಕಾರೀ ನೌಕರ, ವಿಶ್ವವಿದ್ಯಾಲಯದ ಅಲ್ಲ. ಈ ಹೆಚ್ಚಿನ ಹೊಣೆ ಹೊರಲು ಸರ್ಕಾರದ ಅನುಮತಿ ಬೇಕಲ್ಲವೇ?" "ಅದನ್ನು ನಾವೇ ನೇರವಾಗಿ ಪಡೆಯುತ್ತೇವೆ. ಅದಿರಲಿ, ಈ ಕೆಲಸಕ್ಕೆ ನಿಮಗೆಷ್ಟು ಸಂಭಾವನೆ ದೊರೆಯಬೇಕೆಂದು ಬಯಸುತ್ತೀರಿ?"

"ಅದಕ್ಕೆ ಕೊನೆಯ ಆದ್ಯತೆ. ಮೊದಲು ಇದು ನನ್ನಿಂದ ಸಾಧ್ಯವಾದೀತೇ ಎಂಬುದನ್ನು ಉಭಯರೂ ಪರಿಶೀಲಿಸೋಣ."

"ನಿಮ್ಮಿಂದ ಆಗಿಯೇ ಆಗುತ್ತದೆ. ಸದ್ಯಕ್ಕೆ ನಿಮ್ಮ ಮಾಸಿಕ ಸಂಭಾವನೆ ರೂ. ೩೦೦ ಎಂದು ನಿಗದಿಸಿದ್ದೇವೆ."

"ತುಂಬ ಜಾಸ್ತಿಯಾಯಿತು!"

"ವ್ಯವಹಾರವರಿಯದ ಬೋಳೆ ಮಂದಿಯಯ್ಯ ನೀವು" ಎನ್ನುತ್ತ ಅವರು ಪೂರ್ವ ಸಿದ್ಧ ಆದೇಶವನ್ನು ಕೈಗಿತ್ತು, "ಹೋಗಿ ಡಾ। ಮುಗಳಿಯವರನ್ನು ನೋಡಿ" ಎಂದರು.

ನನ್ನ ಸಹಾಯಕ್ಕೆ ವಿಶ್ವವಿದ್ಯಾಲಯ ಒಬ್ಬ ಯುವ ಗುಮಾಸ್ತನನ್ನು ನೇಮಿಸಿತ್ತು. ಆ ಬೇಸಗೆ ರಜೆ ಪೂರ್ತಿ ವ್ಯವಸ್ಥಿತವಾಗಿ ಭದ್ರ ಬುನಾದಿ ಹಾಕಿದೆವು. ಸಮರ್ಥ ವಿದ್ವಾಂಸರನ್ನು ಸಂಪರ್ಕಿಸಿ ಪುಸ್ತಕ ರಚಿಸಲು ಆದೇಶವಿತ್ತು ಯಥಾಕಾಲದಲ್ಲಿ ಹಸ್ತಪ್ರತಿಗಳನ್ನು ಸಂಗ್ರಹಿಸಿದೆವು. ಇವುಗಳ ಸಂಪಾದನೆ ಮತ್ತು ಪರಿಷ್ಕರಣವನ್ನು ತಜ್ಞರಿಂದ ಮಾಡಿಸುತ್ತಿದ್ದಾಗಲೇ ಮುದ್ರಣ ಕುರಿತು ಬೆಂಗಳೂರಿನ ಪ್ರಸಿದ್ಧ ಮುದ್ರಣಾಲಯಗಳಿಂದ ದರಪಟ್ಟಿಗಳನ್ನು ತರಿಸಿ ಶಿಷ್ಟೀಕರಿಸಿದ್ದೂ ಆಯಿತು. ಮುದ್ರಿತ ಪುಸ್ತಕಗಳು ನಮ್ಮ ಗೋದಾಮು ಸೇರಿದ ಕ್ಷಣವೇ ಮುದ್ರಣಾಲಯಕ್ಕೆ ನಾವೇ ನೇರವಾಗಿ ಬಿಲ್ ಹಣವನ್ನು ಚೆಕ್ ಮೂಲಕ ಪಾವತಿಸತಕ್ಕದ್ದೆಂಬುದು ನನ್ನ ಸ್ಪಷ್ಟ ನಿಲವು. ಇಂಥ ಸೂಕ್ಷ್ಮ ಕಾರ್ಯದಲ್ಲಿ ಕೆಂಪುದಟ್ಟಿ ನುಸುಳಿ ಭ್ರಷ್ಟಾಚಾರಕ್ಕೆ ಎಡೆಮಾಡಿಕೊಡದಿರಬೇಕಾದರೆ ನಮ್ಮ ಸಮಿತಿಯ ಬ್ಯಾಂಕ್ ಲೆಕ್ಕಕ್ಕೆ ವಿಶ್ವವಿದ್ಯಾಲಯ ಸರ್ಕಾರದ ಅನುದಾನ ಮೊತ್ತವನ್ನು ವರ್ಗಾಯಿಸಬೇಕು, ಇದರ ದೈನಂದಿನ ವ್ಯವಹಾರದ ಅಧಿಕಾರವನ್ನು ನಮ್ಮ ಅಧ್ಯಕ್ಷರಿಗೆ ಕೊಡಬೇಕು ಎಂದು ಮುಂತಾಗಿ ಕುಲಸಚಿವರಿಗೆ ಮನವಿ ಸಲ್ಲಿಸಿ ಎಲ್ಲವನ್ನೂ ಪಡೆದೆವು. "Ask, thou shalt get – ಕೇಳು, ನಿನಗೆ ದೊರೆಯುತ್ತದೆ" ಎಂಬಂಥ ಮನಃಸ್ಥಿತಿ.

ಅದೇ ಜುಲೈ ತಿಂಗಳಿನಲ್ಲಿ ನಾವು ಒಮ್ಮೆಗೇ ನಾಲ್ಕು ಪಠ್ಯಪುಸ್ತಕಗಳನ್ನು, ಅದೂ ವಿಜ್ಞಾನ ವಿಷಯಗಳಲ್ಲಿ, ಸಾರ್ವಜನಿಕವಾಗಿ ಅನಾವರಣಗೊಳಿಸಿದಾಗ ವಿಶ್ವವಿದ್ಯಾಲಯದ ಖ್ಯಾತಿ ಭಾರತಾದ್ಯಂತ ಅನುರಣಿಸಿತೆಂದು ವೃತ್ತಪತ್ರಿಕೆಗಳಿಂದ ತಿಳಿದುಬಂತು. ನಮ್ಮದು ಅಖಿಲ ಭಾರತದಲ್ಲಿ ಮೊದಲ ಸ್ಥಾನ ಗಳಿಸಿತ್ತು! ಮಲ್ಲಿಕಾರ್ಜುನಪ್ಪನವರು ವೈಯಕ್ತಿಕವಾಗಿ ನನ್ನನ್ನು ಅಭಿನಂದಿಸಿದಾಗ ನಾನೆಂದೆ, “ವಿಶ್ವವಿದ್ಯಾಲಯದ ಪ್ರೋತ್ಸಾಹ, ಅಧ್ಯಕ್ಷರ ಮಾರ್ಗದರ್ಶನ, ಸಮಿತಿ ಸದಸ್ಯರ ಸಹಕಾರ, ಲೇಖಕರ ಕ್ರಿಯಾಶೀಲ ಸಹಭಾಗಿತ್ವ, ಮುದ್ರಣಾಲಯಗಳ ನಿಷ್ಠೆ ಎಲ್ಲ ಸೇರಿ ಇದು ಸಾಧ್ಯವಾಯಿತಷ್ಟೆ. ಅದಿರಲಿ, ಇತರ ಹಳೆ ಹುಲಿ ವಿಶ್ವವಿದ್ಯಾಲಯಗಳು ಈ ನಿಟ್ಟಿನಲ್ಲೇಕೆ ಇನ್ನೂ ಕಾರ್ಯಪ್ರವೃತ್ತವಾಗಿಲ್ಲ?” ಅವರ ಉತ್ತರ, “ಅಲ್ಲೊಬ್ಬ ನಾರಾಯಣರಾವ್ ಇಲ್ಲ!”

ಇಂಥ ಆತ್ಮಪ್ರತಿಷ್ಠಾಪೋಷಕ ಪ್ರಶಂಸೆ ಅನಿರೀಕ್ಷಿತವಾಗಿ ದೊರೆತಾಗಲೆಲ್ಲ ನನ್ನ ಪ್ರತಿಕ್ರಿಯೆ ಒಂದೇ: ನಮ್ಮ ದೇಶ ಏಕೆ ಹೀಗಾಗಿದೆ? “ಎನಗಿಂತ ಕಿರಿಯರಿಲ್ಲ” ಎಂಬುದು ನನ್ನ ನಂಬಿಕೆ ಮತ್ತು ಆ ಪ್ರಕಾರ ವರ್ತನೆ. ನಾನೇನೂ ಭಾರೀ ಸಾಹಸ ಮಾಡಿಲ್ಲ. ಇಂಥ ಕೆಲಸಗಳಲ್ಲಿ ಅವಶ್ಯವಾದ ಧಾತುಗಳು ಐದು: ನೈತಿಕತೆ, ಮಗ್ನತೆ, ಉತ್ಕೃಷ್ಟತೆ, ಪಾರದರ್ಶಕತೆ ಮತ್ತು ಉತ್ತರದಾಯಿತ್ವ (ethics, involvement, excellence, transparency and accountability). ವಿವಿಧ ರಂಗಗಳಲ್ಲಿಯ ನನ್ನ ಸುದೀರ್ಘ ಸೇವಾನುಭವವನ್ನು ಮುಂದಿನ ಕಗ್ಗದಲ್ಲಿ ಗುರುತಿಸಬಹುದು:

ಸಂಕಲ್ಪದೃಢನಾಗಿ ಮೊದಲ ಹೆಜ್ಜೆಯನಿಟ್ಟು
ಸಂಕಷ್ಟಗಳ ಲೆಕ್ಕಿಸದೆ ಸದಾ ನಡೆಯುತಿರು
ಶಂಕೆತೊರೆ ನಚಿಕೇತನೋಲ್ ಸತ್ಯದರ್ಶನಕೆ
ಕೈಂಕರ್ಯವೊಪ್ಪಿಸೋ ಜಯಸಿದ್ಧ ಅತ್ರಿಸೂನು

ನಮ್ಮ ಪ್ರಕಟಣೆಗಳ ವಿತರಣೆ ಮತ್ತು ಮಾರಾಟ, ಜೊತೆಗೆ ವಿದ್ಯಾರ್ಥಿಗಳಿಗೆ ಅವರ ಕಾಲೇಜ್ ಆವಶ್ಯಕತೆಗಳ ಪೂರೈಕೆ ಮಾಡಲು ವಿಶ್ವವಿದ್ಯಾಲಯ ಅದೇ ವೇಳೆಗೆ ಸೆಂಟ್ರಲ್ ಕಾಲೇಜ್ ಆವರಣದಲ್ಲಿ ಸಹಕಾರ ಸಂಘವನ್ನು ಸ್ಥಾಪಿಸಿತು. ಆಡಳಿತ ಸಮಿತಿಗೆ ನನ್ನನ್ನೊಬ್ಬ ಗೌರವ ಸದಸ್ಯನಾಗಿ ಕುಲಸಚಿವ ಮಲ್ಲಿಕಾರ್ಜುನಪ್ಪ ನಾಮಕರಣ ಮಾಡಿದ್ದರು. ಮೂಲ ಬಂಡವಾಳವಾಗಿ ವಿಶ್ವವಿದ್ಯಾಲಯ ಬಲುದೊಡ್ಡ ಮೊತ್ತವನ್ನು ಹೂಡಿತ್ತು. ಸಂಘದ ಪೂರ್ಣಕಾಲೀನ ಕಾರ್ಯದರ್ಶಿಯಾಗಿ ಸರ್ಕಾರದ ಸಹಕಾರ ಇಲಾಖೆಯಿಂದ ಒಬ್ಬ ಅನುಭವೀ ಅಸಿಸ್ಟೆಂಟ್ ರಿಜಿಸ್ಟ್ರಾರ್ ಮಟ್ಟದ ಅಧಿಕಾರಿ ನಿಯೋಜಿತನಾಗಿದ್ದ. ಈತ ಸಂಘಕ್ಕೆ ರಖಂ ದರದಲ್ಲಿ ಮಾಲು ಖರೀದಿಸಲು ದೊಡ್ಡದೊಂದು ಯಾದಿ ಸಿದ್ಧಪಡಿಸಿ ಸಮಿತಿಯ ಮುಂದಿಟ್ಟ. ನನ್ನ ಪೂರ್ವಾನುಭವದ ಕಣ್ಣಿಗೆ ಇದರಲ್ಲಿ ಸ್ಪಷ್ಟ ಗೋಲ್‌ಮಾಲ್ ಇದ್ದುದು ಎದ್ದು ಕಾಣುತ್ತಿತ್ತು. ಈ ಸಂಗತಿಯನ್ನು ಚರ್ಚಿಸಬೇಕೆಂದು ನಾನು ಹಠ ಹಿಡಿದಾಗ ಆತ ಉಲ್ಟಾ ಮಾತಾಡಿ ನನ್ನ ಅನುಭವವನ್ನೇ ಪ್ರಶ್ನಿಸಿದ. “ಬನ್ನಿ, ನಾವೆಲ್ಲರೂ ಈಗಲೇ ಅವೆನ್ಯೂ ರಸ್ತೆಯಲ್ಲಿರುವ ಯಾವುದೇ ಪುಸ್ತಕ ಮಳಿಗೆಗೆ ಹೋಗಿ ಗುಣ ಮಟ್ಟ, ರಖಂ ದರ ಮತ್ತು ಪೂರೈಕೆ ಶರತ್ತು ಇವನ್ನು ಪ್ರತ್ಯಕ್ಷ ಪರಾಂಬರಿಸೋಣ” ಎಂದೆದ್ದೆ. ಸಮಿತಿಯ ಇತರ ಸದಸ್ಯರಿಗೆ ಯಾರಿಗೂ ಈ ಕ್ಷೇತ್ರದಲ್ಲಿ ಏನೂ ಅರಿವು ಇರಲಿಲ್ಲ. ಪರಿಸ್ಥಿತಿ ಬಿಗಡಾಯಿಸಿದ್ದನ್ನು ನೋಡಿ ಅಧ್ಯಕ್ಷರು ಸಭೆಯನ್ನು ಮರುದಿನಕ್ಕೆ ಮುಂದೂಡಿದರು.

ಆ ರಾತ್ರಿ ಆತ ನಮ್ಮ ಮನೆಗೇ ಬರಬೇಕೇ!? ನನಗೆ ತುಂಬ ಮುಜಗರವಾಯಿತು. ಮೊದಲು ನನ್ನನ್ನು ಬಲುವಾಗಿ ಹೊಗಳಿದ. ಅಕೃತ್ರಿಮವಲ್ಲದ ಇಂಥ ಎಲ್ಲ ಸಂದರ್ಭಗಳಲ್ಲಿ ನನ್ನ ಮನದೊಳಗೆ ಮಿಡಿಯುವ ಸಾಲುಗಳಿವು:

ಬಾನೊಣವೆ ಬಾನೊಣವೆ ಬಾನನ್ನ ಮನೆಗೆ
ಬಾನೊಳಗೆ ಹಾರಿ ಬಲುದಣಿವಾಯ್ತು ನಿನಗೆ.
ಆ ಮಾತಿಗಾ ನೊಣವು “ಎಲೆ ಜೇಡ ಜೇಡ!
ನಿನ್ನ ಮನೆ ಸುಖವೆನಗೆ ಹಾ ಬೇಡ ಬೇಡ!”

ಆದರೆ ಜೇಡ ಆ ಮೊದ್ದು ನೊಣವನ್ನು “ಹೊಗಳಿ ಹೊಗಳಿ ಹೊನ್ನ ಶೂಲಕ್ಕೆ” ಏರಿಸಿಯೇಬಿಟ್ಟಿತು, ನೊಣ ಜೇಡನ ಬಲೆಗೆ ಬಿದ್ದೇ ಬಿತ್ತು. ಪಂಜೆಯವರ ಈ ಪದ್ಯವನ್ನು ಪ್ರಾಥಮಿಕ ತರಗತಿಗಳಲ್ಲಿ ಹಾಡಿ, ಕುಣಿದು, ನಾಟಕವಾಡಿ ಖುಷಿ ಪಟ್ಟದ್ದಿತ್ತು.

ಕಾರ್ಯದರ್ಶಿಯ ದೈನ್ಯಯುಕ್ತ ಯಾಚನೆಯ ಸಾರವಿಷ್ಟು: ಇಂಥ ಪ್ರತಿಯೊಂದು ಖರೀದಿಯಲ್ಲಿಯೂ ಅಂತೆಯೇ ಬಿಲ್ ಪಾವತಿಸುವುದರಲ್ಲಿಯೂ ೧೦% ಸೇವಾಶುಲ್ಕ ಪಡೆಯುವುದು ಮಾಮೂಲು. ಇದರಲ್ಲಿ ಸಮಿತಿಯ ಸದಸ್ಯರೆಲ್ಲರಿಗೂ ಪಾಲು ದೊರೆಯಲಿದೆ. "ನಿಮಗೆ ಬೇಕಾದರೆ ಸ್ವಲ್ಪ ಹೆಚ್ಚೇ ಪಾಲನ್ನು ಕೊಡಬಹುದು. ಈ ವಿವರಗಳನ್ನು ನನಗೆ ಬಿಡಿ, ಸರ್!" ಮನೆಗೆ ಬಂದವನನ್ನು ಅಪಮಾನಗೊಳಿಸುವುದು ಶಿಷ್ಟವರ್ತನೆಯಲ್ಲ ಎಂಬ ಒಂದೇ ಕಾರಣಕ್ಕಾಗಿ ನಯವಾಗಿಯೇ ಹೇಳಿದೆ, "ಹೇಗೂ ನಾಳೆ ಸಭೆ ಸೇರುವೆವಷ್ಟೆ. ಆಗ ಈ ಎಲ್ಲ ಸೂಕ್ಷ್ಮಗಳನ್ನು ಕೂಲಂಕಷವಾಗಿ ವಿಶ್ಲೇಷಿಸಿ ಒಂದು ಒಪ್ಪಂದಕ್ಕೆ ಬರೋಣ." ಆತ ಪ್ರಸನ್ನವದನನಾಗಿ ಹೋದ?

ಮರುದಿನದ ಸಭೆ. ಇವೆಲ್ಲ ಸಂಗತಿಗಳನ್ನೂ ಬರಹಕ್ಕೆ ಇಳಿಸಿ ಆತನ ಸಮಕ್ಷಮವೇ ಮಂಡಿಸುತ್ತ ಹೇಳಿದೆ, "ಇಂಥ ಭ್ರಷ್ಟ ಕಾರ್ಯದರ್ಶಿ ನಮಗೆ ಖಂಡಿತ ಬೇಡ. ಇವರು ಇಲಾಖೆಗೇ ಮರಳಲಿ." ಸಮಿತಿಯ ಸದಸ್ಯರೆಲ್ಲರೂ ಒಕ್ಕೊರಲಿನಿಂದ ಅನುಮೋದಿಸಿದರು. ನಿಜ,

ಆದರ್ಶ ಮಾರ್ಗವನು ಮಲ್ಲಿಗೆಯ ಪಕಳೆಗಳ–
ನಾಧರಿಸಿ ರಚಿಸಿಲ್ಲ. ಕಂಟಕವನೆದುರಿಸಿತ
ಸಾಧನೆಯ ನಿಸ್ವಾರ್ಥ ನೀತಿಯುತ ಭಾವದಿಂ
ಗೈದವಂ ದೀಪ್ತಿಸುವ ಹಾದಿಯದು ಅತ್ರಿಸೂನು

ಬದಲಿಗೆ ಇನ್ನೊಬ್ಬ ಬಂದ. ಒಟ್ಟು ವ್ಯವಹಾರ ನನ್ನಲ್ಲಿ ಇಡೀ ವ್ಯವಸ್ಥೆಯ ಬಗೆಗೇ ಜುಗುಪ್ಸೆ ಮೂಡಿತು. ರಾಜಿನಾಮೆ ಸಲ್ಲಿಸಿದೆ. ಸ್ವೀಕೃತವಾಗಲಿಲ್ಲ. ಹೀಗೆ ೧೯೬೮–೬೯ರ ಶೈಕ್ಷಣಿಕ ವರ್ಷದಲ್ಲಿ ನನ್ನ ಸೇವೆ ಏಕಕಾಲಿಕವಾಗಿ ಪಾಠಪ್ರವಚನ, ವಿಶೇಷ ತರಗತಿಗಳು, ಪಠ್ಯ ಪುಸ್ತಕ ಸಮಿತಿ, ಎನ್‌ಸಿಸಿ, ಸಹಕಾರ ಸಂಘ, ಸ್ವಂತ ಬರೆಹ ಮುಂತಾದ ಕ್ಷೇತ್ರಗಳಲ್ಲಿ ಬಿರುಸಿನಿಂದ ಸಾಗಿದುವು.

ಆ ವರ್ಷ ನಮ್ಮ ಕಾಲೇಜಿನ ಪರೀಕ್ಷಾಫಲಿತಾಂಶಗಳು, ಕ್ರೀಡಾಸಾಧನೆಗಳು ಮತ್ತು ಎನ್‌ಸಿಸಿ ವಿಕ್ರಮಗಳು ನಗರದ ರ‍್ಯಾಂಕ್ ಕಾಲೇಜುಗಳ ಹಿಂದಿನ ಎಲ್ಲ ದಾಖಲೆಗಳನ್ನೂ ಮುರಿದಿದ್ದುವು. ಎಸ್‌ಎಸ್‌ಎಲ್‌ಸಿಯಲ್ಲಿ ಶೇಕಡಾ ೮೦ಕ್ಕಿಂತ ಹೆಚ್ಚು ಅಂಕಗಳಿಸಿದವರನ್ನು ಆಯ್ದು ಮತ್ತಷ್ಟು ಟ್ಯೂಷನ್ ಗುಳಿಗೆ ನುಂಗಿಸಿ ಪಿಯುಸಿಯಲ್ಲಿ ಪ್ರಥಮ ದರ್ಜೆ ಗಳಿಸುವುದೇನೂ ಮಹಾಸಾಧನೆಯಲ್ಲ. ಇಂಥ ರ‍್ಯಾಂಕ್‌ವಿಜೇತರ (ಹೌದು ಜ್ಞಾನದೊಡನೆ ಹೋರಾಡಿ ಸ್ಥಾನ ಗಿಟ್ಟಿಸಿರುವವರಿವರು!) ಎದುರು 'ದೊಡ್ಡಿ ಕಾಲೇಜ್'ನ ನಮ್ಮ 'ದಡ್ಡ' ವಿದ್ಯಾರ್ಥಿಗಳು ಸೆಣಸಿ ಗೆಲ್ಲುವುದೇನು ಸಾಮಾನ್ಯ ಸಾಧನೆಯೇ? ಮಹಾಭಾರತ ಯುದ್ಧದ ವೇಳೆ ಕರ್ಣನ ರಥವನ್ನು ಅರ್ಜುನ ೧೦೦ ಗಾವುದ ಹಿಂದಕ್ಕೆ ರಟ್ಟಿಸಿದಾಗ ಪಾರ್ಥಸಾರಥಿ ತೆಪ್ಪಗಿದ್ದ; ಅದೇ ಮರುಕ್ಷಣ ಪಾರ್ಥನ ರಥವನ್ನು ಕರ್ಣ ಕೇವಲ ೧ ಗಾವುದ ಹಿಂದಕ್ಕೆ ಸರಿಸಿದಾಗ "ಭಲೇ ಕರ್ಣ" ಎಂದು ಕೃಷ್ಣ ಉದ್ಗರಿಸಲಿಲ್ಲವೇ?

ಭಾರತೀಯ ವಿಜ್ಞಾನ ಸಂಸ್ಥೆ (Indian Institute of Science) ಆ ವರ್ಷ ನಡೆಸಿದ ಗಣಿತ ಒಲಿಂಪಿಯಾಡ್ ಪರೀಕ್ಷೆಗೆ ನಮ್ಮ ಆಯ್ದ ವಿದ್ಯಾರ್ಥಿಗಳನ್ನು ಸಾಕಷ್ಟು ಪೂರ್ವ ಸಿದ್ಧತೆ ಸಹಿತ ಕಳಿಸಿದೆವು. ಇವರ ಪೈಕಿ ಒಬ್ಬ ಇಡೀ ರಾಜ್ಯದಲ್ಲೇ ಪ್ರಥಮ ಸ್ಥಾನ ಗಳಿಸಿದ! ನೀತಿ ಏನು? ಹುಟ್ಟಿನಿಂದ ಎಲ್ಲರೂ ಸಮಾನ ಪ್ರತಿಭಾನ್ವಿತರೇ. ಅವರಿಗೆ ಯುಕ್ತ ಸಮರ್ಥ ಶಿಕ್ಷಣವಿತ್ತಾಗ "ಪಂಗುಂ ಲಂಘಯತೇ ಗಿರಿಂ."

ನನ್ನ ಬಗ್ಗೆ ಅಪಾರ ವಿಶ್ವಾಸ ತಳೆದಿದ್ದ ಕುಲಪತಿ ಗೋಕಾಕ್, ಕುಲಸಚಿವ ಮಲ್ಲಿಕಾರ್ಜುನಪ್ಪ, ಗಣಿತ ವಿಭಾಗಮುಖ್ಯಸ್ಥ ನರೊನ್ನ ಮತ್ತು ಗುರುಸ್ಥಾನದಲ್ಲಿದ್ದ ಸಿಎನ್‌ಎಸ್ ಎಲ್ಲರ ಅಭಿಪ್ರಾಯವೂ ಒಂದೇ: ಸರ್ಕಾರೀ ಸೇವೆಯಲ್ಲಿರುವ ನನ್ನನ್ನು ಹೇಗಾದರೂ ಮಾಡಿ ವಿಶ್ವವಿದ್ಯಾಲಯದ ಸೇವೆಗೆ ತರಬೇಕು. ಯೋಗಾಯೋಗ ಅದೇ ವೇಳೆ ವಿಶ್ವವಿದ್ಯಾಲಯ ಹೊಸ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಿತು. ಗಣಿತ ವಿಭಾಗದಲ್ಲಿ ಉಪನ್ಯಾಸಕ ಹುದ್ದೆ ಖಾಲಿ ಇತ್ತು. ಅಲ್ಲಿಯ ವೇತನ ಶ್ರೇಣಿ ಸರ್ಕಾರದ್ದಕ್ಕಿಂತ ಎಷ್ಟೋ ಹೆಚ್ಚು. ಇನ್ನು ವರ್ಗಾವಣೆಯಂತೂ ಇಲ್ಲವೇ ಇಲ್ಲ. ಅದಕ್ಕೆ ಬೇಕಾಗುವ ಅರ್ಹತೆ ನನಗಿಲ್ಲವೆಂಬ ಅರಿವು ನನಗಿತ್ತು: ೪೨ರ ಈ ಮಧ್ಯವಯಸ್ಸಿನ ತನಕ ಸ್ನಾತಕ (ಬಿಎ, ಬಿಎಸ್‌ಸಿ) ಕಾಲೇಜುಗಳಲ್ಲೇ ಅನುಭವ ಗಳಿಸಿರುವ ಮತ್ತು ಗಣಿತದಲ್ಲಿ ಯಾವ ಸಂಶೋಧನೆ ಅಥವಾ ವಿಶೇಷೀಕರಣ ಮಾಡದಿರುವ ನಾನು ಈಗ ಹಠಾತ್ತನೆ ಸ್ನಾತಕೋತ್ತರ ತರಗತಿಗಳಿಗೆ ಬೋಧಿಸಲು ನನ್ನಲ್ಲಿ ಸಾಕಷ್ಟು ಸರಕು ಇಲ್ಲವೆಂದು ಯೋಚಿಸಿದೆ. ಹೀಗಾಗಿ ಅರ್ಜಿ ಹಾಕಲಿಲ್ಲ. ಆದರೆ ಮೇಲೆ ಹೇಳಿದ ನನ್ನ ನಾಲ್ವರು ಹಿತೈಷಿಗಳೂ ಇವೆಲ್ಲ ಆತಂಕಗಳನ್ನೂ ಕೇವಲ ಊಹಾಪೋಹಗಳೆಂದು ತಳ್ಳಿಹಾಕಿ ನನ್ನಿಂದ ಅರ್ಜಿ ಹಾಕಿಸಿಯೇ ಬಿಟ್ಟರು! ನರೊನ್ನ ಮತ್ತು ಸಿಎನ್‌ಎಸ್ ಇಬ್ಬರೂ

“ನಿಮ್ಮ ಶೈಕ್ಷಣಿಕ ಕೊರತೆ ಬಗ್ಗೆ ಏನೂ ಯೋಚನೆ ಮಾಡಬೇಡಿ. ನಾವಿದ್ದೇವೆ ಅಂಥ ವ್ಯಾವಹಾರಿಕ ಸಮಸ್ಯೆ ಏನಾದರೂ ಇದ್ದರೆ ಪರಿಹರಿಸಲು” ಎಂದು ಆಶ್ವಾಸಿಸಿದರು. ಹೀಗೆ ಒಂದು ದುರ್ಬಲ ಕ್ಷಣದಲ್ಲಿ ಗುಂಡಿಗೆ ಬಿದ್ದೆ. ಮುಂದೇನಾಯಿತು? (ಅಧ್ಯಾಯ ೬೮ ನೋಡಿ)

ನಾವು ಮಾಡಿಸದಿದ್ದ ಒಂದು ಮದುವೆ
ಅಧ್ಯಾಯ ಅರವತ್ತ ಆರು

ನಾನು ಬೆಂಗಳೂರಿನಲ್ಲಿದ್ದಾಗ ಸಂಭವಿಸಿದ ಹೃದಯವಿದ್ರಾವಕ ಘಟನೆಯಿದು. ಇಲ್ಲಿಯ ಪಾತ್ರಧಾರಿಗಳ ಹೆಸರುಗಳನ್ನು ಉದ್ದೇಶಪೂರ್ವಕವಾಗಿ ಬದಲಾಯಿಸಿದ್ದೇನೆ.

ಅದಾಗ ತಾನೇ ನಾನು ತರಗತಿಪಾಠ ಮುಗಿಸಿ ಕೊಠಡಿಗೆ ಮರಳಿದ್ದೆ, ಲಭ್ಯವಿದ್ದ ಕೇವಲ ಅರ್ಧ ತಾಸಿನಲ್ಲಿ ಊಟಮಾಡಿ ಮುಂದಿನ ತರಗತಿಗೆ ಧಾವಿಸಬೇಕಿತ್ತು. ಅಷ್ಟರಲ್ಲೇ “Good morning sir! Do you recognize me?” ಎಂಬ ಅಪರಿಚಿತ ಗಂಡುಧ್ವನಿ ನನ್ನನ್ನು ಸ್ವಾಗತಿಸಿತು.
“ಓಹೋಹೋ! ಏನು ಮೋಹನ? ಯಾವಾಗ ಬಂದೆ? ಎಲ್ಲಿಂದ? ಎಷ್ಟು ವರ್ಷವಾಯ್ತು ನಿನ್ನನ್ನು ನೋಡದೇ! ಚೆನ್ನಾಗಿರುವೆಯಾ?”
“Sorry sir, I do not understand that language.”
ವಿಚಿತ್ರ ಎನ್ನಿಸಿತು. ಏಕೆಂದರೆ ಮೋಹನ ಕೊಡಗಿನ ಹುಡುಗ. ೧೯೫೫ರ ಸುಮಾರಿಗೆ ಮಡಿಕೇರಿಯಲ್ಲಿ ನನ್ನ ಒಬ್ಬ ಆಪ್ತ ವಿದ್ಯಾರ್ಥಿ ಮತ್ತು ಸುಟಿ ಎನ್‌ಸಿಸಿ ಕ್ಯಾಡೆಟ್ ಆಗಿದ್ದ. ನಮ್ಮಲ್ಲಿ ಬಿಎಸ್‌ಸಿಯನ್ನು ಉನ್ನತ ಶ್ರೇಣಿಯಲ್ಲಿ ಗಳಿಸಿ, ನನ್ನ ಸಲಹೆ ಮೇರೆಗೆ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡಕ್ಕೆ ಹೋಗಿ, ಅಲ್ಲಿ ಸಂಖ್ಯಾಕಲನ ವಿಜ್ಞಾನ ಪದವಿ ಗಳಿಸಿ, ಸಂಶೋಧನೆ ಮಾಡುವ ಸಲುವಾಗಿ ಆಸ್ಟ್ರೇಲಿಯಾಕ್ಕೆ ತೆರಳಿದ್ದ ಪ್ರತಿಭಾವಂತ. ಇಂಥ ಅಪ್ಪಟ ಕನ್ನಡ ಶಿಶುವಿಗೆ ಈಗ ಮಾತೃಭಾಷೆಯೇ ಮರೆತು ಹೋಗಿದೆ!? ಇವನಿಗೇನಾಗಿದೆ? ಹುಡುಗ ಈಗ ಧಡೂತಿಯಾಗಿ ಉಬ್ಬಿದ್ದಾನೆ, ಸ್ವರ ಗಡಸಾಗಿದೆ.
“ನೋಡಪ್ಪಾ ಮೋಹನ! ನಾನೀಗ ತುರ್ತು ಒಂದು ತುತ್ತು ನುಂಗಿ ಮುಂದಿನ ಪಾಠಕ್ಕೆ ಓಡಬೇಕಾಗಿದೆ. ೩–೩೦ ಗಂಟೆಗೆ ಮತ್ತೆ ಇಲ್ಲಿಗೇ ಮರಳುತ್ತೇನೆ. ಆಗ ವಿವರವಾಗಿ ಮಾತಾಡೋಣ” ಎಂದು ಮುಂದಕ್ಕೆ ನಡೆದೆ.
ಅಲ್ಲೇ ಇದ್ದ ನನ್ನ ಯುವ ಸಹೋದ್ಯೋಗಿ ಜೊತೆ ಮೋಹನ ಉದ್ಗರಿಸಿದ್ದು ಕಿವಿಗೆ ಬಿತ್ತು, “That’s like him. My great Guru GTN – sir is particular about time and duty.”

ಕೊಠಡಿಗೆ ಮರಳಿ ಮೋಹನನ ಜೊತೆ ವಿರಾಮವಾಗಿ ಸಂಭಾಷಿಸಿದಾಗ ತಿಳಿದದ್ದು ಇಷ್ಟು: ಅವನು ಆಸ್ಟ್ರೇಲಿಯಾದಿಂದ ಅಮೆರಿಕಕ್ಕೆ ಇನ್ನೂ ಉನ್ನತಾಧ್ಯಯನ ಮಾಡಲೆಂದು ತೆರಳಿದ್ದ. ಈ ಎರಡೂ ರಾಷ್ಟ್ರಗಳಲ್ಲಿಯ ಗಂಡು–ಹೆಣ್ಣು ಮುಕ್ತ ಜೀವನಕ್ಕೆ ಮರುಳಾಗಿ ಒಂದು ರಾತ್ರಿ ಪ್ರೇಯಸಿ ಜೊತೆ ಕಾರಿನಲ್ಲಿ ಪಯಣಿಸುತ್ತಿದ್ದಾಗ ಅಪಘಾತಕ್ಕೆ ತುತ್ತಾಗಿದ್ದ. ಸುದೀರ್ಘ ಶುಶ್ರೂಷಾನಂತರ ದೇಹ ಚೇತರಿಸಿಕೊಂಡರೂ ಹಿಂದಿನ ನಿಶಿತ ಮತಿ ಮಾತ್ರ ಮರಳಿರಲಿಲ್ಲ. ಹೀಗಾಗಿ ಇವನಿಗೆ ಮನೋವೈಜ್ಞಾನಿಕ ಚಿಕಿತ್ಸೆ ನೀಡಲಾಯಿತು. ಇನ್ನು ಊರಿಗೆ ಹಿಂತಿರುಗಿ ಮದುವೆಯಾಗಿ ಬಾ ಎಂದು ದೀರ್ಘ ರಜೆಯಿತ್ತು ಕಳಿಸಿದ್ದಾರೆ. “ಈಗ ನಾನು ಪೂರ್ಣ ಮೊದಲಿನ ಮೋಹನನೇ ಆಗಿದ್ದೇನೆ. ನೋಡಿ ಈ ಕಿರುಹೊತ್ತಗೆಯಲ್ಲಿ ನನ್ನ ಆತ್ಮಕಥನವನ್ನು ನಿರೂಪಿಸಿದ್ದೇನೆ” ಎನ್ನುತ್ತ Honam goes to the US (ತನ್ನ ಹೆಸರಿನ ಅಕ್ಷರಗಳನ್ನೇ ಮರುಬಳಸಿ ಈ ವಿನೂತನ ನಾಮಧೇಯವನ್ನು ಹೊಸೆದಿದ್ದ) ಎಂಬ ಹೊತ್ತಗೆಯನ್ನು ನನಗೆ ಕೊಟ್ಟ. ಮಾತುಕಥೆ ನಡೆದದ್ದು ಇಂಗ್ಲಿಷಿನಲ್ಲಿಯೇ.

ಇಷ್ಟಾಗುವಾಗ ನನಗೆ ಒಂದು ಸಂಗತಿ ಸ್ಪಷ್ಟವಾಗಿತ್ತು: ಈತ ದೈಹಿಕವಾಗಿ ಸ್ಥೂಲ ಮತ್ತು ಬೌದ್ಧಿಕವಾಗಿ ಮಂದ ಆಗಿದ್ದಾನೆ. ಶೀಲ? “ಸರ್! ನೀವು ನನಗೊಂದು ಉಪಕಾರ ಮಾಡಬೇಕು. ಅದಕ್ಕಾಗಿ ನಿಮ್ಮ ಬಳಿ ಬಂದಿದ್ದೇನೆ. ನನಗೊಬ್ಬಳು ಯೋಗ್ಯ ಬ್ರಾಹ್ಮಣ ಕನ್ಯೆಯನ್ನು ಗೊತ್ತುಮಾಡಿ ಮದುವೆ ಮಾಡಿಸಬೇಕು. ಹಣಕ್ಕೇನೂ ಕೊರತೆಯಿಲ್ಲ. ನಾನವಳ ಜೊತೆ ಮತ್ತೆ ಅಮೆರಿಕಕ್ಕೆ ಮರಳುವವನು.” ಮೋಹನ ದೀನನಾಗಿದ್ದ. ಆದರೆ ಅವನ ಶೀಲ ಕುರಿತು ಇಷ್ಟೆಲ್ಲ ವಿವರಗಳನ್ನು ಖುದ್ದು ಅವನಿಂದಲೇ ಕೇಳಿದ ಬಳಿಕ ನಾನು ಅವನಿಗೇನು ನೆರವು ತಾನೇ ಕೊಡಬಲ್ಲೆ? ಹಾಗೆ

ಕೊಡುವುದು ಧರ್ಮವೇ? ಕನ್ಯಾಬಲಿಗೆ ನಾನು ಕಾರಣನಾಗಬೇಕೇ? ಆ ನಿಟ್ಟಿನಲ್ಲಿ ನನ್ನ ಪೂರ್ಣ ಅಸಹಾಯಕತೆಯನ್ನು ವ್ಯಕ್ತಪಡಿಸುತ್ತ, "ಏನಪ್ಪ ಮಾಡಲಿ, ನಮಗೊಬ್ಬ ಮಗಳೇ ಇಲ್ಲವಲ್ಲ!" ಎಂದು ಚಟಾಕಿ ಹಾರಿಸಿದೆ.
ಅವನೇ ಮುಂದುವರಿಸಿದ, "ಸರ್! ನಿಮಗೆ ನನ್ನ ಕೃಷ್ಣ ಮಾವನನ್ನು ಗೊತ್ತಿದೆಯಲ್ಲ. ಅವರು ನನ್ನ ತಾಯಿಯ ಅಣ್ಣ. ಅವರೀಗ ಬೆಂಗಳೂರಿನಲ್ಲಿಯೇ ನೆಲಸಿದ್ದಾರೆ. ಅವರ ಮಗಳು ಜಾನಕಿಗೂ ನನಗೂ ನಡುವೆ ಪ್ರೇಮ ಎಂದೋ ಅಂಕುರಿಸಿತ್ತು. ಸಾಕಷ್ಟು ಮಾತುಕತೆ ಮತ್ತು ಪತ್ರವ್ಯವಹಾರ ಕೂಡ ನಡೆದಿವೆ. ನೀವು ದಯವಿಟ್ಟು ಆಕೆಯ ಜೊತೆ ನನಗೊಂದು ಭೇಟಿಗೆ ಏರ್ಪಾಡು ಮಾಡಿದರೆ ಉಪಕಾರವಾಗುತ್ತದೆ."

ಹೌದು, ಮೋಹನನ ಈ ಮಾವ ಬಲು ಹಿಂದೆ ಮಡಿಕೇರಿಯಲ್ಲಿ ನನಗೆ ಓಂಕಾರೇಶ್ವರ ದೇವಾಲಯದ ಭವ್ಯ ಕೆರೆಯಲ್ಲಿ ಈಸು ಕಲಿಸಿದ ಗುರು, ನನ್ನ ಗೌರವ ಮತ್ತು ಅಭಿಮಾನಗಳಿಗೆ ಪಾತ್ರರಾದ ಹಿರಿಯರು. ಜಾನಕಿಯ ತಂಗಿ ಕುಮುದ, ಆಗ ನಮ್ಮ ಕಾಲೇಜಿನಲ್ಲಿ ನನ್ನ ವಿದ್ಯಾರ್ಥಿನಿ ಕೂಡ. ಕೂಡಲೇ ಅವಳನ್ನು ಕರೆಯಿಸಿ ಈ ವಿಷಯವನ್ನು ಸೂಕ್ಷ್ಮವಾಗಿ ತಿಳಿಸಿದೆ ಮತ್ತು ಕೃಷ್ಣ ಮಾವನಿಗೆ ಆಸಕ್ತಿ ಇದ್ದರೆ ಮರುದಿನ ಅಪರಾಹ್ಣ ೪ ಗಂಟೆಗೆ ನಮ್ಮ ಕಾಲೇಜಿಗೆ ಬಂದು ನಮ್ಮಿಬ್ಬರನ್ನೂ (ಮೋಹನ ಮತ್ತು ನಾನು) ಭೇಟಿ ಮಾಡಬಹುದೆಂದೂ ಸೂಚಿಸಿದೆ. ಅವರು ಬಂದರು, ಅತ್ಯಂತ ಅಸ್ವಾಭಾವಿಕವಾಗಿ ಮತ್ತು ನಾಟಕೀಯವಾಗಿ ನಮ್ಮಿಬ್ಬರ ಕುಲ, ಗೋತ್ರ, ವೃತ್ತಿ, ಸಾಧನೆ ಮುಂತಾದವನ್ನು ಹೊಗಳಿದರು ಮತ್ತು ಇಂಥ ದೈವಿಕ ಸಂಘಟನೆ – ಜಾನಕೀ ಮೋಹನ – ಬಗ್ಗೆ ತಮ್ಮ ಪೂರ್ಣ ಅನುಮೋದನೆ ವ್ಯಕ್ತಪಡಿಸಿದರು! "ನಮ್ಮ ಮನೆಗೆ ನೀವಿಬ್ಬರೂ ಬನ್ನಿ. ವಿವರಗಳನ್ನು ಅಲ್ಲಿ ಮಾತಾಡೋಣ" ಎಂಬುದಾಗಿ ಆಹ್ವಾನವಿತ್ತರು ಕೂಡ. ಮರುದಿನ ಸಂಜೆಗೆ ಆ ಭೇಟಿಯನ್ನು ನಿಗದಿಸಿದೆವು. ನನ್ನ ಅಂತರ್ವಾಣಿ ಮಿಡಿಯುತ್ತಿತ್ತು, "ನೀನು ಯಾವುದೋ ದಾಕ್ಷಿಣ್ಯಕ್ಕೊಳಗಾಗಿ ಗೊಸರಿನೊಳಕ್ಕೆ ಗೊತ್ತಿದ್ದೂ ಧಾವಿಸುತ್ತಿದ್ದೀಯೆ, ಎಚ್ಚರೆಚ್ಚರ!"

ಮೋಹನ ಬಾಡಿಗೆ ಕಾರ್ ತಂದ. ನಮ್ಮ ಸವಾರಿ ರಾಜಮಹಾಲ್ ಗುಟ್ಟಳ್ಳಿಯಲ್ಲಿದ್ದ ಮಾವನ ಮನೆ ತಲಪಿದಾಗ ಸಂಜೆ ೬ ಆಗಿತ್ತು. ಮತ್ತೆ ಅವರ ಅತ್ಯುತ್ಪ್ರೇಕ್ಷಿತ ಸ್ವಾಗತ. ಕಾಫಿ ತಿಂಡಿ ಸೇವನೆ ಮುಗಿಯಿತು. ಆದರೆ ಜಾನಕಿ ಬರಲಿಲ್ಲ. ನಾನೇ ಮಾವನಿಗೆ ಸೂಚಿಸಿದೆ ಅವರಿಬ್ಬರ ಖಾಸಗಿ ಭೇಟಿ ಏರ್ಪಡಿಸಿರೆಂದು. ಅದೂ ನಾಟಕೀಯವಾಗಿಯೇ ನಡೆಯಿತು, ಪಕ್ಕದ ಕೋಣೆಯಲ್ಲಿ. ಅಲ್ಲಿಂದ ಮೋಹನನ ಮಾತು ನಮಗೆ ಸ್ಪಷ್ಟವಾಗಿ ಕೇಳುತ್ತಿತ್ತು. ಮಾದರಿ, "Janaki dear! I love you. Tell me you too love me!" ಅವಳ ಉತ್ತರ ನನಗೆ ಕೇಳಲಿಲ್ಲ. ಮತ್ತೆ ಇವನದೇ ವಾಗ್ಪ್ರವಾಹ. ಸಾರಾಂಶ: ಇವನಿಗೆ ತತ್ಪೂರ್ವ ಅನೇಕ ಯುವತಿಯರ ಸಂಗವಿತ್ತು, ಪಾಶ್ಚಾತ್ಯ ದೇಶಗಳಲ್ಲಿ ಇದು ತೀರ ಸಾಮಾನ್ಯ, "But when once we are married, Janaki dear, I promise I will be totally loyal to you. Similarly I expect you to be completely faithful to me, notwithstanding your earlier love affairs." ಎಂಥ ವಿಚಿತ್ರ ಮತ್ತು ಅಸ್ವಾಭಾವಿಕ ಭೇಟಿ ಇದು ಎಂದು ನನ್ನ ಮನಸ್ಸು ಕುಟುಕುತ್ತಿತ್ತು. ಎಚ್ಚರೆಚ್ಚರ!

ಅವರ ದೀರ್ಘ ಬೈಠಕ್ಕು ಮುಗಿದಾಗ ರಾತ್ರಿ ೮ ಆಗಿತ್ತು! ಊಟ ಮಾಡಿಯೇ ಹೋಗತಕ್ಕದ್ದು ಎಂದು ಮಾವನ ಅಪ್ಪಣೆ. ಸ್ಸರಿ, ಅದೂ ಆಯಿತು. "ನಾಳೆ ಬನ್ನಿ, ಜಾನಕಿಯ ಅಭಿಪ್ರಾಯ ತಿಳಿದು ಖಚಿತ ನಿರ್ಣಯ ಹೇಳುತ್ತೇನೆ" ಎಂದರು ಕೃಷ್ಣ ಮಾವ. ನಾನು ದಾಕ್ಷಿಣ್ಯ ಬಿಟ್ಟು ಸ್ಪಷ್ಟವಾಗಿ ನುಡಿದೆ, "ನಾಳೆ ನೀವೇ ನಮ್ಮ ಕಾಲೇಜಿಗೆ ಬಂದು ಅಭಿಪ್ರಾಯ ತಿಳಿಸಿ. ಪುನಃ ನನಗೆ ಇಷ್ಟು ದೂರ ಬರಲು ವೇಳೆ ಇಲ್ಲ." ಮರುದಿನ ಅವರು ಸಕಾಲದಲ್ಲಿ ಬಂದರು, ಈ ಸಂಬಂಧಕ್ಕೆ ತಮ್ಮ ಸಮ್ಮತಿ ಸೂಚಿಸಿ, ಮದುವೆಯ ದಿನ ನಿಶ್ಚಯಿಸಲು ಮೋಹನನ ತಂದೆ–ತಾಯಿಯರನ್ನು ಬೆಂಗಳೂರಿಗೆ ಕರೆಸಬೇಕೆಂದು ಹೇಳಿದರು. ಹೇಗೂ ಅವನ ತಾಯಿಗೆ ಕೃಷ್ಣ ಮಾವ ಅಣ್ಣ ಅಲ್ಲವೇ? ನಾನು ಇನ್ನಷ್ಟು ಆಳದ ಪಂಕಕ್ಕೆ ತಿಳಿದೂ ಬೀಳುತ್ತಿರುವೆನೇ? ಎಚ್ಚರೆಚ್ಚರ!

ಕೆಲವು ದಿನಗಳು ಉರುಳಿದುವು. ಮೋಹನ, ಅವನ ತಂದೆ ಮತ್ತು ತಾಯಿ ಕೃಷ್ಣ ಮಾವನ ಬಿಡಾರದಲ್ಲಿ ವಿವಾಹದ ವಿವರಗಳನ್ನು ನಿಶ್ಚಯಿಸಲು ಸೇರಿದರು. ಇತ್ತ ಗೊಸರಿನಿಂದ ಹೊರಬರಲಾಗದೆ ಅತ್ತ ಮಾತೂ ಆಡಲಾಗದೆ ನಾನು ಕೂಡ ಆ ಕೂಟದಲ್ಲಿರಬೇಕಾಯಿತು. ನನ್ನ ಮೂಕಪ್ರೇಕ್ಷಕತ್ವದಲ್ಲಿ ಮಾತುಕತೆ ಮುಂದುವರಿದು, ಎಲ್ಲವೂ ಉಭಯ ಪಕ್ಷಗಳಿಗೂ ಒಪ್ಪಿಗೆಯಾಗಿ, ಒಪ್ಪಂದ ಕರಾರನ್ನು ದಾಖಲಿಸಲು ಮಾವ ಮುಂದಾದರು. ಸರ್ಕಾರದ ಹಿರಿಯ ಕಾನೂನು ಅಧಿಕಾರಿಯಾಗಿದ್ದ ಅವರು ಅಪ್ಪಟ ವ್ಯಾವಹಾರಿಕ ಕ್ರಯಚೀಟಿಯನ್ನು ತಯಾರಿಸಿದ್ದರು. ಇದಕ್ಕೆ ಅವರೂ ಅವರ ಹೆಂಡತಿಯೂ ಮೋಹನನ ತಂದೆಯೂ ತಾಯಿಯೂ ರುಜು ಮಾಡಬೇಕು ಮತ್ತು ನಾನು ಸಾಕ್ಷಿಯಾಗಿ

ರುಜುವಿಕ್ಕಬೇಕು ಎಂಬುದು ಅವರ ಇಂಗಿತ. ಈಗ ನಾನು ಪೂರ್ಣ ಎಚ್ಚತ್ತಿದ್ದೆ, ಸ್ಪಷ್ಟವಾಗಿ ನುಡಿದೆ, "ಒಲಿದ ಮನಗಳ ಮಿಲನವೇ ಮದುವೆ, ಇದು ವ್ಯಾಪಾರವಲ್ಲ. ಇಲ್ಲಿ ಹುಡುಗಿ ಹುಡುಗ ಪರಸ್ಪರ ಒಲಿದಿರುವರೆಂದಾದರೆ ಈ ಒಪ್ಪಿಗೆ ಚೀಟಿ ಅನಾವಶ್ಯ, ಒಲಿದಿಲ್ಲವೆಂದಾದರೆ ವ್ಯರ್ಥ. ಆದ್ದರಿಂದ ನಾನಂತೂ ಈ ಕಾಗದಕ್ಕೆ ರುಜು ಹಾಕಲಾರೆ."

ಇಷ್ಟೆಲ್ಲ ಚರ್ವಿತಚರ್ವಣಗಳು ಮುಗಿಯುವಾಗ ರಾತ್ರಿ ೮ ಮೀರಿತ್ತು. "ನಾನು ಹೊರಡುತ್ತೇನೆ" ಎಂದು ಎದ್ದೆ. "ಮಾವಾ! ನನಗೂ ಅಪ್ಪಣೆ ಕೊಡಿ" ಎಂದ ಮೋಹನ. ನಾನು ಹೇಳಿದೆ, "ಬೇಡ. ನಿನ್ನ ತಾಯಿತಂದೆಯರ ಜೊತೆ ನೀನಿಲ್ಲೇ ತಂಗಿದ್ದು ನಾಳೆ ಮುಂಜಾನೆ ಅವರ ಜೊತೆ ಕೊಡಗಿಗೆ ಹೋಗು. ಹೇಗೂ ಮದುವೆ ದಿನಾಂಕಕ್ಕೆ ಇನ್ನೂ ಒಂದು ತಿಂಗಳು ಇದೆಯಷ್ಟೆ." ಇಷ್ಟಾಗುವಾಗ ರಂಗಸ್ಥಳದಲ್ಲಿ ಹಠಾತ್ತನೆ ರಂಗು ಬದಲಾಯಿತು. ಉದ್ರಿಕ್ತ ಮಾವ ಗರ್ಜಿಸಿದರು, "ಮೋಹನಾ! ಇಲ್ಲಿಗೆ ಮದುವೆ ಆಗಿಹೋಯಿತೆಂದು ಬೀಗಬೇಡ. ಈ ಒಂದು ತಿಂಗಳು ನಾನು ನಿನ್ನ ವರ್ತನೆ, ಗುಣ, ನಡತೆ ಎಲ್ಲವನ್ನೂ ವಿಮರ್ಶಿಸುತ್ತಿರುವೆನು. ಯಾವಾಗ ಬೇಕಾದರೂ ಈ ಒಪ್ಪಂದವನ್ನು ರದ್ದುಗೊಳಿಸಬಲ್ಲೆ."
"ಏನಂದಿರಿ ಮಾವಾ! ನೀವೇನೆಂದು ಭಾವಿಸಿದ್ದೀರಿ" ಎಂದು ಕಿರುಚಿದ ಮೋಹನ. ಮಾವ ಅಳಿಯಂದಿರ ನಡುವೆ ಜಗಳ ತಾರಕ್ಕೇರಿ ಕೈಕೈ ಮಿಲಾಯಿಸುವ ಮಟ್ಟಕ್ಕೂ ಹೋಯಿತು. ಆ ಹುಯ್ಲಿನಲ್ಲಿ ಕೃಷ್ಣಮಾವನಿಂದ ನನಗೂ ಮುಖಪ್ರಕ್ಷಾಳನೆ ಆಯಿತು. "I know what you are – you are an agent to export Indian girls to America. Hell with your ulterior motives." ನನ್ನ ಸಹನೆ ಕಟ್ಟೆ ಒಡೆಯಿತು. ಈ ಮಾವ ಅಳಿಯರೆಂಬ ಇಬ್ಬರು ಹುಚ್ಚರ ನಡುವೆ ನನಗೆ ಉಳಿಗಾಲವಿಲ್ಲ ಎಂಬುದು ಸ್ಪಷ್ಟವಾಯಿತು. ನಾನು ಅಲ್ಲಿಂದ ಕಂಬಿಕಿತ್ತು ಒಂದೇ ಉಸಿರಿಗೆ ಓಡಿ ಸಿಕ್ಕಿದ ಬಸ್ ಹತ್ತಿ ನಿರ್ಗಮಿಸಿದೆ.

ಮರುದಿನ ಮಾವ ಕಾಲೇಜಿಗೆ ಬಂದರು. ನನ್ನನ್ನು ಸಮಾಧಾನಪಡಿಸುವುದು ಅವರ ಉದ್ದೇಶ, "ಮಗಳ ಮೇಲೆ ನನಗೆ ಅತಿಶಯ ವಾತ್ಸಲ್ಯ. ಅವಳು ಮದುವೆಯಾಗಿ ಹೋಗಿಬಿಡುವಳಲ್ಲ ಎಂಬ ಚಿಂತೆಯ ಕಾರಣವಾಗಿ ನಾನು ಹಾಗೆ ವರ್ತಿಸಿದ್ದು ಮಾತ್ರ. ಮತ್ತೆಲ್ಲ ಸರಿಹೋಯ್ತು. ಇವತ್ತು ಸಂಜೆ ಬಾ. ಸಂತೋಷವಾಗಿ ಮಾತಾಡಿ ಮುಂದುವರಿಯೋಣ." ನಾನೇನೂ ಉತ್ತರ ಕೊಡಲಿಲ್ಲ. ಅವರ ಸಂಪರ್ಕ ಮುಂದುವರಿಸಲೂ ಇಲ್ಲ. ಸದ್ಯ ಒಂದು ಸಮಾಧಾನ: ಜಾನಕಿ–ಮೋಹನ ಮದುವೆ ನಡೆಯಲಿಲ್ಲ. ಮೋಹನನ ಹುಚ್ಚು ಕ್ರಮೇಣ ಬಿಗಡಾಯಿಸಿ ಒಂದು ದಿನ ಅವನು ತನ್ನ ತಂದೆಯ ಬಿಡಾರದಲ್ಲೇ ಮೃತನಾದನೆಂದು ತಿಳಿಯಿತು. ಈ ರೇಜಿಗೆ ವ್ಯವಹಾರದಲ್ಲಿ ತಪ್ಪು ಯಾರದು? ಮಾವನದೋ? ಅಳಿಯನದೋ? ಇದೊಂದು ಅಡಕತ್ತರಿ. ಘನೋದ್ದೇಶದಿಂದಲೇ ಆದರೂ ಇದರಲ್ಲಿ ಸಿಕ್ಕಿಹಾಕಿಕೊಂಡ ನನ್ನದೋ? "ಅಪರಾಧಿ ನಾನಲ್ಲ, ಅಪರಾಧವೆನಗಿಲ್ಲ" ಎಂದು ಭಾವಿಸುವುದು ನನಗೆ ಪ್ರಿಯವಾದರೂ ಇಂಥ ಸುಲಭೀಕರಣ ಹಿತಕರವೆನ್ನಿಸುವುದಿಲ್ಲ. ಒಂದು ಸಂತಸದ ಸಂಗತಿ ಎಂದರೆ ಮುಂದೆ ಜಾನಕಿಗೆ ಯೋಗ್ಯ ವರ ದೊರೆತು ಅವನೊಡನೆ ಮದುವೆಯಾಗಿ ಈ ದಂಪತಿಗಳು ಈಗ (೨೦೦೬) ಅಮೆರಿಕದಲ್ಲಿ ನೆಲಸಿರುವರಂತೆ. ಚೆನ್ನಾಗಿರಲಿ.

ಆವಗಾಳಿಯದಾವ ಘಾತವನು ಪೊತ್ತಿಹುದೊ,
ಆವ ಘಾತದೊಳಾವ ಮೃತ್ಯುವಿನ ನಗುವೊ
ಜೀವವಿಂತರಿಯದ ವಿಪತ್ತುಗಳ ಸರಮಾಲೆ
ಭಾವಿಸಾ ಸೂತ್ರಗಳ ಅಣಕುಬೊಮ್ಮ!

ಕನ್ನಡದ ಕರೆ
ಅಧ್ಯಾಯ ಅರವತ್ತೇಳು

ಆಗ ತಾನೇ ತರಗತಿ ಪಾಠ ಮುಗಿಸಿ ಅಧ್ಯಾಪಕರ ಕೊಠಡಿಗೆ ಮರಳಿದ್ದೆ (ಪ್ರಾಯಶಃ ಆಗಸ್ಟ್ ೧೯೬೮). ನಮ್ಮ ಗಣಿತ ವಿಭಾಗದ ಮುಖ್ಯಸ್ಥ ಆರ್.ಗುರುರಾಜರಾಯರು ಕುತೂಹಲ ದೃಷ್ಟಿಯಿಂದ ನನ್ನನ್ನು ಪ್ರಶ್ನಿಸಿದರು, "ದೇಜಗೌರನ್ನು ನೀವು ಚೆನ್ನಾಗಿ ಬಲ್ಲಿರೇ? ನಿಮ್ಮನ್ನು ನೋಡಲೆಂದು ಅವರಿಲ್ಲಿಗೆ ಬಂದಿದ್ದರಲ್ಲಾ!?"

ಕನ್ನಡದ ಸೇನಾನಿ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ದೇ.ಜವರೇಗೌಡರ ಹೆಸರು ನನಗೆ ಸುಪರಿಚಿತ, ಅವರ ಕೆಲವು ಕೃತಿಗಳನ್ನು ಓದಿದ್ದೆ, ಒಂದೆರಡು ಸಾರ್ವಜನಿಕ ಸಭೆಗಳಲ್ಲಿ ಭಾಷಣಗಳನ್ನು ಕೇಳಿಯೂ ಇದ್ದೆ. ಆದರೆ ಅವರಿಗೆ ಸುತರಾಂ ನನ್ನ ಹೆಸರು ಕೂಡ ತಿಳಿದಿರಬೇಕಾಗಿಲ್ಲ. ಅವರು ನನಗಿಂತ ಹಿರಿಯರು, ನಮ್ಮಿಬ್ಬರ ವಯಸ್ಸು, ಊರು, ಅಧ್ಯಯನ ವಿಷಯ, ಆಸಕ್ತಿ ಎಲ್ಲವೂ ವಿಭಿನ್ನ. ನಾನು ಮಡಿಕೇರಿಯವ, ಕಲಿತದ್ದು ಗಣಿತ – ಮಂಗಳೂರು ಮದ್ರಾಸು ನಗರಗಳಲ್ಲಿ, ಹವ್ಯಾಸ ಕನ್ನಡದಲ್ಲಿ ಜನಪ್ರಿಯ ವಿಜ್ಞಾನ ಲೇಖನ ರಚನೆ ಮತ್ತು ಪ್ರಕಟಣೆ ಇತ್ಯಾದಿ. ೧೯೬೫ರಿಂದ ಮಾತ್ರ ನಾನು ಬೆಂಗಳೂರು ನಿವಾಸಿ. ಸಹಜವಾಗಿ ನನ್ನಲ್ಲಿ ಆಶ್ಚರ್ಯವೂ ತುಸು ಅಳುಕೂ ಮೂಡಿದುವು: ಆ ಪ್ರಸಿದ್ಧರು ಈ ಸಾಮಾನ್ಯನನ್ನು ಅರಸಿ ಬಂದುದೇಕೆ? ನನ್ನ ಕನ್ನಡ ಬರೆಹಗಳಲ್ಲಿ ಏನಾದರೂ ತಪ್ಪು ನುಸುಳಿರಬಹುದೇ?
"ಅವರು ಸೆಂಟ್ರಲ್ ಕಾಲೇಜ್ ಗ್ರಂಥಾಲಯದಲ್ಲಿ ದೇಶಪಾಂಡೆಯವರ ಜೊತೆ ನಿಮ್ಮನ್ನು ಕಾಯುತ್ತಿರುವರಂತೆ. ನೀವಲ್ಲಿಗೆ ಒಡನೆ ಹೋಗಿ ಅವರನ್ನು ನೋಡಬೇಕಂತೆ" ಎಂದರು ಗುರುರಾಜರಾಯರು.



ನಮ್ಮ ಸರ್ಕಾರೀ ಕಾಲೇಜಿನ ಎದುರಿನ ವಿಶಾಲ ಆವರಣವೇ ಸೆಂಟ್ರಲ್ ಕಾಲೇಜು. ಲಗುಬಗೆಯಿಂದ ಅಲ್ಲಿಗೆ ನಡೆದೆ, ದೇಶಪಾಂಡೆಯವರ ಎದುರು ಹಾಜರಾದೆ. ಅಲ್ಲೇ ಅವರ ಪಕ್ಕ ಕುಳಿತಿದ್ದರು ದೇಜಗೌ: ಮುಖದಲ್ಲಿ ಪ್ರಸನ್ನ ಭಾವ, ಏನನ್ನೋ ಸಾಧಿಸಿದೆನೆಂಬ ತೃಪ್ತಿ, ಇನಿತೂ ಬಿಗುಮಾನ ಅಥವಾ ಅನುಗ್ರಹದ ಛಾಯೆ ಇಲ್ಲ! ಸನ್ಮಿತ್ರ ಮತ್ತು ಕಾಯಕನಿಷ್ಠ ದೇಶಪಾಂಡೆ ತೀರ ಆತ್ಮೀಯತೆಯಿಂದ ಉದ್ಗರಿಸಿದರು,
``Look my Lord! It comes!"
``Do I look like a ghost?" ಎಂದು ನಾನು ಮರುಚಟಾಕಿ ಹಾರಿಸಿದೆ.
"Yes! The Holy Ghost!" ಎಂದರವರು.
ದೇಜಗೌ ನನ್ನನ್ನು ಸೆಂಟ್ರಲ್ ಕಾಲೇಜ್ ಎದುರಿನ ತೋಪಿಗೆ ಕರೆದೊಯ್ದರು. ರಸ್ತೆಯ ವಾಹನಾರ್ಭಟೆ, ಕಾಲೇಜ್ ಆವರಣದ ನಿಗಿನಿಗಿ ವಿದ್ಯಾರ್ಥಿ ಜಂಗುಳಿ ಎಲ್ಲವುಗಳಿಂದ ದೂರವಾದ ಏಕಾಂತ. ತುಂಬ ಆತ್ಮೀಯವಾಗಿ ಕನ್ನಡ ವಿಶ್ವಕೋಶದ ಯೋಚನೆ–ಯೋಜನೆ–ನಿರ್ವಹಣೆ ಬಗ್ಗೆ ಸೂಕ್ಷ್ಮ ಚಿತ್ರ ನೀಡಿದರು. ಸಾರಾಂಶವಿಷ್ಟು:

೧೯೫೪ರಲ್ಲಿ ಅಂದು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪ್ರಾಧ್ಯಾಪಕರೂ ಮುಖ್ಯಸ್ಥರೂ ಆಗಿದ್ದ ಕುವೆಂಪು ಕನ್ನಡಕ್ಕೊಂದು ಸಾಮಾನ್ಯ ವಿಶ್ವಕೋಶ ಪ್ರಕಟಿಸುವುದರ ಕನಸು ಕಂಡರು. ಅವರ ಆತ್ಮೀಯ ಶಿಷ್ಯ ಮತ್ತು ಸಹೋದ್ಯೋಗಿಯಾಗಿದ್ದ ದೇಜಗೌ ಅದರ ಬಗೆಗಿನ ಸವಿವರ ಯೋಜನೆ ಸಿದ್ಧಪಡಿಸಿದರು. ಇದನ್ನು ವಿಶ್ವವಿದ್ಯಾನಿಲಯ ಸರ್ಕಾರಕ್ಕೆ ಮಂಜೂರಾತಿಗಾಗಿ ಸಲ್ಲಿಸಿತು (೧೯೫೬). ಮುಖ್ಯ ಮಂತ್ರಿ ಕೆಂಗಲ್ ಹನುಮಂತಯ್ಯ ಇದಕ್ಕೆ ಅಸ್ತು ಮುದ್ರೆ ಒತ್ತಿದರು, ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆಗೆ ಕಾರ್ಯಗತಗೊಳಿಸಲು ಯುಕ್ತ ಆದೇಶ ಹೊರಡಿಸಿದರು. ಹೀಗೆ ಆ ಇಲಾಖೆಯ ಅಧೀನದಲ್ಲಿ ವಿಶ್ವಕೋಶ ಘಟಕ ಸ್ಥಾಪಿತವಾಯಿತು.

ಮುಂದೇನಾಯಿತು? ಕ್ರಮೇಣ ಈ ಘಟಕ ಸಾಕಷ್ಟು ಉಬ್ಬಿ ಬೆಳೆಯಿತು, ಕಡತಗಳು ಕೊಬ್ಬಿ ಸೊಕ್ಕಿದುವು, ಸಿಬ್ಬಂದಿ ಸಂಖ್ಯೆ ಹಿಗ್ಗಿ ಬಿರಿಯಿತು ಮತ್ತು ಕಛೇರಿ ಅಣಿಕಟ್ಟುಗಳು ಅರಬ್ಬನ ಒಂಟೆಯಂತೆ ಕೊಠಡಿಗಳನ್ನೆಲ್ಲ ಸ್ವಾಹಾಕರಿಸಿದುವು – – ಎಲ್ಲವೂ ಪಾರ್ಕಿನ್ಸನ್ನನ ನಾಲ್ಕು ನಿಯಮಾನುಸಾರ. (ಆ ನಿಯಮಗಳಿವು: ೧. ಕೆಲಸ ಸದಾ ವೃದ್ಧಿಸುತ್ತ ಲಭ್ಯ

ವೇಳೆಯನ್ನು ಕಬಳಿಸುತ್ತದೆ. ೨. ಖರ್ಚು ನಿರಂತರವಾಗಿ ಏರುತ್ತ ಆದಾಯವನ್ನು ಮೀರಿ ಜಿಗಿಯುತ್ತದೆ. ೩. ನಡೆಯುವ ಕೆಲಸ ಸಿಬ್ಬಂದಿ ಸಂಖ್ಯೆಯ ವಿಲೋಮಾನುಪಾತದಲ್ಲಿರುವುದು. ೪. ಒದಗಿಸಿರುವ ಎಲ್ಲ ಜಾಗವನ್ನೂ ಸರಕು ಸರಂಜಾಮುಗಳು ನುಂಗಿ ಇನ್ನಷ್ಟನ್ನು ಬೇಡುತ್ತಿರುವುವು.) ವಿಶ್ವಕೋಶದ ಪ್ರಕಟಣೆ ಮಾತ್ರ ಗಗನಕುಸುಮವಾಗಿತ್ತು! ಸರ್ಕಾರೀ ಕರ್ಮಕಾಂಡಕ್ಕೆ ಇನ್ನೂ ಒಂದು ನಿದರ್ಶನ. ಇದು ೧೯೬೮ರಲ್ಲಿದ್ದ ಪರಿಸ್ಥಿತಿ.

ಆ ವೇಳೆಗೆ ಕನ್ನಡಬದ್ಧ, ಕರ್ತವ್ಯಸಿದ್ಧ ಮತ್ತು ಉದ್ದೇಶಶುದ್ಧ ತ್ರಿಮೂರ್ತಿಗಳು ಕರ್ನಾಟಕ ಸರ್ಕಾರದ ನೇತಾರರಾದರು: ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿ), ರಾಮಕೃಷ್ಣ ಹೆಗ್ಡೆ (ವಿತ್ತ ಮಂತ್ರಿ) ಮತ್ತು ಶಂಕರೇ ಗೌಡ (ಶಿಕ್ಷಣ ಸಚಿವ). ಶಂಕರೇ ಗೌಡ ಮತ್ತು ದೇಜಗೌ ಸಹಪಾಠಿಗಳು, ಮಿತ್ರರು ಹಾಗೂ ಕಾರ್ಯಧುರಂಧರರು ಕೂಡ. ದೇಜಗೌ ಜೊತೆ ಸಮಾಲೋಚಿಸಿ ಇವರ ಸಲಹೆ ಮೇರೆಗೆ ಶಿಕ್ಷಣಮಂತ್ರಿಗಳು ಯೋಜನೆಯ ನಿರ್ವಹಣೆ ಕುರಿತು ರಾಜ್ಯದ ನಾಲ್ಕೂ ವಿಶ್ವವಿದ್ಯಾಲಯಗಳ ಅಭಿಪ್ರಾಯ ಕೇಳಿದರು. ಕರ್ನಾಟಕ ಮತ್ತು ಕೃಷಿ ವಿಶ್ವವಿದ್ಯಾಲಯಗಳು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದುವು. ಅದೇ ತರುಣದಲ್ಲಿ ಸ್ಥಾಪನೆಗೊಂಡಿದ್ದ ಬೆಂಗಳೂರು ವಿಶ್ವವಿದ್ಯಾಲಯ ಬೃಹತ್ಸಂಖ್ಯೆಯ ಮತ್ತು ಭೂರಿ ವೇತನಶ್ರೇಣಿಯ ಸಿಬ್ಬಂದಿವರ್ಗವನ್ನು ಸೂಚಿಸಿ ಸರ್ಕಾರ ಅಷ್ಟು ವೆಚ್ಚ ಭರಿಸುವುದಾದಲ್ಲಿ ಈ ಕೆಲಸದ ಹೊಣೆ ವಹಿಸಿಕೊಳ್ಳಬಹುದೆಂಬ ಅಭಿಪ್ರಾಯ ವ್ಯಕ್ತಪಡಿಸಿತು. ಅದರಲ್ಲಿ ಸಂಪುಟದ ಪ್ರಕಟಣೆ ಬಗ್ಗೆ ಯಾವ ಸುಳುಹೂ ಇರಲಿಲ್ಲ.
ಇವೆಲ್ಲವುಗಳಿಗಿಂತ ಭಿನ್ನವಾಗಿ ಮೈಸೂರು ವಿಶ್ವವಿದ್ಯಾನಿಲಯ ಮುಂದಿಟ್ಟ ಕಾರ್ಯಸೂಚಿ ತೀರ ಸರಳವೂ ಪ್ರಾಯೋಗಿಕವೂ ಆಗಿತ್ತು. ನಾಲ್ಕು ಸಂಪಾದಕರು, ನಾಲ್ಕು ಉಪಸಂಪಾದಕರು ಮತ್ತು ಯುಕ್ತ ಕಚೇರಿ ಸಿಬ್ಬಂದಿ ಇವರ ವೇತನ ಹಾಗೂ ವಿಶ್ವಕೋಶದ ಮುದ್ರಣ ಖರ್ಚು ಇಷ್ಟನ್ನು ಸರ್ಕಾರ ಭರಿಸುವುದಾದಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರ ಗೌರವ ಪ್ರಧಾನ ಸಂಪಾದಕತ್ವದಲ್ಲಿ ಸಮಗ್ರ ಯೋಜನೆಯನ್ನು ನಿರ್ದಿಷ್ಟ ಕಾಲಾವಧಿಯಲ್ಲಿ ಪೂರೈಸುವುದಾಗಿ ಆಶ್ವಾಸನೆ ನೀಡಿತು. ಅಲ್ಲದೆ ಒಂದನೆಯ ಸಂಪುಟವನ್ನು ಕೇವಲ ಒಂದು ವರ್ಷದೊಳಗೆ ಪ್ರಕಟಿಸುವುದಾಗಿ ಭರವಸೆಯನ್ನೂ ಕೊಟ್ಟಿತು.

ದೇಜಗೌ ಮುಂದುವರಿಸಿದರು, "ಕಳೆದ ಮೇ ತಿಂಗಳಿನಲ್ಲಿ ನಾವು ಸರ್ಕಾರದ ಪರವಾಗಿ ಈ ಹೊಣೆ ವಹಿಸಿಕೊಂಡಿದ್ದೇವೆ. ಈಗ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಮೂರು ಸಂಪಾದಕರು – ಕಾರ್ಯನಿರ್ವಾಹಕ, ಸಂಯೋಜಕ ಹಾಗೂ ಮಾನವಿಕ – ಮತ್ತು ಬೆರಳೆಣಿಕೆಯ ಸಹಾಯಕರು ಹಗಲಿರುಳು ಎನ್ನದೆ ಕನ್ನಡದ ತೇರನ್ನು ಎಳೆಯುತ್ತಿದ್ದಾರೆ. ನಮಗೆ ಸಮರ್ಥ ವಿಜ್ಞಾನ ಸಂಪಾದಕರೊಬ್ಬರ ತುರ್ತು ಅಗತ್ಯವಿದೆ. ನೀವು ಬಂದು ಈ ಹೊಣೆ ವಹಿಸಿಕೊಳ್ಳಬೇಕೆಂಬುದು ನಮ್ಮೆಲ್ಲರ ಅಭಿಲಾಷೆ." ಈ ಹಠಾತ್ ಮತ್ತು ಅನಿರೀಕ್ಷಿತ ಆಹ್ವಾನ ನನ್ನನ್ನು ಮೂಕನನ್ನಾಗಿಸಿತು. ಹೆಚ್ಚೆಂದರೆ ನಾನೊಬ್ಬ ದಕ್ಷ ಗಣಿತೋಪನ್ಯಾಸಕ, ವಿಜ್ಞಾನಸಾಗರದ ದಂಡೆ ಮೇಲಿನ ಒಬ್ಬ ವೀಕ್ಷಕ, "ನನ್ನಿಯ ಕಡಲಿಡೀ ನನ್ನೆದುರು ಅನನ್ವೇಷಿತವಾಗಿ ಚೆಲ್ಲಿಕೊಂಡಿದೆ" ಎಂಬುದು ಯುಗಪ್ರತಿಭೆ ನ್ಯೂಟನ್ನನ ಉದ್ಗಾರ. ಅಂದ ಮೇಲೆ ನನ್ನ ಪಾಡೇನು? ಇದು ಹೇಗೆ ನನ್ನಿಂದಾಗದ ಕಾರ್ಯವೆಂದು ಅವರಿಗೆ ಪರಿಪರಿಯಾಗಿ ವಿವರಿಸಿದೆ. ಜೊತೆಗೆ ಆ ಮೊದಲೇ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಅದರ ಕುಲಪತಿ, ಕುಲಸಚಿವ ಮತ್ತು ಗಣಿತಮುಖ್ಯಸ್ಥರ ಒತ್ತಾಯಕ್ಕೆ ಮಣಿದು ಅಲ್ಲಿಯ ಉಪನ್ಯಾಸಕ ಹುದ್ದೆಗೆ ಅರ್ಜಿಯನ್ನೂ ಸಲ್ಲಿಸಿದ್ದೆ. ಈ ವಚನವನ್ನು ಮುರಿಯಲೇ? ಇವೆಲ್ಲ ಸಂಗತಿಗಳನ್ನೂ ದೇಜಗೌ ಅವರಿಗೆ ವಿವರಿಸಿದೆ. ಆಗ ಅವರೊಂದು ದೊಡ್ಡ ಮಾತು ಹೇಳಿ ನನ್ನ ಹೃದಯ ಗೆದ್ದರು, "ಕುವೆಂಪು, ಶಿವರಾಮಕಾರಂತ, ಕು.ಶಿ. ಹರಿದಾಸಭಟ್ಟ, ಜೆ.ಆರ್. ಲಕ್ಷ್ಮಣರಾವ್ ಎಲ್ಲರೂ ಮುಕ್ತ ಕಂಠದಿಂದ ನಿಮ್ಮ ಹೆಸರನ್ನು ಸೂಚಿಸಿದ್ದಾರೆ. ಒಂದು ವಾರ ಯೋಚಿಸಿ ದಯವಿಟ್ಟು ಒಪ್ಪಿಗೆ ಕಾಗದ ಬರೆಯಿರಿ. ಇದು ಕನ್ನಡದ ಕರೆ." ನನ್ನ ಅನೇಕ ಸಹೋದ್ಯೋಗಿಗಳು ಸ್ಪಷ್ಟವಾಗಿ ಹೇಳಿದರು, "ಅಲ್ಲಿಯ ಜಾತೀಯತೆ ಮತ್ತು ಒಳಜಗಳಗಳ ಮಡುವಿನಲ್ಲಿ ಕೊಳೆಯಬೇಡಿ." ಕೆಲವರು ತಾವಾಗಿಯೇ ಮುಂಬಂದು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತಾವು ಅನುಭವಿಸಿದ ಹಿಂಸೆ ಕ್ಷೋಭೆಗಳನ್ನು ವಿವರಿಸಿ, "ನಿಮ್ಮಂಥ ನೇರ ನುಡಿ ನಡೆಗಳ ಒಬ್ಬಾತ ಸುತರಾಂ ಅಲ್ಲಿ ಏಗಲಾರ" ಎಂದರು. ಇಂಥ ಎಲ್ಲ ಪುಕ್ಕಟೆ ಸಲಹೆಗಳಿಗೆ, ಅವು ಎಷ್ಟೇ ಪ್ರಾಮಾಣಿಕವಾದವಾಗಿದ್ದರೂ, ನನ್ನ ಪ್ರತಿಕ್ರಿಯೆ ಸದಾ ಒಂದೇ, "ಸ್ವಭಾವದಿಂದಲೂ ಸಂಸ್ಕಾರದಿಂದಲೂ ನಾನು ಅಂಥ ಎಲ್ಲ ಕಲ್ಮಷವಿದೂರ. ನನ್ನ ಅರ್ಹತೆ ಮತ್ತು ನೈತಿಕಬದ್ಧತೆ ಮಾತ್ರ ಪ್ರಸ್ತುತ. ನಾನು ಲೋಕವನ್ನು ನೋಡುವುದು ಪಾರದರ್ಶಕ ಗಾಜಿನ ಮೂಲಕ."

ಮುಂದಿನ ವಾರ ದೇಜಗೌಅವರಿಗೆ ನಿರ್ಣಾಯಕವಾಗಿ ನಿರ್ಧಾರ ತಿಳಿಸಿದೆ: ಬೆಂಗಳೂರು ವಿಶ್ವವಿದ್ಯಾಲಯಕ್ಕೆ "ಕೊಟ್ಟ ಮಾತಿಗೆ ತಪ್ಪಿ ನಡೆಯೆನು," ಆದ್ದರಿಂದ ಮೈಸೂರಿಗೆ ಬರಲಾರೆ.

ಉರುಳಾಗಿ ಕಾಡಿತ್ತು ಮಾತು
ಅಧ್ಯಾಯ ಅರವತ್ತ ಎಂಟು

೧೯೬೮ರ ನವೆಂಬರ್, ಬೆಂಗಳೂರು ವಿಶ್ವವಿದ್ಯಾಲಯದ ಹುದ್ದೆಗೆ ಔಪಚಾರಿಕ ಸಂದರ್ಶನ (ಹಾಗೆಂದು ಅಲ್ಲಿಯ ವರಿಷ್ಠರು ನನಗೆ ಆಶ್ವಾಸಿಸಿದ್ದರು) ನಡೆಯಿತು. ಖುದ್ದು ಗಣಿತವಿಭಾಗದ ಮುಖ್ಯಸ್ಥರೇ ನನ್ನ ಅರ್ಹತೆ, ಸಾಮರ್ಥ್ಯ ಮುಂತಾದವನ್ನು ಕುರಿತು ನನಗೇ ಮುಜಗರವಾಗುವಂತೆ ಸಮಿತಿಗೆ ವರ್ಣಿಸಿದರು. ಇನ್ನುಳಿದಿರುವುದೇನು? ವಿಧಾನ ವೀಥಿಯ ಈ ಕಡೆಯಿಂದ (ಸರ್ಕಾರೀ ಕಾಲೇಜ್) ಆ ಕಡೆಗೆ (ಸೆಂಟ್ರಲ್ ಕಾಲೇಜ್) ಅಧಿಕೃತವಾಗಿ ದಾಟುವುದು ಮಾತ್ರ ಎಂಬ ಸಂತೃಪ್ತ ಭಾವದಿಂದ ತೇಲುತ್ತಿದ್ದೆ.

ಮರುದಿನ ಕುಲಸಚಿವರಿಂದಲೂ ಗಣಿತಮುಖ್ಯಸ್ಥರಿಂದಲೂ ನನಗೆ ತುರ್ತು ಕರೆ. ಇಂದೇ ಹುದ್ದೆಯ ಆದೇಶ ಪತ್ರ ಕೊಡುತ್ತಾರೆಂಬ ಪೂರ್ಣ ಭರವಸೆಯಿಂದ ಹೋದೆ, ಮೊದಲು ಕುಲಸಚಿವರಲ್ಲಿಗೆ. ತೀರ ವಿಷಣ್ಣ ವದನರಾಗಿ ಅವರೆಂದರು, "ವಿಭಾಗ ಮುಖ್ಯಸ್ಥರು ನಿಮ್ಮ ನೇಮನವನ್ನು ಒಪ್ಪಲಿಲ್ಲ. ಇನ್ನೊಂದು ಅಧಿಕ ಉಪನ್ಯಾಸಕ ಹುದ್ದೆ ಕೇಳಿರೆಂದು ಅವರಿಗೆ ಸೂಚಿಸಲಾಗಿದೆ. ಅವರಿಂದ ಅಧಿಕೃತ ಕೋರಿಕೆ ಬಂದ ಒಡನೆ ಮಂಜೂರು ಮಾಡಿ ನಿಮ್ಮನ್ನು ನೇಮಿಸುತ್ತೇವೆ. ಒಟ್ಟಾರೆ ನಿಮ್ಮ ಸೇವೆ ವಿಶ್ವವಿದ್ಯಾಲಯಕ್ಕೆ ಬೇಕೇಬೇಕು."

ಮುಖ್ಯಸ್ಥರಲ್ಲಿಗೆ ಹೋದಾಗ ಇನ್ನೊಂದು ಆಘಾತ, "ನಿಮ್ಮ ಸಾಮರ್ಥ್ಯ ಮತ್ತು ಯೋಗ್ಯತೆ ಗಮನಿಸಿ ನಿಮ್ಮನ್ನು ಇನ್ನೂ ಉನ್ನತ ಶ್ರೇಣಿಯಲ್ಲಿ, ಸದ್ಯವೇ ವಿಶ್ವವಿದ್ಯಾಲಯ ಪ್ರಾರಂಭಿಸಲಿರುವ ಪ್ರಸಾರಾಂಗದ ನಿರ್ದೇಶಕರಾಗಿ, ನೇಮಿಸಬೇಕೆಂಬುದು ನನ್ನ ಅಭಿಪ್ರಾಯ. ಈ ಕಾರಣದಿಂದಲೇ ಉಪನ್ಯಾಸಕ ಹುದ್ದೆಗೆ ಬೇರೊಬ್ಬರನ್ನು ಶಿಫಾರಸು ಮಾಡಿದ್ದೇನೆ."

ನಾನು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದೆ, "ನನ್ನ ಭವಿಷ್ಯ ಕುರಿತು ನಿರ್ಣಯಿಸಬೇಕಾದವ ನಾನೇ ಹೊರತು ಬೇರೆ ಯಾರೂ ಅಲ್ಲ. ಗೊತ್ತಿಲ್ಲದ ನನ್ನನ್ನು ಅವರು ಹುಡುಕಿ ಬಂದರು. ಗೊತ್ತಿರುವ ನೀವಾದರೋ ಈಗ ಉಲ್ಟಾ ಹೊಡೆಯುತ್ತಿದ್ದೀರಿ. ನಿಮ್ಮ ನೈತಿಕ ಮಾನಕದ ಬಗ್ಗೆ ನನಗೆ ಖೇದವಿದೆ. ಹೇಗೂ ಇರಲಿ ಸರ್ಕಾರೀ ಹುದ್ದೆ ನನಗಿದ್ದೇ ಇದೆಯಲ್ಲ."

ನನ್ನ ನೆಲ ಬೆಂಗಳೂರು, ಹೊಲ ಬೆಂಗಳೂರು ವಿಶ್ವವಿದ್ಯಾಲಯ ಮತ್ತು ಬಲ ಕನ್ನಡದ ಕೆಲಸ ಎಂದು ನಾನು ದುಡಿದಿದ್ದ ನೆಲೆ ಈಗ ಹಠಾತ್ತನೆ ಪರಕೀಯವಾಗಿತ್ತು. ಯಾವುದೋ ದುಷ್ಟ ರಾಜಕೀಯಕ್ಕೆ ಗಣಿತ ಮುಖ್ಯಸ್ಥರು ಸಿಕ್ಕಿಹಾಕಿಕೊಂಡು ಅದರಿಂದ ವಿಮೋಚನೆಗೊಳ್ಳಲು ಬೆಕ್ಕಿನ ತಲೆಗೆ ತುಪ್ಪ ಪೂಸಿದಂತೆ ನನ್ನೆದುರು ಹೊಸ ಹುದ್ದೆಯ ಆಮಿಷ ಒಡ್ಡಿದ್ದರು. ನನಗೆ ಅವರು ಕೊಡಲಿದ್ದೇವೆಂಬ ಪ್ರಸಾರಾಂಗದ ನಿರ್ದೇಶಕತ್ವ ಎಂಬುದಕ್ಕೆ ಆಗಲೇ 'ಕನ್ನಡ ಪಠ್ಯ ಪುಸ್ತಕ ಸಮಿತಿ'ಯಲ್ಲಿ ಸಾಕಷ್ಟು ಅನುಭವ ನನಗೆ ಲಭಿಸಿತ್ತು. ಒಂದು ನಿದರ್ಶನ ನೋಡಿ.

ಸಮಿತಿಯ ವತಿಯಿಂದ ನಾವು ತಜ್ಞರಿಗೆ ಅಧಿಕೃತ ಪತ್ರ ಬರೆದು ಹಸ್ತ ಪ್ರತಿಗಳನ್ನು ಆಹ್ವಾನಿಸುತ್ತಿದ್ದೆವು. ಮುಂದೆ ಇವನ್ನು ಬೇರೆ ಬೇರೆ ಹಂತಗಳಲ್ಲಿ ವಿವಿಧ ಸಂಸ್ಕಾರಗಳಿಗೆ ಒಳಪಡಿಸಿ ಪರಿಷ್ಕೃತವಾದವನ್ನು ಮುದ್ರಣಾಲಯಕ್ಕೆ ರವಾನಿಸುತ್ತಿದ್ದೆವು. ಮುದ್ರಿತ ಕೃತಿಗಳಿಗೆ ನಿಯಮಾನುಸಾರ ರಾಯಧನವನ್ನೂ ಪಾವತಿಸುತ್ತಿದ್ದೆವು. ಆದ್ದರಿಂದ ವಿಶ್ವವಿದ್ಯಾಲಯದ ಪ್ರಕಟಣೆ, ಅದೂ ಕನ್ನಡದಲ್ಲಿ ಎಂದರೆ, ಆಯಾ ಲೇಖಕರಿಗೆ ಅದೊಂದು ಪ್ರತಿಷ್ಠೆಯ ಸೂಚಕವಾಯಿತು. ವೃತ್ತಿ ಬಡ್ತಿಗೆ ಹೇತುವೂ ಆಯಿತು. ಇವೆಲ್ಲ ಪ್ರಕ್ರಿಯೆಗಳ ವೇಳೆ ವಿಷಯ, ಗುಣಮಟ್ಟ, ಶೈಲಿ ಕುರಿತಂತೆ ಕನ್ನಡತನ ಮತ್ತು ಸಮಗ್ರ ವ್ಯವಹಾರ ಕುರಿತಂತೆ ಪಾರದರ್ಶಕತೆ ಮಾತ್ರ ನನ್ನೆದುರು ಇರುತ್ತಿದ್ದ ಲಕ್ಷ್ಯಗಳು.

ಇಲ್ಲೇ ನನಗೆ ಹೊಸ ಮತ್ತು ಊಹಿಸಿರದ ವೃತ್ತಿ ಗಂಡಾಂತರ ಎದುರಾದದ್ದು. ನಮ್ಮ ಪ್ರಕಟಣೆಗಳ ಸಂಖ್ಯೆ ಏರಿದಂತೆ ಲೇಖಕರ ಕೋಮು ವಿವರಗಳು ಬೇಕೆಂಬ ಅಲಿಖಿತ ಕೋರಿಕೆ ಪ್ರಬಲ ವ್ಯಕ್ತಿಯೊಬ್ಬರಿಂದ ಬಂತು. ಮಾತಿನಲ್ಲೇ ಹೇಳಿದೆ, "ಅವೆಂದೂ ಇಲ್ಲಿ ಪರಿಗಣನೆಗೆ ಬರುವುದಿಲ್ಲ. ಇಂಥ ವೃಥಾ ಹಸ್ತಕ್ಷೇಪ ಯಾರೂ ಎಂದೂ ಎಲ್ಲಿಯೂ ಮಾಡತಕ್ಕದ್ದಲ್ಲ."

ಈ ನೇರ ನುಡಿ ಕ್ರಮೇಣ ಉರುಳುವ ಹಿಮಗಡ್ಡೆಯಂತೆ ತೋರಗೊಳ್ಳುತ್ತ ಹೋಗುತ್ತಿತ್ತೆಂದು ಕೆಲವು ಮಿತ್ರರಿಂದ ತಿಳಿದಾಗ ನನ್ನಲ್ಲಿ ಮೊಳೆತದ್ದು ತಿರಸ್ಕಾರ. ನಿವೃತ್ತ ಪ್ರಾಧ್ಯಾಪಕರೊಬ್ಬರು ನನ್ನಲ್ಲಿಗೆ ಬಂದು ತಮ್ಮ ಓಬೀರಾಯನ ಕಾಲದ ಹಸ್ತಪ್ರತಿಯೊಂದನ್ನು ಕೊಟ್ಟು ಹೆಚ್ಚು ಕಡಿಮೆ ಆದೇಶಿಸಿದರು, "ಇದನ್ನು ನೀವು ಪ್ರಕಟಿಸಬೇಕು. ಶಿಫಾರಸು ಪತ್ರಗಳನ್ನು ಲಗತ್ತಿಸಿದ್ದೇನೆ, ನೋಡಿ" ಎಂದರು. ಆ ಹಸ್ತಪ್ರತಿ ವಿಜ್ಞಾನಕ್ಕೆ ಸಂಬಂಧಿಸಿದ್ದಲ್ಲ. ಆದರೂ ಅದರ ಮೊದಲ ಪುಟದಲ್ಲೇ ಹಲವಾರು ಸ್ಖಾಲಿತ್ಯಗಳಿದ್ದುದನ್ನು ಅವರಿಗೆ ಓದಿ ಹೇಳಿದೆ. ಸಾಮಾನ್ಯ ಪ್ರಜ್ಞೆ ಇರುವ ಯಾರಿಗೂ ಹೊಳೆಯುವ ದೋಷವದು.
"ಕನ್ನಡಕ್ಕೆ ಇಷ್ಟು ಸಾಕು. ನನಗೆ ಪುಸ್ತಕ ಶೀಘ್ರದಲ್ಲಿಯೇ ಹೊರಬರುವುದು ಮುಖ್ಯ. ನೋಡಿ ಎಂಥೆಂಥ ಪ್ರಬಲ ರಾಜಕಾರಣಿಗಳು ನನ್ನ ಈ ಕೃತಿಗೆ ಶಿಫಾರಸು ಕಾಗದ ಕೊಟ್ಟಿದ್ದಾರೆ."
ತಾಳ್ಮೆಗೆಡದೆ ಅವರಿಗೇನೋ ಸಬೂಬು ಹೇಳಿ ಸದ್ಯದ ಸ್ಫೋಟದಿಂದ ಪಾರಾದೆ. ಆದರೆ ಈ ಎಲ್ಲ ಕಿರಿಕಿರಿಗಳು ನನ್ನನ್ನು ಅಂತರ್ಮುಖಿಯಾಗಿಸಿದುವು: ಅಧಿಕಾರ, ಹಣ ಮತ್ತು ವಶೀಲಿ ಇರುವ ಯಾವುದೇ ಹುದ್ದೆ ಅಥವಾ ಹೊಣೆಯ ಹತ್ತಿರ ನಾನು ಸುಳಿಯತಕ್ಕದ್ದಲ್ಲ.

ಒಡನೆ ದೇಜಗೌಅವರಿಗೆ ಪತ್ರ ಬರೆದೆ. ಸಾರಾಂಶ: ಬೆಂಗಳೂರು ವಿಶ್ವವಿದ್ಯಾಲಯಕ್ಕೆ ನೀಡಿದ್ದ ವಚನವೆಂಬ ಉರುಳಿನಿಂದ ಪಾರಾಗಿದ್ದೇನೆ; ಹಿಂದಿನ ಆಹ್ವಾನ ಇಂದೂ ಸಿಂಧುವಾಗಿದ್ದರೆ ಮೈಸೂರಿಗೆ ಬರಲು ಸಿದ್ಧನಿದ್ದೇನೆ. ಆದರೆ ಇದರಿಂದ ಅಲ್ಲಿ ಅವರು (ಮೈಸೂರು) ಈಗಾಗಲೇ ನೇಮಿಸಿರಬಹುದಾದ ಇನ್ನೊಬ್ಬರನ್ನು ವಿಸ್ಥಾಪಿಸಬೇಕಾದರೆ ನನ್ನ ಬಗ್ಗೆ ಮರೆತುಬಿಡಿ – ಪರರಿಗೆ ಮುಳುವಾಗಿ ನಾನು ಮೆರೆಯಬೇಕಾಗಿಲ್ಲ.

ಅವರ ಮಾರೋಲೆ (ಡಿಸೆಂಬರ್ ೬, ೧೯೬೮), ". . . ನೀವು ಕನ್ನಡ ವಿಶ್ವಕೋಶದ ವಿಜ್ಞಾನ ವಿಭಾಗದ ಸಂಪಾದಕರಾಗಿ ಬರಲು ಒಪ್ಪಿಕೊಂಡಿರುವುದು ನನಗೆ ತುಂಬ ಸಂತೋಷವನ್ನುಂಟುಮಾಡಿದೆ. ನಿಮ್ಮಂಥ ತಜ್ಞರ ಹಾಗೂ ನುರಿತ ಲೇಖಕರ ಸಹಾಯ ಸಹಕಾರಗಳು ದೊರಕುವುದಾದರೆ ವಿಶ್ವಕೋಶ ಬಹು ಶೀಘ್ರವಾಗಿ ಹೊರಬೀಳುತ್ತದೆ. . . ನಿಮ್ಮ ಆಗಮನಕ್ಕಾಗಿ ನಾನು ತುಂಬ ಕಾತರದಿಂದಿದ್ದೇನೆಂದು ಹೇಳಬೇಕಾಗಿಲ್ಲ, ತಾನೆ?" ಸಾಮಾನ್ಯತೆಯನ್ನು ಅಸಮಾನ್ಯತೆಗೆ ಉತ್ತಾರಣೆಗೊಳಿಸುವ ಪರುಷಸ್ಪರ್ಶಕ್ಕೆ (ಪುರುಷಸ್ಪರ್ಶಕ್ಕೆ ಕೂಡ) ಉದಾಹರಣೆ ನಮ್ಮ ಆದರಣೀಯ ದೇಜಗೌ.

ಮರುದಿನ ಸಾಕ್ಷಾತ್ ಹರಿದಾಸ ಭಟ್ಟರೇ ನನ್ನ ಮನೆಗೆ ಬಂದರು. ದೇಜಗೌರಿಗೆ ನನ್ನ ಕಾಗದ ತಲಪಿದಾಗ ಇವರೂ ಮೈಸೂರಿನಲ್ಲಿದ್ದರಂತೆ. ಅಂದಿನ ತನಕವೂ ಅವರಿಗೆ ವಿಜ್ಞಾನ ಸಂಪಾದಕ ಹುದ್ದೆಗೆ ಸಮರ್ಥ ವ್ಯಕ್ತಿ ದೊರೆತಿರಲಿಲ್ಲವಂತೆ. "ತುರ್ತಾಗಿ ಗಂಟು ಮೂಟೆ ಕಟ್ಟಿ ಮೈಸೂರಿನಲ್ಲಿ ಹೊಸ ಬಿಡಾರ ಹೂಡಲು ಸನ್ನದ್ಧರಾಗಿ" ಎಂದು ಸಲಿಗೆಯಿಂದ ಆಜ್ಞಾಪಿಸಿದರು.

ಕಾಲೇಜಿನ ಮತ್ತು ಮಕ್ಕಳ ಶೈಕ್ಷಣಿಕ ವರ್ಷ ಮುಗಿದೊಡನೆ (ಮೇ ೧೯೬೯) ಮೈಸೂರಿಗೆ ಹೊರಡಲು ನನ್ನ ಲಿಖಿತ ಸಮ್ಮತಿ ರವಾನಿಸಿದೆ: ಅಲ್ಲಿಯ ಬೌದ್ಧಿಕ ಪರಿಸರ ನನಗಿಷ್ಟವಾದರೆ ಹಾಗೂ ಅವರಿಗೆ (ದೇಜಗೌ) ನನ್ನ ಕಾರ್ಯಶೈಲಿ ಒಪ್ಪಿಗೆಯಾದರೆ ಸದ್ಯಕ್ಕೆ ಸರಕಾರದಿಂದ ಎರವಲು ಸೇವೆ ಮೇರೆಗೆ ಬರಲು ಸಿದ್ಧನಿದ್ದೇನೆ ಎಂಬುದು ಸಾರಾಂಶ. ಮುಂದಿನದು ಕೇವಲ ಔಪಚಾರಿಕ ದಫ್ತರ ಚಲಾವಣೆ: ಮೈಸೂರು ವಿಶ್ವವಿದ್ಯಾನಿಲಯದಿಂದ ಕಾಲೇಜ್ ಶಿಕ್ಷಣ ನಿರ್ದೇಶಕರಿಗೆ ಕೋರಿಕೆ ಪತ್ರ ಹೋಯಿತು, ಯುಕ್ತ ವೇಳೆಯಲ್ಲಿ ಬಿಡುಗಡೆ ಆದೇಶ ಬಂದಿತು. ಅಧಿಕೃತವಾಗಿ ಕಾಲೇಜ್ ಸೇವೆಯಿಂದ ಹೊರಡುವ ಮೊದಲು ನಿರ್ದೇಶಕಿ ಜಯಲಕ್ಷ್ಮಮ್ಮಣ್ಣಿಯವರನ್ನು ಭೇಟಿ ಮಾಡಿ ಕೃತಜ್ಞತೆ ಸಲ್ಲಿಸಲು ಹೋದೆ. ಅವರೊಂದು ದೊಡ್ಡ ಮಾತು ಹೇಳಿ ನನಗೆ ಶುಭವಿದಾಯ ಕೋರಿದರು, "ನಿಮ್ಮಂಥ ಸಮರ್ಥರ ಸೇವೆಯನ್ನು ನಮ್ಮ ಇಲಾಖೆಯಿಂದ

ತಾತ್ಕಾಲಿಕವಾಗಿಯಾದರೂ ಎರವಲು ಕೊಡುವುದು ನನಗೇನೂ ಪ್ರಿಯವಾದ ಸಂಗತಿಯಲ್ಲ. ಆದರೆ ಕನ್ನಡದ ಕೆಲಸ ಬಲು ದೊಡ್ಡದು. ಕನ್ನಡ ನಾಡಿಗೆ ಒಳ್ಳೆಯದಾಗಲಿ."

ಹೀಗೆ ಹಲವು ಹೃದಯಗಳು, ಸದಾಶಯಗಳು ಮತ್ತು ಘನೋದ್ದೇಶಗಳು ಸಂಘನಿಸಿ ನನ್ನನ್ನು ಬೆಂಗಳೂರಿನಿಂದ ಮೈಸೂರಿಗೆ ಉಡಾಯಿಸಿದುವು. ಅರಿಯದ ನೆಲದಲ್ಲಿ, ತಿಳಿಯದ ಕಾರ್ಯ ನಿರ್ವಹಿಸಲು, ಗೊತ್ತಿಲ್ಲದ ಭವಿಷ್ಯ ಕುರಿತು ಹೊಸ ಹವೆಗೆ ದುಮುಕಿದೆ ಮತ್ತು ವಿಶ್ವಕೋಶ ಪರ್ವತಾರೋಹಣಕ್ಕೆ ಸಜ್ಜಾದೆ; ಮೈಸೂರು ಮಾನಸ ಗಂಗೋತ್ರಿಯಲ್ಲಿಯ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕನ್ನಡ ವಿಶ್ವಕೋಶದ ವಿಜ್ಞಾನ ಸಂಪಾದಕನಾಗಿ ಜೂನ್ ೧೭, ೧೯೬೯ರ ಮುಂಜಾನೆ ದಾಖಲಾದೆ. ಸಂಸ್ಥೆಯ ನಿರ್ದೇಶಕರೂ ಪದನಿಮಿತ್ತ ವಿಶ್ವಕೋಶದ ಪ್ರಧಾನ ಸಂಪಾದಕರೂ ಆಗಿದ್ದ ದೇಜಗೌಅವರು ನನ್ನನ್ನು ಆದರದಿಂದ ಸ್ವಾಗತಿಸಿದರು, ಮತ್ತು ಸಂಸ್ಥೆಯ ಎಲ್ಲ ವಿಭಾಗಗಳಿಗೂ ನನ್ನನ್ನು ಕರೆದೊಯ್ದು ಆತ್ಮೀಯವಾಗಿ ಪರಿಚಯಿಸಿದರು. ಅವರು "ಪರಗುಣ ಪರಮಾಣುವುಮಂ ಗಿರಿಗೈದುರ್ಬುವ" ಸುಜನರೆಂಬುದು ಹೆಜ್ಜೆಹೆಜ್ಜೆಗೂ ನನ್ನ ಅರಿವಿಗೆ ಬಂದು ಕೆಲಸ ಮತ್ತು ಪರಿಸರದ ಬಗ್ಗೆ ಉತ್ಸಾಹ ಹಾಗೂ ಭರವಸೆ ತಳೆದೆ.

ಕನ್ನಡ ವಟವೃಕ್ಷದ ಆಶ್ರಯದಲ್ಲಿ
ಅಧ್ಯಾಯ ಅರವತ್ತ ಒಂಬತ್ತು

ಕನ್ನಡ ಅಧ್ಯಯನ ಸಂಸ್ಥೆ ಎಂಬ ದೃಢ ಮತ್ತು ಭವ್ಯ ಕಾಂಡದಿಂದ ನಾಡನುಡಿಯ ಹಲವಾರು ಕೊಂಬೆ ರೆಂಬೆಗಳು ಟಿಸಿಲೊಡೆದು ಈ ಭವ್ಯ ವಟವೃಕ್ಷ ನಳನಳಿಸುತ್ತಿತ್ತು. ಕೆಲವನ್ನು ಹೆಸರಿಸಬಹುದು: ಕನ್ನಡ ಎಂಎ, ಪಿಎಚ್ಡಿ ಮತ್ತು ಸಂಶೋಧನ ವಿಭಾಗ, ಭಾಷಾಂತರ ಶಾಖೆ, ಜಾನಪದ, ಎಪಿಗ್ರಾಫಿಯಾ ಕರ್ನಾಟಿಕಾ ಇತ್ಯಾದಿ. ೧೯೬೮ರಿಂದೀಚೆಗೆ ವಿಶ್ವಕೋಶ ವಿಭಾಗವೂ ಇದಕ್ಕೆ ಜಮೆಯಾಯಿತು. ಇವೆಲ್ಲ ವಿಭಾಗಗಳ ಮುಖ್ಯಸ್ಥರು ದೇಜಗೌ. ಹಾಮಾ ನಾಯಕ, ಎಲ್. ಬಸವರಾಜು, ಎಚ್. ತಿಪ್ಪೇರುದ್ರಸ್ವಾಮಿ, ಎನ್. ಬಸವಾರಾಧ್ಯ, ಟಿ.ವಿ. ವೆಂಕಟಾಚಲ ಶಾಸ್ತ್ರಿ, ಜೀಶಂಪ, ಸಿಪಿಕೆ, ಪಿ. ಆರ್ ತಿಪ್ಪೇಸ್ವಾಮಿ ಮೊದಲಾದ ಪ್ರಸಿದ್ಧ ವಿದ್ವಾಂಸರ ಆಡುಂಬೊಲವದು. ವಿಶ್ವಜ್ಞಾನದ ಸಮಗ್ರ ಸಂಪುಟ ವಿಶ್ವಕೋಶವಾಗಬೇಕಾಗಿದ್ದುದರಿಂದ ಒಂದೆಡೆ ಇವರೆಲ್ಲರೂ ಸೇರಿದ್ದುದು ನಮಗೊಂದು ವರದಾನ.

ವಿಶ್ವಕೋಶದ ಸಂಪಾದಕ ವರ್ಗದಲ್ಲಿದ್ದವರು ಕೆ.ಟಿ ವೀರಪ್ಪ (ಕಾರ್ಯನಿರ್ವಾಹಕ), ಎನ್. ಪ್ರಹ್ಲಾದರಾವ್ (ಸಂಯೋಜಕ), ಎ. ಮೈಲಾರಿ ರಾವ್ (ಮಾನವಿಕ) ಮತ್ತು ಇರರ ಸಹಾಯಕರು. ಈ ವರ್ಗಕ್ಕೆ ನಾನು ವಿಜ್ಞಾನ ಸಂಪಾದಕನಾಗಿ ಜಮೆಯಾದೆ. ನನ್ನ ಕೆಲಸಕ್ಕೆ ನೇರ ಸಂಬಧಿಸಿದಂತೆ ಈಗಾಗಲೇ ಅಲ್ಲಿದ್ದವರು ವಿಜ್ಞಾನ ಉಪಸಂಪಾದಕ ಎಸ್. ರಾಮಪ್ರಸಾದ್, ಇವರು ಗಣಿತ ಎಂಎಸ್ಸಿ ಪದವೀಧರ, ಯುವಕ, ಉತ್ಸಾಹದ ಚಿಲುಮೆ, ಜನಪ್ರಿಯ ವಿಜ್ಞಾನ ಲೇಖಕ ಮತ್ತು ಸಂಪಾದನ ಕಾರ್ಯದಲ್ಲಿ ಆ ವೇಳೆಗಾಗಲೇ ದುಡಿದು ಅನುಭವ ಗಳಿಸಿದವರು. ಯುದ್ಧಸಿದ್ಧ ಸ್ಥಿತಿಯಲ್ಲಿ ಇಡೀ ಬಳಗ ಕಾರ್ಯಬದ್ಧವಾಗಿದ್ದುದನ್ನು ನೋಡಿ ನನಗೆ ಆತ್ಮ ವಿಶ್ವಾಸ ಮೂಡಿತು.

ರಾಮಪ್ರಸಾದರಿಗೆ ನಾನೆಂದೆ, "ಈ ಕೆಲಸಕ್ಕೆ ನಾನು ಪೂರ ಹೊಸಬ – ಹುಮ್ಮಸ್ಸು ಇದೆ, ಆದರೆ ಕೌಶಲವರಿತಿಲ್ಲ. ನಿಮ್ಮಲ್ಲಿ ಎರಡೂ ಸಂಗಮಿಸಿವೆ. ಆದ್ದರಿಂದ ನೀವು ಕೈಹಿಡಿದು ನಡೆಸಬೇಕು ನನ್ನನ್ನು. ನಮ್ಮ ವೃತ್ತಿ ನಾಮಗಳೇನೇ ಇರಲಿ ನಾವು ಪರಸ್ಪರ ಪೂರಕ ಪೋಷಕವಾಗಿ ಕೆಲಸ ಮಾಡುತ್ತ ವಿಶ್ವಕೋಶದ ವಿಜ್ಞಾನ ವಿಭಾಗವನ್ನೊಂದು ಸುಂದರ ಶಿಲ್ಪವಾಗಿ ಕಡೆಯೋಣ."
ಈ ಕವಿವಾಣಿಯನ್ನು ಅವರು ಅಷ್ಟೇ ಸಹಜವಾಗಿ ಮುಂದುವರಿಸಿದರು, "ಸರಿದಾರಿ ತಪ್ಪದಂತೆ, ಅಲ್ಲವೇ?" ನನಗೆ ಇವರ ಕಾವ್ಯ ಪ್ರಜ್ಞೆ ಕೂಡ ಬಲು ಪ್ರಿಯವಾಯಿತು.
"ನೋಡಿ ರಾಮಪ್ರಸಾದ್! ಕೇವಲ ಹುಟ್ಟಿನ ಆಕಸ್ಮಿಕತೆಯಿಂದ ನಾನು ಹಿರಿಯ. ಆದರೆ ಆಡಳಿತೆಯ ಈ ಬಂಧ ಕುರಿತಂತೆ ನೀವೇ ಹಿರಿಯರು. ಆದ್ದರಿಂದ ನಾನು ಸಂಪಾದಿಸಿದ ಲೇಖನವನ್ನು ನೀವೂ ನೀವು ಸಂಪಾದಿಸಿದುದನ್ನು ನಾನೂ ಜ್ಞೇಯನಿಷ್ಠವಾಗಿ ಮುಕ್ತಮನದಿಂದ ವಿಮರ್ಶಿಸಿ ಯುಕ್ತವಾದುದನ್ನು ಮಾತ್ರ ಮುದ್ರಣಕ್ಕೆ ಅಣಿಗೊಳಿಸಬೇಕು. ಇಲ್ಲಿ 'ನಾನು' ಎಂಬುದಿಲ್ಲ, ವಿಶ್ವಕೋಶ ಒಂದೇ ಸಿಂಧು" ಎಂದೆ.

ಆಗ ಚಾಲ್ತಿಯಲ್ಲಿದ್ದ ಕ್ರಮವಿದು: ವಿಷಯತಜ್ಞರಿಂದ ಕೂಡಿದ್ದ ಸಲಹಾ ಸಮಿತಿಗಳವರು (ಇವನ್ನು ಸರ್ಕಾರವೇ ಹಿಂದೆ ನೇಮಿಸಿತ್ತು) ಸಾಹಿತ್ಯ, ಮಾನವಿಕ, ವಿಜ್ಞಾನ, ಕಲೆ, ಕ್ರೀಡೆ, ಇತಿಹಾಸ ಮುಂತಾದ ವಿವಿಧ ಪ್ರಕಾರಗಳಲ್ಲಿ ಶೀರ್ಷಿಕೆಗಳನ್ನು ಆಯ್ದು ಕನ್ನಡ ವರ್ಣಮಾಲೆಯ ಕ್ರಮದಲ್ಲಿ ಅಳವಡಿಸಿ, ಅವುಗಳ ಸ್ಥೂಲ ವ್ಯಾಪ್ತಿಯನ್ನು ನಿಗದಿಸಿ ಆಯಾ ವಿಷಯಗಳಲ್ಲಿ ಪರಿಣತರಾದವರಿಂದ ಲೇಖನಗಳನ್ನು ಆಹ್ವಾನಿಸಿ ಸಂಗ್ರಹಿಸಿಟ್ಟಿದ್ದರು. ಸಂದ ಆ ಸುಮಾರು ೧೩ ವರ್ಷಗಳಲ್ಲಿ ಜಮಾಯಿಸಲಾಗಿದ್ದ ಈ ದಫ್ತರಗಳು ಎಂಥವರನ್ನೂ ಕಂಗೆಡಿಸುವಂತಿದ್ದುವು: ಅದುರಿನ ಈ ಬೆಟ್ಟದಿಂದ ಲೋಹದ ತುಣುಕನ್ನು ಹೆಕ್ಕುವ ಸಂಪಾತಿ ದೃಷ್ಟಿ ಮತ್ತು ಧನ್ವಂತರಿ ಕೌಶಲ ನಮಗಿದೆಯೇ?

ಆಗ ನನ್ನ ಮೇಜಿನ ಮೇಲೆ ವರ್ಣಮಾಲೆಯ ಮೊದಲ ಅಕ್ಷರ ಆಕಾರದಲ್ಲಿದ್ದ ನೂರಾರು ವಿಜ್ಞಾನಲೇಖನಗಳ ಹಲವಾರು ಕೆಂಪುಪಟ್ಟಿ ದಫ್ತರಗಳು ಜಮಾಯಿಸಿದ್ದುವು. ವಿಜ್ಞಾನ ಪ್ರಕಾರದಲ್ಲಿ ಜೀವ, ವೈದ್ಯ ಮತ್ತು ಭೂವಿಜ್ಞಾನಗಳಿಗೆ ಸಂಬಂಧಿಸಿದ ಲೇಖನಗಳನ್ನು ಇತರ ಗೌರವ ಸಂಪಾದಕರು ಸಂಪಾದಿಸಿ ನಮಗೆ ಸಕಾಲದಲ್ಲಿ ಒಪ್ಪಿಸುತ್ತಿದ್ದರು. ಉಳಿದವು ಅಂದರೆ ಗಣಿತ, ಭೌತ, ಖಗೋಳ, ರಸಾಯನ ಮುಂತಾದವನ್ನು ರಾಮಪ್ರಸಾದರ ನೆರವಿನಿಂದ ನಾನು ನಿರ್ವಹಿಸಬಲ್ಲೆ. ಇನ್ನು ಗಂಗೋತ್ರಿಯ ವಿವಿಧ ವಿಭಾಗಗಳಲ್ಲಿಯ ವಿಶೇಷಜ್ಞರ ಸಲಹೆ ಮತ್ತು ಮಾರ್ಗದರ್ಶನ ಪಡೆಯುವ ಅವಕಾಶ ಹೇಗೂ ಸುಲಭ ಲಭ್ಯವಾಗಿತ್ತು. ಇವೆಲ್ಲ ಸೂಕ್ಷ್ಮಗಳನ್ನು ಹಿರಿಯರಾದ ಪ್ರಹ್ಲಾದರಾಯರು ನನಗೆ ಪ್ರೀತಿಯಿಂದ ತಿಳಿಸುತ್ತ, "ಅಂತಿಮವಾಗಿ ನಿಮ್ಮ ಶಿಲುಬೆಯನ್ನು ನೀವೇ ಹೊರಬೇಕು!" ಎಂಬ ಎಚ್ಚರಿಕೆ ಮಾತನ್ನೂ ಹೇಳಿದರು.

"ಹಾಗಾದರೆ ಸಂಪಾದನ ಕಾರ್ಯವನ್ನು ಹೇಗೆ ತೊಡಗಲಿ? ಇಲ್ಲಿ ಅನುಸರಿಸಬೇಕಾದ ತಂತ್ರವೇನು?"

ಅವರೆಂದರು, "ಶೀರ್ಷಿಕೆ ಸರಿಯಾಗಿದೆಯೇ? ಕನ್ನಡಕ್ಕೆ ಹೊಂದುವುದೇ? ಇದು ಮೊದಲ ಪ್ರಶ್ನೆ. ಇಲ್ಲವಾದರೆ ಸಮರ್ಪಕವಾದುದನ್ನು ನಾವೆಲ್ಲರೂ ಕೂಡಿ ಚರ್ಚಿಸಿ ಅಳವಡಿಸಬೇಕು. ಮೊದಲ ವಾಕ್ಯ ಆ ಶೀರ್ಷಿಕೆಯ ಸಂಕ್ಷಿಪ್ತ ವ್ಯಾಖ್ಯೆಯಾಗಿರಬೇಕು. ಮುಂದಿನವು ಇದಕ್ಕೆ ಪೂರಕವಾದವಾಗಿರುವಂತೆ ಅವನ್ನು ನೇರ್ಪುಗೊಳಿಸಬೇಕು. ಈ ಕುಸುರಿ ಕೆಲಸದಲ್ಲಿ ಅನಾವಶ್ಯಕ ವಿವರಗಳನ್ನು ನಿರ್ದಾಕ್ಷಿಣ್ಯವಾಗಿ ಕಿತ್ತು ಹಾಕಿ, ಅಧಿಕ ಮಾಹಿತಿಗಳು ಬೇಕೆನಿಸಿದರೆ ಆಕರ ಗ್ರಂಥಗಳ ಪರಾಮರ್ಶೆಯಿಂದ ಅವನ್ನು ಪಡೆದು ಸೇರಿಸಿ. ಮಾದರಿಗೆ ಇಂಗ್ಲಿಷ್‌ನಲ್ಲಿರುವ ಎನ್‌ಸೈಕ್ಲೊಪಿಡಿಯಾ ಬ್ರಿಟಾನಿಕಾ ಮತ್ತು ಇತರ ವಿಶ್ವಕೋಶಗಳನ್ನು ನೋಡುತ್ತಿರಬೇಕು. ನಡೆದಂತೆ ದಾರಿ, ಅಲ್ಲವೇ?"

ನಾನು ಈ ನೂತನ ಸವಾಲನ್ನು ಸ್ವೀಕರಿಸಿದಾಗ ವಿಶ್ವಕೋಶದ ಮೊದಲ ಸುಮಾರು ೮೦ ಪುಟಗಳ ಮುದ್ರಣ ಕರಡುಗಳು ಸಿದ್ಧವಾಗಿದ್ದುವು. ಇವುಗಳಿಂದ ವಿಜ್ಞಾನಕ್ಕೆ ಸಂಬಂಧಿಸಿದವನ್ನು ಆಯ್ದು ನನಗೆ ಕೊಟ್ಟರು. ಅವೆಲ್ಲವನ್ನೂ ಅಭ್ಯಸಿಸಿದಾಗ ನನ್ನ ಗೊಂದಲ ಹೆಚ್ಚಾಯಿತು. ಅವೇ ವಿಷಯಗಳ ಸಂವಾದೀ ಇಂಗ್ಲಿಷ್ ಲೇಖನಗಳನ್ನು ಓದಿದಾಗ ಇಂಥ ಯಾವ ಸಮಸ್ಯೆಯೂ ಉದ್ಭವಿಸಲಿಲ್ಲ. ಹಾಗಾದರೆ ಗೊಂದಲದ ಕಾರಣವೇನು? ಪ್ರಹ್ಲಾದರಾಯರ ಜೊತೆ ಕೂಲಂಕಷವಾಗಿ ಚರ್ಚಿಸಿದಾಗ ಕೆಲವು ಸೂತ್ರಗಳು ಅನುಗತವಾದುವು: ವಿಜ್ಞಾನ ವಿಷಯ ಕುರಿತಂತೆ ಕನ್ನಡ ಶೈಲಿಗೆ ಶಿಷ್ಟೀಕರಣ ಮತು ಪಾರಿಭಾಷಿಕ ಪದಗಳಲ್ಲಿ ಕನ್ನಡದ ಜಾಯಮಾನಕ್ಕೆ ಒಪ್ಪುವಂತೆ ಏಕರೂಪತೆ ತರುವುದು ಅನಿವಾರ್ಯ ಅಗತ್ಯ; ಅಲ್ಲದೇ ಲೇಖಕರ ಅಂತಸ್ತು, ಪದವಿ ಮುಂತಾದವನ್ನು ಪರಿಗಣಿಸದೇ ವಿಶ್ವಕೋಶದ ಶೈಲಿಗೆ ಆ ಲೇಖನ ಹೊಂದುವಂತೆ ಅದನ್ನು ಪುನಾರೂಪಿಸಲು ಸಂಪಾದಕ ಹಿಂಜರಿಯಬಾರದು.

ಕೆಲವು ಉದಾಹರಣೆಗಳು:

"ಆಲದ ಮರ ಅನೇಕ ಬೀಳಲುಗಳನ್ನು ಹೊಂದಿದ್ದು ಅದು ಎಲ್ಲ ಕಡೆಗಳಲ್ಲಿಯೂ ಬೆಳೆಯುತ್ತದೆ."

ಟೀಕೆ: ಅರ್ಥ ಸಂಬಂಧವಿರದ ಎರಡು ವಾಕ್ಯಗಳ ಕೃತಕ ಜೋಡಣೆ ಇದು. ಇನ್ನು ಆಲದ ಮರ ಎಲ್ಲ ಕಡೆಗಳಲ್ಲಿಯೂ ಬೆಳೆಯುತ್ತದೆ ಎಂಬ ವಾಕ್ಯ ಅಸ್ಪಷ್ಟ. ಆದ್ದರಿಂದ ಈ ಸಂಕೀರ್ಣ ವಾಕ್ಯ, "ಆಲದ ಮರಕ್ಕೆ ಅನೇಕ ಬೀಳಲುಗಳಿವೆ. ಇದು ಬೆಳೆಯುವ ಪ್ರದೇಶಗಳು ಸಾಧಾರಣವಾಗಿ... " ಆಕರ ಗ್ರಂಥವನ್ನು ಪರಿಶೀಲಿಸಿ ಉಳಿದ ಭಾಗವನ್ನು ತುಂಬುವುದೊಂದೇ ಹಾದಿ.

ರೂಢಿಯ ಮಾತಿನಲ್ಲಿ ಬಳಸುವ ಉಷ್ಣ, ಕಾವು, ಶಾಖ, ಉಷ್ಣತೆ, ತಾಪ, ಬಿಸಿತನ ಮುಂತಾದ ಪರ್ಯಾಯ ಪದಗಳನ್ನು ವಿಜ್ಞಾನ ಲೇಖನದಲ್ಲಿ ಹಾಗೆಯೇ ಬರೆದರೆ ಅರ್ಥ ಅಸ್ಪಷ್ಟವಾಗುತ್ತದೆ. ಇಂಗ್ಲಿಷಿನಲ್ಲಿ heat, temperature ಪರ್ಯಾಯ ಪದಗಳಲ್ಲ. ಮೊದಲನೆಯದು ಶಕ್ತಿ (energy), ಎರಡನೆಯದು ಈ ಶಕ್ತಿಯ (effect, ಮೊತ್ತವನ್ನಲ್ಲ) ಪರಿಣಾಮವನ್ನು ಅಳೆಯುವ ಮಾನಕ. ಅದನ್ನು ಕ್ಯಾಲರಿಗಳಲ್ಲಿಯೂ ಇದನ್ನು

ಡಿಗ್ರಿಗಳಲ್ಲಿಯೂ ನಿರೂಪಿಸುತ್ತಾರೆ. ಕನ್ನಡದಲ್ಲಿ ಇವನ್ನು ಅನುಕ್ರಮವಾಗಿ ಉಷ್ಣ ಮತ್ತು ಉಷ್ಣತೆ ಎಂದು ಶಿಷ್ಟೀಕರಿಸಿ ಬಳಸಿದೆ.

ಇಂಗ್ಲಿಷಿನಲ್ಲಿ invention, discovery, exploration, research, symbol, code, sign, signal, rotation, revolution ಮುಂತಾದವು ವಿಭಿನ್ನ ಅರ್ಥಗಳಿರುವ ವಿವಿಕ್ತ ಪದಗಳು – ಅಂಕಿತ ನಾಮಗಳಂತೆ. ರೂಢಿಯಲ್ಲಿ ಮೊದಲಿನ ನಾಲ್ಕು ಪದಗಳನ್ನು 'ಕಂಡುಹಿಡಿ' ಎಂದೂ ಮುಂದಿನ ನಾಲ್ಕನ್ನು 'ಸಂಕೇತ ಅಥವಾ ಪ್ರತೀಕ' ಎಂದೂ ಕೊನೆಯವನ್ನು 'ಸುತ್ತು' ಎಂದೂ ಸಲೀಸಾಗಿ ಹೇಳಿ ಸುಧಾರಿಸುತ್ತವೆ. ವಿಜ್ಞಾನಲೇಖನಗಳಲ್ಲಿ ಹೀಗೆ ಮಾಡುವಂತಿಲ್ಲ. ರೂಢಿಯ ಪ್ರಯೋಗಗಳನ್ನೂ ಭಾಷಾಮರ್ಯಾದೆಯನ್ನೂ ಅನುಲಕ್ಷಿಸಿ ಅವುಗಳಿಗೆ ಅನುಕ್ರಮವಾಗಿ ಉಪಜ್ಞೆ, ಆವಿಷ್ಕಾರ, ಅನ್ವೇಷಣೆ, ಸಂಶೋಧನೆ, ಪ್ರತೀಕ, ಸಂಕೇತ, ಚಿಹ್ನೆ, ಸಂಜ್ಞೆ, ಆವರ್ತನೆ, ಪರಿಭ್ರಮಣೆ ಎಂಬ ಪದಗಳನ್ನು ಬಳಸಲು ತೊಡಗಿದೆವು. ಆರಂಭದ ದಿನಗಳಲ್ಲಿ ನನಗೆ ಪ್ರಹ್ಲಾದರಾಯರಿಂದ ಲಭಿಸಿದ ಮಾರ್ಗದರ್ಶನ ತುಂಬ ಉಪಯುಕ್ತವಾಯಿತು. ಪ್ರಧಾನ ಸಂಪಾದಕ ಮತ್ತು ಸಂಸ್ಥೆಯ ನಿರ್ದೇಶಕ ದೇಜಗೌ ಪ್ರತಿದಿನ ನಮ್ಮ ಕೊಠಡಿಗಳಿಗೆ ಸದ್ದು ಗದ್ದಲವಿಲ್ಲದೆ ಪೂರ್ವಸೂಚನೆ ನೀಡದೆ ಬಂದು ಸಂಪಾದನೆಯ ವೇಳೆ ಎದುರಾಗುತ್ತಿದ್ದ ಸಮಸ್ಯೆಗಳನ್ನು ಪರಿಹರಿಸುತ್ತಿದ್ದರು. ನಮ್ಮದೊಂದು ಸುಸಂಘಟಿತ ಸ್ವರಮೇಳ, ಸಂಪಾದಕವರ್ಗದ ನಾವು ಬಿಡಿ ಕಲಾವಿದರು, ಕನ್ನಡ ವಿಶ್ವಕೋಶ ಎಂಬ ಘನ ಸಂಗೀತಕೃತಿಯನ್ನು ಒಟ್ಟಾಗಿ ಹಾಡುತ್ತಿದ್ದೆವು. ಮೇಳನಾಯಕರು ದೇಜಗೌ.

ಒಮ್ಮೆ ನನಗೊಂದು ಗುರುತರ ಸಮಸ್ಯೆ ಎದುರಾಯಿತು: ಅತಿಶೀತಶಾಸ್ತ್ರ (croygenics) ಕುರಿತ ಲೇಖನದ ಸಂಪಾದನೆ. ಇದನ್ನು ಬರೆದವರು ಬಲು ಹಿರಿಯ (ಆಗ ನಿವೃತ್ತ) ಭೌತವಿಜ್ಞಾನ ಪ್ರಾಧ್ಯಾಪಕ–ಸಂಶೋಧಕರು, ವಿಶ್ವಕೋಶ ಯೋಜನೆ ಸರಕಾರದ ಅಧೀನದಲ್ಲಿದ್ದಾಗ ನೇಮಿಸಿದ್ದ ಭೌತವಿಜ್ಞಾನ ಉಪಸಮಿತಿಯ ಅಧ್ಯಕ್ಷರಾಗಿದ್ದವರು. ಎಲ್ಲ ಸರಿ, ಲೇಖನ ಮಾತ್ರ ಕಾಲೇಜ್ ತರಗತಿಯೊಂದಕ್ಕೆ ಪಾಠಮಾಡಿ ಬರೆಸಿದ ಟಿಪ್ಪಣಿಯ ಶೈಲಿಯಲ್ಲಿತ್ತು, ವೃಥಾ ಲಂಬಿತವಾಗಿತ್ತು, ಎಲ್ಲಕ್ಕೂ ಮಿಗಿಲಾಗಿ ಸುಮಾರು ೧೯೪೫ರಿಂದೀಚೆಗೆ ಈ ಕ್ಷೇತ್ರದಲ್ಲಾಗಿದ್ದ ಅಗಾಧ ಆವಿಷ್ಕಾರಗಳ ಬಗೆ ಇದರಲ್ಲಿ ಉಲ್ಲೇಖನವೇ ಇರಲಿಲ್ಲ. ಭೌತವಿಜ್ಞಾನದ ವಿದ್ಯಾರ್ಥಿಯಲ್ಲದ ನಾನು ಇದನ್ನು ಸಂಪಾದಿಸಲು ಶಕ್ತನಲ್ಲ ಎಂದೆನಿಸಿದ್ದರಿಂದ ನನ್ನ ಸಮಸ್ಯೆಯನ್ನು ದೇಜಗೌರ ಮುಂದಿಟ್ಟೆ. ಒಡನೆ ಅವರು ನನ್ನನ್ನು ವಿಶ್ವವಿದ್ಯಾನಿಲಯದ ಭೌತವಿಜ್ಞಾನ ಮುಖ್ಯಸ್ಥ ಎಸ್. ಚಂದ್ರಶೇಖರ್‌ರಲ್ಲಿಗೆ ಕರೆದೊಯ್ದರು. ಇವರಿಗೆ ಕನ್ನಡ ಓದಲು ಬರುತ್ತಿರಲಿಲ್ಲ. ಇವರು ನನ್ನ ಸಮಸ್ಯೆಯನ್ನು ಅರ್ಥಮಾಡಿಕೊಂಡು ತಮ್ಮ ಸಹೋದ್ಯೋಗಿ ಸಿ.ಕೆ ವೆಂಕಟನರಸಿಂಹಯ್ಯನವರಲ್ಲಿಗೆ ಕಳಿಸಿದರು. "ಹಾಗಾದರೆ ದಯವಿಟ್ಟು ನೀವೇ ಈ ಲೇಖನವನ್ನು ಯುಕ್ತವಾಗಿ ತಿದ್ದಿ, ಸಂಕ್ಷೇಪಿಸಿ, ನೇರ್ಪುಗೊಳಿಸಿ ನನಗೆ ಕೊಡಿ" ಎಂದೆ.

"ಹಾಗೆ ಮಾಡುವುದು ಗುರುದ್ರೋಹವಾದೀತು. ಏಕೆಂದರೆ ಈ ಲೇಖಕರು ನನಗೆ ಗುರುಗಳಾಗಿದ್ದವರು, ಮಹಾ ಕೋಪಿಷ್ಠ ಕೂಡ."

"ಚಿಂತೆ ಬೇಡ, ನಾನೇ ಆ ಹೊಣೆ ಹೊರುತ್ತೇನೆ. ಆದರೆ ಸಂಪಾದನ ಕಾರ್ಯ ನೀವು ಮಾಡಿಕೊಡಬೇಕು" ಎಂದು ಅಂಗಲಾಚಿದೆ. ಆದರೆ ಸಿಕೆವಿ ಒಪ್ಪಲಿಲ್ಲ. "ನಿಮ್ಮ ಮುಜಗರ ನನಗೆ ಅರ್ಥವಾಗುತ್ತದೆ. ಈಗ ನಾನೇ ಈ ಲೇಖನವನ್ನು ಸಂಪಾದಿಸಿ, ಸಂಸ್ಕರಿಸಿ, ಆಧುನೀಕರಿಸಿ ನಿಮಗೊಪ್ಪಿಸುತ್ತೇನೆ. ನನ್ನ ಈ ಕೆಲಸದಲ್ಲಿ ನುಸುಳಿರಬಹುದಾದ ಅಸ್ಪಷ್ಟತೆ, ಅಸಂಪೂರ್ಣತೆ, ತಪ್ಪು ವಿವರಣೆ ಮುಂತಾದವನ್ನು ನೀವು ತಿದ್ದಿ ಕೊಡಬೇಕು" ಎಂದೆ, ಒಪ್ಪಿದರು. ಹೀಗೆ ಪುಟಪಾಕಗೊಂಡ ಆ ಲೇಖನ ಒಂದನೆಯ ಸಂಪುಟದಲ್ಲಿ ಪ್ರಕಟಣೆಗೂ ಹೋಯಿತು.

೧೯೬೯ ಕರ್ನಾಟಕ ರಾಜ್ಯೋತ್ಸವ ದಿನದಂದು (ನವಂಬರ್ ೧) ದೇಜಗೌ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ನೇಮನಗೊಂಡಿದ್ದರು. ಸಹಜವಾಗಿ ವಿಶ್ವಕೋಶದಲ್ಲಿಯ ನಮಗೆಲ್ಲ ಅಂದು ಅತಿ ಸಂಭ್ರಮದ ದಿನ ಕೂಡ. ಅಂದಿನಿಂದ ಅಧ್ಯಯನ ಸಂಸ್ಥೆಯ ನಿರ್ದೇಶಕ ಮತ್ತು ವಿಶ್ವಕೋಶದ ಪ್ರಧಾನ ಸಂಪಾದಕರು ಹಾ.ಮಾ ನಾಯಕ. ಕುಲಪತಿ ದೇಜಗೌ ಗೌರವ ಪ್ರಧಾನ ಸಂಪಾದಕರಾಗಿರಲು ಸಮ್ಮತಿಸಿದರು. ಈ ವೇಳೆಗೆ ಮೊದಲನೆಯ

ಸಂಪುಟದ ಮುದ್ರಣ ಮುಗಿದಿದ್ದು ಅನಾವರಣಕ್ಕೆ ಸಿದ್ಧವಾಗಿತ್ತು. ಹೀಗೆ ವಿಶ್ವಕೋಶದಲ್ಲಿಯ ನಮಗೆಲ್ಲ ಇದೊಂದು ಮುಪ್ಪುರಿ ಶ್ರಾಯದ ಸಂತಸ: ರಾಜ್ಯೋತ್ಸವ ಮಾಸ, ಕುಲಪತಿ ದೇಜಗೌ ಅವರ ಸಮ್ಮುಖದಲ್ಲಿ ವಿಶ್ವಕೋಶದ ಅನಾವರಣ, ಮತ್ತು ನಮ್ಮ ಸುಸಂಘಟಿತ ಪ್ರಯತ್ನದ ಪ್ರಥಮ ಯಶಸ್ಸು.

ಕನ್ನಡ ವಿಶ್ವಕೋಶದ ಪ್ರಥಮ ಸಂಪುಟ
ಅಧ್ಯಾಯ ಎಪ್ಪತ್ತು

ಇದನ್ನು ನವಂಬರ್ ೨೧, ೧೯೬೯ರಂದು ಲೋಕಾರ್ಪಣೆಗೈಯಲಾಯಿತು. ಇದರ 'ಪೀಠಿಕೆ'ಯಲ್ಲಿ ಕುಲಪತಿ ದೇಜಗೌ ಬರೆದಿರುವ ಮಾತು: "ಆಧುನಿಕ ಯುಗದ ನಾಗರಿಕ ಮಾನವ ಹೊಂದಿರಬೇಕಾದ ಮೂಲಭೂತ ಅಗತ್ಯಗಳಲ್ಲಿ ವಿಶ್ವಕೋಶವೂ ಒಂದು, ದಿನೇ ದಿನೇ ಸಹಸ್ರಾರು ಶಾಖೆಗಳ ಮೂಲಕ ಅನಂತವಾಗಿ ವಿಕಾಸಗೊಳ್ಳುತ್ತಿರುವ ಜ್ಞಾನವಿಜ್ಞಾನಗಳನ್ನು ಗ್ರಹಿಸುವುದಾಗಲೀ ಸಂಗ್ರಹಿಸುವುದಾಗಲೀ ಒಬ್ಬ ವ್ಯಕ್ತಿಗೆ ಸಾಧ್ಯವಾಗದು. ಎಲ್ಲ ಶಾಖೆಗಳ ಸರ್ವಂಕಷ ಜ್ಞಾನವಲ್ಲದಿದ್ದರೂ ಸಾಮಾನ್ಯ ಜ್ಞಾನ ಈ ಕಾಲದ ಪ್ರತಿಯೊಬ್ಬ ನಾಗರಿಕ ವ್ಯಕ್ತಿಗೂ ಬೋಧಕನಿಗೂ ಅತ್ಯವಶ್ಯ. ವಿಶ್ವಕೋಶ ಸಮಕಾಲೀನ ಜೀವನದ ಪ್ರತಿಬಿಂಬವಾಗಿ, ರಾಷ್ಟ್ರೀಯ ಸಂಸ್ಕೃತಿಯ ವಾಹಕವಾಗಿ, ವಿಜ್ಞಾನ ಸಾಹಿತ್ಯದ ಮುಂಗೋಳಿಯಾಗಿ, ಜ್ಞಾನವಿಜ್ಞಾನಗಳ ಬಟ್ಟಿಯಿಳಿಸಿದ ಸಾರಸಂಗ್ರಹವಾಗಿ, ಜ್ಞಾನಪ್ರಕಾರ ಮಾಧ್ಯಮವಾಗಿ, ನಿರ್ದುಷ್ಟವಾಗಿ, ನಿಖರವಾಗಿ, ಸುಲಭಗ್ರಾಹ್ಯವಾಗಿ, ಸಂದರ್ಭಗ್ರಂಥವಾಗಿ ರಚನೆಗೊಂಡಾಗ ಅದೇ ಒಂದು ವಿಶ್ವವಿದ್ಯಾಲಯವಾಗಿ ಶ್ರೇಷ್ಠ ಗ್ರಂಥಭಂಡಾರವಾಗಿ ಪರಿಣಮಿಸುತ್ತದೆ. ಇಡೀ ವಿಶ್ವವನ್ನೇ ಪ್ರತಿಫಲಿಸುವ ಈ ಕೋಶ ಸರ್ವರಿಗೂ ಅಕ್ಷಯನಿಧಿಯಾಗುತ್ತದೆ, ಕಾಮಧೇನುವಾಗುತ್ತದೆ, ಕಲ್ಪತರುವಾಗುತ್ತದೆ. ಅದು ಜನತೆಯ ಬುದ್ಧಿಪ್ರಾಗಲ್ಭ್ಯವನ್ನೂ ಜನಭಾಷೆಯ ಸಮರ್ಪಕತೆಯನ್ನೂ ತೋರಿಸುತ್ತದೆ.

"ಅರಿಸ್ಟಾಟಲನ ಕಾಲದಿಂದ ವಿಶ್ವಕೋಶದ ಕಲ್ಪನೆ ಇದ್ದಿರಬಹುದಾದರೂ ಅದು ಸ್ಪಷ್ಟವಾಗಿ ಸಾಕಾರತೆ ಪಡೆದದ್ದು ೧೭೬೮ರಲ್ಲಿ, ಎನ್‌ಸೈಕ್ಲೊಪೀಡಿಯಾ ಬ್ರಿಟಾನಿಕ ಪ್ರಕಟಗೊಂಡಾಗ. ಎರಡು ಮೂರು ದಶಕಗಳ ಹಿಂದೆಯೇ ಬಂಗಾಳಿ ಮತ್ತು ಮರಾಠಿ ವಿಶ್ವಕೋಶಗಳು ಪ್ರಕಟವಾದುವು. ಮೊನ್ನೆ ಮೊನ್ನೆ ತಾನೆ ತಮಿಳು ವಿಶ್ವಕೋಶ ಪ್ರಕಟವಾಯಿತು. ತೆಲುಗು, ಹಿಂದಿ ಮತ್ತು ಗುಜರಾತಿ ವಿಶ್ವಕೋಶಗಳು ತಯಾರಾಗುತ್ತಿವೆ. ಮಲಯಾಳಂ ವಿಶ್ವಕೋಶದ ರಚನೆ ಇದೇ ತಾನೆ ಪ್ರಾರಂಭವಾಗಿದೆ. ನಿಜಗುಣ ಶಿವಯೋಗಿಯವರ 'ವಿವೇಕ ಚಿಂತಾಮಣಿ' ರಚಿತವಾದಾಗಲೆ ಕನ್ನಡದಲ್ಲಿ ವಿಶ್ವಕೋಶದ ಇತಿಹಾಸ ಪ್ರಾರಂಭವಾಯಿತೆನ್ನಬಹುದು. ವೈಜ್ಞಾನಿಕ ರೀತಿಯಲ್ಲಿ ರಚಿತವಾಗಿರುವ ಶಿವರಾಮ ಕಾರಂತರ 'ಬಾಲಪ್ರಪಂಚ' (೧೯೩೬) ಮತ್ತು ಅವರ ವಿಜ್ಞಾನ ಪ್ರಪಂಚ (೧೯೫೯–೬೪) ಆ ಇತಿಹಾಸದ ಪ್ರಮುಖವಾದ ಮೈಲಿಗಲ್ಲುಗಳಾಗಿವೆ. ಈ ಎರಡು ವಿಶ್ವಕೋಶಗಳಿದ್ದರೂ ಇನ್ನೂ ವ್ಯಾಪಕವಾದ ವಿಶ್ವಕೋಶದ ಆವಶ್ಯಕತೆ ಇದ್ದೇ ಇದೆ. ೧೯೫೪ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಅಂದು ಕನ್ನಡ ಪ್ರಾಧ್ಯಾಪಕರಾಗಿದ್ದ ರಾಷ್ಟ್ರಕವಿ ಕೆ.ವಿ ಪುಟ್ಟಪ್ಪನವರ ಸಲಹೆಯ ಮೇರೆಗೆ, ವಿಶ್ವಕೋಶಕ್ಕೆ ಸಂಬಂಧಿಸಿದ ಯೋಜನೆಯನ್ನು ತಯಾರಿಸುವ ಸಲುವಾಗಿ ಅವರ ಅಧ್ಯಕ್ಷತೆಯಲ್ಲಿಯೇ ಒಂದು ಸಮಿತಿಯನ್ನು ನೇಮಿಸಿತು. ಪ್ರತಿಯೊಂದು ಸಂಪುಟದಲ್ಲಿಯೂ ಎಂಟು ನೂರು ಪುಟಗಳುಳ್ಳ ಹತ್ತು ಸಂಪುಟಗಳನ್ನು ಆರು ವರ್ಷಗಳ ಅವಧಿಯಲ್ಲಿ ತಯಾರುಮಾಡಬೇಕೆಂದೂ ಆ ಯೋಜನೆಗೆ ಹನ್ನೆರಡು ಲಕ್ಷ ರೂಪಾಯಿ ವೆಚ್ಚ ತಗಲುತ್ತದೆಂದೂ ಸಮಿತಿ ಶಿಫಾರಸು ಮಾಡಿತು. ಆ ಯೋಜನೆಯನ್ನು ವಿಶ್ವವಿದ್ಯಾನಿಲಯ ಸರ್ಕಾರಕ್ಕೆ ಕಳಿಸಿಕೊಟ್ಟು, ಅದಕ್ಕಾಗಿ ಸಲ್ಲುವ ಹಣವನ್ನು ಮಂಜೂರು ಮಾಡಿ ಕೊಡುವಂತೆ ಕೋರಿಕೆ ಸಲ್ಲಿಸಿತು. ಆಗ ಮುಖ್ಯಮಂತ್ರಿಗಳಾಗಿದ್ದ ಕೆ. ಹನುಮಂತಯ್ಯನವರು ವಿಶ್ವಕೋಶ ಯೋಜನೆಯ ಉಪಯುಕ್ತತೆಯನ್ನು ಮನಗಂಡು ಪರಿಶೀಲನೆಗಾಗಿ ಆ ಯೋಜನೆಯನ್ನು ವಿದ್ಯಾ ಇಲಾಖೆಗೆ ಒಪ್ಪಿಸಿದರು. ಅದು ಮುಂದೆ ಸಾಹಿತ್ಯ ಮತು ಸಂಸ್ಕೃತಿ ಅಭಿವೃದ್ಧಿ ಇಲಾಖೆಗೆ ವರ್ಗಾಂತರಗೊಂಡು ಎ.ಎನ್ ಮೂರ್ತಿರಾವ್ ಮತ್ತು ಕೆ.ಎಸ್ ಧರಣೇಂದ್ರಯ್ಯನವರ ನಿರ್ದೇಶನದಲ್ಲಿ ಅಂತಿಮ ರೂಪ ಪಡೆಯಿತು. ಪ್ರತಿಯೊಂದು ಸಂಪುಟವೂ ಒಂದು ಸಾವಿರ ಪುಟಗಳಿಂದ ಕೂಡಿದ್ದು ಹತ್ತು ಸಂಪುಟಗಳಲ್ಲಿ ವಿಶ್ವಕೋಶ ಪ್ರಕಟವಾಗತಕ್ಕದ್ದೆಂದೂ ಪ್ರತಿಯೊಂದು ಸಂಪುಟದ ಐದು ಸಾವಿರ ಪ್ರತಿಗಳನ್ನು ಮುದ್ರಿಸತಕ್ಕದ್ದೆಂದೂ ಅದಕ್ಕೆ ಸುಮಾರು ಹದಿನಾರು ಲಕ್ಷ ರೂಪಾಯಿ ವೆಚ್ಚವಾಗುತ್ತದೆಂದೂ ಕೊನೆಯದಾಗಿ ಅಂದಾಜು ಮಾಡಲಾಯಿತು. ಈ ಅಂತಿಮ ಯೋಜನೆಯನ್ನು ಸರ್ಕಾರ ಒಪ್ಪಿಕೊಂಡು ಅದರ ನಿರ್ವಹಣೆಗಾಗಿ ಒಂದು ಸಂಪಾದಕ ಸಮಿತಿಯನ್ನು ನೇಮಿಸಿತು. ಸಂಪಾದಕ ಸಮಿತಿ ಮೂರು ಬಾರಿ ಸಭೆ ಸೇರಿ, ೩೩ ವಿಷಯಗಳಿಗೆ ಸಂಬಂಧಿಸಿದ ಉಪಸಮಿತಿಗಳನ್ನು ನೇಮಿಸಿ, ಆ ಸಮಿತಿಗಳ ಸಹಾಯದಿಂದ ೩೦,೦೦೦ ಶೀರ್ಷಿಕೆಗಳು ವಿಶ್ವಕೋಶದ ಹತ್ತು ಸಂಪುಟಗಳಲ್ಲಿ ಸೇರ್ಪಡೆಯಾಗಬೇಕೆಂದೂ ಒಂದೊಂದು ಶೀರ್ಷಿಕೆಗೂ ಇಷ್ಟಿಷ್ಟು

ಸ್ಥಳಾವಕಾಶವಿರಬೇಕೆಂದೂ ತೀರ್ಮಾನಿಸಿ, ಲೇಖಕರಿಗೆ ಸಲ್ಲಬೇಕಾದ ಸಂಭಾವನೆಯನ್ನು ನಿಗದಿಗೊಳಿಸಿ, ಪುನರ್ವಿಮರ್ಶಿತ ಅಂದಾಜು ಇಪ್ಪತ್ತೈದು ಲಕ್ಷ ರೂಪಾಯಿ ಆಗುತ್ತದೆಂದು ಸರ್ಕಾರಕ್ಕೆ ತಿಳಿಸಿತು. ಪುನರ್ವಿಮರ್ಶಿತ ಯೋಜನೆ ೧೯೬೪ರ ಜೂನ್ ತಿಂಗಳಲ್ಲಿ ಸರ್ಕಾರದಿಂದ ಮಂಜುರಾತಿ ಪಡೆಯಿತು. ಆ ಯೋಜನೆಯ ಸ್ಥೂಲ ವಿವರಗಳು ಹೀಗಿವೆ:

(ಅ) ವಿಶ್ವಕೋಶದ ಗಾತ್ರ, ಆಕಾರ ಇತ್ಯಾದಿ: ೧. ವಿಶ್ವಕೋಶದ ಲೇಖನಗಳು ಅಕಾರಾದಿಯಾಗಿರಬೇಕು ೨. ಆಕಾರ: ಡೆಮಿ, ಚೌದಳ ೩. ಸಾವಿರ ಪುಟಗಳ ೧೨ ಸಂಪುಟಗಳು ೪. ೧೦ ಪಾಯಿಂಟಿನ ಮೊಳೆ ೫. ಶೀರ್ಷಿಕೆಗಳು: ಸುಮಾರು ೩೦,೦೦೦ ೬. ಸಾಕಷ್ಟು ರೇಖಾ ಹಾಗೂ ವರ್ಣ ಚಿತ್ರಗಳು ೭. ಪ್ರತಿಗಳ ಸಂಖ್ಯೆ ೫,೦೦೦ ೮. ಒಟ್ಟು ಅಂದಾಜು ಖರ್ಚು ರೂ ೨೫,೦೦,೦೦೦ ೯. ಕಾಲಾವಕಾಶ ೧೯೫೭ನೆಯ ಇಸವಿಯಿಂದ ಹತ್ತು ವರ್ಷ ೧೦. ಬೆಲೆ ರೂ ೨೫೦.

(ಆ) ವಿಶ್ವಕೋಶದ ರೂಪರೇಖೆಗಳು: ೧. ಇದು ಸಾಮಾನ್ಯ ಜನರಿಗೂ ವಿದ್ವಾಂಸರಿಗೂ ಉಪಯುಕ್ತವಾದ ಸಂದರ್ಭ ಗ್ರಂಥವಾಗಬೇಕು. ಲೇಖನಗಳು ಚಿಕ್ಕದಾಗಿ, ಚೊಕ್ಕದಾಗಿರಬೇಕು. ಭಾಷೆ ಸರಳವಾಗಿರಬೇಕು. ಲೇಖನಗಳಲ್ಲಿ ಬರುವ ಸಂಗತಿಗಳು ನಿಖರವಾಗಿಯೂ ವಾಸ್ತವವಾಗಿಯೂ ಅತ್ಯಂತ ಆಧುನಿಕವಾಗಿಯೂ ಇರಬೇಕು. ಆವಶ್ಯಕವಾದೆಡೆಯಲ್ಲೆಲ್ಲ ವಿಜ್ಞಾನವಿಷಯಗಳಿಗೆ ಅಂತಾರಾಷ್ಟ್ರೀಯ ಶಬ್ದಗಳನ್ನೇ ಬಳಸಬೇಕು. ಭರತ ಖಂಡದಲ್ಲೆಲ್ಲ ಸರ್ವೇಸಾಮಾನ್ಯವಾಗಿ ಅಂಗೀಕೃತವಾಗಿರುವ ಮಾತುಗಳನ್ನು ಸ್ವೀಕರಿಸಬಹುದು. ಪರಿಭಾಷಾಕೋಶದಲ್ಲಿ ಸಮರೂಪತೆಯನ್ನು ಸಾಧಿಸುವುದಕ್ಕಾಗಿ ಒಂದು ಸಂಘಟನಾ ಸಮಿತಿಯಿರುತ್ತದೆ.

೨. ಪಾಶ್ಚಾತ್ಯ ದೇಶಗಳಲ್ಲಿ ಸಿದ್ಧವಾಗಿರುವ ವಿಶ್ವಕೋಶಗಳು ಸಾಮಾನ್ಯವಾಗಿ ಪಾಶ್ಚಾತ್ಯ ವಿಷಯಗಳಿಗೆ ಹೆಚ್ಚು ಪ್ರಾಶಸ್ತ್ಯ ನೀಡುತ್ತವೆ. ಆದರೆ ಕನ್ನಡ ವಿಶ್ವಕೋಶ ಅನುಕ್ರಮವಾಗಿ ಕರ್ಣಾಟಕ, ದಕ್ಷಿಣ ಭಾರತ, ಭಾರತ, ಏಷ್ಯ ಮತ್ತು ಪ್ರಪಂಚದ ಇತರ ದೇಶಗಳಿಗೆ ಸಂಬಂಧಿಸಿದ ವಿಷಯಗಳಿಗೆ ಉಚಿತವರಿತು ಪ್ರಾಶಸ್ತ್ಯ ನೀಡುತ್ತದೆ. ಎನ್‌ಸೈಕ್ಲೊಪೀಡಿಯ ಬ್ರಿಟಾನಿಕದಲ್ಲಾಗಲೀ ಅಥವಾ ಇತರ ಅಧಿಕೃತ ವಿಶ್ವಕೋಶದಲ್ಲಾಗಲೀ ಉಲ್ಲೇಖಿತವಾಗಿರುವ ಮುಖ್ಯ ಸಂಗತಿಗಳನ್ನು ಯಾವ ಕಾರಣದಿಂದಲೂ ಬಿಡಕೂಡದು. ಕರ್ಣಾಟಕಕ್ಕೆ ಸಂಬಂಧಿಸಿದ ವಿಷಯಗಳು ಸಾಕಷ್ಟು ಸಮಗ್ರವಾಗಿಯೂ ಸಮರ್ಪಕವಾಗಿಯೂ ನಿರೂಪಣೆಗೊಳ್ಳಬೇಕು.

೩. ವೈಜ್ಞಾನಿಕ, ಮಾನವಿಕ ಹಾಗೂ ತಾಂತ್ರಿಕ ಕ್ಷೇತ್ರಗಳಿಗೆ ಸಂಬಂಧಿಸಿದ ಮುಖ್ಯ ಸಂಗತಿಗಳು ಕನ್ನಡ ವಿಶ್ವಕೋಶದಲ್ಲಿ ಸೇರ್ಪಡೆಯಾಗುತ್ತವೆ, ನಿಜ. ಜಾಗತಿಕ ದೃಷ್ಟಿಯಿಂದ ಪ್ರಮುಖವಲ್ಲದ ದೊರೆಗಳ, ಸೇನಾಧಿಪತಿಗಳ ಮತ್ತು ರಾಜನೀತಿ ಧುರೀಣರ ಹೆಸರುಗಳನ್ನು ಬಿಡಬೇಕಾಗುತ್ತದೆ. ಭರತಖಂಡದ ಇತಿಹಾಸದಲ್ಲಿ ಬರುವ ಹೆಸರುಗಳನ್ನು ಬಹುತೇಕವಾಗಿ ಉಳಿಸಿಕೊಳ್ಳಲಾಗುತ್ತದೆ. ನ್ಯೂಯಾರ್ಕ್, ಲಂಡನ್, ಆಕ್ಸಫರ್ಡ್, ಕೊಲಂಬಿಯ, ರೋಮ್ ಮೊದಲಾದ ದೊಡ್ಡ ಪಟ್ಟಣಗಳ ಹಾಗೂ ಪ್ರಸಿದ್ಧ ಸ್ಥಳಗಳ ವಿವರ ಅತ್ಯಗತ್ಯ. ಆಂಗ್ಲ ವಿಶ್ವಕೋಶಗಳಲ್ಲಿ ಒಂದೆರಡು ವಾಕ್ಯಗಳಲ್ಲಿಯೇ ಮುಕ್ತಾಯವಾಗಿರುವ ಪಟ್ಟಣಗಳ ವಿಷಯವನ್ನು ಕೈಬಿಡಬಹುದು. ಆದರೆ ಪ್ರತಿಯೊಂದು ರಾಷ್ಟ್ರದ ಭೌಗೋಳಿಕ ಮತ್ತು ಚಾರಿತ್ರಿಕ ವಿಷಯಗಳನ್ನು ವಿವರವಾಗಿ ತಿಳಿಸಬೇಕಾಗುತ್ತದೆ. ಪಾಶ್ಚಾತ್ಯ ದೇಶಗಳಿಗೆ ಸಂಬಂಧಿಸಿದ ವಿಷಯಗಳು ಆಂಗ್ಲ ವಿಶ್ವಕೋಶಗಳಲ್ಲಿ ವಿಪುಲವಾಗಿ ದೊರೆಯುತ್ತವೆ. ಆದರೆ ಕರ್ಣಾಟಕ ಮತ್ತು ಭರತಖಂಡಕ್ಕೆ ಸಂಬಂಧಿಸಿದ ವಿಷಯಗಳನ್ನು ತುಂಬ ಶ್ರಮವಹಿಸಿಯೇ ಸಂಪಾದಿಸಬೇಕಾಗುತ್ತದೆ.

೪. ವಿಷಯಸೂಚಿ, ಲೇಖಕ ಸೂಚಿ ಮತ್ತು ಚಿತ್ರ ಸೂಚಿಗಳನ್ನು ತಯಾರಿಸಬೇಕಾಗುತ್ತದೆ.

"೧೯೫೬ರಿಂದ ೧೯೬೮ರವರೆಗೆ ವಿಶ್ವಕೋಶದ ಪ್ರಾಥಮಿಕ ಕಾರ್ಯಗಳು ಮಂದಗತಿಯಿಂದ ಸಾಗುತ್ತಿದ್ದುವು. ಈ ನಡುವೆ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ ವಿದ್ಯಾ ಇಲಾಖೆಯ ಅಂಗವಾಯಿತು. ಇಬ್ಬರು ಮೂವರು ವ್ಯಕ್ತಿಗಳು ವಿಶೇಷಾಧಿಕಾರಿಗಳಾಗಿ ನೇಮಕಗೊಂಡರು. ಹಿಂದಿನ ಸಂಪಾದಕ ಸಮಿತಿ ವಿಸರ್ಜನೆಯಾಗಿ ಮತ್ತೊಂದು ಸಂಪಾದಕ ಸಮಿತಿ ನೇಮಕವಾಯಿತು. ಅದರ ಜೊತೆಗೆ ಒಂದು ಸಂಘಟನಾಸಮಿತಿಯೂ ವ್ಯವಸ್ಥೆಗೊಂಡಿತು. ಸುಮಾರು ೬೦೦ ಲೇಖನಗಳು ಸಂಗ್ರಹಗೊಂಡುವು. ಆದರೂ ವಿಶ್ವಕೋಶದ ಪ್ರಥಮ ಸಂಪುಟ ಬೇಗನೆ ಹೊರಬರುವ ಲಕ್ಷಣ ಕಾಣಲಿಲ್ಲ. ವಿಶ್ವಕೋಶದ ಶೀಘ್ರ ಪ್ರಕಟಣೆಯಲ್ಲಿ ತುಂಬ ಆಸಕ್ತವಾಗಿದ್ದ ಸರ್ಕಾರ ಅದರ ಮಂದಗತಿಯನ್ನು ತೀವ್ರವಾಗಿ ಗಮನಿಸಿ, ಕೂಲಂಕಷವಾಗಿ ಪರ್ಯಾಲೋಚಿಸಿ, ಈ ಮಹತ್ತ್ವಪೂರ್ಣವೂ ಜವಾಬ್ದಾರಿಯುತವೂ ಆದ ಕಾರ್ಯವನ್ನು ವಿಶೇಷಾನುಕೂಲಗಳನ್ನು ಹೊಂದಿರುವ ಮೈಸೂರು ವಿಶ್ವವಿದ್ಯಾನಿಲಯಕ್ಕೆ ವಹಿಸುವುದು ಯುಕ್ತವೆಂದು ತೀರ್ಮಾನಿಸಿ, ೧೯೬೮ನೆಯ ವರ್ಷದ ಮಾರ್ಚಿ ತಿಂಗಳ ಅಂತ್ಯದಲ್ಲಿ ವರ್ಗಾವಣೆಯ ಆದೇಶವನ್ನು ಹೊರಡಿಸಿತು. ಆ ಆದೇಶದ ಮೇರೆಗೆ ವಿಶ್ವಕೋಶದ ಕಚೇರಿ ಮೇ ತಿಂಗಳ ಮೊದಲ ವಾರದಲ್ಲಿ ಮಾನಸಗಂಗೋತ್ರಿಯ ಕನ್ನಡ

ಅಧ್ಯಯನ ಸಂಸ್ಥೆಗೆ ವರ್ಗಾವಣೆಗೊಂಡಿತು. ಅದು ಅಂಕುರಾರ್ಪಣೆಗೊಂಡ ಜಾಗದಲ್ಲಿಯೇ ಮತ್ತೆ ನಾಟಿಗೊಂಡದ್ದು ಔಚಿತ್ಯದ ಹಾಗೂ ಸಂತೋಷದ ಸಂಗತಿಯಾಗಿದೆ.

"ಮೇ ತಿಂಗಳ ಮಧ್ಯಭಾಗದಲ್ಲಿ ವಿಶ್ವಕೋಶದ ಕೆಲಸ ಪ್ರಾರಂಭವಾಯಿತು. ವಿಶ್ವವಿದ್ಯಾನಿಲಯ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರನ್ನು ಪ್ರಧಾನ ಸಂಪಾದಕರಾಗಿ ನೇಮಿಸಿ, ಅವರ ಸಲಹೆಯ ಮೇರೆಗೆ ನೂತನ ಸಂಪಾದಕ ಮಂಡಳಿಯನ್ನು ನೇಮಿಸಿತು. ಸಂಪಾದಕ ಮಂಡಳಿಯ ಸಭೆ ಮೂರು ಬಾರಿ ಸಮಾವೇಶಗೊಂಡು ಹಿಂದೆ ನಡೆದಿದ್ದ ಕೆಲಸವನ್ನೆಲ್ಲ ಪುನಃ ಪರಿಶೀಲಿಸಿ, ಪರಿಣತರ ನೆರವನ್ನು ಪಡೆಯಲನುಕೂಲವಾಗುವಂತೆ ಕೆಲವು ನಿರ್ಣಯಗಳನ್ನು ಕೈಗೊಂಡಿತು. ಕಚೇರಿಯ ಸಿಬ್ಬಂದಿವರ್ಗವನ್ನು ಪುನಃ ಪರಿಶೀಲಿಸಲಾಯಿತು; ಹೊಸ ಸಂಪಾದಕವರ್ಗವನ್ನು ನಿಯೋಜಿಸಲಾಯಿತು. ಸರ್ಕಾರ ಕೃಪೆಯಿಟ್ಟು ಇಬ್ಬರು ವಿದ್ವಾಂಸರನ್ನು ವಿಶ್ವಕೋಶದ ಕಚೇರಿಗೆ ಎರವು ನೀಡಿತು. ಇಷ್ಟೆಲ್ಲ ಪ್ರಾಥಮಿಕ ಕಾರ್ಯ ಮುಗಿಯುವ ಹೊತ್ತಿಗೆ ಹೆಚ್ಚು ಕಡಿಮೆ ಒಂದು ವರ್ಷವೇ ಕಳೆಯಿತು.

"ಸಂಪಾದಕವರ್ಗ ನೇಮಕಗೊಂಡ ಅನಂತರ ಹಿಂದಿನ ಶೀರ್ಷಿಕೆಗಳ ಪಟ್ಟಿಯನ್ನು ಪರಿಶೀಲಿಸಿ, ನಾಲ್ಕು ಸಾವಿರಕ್ಕೂ ಮೇಲ್ಪಟ್ಟು ಹೊಸ ಶೀರ್ಷಿಕೆಗಳನ್ನು ಸೇರಿಸಲಾಯಿತು. ಹಿಂದಿನ ಉಪಸಮಿತಿಗಳ ಜೊತೆಗೆ ಕೆಲವು ಹೊಸ ಉಪಸಮಿತಿಗಳನ್ನು ಜೋಡಿಸಲಾಯಿತು. ಪ್ರಥಮ ಸಂಪುಟದಲ್ಲಿ ಸೇರ್ಪಡೆಯಾಗಿರುವ ಸುಮಾರು ೧೫೦೦ ಲೇಖನಗಳನ್ನು ಯುಕ್ತ ಕಂಡೆಡೆ ತಿದ್ದಿ, ಪುನರ್ಲೇಖಿಸಿ, ಪರಿಷ್ಕರಿಸಿ, ಸಂಪಾದಿಸಿ ಅಚ್ಚಿಗೆ ಸಿದ್ಧಪಡಿಸಲಾಯಿತು.

"ಸಂಪಾದಕವರ್ಗ ವಾರಕ್ಕೊ ಪಕ್ಷಕ್ಕೊ ಒಮ್ಮೆ ಸಭೆ ಸೇರಿ ಲೇಖನ ಸಂಗ್ರಹ, ಸಂಪಾದನೆ ಹಾಗೂ ಪರಿಷ್ಕರಣ ಕಾರ್ಯದಲ್ಲಿ ಎದುರಾಗುವ ಸಮಸ್ಯೆಗಳನ್ನು ಚರ್ಚಿಸುತ್ತದೆ. ಸಂಪಾದಕರ ಉಪಸಮಿತಿಯ ಚರ್ಚೆಯಲ್ಲಿ ಸಿದ್ಧಗೊಂಡ ನಿರ್ಣಯಗಳನ್ನು ಆಗಾಗಲೇ ಸಂಪಾದಕ ಮಂಡಳಿಯ ಅವಗಾಹನೆಗೂ ಅಂಗೀಕಾರಕ್ಕೂ ಕಳುಸಿಸಲಾಗುತ್ತದೆ. ಹೀಗೆ ಅಂಗೀಕೃತವಾಗದ ನಿರ್ಣಯಗಳನ್ನು ವಿಶ್ವಕೋಶದ ಬಳಕೆದಾರರಿಗೂ ಅನುಕೂಲವಾಗುವಂತೆ ಕೆಳಗೆ ಕೊಟ್ಟಿದೆ:

೧. ಸಾಮಾನ್ಯವಾಗಿ ಪ್ರತಿ ಶೀರ್ಷಿಕೆಯ ಮೊದಲವಾಕ್ಯ ಶೀರ್ಷಿಕೆಯ ವ್ಯಾಖ್ಯೆಯನ್ನೊಳಗೊಂಡಿರುತ್ತದೆ. ಅದರ ವಿವರಣೆ ಅದನ್ನು ಹಿಂಬಾಲಿಸುತ್ತದೆ. ಪಾರಿಭಾಷಿಕ ಶಬ್ದಗಳನ್ನು ಬಳಸುವಾಗ ಆಯಾ ಶೀರ್ಷಿಕೆಯ ಮೊದಲ ವಾಕ್ಯದ ಕೊನೆಯಲ್ಲಿ ಮೂಲ ಪದವನ್ನು ಕನ್ನಡದಲ್ಲಿ ಲಿಪ್ಯಂತರಿಸಿದೆ. ಕೆಲವು ಕಡೆ ಸೌಲಭ್ಯ ಹಾಗೂ ಸ್ಪಷ್ಟತೆಗಾಗಿ ಪದಗಳನ್ನು ಆವರಣ ಚಿಹ್ನೆಗಳೊಳಗೆ ರೋಮನ್ ಲಿಪಿಯಲ್ಲಿ ಬರೆದಿದೆ.

೨. ಪದೇ ಪದೇ ಉಪಯೋಗವಾಗುವ ಕೆಲವು ರೂಢಿಯ ಪದಗಳನ್ನು ಅವುಗಳ ಸಂಕೇತಾಕ್ಷರಗಳಿಂದ ನಿರ್ದೇಶಿಸಲಾಗಿದೆ. ಉದಾ: ಸೆಂಟಿಮೀಟರ್ – ಸೆಂಮೀ; ಕಿಲೊ ಮೀಟರ್ – ಕಿಮೀ; ಮೈಲಿ – ಮೈ; ಸುಮಾರು – ಸು; ವರ್ಷ – ವ ಇತ್ಯಾದಿ.

೩. ಪರಿಭಾಷೆಯನ್ನು ಕನ್ನಡೀಕರಿಸುವಾಗ ವಿಶ್ವಕೋಶದ ಸಂಯೋಜಕ ಸಮಿತಿ ಸಿದ್ಧಪಡಿಸಿರುವ ಪಟ್ಟೀಯನ್ನೂ ಭಾರತ ಸರ್ಕಾರ ತಯಾರಿಸಿರುವ ತಾಂತ್ರಿಕ ಶಬ್ದಕೋಶವನ್ನೂ ಮೈಸೂರು ಸರ್ಕಾರ ಪ್ರಕಟಿಸಿರುವ ಆಡಳಿತ ಶಬ್ದಕೋಶವನ್ನೂ ಜೊತೆಗೆ ಕನ್ನಡದ ನಾನಾ ಭಾಗಗಳಲ್ಲಿ ರೂಢಿಯಲ್ಲಿರುವ ಪದಗಳನ್ನೂ ಗಮನದಲ್ಲಿಟ್ಟುಕೊಂಡು ಯುಕ್ತರೀತಿಯಲ್ಲಿ ಬಳಸಿಕೊಂಡಿದೆ.

೪. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟನ್ನು ಮಾದರಿಯಾಗಿಟ್ಟುಕೊಂಡು ಶೀರ್ಷಿಕೆಗಳನ್ನು ಅಕಾರಾದಿಯಾಗಿ ಅಳವಡಿಸಲಾಗಿದೆ. ತಮ್ಮ ಲೇಖನಗಳಲ್ಲಿ ಲೇಖಕರು ಬಳಸಿರುವ ಪ್ರಾದೇಶಿಕ ಪರ್ಯಾಯ ಪದಗಳನ್ನು ಆದಷ್ಟು ಉಳಿಸಿಕೊಂಡು, ಉಳಿಸಿಕೊಳ್ಳಲಾಗದ ಪರ್ಯಾಯ ಪದಗಳನ್ನು ಅಡ್ಡಸೂಚಿಯಲ್ಲಿ ಕೊಟ್ಟಿದೆ. ಉದಾ: ಇಣಚಿ: ನೋಡಿ ಅಳಿಲು.

೫. ಲೇಖನಗಳನ್ನು ಸಂಪಾದಿಸುವಾಗ ಆಯಾ ಲೇಖಕರ ಭಾಷಾರೀತಿಯನ್ನು ಸಾಧ್ಯವಾದಷ್ಟು ಮಟ್ಟಿಗೆ ಇದ್ದಂತೆಯೇ ಉಳಿಸಿಕೊಂಡು, ವಿಶ್ವಕೋಶದ ಒಟ್ಟಾರೆ ರಚನೆ ಮತ್ತು ಸ್ವರೂಪಗಳಿಗೆ ಸಂಬಂಧಿಸಿದಂತೆ ಏಕರೂಪತೆಯನ್ನು ಸಾಧಿಸುವ ಸಲುವಾಗಿ ಮಾತ್ರ ಕನಿಷ್ಠ ಮಾರ್ಪಾಡುಗಳನ್ನು ಮಾಡಲಾಗಿದೆ. ಅನಾವಶ್ಯಕ ಪ್ರತ್ಯಯಗಳನ್ನು (ಉದಾ: ಉ, ಅನ್ನು, ಯಾಕೆ ಹೀಗಾಯಿತೆಂದರೆ ಇತ್ಯಾದಿ) ಮತ್ತು ಬೇಡವಾದ ಸಹಾಯಕ ಕ್ರಿಯಾಪದಗಳನ್ನೂ ಸರಳ ಹಾಗು ಸ್ಪಷ್ಟತೆಯ ದೃಷ್ಟಿಯಿಂದ ಕೈಬಿಡಲಾಗಿದೆ.

೬. ಇಸವಿಗಳನ್ನು ನಮೂದಿಸುವಾಗ ಕ್ರಿಸ್ತಪೂರ್ವವನ್ನು ಮಾತ್ರ ಉಳಿಸಿಕೊಂಡು ಕ್ರಿಸ್ತಶಕವನ್ನು ಕೈಬಿಡಲಾಗಿದೆ.

೭. ಆಯಾ ಶೀರ್ಷಿಕೆಗಳ ಕೆಳಗೆ ಅವಕ್ಕೆ ಸಂಬಂಧಿಸಿದ ವಿಷಯಗಳನ್ನು ಸ್ಪಷ್ಟಪಡಿಸಿದ್ದರೂ ಹೆಚ್ಚಿನ ವಿಷಯಗಳನ್ನು ತಿಳಿಯಲೆಳಸುವ ಓದುಗರಿಗೆ ಅನುಕೂಲವಾಗಲೆಂದು ಮೂಲ ವಿಷಯಗಳ ಕೊನೆಯಲ್ಲಿ ಅಡ್ಡಸೂಚಿಗಳನ್ನು ಕೊಡಲಾಗಿದೆ. ಒಂದೇ ವಿಷಯದ ಬಗ್ಗೆ ಬೇರೆ ಬೇರೆ ಶಾಖೆಗಳಿಗೆ ಸಂಬಂಧಿಸಿದ ಮೂರು ನಾಲ್ಕು ಮಂದಿ ಲೇಖಕರಿಂದ ಲೇಖನಗಳು ಬಂದಿದ್ದರೆ ಆ ಎಲ್ಲ ಲೇಖನಗಳಲ್ಲಿ ಉತ್ತಮವಾಗಿರುವ ಮುಖ್ಯಾಂಶಗಳನ್ನು ಒಂದು ಕಡೆ ಕ್ರೋಢೀಕರಿಸಲಾಗಿದೆ. ಲೇಖನದ ಕೊನೆಯಲ್ಲಿ ಅಷ್ಟು ಜನರ ಹೆಸರನ್ನೂ ಅಕಾರಾದಿಯಾಗಿ ಕೊಟ್ಟಿದೆ; ಇಲ್ಲವೇ ಅವರವರು ಬರೆದಿರುವ ವಿಷಯಗಳಷ್ಟಕ್ಕೆ ಅವರವರ ಹೆಸರನ್ನು ಆಯಾ ಲೇಖನ ಭಾಗದ ಕೊನೆಯಲ್ಲಿ ಕೊಟ್ಟಿದೆ. ಅಡಿಯಲ್ಲಿ ನಕ್ಷತ್ರ ಚಿಹ್ನೆ ಇರುವ ಲೇಖನಗಳು ಸಂಪಾದಕರು ಬರೆದವು. ಲೇಖಕರ ಹೆಸರುಗಳ ಸಂಕ್ಷಿಪ್ತ ರೂಪಗಳಿಗೆ ರೋಮನ್ ಲಿಪಿಯನ್ನೇ ಬಳಸಿದೆ.

೮. ಲೇಖಕರ ಸೂಚಿಪಟ್ಟಿಯ ಒತ್ತಿನಲ್ಲಿಯೇ ಚಿತ್ರಕಾರರ ಹೆಸರುಗಳನ್ನೂ ಅಕಾರಾದಿಯಾಗಿ ಕೊಟ್ಟಿದೆ. ಪುಟ ಸಂಖ್ಯೆ ಕನ್ನಡ ಅಂಕಿಗಳಲ್ಲಿಯೂ ಲೇಖನಗಳೊಳಗೆ ಬರುವ ಸಂಖ್ಯೆಗಳು ಅರಾಬಿಕ್ ಅಂಕಿಗಳಲ್ಲಿಯೂ ಇರುತ್ತವೆ.

೯. ಯೂನೋ, ಹು ಮತ್ತು ಇಕಾಫೆ ಮೊದಲಾದ ಸಂಕ್ಷೇಪ ನಾಮಗಳು ಅಂತಾರಾಷ್ಟ್ರೀಯವಾಗಿ ಅಂಗೀಕೃತವಾಗಿದ್ದರೂ ಮೂಲ ಸಂಕೇತಾಕ್ಷರಗಳನ್ನೇ ಬಿಡಿ ಬಿಡಿಯಾಗಿ ಬರೆದಿದೆ. (ಉದಾ: ಯುಎನ್ಓ)

೧೦.ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಏಕವಚನ ಹಾಗೂ ಬಹುವಚನಗಳನ್ನು ರೂಢಿಗನುಸಾರವಾಗಿ ಬಳಸಿದೆ. ಇಪ್ಪತ್ತನೆಯ ಶತಮಾನದ ವ್ಯಕ್ತಿಗಳಿಗೂ ಹಿಂದಿನ ಆಚಾರ್ಯಪುರುಷರಿಗೂ ಬಹುವಚನವನ್ನೇ ಬಳಸಿದೆ.

೧೧. ಸೆಂಟಿಗ್ರೇಡ್, ಗ್ರಾಂ, ಸೆಕೆಂಡ್ (CGS – ಮೆಟ್ರಿಕ್ ಮಾನ) ಮತ್ತು ಫುಟ್, ಪೌಂಡ್, ಸೆಕೆಂಡ್ (FPS – ಬ್ರಿಟಿಷ್ ಮಾನ) ಏಕಮಾನ ಪದ್ದತಿಗಳ ಪೈಕಿ ಮೊದಲನೆಯ ಪದ್ಧತಿಯನ್ನೇ ಇಲ್ಲಿ ಸ್ವೀಕರಿಸಿದೆ.

"ಕನ್ನಡ ಅಧ್ಯಯನ ಸಂಸ್ಥೆಯ ಆಶ್ರಯದಲ್ಲಿ ವಿಶ್ವಕೋಶದ ಕೆಲಸ ವಿಧಿವತ್ತಾಗಿ ನಡೆಯತೊಡಗಿದ್ದು ಕಳೆದ ಆರು ತಿಂಗಳಿಂದ. ನಮ್ಮ ಸಂಪಾದಕವರ್ಗ ಇದಕ್ಕಾಗಿ ತ್ರಿಕರಣಶುದ್ಧಿಯಾಗಿ ಅಹೋರಾತ್ರಿ ದುಡಿದಿದೆಯೆಂಬುದು ಅತಿಶಯೋಕ್ತಿಯಲ್ಲ. ಮೊದಲ ಸಂಪುಟದಲ್ಲಿ ಸೇರಬೇಕಾಗಿದ್ದ ಲೇಖನಗಳಲ್ಲಿ ಶೇಕಡಾ ಅರುವತ್ತರಷ್ಟು (ಅದಕ್ಕಿಂತಲೂ ಹೆಚ್ಚು) ಲೇಖನಗಳು ಬಂದಿರಲಿಲ್ಲ. ಅವುಗಳನ್ನು ಬರೆಸಿ, ಪರಿಷ್ಕರಿಸಿ, ಸಂಪಾದಿಸಿ ಈ ಮಹತ್ಕಾರ್ಯವನ್ನು ಆಗಗೊಳಿಸಿದ್ದಾರೆ. ಅನೇಕ ಲೇಖನಗಳನ್ನು ಸಂಪಾದಕವರ್ಗವೇ ಸಿದ್ಧಪಡಿಸಿದೆ. ಸೋಲರಿಯದ ಈ ದುಡಿಮೆಯಿಂದಾಗಿ ಇಂದು (೨೧–೧೧–೧೯೬೯) ಮೊದಲ ಸಂಪುಟ ಹೊರಬಂದಿದೆ. ಇಷ್ಟಾದರೂ ವಿಶ್ವಕೋಶದಲ್ಲಿ ಯಾವ ಅರಕೆ ಕೊರತೆಗಳೂ ಇಲ್ಲವೆಂದು ನಾನು ಹೇಳುತ್ತಿಲ್ಲ. ಮಾನವೀಯ ದೌರ್ಬಲ್ಯಗಳ ಫಲವಾಗಿ ಅಲ್ಲಲ್ಲಿ ದೋಷಗಳು ನುಸುಳಿರಬಹುದು, ಉಳಿದಿರಬಹುದು. ಆದರೆ ಪ್ರಜ್ಞಾಪೂರ್ವಕವಾಗಿ ಅಂಥವುಗಳಿಗೆ ಎಡೆಗೊಟ್ಟಿಲ್ಲವೆಂದು ಹೇಳಬಯಸುತ್ತೇನೆ. ದೋಷಗಳಿದ್ದರೆ ಆಶ್ಚರ್ಯಪಡಬೇಕಾಗಿಯೂ ಇಲ್ಲ. ದೋಷ ಸಮರ್ಥನೆಗಾಗಿ ನಾನು ಈ ಮಾತನ್ನು ಹೇಳುತ್ತಿಲ್ಲ. ಜಗತ್ತಿನ ಶ್ರೇಷ್ಠ ವಿಶ್ವಕೋಶವೆಂದು ಹೆಸರುಗಳಿಸಿರುವ ಎನ್‌ಸೈಕ್ಲೊಪೀಡಿಯ ಬ್ರಿಟಾನಿಕ ಕೂಡ ಇಂಥ ದೋಷಗಳಿಂದ ಮುಕ್ತವಾಗಿಲ್ಲವೆಂಬ ಸಂಗತಿಯನ್ನು ನಾವು ಗಮನಿಸಬಹುದಾಗಿದೆ. ಗೆಲಿಲಿಯೋ ಪಿಸಾದ ಓರೆಗೋಪುರದಲ್ಲಿ ನಡೆಸಿದನೆಂದು ಹೇಳಲಾದ ಪ್ರಯೋಗ ವಾಸ್ತವವಾಗಿ ನಡೆದೇ ಇರಲಿಲ್ಲವೆಂಬುದು ಪ್ರಮಾಣಭೂತವಾಗಿ ಸಿದ್ಧವಾಗಿ ಎರಡು ದಶಕಗಳು ಕಳೆದಿದ್ದರೂ ಬ್ರಿಟಾನಿಕದಲ್ಲಿ ಮಾತ್ರ ತಿದ್ದುಪಡಿಯಾಗಿಲ್ಲ. ಅಂತೆಯೇ ಕುರಿ, ಮೇಕೆಗಳನ್ನು ಷೇಕ್‌ಸ್ಪಿಯರ್ ಕದಿಯುತ್ತಿದ್ದನೆಂಬ ವಿಚಾರ ಅಸಂದಿಗ್ಧವಾಗಿ ಅಪ್ರಾಮಾಣಿಕವೆಂದು ಸಿದ್ಧವಾದರೂ ಬ್ರಿಟಾನಿಕದ ಪುನರ್ಮುದ್ರಣಗಳಲ್ಲಿ ಷೇಕ್‌ಸ್ಪಿಯರ್ ಕುರಿಗಳ್ಳನಾಗಿಯೇ ಉಳಿದಿದ್ದಾನೆ. ಜನಶ್ರುತಿಯ ಈ ವಿಚಾರಗಳನ್ನು ಬದಿಗಿರಿಸಿದರೂ ಉಷ್ಣ, ಬಾಷ್ಪೀಕರಣ ಮತ್ತು ಕಾಮ್ಟನ್ ಪ್ರಭಾವ ಮುಂತಾದ ವೈಜ್ಞಾನಿಕ ವಿಷಯಗಳಿಗೆ ಸಂಬಂಧಿಸಿದಂತೆಯೂ ದೋಷಗಳು ಉಳಿದುಕೊಂಡಿವೆಯೆಂಬುದನ್ನು ಹಾರ್ವೆ ಐಸ್ ಬೈಂಡರ್‌ಅವರು ತಮ್ಮ 'ದಿ ಮಿತ್ ಆಫ್ ದಿ ಬ್ರಿಟಾನಿಕ' ಎಂಬ ಗ್ರಂಥದಲ್ಲಿ ಉದಾಹರಿಸಿದ್ದಾರೆ. ನನ್ನ ಅಭಿಪ್ರಾಯ ಇಷ್ಟು: ಇಂಥ ಕೋಶದ ಕೆಲಸ ಒಂದು ಸಂಪುಟಕ್ಕೆ ಒಂದು ಮುದ್ರಣಕ್ಕೆ ಮುಗಿಯುವಂಥದೇ ಅಲ್ಲ. ಇದು ಅವಿಚ್ಛಿನ್ನವಾಗಿ ನಡೆಯಬೇಕಾದ ಶಾಶ್ವತ ಕಾರ್ಯ. ಮತ್ತೆ ಮತ್ತೆ ಅವುಗಳನ್ನು ಪರಿಷ್ಕರಿಸಬೇಕಾಗುತ್ತದೆ. ಎಲ್ಲ ವಿಷಯಗಳಿಗೆ ಸಂಬಂಧಿಸಿದ ಅತ್ಯಾಧುನಿಕ ವಿವರಗಳನ್ನು ಮುಂಬರುವ ಸಂಸ್ಕರಣಗಳಲ್ಲಿ ಅಳವಡಿಸಿಕೊಳ್ಳುವ ಸಲುವಾಗಿ ಒಂದು ಖಾಯಂ ತಜ್ಞ ವ್ಯವಸ್ಥೆಯೇ ಸದಾ ಜಾಗೃತವಾಗಿ, ಸದಾ ಕಾರ್ಯೋನ್ಮುಖವಾಗಿ ಇರಬೇಕಾಗುತ್ತದೆ. ಚಂದ್ರ ಮಾನವರಿಗೆ ಸಂಬಂಧಿಸಿದ ವಿವರಗಳನ್ನು ನಮ್ಮ ಈ ಮೊದಲ ಸಂಪುಟ ಒಳಗೊಂಡಿರುವುದು ನಮ್ಮ ಸಂಪಾದಕವರ್ಗದ ಶ್ರದ್ಧೆ, ನಿಷ್ಠೆ ಮತ್ತು ಅಧುನಾತಮ ವಿಚಾರಪರತೆಗೆ ಸಾಕ್ಷಿಯಾಗಿದೆ. ಹೀಗಾದರೇನೇ ನಮ್ಮ ಕನ್ನಡ ವಿಶ್ವಕೋಶ ವಿದ್ಯಾರ್ಥಿಗಳಿಗೆ,

ಜನಸಾಮಾನ್ಯರಿಗೆ, ವಿದ್ವಾಂಸರಿಗೆ ಮತ್ತು ಸಂಶೋಧಕರಿಗೆ ಅತ್ಯಂತ ಉಪಯುಕ್ತವಾಗುವುದು, ಉಪಾದೇಯವಾಗುವುದು.

"ಈ ಕೋಶ ಮತ್ತೊಂದು ವಿಚಾರವನ್ನೂ ಸ್ಪಷ್ಟಪಡಿಸಿದೆ. ವೈಜ್ಞಾನಿಕ, ಮಾನವಿಕ, ತಾಂತ್ರಿಕ – ಯಾವುದೇ ವಿಷಯವನ್ನಾದರೂ ಕನ್ನಡದಲ್ಲಿ ಸರಳವಾಗಿ, ಸುಲಭವಾಗಿ, ಹೃದಯವೇದ್ಯವಾಗುವಂತೆ ಹೇಳಬಹುದೆಂಬುದಕ್ಕೆ ಈ ಸಂಪುಟ ಸಾಕ್ಷೀಭೂತವಾಗಿದೆ. ಕನ್ನಡ ವಿಜ್ಞಾನಭಾಷೆಯಾಗಿ ಬೆಳೆದಿಲ್ಲವೆಂಬ ಸೊಲ್ಲು ಎಷ್ಟು ನಿರರ್ಥಕವಾದುದೆಂಬುದನ್ನು ಈ ಸಂಪುಟ ಪ್ರಮಾಣೀಕರಿಸುತ್ತದೆ. ಸಂಸ್ಕೃತ, ಪ್ರಾಕೃತ, ಅಪಭ್ರಂಶ, ಇಂಗ್ಲಿಷ್ ಇತ್ಯಾದಿ ಹಲವಾರು ಭಾಷೆಗಳ ಸಾರವನ್ನು ಹೀರಿ ಬೆಳೆದು ಸುಪುಷ್ಟವಾಗಿರುವ ಕನ್ನಡ ಯಾವುದೇ ಕಾರ್ಯಕ್ಕಾದರೂ ಸನ್ನದ್ಧವಾಗಿ ನಿಂತಿದೆ ಎಂಬುದಕ್ಕೆ ಬೇರಾವ ಪ್ರಮಾಣ ಪತ್ರವು ಬೇಕಿಲ್ಲ."

ದೇಜಗೌ ಅವರ ಔದಾರ್ಯ
ಅಧ್ಯಾಯ ಎಪ್ಪತ್ತೊಂದು

ವಿಶ್ವಕೋಶದ ಒಂದನೆಯ ಸಂಪುಟದ ಬಿಡುಗಡೆಯ ಪರ್ವದಿನ (೨೧–೧೧–೧೯೬೯). ಅದೇ ಪೂರ್ವಾಹ್ಣ ಸಂಪಾದಕ ಮಂಡಳಿಯ ಸರ್ವಸದಸ್ಯರ ಸಭೆ ಸೇರಲಿದೆ. ಇದಕ್ಕೆ ಭೌತವಿಜ್ಞಾನೋಪಸಮಿತಿಯ ಅಧ್ಯಕ್ಷರೂ ಬರಲಿದ್ದಾರೆ. ಸಭೆಗೆ ಮೊದಲೇ ನಾನು ದೇಜಗೌ ಅವರಿಗೆ ಒಂದು ಸಂಗತಿ ಸ್ಪಷ್ಟಪಡಿಸಿದೆ, "ನಮ್ಮ ಭೌತವಿಜ್ಞಾನದ ಪ್ರಾಧ್ಯಾಪಕರೇನಾದರೂ ಈ ಸಭೆಗೆ ಬಂದರೆ ಅವರು ತಮ್ಮ ಈ ಹ್ರಸ್ವೀಕೃತ ಲೇಖನದ ಬಗ್ಗೆ ಪ್ರಶ್ನೆ ಎತ್ತಿಯೇ ಎತ್ತುತ್ತಾರೆ. ಇಂಥ ಇಕ್ಕಟ್ಟಿನ ಸನ್ನಿವೇಶದಲ್ಲಿ ಅವರಿಗೆ ನೋವಾಗದಂತೆ ಆದರೆ ಸತ್ಯವನ್ನು ಮರೆಮಾಚದಂತೆ ಮೃದುವಾದ ಉತ್ತರವೀಯುವ ಜಾಣ್ಮೆ ನನಗಿಲ್ಲ. ನನ್ನ ನೇರ ಉತ್ತರ, ಅದು ನೈತಿಕವಾಗಿ ಮತ್ತು ಬೌದ್ಧಿಕವಾಗಿ ಎಷ್ಟೇ ಸಮರ್ಥನೀಯವಾಗಿದ್ದರೂ ಪ್ರಾಧ್ಯಾಪಕೋತ್ತಮರ ಅಂತಸ್ತು, ವಯಸ್ಸು ಮತ್ತು ಪ್ರವೃತ್ತಿ ಗಮನಿಸುವಾಗ ಸಭಾಮರ್ಯಾದೆಗೆ ಭಂಗ ತರದೆ ಇರದು. ಈ ವೃಥಾ ವಾಗ್ವಾದ ಮತ್ತು ಸಂತಾಪ ನಿವಾರಿಸುವ ಸಲುವಾಗಿ ನಾನು ಸಭೆಯಲ್ಲಿ ಪ್ರಾಧ್ಯಾಪಕರ ನೇರದೃಷ್ಟಿಗೆ ಬೀಳದಂತೆ ಹಿಂದೆ ಕೂರುತ್ತೇನೆ. ಬಾಯಿ ಬಿಡುವುದೇ ಇಲ್ಲ. ಎದುರಾಗಬಹುದಾದ ಸಮಸ್ಯೆಯನ್ನು ನೀವು ಹೇಗೆ ಬೇಕಾದರೂ ನಿಭಾಯಿಸಿ, ನನ್ನ ಆಕ್ಷೇಪಣೆ ಇಲ್ಲ."

ಸಭೆ ಸೇರಿದೆ. ಅವರು ಬಂದಿದ್ದಾರೆ. ದೇಜಗೌ ಅಧ್ಯಕ್ಷತೆ ವಹಿಸಿದ್ದಾರೆ. ಸದಸ್ಯರಿಗೆ ವಿಶ್ವಕೋಶದ ಸಂಪುಟವನ್ನು ಕೊಡಲಾಗಿದೆ. ಪ್ರಾಸ್ತಾವಿಕ ಮಾತು ಅಭಿನಂದನೆ ಎಲ್ಲವೂ ಮುಗಿದಿವೆ. ಪ್ರಾಧ್ಯಾಪಕ ದೂರ್ವಾಸರು ನಾನು ಊಹಿಸಿದ್ದಕ್ಕಿಂತ ತೀವ್ರತರವಾಗಿ ತಮ್ಮ ಅಭ್ಯಂತರ ಮತ್ತು ಆಕ್ಷೇಪಣೆ ಪ್ರಹರಿಸಿದ್ದಾರೆ, "ನಾವು ನಮ್ಮ ಜ್ಞಾನ ಹಾಗೂ ಅನುಭವ ಸರ್ವಸ್ವವನ್ನೂ ಧಾರೆಯೆರೆದು ಪರಿಷ್ಕರಿಸಿ ಕೊಟ್ಟ ಲೇಖನಗಳನ್ನು ಇಲ್ಲಿ ಸಂಕ್ಷೇಪಿಸಿ ಕುಲಗೆಡಿಸಲಾಗಿದೆ. ಯಾರೀ ಅಧಿಕಪ್ರಸಂಗ ಪ್ರದರ್ಶಿಸಿದವರು. ಅವರ ಅರ್ಹತೆ ಏನು?"
ದೇಜಗೌ, "ಒಂದು ಉದಾಹರಣೆ ಹೇಳಿ."
ಮಾರಿ ಕಣ್ಣು ಹೋತನ ಮೇಲೆಯೇ ಎಂಬಂತೆ ಅದೇ ಲೇಖನವನ್ನು ಅವರು ಉದ್ಧರಿಸಿ ಓದಬೇಕೇ!
ದೇಜಗೌ, "ಅದರಲ್ಲಿ ತಾಂತ್ರಿಕ ದೋಷಗಳೇನಾದರೂ ನುಸುಳಿದೆಯೇ?"
"ಅವೇನೂ ಇಲ್ಲ ಅನ್ನಿ. ಆದರೆ ಓದುಗರಿಗೆ ಆವಶ್ಯ ಎಂದು ಅರಿತು ಸುದೀರ್ಘವಾಗಿ ನಿರೂಪಿಸಿದ್ದ ಮೂಲವನ್ನು ಈ ರೀತಿ ಮೊಟಕುಗೊಳಿಸಿದವರು ಯಾರು? ಅವರ ಯೋಗ್ಯತೆ ಏನು?"
"ವಿಜ್ಞಾನ ಸಂಪಾದಕರು ಏನನ್ನುತ್ತಾರೆ?" ದೇಜಗೌ ನಾನು ಕೂತಿರದಿದ್ದ ಸಾಲಿನತ್ತ ದೃಷ್ಟಿ ಹರಿಸಿದರು! 'ಮಾಣಿ ಕೂಸನ್ನು ನೋಡಿತ್ತ, ಕೂಸು ಗೋಡೆಯನ್ನು ನೋಡಿತ್ತ' ಎಂಬಂತೆ ನಾನು ಪ್ರಾಧ್ಯಾಪಕ ಮಹಾಶಯರ ಶಾಪ ದೃಷ್ಟಿಗೆ ಈಡಾಗದಂತೆ ದಿಗಂತ ನೋಡಿದೆ! ದೇಜಗೌ ಮುಂದುವರಿಸಿ ವಿಶ್ವಕೋಶ ಲೇಖನಗಳ ಸಂಪಾದನೆಯಲ್ಲಿ ಎದುರಾಗುವ ಹಲವು ಬಗೆಯ ಜಟಿಲತೆಗಳನ್ನು ವ್ಯಾಪಕವಾಗಿ ಸೋದಾಹರಣ ವಿವರಿಸುತ್ತ ನಿರ್ದಿಷ್ಟ ಪ್ರಶ್ನೆಗೆ ನೇರ ಉತ್ತರಕೊಡುವುದನ್ನು ಬಲು ಜಾಣ್ಮೆಯಿಂದ ಅಡ್ಡ ಹಾಯುತ್ತ ಅವರ ಆಕ್ರೋಶವನ್ನು ತಂಪಿಸಿದರು. ತುಂಬ ಕೌಶಲದಿಂದ ವಿಷಯಾಂತರಿಸಿ ಸಭಾ ನಡವಳಿಕೆಯ ಧಾಟಿಯನ್ನೇ ಬದಲಾಯಿಸಿದರು. Filibuster ತಂತ್ರ! ಹೀಗೆ ಬಿರುಗಾಳಿಯಾಗಿ ಬಡಿದದ್ದು ಮೆಲುಗಾಳಿಯಾಗಿ ಮರೆ ಆಯಿತು.

ಮುಂದೊಂದು ದಿನ (೧೯೭೦) ದೇಜಗೌ ನೇರ ನನ್ನ ಕೊಠಡಿಗೆ ಬಂದು ಎಂದಿನ ಸರಳತೆ ಆತ್ಮೀಯತೆಯಿಂದ ಮಾತು ತೊಡಗಿದರು, "ನಾನು ಕುಲಪತಿ ಆಗಿದ್ದೇನೆಂದರೆ ನೀವೇ ಆಗಿದ್ದೀರೆಂದು ಭಾವಿಸಿ. ಯಾವುದೇ ಅಳುಕು ಆತಂಕ ಬೇಡ. ಈಗ ನಾನು ಬಂದಿರುವುದು ಬೇರೆ ಒಂದು ವಿಷಯ ನಿಮ್ಮ ಜೊತೆ ಮಾತಾಡಲು. ನಿಮ್ಮೆಲ್ಲರ ಈ ನಿಃಸ್ವಾರ್ಥ ಪರಿಶ್ರಮದಿಂದ ವಿಶ್ವವಿದ್ಯಾನಿಲಯದ ಕೀರ್ತಿ ಪ್ರತಿಷ್ಠೆ ವರ್ಧಿಸಿವೆ. ಆದರೆ ನಿಮ್ಮ ಸೇವೆಗೆ ನಾವು ಕೊಡುತ್ತಿರುವ ವೇತನ ತೀರ ಕಡಿಮೆ. ಸರಕಾರೀ ಸೇವೆಯಿಂದ ಎರವಲಾಗಿ ಬಂದಿರುವ ನಿಮಗೂ ಪ್ರಹ್ಲಾದರಾಯರಿಗೂ ನಾವು ಈಗ ಚಾಲ್ತಿಯಲ್ಲಿರುವ ವಿಧಿನಿಯಮ ಮೀರಿ ಹೆಚ್ಚಿಗೆ ಏನೂ ಕೊಡುವಂತಿಲ್ಲ. ಸಂಪಾದಕರನ್ನು ಕನಿಷ್ಠ ಪಕ್ಷ ಯುಜಿಸಿ ಪ್ರವಾಚಕರ ಅಂತಸ್ತಿನಲ್ಲಿ ಸ್ಥಾಪಿಸಬೇಕೆಂಬುದು ನನ್ನ ಆಶಯ. ಇದಕ್ಕೆ ಒಂದು ಹಾದಿ ಯೋಚಿಸಿದ್ದೇನೆ. ಈ ಹುದ್ದೆಗಳನ್ನು ಯುಜಿಸಿ ರೀಡರರ ವೇತನ ಶ್ರೇಣಿಯಲ್ಲಿ ಜಾಹೀರಾತು ಮಾಡುತ್ತೇವೆ. ಆಗ ನೀವು ಇದಕ್ಕೆ ಅರ್ಜಿ ಸಲ್ಲಿಸಬೇಕು. ನಿಮ್ಮನ್ನು ನಾವು ಅಧಿಕೃತವಾಗಿ ನೇಮಿಸುತ್ತೇವೆ." ವಿಶ್ವವಿದ್ಯಾನಿಲಯದ ನೌಕರರೊಡನೆ ಕುಲಪತಿ ಮಾತಾಡಿದ ಪರಿ ಇದು.
"ಹಿಂದೊಮ್ಮೆ ಬೆಂಗಳೂರಿನಲ್ಲಿ. . ."
"ನನ್ನ ಮಾತನ್ನು ನೀವು ನಂಬಬಹುದು," ಅದರಲ್ಲಿ ವಿಷಾದದ ಛಾಯೆ ಇತ್ತು.
"ಆ ಅರ್ಥದಲ್ಲಿ ನಾನು ಹೇಳಲಿಲ್ಲ. ನನ್ನ ಅರ್ಥ ಬೇರೆ. ಈಗ ನಾನು ಅರ್ಜಿ ಹಾಕುತ್ತೇನೆಂದು ಇಟ್ಟುಕೊಳ್ಳಿ. ವೇತನ ಶ್ರೇಣಿ ಹಿರಿದೆಂಬ ಕಾರಣದಿಂದ ಸಾಕಷ್ಟು ಇತರ ಅರ್ಜಿಗಳು ಬಂದೇ ಬರುತ್ತವೆ. ಆ ಅಭ್ಯರ್ಥಿಗಳ ಪೈಕಿ ಅನೇಕರಿಗೆ ನನಗಿಂತ ಹೆಚ್ಚಿನ ಸಿದ್ಧಿಗಳೂ ಪ್ರಭಾವ ಪರಿವೇಷಗಳೂ ಇರುವುದು ಸಾಧ್ಯ. ಇನ್ನು ಜಾತಿ, ರಾಜಕೀಯ, ಸಂಪರ್ಕ ಒಂದೊಂದರಲ್ಲಿಯೂ ನನ್ನದು ತೀರ ಅನನುಕೂಲಕರ ಸ್ಥಾನ. ಪರಿಸ್ಥಿತಿ ಹೀಗಿರುವಾಗ ನೀವು ನಿಮ್ಮ ಮಾತು ಉಳಿಸಿಕೊಳ್ಳುವುದಕ್ಕಾಗಿ ಸರ್ಕಾರದ ಇಲ್ಲವೇ ಸಾರ್ವಜನಿಕರ ಟೀಕೆ ಆಕ್ರೋಶಗಳಿಗೆ ಗುರಿ ಆಗಬೇಕಾದೀತು, ಅದು ನನಗೆ ಸಮ್ಮತವಿಲ್ಲ. ಇನ್ನು ಸಂಬಳ? ಈಗ ಸಿಕ್ಕುತ್ತಿರುವುದು ನೆಮ್ಮದಿ ಬದುಕಿಗೆ ಧಾರಾಳ ಸಾಕು?"
"ಇದೆಲ್ಲ ವಿಚಾರ ಹಾಗಿರಲಿ. ಈ ವೃತ್ತಿ ನಿಮಗೆ ಪ್ರಿಯವಾಗಿದೆಯೇ? ಇಲ್ಲಿಯ ಸೇವೆ ಒಪ್ಪಿಗೆ ಆಗಿದೆಯೇ?"
"ಅತ್ಯಂತ ಪ್ರಿಯವಾಗಿದೆ. ನಾನು ತುಂಬ ಸಂತೋಷಿ ಆಗಿದ್ದೇನೆ."
"ಹಾಗಾದರೆ ಉಳಿದ ಚಿಂತೆ ನನಗೆ ಬಿಡಿ. ಜಾಹೀರಾತು ಪ್ರಕಟವಾದಾಗ ಅರ್ಜಿ ಸಲ್ಲಿಸಿ."

ಸಂಪಾದಕರಾಗಿದ್ದವರು ನಾವು ನಾಲ್ವರು. ಕೆ.ಟಿ ವೀರಪ್ಪ ವಿಶ್ವವಿದ್ಯಾನಿಲಯದ ನೌಕರರೇ ಆಗಿದ್ದುದರಿಂದ ಅವರನ್ನು ಉನ್ನತ ಶ್ರೇಣಿಯಲ್ಲಿ ನೆಲೆಗೊಳಿಸುವುದು ಸುಲಭವಾಗಿತ್ತು. ಎನ್ ಪ್ರಹ್ಲಾದರಾವ್ ನನ್ನಂತೆ ಸರ್ಕಾರಿ ಸೇವೆಯಿಂದ ಎರವಲಾಗಿ ಬಂದವರು. ಎಚ್.ಎಸ್ ಕೃಷ್ಣಸ್ವಾಮಿ ಅಯ್ಯಂಗಾರ್ಯರು (ಎಚ್ಚೆಸ್ಕೆ) ವಿಶ್ವವಿದ್ಯಾನಿಲಯದ ನೌಕರರೇ ಆಗಿದ್ದರೂ ಅವರ ಸೇವೆ ವಿಶ್ವವಿದ್ಯಾನಿಲಯಕ್ಕೆ ಒದಗಿದ್ದು ತುಸು ಅಸಾಧಾರಣ ಸನ್ನಿವೇಶದಲ್ಲಿ. ತಾವು ಪ್ರಾಂಶುಪಾಲರಾಗಿದ್ದ ಒಂದು ಖಾಸಗಿ ಕಾಲೇಜಿನ ವ್ಯವಸ್ಥಾಪಕರ ಜೊತೆ ನೈತಿಕ ಕಾರಣಗಳಿಂದ ಎದುರಾದ ಭಿನ್ನಾಭಿಪ್ರಾಯದ ಕಾರಣವಾಗಿ ಅವರು ಇಳಿವಯಸ್ಸಿನಲ್ಲಿ ವೃತ್ತಿಗೆ ರಾಜೀನಾಮೆ ನೀಡಿ ಹೊರಬಂದು ತಮ್ಮ ವ್ಯಕ್ತಿತ್ವದ ಘನತೆ ಗೌರವ ಉಳಿಸಿಕೊಂಡಿದ್ದರು. ಇದು ತಿಳಿದೊಡನೆ ದೇಜಗೌ ಮತ್ತು ಹಾಮಾನಾ ಅವರನ್ನು ಸಂಪರ್ಕಿಸಿ ನಮ್ಮ ಯೋಜನೆಗೆ ಮಾನವಿಕ ಸಂಪಾದಕರಾಗಿ ಬರಲು ಆಹ್ವಾನಿಸಿ ಸಫಲರಾಗಿದ್ದರು.

ಜಾಹೀರಾತು ಪ್ರಕಟವಾಯಿತು. ಎಲ್ಲರೂ ಅರ್ಜಿ ಸಲ್ಲಿಸಿದೆವು. ಆಯ್ಕೆ ಭೇಟಿ ಕುಲಪತಿಗಳ ಕೊಠಡಿಯಲ್ಲಿ ನಡೆಯುವುದು ನಿಯಮ. ಆದರೆ ವಿಶ್ವಕೋಶದ ವಿಚಾರದಲ್ಲಿ ದೇಜಗೌ ಅದನ್ನು ಮುರಿದಿದ್ದರು. ನಮ್ಮ ಸಂಸ್ಥೆಯ ನಿರ್ದೇಶಕರ ಕೊಠಡಿಗೇ ಆಯ್ಕೆ ಸಮಿತಿ ಬಂದಿತು. ಸಮಿತಿಯ ಮುಂದು ನಾನು ಹಾಜರಾದೆ. ಕುಲಪತಿ ಹೇಳಿದರು,
"ನಿಮ್ಮನ್ನು ನಾವೇನು ಪ್ರಶ್ನೆ ಕೇಳುವುದು! ಹೊಸ ಶ್ರೇಣಿಯಲ್ಲಿ ನಿಮಗೆ ಎಷ್ಟು ಸಂಬಳ ದೊರೆಯಬೇಕು?"
"ಅದು ನಿಮಗೆ ಸೇರಿದ್ದು. ಈಗ ದೊರೆಯುತ್ತಿರುವುದಕ್ಕಿಂತ ಕಡಿಮೆ ಆಗದಿದ್ದರೆ ಸಾಕು."
"ನೀವೇನಾದರೂ ನಮ್ಮನ್ನು ಕೇಳುವುದಿದೆಯೇ?"
"ಇಲ್ಲ."
ನಮ್ಮ ನೇಮಕಾತಿ ವೇತನಶ್ರೇಣಿ ಎಲ್ಲವೂ ಕುಲಾಧಿಪತಿಗಳ ಮಂಜೂರು ಪಡೆದು ಕ್ರಮೀಕೃತವಾದ (೧೯೭೧) ಬಳಿಕ ಒಂದು ದಿನ ದೇಜಗೌ ಹೇಳಿದರು, "ನೀವು ಅಂದು ತರ್ಕಿಸಿದ ತೆರನಾಗಿಯೇ ಹಲವಾರು ಅಡ್ಡಿ ಆಡಚಣೆಗಳು ಎದುರಾದುವು. ಅವನ್ನೆಲ್ಲ ನಾನೇ ಸ್ವತಃ ಹೋಗಿ ನಿವಾರಿಸಬೇಕಾಯಿತು. ಇನ್ನು ಕನ್ನಡದ ಕೆಲಸ ಸಲೀಸಾಯಿತು."

೧೯೭೦ರ ಕೊನೆಯ ತಿಂಗಳೆಂದು ನೆನಪು. ಮೈಸೂರು ನಗರಭಿವೃದ್ಧಿ ವಿಶ್ವಸ್ಥಮಂಡಳಿ ಸಿದ್ಧ ಗೃಹಗಳ ವಿಕ್ರಯಕ್ಕೆ ಅರ್ಜಿ ಕರೆದು ಜಾಹೀರಾತು ಪ್ರಕಟಿಸಿತು. ನಾನೊಂದು ಅರ್ಜಿ ಸಲ್ಲಿಸಿದೆ. ಆದರೆ ಪ್ರಭಾವ? ಹಾ.ಮಾ ನಾಯಕರು ಅವರಾಗಿಯೇ ನನ್ನನ್ನು ಮಂಡಳಿಯ ಅಧ್ಯಕ್ಷರಲ್ಲಿಗೆ ಕರೆದೊಯ್ದು, "ಇವರು ಕನ್ನಡದ ಕೆಲಸ ಮಾಡುತ್ತಿರುವವರು. ಇವರಿಗೆ ನೀವೊಂದು ಮನೆ ಮಂಜೂರು ಮಾಡಿದರೆ ಇವರ ಮನ ನೆಮ್ಮದಿ ಆಗುತ್ತದೆ. ಆಗ ಕನ್ನಡದ ಕೆಲಸ ಇನ್ನೂ ಸುಸೂತ್ರವಾಗುತ್ತದೆ" ಎಂದರು. ದೇಜಗೌ ಅಧ್ಯಕ್ಷರಿಗೆ ಕಾಗದ ಬರೆದರು ಮತ್ತು ಅವರ ಜೊತೆ ದೂರವಾಣಿ ಮಾತಾಡಿದರು: ತನಗೆ ಅಧ್ಯಕ್ಷರು ನೀಡಬಹುದಾದ ವೈಯಕ್ತಿಕ ಸಹಾಯವೆಂದರೆ ನನಗೆ (ಜಿಟಿಎನ್) ಒಂದು ಮನೆ ಮಂಜೂರು ಮಾಡುವುದು ಎಂದರು.

ಮನೆ ಮಂಜೂರಾಯಿತು. ಆದರೆ ಅದನ್ನು ಸ್ವಾಧೀನ ಪಡೆಯಲು ನಾನು ಒಡನೆ ರೂ ೩೫,೦೦೦ವನ್ನು ಮಂಡಳಿಗೆ ಪಾವತಿಸಬೇಕಾಗಿತ್ತು. ಕುಲಪತಿಗಳು ಹಲವಾರು ಪ್ರತಿಬಂಧಕ ಜಾಲಗಳನ್ನು ತುಂಡರಿಸಿ ಅಷ್ಟೂ ಮೊಬಲಗನ್ನು ವಿಶ್ವವಿದ್ಯಾನಿಲಯದಿಂದ ಸಾಲವಾಗಿ ಒದಗಿಸಿ ನನ್ನನ್ನು ಈ ಆರ್ಥಿಕ ಗಂಡಾಂತರದಿಂದ ಪಾರುಮಾಡಿ ಗೃಹಾಧಿಪತಿಯಾಗಿಸಿದರು.

ಒಂದು ದಿನ ಕಚೇರಿಗೆ ನಡೆದು ಹೋಗುತ್ತಿದ್ದೆ. ನನ್ನ ಹಿಂದಿನಿಂದ ಕಾರಿನಲ್ಲಿ ಬಂದ ದೇಜಗೌ, ಒಡೆದ ಒಂದು ಲಕ್ಕೋಟೆಯನ್ನು ನನಗೆ ಕೊಟ್ಟರು, "ಈ ಕಾಗದ ಓದಿ ಸಾವಕಾಶವಾಗಿ, ತಲೆ ಬಿಸಿ ಆಗದಿರಲಿ. ಬರೆದವರ ಸ್ವಭಾವ ನಿಮಗೂ ನನಗೂ ಚೆನ್ನಾಗಿ ಗೊತ್ತಿದೆ. ವಿಷಯವೇನೆಂದು ವಿಮರ್ಶಿಸಿ ಅವರಿಗೆ ನಯವಾಗಿ ಉತ್ತರ ಬರೆಯುವಂತೆ ನಾಯಕರಿಗೆ ಹೇಳಿ." ಸಂಪಾದಕ ಮಂಡಳಿಯ ಗೌರವ ಸದಸ್ಯರೂ ನಾಡಿನ ಒಬ್ಬ ಪ್ರತಿಷ್ಠಿತರೂ ಆಗಿದ್ದ ಶಿವರಾಮ ಕಾರಂತರು ದೇಜಗೌ ಅವರಿಗೆ ಬರೆದಿದ್ದ ಸುದೀರ್ಘ ಇಂಗ್ಲಿಷ್ ಪತ್ರದ ಸಾರವಿಷ್ಟು:

"ವಿಶ್ವಕೋಶದ ಸಂಪಾದಕವರ್ಗ ನಯವಂಚಕರ, ಕಡು ಮೋಸಗಾರರ ಮತ್ತು ಹಣ ಲೂಟಿಗಾರರ ದುಷ್ಟಕೂಟವೆಂದು ತೋರುತ್ತದೆ. ಒಬ್ಬ ಗಣ್ಯ ಲೇಖಕರ ಜೊತೆ ಈ ಕೂಟ ನಡೆದುಕೊಂಡಿರುವ ರೀತಿಯೇ ಇದಕ್ಕೆ ಸಾಕ್ಷಿ. ನಿರ್ದಿಷ್ಟ ವಿಷಯ ಕುರಿತು ಲೇಖನ ಬೇಕೆಂದು ಸಂಪಾದಕರು ಇವರನ್ನು ಕೇಳಿಕೊಂಡರು. ಇವರು ಸಕಾಲದಲ್ಲಿ ಅದನ್ನು ಕಳಿಸಿದರು. ಅದಕ್ಕೆ ಮಾರೋಲೆಯಾಗಿ ಬಂದ ಅಧಿಕೃತ ರಶೀತಿಯಲ್ಲಿ 'ನಿಮ್ಮ ಲೇಖನವನ್ನು ಪ್ರಕಟಿಸಲು ಸ್ವೀಕರಿಸಲಾಗಿದೆ' ಎಂಬ ಷರಾ ಇದೆ. ಆದರೆ ಪ್ರಕಟಿತ ಲೇಖನ ಮಾತ್ರ ಬೇರೆಯವರ ಹೆಸರಿನಲ್ಲಿದೆ. ಇದರ ಅರ್ಥವೇನು? ನಿಜ ಲೇಖಕರಿಗೆ ಸಲ್ಲಬೇಕಾದ ಸಂಭಾವನೆಯನ್ನು ಸಂಪಾದಕರು ಈ ಕಾಲ್ಪನಿಕ ಹೆಸರಿಗೆ ವರ್ಗಾಯಿಸಿ ಹಣ ಲಪಟಾಯಿಸಿದರೆಂದು ತಾನೇ? ಇದು ನನ್ನ ಗಮನಕ್ಕೆ ಬಂದಿರುವ ಒಂದು ನಿದರ್ಶನ ಮಾತ್ರ. ಇಂಥ ಕುಕೃತ್ಯಗಳು ಇನ್ನೆಷ್ಟು ನಡೆದಿವೆಯೋ ಊಹಿಸಲಾರೆ."

ನಾನು ಕೋಪದಿಂದ ನಿಗಿ ನಿಗಿ ಕೆಂಡವಾದೆ. ಪ್ರಾಮಾಣಿಕತೆ ಯಾವೊಬ್ಬ ವ್ಯಕ್ತಿಯ ಏಕೈಕ ಸೊತ್ತಾಗಿರಬೇಕಾಗಿಲ್ಲ. ಯಾವುದೇ ಸಮಸ್ಯೆಗೆ ಎರಡು ಮುಖಗಳಿರುವುವು. ಈಗ ಒಂದನ್ನು ಮಾತ್ರ, ಅದೂ ಅಪೂರ್ಣವಾಗಿ ನೋಡಿರುವ ಕಾರಂತರು ನಮ್ಮನ್ನು ವಿಚಾರಿಸುವ ಸೌಜನ್ಯವನ್ನೂ ತೋರಿಸದೆ ನಮಗೆ ದುಷ್ಟಕೂಟವೆಂಬ ಬಿರುದು ದಯಪಾಲಿಸಿದ್ದು ಅತ್ಯಂತ ದುರದೃಷ್ಟಕರ. ಉನ್ನತ ಸ್ಥಾನದಲ್ಲಿರುವವರ ಉದ್ಧತ ವರ್ತನೆಯನ್ನು ನೇರ ಪ್ರಹಾರದಿಂದ ಅಮೂಲಾಗ್ರ ಉತ್ಪಾಟಿಸಿದ ಹೊರತು ಕೆಳಗಿನವರಿಗೆ ಉಳಿಗಾಲವಿಲ್ಲವೆಂಬುದು ಸೈನ್ಯದ ಒಂದು ಅಲಿಖಿತ ವಿಧಿ.

ಕಚೇರಿಯಲ್ಲಿ ಕಡತಗಳನ್ನು ಶೋಧಿಸಿದಾಗ ತಿಳಿದು ಬಂದ ಸಂಗತಿ ಇದು: ಆ 'ಗಣ್ಯ' ಲೇಖಕರನ್ನು ಲೇಖನ ಬೇಕೆಂದು ಕೇಳಿಕೊಂಡದ್ದೇ ಅವರಿಂದ ಅದು ಸಕಾಲದಲ್ಲಿ ಬಂದದ್ದೂ ನಿಜ. ವಿಶ್ವಕೋಶದ ಆರಂಭದ ಆ ದಿನಗಳಲ್ಲಿ 'ಲೇಖನ ತಲಪಿದೆ' ಎಂದು ಬರೆಯುವುದರ ಬದಲಾಗಿ ಅನನುಭವದ ಮತ್ತು ಪ್ರಾಯಶಃ ಅತ್ಯುತ್ಸಾಹದ ಕಾರಣವಾಗಿ "ನಿಮ್ಮ ಲೇಖನವನ್ನು ಪ್ರಕಟಿಸಲು ಸ್ವೀಕರಿಸಲಾಗಿದೆ" ಎಂದು ಬರೆದು ಕಳಿಸಿದ್ದೂ ನಿಜ. ಆದರೆ ಮುಂದೆ ಯಥಾಕಾಲದಲ್ಲಿ ಆ ಲೇಖನವನ್ನು ಸಂಬಂಧಿತ ಸಂಪಾದಕರು (ಎಚ್ಚೆಸ್ಕೆ) ಪರಿಷ್ಕರಿಸಲು ತೆಗೆದುಕೊಂಡಾಗ ಅದು ಪ್ರಕಟಣೆಗೆ ಪೂರ್ತಿ ಅಯೋಗ್ಯವೆಂಬುದು ಸ್ಪಷ್ಟವಾಯಿತು: ಪರಿಕಲ್ಪನೆಯಲ್ಲಿ ಅಸ್ಪಷ್ಟತೆ, ಭಾಷಾಸ್ಖಾಲಿತ್ಯ ಮತು ನೀರಸ ಶೈಲಿ ಮುಪ್ಪುರಿಗೊಂಡು ಅದೊಂದು ಸರ್ಕಾರೀ ಗಜೆಟ್ ಬರೆಹದಂತಿತ್ತು! ಆ ಕ್ಷೇತ್ರದಲ್ಲಿರುವ ತಜ್ಞರ ಅಭಿಪ್ರಾಯವೂ ಇದೇ ಆಗಿತ್ತು. ಹೀಗಾಗಿ ಅದನ್ನು ಪೂರ್ತಿಯಾಗಿ ಕೈಬಿಟ್ಟು ಅದೇ ವಿಷಯದ ಮೇಲೆ ಬೇರೆ ಒಬ್ಬರಿಂದ ಲೇಖನ ತರಿಸಿಕೊಂಡು ಇದನ್ನು ಪ್ರಕಟಿಸಲಾಗಿತ್ತು. ಮತ್ತು ಸಹಜವಾಗಿ ಈ ಎರಡನೆಯ ಲೇಖಕರ ಹೆಸರನ್ನು ಲೇಖನದ ಅಡಿಯಲ್ಲಿ ಕಾಣಿಸಲಾಗಿತ್ತು. ಮೊದಲಿನ ಲೇಖನಕ್ಕೂ ತರುವಾಯದ ಲೇಖನಕ್ಕೂ ಶೀರ್ಷಿಕೆಯಲ್ಲಿ ಮಾತ್ರ ಸಾಮ್ಯವಿತ್ತೇ

ವಿನಾ ವಿಷಯ ವಿಸ್ತಾರದಲ್ಲಾಗಲೀ ನಿರೂಪಣಾ ಕ್ರಮದಲ್ಲಾಗಲೀ ಕನ್ನಡ ಶೈಲಿಯಲ್ಲಾಗಲೀ ಏನೂ ಹೋಲಿಕೆ ಇರಲಿಲ್ಲ. ನಿಜ, ಕಾನೂನಿನ ಸಂಕುಚಿತ ದೃಷ್ಟಿಯಲ್ಲಿ ನಾವು ಅಪರಾಧವೆಸಗಿದ್ದೆವು. ಆದರೆ ನೀತಿಯ ಪಾತಳಿಯಲ್ಲಿ, ಮಿಗಿಲಾಗಿ ವಿಶ್ವಕೋಶದ ಹಿರಿಮೆ ಕಾಯ್ದಿಡುವುದರಲ್ಲಿ, ಖಂಡಿತ ಪಥಚ್ಯುತರಾಗಿರಲಿಲ್ಲ.

ಬಡವನಾದರೂ ಆತ್ಮ ಪ್ರತ್ಯಯವನ್ನು ಜತನದಿಂದ ಕಾಪಾಡಿಕೊಂಡು ಬಂದಿದ್ದ ಸ್ಯಾಮ್ಯುಯೆಲ್ ಜಾನ್ಸನ್ ಎಂಬ ಮಹಾವಿದ್ವಾಂಸ ಧನೋನ್ಮತ್ತ ಲಾರ್ಡ್ ಚೆಸ್ಟರ್‌ಫೀಲ್ಡ್‌ನಿಗೆ ಬರೆದ ವಿಖ್ಯಾತ ಪತ್ರದ ಧಾಟಿಯಲ್ಲಿ ನಾಯಕರು ಆ ಪ್ರತಿಷ್ಠಿತರಿಗೆ ಮಾರೋಲೆ ಬರೆದು ನಮ್ಮನ್ನು 'ಅಪವಾದ' ಮುಕ್ತರನ್ನಾಗಿಸಿದರು.

ವಿಶ್ವಕೋಶದ ಪ್ರಗತಿ
ಅಧ್ಯಾಯ ಎಪ್ಪತ್ತೆರಡು

ವಿಶ್ವಕೋಶ ಸಂಪುಟಗಳ ಪ್ರಕಟಣೆಯ ಮುನ್ನಡೆಯನ್ನು ಮುಂದಿನ ಯಾದಿಯಲ್ಲಿ ನೋಡಬಹುದು: ಒಂದನೆಯ ಸಂಪುಟ 'ಅ'ದಿಂದ 'ಆರ್ಸೆನಿಕ್' ವರೆಗೆ, ಡೆಮಿ ಚತುರ್ಥಾಕಾರ, ೯೬೭ ಸಚಿತ್ರ ಪುಟಗಳು ಮತ್ತು ೧೦ ವರ್ಣಫಲಕಗಳು, ೧೯೬೯.

ಎರಡನೆಯ ಸಂಪುಟ 'ಆಲ'ದಿಂದ 'ಎರಟಾಸ್ಥೆನೀಸ್' ವರೆಗೆ, ೯೬೪ ಸಚಿತ್ರ ಪುಟಗಳು ಮತ್ತು ೧೪ ವರ್ಣಫಲಕಗಳು, ೧೯೭೦. ಮೂರನೆಯ ಸಂಪುಟ 'ಎರಟೋ'ದಿಂದ 'ಕರೀಲಿಯ'ದ ವರೆಗೆ, ೯೬೪ ಸಚಿತ್ರ ಪುಟಗಳು ಮತ್ತು ೧೩ ವರ್ಣಫಲಕಗಳು, ೧೯೭೧. ನಾಲ್ಕನೆಯ ಸಂಪುಟ 'ಕರೀಷಕ'ದಿಂದ 'ಕೂಡಲ ಸಂಗಮ'ದ ವರೆಗೆ, ೯೬೦ ಸಚಿತ್ರ ಪುಟಗಳು ಮತ್ತು ೧೬ ವರ್ಣಫಲಕಗಳು ೧೯೭೨. ಐದನೆಯ ಸಂಪುಟ 'ಕೂಡಲಿ'ಯಿಂದ 'ಗಣ'ದ ವರೆಗೆ, ೯೬೦ ಸಚಿತ್ರ ಪುಟಗಳು ಮತ್ತು ೧೩ ವರ್ಣಫಲಕಗಳು, ೧೯೭೨. ಆರನೆಯ ಸಂಪುಟ 'ಗಣಕ'ದಿಂದ 'ಗ್ವಾಡ್ಲೂಪ್' ವರೆಗೆ, ೯೫೬ ಸಚಿತ್ರ ಪುಟಗಳು ಮತ್ತು ೧೦ ವರ್ಣಫಲಕಗಳು, ೧೯೭೩. ಏಳನೆಯ ಸಂಪುಟ 'ಗ್ವಾನಾಕೋ'ದಿಂದ 'ಜಲಸಸ್ಯಗಳು' ವರೆಗೆ, ೯೫೪ ಸಚಿತ್ರ ಪುಟಗಳು ಮತ್ತು ೮ ವರ್ಣಫಲಕಗಳು ೧೯೭೪. ಎಂಟನೆಯ ಸಂಪುಟ 'ಜಲಾಂತರ್ಗಾಮಿ'ಯಿಂದ 'ಡೇಲಿಯ'ದ ವರೆಗೆ, ೯೫೦ ಸಚಿತ್ರ ಪುಟಗಳು ಮತ್ತು ೮ ವರ್ಣಫಲಕಗಳು, ೧೯೭೪. ಒಂಬತ್ತನೆಯ ಸಂಪುಟ 'ಡೇವಿಡ್'ನಿಂದ 'ಧ್ವನಿಶೋಧಕ'ದ ವರೆಗೆ, ೧೦೦೪ ಸಚಿತ್ರ ಪುಟಗಳು ಮತ್ತು ೫ ವರ್ಣಫಲಕಗಳು, ೧೯೭೭. ಹತ್ತನೆಯ ಸಂಪುಟ 'ನ'ದಿಂದ 'ಪಾರಿಜಾತ'ದ ವರೆಗೆ, ೯೮೨ ಸಚಿತ್ರ ಪುಟಗಳು ಮತ್ತು ೧೧ ವರ್ಣಫಲಕಗಳು, ೧೯೮೦. ಹನ್ನೊಂದನೆಯ ಸಂಪುಟ 'ಪಾರಿವಾಳ'ದಿಂದ 'ಬಳ್ಳಿಗಾವೆ' ವರೆಗೆ, ೯೭೨ ಸಚಿತ್ರ ಪುಟಗಳು ಮತ್ತು ೫ ವರ್ಣಫಲಕಗಳು, ೧೯೮೩. ಹನ್ನೆರಡನೆಯ ಸಂಪುಟ 'ಬಾಂಗ್ಲಾದೇಶ'ದಿಂದ 'ಮಣಿಪುರ'ದ ವರೆಗೆ, ೧೦೩೮ ಸಚಿತ್ರ ಪುಟಗಳು ಮತ್ತು ೫ ವರ್ಣಫಲಕಗಳು, ೧೯೮೬. ಹದಿಮೂರನೆಯ ಸಂಪುಟ 'ಮಣಿಪುರಿ'ಯಿಂದ 'ರಾಷ್ಟ್ರಪತಿ' ವರೆಗೆ, ೯೮೮ ಸಚಿತ್ರ ಪುಟಗಳು ಮತ್ತು ೫ ವರ್ಣಫಲಕಗಳು, ೧೯೮೮.

ಹದಿನಾಲ್ಕನೆಯ (ಮತ್ತು ಕೊನೆಯ) ಸಂಪುಟ 'ರಾಷ್ಟ್ರೀಯ ಉದ್ಯಾನ'ದಿಂದ 'ಳ'ದ ವರೆಗೆ, ೧೨೭೩ ಸಚಿತ್ರ ಪುಟಗಳು ಮತ್ತು ೬ ವರ್ಣಫಲಕಗಳು, ೨೦೦೪.

೧೯೭೪ರ ತನಕ ಸ್ಥಿರಗತಿಯಲ್ಲಿ ಸಂಪುಟಗಳು ಹೊರಬಂದುವು. ಮುಂದಿನ ವರ್ಷಗಳಲ್ಲಿ ಪ್ರಗತಿ ಕ್ರಮೇಣ ಕುಂಠಿತವಾಗುತ್ತ ೧೩ನೆಯ ಮತ್ತು ೧೪ನೆಯ (ಇದು ಪ್ರಸಕ್ತ ಯೋಜನೆ ಪ್ರಕಾರ ಕೊನೆಯದು) ಸಂಪುಟಗಳು ತೀರ ಮಂದಗತಿಯಲ್ಲಿ ಪ್ರಕಟವಾದುವು, ಏಕೆ? ವಿಶ್ವವಿದ್ಯಾನಿಲಯದ ಆಡಳಿತೆಯಲ್ಲಿ ಈ ಪ್ರತಿಷ್ಠಿತ ಯೋಜನೆ ಕುರಿತಂತೆ ಆಸ್ಥೆ ಮತ್ತು ಬದ್ಧತೆ ಹಿಂಗಿದ್ದುವು. ಇದೊಂದು ಅನಿವಾರ್ಯವಾಗಿ ಹೊರಲೇಬೇಕಾದ ಭಾರ ಎಂಬ ನಿರ್ಲಕ್ಷ್ಯ ಧೋರಣೆ ಮೈದಳೆಯಿತು. ಖಾಲಿ ಹುದ್ದೆಗಳನ್ನು ತುಂಬಲಿಲ್ಲ, ಇದ್ದವರಿಗೆ ಯಾವುದೇ ಬಡ್ತಿ ಅಥವಾ ಸಂಬಳ ಹೆಚ್ಚಳ ಮಾಡಲಿಲ್ಲ, ವಿಶ್ವಕೋಶದತ್ತ ಮಲತಾಯಿ ಧೋರಣೆ ಎದ್ದು ಕಾಣುತ್ತಿತ್ತು.

ಸಂಯೋಜಕ ಸಂಪಾದಕ ಪ್ರಹ್ಲಾದರಾಯರು (ಇವರೊಬ್ಬ ಬಹುಶ್ರುತ ಶಿಕ್ಷಣಪಟು) ಮಾರ್ಚ್ ೧೯೮೦ರಲ್ಲಿ ನಿವೃತ್ತರಾದರು, ಆಂತರಿಕ ಬಡ್ತಿ ನೀಡಿ ಆ ಸ್ಥಾನವನ್ನು ಭರ್ತಿಮಾಡಲಾಯಿತೇ ವಿನಾ ಅವರ ಅಂತಸ್ತಿನ ವಿದ್ವಾಂಸರನ್ನು ನೇಮಿಸುವುದರ ಮೂಲಕ ಅಲ್ಲ. ಕಾರ್ಯನಿರ್ವಾಹಕ ಸಂಪಾದಕ ವೀರಪ್ಪ ಪ್ರಸಾರಾಂಗದ ನಿರ್ದೇಶಕರಾಗಿ ತೆರಳಿದರು (೪–೧೦–೧೯೮೧). ಆಡಳಿತೆಯ ಆ ಹೆಚ್ಚಿನ ಹೊಣೆಯನ್ನು ನನ್ನ ಮೇಲೆ ಹೇರಿದರು. ಆ ಮೊದಲೇ ಮಾನವಿಕ ಸಂಪಾದಕ ಮತ್ತು ಜಂಗಮ ವಿಶ್ವಕೋಶ ಎಚ್ಚೆಸ್ಕೆಯವರು ನಿವೃತ್ತರಾಗಿದ್ದರು (೩೧–೧೨–೧೯೮೦). ಮತ್ತೆ ಆಂತರಿಕ ಬಡ್ತಿಯಿಂದ ಈ ಹುದ್ದೆಯನ್ನು ಭರ್ತಿಮಾಡಲಾಯಿತು. ಇಂಥ ಸನ್ನಿವೇಶದಲ್ಲಿ ಪ್ರಗತಿ ಸಹಜವಾಗಿ ನಿಧಾನವಾಯಿತು. ಇದ್ದವರ ಮಾನಸಿಕ ಧೃತಿ (morale) ಕನಿಷ್ಠ ಮಟ್ಟದಲ್ಲಿತ್ತು.

ನಮ್ಮ ಸಸ್ಯವಿಜ್ಞಾನ ವಿಭಾಗದ ಸಹಾಯಕ ಸಂಪಾದಕ ಕೆ.ಬಿ.ಸದಾನಂದ ಮೊದಲು ನನ್ನಂತೆಯೇ ಸರ್ಕಾರೀ ಸೇವೆಯಿಂದ ಎರವಲು ಬಂದವರು. ಇದರಲ್ಲೇ ಮುಂದುವರಿಯಲು ಅವರು ಇಷ್ಟಪಟ್ಟರು. ನಮಗೂ ಅವರ ಸಕ್ರಿಯ ಪಾತ್ರ ಉಪಯುಕ್ತವಾಗಿತ್ತು. ಹೀಗಾಗಿ ವಿಶ್ವವಿದ್ಯಾನಿಲಯ ಅವರಿಗೆ ಲಿಖಿತ ಆದೇಶ ನೀಡಿ ಸರ್ಕಾರದಿಂದ ಬಿಡಗಡೆ ಪತ್ರ ಒದಗಿಸಲು ತಾಕೀತು ಮಾಡಿತು. ಸರಿ, ಅವರು ಆ ಕೋರಿಕೆ ಕಾಗದವನ್ನು ವಿಶ್ವವಿದ್ಯಾನಿಲಯದ ಮೂಲಕ ಕಳಿಸಿದರು. ಆಗಾಗ ನೆನಪಿನೋಲೆಗಳನ್ನೂ ರವಾನಿಸಿದ್ದಾಯಿತು. ಒಂದೆರಡು ವರ್ಷಗಳೇ ಈ ವೃಥಾ ಪಿಷ್ಟಪೇಷಣದಲ್ಲಿ ವ್ಯರ್ಥವಾದುವು. ಏತನ್ಮಧ್ಯೆ ಎರವಲು ಸೇವೆಯಲ್ಲೇ ಸದಾನಂದ ಮುಂದುವರಿದರು. ಇಷ್ಟಾಗುವಾಗ ಸರ್ಕಾರದಿಂದ ಒಂದು ಬಾಂಬ್ ನಮ್ಮ ಮೇಲೆ ಬಿತ್ತು: ತತ್‌ಕ್ಷಣವೇ ಸದಾನಂದರರನ್ನು ಸರ್ಕಾರೀ ಸೇವೆಗೆ ವಾಪಾಸು ಕಳಿಸತಕ್ಕದ್ದು! ವಿಶ್ವಕೋಶದ ಕಾರ್ಯನಿರ್ವಾಹಕ ಅಥವಾ ಪ್ರಧಾನ ಸಂಪಾದಕರಾಗಲೀ ಆಡಳಿತ ವಿಭಾಗದ ಹಿರಿಯ ಅಧಿಕಾರಿಗಳಾಗಲೀ (ಕುಲಸಚಿವ, ಕುಲಪತಿ) ಈ ವಿಚಾರದಲ್ಲಿ ನಿರ್ಲಿಪ್ತರಾಗಿದ್ದು ಸದಾನಂದರರನ್ನು ಹಿಂದಕ್ಕೆ ಕಳಿಸಲು ಸಿದ್ಧತೆ ನಡೆಸಿದರು. ಇವರನ್ನು ಉಳಿಸಿಕೊಳ್ಳಲು ವಿಜ್ಞಾನ ಸಂಪಾದಕನಾಗಿ ನಾನೇನು ಮಾಡಬಹುದು? ಆಗ ಶಿಕ್ಷಣ ಮಂತ್ರಿಯಾಗಿದ್ದವರು ಎಂದೋ ಮಂಗಳೂರಿನಲ್ಲಿ ನನ್ನ ವಿದ್ಯಾರ್ಥಿಯಾಗಿದ್ದ ಬಿ.ಸುಬ್ಬಯ್ಯಶೆಟ್ಟಿ. ನೇರ ಇವರಲ್ಲಿಗೇ ಸದಾನಂದರ ಜೊತೆ ಹೋಗಿ ಇಡೀ ಸಮಸ್ಯೆಯನ್ನು ವಿವರಿಸಿದ್ದಾಯಿತು, "ಇದು ಕನ್ನಡದ ಕೆಲಸ. ಇದರಲ್ಲಿ ಮುಂದುವರಿಯಲು ಅಭ್ಯರ್ಥಿಗೆ ಇಷ್ಟವಿದೆ, ವಿಶ್ವವಿದ್ಯಾನಿಲಯಕ್ಕೆ ಸಮ್ಮತಿ ಇದೆ, ಇಂಥಾದ್ದರಲ್ಲೂ ಈ ಎಡವಟ್ಟು ಸಂಭವಿಸಿರುವುದು ಶಿಕ್ಷಣ ಇಲಾಖೆಯ ಜಡತ್ವದಿಂದ. ದಯವಿಟ್ಟು ಒಡನೆ ಯುಕ್ತ ಆದೇಶ ಹೊರಡಿಸಿ." ಮುಂದಿನ ಕೆಲವೇ ದಿನಗಳಲ್ಲಿ ಎಲ್ಲವೂ ಸರಿಯಾಯಿತು, ಸದಾನಂದ ಶಾಶ್ವತವಾಗಿ ನಮ್ಮ ಜೊತೆ ಉಳಿದರು.

ಹಾ.ತಿ.ಕೃಷ್ಣೇಗೌಡ ಇನ್ನೊಬ್ಬ ಸಮರ್ಥ ಯುವ ಸಹಾಯಕ ಸಂಪಾದಕ. ಸಾಹಿತ್ಯ, ಜಾನಪದ, ಕಲೆ ಮುಂತಾದವು ಇವರ ಕ್ರಿಯಾಕ್ಷೇತ್ರ. ಉತ್ತಮ ಸಂಶೋಧಕರಾಗಿ ಒಳ್ಳೆಯ ಕೆಲಸ ಮಾಡಿ ಪಿಎಚ್‌ಡಿ ಪದವಿ ಗಳಿಸಿದರು. ನಮ್ಮ ಸೋದರ ಪ್ರಕಟಣೆಯಾಗಿ ೧೯೭೭ರಲ್ಲಿ ಪ್ರಕಾಶಿತವಾದ ಕನ್ನಡ ವಿಷಯ ವಿಶ್ವಕೋಶ 'ಕರ್ನಾಟಕ' ಸಂಪುಟದ ಸಹಾಯಕ ಸಂಪಾದಕರಾಗಿ ಉತ್ಕೃಷ್ಟ ಸೇವೆ ಸಲ್ಲಿಸಿದ್ದರು (ಡೆಮಿ ಚತುರ್ಥಾಕಾರದ ೧೬೨೮ ಸಚಿತ್ರ ಪುಟಗಳು ಮತ್ತು ೬ ವರ್ಣಫಲಕಗಳು). ೧೯೮೧ರಲ್ಲಿ ವೀರಪ್ಪ ನಿರ್ಗಮಿಸಿದಾಗ ಪ್ರಧಾನ ಸಂಪಾದಕ ಹಾಮಾನಾ ಅವರಿಗೆ ಹೇಳಿದೆ,
"ವೃತ್ತಿಜ್ಯೇಷ್ಠತೆ ಗಮನಿಸಿ ಸದಾನಂದ ಅಥವಾ ಕೃಷ್ಣೇಗೌಡರಿಗೆ ಕಾರ್ಯನಿರ್ವಾಹಕ ಸಂಪಾದಕ ಹುದ್ದೆಗೆ ಬಡ್ತಿಕೊಡಿ."
"ಅವರಿಗೆ ಅನುಭವ ಸಾಲದು. ನೀವೇ ಈ ಹೆಚ್ಚಿನ ಹೊರೆ ಹೊರಲು ಸರಿ."
"ಹಾಗಾದರೆ ಸದಾನಂದರರನ್ನು ವಿಜ್ಞಾನ ಸಂಪಾದಕರಾಗಿ ಬಡ್ತಿಕೊಟ್ಟು ನೇಮಿಸಿ. ಈ ಕೃತಕ ಅಂತಸ್ತು ವ್ಯತ್ಯಾಸಗಳನ್ನು ಮರೆತು ನಾವೆಲ್ಲ ಒಂದೇ ತಂಡವಾಗಿ ಸಹಕರಿಸಿ ದುಡಿಯುತ್ತಿದ್ದೇವೆ. ಒಬ್ಬರಿಗಾದರೂ ಸದ್ಯ ಬಡ್ತಿ ದೊರೆಯಬೇಕು."

ಆದರೆ ಇಂಥ ಯಾವ ಸುಧಾರಣೆಗೂ ನಾಯಕರು ಸಿದ್ಧರಿರಲಿಲ್ಲ. ಏಕೆ? ಸ್ವಪ್ರತಿಷ್ಠೆಗೆ ಭಂಗ ಬಂದೀತೆಂಬ ವಿನಾಕಾರಣ ಆತಂಕ ಎಂಬುದು ಅನೇಕ ಸೂಕ್ಷ್ಮ ಸಂದರ್ಭಗಳಲ್ಲಿ ನನ್ನ ಗಮನಕ್ಕೆ ಬರುತ್ತಿತ್ತು.

೧೯೮೦ರ ದಶಕದಲ್ಲಿ ಯಾವುದೋ ಸರ್ಕಾರೀ ಆದೇಶದ ಮೇರೆಗೆ ವಿಶ್ವವಿದ್ಯಾನಿಲಯ ತನ್ನ ಸಿಬ್ಬಂದಿಯನ್ನು ಶಿಕ್ಷಣೇತರ (nonteaching) ಮತ್ತು ಶೈಕ್ಷಣಿಕ (teaching) ಎಂಬ ಎರಡು ವಿಭಾಗಗಳಾಗಿ ವಿಂಗಡಿಸಿತು. ಮೊದಲ ವಿಭಾಗದವರ ನಿವೃತ್ತಿ ವಯಸ್ಸು ೫೫, ಎರಡನೆಯವರದು ೬೦ ಎಂಬ ಹುಕುಂ ಕೂಡ ಜಾರಿಗೆ ಬಂತು. ಸ್ಪಷ್ಟವಾಗಿ ಇದೊಂದು ಪಕ್ಷಪಾತ ಅಥವಾ ಒಡೆದು ಆಳುವ ನೀತಿಯಾಗಿತ್ತು. ಎನ್.ಬಸವಾರಾಧ್ಯರು ಆಗ ನಮ್ಮ ಸಂಸ್ಥೆಯ ಗ್ರಂಥ ಸಂಪಾದನಾ ವಿಭಾಗದ ಉಪನಿರ್ದೇಶಕರಾಗಿ ಉತ್ಕೃಷ್ಟ ವಿದ್ವತ್ಪೂರ್ಣ ಸೇವೆ ಸಲ್ಲಿಸುತ್ತಿದ್ದರು. ಸತ್ಯಸಂಧರು, ಅಧಿಕಾರಮದೋನ್ಮತ್ತರ ಎದುರು ಸೆಟೆದು ನಿಂತು ಆತ್ಮ ಪ್ರತ್ಯಯ ಮೆರೆದ ದಿಟ್ಟರು. ಈ ಕಾರಣಕ್ಕಾಗಿ ಮೇಲಧಿಕಾರಿಗಳಿಗೆ ಇವರು ನುಂಗಲಾರದ ತುತ್ತಾಗಿದ್ದರು. ೧೯೮೧ರ ಆರಂಭದಲ್ಲಿ ಒಂದು ದಿನ ಬಸವಾರಾಧ್ಯರಿಗೆ ಯಾವುದೇ ಪೂರ್ವಸೂಚನೆ ಇಲ್ಲದೇ, "ಇಂದು ನಿಮಗೆ ವಯಸ್ಸು ೫೫ ತುಂಬಿರುವುದಾಗಿ ನಿಮ್ಮನ್ನು ಸೇವೆಯಿಂದ ಕಾನೂನು ಪ್ರಕಾರ ನಿವೃತ್ತಿಗೊಳಿಸಲಾಗಿದೆ" ಎಂಬ ದಿಢೀರ್ ಆದೇಶ ಬಂತು.

ಈ ಅಕ್ರಮ ಆದೇಶದ ಸಿಂಧುತ್ವವನ್ನು ಪ್ರಶ್ನಿಸಿ ಬಸವಾರಾಧ್ಯರು ರಾಜ್ಯದ ಉಚ್ಚನ್ಯಾಯಪೀಠಕ್ಕೆ ರಿಟ್ ಅರ್ಜಿ ಹಾಕಿ ತಡೆ ಆಜ್ಞೆ ತಂದರು. ಆಗ ಇವರೆತ್ತಿದ ಆಕ್ಷೇಪಣೆಗಳೆರಡು: ಶೈಕ್ಷಣಿಕ ಕಾರ್ಯವನ್ನೇ ತಾವು ಕೂಡ ಮಾಡುತ್ತಿರುವುದು, ಜೊತೆಗೆ ನಿವೃತ್ತಿ ಕುರಿತಂತೆ ಕಾನೂನು ಪ್ರಕಾರ ತಮಗೆ ೬ ತಿಂಗಳ ಮುನ್ಸೂಚನೆ ನೀಡಿರಬೇಕಾಗಿತ್ತು, ಆದರೆ ವಿಶ್ವವಿದ್ಯಾನಿಲಯ ಈ ಯಾವ ಅಂಶವನ್ನೂ ಪರಿಗಣಿಸಿಲ್ಲ. ವಿಶ್ವವಿದ್ಯಾನಿಲಯ ಜಗ್ಗಲಿಲ್ಲ. ವ್ಯಾಜ್ಯವನ್ನು ಮುಂದುವರಿಸಿತು. ಒಂದೆರಡು ವರ್ಷ ಸೆಣಸಿ ತೀರ್ಪು ಬಸವಾರಾಧ್ಯರ ಪರ – ಅವರ ಹುದ್ದೆ ಕೂಡ ಶೈಕ್ಷಣಿಕ – ಬಂದಾಗ ಅವರ ಸೇವೆಯನ್ನು ೬೦ರ ತನಕ ಮುಂದುವರಿಸಲೇಬೇಕಾಯಿತು. ವಿಶ್ವವಿದ್ಯಾನಿಲಯ ತೀವ್ರ ಮುಖಭಂಗ ಅನುಭವಿಸಬೇಕಾಯಿತು.

ನನ್ನ ಸೇವಾದಾಖಲಾತಿ ಪ್ರಕಾರ ೧೯೮೧ ಸೆಪ್ಟೆಂಬರ್ ೧೪ರಂದು ನನಗೆ ೫೫ ತುಂಬಲಿತ್ತು (ವಾಸ್ತವ ಜನನ ದಿನಾಂಕ ೩೦–೧–೧೯೨೬). ಬಸವಾರಾಧ್ಯ ಪ್ರಕರಣದಿಂದ ಎಚ್ಚೆತ್ತ ವಿಶ್ವವಿದ್ಯಾನಿಲಯ ಅದೇ ಸೆಪ್ಟೆಂಬರ್ ೧೪ರಂದು ನಿವೃತ್ತನಾಗಲು ನನಗೆ ೬ ತಿಂಗಳ ಮೊದಲೇ ಲಿಖಿತ ಅನುಮತಿ ನೀಡಿತು (ಮಾರ್ಚ್ ೧೯೮೧). ಸಂಸ್ಥೆಯ ನಿರ್ದೇಶಕ ಹಾ.ಮಾ.ನಾಯಕರು ನನ್ನನ್ನು ತಮ್ಮ ಕೊಠಡಿಗೆ ಕರೆಸಿ ಈ ಆದೇಶವನ್ನು ಕೊಡುತ್ತ, "ನಾನು ತೀವ್ರ ವ್ಯಥೆಯಿಂದ ನಿರ್ವಹಿಸಬೇಕಾದ ಕರ್ತವ್ಯವಿದು" ಎಂದರು.

"ಹಾಗೇನೂ ಯೋಚಿಸಬೇಡಿ. ಏಕೆಂದರೆ ನಿವೃತ್ತನಾಗಲು ನನಗೇನೂ ಆತಂಕವಿಲ್ಲ. ಎಲ್ಲ ಹೊಣೆಗಳನ್ನೂ ಪೂರೈಸಿದ್ದೇನೆ. ಆರೋಗ್ಯ ಚೆನ್ನಾಗಿದೆ. ಮುಂದೆ ಸ್ವತಂತ್ರವಾಗಿ ಕನ್ನಡದಲ್ಲಿ ವಿಜ್ಞಾನ ಪ್ರಸಾರ ಕಾರ್ಯಮಗ್ನನಾಗಿರುತ್ತೇನೆ. ಆದರೆ ಒಂದು ವ್ಯಥೆ ಇದೆ: ಈ ೧೪–ಸಂಪುಟಗಳ ಯೋಜನೆಯಲ್ಲಿ ೧೦ ಮಾತ್ರ ಸದ್ಯ ಪೂರ್ಣವಾಗಿದೆ. ಸರಿ, ಅದು ಮುಂದಿನವರ ಸಾಹಸವಾಗಲಿ."

"ಹಾಗಲ್ಲ. ಇದೊಂದು ಕೇವಲ ಕಾನೂನಿನ ಆವಶ್ಯಕತೆ ಪೂರೈಸಲು ಬಂದಿರುವ ಹುಕುಂ. ಈಗ ನೀವೊಂದು ಕೆಲಸ ಮಾಡಿ: ನಿಮ್ಮ ಸೇವಾವಿಸ್ತರಣೆ ಕೋರುವ ಒಂದು ಅರ್ಜಿಯನ್ನು ವಿಶ್ವವಿದ್ಯಾನಿಲಯಕ್ಕೆ ಈಗಲೇ ಸಲ್ಲಿಸಬೇಕು. ಉಳಿದುದೆಲ್ಲ ನನಗೆ ಬಿಡಿ."

"ಏನು ಮಾತು ನಾಯಕರೇ! ನನ್ನ ಅಪೇಕ್ಷೆ ಅಥವಾ ಕೋರಿಕೆ ಇಲ್ಲದೇ ಈ ಅಪ್ಪಣೆ ಬಂದಿದೆ. ಸರಿ, ಇದನ್ನು ಒಪ್ಪುತ್ತೇನೆಂದಾಗ ನೀವು ಬೇರೇನೋ ಹೇಳುತ್ತೀರಿ. ಒಂದು ಅಂಶ ಸ್ಪಷ್ಟಪಡಿಸಬಯಸುತ್ತೇನೆ: ಮೈಸೂರು ವಿಶ್ವವಿದ್ಯಾನಿಲಯದ ಪ್ರೀತಿಪೂರ್ವಕ ಆಹ್ವಾನ ಮನ್ನಿಸಿ ಬಂದಾತ ನಾನು, ಅರ್ಜಿ ಸಲ್ಲಿಸಿ ಬಂದಾತನಲ್ಲ, ಈಗ ಖಂಡಿತ ಆ ಕೆಲಸ ಮಾಡಲಾರೆ, ಕ್ಷಮಿಸಿ."

"ಹಾಗಲ್ಲ. ಈ ಕೆಲಸ ಮಾಡಲು ನಿಮ್ಮಷ್ಟು ಸಮರ್ಥರು ಯಾರೂ ಇಲ್ಲ. ನಿಮ್ಮ ಸೇವೆ ನಮಗೆ ಬೇಕೇ ಬೇಕು. ಕಾನೂನಿನ ಆವಶ್ಯಕತೆ ಪೂರೈಸಲು ನಿಮ್ಮ ಒಂದು ಅರ್ಜಿ ಬೇಕಾಗಿದೆ, ಅಷ್ಟೆ. ದಯವಿಟ್ಟು ಹಾಗೆ ಮಾಡಿ." ಅವರು ದೀನರಾಗಿದ್ದರು.

ಈ ಒಗಟು ನನಗರ್ಥವಾಗಲಿಲ್ಲ. ಆದರೆ ಅವರ ಮನ ನೋಯಿಸಲು ಇಷ್ಟಪಡದೆ ಒಂದು ಮಾತು ಹೇಳಿದೆ, "ಆಗಲಿ, ನಿಮ್ಮ ಮಾತಿಗೆ ಬೆಲೆ ಕೊಟ್ಟು ಅರ್ಜಿ ಬರೆದುಕೊಡುತ್ತೇನೆ, ಆದರೆ ನನ್ನದೇ ಧಾಟಿಯಲ್ಲಿ. ಒಂದೋ ಅದನ್ನು ನಿಮ್ಮ ಶಿಫಾರಸು ಸಹಿತ ಕುಲಸಚಿವರಿಗೆ ಕಳಿಸಿ, ಇಲ್ಲವೇ ನನ್ನನ್ನು ನಿವೃತ್ತನಾಗಲು ಬಿಡಿ."

ನ್ಯಾಯವು ವ್ಯಕ್ತಿಯ ಪರವಾಗಿದ್ದು ಆತ ನೀತಿಚ್ಯುತನಾಗದಿರುವಾಗ ಆತನಲ್ಲೊಂದು ಸಾತ್ತ್ವಿಕ ಆಕ್ರೋಶ ಮೂಡಿ ಮುನ್ನುಗ್ಗಲು ಧೈರ್ಯ ನೀಡುತ್ತದೆ. ಸೇನಾಪರಿಭಾಷೆಯಲ್ಲಿ ``Offence is the best form of defence.'' (ಆಕ್ರಮಣವೇ ಅತ್ಯುತ್ಕೃಷ್ಟ ರಕ್ಷಣೋಪಾಯ.) ಮೂರು ಮುಖ್ಯ ಅಂಶಗಳನ್ನು ಒತ್ತಿಹೇಳುವ ಅಧಿಕೃತ ಪತ್ರವೊಂದನ್ನು ಬರೆದುಕೊಟ್ಟೆ. ಸಾರ:

"ಮೂಲತಃ ಶೈಕ್ಷಣಿಕವಲಯದಲ್ಲಿದ್ದ ನನ್ನನ್ನು ವಿಶ್ವವಿದ್ಯಾನಿಲಯ ಆಹ್ವಾನಿಸಿ ಪ್ರಸ್ತುತ ಉನ್ನತ ಶೈಕ್ಷಣಿಕ ಕಾರ್ಯನಿರ್ವಹಣೆಗೆ ನಿಯೋಜಿಸಿದ್ದಾಗಿದೆ. ಆದ್ದರಿಂದ ನನ್ನ ಹುದ್ದೆ ಶಿಕ್ಷಣೇತರ ಅಲ್ಲ. ಎರಡನೆಯದಾಗಿ, ೧೪-ಸಂಪುಟಗಳ ಕನ್ನಡ ವಿಶ್ವಕೋಶ ಯೋಜನೆ ಇನ್ನೂ ಪೂರ್ಣಗೊಂಡಿಲ್ಲ. ನನ್ನನ್ನೀಗ ನಡುನೀರಿನಲ್ಲಿ ಕಾನೂನಿಗೂ ನನ್ನ ಇಚ್ಛೆಗೂ ವಿರುದ್ಧವಾಗಿ ನಿವೃತ್ತಿಗೊಳಿಸಿದರೆ ಅದೊಂದು ಸಾಮಾಜಿಕ ಅನ್ಯಾಯವೆನಿಸುತ್ತದೆ. ಅಲ್ಲದೇ ಸದ್ಯ ನನ್ನ ಹುದ್ದೆ ತುಂಬಬಲ್ಲ ಇನ್ನೊಬ್ಬ ಅರ್ಹ ವ್ಯಕ್ತಿ ಇಲ್ಲ. ಮೂರನೆಯದಾಗಿ ನಾನು ಈ ಉಲ್ಲಾಸದಾಯಕ ಸವಾಲಿನ ಜೊತೆ ಬೆಳೆದು ಬಂದಿದ್ದೇನೆ. ಇಲ್ಲಿಯ ತನಕ ನಾನು ಗಳಿಸಿರುವ ಅನುಭವ ಇದೇ ಯೋಜನೆಗೆ ಒದಗಿ ಇದು ಪೂರ್ಣಗೊಳ್ಳುವುದನ್ನು ನೋಡಬೇಕೆಂಬ ಬಯಕೆ ನನಗುಂಟು. ಈ ಮೂರನ್ನೂ ನೀವು (ವಿಶ್ವವಿದ್ಯಾಲಯ) ಗಂಭೀರವಾಗಿ ಪರಿಗಣಿಸಿ ಸದ್ಯದ ಆದೇಶವನ್ನು ರದ್ದುಮಾಡಬೇಕು, ಮತ್ತು ನನ್ನ ಸೇವಾವಧಿಯನ್ನು ೬೦ರ (೧೯೮೬) ತನಕವೂ ವಿಸ್ತರಿಸುವ ಹುಕುಂ ಹೊರಡಿಸಬೇಕು. ನೀವು ಮಾಡದಿದ್ದರೆ ನಾನು ಉಚ್ಚನ್ಯಾಯಪೀಠಕ್ಕೆ ಮೇಲ್ಮನವಿ ಸಲ್ಲಿಸಿಯೇತೀರುತ್ತೇನೆ."

ಬಸವಾರಾಧ್ಯರು ಮತ್ತೆ ಮತ್ತೆ ಎಚ್ಚರಿಕೆ ಮಾತನ್ನು ಹೇಳುತ್ತ ಬಂದರು, "ನಿಮ್ಮ ಅರ್ಜಿಯ ಗತಿ ಏನಾಯಿತೆಂದು ನೀವು ಮತ್ತೆ ಮತ್ತೆ ವಿಶ್ವವಿದ್ಯಾನಿಲಯಕ್ಕೆ ನೆನಪಿನೋಲೆ ಕಳಿಸಿ ಅಧಿಕಾರಿಗಳನ್ನು ಕಂಡು ಮಾತಾಡದಿದ್ದರೆ ಸೆಪ್ಟೆಂಬರ್ ೩೦ರಂದು ಅವರು ನಿಮ್ಮನ್ನು ನಿವೃತ್ತಿಗೊಳಿಸುವುದು ನೂರಕ್ಕೆ ನೂರು ಖರೆ." ಎಲ್ಲ ಬಗೆಯ ವಿಚಾರಣೆಗಳಿಗೂ ವಿಶ್ವವಿದ್ಯಾನಿಲಯದ ಪ್ರತಿಕ್ರಿಯೆ ನಿಗೂಢ ಮೌನ. ಸೆಪ್ಟೆಂಬರ್ ಆರಂಭದಲ್ಲೇ ಬಸವಾರಾಧ್ಯ ತಾಕೀತು ಮಾಡಿದರು, "ನೀವು ಈಗಿಂದೀಗಲೇ ಉಚ್ಚನ್ಯಾಯಪೀಠಕ್ಕೆ ರಿಟ್ ಅರ್ಜಿ ಸಲ್ಲಿಸಿ ವಿಶ್ವವಿದ್ಯಾನಿಲಯದ ಹುಕುಮಿಗೆ ತಡೆಯಾಜ್ಞೆ ತರದಿದ್ದರೆ ೩೦ರಂದು ಅವರು ನಿಮ್ಮನ್ನು ನಿವೃತ್ತಿಗೊಳಿಸಿಯೇ ಬಿಡುತ್ತಾರೆ. ಮತ್ತಾದರೂ ನೀವು ನ್ಯಾಯಾಲಯದ ಮೆಟ್ಟಲು ಹತ್ತುವುದು ಅನಿವಾರ್ಯ. ಸಮರದಲ್ಲಿ ಹೇಗೋ ಬದುಕಿನಲ್ಲೂ ಹಾಗೆ ಮುನ್ನೆಚ್ಚರಿಕೆ ಜರೂರಿನ ಅಗತ್ಯ."

ಸೆಪ್ಟೆಂಬರ್ ಎರಡನೆಯ ವಾರ. ಬೆಂಗಳೂರಿನಲ್ಲಿ ನನ್ನ ಅನೇಕ ಮಾಜಿ ಶಿಷ್ಯರು ವಕೀಲರಾಗಿ ಹೆಸರು ಮಾಡಿದ್ದರು. ಅವರ ಪೈಕಿ ಎ.ಗಣಪತಿ ಹೊಳ್ಳ ಎಂಬ ಹಿರಿಯ ಮತ್ತು ನುರಿತ ವಕೀಲರ ಮನೆಗೆ ಹೋಗಿ ನನ್ನ ಸಮಸ್ಯೆ ವಿವರಿಸಿದೆ ಮತ್ತು ಯುಕ್ತ ಮಾಹಿತಿ ಒದಗಿಸಿದೆ. ಆಗ ಅವರೊಂದು ಬಲು ದೊಡ್ಡ ಮಾತು ಹೇಳಿ ನನ್ನ ಮನ ಗೆದ್ದರು, "ನೀವು ನನ್ನ ಗುರುವಾಗಿ ಬಂದಿದ್ದರೆ ನನಗೆ ಹೆಚ್ಚು ಸಂತಸವಾಗಿರುತ್ತಿತ್ತು. ಈಗ ಕಕ್ಷಿಗಾರರಾಗಿ ಬಂದಿದ್ದೀರಿ. ಇದನ್ನೊಂದು ಅನುಗ್ರಹವೆಂದು ಭಾವಿಸಿ ನಿರ್ವಹಿಸುತ್ತೇನೆ. ಕಾನೂನು ದೃಷ್ಟಿಯಿಂದ ಇದು ತೀರ ಸರಳ ಸಂಗತಿ. ಲೀಲಾಜಾಲವಾಗಿ ನಿಮಗೆ ತಡೆಯಾಜ್ಞೆ ದೊರೆಯುತ್ತದೆ. ಅದರ ಉಸಾಬರಿ ನನಗೆ ಬಿಡಿ."

"ಬಹಳ ಸಂತೋಷ. ಇದಕ್ಕೆ ತಾಗುವ ಖರ್ಚು, ನಿಮ್ಮ ಸಂಭಾವನೆ ಮುಂತಾದವೆಲ್ಲ ಸೇರಿ ನಾನು ನಿಮಗೆಷ್ಟು ಮೊಬಲಗು ಪಾವತಿಸಬೇಕು?"

"ಕೋರ್ಟಿಗೆ ಸಲ್ಲಿಸಬೇಕಾದ ಸ್ಟಾಂಪ್, ರಿಜಿಸ್ಟ್ರೇಶನ್ ಇತ್ಯಾದಿ ಹಣ ಮಾತ್ರ ಕೊಟ್ಟರೆ ಸಾಕು."

"ನಿಮ್ಮ ಸೇವಾಶುಲ್ಕ?"

"ನನ್ನ ಪೂಜ್ಯ ಗುರುವಿನಿಂದ ನಾನದನ್ನು ತೆಗೆದುಕೊಳ್ಳುವುದಿಲ್ಲ. ಇದು ನಾನು ಪಾಲಿಸಿಕೊಂಡು ಬಂದಿರುವ ನೀತಿ. ದಯವಿಟ್ಟು ಒತ್ತಾಯ ಮಾಡಬೇಡಿ."

"ಅಲ್ಲಪ್ಪಾ! ನಾವೇನೂ ಪ್ರಾಚೀನ ಗುರುಕುಲವಾಸಿಗಳಲ್ಲ. ನೀವು ಕಾಲೇಜಿಗೆ ಸಂಬಳ (college fees) ಪಾವತಿಸಿ ಓದಿದ್ದೀರಿ, ನಾನೋ ಮಾಸಿಕ ತಲಬು (monthly salary) ಪಡೆದು ಪಾಠ ಬೋಧಿಸಿದ್ದೇನೆ. ಈ ವ್ಯವಹಾರದಲ್ಲಿ ಪುಕ್ಕಟೆ ಸೇವೆ ಎಲ್ಲಿದೆ? ಆದ್ದರಿಂದ ನಿಮ್ಮ ಸಂಭಾವನೆ ದಯವಿಟ್ಟು ನಿಗದಿ ಮಾಡಿ."

ಪರಸ್ಪರ ಗೌರವ ಅಭಿಮಾನಗಳ ಈ ಹವೆಯಲ್ಲಿ ಹೊಳ್ಳ ಒಂದು ಭರತವಾಕ್ಯ ಹೇಳಿ ನನ್ನ ಬಾಯಿಕಟ್ಟಿಸಿದರು, "ಹಾಗಾದರೆ ನೀವು ದಯವಿಟ್ಟು ಬೇರೆ ವಕೀಲರಲ್ಲಿಗೆ ಹೋಗಿ, ನನ್ನನ್ನು ಕ್ಷಮಿಸಿ."

"ಇನ್ನೊಬ್ಬರ ಹತ್ತಿರ ಹೋಗುವ ಪ್ರಶ್ನೆಯೇ ಇಲ್ಲ. ನೀವೇ ನಿಮ್ಮ ಷರತ್ತಿನ ಪ್ರಕಾರವೇ ನನ್ನ ಈ ಫಿರ್ಯಾದಿಯನ್ನು ಒಪ್ಪಿಕೊಂಡು ಮುಂದುವರಿಸಿ" ಎನ್ನುತ್ತ ಕೋರ್ಟ್ ಶುಲ್ಕ ಪಾವತಿಸಿ ಹಗುರಾಗಿ ಮರಳಿದೆ. ಸೆಪ್ಟೆಂಬರ್ ದ್ವಿತೀಯಾರ್ಧ. ನಾನು ತಿರುವನಂತಪುರಕ್ಕೆ ವೃತ್ತಿ ನಿಮಿತ್ತ ಹೋಗಿದ್ದೆ. ಕೊನೆಯ ವಾರ ಹಿಂತಿರುಗಿ ಬರುತ್ತಿದ್ದಾಗ ಬೆಂಗಳೂರಿನಲ್ಲಿ

ಅರ್ಧದಿನ ತಂಗಿ, ಹೊಳ್ಳರ ಮನೆಗೆ ಹೋದೆ. ಅವರು ನನಗೆ ಅಭಿನಂದನೆ ಸಲ್ಲಿಸುತ್ತ ನುಡಿದರು, "ತೀರ ಸುಲಭವಾಗಿ ತಡೆಯಾಜ್ಞೆ ದೊರೆತಿದೆ. ಅದನ್ನು ನೇರ ವಿಶ್ವವಿದ್ಯಾನಿಲಯಕ್ಕೆ ನೋಂದಾಯಿತ ಅಂಚೆ ಮೂಲಕ ಕೋರ್ಟೇ ರವಾನಿಸಿದೆ. ನೀವು ನಿಶ್ಚಿಂತೆಯಿಂದ ಮುದುವರಿಸಿ."

ಆ ಮೊದಲು ನಾನು ಇಂಥ ವ್ಯಾಜ್ಯಗಳಲ್ಲಿ ವಕೀಲರ ನ್ಯಾಯೋಚಿತ ರುಸುಂ ಎಷ್ಟೆಂದು ಇತರರೊಡನೆ ವಿಚಾರಿಸಿ ಅಷ್ಟನ್ನು ಹೊಳ್ಳರಿಗೆ ಪಾವತಿಸುವುದೆಂದು ನಿಶ್ಚಯಿಸಿದ್ದೆ. ಅದೇ ಪ್ರಕಾರ ಅವರಿಗೊಂದು ಲಕ್ಕೋಟೆ ಕೊಟ್ಟೆ. ಅವರು ಸರಕ್ಕನೆ ತಮ್ಮ ಕೈ ಹಿಂದಕ್ಕೆ ಸೆಳೆದು, "ಏನಿದು ಸರ್? ನಾ ಮುಟ್ಟಲಾರೆ."
"ಹೊಳ್ಳ! ಈಗ ನಾನು ನಿಮ್ಮ ಕಕ್ಷಿಗಾರನಾಗಿ ಮಾತಾಡುತ್ತಿಲ್ಲ, ಬದಲು ಗುರುವಾಗಿ ವಿಧಿಸುತ್ತಿದ್ದೇನೆ: ಪ್ರೀತಿಯ ಈ ಉಡುಗೊರೆಯನ್ನು ನೀವು ಸ್ವೀಕರಿಸಲೇಬೇಕು."
"ನೀವು ನನ್ನನ್ನು ಸೋಲಿಸಿಬಿಟ್ಟಿರಿ, ಸರ್!"
"ಹಾಗಲ್ಲ. ನೀವು ಸೋತು ಗೆದ್ದಿರಿ, ನಾನು ಗೆದ್ದು ಸೋತೆ, ಫಲವಾಗಿ ವಿಶ್ವಾಸ ಸರ್ವತ್ರ ಪ್ರಸರಿಸಿತು. ವಿಶ್ವಾಸವಿಲ್ಲದ ಬದುಕು ಅರ್ಥಹೀನ ಅಲ್ಲವೇ?"
"ಸರಿ. ಈಗ ನೀವು ಮೈಸೂರಿಗೆ ಮರಳಿದ ಒಡನೆ ಕೋರ್ಟ್ ಆದೇಶ ಕುಲಸಚಿವರಿಗೆ ತಲಪಿದೆಯೇ, ಅದರ ಮೇಲೆ ಯುಕ್ತ ಕ್ರಮ ಕೈಗೊಳ್ಳಲಾಗಿದೆಯೇ ಎಂಬ ವಿವರಗಳನ್ನು ಪರಿಶೀಲಿಸಿ ನನಗೆ ತಿಳಿಸುತ್ತ ಇರಿ. ಕಚೇರಿಗೆ ಬಂದಿದ್ದರೂ ಅದನ್ನು ದಾಖಲಿಸದೇ ಕಾಲಹರಣ ಮಾಡುವುದರಲ್ಲಿ ನಮ್ಮ ಬಾಬುಗಳು ನಿಸ್ಸೀಮರು."

ಮರುದಿನವೇ ವಿಶ್ವವಿದ್ಯಾನಿಲಯದ ಕುಲಸಚಿವ ವೆಂಕಟೇಶರನ್ನು ನೋಡಲು ಹೋದೆ. ಭೇಟಿ ನಿರಾಕರಿಸಿದರು. ಕುಲಪತಿ ಕೆ.ಎಸ್.ಹೆಗ್ಡೆಯವರ ಜೊತೆ ಈ ವಿಷಯ ಪ್ರಸ್ತಾವಿಸಿದಾಗ, ``I don't care. You retire on the due date'' ಎಂದು ಒರಟಾಗಿ ಅಬ್ಬರಿಸಿದರು. ಕುಲಸಚಿವಾಲಯದಲ್ಲಿಯ ಗುಮಾಸ್ತರಾಗಲೀ ಇವರ ಮೇಲಿನವರಾಗಲೀ, ಹೆಚ್ಚಿನವರು ನನ್ನ ಪರಿಚಿತರೇ ಆಗಿದ್ದರೂ, ಮೂಕರಾಗಿದ್ದರು. ಇಲ್ಲೇನೋ ಒಳಸಂಚು ನಾರುತ್ತಿದೆ ಎಂಬ ಗುಮಾನಿ ಬಂತು. ಸ್ಥಳೀಯ ಅಂಚೆ ಕಚೇರಿಯಲ್ಲಿ ವಿಚಾರಿಸಿದಾಗ ಕೋರ್ಟ್ ಪತ್ರವೊಂದನ್ನು ಕುಲಸಚಿವಾಲಯಕ್ಕೆ ಸೆಪ್ಟೆಂಬರ್ ೨೬ರಂದೇ ಬಟವಾಡೆ ಮಾಡಲಾಗಿತ್ತೆಂಬ ಸಂಗತಿ ತಿಳಿಯಿತು.
"ನೀವು ಊಹಿಸಿದಂತೆಯೇ ಆಗಿದೆ" ಎಂದು ಹೊಳ್ಳರಿಗೆ ದೂರವಾಣಿಸಿದೆ (ಸೆಪ್ಟೆಂಬರ್ ೨೭).
"ಒಂದು ಕೆಲಸ ಮಾಡಿ ಮೇಷ್ಟ್ರೇ! ನೀವು ೩೦ರ ಮುಂಜಾನೆ ತನಕ ಕಾದು ಆಗಲೂ ಅವರು ಇದೇ ನಾಟಕ ಆಡುತ್ತಿದ್ದರೆ ನನಗೆ ಫೋನ್ ಮಾಡಿ."

೩೦ರ ಮುಂಜಾನೆಯೂ ಯಥಾಸ್ಥಿತಿ. ಅವರೆಂದರು, "ಇಂದು ಸಂಜೆ ೪ ಗಂಟೆಗೆ ಮುನ್ನ ನನ್ನ ಒಬ್ಬ ಸಹಾಯಕ ವಕೀಲ ಕೋರ್ಟ್ ಆರ್ಡರ್ ಸಹಿತ ನೇರ ಕ್ರಾಫ್ಟರ್ಡ್ ಹಾಲ್ ಪ್ರವೇಶ ದ್ವಾರಕ್ಕೆ ಬರಲಿದ್ದಾರೆ. ಆ ಮೊದಲೇ ನೀವಲ್ಲಿ ನಿಂತಿದ್ದು ಅವರನ್ನು ಗುರುತಿಸಿ ಕುಲಸಚಿವರಲ್ಲಿಗೆ ಕರೆದುಕೊಂಡು ಹೋಗಿ." ಅವರು ಬಂದರು. ಉಭಯರಿಗೂ ಪರಸ್ಪರರನ್ನು ಗುರುತಿಸುವುದು ಕಷ್ಟವಾಗಲಿಲ್ಲ. ಕುಲಸಚಿವಾಲಯಕ್ಕೆ ಕರೆದುಕೊಂಡು ಹೋದೆ. ಅಲ್ಲಿ "ಕುಲಸಚಿವರು ಸಂಜೆ ೬ರ ತನಕ ಸಿಕ್ಕುವುದಿಲ್ಲ" ಎಂಬ ನಿಷ್ಠುರ ಪ್ರತಿಕ್ರಿಯೆ.
"ಚಿಂತೆ ಇಲ್ಲ. ಅವರ ಪರವಾಗಿ ನೀವು ಈ ಕೋರ್ಟ್ ಆರ್ಡರನ್ನು ಸ್ವೀಕರಿಸಿ ರಶೀತಿ ಕೊಡಿ" ಎಂದರು ಸಹಾಯಕವಕೀಲ.
"ಹಾಗೆ ಮಾಡಲು ನಮಗೆ ಅನುಮತಿ ಇಲ್ಲ."
"ಸ್ವಾಮೀ! ಈಗ ಮುಖ್ಯ ಪ್ರಶ್ನೆ ಇದು: ನಾನೊಬ್ಬ ಉಚ್ಚನ್ಯಾಯಾಲಯದ ವಕೀಲ, ಅಲ್ಲಿಂದ ನಿಮಗೊಂದು ಆದೇಶ ಸಲ್ಲಿಸಲು ಖುದ್ದು ಬಂದಿದ್ದೇನೆ, ಇದನ್ನು ನೀವು ಯಾವುದೇ ಸಬೂಬು ಒಡ್ಡಿ ಪಡೆದುಕೊಳ್ಳಲು ನಿರಾಕರಿಸಿದರೆ ಅಂಥ ಧಾರ್ಷ್ಟ್ಯದ ನಡವಳಿಕೆ ನ್ಯಾಯಾಲಯ ನಿಂದನೆಯಾಗುತ್ತದೆ. ಏನು ಮಾಡುತ್ತೀರಿ?" ಆ ಅಧಿಕಾರಿ ಕುಲಸಚಿವರ ರಹಸ್ಯ ಕೊಠಡಿ ಹೊಕ್ಕು ಬಂದ, ತೆಪ್ಪಗೆ ಆದೇಶವನ್ನು ಸ್ವೀಕರಿಸಿ ರಶೀತಿ ಕೊಟ್ಟ! ನನ್ನ ನಿವೃತ್ತಿ ಆಜ್ಞೆ ಪುಸ್ಸಾಯಿತು! ಏಕಿಂಥ ವೈಯಕ್ತಿಕ ದ್ವೇಷ? ಅದೂ ವಿಶ್ವವಿದ್ಯಾನಿಲಯಕ್ಕೆ ಖ್ಯಾತಿ ತರುತ್ತಿದ್ದ ಕನ್ನಡ ವಿಶ್ವಕೋಶ ಯೋಜನೆಯಲ್ಲಿ ನಿಷ್ಠೆಯಿಂದ ದುಡಿಯುತ್ತಿದ್ದ ನನ್ನಂಥ ನಿರಪರಾಧಿ ವಿರುದ್ಧ? ಇಂದಿಗೂ ಅರ್ಥವಾಗಿಲ್ಲ.

ಅಲ್ಲಿಗೇ ಬಿಡಲಿಲ್ಲ ಅವರ (ವಿನಾ ಕಾರಣ) ಕೋಪ. ಫಿರ್ಯಾದಿಯನ್ನು ಮುಂದಿನ ಎರಡು ವರ್ಷಕ್ಕೂ ಹೆಚ್ಚು ಕಾಲ ಮುಂದುವರಿಸಿದರು: ನನ್ನದು ಶಿಕ್ಷಣೇತರ ಹುದ್ದೆ, ಆದ್ದರಿಂದ ವಿಶ್ವವಿದ್ಯಾನಿಲಯದ ಆದೇಶ ಸಾಧುವಾಗಿದೆ. ಆ

ಅವಧಿಯಲ್ಲಿ ನನ್ನ ನಿಗದಿ ಸಂಬಳವೇನೋ ಬರುತ್ತಿತ್ತು. ಆದರೆ ಅದರಲ್ಲಿ ಮಾಮೂಲಾಗಿ ದೊರೆಯಬೇಕಾಗಿದ್ದ ಬಡ್ತಿ ಮಾತ್ರ ಮಂಜೂರಾಗಲಿಲ್ಲ. ಈ ನಡುವೆ ನಮ್ಮ ಎರಡನೆಯ ಮಗ ಆನಂದನ ಮದುವೆಗಾಗಿ ನಾನು ೧೦ ದಿವಸ ಸಂಚಿತ ರಜೆ ಬೇಕೆಂದು ಮುಂಚಿತವಾಗಿಯೇ ಅರ್ಜಿ ಹಾಕಿದೆ. ಇದಕ್ಕೆ ಬಂದ ಪ್ರತಿಕ್ರಿಯೆ, ``Leave REFUSED. Go on loss of pay.'' ಹಗೆತನ ಇನ್ನೂ ಹೊಗೆಯುತ್ತಿತ್ತು! ಕೋರ್ಟಿನ ಅಂತಿಮ ತೀರ್ಪು ನನ್ನ ಪರವಾಗಿದ್ದುದು ಮಾತ್ರವಲ್ಲ, ಅದು ವಿಶ್ವವಿದ್ಯಾನಿಲಯದ ಅಶೈಕ್ಷಣಿಕ ಧೋರಣೆಗೆ ಛೀಮಾರಿ ಕೂಡ ಹಾಕಿತ್ತು, "ವಿಶ್ವಕೋಶದ ಕೆಲಸ ಶೈಕ್ಷಣಿಕವಲ್ಲದಿದ್ದರೆ ಇನ್ನಾವುದು ಶೈಕ್ಷಣಿಕ? ಇಂಥ ಅಲ್ಪ ವಿಷಯವೂ ಈ ಅಧಿಕಾರಿಗಳಿಗೆ ತಿಳಿಯುತ್ತಿಲ್ಲವಲ್ಲ" ಎಂದು ಝಾಡಿಸಿ ಫಿರ್ಯಾದಿಯನ್ನು ವಜಾ ಮಾಡಿತು. ಆ ತನಕ ತಡೆ ಹಿಡಿದಿದ್ದ ನನ್ನ ಸವಲತ್ತುಗಳನ್ನು ಒಡನೆ ಮಂಜೂರು ಮಾಡತಕ್ಕದ್ದು, ಇಲ್ಲವಾದರೆ ನ್ಯಾಯಾಂಗ ನಿಂದನೆಯ ಪ್ರಕರಣವನ್ನು ವಿಶ್ವವಿದ್ಯಾನಿಲಯ ಎದುರಿಸಬೇಕಾದೀತೆಂದು ಅವರಿಗೆ ಅಧಿಕೃತ ಪತ್ರ ಬರೆದೆ. ಹಲವಾರು ನೆನಪಿನೋಲೆಗಳನ್ನು ಇಷ್ಟೇ ನಿಷ್ಠುರವಾಗಿ ಬರೆದಾಗ ಕೊನೆಗೂ ಅವೆಲ್ಲವೂ ಬಂದುವು.

ಒಮ್ಮೆ ಸರ್ಕಾರದಿಂದ, "ವಿಶ್ವಕೋಶದ ಪ್ರಗತಿ ೧೯೮೦ರ ಅನಂತರ ತೀರ ನಿಧಾನವಾಗಿರುವುದೇಕೆ? ಸಮಸ್ಯೆಗಳೇನಿವೆ? ಇವನ್ನು ತಪಾಸಿಸಲು ಶಿಕ್ಷಣ ಮಂತ್ರಾಲಯದ ಕಾರ್ಯದರ್ಶಿ ಸ್ವತಃ ವಿಶ್ವವಿದ್ಯಾನಿಲಯಕ್ಕೆ ಬಂದು ಸಂಬಂಧಿಸಿದ ಅಧಿಕಾರಿಗಳ ಜೊತೆ ವಿಚಾರ ವಿನಿಮಯ ಮಾಡಲಿದ್ದಾರೆ" ಎಂಬ ಪತ್ರ ಬಂತು. ಪ್ರಧಾನ ಸಂಪಾದಕ ನಾಯಕರು ಆ ಸಭೆಗೆ ನಾನು ಹೋಗಿ ನಮ್ಮ ಸಮಸ್ಯೆಗಳನ್ನು ವಿಶದೀಕರಿಸಬೇಕೆಂದು ಅಪೇಕ್ಷಿಸಿದರು. ನಾನೆಂದೆ, "ವಿಶ್ವವಿದ್ಯಾನಿಲಯದ ಉಪೇಕ್ಷಾಧೋರಣೆಯೇ ಇಲ್ಲಿಯ ಮುಖ್ಯ ದೋಷ. ನನಗಿಂತ ಚೆನ್ನಾಗಿ ಇದು ನಿಮಗೆ ಗೊತ್ತಿದೆ. ಅಲ್ಲದೇ ಇದನ್ನು ನೀವು ಅಧಿಕ ಪರಿಣಾಮಕಾರಿಯಾಗಿಯೂ ನಯವಾಗಿಯೂ ಮಂಡಿಸಬಲ್ಲಿರಿ. ನಾನಾದರೋ ಅವರ ಕಣ್ಣಿಗೆ ಕುಕ್ಕಿದಂತೆ ಯಾವ ನಯ ನಾಜೂಕೂ ಇಲ್ಲದೇ ಸತ್ಯವನ್ನು ಒದರಿ ಬಿಡುತ್ತೇನೆ. ವೃಥಾ ಮನಃಕಷಾಯಕ್ಕೆ ಕಾರಣವಾಗಬಹುದು."
"ಇಲ್ಲ ಸರ್! ನೀವೇ ಹೋಗಿ" ಎಂದು ನನ್ನನ್ನೇ ಛೂಬಿಟ್ಟರು.

ಆ ಭವ್ಯ ಕೊಠಡಿಯಲ್ಲಿ ಕುಳಿತಿದ್ದವರು ಕುಲಪತಿ ಹೆಗ್ಡೆ, ಕುಲಸಚಿವ ವೆಂಕಟೇಶ್, ವಿತ್ತಾಧಿಕಾರಿ ಮತ್ತು ಕೇಂದ್ರ ಆಸನದಲ್ಲಿ ಕಾರ್ಯದರ್ಶಿ ಅಶ್ವತ್ಥನಾರಾಯಣ. 'ಅಪರಾಧಿಸ್ಥಾನ'ದಲ್ಲಿ ನಾನು. ನಾನು ಮಾಡದ ತಪ್ಪಿಗಾಗಿ ನನ್ನ ಮೇಲೆ ದೋಷಾರೋಪಣೆ ಮಾಡಲು ಈ ಶೃಂಗಸಭೆ ಇಲ್ಲಿ ಜಮಾಯಿಸಿದೆ ಎಂಬುದು ಆಗಿನ ನನ್ನ ಮನಃಸ್ಥಿತಿ. "ಆಕ್ರಮಣವೇ ಅತ್ಯುತ್ಕೃಷ್ಟ ರಕ್ಷಣೋಪಾಯ, ನಡೆ ಮುಂದೆ ಜಗ್ಗದೆಯೆ ಕುಗ್ಗದೆಯೆ ಹಿಗ್ಗಿ ನಡೆ ಮುಂದೆ" ಎಂದು ಮನ ವಿಡಿಯಿತು. ಕಾರ್ಯದರ್ಶಿ ಅತ್ಯಂತ ಸಭ್ಯ ಶೈಲಿ ಮತ್ತು ಇದಕ್ಕೊಪ್ಪುವ ದನಿಯಲ್ಲಿ ಪ್ರಸ್ತುತ ಸಭೆಯ ಉದ್ದೇಶವನ್ನು ವಿವರಿಸಿದರು. ತಾವು ಇಲ್ಲಿಗೆ ಬಂದಿರುವುದು ವಾಸ್ತವ ಸ್ಥಿತಿಗತಿ ಅರಿತು ಸಮಸ್ಯೆಯನ್ನು ಪರಿಹರಿಸುವ ನಿಟ್ಟಿನಲ್ಲಿ ಸರ್ಕಾರ ಏನು ಮಾಡಬಹುದು ಮತ್ತು ಮಾಡಬೇಕು ಎಂಬುದನ್ನು ಅರಿಯುವ ಸಲುವಾಗಿಯೇ ಹೊರತು ಯಾರ ಮೇಲಾದರೂ ಗೂಬೆ ಕೂರಿಸಲೆಂದಲ್ಲ ಎನ್ನುತ್ತ ಕುಲಪತಿಯತ್ತ ದೃಷ್ಟಿ ಹಾಯಿಸಿದರು.
ಕುಲಪತಿ ಒರಟಾಗಿ ಒದರಿದರು, "ನಮ್ಮ ಕಡೆಯಿಂದ ಸರ್ವ ಸಹಕಾರ ಕೊಟ್ಟಿದ್ದರೂ ಸಂಪಾದಕ ಮಂಡಳಿಯಲ್ಲಿಯ ನಿಧಾನ ಧೋರಣೆಯೇ ಇಲ್ಲಿಯ ಪ್ರಧಾನ ಕಾರಣ."
ದೃಢ ಖಚಿತ ದನಿಯಲ್ಲಿ ನಾನೆಂದೆ, "ಇದು ಮಿಥ್ಯಾರೋಪಣೆ. ವಿಶ್ವವಿದ್ಯಾನಿಲಯವೇ ಈ ಸ್ಥಗಿತತೆಗೆ ಕಾರಣ." ಕಡತಗಳನ್ನು ಬಿಚ್ಚಿ ಸಂಬಂಧಿಸಿದ ಪತ್ರವ್ಯವಹಾರವನ್ನು ತೋರಿಸಿದೆ. ಮುಖ್ಯಾಂಶಗಳು: ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಲ್ಲ; ದುಡಿಯುತ್ತಿರುವ ಕೆಲವೇ ಮಂದಿಗೆ ಯಾವುದೇ ಬಡ್ತಿ ಮಂಜೂರಾಗುತ್ತಿಲ್ಲ; ವಿಶ್ವಕೋಶದ ಸಂಪುಟಗಳನ್ನು ಮುದ್ರಿಸುತ್ತಿರುವ ಸರ್ಕಾರೀ ಮುದ್ರಣಾಲಯಕ್ಕೆ ಮುದ್ರಣ ಕಾಗದ ಖರೀದಿಸಲು ಹಣ ಸಲ್ಲಿಸಿಲ್ಲ – ಆಡಳಿತೆಯ ಈ ಮರಳ್ಗಾಡಿನಲ್ಲಿ ನೀರಿನೂಟೆಯನ್ನೆಲ್ಲಿ ಅರಸೋಣ? ಕುಲಪತಿ ಚಡಪಡಿಸಿದರು. ಉಳಿದ ಅಧಿಕಾರಿಗಳು ಎಲ್ಲೋ ನೋಡಿದರು. ಕಾರ್ಯದರ್ಶಿಯವರೇ ಸಮಾರೋಪಿಸಿದರು, "ಇವೆಲ್ಲ ಕೊರೆಗಳನ್ನೂ ನೀಗಲು ವಿಶ್ವವಿದ್ಯಾನಿಲಯಕ್ಕೆ ಅವಶ್ಯವಾದ ಸಹಕಾರ ನೀಡಲು ಸರ್ಕಾರ ಸಿದ್ಧವಿದೆ. ದಯವಿಟ್ಟು ಒಡನೆ ಸವಿವರ ಬೇಡಿಕೆ ಪತ್ರ ಬರೆಯಿರಿ."
"ನಮ್ಮ ಹಳೆಯ ಕಾಗದಗಳಲ್ಲಿ ಇವೆಲ್ಲವನ್ನೂ ವಿಸ್ತಾರವಾಗಿ ಕಾಣಿಸಿದೆ. ಕುಲಪತಿಗಳ ಕಚೇರಿ ಯುಕ್ತ ಕ್ರಮ ಕೈಗೊಳ್ಳಬೇಕು, ಅಷ್ಟೆ" ಎಂದು ಮಾತು ಕೂಡಿಸಿದೆ.
ಮುಂದೇನಾಯಿತು ಗೊತ್ತೇ? ಆಡಳಿತ ವಿಭಾಗ ಯಥಾಪ್ರಕಾರ ಶಿಶಿರನಿದ್ರೆಗೆ (hibernation) ಶರಣಾಯಿತು! ನಿಜ, "ಯಥಾ ರಾಜಾ ತಥಾ ಪ್ರಜಾ, ಯಥಾ ಮತಿ ತಥಾ ಪಥ" ಅನುಭವಜನ್ಯ ಸತ್ಯೋದ್ಗಾರಗಳು. ದೇಜಗೌ ಯುಗದಿಂದ ಹೆಗ್ಡೆ ಯುಗಕ್ಕಾದ ಅಧಃಪತನ ಹೃದಯವಿದ್ರಾವಕವಾಗಿತ್ತು. ಆದರೂ ಕನ್ನಡದ ಕೆಲಸ ಮುಂದುವರಿಯಲೇಬೇಕು.

ತಮಿಳು ತಲೆಗಳ ನಡುವೆ
ಅಧ್ಯಾಯ ಎಪ್ಪತ್ಮೂರು

ಮದ್ರಾಸು ನಗರದಲ್ಲಿ ನಾನು ಐದು ವರ್ಷವಿದ್ದುದು (೧೯೪೪–೪೯) ಸರಿಯಷ್ಟೆ. ಮದ್ರಾಸು ಪ್ರಾಂತದಲ್ಲಿ ತಮಿಳು, ತೆಲುಗು, ಮಲೆಯಾಳಂ ಮತ್ತು (ಕೆಲವು) ಕನ್ನಡ ಪ್ರದೇಶಗಳೂ ಸೇರಿದ್ದುವು. ಈ ನಾಲ್ಕೂ ಮಾತೃಭಾಷೆಗಳವರ ಮನಃಸ್ಥಿತಿ ಕುರಿತಂತೆ ಆಗ ನನಗೊಂದು ಅನುಭವಜನ್ಯ ನಿಯಮ ಹೊಳೆಯಿತು: ಮೊದಲ ಮೂವರಿಗೆ ತಮ್ಮ ಭಾಷೆ, ನೆಲ ಮತ್ತು ಸಂಸ್ಕೃತಿ ಬಗ್ಗೆ ಅತಿಶಯ ಅಭಿಮಾನ, ಒಗ್ಗಟ್ಟು, ಎಂದೂ ಇತರರೆದುರು ತಲೆ ಬಾಗದವರು. ಕನ್ನಡಿಗರಾದರೋ ತಾವಿರುವ ತಾಣಕ್ಕನುಗುಣವಾಗಿ ತಾಳಹಾಕುವವರು, ದ್ರವ ಪದಾರ್ಥ ಪಾತ್ರೆಯ ಆಕಾರ ತಳೆಯುವಂತೆ. ಈ ದಾಕ್ಷಿಣ್ಯದ ದುಷ್ಫಲ ಅಭಿಮಾನಶೂನ್ಯತೆ ಮತ್ತು ಅಸ್ಮಿತಾರಾಹಿತ್ಯ. ಇಂದಿನ (೨೦೦೬) ಪರಿಸ್ಥಿತಿ ಎಲ್ಲರಿಗೂ ಸುವೇದ್ಯ: ಕನ್ನಡನಾಡಿನಲ್ಲೇ ಕನ್ನಡಕ್ಕೆ ಮನ್ನಣೆ ಇಲ್ಲ.

ಇಲ್ಲಿ ಇನ್ನೊಂದು ತುಸು ಲಘುವಾದ, ಅಪ್ರಾಸಂಗಿಕವೆನಿಸಿದರೂ ಪರವಾ ಇಲ್ಲ, ಅನುಭವವನ್ನು ದಾಖಲಿಸಬೇಕು. ದಕ್ಷಿಣ ಭಾರತದ ನಾಲ್ಕು ಮುಖ್ಯ ಪ್ರದೇಶಗಳ ವಿದ್ಯಾರ್ಥಿಗಳು ಅಂದು ಮದ್ರಾಸಿನಲ್ಲಿ ಓದುತ್ತಿದ್ದರು. ಗಣಿತ ಪಾಠಗಳಲ್ಲಿ ಇಂಗ್ಲಿಷಿನ z ಅಕ್ಷರವನ್ನು ಮತ್ತೆ ಮತ್ತೆ ಬಳಸುತ್ತೇವೆ. ಒಬ್ಬ ತಮಿಳನ ಉಚ್ಚಾರಣೆಯಲ್ಲಿ ಇದು ez, ತೆಲುಗನದರಲ್ಲಿ jhad, ಮಲೆಯಾಳಿಯದರಲ್ಲಿ sed, **ಕನ್ನಡಿಗನದರ**ಲ್ಲಿ zed. ತಮಿಳರ ದೃಷ್ಟಿಯಲ್ಲಿ ತೆಲುಗ ಮಹಾಸ್ವಾರ್ಥಿ, ಮಲೆಯಾಳಿ ಕೂಪಮಂಡೂಕ, ಕನ್ನಡಿಗ ಬರೇ ಬೆಣ್ಣೆಮುದ್ದೆ, ತಾನಾದರೋ ಸಾಕ್ಷಾತ್ ಭಗವಂತನ ಅವತಾರವೇ! ಇನ್ನೂ ಒಂದು ಸಂಗತಿ ಅರಿತೆ: ನೀವು ಬಗ್ಗಿದರೆ ಅವರು ತಲೆ ತುಳಿಯುತ್ತಾರೆ, ಸೆಟೆದು ನಿಂತರೆ ಕಾಲಿಗೆ ಬೀಳುತ್ತಾರೆ! ಒಂದು ಅಂಶವಂತೂ ನಿಜ: ತಮಿಳರ ಕಾರ್ಯದಕ್ಷತೆ, ಸಾಂಘಿಕ ಸಾಹಚರ್ಯ, ಸ್ವಜನಪ್ರೇಮ, ಕಲಾಪ್ರಜ್ಞೆ, ಪ್ರವರ್ತನಶೀಲತೆ (initiative) ಮುಂತಾದವು ನಿಜಕ್ಕೂ ಅನುಕರಣೀಯ ಸದ್ಗುಣಗಳು.

ತಮಿಳರ ಸ್ವಭಾಷಾಮೋಹ ಉಗ್ರಸ್ವರೂಪದ್ದು, ಸೃಷ್ಟಿಕರ್ತ ಬ್ರಹ್ಮನ ವದನಾರವಿಂದದಿಂದ ಮೊದಲು ಉದುರಿದ ಭಾಷೆ ತಮ್ಮದು, ಅದು ಸೆಂದಮಿಳ್ ಎಂಬುದು ಅವರ ಅಚಲ ನಂಬಿಕೆ. ಇಂಥ ಉಗ್ರ ತಮಿಳು ಅಸ್ಮಿತೆಗೆ ಹೆಚ್ಚಿನ ಕೋಡು ಎಂ.ಜಿ.ರಾಮಚಂದ್ರನ್ ತಮಿಳುನಾಡಿನ ಮುಖ್ಯಮಂತ್ರಿಯಾದಾಗ ಮೂಡಿತು. ಆ ಒಂದು ಸುದಿನ ಅಲ್ಲಿಯ ಸರ್ಕಾರ 'ತಂಜಾವೂರು ತಮಿಳು ವಿಶ್ವವಿದ್ಯಾಲಯ'ವನ್ನು ರಾಜಧಾನಿ ಚೆನ್ನೈಯಲ್ಲಿ ಸ್ಥಾಪಿಸಿತು. ಉದ್ದೇಶ: ತಮಿಳು ಭಾಷೆ, ಸಂಸ್ಕೃತಿ, ಪ್ರದೇಶ, ಇತಿಹಾಸ ಮುಂತಾದವನ್ನು ಕುರಿತ ಸಮಗ್ರ ಸಂಶೋಧನೆ, ಪ್ರಕಟಣೆ ಮತ್ತು ಜಾಗತಿಕ ಪ್ರಚಾರ.

ಆರಂಭದ ದಿನಗಳಲ್ಲಿ ಅದರ ಅಧಿಕಾರಿಗಳು ಭಾರತೀಯ ಭಾಷೆಗಳ, ಮುಖ್ಯವಾಗಿ ದಕ್ಷಿಣದವುಗಳ ಸಾಲಿನಲ್ಲಿ, ತಮಿಳಿನ ವರ್ತಮಾನ ಸ್ಥಿತಿಯನ್ನು ಪರಿಶೀಲಿಸಿದರು. ಆಗ ಇವರಿಗೆ ಗೋಚರಿಸಿದ ಎರಡು ಅಪ್ರಿಯ ಮತ್ತು ಅಪಥ್ಯ ಸತ್ಯಗಳು: ತಮಿಳಿನಲ್ಲಿ ಸಮಗ್ರ ವಿಶ್ವಕೋಶ ಯೋಜನೆ ಇನ್ನೂ (೧೯೮೦ರ ದಶಕ) ಸಿದ್ಧವೇ ಆಗಿಲ್ಲ, ಕನ್ನಡದಲ್ಲಾದರೋ ಅದು ಈಗಾಗಲೇ ಭರದಿಂದ ಮುನ್ನಾಗುತ್ತಿದೆ! ಹೇಗೆ ಸಾಧ್ಯ? ಕಾರ್ಯನಿರ್ವಾಹಕ ಸಂಪಾದಕನ ಹೊಣೆಯನ್ನೂ ಹೊತ್ತಿದ್ದ ನನಗೆ ತಮಿಳು ವಿಶ್ವವಿದ್ಯಾಲಯದಿಂದ ಒಂದು ಅಧಿಕೃತ ಪತ್ರ ಬಂತು: ನಮ್ಮ ಕಾರ್ಯಶೈಲಿ ಪರಾಂಬರಿಸಲು ಅವರ ಪ್ರತಿನಿಧಿಗಳು ನಮ್ಮಲ್ಲಿಗೆ ಬರಬಹುದೇ? ವಿಶ್ವವಿದ್ಯಾನಿಲಯದ ಅನುಮೋದನೆ ಪಡೆದು ಅವರಿಗೆ ಹಸುರು ಕಂದೀಲು ತೋರಿಸಿದೆವು. ಬಂದವರು ಇಬ್ಬರು: ತಮಿಳು ವಿಶ್ವಕೋಶದ ನಿಯೋಜಿತ ಪ್ರಧಾನ ಸಂಪಾದಕ ಮತ್ತು ವಿಜ್ಞಾನ ಸಂಪಾದಕ. ಮೊದಲನೆಯವರು ಆಡಳಿತಾಂಗದಿಂದ ನಿವೃತ್ತರಾಗಿದ್ದ ಐಎಎಸ್ ಅಧಿಕಾರಿ, ಎರಡನೆಯವರು ನಿವೃತ್ತ ರೇಲ್ವೇ ನೌಕರ, ತಮಿಳಿನಲ್ಲಿ ಜನಪ್ರಿಯ ವಿಜ್ಞಾನ ಲೇಖಕ. ಎರಡು ದಿವಸ ಪೂರ್ತಿ ನಮ್ಮ ಮುದ್ರಿತ ಸಂಪುಟಗಳನ್ನೂ ಕಾರ್ಯವೈಖರಿಯನ್ನೂ ಪರಿಶೀಲಿಸಿ, "ಇಷ್ಟು ಕಡಿಮೆ ಸಿಬ್ಬಂದಿ, ಎಷ್ಟೊಂದು ಅಗಾಧ ಸಾಧನೆ" ಎಂದು ಉದ್ಗರಿಸಿ, "ಹಾಗಾದರೆ ನಿಮ್ಮ ವೇತನಶ್ರೇಣಿ ಉನ್ನತವಾಗಿರಬೇಕಲ್ಲವೇ?" ಎಂದು ಪ್ರಶ್ನಿಸಿದರು.
ಅದನ್ನು ಅವರಿಗೆ ಕೊಟ್ಟು ಹೇಳಿದೆ, "ಇಲ್ಲಿ ಅತ್ಯಂತ ಹೆಚ್ಚು ಸಂಬಳ ಪಡೆಯುತ್ತಿರುವವ ನಾನು. ನನ್ನ ಸಮಗ್ರ ಮಾಸಿಕ ವೇತನ ರೂ ೧೦೦೦ಕ್ಕಿಂತ ಕಡಿಮೆ. ಇದು ಹಾಗಿರಲಿ. ನಿಮ್ಮಲ್ಲಿಯ ಸಿಬ್ಬಂದಿ ಮತ್ತು ಸಂಬಳ ಹೇಗಿವೆ?"
ಒಬ್ಬ ಪ್ರಧಾನ ಸಂಪಾದಕ, ೫ ಸಂಪಾದಕರು, ಇವರಲ್ಲಿ ಒಬ್ಬೊಬ್ಬರಿಗೆ ತಲಾ ೩ ಉಪಸಂಪಾದಕರು, ಕಚೇರಿ ಸಿಬ್ಬಂದಿ ಇತ್ಯಾದಿ. ಸಂಬಳ ಪ್ರಧಾನ ಸಂಪಾದಕ ರೂ ೫೦೦೦ದಿಂದ ಮೇಲಕ್ಕೆ, ಸಂಪಾದಕನಿಗೆ ರೂ ೩೦೦೦ದಿಂದ ಮೇಲಕ್ಕೆ,

ಉಪಸಂಪಾದಕನಿಗೆ ರೂ ೧೦೦೦೦ದಿಂದ ಮೇಲಕ್ಕೆ. ತುಟ್ಟಿಭತ್ಯೆ ಮುಂತಾದವು ಅಲಾಯಿದ. ಬಂದಿದ್ದವರ ಶೈಕ್ಷಣಿಕ ಅರ್ಹತೆ ಮತ್ತು ಅವರಲ್ಲಿಯ ವೇತನಶ್ರೇಣಿ ಗಮನಿಸಿ ನಾನು ಮನದಲ್ಲಿ ಅಂದುಕೊಂಡೆ ಜನ್ಮಕ್ಕೂ ಇವರಿಂದ ಈ ಕೆಲಸ ಸಾಧ್ಯವಾಗದು. ದುಡ್ಡಾಗಲೀ ರಾಜಕೀಯ ಪ್ರಭಾವವಾಗಲೀ ಇತರ ಯಾವುದೇ ಶಿಕ್ಷಣೇತರ ಆಸಕ್ತಿಗಳಾಗಲೀ ವಿಶ್ವಕೋಶ ರಚನೆಯಂಥ ಬೌದ್ಧಿಕ ಯಾನದಲ್ಲಿ ಉಪಯುಕ್ತವಾಗವು.

"ನಾವು ಬಲು ಬೇಗ ಮದ್ರಾಸಿನಲ್ಲಿ ಅಖಿಲಭಾರತ ವಿಶ್ವಕೋಶ ನಿರ್ಮಾಪಕರ ಸಮ್ಮೇಳನ ಏರ್ಪಡಿಸುತ್ತೇವೆ. ಅದಕ್ಕೆ ನೀವು ದಯವಿಟ್ಟು ಬರಬೇಕು ಮತ್ತು ನಿಮ್ಮ ಅನುಭವವನ್ನು ವಿವರಿಸಬೇಕು" ಎಂದರು. ಒಪ್ಪಿದೆ.

ಯಥಾಕಾಲದಲ್ಲಿ ಅವರು ಮೂರು ದಿನಗಳ ಆ ಸಮ್ಮೇಳನವನ್ನು ಮದ್ರಾಸಿನಲ್ಲಿ ಏರ್ಪಡಿಸಿದರು. ನಾನೂ ಹೋಗಿದ್ದೆ. ಜ್ಞಾನ–ವಿಜ್ಞಾನ–ಕಲೆಗಳ ಆ ಶೃಂಗಭೇಟಿಗೆ ಆಸೇತುಹಿಮಾಚಲ ಎಲ್ಲ ಭಾಷೆಗಳವರೂ ತಮ್ಮತಮ್ಮ ಸಾಧನೆಗಳ ಸಹಿತ ಬಂದಿದ್ದರು. ಮುಖ್ಯಮಂತ್ರಿ ಎಂಜಿಆರ್ ಅದನ್ನು ಉದ್ಘಾಟಿಸಿದರು. ಶಿಕ್ಷಣಮಂತ್ರಿ ತಮಿಳಿನ ಹಿರಿಮೆ ಗರಿಮೆಗಳನ್ನು ಹಾಡಿ ಹೊಗಳಿ ಆಶಯಭಾಷಣವಿತ್ತರು. ಎಲ್ಲವೂ ತಮಿಳಿನಲ್ಲಿ. ಉತ್ತರ ಭಾರತದ ಪ್ರತಿನಿಧಿಗಳವರಿಗೆ ಒಂದು ವಾಕ್ಯವೂ ಅರ್ಥವಾಗಲಿಲ್ಲ. ಅರ್ಥವಾದ ನನಗೆ ನಗು ತರಿಸುವಂತಿತ್ತು ಮಂತ್ರಿದ್ವಯರ ನುಡಿದೊಂಬರಾಟ: ಜಗತ್ತಿನ ಸರ್ವೋತ್ಕೃಷ್ಟ ಮತ್ತು ಪ್ರಾಚೀನತಮ ಭಾಷೆ ತಮಿಳಿನಲ್ಲಿ ಇನ್ನೂ ವಿಶ್ವಕೋಶವಾಗಿಲ್ಲ, ಇದರ ಕಾರಣವನ್ನು ಪ್ರಸ್ತುತ ಸಮ್ಮೇಳನ ಶೋಧಿಸಿ ವಿಶ್ವಕೋಶನಿರ್ಮಾಣಕ್ಕೆ ಎಲ್ಲ ಭಾಷೆಗಳವರಿಗೂ ಉಪಯುಕ್ತವಾಗುವಂಥ ವಿಧಿ ನಿಯಮಗಳನ್ನು ರೂಪಿಸಬೇಕು – ಇಷ್ಟು ಆ ಕಂಠಶೋಷಣಗಳ ಸಾರ.

ವಾಸ್ತವ ವ್ಯವಹಾರಗಳಿಗೆ ಇಳಿದಾಗ ಪ್ರಕಟವಾದ ದೃಶ್ಯ ಹತಾಶೆ ತರುವಂತಿತ್ತು: ಹಿಂದಿ, ಬಂಗಾಲಿ, ಮರಾಠಿಗಳಂಥ ಮುಂಚೂಣಿ ಭಾಷೆಗಳಲ್ಲಿಯೂ ವಿಶ್ವಕೋಶ ರಚನೆಯಾಗಿರಲಿಲ್ಲ. ಕನ್ನಡವೊಂದರಲ್ಲೇ ಎನ್‌ಸೈಕ್ಲೊಪೀಡಿಯಾ ಬ್ರಿಟಾನಿಕಾ ಮಾದರಿಯಲ್ಲಿ ಆಗಲೇ ೧೦ ಸಂಪುಟಗಳು ಬೆಳಕು ಕಂಡಿದ್ದುವು. ಅವನ್ನೆಲ್ಲ ಅಲ್ಲಿ ಪ್ರದರ್ಶಿಸಿದೆ ಕೂಡ. ಮೊದಲ ಎರಡು ದಿನಗಳು ಅವರವರ ಮಾತೃಭಾಷೆಗಳಲ್ಲಿ ಈ ವೃಥಾ ಸಲ್ಲಾಪ ಮುನ್ನಡೆಯಿತು. ರಾಜಕುಮಾರಿಯ ಸ್ವಯಂವರಕ್ಕೆ ಆಗಮಿಸಿದ ಯುವಪರಾಕ್ರಮಿಗಳು ತಮ್ಮ ಅಟ್ಟಹಾಸಗಳನ್ನು ಕೊಚ್ಚಿಕೊಳ್ಳುವಂತೆ ಪ್ರಹಸನ ಸಾಗಿತು. ಕುರುಡರ ನಾಡಿನಲ್ಲಿ ಒಕ್ಕಣ್ಣನೇ ಸಾರ್ವಭೌಮನಂತಿತ್ತು ನನ್ನ ಸ್ಥಾನ! ಕೊನೆಯ ದಿನದ ಸಮಾರೋಪ ಭಾಷಣ ಮಾಡಲು ನನ್ನನ್ನು ಪ್ರಾರ್ಥಿಸಿದರು. ೧ ಗಂಟೆ ಕಾಲ ಇಂಗ್ಲಿಷಿನಲ್ಲಿ ಉಪನ್ಯಾಸವಿತ್ತೆ. ಸಾರ:

ಆತ್ಮಶ್ಲಾಘನೆ ಪರನಿಂದನೆಗಳಿಂದ ಯಾವ ರಚನಾತ್ಮಕ ಕಾರ್ಯವೂ ಸಿದ್ಧಿಸದು. ನಮ್ಮ ಭಾಷೆಯೇ ಸರ್ವಶ್ರೇಷ್ಠ ಎಂಬ ಭ್ರಮೆ ಆತ್ಮಘಾತಕ. ಭಾಷೆಗಳೆಲ್ಲವೂ ಮನುಷ್ಯಕೃತ. ಯಾವುದೇ ಭಾಷೆಯ ಹಿರಿಮೆ ಮತ್ತು ಪ್ರಸಾರ ಸಾಧ್ಯವಾಗುವುದು ಪ್ರತಿಭಾನ್ವಿತರು ಅದನ್ನು ತಮ್ಮ ಸೃಜನಶೀಲ ಭಾವನೆಗಳ ಸಂವಹನಕ್ಕೆ ಯುಕ್ತ ಮಾಧ್ಯಮವಾಗಿ ಬಳಸಿದಾಗ ಮಾತ್ರ. ವಿಲಿಯಮ್ ಶೇಕ್‌ಸ್ಪಿಯರ್ (೧೫೬೪–೧೬೧೬) ತನ್ನ ಯುಗಪರ್ವತಕ ನಾಟಕಗಳನ್ನು ಇಂಗ್ಲಿಷಿನಲ್ಲಿ ಬರೆದದ್ದರಿಂದ (ಆ ದಿನಗಳಲ್ಲಿ ರಾಜಭಾಷೆ ಲ್ಯಾಟಿನ್) ಇಂಗ್ಲಿಷಿಗೆ ಅಂತಸ್ತು ಒದಗಿತು. ಅದೇ ರೀತಿ ಮೈಖೇಲ್ ಫ್ಯಾರಡೇ (೧೭೯೧–೧೮೬೭) ಭೌತವಿಜ್ಞಾನದಲ್ಲಿ ತಾನು ಗೈದ ಮೂಲಭೂತ ಸಂಶೋಧನೆ ಮತ್ತು ಆವಿಷ್ಕಾರಗಳನ್ನು ತನಗೆ ತಿಳಿದಿದ್ದ ಏಕೈಕ ಭಾಷೆ ಇಂಗ್ಲಿಷಿನಲ್ಲಿ (ಇದು ಆತನ ತಾಯಿನುಡಿ ಕೂಡ) ಅಭಿವ್ಯಕ್ತಿಸಿದ್ದರಿಂದ ವಿಜ್ಞಾನಸಂವಹನ ಮಾಧ್ಯಮವಾಗಿಯೂ ಇಂಗ್ಲಿಷ್ ಪ್ರಸಿದ್ಧಿ ಗಳಿಸಿತು. ಆದ್ದರಿಂದ ೨೦ನೆಯ ಶತಮಾನದ ಕೊನೆಯ ಪಾದದಲ್ಲಿರುವ ಭಾರತೀಯರಾದ ನಾವು ಅನುಸರಿಸಬೇಕಾದ ಹಾದಿ ಒಂದೇ: ನಮ್ಮ ನಮ್ಮ ಮಾತೃಭಾಷೆಗಳಲ್ಲಿ ಆಧುನಿಕ ಚಿಂತನೆಗಳನ್ನು ಸಂವಹನಿಸಲು ದೃಢ ಪ್ರಯತ್ನ; ಈ ಜ್ಞಾನಯಜ್ಞದಲ್ಲಿ ಭಾಗಿಗಳಾಗುವ ವಿಶ್ವಕೋಶ ನಿರ್ಮಾಪಕರಲ್ಲಿ ವಿಷಯತಜ್ಞತೆ, ಇಂಗ್ಲಿಷ್–

ಪ್ರಾವೀಣ್ಯ, ಮಾತೃಭಾಷಾ ಪ್ರಭುತ್ವ ಮತ್ತು ಈ ಕಾರ್ಯದ ಬಗ್ಗೆ ಪರಿಪೂರ್ಣ ನಿಷ್ಠೆ ಸಂಗಳಿಸಿರಲೇಬೇಕು. ಕನ್ನಡದಲ್ಲಿ ನಾವು ಈ ಕೆಲಸವನ್ನು ಸಾಧಿಸುತ್ತಿರುವೆವೆಂದರೆ ಕನ್ನಡ ಭಾಷೆ ಇತರ ಭಾಷೆಗಳಿಗಿಂತ ಶ್ರೇಷ್ಠವೆಂಬ ಕಾರಣದಿಂದ ಅಲ್ಲ, ಇತರ ಭಾಷಿಕರು ತಮ್ಮ ಕಣ್ಣು ತೆರೆದು ಜಗತ್ತನ್ನು ನೋಡಲಿಲ್ಲ ಅಥವಾ ಇಂಗ್ಲಿಷಿಗೆ ತಮ್ಮ ಅಸ್ಮಿತೆಯನ್ನೇ ಅರ್ಪಿಸಿಬಿಟ್ಟಿದ್ದಾರೆ ಎಂದರ್ಥ. ವಿಶ್ವಕೋಶ ನಿರ್ಮಾಣದ ಜೊತೆಗೆ ಶಿಕ್ಷಣ ಮತ್ತು ಆಡಳಿತ ಮಾಧ್ಯಮ ಆಯಾ ರಾಜ್ಯದಲ್ಲಿ ಆಯಾ ಪ್ರಾದೇಶಿಕ ಭಾಷೆಯೇ ಆಗಬೇಕೆಂಬ ಆದೇಶವನ್ನು ರಾಜ್ಯ ಸರ್ಕಾರಗಳು ಘೋಷಿಸಿ ಆಚರಣೆಗೆ ತರಬೇಕು. ಅಪೇಕ್ಷಿಸಿದವರಿಗೆ ಇಂಗ್ಲಿಷ್ ಕಲಿಯಲು ಅವಕಾಶಗಳನ್ನು ಒದಗಿಸಬೇಕು.

ಸಭಾಸದರ ಪ್ರತಿಕ್ರಿಯೆ ದಿವ್ಯಮೌನ! ಏಕೆಂದರೆ ಸ್ವಭಾಷಾಮೋಹ. ಆ ಸಮ್ಮೇಳನದಿಂದ ನನಗೊಂದು ಅಂಶ ಸ್ಪಷ್ಟವಾಯಿತು: ಕನ್ನಡಿಗರ ಕೀಳರಿಮೆಗೆ ಏನೂ ಕಾರಣವಿಲ್ಲ, ಜೊತೆಗೆ, ಸ್ವಂತ ಸಾಮರ್ಥ್ಯ ಮತ್ತು ಸಾಧನೆ ಕುರಿತಂತೆ ಅವಜ್ಞೆ ಸರ್ವಥಾ ಸಲ್ಲದು.

ಭಾಷಾಂತರ ತಂದ ಅವಾಂತರಗಳು
ಅಧ್ಯಾಯ ೭೪

ಐದನೆಯ ಸಂಪುಟದಲ್ಲಿ (೧೯೭೪ರಲ್ಲಿ ಪ್ರಕಟವಾಯಿತು) 'ಗಣಕ' ಲೇಖನವೂ ಸೇರಿರಬೇಕೆಂಬುದು ನಮ್ಮ ಯೋಜನೆ. ಅಂದು ಮೈಸೂರಿನ ಯಾವ ಕಾಲೇಜಿಗೂ ಗಣಕ ಬಂದಿರಲಿಲ್ಲ. ಎಂಜಿನಿಯರಿಂಗ್ ಕಾಲೇಜುಗಳಲ್ಲೇನೋ ಗಣಕಪಾಠಗಳು ನಡೆಯುತ್ತಿದ್ದುವು – ಎಲ್ಲವೂ ಸೈದ್ಧಾಂತಿಕ ಮಟ್ಟದಲ್ಲಿ! ನಮ್ಮ ಎರಡನೆಯ ಮಗ ಆನಂದ ಸ್ವಂತ ಯೋಗ್ಯತೆ ಆಸಕ್ತಿಗಳಿಂದ ಮೈಸೂರಿನ ಜೆ.ಸಿ. ಎಂಜಿನಿಯರಿಂಗ್ ಕಾಲೇಜಿಗೆ ಪ್ರವೇಶ ಪಡೆದು (ಡೊನೇಶನ್ ಹಾವಳಿ ಶುರುವಾಗಿರದ ದಿನಗಳವು) ಬಿ.ಇ. (ಗಣಕ) ಪರೀಕ್ಷೆಯಲ್ಲಿ ಉತ್ತಮ ಶ್ರೇಣಿ ಗಳಿಸಿ ಉತ್ತೀರ್ಣನಾದ (೧೯೮೦). ಇವನಾದರೂ ವಾಸ್ತವ ಗಣಕದೊಡನೆ ವ್ಯವಹಾರ ತೊಡಗಿದ್ದು ದೂರದ ಅಸ್ಸಾಮಿನಲ್ಲಿ ಕಂಪ್ಯೂಟರ್ ಎಂಜಿನಿಯರ್ ವೃತ್ತಿ ಸೇರಿದಾಗ ಮಾತ್ರ (೧೯೮೧).

೧೯೭೦ರ ದಶಕದಲ್ಲಿ ನಮ್ಮ ವಿಶ್ವಕೋಶಕ್ಕೆ 'ಗಣಕ' ಲೇಖನವನ್ನು ಕನ್ನಡದಲ್ಲಿ ಬರೆದುಕೊಡಬಲ್ಲ ವಿಷಯ–ಭಾಷಾತಜ್ಞ ಯಾರು, ಎಲ್ಲಿದ್ದಾರೆ? ಆಗ ಮುಂಬಯಿಯ ತಾತಾ ಮೂಲಭೂತ ವಿಜ್ಞಾನ ಸಂಸ್ಥೆಯಲ್ಲಿ (Tata Institute of Fundamental Research) ಗ್ರಂಥಪಾಲರಾಗಿದ್ದ ಕನ್ನಡದ ಡಿಂಗರಿಗ ಶ್ರೀನಿವಾಸ ಹಾವನೂರರಿಗೆ ಕಾಗದ ಬರೆದು ಇಂಥ ಒಬ್ಬ ವಿದ್ವಾಂಸರ ನೆರವನ್ನು ನಮಗೆ ಒದಗಿಸಿಕೊಡಬೇಕೆಂದು ಪ್ರಾರ್ಥಿಸಿದೆ. ಅಲ್ಲಿಯೇ ಗಣಕ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದ ಕನ್ನಡಿಗ ಎನ್. ಶೇಷಗಿರಿಯವರಿಂದ ಈ ಪ್ರೀತಿಯ ಕೆಲಸ ಮಾಡಿಸಿಕೊಡುವುದಾಗಿ ಅವರಿಂದ ಆಶ್ವಾಸನೆ ಬಂತು.

ಕೆಲವೇ ದಿನಗಳಲ್ಲಿ ಶೇಷಗಿರಿಯವರಿಂದ ನಮಗೆ ಬಂದ ಕಾಗದದ ಪ್ರಕಾರ ಅವರು ಕನ್ನಡದಲ್ಲಿ ನಿರೂಪಿಸಲು ಪ್ರಯತ್ನಿಸಿ ಸೋತುದರಿಂದ ಇಂಗ್ಲಿಷಿನಲ್ಲಿ ಬರೆಯಲು ನಮ್ಮ ಒಪ್ಪಿಗೆ ಕೇಳಿದರು. ಮೂಲದ್ರವ್ಯ ಗಟ್ಟಿಯಾಗಿದ್ದರೆ ಅನುವಾದ ತೀರ ಸುಲಭವೆಂದು ಅನುಭವದಿಂದ ಕಲಿತಿದ್ದೆ. ನಮ್ಮ ಸಮ್ಮತಿ ಸೂಚಿಸಿದೆವು. ಇಂಗ್ಲಿಷ್ ಲೇಖನ ಕೈಸೇರುವ ವೇಳೆಗೆ ಐದನೆಯ ಸಂಪುಟದ ಪೂರ್ವಾರ್ಧ ಮುದ್ರಣವಾಗಿತ್ತು. ನನಗೆ ಒಂದಿಷ್ಟೂ ಬಿಡುವಿಲ್ಲದುದರಿಂದ ಅದನ್ನು ಅನುವಾದಿಸಲು ನಿವೃತ್ತ ಭೌತವಿಜ್ಞಾನ ಪ್ರಾಧ್ಯಾಪಕರೊಬ್ಬರಿಗೆ ಒಪ್ಪಿಸಿದೆವು. ಇವರು ಕನ್ನಡದಲ್ಲಿ ವಿಜ್ಞಾನ ಗ್ರಂಥಕರ್ತರು ಮತ್ತು ನಮ್ಮ ಸಮಾಲೋಚಕರು ಕೂಡ. ಕೇವಲ ಒಂದು ವಾರದಲ್ಲಿ ಈ ಕೆಲಸ ಮುಗಿಸಿ ಇಂಗ್ಲಿಷ್ ಮೂಲ ಮತ್ತು ಕನ್ನಡ ಅನುವಾದ ಎರಡನ್ನೂ ನಮಗೆ ಮರಳಿಸಿದರು. ಒಡನೆ ಅನುವಾದಿತ ಲೇಖನವನ್ನು ಬೆರಳಚ್ಚು ಮಾಡಿಸಿದ್ದೂ ಆಯಿತು.

ನಾಯಕರೆಂದರು, "ಇದನ್ನೇ ಮುದ್ರಣಾಲಯಕ್ಕೆ ರವಾನಿಸಿ. ಮುಂದೆ ಕರಡುಪ್ರತಿ ಬಂದಾಗ ಅದನ್ನು ಸಂಪಾದಕೀಯ ಪರಿಷ್ಕರಣಕ್ಕೆ ಒಳಪಡಿಸಬಹುದು. ಹೇಗಿದ್ದರೂ ಆ ಭಾಷಾಂತರಕಾರರು ಈ ಕೆಲಸದಲ್ಲಿ ನುರಿತವರಲ್ಲವೇ? ಪ್ರಸ್ತುತ ನಾಲ್ಕನೆಯ ಸಂಪಟದ ಕೊನೆಯ ಲೇಖನವಾಗಿ 'ಗಣಕ' ಬರಲಿ."

"ಆ ಧೈರ್ಯ ನನಗಿಲ್ಲ. ಒಮ್ಮೆಯಾದರೂ ಇದರ ಮೇಲೆ ನಾನು ಕಣ್ಣಾಡಿಸಲೇಬೇಕು. ಅಂತಿಮವಾಗಿ ನನ್ನ ಶಿಲುಬೆಯನ್ನು ನಾನೇ ಹೊರಬೇಕಲ್ಲವೇ?"

ಅನುವಾದವನ್ನು ಓದುತ್ತ ಹೋದಂತೆ ‘ಗಣಕಕ್ಕೆ ಉಪದೇಶ,’ ‘ರಾಜ್ಯಪಾಲರು ಈ ಯಂತ್ರದಲ್ಲಿ ಅಭಿನಯಿಸುವ ಪಾತ್ರ’ ಮಂತಾದ ಅನೇಕ ನುಡಿಮುತ್ತುಗಳನ್ನು ಕಂಡು ದಂಗುಬಡಿದು ಸಂವಾದೀ ಇಂಗ್ಲಿಷ್ ವಾಕ್ಯಗಳತ್ತ ಗಮನ ಹರಿಸಿದೆ. ಅವು ಅನುಕ್ರಮವಾಗಿ `instruction to the computer' ಮತ್ತು `the role played by the governor in this machine' ಆಗಿದ್ದುವು! ಮೂಲದಲ್ಲಿಯ instruction ಅನುವಾದದಲ್ಲಿ ‘ಉಪದೇಶ,’ role played ‘ಅಭಿನಯಿಸುವ ಪಾತ್ರ’ ಮತ್ತು governor ‘ರಾಜ್ಯಪಾಲ’ ಎಂಬ ವಿಕೃತರೂಪಗಳಲ್ಲಿ ನನ್ನನ್ನು ಅಣಕಿಸುತ್ತಿದ್ದುವು. ಪ್ರಕೃತ ಸಂದರ್ಭದಲ್ಲಿ ಸರಿಯಾದ ರೂಪಗಳು ‘ಸೂಚನೆ ಅಥವಾ ನಿರ್ದೇಶನ,’ ‘ನಿರ್ವಹಿಸುವ ಪಾತ್ರ/ಕಾರ್ಯ’ ಮತ್ತು ‘ಗತಿನಿಯಂತ್ರಕ’ ಎಂದಾಗಬೇಕು. ಇನ್ನು ಇತರ ಲೋಪದೋಷಗಳು ಅಸಂಖ್ಯ.

ನಾಯಕರಿಗೆಂದೆ, “ಈ ದೀರ್ಘ ಇಂಗ್ಲಿಷ್ ಲೇಖನ ಸ್ಪಷ್ಟವೂ ಆಕರ್ಷಕವೂ ಆಗಿದೆ. ಆದರೆ ಭಾಷಾಂತರ ಅಧ್ವಾನವಾಗಿದೆ. ನಾನೇ ಇದರ ಅನುವಾದ ಮಾಡಿ, ಮೂಲ ಲೇಖಕರಿಗೆ ಕಳಿಸಿ ಅವರ ಮನ್ನಣೆ ಪಡೆದು ಮತ್ತೆ ಮುದ್ರಣಕ್ಕೆ ಸಿದ್ಧಪಡಿಸುವುದೊಂದೇ ಮಾರ್ಗ. ಇದರ ಅರ್ಥ ‘ಗಣಕ’ ಲೇಖನವನ್ನು ಪ್ರಕೃತ ಐದನೆಯ ಸಂಪುಟದಲ್ಲಿ ಕೊನೆಯ ಲೇಖನವಾಗಿ ಅಳವಡಿಸುವುದು ಕೂಡ ಅಸಾಧ್ಯ. ಆ ಕೊರತೆಯನ್ನು ಇತರ ಲೇಖನಗಳಿಂದ ತುಂಬೋಣ.”

‘ಗಣಕ’ ಆರನೆಯ ಸಂಪುಟದ ಮೊದಲ ಲೇಖನವಾಗಿ ಪ್ರಕಟವಾಯಿತು. (ಐದನೆಯ ಸಂಪುಟದ ಪ್ರಕಟಣ ದಿನಾಂಕ ೨೫–೧೧–೧೯೭೨, ಆರನೆಯದರದು ೨–೧–೧೯೭೫.) ಲೇಖನದ ಮೊದಲ ವಾಕ್ಯ: “**ಗಣಕ:** ಮಾಹಿತಿಯನ್ನು ಪಡೆಯುವ, ಪ್ರಕ್ರಮಿಸುವ ಮತ್ತು ನೀಡುವ ಸ್ವಯಂಚಲಿ ಉಪಕರಣ (ಕಂಪ್ಯೂಟರ್).” ಹದಿನಾಲ್ಕು ಪರಸ್ಪರ ಪೂರಕ ಭಾಗಗಳಲ್ಲಿ ಈ ಸಚಿತ್ರ ಲೇಖನ ಸ್ವಯಂಪೂರ್ಣವಾಗಿದೆ. ಇದರ ವ್ಯಾಪ್ತಿ ೩೦+ ಮುದ್ರಿತ ಪುಟಗಳು. ಮೊದಲ ಬಾರಿಗೆ ಇದರಲ್ಲಿ programme, hardware, software ಎಂಬ ಪಾರಿಭಾಷಿಕ ಪದಗಳಿಗೆ ‘ಕ್ರಮವಿಧಿ,’ ‘ಯಾಂತ್ರಿಕಾಂಶ (ಯಂತ್ರಾಂಶ),’ ‘ತಾಂತ್ರಿಕಾಂಶ (ತಂತ್ರಾಂಶ)’ ಎಂಬ ಸಮಾನಾರ್ಥಕಗಳ ಬಳಕೆ ಆಗಿದೆ. ಭಾಷೆಗೆ ಅಭಿವ್ಯಕ್ತಿಯ ನೂತನಾಯಾಮಗಳನ್ನು ಕೊಡುವ ಇಂಥ ಸಂದರ್ಭಗಳಲ್ಲಿ ಸಂಪಾದಕನ ಜವಾಬುದಾರಿಕೆ ಎಷ್ಟು ಗುರುತರವಾದದ್ದು ಎಂಬುದಕ್ಕೆ ಇದೊಂದು ನಿದರ್ಶನ. ಇಂಥ ಎಲ್ಲ ಸಮಸ್ಯೆಗಳು ನಮ್ಮ ಅದಟನ್ನೂ ಪರಿಣತಿಯನ್ನೂ ಕ್ಷಣ ಕ್ಷಣ ಒರೆಗೆ ಹಚ್ಚುತ್ತಿದ್ದ ಸವಾಲುಗಳಾಗಿದ್ದುವು.

ಇನ್ನೊಮ್ಮೆ ನಮ್ಮ ಸಹಾಯಕರೊಬ್ಬರು ಸಂಪಾದಿಸಿದ್ದ ‘ಗೆಲಿಲಿಯೊ ಗೆಲಿಲೀ’ ಲೇಖನ ಇದರ ಅಂತಿಮ ರೂಪದಲ್ಲಿ ನನ್ನ ಮೇಜಕ್ಕೆ ಬಂತು. ಓದದೇ ಅದರ ಮೇಲೆ ಚುಟುಕು ದಸ್ಕತ್ತು ಗುಜರಾಯಿಸಿ ಆಗಲೇ ಅದನ್ನು ಮುದ್ರಣಕ್ಕೆ ಹೊತ್ತು ಹಾಕಬಹುದಿತ್ತು. ಆದರೆ ಅಂತಿಮವಾಗಿ ನನ್ನ ಶಿಲುಬೆಯನ್ನು ನಾನೇ ಹೊರಬೇಕಲ್ಲವೇ? ಎಚ್ಚರಿಕೆಯಿಂದ ತಪಾಸಿಸುತ್ತ ಹೋದಂತೆ “ಈತ [ಗೆಲಿಲಿಯೊ] ಚರ್ಚ್ ಎಂಬಾತನೊಡನೆ ವಾದಮಾಡಿ ವಿಜ್ಞಾನ ವಿಷಯಗಳಲ್ಲಿ ಅವನ ಹಸ್ತಕ್ಷೇಪವನ್ನು ವಿರೋಧಿಸಿದ” ಎಂಬ ವಾಕ್ಯ ನನ್ನ ವಿಶೇಷ ಲಕ್ಷ್ಯ ಸೆಳೆಯಿತು. ಮೊದಲ ಪ್ರತಿಕ್ರಿಯೆ, “ಹಾಗಾದರೆ ಆ ಚರ್ಚ್ ಒಬ್ಬ ಗೆಲಿಲಿಯೊ–ಸಮಾನ ಮೇಧಾವಿ ಆಗಿರಬೇಕು, ಇಂಥವನ ಬಗ್ಗೆ ಒಂದು ಪ್ರತ್ಯೇಕ ಲೇಖನ ವಿಶ್ವಕೋಶದಲ್ಲಿರಬೇಕು” ಎಂದು ಭಾವಿಸಿ ಕಡತಗಳನ್ನೂ ಆಕರ ಗ್ರಂಥಗಳನ್ನೂ ಪರಿಶೀಲಿಸಿದೆ. ಅಂಥ ಒಬ್ಬ ಗಣ್ಯನ ಪತ್ತೆ ಆಗಲಿಲ್ಲ. ಆಗ ಸಹಾಯಕ ಸಂಪಾದಕರನ್ನೇ ‘ಚರ್ಚ್’ ಬಗ್ಗೆ ಮಾಹಿತಿ ಕೇಳಿದೆ. ಅವರೊಂದು ಆಕರ ಗ್ರಂಥದಲ್ಲಿ ಆ ಲೇಖನದ ಇಂಗ್ಲಿಷ್ ಮೂಲವನ್ನು ತೋರಿಸಿದರು. ಅಲ್ಲೇನಿತ್ತು ಗೊತ್ತೇ? He [Galileo] effectively opposed Church's intervention in scientific matters.

“ಸ್ವಾಮೀ! ಇಲ್ಲಿ Church ಪದ religion ಪದವನ್ನು ಸೂಚಿಸುವುದೇ ಹೊರತು ಒಬ್ಬ ವ್ಯಕ್ತಿಯನ್ನಲ್ಲ” ಎಂದೆ.

ಅವರ ವಾದ, “ಹಾಗಾದರೆ Church's ಎಂಬ ಅಧಿಸರ್ಗದ (ಅಪಾಸ್ಟ್ರಫಿ) ಬಳಕೆ ಏಕೆ? ವ್ಯಕ್ತಿನಾಮಗಳಲ್ಲಿ ಮಾತ್ರ ಅದರ ಬಳಕೆ ಅಲ್ಲವೇ?”

ವಿಜ್ಞಾನದಲ್ಲಿ ಒಬ್ಬ ಸ್ನಾತಕೋತ್ತರ ಪದವೀಧರನ ಈ (ಕು–)ವಾದ ನನಗೆ ಸಾಕ್ರೆಟೀಸನ ಉಕ್ತಿ ನೆನಪಿಗೆ ತಂದಿತು, “ತಿಳಿದಿಲ್ಲವೆಂದು ತಿಳಿದಾತ ತಿಳಿದಾತ, ತಿಳಿದಿದೆಯೆಂದು ತಿಳಿದಾತ ತಿಳಿದಾತನಲ್ಲ.” ಆದರೆ ಅದನ್ನು ಉಚ್ಚರಿಸಲಿಲ್ಲ.

ಒಮ್ಮೆ ಕರ್ನಾಟಕ ವಿಶ್ವವಿದ್ಯಾಲಯದಿಂದ ನನಗೊಂದು ಭಾಂಗಿ ಬಂತು. ಅದಕ್ಕೆ ಲಗತ್ತಿಸಿದ ಅಧಿಕೃತ ಪತ್ರದ ಸಾರ: ``Why am I like Dad? ಎಂಬ ಇಂಗ್ಲಿಷ್ ಜನಪ್ರಿಯ ವಿಜ್ಞಾನ ಪುಸ್ತಕದ ಕನ್ನಡಾನುವಾದವನ್ನು (‘ನಾನೇಕೆ ಅಪ್ಪನಂತೆ?’) ಲಗತ್ತಿಸಿದೆ. ಇದು ಮುದ್ರಣಕ್ಕೆ ಯೋಗ್ಯವಾಗಿದೆ ಎಂಬ ಶಿಫಾರಸು ನಿಮ್ಮಂಥ ತಜ್ಞರಿಂದ ನಮಗೆ ಅವಶ್ಯ

ಬೇಕು. ಇದರ ಅನುವಾದಕರೊಬ್ಬ ಸಮರ್ಥ ವಿಜ್ಞಾನಲೇಖಕ. ಆದ್ದರಿಂದ ಈ ಕೆಲಸ ನಿಮಗೆ ಹೆಚ್ಚೇನೂ ಭಾರವಾಗದು. ಈ ಸೇವೆಗೆ ಪ್ರತಿಫಲವಾಗಿ ನಿಮಗೆ ಮೂಲಗ್ರಂಥದ ೧೦೦ (ಒಂದು ನೂರು) ಪದಗಳಿಗೆ ರೂ ೩ರಂತೆ (ಮೂರು) ಸಂಭಾವನೆ ಪಾವತಿಸಲಾಗುವುದು."

ಆ ಕ್ಷಣ ಮೂರು ಅನುಮಾನಗಳು ನನ್ನಲ್ಲಿ ಮೂಡಿದುವು: ಸಂಭಾವನೆಯ ಮೊತ್ತ ತೀರ ಹೆಚ್ಚು, ನಾನೊಂದು ಸ್ಥೂಲ ಗಣನೆ ಮಾಡಿ ನೋಡಿದೆ, ಅದು ಸುಮಾರು ರೂ ೧೩೦೦ ಆಗಿತ್ತು; ಅನುವಾದಿತ ಕೃತಿಯೇ ಅನುವಾದಕರ ಯೋಗ್ಯತೆಯ ಒರೆಗಲ್ಲು, ಬೇರಾವುವೇ ವಿಶೇಷಣಗಳಲ್ಲ, ಇಂತಿರುವಲ್ಲಿ ವಿಶ್ವವಿದ್ಯಾಲಯವೇಕೆ ಅನುವಾದಕರ ಸಾಮರ್ಥ್ಯದ ಬಗ್ಗೆ ಹೆಚ್ಚಿನ ಶಿಫಾರಸು ಸೇರಿಸಬೇಕು? ಇಲ್ಲೇನೋ ಮರಸು ಕುಳಿತಿರಬಹುದು; ಆ ಅಧಿಕಾರಿಗಳಿಗೆ ಎಲ್ಲ ರೀತಿಗಳಲ್ಲಿಯೂ ನಾನೊಬ್ಬ 'ಬೇರವ,' ಹೀಗಿರುವಾಗ ನನ್ನನ್ನೇ ಆಯ್ದಿರುವುದರಲ್ಲೇನೋ ಹುನ್ನಾರ ಹುದುಗಿರಬಹುದು. ಎಚ್ಚರ ಮನವೇ, ಎಚ್ಚರೆಚ್ಚರ! ಒಡನೆ ಒಪ್ಪಿಗೆ ಪತ್ರ ರವಾನಿಸಿದೆ. ಇಂಗ್ಲಿಷ್ ಮೂಲವನ್ನು ಹಿಂದೆಂದೋ ಖರೀದಿಸಿ ಓದಿ ಮೆಚ್ಚಿದ್ದೆ. ತಳಿವಿಜ್ಞಾನಕ್ಕೆ (genetics) ಸಂಬಂಧಿಸಿದ ಪುಸ್ತಕವದು.

ಪ್ರತಿ ಸಂಜೆ ಕಚೇರಿ ವೇಳೆ ಮುಗಿದ ಬಳಿಕ ೧ ಗಂಟೆ ಕಾಲ ಮೊದಲು ಅನುವಾದಿತ ಕೃತಿಯನ್ನು ಓದತೊಡಗಿದೆ. ಕೇವಲ ಮೂರು, ನಾಲ್ಕು ಬೈಠಕ್‌ಗಳಲ್ಲಿಯೇ ಸಾಕಷ್ಟು ದೋಷಗಳು ಅದರಲ್ಲಿ ಹುದುಗಿದ್ದುದು ಎದ್ದುಕಂಡುವು. ಇವು ವ್ಯಾಪಕವಾಗಿ ವ್ಯಾಕರಣಸ್ಖಾಲಿತ್ಯ, ಕನ್ನಡಕ್ಕೆ ಅಸಹಜ ವಾಕ್ಯಬಂಧ ಮತ್ತು ಅರ್ಥ ಸಂದಿಗ್ಧತೆ. ಮೂಲದೊಡನೆ ಹೋಲಿಸಿ ನೋಡಿದಾಗ ಅನುವಾದಕರ ವಿಷಯಜ್ಞಾನ ಮತ್ತು ಉಭಯ ಭಾಷಾಪ್ರಾವೀಣ್ಯಗಳ ಬಗ್ಗೆ ತೀವ್ರ ಸಂದೇಹ ಮೊಳೆಯಿತು. ಹೀಗೆ ಸ್ಥಾಲೀಪುಲಾಕನ್ಯಾಯ ವಿಧಾನದಿಂದಲೇ ಈ ಕೃತಿ ಪ್ರಕಟಣೆಗೆ ಅನರ್ಹವಾಗಿದೆಯೆಂದು ತೀರ್ಮಾನಿಸಬಹುದಿತ್ತು. ಆದರೆ ಇದು ಪ್ರತಿಷ್ಠಿತ ವಿಶ್ವವಿದ್ಯಾಲಯವೊಂದರ ಪ್ರಕಟಣೆಯಾಗಿ ಹೊರಬರಲಿದೆ, ಆದ್ದರಿಂದ ಇದನ್ನು ಸಾಧ್ಯವಾಗುವಷ್ಟು ತಿದ್ದಿ ಶುದ್ಧೀಕರಿಸಿ ಮರುನಕಲುಮಾಡಿ ಪುನಃ ನನಗೆ ಕಳಿಸಿರೆಂಬ ಸೂಚನೆ ಸಹಿತ ಅವರಿಗೆ ಮರಳಿಸೋಣವೆಂಬ ನಿಲವು ತಳೆದೆ. ಈ ಪ್ರಕಾರ ನನ್ನ ಮುಸ್ಸಂಜೆಯ ಕೆಂಪು–ಶಾಯಿ–ಕಸರತ್ತು ಹಸ್ತಪ್ರತಿಯ ಮೇಲೆಯೇ ಮುಂದುವರಿಯಿತು. ಅವಶ್ಯವಿದ್ದಲ್ಲೆಲ್ಲ ಎಡಗಡೆಯ ಖಾಲಿ ಪುಟಗಳಲ್ಲಿ ಹೊಸ ಪಾಠವನ್ನೇ ಬರೆಯುತ್ತಲೂ ಇದ್ದೆ. ಸುಮಾರು ೪೫ ಸಂಜೆಗಳು ಸಂದುವು, ಅಷ್ಟೇ ಪುಟಗಳ ಸ್ಥೂಲ ಪರಿಷ್ಕರಣವೂ ಮುಗಿದಿತ್ತು. ಅಷ್ಟರಲ್ಲಿ ನನ್ನ ಕಷ್ಟಗಳಿಗೆ ಕಳಶಪ್ರಾಯವಾಗಿ ಈ ವಾಕ್ಯ ಎದುರಾಯಿತು, "ನೀಳಕಾಯದ ಮೆಂಡಲ್ಲನು ಆ ಬೇಸಗೆ ಇಡೀ ಹೂವಿನ ಹಾಸಿಗೆಗಳಲ್ಲಿ ಕಾಲ ಕಳೆದನು...." ಸಂವಾದೀ ಇಂಗ್ಲಿಷ್ ರೂಪ ಹೀಗಿತ್ತು, ``All summer long Mendel spent his time in the flower beds...'' ನನ್ನ ಸಹನೆಯ ಕುಂಭ ಒಡೆದಿತ್ತು. ಸುದೀರ್ಘ ಸೋದಾಹರಣಾ ಟಿಪ್ಪಣಿ ಬರೆದು ಪ್ರಸ್ತುತ ಅನುವಾದ ಕೃತಿ ಪ್ರಕಟಣೆಗೆ ಸರ್ವಥಾ ಅರ್ಹವಲ್ಲ, ಅಷ್ಟೇ ಅಲ್ಲ, ಇದು ಈ ಲೇಖಕರ ಅಳವಿಗೆ ಮೀರಿದ ಕೆಲಸ ಎಂಬ ಖಚಿತ ಷರಾ ಸೇರಿಸಿ ಇಡೀ ಜೊಂಪೆಯನ್ನು ವಿಶ್ವವಿದ್ಯಾಲಯಕ್ಕೆ ಮರಳಿಸಿದೆ.

ತಿಂಗಳೊಂದಾದರೂ ಅವರಿಂದ ಪ್ರತಿಕ್ರಿಯೆ ಇಲ್ಲ. ಇಂಥ ಸನ್ನಿವೇಶಗಳಲ್ಲಿ ವಾರಕ್ಕೊಂದು ನೆನಪಿನ ಕಾರ್ಡ್ ಬರೆದು ಸಂಬಂಧಿಸಿದವರಿಗೆ ಎಚ್ಚರ ನೀಡುವುದು ನನ್ನ ಅಭ್ಯಾಸ. ಎರಡು ತಿಂಗಳು ಸಂದಾಗಲೂ ಅದೇ ಪರಿಸ್ಥಿತಿ. ಆಗ ನಾನು ನೇರ ಕುಲಪತಿಗಳ ಹೆಸರಿಗೇ ಸವಿವರ ಕಾಗದ ಬರೆದು ನನಗೆ ಸಲ್ಲಬೇಕಾದ ಸಂಭಾವನೆಯ ಬಿಲ್ಲನ್ನೂ ಲಗತ್ತಿಸಿ ಕಳಿಸಿದೆ. ಆಗಲೂ ದಿವ್ಯ ಮೌನ. ಮತ್ತೊಂದು ತಿಂಗಳುರುಳುವಾಗ ಸರ್ಕಾರದ ಶಿಕ್ಷಣಮಂತ್ರಿಯವರಿಗೆ (ವಿಶ್ವವಿದ್ಯಾಲಯದ ಉಪಕುಲಾಧಿಪತಿ) ದಫ್ತರದ ಪೂರ್ತಿ ಮಾಹಿತಿಯನ್ನು ರವಾನಿಸಿ ಎಚ್ಚರಿಕೆಯ ನುಡಿಯನ್ನೂ ಸೇರಿಸಿದೆ: ಎಂದೋ ನಾನು ನ್ಯಾಯಾಲಯದ ಮುಂದೆ ಈ ವ್ಯಾಜ್ಯವನ್ನು ಮಂಡಿಸಬಹುದಿತ್ತು, ಅದರೆ ಸ್ವತಃ ಒಂದು ವಿಶ್ವವಿದ್ಯಾಲಯದ ನೌಕರನಾಗಿರುವ ನಾನು ಸೋದರ ಸಂಸ್ಥೆಯೊಂದರ ವಿರುದ್ಧ ಕೋರ್ಟ್ ಕಟ್ಟೆ ಹತ್ತಬಾರದೆಂಬ ಸಭ್ಯನೀತಿಗೆ ಶರಣಾಗಿ ಹಾಗೆ ಮಾಡಿಲ್ಲ; ಇನ್ನು ೪ ವಾರಗಳ ಒಳಗೆ ನನಗೇನಾದರೂ ಮಾಹಿತಿ ಬರದಿದ್ದರೆ ವಿಧಿ ಇಲ್ಲದೆ ನಾನು ನ್ಯಾಯಾಲಯದಲ್ಲಿ ದಾವೆ ಹೂಡುತ್ತೇನೆ.

ಕೊನೆಗೂ ವಿಶ್ವವಿದ್ಯಾಲಯದ ಕುಲಪತಿಯವರಿಂದ ನನ್ನ ಸಂಭಾವನೆಯನ್ನು ಮೂಲ ಷರತ್ತಿನ ಅನುಸಾರ ಸದ್ಯವೇ ಫೈಸಲ್ ಮಾಡಲಾಗುವುದೆಂಬ ಆಶ್ವಾಸನೆಯೇನೋ ಬಂತು. ಹಣ ಬರಲಿಲ್ಲ. ಪುನರಪಿ ನೆನಪಿನೋಲೆಗಳು! ಕೊನೆಗೂ ಸಂಬಂಧಿಸಿದ ಅಧಿಕಾರಿಯಿಂದ ಬಂದ ಉತ್ತರವೇನು ಗೊತ್ತೇ? ಅದರ ಸಾರಾಂಶ, "ಮೂಲ ಷರತ್ತಿನಲ್ಲಿ '೧೦೦೦

ಪದಗಳಿಗೆ ರೂ ೩' ಎಂದು ಇರಬೇಕಾದದ್ದು ಗುಮಾಸ್ತನ ಕಣ್ತಪ್ಪಿನಿಂದಾಗಿ '೧೦೦ ಪದಗಳಿಗೆ ರೂ ೩' ಎಂದಾಗಿದೆ. ನೀವು ಒತ್ತಾಯಿಸಿದರೆ ಈ ಅಧಿಕ ಮೊತ್ತವನ್ನು ಆತ ತೆರಬೇಕಾಗುತ್ತದೆ."
ಅಧಿಕಾರಿಯ ಅದಕ್ಷತೆಗೆ ಛೀಮಾರಿ ಹಾಕುತ್ತ ಆ ತಪ್ಪೊಪ್ಪಿಗೆಯನ್ನು ಮನ್ನಿಸಿದೆ, ಮತ್ತು ಶೇಕಡಾ ೧೦ಕ್ಕೆ ಇಳಿಸಿದ ಸಂಭಾವನೆಯನ್ನು ಪಡೆಯಲು ಸಮ್ಮತಿ ಸೂಚಿಸಿದೆ. ಮತ್ತೆ ಕೆಲವು ವಾರಗಳಲ್ಲಿ ಆ ಚೆಕ್ ಬಂತು, ನಿಜ. ಆದರೆ ಪ್ರಕರಣ ಮುಗಿಯಲಿಲ್ಲ? ಮೊದಲು ಹಣವಾಗಿ ಕಾಡಿದ ಮಾಯೆ ಈಗ ಕೀರ್ತಿಯಾಗಿ ಕಾಡಿತ್ತು ನೋಡಾ!

ಸುಮಾರು ೨ ವರ್ಷಗಳು ಕಳೆದುವು. ಮೈಸೂರು ವಿಶ್ವವಿದ್ಯಾನಿಲಯದ 'ವಿಜ್ಞಾನ ಕರ್ನಾಟಕ'ವೆಂಬ ಪ್ರತಿಷ್ಠಿತ ತ್ರೈಮಾಸಿಕದ ಸಂಪಾದಕರು ನನ್ನ ಕೊಠಡಿಗೆ ಬಂದು, "ಈ ಜನಪ್ರಿಯ ಕನ್ನಡ ವಿಜ್ಞಾನಕೃತಿಯ ವಿಮರ್ಶೆಯನ್ನು ದಯವಿಟ್ಟು ನೀವು ಮಾಡಿಕೊಡಬೇಕು" ಎಂದರು. ಖುಷಿಯಿಂದ ಅದನ್ನು ಕೈಗೆತ್ತಿಕೊಂಡೆ, ಶೀರ್ಷಿಕೆ ನೋಡಿದಾಗ ಕುಸಿದುಹೋದೆ: ಅದು 'ನಾನೇಕೆ ಅಪ್ಪನಂತೆ?' ಅದೇ ಹಿಂದಿನ ಅನುವಾದಕರ ಹೆಸರಿನಲ್ಲೇ ಇದು ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟಣೆಯಾಗಿ ಹೊರಬಂದಿದೆ. ಮೊದಲ ಕೆಲವು ಪುಟಗಳ ಮೇಲೆ ಕಣ್ಣಾಡಿಸಿದೆ: ನನ್ನವೇ ವಾಕ್ಯಗಳು; ನಾನು ತಿದ್ದುವುದನ್ನು ನಿಲ್ಲಿಸಿದಲ್ಲಿಂದ ಮುಂದಕ್ಕೆ ಅವರವೇ ಅರ್ಥಹೀನ ಅವಾಕ್ಯಗಳು!

ಈ ಮೋಸ ಕಂಡು ನನಗೆ ಜುಗುಪ್ಸೆಯಾಯಿತು. ಸಮಗ್ರ ಪೂರ್ವ ಕತೆಯನ್ನು ಸಂಪಾದಕರಿಗೆ ವಿವರಿಸಿ ಹೇಳಿದೆ, "ಪ್ರಸಕ್ತ ಪುಸ್ತಕದ ವಿಮರ್ಶೆ ನಾನು ಬರೆದುದಾದರೆ ಕೊಳೆಬಟ್ಟೆಯ ದುರ್ವಾಸನೆಯನ್ನು ಲೋಕಕ್ಕೆ ಹರಡಲೇಬೇಕಾಗುತ್ತದೆ. ಈಗಾಗಲೇ ನನ್ನ ಅಪೇಕ್ಷೆ ಅಥವಾ ಇಚ್ಛೆ ಇಲ್ಲದೆ ಸಾಕಷ್ಟು ಕೊಳೆ ನನಗಂಟಿದೆ. ಈಗ ಅದನ್ನು ಸಾರ್ವಜನಿಕವಾಗಿ ಪ್ರದರ್ಶಿಸ ನನಗಿಷ್ಟವಿಲ್ಲ." ಅವರು ಹೋದರು? ಇಲ್ಲ!

ಮತ್ತೆ ಹಲವು ತಿಂಗಳುಗಳು ಸಂದುವು. ಪ್ರಧಾನ ಸಂಪಾದಕ ಹಾಮಾನಾರಿಂದ ದೂರವಾಣಿ ಕರೆ, "ಏನು ಸಾರ್! 'ನಾನೇಕೆ ಅಪ್ಪನಂತೆ?' ಪುಸ್ತಕದ ಇಡೀ ಕತೆಯನ್ನು ನೀವು ಆಗಾಗಲೇ ನನಗೆ ಹೇಳುತ್ತಿದ್ದಿರಿ. ಅದು ಪ್ರಕಟಣೆಗೆ ನಾಲಾಯಕ್ಕೆಂದು ಶಿಫಾರಸು ಕೂಡ ಮಾಡಿದ್ದಿರಿ. ಈ ಸಲದ 'ವಿಜ್ಞಾನ ಕರ್ನಾಟಕ' ಸಂಚಿಕೆ ನೋಡಿದಿರಾ? ಅದೊಂದು ಉತ್ಕೃಷ್ಟ ಅನುವಾದವೆಂಬ ವಿಮರ್ಶೆ ಪ್ರಕಟವಾಗಿದೆ!"
"ಆ ವಿಮರ್ಶಕ ಖಂಡಿತ ಅದನ್ನು ಓದದೇ ಬರೆದಿದ್ದಾರೆ. ಅದರ ಶೀರ್ಷಿಕೆ, ಅನುವಾದಕರ ನಾಮ ಮತ್ತು ಪ್ರಕಾಶಕರ ಪ್ರತಿಷ್ಠೆ ಇಲ್ಲಿ ನಿರ್ಣಾಯಕ ಪಾತ್ರ ವಹಿಸಿರಬೇಕು" ಎಂದು ಒದರಿದೆ.
ವಿಮರ್ಶೆ ಬರೆದವರು ಕನ್ನಡದ ಒಬ್ಬ ಹಿರಿಯ ಮತ್ತು ಹೆಸರಾಂತ ವಿಜ್ಞಾನ ಲೇಖಕರು. ಅಂದೇ ಅವರನ್ನು ಭೇಟಿಮಾಡಿ, "ಇಡೀ ಪ್ರಕರಣವನ್ನು ನಾನು ನಿಮಗೆ ಆಗಿಂದಾಗಲೇ ವರದಿಮಾಡುತ್ತ ಬಂದಿದ್ದೇನೆ. ಈಗ ನಮಗೆಲ್ಲ ಗುರುಸ್ಥಾನದಲ್ಲಿರುವ ನೀವೇ ಈ ಪುಸ್ತಕಕ್ಕೆ ಇಂಥ ಶಿಫಾರಸು ಕೊಟ್ಟಿರುವಿರೆಂದ ಬಳಿಕ ನನ್ನ ಅಭಿಪ್ರಾಯಗಳೆಲ್ಲವೂ ತಪ್ಪೆಂಬುದು ಸ್ಪಷ್ಟ. ನಾನೆಲ್ಲಿ ಎಡವಿದ್ದೇನೆ? ದಯವಿಟ್ಟು ಸ್ಪಷ್ಟೀಕರಿಸಬೇಕು."
ಆ ಗಳಿಗೆ ಆ ಮಹಾಶಯರು ವಿವರ್ಣರಾಗಿ ಅಸಂಬದ್ಧ, ಅತಾರ್ಕಿಕ ಮತ್ತು ಅಪ್ರಬುದ್ಧ ವಿವರಣೆಗೆ ಶರಣಾದ ಪರಿ ನನ್ನಲ್ಲಿ ಮರುಕ ಹುಟ್ಟಿಸಿತು. ಸಾರವಿಷ್ಟು, "ಮೂಲ ಇಂಗ್ಲಿಷ್ ಚೆನ್ನಾಗಿದೆ. ಅನುವಾದಕರ ಅರ್ಹತೆ ಬಗ್ಗೆ ನನಗೆ ಪೂರ್ಣ ಭರವಸೆ ಇದೆ. ಮೊದಲ ಹತ್ತಾರು ಪುಟಗಳ ಮೇಲೆ ದೃಷ್ಟಿಹಾಯಿಸಿದೆ. ಸಲೀಸಾಗಿ ಓದಿಸಿಕೊಂಡು ಹೋದುವು. ಇತ್ತ ಮುದ್ರಣಾಲಯದವರು ಅವಸರ ಮಾಡತೊಡಗಿದರು......" ಅವೈಚಾರಿಕ ಹೂರಣವನ್ನು ವೈಚಾರಿಕ ತೋರಣದಿಂದ ತರ್ಕದ ಮೂಲಕ ಕೃತಕವಾಗಿ ಸಿಂಗರಿಸುವ ಈ ಮಾಮೂಲೀ ರಾಜಕೀಯ ಚಮತ್ಕಾರ ನನ್ನಲ್ಲಿ ಅಸಹ್ಯ ಹುಟ್ಟಿಸಿತು. ಮುಂದಿನ ಮಾತುಕತೆ ವಾದವಿವರಣೆಗಳನ್ನು ಅಲ್ಲಿಗೇ ಕೈದುಮಾಡಿ ಈ ದುಸ್ಸ್ವಪ್ನಕ್ಕೆ (ಅ)ಮಂಗಳ ಹಾಡಿದೆ:
ನಿನಗೆ ನೀನೇ ಗೆಳೆಯಾ! ನಿನಗೆ ನೀನೇ! ಅವರಿವರ ನಂಬುಗೆಯ ಮಳಲರಾಶಿಯ ಮೇಲೆ ಕಟ್ಟದಿರು ಮನೆಯಾ! – (ಅಡಿಗ)

ಉದ್ಧರೇದಾತ್ಮನಾತ್ಮಾನಂ ನಾತ್ಮಾನಮವಸಾದಯೇತ್
ಆತ್ಮೈವಹ್ಯಾತ್ಮನೋ ಬಂಧುರಾತ್ಮೈವ ರಿಪುರಾತ್ಮನಃ – (ಗೀತಾ)
ಆತ್ಮಬಲದಿಂದೆ ತನ್ನಾತ್ಮವನು ಉದ್ಧರಿಸಿ–
ಕೊಳಬೇಕು, ತನ್ನಾತ್ಮವನು ನಶಿಸಗೊಡದೆ
ಇರಬೇಕು, ಆತ್ಮವೇ ಆತ್ಮನೋರಗೆ ಬಂಧು,
ಆತ್ಮವೇ ಹಗೆಯಾತ್ಮಕರಿತುಕೊಳು ಬಿಡದೆ – (ವಿಜಯಿನಿ)

ಕನ್ನಡದಲ್ಲಿ ಜನಪ್ರಿಯ ವಿಜ್ಞಾನ: ವಸ್ತು, ಶೈಲಿ, ವಿನ್ಯಾಸ
ಅಧ್ಯಾಯ ೭೫

ಜನಪ್ರಿಯ ವಿಜ್ಞಾನ ಎಂದರೇನು? ವಿಜ್ಞಾನದ ಪರಿಕಲ್ಪನೆ (concept) ಒಂದೇ. ಅದನ್ನು ನಿರೂಪಿಸುವ ವಿಧಾನ ಅನುಸರಿಸಿ ಎರಡು ಮುಖ್ಯ ಮುಖಗಳು ಪ್ರಕಟವಾಗುತ್ತವೆ: ತಾಂತ್ರಿಕ ಮುಖ, ಜನಪ್ರಿಯ ಮುಖ. ಸಂಶೋಧನ ನಿಬಂಧಗಳು, ಆಕರ ಗ್ರಂಥಗಳು, ಪಠ್ಯಪುಸ್ತಕಗಳು ಮತ್ತು ತಂತ್ರಕುಶಲಿಯ ಕೈಪಿಡಿಗಳು ಎಂಬ ನಾಲ್ಕು ಪ್ರಕಾರಗಳು ಬೇರೆ ಬೇರೆ ಸ್ತರಗಳಲ್ಲಿ ತಾಂತ್ರಿಕ ಮುಖವನ್ನು ಪ್ರತಿನಿಧಿಸುತ್ತವೆ. ಆಯಾ ವಿಷಯದಲ್ಲಿ ಆಸಕ್ತರಾಗಿ ಅದರ ತಾಂತ್ರಿಕ ಭಾಷೆಯನ್ನು ಪೂರ್ಣ ಬುದ್ಧಿಗತ ಮಾಡಿಕೊಂಡ ಪರಿಣತರಿಗೆ ಮಾತ್ರ ಇಲ್ಲಿ ಪ್ರವೇಶ.

ಜನಪ್ರಿಯ ಮುಖ ಮೇಲಿನ ನಾಲ್ಕು ಪ್ರಕಾರಗಳಿಗಿಂತ ಭಿನ್ನವಾಗಿದ್ದು ಇದರಲ್ಲಿ ಸರ್ವರಿಗೂ ಪ್ರವೇಶವಿದೆ. ಇದರ ತಾಯಿ ಬೇರು ಸಂಶೋಧನ ನಿಬಂಧಗಳಲ್ಲಿಯೂ ಆಕರ ಗ್ರಂಥಗಳಲ್ಲಿಯೂ ಭದ್ರವಾಗಿ ತಳವೂರಿದ್ದು ಕೊಂಬೆಗಳು ಹಲವು ಗಾತ್ರಗಳಲ್ಲಿ ಮತ್ತು ದಿಶೆಗಳಲ್ಲಿ ಕವಲೊಡೆದಿರುತ್ತವೆ. ಇದರಲ್ಲಿ ಮಾಹಿತಿ ಇದೆ, ಶೈಲಿಯ ಹೊಳಹುಗಳಿವೆ. ಕಲ್ಪನೆಯ ವಾಯುಯಾನಕ್ಕೆ ಅವಕಾಶವಿದೆ. ವಿಜ್ಞಾನ ಪರಿಕಲ್ಪನೆಗಳ ಇತಿಹಾಸವಿದೆ. ಕತೆ ಆಖ್ಯಾನಕಗಳು ಮತ್ತು ವಿಜ್ಞಾನಿಗಳ ಜೀವನ ಚರಿತ್ರೆಗಳು ಇದರ ಅವಿಭಾಜ್ಯ ಅಂಗ.

ಪ್ರತೀಕ (symbol), ಚಿಹ್ನೆ (sign), ಫಲನ (function), ಸಮೀಕರಣ (equation) ಮುಂತಾದ ತಾಂತ್ರಿಕ ಭಾಷಾ ಪರಿಕರಗಳನ್ನು ಕನಿಷ್ಠ ಪ್ರಮಾಣದಲ್ಲಿ ಉಪಯೋಗಿಸುತ್ತ, ಬದಲಾಗಿ, ವಿವರಣಾತ್ಮಕ ಹಾಗೂ ಚಿತ್ರಾತ್ಮಕ ಭಾಷೆಯನ್ನು ಆವಶ್ಯಕತೆಗೆ ತಕ್ಕಂತೆ ಬಳಸುತ್ತ ವಿಜ್ಞಾನದ ಪರಿಕಲ್ಪನೆಗಳನ್ನು ಜನಸಾಮಾನ್ಯರಿಗೆ – ವಿಜ್ಞಾನದ ತಾಂತ್ರಿಕ ಮುಖದ ಪರಿಚಯವಿಲ್ಲದವರಿಗೆ ಎಂಬ ಅರ್ಥದಲ್ಲಿ – ಸಂವಹನಿಸುವುದು ಇಲ್ಲಿಯ ತಂತ್ರ. ಉದಾಹರಣೆಗೆ, ಭೌತವಿಜ್ಞಾನದ ತಾಂತ್ರಿಕ ಮುಖದ ಪರಿಚವಿರುವಾತನಿಗೆ $pv = c$ ಸಮೀಕರಣ ಕರತಲಾಮಲಕದಷ್ಟು ಸುಸ್ಪಷ್ಟ. ಈ ಪರಿಕಲ್ಪನೆಯನ್ನು ಜನಪ್ರಿಯ ಧಾಟಿಯಲ್ಲಿ ನಿರೂಪಿಸಿದರೆ ಅದು ಹೀಗಿರುತ್ತದೆ:

ಉಷ್ಣತೆ ಸ್ಥಿರವಾಗಿರುವಾಗ ಯಾವುದೇ ಅನಿಲದ ಸಂಮರ್ದ (p) ಮತ್ತು ಘನಗಾತ್ರ (v) ಇವೆರಡರ ಗುಣಲಬ್ಧ (p'v) ಒಂದು ನಿಯತಾಂಕ (c), ಪ್ರತೀಕಗಳಲ್ಲಿ $pv=c$. ಇಲ್ಲಿ ವಾಚಕನಿಗೆ ಉಷ್ಣತೆ, ಅನಿಲ ಮುಂತಾದ ಪಾರಿಭಾಷಿಕ ಪದಗಳ ಅರ್ಥ ತಿಳಿದಿದೆ ಎಂದು ಭಾವಿಸಿದೆ. ಇಲ್ಲವಾದರೆ ನಿರೂಪಣೆ ಇನ್ನಷ್ಟು ವಿವರಣಾತ್ಮಕವಾಗಿ ಇರಬೇಕಾಗುತ್ತದೆ. ಇವು ಮೂರು: ಪರಿಕಲ್ಪನೆಯಲ್ಲಿ ಸ್ಪಷ್ಟತೆ, ಶೈಲಿಯಲ್ಲಿ ಪರಿಶುದ್ಧತೆ, ನಿರೂಪಣೆಯಲ್ಲಿ ಆಕರ್ಷಕತೆ. ಉದಾಹರಣೆಗೆ ಕಾರ್ಲ್ ಸಗಾನ್ ಬರೆದಿರುವ Cosmos ಗ್ರಂಥದಿಂದ ಆಯ್ದ ಈ ಪರಿಚ್ಛೇದ ಗಮನಿಸಿ:

The Earth is a place. It is by no means the only place. It is not even a typical place. No planet or star or galaxy can be typical, because the Cosmos is mostly empty. The only typical place is within the vast, cold, universal vacuum, the everlasting night of intergalactic space, a place so strange and desolate that, by comparison, planets and stars and galaxies seem achingly rare and lovely. If we were to be randomly inserted into the Cosmos, the chance that we would find ourselves on or near a planet would be less than one in a billion trillion trillion (10 to the power of 33 a 1 followed by 33 zeroes).

ಇದರ ಭಾವಾನುವಾದ: "ಭೂಮಿ ಒಂದು ನೆಲೆ ನಿಜ. ಇದು ಏಕೈಕ ನೆಲೆ ಏನೂ ಖಂಡಿತ ಅಲ್ಲ. ಕೊನೆಗೆ, ಇದೊಂದು ಪ್ರರೂಪೀ ನೆಲೆ ಕೂಡ ಅಲ್ಲ. ಯಾವುದೇ ಗ್ರಹ, ನಕ್ಷತ್ರ ಅಥವಾ ಬ್ರಹ್ಮಾಂಡ ಈ ಅರ್ಹತೆ ಪಡೆಯದು. ಏಕೆಂದರೆ ವಿಶ್ವ ಬಹುತೇಕ ಶೂನ್ಯ. ಒಂದೇ ಒಂದು ಪ್ರರೂಪೀ ನೆಲೆ ಎಲ್ಲಿದೆ ಗೊತ್ತೇ? ಅಂತರಬ್ರಹ್ಮಾಂಡೀಯ ಆಕಾಶದ ಚಿರಂತನ ರಾತ್ರಿ ದಟ್ಟೈಸಿರುವ ವಿಶಾಲ ಶೀತಲ ಸರ್ವವ್ಯಾಪೀ ಶೂನ್ಯದಲ್ಲಿ. ಅದೆಂಥ ವಿಚಿತ್ರ ಮತ್ತು ಬಂಜರು ಸ್ಥಳ ಎಂದರೆ ಅದರೊಂದಿಗೆ ಹೋಲಿಸಿದಾಗ, ಗ್ರಹ, ನಕ್ಷತ್ರ ಬ್ರಹ್ಮಾಂಡಗಳು ನಮಗೆ ವೇದನೆ ತರುವಷ್ಟರ ಮಟ್ಟಿಗೆ ವಿರಳ ಮತ್ತು ಸುಂದರ ಎಂದು ಭಾಸವಾಗುತ್ತವೆ. ನಮ್ಮನ್ನೇನಾದರೂ ವಿಶ್ವದೊಳಕ್ಕೆ ಯಾದೃಚ್ಛಿಕವಾಗಿ

ಎಸೆದುಬಿಟ್ಟದ್ದಾದರೆ ನಾವು ಯಾವುದೇ ಗ್ರಹದ ಮೇಲೆ ಅಥವಾ ಅದರ ಸನಿಹದಲ್ಲಿ ಬೀಳುವ ಸಂಭಾವ್ಯತೆ ಎಷ್ಟು? ಅದು ಬಿಲಿಯನ್ ಟ್ರಿಲಿಯನ್ ಟ್ರಿಲಿಯನ್ನಿನಲ್ಲಿ (10 to the power of 33 ೧ರ ಬಲಕ್ಕೆ ೩೩ ಸೊನ್ನೆ ಬರೆದಾಗ ದೊರೆಯುವ ಸಂಖ್ಯೆ) ಒಂದಕ್ಕಿಂತಲೂ ಕಡಿಮೆ."

ವಾಙ್ಮಯ ಸೃಷ್ಟಿ ಸಮಸ್ಯೆಗಳು: ಆಧುನಿಕ ವಿಜ್ಞಾನದ ಸಂವಹನ ಮಾಧ್ಯಮವಾಗಿ ಸಹಜ ವಿಕಾಸ ಪ್ರಕ್ರಿಯೆಗೆ ಒಳಪಟ್ಟಿರದ ಕನ್ನಡದಲ್ಲಿ ವಿಜ್ಞಾನವಾಙ್ಮಯವನ್ನು ಸೃಷ್ಟಿಸುವಾಗ ಎರಡು ಬಗೆಯ ಸಮಸ್ಯೆಗಳು ಉದ್ಭವಿಸುತ್ತವೆ: ವ್ಯಕ್ತಿಮೂಲ, ಕೃತಿಮೂಲ.

ಮೊದಲನೆಯದು – ವ್ಯಕ್ತಿಮೂಲ ಸಮಸ್ಯೆಗಳು: ನಿಜ ಅರ್ಹತೆ ಅಥವಾ ಯೋಗ್ಯತೆ ಇರದ ವ್ಯಕ್ತಿ ಈ ಕೆಲಸಕ್ಕೆ ಕೈ ಹಾಕಿದಾಗ ಇವು ವಿಶೇಷವಾಗಿ ತಲೆದೋರುತ್ತವೆ. ಆದ್ದರಿಂದ ವಿಜ್ಞಾನ ವಾಙ್ಮಯ ಸೃಷ್ಟಿಸುವವರಲ್ಲಿ ಇರಬೇಕಾದ ಗುಣಗಳು ಏನು ಎನ್ನುವುದನ್ನು ಮೊದಲು ನೋಡೋಣ. ಇವು ಮುಖ್ಯವಾಗಿ ಮೂರು: ೧. ವಿಷಯ ಪ್ರಭುತ್ವ: ವಿಷಯವನ್ನು ಶಾಸ್ತ್ರೀಯವಾಗಿ ಅಭ್ಯಸಿಸಿ ಇದರ ಎತ್ತರ, ಬಿತ್ತರ ಅರಿತವ ಮಾತ್ರ ತನ್ನ ಓದುಗರ ಮಟ್ಟ ಅನುಲಕ್ಷಿಸಿ ಎಷ್ಟು ಮತ್ತು ಹೇಗೆ ಹೇಳಬೇಕು ಎಂಬ ವಿವರಗಳ ಬಗ್ಗೆ ಖಚಿತ ನಿಲವು ತಳೆಯಬಲ್ಲ. ಉದಾಹರಣೆಗೆ ಜನಪ್ರಿಯ ಸಾಪ್ತಾಹಿಕವೊಂದಕ್ಕೆ 'ಬೆಳಕು' ಎಂಬ ವಿಷಯ ಕುರಿತು ಐದು ಪುಟಗಳ ಲೇಖನ ಬರೆಯುವುದು ನಮ್ಮ ಉದ್ದೇಶವೆಂದು ಭಾವಿಸೋಣ. ಈ ಲೇಖನದಲ್ಲಿ ಬೆಳಕಿನ ಶಕ್ತಿ ಸ್ವರೂಪ, ವೇಗ ವೈಚಿತ್ರ್ಯ, ಮಾಧ್ಯಮರಹಿತ ಚಲನೆ ಮುಂತಾದ ಗುಣಗಳನ್ನು ವಿವರಿಸುವುದು ಎಷ್ಟು ಮುಖ್ಯವೋ ಕಣ–ತರಂಗ ದ್ವೈತ ವಿಚಾರ, ರೋಹಿತ ವೈಶಿಷ್ಟ್ಯ, ಫೋಟಾನಿನ ತೂಕ ಮುಂತಾದ ಬಿಡಿ ವಿವರಗಳನ್ನು ಬಿಡುವುದು ಕೂಡ ಅಷ್ಟೇ ಮುಖ್ಯ. ತಾಕತ್ತಿನ ತಾಣದಿಂದ ಬರೆಯಲು ಸಮರ್ಥನಾದವನಿಗೆ ಮಾತ್ರ ಎಷ್ಟು ಇಡುವುದು, ಎಷ್ಟು ಬಿಡುವುದು ಎಂಬ ತಾರತಮ್ಯ ವಿವೇಕವಿರುತ್ತದೆ. ಇಂಥವನ ಬರವಣಿಗೆಯಲ್ಲಿ ವಿಜ್ಞಾನದ ಪರಿಕಲ್ಪನೆ ಸ್ಪಷ್ಟವಾಗಿ ರೂಪಗೊಂಡಿರುವುದನ್ನು ಕಾಣಬಹುದು. ಈ ಅದಟು ಇಲ್ಲದಾತನ ಲೇಖನ ಬರಿದೆ ಜಾಳು ಜಾಳು. ಇದರಲ್ಲಿಯ ಜ್ಞಾನಶೂನ್ಯತೆಯ ತೆರಪನ್ನು ಅಕ್ರಿಯಾತ್ಮಕ ಪದಗಳ ದಂಡು ಆಕ್ರಮಿಸುತ್ತದೆ. ದುರ್ಬಲ ನೆಲೆಯಿಂದ ಲೇಖನ ಬರೆಯತಕ್ಕದ್ದಲ್ಲ.

೨. ಭಾಷಾಪರಿಣತಿ: ಜನಪ್ರಿಯ ವಿಜ್ಞಾನ ಕರ್ತೃವಿಗೆ ಭಾಷೆಯ ಮೇಲೆ ಸಾಹಿತ್ಯದಲ್ಲಿಯ ಒಬ್ಬ ಸೃಜನಶೀಲ ಲೇಖಕನಿಗಿರುವುದಕ್ಕಿಂತ ಹೆಚ್ಚಿನ ಪ್ರಭುತ್ವವಿರಬೇಕು. ಏಕೆಂದರೆ ಈ ಎರಡನೆಯವ ತನ್ನ ಅನುಭವದ ಅಭಿವ್ಯಕ್ತಿಗೆ ಲಭ್ಯ ಪದಗಳ ಬಂಡವಾಳ ಅವಲಂಬಿಸಿದರೆ ಸಾಕು: ನೆಲದಿಂದ ಉಪಯುಕ್ತ ಮಣ್ಣು ಬಗೆದು ಹದಕೊಟ್ಟು ತರಾವರಿ ಮಡಿಕೆ ಕುಡಿಕೆ ತಯಾರಿಸುವ ಕುಂಬಾರನ ಕೆಲಸದಂತೆ ಇವನದು. ಇಲ್ಲಿ ಅನುಭವ ಮತ್ತು ಪ್ರತಿಭೆ ಪ್ರಧಾನ. ಮೂಕಶೋಕ ಗೇಯ ಶ್ಲೋಕವಾದಾಗ ಆದಿಕವಿ ಹೊಸ ಪದ ಸೃಷ್ಟಿಸಲಿಲ್ಲ, ಲಭ್ಯ ಪದಗಳಿಗೆ ಹೊಸ ಅರ್ಥ ತುಂಬಿದ, ಆಮ್ಲಜನಕ ಊದಿದ. ಜನಪ್ರಿಯ ವಾಙ್ಮಯದ ಕರ್ತೃವಾದರೋ ಈ ಕೆಲಸದ ಜೊತೆಗೆ ಹೊಸ ಪದಗಳನ್ನು ಟಂಕಿಸಿ ಅಮೂರ್ತ ವೈಜ್ಞಾನಿಕ ಪರಿಕಲ್ಪನೆಗೆ ಮೂರ್ತ ಭಾಷಾರೂಪ ಕೂಡ ಕೊಡಬೇಕಾಗುತ್ತದೆ. ಉದಾಹರಣೆಗೆ ಈ ಎರಡು ನಿದರ್ಶನಗಳನ್ನು ಗಮನಿಸಿ:

ಚಂದ್ರನ ಮೇಲೆ ಮೊತ್ತಮೊದಲು ಕಾಲಿಟ್ಟ ನೀಲ್ ಆರ್ಮ್‌ಸ್ಟ್ರಾಂಗ್ ಉದ್ಗರಿಸಿದ ನುಡಿ, "ಇದು ಒಬ್ಬ ವ್ಯಕ್ತಿಗೆ ಬಲು ಪುಟ್ಟ ಹೆಜ್ಜೆ, ಆದರೆ ಮನುಕುಲಕ್ಕೆ ಹನುಮಂತ ಲಂಘನ." ಇಲ್ಲಿ giant leap for mankind ಇಂಗ್ಲಿಷ್ ಪದ ಸಮುಚ್ಚಯದ ಮಥಿತಾರ್ಥವನ್ನು ಅರುಹುವ ಕನ್ನಡದ 'ಮನುಕುಲಕ್ಕೆ ಹನುಮಂತ ಲಂಘನ' ಸೃಜನಶೀಲ ಬರವಣಿಗೆಗೆ ನಿದರ್ಶನ. 'ದೈತ್ಯ ದಾಪು' ಏಕಾಗಬಾರದು ಎಂಬ ಸಂದೇಹ ಮೂಡಬಹುದು. 'ಹನುಮಂತ' ಪ್ರತೀಕಿಸುವ ಅನ್ವೇಷಕ ಕುತೂಹಲ 'ದೈತ್ಯ'ದಲ್ಲಿ ಪ್ರಕಟವಾಗುವುದಿಲ್ಲ. ಈ ಪದ ಒಂದು ತೆರನಾದ ರಾಕ್ಷಸ ಅಥವಾ ತಾಮಸ ಗುಣಸೂಚಕ ಎಂಬುದನ್ನೂ ಗಮನಿಸಬೇಕು.

"ಏಕಾಣುಜೀವಿ ಒಡೆದು ಎರಡಾಗುವ ಪ್ರಕ್ರಿಯೆಗೆ ವಿದಳನ ಎಂದು ಹೆಸರು." ಇಲ್ಲಿ ಏಕಾಣುಜೀವಿ bacterium, ಪ್ರಕ್ರಿಯೆ process ಮತ್ತು ವಿದಳನ fission ಪದಗಳನ್ನು ಸೂಚಿಸುತ್ತವೆ. ಪರಮಾಣುಬೀಜ (nuclear of an atom) ಒಡೆಯುವ ಪ್ರಕ್ರಿಯೆಗೆ fission (ವಿದಳನ) ಎಂಬ ಪದ ಬಂದದ್ದು ಈ ಮೂಲದಿಂದಲೇ. 'ಏಕಾಣುಜೀವಿ' ಮತ್ತು 'ವಿದಳನ' ನೂತನ ಸೃಷ್ಟಿಗಳು.

ಆದ್ದರಿಂದ ಜನಪ್ರಿಯ ವಾಙ್ಮಯಕರ್ತೃವಿಗೆ ಅನುಭವ ಮತ್ತು ಪ್ರತಿಭೆ ಜೊತೆಗೆ ಭಾಷಾಜ್ಞಾನ ಮತ್ತು ವ್ಯಾಕರಣ ನಿರ್ಣಯ ಅತ್ಯಂತ ಅವಶ್ಯ ಪರಿಕರಗಳು. ಇವುಗಳ ಅಭಾವದಲ್ಲಿ 'ಎಂಡೋಕ್ರೈನ್' ಪದ ಕನ್ನಡದಲ್ಲಿ

'ಒಳಸುರಿಕ'ವೆಂದೂ ('ಅಂತಸ್ರಾವೀ' ಆಗಬೇಕು) instructions to computer 'ಗಣಕಕ್ಕೆ ಉಪದೇಶಗಳು' ('ಗಣಕಕ್ಕೆ ನಿರ್ದೇಶನಗಳು' ಆಗಬೇಕು.) ಎಂದೂ ವಿಕೃತ ರೂಪವನ್ನು ಪಡೆಯುತ್ತವೆ. ವಾಕ್ಯರಚನೆಯಂತೂ ತೀರ ಅಕನ್ನಡ ಮತ್ತು ಅಸ್ಪಷ್ಟವಾಗಿರುತ್ತದೆ. ಉದ್ದೇಶಪೂರ್ವಕ ಕೃಷಿಮಾಡಿದ ವಿನಾ ಭಾಷಾಪ್ರಭುತ್ವ ಲಭಿಸದು.

೩. ಕಾರ್ಯಶ್ರದ್ಧೆ: ಜನಪ್ರಿಯ ವಾಙ್ಮಯ ಕರ್ತೃವಿಗೆ ತನ್ನ ಕಾರ್ಯದ ಬಗ್ಗೆ ಧರ್ಮ ಪ್ರಚಾರಕನ ಅಚಲ ವಿಶ್ವಾಸ ಮತ್ತು ನಿಷ್ಠೆ ಅಗತ್ಯ. ವಿಜ್ಞಾನ ವಿಷಯಗಳಲ್ಲಿ ಉತ್ತಮ ಪಾಂಡಿತ್ಯವಿರುವ ಮತ್ತು ಕನ್ನಡ ಭಾಷೆಯಲ್ಲಿ ವಿಶೇಷ ಪ್ರಾವೀಣ್ಯವಿರುವ ಅನೇಕ ಮಂದಿ ವಿದ್ವಾಂಸರಿದ್ದಾರೆ. ಆದರೆ ಜನಪ್ರಿಯ ವಾಙ್ಮಯ ನಿರ್ಮಾಣ ಕುರಿತಂತೆ ಇವರು ಏನೋ ಒಂದು ತರಹದ ಕೀಳರಿಮೆಯಿಂದ ಇಲ್ಲವೇ ವಿಜ್ಞಾನ ಭಾರತಿಗೆ ಎಲ್ಲಿ ಮೈಲಿಗೆಯಾಗಿ ಬಿಡುವುದೋ ಎನ್ನುವ ಆತಂಕ ಭಾವದಿಂದ ಬಾಧಿತರಾಗಿರುವಂತೆ ತೋರುತ್ತದೆ. ಪ್ರಪಂಚ ಭಾಷೆಯಾದ ಇಂಗ್ಲಿಷಿನಲ್ಲಿ ಇವರು ಜನಪ್ರಿಯ ವಾಙ್ಮಯ ರಚಿಸಿ ಯಶಸ್ವಿಗಳಾಗಲಾರರು. ಕನ್ನಡದಲ್ಲಿ ಸೃಷ್ಟಿಸಿ ಜ್ಞಾನದಾನಗೈದು ಕೃತಕೃತ್ಯರಾಗಬಲ್ಲರು. ಇದಕ್ಕೆ ಛಲ ಬೇಕು, ಈ ಮಾಧ್ಯಮ ಕುರಿತು ನಂಬಿಕೆ ಬೇಕು.

ಹೀಗೆ ತ್ರಿಗುಣಾವಿಷ್ಟ ಲೇಖಕನಾದವ ಜನಪ್ರಿಯ ವಾಙ್ಮಯ ರಚಿಸಿದಾಗ ಅದು ಉದ್ದಿಷ್ಟ ಮತ್ತು ಆಸಕ್ತ ವಾಚಕರನ್ನು ತಲಪುತ್ತದೆ. ಅದರ ವಚನ ಅವರ ಜ್ಞಾನ ಮಟ್ಟವನ್ನು ಎತ್ತರಿಸುತ್ತದೆ ಮತ್ತು ಅವರ ಪೈಕಿ ಕೆಲವರ ಭವಿಷ್ಯವನ್ನಾದರೂ ಬದಲಾಯಿಸುತ್ತದೆ. ಓದುಗನಲ್ಲಿ ಕುತೂಹಲ ಮತ್ತು ತಾಳ್ಮೆ ಇಲ್ಲದಿದ್ದರೆ ಅಥವಾ ಆತ ಪೂರ್ವಗ್ರಹ ಪೀಡಿತನಾಗಿದ್ದರೆ ಲೇಖಕನ ಎಲ್ಲ ಪ್ರಾಮಾಣಿಕ ಪ್ರಯತ್ನಗಳೂ ನಿಷ್ಫಲ ಎಂಬುದು ಕಂಡಂತೆಯೇ ಇದೆ.

ಎರಡನೆಯದು: ಕೃತಿಮೂಲ ಸಮಸ್ಯೆಗಳು: ಜನಪ್ರಿಯ ವಾಙ್ಮಯ ಕರ್ತೃವಿನಲ್ಲಿ ವಿಷಯ ಪ್ರಭುತ್ವ, ಭಾಷಾ ಪರಿಣತಿ ಅಥವಾ ಕಾರ್ಯಶ್ರದ್ಧೆ ಇಲ್ಲವಾದರೆ ವ್ಯಕ್ತಿಮೂಲ ಸಮಸ್ಯೆಗಳು ಉದ್ಭವಿಸುತ್ತವೆ. ಹೀಗಲ್ಲದೆ ಈ ಎಲ್ಲ ಗುಣಗಳಿಂದ ಪರಿಪ್ಲುತನಾಗಿರುವ ಒಬ್ಬ ಲೇಖಕ ವಾಸ್ತವ ನಿರ್ಮಾಣ ಕಾರ್ಯದಲ್ಲಿ ಉದ್ಯುಕ್ತನಾದಾಗ ಎದುರಿಸುವ ಸಮಸ್ಯೆಗಳಿಗೆ ಕೃತಿಮೂಲ ಸಮಸ್ಯೆಗಳೆಂದು ಹೆಸರು. ಇವು ಲೇಖನದ ತಂತ್ರ ಮತ್ತು ಕಲೆಗಾರಿಕೆಗೆ ಸಂಬಂಧಿಸಿದುವು. ಇವನ್ನು ಮುಂದಿನ ಎಂಟು ಪರಿಚ್ಛೇದಗಳಲ್ಲಿ ಚರ್ಚಿಸಿದೆ.

ವಿಷಯದ ಆಯ್ಕೆ: ಯಾವ ವಿಷಯದ ಮೇಲೆ ಬರೆಯಬೇಕು ಎನ್ನುವುದನ್ನು ಮೊದಲು ನಿರ್ಣಯಿಸಬೇಕು. ಈ ನಿರ್ಣಯ ಸಾಧಾರಣವಾಗಿ ಲೇಖಕನ ವರ್ತಮಾನ ಜ್ಞಾನವನ್ನು ಅವಲಂಬಿಸಿರುತ್ತದೆ. ಉದಾಹರಣೆಗೆ ಯಾವುದೋ ವೃತ್ತಪತ್ರಿಕೆಯಲ್ಲಿ SETI – Search for Extraterrestrial Intelligence ಬಗೆಗಿನ ಒಂದು ಲೇಖನ ಓದಿದಾಗ ಈ ವಿಷಯ ಕುರಿತು ಕನ್ನಡದಲ್ಲಿ ಬರೆಯಲು ನನಗೆ ಸ್ಫೂರ್ತಿ ಬಂದಿತು. ಆ ಗಳಿಗೆ ನನ್ನ ತಲೆಯಲ್ಲಿ ತುಂಬಿದ್ದುದು ಉತ್ಸಾಹದ ನೊರೆ ಬುರುಗು ಮಾತ್ರ. ಮಾಹಿತಿಯ ಗಟ್ಟಿ ಕಾಳು ಅಲ್ಲ.

ಮಾಹಿತಿ ಸಂಗ್ರಹ: ನಾನು ಓದಿದ ಲೇಖನ ತೀರ ಮೇಲು ಹೊದಿಕೆಯ ಮಾಹಿತಿಗಳನ್ನು ಮಾತ್ರ ಒಳಗೊಂಡಿದ್ದುದರಿಂದ ಅದನ್ನು ಜ್ಞಾನಸೀಮೆಯತ್ತ ಗುರಿಹಿಡಿದ ಕೈಮರವೆಂದು ಪರಿಗಣಿಸಬಹುದಿತ್ತೇ ವಿನಾ ಅಲ್ಲಿಗೆ ಸಾಗಲು ನೀಡಿದ ರಹದಾರಿ ಎಂದಲ್ಲ. ಹೀಗಾಗಿ ಆಳವಾಗಿ ಮತ್ತು ಸವಿವರವಾಗಿ ಅಧಿಕೃತ ಮಾಹಿತಿ ಸಂಗ್ರಹಿಸುವುದು ಅನಿವಾರ್ಯವಾಯಿತು. ಈ ಕೆಲಸವನ್ನು ನಾನು ಸಾಧಾರಣವಾಗಿ ಮೂರು ಹಂತಗಳಲ್ಲಿ ನಡೆಸುತ್ತೇನೆ: (ಅ) ಆಕರ ಗ್ರಂಥ, ಪ್ರಬಂಧ ಮತ್ತು ವಿಜ್ಞಾನ ನಿಯತಕಾಲಿಕೆಗಳನ್ನು ಅಧ್ಯಯನಗೈದು ವಿಷಯ ಸಂಗ್ರಹ (ಆ) ಈ ವಿಷಯ ಕುರಿತು ತಜ್ಞರ ಜೊತೆ ಚರ್ಚೆ, ಮಿತ್ರರ ಜೊತೆ ಸಂವಾದ ಯಾರೂ ದೊರೆಯದಾಗ ಏಕಪಾತ್ರಾಭಿನಯ! (ಇ) ಈ ಪ್ರಕ್ರಿಯೆಯ ವೇಳೆ ಲೇಖನದ ಹೂರಣ ಕುರಿತಂತೆ ಅಸ್ಪಷ್ಟ ಮಾನಸಿಕ ಪ್ರತಿರೂಪ (mental model) ಮೈದಳೆದಿರುತ್ತದೆ. ಇದು ಲೇಖನದ ಜೀವಾಳ, ಅಮೂರ್ತ ಶರೀರಿ, ಭಾವಜೀವಿ. ಸಂಗೀತವಿದರ ಪರಿಭಾಷೆಯಲ್ಲಿ ಹಾಡಿನ ಧಾಟಿ.

ಲಿಖಿತ ರೂಪ: ಜೀವಕ್ಕೆ ದೇಹ, ಹಾಡಿನ ಧಾಟಿಗೆ ಸಾಹಿತ್ಯ, ಮತ್ತು ಭಾವದ ಬೀಸಿಗೆ ಕಾವ್ಯ ಹೇಗೋ ಹಾಗೆ ಮಾನಸಿಕ ಪ್ರತಿರೂಪಕ್ಕೆ ಲಿಖಿತ ರೂಪ. ಇದನ್ನು ಪಡೆಯುವುದು ಪುನಸ್ಸೃಷ್ಟಿಗೆ ಸಮಾನ ಕ್ರಿಯೆ. ಬಹುತೇಕ ಸಂದರ್ಭಗಳಲ್ಲಿ ಮೊದಲನೆಯ ವಾಕ್ಯದ ನಿರೂಪಣೆಯೇ ಸಾಕಷ್ಟು ಶ್ರಮ ಮತ್ತು ಚಿಂತನೆ ಬೇಡುತ್ತದೆ: ಭಾವದ ತೀವ್ರತೆಗೆ ಅನುಗುಣವಾಗಿ ಭಾಷೆ ಸ್ಪಂದಿಸದಿರುವುದೇ ಇದರ ಕಾರಣ.

ಶುದ್ಧೀಕರಣ: ಅನೇಕ ಬಾರಿ ತಿದ್ದಿ ಮರುಬರೆದು ಪೂರ್ತಿಗೊಳಿಸಿದ ಕರಡನ್ನು ನಿಷ್ಠುರ ಸಂಪಾದನ (editing) ಮತ್ತು ಸಂಸ್ಕರಣ (vetting) ಪ್ರಕ್ರಿಯೆಗಳಿಗೆ ಒಳಪಡಿಸಬೇಕು. ಈ ಹಂತದಲ್ಲಿ ಲೇಖಕನ ವಿಮರ್ಶಾಪ್ರಜ್ಞೆ (ಹಿಂದಿನ ಹಂತದಲ್ಲಿ ಸೃಜನಶೀಲ ಪ್ರಜ್ಞೆ) ಜಾಗೃತವಾಗಿದ್ದು ಜಳ್ಳನ್ನು ತೂರಿ ಕಾಳನ್ನು ಮಾತ್ರ ಉಳಿಯಗೊಟ್ಟಿರುತ್ತದೆ.

ಹೀಗೆ ದೊರೆಯುವುದೇ ಸಿದ್ಧ ಅಥವಾ ಅಂತಿಮ ಪ್ರತಿ. 'ಹಲಗೆ ಬಳಪವ ಪಿಡಿಯದೊಂದಗ್ಗಳಿಕೆ'ಯವನ ಗೋತ್ರಜರು ಖಾತ್ರಿ ಇಲ್ಲಿ ಸಲ್ಲುವುದಿಲ್ಲ. ಸಂಗೀತವಿದನಿಗೆ ಸ್ವರಸ್ಥಾನದಂತೆ ಲೇಖಕನಿಗೆ ಪದಸ್ಥಾನ. ಈ ಜ್ಞಾನ ನಿರಂತರ ಅಧ್ಯಯನ ಚಿಂತನ ಮತ್ತು ಕೃಷಿಯಿಂದ ಮಾತ್ರ ಲಭ್ಯವಾಗುತ್ತದೆ – ಕೇವಲ ಕನ್ನಡ ತಾಯಿನುಡಿಯಾದ್ದರಿಂದ ಅಥವಾ ಅದರಲ್ಲಿ ಒಂದಿಷ್ಟು ಬರಹ ಮಾಡಿದ್ದರಿಂದ ತಂತಾನೇ ಸಿದ್ಧಿಸುವುದಿಲ್ಲ.

ಪಾರಿಭಾಷಿಕ ಪದಗಳು: ಏಕರೂಪದ ಪಾರಿಭಾಷಿಕ ಪದಗಳ ಕೊರತೆಯೇ ಕನ್ನಡದಲ್ಲಿ ವಿಜ್ಞಾನ ವಾಙ್ಮಯ ಅಭಿವರ್ಧನೆಯಾಗದಿರುವುದರ ಕಾರಣ ಎಂಬುದಾಗಿ 'ತಜ್ಞ'ರು ಸಭೆ ಸಮಾರಂಭಗಳಲ್ಲಿ ತಾರ ಸ್ಥಾಯಿಯಲ್ಲಿ ಗರ್ಜಿಸಿ 'ಅಪ್ಪಣೆ' ಕೊಡಿಸುವುದುಂಟು. ನೀರಿಗೆ ಎಂದೂ ಇಳಿಯದೇ ಈಜುವಿಕೆಯ ಸಮಸ್ಯೆಗಳನ್ನು ವಿವರಿಸುವ (ಮತ್ತು ಆ ಕಾರಣದಿಂದ ಈಜುವಿಕೆ ಅಪ್ರಾಯೋಗಿಕವೆಂದು ತೀರ್ಮಾನಿಸುವ) ಶುಷ್ಕ ವಾದಕ್ಕೆ ಸಮಾನವಾದದ್ದಿದು. ಈ ಕ್ಷೇತ್ರದಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡಿರುವವರ ಅನುಭವ ಸುಸ್ಪಷ್ಟವಾಗಿದೆ: ಪಾರಿಭಾಷಿಕ ಪದಗಳ ಕೊರತೆ ಒಂದು ಸಮಸ್ಯೆಯೇ ಅಲ್ಲ. ಶ್ರದ್ಧೆಯಿಂದ ದುಡಿಯಬಲ್ಲ ತಜ್ಞರ ಅಭಾವವೇ ಇಲ್ಲಿಯ ನಿಜವಾದ ಸಮಸ್ಯೆ.

ಭಾಷೆಯ ಕಾರ್ಯ: ಆಸಕ್ತ ವಾಚಕನಿಗೆ ವಿಷಯವನ್ನು ಸ್ಪಷ್ಟವಾಗಿಯೂ ಆಕರ್ಷಕವಾಗಿಯೂ ತಿಳಿಯಪಡಿಸಬೇಕಾದದ್ದು ಭಾಷೆಯ ಕಾರ್ಯ. ಈ ದಿಶೆಯಲ್ಲಿ ಕತೆ, ಕಾದಂಬರಿ, ಲಲಿತ ಪ್ರಬಂಧ ಮುಂತಾದ ಸಾಹಿತ್ಯ ಪ್ರಕಾರಗಳ ಲೇಖಕರ ಜವಾಬುದಾರಿಕೆಗಿಂತ ತೀರ ಹೆಚ್ಚಿನದು ವಿಜ್ಞಾನ ವಾಙ್ಮಯ ಲೇಖಕರದು. ಸಾಧಾರಣವಾಗಿ ಈ ದಿನಗಳಲ್ಲಿ ಒಬ್ಬ ವಿಜ್ಞಾನ ಲೇಖಕನನ್ನು ಎದುರಿಸುವ ಪ್ರಶ್ನೆಗಳಿವು: ಲೇಖನ ಸರಳವಾಗಿರಬೇಕು, ಸ್ಪಷ್ಟವಾಗಿರಬೇಕು, ಕಠಿಣ ಪದಗಳಾಗಲೀ ಸಂಕೀರ್ಣ ವಾಕ್ಯಗಳಾಗಲೀ ಇರಬಾರದು ಇತ್ಯಾದಿ. ವೇದಿಕೆಯ ಮೇಲಿಂದ ಈ ಮಾತು ಆಡುವಾಗ ಅಪ್ಯಾಯಮಾನವಾಗಿರುತ್ತದೆ. ಯಾವುದೋ ಲೇಖನದಿಂದ ಸಂದರ್ಭಾನುಚಿತವಾಗಿ ಆಯ್ದು ಕೆಲವೊಂದು ಪದಗಳನ್ನೋ ವಾಕ್ಯಗಳನ್ನೋ ಉದಾಹರಿಸಿ ಗೇಲಿ ಮಾಡುವಾಗ 'ಅಜ್ಞಾತ ಜ್ಞಾನಶತ್ರು'ವಿನ ಎದುರು ಎಸೆದ ಈ ವಾಗ್ಬಾಣಗಳು ಕೇಳಲು ಮೋಹಕವಾಗಿರುತ್ತವೆ. ಆದರೆ ವಾಸ್ತವ ಪರಿಸ್ಥಿತಿ ಬೇರೆಯೇ.

ಯಾವ ಪ್ರಜ್ಞಾವಂತ ಲೇಖಕನೂ ತನ್ನ ಲೇಖನ ಉದ್ದಿಷ್ಟ ವಾಚಕರಿಗೆ ಅಗ್ರಾಹ್ಯವಾಗಬೇಕೆಂದು ಖಂಡಿತ ಬಯಸಲಾರ. ತನ್ನ ವಿಷಯ ಪ್ರೌಢಿಮೆಯನ್ನಾಗಲೀ ಭಾಷಾ ಪಾಂಡಿತ್ಯವನ್ನಾಗಲೀ ಪ್ರದರ್ಶಿಸುವ ಮಾಧ್ಯಮ ಅದಾಗಬೇಕೆಂದು ಆಶಿಸಲಾರ. ಯಾವ ರೀತಿಯಲ್ಲಿ, ಏನು ವರಿಸೆ ಪ್ರಯೋಗಿಸಿ, ಒಲ್ಲದ ಓದುಗನನ್ನು ತನ್ನ ಕಡೆಗೆ ಸೆಳೆಯಲು ಸಾಧ್ಯವಾದೀತು ಎಂಬುದೇ ಅವನ ನಿಜ ಕಾಳಜಿ. ಈಗ ಸುಮಾರು ನಾಲ್ಕೈದು ದಶಕಗಳಿಂದ ಈ ಕೆಲಸದಲ್ಲಿ (ಕನ್ನಡ ವಾಙ್ಮಯ ರಚನೆ) ಇಂಥ ಕಾಳಜಿಯಿಂದ ಕೆಲಸ ಮಾಡುತ್ತಿರುವ ನನ್ನ ಅನುಭವವನ್ನು 'ಐನ್‌ಸ್ಟೈನ್ ಬಾಳಿದರಿಲ್ಲಿ' (ಮೂರನೆಯ ಆವೃತ್ತಿ ೨೦೦೦, ಬೆಲೆ ರೂ ೫೫. ಕೆಲವೇ ಪ್ರತಿಗಳು ಉಳಿದಿವೆ. ವಿವರಗಳಿಗೆ ಜಾಲತಾಣದ ಮೇಲಿರುವ ಪುಸ್ತಕ ವಿಭಾಗ ತೆರೆದು ನೋಡಿ.) ಪುಸ್ತಕದ 'ನನ್ನ ನುಡಿ'ಯಲ್ಲಿ ಸಂಗ್ರಹಿಸಿದ್ದೇನೆ. ಉದ್ಧೃತಾಂಶ:

". . . ಕನ್ನಡದಲ್ಲಿ ಜನಪ್ರಿಯ ವಿಜ್ಞಾನದ ಮಟ್ಟ ಮತ್ತು ಧಾಟಿ. . . ಹೇಗಿರಬೇಕು? ಇದಕ್ಕೆ ಉತ್ತರ ಅರಸುವಾತ ಸಹಜವಾಗಿ ಕನ್ನಡದಲ್ಲಿ ಈ ವಾಙ್ಮಯದ ವಿಕಾಸವನ್ನು ಎಚ್ಚರಿಕೆಯಿಂದ ಗಮನಿಸಿ ತನ್ನ ಹಾದಿಯನ್ನು ರೂಪಿಸಿಕೊಳ್ಳಬೇಕಾಗುತ್ತದೆ.

"ಈ (೨೦ನೆಯ) ಶತಮಾನದ ಮೊದಲ ಎರಡು ಮೂರು ದಶಕಗಳಲ್ಲಿ ಬೆಳ್ಳಾವೆ ವೆಂಕಟನಾರಾಯಣಪ್ಪ ಮತ್ತು ನಂಗಪುರಂ ವೆಂಕಟೇಶ ಅಯ್ಯಂಗಾರ್ ಹಾದಿ ಕಡಿದು, ಹಿಲಾಲು ಹಿಡಿದು ಮುನ್ನಡೆದಿದ್ದರು. ತರುವಾಯದ ದಿನಗಳಲ್ಲಿ ಜಿ. ಹನುಮಂತ ರಾವ್, ಸಿ.ಎನ್. ಶ್ರೀನಿವಾಸ ಅಯ್ಯಂಗಾರ್ ಮತ್ತು ವಿಶೇಷವಾಗಿ ಆರ್.ಎಲ್. ನರಸಿಂಹಯ್ಯ ಇನ್ನಷ್ಟು ಮುಂದೆ ಸಾಗಿ ಹೊಸ ಹರವುಗಳನ್ನು ಗುರುತಿಸಿದ್ದರು. ಹೀಗೆ ೧೯೫೦ರ ದಶಕ ಮುಗಿಯುವ ವೇಳೆಗೆ ವಿಜ್ಞಾನ ವಾಙ್ಮಯಕ್ಕೆ ಖಚಿತವಾಗಿ ಒಂದು ವ್ಯಕ್ತಿತ್ವ ಪ್ರಾಪ್ತವಾಗಿತ್ತು. ನಮ್ಮ ಸಾರಸ್ವತ ಸಂಪತ್ತಿನಿಂದ ಪೋಷಿತವಾದ ಮತ್ತು ನಮ್ಮ ಸಂಸ್ಕೃತಿಯಿಂದ ಪ್ರಭಾವಿತವಾದ ಪರಿಪುಷ್ಟ ಕನ್ನಡದಲ್ಲಿ ಆಧುನಿಕ ವಿಜ್ಞಾನ ಪರಿಕಲ್ಪನೆಗಳ ನಿರೂಪಣೆ. ಇಂಥ ಸತ್ತ್ವಪೂರ್ಣ ಶೈಲಿಯ ಉತ್ಕೃಷ್ಟ ನಿದರ್ಶನವನ್ನು ಆರ್.ಎಲ್. ನರಸಿಂಹಯ್ಯನವರ ಬರವಣಿಗೆಗಳಲ್ಲಿ ಕಾಣುತ್ತೇವೆ. ಹೇಳಬೇಕಾದ ವಿಷಯದ (ಅಂದರೆ ವಿಜ್ಞಾನದ) ಮೇಲೆಯೂ ನಿರೂಪಣಾ ಮಾಧ್ಯಮದ (ಅಂದರೆ ಕನ್ನಡ) ಮೇಲೆಯೂ ಪೂರ್ಣ ಪ್ರಭುತ್ವದಿಂದ ಸಿದ್ಧಿಸಿದ ಭಾವ–ಭಾಷೆ ಮಧುರ ಬಾಂಧವ್ಯವಿದು, ರಸಪಾಕವಿದು. ಆರ್.ಎಲ್.ಎನ್ – ತರುವಾಯದ ದಿನಗಳಲ್ಲಿ ವಿಜ್ಞಾನ ವಾಙ್ಮಯ ಅನುಸರಿಸಿದ ಹಾದಿಯಿಂದ ನಾವು ಕಲಿಯಬಹುದಾದ ಪಾಠ ಬಹುತೇಕ ನಿಷೇಧಾತ್ಮಕವಾದದ್ದು: ಭಾವ–ಭಾಷೆ ಬಾಂಧವ್ಯದ ಎರಕ ಒಡೆದು ಹೋದರೆ ವಾಙ್ಮಯದ ಗತಿ ಏನಾದೀತೆಂಬುದಕ್ಕೆ ವಿಪುಲ ನಿದರ್ಶನಗಳನ್ನು ಅಲ್ಲಿ ಕಾಣಬಹುದು. ಖಚಿತವಲ್ಲದ ವಿಷಯವನ್ನು, ಅಡಕವಲ್ಲದ ಕನ್ನಡದಲ್ಲಿ ಗೀಚಿ, ಅಂಥ ಬರವಣಿಗೆಯನ್ನು ಸರಳ, ಸುಂದರ ನಿರೂಪಣೆ

ಎಂದು ಭ್ರಮಿಸುವ ಈ ಮಾರ್ಗ ಸರ್ವಥಾ ಅನುಸರಣೀಯವಲ್ಲ, ಅನುಕರಣೀಯವಂತೂ ಅಲ್ಲವೇ ಅಲ್ಲ ಎಂಬುದು ಕಂಡಂತೆಯೇ ಇದೆ."

ಭಾಷೆಯಲ್ಲಿ ಕ್ಲಿಷ್ಟತೆ, ಸರಳತೆ ಎಂಬವು ವಾಚಕನ ಭಾಷಾಜ್ಞಾನವನ್ನು ಅವಲಂಬಿಸಿವೆ: ಸಾಪೇಕ್ಷತಾ ಸಿದ್ಧಾಂತ ಕುರಿತ ಲೇಖನ ಒಬ್ಬ ಓದುಗನಿಗೆ ಕಡು ಕಷ್ಟ ಎನ್ನಿಸಬಹುದು. ಅದೇ ಓದುಗನಿಗೆ ಸಸ್ಯಗಳನ್ನು ಕುರಿತ ಒಂದು ಲೇಖನ ಅತಿ ಸರಳ ಎನ್ನಿಸಬಹುದು. ಈ ಕ್ಲಿಷ್ಟತೆ – ಸರಳತೆ ಕಾರಣವನ್ನು ಆಯಾ ವಿಷಯಗಳಲ್ಲಿ ಕಾಣಬೇಕೇ ಹೊರತು ಆಯಾ ಲೇಖನಗಳ ಭಾಷೆಯಲ್ಲಿ ಅಲ್ಲ.

ಇಂಗ್ಲಿಷಿನಿಂದ ಕನ್ನಡಕ್ಕೆ ಅನುವಾದ: ವಿಜ್ಞಾನದ ಆಧುನಿಕ ಪರಿಕಲ್ಪನೆಗಳಿಗೆ ಪ್ರವೇಶ ಪಡೆಯಲು ನಾವು ಇಂಗ್ಲಿಷಿಗೆ ಶರಣುಹೋಗುವುದು ಅನಿವಾರ್ಯವಾಗಿದೆ. ಬಹುತೇಕ ಸಂದರ್ಭಗಳಲ್ಲಿ ಇಂಗ್ಲಿಷಿನಿಂದ ಕನ್ನಡಕ್ಕೆ ಅನುವಾದಿಸುವುದು ಅವಶ್ಯವಾಗುತ್ತದೆ. ಈ ಕೆಲಸಕ್ಕೆ ಸಂಬಂಧಿಸಿದ ಸಮಸ್ಯೆ–ಪರಿಹಾರ–ವಿಧಾನಗಳನ್ನು ಪ್ರತ್ಯೇಕವಾಗಿಯೇ ಚರ್ಚಿಸಬೇಕಾಗುತ್ತದೆ (ನೋಡಿ ಹಿಂದಿನ ಅಧ್ಯಾಯ). ಮೂಲ ಭಾಷೆಯಲ್ಲಿ ಅಡಕವಾಗಿರುವ ಪರಿಕಲ್ಪನೆಯನ್ನು ಲಕ್ಷ್ಯ ಭಾಷೆಯಲ್ಲಿ ಅಷ್ಟೇ ಆಕರ್ಷಕವಾಗಿ ನಿರೂಪಿಸುವ ಪುನಸ್ಸೃಷ್ಟಿ ಕ್ರಿಯೆ ಇದು. ಕನ್ನಡದ ಶೈಲಿಯಲ್ಲಿ ಇಂಗ್ಲಿಷಿನ ಮೂರಿ ಹೊಡೆಯದಂತೆ ಎಚ್ಚರಿಕೆ ವಹಿಸುವುದು ಜರೂರಿನ ಅಗತ್ಯ.

ಶೈಲಿ: 'ತರಂಗ' ಸಾಪ್ತಾಹಿಕದ ಮೊದಲ ಸಂಪಾದಕ ಸಂತೋಷಕುಮಾರ ಗುಲ್ವಾಡಿಯವರಿಂದ ಬಂದ ಕೋರಿಕೆ ಪ್ರಕಾರ ಅವರಿಗೆ ನಾನೊಂದು ಜನಪ್ರಿಯ ವಿಜ್ಞಾನ ಲೇಖನ ಬರೆದು ಕಳಿಸಿದೆ. ಸುದೀರ್ಘ ಕಾಲ ಅದು ಪ್ರಕಟವಾಗಲಿಲ್ಲ. "ಯಾವ ಮುಜುಗರವೂ ಇಲ್ಲದೇ ಅದನ್ನು ಹಿಂತಿರುಗಿಸಿ" ಎಂದು ಪದೇ ಪದೇ ಬರೆದೆ; ಪ್ರತಿಕ್ರಿಯೆ ಶೂನ್ಯ. ಮುಂದೊಂದು ದಿನ ನಾನು ಉಡುಪಿಗೆ ಹೋಗಿದ್ದಾಗ ದೂರವಾಣಿ ಮೂಲಕ ಅವರನ್ನು ಸಂಪರ್ಕಿಸಿದೆ,

"ನನ್ನ ಲೇಖನದ ಅವಸ್ಥೆ ಏನು?"

"ಅದು ತುಸು ಕಠಿಣವಾಗಿದೆಯಲ್ಲ?"

"ನೀವು ಸಾವಕಾಶವಾಗಿ ಓದಿ ನೋಡಿದಿರಾ?"

"ಮೇಲಿಂದ ಮೇಲೆ ಓದಿದಾಗ ಹಾಗನ್ನಿಸಿತು."

"ಅದರ ಬಗ್ಗೆ ಇನ್ನು ವಾದ ಬೇಡ, ಅದನ್ನು ನೇರ ವಾಪಾಸು ಮಾಡಿ."

"ಅವಸರ ಮಾಡಬೇಡಿ. ನೀವೇಕೆ ಶಿವರಾಮ ಕಾರಂತರ ಹಾಗೆ ಸರಳವಾಗಿ ಬರೆಯುವುದಿಲ್ಲ?"

"ಕಲಗಚ್ಚು ಅತಿ ಸರಳ. ಕುಂಕುಮಕೇಸರಿ ಮಿಶ್ರಿತ ಕೆನೆ ಹಾಲು ಅತಿ ಕಠಿಣ. ನಿಮಗೆ ಕಲಗಚ್ಚು ಪ್ರಿಯವಾದರೆ ಧಾರಾಳವಾಗಿ ಅದನ್ನು ಕುಡಿಯಿರಿ."

"ಕೋಪ ಮಾಡಬೇಡಿ. ನಿಮ್ಮ ಶೈಲಿಯಲ್ಲಿ ಸ್ವಲ್ಪ ಅವರಂತೆ. . ."

"ನೋಡಿ, ನಿಸರ್ಗ ನನ್ನನ್ನು ನಾನಾಗಿ ಮಾಡಿದೆ, ಅವರನ್ನು ಅವರಾಗಿ ಮಾಡಿದೆ. ನಾನು ನಾನೇ ಅವರು ಅವರೇ."

ಮೋಝಾರ್ಟ್ (ಪಾಶ್ಚಾತ್ಯ ವಾಗ್ಗೇಯಕಾರ) ಬರೆದಿದ್ದಾನೆ: "But why my productions take from my hand that particular form and style that makes them Mozartish and different from the works of other composers, is probably owing to the same cause which renders my nose so large or so aquiline, or in short, makes it Mosart's and different from those of other people. For, I really do not study or aim at any originality.

ಅನುವಾದ: "ಆದರೆ ನನ್ನ ಕೃತಿಗಳು ನನ್ನಿಂದ ಆ ವಿಶಿಷ್ಟ ರೂಪವನ್ನೂ ಶೈಲಿಯನ್ನೂ ಪಡೆದು ಮೋಝಾರ್ಟ್ ಛಾಪು ಪ್ರದರ್ಶಿಸುವುದೇಕೆ? ಇತರ ವಾಗ್ಗೇಯಕಾರರ ಕೃತಿಗಳಿಗಿಂತ ಇವು ವಿಭಿನ್ನವಾಗಿರುವುದೇಕೆ? ಇದರ ಕಾರಣವನ್ನು ಪ್ರಾಯಶಃ ನನ್ನ ಮೂಗು ಇಷ್ಟೊಂದು ದೊಡ್ಡದಾಗಿರುವುದರಲ್ಲಿ ಅಥವಾ ಗೃಧ್ರನಾಸಿಕವಾಗಿರುವುದರಲ್ಲಿ – ಅಂದರೆ ಸಂಕ್ಷೇಪವಾಗಿ, ಅದು ಇತರ ನಾಸಿಕಗಳಿಗಿಂತ ಬೇರೆಯದಾಗಿದ್ದು ಮೊಝಾರ್ಟನದಾಗಿರುವುದರಲ್ಲಿ – ಕಾಣಬೇಕಾಗುತ್ತದೆ. ಏಕೆಂದರೆ ನಿಜಕ್ಕೂ ನಾನು ಯಾವುದೇ ಸ್ವಂತತ್ವಕ್ಕಾಗಿ ಅಭ್ಯಾಸ ಮಾಡುವುದಿಲ್ಲ, ಅದು ನನ್ನ ಉದ್ದೇಶವೂ ಅಲ್ಲ." ನಿಜ, style is the man – ವ್ಯಕ್ತಿಯ ಶೀಲವೇ ಆತನ ಶೈಲಿ.

"If God hade a different plan, He would have created a different man" – ಗಯಟೆ ಹೇಳಿದ ಮಾತು – ಭಗವಂತನಿಗೆ ಬೇರೆ ಒಂದು ಯುಕ್ತಿ ಇದ್ದಿದ್ದರೆ ಆತ ಬೇರೆ ಒಬ್ಬ ವ್ಯಕ್ತಿಯನ್ನು ಸೃಷ್ಟಿಸಿರುತ್ತಿದ್ದ.

ನನ್ನ ಕಾರ್ಯವಿಧಾನ: ಇಂಗ್ಲಿಷಿನಲ್ಲಿ ಒಂದು ಉತ್ಕೃಷ್ಟ ವಿಜ್ಞಾನ ಲೇಖನ ಓದಿದಾಗ ಅದರ ಪರಿಕಲ್ಪನಾತ್ಮಕ ಸ್ಪಷ್ಟತೆಯ ಜೊತೆಗೆ ಭಾಷಾ ಸೌಂದರ್ಯಕ್ಕೂ ಮಾರುಹೋಗುತ್ತೇನೆ. ಎರಡು ಉದಾಹರಣೆ ನೋಡಿ:

"It is all very well to equate combustion and respiration and to look at the human being as a bonfire, fanned by oxygen and producing carbon dioxide. Yet there is no hiding the very important differences that exist between a living being and a bonfire (Isaac Asimov in Life and Energy).

"ದಹನವನ್ನೂ ಉಸಿರಾಟವನ್ನೂ ಸಮೀಕರಿಸುವುದು ಮತ್ತು ಮನುಷ್ಯ ಎಂದರೆ ಆಕ್ಸಿಜನ್ನನ್ನು ಊದಿದಾಗ ಕಾರ್ಬನ್ ಡೈಆಕ್ಸೈಡನ್ನು ಉಗುಳುವ ಒಂದು ಹೋಮಾಗ್ನಿ ಎಂದು ಭಾವಿಸುವುದು ಎಲ್ಲ ಚೆನ್ನ. ಹೀಗಿದ್ದರೂ ಜೀವಂತ ವ್ಯಕ್ತಿ ಮತ್ತು ಮೃತ ಹೋಮಾಗ್ನಿ ನಡುವೆ ಎದ್ದು ತೋರುವ ಅತಿಮುಖ್ಯ ವ್ಯತ್ಯಾಸಗಳನ್ನು ಮರೆಮಾಡುವಂತಿಲ್ಲ."

"It is ironic that one of the great spectacles of terrestrial nature, the light of aurora shimmering in the night sky, is a cue to the character of the earth's hidden and enigmatic core. . . Indirect evidence indicates that it is an iron alloy, solid towards the center but otherwise liquid. It is the turbulent flow of the liquid that generates the earth's magnetic field. (Scientific American September 1983)

"ಇರುಳ ಬಾನಿನಲ್ಲಿ ಮಿನುಗುವ ಮತ್ತು ಭೂಮಿಯಲ್ಲಿ ಕಾಣಬರುವ ಮಹಾದೃಶ್ಯಗಳ ಪೈಕಿ ಒಂದಾಗಿರುವ ಧ್ರುವಪ್ರಭೆ ಭೂಮ್ಯಂತರಾಳದಲ್ಲಿ ಹುದುಗಿರುವ ಸಮಸ್ಯಾತ್ಮಕ ತಿರುಳಿನ ಸ್ವಭಾವವನ್ನು ಪ್ರತಿಬಿಂಬಿಸುವ ಕನ್ನಡಿಯಾಗಿರುವುದು ನಿಜಕ್ಕೂ ಚೋದ್ಯದ ಸಂಗತಿ. . . ಪರೋಕ್ಷ ಪುರಾವೆ ಪ್ರಕಾರ ಈ ತಿರುಳು ಕಬ್ಬಿಣದ ಮಿಶ್ರಲೋಹ: ಕೇಂದ್ರದೆಡೆಗೆ ಘನವಾಗಿದ್ದು ಒಟ್ಟಾರೆ ದ್ರವ ಪದಾರ್ಥ ಎಂಬುದನ್ನು ಸೂಚಿಸುತ್ತದೆ. ಈ ದ್ರವದ ಅಲ್ಲೋಲಕಲ್ಲೋಲ ಪ್ರವಾಹದ ಕಾರಣವಾಗಿ ಭೂಕಾಂತಕ್ಷೇತ್ರ ಮೈದಳೆದಿದೆ."

ನನ್ನ ಲೇಖನಗಳಲ್ಲಿ ನಾನು ಪರಿಕಲ್ಪನಾತ್ಮಕ ಸ್ಪಷ್ಟತೆ ಮತ್ತು ಮಾಹಿತಿಗಳ ಪರಿಪೋಷಣೆ ಕಡೆ ಆದ್ಯ ಗಮನ ಹರಿಸುತ್ತಿರುವಾಗಲೇ ಭಾಷಾ ಸೌಂದರ್ಯದ ಕಡೆಗೂ ಅಷ್ಟೇ ಲಕ್ಷ್ಯ ಹರಿಸುತ್ತೇನೆ. ಉದಾಹರಣೆಗೆ –

Scientific American March 1981 Rubik's Cube ಲೇಖನದ ಆರಂಭ ವಾಕ್ಯಗಳು ಹೀಗಿವೆ: Cubitis magikia, n, A severe mental disorder accompanied by itching of finger tips that can be relieved only by prolonged contact with a multicoloured cube originating in Hungary and Japan. Symptoms often last for months. Highly contagious. What this stuffy medical dictionary entry fails to mention is that contct with multicoloured cube not only cures the itchness but also causes it. Further more, it fails to point out that the affection can be highly pleasurable.

ಈ ಬರವಣಿಗೆಯಲ್ಲಿಯ ಶ್ರೀಮದ್ಗಾಂಭೀರ್ಯಯುತ ಹಾಸ್ಯ ರೂಬಿಕ್ ಘನಾಕೃತಿಯಂತೆಯೇ ತೀವ್ರ ಸಾಂಕ್ರಾಮಿಕವಾಗಿದೆ. ಇದರಿಂದ ಸ್ಫೂರ್ತಿ ಹೀರಿದ ನಾನು 'ಅದ್ಭುತ ಸರ್ವವ್ಯಾಪಿ ಸವರ್ಣ ಘನಾಕೃತಿ ಸ್ಪರ್ಶವ್ಯಾಧಿ' ಎಂಬ ಶೀರ್ಶಿಕೆಯ ಅಡಿಯಲ್ಲಿ ಒಂದು ಲೇಖನ ಬರೆದೆ. ಅದರ ಮೊದಲ ಎರಡು ಪರಿಚ್ಛೇದಗಳನ್ನು ಇಲ್ಲಿ ಉದ್ಧರಿಸಿದ್ದೇನೆ.

"ನವೀನ ಪರಿಷ್ಕೃತ ಆಯುರ್ವೇದ ವೈದ್ಯ ಅನಿಘಂಟಿನಲ್ಲಿ ಈ ನೂತನ ಸ್ಪರ್ಶವ್ಯಾಧಿಯ ಬಗ್ಗೆ ಇರಬಹುದಾದ ವ್ಯಾಖ್ಯಾನ: 'ಸಂಸ್ಕೃತ', ನಾಮಪದ, ಒಂದು ಬಗೆಯ ತೀವ್ರ ಮಾನಸಿಕ ಸಂಕ್ಷೋಭೆ. ಬೆರಳ ಕೊನೆಗಳಲ್ಲಿ ನವೆ ಉಂಟಾಗುವುದು ಇದರ ಲಕ್ಷಣ. ಚಿಹ್ನೆಗಳು ತಿಂಗಳುಗಟ್ಟಲೆ ಮರುಕಳಿಸುತ್ತಿರುವುವು. ಅತಿ ಸಾಂಕ್ರಾಮಿಕ. ಹಂಗರಿ ಮತ್ತು ಜಪಾನ್ ದೇಶಗಳಲ್ಲಿ ಉಗಮಿಸಿ ಪ್ರಪಂಚದಾದ್ಯಂತ ವ್ಯಾಪಿಸಿರುವ ಬಹುವರ್ಣ ಘನಾಕೃತಿಯ ಜೊತೆ ಸುದೀರ್ಘ ಕಾಲ ಸಂಸ್ಪರ್ಶ ಹೊಂದುವುದರಿಂದ ಶಮನ. ಈ ತಿಲಕಾಷ್ಠ ಮಹಿಷಬಂಧನ – ವ್ಯಾಖ್ಯಾನ ತಿಳಿಸದಿರುವ ಸಂಗತಿ ಒಂದುಂಟು: ಬಹುವರ್ಣ ಘನಾಕೃತಿಯೊಂದಿಗಿನ ಸಂಸ್ಪರ್ಶ ನವೆಗೆ ಚಿಕಿತ್ಸೆ ಮಾತ್ರವಲ್ಲ, ಕಾರಣವೂ ಹೌದು! ಅಲ್ಲದೆ ಈ ವ್ಯಾಧಿ ಅತ್ಯಂತ ಉಲ್ಲಾಸದಾಯಕವೂ ಆಗಬಹುದು.

"ಗಣಿತ ವಿದ್ಯಾರ್ಥಿಯಾದ ನಾನು ರೂಬಿಕ್ ಘನಾಕೃತಿಯ ಬಗ್ಗೆ ಮೂರು ವಿಶ್ವಾಸಾರ್ಹ ಲೇಖನ ಓದಿದ್ದೆ. ಆದರೆ ಆಸಕ್ತಿ ಕುದುರಿರಲಿಲ್ಲ. ಏಕೆಂದರೆ ಚಿತ್ರ ಮತ್ತು ನಿರೂಪಣೆ ಎಷ್ಟೇ ಆಕರ್ಷಕ ಮತ್ತು ಸ್ಪಷ್ಟ ಆಗಿದ್ದರೂ ಅವು ವಸ್ತುವಿನ

ಜೊತೆ ಪತ್ಯಕ್ಷ ಒಡನಾಟ ಗಳಿಸುವ ಅನುಭವಕ್ಕೆ ಸರಿಸಾಟಿ ಎನಿಸವು. ಹೆಚ್ಚೆಂದರೆ ಸರಿದಾರಿ ತೋರಿಸುವ ಕೈಮರ ಆಗಬಲ್ಲವು, ಅಷ್ಟೆ. ಆದ್ದರಿಂದ ರೂಬಿಕ್ ಘನಾಕೃತಿಯಾದರೂ ಅಮೆರಿಕದವರ ಎಂದಿನ ಮಾರುಕಟ್ಟೆ ದೊಂಬರಲಾಗದ ಇನ್ನೂ ಒಂದು ವರಿಸೆ ಎಂಬ ಮಾಮೂಲಿ 'ಭಾರತೀಯ ಶೂನ್ಯವಾದ' ದೃಷ್ಟಿಯಿಂದ ಆ ಲೇಖನಗಳ ಹೂರಣ ಸವಿಯಲು ನಿರಾಕರಿಸಿದ್ದೆ."

ಪದಗಳ ಬಳಕೆಯ ಬಗ್ಗೆ ನಾನು ವಿಶೇಷ ಲಕ್ಷ್ಯ ಹರಿಸುತ್ತೇನೆ. ಪ್ರತಿಯೊಂದು ಲೇಖನವೂ ಒಂದು ವಾಗ್ಗೇಯಕೃತಿಯಂತೆ ಪರಿಪೂರ್ಣ ಕಲಾಪ್ರಕಾರವಾಗಿರಬೇಕೆಂಬುದು ನನ್ನ ನಿಲವು. ಅದರಲ್ಲಿ ಅರ್ಥ – ಭಾಷೆ – ಲಯ ಅಖಂಡಪಾಕವಾಗಿ ಎರಕಗೊಂಡಿರಬೇಕು. ಇದನ್ನು ಸಾಧಿಸಲು ನಾನು ಪ್ರತಿಯೊಂದು ಲೇಖನವನ್ನೂ ಅನೇಕ ಬಾರಿ ಬರೆದು ತಿದ್ದಿ ರೂಪಿಸಿ ಪುನಾರೂಪಿಸುತ್ತೇನೆ – ಸಂಗೀತಗಾರ ಕೃತಿಯನ್ನು ಅಭ್ಯಾಸ ಮಾಡುವಂತೆ; ಕಿರಿದರೊಳ್ ಪಿರಿದರ್ಥ ಸಾಧಿಸಲು ಹೆಣಗುತ್ತೇನೆ. ಬರೆದುದನ್ನು ಗಟ್ಟಿಯಾಗಿ ಓದಿ ಗದ್ಯಲಯ ಶುದ್ಧಿಯನ್ನು ಸಾಧಿಸಲು ಪ್ರಯತ್ನಿಸುತ್ತೇನೆ.

ವಾಙ್ಮಯ ರಚನೆಗೆ ಅಷ್ಟ ಸೂತ್ರಗಳು: ಕನ್ನಡದಲ್ಲಿ ಜನಪ್ರಿಯ ವಿಜ್ಞಾನ ವಾಙ್ಮಯ ರಚಿಸಲು ಆಸಕ್ತರಾದವರು ಈ ಮುಂದಿನ ಅಷ್ಟ ಸೂತ್ರಗಳನ್ನು ನಿಷ್ಠೆಯಿಂದ ಪಾಲಿಸುವುದು ಜರೂರಿನ ಅಗತ್ಯ:

1. ಆಕರಗ್ರಂಥಗಳನ್ನೂ ತಾಂತ್ರಿಕ ಲೇಖನಗಳನ್ನೂ ಇಂಗ್ಲಿಷಿನಲ್ಲಿ ಓದಿ ಪರಿಕಲ್ಪನಾತ್ಮಕ ಸ್ಪಷ್ಟತೆ ಗಳಿಸಿಕೊಳ್ಳಬೇಕು.
2. ಉದ್ದಿಷ್ಟ ವಾಚಕರ ಬೌದ್ಧಿಕಮಟ್ಟ ಗಮನಿಸಿ ಲೇಖನದ ಆಲೇಖ್ಯವನ್ನು ತಯಾರಿಸಬೇಕು.
3. ಕನ್ನಡದಲ್ಲಿ ಯೋಚಿಸಿ – ಸಾಧ್ಯವಾದರೆ ಚರ್ಚಿಸಿ ಮತ್ತು ಭಾಷಣ ನೀಡಿ – ಲೇಖನ ಬರೆಯಬೇಕು. ಸ್ವಂತ ಪ್ರಯೋಗ, ಗಣನೆ ಇತ್ಯಾದಿ ಮಾಡುವುದು ಅಪೇಕ್ಷಣೀಯ.
4. ಪೂರ್ತಿ ಲೇಖನವನ್ನು ಗಟ್ಟಿಯಾಗಿ ಓದುತ್ತ ಐದಾರು ಸಲ ತಿದ್ದಿ ನಕಲು ಮಾಡಬೇಕು.
5. ಭಾಷೆಯನ್ನು ಸ್ಪಷ್ಟ, ಶುದ್ಧ ಮತ್ತು ಆಕರ್ಷಕವಾಗಿಸಲು ಸರ್ವ ಪ್ರಯತ್ನ ಮಾಡಬೇಕು.
6. ಸ್ವಂತ ಶೈಲಿ ರೂಪಿಸಿಕೊಳ್ಳಬೇಕು. ಯಾರದೇ ಇಂಗಾಲ ಪ್ರತಿ ಆಗಬಾರದು.
7. ಲೇಖನದಲ್ಲಿ ಪದ, ವಾಕ್ಯ, ರೂಪಕ, ಉಲ್ಲೇಖ, ಚಿತ್ರ ಮುಂತಾದವುಗಳಿಗೆ ನಿರ್ದಿಷ್ಟ ಕ್ರಿಯಾಪಾತ್ರವಿದೆ. ಕ್ರಿಯಾಪಾತ್ರವಿಲ್ಲದ್ದು ನಿಸರ್ಗದಲ್ಲಿ – ಆದ್ದರಿಂದ ಜೀವನದಲ್ಲಿ – ನಶಿಸಿ ಹೋಗುತ್ತದೆ ಎಂಬುದನ್ನು ನೆನಪಿನಲ್ಲಿಡಬೇಕು.
8. ಭಾಷಾಸೌಂದರ್ಯದ ಬಗ್ಗೆ ಯಾರಿಂದಲೇ ಯಾವುದೇ ಬಗೆಯ ಟೀಕೆ ಬಂದರೂ ಲೆಕ್ಕಿಸಬೇಕಾಗಿಲ್ಲ. ಪ್ರಸಿದ್ಧ ಗಣಿತವಿದ ಆನ್ರೀ ಪ್ವಾನ್ಕ್ವಾರೇ ಬರೆದಿರುವ ಈ ನುಡಿಗಳನ್ನು ಗಮನಿಸಿ:

The Scientist does note study nature because it is useful; he studies it because he delights in it, and he delights in it because it is beautiful. If nature were not beautiful, it would not be worth knowing and if nature were not worth knowing, life would note be worth living. Of course I do not here speak of that beauty that strikes the senses, the beauty of qualities and appearances; not that I undervalue such beauty, far from it, but it has nothing to do with science; I mean that profounder beauty which comes from the harmonious order of the parts, and which a pure intelligence can grasp.

"ನಿಸರ್ಗ ಪ್ರಯೋಜನಕಾರಿ ಎಂಬುದಕ್ಕಾಗಿ ವಿಜ್ಞಾನಿ ಅದನ್ನು ಅಧ್ಯಯನಗೈಯುವುದಿಲ್ಲ. ಅವನು ಅಧ್ಯಯನಗೈಯುವುದು ಅದರಲ್ಲಿ ಅವನಿಗೆ ಆನಂದ ಲಭಿಸುವುದರಿಂದ. ಅದರಲ್ಲಿ ಅವನಿಗೆ ಆನಂದ ಲಭಿಸುವುದು ಅದು ಸುಂದರವಾಗಿರುವುದರಿಂದ. ನಿಸರ್ಗ ಸುಂದರವಾಗಿರದಿದ್ದರೆ ಅದನ್ನು ತಿಳಿಯುವುದು ನಿಷ್ಪ್ರಯೋಜಕವಾಗಿರುತ್ತಿತ್ತು. ಇಂದ್ರಿಯಗಳಿಗೆ ಎದ್ದು ಕಾಣುವ ಸೌಂದರ್ಯವನ್ನು – ಅಂದರೆ ಗುಣಗಳ ಮತ್ತು ತೋರಿಕೆಗಳ (ಬಾಹ್ಯ) ಸೌಂದರ್ಯವನ್ನು – ನಾನಿಲ್ಲಿ ಪ್ರಸ್ತಾವಿಸುತ್ತಿಲ್ಲ ಎಂಬುದು ಸ್ಪಷ್ಟ. ಆ ಸೌಂದರ್ಯನ್ನು ಕಡೆಗಣಿಸುವೆನೆಂದಲ್ಲ, ಅದೆಂದೂ ಅನ್ನ ಉದ್ದೇಶ ಅಲ್ಲ. ಆದರೆ ಅದಕ್ಕೆ ವಿಜ್ಞಾನದ ಜೊತೆ ಏನೂ ವ್ಯವಹಾರವಿಲ್ಲ. ಬದಲು ನನ್ನ ಮನಸ್ಸಿನಲ್ಲಿರುವುದು ಭಾಗಗಳ ಸುಸಂಗತ ಮೇಳನದಿಂದ ಲಭಿಸುವ ಮತ್ತು ಶುದ್ಧ ಪ್ರತಿಭೆ ಗ್ರಹಿಸುವ ಆ ಗಭೀರ ಸೌಂದರ್ಯ."

ಲೇಖಕರಿಗೆ ಈ ನಿರೂಪಣೆ ನೀಡುವ ಸಂದೇಶ ಸ್ಪಷ್ಟ: ಲೇಖನ ವ್ಯವಸಾಯ ಕೊಡುವ ಶುದ್ಧ ಬೌದ್ಧಿಕ ಆನಂದಕ್ಕಾಗಿ – ಭಾವನಾ ವಿಹಾರಿಗಳಾಗಿದ್ದು ಪದಗಳ ಮೂರ್ತ ಪ್ರಪಂಚಕ್ಕೆ ಅವತರಿಸುವಾಗ ಒದಗುವ ಶುದ್ಧ ಸಂತೃಪ್ತಿಗಾಗಿ – ಈ ಕ್ರಿಯೆಯಲ್ಲಿ ಉದ್ಯುಕ್ತರಾಗಬೇಕು, ಬೇರೆ ಯಾವುದೇ ಐಹಿಕ ಲಾಭ ಅಥವಾ ಪ್ರಯೋಜನಗಳ ದೃಷ್ಟಿಯಿಂದ ಅಲ್ಲ.

ಸಮಾರೋಪ: ಪ್ರಸಕ್ತ ಪ್ರಬಂಧದಲ್ಲಿ ಜನಪ್ರಿಯ ವಿಜ್ಞಾನ ವಾಙ್ಮಯವನ್ನು ಅಭ್ಯಾಸದ ದೃಷ್ಟಿಯಿಂದ ವಸ್ತು (ವಿಷಯ ಅಥವಾ ಪರಿಕಲ್ಪನೆ), ಶೈಲಿ (ಭಾಷೆ) ಮತ್ತು ವಿನ್ಯಾಸ (ಆಕರ್ಷಕತೆ) ಎಂಬ ವಿಭಾಗಗಳಲ್ಲಿ ಪರಿಶೀಲಿಸಲಾಗಿದೆ. ಒಂದು ಪರಿಪೂರ್ಣ ಕೃತಿಯಲ್ಲಿ ಇವೆಲ್ಲವೂ ಯುಕ್ತ ಪ್ರಮಾಣದಲ್ಲಿ ಎರಕಗೊಂಡಿದ್ದು ಅದರ ಒಟ್ಟಂದವನ್ನು ವರ್ಧಿಸುತ್ತದೆ. ಲೇಖಕ ಈ ಸೂಕ್ಷ್ಮವನ್ನು ಗ್ರಹಿಸಿ ಕ್ರಿಯೋದ್ಯುಕ್ತನಾದಾಗ ಆತನಿಗೆ ತಾನು ಸಾಗಬೇಕಾದ ಪಥ ತಾನಾಗಿಯೇ ಹೊಳೆಯುತ್ತದೆ. ಇದೊಂದು ತೆರನಾದ ಸಂಶೋಧನೆ; ಸ್ವಂತ ವ್ಯಕ್ತಿತ್ವದ ವಿಸ್ತರಣ ಸಾಧ್ಯತೆಗಳನ್ನು ಕಂಡು ಕೊಳ್ಳುವ ಕೆಲಸ. ಎಂದೇ ಅತ್ಯಂತ ಉಲ್ಲಾಸದಾಯಕ ಕಾರ್ಯ.

ಸವಾಲನ್ನು ಎದುರಿಸುವ ಛಲ
ಅಧ್ಯಾಯ ೭೬

ನಡೆದು ಬಂದ ಹಾದಿಯನ್ನು ವರ್ತಮಾನದ (೨೦೦೬) ಅನುಕೂಲ ಮಂಚಿಕೆಯಿಂದ ಸಿಂಹಾವಲೋಕಿಸುವಾಗ ವ್ಯಕ್ತಿಯ ಬಾಳಿನ ತಳದಲ್ಲಿ ಹೇಗೆ ಕಾಲ ಮತ್ತು ಪರಿಸರ ನಿರಂತರ ಭಾಗಿಗಳಾಗಿರುವುವೆಂಬುದನ್ನು ಕಂಡು ಅಚ್ಚರಿಪಡುತ್ತೇನೆ. ಆತನ ತಂದೆ ತಾಯಿ, ಜನನಸ್ಥಳ ಅಥವಾ ಕಾಲಗಳ ಆಯ್ಕೆ ಕುರಿತಂತೆ ಆತನಿಗೇನೂ ಸ್ವಾತಂತ್ರ್ಯವಿಲ್ಲ. ಅದು ನಿಸರ್ಗದ ಅಭೇದ್ಯ ರಹಸ್ಯಗಳ ಪೈಕಿ ಒಂದು. ಹುಟ್ಟಿದ ಬಳಿಕ ಅವನ ವಿಕಾಸದಲ್ಲಿ ಪ್ರಮುಖ ಪಾತ್ರ ವಹಿಸುವ ಪ್ರಭಾವಗಳು ಐದು: ಗೃಹಪರಿಸರ, ಶಿಕ್ಷಣ, ಸ್ಥಳೀಯ ಸಂಸ್ಕೃತಿ, ಅಲ್ಲಿಯ ಪ್ರಾಕೃತಿಕ ಸನ್ನಿವೇಶಗಳು ಮತ್ತು ಸಮಕಾಲೀನತೆ. ನನ್ನ ಬಾಳಪಯಣದಲ್ಲಿ ಇವುಗಳ ಕೊಡುಗೆಗಳೇನೆಂಬುದು ಓದುಗರಿಗೆ ಈಗಾಗಲೇ ವೇದ್ಯವಾಗಿರಬಹುದು. ವ್ಯಕ್ತಿತ್ವರೂಪಣೆಯಲ್ಲಿ ಇವು ಎಂಥ ಸಂಕೀರ್ಣ ಪಾತ್ರ ವಹಿಸಿದೆ ಮತ್ತು ವಹಿಸುತ್ತಿವೆ ಎಂಬುದನ್ನು ವಿಶ್ಲೇಷಿಸುವಾಗ ಆಶ್ಚರ್ಯವಾಗುತ್ತದೆ. ಇದು ಪಲಾಯನವಾದವಲ್ಲ ಅಥವಾ ಉತ್ತರ ಕುಮಾರ ಮನೋಭಾವವೂ ಅಲ್ಲ. ಏಕೆಂದರೆ ಮೊದಲಿನದು ವರ್ತಮಾನವಿಮುಖಿ, ಎರಡನೆಯದಾದರೋ ಅದರ ನೆಲೆ ಗಾಳಿಗೋಪುರ. ನನ್ನದು ಇಂಥ ಬದುಕಲ್ಲ. ಭೂತದಿಂದ ಸತ್ತ್ವ ಹೀರಿ ವರ್ತಮಾನದಲ್ಲಿ ಪೂರ್ಣತನ್ಮಯನಾಗಿ ಬಾಳಿ ಭವಿಷ್ಯದತ್ತ ದೃಷ್ಟಿ ಹಾಯಿಸುವ ಸಂತೃಪ್ತ ಜೀವನ.

ವಾಸ್ತವವಾಗಿ ಮೇಲಿನ ಐದು ಪ್ರಭಾವಗಳು ನನ್ನ ಬಾಳಿಗೆ ಅನುಕ್ರಮವಾಗಿ ಊಡಿರುವ ಸತ್ತ್ವಗಳಿವು: ಉದಾರ ಜೀವನದೃಷ್ಟಿ, ಜ್ಞಾನದಾಹ, ವಸುಧೈವ ಕುಟುಂಬಕಂ ಮನೋಧರ್ಮ, ಸವಾಲನ್ನು ಎದುರಿಸುವ ಛಲ ಮತ್ತು ವರ್ತಮಾನದಲ್ಲಿ ಪರಿಪೂರ್ಣ ಮಗ್ನತೆಯ ಜೊತೆಗೆ ಭವಿಷ್ಯರೂಪಣೆಯ ಚಿಂತನೆ ಮತ್ತು ಅನುಷ್ಠಾನ. ಹಾಗಾದರೆ ಆಯಾ ಗಳಿಗೆ ನನ್ನ ಪಾತ್ರವೇನು? ದೃಢ ನಿರ್ಧಾರ ತಳೆದು ಅದನ್ನು ಅನುಷ್ಠಾನಗೊಳಿಸುವುದರಲ್ಲಿ ಈ ನನ್ನತನವನ್ನು ಗುರುತಿಸಬಹುದು. "ಜೀವವಿಂತಜ್ಞಾತ ಸೂತ್ರದಾಟದ ಬೊಂಬೆ, ಭಾವಿಸಾ ಸೂತ್ರಗಳ" (ಡಿವಿಜಿ) ಮತ್ತು "ನೆಯ್ದಾಳುತಿದೆ ಜಗವನೊಂದತಿ ವಿರಾಣ್ಮನಂ ಸೂಕ್ಷ್ಮಾತಿಸೂಕ್ಷ್ಮ ತಂತ್ರದಿ ಬಿಗಿದು ಕಟ್ಟಿಯುಂ ಜೀವಿಗಳ್ಗಿಚ್ಛೆಯಾ ಸ್ವಾತಂತ್ರ್ಯ ಭಾವಮಂ ನೀಡಿ" (ಕುವೆಂಪು) ಎಂಬ ಚಿಂತನೆಗಳನ್ನು ಗಮನಿಸಬೇಕು. ಭಗವದ್ಗೀತೆಯ "ನಿಮಿತ್ತ ಮಾತ್ರಂ ಭವ ಸವ್ಯಸಾಚಿನ್" ಉಕ್ತಿಯ ಧ್ವನ್ಯರ್ಥವಾದರೂ ಇದೇ. "ಇರಬೇಕು, ಇರಬೇಕು, ಇರದೆ ಇರಬೇಕು" ಎಂದು ಹಾಡಿದ್ದಾರೆ ಪುರಂದರದಾಸರು.

ಪ್ರಚಲಿತ ಸನ್ನಿವೇಶಗಳ ಕಾರಣವಾಗಿ ವಿಶ್ವಕೋಶದಲ್ಲಿಯ ನನ್ನ ಕೆಲಸ ಏಕಕಾಲದದಲ್ಲಿ ನಾಲ್ಕು ಕವಲುಗಳಲ್ಲಿ ಸಾಗುತ್ತಿತ್ತು (೧೯೮೬ರ ತನಕ): ಆಹ್ವಾನಿತ ಲೇಖನಗಳ ಸಂಪಾದನೆ ಮತ್ತು ಶಿಷ್ಟೀಕರಣ, ನೂತನ ವಿಷಯಗಳ ಮತ್ತು ನವ ಲೇಖಕರ ಪತ್ತೆ, ಮುದ್ರಣದ ಉಸ್ತುವಾರಿ ಮತ್ತು ಸ್ವಂತ ಜ್ಞಾನಕ್ಷಿತಿಜದ ವಿಸ್ತರಣೆ. ಇಂಥ ಉಲ್ಲಾಸದಾಯಕ ಜ್ಞಾನಪರಿವ್ರಜನ ಕಾರ್ಯದಲ್ಲಿ ಗಾಢ ಮಗ್ನನಾಗಿದ್ದಾಗ ಕನ್ನಡದ ಅನೇಕ ಹೊಸ ಕೆಲಸಗಳು ನನ್ನನ್ನು ಅರಸಿ

ಬರುತ್ತಿದ್ದುವು. ಇವು ನೇರ ವಿಶ್ವಕೋಶಕ್ಕೆ ಸಂಬಂಧಿಸಿದವಲ್ಲ. ಆ ಪೈಕಿ ಕೆಲವು ಮುಖ್ಯವಾದವನ್ನು ಇಲ್ಲಿ ನಿರೂಪಿಸುತ್ತೇನೆ.

ಒಂದನೆಯದು, ಬೆಂಗಳೂರಿನ ಐಬಿಎಚ್ ಪ್ರಕಾಶನ ೧೯೭೩ರ ಸುಮಾರಿಗೆ ಅನಿರೀಕ್ಷಿತವಾಗಿ ನನಗೊಪ್ಪಿಸಿದ ಒಂದು ಅನುವಾದ ಕಾರ್ಯ. ಮೆಗ್ರಾಹಿಲ್ ಸಂಸ್ಥೆ ಅದೇ ಹಿಂದೆ ಇಂಗ್ಲಿಷಿನಲ್ಲಿ ಮಕ್ಕಳಿಗಾಗಿ ಪ್ರಕಟಿಸಿದ್ದ ಃಭು ಖಭಿಜಟಿಭಿಜ ಜಡಿಝ ಮಾಲೆಯ ೧೬ ಕ್ರಿರು ಹೊತ್ತಗೆಗಳ ಪೈಕಿ ಒಂದರ ಅನುವಾದ. ವರ್ಣಮಯ ಚಿತ್ರಗಳು, ಆಕರ್ಷಕ ನಿರೂಪಣೆ ಮತ್ತು ಸಿಂಗಪುರದಲ್ಲಿ ಮಾಡಿದ ಸುಂದರ ಮುದ್ರಣ – ಇವೆಲ್ಲ ಬೆಸುಗೆಗೊಂಡಿದ್ದ ಈ ಮಾಲೆ ಒಂದು ಅಪೂರ್ವ ಶಿಲ್ಪದಂತಿತ್ತು. ನನಗೆ ವಹಿಸಿದ್ದ ಕಾರ್ಯವನ್ನು ಶೀಘ್ರವಾಗಿ ಪೂರೈಸಿ ಹಸ್ತಪ್ರತಿಯನ್ನು ಅವರಿಗೆ ರವಾನಿಸುತ್ತ ಒಂದು ಸೂಚನೆ ಸೇರಿಸಿದೆ, "ಈ ಹದಿನಾರೂ ಅನುವಾದಗಳಲ್ಲಿ ಬಳಸಿರುವ ಪಾರಿಭಾಷಿಕ ಪದಗಳಲ್ಲು ಏಕರೂಪತೆ ತರುವುದು ಅಗತ್ಯ. ಇದಕ್ಕೆ ನೀವು ಬೆಂಗಳೂರಿನಲ್ಲಿರುವ ಯಾರಾದರೂ ತಜ್ಞರ ನೆರವು ಪಡೆಯುವುದು ಅಪೇಕ್ಷಣೀಯ. ಉದಾಹರಣೆಗೆ heat, temperature, force, energy ಮುಂತಾದ ಪಾರಿಭಾಷಿಕ ಪದಗಳು ಕನ್ನಡದಲ್ಲಿ ಉಷ್ಣ, ಉಷ್ಣತೆ, ಬಲ, ಶಕ್ತಿ ಎಂದೇ ಇರತಕ್ಕದ್ದು, ಇದು ವಿಶ್ವಕೋಶದಲ್ಲಿ ನಾವು ಕಡ್ಡಾಯವಾಗಿ ಅನುಸರಿಸುವ ನೀತಿ."

ಮರುವಾರ ಐಬಿಎಚ್‌ನ ಪಿ.ಎನ್. ಕಾಮತ್ ಮತ್ತು ಜಿ.ಕೆ. ಅನಂತರಾಮ್ ಮೈಸೂರಿಗೆ ಬಂದು ಆ ತನಕ ಅವರು ಮಾಡಿಸಿದ್ದ ೧೦ ಅನುವಾದಗಳನ್ನೂ ನನಗೆ ಪರಿಷ್ಕರಣೆಯ ಸಲುವಾಗಿ ಕೊಟ್ಟರು. ಉಳಿದಿದ್ದ ಆರು ಹೊತ್ತಗೆಗಳ ವಿಲೇವಾರಿಯನ್ನು ಪೂರ್ಣವಾಗಿ ನನಗೆ ಒಪ್ಪಿಸಿದರು ಕೂಡ. ಆ ಪೈಕಿ ಎರಡು ಅನುವಾದಗಳನ್ನು ಸ್ವತಃ ಶಿವರಾಮ ಕಾರಂತರೇ ಸ್ವಹಸ್ತ ಮಾಡಿದ್ದರು. ಉಳಿದೆಲ್ಲ ಶಿಕ್ಷಣ ಇಲಾಖೆಯ ಅನಾಮಧೇಯರು ಮಾಡಿದ್ದ ಭಾಷಾಂತರಗಳು. ಅನುವಾದ ಕ್ರಿಯೆಗೂ ಪರಿಷ್ಕರಣ ಕಾರ್ಯಕ್ಕೂ ಪ್ರಕಾಶಕರು ಧಾರಾಳವಾಗಿ ಸಂಭಾವನೆ ಪಾವತಿಸುತ್ತಿದ್ದರು.

ಪರಿಷ್ಕರಣಾ ಕಾರ್ಯದ ವೇಳೆ ನಾನು ಕಂಡದ್ದೇನು? ಬೇಕಾಬಿಟ್ಟಿ ಗೀಚಿದ ಕನ್ನಡ ಲಿಪಿಯಲ್ಲಿದ್ದ ಕಡತಗಳು! ಕಾರಂತರೂ ಇದಕ್ಕೆ ಅಪವಾದವಾಗಿರಲಿಲ್ಲ. ಯಾರಿಗೂ ಮೂಲ ಪರಿಕಲ್ಪನೆಯೇ ಅರ್ಥವಾಗಿರಲಿಲ್ಲ ಎಂಬುದು ಸ್ಪಷ್ಟವಾಗಿತ್ತು. ಅಂದಮೇಲೆ ನನ್ನ ಹೊಣೆ ಏನು? ಕನ್ನಡದಲ್ಲಿ ಇಂಥ ಸುಂದರ ಮಾಲೆ ಬರಲೇಬೇಕೆಂದು ನಿರ್ಧರಿಸಿ ಇಡೀ ಕೆಲಸವನ್ನು ನಾನೆ ಮುಗಿಸಿದೆ ಮತ್ತು ಆಯಾ ಅನುವಾದಕರ ಹೆಸರುಗಳಲ್ಲಿ ಅವನ್ನು ಪ್ರಕಟಿಸಲು ಶಿಫಾರಸು ಮಾಡಿದೆ. ಮುಂದೆ ಯಥಾ ಕಾಲದಲ್ಲಿ ಇಡೀ ಮಾಲೆ ಬೆಳಕು ಕಂಡಿತು. ಪ್ರತಿಷ್ಠಿತ ಪತ್ರಿಕೆಗಳಲ್ಲಿ ಅದರ ವಿಮರ್ಶೆಯೂ ಪ್ರಕಟವಾಯಿತು. ಅದರಲ್ಲಿ ಎದ್ದು ಕಂಡ ಒಂದು ಅಂಶ: "ಕಾರಂತರ ಅನುವಾದ ಸರಳ ಸುಂದರವಾಗಿದೆ, ಹೀಗಲ್ಲದೇ ಜಿ.ಟಿ. ನಾರಾಯಣ ರಾಯರದು ವೃಥಾ ಕ್ಲಿಷ್ಟವಾಗಿದೆ." ವಿಮರ್ಶಕರು ಅನುವಾದಕರ ಹೆಸರಿಗೆ ಮಾರುಹೋಗಿದ್ದರೆಂಬುದು ಸ್ಪಷ್ಟ! ಏಕೆಂದರೆ ಉಭಯ ಕೃತಿಗಳೂ ತಳದಲ್ಲಿ ನನ್ನ ಅನುವಾದಗಳೇ!

ಎರಡನೆಯದು, ಅದೇ ಪ್ರಕಾಶನದ 'ವಿಜ್ಞಾನಪರಿಚಯ' ಮಾಲಿಕೆಯ ಪ್ರಧಾನ ಸಂಪಾದಕತ್ವ, ಇಂಗ್ಲಿಷಿನಲ್ಲಿ Understanding Science ಮಾಲಿಕೆ ಆಧುನಿಕ ವಿಜ್ಞಾನದ ಇತಿಹಾಸವನ್ನು ಮಕ್ಕಳಿಗೆ ಸರಳವಾಗಿ ಚಿತ್ರಸಹಿತ ವಿವರಿಸುವ ಒಂದು ಸಾರ್ಥಕ ಸಾಹಸ. ಇಂಗ್ಲೆಂಡಿನಲ್ಲಿಯ ವಿಖ್ಯಾತ ವಿಜ್ಞಾನಿಗಳ ಒಂದು ತಂಡ ಈ ೧೪೪ ಪುಟ್ಟ ಪುಟ್ಟ ಹೊತ್ತಗೆಗಳನ್ನು ಯೋಜಿಸಿ ಆಕರ್ಷಕವಾಗಿ ಪ್ರಕಟಿಸಿತ್ತು. ಈ ಮಾಲಿಕೆಯ ಕನ್ನಡ ಅವತರಣಿಕೆಯನ್ನು ಪ್ರಕಟಿಸುವುದು ಐಬಿಎಚ್‌ನವರ ಉದ್ದೇಶ. ನಿಜಕ್ಕೂ ಇದೊಂದು ಸವಾಲು. ಜೊತೆಗೆ ಈ ಕೆಲಸಕ್ಕೆ ಅವರು ಗೊತ್ತು ಮಾಡಿದ್ದ ಸಂಭಾವನೆ ತುಂಬ ಉದಾರವೂ ಆಗಿತ್ತು.

ಹೀಗೆ ಅಯಾಚಿತವಾಗಿಯೂ ಅನಿರೀಕ್ಷಿತವಾಗಿಯೂ ಈ ಸುವರ್ಣಾವಕಾಶ ನನಗೆ ಒದಗಿಬಂತು. ಇಂಥ ಎಲ್ಲ ಸಂದರ್ಭಗಳಲ್ಲಿಯೂ ನನ್ನ ಚಿಂತನೆ ಹರಿಯುವುದು ಸಮಾನ ಮನೋಧರ್ಮಿಗಳ ತಂಡ ಕಟ್ಟಿ ಕೆಲಸ ನಿರ್ವಹಿಸುವುದೇ ಹೊರತು ನಾನೊಬ್ಬನೇ ಮಾಡುವುದು ಅಲ್ಲ, ಎಂದೂ ಅಲ್ಲ, ನನ್ನ ಕಾರ್ಯನೀತಿ:

ಕಾರ್ಯಮಂಥನದಲ್ಲಿ ಗರಳಬರೆ ಕೊರಳಿನಲಿ
ಧೈರ್ಯದಿಂ ಧರಿಸುವಾ ಶಿವನಾಗು, ಸುಧೆಯೊಸರೆ
ಸ್ಥೈರ್ಯದಿಂ ಹಂಚು ಮೋಹಿನಿಯಂತೆ ಮನುಕುಲಕೆ
ಆರ್ಯತ್ವಮಿದು ಕಣಾ ಬದುಕಿನಲಿ ಅತ್ರಿಸೂನು

ಈ ಕೆಲಸವನ್ನು ಸಮರ್ಥವಾಗಿಯೂ ನಿಶ್ಚಿತ ವೇಳಾಪಟ್ಟಿಗೆ ಅನುಗುಣವಾಗಿಯೂ ಪೂರೈಸಲು ನಾಲ್ವರು ಹಿರಿಯ ಸಮಕಾಲೀನ ಕನ್ನಡ ವಿಜ್ಞಾನ ಲೇಖಕರ ಸಮಿತಿಯನ್ನು ರಚಿಸಿಕೊಂಡೆ. ಪ್ರತಿಯೊಬ್ಬರೂ ಅವರವರಿಗೆ ನಿಗದಿ ಮಾಡಿದ ಭಾಗವನ್ನು ಅನುವಾದಿಸಿ ನನಗೆ ಕೊಡಬೇಕು. ನಾನು ಎಲ್ಲವನ್ನೂ ಕ್ರೋಢೀಕರಿಸಿ, ಪರಿಷ್ಕರಿಸಿ ಮುದ್ರಣಕ್ಕೆ ಅಣಿಮಾಡಿ ವಾಸ್ತವ ಮುದ್ರಣ ಕಾರ್ಯದ ಉಸ್ತುವಾರಿಯನ್ನೂ ನೋಡಿಕೊಳ್ಳಬೇಕು. ಪ್ರಕಾಶಕರಿಂದ ನಾವು ಐವರಿಗೂ ಸಮವಾಗಿ ಸಂಭಾವನೆ ದೊರೆಯಬೇಕು – ಇಷ್ಟು ಏರ್ಪಾಡು ಮಾಡಿ ಮುಂದುವರಿದೆ.

ಅನುವಾದಿತ ಹಸ್ತಪ್ರತಿಗಳು ಕೈ ಸೇರಿದಾಗ ಈ ಹೊಣೆಯ ಒಂದು ಹೊಸ ಆಯಾಮ ಗೋಚರಿಸಿತು: ಇಬ್ಬರು 'ತಜ್ಞ' ಹಿರಿಯ ಲೇಖಕರ ಅನುವಾದಗಳು ಅಬದ್ಧವಾಗಿದ್ದುವು! ಒಂದೋ ಮೂಲ ಸರಳ ಇಂಗ್ಲಿಷ್ ಇವರಿಗೆ ಅರ್ಥವಾಗಿರಲಿಲ್ಲ, ಇಲ್ಲವೇ, ಕನ್ನಡ ವಾಕ್ಯಗಳ ರಚನೆ ಪೂರ್ತಿ ಪರಕೀಯವಾಗಿದ್ದುವು ಅಥವಾ ಉಡಾಫೆಯಿಂದ ಬೇಕಾಬಿಟ್ಟಿ ಗೀಚಿದ್ದರು. ಸಮಸ್ತ ವಂಚನೆಗಳ ಪೈಕಿ ಬೌದ್ಧಿಕ ವಂಚನೆ ಅತಿ ಹೇಯವಾದದ್ದು ಮತ್ತು ನಿಕೃಷ್ಟವಾದದ್ದು. "ತೋರಮಾಣಿಕವೆಂದು ಪಿಡಿದೊಡೆ ಭೂರಿ ಕೆಂಡವಿದಾಯಿತೆಂದು" ಪರಿತಪಿಸುತ್ತ ನಾನೇ ಅವನ್ನು ಪುನಾರಚಿಸಿ ಆಯಾ ಅನುವಾದಕರಿಗೆ ಒಪ್ಪಿಸಿದೆ. ಒಬ್ಬರು "ಈ ಕೆಲಸ ನನ್ನಿಂದ ಅಸಾಧ್ಯ" ಎಂದು ಪ್ರಾಮಾಣಿಕವಾಗಿ ನುಡಿದು ನಮ್ಮ ತಂಡ ಬಿಟ್ಟರು.

ಇನ್ನೊಬ್ಬರು "ನೋಡಿ, ನನಗೆ ಪುರಸೊತ್ತೇ ಇರಲಿಲ್ಲ, ನನ್ನ ಮಗಳ ಹತ್ತಿರ ಅನುವಾದ ಮಾಡಿಸಿ ನಾನದನ್ನು ಸೂಕ್ಷ್ಮವಾಗಿ ತಪಾಸಿಸಿ ನೇರ್ಪುಗೊಳಿಸಿದ್ದೇನೆ. ಕನ್ನಡಕ್ಕೆ ಇಷ್ಟು ಸಾಕು" ಎಂದು ದಾರ್ಷ್ಟ್ಯದ ನುಡಿ ಆಡಿದರು. "ಸ್ವಾಮೀ! ಪ್ರಕಾಶಕರು ಸಂಭಾವನೆ ಕೊಡುವುದು ನಿಮ್ಮ ಅನುಭವಕ್ಕೆ ಮತ್ತು ಅರಿವಿಗೆ ಹೊರತು ನಿಮ್ಮ ಮಗಳದಕ್ಕಲ್ಲ" ಎಂದು ಖಾರವಾಗಿ ಉತ್ತರಿಸಿದೆ. ನಿಗದಿಯಾದ ಸಂಭಾವನೆಯನ್ನು ಇಬ್ಬರಿಗೂ ಪಾವತಿಸಿ ಅವರ ಸಾಹಚರ್ಯದಿಂದ ಮುಕ್ತನಾದೆ.

ಯಥಾ ಕಾಲದಲ್ಲಿ 'ವಿಜ್ಞಾನಪರಿಚಯ' ಮಾಲಿಕೆಯ ಮೊದಲ ೫ ಸಂಚಿಕೆಗಳು ಪ್ರಕಟವಾದುವು, ಇನ್ನೂ ೭ ಮುದ್ರಣದ ವಿವಿಧ ಹಂತಗಳಲ್ಲಿದ್ದುವು. ಐಬಿಎಚ್ ಪ್ರಕಾಶನ ಈ ಐದನ್ನು ಸರ್ಕಾರಕ್ಕೆ ಮಾದರಿ ಸಂಚಿಕೆಗಳಾಗಿ ಒಪ್ಪಿಸಿತು. ಮತ್ತು ಎಲ್ಲ ೧೪೪ ಸಂಚಿಕೆಗಳನ್ನೂ ಅವು ಪ್ರಕಟವಾದಂತೆ ಸರಕಾರ ಸಗಟು ಖರೀದಿಸಬೇಕೆಂದು ಪ್ರಾರ್ಥಿಸಿತು ಕೂಡ. ಸರಿ, ಇದನ್ನು ಪರಿಶೀಲಿಸಲು ಮಾಮೂಲಿನಂತೆ ಸರ್ಕಾರ ಒಂದು ಸಮಿತಿಯನ್ನು ರಚಿಸಿತು. ಇದರ ತೀರ್ಮಾನ ಆಘಾತಕಾರಿಯಾಗಿತ್ತು; ಇಂಥ ಅನುವಾದಿತ ಕೃತಿಗಳ ಬದಲು ಕನ್ನಡದಲ್ಲೇ ಸ್ವತಂತ್ರವಾಗಿ ವಿಜ್ಞಾನ ಪುಸ್ತಕಗಳನ್ನು ತಜ್ಞರಿಂದ ಬರೆಸಿ ಪ್ರಕಟಿಸುವುದು ಉತ್ತಮವೆಂದು ಸಮಿತಿ ಅಭಿಪ್ರಾಯಪಟ್ಟದ್ದರಿಂದ 'ವಿಜ್ಞಾನಪರಿಚಯ' ಯೋಜನೆ ಅಲ್ಲಿಗೇ ತಣ್ಣಗಾಯಿತು. ಇದರ ಹಿನ್ನೆಲೆಯಲ್ಲಿ ವೈಯಕ್ತಿಕವಾಗಿ ನನ್ನ ವಿರುದ್ಧ ಹಲವು ಪಟ್ಟಭದ್ರರ ಮಾತ್ಸರ್ಯ ಪ್ರಧಾನ ಪಾತ್ರ ವಹಿಸಿತ್ತೆಂದು ಮುಂದೊಂದು ದಿನ ನನ್ನ ಅರಿವಿಗೆ ಬಂದಾಗ ನನ್ನ ಆಸರೆ ಪುರಂದರದಾಸರು:

ನಿಂದಕರಿರಬೇಕಿರಬೇಕು ।
ಹಂದಿಯಿದ್ದರೆ ಕೇರಿ ಹ್ಯಾಂಗೆ ಶುದ್ಧಿಯೋ ಹಾಂಗೆ ॥
ಅಂದಂದು ಮಾಡಿದ ಪಾಪವೆಂಬ ಮಲ
ತಿಂದುಹೋಗುವರಯ್ಯ ನಿಂದಕರು
ವಂದಿಸಿ ಸ್ತುತಿಸುವ ಜನರೆಲ್ಲರು ನಮ್ಮ
ಪೊಂದಿದ ಪುಣ್ಯವನೊಯ್ಯುವರಯ್ಯ ॥
ದುಷ್ಟ ಜನರು ಈ ಸೃಷ್ಟಿಯೊಳಿದ್ದರೆ
ಶಿಷ್ಟ ಜನರಿಗೆಲ್ಲ ಕೀರ್ತಿಗಳು
ಇಷ್ಟಪ್ರದ ಶ್ರೀಕೃಷ್ಣ ನಿನ್ನೊಳು
ಇಷ್ಟೇ ವರವನು ಬೇಡುವೆನಯ್ಯ ॥
ದುರುಳ ಜನಂಗಳು ಚಿರಕಾಲವಿರುವಂತೆ
ಕರವ ಮುಗಿದು ವರವ ಬೇಡುವೆನು
ಪರಿಪರಿ ತಮಸಿಗೆ ಗುರಿಯಹರಲ್ಲದೆ
ಪರಮದಯಾನಿಧೆ ಪುರಂದರವಿಠಲ ॥

ಮೂರನೆಯದು, ಮತ್ತೆ ಐಬಿಎಚ್ ಪ್ರಕಾಶನದ ಕಾಮತ್ ಮತ್ತು ಅನಂತರಾಮ್ ಛಲಬಿಡದ ವಿಕ್ರಮನಂತೆ ನನ್ನ ಬಳಿಗೇ ಬಂದು, "ನಾವೇ ಸ್ವತಂತ್ರವಾಗಿ ಕನ್ನಡದಲ್ಲಿ ಒಂದು ವಿಜ್ಞಾನಮಾಲಿಕೆಯನ್ನು ಪ್ರಕಟಿಸೋಣ. ಆಗಾದರೂ ಸರ್ಕಾರ ನಮ್ಮ ಪ್ರಯತ್ನಕ್ಕೆ ಮನ್ನಣೆ ಕೊಟ್ಟು ಸಾಕಷ್ಟು ಹಿರಿ ಸಂಖ್ಯೆಯಲ್ಲಿ ಪ್ರತಿಗಳನ್ನು ಖರೀದಿಸಬಹುದು. ನೀವೇ ಈ ಯೋಜನೆಯ ರೂವಾರಿ ಮತ್ತು ನಿರ್ವಾಹಕರಾಗಬೇಕು."

ಕನ್ನಡದಲ್ಲಿ ವಿಜ್ಞಾನ ವಾಙ್ಮಯ ನಿರ್ಮಾಣ! ಪ್ರಕಾಶನದ ಹೊಣೆ ನನಗಿಲ್ಲ, ಬದಲು, ಬೌದ್ಧಿಕ ಧುರೀಣತ್ವ ನನ್ನದು. ಬೇರೇನು ಬೇಕು ನನಗೆ? ಸರಿ, ನನ್ನ ಪ್ರಧಾನ ಸಂಪಾದಕತ್ವದಲ್ಲಿ ಜೆ. ಆರ್. ಲಕ್ಷ್ಮಣರಾವ್ (ರಸಾಯನ ವಿಜ್ಞಾನ), ಕೆ.ಬಿ. ಸದಾನಂದ (ಸಸ್ಯ ವಿಜ್ಞಾನ), ಅಡ್ಯನಡ್ಕ ಕೃಷ್ಣ ಭಟ್ಟ (ಭೌತವಿಜ್ಞಾನ) ಮತ್ತು ಕೆ.ಎಸ್. ನಿಸಾರ್ ಅಹಮದ್ (ಭೂವಿಜ್ಞಾನ) ಇಷ್ಟು ಮಂದಿ ವಿಷಯತಜ್ಞ–ಕನ್ನಡ–ವಿಜ್ಞಾನ ಲೇಖಕರ ಮೂಲ ಸಮಿತಿ ರಚಿಸಿ ಇವರೊಡನೆ ಸಮಾಲೋಚಿಸಿ ಈ ಕೆಲಸ ತೊಡಗಿದೆ. ಒಬ್ಬೊಬ್ಬರಿಗೆ ಅವರವರು ಇಷ್ಟಪಟ್ಟು ಆಯ್ದ ವಿಷಯ ಕುರಿತು ಹಸ್ತಪ್ರತಿ ರಚಿಸಲು ಹೇಳಿದ್ದಾಯಿತು. ಇತರ ಲೇಖಕರ ಯಾದಿಯನ್ನೂ ತಯಾರಿಸಿ ಕೆಲವರಿಗೆ ಕೋರಿಕೆ ಕಾಗದ ಕಳಿಸಿದ್ದೂ ಆಯಿತು.

ಮೊದಲು ಬಂದ ಹಸ್ತ ಪ್ರತಿಗಳು ನಿಸಾರರ 'ಹಕ್ಕಿಗಳು', ಅಡ್ಯನಡ್ಕರ 'ಮನುಷ್ಯನ ಕತೆ' ಮತ್ತು ನನ್ನ 'ಆಕಾಶದ ಅದ್ಭುತಗಳು.' ಇವನ್ನು ನೇರ್ಪುಗೊಳಿಸಿ ಯುಕ್ತ ಚಿತ್ರಗಳನ್ನು ಅಳವಡಿಸಿ ಕಲಾವಿದರಿಂದ ಕುಂಚಿಸಿ ಮುದ್ರಣಕ್ಕೆ ಅಣಿಗೊಳಿಸುವ ವೇಳೆಗೆ ಹಲವು ತಿಂಗಳುಗಳೇ ಉರುಳಿದ್ದುವು. ಈ ಮಾಲಿಕೆಗೆ 'ವಿಜ್ಞಾನ ನೋಡು ಕಲಿ' ಎಂಬ ಶೀರ್ಷಿಕೆ ಕೊಟ್ಟೆವು. ನಿಸಾರರ ಹಾಗೂ ಅಡ್ಯನಡ್ಕರ ಹಸ್ತಪ್ರತಿಗಳನ್ನು ಪರಿಷ್ಕರಿಸಿ ಅವರ ಒಪ್ಪಿಗೆಗಾಗಿ ಕಳಿಸಿದೆ. ಅಡ್ಯನಡ್ಕರು ನನ್ನ ವಿಧಾನವನ್ನು ಮೆಚ್ಚಿ ಒಂದೆರಡು ಉಪಯುಕ್ತ ಸಲಹೆಗಳನ್ನೂ ನೀಡಿದರು. ಆದರೆ ನಮ್ಮ ಕವಿಮಿತ್ರ ನಿಸಾರರು ರೇಗಿದರು, "ನನ್ನ ಶೈಲಿಯನ್ನೇ ನೀವು ಕೆಡಿಸಿಬಿಟ್ಟಿದ್ದೀರಿ" ಎಂದು ಖಾರವಾಗಿ ಬರೆದರು.

ನಾನು ವಿವರಿಸಿದೆ, "ಈ ಮಾಲಿಕೆಯಲ್ಲಿ ವೈಯಕ್ತಿಕ ಲೇಖಕತ್ವ ಮಾತ್ರ ಸಿಂಧು, ವಿಷಯ ಸ್ಪಷ್ಟತೆಗೆ ಆಯಾ ಲೇಖಕರೇ ಹೊಣೆ. ಆದರೆ ಶೈಲಿ ಕುರಿತಂತೆ ಪ್ರಧಾನ ಸಂಪಾದಕನಾದ ನನ್ನ ನಿರ್ಧಾರವೇ ಅಂತಿಮ. ಸದ್ಯ ನಾನು ಸಂಪಾದಿಸಿ ಸಿದ್ಧಪಡಿಸಿರುವ ನಿಮ್ಮ ಹಸ್ತಪ್ರತಿಯ ಹೂರಣದಲ್ಲೇನಾದರೂ ದೋಷ ಹಣುಕಿದ್ದರೆ ಅಥವಾ ಅದಕ್ಕೆ ಹೆಚ್ಚಿನ ಮಾಹಿತಿ ಏನನ್ನಾದರೂ ಸೇರಿಸಬೇಕಾಗಿದ್ದರೆ ಅವಶ್ಯ ತಿಳಿಸಿ, ಉಳಿದುದನ್ನು ನನಗೆ ಬಿಡಿ." ಅರ್ಧ ಮನಸ್ಸಿನಿಂದ ಒಪ್ಪಿದರು.

ಮೊದಲ ಕಂತಿನಲ್ಲಿ ನಾಲ್ಕು ಪುಸ್ತಕಗಳನ್ನು ಹೊರತರಲು ಮುಂದಾದೆವು: 'ಆಕಾಶದ ಅದ್ಭುತಗಳು,' 'ಮನುಷ್ಯನ ಕತೆ', 'ಹಕ್ಕಿಗಳು' ಮತ್ತು 'ಕೀಟಗಳು' (ಹಾ.ಬ. ದೇವರಾಜ ಸರ್ಕಾರ್). [**ಮೊದಲ ಎರಡು ಪುಸ್ತಕಗಳ ಪೂರ್ಣ ಉಚಿತ ವಿ–ಆವೃತ್ತಿ ಇದೇ ಜಾಲತಾಣದಲ್ಲಿ ಮೇಲಂಚಿನಲ್ಲಿ ಕಾಣಿಸಿರುವ ಪುಸ್ತಕ ವಿಭಾಗದಲ್ಲಿ ಲಭ್ಯ. ನಿಸಾರ್ ಅಹಮದರನ್ನು 'ಹಕ್ಕಿಗಳು' ಪುಸ್ತಕದ ಕುರಿತು ಸಂಪರ್ಕಿಸಿದ್ದೆ; ಅವರು ಉತ್ತರಿಸಲೇ ಇಲ್ಲ – ಅವ**] ಈ ಕೆಲಸ ಭರದಿಂದ ಮುಂದುವರಿಯುತ್ತಿದ್ದಂತೆ ಇವೆಲ್ಲವುಗಳ ಇಂಗ್ಲಿಷ್ ಅವತರಣಿಕೆಗಳನ್ನೂ ಜೊತೆಯಲ್ಲೇ ಪ್ರಕಟಿಸಬೇಕೆಂದು ಪ್ರಕಾಶಕರು ನಿರ್ಧರಿಸಿ ಇದರ ಹೊಣೆಯನ್ನು ಕೂಡ ನನಗೆ ವಹಿಸಿದರು.

ಪರಕೀಯ ಭಾಷೆಯಲ್ಲಿ ಸೃಜನಶೀಲ ವಾಙ್ಮಯ ರಚನೆ ನಾವು ನಾಲ್ವರಿಗೂ ಅಸಾಧ್ಯ, ಆ ಭಾಷೆಗೆ ಅನುವಾದ ಕಾರ್ಯವೂ ಅಷ್ಟೆ. ಇದಕ್ಕೊಂದು ಉಪಾಯ ಹೂಡಿದೆ: ಆಯಾ ಲೇಖಕರಿಗೆ ಅವರವರ ಕನ್ನಡ ಹಸ್ತಪ್ರತಿಗಳ ಇಂಗ್ಲಿಷ್ ಅವತರಣಿಕೆಗಳನ್ನು ಸಿದ್ಧಪಡಿಸಿ ಕೊಡಲು ಸೂಚಿಸಿದೆ. ಹೀಗೆ ಬಂದವನ್ನು ಮೊದಲ ಹಂತದಲ್ಲಿ ನಾನೇ ಪರಿಷ್ಕರಿಸಿದೆ. ಆದರೆ ಈ ಇಂಗ್ಲಿಷ್ ರೂಪ ನಿರ್ಜೀವ ಪದಗಳ ಕೊರಡಾಗಿತ್ತು, ವಿಷಯ ನಿರೂಪಣೆ ಸ್ಫುಟವಾಗಿದ್ದರೂ

ಶೈಲಿ ವ್ಯಾಕರಣಬದ್ಧವಾಗಿದ್ದರೂ ಸೃಜನಶೀಲತೆಯ ಮಾಂತ್ರಿಕ ಅಥವಾ ಸಂಜೀವಿನೀ ಸ್ಪರ್ಶ ಇದಕ್ಕೆ ಲಭಿಸಿರಲಿಲ್ಲವೆಂಬ ಅಂಶ ಎದ್ದು ಕಾಣುತ್ತಿತ್ತು. ಅದು ನನ್ನ ಮಿತಿ ಕೂಡ.

ಬಸವಣ್ಣನವರು ನೀಡಿರುವ ಭರವಸೆ ನೆನಸಿಕೊಂಡೆ, "ನೀನೊಲಿದರೆ ಕೊರಡು ಕೊನರುವುದಯ್ಯಾ." ಆದರೆ ಆ 'ನೀನು' ಎಲ್ಲಿರುವನು, 'ಎಲ್ಲಿರುವನೋ ರಂಗ ಎಂಬ ಸಂಶಯ ಬೇಡ, ಎಲ್ಲಿ ಭಕ್ತರು ಕರೆದಲ್ಲೆ ಬಂದೊದಗುವನು' ಎಂದು ಪುರಂದರದಾಸರು ಆಶ್ವಾಸಿಸಿರುವರಲ್ಲವೇ?

ಎಚ್.ಜಿ. ಸೂರ್ಯನಾರಾಯಣರಾಯರು ಬೆಂಗಳೂರಿನ ಸರಕಾರೀ ಕಾಲೇಜಿನಲ್ಲಿ ನನ್ನ ಹಿರಿಯ ಸಹೋದ್ಯೋಗಿಯಾಗಿದ್ದ ಸಂಗತಿಯನ್ನು ಹಿಂದೆ ಹೇಳಿದ್ದೇನೆ. ಅವರೀಗ ಮೈಸೂರಿಗೆ ಬಂದು ವಿಶ್ವವಿದ್ಯಾನಿಲಯದ ಇಂಗ್ಲಿಷ್ – ಕನ್ನಡ ನಿಘಂಟು ವಿಭಾಗದಲ್ಲೊಬ್ಬ ಸಂಪಾದಕರಾಗಿದ್ದರು. ಉಭಯ ಭಾಷೆಗಳಲ್ಲಿಯೂ ಅವರಿಗಿದ್ದ ಸೃಜನಶೀಲ ಪ್ರಭುತ್ವ ಬಲು ಎತ್ತರದ ಮಟ್ಟದ್ದೆಂಬ ಅರಿವು ನನಗಿತ್ತು. ಅವರನ್ನು ಒಲಿಸಿ ನಾಲ್ಕೂ ಇಂಗ್ಲಿಷ್ ಹಸ್ತಪ್ರತಿಗಳಿಗೆ 'ಮಾಂತ್ರಿಕ ಸ್ಪರ್ಶ' ನೀಡಲೆಂದು ಅವರಿಗೊಪ್ಪಿಸಿದೆ (ಮುಂದೆ ಅಧ್ಯಾಯ ೮೩ನ್ನೂ ನೋಡಬಹುದು).

"ಒಂದೂ ತಪ್ಪಿಲ್ಲ, ಪರಿಪೂರ್ಣವಾಗಿದೆ" ಎಂಬ ಅಯಾಚಿತ ಮುಕ್ತ ಶಿಫಾರಸು ಸಹಿತ ಅವರು ಅವನ್ನು ಮರಳಿಸಿದರು. ಹೌದು ವ್ಯಾಕರಣ, ನುಡಿಕಟ್ಟುಗಳ ಪ್ರಯೋಗ, ಪದಗಳ ಅಳವಡಿಕೆ ಮುಂತಾದವೆಲ್ಲವೂ ಸರಿಯಾಗಿದ್ದರೂ ಜೀವಕಳೆ ಲಕಲಕಿಸುತ್ತಿಲ್ಲವೆಂಬ ಸಂಗತಿಯನ್ನು ಮುಖತಃ ವಿವರಿಸಿದೆ. ಶಸ್ತ್ರಕ್ರಿಯೆ ಯಶಸ್ವಿಯಾದರೂ ರೋಗಿ ಮೃತನಾದಂಥ ಪರಿಸ್ಥಿತಿ! ಗದ್ಯಲಯಕ್ಕೂ ಶ್ರವಣಸುಖಕ್ಕೂ ಸಂಬಂಧಿಸಿದ ಸೂಕ್ಷ್ಮವಿದು. "ನಾವಿಬ್ಬರೂ ಒಟ್ಟಿಗೆ ಕುಳಿತು ಮಾಡಬೇಕಾದ ಕೆಲಸವಿದು" ಎಂದು ತೀರ್ಮಾನಿಸಿದೆವು. ಸಂಗೀತಬೋಧನೆ ಮತ್ತು ಕಲಿಕೆಗಳಲ್ಲಿ ಕಿವಿಗಳ ಪಾತ್ರ ಎಷ್ಟು ಮಹತ್ತ್ವದ್ದು ಎಂಬುದು ನನಗೆ ಆ ಬೈಠಕ್ಕುಗಳಲ್ಲಿ ಚೆನ್ನಾಗಿ ಮನದಟ್ಟಾಯಿತು.

ಹೀಗೆ ಮುಂದೆ ಮುಂದೆ ಸಾಗಿ ೧೯೭೬ರ ವೇಳೆಗೆ ಕನ್ನಡ ಹಾಗೂ ಇಂಗ್ಲಿಷ್ ಹಸ್ತ ಪ್ರತಿಗಳೆರಡನ್ನೂ ಮುದ್ರಣಕ್ಕೆ ಸಿದ್ಧಪಡಿಸಿದೆವು. ಈ ಮಾಲಿಕೆಗೊಂದು ಹೆಸರಿಡಬೇಕು ಮತ್ತು ಎಲ್ಲ ಹೊತ್ತಗೆಗಳಿಗೂ ಸಾಮಾನ್ಯವಾಗಿರುವ ಒಂದು ಕಿರುಮುನ್ನುಡಿ ಇರಬೇಕೆಂದು ಪ್ರಕಾಶಕರು ಸೂಚಿಸಿದರು. ಮಾಲಿಕೆಗೆ 'ವಿಜ್ಞಾನ ನೋಡು ಕಲಿ' ಎಂಬ ಹೆಸರಿತ್ತೆವು. ಕಿರು ಮುನ್ನುಡಿಯ ಒಕ್ಕಣೆ: "ವಿಜ್ಞಾನ ನೋಡು ಕಲಿ ಪುಸ್ತಕ ಮಾಲೆಯಲ್ಲಿ ಹೆಸರೇ ಸೂಚಿಸುವಂತೆ ನೋಡುವುದು ಮೊದಲು, ಕಲಿಯುವುದು ಬಳಿಕ.

"ಪ್ರಪಂಚವೇ ಚೆಲುವಿನ ಬೀಡು. ಇನ್ನು ಮಗುವೋ ಮೈವೆತ್ತ ಚೆಲುವು. ಮಗುವಿನ ಒಳಗೂ ಹೊರಗೂ ಇರುವ ಚೆಲುವೇನು, ಅದರ ತಳದಲ್ಲಿರುವ ಕ್ರಮವೇನು, ಹಿನ್ನೆಲೆಯಲ್ಲಿ ಹುದುಗಿರುವ ಕಾರಣವೇನು – ಇವುಗಳತ್ತ ಮಗುವಿನ ಲಕ್ಷ್ಯ ಸೆಳೆಯುವುದು ಇಲ್ಲಿಯ ಉದ್ದೇಶ. ಎಂದೇ ಚಿತ್ರಗಳಿಗೆ ಇಲ್ಲಿ ಪ್ರಾಮುಖ್ಯ.

"ಇಲ್ಲಿಯ ಯಾವುದೇ ಚಿತ್ರವನ್ನು ಮಗು ಗಮನಿಸಿದಾಗ ಅದರ ಮನಸ್ಸಿನಲ್ಲಿ ಮಿಂಚುವ ಭಾವನೆಗಳೇನು? ಬದುಕಿನಲ್ಲಿ ಮಗು ಕಂಡು ಅಚ್ಚರಿಗೊಂಡ ನೋಟಗಳು ಹಲವಾರು. ಅವುಗಳ ಪೈಕಿ ಯಾವುದೋ ಒಂದನ್ನು ಅದು ಇಲ್ಲಿ ಗುರುತಿಸಬಹುದು. ಅಥವಾ ಹೇಳುವಂಥ ಕಾರಣವೇನೂ ಇಲ್ಲದೆ ಅಲ್ಲಿಯ ಯಾವುದೋ ಅನುಭವವನ್ನು ಇಲ್ಲಿಯ ಒಂದು ಚಿತ್ರ ಅದರ ನೆನಪಿಗೆ ತರಬಹುದು. ಈ ತೆರನಾಗಿ ಮಗುವಿನ ವಿಶೇಷ ಪ್ರಯತ್ನವಿಲ್ಲದೆ ಅದರ ಕುತೂಹಲವನ್ನು ಪ್ರೇರಿಸುವುದು ಮೊದಲ ಹಂತ. ಮತ್ತೆ ಅದಕ್ಕೆ ಪೋಷಕವಾಗಿ ಬರವಣಿಗೆಯಲ್ಲಿ ವಿಷಯವನ್ನು ನಿರೂಪಿಸುವುದು ಎರಡನೆಯ ಹಂತ.

"ಗೊತ್ತಿರುವ 'ಇಲ್ಲಿ'ಂದ ಗೊತ್ತಿಲ್ಲದ 'ಅಲ್ಲಿ'ಗೆ ಮಗುವನ್ನು ಅದರ ಅರಿವಿಗೆ ಬಾರದಂತೆ ಒಯ್ಯುವುದೇ ಮಾತಿನಲ್ಲಿ ಹುದುಗಿರುವ ಮೋಡಿ. ಇದಕ್ಕಾಗಿ ನಮ್ಮ ಸಂಸ್ಕೃತಿಯ ಕತೆ ಕಲ್ಪನೆ ಪ್ರತೀಕಗಳನ್ನು ಅರ್ಥವತ್ತಾಗಿ ಬಳಸಿಕೊಂಡಿದೆ. ಜ್ಞಾನ ಹೊಸ ಸೀಮೆಗಳಿಗೆ ನೆಗೆದಂತೆ ಭಾಷೆ ಅದರೊಂದಿಗೆ ಸಮಶ್ರುತಿ ಸಮಲಯದಲ್ಲಿ ಮಿಡಿಯಲೇಬೇಕು ಎಂಬುದನ್ನು ಗಮನಿಸಿ ಹದವರಿತು ಹೊಸ ಪದಗಳಿಗೆ ಇಲ್ಲಿ ವಿವರಣೆಯೊಂದಿಗೆ ಪ್ರವೇಶ ನೀಡಿದೆ.

"ಹೀಗೆ ಚಿತ್ರ – ಭಾಷೆ ಸಮನ್ವಯದಿಂದ ಈ ಮಾಲೆ ಮೈದಳೆದಿದೆ. ಸಾಂಪ್ರದಾಯಿಕ ಪಠ್ಯ ಮತ್ತು ಉಪಪಠ್ಯ ಪುಸ್ತಕಗಳಲ್ಲಿ ಮಗುವಿಗೆ ದೊರೆಯದ ಮಾಹಿತಿಗಳು ಅತ್ಯಂತ ಸುಲಭ ಹಾಗೂ ರೋಚಕ ರೂಪದಲ್ಲಿ ಇಲ್ಲಿ ದೊರೆಯುತ್ತವೆ.

"ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಕ್ಷೇತ್ರದಲ್ಲಿ ವಿದ್ಯಾರ್ಥಿಗಳಿಗೆ ವಿಜ್ಞಾನವನ್ನು ನೋಡಿ ಕಲಿಯಲು, ಓದಿ ತಿಳಿಯಲು ಮತ್ತು ಮಾಡಿ ನೋಡಲು ಸಾಕಷ್ಟು ಖಚಿತ ಮತ್ತು ಆಕರ್ಷಕ ಪುಸ್ತಕಗಳು ಕನ್ನಡದಲ್ಲಿ ಇಲ್ಲ. ಹೀಗಾಗಿ ಕನ್ನಡ ಮಕ್ಕಳ ವಿದ್ಯಾಭ್ಯಾಸ ಅಷ್ಟರ ಮಟ್ಟಿಗೆ ವೃಥಾ ಬರಡಾಗಿದೆ. ಈ ಕೊರತೆಯನ್ನು ತುಂಬಲು ಸ್ವಲ್ಪ ಮಟ್ಟಿಗಾದರೂ ವಿಜ್ಞಾನ ನೋಡು ಕಲಿ ಮಾಲೆಯ ಪುಸ್ತಕಗಳು ನೆರವಾಗಬಹುದೆಂದು ಆಶಿಸುತ್ತೇವೆ."

ಪ್ರಕಾಶಕರು ಈ ನಾಲ್ಕೂ ಶೀರ್ಷಿಕೆಯನ್ನು ಕೇಂದ್ರ ಸರಕಾರದ ಎನ್ಸಿಯೀಯಾರ್ಟಿಗೂ ಕರ್ನಾಟಕ ಸಾಹಿತ್ಯ ಅಕಾಡೆಮಿಗೂ ಕಳಿಸಿದರು. ಮೊದಲಿನದರ ಬಹುಮಾನ ನಿಸಾರರ 'ಹಕ್ಕಿಗಳು' ಪುಸ್ತಕಕ್ಕೂ ಎರಡನೆಯದರದು ಅಡ್ಯನಡ್ಕರ 'ಮನುಷ್ಯನ ಕತೆ' ಪುಸ್ತಕಕ್ಕೂ ಬಂದು 'ವಿಜ್ಞಾನ ನೋಡು ಕಲಿ' ಮಾಲಿಕೆಗೆ ಭಾರೀ ಹೆಸರು ಬಂದಿತು. ಇಂತಿದ್ದರೂ ರಾಜ್ಯ ಸರ್ಕಾರದ ಶಿಕ್ಷಣ ಇಲಾಖೆ ಕಣ್ತೆರೆಯಲಿಲ್ಲ. ಪ್ರಕಾಶಕರಿಗೆ ಸಗಟು ಖರೀದಿ ಆದೇಶ ಬರಲಿಲ್ಲ, ಸಹಾಯಧನವಂತೂ ದೊರೆಯಲೇ ಇಲ್ಲ.

ಏಕೆ? ಉನ್ನತ ಬೌದ್ಧಿಕ ವಲಯಗಳಲ್ಲಿ ನನ್ನ ಹೆಸರಿನ ಮತ್ತು ಶೈಲಿಯ ಸುತ್ತ ಮುಸುಕಿದ್ದ 'ತಿರಸ್ಕಾರ' ಭಾವನೆ ಎಂಬುದು ಕ್ರಮೇಣ ಪರೋಕ್ಷವಾಗಿ ನನ್ನ ಅರಿವಿಗೆ ಬಂದಾಗ ನಾನೆಂದೆ, "ಮನಸ್ಸಾಕ್ಷಿಯ ಲಕ್ಷ್ಮಣ ರೇಖೆಯನ್ನು ಉತ್ತ್ರಮಿಸಿ ಗಳಿಸುವ ರಾವಣವಿಜಯ ನನಗೆ ಬೇಡ. ಬದಲು ಮಾಯಾಮೃಗದ ಮೊಗವಾಡವನ್ನು ಭೇದಿಸಿದ ಶ್ರೀರಾಮ ಮಾರ್ಗ ನನಗೆ ಯಾವಾಗಲೂ ಪ್ರಿಯ."

ಕನ್ನಡದ ಅಭಿವರ್ಧನೆಯಲ್ಲಿ ವಿಶ್ವಕೋಶಗಳ ಪಾತ್ರ
ಅಧ್ಯಾಯ ೭೭

'ಕನ್ನಡ ಭಾಷಾ ಅಭಿವೃದ್ಧಿಯ ಸಮೀಕ್ಷಾ ಪ್ರಕಾಶನ, ಬೆಂಗಳೂರು' ಎಲ್.ಎಸ್ ಶೇಷಗಿರಿರಾಯರ ಪ್ರಧಾನ ಸಂಪಾದಕತ್ವದಲ್ಲಿ 'ಕನ್ನಡದ ಅಳಿವು-ಉಳಿವು' ಎಂಬ ಆಕರ ಗ್ರಂಥವನ್ನು ೧೯೮೫ರಲ್ಲಿ ಪ್ರಕಟಿಸಿತು. ಅದರಲ್ಲಿ 'ಕನ್ನಡದ ಅಭಿವರ್ಧನೆಯಲ್ಲಿ ವಿಶ್ವಕೋಶಗಳ ಕೊಡುಗೆ' ಎಂಬ ನನ್ನ ಲೇಖನ ಪ್ರಕಟವಾಗಿದೆ. ಅದರ ಉದ್ಧೃತ ಪಾಠವನ್ನಿಲ್ಲಿ ಪ್ರಕಟಿಸಿದೆ.

"ಜ್ಞಾನದ ವಿವಿಧ ಶಾಖೆಗಳನ್ನು ವ್ಯಾಪಕವಾಗಿ ವಿವೇಚಿಸುವ ಮತ್ತು ಸಾಮಾನ್ಯವಾಗಿ, ಬಿಡಿ ಲೇಖನಗಳನ್ನು ಅಕಾರಾದಿಯಾಗಿ ಒಳಗೊಂಡಿರುವ ಜ್ಞಾನಭಂಡಾರವೇ ವಿಶ್ವಕೋಶ." ಇದು ವೆಬ್ಸ್ಟರ್ ನಿಘಂಟು encyclopaedia ಪದಕ್ಕೆ ನೀಡಿರುವ ವ್ಯಾಖ್ಯೆ. ಇದಕ್ಕೆ ಸಮಾನಾರ್ಥಕವಾಗಿ ಕನ್ನಡದಲ್ಲಿ 'ವಿಶ್ವಕೋಶ' ಎಂಬ ಪದ ಬಳಸುತ್ತಿದ್ದೇವೆ.

ಪದಗಳಿಂದ ನಿಘಂಟು ಹೇಗೋ ಲೇಖನಗಳಿಂದ ವಿಶ್ವಕೋಶ ಹಾಗೆ, ಪದ ಮತ್ತು ಲೇಖನ ಎರಡೂ ಜೀವನಾನುಭವವೆಂಬ ಕುಲುಮೆಯಲ್ಲಿ ಪಾಕಗೊಂಡು ಪರಿಸರ ಮತ್ತು ಆವಶ್ಯಕತೆಗಳಿಗೆ ಅನುಗುಣವಾಗಿ ಸಿದ್ಧವಾಗುವ ವಸ್ತುಗಳು. ಎಲ್ಲಿ ಜನಜೀವನ ಸಮೃದ್ಧವಾಗಿರುವುದೋ ಎಲ್ಲಿ ಅದರ ಅನುಭವದ ಅಭಿವ್ಯಕ್ತಿಗೆ ಯೋಗ್ಯ ಪರಿಸರ ಒದಗಿರುವುದೋ ಮತ್ತು ಎಲ್ಲಿ ಇಂಥ ಅಭಿವ್ಯಕ್ತಿ ಪ್ರಚಲಿತ ಆವಶ್ಯಕತೆಗಳನ್ನು ಪೂರೈಸುವುದೋ ಅಲ್ಲಿ ಭಾಷೆ ಸರ್ವಾಂಗ ಸುಂದರವಾಗಿ ಅರಳುತ್ತದೆ. ಹೀಗೆ ಸಂಚಯನವಾಗುವ ಭಾಷಾಶಯದಿಂದ (reservoir) ನಿಘಂಟು ಹಾಗೂ ವಿಶ್ವಕೋಶ ರಚನೆಗೆ ವಿಪುಳ ಮೂಲ ಸಾಮಗ್ರಿ ಒದಗುತ್ತದೆ.

ನಿಘಂಟುಕಾರ ಪರಬ್ರಹ್ಮ ಅಲ್ಲ, ಪದದ ಅರ್ಥ ನಿರ್ಣಯಿಸುವ ತಜ್ಞ, ಹಾಗೆಯೇ ವಿಶ್ವಕೋಶಕಾರ ಜ್ಞಾನಬ್ರಹ್ಮ ಅಲ್ಲ, ಜ್ಞಾನದ ವ್ಯಾಖ್ಯಾನ ಮಂಡಿಸುವ ಪರಿಣತ. ವಿಕಾಸದ ಆದ್ಯತಾ ಶ್ರೇಣಿಯಲ್ಲಿ ನಿಘಂಟು ಮೊದಲು, ವಿಶ್ವಕೋಶ ತರುವಾಯ. ಉಪಯೋಗದ ದೃಷ್ಟಿಯಲ್ಲಿ ಇವುಗಳ ಪಾತ್ರ ವಿಭಿನ್ನವಾದರೂ ಒಂದು ಇನ್ನೊಂದರ ಸೀಮೆಗೆ ಅಧಿವ್ಯಾಪಿಸುವುದು ವಿರಳವಲ್ಲ. ಉದಾಹರಣೆಗೆ ನಿಘಂಟಿನಲ್ಲಿ ಪದದ ಅರ್ಥ ಪ್ರಾಶಸ್ತ್ಯ. ಇದು ಒಂದು ಪದದಲ್ಲಿರಬಹುದು ಅಥವಾ ವಿವರಣಾತ್ಮಕವಾಗಿರಬಹುದು. ವಿಶ್ವಕೋಶದಲ್ಲಾದರೋ ಶೀರ್ಷಿಕೆಯ ವ್ಯಾಖ್ಯೆ ಮತ್ತು ಈ ವ್ಯಾಖ್ಯೆ ಮೈದಳೆಯಲು ಕಾರಣವಾದ ಜ್ಞಾನದ ವಿವರಣೆಗೆ ಪ್ರಾಮುಖ್ಯ; ಪದದ ಅರ್ಥ ಮತ್ತು ವ್ಯುತ್ಪತ್ತಿ ಕುರಿತ ವಿವರಣೆ ಆನುಷಂಗಿಕ.

Radioactivity ಎನ್ನುವ ಪದವನ್ನು ಈ ಎರಡು ನಿಟ್ಟಿನಿಂದ ಪರಿಶೀಲಿಸೋಣ. Webster's New seventh Dictionaryಯಲ್ಲಿರುವ ಅರ್ಥ: "the property possessed by some elements (as uranium) of

spontaneously emitting alpha or beta rays and sometimes also gamma rays by the disintegration of the nuclei of atoms."

Van Nostrand's Scientific Encyclopaediaದಲ್ಲಿರುವ ವಿಸ್ತಾರ ಲೇಖನದ ಮೊದಲ ಕೆಲವು ಸಾಲುಗಳು: "The term radioactivity is used to denote the spontaneous disintegration of the nucleus of an atom with the emission of corpuscular or electromagnetic radiation. The phenomenon of radioactivity was discovered by Becquerel in 1896 by the exposure producing effect on a photographic plate by pitchblende (uranium containing mineral) while wrapped in black paper in the dark".

ವಿಜ್ಞಾನದ ನೂತನಾವಿಷ್ಕಾರಗಳು – ಉದಾಹರಣೆಗೆ radioactivityಯ ಪತ್ತೆ – ಆದಾಗ ಐತಿಹಾಸಿಕ ಕಾರಣಗಳಿಂದಾಗಿ ಇಂಗ್ಲಿಷ್ ಭಾಷೆ ಅವುಗಳಿಗೆ ಸ್ಪಂದಿಸುವುದು ಅನಿವಾರ್ಯವಾಯಿತು. ಅಂಥ ಹಲವಾರು ಸಂದರ್ಭಗಳಲ್ಲಿ ರೂಢಿಯ ಪದಗಳೇ ಹೊಸ ಅರ್ಥ ಮೈಗೂಡಿಸಿಕೊಂಡು ಹೊಸಮುಖ ಪ್ರದರ್ಶಿಸುವುದನ್ನು ಕಾಣುತ್ತೇವೆ. ಇದು ಸಾಧ್ಯವಾಗದಿದ್ದಲ್ಲಿ ಹೊಸ ಪದ ಟಂಕಿಸಲ್ಪಟ್ಟಿರುವುದನ್ನು ಗಮನಿಸುತ್ತೇವೆ. ಈ ಮೇಲಿನ ಉದಾಹರಣೆಯಲ್ಲಿ Disintegration ಎಂಬುದು ಹಳೆಯ ಪದ ಹೊಸ ಪಾರಿಭಾಷಿಕ ಮುಖ. Radioactivity ಹೀಗಲ್ಲ, ನೂತನ ಸೃಷ್ಟಿ: radio ಎನ್ನುವ ಪೂರ್ವಪ್ರತ್ಯಯ activity ಎನ್ನುವ ರೂಢಾರ್ಥವಿರುವ ನಾಮಪದದ ಜೊತೆ ಸಂಲಗ್ನಗೊಂಡು ಸೃಷ್ಟಿಯಾದ ಸಂಯುಕ್ತಪದ. ಫ್ರೆಂಚ್ ಭಾಶೆಯಲ್ಲಿ radio – ಎಂಬುದು radius ಪದದಿಂದ ನಿಷ್ಪನ್ನವಾಗಿದೆ. ಅರ್ಥ radial ಅಥವಾ radially (ಕಿರಣ ಸದೃಶವಾಗಿ).

ಮುಂದೆ ಇವೇ ಪದಗಳು ವಿಜ್ಞಾನದ ವಿಶಿಷ್ಟ ವಲಯದಿಂದ ಹೊರಜಿನುಗಿ ಸಾಮಾನ್ಯ ಭಾಷೆಯಲ್ಲಿ ಬಳಕೆಯಾಗಿ ಇದಕ್ಕೆ ವಿಶೇಷ ಅರ್ಥಸ್ಫುಟತೆಯನ್ನೂ ಭಾವ ಸೌರಭವನ್ನೂ ಪೂಸಿ ಸಮಗ್ರ ಸಾಹಿತ್ಯವನ್ನು ಶ್ರೀಮಂತಗೊಳಿಸುವುದು ಅಪರೂಪವಲ್ಲ: ೧. The entropy of the gathering increased steeply resulting in total disarray. ೨. He is always at the receiving end only, like a Black Hole. ಈ ಉದಾಹರಣೆಗಳಲ್ಲಿಯ Entropy ಮತ್ತು Black Hole ಪದಗಳು ಸಾಹಿತ್ಯ ರಂಗಕ್ಕೆ ವಿಜ್ಞಾನಕ್ಷೇತ್ರದ ಕೊಡುಗೆಗಳು. ಸಾಹಿತ್ಯ ಮತ್ತು ಶಾಸ್ತ್ರ ಪರಸ್ಪರ ಪೂರಕ ಪೋಷಕವಾಗಿ ಅಭಿವರ್ಧಿಸುವುದು ಜೀವಂತ ಮತ್ತು ಸ್ವತಂತ್ರ ಜನಾಂಗದ ಲಕ್ಷಣ. ವಿಶ್ವಕೋಶ ಈ ಕ್ರಿಯೆಯ ಒಂದು ಮುಖ್ಯ ಪರಿಕರ.

ಜ್ಞಾನ ಬಹುಶಾಖೆಗಳಲ್ಲಿ ನಿರಂತರವಾಗಿ ಪ್ರವರ್ಧಿಸುತ್ತಿರುವಾಗ ಅದರ ವ್ಯವಸ್ಥಿತ ಕ್ರೋಢೀಕರಣ ಜರೂರಿನ ಅಗತ್ಯ. ವಿಶ್ವಕೋಶ ಮಾಡುವುದಾದರೂ ಈ ಕೆಲಸವನ್ನೇ. ರಾಜ್ಯ ಶಾಸ್ತ್ರದಲ್ಲಿ ಸಂಶೋಧನೆಗೈಯ್ಯುತ್ತಿರುವ ವಿದ್ವಾಂಸರಿಗೆ ಇತಿಹಾಸ ಇಲ್ಲವೇ ಅರ್ಥಶಾಸ್ತ್ರ ಕುರಿತಂತೆ ಎದುರಾಗುವ ಸಂದೇಹ ಪರಿಹಾರಕ್ಕೆ ಆತ ಆಯಾ ಪ್ರಕಾರಗಳಲ್ಲಿಯ ಅಸಂಖ್ಯ ಮತ್ತು ಅನೇಕ ವೇಳೆ ಅಲಭ್ಯ ಗ್ರಂಥಗಳ ಶೋಧನೆಯಲ್ಲಿ ತಡಕಾಡುವುದಕ್ಕಿಂತ ವಿಶ್ವಕೋಶದಲ್ಲಿಯ ಸಂಕ್ಷಿಪ್ತ ಮತ್ತು ಸುಲಭಲಭ್ಯ ಲೇಖನಗಳನ್ನು ಪರಾಂಬರಿಸುವುದು ಅಧಿಕ ವ್ಯಾವಹಾರಿಕ. ವಿಶ್ವಕೋಶ ಮತ್ತು ನಿಘಂಟು ಯಾವುದೇ ಭಾಷೆಯ ಸಹಜ ವಿಕಾಸ ಪಥದಲ್ಲಿ ಒದಗುವ ಪಕ್ವ ಫಲಗಳು. ಆ ಭಾಷೆಯ ಪ್ರಬುದ್ಧತೆಯನ್ನು ಒರೆಗೆ ಹಚ್ಚಲು ದೊರೆಯುವ ನಿಕಷಗಳು. ಮುಂದೆ ಇವು ಅದೇ ಭಾಷೆಯ ಅಭಿವರ್ಧನೆಯ ಹಾದಿಯಲ್ಲಿ ಆಕರ ಗ್ರಂಥಗಳೂ ಶಿಷ್ಟತಾಮಾನಕಗಳೂ ಭವಿಷ್ಯ ಮಾರ್ಗಸೂಚಕಗಳೂ ಆಗಿ ಕಾರ್ಯನಿರ್ವಹಿಸುತ್ತವೆ.

ಕನ್ನಡವನ್ನೂ ಒಳಗೊಂಡಂತೆ ಭಾರತದ ಯಾವ ಭಾಷೆಯೂ ಆಧುನಿಕ ಶಾಸ್ತ್ರಗಳ ಸಹಜ ಸಂವಹನ ಮಾಧ್ಯಮಗಳಾಗಿ ವಿಕಸಿಸಿರುವುದಿಲ್ಲ. ಇಲ್ಲಿ ನಡೆಯುತ್ತಿರುವ ಕ್ರಿಯೆ ಇದು: ವಿದ್ವಾಂಸರು ಇಂಗ್ಲಿಷಿನಲ್ಲಿ ಕಲಿಯುತ್ತಾರೆ, ಚಿಂತಿಸುತ್ತಾರೆ, ಸಂಶೋಧಿಸುತ್ತಾರೆ, ಬೋಧಿಸುತ್ತಾರೆ ಮತ್ತು ಬರೆಯುತ್ತಾರೆ. ಇನ್ನು ದೇಶೀಯ ಭಾಷೆಯಲ್ಲಿ ಹೇಳಬೇಕಾಗಿ ಅಥವಾ ಬರೆಯಬೇಕಾಗಿ ಬಂದಾಗ ಆಕರ ವಸ್ತುವಿಗೆ ಇಂಗ್ಲಿಷ್ ಗ್ರಂಥಗಳನ್ನು ಆಶ್ರಯಿಸುತ್ತಾರೆ. ಐರೋಪ್ಯ ರಾಷ್ಟ್ರಗಳಲ್ಲಿ ಜ್ಞಾನವಿಕಸನವೂ ಭಾಷಾಸ್ಪಂದನವೂ ಸಮಗತಿಯಲ್ಲಿದ್ದರೆ ಭಾರತೀಯ ರಾಜ್ಯಗಳಲ್ಲಿ ಪರಿಸ್ಥಿತಿ ತದ್ವಿರುದ್ಧ. ನಮ್ಮ ಭಾಷೆಗಳಿಗೆ ಆಧುನಿಕ ವಿಜ್ಞಾನದ ಸಂವಹನಮಾಧ್ಯಮಗಳಾಗಿ ಸ್ಪಂದಿಸಲು ಅವಕಾಶ ಒದಗಲಿಲ್ಲ.

ಇದರ ಕಾರಣವನ್ನು ದೇಶದ ಇತಿಹಾಸದಲ್ಲಿ ಕಾಣಬೇಕೇ ವಿನಾ ಆಯಾ ಭಾಷೆಯ ಸಾಮರ್ಥ್ಯ ದೌರ್ಬಲ್ಯಗಳಲ್ಲಿ ಅಲ್ಲ. ಒಂದು ಭಾಷೆಯ ಸಾಮರ್ಥ್ಯ ಅದರ ಬಳಕೆಯನ್ನು ಅವಲಂಬಿಸಿದೆ. ಇದು ಹಾಗಿರಲಿ. ಯಾವುದೇ ಭಾರತೀಯ ಭಾಷೆ ಕುರಿತಂತೆ ನಿಘಂಟನ್ನಾಗಲೀ ವಿಶ್ವಕೋಶವನ್ನಾಗಲೀ ಆ ಭಾಷೆಯ 'ಸಹಜ ವಿಕಾಸ ಪಥದಲ್ಲಿ ಒದಗುವ ಪಕ್ವಫಲಗಳು' ಎನ್ನುವಂತಿಲ್ಲ. ಇವು ಕೃತಕವಾಗಿ ಸಂಶ್ಲೇಷಿತವಾದ ಪ್ರತಿಷ್ಠಾಸೂಚಕಗಳು ಎಂದು ಹೇಳುವುದೇ ಹೆಚ್ಚು ಯುಕ್ತ. ಏಕೆಂದರೆ ಇವು ಕನ್ನಡದಲ್ಲಿ ಬಹುಸಂಖ್ಯಾತ ವಾಚಕರ ಅನಿವಾರ್ಯ ಒಡನಾಡಿಗಳಾಗಿಲ್ಲ.

ಈಗ ಕನ್ನಡದಲ್ಲಿ ವಿಶ್ವಕೋಶಗಳು ಹೇಗೆ ಮೈದಳೆದುವು ಎಂಬುದನ್ನು ಪರಿಶೀಲಿಸೋಣ. ಇಲ್ಲಿಯ ಅಧ್ಯನೋದ್ದೇಶಕ್ಕೆ 'ವಿಶ್ವಕೋಶ' ಪದದ ಅರ್ಥವನ್ನು ತುಸು ಸಡಿಲಗೊಳಿಸಿ 'ಜ್ಞಾನದ ವಿವಿಧ ಶಾಖೆಗಳನ್ನು ಸೀಮಿತವಾಗಿಯಾದರೂ ವಿವೇಚಿಸುವ ಬಿಡಿ ಲೇಖನಗಳ ಸಮುಚ್ಚಯವೇ ವಿಶ್ವಕೋಶ' ಎಂದಿಟ್ಟುಕೊಳ್ಳುವುದು ಅಪೇಕ್ಷಣೀಯ. ಈ ಹೊಸ ವ್ಯಾಖ್ಯೆಯ ಪರಿಧಿಯೊಳಗೆ ಬರುವ ಕನ್ನಡ ವಿಶ್ವಕೋಶಗಳು ಐದು:

೧. ಶಿವರಾಮಕಾರಂತರು ರಚಿಸಿದ 'ಬಾಲ ಪ್ರಪಂಚ'ದ ಮೂರು ಸಂಪುಟಗಳು, ೧೯೩೬, ೧೮೦೦ ಪುಟಗಳು.

೨. ಶಿವರಾಮಕಾರಂತರು ರಚಿಸಿದ 'ವಿಜ್ಞಾನ ಪ್ರಪಂಚ'ದ ನಾಲ್ಕು ಸಂಪುಟಗಳು, ೧೯೫೯–೬೪, ೧೯೬೪ ಪುಟಗಳು.

೩. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಟವಾಗುತ್ತಿರುವ ಹದಿನಾಲ್ಕು ಸಂಪುಟಗಳ 'ಕನ್ನಡ ವಿಶ್ವಕೋಶ' ಯೋಜನೆಯಲ್ಲಿ ಈಗ ಪ್ರಕಟವಾಗಿರುವ ಹನ್ನೊಂದು ಸಂಪುಟಗಳು, ೧೯೬೯–೮೪, ೧೦೫೦೨ ಪುಟಗಳು [ಪ್ರಸ್ತುತ ಭಾಗ ಲೇಖಕನೇ ೧೯೮೪ರ ಸುಮಾರಿಗೆ ಬರೆದ ಲೇಖನವೊಂದರ ಯಥಾಪ್ರತಿ. ಆದರೆ ಅದನ್ನು ಆತ್ಮಕಥೆಯಲ್ಲಿ ಸೇರಿಸಿಕೊಳ್ಳುವಾಗ (೨೦೦೬) ನಮೂದುಗಳನ್ನು ಪರಿಷ್ಕರಣಗೊಳಿಸುವಲ್ಲಿ ಲೇಖಕ ಮರೆತಿರಬೇಕು. ನನ್ನ ಮಿತಿಯಲ್ಲಿ ಸಣ್ಣ ತಿದ್ದುಪಡಿ: ವಿಶ್ವಕೋಶ ೨೦೦೪ರಲ್ಲಿ ಸಂಪೂರ್ಣಗೊಂಡಿದೆ. ಒಟ್ಟು ಪುಟಗಳು ೧೩,೭೬೯ – ಅವ]

೪. ಬೆಂಗಳೂರು ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ ನಿಯಮಿತದಿಂದ ಪ್ರಕಟವಾಗಿರುವ 'ಜ್ಞಾನಗಂಗೋತ್ರಿ'ಯ (ಕಿರಿಯರ ವಿಶ್ವಕೋಶ) ಏಳು ಸಂಪುಟಗಳು, ೧೯೭೦–೭೪, ೪೯೯೧ ಪುಟಗಳು.

೫. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಟವಾಗುತ್ತಿರುವ ಮೂವತ್ತು ಸಂಪುಟಗಳ 'ಕನ್ನಡ ವಿಷಯ ವಿಶ್ವಕೋಶ' ಯೋಜನೆಯಲ್ಲಿ ಪ್ರಕಟವಾಗಿರುವ (೧೯೭೯) 'ಕರ್ನಾಟಕ' ಸಂಪುಟ, ೧೬೯೮ ಪುಟಗಳು.

'ಬಾಲಪ್ರಪಂಚ' ಮತ್ತು 'ವಿಜ್ಞಾನ ಪ್ರಪಂಚ' ಹಲವಾರು ಸಚಿತ್ರ ಲೇಖನಗಳ ಸಮುಚ್ಚಯಗಳು. ಲೇಖನಗಳನ್ನು ವಿಷಯ ವೈವಿಧ್ಯಾನುಸಾರ ಅಧ್ಯಾಯಗಳಲ್ಲಿ ಅಳವಡಿಸಲಾಗಿದೆ. ಎಳೆಯ ಮಕ್ಕಳಿಗೆ ಪ್ರಪಂಚ ಜ್ಞಾನ ಪರಿಚಯಿಸಿ ಕೊಡುವುದು 'ಬಾಲಪ್ರಪಂಚ'ದ ಉದ್ದೇಶ. ಬೆಳೆದ ಮಕ್ಕಳಿಗೆ ಆಧುನಿಕ ವಿಜ್ಞಾನ ಮತ್ತು ತಂತ್ರವಿದ್ಯೆಯ ವಿವಿಧ ಮುಖಗಳನ್ನು ತೋರಿಸುವ ಪ್ರಯತ್ನ 'ವಿಜ್ಞಾನ ಪ್ರಪಂಚ.' ಈ ಎಲ್ಲ ಗ್ರಂಥಗಳೂ ವಿವರಣಾತ್ಮಕ ಜನಪ್ರಿಯ ಶೈಲಿಯಲ್ಲಿ ರಚಿತವಾಗಿವೆ.

ಕನ್ನಡದಲ್ಲಿ ವಿಶ್ವಕೋಶ ರಚನೆ ತೊಡಗುವಾಗ ಎದುರಾಗುವ ಮುಖ್ಯ ಸಮಸ್ಯೆಗಳಿವು: ೧. ಪರಿಕಲ್ಪನೆಗಳನ್ನು ಸ್ಪಷ್ಟವಾಗಿ ನಿರೂಪಿಸುವುದು ಹೇಗೆ? ೨. ನಿರೂಪಣೆಯನ್ನು ತಾರ್ಕಿಕವಾಗಿಯೂ ಆಕರ್ಷಕವಾಗಿಯೂ ಅಳವಡಿಸುವುದು ಹೇಗೆ? ೩. ಪಾರಿಭಾಷಿಕ ಪದಗಳ ಮತ್ತು ಪದಪುಂಜಗಳ ಸಷ್ಟಿ ಮತ್ತು ಬಳಕೆ ಕುರಿತು ಅನುಸರಿಸಬೇಕಾದ ವಿಧಿ ನಿಯಮಗಳೇನು? ೪. ಚಿತ್ರ–ನಿರೂಪಣೆ ಸಂವಾದಿತ್ವ ಮತ್ತು ಮುದ್ರಣದಲ್ಲಿ ಶಿಷ್ಟತೆ ಕಾಪಾಡಲು ಅನುಸರಿಸಬೇಕಾದ ಕ್ರಮವೇನು?

ಇಂಥ ಯಾವ ಸಮಸ್ಯೆಯೂ ಕಾರಂತರನ್ನು ವಿಶೇಷವಾಗಿ ಬಾಧಿಸಿರುವಂತೆ ತೋರುವುದಿಲ್ಲ. ಬಿಡಿ ವಿವರಗಳಲ್ಲಿ ತಲೆಕೆಡಿಸಿಕೊಳ್ಳದೆ ಗಡಿಬಿಡಿಯಿಂದ ಗುರಿ ಸಾಧಿಸುವುದು ಅವರ ಧ್ಯೇಯವಾಗಿರುವಂತೆ ತೋರುತ್ತದೆ. ದೈತ್ಯ ತ್ರಾಣ, ಅಮಿತ ಉತ್ಸಾಹ, ಆದರೆ ಅಸಮರ್ಪಕ ನಿರ್ವಹಣಾ ಕೌಶಲ ಮತ್ತು ಬಿಡಿ ವಿವರಗಳತ್ತ ದಿವ್ಯ ನಿರ್ಲಕ್ಷ್ಯ ಈ ಕೃತಿಕಾರರ ಲಕ್ಷಣಗಳು. ಕಾರಂತರು ಇಂಗ್ಲಿಷ್ ಭಾಷೆಯಲ್ಲಿ ತಮಗೆ ದೊರೆತ ಜನಪ್ರಿಯ ಗ್ರಂಥಗಳನ್ನು ಓದಿ ತಾವು ಗ್ರಹಿಸಿದಷ್ಟನ್ನು ಕನ್ನಡಕ್ಕೆ ಇಳಿಸಿದರೆ ಸಾಕೆಂಬ ಧೋರಣೆಯಿಂದ ಈ ಕೆಲಸ ತೊಡಗಿರುವಂತೆ ಭಾಸವಾಗುತ್ತದೆ. ಇಂಥ ನಿಲವು ಖಂಡಿತ ಅಪಾಯಕಾರಿ. ಏಕೆಂದರೆ ಜನಪ್ರಿಯ ಗ್ರಂಥವಾಚನ ಓದುಗನಲ್ಲಿ ಆ ವಿಷಯದ ಬಗ್ಗೆ ಆಸಕ್ತಿ ಕುದುರಿಸೀತೇ ವಿನಾ ಅದರ ಪರಿಕಲ್ಪನೆಗಳ ಹೂರಣಕ್ಕೆ ಎಂದೂ ಪ್ರವೇಶ ಒದಗಿಸದು. ಈ ಪ್ರವೇಶ ಗಳಿಸಲು ಆತ ತಾಂತ್ರಿಕ ಭಾಷೆಯಲ್ಲಿ ರಚಿತವಾಗಿರುವ ಆಕರ ಗ್ರಂಥಗಳನ್ನು ಅಭ್ಯಸಿಸುವುದು ಅಗತ್ಯ. ಕೈಗಂಬ ಗುರಿ ತೋರಿಸೀತೇ

ಹೊರತು ತಾನೇ ಗುರಿ ಆಗದು. ಎರಡನೆಯದಾಗಿ, ಒಂದು ನಿರ್ದಿಷ್ಟ ಪರಿಕಲ್ಪನೆಯನ್ನು ಸ್ಪಷ್ಟೀಕರಿಸಲು ಜನಪ್ರಿಯ ಲೇಖಕ ಹಲವಾರು ರೂಪಕಗಳನ್ನೋ ಸಾಮ್ಯಗಳನ್ನೋ ಬಳಸುವುದುಂಟು – ಒಂದು ಬಗೆಯ ವ್ಯಾಪಾರ ತಂತ್ರವಿದು. ಓದುಗ ಇವನ್ನು ಹಿಗ್ಗಲಿಸಿ – ಅಂದರೆ ಸಂದರ್ಭದ ಸರಹದ್ದಿನಿಂತ ಹೊರಕ್ಕೆ ಇವುಗಳ ಅನ್ವಯವನ್ನು ವಿಸ್ತರಿಸಿ – ಅಪಕಲ್ಪನೆಗಳನ್ನು ರೂಪಿಸಿಕೊಳ್ಳುವ ಅಪಾಯವಿದೆ. ಮೂರನೆಯದಾಗಿ, ಇಂಗ್ಲಿಷ್ ಮಾತೃಭಾಷೆ ಅಲ್ಲದ ನಾವು ಅದರ ಎಲ್ಲ ನವುರು ನಯಗಳನ್ನೂ ಪೂರ್ತಿ ಗ್ರಹಿಸಿ ಮೂಲ ಭಾವನೆಗಳನ್ನು ಸ್ಪಷ್ಟವಾಗಿ ಅರಿಯುತ್ತೇವೆಂದು ಭಾವಿಸುವುದು ತಪ್ಪು. ಈ ಭಾವನೆ ಆಧರಿಸಿ ಕನ್ನಡದಲ್ಲಿ ವಿಶ್ವಕೋಶ ರಚನೆಗೆ ಇಳಿದುದಾದರೆ ಇಂಥ ಕೃತಿ ಓದುಗನಿಗೆ ಅಸ್ಪಷ್ಟವೂ ಪರಕೀಯವೂ ಆಗುತ್ತದೆ, ಮಿಗಿಲಾಗಿ ತಪ್ಪು ಮಾಹಿತಿಗಳನ್ನು ಊಡುತ್ತದೆ ಕೂಡ. ನಾಲ್ಕನೆಯದಾಗಿ, ಇಂಗ್ಲಿಷಿನಲ್ಲಿರುವ ಜನಪ್ರಿಯ ಗ್ರಂಥಗಳ ಲೇಖಕರು ಆಯಾ ಕ್ಷೇತ್ರದಲ್ಲಿಯ ತಜ್ಞರು. ಇವರು ತಾಕತ್ತಿನ ತಾಣದಿಂದ ತೊಡಗಿ ತಮ್ಮ ಓದುಗರಿಗೆ ಬೇಕಾದುದನ್ನು ಯೋಚಿಸಿ ನಿರ್ವಹಿಸಬಲ್ಲ ಸಮರ್ಥರು. ಇಂಥವರು ತಯಾರಿಸಿದ ಲೇಖನಗಳಿಗೆ ಶಿಷ್ಟ ಹಾಗೂ ಆಕರ್ಷಕ ರೂಪವೀಯಲು ಭಾಷಾ ಪರಿಣತರು ಇವನ್ನು ಸಂಸ್ಕರಿಸುತ್ತಾರೆ. ಕನ್ನಡದಲ್ಲಿ ಜನಪ್ರಿಯ ಗ್ರಂಥ ರಚಿಸುವ ಲೇಖಕ ಸಹ ಇದೇ ವಿಧಾನ ಅನುಸರಿಸದಿದ್ದರೆ ಆತನ ಲೇಖನ ಮೂಲ ಇಂಗ್ಲಿಷ್ ಲೇಖನದ ದುರ್ಬಲ ಇಂಗಾಲ ಪ್ರತಿ ಆಗುವುದು ಕಂಡಂತೆಯೇ ಇದೆ.

ಕಾರಂತರ ಈ ಕೃತಿಗಳ ಮೂಲಭೂತ ದೌರ್ಬಲ್ಯವಿರುವುದು ಇಲ್ಲಿ: ಇವು ತಾಕತ್ತಿನ ತಾಣದಿಂದ ಬರೆದ ಕೃತಿಗಳಲ್ಲ. ಇನ್ನು ಭಾಷಾಪ್ರಯೋಗ ಕುರಿತಂತೆ ದಿವ್ಯ ನಿರ್ಲಕ್ಷ್ಯ ಧೋರಣೆ ಇವರ ಜಾಯಮಾನವೋ ಎನ್ನಿಸುತ್ತದೆ. ಈ ಸಂಗತಿ ಸ್ಪಷ್ಟವಾಗಲು ಪ್ರಸಕ್ತ ಲೇಖನದಲ್ಲಿ ಬರೆದಿರುವ radioactivity ಕುರಿತ (ಇಂಗ್ಲಿಷ್ ವಿಶ್ವಕೋಶದ) ವಿವರಣೆಯನ್ನು ಮೊದಲು ಓದಿ ಬಳಿಕ ಕಾರಂತರು ಬರೆದಿರುವ ವಿವರಣೆ ಓದಬೇಕು.

"ರೇಡಿಯೋ ವಿಸರಣ: ಒಂದು ಧಾತುವಿನ ಎರಡು ಮೂರು ಪರಮಾಣು ರೂಪಗಳು ಬೆರೆತು ಸಿಗುತ್ತವೆಂಬುದು ನಿಜವಾದರೂ ಅವುಗಳಲ್ಲಿ ಒಂದು ಮಾತ್ರ ಸ್ಥಿರವಾದ ರೂಪ. ಉಳಿದವುಗಳಲ್ಲಿ ಲೆಕ್ಕಕ್ಕಿಂತ ತುಸು ಹೆಚ್ಚಿನ ವಿದ್ಯುಚ್ಛಕ್ತಿಯ ಗುಣ ಸೇರಿಕೊಂಡಿದ್ದು, ಅಂಥ ಪರಮಾಣುಗಳು, ತಮ್ಮ ಅಧಿಕಶಕ್ತಿಯನ್ನು ಕಳೆದುಕೊಳ್ಳಲು ಪ್ರಯತ್ನಿಸುತ್ತವೆ. ಅದಕ್ಕಾಗಿ ಕೆಲವು ಕಣಗಳನ್ನು ಸಿಡಿದುಕೊಂಡು ಅವು ಸ್ಥಿರ ರೂಪಕ್ಕೆ ಬರಲು ಪ್ರಯತ್ನಿಸುತ್ತವಂತೆ. ಇಂತಹ ಪ್ರಯತ್ನದಲ್ಲಿ ಅದರಿಂದ ಇಲೆಕ್ಟ್ರಾನ್, ಕ್ಷ–ಕಿರಣ, ಗಾಮ ಕಿರಣ ಮೊದಲಾದ ಶಕ್ತಿಕಣಗಳು ವಿಸರಣಗೊಳ್ಳುತ್ತವೆ. ಫ್ರಾನ್ಸ್ ದೇಶದಲ್ಲಿ ಕಳೆದ ಶತಮಾನದಲ್ಲಿ 'ಕ್ಯೂರಿ' ದಂಪತಿಗಳು ರೇಡಿಯಮ್ ಎಂಬ ಹೊಸ ಧಾತುವನ್ನು ಕಂಡುಹಿಡಿದರು. ಅದು ತೀರ ಅಸ್ಥಿರ ಸ್ವಭಾವದ್ದು. ಅದು ತನ್ನ ಚೈತನ್ಯವನ್ನು ಹೊರಕ್ಕೆ ಸಿಡಿದುಕೊಳ್ಳುತ್ತಲೇ ಇದ್ದು ಕಾಲಾಂತರದಲ್ಲಿ ಇನ್ನೊಂದೇ ಧಾತುವಾಗಿ ಮಾರ್ಪಡುತ್ತದೆ . . . ಹೀಗೆ ಒಂದು ಧಾತು ರೂಪವು, ತನ್ನ ಅರ್ಧದಷ್ಟು ಅಂಶ, ಬದಲುಗೊಳ್ಳುತ ಹೋಗಿ ಇನ್ನೊಂದು ಧಾತು ರೂಪವಾಗಲು ಎಷ್ಟು ಕಾಲ ಹಿಡಿಯುತ್ತದೆ ಎಂಬುದನ್ನು ಕೋಷ್ಟಕದಲ್ಲಿ ತಿಳಿಸಿದೆ. ಕಟ್ಟಕೊನೆಯಲ್ಲಿ ಸೀಸವಾಗಿ ಪರಿವರ್ತನೆಗೊಂಡದ್ದು ಹಾಗೆ ಸೀಸವಾಗಿಯೇ ಉಳಿಯುತ್ತದೆ. ಅಲ್ಲಿಯ ತನಕವೂ ಶಕ್ತಿಯ ಕಣಗಳನ್ನು ಹೊರಕ್ಕೆ ಸಿಡಿಯುತ್ತಲೇ ಇರುವ ಗುಣವನ್ನು ರೇಡಿಯೋ ವಿಸರಣ ಎನ್ನುತ್ತಾರೆ." (ವಿಜ್ಞಾನ ಪ್ರಪಂಚ – ೧, ಈ ಜಗತ್ತು, ಪುಟ ೭೨–೭೩)

ಇಲ್ಲಿ radioactivity ಎನ್ನುವ ನೈಸರ್ಗಿಕ ವಿದ್ಯಮಾನದ ಬಗೆಗೆ ನಮ್ಮಲ್ಲಿ ನಿರ್ದಿಷ್ಟ ಚಿತ್ರ ಮೂಡದಿರುವುದರ ಮುಖ್ಯ ಕಾರಣಗಳು ನಾಲ್ಕು: ಸ್ವತಃ ಲೇಖಕರಿಗೆ ಈ ಪರಿಕಲ್ಪನೆ ಸ್ಪಷ್ಟವಾಗಿಲ್ಲದಿರುವುದು; ಈ ಶೋಧದ ಇತಿಹಾಸವನ್ನು ತಪ್ಪಾಗಿ ವ್ಯಾಖ್ಯಾನಿಸಿರುವುದು; ನಿರೂಪಣೆಯಲ್ಲಿ ಕಾರ್ಯಕಾರಣ ಸಂಬಂಧವಿಲ್ಲದಿರುವುದು; ಭಾಷೆ ತೀರ ಪೇಲವ (journalese) ಮತ್ತು ದೋಷಪೂರಿತವಾಗಿರುವುದು.

ಹಾಗಾದರೆ radioactivityಯ ಸರಿಯಾದ ವಿವರಣೆ ಏನು? ಈ ಪದದ ಕನ್ನಡ ರೂಪ 'ವಿಕಿರಣಪಟುತ್ವ' – ಕೇಂದ್ರ ಅಥವಾ ಬೀಜದಿಂದ ಶಕ್ತಿಕಿರಣಗಳು ಸೂಸುವ ಚಟುವಟಿಕೆ ಎಂದರ್ಥ. ಆದ್ದರಿಂದ radiation ಎಂಬುದು 'ವಿಕಿರಣ' ಆಗುತ್ತದೆ. (ರೇಡಿಯೋ ವಿಸರಣ ಹೇಗೆ ಅಸಮರ್ಪಕ ಎಂಬುದನ್ನು ಗಮನಿಸಬೇಕು.)

"ವಿಕಿರಣ ಪಟುತ್ವ: ಪರಮಾಣುವಿನ ಬೀಜ ಕಣರೂಪೀಯ ಅಥವಾ ವಿದ್ಯುತ್ಕಾಂತೀಯ ವಿಕಿರಣವನ್ನು ಉತ್ಸರ್ಜಿಸುತ್ತ ಸ್ವಯಮೇವ ಅಪಘಟನೆಗೆ ಈಡಾಗುವ ನೈಸರ್ಗಿಕ ವಿದ್ಯಮಾನ. ರಂಟ್ಜನ್ ೧೮೯೫ರಲ್ಲಿ ಎಕ್ಸ್ ಕಿರಣಗಳನ್ನು ಆವಿಷ್ಕರಿಸಿದ. ಸಾಮಾನ್ಯ ಬೆಳಕಿಗೆ ಖಚಿತವಾಗಿ ಅಪಾರದರ್ಶಕವಾಗಿದ್ದ ಹಲಗೆ ಗೋಡೆ ಮುಂತಾದವನ್ನು 'ಕತ್ತರಿಸಿ' ಸಾಗುತ್ತಿದ್ದ ಈ ಶಕ್ತಿ ವಿಶೇಷದ ಗುಣಗಳಿಂದ ಆಕರ್ಷಿತನಾದ ಬೆಕೆರಲ್ ಈ ವಿಶಿಷ್ಟ ಗುಣಾವಿಷ್ಟ

ರಾಸಾಯನಿಕದ ಶೋಧದಲ್ಲಿ ನಿರತನಾದ. ಯುರೇನಿಯಮ್ಮಿನ ಅದುರಾದ ಪಿಚ್‌ಬ್ಲೆಂಡ್ ಎಂಬ ಖನಿಜವನ್ನು ಈತ ತನ್ನ ಸಂಶೋಧನೆಗೆ ಆಯ್ದು ಅದರ ಮೇಲೆ ನೇರ ಬಿಸಿಲಿನಲ್ಲಿ ಕೆಲವು ಪ್ರಯೋಗ ಮಾಡಿದ. ಬಿಸಿಲಿನಿಂದ ಶಕ್ತಿಯನ್ನು – ಸ್ಪಂಜ್ ನೀರನ್ನು ಹೀರುವಂತೆ – ಹೀರಿಕೊಂಡ ಪಿಚ್‌ಬ್ಲೆಂಡ್ ಮುಂದೆ ತಂತಾನೇ ಅದನ್ನು ಹೊರ ಸೂಸುವುದಾಗಿರಬಹುದೆಂಬುದು ಈತನ ಊಹೆ. ಆದರೆ ಈ ದಿಶೆಯಲ್ಲಿ ಗಮನಾರ್ಹ ಪುರಾವೆ ದೊರೆಯದ್ದರಿಂದ ಈ ಖನಿಜದ ಹರಳುಗಳನ್ನು ಮೇಜದ ಖಾನೆಯೊಳಗೆ ನಿರ್ಲಕ್ಷ್ಯ ಭಾವದಿಂದ ತುರುಕಿದ – ಎಸೆಯಲು ಮನ ಒಪ್ಪದ್ದರಿಂದ. ಅದೇ ಖಾನೆಯೊಳಗೆ ಒಂದಿಷ್ಟು ಛಾಯಾಗ್ರಾಹಕ ಫಲಕಗಳೂ ಇದ್ದುವು. ಇವನ್ನು ದಪ್ಪ ಕಪ್ಪು ಕಾಗದದಿಂದ ಭದ್ರವಾಗಿ ಕಟ್ಟಲಾಗಿತ್ತು. ಹೀಗಾಗಿ ತುಣುಕು ಬೆಳಕು ಕೂಡ ಇವನ್ನು ಸೋಂಕುವಂತಿರಲಿಲ್ಲ. ಕೆಲವು ದಿನಗಳ ತರುವಾಯ ಬೆಕೆರಲ್ ಈ ಫಲಕಗಳನ್ನು ಉಪಯೋಗಿಸಲೆಂದು ಹೊರ ತೆಗೆದಾಗ ಇವು ವಿನಾಕಾರಣ ಮಬ್ಬಾಗಿದ್ದುದನ್ನು ಕಂಡು ಚಕಿತನಾದ – ನೇರ ಬೆಳಕಿಗೆ ಒಡ್ಡಲ್ಪಟ್ಟಂಥ ಪರಿಸ್ಥಿತಿ! ಬೆಳಕಿಗೆ ಸದೃಶವಾದ ಗುಣವಿರುವ ಶಕ್ತಿ ಪಿಚ್‌ಬ್ಲೆಂಡಿನಲ್ಲಿ ನಿಹಿತವಾಗಿರಬಹುದೆಂದೂ ಇದು ತಂತಾನೇ ಸಿಡಿದು ಬೆಳಕಿಗೆ ಅಪಾರದರ್ಶಕ ಕವಚಗಳನ್ನು ಎಕ್ಸ್ ಕಿರಣಗಳೋಪಾದಿಯಲ್ಲಿ ಕತ್ತರಿಸಿ ಸಾಗಿರಬಹುದೆಂದೂ ಈತ ತರ್ಕಿಸಿದ (೧೮೯೬). ಈ ವಿಶಿಷ್ಟ ವಿದ್ಯಮಾನಕ್ಕೆ ಮೇರಿ ಕ್ಯೂರಿ ವಿಕಿರಣಪಟುತ್ವ ಎಂಬ ಹೆಸರಿತ್ತಳು. ಅದುರಿನಿಂದ ವಿಕಿರಣ, ಒಣಗಿದ ಔಡಲಕಾಯಿ ಬಿರಿದಾಗ ಬೀಜಗಳು ರಟ್ಟುವಂತೆ, ಸಿಡಿಯುವುದರ ರಹಸ್ಯ ಶೋಧನೆಗೆ ಇಳಿದ ಈಕೆ ಟನ್ ತೂಕದ ರದ್ದಿ ಅದುರನ್ನು ಶುದ್ಧೀಕರಿಸಿ ಗ್ರಾಮ್ ತೂಕದ ತೀವ್ರ ವಿಕಿರಣಪಟು ಧಾತುವನ್ನು ಉದ್ಧರಿಸಿದಳು (೧೮೯೮). ಇದೇ ರೇಡಿಯಮ್. ನಿಸರ್ಗದ ಅನರ್ಘ್ಯ ನಿಧಿಗೆ – ಪರಮಾಣು ಗರ್ಭದಲ್ಲಿ ಬಲವದ್ಬಂಧಿತವಾಗಿ ಕುಳಿತಿರುವ ಅಗಾಧ ಶಕ್ತಿಗೆ – ಹೀಗೆ ಇಣುಕುನೋಟ ಲಭಿಸಿತು."

ಆದ್ದರಿಂದ ಕಾರಂತರ (ಮೇಲೆ ಉಲ್ಲೇಖಿಸಿರುವ) ಕೃತಿಗಳು ಕನ್ನಡದ ಅಭಿವರ್ಧನೆಗೆ ನೀಡಿರುವ ಕೊಡುಗೆ ಬಹುತೇಕ ನಿಷೇಧಾತ್ಮಕ: ವಿಶ್ವಕೋಶ ಹೇಗೆ ಇರಬಾರದು ಅಥವಾ ಅದನ್ನು ಹೇಗೆ ರಚಿಸಬಾರದು ಎನ್ನುವುದಕ್ಕೆ ನಿದರ್ಶನ. ವಾಸ್ತವವಾಗಿ ವರ್ತಮಾನ ಯುಗದಲ್ಲಿ ಯಾವ ವಿಶ್ವಕೋಶವೂ ಏಕವ್ಯಕ್ತಿ ಸಾಹಸವಾಗಿರುವುದು ಅಸಾಧ್ಯ. ಜ್ಞಾನದ ವಿವಿಧ ಪ್ರಕಾರಗಳು ಅಸಂಖ್ಯ ಸಂಶೋಧಕರ ಅವಿಚ್ಛಿನ್ನ ಚಿಂತನೆಗಳ ವಿಶಿಷ್ಟ ಫಲಗಳು. ಅಂದ ಮೇಲೆ ಇವುಗಳ ಗ್ರಾಂಥಿಕ ಪ್ರತಿಬಿಂಬವಾದ ವಿಶ್ವಕೋಶ ಸಹಜವಾಗಿಯೇ ವಿವಿಧ ಪರಿಣತ ಪರಿಪಕ್ವ ಲೇಖನಗಳ ಸಂಕೀರ್ಣವಾಗಿ ಇರತಕ್ಕದ್ದೆಂಬುದು ಸ್ವತಸ್ಸಿದ್ಧ. ಈ ದೃಷ್ಟಿಯಲ್ಲಿ ಸದ್ಯಕ್ಕೆ ಕನ್ನಡದಲ್ಲಿ 'ಕನ್ನಡ ವಿಶ್ವಕೋಶ', 'ಜ್ಞಾನಗಂಗೋತ್ರಿ' ಮತ್ತು 'ವಿಷಯ ವಿಶ್ವಕೋಶ' ಮಾತ್ರ ಪರಿಶೀಲನಾರ್ಹ ಕೃತಿಗಳು.

ಈ ಮೂರೂ ವಿಶ್ವಕೋಶಗಳ ವ್ಯವಸ್ಥಾಪನೆ ಕುರಿತ ಸ್ಥೂಲವಿವರಗಳನ್ನು ಅಧ್ಯಾಯ ೭೦ರಲ್ಲಿ ನೋಡಬಹುದು. ಒಟ್ಟಾಗಿ ಕನ್ನಡದ ಅಭಿವರ್ಧನೆಯಲ್ಲಿ ವಿಶ್ವಕೋಶಗಳು ವಹಿಸಿರುವ ಪಾತ್ರವೇನೆಂಬುದನ್ನು ಈಗ ಪರಿಶೀಲಿಸೋಣ.

೧. ಕನ್ನಡದಲ್ಲಿ ಶಾಸ್ತ್ರೀಯ ವಿಚಾರ ನಿರೂಪಣೆಗೆ ಶಿಷ್ಟವಿಧಾನದ ರೂಪಣೆ. ಆಧುನಿಕ ವಿಷಯಗಳನ್ನು ಕುರಿತಂತೆ ಬಹುತೇಕ ವಿವರಣಾತ್ಮಕವಾಗಿ ಇಲ್ಲವೇ ಅಳ್ಳಕವಾಗಿ ಇರುತ್ತಿದ್ದ ಕನ್ನಡ ಭಾಷೆಗೆ ಈ ವಿಶ್ವಕೋಶಗಳು ಖಚಿತತೆಯನ್ನೂ ಅಡಕತನವನ್ನೂ ಒದಗಿಸಿಕೊಟ್ಟಿವೆ. ಉದಾಹರಣೆಗೆ 'ಕನ್ನಡ ವಿಶ್ವಕೋಶ'ದಲ್ಲಿ 'ಬೆರಳಚ್ಚು ಯಂತ್ರದ' ಲೇಖನ ಆರಂಭವಾಗುವುದು ಹೀಗೆ:

"ಕೀಲಿಮಣೆಯಲ್ಲಿ ಅಳವಡಿಸಿರುವ ಅಕ್ಷರಕೀಲಿಗಳನ್ನು ಬೆರಳುಗಳಿಂದ ಒತ್ತಿದಾಗ ಅನುರೂಪ ಉಕ್ಕಿನ ಮೊಳೆಗಳು ತಮ್ಮ ನೆಲೆಗಳಿಂದ ಸನ್ನೆ ತತ್ತ್ವಾನುಸಾರ ಎದ್ದು ಶಾಯಿ ಪಟ್ಟಿಯ ಮೇಲೆ ಬಡಿದು ಇದರ ಅಡಿಯಲ್ಲಿರುವ ಕಾಗದ ಸುರುಳಿಯ ಮೇಲೆ ಮುದ್ರಣಾಕ್ಷರಸದೃಶ ಅಕ್ಷರಗಳನ್ನು ಪಡಿಮೂಡಿಸುವ ಸಲಕರಣೆ ಅಥವಾ ಯಂತ್ರ (ಟೈಪ್‌ರೈಟರ್)."

'ಜ್ಞಾನಗಂಗೋತ್ರಿ'ಯಲ್ಲಿ 'ಹಣ' ಲೇಖನದ ಮೊದಲ ಕೆಲವು ಸಾಲುಗಳಿವು: "ಹುಡುಗನಿಗೆ ಪುಸ್ತಕಬೇಕು. ಕೊಳ್ಳಲು ಅಂಗಡಿಯವರಿಗೆ ಹಣ ಕೊಡಬೇಕು. ಹಣ ಕೊಡದಿದ್ದರೆ ಪುಸ್ತಕವಿಲ್ಲ. ಒಂದು ವಸ್ತು ಕೊಟ್ಟು ಇನ್ನೊಂದು ಕೊಳ್ಳುವುದು ವಿನಿಮಯ. ಹಣ ನಮ್ಮ ಕೈಯಲ್ಲಿದ್ದರೆ ಯಾವ ಪದಾರ್ಥದ ಜತೆ ಆದರೂ ಅದನ್ನು ವಿನಿಮಯ ಮಾಡಿಕೊಳ್ಳಬಹುದು. ನಾವು ಇನ್ನೊಬ್ಬರಿಗಾಗಿ ಕೆಲಸ ಮಾಡಿದರೆ ಆಗ ಅವರು ಹಣ ಕೊಡುತ್ತಾರೆ. ನಾವು ಕೆಲಸ ಮಾಡುವುದು 'ದುಡಿಮೆ'. ದುಡಿಮೆಯನ್ನು 'ಮಾರಿದರೆ' ಹಣ ಸಿಗುತ್ತದೆ."

'ಕರ್ನಾಟಕ ವಿಷಯ ವಿಶ್ವಕೋಶ'ದಲ್ಲಿ 'ಪಟ್ಟದ ಕಲ್ಲು' ಲೇಖನದ ಮೊದಲ ಪರಿಚ್ಛೇದ ಹೀಗಿದೆ: "ಬಾದಾಮಿ ತಾಲ್ಲೂಕಿನಲ್ಲಿ ಬಾದಾಮಿಯಿಂದ ಪೂರ್ವಕ್ಕೆ ೨೨ ಕಿಮೀ ದೂರದಲ್ಲಿ ಮಲಪ್ರಭಾ ನದಿಯ ಎಡದಡದಲ್ಲಿರುವ ಗ್ರಾಮ.

ಹಿಂದೆ ಕಿಸುವೊಳಲ್, ಪಟ್ಟದ ಕಿಸುವೊಳಲ್ ಎಂದು ಪ್ರಸಿದ್ಧವಾಗಿದ್ದ ಐತಿಹಾಸಿಕ ಸ್ಥಳ. ಇಲ್ಲಿರುವ ಬಾದಾಮಿಯ ಚಾಳುಕ್ಯ ಕಾಲದ ದೇವಾಲಯಗಳಿಂದ ಈಗ ಪ್ರಾಮುಖ್ಯ ಪಡೆದಿದ್ದು ಪ್ರವಾಸೀ ಕೇಂದ್ರವಾಗಿ ಬೆಳೆಯುತ್ತಿದೆ."

೨. ಯಾವುದೇ ವಿಷಯವನ್ನು ಅದು ಎಷ್ಟೇ ಆಧುನಿಕವಾಗಿರಲಿ, ಎಷ್ಟೇ ತಾಂತ್ರಿಕವಾಗಿರಲಿ – ಕನ್ನಡದಲ್ಲಿ ಇಂಗ್ಲಿಷಿನಷ್ಟೇ ಸಮರ್ಥವಾಗಿ ನಿರೂಪಿಸುವುದು ಸಾಧ್ಯ ಎಂಬುದಕ್ಕೆ ಪ್ರತ್ಯಕ್ಷ ಪುರಾವೆ. ಉದಾಹರಣೆಗೆ 'ಕನ್ನಡ ವಿಶ್ವಕೋಶ'ದಲ್ಲಿ 'ಪಾರ್ಸೆಕ್' ಲೇಖನ ಗಮನಿಸಬಹುದು:

"ನಕ್ಷತ್ರ ದೂರಗಳನ್ನು ಅಳೆಯಲು ಬಳಸುವ ಏಕಮಾನ. ಇಂಗ್ಲಿಷಿನ 'ಪ್ಯಾರಲ್ಯಾಕ್ಸ್' (ದಿಗಂತರ) ಮತ್ತು ಸೆಕೆಂಡ್ (೧ ಕೋನದ ೩,೬೦೦ನೆಯ ೧ ಅಂಶ) ಪದಗಳ ಸಮುಚ್ಚಯದಿಂದ ಪಾರ್ಸೆಕ್ ಪದ ವ್ಯುತ್ಪನ್ನವಾಗಿದೆ. . . ಭೂಕಕಕ್ಷೆಯ ಸರಾಸರಿ ತ್ರಿಜ್ಯವನ್ನು (೧ ಖಗೋಳಮಾನ) ಆಧಾರ ರೇಖೆಯಾಗಿ ಇರಿಸಿಕೊಂಡು ನಕ್ಷತ್ರಗಳ ದಿಗಂತರಗಳನ್ನು – ಈ ತ್ರಿಜ್ಯ ನಕ್ಷತ್ರಗಳಲ್ಲಿ ರಚಿಸುವ ಕೋನಗಳು – ಅಳೆಯಲಾಗಿದೆ. ದಿಗಂತರ ೧ ಇರುವ ನಕ್ಷತ್ರ ಭೂಮಿಯಿಂದ ೧ ಪಾರ್ಸೆಕ್ ದೂರದಲ್ಲಿದೆ ಎನ್ನುತ್ತೇವೆ.

೩. ರೂಢಪದಗಳಿಗೆ ಹೊಸ ಪಾರಿಭಾಷಿಕಾರ್ಥ ನೀಡಿಕೆ ಮತ್ತು ಕನ್ನಡದ ಜಾಯಮಾನಕ್ಕೆ ಒಗ್ಗುವಂತೆ ಪಾರಿಭಾಷಿಕ ಪದಗಳ ಸೃಷ್ಟಿ. ಉದಾಹರಣೆಗೆ ಈ ಮುಂದಿನ ವಿವಿಕ್ತ ವಾಕ್ಯಗಳನ್ನು ಗಮನಿಸಬೇಕು:

ಭೂಮಿ ಅಲ್ಲಿ ಮಡಿಕೆಯಾಗಿ (fold) ಹರಡಿಹೋಗಿತ್ತು. ಕಣಿವೆಯ ವಾಟ (gradient) ಕಡಿದಾಗಿತ್ತು. ಬೆಳಕು (light) ವಿದ್ಯುತ್ಕಾಂತ ಶಕ್ತಿಯ (electromagnetic energy) ಒಂದು ರೂಪ. (ಇಲ್ಲಿ ರೂಢ ಪದಗಳು ಪಾರಿಭಾಷಿಕಾರ್ಥಗಳಲ್ಲಿ ಪ್ರಯೋಗವಾಗಿವೆ.)

ಕೃಷ್ಣ ವಿವರದ (Black hole) ವಿಮೋಚನಾವೇಗ (escape velocity) ಬೆಳಕಿನ ವೇಗಕ್ಕಿಂತ ಅಧಿಕ. ಹೀಗಾಗಿ ಕೃಷ್ಣ ವಿವರದಿಂದ ಯಾವ ಬಗೆಯ ವಿಕಿರಣವೂ (radiation) ಹೊರಸೂಸದು. ಕಬ್ಬಿಣಕ್ಕೆ ತುಕ್ಕು ಹಿಡಿಯುವುದು ರಾಸಾಯನಿಕವಾಗಿ ಉತ್ಕರ್ಷಣ (oxidation) ಕ್ರಿಯೆಗೆ ಸಮಾನ. ಗುರುತ್ವ ವೇಗೋತ್ಕರ್ಷದ (acceleration due to gravity) ಬೆಲೆ ಸೆಕೆಂಡಿಗೆ ೯೮೧ ಸೆಮೀ. (ಇಲ್ಲಿ ನೂತನ ಪಾರಿಭಾಷಿಕ ಪದಗಳು ಪ್ರಯೋಗವಾಗಿವೆ.)

ಟ್ರಾನ್ಸಿಸ್ಟರ್, ಎಂಟ್ರೊಪಿ, ಪ್ಲಾಸ್ಮಾ, ಪ್ಯಾರಮೀಸಿಯಮ್ ಮುಂತಾದವು ಇಂಗ್ಲಿಷಿನಿಂದ ಲಿಪ್ಯಂತರಗೊಂಡು ಕನ್ನಡದ ಭಂಡಾರವನ್ನು ಶ್ರೀಮಂತಗೊಳಿಸಿರುವ ಪಾರಿಭಾಷಿಕ ಪದಗಳು.

೪. ಪದಗಳ ಅರ್ಥಗಳಲ್ಲಿ ಅಧಿಕ ನಿಖರತೆಯ ಸಾಧನೆ. ಉದಾಹರಣೆಗೆ ಇಂಗ್ಲಿಷಿನ discovery, invention, research, exploration, symbol, code, sign, signal, hardware, software ಪದಗಳು ಕನ್ನಡದಲ್ಲಿ ಅನುಕ್ರಮವಾಗಿ ಆವಿಷ್ಕಾರ, ಉಪಜ್ಞೆ, ಸಂಶೋಧನೆ, ಅನ್ವೇಷಣೆ, ಪ್ರತೀಕ, ಸಂಕೇತ, ಚಿಹ್ನೆ, ಸಂಜ್ಞೆ, ಯಂತ್ರಾಂಶ, ತಂತ್ರಾಂಶ ಎಂಬ ನಿರ್ದಿಷ್ಟ ಪದಗಳಿಂದ ಸೂಚಿತವಾಗಿರುವುದು ವಿಶ್ವಕೋಶಗಳ ಕೊಡುಗೆ. ಮೊದಲ ನಾಲ್ಕು ಇಂಗ್ಲಿಷ್ ಪದಗಳಿಗೆ ಸಂವದಿಯಾಗಿ 'ಕಂಡುಹಿಡಿ'ಯನ್ನೂ ತದನಂತರದ ನಾಲ್ಕು ಇಂಗ್ಲಿಷ್ ಪದಗಳಿಗೆ ಸಂವಾದಿಯಾಗಿ 'ಸಂಕೇತ'ವನ್ನೂ ಕೊನೆಯ ಎರಡು ಪದಗಳಿಗೆ ಸಂವಾದಿಯಾಗಿ 'ಗಡಸುಭಾಗ' ಮತ್ತು 'ಮೃದುಭಾಗ'ವನ್ನೂ ಬಳಸುವುದೇ ರೂಢಿ ಎಂಬುದನ್ನು ಗಮನಿಸಬೇಕು.

೫. ಭಾಷಾಸಂಸ್ಕರಣಕ್ರಿಯೆ ಎಂಬ ಶಿಸ್ತಿನ ಸ್ಥಾಪನೆ. ಹತ್ತು ಜನ ವಿದ್ವಾಂಸರು ವಿಷಯಗಳ ಮೇಲೆ ಹತ್ತು ವಿವಿಧ ಶೈಲಿಗಳಲ್ಲಿ ಉತ್ಕೃಷ್ಟ ಲೇಖನಗಳನ್ನು ಬರೆದಿರುವರೆಂದು ಭಾವಿಸೋಣ. ಇವನ್ನು ಒಂದೇ ಗ್ರಂಥದ ಒಳಗೆ ಅಳವಡಿಸುವುದು ನಮ್ಮ ಉದ್ದೇಶವಾದರೆ ಭಾಷಾಸಂಸ್ಕರಣಕ್ರಿಯೆ (vetting) ಇಲ್ಲಿ ಆಗಲೇಬೇಕಾದ ಅಗತ್ಯವಿಧಿ. ಸಂಪಾದನ ಕ್ರಿಯೆಯ ಮುಖ್ಯ ಅಂಗವಿದು. ಇದರ ಫಲವೇ ವಿಶ್ವಕೋಶದ 'ವ್ಯಕ್ತಿತ್ವ' – ಬಿಡಿ ಲೇಖಕರ ಅಥವಾ ಸಂಪಾದಕರ ವಿವಿಕ್ತ ವ್ಯಕ್ತಿತ್ವಗಳಿಂದ ಸಾಧಿಸಿರುವ ವಿಶಿಷ್ಟ ಏಕತ್ವ.

೬. ಸಮರ್ಥ ಲೇಖಕ ವೃಂದದ ಸೃಷ್ಟಿ.

೭. ಮುದ್ರಣ ಮತ್ತು ಚಿತ್ರವಿನ್ಯಾಸಗಳಲ್ಲಿ ಸಾಧಿಸಿರುವ ಶಿಷ್ಟತೆ.

೮. ಆಧುನಿಕ ಚಿಂತನೆಗಳಿಗೆ ನೇರ ಪ್ರವೇಶ. ಆಸಕ್ತ ವಾಚಕರಿಗೆ ಎಲ್ಲ ವಿಷಯಗಳಿಗೂ ಈ ಸಂಪುಟಗಳಲ್ಲಿ ಮಾತೃಭಾಷೆಯ ಸುಲಭ ಮಾಧ್ಯಮದ ಮೂಲಕ Encyclopaedia Britanicaದ ಅಥವಾ ಇತರ ಯಾವುದೇ ಇಂಗ್ಲಿಷ್ ವಿಶ್ವಕೋಶದ ಜೊತೆ ಹೋಲಿಸುವಾಗ ಊಹಾತೀತ ಅಗ್ಗ ಬೆಲೆಯಲ್ಲಿ ಒದಗುವುದೊಂದು ವಿಶೇಷ ಸೌಕರ್ಯ.

ಜ್ಞಾನದ ಸಂತತ ಪ್ರವಾಹದಲ್ಲಿ ವಿಶ್ವಕೋಶಗಳು ಅಣೆಕಟ್ಟುಗಳ ಪಾತ್ರ ನಿರ್ವಹಿಸುತ್ತವೆ. ಆಲ್ಲಿಯ ತನಕ ಹಲವು ಹನ್ನೊಂದು ಮೂಲಗಳಿಂದ ಹರಿದು ಬಂದಿರುವ ಜ್ಞಾನವನ್ನು ಒಂದೆಡೆ ಸಂಗ್ರಹಿಸಿ ಉಪಯುಕ್ತ ಕಾರ್ಯಗಳಿಗೆ ಒದಗಿಸುವ ರಚನಾತ್ಮಕ ಕಾರ್ಯವಿದು. ಇವನ್ನು ಜನ ವ್ಯಾಪಕವಾಗಿ ಉಪಯೋಗಿಸಿದರೆ, ಹೀಗೆ ಲಭಿಸಿದ ಅನುಭವದಿಂದ ಹೊಸದನ್ನು ನಿರ್ಮಿಸುವುದು ಸಾಧ್ಯ. ಇಲ್ಲವಾದರೆ ಇವು ನಿಂತು ನಾರುತ್ತವೆ. ಸದ್ಯ ಕನ್ನಡದಲ್ಲಿ ವಿಶ್ವಕೋಶ ನಿರ್ಮಾಣಕ್ಕೆ ಬುನಾದಿ ಪೂರ್ಣವಾಗಿದೆ. ಇದರ ಮೇಲೆ ಭವಿಷ್ಯದಲ್ಲಿ ಎಂಥ ಸೌಧ ನಿರ್ಮಿಸಲ್ಪಡುವುದೆಂಬುದು ಜನಜೀವನದ ಆಶೋತ್ತರಗಳನ್ನು ಅವಲಂಬಿಸಿದೆ.

೨೦೦೬ರಲ್ಲಿ ಸೇರಿಸಿದುದು: ಕನ್ನಡದ ಭವಿಷ್ಯ ಕುರಿತೇ ಸಂದೇಹ ಮೂಡಿರುವ ವರ್ತಮಾನ ದಿನಗಳಲ್ಲಿ ವಿಶ್ವಕೋಶ ನಿರ್ಮಾಣಕ್ಕೆ ಸಮರ್ಥ ಮತ್ತು ಬದ್ಧ ಕಾರ್ಯಕರ್ತರು ಲಭಿಸುತ್ತಿಲ್ಲ. ಜನರ ಹಾಗೂ ಸರ್ಕಾರದ ದೃಷ್ಟಿ ಧೋರಣೆಗಳು ವಿಕೃತಗೊಂಡಿರುವುದೆ ಇದರ ಕಾರಣ. ಇಂತಹಲ್ಲಿ ವಿಶ್ವಕೋಶದ ಭವಿಷ್ಯ ಖಂಡಿತ ಉಜ್ವಲವಾಗಿಲ್ಲ ಎಂದು ವಿಷಾದ ಸಹಿತ ಹೇಳಬೇಕಾಗಿದೆ.

ಎಂಎಸ್ಐಎಲ್ ಮಾಡಿದ ನೂತನ ಪ್ರಯೋಗ
ಅಧ್ಯಾಯ ೭೮

ಅಂದಾಜು ೧೯೭೪. ಅದೇ ಜೂನ್ ತಿಂಗಳ ಒಂದು ದಿನ ನಮ್ಮ ಮನೆಗಿಬ್ಬರು ಅಪರಿಚಿತರು ಬಂದರು. ಇವರಲ್ಲೊಬ್ಬ ಬೆಂಗಳೂರಿನಲ್ಲಿ ತತ್ಪೂರ್ವ ನನ್ನ ಶಿಷ್ಯ ಆಗಿದ್ದರಂತೆ, ಹೆಸರು ಜಯದೇವ. ಆದರೆ ನನಗೆ ಕೊಂಚವೂ ನೆನಪಿರಲಿಲ್ಲ. ಭವ್ಯ ಗಾತ್ರದ ಹಸನ್ಮುಖಿ ಮತ್ತು ಯಾವುದೇ ಸಾಹಸವನ್ನು ಪ್ರದರ್ಶಿಸಿ ಗೆಲ್ಲಬಲ್ಲೆನೆಂಬ ಆತ್ಮವಿಶ್ವಾಸವಿದ್ದಾತ. ಕಾಲೇಜ್ ವ್ಯಾಸಂಗಾನಂತರ ಎಂಎಸ್ಐಎಲ್ ಸಂಸ್ಥೆ ಸೇರಿದ್ದನೆಂದು ತಿಳಿಯಿತು. ಇವರ ಜೊತೆಗಿದ್ದ ತುಸು ಹಿರಿಯನ ಹೆಸರು ಪೀಟರ್ ಕೊಲಾಸೊ. ಇವರು ಆ ಸಂಸ್ಥೆಯ ಸಾರ್ವಜನಿಕ ಸಂಪರ್ಕಾಧಿಕಾರಿ. ಎಲ್ಲವೂ ನನಗೆ ಟಿಂಬಕ್ಟೂ ಭಾಷೆ!

ಅವರನ್ನೇ ಪ್ರಶ್ನಿಸಿ ತಿಳಿದುಕೊಂಡೆ ಆ ನಾಲ್ಕು ಅಕ್ಷರಗಳ ಬೀಜಮಂತ್ರದ ಮಹಿಮೆಯನ್ನು: Mysore Sales International Limited ಎಂಬುದೊಂದು ಸರ್ಕಾರಿ ಸ್ವಾಮ್ಯದ ಸ್ವಾಯತ್ತ ವಾಣಿಜ್ಯ ಸಂಸ್ಥೆ. ಇದರ ಹಲವಾರು ಯೋಜನೆಗಳ ಪೈಕಿ ವಿದ್ಯಾರ್ಥಿ ಆವಶ್ಯಕತೆಗಳಾದ ಲೇಖನ ಸಾಮಗ್ರಿಗಳ ತಯಾರಿಕೆ ಮತ್ತು ಸಗಟು ವ್ಯಾಪಾರ ಒಂದು. ಕಾಗದದ ಬೆಲೆ ತೀರ ತುಟ್ಟಿಯಾಗಿದ್ದ ಆ ದಿನಗಳಂದು ಎಂಎಸ್‌ಐಎಲ್ ರಂಗ ಪ್ರವೇಶಿಸಿ ಸಾದಿಲ್ವಾರು ರಂಗದಲ್ಲಿಯ ಕೊರತೆಯನ್ನು ನೀಗಿತ್ತು ಮತ್ತು ಗಮನಾರ್ಹ ಬೆಲೆ ನಿಯಂತ್ರಣ ಕೂಡ ಸಾಧಿಸಿ ವಿದ್ಯಾರ್ಥಿಗಳ ಪ್ರೀತಿ ಗಳಿಸಿತ್ತು. ಇವರ 'ಲೇಖಕ್' ಛಾಪಿನ ಲೇಖನ ಸಾಮಗ್ರಿಗಳು ಕರ್ನಾಟಕಾದ್ಯಂತ ಒಂದು ಕ್ರಾಂತಿಯನ್ನೇ ಸಾಧಿಸಿದ್ದುವು.

ಇವೆಲ್ಲ ವಿವರಗಳನ್ನು ತುಂಬ ಕುತೂಹಲದಿಂದ ಆಲಿಸಿದೆ. "ಹಿಂದೆ ಮಡಿಕೇರಿಯಲ್ಲಿ ಇಂಥದೊಂದು ಪ್ರಯೋಗವನ್ನು ನಮ್ಮ ಕಾಲೇಜಿನಲ್ಲಿ ಮಾಡಿದುದರ ನೆನಪಾಗುತ್ತಿದೆ. ಅದು ಹಾಗಿರಲಿ, ಈಗ ಇಲ್ಲಿ ನನ್ನಿಂದೇನು ನಿರೀಕ್ಷಿಸುತ್ತೀರಿ?" ಇವರೇಕೆ ಸುಂಕದವನ ಜೊತೆ ಇಷ್ಟೊಂದು ಸುಖ ದುಃಖ ಹಂಚಿಕೊಳ್ಳುತ್ತಿದ್ದಾರೆ ಎಂದು ನನಗೆ ಆಶ್ಚರ್ಯ.
ಪೀಟರ್ ದನಿಗೂಡಿಸಿದರು, "ಈಗ ನಿಮ್ಮಿಂದಲೇ ಮುಂದಿನ ಮಾರ್ಗಕ್ರಮಣವಾಗಬೇಕು. ಅಖಿಲ ಕರ್ನಾಟಕದ ಎಲ್ಲ ಪ್ರೌಢಶಾಲಾ ವಿದ್ಯಾರ್ಥಿಗಳಿಗೂ ಅನ್ವಯವಾಗುಂತೆ ಇದೇ ವರ್ಷಾಂತ್ಯದಲ್ಲಿ ನಾವೊಂದು 'ಲೇಖಕ್ ಸ್ಪರ್ಧೆ' ಏರ್ಪಡಿಸಬೇಕೆಂದು ನಿರ್ಧರಿಸಿದ್ದೇವೆ."

ಮುಂದಿನ ಪ್ರಶ್ನೋತ್ತರಗಳಿಂದ ಮೂಡಿದ ಚಿತ್ರವಿದು: ಈ ಸ್ಪರ್ಧೆಯಲ್ಲಿ ಎರಡು ಹಂತಗಳಿರಬೇಕು – ಲಿಖಿತ ಪರೀಕ್ಷೆ. ಇದರಲ್ಲಿ ಉತ್ತೀರ್ಣರಾದವರಿಗೆ ಮೌಖಿಕ ಸಂದರ್ಶನ. ಅತ್ಯಂತ ರಹಸ್ಯವಾಗಿಯೂ ನಿಷ್ಪಕ್ಷಿಕವಾಗಿಯೂ ನಿರ್ವಹಿಸಲ್ಪಡಬೇಕಾದ ಈ ಯೋಜನೆಯ ಕಾರ್ಯಸೂಚಿಯನ್ನೂ ಪ್ರಶ್ನಾಪತ್ರಿಕೆಯನ್ನೂ ನಾನು ಸಿದ್ಧಪಡಿಸಿಕೊಡಬೇಕು. ನನ್ನ ವಿಶ್ವಾಸಕ್ಕೆ ಪಾತ್ರರಾದ ಇತರ ವಿದ್ವಾಂಸರ ಸಹಾಯ ಪಡೆದುಕೊಳ್ಳಬಹುದು, ಎಲ್ಲರಿಗೂ ಗೌರವ ಸಂಭಾವನೆಯನ್ನು ಕಂಪೆನಿ ಕೃತಜ್ಞತಾಪೂರ್ವಕವಾಗಿ ಪಾವತಿಸುತ್ತದೆ, ಇತ್ಯಾದಿ.

ನಾನೆಂದೆ "ಇದು ನನ್ನ ಆಸಕ್ತ ಕ್ಷೇತ್ರವಲ್ಲ. ಬೆಂಗಳೂರಿನಲ್ಲಿಯೇ ಸಾಕಷ್ಟು ಮಂದಿ ಶಿಕ್ಷಣವೇತ್ತರಿದ್ದಾರೆ. ಅಲ್ಲೆ ಪ್ರಯತ್ನಿಸಿ."

ಜಯದೇವ, "ಆದರೆ ಅಲ್ಲೊಬ್ಬರು ಜಿಟಿ ನಾರಾಯಣರಾವ್ ಇಲ್ಲ! ಈ ಕೆಲಸ ನಿಮ್ಮಿಂದ ಆಗುತ್ತದೆ, ನಿಮ್ಮಿಂದಲೇ ಆಗಬೇಕು. ದಯವಿಟ್ಟು ಒಪ್ಪಿಕೊಳ್ಳಿ ಮತ್ತು ನಮ್ಮ ಕಡೆಯಿಂದ ನಿಮಗೇನು ಸಹಕಾರ ಬೇಕು ಎಂಬುದನ್ನು ಹೇಳಬೇಕು."

ಪ್ರಾಮಾಣಿಕವಾದ, ಅನೈತಿಕವಲ್ಲದ, ನನ್ನಿಂದ ಅಸಾಧ್ಯವಲ್ಲದ ಮತ್ತು ಸಾಮಾಜಿಕವಾಗಿ ಅನುಪಯುಕ್ತವಲ್ಲದ ಯಾವುದೇ ಹೊಸ ಸವಾಲು ಅಯಾಚಿತವಾಗಿ ಎದುರಾದಾಗ ವಿನಯಪೂರ್ವಕವಾಗಿ ಅದಕ್ಕೆ ಯುಕ್ತ ಜವಾಬು ಕೊಡಲು ಪ್ರಯತ್ನಿಸುವುದು ನನ್ನ ಸ್ವಭಾವ. ಒಪ್ಪಿಕೊಂಡೆ. ನನ್ನ ವಿಶ್ವಾಸಕ್ಕೆ ಪಾತ್ರರಾದ ಸನ್ಮಿತ್ರರ ನೆರವಿನಿಂದ ಲಿಖಿತ ಪರೀಕ್ಷೆಯ ಪ್ರಶ್ನಾಪತ್ರಿಕೆ, ಇದರ ಮುದ್ರಣ, ಉತ್ತರಪತ್ರಿಕೆಗಳ ಮೌಲ್ಯಮಾಪನ ಮುಂತಾದ ವಿವರಗಳನ್ನು ತಯಾರಿಸಿಕೊಟ್ಟೆ. ಕರ್ನಾಟಕದ ವಿವಿಧ ಜಿಲ್ಲಾ ಕೇಂದ್ರಗಳಲ್ಲಿಯೂ ಪ್ರಮುಖ ಶೈಕ್ಷಣಿಕ ಸಂಸ್ಥೆಗಳಲ್ಲಿಯೂ ಈ ಲಿಖಿತ

ಪರೀಕ್ಷೆಯನ್ನು ಒಂದೇ ದಿನ ಅದೇ ಅವಧಿಯಲ್ಲಿ ಎಂಎಸ್‌ಐಎಲ್ ನಡೆಸಿತು. ಭಾಗವಹಿಸಿದ ವಿದ್ಯಾರ್ಥಿಗಳ ಸಂಖ್ಯೆ ೨೫,೦೦೦ವನ್ನೂ ಮೀರಿತ್ತು!

ಇವುಗಳ ಯಾಂತ್ರಿಕ (ಅಂದು ಗಣಕವಿನ್ನೂ ರಂಗಪ್ರವೇಶಿಸಿರಲಿಲ್ಲ) ಮೌಲ್ಯಮಾಪನಾ ನಂತರ ಮೊದಲ ಸುಮಾರು ೨೫೦ ಪತ್ರಿಕೆಗಳನ್ನು ಅಂತಿಮ ತೀರ್ಮಾನಕ್ಕೆಂದು ನನಗೆ ಕಳಿಸಿದರು. ಇವುಗಳಲ್ಲಿಯ ಪ್ರಬಂಧಗಳನ್ನು ಓದಿ (ಇದನ್ನು ಯಾಂತ್ರಿಕವಾಗಿ ಮಾಡಲಾಗುವುದಿಲ್ಲ) ನಾನು ಮೊದಲ ಸುಮಾರು ೫೦ ಮಂದಿಯನ್ನು ಆಯಬೇಕಿತ್ತು. ಈ ಕೆಲಸದಲ್ಲಿ ಮಗ್ನನಾಗಿದ್ದಾಗ ಒಂದು ನಿರ್ದಿಷ್ಟ ಕೇಂದ್ರದಿಂದ ಬಂದ ಉತ್ತರ ಪತ್ರಿಕೆಗಳಲ್ಲಿಯ

ಪ್ರಬಂಧಗಳೆಲ್ಲವೂ ತದ್ರೂಪಿಗಳಾಗಿದ್ದುವು! ಇನ್ನೊಂದು ಕೇಂದ್ರದಿಂದ ಬಂದವೆಲ್ಲವೂ ಹಿಂದೆಂದೋ 'ಸುಧಾ' ಸಾಪ್ತಾಹಿಕದಲ್ಲಿ ಖುದ್ದು ನಾನೇ ಪ್ರಕಟಿಸಿದ್ದ ಜನಪ್ರಿಯ ವಿಜ್ಞಾನ ಲೇಖನವೊಂದರ ನಕಲುಗಳಾಗಿದ್ದುವು! ಎಲ್ಲಿವರೆಗೆಂದರೆ ಈ ಪ್ರಬಂಧಗಳ ಪೈಕಿ ಕೆಲವಲ್ಲಿ ನನ್ನ ಹೆಸರನ್ನು ಕೂಡ ಆ ವಿದ್ಯಾರ್ಥಿಗಳು ನಕಲು ಮಾಡಿದ್ದರು! ಉಭಯ ಸಂದರ್ಭಗಳಲ್ಲಿಯೂ ಆ ಎಲ್ಲ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳನ್ನು ರದ್ದು ಮಾಡಿದೆ. ಮುಂದಿನ ಸೂಕ್ಷ್ಮ ತಪಾಸಣೆಯಿಂದ ತಿಳಿದ ಸಂಗತಿ ಆಘಾತಕಾರಿಯಾಗಿತ್ತು. ತಮ್ಮ ಶಾಲೆಗಳಿಗೆ 'ಹೆಸರು' ಬರಬೇಕೆಂಬ ಸದಾಶಯದಿಂದ (?) ಸಾಕ್ಷಾತ್ ಉಪಾಧ್ಯಾಯರೇ ಉತ್ತರಗಳನ್ನು ಕರಿ ಹಲಗೆ ಮೇಲೆ ಬರೆಯುತ್ತಿದ್ದರಂತೆ! ನಿಜ, ಹರಕೊಲ್ಲಲ್ ಪರ ಕಾಯ್ವನೇ? ಪ್ರಾಮಾಣಿಕ ಮಾರ್ಗಗಮನದಲ್ಲಿ ಎದುರಾಗುವ ಒಂದೊಂದು ವೈಫಲ್ಯವೂ ಅಪ್ರಾಮಾಣಿಕ ವಿಧಾನದಿಂದ ಗಳಿಸುವ ಯಾವುದೇ ಯಶಸ್ಸಿಗಿಂತ ಶ್ರೇಷ್ಠವಲ್ಲವೇ?

ಅಂತಿಮವಾಗಿ ಉತ್ತೀರ್ಣರಾದ ಅಂದಾಜು ೫೦ ವಿದ್ಯಾರ್ಥಿಗಳನ್ನು ಎಂಎಸ್ ಐಎಲ್ ಸಂಸ್ಥೆ ಬೆಂಗಳೂರಿಗೆ ಆಹ್ವಾನಿಸಿ ಮೌಖಿಕ ಸಂದರ್ಶನ ಏರ್ಪಡಿಸಿತು. ನಿರ್ಣಾಯಕ ಮಂಡಳಿಯ ಸದಸ್ಯರನ್ನು ನಾವು ಮೂವರು (ಪೀಟರ್, ಜಯದೇವ ಮತ್ತು ನಾನು) ಪರ್ಯಾಲೋಚಿಸಿ ನಿರ್ಧರಿಸಿದೆವು. ವಿದ್ಯಾರ್ಥಿಯ ಆಸಕ್ತ ವಿಷಯ ಕುರಿತೇ ನಾವು ಸಾವಕಾಶವಾಗಿ ಮತ್ತು ಅನೌಪಚಾರಿಕವಾಗಿ ಮಾತು ಕತೆ ನಡೆಸಿ ಆತನ/ಆಕೆಯ ವ್ಯಕ್ತಿತ್ವವನ್ನು ಅಳೆಯುತ್ತಿದ್ದೆವು. ಆತನಿಗೆ ಎಷ್ಟು ಅಥವಾ ಏನು ಗೊತ್ತಿಲ್ಲ ಎಂಬುದನ್ನು ಪತ್ತೆಹಚ್ಚುವುದಲ್ಲ ಈ ಸಂದರ್ಶನದ ಉದ್ದೇಶ. ಬದಲು, ತಾನು ತಿಳಿದಿರುವುದರಲ್ಲಿ ಆತನ ಅರಿವು ಮತ್ತು ಅಭಿವ್ಯಕ್ತಿ ಕೌಶಲವೇನು ಎಂಬುದರ ಮಾಪನೆ ಮಾತ್ರ. ಮೊದಲ ಸ್ಥಾನ ಗಳಿಸಿದಾತನಿಗೆ 'ವರ್ಷದ ಲೇಖಕ್ ವಿದ್ಯಾರ್ಥಿ' ಎಂಬ ಬಿರುದು ಸಹಿತ ಮೌಲ್ಯಯುತ ಬಹುಮಾನವನ್ನೂ ಪ್ರದಾನಿಸಲಾಗುತ್ತಿತ್ತು. ಉಳಿದ ಭಾಗಿಗಳಿಗೆ ಯುಕ್ತ ಪಾರಿತೋಷಿಕಗಳನ್ನು ಕೊಡುತ್ತಿದ್ದರು. ಸಮಸ್ತ ಖರ್ಚು ವೆಚ್ಚಗಳನ್ನೂ ಸಂಸ್ಥೆ ಭರಿಸುತ್ತಿತ್ತು. ಹೀಗೆ ಆಯಾ 'ವರ್ಷದ ಲೇಖಕ್ ವಿದ್ಯಾರ್ಥಿ' ಶೋಧ ಮುಂದಿನ ಹತ್ತು ಹನ್ನೊಂದು ವರ್ಷ ಅವ್ಯಾಹತವಾಗಿ, ಪ್ರತಿವರ್ಷವೂ ನನ್ನ ಹಿರಿತನದಲ್ಲಿ, ಮುಂದುವರಿಯಿತು.

ಮುಂದಿನ ವರ್ಷಗಳಲ್ಲಿ ಲಿಖಿತ ಪರೀಕ್ಷೆಗಳಲ್ಲಿ ವ್ಯಾಪಕ ಸುಧಾರಣೆಗಳನ್ನು ತಂದೆವು. ಸಂದರ್ಶನ ಕೇಂದ್ರಗಳನ್ನು ಆಯಾ ವಲಯದ ವಿದ್ಯಾರ್ಥಿಗಳ ಸೌಕರ್ಯಾರ್ಥ ಕರ್ನಾಟಕದ ವಿವಿಧ ಕೇಂದ್ರಗಳಲ್ಲಿ ಏರ್ಪಡಿಸಿದೆವು. ಬೆಳಗಾವಿ, ಗುಲಬರ್ಗಾ, ಹುಬ್ಬಳ್ಳಿ, ಉಡುಪಿ, ಮಂಗಳೂರು, ತುಮಕೂರು, ಮಡಿಕೇರಿ, ಮೈಸೂರು ತುಂಗಭದ್ರಾ ಕಟ್ಟೆ ಮುಂತಾದವು. ಮಂಡಳಿಯ ಸದಸ್ಯರಾಗಿ ಸೇವೆ ಸಲ್ಲಿಸಿದ ಕೆಲವು ಗಣ್ಯರ ಹೆಸರುಗಳು ನೆನಪಿನಲ್ಲಿವೆ. ಎ.ಎನ್. ಮೂರ್ತಿರಾವ್, ಗೋಪಾಲಕೃಷ್ಣ ಅಡಿಗ, ಕುಶಿ ಹರಿದಾಸ ಭಟ್ಟ, ಎಚ್ಚೆಸ್ಕೆ, ಯು. ಆರ್. ಅನಂತಮೂರ್ತಿ, ಜೆ. ಆರ್. ಲಕ್ಷ್ಮಣರಾವ್, ಕೆ.ಬಿ. ಸದಾನಂದ, ಹಾ.ಬ. ದೇವರಾಜ ಸರ್ಕಾರ್ ಮೊದಲಾದವರು. ಇಂಥ ಒಂದು ಬೈಠಕ್ಕಿನಲ್ಲಿ ಹೊಸತೊಂದು ಹೊಳಹು ಮಿನುಗಿತು. ಅದೇನೆಂಬುದು ಮುಂದಿನ ಅಧ್ಯಾಯದ ವಸ್ತು.

ಬೀರಿತು ಪರಿಮಳ 'ಪಾವೆಂ ಕಸ್ತೂರಿ'
ಅಧ್ಯಾಯ ೭೯

೧೯೭೬ರ ಕೊನೆಯ ಪಾದದಲ್ಲಿ ಆ ವರ್ಷದ 'ಲೇಖಕ್' ಬೈಠಕ್ಕು. ಎಂಎಸ್‌ಐಎಲ್ ನವರ ಬೆಂಗಳೂರು ಕಚೇರಿಯಲ್ಲಿ ಸಂದರ್ಶಕ ಮಂಡಳಿಯ ನಾವು ಕೆಲವರು – ಗೋಪಾಪಕೃಷ್ಣ ಅಡಿಗ, ಎಚ್ಚೆಸ್ಕೆ, ಯು. ಆರ್. ಅನಂತಮೂರ್ತಿ, ಕುಶಿ ಹರಿದಾಸ ಭಟ್ಟ ಮೊದಲಾದವರು – ವಿರಾಮದ ವೇಳೆ ಹರಟೆ ಹೊಡೆಯುತ್ತಿದ್ದೆವು. ಆಗ ಅಡಿಗರು ಪಾವೆಂ ಎಂಬ ಮಾನವ ಬೃಹಸ್ಪತಿಯ ಪ್ರಸ್ತಾವನೆ ಎತ್ತಿದರು. ಪಾಡಿಗಾರು ವೆಂಕಟರಮಣ ಆಚಾರ್ಯರ ಅಸಂಖ್ಯ 'ಕಾವ್ಯಾವತಾರಗಳ' ಪೈಕಿ ಪಾವೆಂ ಪ್ರಸಿದ್ಧವಾದದ್ದು. ಸ್ವಂತ ಪ್ರತಿಭೆ, ಪರಿಶ್ರಮ ಮತ್ತು ವಿಶಾಲದೃಷ್ಟಿಗಳ ಫಲವಾಗಿ ಬಹುಶ್ರುತತ್ವ ಗಳಿಸಿದ ವೃತ್ತಿ ಪತ್ರಿಕೋದ್ಯಮಿ ಇವರು. ಮೊದಲು 'ಕರ್ಮವೀರ'ದ ಸಂಪಾದಕ ವಿಭಾಗದಲ್ಲು ದುಡಿದು, ಬೆಳೆದು, ಮುಂದೆ 'ಕಸ್ತೂರಿ'ಯ ಸ್ಥಾಪಕ ಸಂಪಾದಕರಾಗಿ ಅದಕ್ಕೆ ಅಂತಾರಾಷ್ಟ್ರೀಯ ಮನ್ನಣೆ ಗಳಿಸಿಕೊಟ್ಟ ಪತ್ರಿಕಾ ಪ್ರಪಂಚದ ಭೀಷ್ಮಾಚಾರ್ಯರಿವರು. ಪ್ರಪಂಚದಾದ್ಯಂತ ನವಲೇಖಕರನ್ನು ಪತ್ತೆ ಹಚ್ಚಿ ಪುರಸ್ಕರಿಸಿ ಸಿದ್ಧ ಪ್ರಸಿದ್ಧ ಲೇಖಕರನ್ನಾಗಿ ದ್ರವ್ಯಾಂತರಿಸಿದ (transmute) ಸ್ಪರ್ಶ ಮಣಿಯೂ ಹೌದು. ಇಂಥವರ ಸಾಲಿಗೆ ನನ್ನನ್ನೂ ಹೇಗೆ ಇವರು ತಮ್ಮ ಪ್ರೀತಿಯ ಬಲದಿಂದ ಸೇರಿಸಿದರೆಂಬ ಸಂಗತಿಯನ್ನು ಹಿಂದೆ (ಅಧ್ಯಾಯ ೨೨) ಹೇಳಿದ್ದೇನೆ.



ಇಸವಿ ೨೦೦೧ರಲ್ಲಿ ಪ್ರಕಟವಾದ 'ವಿಜ್ಞಾನ ಸಪ್ತರ್ಷಿಗಳು' ಎಂಬ ನನ್ನ ಪುಸ್ತಕವನ್ನು ಇವರಿಗೆ ಅರ್ಪಿಸುತ್ತ ಬರೆದೆ: "ನನ್ನ ಕಾಲೇಜ್ ದಿನಗಳಂದು (೧೯೪೨–೪೭) ಎಲ್ಲ ಹುಡುಗರಂತೆ ನಾನಾದರೂ ಮೊದಲು ದೊಂಬರಲಾಗ ಹೊಡೆದದ್ದು ಕಗ್ಗ ಗೀಚಿಕೆಯ ಮತ್ತು ಬರಿಸುವ ದೊರಗು ನೆಲದಲ್ಲಿ. ಮುಂದೆ ಹುಚ್ಚಾಟವಾಡಿದ್ದು ಸಣ್ಣ ಕತೆಗಳ ಮಾಯಾಲೋಕದಲ್ಲಿ. ಆದರೆ ಶೀಘ್ರದಲ್ಲೇ ಭ್ರಮನಿಸರಸನಗೊಂಡು ಆ ಕ್ಷೇತ್ರಗಳಿಂದ ಕಂಬಿಕಿತ್ತು ಜನಪ್ರಿಯ ವಿಜ್ಞಾನ ವಾಙ್ಮಯ ರಚನೆಯ ಸಾಹಸಕ್ಕೆ ಕೈ ಹಾಕಿದೆ (೧೯೪೯). ನನ್ನ ಮೊದಲ ಲೇಖನವೇ – ಆ ಹಿಂದಿನ ಕವನ ಕತೆಗಳಂತಲ್ಲದೆ, 'ಕರ್ಮವೀರ'ದಲ್ಲಿ ಪ್ರಕಟಣೆಗೆ ಸ್ವೀಕೃತವಾಗಿತ್ತು. ಎಲ್ಲಕ್ಕೂ ಮಿಗಿಲಾಗಿ ಖುದ್ದು ಸಂಪಾದಕರೇ ನನಗೆ ಕಾಗದ ಬರೆದು, ಮುಂದೊಂದು ದಿನ ನನ್ನನ್ನು ಭೇಟಿಯಾಗಿ, ನನ್ನ ಪ್ರಯೋಗದ ನಾವೀನ್ಯವನ್ನು ಮೆಚ್ಚಿದರು. ಈ ಅಪ್ರಸಿದ್ಧ ಮತ್ತು ಅನಾಮಧೇಯ ತರುಣನನ್ನು (ವಯಸ್ಸು ೨೩) ಹೀಗೆ ಬೆನ್ನು ತಟ್ಟಿ ಹುರಿದುಂಬಿಸಿದವರು ಕನ್ನಡದ ಹಿರಿಯ ಪತ್ರಿಕೋದ್ಯಮಿ, ಪ್ರಖರ ವಿಚಾರಮತಿ ಮತ್ತು ಪ್ರಸಿದ್ಧ ಲೇಖಕ ಪಾ.ವೆಂ ಆಚಾರ್ಯರು (೧೯೧೫–೯೧). ಸ್ವತಃ ಉತ್ತಮ ಕವಿ – ಲೇಖಕರೂ ನವ ಪ್ರತಿಭೆಗಳಿಗೆ ಪ್ರೋತ್ಸಾಹವಿತ್ತು ಮಾರ್ಗದರ್ಶನ ಮಾಡಿ ಯುವ ಲೇಖಕರ ಪೀಳಿಗೆಯ ನಿರ್ಮಾಪಕರೂ ಆಗಿದ್ದ ಶ್ರೀಯುತರಿಗೆ ಈ ಪುಸ್ತಕವನ್ನು ಗೌರವಸಹಿತವಾಗಿ ಅರ್ಪಿಸುವುದು ನನಗೆ ಬಲು ಪ್ರಿಯವಾದ ಕೆಲಸ."

ಪಾವೆಂ ಪೆಸರ್ ಕೇಳಿ ಬಲ್ಲೆಯೇಂ? ಪರಿಶುದ್ಧ
ಜೀವನಕೆ ತಾಣವನ್, ಕರ್ತವ್ಯ ಮೇರವನ್,
ಸೇವಾಪರಾಯಣನ್, ಪರಗುಣೋತ್ತೇಜಕನ್
ಭಾವಪ್ರಪಂಚದಾ ಮಾಂತ್ರಿಕನ್ ಅತ್ರಿಸೂನು

ಈಗ ಬೈಠಕ್ಕಿಗೆ ಮರಳೋಣ. ಅಡಿಗರು ಮುಂದುವರಿಸಿದರು, "ಈಚೆಗೆ ಅವರನ್ನು ನೋಡಿದ್ದೆ. ತುರ್ತು ಶಸ್ತ್ರಕ್ರಿಯೆಯಾಗಿ ಸಾವು–ಬದುಕು ನಡುವೆ ಹೋರಾಟ ನಡೆಸಿ ಜೀವಚ್ಛವವಾಗಿ ಮರಳಿದ್ದಾರೆ. ಆದರೆ ಅದೇ ಹಿಂದಿನ ತೀಕ್ಷ್ಣ ಬುದ್ಧಿಮತ್ತೆ, ಸುಹಾಸಪ್ರಜ್ಞೆ ಮತ್ತು ಸದಾಶಯ ಅವರಲ್ಲಿ ಜೀವಂತವಾಗಿವೆ. ಆರ್ಥಿಕವಾಗಿಯೂ ಸೋತು ಹೋಗಿರುವಂತೆ ತೋರುತ್ತದೆ. ಇಂತಿದ್ದರೂ ಆತಿಥ್ಯ ಉಪಚಾರಗಳಲ್ಲಿ ಎಂದಿನಂತೆ 'ವಿನಾ ದೈನ್ಯೇನ ಜೀವನಂ' ನಡೆಸುತ್ತಿರುವ ಆತ್ಮ ಪ್ರತ್ಯಯವಂತ. ಇಡೀ ಸಮಾಜ ಅವರ ಜೊತೆಗಿದೆ, ಅವರ ಬಹುಮುಖ ಸೇವೆಯನ್ನು ಮೆಚ್ಚಿ ಅವರಿಗೆ ಕೃತಜ್ಞವಾಗಿದೆ ಎಂಬ ಭರವಸೆಯನ್ನು ಅವರಿಗೆ ನಾವೀಗ ಸಾರ್ವಜನಿಕವಾಗಿ ವ್ಯಕ್ತಪಡಿಸುವುದು ಜರೂರಿನ ಅಗತ್ಯ. ಏನು ಮತ್ತು ಹೇಗೆ ಮಾಡೋಣ?"

ನಮ್ಮ ಸಮಿತಿಯ ಯುವಮಿತ್ರ ಮತ್ತು ಕಾರ್ಯದಕ್ಷ ಜಯದೇವ ಹೇಳಿದರು, "ನಾನವರನ್ನು ನೋಡಿಲ್ಲ. ಆದರೆ ಅವರ ವಿವಿಧ ಸಾಹಿತ್ಯ ಮುಖಗಳ ನಿಕಟ ಪರಿಚಯ ನನಗುಂಟು. ಅವರಿಗೊಂದು ಸಾರ್ವಜನಿಕ ಸನ್ಮಾನ ಏರ್ಪಡಿಸೋಣ, ನಮ್ಮ ಸಂಸ್ಥೆಯ ಮತ್ತು ವೈಯಕ್ತಿಕವಾಗಿ ನನ್ನ ಕಡೆಯಿಂದ ಪೂರ್ಣ ಸಹಕಾರ ಆಶ್ವಾಸಿಸುತ್ತೇನೆ. ನಿರ್ವಹಣೆಯ ಬಗೆಯನ್ನು ನಮ್ಮ ಜಿಟಿಎನ್‌ಸರ್ ವಿವರಿಸಬೇಕು."

'ಕನ್ನಡದಲಿ ಹರ ತಿರಿಯುವನು' – ಇದು ನನ್ನ ಬದುಕಿನ ಒಂದು ಮಂತ್ರ. ನಾನೆಂದೆ, "ಸನ್ಮಾನ, ಪ್ರಶಸ್ತಿ, ಪ್ರಚಾರ ಎಲ್ಲ ಸರಿ. ಆದರೆ ಮುಖ್ಯವಾಗಿ ಅವರಿಗೊಂದು ಹಿರಿ ಸಂಚಿಯನ್ನು ಒಪ್ಪಿಸುವುದು ನಮ್ಮ ಧ್ಯೇಯವೆಂದಿಟ್ಟುಕೊಂಡು ಮುನ್ನಡೆಯೋಣ. ಖುದ್ದು ಅಡಿಗರ ಅಧ್ಯಕ್ಷತೆಯಲ್ಲಿ 'ಪಾವೆಂ ಸನ್ಮಾನ ಸಮಿತಿ'ಯನ್ನು ಸ್ಥಾಪಿಸಿ ಮುನ್ನಡೆಯೋಣ." ಮುಂದೆ ನಡೆದ ಚರ್ಚೆಯ ಫಲಶ್ರುತಿಯಾಗಿ ನಾನು ಆ ಸಮಿತಿಯ ಸಂಘಟನ–ಕಾರ್ಯದರ್ಶಿ ಮತ್ತು ಕೋಶಾಧಿಕಾರಿಯಾಗಿಯೂ ಜಯದೇವ ಜಾಹೀರಾತು–ಕಾರ್ಯದರ್ಶಿಯಾಗಿಯೂ ಇತರ ಪಾವೆಂ–ಅಭಿಮಾನೀಗಣ್ಯರು ಸದಸ್ಯರಾಗಿಯೂ ಇರಬೇಕೆಂದು ತೀರ್ಮಾನಿಸಲಾಯಿತು.

'ನಾಮದ ಬಲ' ಎಂದರೇನೆಂಬುದು ಆಗ ನಮಗೆ ಸುವೇದ್ಯವಾಯಿತು. ಪಾವೆಂ – ನಾಮದ ಸುತ್ತಲಿನ ಪರಿವೇಶ ಅಂಥ ಉಜ್ವಲತೆ ಪಡೆದಿತ್ತು ಎಂಬುದರ ಅರಿವು ನಮಗಾದದ್ದು ಅಕ್ಷರಶಃ ಪ್ರಪಂಚಾದ್ಯಂತ ನಮಗೆ ಲಭಿಸಿದ ಬೆಂಬಲದಿಂದ. ದೇಣಿಗೆ ಮತ್ತು 'ಪಾವೆಂ ಕಸ್ತೂರಿ' ಸವಿಸಂಚಿಕೆಯಲ್ಲಿ ಜಾಹೀರಾತು ಶುಲ್ಕ ಈ ಮೂಲಗಳಿಂದ ಸಂಗ್ರಹಿಸಿದ ಸುಮಾರು ರೂ ೨೭,೦೦೦ವನ್ನು ದಿನಾಂಕ ೧೦–೯–೧೯೭೭ರಂದು ಮೈಸೂರಿನಲ್ಲಿ ಅವರಿಗೆ ಸಾರ್ವಜನಿಕವಾಗಿ ಅರ್ಪಿಸಿ ಕೃತಕೃತ್ಯರಾದೆವು.

ಇನ್ನು 'ಲೇಖಕ್' ಕತೆ. ೧೯೭೨ರ ತನಕವೂ ಎಂಎಸ್‌ಐಎಲ್ ವಾರ್ಷಿಕ 'ಲೇಖಕ್' ಪರೀಕ್ಷೆ ನನ್ನ ಹಿರಿತನದಲ್ಲೇ ಮುಂದುವರಿಯಿತು. ಅಷ್ಟರಲ್ಲಿ ಸಂಸ್ಥೆಯೂ ನಾನೂ ಸ್ವತಂತ್ರವಾಗಿ ಆದರೆ ವಿಭಿನ್ನ ಕಾರಣಗಳಿಗಾಗಿ ಈ ಶೈಕ್ಷಣಿಕ ವ್ಯವಹಾರವನ್ನು ನಿಲ್ಲಿಸುವ ತೀರ್ಮಾನಕ್ಕೆ ಬಂದಿದ್ದೆವು. ಸಂಸ್ಥೆಯ ಆಡಳಿತ ಮಂಡಳಿಯಲ್ಲಿ ಬದಲಾವಣೆಗಳಾಗಿ ನೂತನ ವ್ಯವಸ್ಥಾಪನೆ ಈ ಪರೀಕ್ಷೆಯನ್ನು ಕೈದು ಮಾಡಿತು. ಇತ್ತ ನಾನು ಈ ಪುನರಾವರ್ತನೆ 'ಡ್ರಿಲ್'ನಿಂದ ಸೋತಿದ್ದೆ: ಎಲ್ಲಿ ಕೆಲಸ ಸಿದ್ಧ ವಿಧಿನಿಯಮಗಳ ಪುನರಾವರ್ತನೆ ಆಗುವುದೋ ಅಲ್ಲಿ ಸೃಜನಶೀಲತೆ ಎಂಬ ಒರತೆ ಇಲ್ಲದ ಸಾಹಸ ಪ್ರದರ್ಶನ ಕೇವಲ ಶುಷ್ಕ ಆಗುತ್ತದೆ.

ಅಂದು ಜ್ಞಾನದ ನವಕ್ಷೇತ್ರಗಳ ಶೋಧನೆ, ಯುವಪ್ರತಿಭೆಗಳ ಜೊತೆಗಿನ ಒಡನಾಟ ಮತ್ತು ಕರ್ನಾಟಕದ ವಿವಿಧ ಪ್ರೇಕ್ಷಣೀಯ ತಾಣಗಳಲ್ಲಿಯ ವಾಸ್ತವ್ಯ ಎಲ್ಲವೂ ಒದಗಿಸಿದ ಅನುಭವ ಮಧುರ, ಅದರ ನೆನಪು ಮಧುರತರ. ಕೀಟ್ಸ್ ಕವಿಯ heard melodies are sweet, but those unheard are sweeter ಎಂಬ ಸಾಲುಗಳನ್ನು ಡಿವಿಜಿಯವರು ಈ ಮುಂದಿನಂತೆ ಭಾವಾನುವಾದಿಸಿದ್ದಾರೆ: "ಶ್ರುತಗಾನಮಭಿರಾಮಮಶ್ರುತಗಾನಮಭಿರಾಮತರಂ."

ನಾವು ಮಾಡಿಸಿದ ಒಂದು ಮದುವೆ
ಅಧ್ಯಾಯ ೮೦

ಆ ಶುಭ ಪ್ರಾತಃಕಾಲ ಅಧ್ಯಯನ ಸಂಸ್ಥೆಯಲ್ಲಿಯ ನನ್ನ ಕೊಠಡಿಗೊಬ್ಬ ವ್ಯಕ್ತಿ ಬಂದರು. ಹೆಚ್ಚುಕಡಿಮೆ ನನ್ನದೇ ವಯಸ್ಸು. ಅವರು ಕೊಡವರೆಂಬುದು (ಕೊಡಗಿನ ಮೂಲನಿವಾಸಿಗಳನ್ನು ಕೊಡವರೆಂದೂ ಉಳಿದವರನ್ನು, ಉದಾಹರಣೆಗೆ ನನ್ನಂಥವರನ್ನು, ಕೊಡಗರೆಂದೂ ಹೇಳುವುದು ವಾಡಿಕೆ) ಅವರ ಭವ್ಯ ಬಾಹ್ಯ ಸ್ವರೂಪ ಎದ್ದು ತೋರಿಸುತ್ತಿತ್ತು. ನನಗವರು ಸಾಷ್ಟಾಂಗ ನಮಸ್ಕಾರ ಅರ್ಪಿಸಿದಾಗ ತುಂಬ ಮುಜುಗರವಾಯಿತು. ಕೊಡವರ ಸಂಪ್ರದಾಯದಲ್ಲಿ ಗುರು ಹಿರಿಯರಿಗೂ ಬ್ರಾಹ್ಮಣರಿಗೂ ಹೀಗೆ ಗೌರವ ಸಲ್ಲಿಸುತ್ತಿದ್ದುದು ವಾಡಿಕೆ. ಎರಡೂ ಅಲ್ಲದ ನನಗೇಕೆ ಈ ಗೌರವ? (ಹುಟ್ಟಿನ ಮತ್ತು/ಅಥವಾ ವೃತ್ತಿಯ ಆಕಸ್ಮಿಕತೆಯಿಂದ ವ್ಯಕ್ತಿಗೆ ಈ ಹಿರಿಮೆ ಪ್ರಾಪ್ತವಾಗುವುದಿಲ್ಲ.) ಆ ಗಳಿಗೆ ಅವರು ಯಾರೆಂಬುದು ಹೊಳೆಯಿತು. ಮನಸ್ಸು ಮಡಿಕೇರಿ ದಿನಗಳಿಗೆ ಚಿಮ್ಮಿತು. ಅವರ ಹೆಸರು ಅಪ್ಪಯ್ಯ, [ವಿಸೂ: ಈ ಪ್ರಸಂಗದ ಎಲ್ಲ ಹೆಸರುಗಳನ್ನೂ ಬದಲಿಸಲಾಗಿದೆ – ಅವ] ನಮ್ಮ ಮನೆ ಎದುರಿನ ಸಾಲಿನಲ್ಲಿ ಅವರ ಸ್ವಂತ ಬಿಡಾರ, ಅವರ ಹೆಂಡತಿಗೂ ನನ್ನ ಹೆಂಡತಿಗೂ ನಡುವೆ ಗಾಢ ವಿಶ್ವಾಸ ಮೈದಳೆದಿತ್ತು. ನಮ್ಮ ಮಕ್ಕಳು ಒಟ್ಟಿಗೆ

ಆಡಿ ಓಡಿ ಓದಿ ಬೆಳೆದಿದ್ದರು ಕೂಡ. ವೃತ್ತಿಯಲ್ಲಿ ಅಪ್ಪಯ್ಯ ಬಾಡಿಗೆ ಕಾರ್ ಮಾಲಿಕ ಮತ್ತ ಚಾಲಕ. ನನ್ನ ಸಂಸಾರ ಮಡಿಕೇರಿ ಬಿಟ್ಟ (೧೯೬೩) ಬಳಿಕ ನಮ್ಮ ಪತ್ನಿಯರ ನಡುವೆ ಆಗ ಈಗ ಪತ್ರ ವ್ಯವಹಾರ ನಡೆಯುತ್ತಿತ್ತು. ಅವರು ಆರ್ಥಿಕವಾಗಿ ಸಂಕಷ್ಟಗಳಲ್ಲಿ ಸಿಕ್ಕಿಹಾಕಿಕೊಂಡಿದ್ದರೆಂದು ತಿಳಿದು ನೊಂದಿದ್ದೆ.

ನಾನೇ ಮಾತು ಶುರುಮಾಡಿದೆ, "ತೀರ ಅನಿರೀಕ್ಷಿತ ನಿಮ್ಮ ಭೇಟಿ. ನೀವೆಲ್ಲರೂ ಆರೋಗ್ಯವೇ? ಮೈಸೂರಿಗೆ ಯಾವಾಗ ಬಂದಿರಿ? ಏನು ವಿಶೇಷ?"

"ಬಹಳ ಕಷ್ಟದಲ್ಲಿದ್ದೇನೆ ಸ್ವಾಮಿ. ಮನೆ ಮಾರಿದೆ. ಟ್ಯಾಕ್ಸಿ ಮಾರಿ ಬಾಡಿಗೆ ಲಾರಿ ಕೊಂಡು ಓಡಿಸಿದೆ. ಅಲ್ಲಿಯೂ ನಷ್ಟವೇ. ಮಕ್ಕಳೆಲ್ಲ ದೊಡ್ಡವರಾಗಿದ್ದಾರೆ. ಅವರ ಶಿಕ್ಷಣ ಮುಂದುವರಿಯಲೇಬೇಕು. ದಿಕ್ಕು ತೋಚಲಿಲ್ಲ. ಹೆಂಡತಿ ಹೇಳಿದಳು 'ನಂಗಡ ದೇವ' ಸ್ವಾಮಿಯವರನ್ನು ನೋಡಿ ಬನ್ನಿ ಎಂದು. ಹಾಗೆ ಬಂದಿದ್ದೇನೆ. ನೀವು ನಮ್ಮ ದೇವರು, ನೀವೇ ಕಾಪಾಡಬೇಕು."

"ನಾನು ದೇವರಲ್ಲ, ಕೇವಲ ಸಾಮಾನ್ಯ ಮನುಷ್ಯ. ಇದು ಹಾಗಿರಲಿ. ಈಗ ನನ್ನಿಂದ ನೀವೇನು ಸಹಾಯ ನಿರೀಕ್ಷಿಸುತ್ತೀರಿ?"

"ಕೆಸ್ಆರ್‌ಟಿಸಿಯಲ್ಲಿ ಒಂದು ಡ್ರೈವರ್ ಕೆಲಸ ಕೊಡಿಸುವ ಕೃಪೆ ಮಾಡಬೇಕು. 'ನಂಗಡ ದೇವ'ರಿಗೆ ಇದು ಖಂಡಿತ ಸುಲಭ."

ಅವರ ಮುಗ್ಧ ನಂಬಿಕೆ ಅರ್ಥವಾಯಿತು. ಆದರೆ ಆ ಡ್ರೈವರ್ ಹುದ್ದೆ ದೊರಕಿಸಲು ನಾನೇನು ರಾಜಕಾರಣಿಯೇ, ಕುಬೇರನೇ, ಉಚ್ಚ ಅಧಿಕಾರಿಯೇ, ಪ್ರಭಾವೀ ವ್ಯಕ್ತಿಯೇ? ಇನ್ನು ಈ ವ್ಯವಹಾರ ಜಗತ್ತಿನಲ್ಲಿ ಲಂಚದ ಆಟ ಏನೆಂಬುದು ಓದಿ ಕೇಳಿ ಗೊತ್ತಿತ್ತು. ಇಂಥ ಕರಾಳ ಪರಿಸರದಲ್ಲಿ ಈ ಮುಗ್ಧನಿಗೆ ಕೆಸ್ಆರ್‌ಟಿಸಿಯಲ್ಲಿ ಹುದ್ದೆ!? ಅದೂ ನನ್ನಂಥ ಬೋಳೆ ಮನುಷ್ಯನಿಂದ! ವಸ್ತು ಸ್ಥಿತಿಯನ್ನು ಅವರಿಗೆ ವಿವರಿಸಿ ನನ್ನ ಪೂರ್ಣ ಅಸಹಾಯಕತೆಯನ್ನು ಸೂಚಿಸಿದೆ. ಅವರ ಪಲ್ಲವಿ ಒಂದೇ, "ನೀವು ನಮ್ಮ ದೇವರು. ನಿಮ್ಮಿಂದ ಮಾತ್ರ ಇದು ಸಾಧ್ಯ."

ಅವರ ದೈನ್ಯ ನನ್ನಲ್ಲಿ ಹೊಸ ಹೊಳಹನ್ನು ಮಿಂಚಿಸಿತು, ದೂರವಾಣಿ ಎತ್ತಿಕೊಂಡೆ, ಮೈಸೂರಿನ ಕೆಎಸ್ಆರ್‌ಟಿಸಿ ಮುಖ್ಯಸ್ಥರಿಗೆ ಕರೆಕೊಟ್ಟೆ. ಅವರ ಪ್ರತಿಸ್ಪಂದನ ರಿಂಗಣಿಸಿದಾಗ ಮಾಮೂಲಿನಂತೆ ನನ್ನ ಪ್ರವರ ಹೇಳಿದೆ, "ನಮಸ್ಕಾರ ಸ್ವಾಮಿ! ನಾನು ಜಿ.ಟಿ.ನಾರಾಯಣರಾವ್ ಮಾತಾಡುತ್ತಿದ್ದೇನೆ...."

"ಸಾರ್! ಏನು ಆಶ್ಚರ್ಯ, ಎಷ್ಟು ಸಂತೋಷ! ಸಾರ್! ನೀವು ನನ್ನ ವಿಜ್ಞಾನಗುರುಗಳು ಮತ್ತು ಎನ್‌ಸಿಸಿ ಆಫೀಸರ್ ಗ್ಯಾಸ್ ಕಾಲೇಜಿನಲ್ಲಿ. ನನ್ನ ಹೆಸರು ಭೀಮಪ್ಪ ನಾಯಕ. ನನ್ನಿಂದೇನಾಗಬೇಕು ಸಾರ್?" (ಅಧ್ಯಾಯ ೩೦ ನೋಡಿ)

ನನ್ನ ನಾಸ್ತಿಕ ಮನಸ್ಸು ಅಣಕಿಸಿತು, "ಈಗಲಾದರೂ ದೇವರಿದ್ದಾನೆಂದು ಒಪ್ಪುವೆಯಾ?"

"ಅಣ್ಣಾ ಭೀಮಪ್ಪ ನಾಯಕ! ನಿಮ್ಮಿಂದಲೇ ಈಗ ಆಗಬೇಕಾದ ಸಹಾಯವಿದು. ನನ್ನ ಒಬ್ಬ ಹಳೆಯ ಮಿತ್ರನನ್ನು ನಿಮ್ಮಲ್ಲಿಗೆ ಕಳಿಸುತ್ತಿದ್ದೇನೆ. ಅವರಿಗೆ ಕೆಎಸ್ಆರ್‌ಟಿಸಿಯಲ್ಲಿ ಡ್ರೈವರ್ ಕೆಲಸ ದಯವಿಟ್ಟು ಕೊಡಬೇಕು. ಲೈಸೆನ್ಸ್ ವಗೈರೆ ಅಗತ್ಯಗಳು ಅವರ ಬಳಿ ಇವೆ."

"ಬರಲಿ ಸಾರ್. ನಿಮ್ಮ ಆಜ್ಞೆಯನ್ನು ಪಾಲಿಸುತ್ತೇನೆ."

ಅದೇ ಸಂಜೆ ಅಪ್ಪಯ್ಯ ಹುದ್ದೆ ಆದೇಶ ಹಿಡಿದು ನಮ್ಮ ಮನೆಗೆ ಬಂದರು. ಅವರಿಗೆ ಶುಭವಿದಾಯ ಹೇಳಿ ನನ್ನ ಎನ್‌ಸಿಸಿ ಸಮವಸ್ತ್ರಗಳನ್ನಿತ್ತು ಕಳಿಸಿದೆ.

ಕೆಲವು ವರ್ಷಗಳು ಸಂದುವು. ನಮ್ಮ ಹೆಂಡಿರ ನಡುವೆ ಪತ್ರ ವ್ಯವಹಾರ ಮುಂದುವರಿದಿತ್ತು. ಈ ಮಧ್ಯೆ ಅಪ್ಪಯ್ಯನವರ ಆರ್ಥಿಕ ಸ್ಥಿತಿ ಸುಧಾರಿಸಿದ್ದರಿಂದ ಅವರು ಡ್ರೈವರ್ ಕೆಲಸ ಬಿಟ್ಟು ಕೊಡಗಿನಲ್ಲಿಯ ತಮ್ಮ ಕಾಫೀ ತೋಟದಲ್ಲಿ ನೆಲಸಿದರೆಂದೂ ಮಕ್ಕಳು ಬೆಂಗಳೂರಿನಲ್ಲಿ ಓದುತ್ತಿರುವರೆಂದೂ ತಿಳಿದು ತುಂಬ ಸಂತೋಷವಾಯಿತು.

ಒಮ್ಮೆ ರಜೆಯಲ್ಲಿ ಮಡಿಕೇರಿಗೆ ಹೋಗಿದ್ದೆ. ಅಪ್ಪಯ್ಯನವರ ಕತೆಯನ್ನು ತಮ್ಮನಿಗೆ (ಚಿಕ್ಕಪ್ಪನ ಮಗ ನಾರಾಯಣ) ಹೇಳಿದೆ. "ಇಲ್ಲಿಂದ ಅವರ ತೋಟಕ್ಕೆ ಹೆಚ್ಚೆಂದರೆ ೧೫ ಮೈಲು. ನಿಮಗೆ ಉಮೇದು ಇದ್ದರೆ ಈಗಲೇ ಅಲ್ಲಿಗೆ ನನ್ನ ಮೋಟರ್ ಬೈಕಿನಲ್ಲಿ ಹೋಗಿ ಬರೋಣ. ಈಗಿನ್ನೂ ೧೦ ಗಂಟೆ ಮಾತ್ರ. ಊಟದ ಹೊತ್ತಿಗೆ ವಾಪಾಸ್." ಹೋದೆವು. ಹಳ್ಳಿಯ ಹಸುರಿನ ಹರವಿನಲ್ಲಿ ಹುದುಗಿದ್ದ ಅವರ ತೋಟವನ್ನು ಪತ್ತೆ ಹಚ್ಚಿ ಉಬ್ಬಲು (ಹಳ್ಳಿ ಮನೆಗಳಲ್ಲಿಯ ಗೇಟ್) ಕಳಚಿ ಆತಂಕದಿಂದ ಒಳಗೆ ಕಾಲಿಟ್ಟೆವು: ಕೊಡವರ ಹಳ್ಳಿಮನೆಗಳಲ್ಲಿ ನಾಯಿಗಳ ದಂಡೇ ಇರುವುದು ವಾಡಿಕೆ. ಜೊತೆಗೆ ಎಮ್ಮೆ, ದನ, ಹಂದಿ, ಕೋಳಿಗಳ ಹಿಂಡು ಕೂಡ. ಆದರೆ ಆಶ್ಚರ್ಯ. ಈ ನಿರ್ಜನ ನೀರವ ನಿಸರ್ಗತಾಣ ಯಾರೋ

ಪುಳಿಚಾರಿಗಳ (ಬ್ರಾಹ್ಮಣರು) ಆಶ್ರಮದಂತಿತ್ತು: ತೆರೆದ ಕದ, ಅಲಂಕೃತ ತುಳಸೀಕಟ್ಟೆ, ರಂಗವಲ್ಲಿ ಹಾಕಿದ ಕಾಲ್ದಾರಿ, ತುಂಬೆ, ದಾಸವಾಳ, ಅಶ್ವತ್ಥಗಳ ಸಾಲು ಇತ್ಯಾದಿ! ನಾವು ತಪ್ಪು ಮನೆ ಹೊಕ್ಕಿರುವೆವೇ? ಅಷ್ಟರಲ್ಲೇ ಮನೆಯೊಳಗಿಂದ ಆಪಾದಮಸ್ತಕ ಕೊಡವ ಶ್ವೇತವಸನಧಾರಿ ಮಹಿಳೆಯೊಬ್ಬರು ಹೊರಬಂದರು, ಬೆರಗುಗಣ್ಣುಗಳಿಂದ ನಮ್ಮನ್ನು ದಿಟ್ಟಿಸುತ್ತ "ನಂಗಡ ಸಾಮಿ ಬಾತು" (ನಮ್ಮ ಸ್ವಾಮಿ ಬಂದರು) ಎಂದು ಆನಂದೋದ್ಗಾರವೆತ್ತುತ್ತ ಅಲ್ಲೇ ನಮಗೆ ಸಾಷ್ಟಾಂಗ ನಮಸ್ಕಾರ ಮಾಡಿದರು. ಇತ್ತ ತೋಟಕ್ಕೆ ಹೋಗಿದ್ದ ಅಪ್ಪಯ್ಯ ತಮ್ಮ ಪೂಜೆಯ ಉಡುಪಿನಲ್ಲೇ ಅಲ್ಲಿಗೆ ಬಂದು ಸೇರಿಕೊಂಡರು. "ದೇವ ಬಂದ ನಮ್ಮ ಸ್ವಾಮಿ ಬಂದ ದೇವರ ದೇವ ಶಿಖಾಮಣಿ ಬಂದನೋ!" ಎಂಬ ಪುರಂದರವಾಣಿಯಲ್ಲಿಯ ಭಕ್ತಿ ನಿಷ್ಠೆ ಆ ದಂಪತಿಗಳಲ್ಲಿ ಕಂಡು ಪುಳಕಿತರಾದೆವು.

ಪರಸ್ಪರ ಯೋಗಕ್ಷೇಮ ವಿಚಾರಿಸಿದನಂತರ ನಾನು ಕೇಳಿದೆ, "ಏನು ವಿಶೇಷವಿಂದು? ಮಡಿಯುಟ್ಟು ಪೂಜೆಗೆ ತಯಾರಾಗುತ್ತಿದ್ದೀರಿ?"

"ಇವತ್ತು ಶಿವರಾತ್ರಿ ಸ್ವಾಮಿ. ಸಾಕ್ಷಾತ್ ಶಿವ, ಸುಬ್ರಹ್ಮಣ್ಯರಂತೆ ನೀವಿಂದು ನಮ್ಮ ಮನೆಗೆ ಬಂದಿದ್ದೀರಿ. ಈ ಮಧ್ಯಾಹ್ನದ ಫಲಾಹಾರ ನಮ್ಮಲ್ಲೇ ಸ್ವೀಕರಿಸಬೇಕು. ಮಡಿಕೇರಿಯಲ್ಲಿ ನಿಮ್ಮ ಸಂಪರ್ಕ ಬಂದಂದಿನಿಂದ ನಾವೆಲ್ಲರೂ ಮಾಂಸಾಹಾರ ವರ್ಜಿಸಿ ಸಾತ್ತ್ವಿಕ ಜೀವನ ನಡೆಸುತ್ತಿದ್ದೇವೆ."

"ಆಹಾರಕ್ರಮ ಅಭ್ಯಾಸದಿಂದ ಬರುತ್ತದೆ. ಇದರಲ್ಲಿ ಸಾತ್ತ್ವಿಕ ತಾಮಸಿಕ ಎಂಬ ತಾರತಮ್ಯ ಸಲ್ಲ. ಸಂಸ್ಕಾರದಿಂದ ಸಾತ್ತ್ವಿಕತೆ ಮೊಳೆಯುತ್ತದೆ. ನಿಮ್ಮ ಸಂಸ್ಕಾರ ನಿಜಕ್ಕೂ ದೊಡ್ಡದು."

ಇಲ್ಲಿಯ ವಿಪರ್ಯಾಸ ನೋಡಿ: ಹುಟ್ಟಾ ಬ್ರಾಹ್ಮಣರಾದ ಮತ್ತು ಅದೇ ಸಂಪ್ರದಾಯದಲ್ಲಿ ಬೆಳೆದವರಾದ ನಮಗೆ ಅಂದು ಶಿವರಾತ್ರಿಯೆಂಬ ಸರಳ ಸತ್ಯವೂ ಗೊತ್ತಿರಲಿಲ್ಲ! ಹುಟ್ಟಿನಿಂದ ಬರುವುದಲ್ಲ ಶ್ರೇಷ್ಠತೆ, ಪ್ರಾಮಾಣಿಕ ನಿಸ್ವಾರ್ಥ ಅನುಷ್ಠಾನದಿಂದ ಮಾತ್ರ ಲಭ್ಯ. ಕನಕದಾಸರು ಹಾಡಿರುವಂತೆ, "ಆತ್ಮ ಯಾವ ಕುಲ, ಜೀವ ಯಾವ ಕುಲ? ತತ್ತ್ವೇಂದ್ರಿಯಗಳ ಕುಲ ಪೇಳಿರಯ್ಯ." ಕೃತಾರ್ಥ ಭಾವದಿಂದ ಮಡಿಕೇರಿಗೆ ಮರಳಿದೆವು. ಮತ್ತೆ ಕೆಲವು ವರ್ಷಗಳು ಉರುಳಿದುವು.

೧೯೮೦ರ ದಶಕ. ಒಂದು ಮುಂಜಾನೆ ಅಪ್ಪಯ್ಯನವರಿಂದ (ಕೊಡಗು) ಅಕಸ್ಮಾತ್ತಾಗಿ ದೂರವಾಣಿ ಕರೆ ಬಂತು, "ಒಂದು ಜಟಿಲ ಸಮಸ್ಯೆಯಲ್ಲಿ ಸಿಲುಕಿದ್ದೇವೆ. ಏನು ಮಾಡಬೇಕು ತಿಳಿಯುತ್ತಿಲ್ಲ. ನಿಮ್ಮನ್ನು ಅರ್ಜೆಂಟಾಗಿ ಬಂದು ನೋಡಬೇಕಾಗಿದೆ. ಯಾವಾಗ?" ಉದ್ವೇಗದಿಂದ ಅವರ ಧ್ವನಿ ಕಂಪಿಸುತ್ತಿತ್ತು.

"ನಾಡಿದ್ದು ಶನಿವಾರ ಮುಂಜಾನೆ? ಹೇಗೆ ಬರುತ್ತೀರಿ?"

"೧೦ ಗಂಟೆಗೆ ಮೊದಲೇ ಹಾಜರಾಗುತ್ತೇವೆ. ನಿಮ್ಮ ಆಶೀರ್ವಾದದಿಂದ ಈಗ ನಮಗೆ ಕಾರ್ ಬಂದಿದೆ." ಸಕಾಲದಲ್ಲಿ ಅವರಿಬ್ಬರೂ ಬಂದರು. ಹಿಂದಿನ ಸಂಜೆಯೇ ಮೈಸೂರಿಗೆ ಬಂದು ಹೋಟೇಲಿನಲ್ಲಿ ಕೊಠಡಿ ಹಿಡಿದಿದ್ದರಂತೆ. ಒಂದು ಬಗೆಯ ಉದ್ವಿಗ್ನತೆ, ತುಮುಲತೆ ಅವರನ್ನು ಬಾಧಿಸುತ್ತಿದ್ದಂತೆ ಭಾಸವಾಯಿತು. "ಏನು ವಿಶೇಷ ಅಪ್ಪಯ್ಯನವರೇ?"

"ನಮ್ಮ ಡಾಲಿ ಇದ್ದಾಳಲ್ಲ ಸ್ವಾಮಿ. ಅವಳದೇನೋ ಲವ್ ಅಧ್ವಾನ. ಮಹಾ ಹಠಮಾರಿ. ಇದು ಬೇಡ, ನಮ್ಮ ಜಾತಿ ಸಂಸ್ಕೃತಿ ಎಲ್ಲ ಕಳೆದುಕೊಂಡು ಮರ್ಯಾದೆಯಿಂದ ಬಾಳುವುದು ಹೇಗೆ ಎಂದು ಎಷ್ಟು ಪರಿಯಾಗಿ ಹೇಳಿದರೂ ಅವಳು ಅಲುಗಾಡೋದಿಲ್ಲ. ನಮಗಂತೂ ಹುಚ್ಚು ಹಿಡಿದ ಹಾಗಾಗಿದೆ. ನೀವು ನಮ್ಮ ದೇವರು. ಹೇಗಾದರೂ ಮಾಡಿ ನಮ್ಮನ್ನು ಈ ಹೇಸಿಗೆ ಗೊಸರಿನಿಂದ ಮೇಲೆತ್ತಬೇಕು."

"ಅದಿರಲಿ. ಈಗ ಅವಳ ವಯಸ್ಸು ಎಷ್ಟು? ಏನು ಓದಿದ್ದಾಳೆ? ಎಲ್ಲಿ ಕೆಲಸ ಮತ್ತು ವಾಸ?"

"ಇಪ್ಪತ್ತು ದಾಟಿದೆ. ಬಿಎ ಡಿಗ್ರಿ ಪಾಸಾಗಿ ಬೆಂಗಳೂರಿನಲ್ಲಿ ಕೆಲಸದಲ್ಲಿದ್ದಾಳೆ. ಬಸವನಗುಡಿಯ ಶಾರದಾ ಕುಟೀರದಲ್ಲಿ ವಾಸ."

"ಅಂದ ಮೇಲೆ ಅವಳಿಗೆ ಸ್ವತಂತ್ರವಾಗಿ ನಿರ್ಧರಿಸುವ ಹಕ್ಕು ಬಂದಿದೆ. ಈಗ ಅವಳ ಲವರ್ ಯಾರು? ಅವನೇನಾದರೂ ಹಾಳು ಮೂಳು ಪೋಲಿಯಾದರೆ ನಾವು ಅವಳಿಗೆ ಸಮಾಧಾನದಲ್ಲಿ ಬುದ್ಧಿ ಹೇಳಿ ತಿದ್ದುವುದಕ್ಕಿಂತ ಹೆಚ್ಚಿಗೇನೂ ಮಾಡಲಾರೆವು. ಆ ಲವರ್ ಯಾರೆಂದು ನಿಮಗೆ ಹೇಳಿರುವಳೇ?"

"ಹೌದು. ಅದೇನೋ ವೇಂಕಟೇಶಾಚಾರ್ಯ ಎನ್ನುವವರ ಮಗನಂತೆ, ಬ್ರಾಹ್ಮಣರ ಹುಡುಗನಂತೆ, ದೊಡ್ಡ ಕೆಲಸದಲ್ಲಿರುವನಂತೆ. ಆದರೆ ನಮ್ಮ ಜಾತಿ, ಸಂಪ್ರದಾಯ? ಇದಾಗಕೂಡದು."

ವೇಂಕಟೇಶಾಚಾರ್ಯ! ಗ್ಯಾಸ್ ಕಾಲೇಜಿನಲ್ಲಿ ನನ್ನ ಹಿರಿಯ ಸಹೋದ್ಯೋಗಿ. ಕರ್ಮಠ ಸಂಪ್ರದಾಯಸ್ಥ. ನನ್ನ ಪರಮಗೌರವಕ್ಕೆ ಪಾತ್ರರಾದ ಆದರ್ಶ ಗೃಹಸ್ಥ. "ಅದಿರಲಿ ಅಪ್ಪಯ್ಯನವರೇ! ಅವರೇನನ್ನುತ್ತಾರೆ ವಿಚಾರಿಸಿರುವಿರಾ?"

"ಬೇಡ ಸ್ವಾಮೀ! ಈ ಸಂಬಂಧ ಇಲ್ಲಿಗೇ ಮುರಿಯುವಂತೆ ನೀವು ಸಹಾಯಮಾಡಬೇಕು."

"ಆಚಾರ್ಯರು ನನ್ನ ಸ್ನೇಹಿತರು, ಹಿರಿಯರು. ನನ್ನ ಮಾತು ಕೇಳಿ: ನೀವು ಒಪ್ಪಿದರೆ ನಾವು ನೇರ ಅವರನ್ನೇ ಕಂಡು ಮಾತಾಡೋಣ. ಹುಡುಗನ ಮತ್ತು ಅವನ ತಂದೆತಾಯಿಯರ ಅಭಿಪ್ರಾಯವೇನೆಂದು ತಿಳಿಯೋಣ."

ಸಾಕಷ್ಟು ಪುಸಲಾವಣೆಯನಂತರ ಅಪ್ಪಯ್ಯ ದಂಪತಿಗಳು ನನ್ನ ಸಲಹೆಯನ್ನು ಒಪ್ಪಿದರು. ಆಗಲೇ ಆಚಾರ್ಯರಿಗೆ (ಬೆಂಗಳೂರು) ದೂರವಾಣಿಸಿ ಮರುದಿನ ಮುಂಜಾನೆ ಅವರ ಮನೆಯಲ್ಲಿ ಸೇರುವುದೆಂದು ನಿಶ್ಚಯಿಸಿದೆವು. ಹನುಮಂತನಗರದಲ್ಲಿ ಆಚಾರ್ಯರ ಪ್ರಶಾಂತ ನಿವಾಸ. ಅವರು, ಅವರ ಹೆಂಡತಿ ಮತ್ತು ನಾವಿಬ್ಬರು ದಂಪತಿಗಳು ಅಲ್ಲಿ ಕುಳಿತಿದ್ದೆವು. ಮಾತಿಲ್ಲ, ಗಂಭೀರ ವದನರಾಗಿದ್ದೆವು. ಆಕ್ರೋಶ ದುಮ್ಮಾನಗಳ ಪ್ರವಾಹಕ್ಕೆ ಪೂರ್ವಸೂಚನೆಯೋ ಎಂಬಂತೆ ದಿವ್ಯ ಮೌನ. ನಾನೇ ಅದನ್ನು ಮುರಿದೆ, "ಆಚಾರ್ಯರೇ! ಇಲ್ಲಿ ನಿಸರ್ಗದ ದೃಷ್ಟಿಯಿಂದ ಅಲ್ಲ, ಸಮಾಜದ ದೃಷ್ಟಿಯಿಂದ ತುಸು ಅಸ್ವಾಭಾವಿಕ ಸನ್ನಿವೇಶ ಏರ್ಪಟ್ಟಿದೆ. ಏಕೆಂದರೆ ನಿಸರ್ಗ ಗಂಡು ಹೆಣ್ಣು ಎಂಬ ವ್ಯತ್ಯಾಸವನ್ನು ಮಾನ್ಯ ಮಾಡುವುದೇ ಹೊರತು ಮಾನವಕೃತ ಜಾತಿಭೇದವನ್ನಲ್ಲ, ಎಂದೂ ಅಲ್ಲ. ನಮ್ಮ ಪುರಾಣಗಳು, ಮಹಾಕಾವ್ಯಗಳು, ನೀತಿಕಥೆಗಳೆಲ್ಲವೂ ಈ ಜೀವನಮೌಲ್ಯವನ್ನು ಎತ್ತಿ ಹಿಡಿದಿವೆ. ಹೀಗಿದ್ದರೂ ಮನುಷ್ಯ ಮಾತ್ರ ತಾನೇ ನೇಯ್ದಿರುವ ಜಾತಿ ಬಲೆಗಳ ಬಂದಿಯಾಗಿ ಬಾಳುತ್ತಿದ್ದಾನೆ. ಇಂಥ ವಿಚಿತ್ರ ಇಕ್ಕಟ್ಟಿನಲ್ಲಿ ನಾವು ಹೇಗೆ ಮುನ್ನಡೆಯಬೇಕು ಎಂಬ ಹಾದಿಯನ್ನು ಧರ್ಮ, ಆಚರಣೆ, ಸಂಪ್ರದಾಯ ಎಲ್ಲದರಲ್ಲಿಯೂ ಹಿರಿಯರಾಗಿರುವ ನೀವು ಕಾಣಿಸಬೇಕು."

ಆ ಮೂರುನಾಲ್ಕು ನಿಮಿಷ ಗಂಭೀರ ಶಾಂತಿ. ಆಚಾರ್ಯರಾಗಲೀ ಅವರ ಹೆಂಡತಿಯಾಗಲೀ ಆಗ ಕಂಡಾಬಟ್ಟೆ ರೇಗಿ ರಂಪ ಮಾಡಬಹುದು, ಕಟ್ಟೆಯೊಡೆದ ಭಾವೋದ್ರೇಕ ಮೊದಲು ಹರಿದುಹೋಗಲಿ, ಬಳಿಕ ವಸ್ತುಸ್ಥಿತಿ ಪರಿಶೀಲಿಸೋಣ, ಹುಡುಗನೂ ಡಾಲಿಯನ್ನು ಪ್ರೀತಿಸಿರುವುದು ನಿಜವಾದರೆ ನಾವು ಆಶೀರ್ವಾದ ಮಾಡುವುದೊಂದೇ ಮಾರ್ಗ, ಹಾಗಲ್ಲದೇ ಆತ ನಿರಾಕರಿಸಿದರೆ ಮುಂದೇನು ಹಾದಿ? ಹೀಗೆ ಹರಿಯಿತು ನನ್ನ ಚಿಂತನೆ. ಅಷ್ಟು ಹೊತ್ತು ಧ್ಯಾನಸ್ಥರಾಗಿ ಕುಳಿತಿದ್ದ ಆಚಾರ್ಯರು ನಿಧಾನವಾಗಿ ಕಣ್ತೆರೆದು, "ನಾರಾಯಣರಾಯರೇ! ನಿಮ್ಮ ನಮ್ಮ ಸ್ನೇಹ ಸಂಬಂಧ ಎಷ್ಟು ಗಾಢವಾದುದೆಂದು ನನಗೆ ಚೆನ್ನಾಗಿ ಗೊತ್ತಿದೆ. ಉಭಯ ಪಕ್ಷಗಳವರ ಹಿತ ಬಯಸುವ ನಿಮ್ಮ ಚಿಂತನೆಯ ಧಾಟಿಯನ್ನು ನಾವಿಬ್ಬರೂ ಮನಸಾರೆ ಒಪ್ಪುತ್ತೇವೆ. ಡಾಲಿ ಚಿನ್ನದಂಥ ಹುಡುಗಿ. ಶಾರದಾ ಕುಟೀರದಿಂದ ಪ್ರತಿ ಸಂಜೆ ನಮ್ಮಲ್ಲಿಗೆ ಬಂದು ರಾಮಾಯಣ, ಮಹಾಭಾರತ, ಉಪನಿಷತ್ ಮುಂತಾದವನ್ನು ನಮ್ಮ ಮಕ್ಕಳ ಜೊತೆ ಕಲಿಯುತ್ತ ಬೆಳೆದು ಅರಳಿದ್ದಾಳೆ. ನಮ್ಮ ಮಗ ವಿಶಾಲ್ ಈಕೆಯನ್ನು ಒಲಿದಿದ್ದಾನೆ. ನೀವೇ ಅಂದಿರುವಂತೆ ನಿಸರ್ಗದ ನೆಲೆಯಿಂದ ಅಸ್ವಾಭಾವಿಕವಲ್ಲದ ಈ ಸಂಬಂಧಕ್ಕೆ ನಮ್ಮ ಪೂರ್ಣ ಸಮ್ಮತಿ ಉಂಟು."

ತಲೆಮೇಲಿನ ಹಿಮಾಲಯಭಾರವನ್ನು ಹಠಾತ್ತನೆ ಬಾಹ್ಯಶಕ್ತಿಯೊಂದು ಎತ್ತಿ ಬಿಸುಟಾಗ ಭಾರಮುಕ್ತನಾದವನ ಮನಃಸ್ಥಿತಿ ಏನು? ಅದಕ್ಕೆ ವಾಯುಲಘಿಮಾ (levitation) ಎನ್ನುತ್ತೇವೆ: ಗಾಳಿಯಲ್ಲಿ ತೇಲಿದಂಥ ಅನುಭವ. ಹಾಗಿತ್ತು ಆ ಪರಿಸರ. ಅಪ್ಪಯ್ಯ ದಂಪತಿಗಳ ಮೊಗಗಳಲ್ಲಿ ಮಂದಹಾಸದ ಮುಗುಳು ಅರಳಿತು. ನನ್ನ ಹೆಂಡತಿಗೂ ನನಗೂ ಅದೇ ಭಾವ. ಆಚಾರ್ಯರ ಮಗ ವಿಶಾಲ್ ಭಾರತೀಯ ವಿಜ್ಞಾನ ಮಂದಿರದಲ್ಲಿ (Indian Institute of Science) ಪ್ರಾಧ್ಯಾಪಕ. ಪ್ರೇಮಿಗಳ ಮಧುರ ಬಂಧ ಏರ್ಪಡುವುದು ಸ್ವರ್ಗದಲ್ಲಲ್ಲವೇ?

"ಹಾಗಾದರೆ ಮುಂದೇನು ಮಾಡಬೇಕು, ಆಚಾರ್ಯರೇ?"

"ಕೊಡಗಿನ ಯಾವುದೇ ಪುಣ್ಯಕ್ಷೇತ್ರದಲ್ಲಿ ಮದುವೆಮಾಡಿ ಕೊಡಿ. ಡಾಲಿ ನಮ್ಮ ಸೊಸೆಯಾಗಿ ಮನೆ ಸೇರುತ್ತಾಳೆ. ಮಗ ಸೊಸೆ ನಮ್ಮೊಟ್ಟಿಗೇ ಇರುತ್ತಾರೆ." ನಾನು ಕಂಡ ಒಬ್ಬ ಮಹಾನ್ ಪುರುಷ ವೇಂಕಟೇಶಾಚಾರ್ಯ: ನಡೆ, ನುಡಿ, ಬಗೆಗಳಲ್ಲಿ ಸಾಮರಸ್ಯ, ಕರ್ಮಠತೆಯೊಂದು ವೈಯಕ್ತಿಕ ಶಿಸ್ತು, ಇದು ಸಮಾಜಬಾಧಕವಾಗತಕ್ಕದ್ದಲ್ಲ ಎಂಬ ಉದಾರನೀತಿಯನ್ನು ಅನುಷ್ಠಾನಕ್ಕೆ ತಂದಿದ್ದ ಆದರ್ಶ ವ್ಯಕ್ತಿ.

ಕುಲಪತಿ ಬೀರಿದ ಕ್ಷಿಪಣಿ ತಿರುಗುಬಾಣವಾದಾಗ
ಅಧ್ಯಾಯ ೮೧

೧೯೮೬ರ ಸೆಪ್ಟೆಂಬರ್ ಕೊನೆಗೆ ನಾನು ನಿವೃತ್ತನಾಗಬೇಕಿತ್ತು. ಆಗ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದವರು ವೈ.ಪಿ. ರುದ್ರಪ್ಪ ಮತ್ತು ಕುಲಸಚಿವ ಎಸ್. ನಾರಾಯಣಶೆಟ್ಟಿ (ಸುಜನಾ ಎಂಬ ಕಾವ್ಯನಾಮದ ಖ್ಯಾತ ಕವಿ). ಇನ್ನು ನಮ್ಮ ಸಂಸ್ಥೆಯ ನಿರ್ದೇಶಕರಾಗಿದ್ದವರು ಎಚ್. ತಿಪ್ಪೇರುದ್ರಸ್ವಾಮಿ. ರುದ್ರಪ್ಪ ಹೆಸರಿಗೆ ತಕ್ಕಂತೆ ಶಿಸ್ತುನಿಷ್ಠುರರು, ಸತ್ಯಸಂಧರು ಮತ್ತು ಉಗ್ರಕೋಪಿಷ್ಠರೆಂದೇ ಪ್ರಸಿದ್ಧರು. ಆ ವೇಳೆಗೆ ವಿಶ್ವವಿದ್ಯಾನಿಲಯದೊಳಗಿನ ಸ್ಥಿತಿ ಏನಾಗಿತ್ತು ಗೊತ್ತೇ?
ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ?
ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ
ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ?
ತನುವಿನೊಳಗೆ ಹುಸಿ ತುಂಬಿ, ಮನದೊಳಗೆ ವಿಷಯ ತುಂಬಿ
ಮನೆಯೊಳಗೆ ಮನೆಯೊಡೆಯನಿಲ್ಲ
ಮತ್ತು, "ದಾರುಗಟ್ಟಿ ಮಾಳ್ಪರಿಲ್ಲದೆ ಕಾಲ ಕತ್ತಲೆಯೊಳಗೆ.... ಸೋರುತಿಹುದು ಮನೆಯ ಮಾಳಿಗಿ" (ಶಿಶುನಾಳ ಶರೀಫ).
ವಿಶ್ವಕೋಶದಲ್ಲಿಯ ನಮ್ಮ ಭವಿಷ್ಯವೇ ಶೂನ್ಯಗಾಮಿಯಾಗುತ್ತಿದೆಯೋ ಎಂಬ ಆತಂಕದ ದಿನಗಳವು. ಇಂಥ ಅರಾಜಕತೆಗೆ ಶಾಸ್ತಿ ಮಾಡಲು ಒಬ್ಬ ಉಕ್ಕಿನ ಆಡಳಿತಗಾರರಾಗಿ ಬಂದವರೇ ರುದ್ರಪ್ಪ. ಕೇವಲ ಬೆರಳೆಣಿಕೆಯ ದಿನಗಳಲ್ಲೇ ಅವರು ತಮ್ಮ ಉಕ್ಕುತನವನ್ನು ಆಡಳಿತೆಯ ಜಡಯಂತ್ರಕ್ಕೆ ಪ್ರಹಾರಿಸಿ ಎಲ್ಲ ಕೆಲಸಗಳ್ಳ ಅಲಸಿಗರಿಗೂ ಸಿಂಹಸ್ವಪ್ನವಾದರು. ಅವರ ಕಾರ್ಯವೈಖರಿಯ ವಿವರಗಳು ಜನಜನಿತವಾಗಿ ನನ್ನ ಕಿವಿಗೂ ಮುಟ್ಟುತ್ತಿದ್ದುವು. "ಭಲೇ ರುದ್ರಪ್ಪ!" ಎಂದುಕೊಳ್ಳುತ್ತಿದ್ದೆ ಮನದೊಳಗೆ.

ಅದೇ ಮಾರ್ಚ್ ೩೦ರ ಅಪರಾಹ್ಣ ನನಗೆ ಕುಲಸಚಿವರಿಂದ ಬಂದ ದೂರವಾಣಿ ಸಂದೇಶ: ಮರುದಿನ (ಮಾರ್ಚ್ ೩೧) ಮುಂಜಾನೆ ನಮ್ಮ ಸಂಸ್ಥೆಯ ಶೈಕ್ಷಣಿಕ ವಿಭಾಗದ ಹೊರತಾಗಿ ಉಳಿದ ವಿಭಾಗಗಳ ಸಿಬ್ಬಂದಿ ವರ್ಗದವರನ್ನು ಕುಲಪತಿಗಳು ಖುದ್ದು ಭೇಟಿಮಾಡಲು ಬಯಸಿದ್ದಾರೆ; ಮುಂಜಾನೆ ೧೦ ಗಂಟೆಗೆ ಸರಿಯಾಗಿ ನಾವೆಲ್ಲರೂ ಅವರ ಕೊಠಡಿಯಲ್ಲಿ ಹಾಜರಿರತಕ್ಕದ್ದು. ಆ ವಿಭಾಗಗಳಿವು: ವಿಶ್ವಕೋಶ, ಭಾಷಾಂತರ, ಜಾನಪದ, ಎಪಿಗ್ರಾಫಿಯ ಕರ್ನಾಟಿಕ, ಹರಿದಾಸ ವಾಙ್ಮಯ ಮತ್ತು ಹಸ್ತಪ್ರತಿ. ಒಟ್ಟು ನಾವು ಸುಮಾರು ೩೫ ಮಂದಿ ಇದ್ದೆವು. ನನ್ನ ಸ್ನೇಹಿತರೇ ಆಗಿದ್ದ ಸುಜನಾರನ್ನು ವಿವರಣೆ ಬೇಕೆಂದು ಕೋರಿದೆ: ಇದೊಂದು ಅಧಿಕೃತ ಭೇಟಿ, ಆದ್ದರಿಂದ ನಮ್ಮ ಸಂಸ್ಥೆಯ ನಿರ್ದೇಶಕರನ್ನು ಆಹ್ವಾನಿಸಬೇಕು, ಆಡಳಿತೆಯ ಹೊಣೆ ಇಲ್ಲದ ಸಿಬ್ಬಂದಿಯನ್ನು ಕರೆಯುವುದರ ಉದ್ದೇಶವೇನು? ನಿರ್ದೇಶಕರು ಈಗ ಊರಲ್ಲಿಲ್ಲವಾಗಿ ಈ ಆದೇಶವನ್ನು ಉಪನಿರ್ದೇಶಕರ ಮೂಲಕ ಅಧಿಕೃತವಾಗಿ ನಮಗೆ ಜಾರಿಮಾಡಬೇಕು.

"ಬನ್ನಿ, ಕುಲಪತಿಗಳಿಗೆ ನಿಮ್ಮನ್ನೆಲ್ಲ ನೋಡಿ ಮಾತಾಡಬೇಕೆಂದಾಗಿದೆ, ಅಷ್ಟೆ. ಬೇರೆ ಏನೂ ಇಲ್ಲ" ಎಂದು ಮಾತ್ರ ಸಮಜಾಯಿಶಿ ನೀಡಿದರು.

ಮಾರ್ಚ್ ೩೧, ೧೯೮೬. ನಾವೆಲ್ಲರೂ ೯–೪೫ರ ಹೊತ್ತಿಗೆ ಕುಲಪತಿಯವರ ಕೊಠಡಿಯೊಳಗೆ ಜಮಾಯಿಸಿದ್ದೆವು. ೧೦ಕ್ಕೆ ಸರಿಯಾಗಿ ಅವರು ಕುಲಸಚಿವ ಮತ್ತು ಇತರ ಅಧಿಕಾರಿಗಳ ಸಹಿತ ಬಂದರು. ಅಂದೇ ನಾನವರನ್ನು ಮೊದಲ ಸಲ ನೋಡಿದ್ದು. ಮುಖ ಕೋಪದಿಂದ ನಿಗಿನಿಗಿಯುತ್ತಿತ್ತು. ಏನಪಾಯ ಕಾದಿದೆ? ನಮ್ಮ ವಂದನೆಗಳಿಗೆ ಪ್ರತಿವಂದನೆ ಸಲ್ಲಿಸದೆ ಕುಳಿತುಕೊಳ್ಳಲು ಸನ್ನೆ ಮಾಡಿದರು, ಮತ್ತು ಎಲ್ಲರಿಗೂ ಕಾಫಿ, ಬಿಸ್ಕತ್ ಕೊಡಲು ಜವಾನನಿಗೆ ಆದೇಶಿಸಿದರು. ಇದ್ದವರಲ್ಲಿ ಹಿರಿಯನಾಗಿದ್ದ ನನ್ನ ಆಸನ ನೇರ ಅವರ ಎದುರಿಗೇ ಇತ್ತು. ಮುಂದಿನ ಮಾತುಕತೆ ಇಂಗ್ಲಿಷಿನಲ್ಲಿ:

ನನ್ನನ್ನೇ ದಿಟ್ಟಿಸಿ ನೋಡುತ್ತ ಅವರು ಅಪ್ಪಣೆ ಮಾಡಿದರು, ``Do you know why I have asked you all to come here?''
``Please clarify, sir.''

``This evening you are all going to get your marching orders. Before that I wanted to see the faces of my subordinates.''
That alerted the military facet of my personality. With such naked exhibition of filthy power, I felt, offence is the best form of defense. I shouted, ``You dare not do it Mr Rudrappa. We are in a free country, not under any dictatorship. If in spite of knowing it, you pass the dismissal orders on us, be it known to you that they will be fought in the appropriate Court of Law.''
``Hold your tongue. Do you know to whom you are talking?''
``Very much I do. I'm talking to a cheap third-rate administrator. On the other hand do you know to whom you are talking? An internationally acclaimed science writer.''
Turning to my colleagues I shouted, ``Friends! It's just waste of time to be here. Let's all walk out.'' Thus the meeting ended in a fiasco, but holding the Sword of Damocles over our heads.

ಕಾತರತೆ ಮತ್ತು ಆತಂಕಸಹಿತ ಆ ಹಗಲಿಡೀ ಕಳೆದೆವು. ವಜಾ ಆಜ್ಞೆ ಬರಲೇ ಇಲ್ಲ. ಕ್ರಮೇಣ ಜಿನುಗಿದ ಒಳ ಸುದ್ದಿ: ನಮ್ಮ ವಿಭಾಗಗಳಿಗೆ ಮಾರ್ಚ್ ೩೧ರೊಳಗೆ ಬರಬೇಕಾಗಿದ್ದ ಸರ್ಕಾರೀ ಅನುದಾನವಿನ್ನೂ ಬಂದಿರಲಿಲ್ಲವಂತೆ, ಯಾರೋ ಬೃಹಸ್ಪತಿ ಬಾಬು ಸೂಚಿಸಿದನಂತೆ ಸಂಬಂಧಿಸಿದ ಎಲ್ಲ ನೌಕರರನ್ನೂ ವಜಾಗೊಳಿಸಿಬಿಡೋಣವೆಂದು! ವಜಾ ಆದೇಶಗಳು ಟೈಪ್ ಆಗಿ ಕುಲಸಚಿವರ ರುಜು ಕೂಡ ಅವುಗಳಿಗೆ ಬಿದ್ದಿದ್ದುವಂತೆ. ಸದ್ಯ, ಕೊನೆ ಗಳಿಗೆಯಲ್ಲಿ ಕುಲಪತಿ ವಿವೇಚನೆ ತಳೆದು ಅವನ್ನು ತಡೆಹಿಡಿದಿದ್ದರು.

ಅನ್ಯಕಾರ್ಯ ನಿಮಿತ್ತ ಬೇರೆಡೆಗೆ ಹೋಗಿದ್ದ ನಮ್ಮ ನಿರ್ದೇಶಕ ತಿಪ್ಪೇರುದ್ರಸ್ವಾಮಿಯವರು ಸಂಸ್ಥೆಗೆ ಮರಳಿದೊಡನೆ ಈ ವೃಥಾ ಘಟಸ್ಫೋಟದ ವಿಷಯ ತಿಳಿದು ರುದ್ರಕೋಪಾವಿಷ್ಟರಾಗಿ ಕುಲಸಚಿವ ಮತ್ತು ಕುಲಪತಿ ಇಬ್ಬರನ್ನೂ ದೂರವಾಣಿಯಲ್ಲೇ ದಬಾಯಿಸಿದರು, ಮತ್ತು ಸಂಸ್ಥೆಯ ನಮ್ಮೆಲ್ಲರ ಸಹಿತ ಕುಲಪತಿ ಕಚೇರಿ ಎದುರು ಸಾಂಕೇತಿಕ ಧರಣಿ ಕುಳಿತರು ಕೂಡ. ಇವರ ಸಚ್ಚಾರಿತ್ರ್ಯ ಮತ್ತು ಮುಂದಾಳುತನ ಹೇಗಿತ್ತು ಗೊತ್ತೇ? “ನಡೆ ಚನ್ನ, ನುಡಿ ಚನ್ನ, ಎಲ್ಲಿ ನೋಡಿದಡಲ್ಲಿ ಚನ್ನ! ಪ್ರಮಥರೊಳಗೆ ಚನ್ನ, ಪುರಾತರೊಳಗೆ ಚನ್ನ!” (ಬಸವಣ್ಣ). ಋಜ ನೈತಿಕ ತ್ರಾಣದೆದುರು ನಗ್ನ ಪ್ರಭುಶಕ್ತಿ ಎಷ್ಟು ನಿಷ್ಪರಿಣಾಮಕಾರಿ ಎಂಬುದು ಇಂಥ ಸಂದರ್ಭಗಳಲ್ಲಿ ಎದ್ದು ಕಾಣುತ್ತದೆ.

ಸೆಪ್ಟೆಂಬರ್ ೧೯೮೬ರ ಆರಂಭದಲ್ಲಿ ನಾನು ನನ್ನ ವೃತ್ತಿ ಸಂಬಂಧವಾದ ಎಲ್ಲ ದಾಖಲೆಗಳನ್ನೂ ಪೂರ್ತಿಗೊಳಿಸಿ ಅದೇ ೩೦ರ ಸಂಜೆ ನಿವೃತ್ತನಾಗಲು ವಿಶ್ವವಿದ್ಯಾನಿಲಯದ ಅನುಮತಿ ಕೋರುವ ಔಪಚಾರಿಕ ಮನವಿ ರವಾನಿಸಿದೆ. ಜೊತೆಗೆ, ಅಜ್ಞಾತ ಅನಾಮಧೇಯನಾಗಿದ್ದ ನನ್ನನ್ನು ಇಲ್ಲಿಗೆ ಕರೆದು ತಂದು ವಿಶ್ವಕೋಶದಂಥ ಪ್ರತಿಷ್ಠಿತ ಯೋಜನೆಯೊಂದಿಗೆ ಬೆಳೆಯಲು ಮುಕ್ತ ಅವಕಾಶವಿತ್ತುದಕ್ಕಾಗಿ ಕೃತಜ್ಞತೆ ಸೂಚಿಸುವ ಪತ್ರವನ್ನೂ ಲಗತ್ತಿಸಿದೆ.

೩೦ರ ಅಪರಾಹ್ಣ ಕಚೇರಿಗೆ ವಿದಾಯ ಹೇಳಿ ಕುಲಪತಿಯವರ ಕೊಠಡಿಗೆ ಹೋದೆ –– ಕೇವಲ ಮೌಖಿಕ ಧನ್ಯವಾದ ಸೂಚಿಸಲೆಂದು. ಅವರು ನಗುನಗುತ್ತ ಸ್ವಾಗತಿಸಿದರು! “ಎಲ್ಲರ ಹಾಗಲ್ಲರೀ ನೀವು. ನೇರ ನುಡಿ ನೇರ ನಡೆಯವರು. ಏನೂ ರಿಯಾಯತಿ ಬೇಡದವರು. ನಿಮ್ಮ ಈ ನಡವಳಿಕೆ ನನಗೆ ತುಂಬ ಇಷ್ಟ. ನನ್ನಿಂದೇನಾಗಬೇಕು?”
ವಿಸ್ಮಯ ಆಶ್ಚರ್ಯಗಳಿಂದ ಒಂದು ಕ್ಷಣ ಅವಾಕ್ಕಾದೆ. ಮತ್ತೆ ಹೇಳಿದೆ, “ಎಲ್ಲರೂ ಒಳ್ಳೆಯವರೇ, ಸರ್. ಆದರೆ ಹೆಚ್ಚಿನವರಿಗೆ ಅಧಿಕಾರಿಯ ಎದುರು ನಿಂತು ಮಾತಾಡಲು ಅಂಜಿಕೆ. ವಿಶ್ವವಿದ್ಯಾನಿಲಯದ ಸಮಸ್ತ ನೌಕರರಿಗೂ ಪಿತೃ ಸ್ಥಾನದಲ್ಲಿರುವ ಹಿರಿಯರಾದ ನಿಮಗೆ ನಾನಿದನ್ನು ವಿವರಿಸಬೇಕೇ? ನನ್ನ ನಿವೃತ್ತಿ ವೇತನ ಪತ್ರಗಳನ್ನು ಒಂದು ತಿಂಗಳ ಹಿಂದೆಯೇ ನಿಮ್ಮಲ್ಲಿಗೆ ಕಳಿಸಿದ್ದೇನೆ. ದಯವಿಟ್ಟು ಅವನ್ನು ಶೀಘ್ರವಾಗಿ ಪರಿಶೀಲಿಸಿದರೆ ತುಂಬ ಉಪಕಾರವಾಗುತ್ತದೆ.”

ಪವಾಡ! ಮುಂದಿನ ನಾಲ್ಕು ವಾರಗಳ ಒಳಗೆ ನಿವೃತ್ತಿವೇತನ ಮತ್ತು ಇತರ ಸೌಲಭ್ಯಗಳಿಗೆ ಸಂಬಂದಿಸಿದ ಎಲ್ಲ ಆದೇಶಗಳೂ ಜಾರಿಯಾಗಿದ್ದುವು! ನಿಜ, (ಪುರಂದರದಾಸರ ಕ್ಷಮೆ ಕೋರಿ) ಸತ್ಯವಂತರಿಗಿದು ಕಾಲ ಹೌದು, ದುಷ್ಟ ಜನರಿಗಿದು ದುರ್ಭಿಕ್ಷ ಕಾಲ!”

ಕೆಲವು ಅವಿಸ್ಮರಣೀಯ ಘಟನೆಗಳು
ಅಧ್ಯಾಯ ೮೨

ಕನ್ನಡ ಬೀಜಾಕ್ಷರ ಮಂತ್ರ



ಖಗೋಳ ವಿಜ್ಞಾನದಲ್ಲಿ ಪುಸ್ತಕ ಬರೆಯುತ್ತಿದ್ದೆ (೧೯೫೧). ನಕ್ಷತ್ರಗಳ ವರ್ಗೀಕರಣ ಕುರಿತ ಒಂದು ಆಕರ್ಷಕ ಸೂತ್ರವಾಕ್ಯವನ್ನು ಇಂಗ್ಲಿಷ್ ಆಕರ ಪ್ರಬಂಧದಲ್ಲಿ ಓದಿದಾಗ ಕನ್ನಡದಲ್ಲಿಯೂ ಸದೃಶ ವಾಕ್ಯ ರಚಿಸಬೇಕೆಂಬ ತವಕ ತೀವ್ರವಾಯಿತು. ಅದರ ಒಕ್ಕಣೆ: **W**ha! **O**h **B**e **A** **F**ine **G**irl **K**iss **M**e **R**ight **N**ow **S**weet! ಇಲ್ಲಿಯ ಅರ್ಥರಸವನ್ನು ಕ್ಷಣಕಾಲ ಬದಿಗಿಟ್ಟು ವಿಜ್ಞಾನ ಸ್ವಾರಸ್ಯವನ್ನು ಪರೀಕ್ಷಿಸೋಣ. ಕೋಟಿ ಕೋಟಿ ನಕ್ಷತ್ರಗಳ ರೋಹಿತಗಳನ್ನು (spectra) ಭೌತವಿಜ್ಞಾನ ನಿಯಮಾನುಸಾರ ವಿಶ್ಲೇಷಿಸಿ ನಿರ್ದಿಷ್ಟ ಕ್ರಮಾನುಸಾರ ಅಳವಡಿಸಿದರೆ ಅವು ೧೧ ಗುಂಪುಗಳಲ್ಲಿ ಅಡಕವಾಗುತ್ತವೆಂದು ತಿಳಿಯಿತು. ಇವನ್ನು ಆಯಾ ಸಂಶೋಧಕನ ಆಗಿನ ಮರ್ಜಿಗನುಗುಣವಾಗಿ W – ವರ್ಗ, O – ವರ್ಗ, B – ವರ್ಗ ಎಂದು ಮುಂತಾಗಿ ಹೆಸರಿಸಲಾಯಿತು (೧೯೨೪ರ ಸುಮಾರಿಗೆ). ಇಲ್ಲಿ ಬೀಜಾಕ್ಷರಗಳ ಪುನರಾವರ್ತನೆ ಆಗತಕ್ಕದ್ದಲ್ಲ ಎಂಬುದೊಂದೇ ಷರತ್ತು. ಹೀಗೆ ಲಭಿಸಿದ ಅಕ್ಷರಪಜ್ಞೆಯನ್ನು ನೆನಪಿಡುವುದು ಹೇಗೆ? ಕ್ರಮಸರಣಿಯಲ್ಲಿ ಅಕ್ರಮ! ಈ ಸಮಸ್ಯೆಯಲ್ಲಿ ಮಗ್ನನಾಗಿದ್ದ ಯುವ ನವವಿವಾಹಿತ ಆದರೆ ಸದ್ಯ ವಿರಹದಗ್ಧ ವಿಜ್ಞಾನಿಯ ಎದುರು ಮೇಲಿನ ಸೂತ್ರವಾಕ್ಯ ಮಿಂಚಿತೆಂದು ಆಕರ ಗ್ರಂಥದಲ್ಲಿ ನಿರೂಪಿತವಾಗಿತ್ತು. ಎಂಥ ಹೊಂದಾಣಿಕೆಯೆಂದು ಬಾಯಿ ಚಪ್ಪರಿಸಿದೆ. ಏಕೆಂದರೆ ಕೇವಲ ಕೆಲವೇ ತಿಂಗಳ ನನ್ನ ಮದುವೆ ಆಗಿತ್ತು ಮತ್ತು ಪ್ರಕೃತ ನನ್ನ ಹೆಂಡತಿ ತವರಿಗೆ ಹೋಗಿ ನಾನೂ 'ಮೇಘಸಂದೇಶ'ದ ಯಕ್ಷನ ಸ್ಥಿತಿಯಲ್ಲಿದ್ದೆ. ಕನ್ನಡದಲ್ಲಿ ಇಂಥ ಒಂದು ಸೂತ್ರವಾಕ್ಯ ಹೆಣೆಯುವುದು/ ಹೊಸೆಯುವುದು/ ಪೋಣಿಸುವುದು ಸಾಧ್ಯವೇ? Poetry is emotion recollected in tranquility (ಶಾಂತ ಸನ್ನಿವೇಶದಲ್ಲಿ ಪುನಸ್ಮರಿಸಿದ ಭಾವೋತ್ಕಟತೆಯೇ ಕಾವ್ಯ) ಎಂಬ ವರ್ಡ್ಸ್‌ವರ್ತ್ ಕವಿಯ ವ್ಯಾಖ್ಯೆಗೆ ಶರಣಾದೆ. ರಾಜರತ್ನಂ ಹೇಳಿರುವಂತೆ "ಅಕ್ಕೋ ಬಂತು ಪದಗೋಳ್ ಬಾಣಾ!" ಆ ನಸುಮುಂಜಾನೆ ಹೊಳೆದ ಚೆಲುಗನ್ನಡದ ಸೂತ್ರ ವಾಕ್ಯ: ವ್ಹಾರೆವಾ! ಓ ನನ್ನ ಬಾಳ್ಬೆಳಕೆ ಆಗಮಿಸು ಫೇನಮಯ ಗೋರಸವ ಕೊಡು ನನಗೆ ಮೃದುಭಾಷಿ ರಸಿಕಮಣಿ ನಗುನಗುತ ಸಾರೆಲೇ! ಇಲ್ಲಿಯ ಪ್ರತಿಯೊಂದು ಗಣದ ಪ್ರಥಮಾಕ್ಷರದ ಇಂಗ್ಲಿಷ್ ಅವತರಣಿಕೆ: W,O,B,A,F,G,K,M,R,N,S ಕನ್ನಡ ಭಾಷೆ ಇಂಗ್ಲಿಷಿನ ಎತ್ತರಕ್ಕೆ ಏರಲಾರದೆಂದು ಆರ್ಭಟಿಸುವ ಅಭಿಮಾನಶೂನ್ಯ ಕನ್ನಡಿಗರು ಗಮನಿಸಬೇಕು, "ಇಲ್ಲಿಲ್ಲದುದುಳಿದುದೇ? ಜೇನು ಸುರಿವ ಹಾಲು ಹರಿವ ದಿವಂಭೂಮಿಗಿಳಿದುದೇ? (ಮಂಜೇಶ್ವರ)

ಕಗ್ಗ ಹೊಸೆವ ಕವಾಯತಿ

ಕನ್ನಡ ವಿಜ್ಞಾನ ವಾಙ್ಮಯ ರಚನೆ ಕುರಿತ ತಜ್ಞರ ಒಂದು ಗೋಷ್ಠಿಯಲ್ಲಿ ಒಬ್ಬ ಹಿರಿಯರು ಒಡ್ಡಿದ ಸವಾಲಿದು:

There was a young girl named Miss Bright
Who could run much faster than light
She travelled one day
In an Eiensteinian way
And arrived on the previous night!

ಐನ್ಸ್ಟೈನ್ ಮಂಡಿಸಿದ ವಿಶೇಷ ಸಾಪೇಕ್ಷತಾ ಸಿದ್ಧಾಂತದ ಪ್ರಕಾರ ಪ್ರಕಾಶ ವೇಗವೇ ಭೌತ ವಿಜ್ಞಾನದಲ್ಲಿ ಗರಿಷ್ಠತಮ ಎಂದಿದೆ. ವಿಜ್ಞಾನ ಕಥಾಲೇಖಕರು, "ಹಾಗಾದರೆ ಬೆಳಕಿನ ವೇಗವನ್ನು, ಕಲ್ಪನೆಯಲ್ಲಾದರೂ ಒಬ್ಬಾತ ಮೀರಿ ಜಿಗಿದರೆ ಏನಾದೀತು" ಎಂಬ ಪ್ರಶ್ನೆ ಎತ್ತಿ ಅದೇ ಸಿದ್ಧಾಂತರ ಸಮೀಕರಣಗಳನ್ನು ಆಶ್ರಯಿಸಿ ಉತ್ತರ ಪಡೆಯಲು ಮುಂದಾದರು. ಆಗ ಕಾಲವೇ ಹಿಮ್ಮೊಗವಾಗಿ (ಅಂದರೆ ಭೂತಕಾಲಾಭಿಮುಖವಾಗಿ) ಸರಿಯುತ್ತದೆಂಬ ವಿಚಿತ್ರ ಪರಿಹಾರ ಅವರಿಗೆ ಲಭಿಸಿತು. ಚೆಲುಗನ್ನಡದಲ್ಲಿ ಈ ಸ್ವಾರಸ್ಯವನ್ನು ಹೇಳುವುದು ಹೇಗೆ? ಆಗ ಒಂದು ಮುಂಜಾನೆ ಹೊಳೆದ ಕಗ್ಗ:

ಬೆಳಕಿನ ವೇಗಕ್ಕಿಂತಲು ರಭಸದಿ
ಓಡುವ ಪೋಕರಿ ಹುಡುಗಿ ಉಷಾ
ಐನ್ಸ್ಟೈನರ ರಿಲೇಟಿವಿಟಿ ಕ್ರಮದಲಿ
ಜಿಗಿಯುತಲಿಳಿದಳು ಕಳೆದ ನಿಶಾ!

ಕೋಪಶಮನಾರ್ಥಾಯ ವಿನಯಮಂತ್ರಂ ಜಪಂ ಕೃತ್ವಾ

ನಾನು ವಿಶ್ವಕೋಶಕ್ಕೆ ಸೇರಿದ ಹೊಸದರಲ್ಲಿ ನಡೆದ ಘಟನೆ. ಕೊಠಡಿಯಲ್ಲಿ ಕಾರ್ಯಮಗ್ನನಾಗಿದ್ದೆ. ಅನಿರೀಕ್ಷಿತವಾಗಿ ಇಬ್ಬರು ಅಪರಿಚಿತರು ಒಳಬಂದರು: ಒಬ್ಬ ಹಿರಿಯ, ಇನ್ನೊಬ್ಬ ವಿದ್ಯಾರ್ಥಿ. ಶಾಲಾದಿನಗಳಲ್ಲಿ ನನ್ನ ಸಹಪಾಠಿಯಾಗಿದ್ದ ಯು.ಕೆ. ಚಂದ್ರಶೇಖರ್ ಆ ಹಿರಿಯನೆಂದು ಒಡನೆ ಗುರುತಿಸಿದೆ. ಕಿರಿಯನನ್ನು ನನಗೆ ಪರಿಚಯಿಸುತ್ತ ಹೇಳಿದ, "ನೋಡು ಜೀಟೀ ಈ ಹುಡುಗನ ಹೆಸರು ಶ್ರೀನಿವಾಸ. ಈತ ಕಾಸರಗೋಡು ವಿಶ್ವ ವಿದ್ಯಾಲಯದ ಬಿಎ ಪರೀಕ್ಷೆಯಲ್ಲಿ ಉನ್ನತ ಸ್ಥಾನ ಗಳಿಸಿ ಮೈಸೂರು ವಿಶ್ವವಿದ್ಯಾನಿಲಯದ ಎಂಎ ಅರ್ಥಶಾಸ್ತ್ರ ವಿಭಾಗಕ್ಕೆ ದಾಖಲಾಗಲು ಅರ್ಜಿ ಸಲ್ಲಿಸಿದ್ದಾನೆ. ಅಲ್ಲಿಯ ಫಲಿತಾಂಶ ತೀರ ನಿಧಾನವಾಗಿ ಪ್ರಕಟವಾದ್ದರಿಂದ ಅದು ತುಸು ತಡವಾಗಿ ಇವರಿಗೆ ತಲಪಿದೆ. ಇಲಾಖೆಗೆ ಹೋಗಿ ವಿಚಾರಿಸಿದರೆ ಪರಿಶೀಲಿಸಲು ಸಾಧ್ಯವಿಲ್ಲ ಎಂದುನಿರಾಕರಿಸಿದರು. ನೋಡು, ಇವನು ಮಾಡಿರದ ತಪ್ಪಿಗಾಗಿ, ಅಪ್ಪಟ ಕನ್ನಡಿಗನಾದ ಇವನಿಗೆ ಖುದ್ದು ಕನ್ನಡ ನಾಡಿನಲ್ಲಿಯೇ ಈ ನಿರಾಶೆ. ನೀನೊಂದು ಮಾತು ಹೇಳಬಹುದೇ?"

ಅಭ್ಯರ್ಥಿಯ ಸಾಧನೆ ಸಿದ್ಧಿಗಳು ಉತ್ಕೃಷ್ಟವಾಗಿದ್ದುವು: ಪ್ರಥಮ ದರ್ಜೆ, ಪ್ರಥಮ ಸ್ಥಾನ, ಆರ್ಥಿಕವಾಗಿ ಕೆಳ ಮಧ್ಯಮ ವರ್ಗ ಮತ್ತು ಹಿಂದುಳಿದ ಪಂಗಡಕ್ಕೆ ಸೇರಿದಾತ. ನಮ್ಮ ಸೌಕರ್ಯಕ್ಕಾಗಿ ನಾವು ಮಾಡಿಕೊಂಡಿರುವ ನಿಯಮಗಳು ಅನ್ವಯದಲ್ಲಿ ಸಮಾಜ ವಿರೋಧಿಯಾದರೆ ಅವುಗಳಿಗೆ ನೈತಿಕ ಮಿತಿಯೊಳಗೆ ಯುಕ್ತ ತಿದ್ದುಪಡಿ ತರುವುದೇ ಸರಿಯಾದ ಮಾರ್ಗ. ನಿಯಮಗಳ ನಿರ್ಮಾಪಕನಾದ ಮಾನವ ಅವುಗಳ ದಾಸನಾಗಿ ನವೆಯ ಬೇಕಾಗಿಲ್ಲ ಎಂಬುದು ನಾನು ಸದಾ ಅನುಸರಿಸುತ್ತ ಬಂದಿರುವ ನೀತಿ.

"ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥ ಜಿ.ಟಿ. ಹುಚ್ಚಪ್ಪನವರು ನನಗೆ ಪೂರ್ತಿ ಅಪರಿಚಿತರು. ಬಲು ಕಟ್ಟುನಿಟ್ಟು ಕರಾರುವಾಕ್ಕು ಎಂದು ಕೇಳಿದ್ದೇನೆ. ಚಿಂತೆ ಇಲ್ಲ, ನನ್ನ ಹಿರಿಯ ಸಹೋದ್ಯೋಗಿ ಎಚ್ಚೆಸ್ಕೆಯವರಿಗೆ ಪರಮ ಮಿತ್ರರು, ಬನ್ನಿ" ಎಂದು ಪಕ್ಕದ ಕೊಠಡಿಯಲ್ಲಿದ್ದ ಎಚ್.ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ ಅವರಲ್ಲಿಗೆ ಕರೆದುಕೊಂದು ಹೋಗಿ ಪರಿಸ್ಥಿತಿಯನ್ನು ವಿವರಿಸಿದೆ. ಮೃದಳೆದ ಮಾನವೀಯತೆಯಾದ ಅವರು ಒಡನೆ ಹುಚ್ಚಪ್ಪನವರಿಗೆ ದೂರವಾಣಿಸಿ ಸಮಸ್ಯೆಯನ್ನು ಶ್ರುತಪಡಿಸಿದರು. "ಕಳಿಸಿ ಪರಿಶೀಲಿಸುತ್ತೇನೆ" ಎಂದು ಅವರಿಂದ ಬಂದ ಆಶ್ವಾಸನೆ ಮೇರೆಗೆ ಶ್ರೀನಿವಾಸ ಮತ್ತು ಚಂದ್ರಶೇಖರ ಅವರಲ್ಲಿಗೆ ಹೋದರು.

ಸ್ವಲ್ಪ ಹೊತ್ತಾದ ಮೇಲೆ ಶ್ರೀನಿವಾಸ ಪೆಚ್ಚುಮೋರೆ ಹೊತ್ತು ನನ್ನಲ್ಲಿಗೆ ಬಂದು ನಡೆದ ಘಟನೆ ಹೇಳಿದ, "ಸರ್! ಅವರು ನನ್ನನ್ನು ವಿಶ್ವಾಸದಿಂದ ಬರಮಾಡಿಕೊಂಡು ಹೀಗೆ ಅವಧಿ ಮೀರಿ ಬಂದವರಿಗೆ ಸೀಟ್ ಕೊಡುವುದರಲ್ಲಿ ತಾವು ಆಡಳಿತ ವಿಭಾಗದ ಜೊತೆ ಎದುರಿಸಬೇಕಾಗುವ ತೊಡಕುಗಳನ್ನು ವಿವರಿಸತೊಡಗಿದರು. ಆಗ ನಾನೊಂದು ಪರಿಹಾರ ಸೂಚಿಸಿದೆ 'ಸರ್! ನಿಮಗೆ ಅಷ್ಟು ಕಷ್ಟವಾಗುವುದಾದರೆ ನಾನು ಕಾಸರಗೋಡಿನ ಹಿರಿಯ ವಕೀಲ ಬಿ.ಎಸ್. ಕಕ್ಕಿಲಾಯ ಹಾಗೂ ಸಾಹಿತಿ ಕಯ್ಯಾರ ಕಿಞ್ಞಣ್ಣ ರೈಯವರಿಂದ ಶಿಫಾರಸು ಪತ್ರ ತಂದು ಕುಲಪತಿ ದೇ. ಜವರೇಗೌಡರಿಗೆ ಒಪ್ಪಿಸಬಲ್ಲೆ.' ಫಕ್ಕನೆ ರೊಚ್ಚಿಗೆದ್ದ ಹುಚ್ಚಪ್ಪನವರು `you get out of my sight' ಎಂದು ಗುಡುಗಿದರು. ನಾನೇನು ತಪ್ಪು ಮಾಡಿದೆ?"

"ಅಪ್ರಿಯವಾದ ಸತ್ಯವನ್ನು ಅಕಾಲದಲ್ಲಿ ಹೇಳತಕ್ಕದ್ದಲ್ಲ ಎಂಬ ವ್ಯಾವಹಾರಿಕ ನಿಯಮ ಮುಗ್ಧನಾದ ನಿನಗೆ ತಿಳಿದಿಲ್ಲ. ನಿಮ್ಮಿಂದಲೇ ಈ ಉಪಕಾರ ಆಗಬೇಕೆಂದು ಅವರಿಗೆ ಪೂರ್ತಿ ಶರಣಾಗುವುದು ಬಿಟ್ಟು ನೀನೇಕೆ ಈ ಅಧಿಕ ಪ್ರಸಂಗ ಮಾಡಿದೆ? ಚಿಂತೆ ಇಲ್ಲ. ಅವರಲ್ಲಿಗೇ ಹೋಗೋಣ" ಎಂದು ಅವನ ಸಹಿತ ಆ ಕ್ಷಣ ಹುಚ್ಚಪ್ಪನವರಲ್ಲಿಗೆ ಹೋಗಿ ಪರಿಸ್ಥಿತಿಯನ್ನು ವಿವರಿಸಿ ಕ್ಷಮೆ ಯಾಚಿಸಿದೆ, ಮತ್ತು ಈ ಅರ್ಹ ಅಭ್ಯರ್ಥಿಗೆ ಅವರೇ ಭರವಸೆ ನೀಡಬೇಕೆಂದು ಕೋರಿದೆ. ಅವರು ಪ್ರಸನ್ನರಾದರೆಂದು ಮುಖಭಾವದಿಂದ ತಿಳಿಯಿತು.

ಶ್ರೀನಿವಾಸನ ವಿಳಾಸ ಮತ್ತು ಹಳ್ಳಿಯ ತಂತಿ ಸಂಪರ್ಕ ಮಾಹಿತಿಗಳನ್ನು ಬರೆದಿಟ್ಟುಕೊಂಡು ಅವನನ್ನು ಬೀಳ್ಕೊಟ್ಟೆ. ವಾರಗಳುರುಳಿದುವು. ಆಗಸ್ಟ್ ೩೦ರ ಮಧ್ಯಾಹ್ನ ಹುಚ್ಚಪ್ಪನವರಿಂದ ನನಗೆ ಫೋನ್, "ಶ್ರೀನಿವಾಸನಿಗೆ ಸೀಟ್ ಕೊಟ್ಟಿದ್ದೇನೆ. ನಾಳೆ ಸಂಜೆ ೫.೩೦ ಗಂಟೆಗೆ ಮೊದಲು ಅವನು ಶುಲ್ಕ ಕಟ್ಟಿ ದಾಖಲಾಗತಕ್ಕದ್ದು" ಎಂದರು.

ಎಲ್ಲಿಯ ಕಾಸರಗೋಡಿನ ಆ ಕುಗ್ರಾಮ, ಎಲ್ಲಿಯ ಈ ಮೈಸೂರು! ಅವನಿಗೆ ಸಂದೇಶ ತಲಪಿ ಸಕಾಲದಲ್ಲಿ ಅವನಿಲ್ಲಿಗೆ ಬರುವುದು ಅಸಾಧ್ಯ ಎಂದಿತು ತರ್ಕ. ಆದರೆ ತರ್ಕಾತೀತ ಅಂತರ್ಬೋಧೆ (intuition) ಮಿಡಿಯಿತು ಆಪ್ತವಾಕ್ಯ "ಅವನಿಗೊಂದು ಡಬ್ಬಲ್ ಎಕ್ಸ್‌ಪ್ರೆಸ್ ತಂತಿ ಸಂದೇಶ ಕಳಿಸು." ಒಡನೆ ಅಂಚೆ ಕಚೇರಿಗೆ ಧಾವಿಸಿ "join the course before 5.30 pm on August 31" ಎಂಬ ಆದೇಶವಿತ್ತೆ. ಆಡಳಿತಾಧಿಕಾರಿ ಮುತ್ತೇಗೌಡರಲ್ಲಿಗೆ (ಅಂದು ಇವರೂ ನನಗೆ ಅಪರಿಚಿತರು) ಹೋಗಿ ವಿಷಯ ಹೇಳಿ ಆತನೇನಾದರೂ ಒಂದೆರಡು ದಿನ ತಡವಾಗಿ ಬಂದರೆ ಪ್ರವೇಶ ಒದಗಿಸಬೇಕೆಂದು ಕೋರಿದೆ.

ಆಗ ಅವರು ನುಡಿದ ಮಾತು ಸದಾ ನನ್ನ ಮನದಲ್ಲಿ ಹಸುರಾಗಿದೆ, "ಸ್ವಾಮೀ! ಇದು ಪ್ರತಿ ವರ್ಷದ ಸಮಸ್ಯೆ. ನಾವಿರುವುದು ವಿದ್ಯಾರ್ಥಿಗಳ ಕಷ್ಟ ಸುಖಗಳಿಗೆ ಸ್ಪಂದಿಸಲೆಂದೇ ಹೊರತು ಕುರುಡು ಆಡಳಿತ ನಿಯಮಗಳನ್ನು ಹೃದಯಹೀನವಾಗಿ ಚಲಾಯಿಸಲೆಂದಲ್ಲ. ಎಂದೇ ಸೆಪ್ಟೆಂಬರ್ ೧೫ರ ತನಕವೂ ನಮ್ಮ ಪ್ರವೇಶಪುಸ್ತಕವನ್ನು ಕೊನೆಗೊಳಿಸುವುದೇ ಇಲ್ಲ. ಅಂದರೆ ಅಂಥವರೆಲ್ಲರೂ ನಮ್ಮ ಪುಸ್ತಕದ ಪ್ರಕಾರ ಆಗಸ್ಟ್ ೩೧ರಂದೇ ಅಧಿಕೃತವಾಗಿ ದಾಖಲಾಗುತ್ತಾರೆ!"

ನಿರಾಳವಾಗಿ ಮರಳಿದೆ. ಆಶ್ಚರ್ಯ, ಮರುಸಂಜೆಯೇ ಶ್ರೀನಿವಾಸ ನನ್ನೆದುರು ಹಾಜರ್! "ಸರ್! ನಿಮ್ಮ ತಂತಿ ನಿನ್ನೆ ಮಧ್ಯರಾತ್ರಿ ತಲಪಿತು. ಯಾವುದೋ ಲಾರಿ ಹಿಡಿದು ಸುಳ್ಯ ತಲಪಿ ಅಲ್ಲಿಂದ ಬೇರೆ ಬೇರೆ ಬಸ್ ಹತ್ತಿ ಇಂದು ಮಧ್ಯಾಹ್ನ ಮೈಸೂರು ಸೇರಿದೆ. ಮೊದಲು ಹುಚ್ಚಪ್ಪನವರನ್ನು ಭೇಟಿಮಾಡಿ ಕೃತಜ್ಞತೆ ಸಲ್ಲಿಸಿ ಅವರ ಸೂಚನೆ ಪ್ರಕಾರ ಆಡಳಿತ ಕಛೇರಿಗೆ ಹೋಗಿ ದಾಖಲೆ ಕೊಟ್ಟು ಶುಲ್ಕ ಕಟ್ಟಿ ಇದೀಗ ತಾನೇ ಬರುತ್ತಿದ್ದೇನೆ. ತಂತಿ ಕಳಿಸಲು ನಿಮಗೆ ಸಾಕಷ್ಟು ಖರ್ಚು ಆಗಿರಬೇಕು. ದಯವಿಟ್ಟು ಆ ಮೊಬಲಗು ಎಷ್ಟೆಂದರೆ ನಾನು ಪಾವತಿಸುತ್ತೇನೆ. ಅಲ್ಲದೇ ನಿಮ್ಮ ಸಕಾಲಿಕ ಉಪಕಾರವನ್ನು ನಾನು ಹೇಗೆ ಸ್ಮರಿಸಲಿ?" ಎಂದ.

"ಭಲೆ! ನಿನ್ನ ಸುಟಿತನ, ಇನ್ನೊಬ್ಬರ ಬಗೆಗಿನ ಕಾಳಜಿ ಮತ್ತು ಉಪಕಾರಸ್ಮರಣೆ ಪ್ರಶಂಸನೀಯ. ನಾನು ಮಾಡಿದ ವೆಚ್ಚ ನಿನಗೆ ನನ್ನ ಪ್ರೀತಿಯ ಉಡುಗೊರೆ. ಮುಂದೆ ನಿನ್ನ ವಿಸ್ತಾರ ಜೀವನದಲ್ಲಿ ಇಂಥ ಸನ್ನಿವೇಶಗಳು ತಲೆದೋರಿದಾಗ ಇದೇ ರೀತಿ ಸಮಾಜಕ್ಕೆ ನೀನೆ ಸೇವೆ ಒಪ್ಪಿಸುವುದೇ ಉಪಕಾರಸ್ಮರಣೆಯ ವಿಧಾನ."



ಆ ಎರಡು ವರ್ಷ ಶ್ರೀನಿವಾಸ ಓದಿ ಎಂಎ ಪದವಿಯನ್ನು ಉನ್ನತ ಸ್ಥಾನದಲ್ಲಿ ಗಳಿಸಿದ. ಮುಂದೆ ದೆಹಲಿಯಲ್ಲಿ ಯಾವುದೋ ಅಂತಾರಾಷ್ಟ್ರೀಯ ಸಂಸ್ಥೆ ಸೇರಿದನೆಂದೂ ಅಲ್ಲಿಂದ ಅಮೆರಿಕಕ್ಕೆ ತೆರಳಿ ವಿಶ್ವಸಂಸ್ಥೆಯಲ್ಲಿ ಹಿರಿಹುದ್ದೆ ಹಿಡಿದಿರುವನೆಂದೂ ಗೊತ್ತಾಗಿ ಸಂತೋಷವಾಯಿತು. ಎಂದಾದರೊಂದು ದಿನ ಅವನ ಪೂರ್ಣ ಸಾಹಸದ ವಿವರ ದೊರೆತೇ ದೊರೆಯುವುದೆಂಬ ಭರವಸೆ ನನಗಿದೆ.

ಅನಾಥ ಮಹಿಳೆಯ ಅಸೀಮ ದುಃಖ

೧೯೮೧ರಲ್ಲಿ ವಿಶ್ವಕೋಶದ ಕಾರ್ಯನಿರ್ವಾಹಕ ಸಂಪಾದಕತ್ವದ ಹೊಣೆಯೂ ನನ್ನ ಪಾಲಿಗೆ ಬಂದದ್ದು ಸರಿಯಷ್ಟೆ. ಆ ತರುಣದಲ್ಲಿ ನಮ್ಮ ವಿಭಾಗಕ್ಕೆ ಸುಮ (ಹೆಸರು ಬದಲಾಯಿಸಿದೆ) ಎನ್ನುವ ನಡುಹರೆಯದ ಮಹಿಳೆ ಹಂಗಾಮಿ ಪ್ರೂಫ್–ರೀಡರ್ (ಮುದ್ರಣ ಕರಡು ತಿದ್ದುವಾಕೆ) ಆಗಿ ವರ್ಗವಾಗಿ ಬಂದಳು. ಮಾಮೂಲಿನಂತೆ ಆಕೆಯ ಯೋಗಕ್ಷೇಮ ವಿಚಾರಿಸಿದೆ. ಅವಳನ್ನು ವಿಶ್ವವಿದ್ಯಾನಿಲಯದ ಒಬ್ಬ ಗುಮಾಸ್ತನಿಗೆ ವಿವಾಹಮಾಡಿದ್ದರು. ಇನ್ನೊಬ್ಬಾಕೆ ಬದುಕಿದ್ದಾಗಲೇ ಇದು ಆತನಿಗೆ ಎರಡನೆಯ ಮದುವೆ ಎಂದು ತಡವಾಗಿ ಇವಳಿಗೆ ತಿಳಿಯಿತು. ಸುಮಳಲ್ಲಿ ಅವನಿಗೊಬ್ಬ ಮಗಳೂ ಹುಟ್ಟಿದಳು. ಕೆಲವು ವರ್ಷಗಳ ಹಿಂದೆ ಅವನು ಸತ್ತುಹೋದ. ಲೆಕ್ಕಪತ್ರಗಳ ಪ್ರಕಾರ ಅವನ ಎಲ್ಲ ಸ್ಥಿರಚರ ಸೊತ್ತುಗಳೂ ಮೊದಲ ಹೆಂಡತಿಗೇ ಸೇರಿದುವು. ಸುಮ ನಿರ್ಗತಿಕೆ, ಅನಾಥೆ. ಹೆಚ್ಚು ಓದಿಯೂ ಇರಲಿಲ್ಲ, ವೃತ್ತಿ ಅನುಭವವಂತೂ ಶೂನ್ಯ. ಜೀವನೋಪಾಯ? ಮಗಳ ಭವಿಷ್ಯ?

ವಿಶ್ವವಿದ್ಯಾನಿಲಯದ ಕರುಣಾಳು ಅಧಿಕಾರಿಯೊಬ್ಬರು ಸುಮಳಿಗೆ ಅಲ್ಲೇ ಏನೋ ಒಂದು ಹಂಗಾಮಿ ಹುದ್ದೆ ದೊರಕಿಸಿಕೊಟ್ಟಿದ್ದರು. "ನನ್ನ ಈ ನೌಕರಿಯನ್ನು ಖಾಯಂ ಮಾಡಿಸಿಕೊಟ್ಟರೆ ತುಂಬ ಉಪಕಾರವಾಗುತ್ತದೆ ಸರ್" ಎಂದಳು ಸುಮ. ಸರಿ, ಅವಳ ಇಡೀ ಸಮಸ್ಯೆಯನ್ನು ದಾಖಲಿಸಿ ವಿಶ್ವವಿದ್ಯಾನಿಲಯಕ್ಕೊಂದು ಮನವಿ ಕಳಿಸಿದೆ. ಕುಲಸಚಿವರಿಗೂ ಕುಲಪತಿಯವರಿಗೂ ಈ ಸಮಸ್ಯೆಯನ್ನು ಮಾನವೀಯ ದೃಷ್ಟಿಯಿಂದ ಪರಿಶೀಲಿಸಬೇಕೆಂದು ವೈಯಕ್ತಿಕವಾಗಿ ಹೇಳಿದೆ ಕೂಡ.

ಕೆಲವು ತಿಂಗಳು ಸಂದಾಗ ಸುಮ ನನ್ನ ಕೊಠಡಿಗೆ ಒಂದು ಮುಂಜಾನೆ ಬಂದು ಆರಕ್ಷಕ ಠಾಣೆಗೆ ಒಡನೆ ಹಾಜರಾಗಲು ಅವಳಿಗೆ ಬಂದಿದ್ದ ಲಿಖಿತ ಆದೇಶವನ್ನು ತೋರಿಸಿ ಹೇಳಿದಳು "ನನಗೆ ಭಯವಾಗಿದೆ, ಸರ್. ನಾನೇನೂ ಅಪರಾಧ ಮಾಡಿಲ್ಲ. ನನಗೇಕೆ ಈ ಶಿಕ್ಷೆ? ಈಗ ನಾನೇನು ಮಾಡಲಿ ಹೇಳಿ."

ಅವಳ ಸಮಸ್ಯೆಯನ್ನು ಎಳೆ ಎಳೆಯಾಗಿ ಬಿಡಿಸಿದಾಗ ತಿಳಿದ ಸಂಗತಿ ಇಷ್ಟು: ಸುಮಳ ತಮ್ಮ ಉಂಡಾಡಿ ಗುಂಡ. ಇವಳ ಮನೆಯಲ್ಲೇ ಜಾಂಡಾ. ಈಚೆಗೆ ಅಕ್ಕನ ಆಭರಣಗಳನ್ನು ಲಪಟಾಯಿಸಿದ್ದ. ಬೇರೆ ಯಾವುದೋ ಕಳವು ಪ್ರಕರಣದಲ್ಲಿ ಸಿಕ್ಕಿಹಾಕಿಕೊಂಡಿದ್ದ ಈತ ತಾನು ಅಕ್ಕನ ಆಭರಣಗಳನ್ನು ಒತ್ತೆ ಇಟ್ಟಿದ್ದ ಚಿನಿವಾರನ ವಿಳಾಸ ಕೊಟ್ಟಿದ್ದ. ಪೊಲಿಸರು ಅವನ್ನು ವಶಪಡಿಸಿಕೊಂಡು ಠಾಣೆಗೆ ತಂದಿಟ್ಟಿದ್ದರು. ಈಗ ಸುಮ ಅಲ್ಲಿಗೆ ವೈಯಕ್ತಿಕವಾಗಿ ಹೋಗಿ ಅವುಗಳ ಗುರುತು ಹಿಡಿಯಬೇಕಾಗಿತ್ತು.

"ನೀವು ಒಬ್ಬರೇ ಠಾಣೆಗೆ ಹೋಗಬೇಡಿ. ಜೊತೆಯಲ್ಲಿ ಹಿರಿಯರೊಬ್ಬರನ್ನು ಕರೆದುಕೊಂಡು ಹೋಗಿ. ಮಾತು, ಬರೆಹ ಎಲ್ಲಿಯೂ ಸತ್ಯಚ್ಯುತರಾಗಬೇಡಿ" ಎಂದೆ.

"ಯಾರೂ ನನಗೆ ಗತಿ ಇಲ್ಲ, ಸರ್."

ಪರಿಸ್ಥಿತಿ ದಾರುಣವಾಗಿತ್ತು. ಒಂದು ಪ್ರಯತ್ನ ಮಾಡೋಣವೆಂದು ಪೊಲಿಸ್ ಮುಖ್ಯ ಕಛೇರಿಗೆ ದೂರವಾಣಿಸಿ ಎಂದಿನಂತೆ ನಮಸ್ಕಾರ ಸಲ್ಲಿಸಿ ನನ್ನ ಪ್ರವರ ಹೇಳಿದೆ. ಆ ಕಡೆಯಿಂದ ಬಂದ ಪ್ರತಿಕ್ರಿಯೆ ಎಷ್ಟು ಅನಿರೀಕ್ಷಿತವೋ ಅಷ್ಟು ಚೇತೋಹಾರಿಯೂ ಆಗಿತ್ತು. "ನಾನು ನಿಮ್ಮ ಮಾಜಿ ಕ್ಯಾಡೆಟ್, ಸರ್! ನನ್ನ ಹೆಸರು ಬಿ.ಎಂ. ನಾಣಯ್ಯ. ಇಲ್ಲಿ ಡಿಎಸ್‌ಪಿ ಆಗಿದ್ದೇನೆ. ನನ್ನಿಂದೇನಾಗಬೇಕು, ಅಪ್ಪಣೆ ಮಾಡಿ."

ನನ್ನಿಂದ ಸಮಸ್ತ ವಿವರಗಳನ್ನೂ ತಿಳಿದ ನಾಣಯ್ಯ ಹೇಳಿದರು, "ಇದೇ ೨ ಗಂಟೆಗೆ ನಾನೇ ನಿಮ್ಮ ಮನೆಗೆ ಬರುತ್ತೇನೆ. ಸುಮ ಆಗ ನಿಮ್ಮ ಮನೆಯಲ್ಲೇ ಇರಲಿ."

ಕ್ಲುಪ್ತ ಮುಹೂರ್ತದಲ್ಲಿ ನನ್ನ ಮನೆ ಎದುರೊಂದು ಪೊಲಿಸ್ ಜೀಪ್ ನಿಂತಿತು. ಅದರಿಂದ ಆರಡಿಯನ್ನೂ ಮೀರುವ ಎತ್ತರದ ಒಬ್ಬ ಹಿರಿಯ ಸಮವಸ್ತ್ರಧಾರಿ ಅಧಿಕಾರಿ ಪರಿವಾರ ಸಹಿತ ಇಳಿದು ಮಿಲಿಟರಿ ಗತ್ತಿನಲ್ಲಿ ನನ್ನ ಮನೆಗೆ ಬಂದಾಗ ರಸ್ತೆಯಲ್ಲಿ ವಾಹನ ಸಂಚಾರ ಸ್ಥಗಿತವಾಗಿತ್ತು. ಅಕ್ಕಪಕ್ಕದ ಮನೆಗಳವರಿಗೆ ಗಾಬರಿ. ಹಾದಿಹೋಕರಿಗೆ ಕುತೂಹಲ. ನಾಣಯ್ಯ ಬಂದರು, ಕೊಡವ ಸಂಪ್ರದಾಯದಂತೆ ನನ್ನ ಪಾದ ಸ್ಪರ್ಷಿಸಿದರು. "ಏನೂ ಚಿಂತೆ ಬೇಡ, ಸರ್. ಈಕೆ ಠಾಣೆಗೆ ಹೋಗಬೇಕಾಗಿಲ್ಲ. ಆದಷ್ಟು ಬೇಗ ಆಭರಣಗಳನ್ನು ಈಕೆಗೆ ಹಿಂದಿರುಗಿಸಲು ಏರ್ಪಾಡು ಮಾಡುತ್ತೇನೆ."

ನಾಣಯ್ಯ ಹಾಗೆಯೇ ನಡೆದುಕೊಂಡರು. ಹಿಂದೆ (ನೋಡಿ: ಅಧ್ಯಾಯ ೮೦) ಅಪ್ಪಯ್ಯನವರ ಸಂದರ್ಭದಲ್ಲಿ ಭೀಮಪ್ಪ ನಾಯಕ ಸಲ್ಲಿಸಿದ ಉಪಕಾರ ಇದೇ ಮಾದರಿಯದಲ್ಲವೇ? ಇಂಥವರ ಸಂತತಿ ಸಾವಿರವಾಗಲಿ!

ಯಥಾ ಕಾಲದಲ್ಲಿ ಸುಮಳ ಕೆಲಸ ಖಾಯಂ ಆಯಿತೆಂದು ತಿಳಿದು ಸಂತೋಷವಾಯಿತು. ಇತರರ ಕಂಬನಿ ಒರೆಸುವ ಸೇವೆಯನ್ನು ನಾವು ನಿರಂತರವಾಗಿ ಸಲ್ಲಿಸಬೇಕಾದದ್ದು ನಮ್ಮ ಕರ್ತವ್ಯ.

ಹಾಲ್ಜೇನು ಸೇರಿ ನೀವಾಗಿಹಿರಿ ಆಚಾರ್ಯ!
ಅಧ್ಯಾಯ ೮೩

ಕುವೆಂಪು (೧೯೦೪–೯೪) ಅವರು ಪಂಜೆ ಮಂಗೇಶರಾಯರಿಗೆ (೧೮೭೪–೧೯೩೭) ಅರ್ಪಿಸಿರುವ ಕವನ ಕಾಣ್ಕೆಯ ಆರಂಭದ ಸಾಲು ಪ್ರಸ್ತುತ ಅಧ್ಯಾಯದ ಶೀರ್ಷಿಕೆ. ನನ್ನ ಗೆಳೆಯ ಎಚ್.ಜಿ. ಸೂರ್ಯನಾರಾಯಣರಾಯರ (೧೯೨೪–೮೫) ಬಗ್ಗೆ ಅಧ್ಯಾಯ ೩೧ ಮತ್ತು ೪೮ರಲ್ಲಿ (ಬೆಂಗಳೂರಿನಲ್ಲಿ, ಸವಾಲನ್ನು ಎದುರಿಸುವಛಲ) ಸ್ಥೂಲವಾಗಿ ಪ್ರಸ್ತಾವಿಸಿದ್ದೇನೆ. ಇವರ ಕೃತಜ್ಞ ಅನುಜ ಎಚ್.ಜಿ. ಸೋಮಶೇಖರರಾವ್ 'ಸೂರ್ಯಸ್ಮರಣೆ' ಎಂಬ ಸಂಸ್ಮರಣ ಸಂಪುಟವನ್ನು ೨೦೦೨ರಲ್ಲಿ ಪ್ರಕಟಿಸಿದರು. ಇದರಲ್ಲಿ ಮುದ್ರಣವಾಗಿರುವ ನನ್ನ ಲೇಖನದ ಉದ್ಧೃತಾಂಶವನ್ನಿಲ್ಲಿ ಸೇರಿಸುವುದು ನನಗೆ ಪ್ರಿಯವಾದ ಸಂಗತಿ.

ಎಚ್‌ಜಿಎಸ್ ಕುರಿತಂತೆ ನಾನು (ಕುವೆಂಪು ಸಾಲಿಗೆ) ಪೋಣಿಸಬಹುದಾದ ಪಙ್ತಿಗಳಿವು:
ಹಾಲ್ಜೇನು ಸೇರಿ ನೀವಾಗಿಹಿರಿ ಆಚಾರ್ಯ!
"ಸಜ್ಜನರ ಸಂಗ ಹೆಜ್ಜೇನು ಮೆದ್ದಂತೆ" – ವಿ
ದ್ವಜ್ಜನರ ನಾಣ್ಣುಡಿಯ ಸಾಕಾರವೆಂದೆನಿಸಿ
ಕಜ್ಜ ಮುಗಿಯುವ ಮೊದಲೆ ತೆರಳಿದಿರಿ ಅತ್ರಿಸೂನು

ಅವರ ಮತ್ತು ನನ್ನ ಮೊದಲ ಭೇಟಿ ಬೆಂಗಳೂರಿನ ಸರ್ಕಾರೀ ಕಲಾ ಮತ್ತು ವಿಜ್ಞಾನ ಕಾಲೇಜಿನಲ್ಲಾಯಿತು – ಮಾರ್ಚ್ ೩೧, ೧೯೬೫ರಂದು, ಎಂದು ಹಿಂದೆ ಹೇಳಿದ್ದೇನೆ. ನಲ್ವತ್ತರ ಹಿರಿಕಿರಿ ಮಗ್ಗುಲಲ್ಲಿದ್ದ ಎಚ್‌ಜಿಎಸ್, ನಾನು ಮತ್ತು ಇತರ ಯುವ ಅಧ್ಯಾಪಕರು ನಮ್ಮ ಚಟುವಟಿಕೆಗಳನ್ನು ಕೇವಲ ಪಾಠ ಪ್ರವಚನಗಳ ಯಾಂತ್ರಿಕ ನಿರ್ವಹಣೆಗೆ ಸೀಮಿತಗೊಳಿಸಲಿಲ್ಲ. ಪಾಠೇತರ ಕಾರ್ಯಕಲಾಪಗಳಾದ ಕಾಲೇಜ್ ವಾರ್ಷಿಕ ಪಂಚಾಂಗ ಮತ್ತು ಪುರವಣಿ ಸಂಪಾದನೆ ಹಾಗೂ ಮುದ್ರಣ, ವಿದ್ಯಾರ್ಥಿ ಭಿತ್ತಿಪತ್ರಿಕೆಗಳ ನಿರ್ವಹಣೆ, ಸಾಹಿತ್ಯ, ಸಂಗೀತ ನಾಟಕ ಇತ್ಯಾದಿ ಸಂಸ್ಕೃತಿ ಪೋಷಕ ಕ್ರಿಯೆಗಳ ಚಾಲನೆ ಮತ್ತು ಪೋಷಣೆ, ಸಮಾಜಸೇವೆ ಎಲ್ಲದರಲ್ಲೂ ವಿದ್ಯಾರ್ಥಿಗಳ ಜೊತೆ ನಾವಿದ್ದೆವು. ರೈಫಲ್ ಕ್ಲಬ್ ಸ್ಥಾಪಿಸಿ, ಮಹಿಳೆಯರನ್ನೂ ಒಳಗೊಂಡಂತೆ, ಆಸಕ್ತ ಅಧ್ಯಾಪಕರಿಗೆ ತುಪಾಕಿ ತರಬೇತು, ಅಗ್ನಿಶಾಮಕ ಶಿಕ್ಷಣ, ನಕ್ಷತ್ರ ವೀಕ್ಷಣೆ, ಚಾರಣ ಮುಂತಾದವನ್ನು ಆಚರಣೆಗೆ ತಂದೆವು. ಸರ್ಕಾರೀ ದೊಡ್ಡಿ, ಗೊಬ್ಬರದ ಗುಂಡಿ ಎಂದು ಮುಂತಾಗಿ ಮಂದಿ ಮುಖ ಸಿಂಡರಿಸುತ್ತಿದ್ದ ನಮ್ಮ ಕಾಲೇಜಿಗೆ ಆಗ ವಸಂತಾಗಮನ! ಈ ಒಲವಿನ ಗುರುಕುಲದ ಅನಭಿಷಿಕ್ತ ಕುಲಪತಿಗಳು ಪ್ರಾಂಶುಪಾಲರಾದ ಆರ್.ಆರ್. ಉಮರ್ಜಿ, ಕುಲಸಚಿವರು ನಮ್ಮ ಎಚ್‌ಜಿಎಸ್.

ಸೂರ್ಯನಾರಾಯಣರಾಯರೊಬ್ಬ ಹುಟ್ಟಾ ಮುಂದಾಳು, ಸ್ವಾತಂತ್ರ್ಯ ಹೋರಾಟಗಾರ. ಎಂದೂ ತಮ್ಮ ಹಿರಿಮೆಯನ್ನು ಆದೇಶವಾಗಿ ವಿಧಿಸಿದವರಲ್ಲ. ಬದಲು, ತಮ್ಮ ನಡೆನುಡಿ ಬಗೆಗಳಿಂದ ಕಾಣಿಸಿದವರು. ಉದಾಹರಣೆಗೆ ನಾಟಕ ನಿರ್ದೇಶನ, ಲೇಖನ ಸಂಪಾದನೆ, ವರದಿ ತಯಾರಿಕೆ, ಅನುವಾದ ಕಲೆ ಮುಂತಾದ ಸಾಹಿತ್ಯ–ಹೃದಯ ಸಂಬಂಧೀ ಚಟುವಟಿಕೆಗಳಲ್ಲಿ ಅವರೇ ನಮ್ಮ ಮಾರ್ಗದರ್ಶಕರು. ನಮ್ಮ ತಪ್ಪುಗಳನ್ನು ಎತ್ತಿ ತೋರಿಸಲಿಲ್ಲ – ನಾವೇ ಅವನ್ನು ಗುರುತಿಸಿ ಸರಿಯಾದ ರೂಪ ಕಂಡುಕೊಳ್ಳಲು ನಯವಾಗಿ ನೆರವಾದರು. ಔದಾರ್ಯಕ್ಕೆ ಪರ್ಯಾಯ ನಾಮ ಎಚ್‌ಜಿಎಸ್. ಇಂದು ಅವರಿಲ್ಲ. ನನ್ನ ಅಂತರಾಳದಲ್ಲಿ ಮಿಡಿಯುತ್ತಿದೆ ಮಂಜೇಶ್ವರ ಗೋವಿಂದಪೈ (೧೮೮೩–೧೯೬೩) ನುಡಿ:
ನಮ್ಮ ತಪ್ಪನೆನಿತೊ ತಾಳ್ವೆ
ಅಕ್ಕರೆಯಿಂದೆಮ್ಮನಾಳ್ವೆ
ನೀನೆ ಕಣಾ ನಮ್ಮ ಬಾಳ್ವೆ
ನಿನ್ನ ಮರೆಯಲಮ್ಮೆವು

೧೯೬೯ರಲ್ಲಿ ನಾನು ಮೈಸೂರು ನಿವಾಸಿಯಾದೆ. ಅದೇ ತರುಣದಲ್ಲಿ ಎಚ್‌ಜಿಎಸ್ ಕೂಡ ಇಲ್ಲಿಗೆ ಬಂದರು. ಅನ್ಯ ಪರಿಸರದಿಂದ ವೃತ್ತಿ ಸಲುವಾಗಿ ಮೊದಲ ಬಾರಿಗೆ ಮೈಸೂರು ಸೇರಿದಾತ ನಾನು. ಅವರೋ ತವರಿಗೆ ಮರಳಿದವರು. ಕೊಡಗಿನ ಜೇನು ನಾನು ಹೌದೋ ಅಲ್ಲವೋ (ಹಾಗೆಂದು ಅವರು ಆಗಾಗ ನನ್ನ ಬಗ್ಗೆ ಮೆಚ್ಚು ನುಡಿ ಆಡುತ್ತಿದ್ದರು –

ಪ್ರತಿ ವರ್ಷವೂ ನಾನು ನನ್ನ ತವರಾದ ಕೊಡಗಿನಿಂದ ಜೇನು ತರಿಸಿ ಮಿತ್ರರಿಗೆ ಹಂಚುತ್ತಿದ್ದೆ) ಅವರಂತೂ ಮೈಸೂರು ಮಲ್ಲಿಗೆಯೇ ಖರೆ. ಜೇನೆನ್ನಿ, ಮಲ್ಲಿಗೆಯೆನ್ನಿ 'ಒಳಗಿನ ಹೂರಣ ಒಂದೆ!' (ಕೆಎಸ್‌ನ) ಅವರು ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದಲ್ಲಿ ಇಂಗ್ಲಿಷ್–ಕನ್ನಡ ನಿಘಂಟಿನ ಒಬ್ಬ ಸಂಪಾದಕರಾಗಿದ್ದರು. ನಾನು ಕನ್ನಡ ವಿಶ್ವಕೋಶದ ವಿಜ್ಞಾನ ಸಂಪಾದಕನಾಗಿದ್ದೆ. ನಿಘಂಟೋ ವಿಶ್ವಕೋಶವೋ ಅಂತರಂಗದ ಹೂರಣ–ಪ್ರೇರಣ ಮತ್ತು ಬಹಿರಂಗದ ತೋರಣ ಒಂದೇ – ಅದು ಕನ್ನಡದ ಕಾರಣ!

ನಮ್ಮ ಹೂರಣ–ಪ್ರೇರಣ ಒಂದೇ ಆಗಿದ್ದರೂ ತೋರಣ–ಚಾರಣ ಪೂರ್ತಿ ವಿಭಿನ್ನವಾಗಿದ್ದುವು. ಇದರ ಅರ್ಥ: ಅಧ್ಯಯನ, ಚಿಂತನ, ಮಂಥನ, ಸಂಭಾಷಣೆ ಮುಂತಾದ ವೈಯಕ್ತಿಕ ಚಟುವಟಿಕೆಗಳು ಅವರಿಗೆ ಬಲು ಅಪ್ಯಾಯಮಾನ. ವಿವಿಧ ಮಟ್ಟಗಳಲ್ಲಿ ಮೊದಲ ಮೂರು ನನಗೂ ಹಾಗೆ. ಜೊತೆಯಲ್ಲೇ ಜನಪ್ರಿಯ ವಿಜ್ಞಾನ ಲೇಖನಗಳನ್ನು ಪುಸ್ತಕಗಳನ್ನೂ ಬರೆಯುವುದು ನನ್ನ ಮೆಚ್ಚಿನ ಹವ್ಯಾಸ. ಫಲಿತಾಂಶ ಅವರು ಕ್ರಮೇಣ ಏಕಾಕಿ ಮತ್ತು ಏಕಾಂಗಿ ಆದರು, ನಾನೆಂದೂ ಏಕಾಕಿ ಆಗಲಿಲ್ಲ. (ಏಕಾಕಿ= ಜನಪರಿವೇಷ್ಟಿತನಲ್ಲದವ, ಏಕಾಂಗಿ= ಏಕಾಂತ ಚಿಂತನಪ್ರಿಯ. ಈ ಸೂಕ್ಷ್ಮವನ್ನು ಬೇರೊಂದು ಸಂದರ್ಭದಲ್ಲಿ ಎಚ್‌ಜಿಎಸ್‌ರಿಂದಲೇ ಅರಿತಿದ್ದೆ.)

ಅವರಂಥ ಸದಭಿರುಚಿಯ ಸಜ್ಜನ ಸಹೃದಯ ವಿದ್ವಾಂಸರ ಉಜ್ವಲ ಪ್ರತಿಭೆ ನಿಯೋಜಿತ ವೃತ್ತಿ ಮತ್ತು ಪ್ರತ್ಯಕ್ಷ ಸಂಭಾಷಣೆ ಈ ಎರಡು ನೆಲೆಗಳಿಂದ ಹೊರಗೆ ಬೆಳಗುತ್ತಿಲ್ಲವಲ್ಲ ಎಂಬ ಕೊರಗು ಬೆಂಗಳೂರು ದಿನಗಳಿಂದಲೇ ನನ್ನನ್ನು ಬಾಧಿಸುತ್ತಿತ್ತು. ಪರಿಪೂರ್ಣತಾನ್ವೇಷಕನೊಬ್ಬ ಸ್ವಂತ ಕೃತಿಯಲ್ಲೆಂದೂ ಪರಿಪೂರ್ಣತೆ ಕಾಣದಿರುವುದರಿಂದ ಕೃತಿ ರಚನೆಯ 'ದುಸ್ಸಾಹಸ'ಕ್ಕೆ ಮುಂದಾಗುವುದಿಲ್ಲವೆಂಬ ಅನುಭವೋಕ್ತಿಗೆ ಅವರಲ್ಲಿ ನಿದರ್ಶನ ಕಂಡೆ.

"ಕರ್ತಾರನ ಪ್ರಥಮ ದೋಷ ಮಾನವನ ಸೃಷ್ಟಿ. ದ್ವಿತೀಯ ಮತ್ತು ಅಂತಿಮ ದೋಷ ಮಾನವನಲ್ಲಿ ಪರಿಪೂರ್ಣತೆಯನ್ನು ಅನುಶೀಲಿಸುತ ಹಂಬಲದ ನಾಟಿ!" ಎಂದು ನಾನು ಅವರನ್ನು ಛೇಡಿಸುವುದಿತ್ತು.

"ಎಲ್ಲರೂ ಬರೆಯುವವರಾದರೆ ಓದುವವರು ಯಾರು?" ಅವರ ನಿರುದ್ವಿಗ್ನ ಜವಾಬು.

"ಪ್ರಾಜ್ಞರು ಲೇಖನಿ ಹಿಡಿಯದಿದ್ದರೆ ಖುದ್ದು ಅವರೇ ಬೂಸದ ಹುಚ್ಚು ಹೊಳೆಯಲ್ಲಿ ಉಸಿರು ಕಟ್ಟಿ ಸಾಯಬೇಕಾಗುತ್ತದೆ!" ನನ್ನ ಚಬಕು.

ಬರೆಯಬಲ್ಲ ಎಚ್ ಜಿ ಎಸ್ ಬರೆಯುತ್ತಿಲ್ಲ. ಇದು ನನ್ನಂತೆ ಅವರೊಂದಿಗೆ ನಿಕಟ ಸಾಹಚರ್ಯವಿದ್ದ ಎಲ್ಲ ಸನ್ಮಿತ್ರರ ಬೆರಗು ಮತ್ತು ಕೊರಗು ಕೂಡ. ಇದರಿಂದ ಸಾರಸ್ವತ ಲೋಕಕ್ಕೆ ಎಂಥ ನಷ್ಟವಿದೆ ಎಂಬ ಅರಿವು ನನಗಿತ್ತು. ಆದರೆ 'ನಾನೇನ ಮಾಡಲಿ ಬಡವನಯ್ಯ!'

'ಉಳ್ಳವರು ಶಿವಾಲಯವ ಮಾಡುವರು' ಸನ್ನಿವೇಶ ತನ್ನಿಂದ ತಾನೇ ಒದಗಿ ಬಂದದ್ದು ಒಂದು ಚೋದ್ಯ: ಬೆಂಗಳೂರಿನ ಐಬಿಎಚ್ ಪ್ರಕಾಶನದವರು ಕನ್ನಡದಲ್ಲಿ ಜನಪ್ರಿಯ ವಿಜ್ಞಾನ ಪುಸ್ತಕಗಳ ರೂಪಣೆ ಮತ್ತು ರಚನೆಯ ಹೊಣೆಯನ್ನು ನನಗೆ ವಹಿಸಲು ಮುಂದೆ ಬಂದರು. ಇದು ಕನ್ನಡದ ಕೆಲಸ, ವಿಜ್ಞಾನ ವಾಙ್ಮಯದ ನಿರ್ಮಾಣ, ನಾನು ಬಿಡುವೇಳೆಯಲ್ಲಿ ಕೈಗೊಳ್ಳಬಹುದಾದ ಸ್ವತಂತ್ರ ವಿಹಾರ. ಅಂದರೆ ಇದು ನನ್ನ ಸಾಮರ್ಥ್ಯಮಿತಿಯೊಳಗಿತ್ತು.

ಸಮರ್ಥ ಕನ್ನಡ ವಿಜ್ಞಾನ ಲೇಖಕರ ಪುಟ್ಟ ತಂಡ ಕಟ್ಟಿ, ಕೆಲಸದ ರೂಪರೇಷೆಗಳನ್ನು ನಿರ್ಧರಿಸಿ, ನಾವೆಲ್ಲರೂ ಲೇಖನ–ಸಂಪಾದನ–ಸಂಸ್ಕರಣ ಕ್ರೈಗಳಲ್ಲಿ ಉದ್ಯುಕ್ತರಾದೆವು. ಹಸ್ತಪ್ರತಿಗಳು ಸಿದ್ಧವಾಗುತ್ತಿದ್ದಂತೆ ಅವನ್ನು ಎಚ್‌ಜಿಎಸ್‌ರಿಗೆ ಒಪ್ಪಿಸುತ್ತಿದ್ದೆವು: ಶೈಲಿಗೆ ಅಧಿಕ ಸ್ಪಷ್ಟತೆ ಮತ್ತು ಲಾಲಿತ್ಯ ಪೂಸುವ ಸಲುವಾಗಿ ಈ ಸಂಸ್ಕರಣ ಕ್ರಿಯಾವೇಳೆ ಅವರ ಜೊತೆ ಪಟ್ಟಾಗಿ ಗಂಟೆಗಟ್ಟಳೆ ಕುಳಿತು ಇಂಗ್ಲಿಷಿನ ನವುರು ಮಗ್ಗುಲುಗಳನ್ನು ಸ್ವಾಂಗೀಕರಿಸಿಕೊಂಡು ಮುಂದುವರಿದೆ. ಅಂದರೆ ನನ್ನ ೫೦ನೆಯ ವಯಸ್ಸಿನಲ್ಲಿ ನಾನವರ ಗುರುಕುಲ ಶಿಷ್ಯನಾದೆ. ನಮ್ಮ ಪುಸ್ತಕಗಳು ವಿದೇಶೀ ಶಿಷ್ಟ ಕೃತಿಗಳಿಗೆ ವಿಷಯ–ಶೈಲಿ–ಚಿತ್ರ–ವಿನ್ಯಾಸದಲ್ಲಿ ಸರಿಸಾಟಿ ಆದುವು. ನನಗೆ ಇಂಗ್ಲಿಷಿನಲ್ಲಿ ಸ್ವತಂತ್ರವಾಗಿ ಲೇಖನ ಮತ್ತು ಪುಸ್ತಕ ಬರೆಯುವ ಧೈರ್ಯ ಬಂದಿತು. ಈ ಅಧೀರ ಅರ್ಜುನನಿಗೆ, 'ತಸ್ಮಾದ್ಯುಧ್ಯಸ್ವ ಭಾರತ' ಎಂಬ ಬೀಜಮಂತ್ರವನ್ನು ನಲ್ಮೆಯಿಂದ ಉಪದೇಶಿಸಿದ ಪಾರ್ಥಸಾರಥಿ ನಮ್ಮ ಪ್ರಿಯ ಎಚ್‌ಜಿಎಸ್. ಅವರ ಮೌನ ಜ್ಞಾನಕೈಂಕರ್ಯ ಮತ್ತು ನಿರಪೇಕ್ಷ ಮಾರ್ಗದರ್ಶನ ಕುರಿತು ಹೇಳಬಹುದಾದ ನುಡಿ:

ಮರದೊಳಿಹ ಹಣ್ಣುಗಳನೆಣಿಸುವುದು ಬಲು ಸುಲಭ
ಹಣ್ಣೊಳಗೆ ಹುದುಗಿರುವ ಮರಗಳನೆಣಿಸಲಾರೆ!
ಸೃಷ್ಟಿವೈಚಿತ್ರ್ಯವಿದು – ಬ್ರಹ್ಮಾಂಡ–ಪಿಂಡಾಂಡ
ಸಂಬಂಧ, ಜೀವನ ರಹಸ್ಯವೋ! ಅತ್ರಿಸೂನು.

ಸಭ್ಯಸುಸಂಸ್ಕೃತ ಸಂತೃಪ್ತ ಸಂಸಾರ. ಪತ್ನಿ ಶಾರದಾರಾವ್ ಈ ಸ್ವಾಸ್ಥ್ಯದ ಆಧಾರ ಶ್ರುತಿ. ರಾಮನಾಥ, ನರೇಂದ್ರ 'ಹೊಸ ಚಿಗುರು'ಗಳು. ಎಚ್‌ಜಿಎಸ್ – ಇಂದು ಭೌತವಾಗಿ ನಮ್ಮೊಡನಿಲ್ಲ, ಆದರೆ ಬೌದ್ಧಿಕವಾಗಿ ಮತ್ತು ಜೀವನಮೌಲ್ಯವಾಗಿ ಸದಾ ಪ್ರಸ್ತುತರಾಗಿದ್ದಾರೆ.

In the Temple of Learning

Under the title `Here lies HGS the Good' I wrote an obituary for Star of Mysore on HG Suryanarayana Rao (1924 to May 24, 1985). The note was published in the daily on May 25, 1985.

It is said of Viswamitra that he had a knack to see only the negative qualities in the people. Poor Harischandra became his target and you know the rest of the story. Could there be an Antivisvamitra? Those of us who had even a fleeting acquaintance with Professor H.G. Suryanarayana Rao, popularly known as HGS, would certainly vouchsafe that he would eminently fit into this mould. For, he never saw anything bad in any creature.

HGS was a first-rate student of English literature. Professors B.M. Srikantia and A.N. Murthy Rao were among his teachers and mentors. In the Government Arts and Science College, Bangalore, where he was teaching English and I Mathematics, some of us, his colleagues, usued to attend his classes for the sheer joy of getting a feel of current literature. He was a specialist in drama-directing and miscellany-editing. It looked as though he had sublimated his personality to the work entrusted to him and drew out the best in the students and the staff associated with him.

He died young – sixty plus is no age to die. The long suffering he underwent was unbearable. He bore it with a courage of a Karna and dedication of a Nachiketha. In his untimely death, no doubt his suffering has come to the inevitable end, but the cultural life of the City has lost one of its stalwart torchbearers. For, no one loved humanity more than HGS.

Added in 2002

The great visionary and missionary Martin Luther wrote, "The prosperity of a country depends, not on the abundance of its revenues, nor on the strength of its fortifications, nor on the beauty of its public buildings, but it consists in the number of cultivated citizens, in its men of education, enlightenment, and character, here are to be found its true interest, its chief strength, its real power."

HGS was a living example of a person who radiated the fragrance of character to those who came under his spell, and steeled them into men of education and strength.

Max Planck was the formulator of Quantum Theory (1900). It paved the way for Modern Physics as different from the erstwhile Classical or Newtonian Physics. The genius of the contemporary physicist Albert Einstein, who propounded the Theories of Relativity (Special in 1905, and General in 1915) was discovered by Planck, who at once

invited Einstein to join him (Planck) at Berlin. The two eminent men were also great men of character who respected each other with genuine love. When Planck attained sixty in 1918, Einstein delivered the felicitation address at the Physical Society in Berlin. The theme was Principles of Research. It takes of thus, “In the temple of science and many mansions, and various indeed are they that dwell therein and the motives that have led them thither. Many take to science out of a joyful sense of superior intellectual power, science is their own special sport to which they look for vivid experience and the satisfaction of ambition; many others are to be found in the temple who have offered the products of their brains on this altar for purely utilitarian purposes. Were an angel of the Lord to come and drive all the people belonging to these two categories out of the temple, the assemblage would be seriously depleted, but there would still be some men, of both present and past times, left inside. Our Planck is one of them, and that is why we love him.”

Our dear HGS belonged to the `men inside the temple of learning’ like Planck. That is why even today, seventeen years after the passing away of his mortal frame, his flame sheds so much love and warmth on us.

He could be a fierce critic, but without meaning any offence to the other person. Once he took me to severe task for being blunt in my music review of a respected father figure ot the Hindustani music. I wrote under the caption `This is no music’ and threadbare analyzed the reasons for my conclusion. “If salt were to lose its savor how shall we salt it?” HGS had not attended the concert. Yet he told me point blank, “Even while agreeing with your argument, I do not approve of the style of presentation. That is not the way of the cultured!”

“But who by his hysterical behavior on the stage provoked contempt in our minds? Mysore audience cannot be fooled. Mine is a mild and civilized way of exhibiting the disappointment of the thousands of expectant dumb rasikas.”

“Yet you have brought down the dignity of the City.”

“Honest men by tolerating dishonesty run the risk of being ruled by dishonest men!”

We agreed to disagree. But this impact really did polish my Kodagu-roughness. Thus today whenever I am forced to write an adverse observation on a concert, book etc., after writing it I subject the contents to the HGS-test, “Would he have approved it,” and mend it appropriately. Hence he is as relevant to me today, perhaps even more, as he was then. Finally when the readers sincerely compliment me on my views and supposed English style I bow to the memory of HGS, in deep reverence, for, I learnt this art at his garadi.

ನಿವೃತ್ತ ಜೀವನದಲ್ಲಿ ತಯಾರಿಸಿದ ಅನುಭವದಡುಗೆ
ಅಧ್ಯಾಯ ೮೪

ಸೆಪ್ಟೆಂಬರ್ ೧೪, ೧೯೮೬ರಂದು ನನಗೆ ಅಧಿಕೃತವಾಗಿ ವಯಸ್ಸು ೬೦ ತುಂಬಿದುದರಿಂದ (ವಾಸ್ತವವಾಗಿ ಈ ದಿನಾಂಕ ೩೦-೧-೧೯೮೬ ಆಗಬೇಕು) ನಾನು ವಿಶ್ವವಿದ್ಯಾನಿಲಯದ ನಿಯಮಗಳ ಪ್ರಕಾರ ಸೆಪ್ಟೆಂಬರ್ ೩೦ರಂದು ವೃತ್ತಿಯಿಂದ ನಿವೃತ್ತನಾದೆ. ಆರೋಗ್ಯ, ಅನುಭವ, ಉತ್ಸಾಹ, ಗೃಹಸ್ಥಿತಿಗತಿ ಮತ್ತು ಕಾರ್ಯೋಲ್ಲಾಸ ಎಲ್ಲವೂ ಗರಿಷ್ಠ ಮಟ್ಟದಲ್ಲಿದ್ದಾಗ, ವಿಶ್ವಕೋಶ ನಿರ್ಮಾಣಕಾರ್ಯ ಇನ್ನೂ ಪೂರ್ಣವಾಗಿರದಿದ್ದಾಗ (೧೪ ಸಂಪುಟಗಳ ಯೋಜನೆಯಲ್ಲಿ ೧೨ ಮಾತ್ರ ಆ ವೇಳೆಗೆ ಮುಗಿದಿದ್ದುವು), ಇದನ್ನು ಪೂರೈಸಲು ಸಮರ್ಥ ವಿಜ್ಞಾನಸಂಪಾದಕ ಅಲಭ್ಯವಾಗಿದ್ದಾಗ ಮತ್ತು ಕನ್ನಡದ ಈ ಕರ್ತವ್ಯ ನಿರ್ವಹಿಸಲು ನಾನು ಸಿದ್ಧನಾಗಿದ್ದಾಗ ವಿಶ್ವವಿದ್ಯಾನಿಲಯ ಕೇವಲ ಅಂಧ ಧೇನುಕ ನಿಯಮಗಳಿಗೆ ಶರಣಾಗಿ ನನ್ನ ನಿವೃತ್ತಿಯನ್ನು ಮನ್ನಣೆ ಮಾಡಿತು.

ಮುಂದೇನು ದಾರಿ ನನ್ನೆದುರು? ಯಾವುದೇ ಬಗೆಯ ತಾಬೆದಾರಿಗೆ, ಎಷ್ಟೇ ಆಕರ್ಷಣೀಯವಾಗಿದ್ದರೂ ಒಪ್ಪಿಕೊಳ್ಳತಕ್ಕದ್ದಲ್ಲ ಎಂಬುದು ನನ್ನ ದೃಢ ನಿಲವು. ಒಮ್ಮೆ ರಾಜನಾಗಿದ್ದ ಕಾನನಕ್ಕೆ ಮತ್ತೆ ಪ್ರವೇಶಿಸತಕ್ಕದ್ದಲ್ಲ, ಅಲ್ಲವೇ?

ದಾರಿಗಾ! ನಿನಗೊಂದು ಪಥ ದತ್ತವಾಗಿಲ್ಲ
ನೀರಿಗಿಳಿ, ಅಂಜದೆಯೆ ಅಳುಕದೆಯೆ ಈಸುತಿರು
ನೀ ರೂಪಿಸುವೆ ಹೊಸತು ಮಾರ್ಗವನು, ಬದುಕಿನಲಿ
ಸಾರ್ಥಕ್ಯ ಗಳಿಸಲಿಹ ಮಾರ್ಗವಿದು ಅತ್ರಿಸೂನು

ಹೀಗೆ ೧೯೮೬-೨೦೦೨ ಅವಧಿಯಲ್ಲಿ ನಾನು ನನ್ನ ತೃಪ್ತ್ಯರ್ಥ ರಚಿಸಿದ ಜಾಡುಗಳಲ್ಲಿ ಮೂರನ್ನು ಮಾತ್ರ ಇಲ್ಲಿ ಸಂಕ್ಷೇಪವಾಗಿ ನಿರೂಪಿಸುತ್ತೇನೆ: ಕನ್ನಡದಲ್ಲಿ ಜನಪ್ರಿಯ ವಿಜ್ಞಾನ ಕೃತಿಗಳ ರಚನೆ, ಗಾನಭಾರತೀ (ರಿಜಿಸ್ಟರ್ಡ್) ಸಂಗೀತ ಸಂಸ್ಥೆಯ (ಸ್ಥಾಪನೆ ೧೯೭೮) ಕನಸಾದ ವೀಣೆ ಶೇಷಣ್ಣ ಭವನದ ನಿರ್ಮಾಣಕ್ಕೆ ಸೇವಾ ಕೈಂಕರ್ಯ ಮತ್ತು ನೊಬೆಲ್ ಪಾರಿತೋಷಿಕ ಪುರಸ್ಕೃತ ಅಮೆರಿಕ ನಿವಾಸಿ ಸುಬ್ರಹ್ಮಣ್ಯನ್ ಚಂದ್ರಶೇಖರ್ (೧೯೧೦-೯೫) ಇವರ ಸಂದರ್ಶನ.

ನನ್ನ ಎಲ್ಲ ಪುಸ್ತಕಗಳನ್ನು ಪ್ರಕಾಶಿಸುವ ಹೊಣೆಯನ್ನು ಮಗ ಅಶೋಕ (ಅತ್ರಿ ಬುಕ್ ಸೆಂಟರ್, ಮಂಗಳೂರು) ಪ್ರೀತಿ ಮತ್ತು ಬದ್ಧತೆ ಸಹಿತ ವಹಿಸಿಕೊಂಡದ್ದರಿಂದ ಆ ದಿನಗಳಲ್ಲಿ – ಕೃಷ್ಣವಿವರಗಳು, ರಾಮಾನುಜನ್ ಬಾಳಿದರಿಲ್ಲಿ, ಕೊಪರ್ನಿಕಸ್ ಕ್ರಾಂತಿ, ಐನ್‌ಸ್ಟೈನ್ ಬಾಳಿದರಿಲ್ಲಿ, ಎನ್ಸಿಸಿ ದಿನಗಳು, ಸುಬ್ರಹ್ಮಣ್ಯನ್ ಚಂದ್ರಶೇಖರ್, ಸಪ್ತಸಾಗರದಾಚೆಯೆಲ್ಲೋ... ಮುಂತಾದ ಕೃತಿಗಳು ಬೆಳಕು ಕಂಡುವು. ನವಕರ್ನಾಟಕ ಪ್ರಕಾಶನದ ಆರ್. ಎಸ್. ರಾಜಾರಾಮ್ ಅವರ ಸೂಚನೆ ಮೇರೆಗೆ 'ನವಕರ್ನಾಟಕ ವಿಜ್ಞಾನ ಪದವಿವರಣ ಕೋಶ'ದ ಪ್ರಧಾನ ಸಂಪಾದಕನಾಗಿ ಅದನ್ನು ಯಶಸ್ವಿಯಾಗಿ ಪೂರೈಸಿಕೊಟ್ಟೆ. ಇನ್ನು ಬಿಡಿ ಲೇಖನಗಳು, ಉಪನ್ಯಾಸಗಳು, ವಿಜ್ಞಾನ ಕಮ್ಮಟಗಳು ಮುಂತಾದವು ಮೇಳೈಸಿ ನನ್ನ ನಿವೃತ್ತ ಜೀವನ ವೃತ್ತಿ ಜೀವನಕ್ಕಿಂತ ಅಧಿಕ ಪ್ರವೃತ್ತವಾಯಿತೆಂಬುದು ಸಮಾಧಾನದ ಸಂಗತಿ. ಏಕೆಂದರೆ ಈ ಬದುಕೊಂದು ಸಾಲ, ನಿಸರ್ಗವಿಲ್ಲಿ ಸಾಲಿಗ, ಇದನ್ನು ಪ್ರಾಮಾಣಿಕ ಮತ್ತು ಸಮಾಜೋಪಯುಕ್ತ ಮಾರ್ಗದಲ್ಲಿ ಬಡ್ಡಿ ಸಹಿತ ತೀರಿಸಬೇಕಾದದ್ದು ವ್ಯಕ್ತಿಯ ನೈತಿಕ ಹೊಣೆ.

ದಿನಾಂಕ ೨೬-೧೦-೧೯೯೧ರಂದು ವೀಣೆ ಶೇಷಣ್ಣ ಭವನದ ಉದ್ಘಾಟನೆ ಆಯಿತು. 'ಸವಾಲನ್ನು ಎದುರಿಸುವ ಛಲ' ಎಂಬ ಪುಸ್ತಕದಲ್ಲಿ ಇದರ ಕಥೆ ಬರೆದಿದ್ದೇನೆ. 'ಸಂಗೀತ ರಸನಿಮಿಷಗಳು' ಎಂಬ ಕೃತಿಯಲ್ಲಿ ಕೂಡ ಇದು ಸೇರಿದೆ. **[ಕೆಲವೇ ಪ್ರತಿಗಳು ಲಭ್ಯವಿವೆ: ಬೆಲೆ ರೂ ೬೦, ಅಂಚೆ ಉಚಿತ – ಅವ]** ಇನ್ನು ಸಂಗೀತ, ಭರತನಾಟ್ಯ, ನಾಟಕ, ಯಕ್ಷಗಾನ ಮುಂತಾದ ಕಲೆಗಳ ವ್ಯವಸ್ಥಾಪನೆ, ಪ್ರಚಾರ ಮತ್ತು ವಿಮರ್ಶನ ರಂಗದಲ್ಲಿ ದುಡಿಮೆ ನನ್ನ ಪ್ರೀತಿಯ ಹವ್ಯಾಸ.

ಅಮೆರಿಕ ನಿವಾಸಿಗಳಾಗಿರುವ ಜಯಶ್ರೀ-ಆನಂದರ ನಲುಮೆಯ ಒತ್ತಾಯದ ಮೇರೆಗೆ ಲಕ್ಷ್ಮಿಯೂ ನಾನೂ ೧೯೯೫ರಲ್ಲಿ ಅಮೆರಿಕಯಾನ ಕೈಗೊಂಡೆವು. ನನ್ನ ಬಾಳಿನ ಕನಸಾದ ಚಂದ್ರಶೇಖರ್-ದರ್ಶನ-ಸಂದರ್ಶನ ಆಗ

ಒದಗಿದ್ದೊಂದು ಅಪೂರ್ವ ಅವಿಸ್ಮರಣೀಯ ಅನನ್ಯ ಅನುಭವ. 'ಸಪ್ತಸಾಗರದಾಚೆಯೆಲ್ಲೋ…' Crossing the Dateline ಮತ್ತು With the Great Mind ಕೃತಿಗಳಲ್ಲಿ ವಿವರಗಳನ್ನು ನಿರೂಪಿಸಿದ್ದೇನೆ.

ಹೀಗೆ ನನ್ನ ಯೋಚನೆ, ಯೋಜನೆ, ನಿರೀಕ್ಷೆ ಏನೂ ಇಲ್ಲದೆ ಬದುಕು ನನ್ನೆದುರು ಅಸಂಖ್ಯ ಅವಕಾಶಗಳನ್ನೂ ಸವಾಲುಗಳನ್ನೂ ಒಡ್ಡಿದೆ, ಒಡ್ಡುತ್ತಲೂ ಇದೆ. ಹಾಗಾದರೆ ಇದರಲ್ಲಿ ನನ್ನ ಪಾತ್ರವೇನೆಂದು ಆತ್ಮವಿಮರ್ಶೆ ಮಾಡಿಕೊಂಡಾಗ ಮತ್ತೆ ಮತ್ತೆ ಎದ್ದು ಕಾಣುವುದು ಸ್ವಭಾವಧರ್ಮ: ಮೊದಲು ಕಾರ್ಯ ಮತ್ತೆ ವಿಮರ್ಶೆ. ಸರಳವಾಗಿ, ಲಾಗ ಹೊಡೆದು ಜಾಗ ನೋಡುವುದು! ಹೀಗೆ ಮಾಡುವಾಗ ನಾನು ಮೊದಲು ಸ್ವಸಾಮರ್ಥ್ಯವನ್ನು ವಿವೇಚಿಸಿ ಬಳಿಕ ಸದಾ ಪಂಚಶೀಲ ಬದ್ಧನಾಗಿರುತ್ತೇನೆ: ನೈತಿಕತೆ, ಮಗ್ನತೆ, ಉತ್ಕೃಷ್ಟತೆ, ಪಾರದರ್ಶಕತೆ ಮತ್ತು ಉತ್ತರದಾಯಿತ್ವ (ethics, involvement, excellence, transparency and accountability). ನಡೆದಂತೆ ಹೊಸ ಹಾದಿ ಕಡಿದಿದ್ದೇನೆ, ಹೊಸ ಹರವು ಕಂಡಿದ್ದೇನೆ, ಹೊಸಬನೇ ಆಗಿದ್ದೇನೆ.

ಜನ್ಮತಃ ಈ ಹನುಮಂತ ಕುತೂಹಲ ಪ್ರತಿಯೊಬ್ಬನಲ್ಲಿಯೂ ನಿಹಿತವಾಗಿರುವುದು. ಇದನ್ನು ಉದ್ದೀಪನಗೊಳಿಸಲು ಆತನಿಗೆ ಎಳವೆಯಲ್ಲೇ ಯುಕ್ತ ಜಾಂಬವಂತ ಪ್ರೋತ್ಸಾಹ (ರಾಮಾಯಣದಲ್ಲಿ ಸಾಗರೋಲ್ಲಂಘನಪೂರ್ವದ ಸನ್ನಿವೇಶ ನೆನಪಿಸಿಕೊಳ್ಳಿ) ದೊರೆಯಬೇಕು – ಇದು ನನಗೆ ಸಮೃದ್ಧವಾಗಿ ದೊರೆತಿರುವುದು ನನ್ನ ಭಾಗ್ಯ, ಸೌಭಾಗ್ಯ. ಈ ತೆರನಾಗಿ ನಾನು ನಡೆದಂತೆ ಅಸಂಖ್ಯ ಮಹಾಮಹಿಮರ ನಿಕಟ ಸಂಪರ್ಕ ಲಾಭ ನನಗೆ ಒದಗಿದೆ. ಕೇವಲ ಕೆಲವು ಮಾರ್ಗಪ್ರವರ್ತಕರ ಹೆಸರುಗಳನ್ನು ಉಲ್ಲೇಖಿಸುವುದಾದರೆ ಅವರು ಮುಳಿಯ, ಸೇಡಿಯಾಪು, ಕಡೆಂಗೋಡ್ಲು, ಕಾರಂತ, ಪಾವೆಂ, ಮಾಸ್ತಿ, ಡಿವಿಜಿ, ಸಿಎನೆಸ್, ದೇಜಗೌ, ಕುವೆಂಪು (ನೋಡಿ: ಕುವೆಂಪು ದರ್ಶನ ಸಂದರ್ಶನ – ಕೆಲವೇ ಪ್ರತಿಗಳು ಲಭ್ಯ ರೂ ೪೫), ಮೂರ್ತಿ ರಾವ್, ಸಿಡಿಎನ್ ಮೊದಲಾದ ಪ್ರಾತಃಸ್ಮರಣೀಯರು.

ನಾದನಾವೆಯನೇರಿ ಖುತಚಿದ್ರಸಾಬ್ಧಿಯಲಿ
ವೇದಪುರುಷನ ತಾಣವರಸುತ್ತ ತೇಲಿದೆನು
ಮೋದಪ್ರಮೋದಗಳ ನಾಡಿಂದ ಜಿಗಿದಂತೆ
ವೇದವೇ ನಾವೆಯಲಿ ಲೀನಿಸಿತು ಅತ್ರಿಸೂನು ॥

ಸರ್ಕಾರೀ ಕೃಪಾಪೋಷಿತ ಸಂಸ್ಥೆಗಳ ಸದಸ್ಯನಾಗಿ
ಅಧ್ಯಾಯ ೮೫

ಕನ್ನಡದ ಬಗೆಗಿನ ಸಂಪೂರ್ಣ ಬದ್ಧತೆಯಿಂದ ನಿಷ್ಕಾಮ ಕಾರ್ಯಮಗ್ನನಾಗಿರುವಾತನಿಗೆ ಯಾಚಿಸದೆ ಮತ್ತು ಯೋಚಿಸದೆ ಎಂಥೆಂಥ ಮಾಯಾಮೃಗಾಮಿಷಗಳು ಎದುರಾಗುತ್ತವೆ ಎಂಬುದಕ್ಕೆ ಕೇವಲ ಮೂರು ನಿದರ್ಶನಗಳನ್ನು ಉಲ್ಲೇಖಿಸುತ್ತೇನೆ.

ಮೊದಲನೆಯದು, ಸಗಟು ಪುಸ್ತಕ ಖರೀದಿ ಸಮಿತಿಯ ಸದಸ್ಯತ್ವ. ಒಂದು ಶುಭ ಮುಂಜಾನೆ ಈ ಆದೇಶ ನನಗೆ ಸರ್ಕಾರದಿಂದ ಬಂತು. ನಾನೇನು ಮಾಡಬೇಕೆಂದು ನಮ್ಮ ನಿರ್ದೇಶಕ ಹಾಮಾ ನಾಯಕರನ್ನು ಕೇಳಿದೆ. "ಇದೊಂದು ಗೌರವ ಸ್ವಾಮೀ. ನಿಮ್ಮ ನಿಷ್ಠಾವಂತ ಕನ್ನಡ ಸೇವೆಗೆ ಅಯಾಚಿತವಾಗಿ ಲಭಿಸಿರುವ ಮನ್ನಣೆ. ಒಪ್ಪಿಕೊಂಡು ಯಾವುದೇ ವಶೀಲಿ ದಾಕ್ಷಿಣ್ಯಗಳಿಗೊಳಗಾಗದೇ ಮುಂದುವರಿಯಿರಿ" ಎಂದರು.

ಆ ತರುಣದಲ್ಲೇ ನನ್ನ ಮನೆಗೆ ಅನೇಕ ಹೊಸ ಮುಖಗಳು ಹೂಹಾರ, ನಿಂಬೆಹಣ್ಣು ಮುಂತಾದ ಶುಭಸೂಚಕಗಳ ಸಹಿತ ಬಂದು ನನ್ನನ್ನು (ವಿನಾ ಕಾರಣ) ಪ್ರಶಂಸಿಸಿ ತಮ್ಮ ಪ್ರವರಗಳನ್ನು ನಿವೇದಿಸಿಕೊಂಡವು ಮಾತ್ರವಲ್ಲ, ನನ್ನ ಕೃತಿಗಳನ್ನು ಪ್ರಕಟಿಸಿ ನನಗೆ ಸಮೃದ್ಧ ರಾಯಧನ ಪಾವತಿಸುವ ಆಶ್ವಾಸನೆಯನ್ನೂ ನೀಡಿದವು! ಗುಂಡಿಗೆ ಕೆಡೆಯದಿರು ಮನವೇ, ಎಚ್ಚರೆಚ್ಚರ ಎಂದಿತು ಅಂತರ್ವಾಣಿ.

ಅದು ಸುಮಾರು ಹತ್ತು ಮಂದಿ ನಾಮಕರಣಗೊಂಡ ಸದಸ್ಯರ ಸಮಿತಿ. ಎಲ್ಲರೂ ಕನ್ನಡದ ಡಿಂಗರಿಗರೇ, ಪುಸ್ತಕ ಪ್ರೇಮಿಗಳೇ. ಇಲಾಖೆಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಾವು ಪುಸ್ತಕ ಆಯ್ಕೆಯ ಸೂತ್ರಗಳನ್ನು ರಚಿಸಲು

ಮುಂದಾದೆವು. ಸರಕಾರದ ಮಾರ್ಗದರ್ಶೀ ಸೂಚನಾನುಸಾರ ಸಮಿತಿ ಬಹುಮತದಿಂದ ತಳೆದ ಖರೀದಿ ನೀತಿ ನನ್ನಲ್ಲಿ ಅಸಹ್ಯ ಭಾವನೆ ಮೂಡಿಸಿತು: ಪುಸ್ತಕದ ಗುಣಮಟ್ಟ ಅಥವಾ ಯೋಗ್ಯತೆಯೊಂದನ್ನು ಬಿಟ್ಟು ಮಿಕ್ಕೆಲ್ಲ ಅಂಶಗಳಿಗೂ ಇದರಲ್ಲಿ ಪ್ರಾಮುಖ್ಯ ಲಭಿಸಿತ್ತು. ಲೇಖಕರ ಪ್ರಾದೇಶಿಕತೆ, ಜಾತಿ, ಆರ್ಥಿಕ ಸ್ಥಿತಿ, ಪ್ರಕಾಶಕರ ಹಿರಿಮೆ, ಸಾಮಾಜಿಕ ನ್ಯಾಯ ಮುಂತಾದವೇ ಅಲ್ಲಿ ಚರ್ಚೆಯ ಪ್ರಧಾನ ವಿಷಯಗಳಾಗಿದ್ದುವು. ಈ ಅಶೈಕ್ಷಣಿಕ ಮತ್ತು ರಾಜಕೀಯ ಹವೆಯಲ್ಲಿ ನನ್ನ ಉಸಿರುಗಟ್ಟಿತು.

ಬಂದಿದ್ದ ಪುಸ್ತಕಗಳ ಪೈಕಿ ಒಂದು ಶೀರ್ಷಿಕೆ ನನ್ನ ವಿಶೇಷ ಲಕ್ಷ್ಯ ಸೆಳೆಯಿತು: 'ಸೂರ್ಯನ ಸಂಸಾರ.' ಈ ವಿಜ್ಞಾನ ಪುಸ್ತಕವನ್ನು ತೆರೆದು ನೋಡಿದೆ. ನಾನೇ ಎಂದೋ ಬರೆದಿದ್ದ ಪಾಠ, ಆದರೆ ಇದರ ಲೇಖಕ ಇನ್ನಾರೂ ಅಲ್ಲ, ನನ್ನ ಒಬ್ಬ ಮಾಜೀ ಶಿಷ್ಯ! ನೇರ ಕೃತಿಚೌರ್ಯ. ಬೆಂಗಳೂರಿನಲ್ಲೇ ಆತ ಒಂದು ಪ್ರಭಾವಶಾಲಿ ಸ್ಥಾನದಲ್ಲಿದ್ದ. ಅವನಿಗೆ ಒಡನೆ ಬುಲಾವು ಕಳಿಸಿ ಅಲ್ಲಿಗೆ ಕರೆಸಿದೆ. ಅನಿರೀಕ್ಷಿತವಾಗಿ ನನ್ನನ್ನು ಕಂಡು ಸತ್ಯದ ನಗ್ನ ಚಿತ್ರ ಎದುರಾದಾಗ ನನ್ನ ಕಾಲಿಗೆ ಬಿದ್ದು, "ಇದರ ಎಲ್ಲ ಹಣವನ್ನೂ ನಿಮಗೇ ಒಪ್ಪಿಸಿಬಿಡುತ್ತೇನೆ ಗುರುಗಳೇ. ಇದು ಮುದ್ರಣಾಲಯದಲ್ಲಿ ನನ್ನ ಅರಿವಿಗೆ ಬರದೇ ಆದ ತಪ್ಪು, ನನ್ನನ್ನು ಕ್ಷಮಿಸಿ" ಎಂದು ಮುಂತಾಗಿ ಗೋಗರೆದು ಹಲುಬಿದ. ಒಬ್ಬ ವ್ಯಕ್ತಿ ಇಂಥ ಹೀನ ಮತ್ತು ದೀನ ಸ್ಥಿತಿಗೆ ಕೆಡೆಯುತ್ತಾನೆ ಎಂಬ ಕಲ್ಪನೆಯೇ ಇರದಿದ್ದ ನಾನು ಅವನಿಗೆ ಛೀಮಾರಿ ಹಾಕಿ ಆ ಪುಸ್ತಕದ ಖರೀದಿಯನ್ನು ರದ್ದುಗೊಳಿಸಿದೆ.

ನನ್ನೊಳಗೆ ತುಮುಲ ಶುರುವಾಯಿತು. 'ಲೋಕದ ಡೊಂಕ ನೀವೇಕೆ ತಿದ್ದುವಿರಿ? ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ" ಎಂದು ಮಿಡಿದರು ಬಸವಣ್ಣ. ಮತ್ತೆರಡು ತಿಂಗಳು ಸಂದಾಗ ಇನ್ನಷ್ಟು ಉಲ್ಬಣಿಸಿದ ಪರಿಸ್ಥಿತಿ ನನ್ನ ಉಸಿರು ಕಟ್ಟಿಸಿತು. ಸಮಿತಿಗೆ ರಾಜೀನಾಮೆ ನೀಡಿ ಹೊರಬಂದೆ. ಇದು ಪಲಾಯನವಾದವೇ? ಒಳಗಿದ್ದು ಕೊಳೆ ತೊಳೆದು ಒಳ್ಳೆ ಬೆಳೆಗೆ ಅವಕಾಶ ಮಾಡಿಕೊಡದೆ ಹೊರಬಂದು ನೀನು ಸಾಧಿಸಿದ್ದೇನು – ಅಪ್ರಾಮಾಣಿಕ ವ್ಯವಹಾರಗಳಿಗೆ ಹುಲುಸು ಹೊಲಸು ಹೊಲವನ್ನು ಸುಲಭವಾಗಿ ಬಿಟ್ಟುಕೊಟ್ಟುದರ ಹೊರತಾಗಿ ಎಂದು ಪ್ರಶ್ನಿಸಿತು ಮನಸ್ಸಾಕ್ಷಿ. "ಆದರೆ ನಾನೇನು ಮಾಡಲಿ ಬಡವನಯ್ಯಾ!"

ಎರಡನೆಯದು, ಮೊದಲು ಸಗಟು ಖರೀದಿಯಾಗಿ ಕಾಡಿದ ಮಾಯೆ ಈಗ ಕರ್ನಾಟಕ ಸಾಹಿತ್ಯ ಅಕಾಡೆಮಿಯ ನಾಮಕರಣಗೊಂಡ ಒಬ್ಬ ಸದಸ್ಯನಾಗಿ ಪೀಡಿಸತೊಡಗಿತು. ನನ್ನ ಸಾಮರ್ಥ್ಯ ಮಿತಿಯೊಳಗಿರುವ ಇಂಥ ಯಾವುದೇ ಹೊಣೆ ಅಪ್ರಾರ್ಥಿತವಾಗಿ ಬಂದಾಗ ಅದನ್ನು ವಿನಯಪೂರ್ವಕ ಒಪ್ಪಿ ಅದರ ನಿರ್ವಹಣೆಗೆ ಪ್ರಾಮಾಣಿಕ ಪ್ರಯತ್ನ ಹೂಡುವುದು ನನ್ನ ಜಾಯಮಾನ. ಇಲ್ಲದ ಸಮಸ್ಯೆಗಳನ್ನು ಊಹಿಸುತ್ತ ಸಲ್ಲದ ಕಾರಣಗಳನ್ನು ಮುಂದೊಡ್ಡುತ್ತ, ಹೊಣೆ ತಪ್ಪಿಸಿಕೊಳ್ಳುವುದು ಎಂದೂ ಅಲ್ಲ. ಮೊದಲು ನಡೆ, ಭ್ರಮನಿರಸನವಾದರೆ ಅಲ್ಲಿಂದ ಕಾಲ್ತೆಗೆ, ನಿಷೇಧಾತ್ಮಕ ಅನುಭವವೂ ಒಂದು ಲಾಭವಲ್ಲವೇ – ಇದು ನನ್ನ ನೀತಿ.

ಕನ್ನಡ ನಾಡಿನ ಹಿರಿ ಚೇತನಗಳ ಈ ಶೃಂಗ ಸಭೆಗೆ ಅಧ್ಯಕ್ಷರು ನಮ್ಮ ಹಾಮಾನಾ. ಇತರ ಕೆಲವು ಸದಸ್ಯರು ಹಂಪನಾ, ಕಣವಿ, ಲಕ್ಷ್ಮೀನಾರಾಯಣ ಭಟ್ಟ, ಅಕಬರ ಅಲಿ ಮೊದಲಾದವರು. ನಾಯಕರು ಸಭೆಗಳನ್ನು ಅತ್ಯಂತ ನಯ ನಾಜೂಕು ನವುರಾಗಿ ನಡೆಸುತ್ತಿದ್ದರು. ತುಂಬ ಖುಶಿಯಿಂದಲೇ ನಾನೂ ನನ್ನ ಕೈಂಕರ್ಯ ಒಪ್ಪಿಸುತ್ತಿದ್ದೆ. ಎರಡು ವಿಶಿಷ್ಟ ಸನ್ನಿವೇಶಗಳಲ್ಲಿ ಇಲ್ಲಾದರೂ ವೈಯಕ್ತಿಕ – ಕನ್ನಡದ ಅಲ್ಲ – ಹಿತಾಸಕ್ತಿಗಳು ಮುಂಚೂಣಿಗೆ ನೆಗೆದದ್ದು ಕಂಡು ಮತ್ತೆ ಖತಿಗೊಂಡೆ.

ಮೊದಲನೆಯದು ಗಮಕ ಅಥವಾ ತತ್ಸಮಾನ ಸಾಹಿತ್ಯ ಪ್ರಸಾರಕ್ಕಾಗಿ ಸೇವೆ ಸಲ್ಲಿಸಿದ ಹಿರಿಯರೊಬ್ಬರ ಆಯ್ಕೆ. ಪ್ರತಿಯೊಬ್ಬ ಸದಸ್ಯನೂ ಇಂಥ ಒಬ್ಬರ ಹೆಸರನ್ನು ಸೂಚಿಸಬಹುದಿತ್ತು. ನಾನೂ ಒಬ್ಬರ ಹೆಸರನ್ನು ಶಿಫಾರಸು ಮಾಡಿದ್ದೆ. ಅಂತಿಮ ಆಯ್ಕೆಗೆ ಸಭೆ ಸೇರಿತು. ಇಂಥಲ್ಲೆಲ್ಲ ಹೇಗೆ filibuster technique (ಬೊಬ್ಬೆ ಸಹಿತ ವಾಗ್ದಾಳಿ) ಫಲಕಾರಿಯಾಗುವುದೆಂದು ಕಂಡು ರೋಸಿಹೋಗಿದ್ದೇನೆ. ಕನ್ನಡ ಪ್ರಾಧ್ಯಾಪಕ–ಕವಿಯೊಬ್ಬರು ಮೈಸೂರು ಅನಂತಸ್ವಾಮಿಯವರಿಗೆ (ಆಗ ಇವರು ಜೀವಂತವಾಗಿದ್ದರು) ಈ ಪ್ರಶಸ್ತಿಯನ್ನು ಕೊಡಬೇಕೆಂದು ಸಾಕಷ್ಟು ಕೊರೆದರು. ಇನ್ನೊಬ್ಬ ಸದಸ್ಯರು ಗಮಕಿ ರಾಘವೇಂದ್ರರಾಯರ ಅರ್ಹತೆ ಕುರಿತು ವಿವರಣೆ ನೀಡಿದರು. ಒಡನೆ ನಾನು ನನ್ನ ಪೂರ್ವಸೂಚನೆಯನ್ನು ಹಿಂದೆ ತೆಗೆದುಕೊಂಡು ರಾಯರ ಹೆಸರನ್ನು ಅನುಮೋದಿಸಿದೆ.

ಪ್ರಾಧ್ಯಾಪಕ–ಕವಿ, "ಈ ರಾಯರು ಮನೆಮನೆಗೆ ಹೋಗಿ ಲಜ್ಜೆಗೆಟ್ಟು ತಮಗೆ ಪ್ರಶಸ್ತಿ ದಯಪಾಲಿಸಬೇಕೆಂದು ಯಾಚಿಸುತ್ತ ಬಂದಿದ್ದಾರೆ. ಹೀಗಲ್ಲದೇ ಅನಂತಸ್ವಾಮಿ ಸುಗಮ ಸಂಗೀತ ಕ್ಷೇತ್ರಕ್ಕೆ ಸಲ್ಲಿಸಿರುವ ನಿಷ್ಕಾಮಸೇವೆ..."

ನಾನು ಗಟ್ಟಿಯಾಗಿ ಒದರಿದೆ, "ಇಲ್ಲಿ ಚರ್ಚೆಗಿರುವ ವಿಷಯ ಗಮಕ, ಸುಗಮಸಂಗೀತ ಅಲ್ಲ. ಇನ್ನು ರಾಯರು ಅವರ ಈ ಇಳಿವಯಸ್ಸಿನಲ್ಲಿ ಸದಸ್ಯರ ಮನೆಗಳಿಗೆ ಹೋಗಿ ತಮ್ಮ ಬೇಡಿಕೆ ಸಲ್ಲಿಸಿದರೆಂದರೆ ಅದು ಅವರ ಅಪರಾಧವಲ್ಲ, ಅಂಥ ದೀನ ಸ್ಥಿತಿಗೆ ಅವರನ್ನು ತಳ್ಳಿದ ಸಮಾಜದ ತಪ್ಪು. ಈ ಕಾರಣದಿಂದಲೂ ಅವರಿಗೆ ಪ್ರಶಸ್ತಿ ಕೊಡಲೇಬೇಕು."

ಇನ್ನಷ್ಟು ತಾರಶ್ರುತಿಯಲ್ಲಿ ಅವರು ಅರಚಿದರು, "ಸುಗಮ ಸಂಗೀತವನ್ನು ಕೂಡ ಗಮಕದ ಒಂದು ಪ್ರಕಾರವೆಂದು ಭಾವಿಸುವುದು ಸಾಧುವಾಗಿದೆ. ನಿಮಗೇನು ಗೊತ್ತು ಅನಂತಸ್ವಾಮಿಯವರ ಸೇವೆ..."

ನಾನು ಸೌಮ್ಯವಾಗಿ, "ನಿಮ್ಮ ಈ ಅತಾರ್ಕಿಕ ವಾದ ಏಕೆಂಬುದು ನನಗೆ ಚೆನ್ನಾಗಿ ಗೊತ್ತಿದೆ: ಅನಂತಸ್ವಾಮಿಯವರು ನಿಮ್ಮ ಅನೇಕ ಕವನಗಳನ್ನು ಹಾಡಿ ಜನಪ್ರಿಯಗೊಳಿಸಿ ಧ್ವನಿಸುರುಳಿಗಳನ್ನು ಮುದ್ರಿಸಿ ನಿಮಗೆ ಅಪಾರ ಕೀರ್ತಿ, ಧನ ಮತ್ತು ಪ್ರತಿಷ್ಠೆ ತಂದುಕೊಟ್ಟಿದ್ದಾರೆ, ನಿಜ. ಇದಕ್ಕಾಗಿ ಅವರನ್ನೂ ನಿಮ್ಮನ್ನೂ ಅಭಿನಂದಿಸುತ್ತೇನೆ. ಆದರೆ ಪ್ರಸ್ತುತ ವಿಷಯ ಇದು ಯಾವುದೂ ಅಲ್ಲ. ಸುಗಮ ಸಂಗೀತವೆಂದೂ ಗಮಕವಾಗದು. ರಾಘವೇಂದ್ರ ರಾಯರಿಗೇ ಈ ಪ್ರಶಸ್ತಿ ಸಲ್ಲತಕ್ಕದ್ದು. ಅನಂತಸ್ವಾಮಿಯವರಿಗೆ ನಿಧಿ ಸಮರ್ಪಿಸಲು ನೀವೇ ಖಾಸಗಿಯಾಗಿ ಏಕೆ ಮುಂದಾಗಬಾರದು? ನನ್ನ ದೇಣಿಗೆ ಈಗಲೇ ಪಾವತಿಸಲು ಸಿದ್ಧ. Not that I love sugam sangeet less but I love at the moment gamaka more ಎಂದೆ. ಅಲ್ಲಿಗೆ ರಾಯರ ಹೆಸರೇ ಮಂಜೂರಾಯಿತು.

ಮರುವರ್ಷದ 'ಘರ್ಷಣೆ' ಎರಡನೆಯ ಅನುಭವ. ಹಿರಿಯ ಕನ್ನಡ ಚೇತನವೊಂದರ ಆಯ್ಕೆ. ಪಾವೆಂ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿದ್ದ ಪಾ.ವೆಂ ಆಚಾರ್ಯರ ಹೆಸರನ್ನು ನಿಯಮ ಪ್ರಕಾರ ನಾನು ಮೊದಲೇ ಸೂಚಿಸಿದ್ದೆ. ಸಭೆಯಲ್ಲಿ ಹಂಪನಾ ಕೊಡಗಿನ ಬಿ.ಡಿ. ಗಣಪತಿಯವರಿಗೇ ಈ ವರ್ಷ ಪ್ರಶಸ್ತಿ ಕೊಡತಕ್ಕದ್ದೆಂದು ಪಟ್ಟುಹಿಡಿದರು. ಅವರಿತ್ತ ಮೂರು ಘನ ಕಾರಣಗಳು: ತತ್ಪೂರ್ವ ಮಡಿಕೇರಿಯಲ್ಲಿ ಜರಗಿದ ಕನ್ನಡ ಸಾಹಿತ್ಯ ಸಮ್ಮೇಳನದ ವ್ಯವಸ್ಥಾಪಕರಾಗಿ ಗಣಪತಿಯವರು ಸಲ್ಲಿಸಿದ ಸೇವೆ ಅನನ್ಯವಾದದ್ದು; ಅವರು ಅಲ್ಪಸಂಖ್ಯಾತ ಕೋಮಿನವರು; ಸ್ವತಃ ಅವರು ಉತ್ತಮ ಸಾಹಿತಿಗಳು.

ನಾನೆಂದೆ, "ಗಣಪತಿಯವರ ಹಿರಿಮೆ ಏನೆಂಬುದು ಕೊಡಗಿನವನಾದ ನನಗೆ ಚೆನ್ನಾಗಿ ತಿಳಿದಿದೆ: ಕನ್ನಡಕ್ಕೆ ಅಷ್ಟೇನೂ ಮನ್ನಣೆ ಇರದ ನನ್ನ ನಾಡಿನಲ್ಲಿ ಅವರು ಕನ್ನಡದ ಹಣತೆಯನ್ನು ಹಚ್ಚಿ ಬೆಳಗಿಸುತ್ತಿದಾರೆ; ಅಲ್ಲದೇ ನಾನು ಶಾಲಾ ವಿದ್ಯಾರ್ಥಿಯಾಗಿದ್ದಾಗ ನನ್ನ ಬರೆಹಗಳಿಗೆ ಅವರ ಪತ್ರಿಕೆಯಲ್ಲಿ ಸಾಕಷ್ಟು ಪ್ರೋತ್ಸಾಹವನ್ನೂ ನೀಡಿ ಉಪಕರಿಸಿದ್ದಾರೆ. ಆದರೆ ಪ್ರಸ್ತುತ ಚರ್ಚೆ ಇರುವುದು ಸಮಗ್ರ ವಾಙ್ಮಯ ಸೇವೆಯಲ್ಲಿ ಯಾರದು ಗುಣ–ಗಾತ್ರಗಳಲ್ಲಿ ಹೆಚ್ಚಿನದು? ವಯಸ್ಸಿನಲ್ಲಿ ಯಾರು ಹಿರಿಯರು? ಇಲ್ಲಿ ಪಾವೆಂ ಅವರಿಗೇ ಮನ್ನಣೆ ಸಲ್ಲುತ್ತದೆ."

ಹಂಪನಾ ಆಗ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರೆಂಬುದನ್ನು ಮರೆಯದಿರೋಣ. ನಮ್ಮ ವಾದ ಸಂವಾದ ವಾಗ್ವಾದಗಳು ತಾರಕ್ಕೇರಿದಾಗ ಹಾಮಾನಾ ಅಕಾಡೆಮಿಯ ಹಿರಿ ಸದಸ್ಯ ಮತ್ತು ಆ ವರ್ಷದ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಚನ್ನವೀರ ಕಣವಿಯವರನ್ನು ಅಂತಿಮ ನಿರ್ಣಯ ನೀಡಬೇಕೆಂದು ಕೋರಿದರು. ನಾಡಿನ ನಾಡಿಮಿಡಿತ ಬಲ್ಲ ಈ ಹಿರಿಯರು ಪಾವೆಂ ಹೆಸರನ್ನು ಸೂಚಿಸಿ ಈ ವ್ಯರ್ಥ ವಾಗ್ವಿಲಾಪಕ್ಕೆ ತೆರೆ ಎಳೆದರು.

ಮೂರನೆಯದು, ಆಗ (೧೯೯೦ರ ದಶಕಾರಂಭ, ನಾನು ೧೯೮೬ರಲ್ಲಿ ವೃತ್ತಿ ನಿವೃತ್ತನಾಗಿದ್ದೆ) ಕರ್ನಾಟಕ ಸರ್ಕಾರದ ವತಿಯಿಂದ ಪ್ರಾರಂಭವಾಗಲಿದ್ದ ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ನನ್ನನ್ನು ಒಬ್ಬ ಸದಸ್ಯನಾಗಿ ಬಂಧಿಸಿದ ಶೈಲಿ. ಆ ಸಂಜೆ ನಾನು ಯಾವುದೋ ಒಂದು ಸಭೆಯಲ್ಲಿದ್ದೆ. ಅಲ್ಲಿಗೇ ಬಂತು ರಾಜ್ಯದ ಮುಖ್ಯ ಮಂತ್ರಿಯವರಿಂದ (ವೀರಪ್ಪ ಮೊಯಿಲಿ) ಬುಲಾವ್. ಅವರ ಆಪ್ತ ಕಾರ್ಯದರ್ಶಿ ಕೆ.ಆರ್. ಕಮಲೇಶ್ ಮಾತಾಡಿದರು, "ಕನ್ನಡ ಪುಸ್ತಕ ಪ್ರಾಧಿಕಾರದ ಒಬ್ಬ ಸದಸ್ಯರಾಗಿರಲು ನಿಮ್ಮನ್ನು ಒಪ್ಪಿಸಬೇಕೆಂದು ಸಾಹೇಬರು ಹೇಳಿದ್ದಾರೆ. ನಾಳೆ ಮುಂಜಾನೆ ಈ ಒಟ್ಟು ಯಾದಿ ಪ್ರಕಟವಾಗಲಿದೆ. ದಯವಿಟ್ಟು ನಿಮ್ಮ ಸಮ್ಮತಿ ನೀಡಬೇಕಾಗಿ ಕೇಳಿಕೊಳ್ಳುತ್ತಿದ್ದೇನೆ."

"ಅಧ್ಯಕ್ಷರು ಯಾರು?"

"ಎಲ್.ಎಸ್ ಶೇಷಗಿರಿ ರಾವ್."

"ಒಪ್ಪಿದ್ದೇನೆ."

ನನಗೆ ಸಹಜವಾಗಿ ಆಶ್ಚರ್ಯವಾಯಿತು. ಏಕೆಂದರೆ ನನಗೆ ಯಾವುದೇ ಬಗೆಯ ರಾಜಕೀಯ, ಸಾಹಿತ್ಯಕ, ಆರ್ಥಿಕ ಅಥವಾ ಜಾತೀಯ ಪ್ರಭಾವವಾಗಲೀ ಇಲ್ಲ, ಆಸಕ್ತಿಯೂ ಇಲ್ಲ. ಅಲ್ಲದೇ ಇಂಥ ಒಂದು ಸಂಸ್ಥೆಯ ಬಗೆಗಿನ ಕಲ್ಪನೆಯೇ ಇರಲಿಲ್ಲ. ಇನ್ನು ಮೊಯಿಲಿಯವರಿಗೆ ನಾನು ಪರಿಚಿತನೂ ಅಲ್ಲ. ಹೀಗಿರುವಾಗ ಈ ಹೊಸ ಗುರುತರ ಹೊಣೆ ಹೇಗೆ ನನ್ನ ಪಾಲಿಗೆ ಬಂತು? ಕುವೆಂಪು ವಾಣಿ ನೆನಪಾಯಿತು, "ಕನ್ನಡಕ್ಕಾಗಿ ಕೈಯೆತ್ತು, ನಿನ್ನ ಕೈ ಕಲ್ಪವೃಕ್ಷವಾಗುತ್ತದೆ." ಶೇಶಗಿರಿರಾಯರೇ ನನ್ನ ಹೆಸರನ್ನು ಸೂಚಿಸಿರಬೇಕು, ಅವರೂ ನಾನೂ ಮಡಿಕೇರಿಯಲ್ಲಿ ನಿಕಟ ಸಹೋದ್ಯೋಗಿಗಳಾಗಿದ್ದೆವು.

ಪ್ರಾಧಿಕಾರದ ಮೊದಲ ಸಭೆ ಬೆಂಗಳೂರಿನಲ್ಲಿ ಸೇರಿದಾಗಲೇ ನನಗೆ ಉಳಿದ ಸದಸ್ಯರ ಗುರುತಾದದ್ದು: ಅಧ್ಯಕ್ಷ ಶೇಷಗಿರಿರಾವ್ ಮತ್ತು ಸದಸ್ಯ ಎಂ.ಎಚ್. ಕೃಷ್ಣಯ್ಯ ಇಬ್ಬರ ಹೊರತಾಗಿ ಉಳಿದವರೆಲ್ಲರೂ ನನಗೆ ಹೊಸ ಮುಖಗಳೇ, ಆದರೆ ಪರಿಚಿತ ಹೆಸರುಗಳೇ. ಅದೊಂದು ಶುದ್ಧ ಸಾಹಿತ್ಯಕ ಮಂಡಳಿ ಆಗಿತ್ತು. ಅದರಲ್ಲಿ ವಿಜ್ಞಾನ ವಾಙ್ಮಯ ಪ್ರತಿನಿಧಿಯಾಗಿ ನಾನೊಬ್ಬನೇ ಇದ್ದುದಾಗಿತ್ತು. ಸ್ವತಃ ಸಾಹಿತಿಯಾಗಿದ್ದ ಮೊಯಿಲಿಯವರ ದೂರದರ್ಶಿತ್ವ ಕುರಿತು ಗೌರವ ಮೂಡಿತು.

ಇಂಥ ಸಭ್ಯ ಸುಸಂಸ್ಕೃತ ರಾಜಕೀಯರಹಿತ ಸಾಹಿತ್ಯಬದ್ಧ ಸದಸ್ಯರಿಂದ ಕೂಡಿದ ಪ್ರಾಧಿಕಾರ ಅಂದು ಕೈಗೊಂಡು ಮುಂದಿಟ್ಟ ಪ್ರಾಯೋಗಿಕ ಹೆಜ್ಜೆಗಳು ನಿಜಕ್ಕೂ ವಿನೂತನವಾಗಿದ್ದುವು. ಸಗಟು ಖರೀದಿಯಲ್ಲಿ ಪಾರದರ್ಶಕತೆ, ಪ್ರಕಟಣ ಕ್ಷೇತ್ರದಲ್ಲಿ ನಾವೀನ್ಯ, ಮಾರಾಟ ರಂಗದಲ್ಲಿ ನೂತನ ವಿಧಾನಾನ್ವೇಷಣೆ, ಕನ್ನಡ ಅಭಿಜಾತ ಆದರೆ ಸದ್ಯ ಅಲಭ್ಯ ಕೃತಿಗಳ ಸಂಪಾದನೆ ಮತ್ತು ಪುನರ್ಮುದ್ರಣ, ಪ್ರತಿಭಾ ಪುರಸ್ಕಾರ – ಒಂದೇ ಎರಡೇ? ಆದರೆ ಇನ್ನೇನು ಬಿತ್ತಿದ ಈ ಎಲ್ಲ ಬೀಜಗಳೂ ಅಂಕುರಿಸಿ ಸಸಿಗಳು ನಳನಳಿಸಿ ಕನ್ನಡದ ಕಂಪು ಪಸರಿಸುತ್ತಿದೆ ಎನ್ನುವಷ್ಟರಲ್ಲಿ ಮೊಯಿಲಿ ಸರ್ಕಾರ ಬಿತ್ತು, ಬಂದ ಹೊಸ ಸರ್ಕಾರ ಒಂದಿಷ್ಟೂ ಅಳುಕು ಆತಂಕ ವಿಚಾರವಿಲ್ಲದೆ ನಮ್ಮೆಲ್ಲರ ರಾಜಿನಾಮೆ ಪತ್ರಗಳನ್ನು ಕೋರಿ ಪಡೆದು ಹೊಸ ಸಮಿತಿಯನ್ನು ನಾಮಕರಿಸಿತು!

ಇವೆಲ್ಲ ಅನುಭವಗಳ ಸಾರವೀ ನಿಯಮ: ಯಾವುದೇ ಸರ್ಕಾರೀ ಕೃಪಾಪೋಷಿತ ವ್ಯವಸ್ಥಾಪನೆಯಲ್ಲಿ ಖುದ್ದು ಅದರ ಉದ್ದೇಶವೇ ಮೊದಲ ಬಲಿ. ಸ್ವತಂತ್ರ ಭಾರತದ ತಿರುಳಿಗೆ ತಾಗಿ ಅದರ ಸತ್ತ್ವ, ಸ್ವತ್ವಗಳನ್ನು ಶೋಷಿಸುತ್ತಿರುವ ಕ್ಷಯರೋಗವಿದು. ಬಸವಣ್ಣನವರ ಅಮರವಾಣಿ –

ಇವನಾರವ, ಇವನಾರವ ಇವನಾರವನೆಂದೆನಿಸದಿರಯ್ಯಾ
ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದೆನಿಸಯ್ಯಾ
ಕೂಡಲ ಸಂಗಮದೇವಾ
ನಿಮ್ಮ ಮನೆಯ ಮಗನೆಂದೆನಿಸಯ್ಯಾ

- ಎಂದಾದರೂ ನಮ್ಮ ದೇಶದಲ್ಲಿ ಪ್ರತ್ಯಕ್ಷ ಆಚರಣೆಯಲ್ಲಿ ಮೈವಡೆದೀತೇ?

ಪ್ರತಿಭಾನ್ವಿತರ ಅನ್ವೇಷಣೆಯಲ್ಲಿ
ಅಧ್ಯಾಯ ೮೬

ವಿಶ್ವಕೋಶದ ದೈನಂದಿನ ಚಟುವಟಿಕೆಗಳು ಭರದಿಂದ ಸಾಗುತ್ತಿದ್ದಾಗ ದೇಜಗೌ ನಮ್ಮ ಜೊತೆ ಹಿರಿಯಣ್ಣನಂತೆ ಆತ್ಮೀಯವಾಗಿ ವರ್ತಿಸುತ್ತ ಕನ್ನಡದ ಕೆಲಸವನ್ನು ನಾವು ಪ್ರತಿಯೊಬ್ಬರೂ ವೈಯಕ್ತಿಕವಾಗಿಯೂ ಸಾಮೂಹಿಕವಾಗಿಯೂ ಹೇಗೆ ನಿರ್ವಹಿಸಬೇಕೆಂಬುದರ ಬಗ್ಗೆ ನೀಡುತ್ತಿದ್ದ ಒಂದು ಆಪ್ತ ಸಲಹೆ ಇದು: "ಸ್ವತಃ ನೀವು ಆರೋಹಿಸುತ್ತಿರುವುದರ ಜೊತೆಗೆ ಇತರರನ್ನೂ ಅರಸಿ ತಂದು ಈ ಕಾರ್ಯಕ್ಕೆ ಆವಾಹಿಸಬೇಕು. ಇದೊಂದು ನಿರಂತರವಾಗಿ ನಡೆಯುತ್ತಿರಬೇಕಾದ ಯಜ್ಞ." ಅವರ ಸುದೀರ್ಘ ಜೀವನವೇ ಈ ತತ್ತ್ವಕ್ಕೆ ಬರೆದಿರುವ ಭಾಷ್ಯ.

ಇದೇ ತತ್ತ್ವ ನನ್ನ ಬದುಕನ್ನು ಕೂಡ ರೂಪಿಸಿದೆಯಾಗಿ ಅವರ ಸಲಹೆ ನನಗೆ ಬಲು ಪ್ರಿಯವಾಯಿತು. ಅಲ್ಲದೇ ನನ್ನ ವೃತ್ತಿ (ಕನ್ನಡ ವಿಶ್ವಕೋಶದ ವಿಜ್ಞಾನ ಸಂಪಾದಕತ್ವ) ಸದಾ ಹೊಸ ಲೇಖಕರ ಅನ್ವೇಷಣೆಯನ್ನು ಅನಿವಾರ್ಯವಾಗಿಸಿತ್ತು. ಇನ್ನು ನನ್ನ ಸಾಮರ್ಥ್ಯವಾದರೂ ಏನು? ತೀರ ಸಾಮಾನ್ಯ ಅನಾಮಧೇಯನಾದ ನನ್ನಲ್ಲಿ

ಪಾವೆಂ, ಸಿಎನೆಸ್, ದೇಜಗೌ ಮೊದಲಾದ ಮಹಾಮಹಿಮರು ವಿಶೇಷ ಗುಣ ಕಂಡು ಪ್ರೋತ್ಸಾಹ ನೀಡಿ ಮುಂದಕ್ಕೆ ತಂದಿದ್ದರೆಂಬುದು ಸದಾ ನನ್ನ ನೆನಪಿನಲ್ಲಿತ್ತು. ಆದ್ದರಿಂದ ಇದೇ ಕೈಂಕರ್ಯವನ್ನು ಮುಂದುವರಿಸಿಕೊಂಡು ಹೋಗುವುದೇ ನಾನು ಈ ಎಲ್ಲ ಹಿರಿ ಚೇತನಗಳಿಗೂ ಮಿಗಿಲಾಗಿ ಭಾರತೀಯ ಪರಂಪರೆಗೂ ಸಲ್ಲಿಸಬಹುದಾದ 'ಗುರುದಕ್ಷಿಣೆ' ಪುರಂದರದಾಸರು ಹೇಳಿರುವಂತೆ "ಕೆರೆಯ ನೀರನು ಕೆರೆಗೆ ಚೆಲ್ಲಿ ವರವ ಪಡೆ"ಯುವ ಕೃತಾರ್ಥತೆ ಇದು.

ಈ ಅನ್ವೇಷಣ ಮಾರ್ಗದಲ್ಲಿ ಮುನ್ನಡೆದಂತೆ ನನಗೆ ಲಭಿಸಿದ ಅನುಭವಗಳು ಅಸಂಖ್ಯ. ಸಂತೃಪ್ತಿ ಅವರ್ಣನೀಯ ಮತ್ತು ಬೆಳಕಿಗೆ ಬಂದ ಪ್ರತಿಭೆಗಳು "Full many a gem of purest ray serene the dark unfathomed caves of the ocean bear" (ಹುದುಗಿಹವು ಸಾಗರದ ಗಹನ ಗಹ್ವರಗಳಲಿ ಪರಿಶುದ್ಧ ಕಾಂತಿಯುತ ರತ್ನಗಳು). ಆಯ್ದ ಕೆಲವು ಉದಾಹರಣೆಗಳನ್ನು ಇಲ್ಲಿ ಉಲ್ಲೇಖಿಸುತ್ತೇನೆ.

ಕಗ್ಗತ್ತಲ ನಾಡು ಆಫ್ರಿಕಾದಿಂದ ಹೊಮ್ಮಿದ ಬೆಳಕು

'ಸುಧಾ' ವಾರಪತ್ರಿಕೆಯ ಎಂ.ಬಿ. ಸಿಂಗ್ ಮೊದಲು ನನ್ನನ್ನು ಪತ್ತೆ ಹಚ್ಚಿ ಪ್ರೋತ್ಸಾಹಿಸಿದ ಒಬ್ಬ ದಕ್ಷ, ಉದಾರಿ, ಕೃತಿನಿಷ್ಠ ಸಂಪಾದಕ. ಕ್ರಮೇಣ ಇದೊಂದು ಗಾಢ ವೈಯಕ್ತಿಕ ಸ್ನೇಹವಾಗಿ (ಪಾವೆಂ ಸಂದರ್ಭದಲ್ಲಿಯಂತೆ) ಮಾರ್ಪಟ್ಟುದು ನನ್ನ ಬದುಕಿನ ಒಂದು ಅತ್ಯಂತ ಸುಂದರ ಅಧ್ಯಾಯ. ಒಂದು ದಿನ ಇವರಿಂದ ನನಗೊಂದು ಕೋರಿಕೆ ಬಂತು: "ಆಫ್ರಿಕಾದಲ್ಲಿರುವ ನಳಿನಿಮೂರ್ತಿ ಎನ್ನುವ ಕನ್ನಡ ಲೇಖಕಿಗೆ ಗಣಕ ಕುರಿತಂತೆ ಹಲವಾರು ತಾಂತ್ರಿಕ ಪದಗಳ ಶಿಷ್ಟ ಕನ್ನಡ ರೂಪಗಳು ಬೇಕಾಗಿವೆ. ಇವನ್ನು ನೀವು ಒದಗಿಸಬಹುದೇ?" ಸುಮಾರು ಹದಿನೈದು ಇಂಗ್ಲಿಷ್ ಪದಗಳಿದ್ದ ಪಟ್ಟಿಯನ್ನು ಅವರು ಲಗತ್ತಿಸಿದ್ದರು. ತುಂಬ ಖುಷಿಯಿಂದ ಇದನ್ನು ಮುಗಿಸಿ (ನನಗೆ ಕೇವಲ ೫ ಮಿನಿಟುಗಳ ಪ್ರೀತಿಯ ಕೆಲಸ) ಆ ವಿಷಯಕ್ಕೆ ಹೊಂದುವ ಇನ್ನೊಂದಿಷ್ಟು ಇಂಗ್ಲಿಷ್–ಕನ್ನಡ ಪದಗಳನ್ನೂ ಅದಕ್ಕೆ ಸೇರಿಸಿ ನೇರ ನಳಿನಿಯವರಿಗೆ ಅಂಚೆ ಮೂಲಕ ರವಾನಿಸಿಬಿಟ್ಟೆ ಮತ್ತು ಎಂಬಿಯವರಿಗೆ ವರದಿ ಮಾಡಿದೆ ಕೂಡ.

ಹಲವು ತಿಂಗಳು ಸಂದುವು. ಆಷಾಢದ ಒಂದು ಮುಸ್ಸಂಜೆ. ಕಾರ್ಮೋಡ ಕವಿದು ಜಡಿಮಳೆ ಕೆಡೆಯುತ್ತಿದ್ದಾಗ ಕಾರೊಂದು ನಮ್ಮ ಮನೆ ಅರಸಿ ಬಂತು, ಅದರಿಂದ ಇಬ್ಬರು ಅಪರಿಚಿತರು ಇಳಿದರು. "ನಾನು ನಳಿನಿಮೂರ್ತಿ, ಇವರು ನನ್ನ ಪತಿ ನರಸಿಂಹಮೂರ್ತಿ" ಎಂದು ಅವರು ತಮ್ಮ ಪ್ರವರ ಹೇಳಿದರು. "ನಮ್ಮ ತವರು ಬೆಂಗಳೂರಿಗೆ ರಜೆಯ ಮೇಲೆ ನಿನ್ನೆ ಮರಳಿದೆವು. ನಿಮ್ಮನ್ನು ಪ್ರತ್ಯಕ್ಷ ನೋಡಿ ಕೃತಜ್ಞತೆ ಸಲ್ಲಿಸಬೇಕೆಂದು ಬಂದಿದ್ದೇವೆ." ಈ ದಂಪತಿಗಳು ತತ್ಪೂರ್ವ ಸಿಎನೆಸ್ ಅವರ ಶಿಷ್ಯರೂ ಆಗಿದ್ದರಂತೆ. ಹೀಗೆ ನಮ್ಮ ಬಾಂಧವ್ಯ ಇನ್ನಷ್ಟು ದೃಢವಾಗಿ ಬೆಸುಗೆಗೊಂಡಿತು. ಫಲ: ಕನ್ನಡದಲ್ಲಿ ನಳಿನಿಯವರ ಹಲವಾರು ಜನಪ್ರಿಯ ವಿಜ್ಞಾನ ಲೇಖನಗಳ ಮತ್ತು ಕೃತಿಗಳ ಪ್ರಕಟಣೆ! ಅಂದು (೧೯೮೦ರ ದಶಕ) ಅವರು ಬರೆದ 'ಗಣಕದ ಕಥೆ' ಕನ್ನಡದಲ್ಲಿ ಪ್ರಥಮವಾಗಿ ಬಂದ ಒಂದು ಪ್ರಬುದ್ಧ ಜನಪ್ರಿಯ ಗ್ರಂಥ. ಈಗ ಅವರಿಲ್ಲ, ಆದರೆ ಅವರ ಕನ್ನಡ ಕೈಂಕರ್ಯ ಸದಾ ಸ್ಮರಣೀಯ.

'ಪುಸ್ತಕ ಪ್ರಪಂಚ'ದ ಆಡುಂಬೊಲದಲ್ಲಿ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ವತಿಯಿಂದ ಪ್ರಕಟವಾಗುತ್ತಿದ್ದ 'ಪುಸ್ತಕ ಪ್ರಪಂಚ' ಎಂಬ ಮಾಸಪತ್ರಿಕೆಯ ಗೌರವ ಪ್ರಧಾನ ಸಂಪಾದಕರಾಗಿದ್ದರು ನಮ್ಮ ದೇಜಗೌ (೧೯೮೦ರ ದಶಕ). ಜಗತ್ಪ್ರಸಿದ್ಧ ಇಂಗ್ಲಿಷ್ ಮಾಸಿಕ ರೀಡರ್ಸ್ ಡೈಜೆಸ್ಟಿನಲ್ಲಿ ಮುದ್ರಣವಾದ ಲೇಖನಗಳನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಲು 'ಪುಸ್ತಕ ಪ್ರಪಂಚ'ಕ್ಕೆ ಮುಕ್ತ ಪರವಾನಿಗೆ ದೊರೆತಿತ್ತು. ಹೀಗೆ ಪ್ರಕಟವಾದ ಲೇಖನಗಳಿಗೆ ಆಗಾಗಲೇ ಯುಕ್ತ ಸಂಭಾವನೆಯನ್ನೂ ಪಾವತಿಸಲಾಗುತ್ತಿತ್ತು. ಅನರ್ಘ್ಯ ಮತ್ತು ಅಮೂಲ್ಯ ವಸ್ತು ಅಲ್ಲಿದೆ, ಅದರ ಕನ್ನಡ ಅವತರಣಿಕೆಯನ್ನು ಓದುಗರಿಗೆ ಅರ್ಪಿಸಲು ವೇದಿಕೆ ಇಲ್ಲಿದೆ. ಈ ಕನ್ನಡ ಸೇವೆಗೆ ಯೋಗ್ಯ ಸಂಭಾವನೆಯೂ ಇದೆ. ಆದರೆ ಇಂಥ ಸಾಂಸ್ಕೃತಿಕ ರಾಯಭಾರಿತ್ವ ನಿರ್ವಹಿಸಬಲ್ಲ ತಜ್ಞರು ಎಲ್ಲಿದ್ದಾರೆ? ದೇಜಗೌ ಚುಕ್ಕಾಣಿ ಹಿಡಿದಾಗ ಎದುರಾದ ನಿಜ ಸಮಸ್ಯೆ ಇದು,

ಪ್ರಣಿತೆಯೂ ಇದೆ ಬತ್ತಿಯೂ ಇದೆ –
ಜ್ಯೋತಿಯ ಬೆಳಗುವಡೆ
ತೈಲವಿಲ್ಲದೆ ಪ್ರಭೆ ತಾನೆಲ್ಲಿಯದೋ?!
ಗುರುವಿದೆ ಲಿಂಗವಿದೆ –
ಶಿಷ್ಯನ ಸುಜ್ಞಾನವಂಕುರಿಸದನ್ನಕ್ಕರ ಭಕ್ತಿಯೆಲ್ಲಿಯದೋ?!

ಸೋಹಮೆಂಬುದ ಕೇಳಿ, ದಾಸೋಹವ ಮಾಡದಿದ್ದರೆ
ಅತಿಗಳೆದನು ಗುಹೇಶ್ವರ



'ಪುಸ್ತಕ ಪ್ರಪಂಚ'ದ ಸಂಪಾದಕ ಮಂಡಳಿಗೆ 'ಹೊಸ ನೆತ್ತರು' ಪೂರಣ ಮಾಡುವುದೊಂದೇ ಸರಿಯಾದ ಮಾರ್ಗವೆಂದು ದೇಜಗೌ ತೀರ್ಮಾನಿಸಿ ಈ ಹೊಸಬರ ಪೈಕಿ ನನ್ನನ್ನೂ ಸೇರಿಸಿದರು. ಹೀಗೆ ನನಗಿಲ್ಲಿ 'ಕನ್ನಡ ಡಿಂಡಿಮ' ಬಾರಿಸಲು ಹೊಸತೊಂದು ಅವಕಾಶ ಅಯಾಚಿತವಾಗಿ ಲಭಿಸಿತು. 'ಪುಸ್ತಕ ಪ್ರಪಂಚ'ಕ್ಕೆ ಆಗ ಬರೆಯುತ್ತಿದ್ದ ಹೆಚ್ಚಿನ ಲೇಖಕರು ಕುಂಟುತ್ತ ತೆವಳುತ್ತ ಸಾಗುತ್ತಿದ್ದ ಅಪ್ರಬುದ್ಧರಾಗಿದ್ದರು. ಈ ಲೇಖನಗಳಿಗೆ ನಮ್ಮ ವಿಶ್ವಕೋಶ ಲೇಖನಗಳ ಶಿಷ್ಟತೆ ತರುವುದು ಸಾಧ್ಯವೇ? ಇದು ನನ್ನೆದುರಿಗಿದ್ದ ಸವಾಲು. ಇಂಥ ಎಲ್ಲ ಸಂದರ್ಭಗಳಲ್ಲಿಯೂ ಪ್ರತ್ಯಕ್ಷ ಪ್ರಯೋಗದಿಂದ ನಾನೊಂದು ಸೂತ್ರ ಕಂಡುಕೊಂಡಿದ್ದೇನೆ: ನಮ್ಮ ಬಹುಸಂಖ್ಯಾತ ಗೃಹಿಣಿಯರನ್ನು ನೇರ ಸಂಪರ್ಕಿಸಿ ಅವರಿಗೆ ಕುಮ್ಮಕ್ಕು ಕೊಟ್ಟು ಈ ಕೆಲಸ ಮಾಡಿಸುವುದು. ತೊಟ್ಟಿಲು ಮತ್ತು ಮನೆಗಳನ್ನು ಸಮರ್ಥವಾಗಿ ನಿರ್ವಹಿಸಬಲ್ಲ ಈ ಚೇತನಗಳು ಸಾಹಿತ್ಯವನ್ನೂ ಅದೇ ದಕ್ಷತೆಯಿಂದ ನಿಭಾಯಿಸಬಲ್ಲವೆಂಬುದು ನನ್ನ ದೃಢ ನಂಬಿಕೆ. ಕುವೆಂಪು ನುಡಿದಿರುವಂತೆ "ಮನೆ ಮನೆಯಲಿ ನೀನಾಗಿಹೆ ಗೃಹಶ್ರೀ ಪೆಸರಿಲ್ಲದ ಪೆಸರಿದೆ ನಿನಗದು ಗೃಹಸ್ತ್ರೀ" ಅಲ್ಲವೇ?

ಕುಮ್ಮಕ್ಕು ಕೊಟ್ಟಾಗ ಕಪಿ ಕಡಲ ಜಿಗಿಯುವುದು
ಕಿಮ್ಮತ್ತು ಹೂಡದೇ ಯಶವಿಲ್ಲ, ಕೆಲಸದಲಿ
ಗಮ್ಮತ್ತು ಗಳಿಸುವುದೆ ನಿಜ ತೃಪ್ತಿ – ಚಿಂತಿಸುತ
ಸುಮ್ಮನೆಯೆ ಕಾಲವನು ಕಳೆಯದಿರು ಅತ್ರಿಸೂನು

ಕ್ರಮೇಣ ಅನುವಾದಗಳ ಮಹಾಪೂರವೇ ಹರಿದುಬರತೊಡಗಿತು. ಅವನ್ನೆಲ್ಲ ಓದಿ ಒಪ್ಪವಿತ್ತು ಮುದ್ರಣಕ್ಕೆ ಅಳವಡಿಸುವ ಪ್ರೀತಿಯ ಸೇವೆಯನ್ನು ಮಂಡಳಿಯ ನಾವೆಲ್ಲರೂ ಉತ್ಸಾಹದಿಂದ ಸಲ್ಲಿಸಿದೆವು. ಸ್ವಾತಂತ್ರ್ಯ ಬಂದ ತರುಣದಲ್ಲಿ ಜವಾಹರಲಾಲ್ ನೆಹ್ರು ಮತ್ತೆ ಮತ್ತೆ ಉಚ್ಚರಿಸುತ್ತಿದ್ದ ಮಾತಿನ ಸಾರ್ಥಕತೆ ನಮ್ಮೆಲ್ಲರ ಅರಿವಿಗೆ ಬಂತು! "the exhilararating experience of building a new and resurgent India" (ನವೀನ ಮತ್ತು ಪುನರುತ್ಥಾಪಿತ ಭಾರತವನ್ನು ನಿರ್ಮಿಸುವ ಉತ್ತಾರಕ ಅನುಭವ). ಆಗ ಕನ್ನಡಕ್ಕೆ ಎಷ್ಟೊಂದು ಮಂದಿ ನುರಿತ ಲೇಖಕ ಲೇಖಕಿಯರು ಲಭಿಸಿ ಇವರ ಪೈಕಿ ಅವೆಷ್ಟು ಮಂದಿ ವೃತ್ತಿ ಬರೆಹಗಾರರೇ ಆದರೆಂಬುದನ್ನು ಗಮನಿಸುವಾಗ ನಾಡಿನ ಅಂತೆಯೇ ಭಾಷೆಯ ಅಂತಸ್ಸತ್ತ್ವ ಕುರಿತು ಅಭಿಮಾನ ಮೂಡುತ್ತದೆ.

ಆದರೆ ೫೦ ವರ್ಷಗಳಿಗೂ ಮಿಕ್ಕಿ ಚೆನ್ನಾಗಿ ನಡೆದ ಈ ಸಂಸ್ಥೆ ಪ್ರಜಾಪ್ರಭುಗಳ ಸ್ವಾರ್ಥದ ಹತಿಗೆ ಸಿಕ್ಕಿ ಶಾಶ್ವತವಾಗಿ ಮುಚ್ಚಿಯೇ ಹೋಯಿತು: ಹುತ್ತ ಕಟ್ಟುವವರು ಯಾರೋ ಅದರ ಒಡೆತನ ಸ್ಥಾಪಿಸುವವರು ಇನ್ನಾರೋ ಎಂಬಂಥ ಪರಿಸ್ಥಿತಿ. ದೇಶದ ಸರಾಸರಿ ಶೀಲ – ವರಮಾನ ಅಲ್ಲ – ವರ್ಧಿಸಿದ ವಿನಾ ಎಂಥ ರಚನಾತ್ಮಕ ಕಾರ್ಯವೂ ದೀರ್ಘ ಕಾಲ ಉಳಿದು ಒಂದು ಭವ್ಯ ಪರಂಪರೆಯನ್ನು ಸ್ಥಾಪಿಸದೆಂಬುದಕ್ಕೆ ವಯಸ್ಕರ ಶಿಕ್ಷಣ ಸಮಿತಿಯ ಶೋಚನೀಯ ನಿಧನ ಇನ್ನೂ ಒಂದು ನಿದರ್ಶನ.

ಕುವೆಂಪು ನಾಡಿನ ನವೀನ ಇಂಚರ

ವಿಶ್ವಕೋಶದ ಕಛೇರಿಯಲ್ಲಿ ಒಂದು ಅಪರಾಹ್ಣ, ಭೋಜನ ವಿರಾಮದ ವೇಳೆ. ನನ್ನ ಕೊಠಡಿಯ ಹೊರಗೆ ಅಪರಿಚಿತ ಗಣ್ಯರೊಬ್ಬರು ಯಾರನ್ನೋ ಅರಸುತ್ತ ಅಡ್ಡಾಡುತ್ತಿದ್ದುದನ್ನು ಕಂಡೆ. ನಾನೇ ಹೋಗಿ ಅವರ ಯೋಗಕ್ಷೇಮ ವಿಚಾರಿಸಿದೆ. ಅವರು ಶಿವಮೊಗ್ಗದ ಡಾಕ್ಟರ್ ಎಚ್.ಡಿ. ಚಂದ್ರಪ್ಪ ಗೌಡ, ನಮ್ಮ ಸಂಸ್ಥೆಯ ನಿರ್ದೇಶಕ ಹಾಮಾ ನಾಯಕರನ್ನು ಯಾವುದೋ ಕಾರ್ಯನಿಮಿತ್ತ ನೋಡಲು ಬಂದಿದ್ದರು.

"ಇನ್ನೇನು ಅವರು ಬರುವ ಹೊತ್ತಾಯಿತು. ಅಲ್ಲಿಯ ತನಕ ನನ್ನ ಕೊಠಡಿಯಲ್ಲೇ ಕುಳಿತಿರಿ. ಅಂದ ಹಾಗೆ ಕುವೆಂಪು ಪರಿಸರದವರಾದ ನೀವು ಕನ್ನಡದಲ್ಲಿ ಖಂಡಿತ ಬಲು ಗಟ್ಟಿ ಇರಲೇಬೇಕು. ವೈದ್ಯಕೀಯದ ಬಗ್ಗೆ ಕನ್ನಡದಲ್ಲಿ ಲೇಖನಗಳನ್ನು ಬರೆದಿರುವಿರೇ? ಬರೆಯಬಲ್ಲಿರೇ?"

"ಬಲು ವಿರಳವಾಗಿ ಬರೆದುದುಂಟು. ಆದರೆ ಯಾರು ತಾನೆ ನನ್ನ ಲೇಖನಗಳನ್ನು ಪ್ರಕಟಿಸುತ್ತಾರೆ ನೀವೆ ಹೇಳಿ" ಎನ್ನುತ್ತ ವಿಷಾದದ ನಗು ಸೂಸಿದರು. "ಪುಸ್ತಕ ಪ್ರಪಂಚ'ವೆಂಬ ಮಾಸಿಕದ ಹೆಸರು ಕೇಳಿರುವಿರಾ?"

"ಹೌದು, ಬಲು ಹಿಂದೆ ನಾನು ವಿದ್ಯಾರ್ಥಿಯಾಗಿದ್ದಾಗ ಅದರ ಸಂಚಿಕೆಗಳನ್ನು ಅತ್ಯಂತ ಆಸಕ್ತಿಯಿಂದ ಓದಿ ಪ್ರಭಾವಿತನಾದದ್ದುಂಟು."

ನನ್ನ ಕೋರಿಕೆಯನ್ನು ಮನ್ನಿಸಿ ಚಂದ್ರಪ್ಪಗೌಡರು ಈ ಮಾಸಿಕಕ್ಕೆ ಲೇಖನ ಕಳಿಸಲು ಒಪ್ಪಿ ಆ ಪ್ರಕಾರ ನಡೆದುಕೊಂಡರು. ಮುಂದೆ ಇವರೊಬ್ಬ ಕನ್ನಡದ ಮುಂಚೂಣಿ ಜನಪ್ರಿಯ ವಿಜ್ಞಾನಗ್ರಂಥಕರ್ತೃವಾಗಿ ಅರಳಿದರೆಂಬುದು ಈಗ ಇತಿಹಾಸ. ೨೦-೨೧ನೆಯ ಶತಮಾನಗಳ ಕನ್ನಡ ವಿಜ್ಞಾನ ವಾಙ್ಮಯದ ಇತಿಹಾಸದಲ್ಲಿ ಎಚ್‌ಡಿಸಿಯವರದು ಹಿರಿ ಹೆಸರು.

'ಪಟ್ಟೋಲೆ ಪಳಮೆ' ಪ್ರಕಟಣೆ

ಇನ್ನೊಂದು ಅಪರಾಹ್ಣ. ಸ್ಥಳ ವಿಶ್ವಕೋಶದಲ್ಲಿಯ ನನ್ನ ಕೊಠಡಿ. ಹೊರಗೆ ಬಿಸಿಲ ಝಳ. ಒಳಗೆ ಪಂಖದಡಿ ಕುಳಿತು ಕಾರ್ಯಮಗ್ನನಾಗಿದ್ದೆ. ವಯೋವೃದ್ಧರೊಬ್ಬರು (ವಯಸ್ಸು ೮೦ ದಾಟಿರಬಹುದು) ನನ್ನನ್ನೇ ಅರಸಿ ಒಳಬಂದರು. ಆಶ್ಚರ್ಯ, ಅವರು ಎನ್.ಸಿ. ಸುಬ್ಬಯ್ಯ, ಕೊಡಗಿನ ಒಬ್ಬ ಹಿರಿಯ ನಿವೃತ್ತ ಉಪಾಧ್ಯಾಯ. ಅವರ ಇಬ್ಬರು ಮಕ್ಕಳು ಹಿಂದೆ ಮಂಗಳೂರಿನಲ್ಲಿ ನನ್ನ ಶಿಷ್ಯರಾಗಿದ್ದರು. ಇವೆಲ್ಲ ಪೂರ್ವಸ್ಮರಣೆಗಳೂ ಆ ಕ್ಷಣ ನನ್ನ ಮನದಲ್ಲಿ ಮಿಂಚಿದುವು.

"ಅಬ್ಬ! ಕೊನೆಗೂ ನೀವು ಸಿಕ್ಕಿದಿರಲ್ಲ ಸ್ವಾಮಿ, ನನ್ನ ಭಾಗ್ಯ" ಎಂದು ನಿಡುಸುಯ್ದರು.

"ಸುಬ್ಬಯ್ಯನವರೇ! ನೀವೊಂದು ಕಾರ್ಡ್ ಹಾಕಿದ್ದರೆ ಅಥವಾ ಫೋನ್ ಮಾಡಿದ್ದರೆ ನಾನೇ ನಿಮ್ಮನ್ನು ಬಂದು ಭೇಟಿ ಆಗಿರುತ್ತಿದ್ದೆ" ಎನ್ನುತ್ತ ಅವರಿಗೆ ಕಾಫಿ ತರಿಸಿಕೊಟ್ಟು, "ನನ್ನಿಂದ ಏನಾಗಬೇಕಾಗಿದೆ?" ಎಂದು ಕೇಳಿದೆ.

ಸ್ವಲ್ಪ ಸುಧಾರಿಸಿಕೊಂಡು ಅವರೆಂದರು, "ಕೊಡವರ ಆದಿಕಾವ್ಯ, ವೇದ ಅಥವಾ ಸಂಪ್ರದಾಯ ಗ್ರಂಥ ಎಂದೇ ಜನಜನಿತವಾಗಿದ್ದ ಸಮಸ್ತ ಹಾಡುಗಬ್ಬಗಳನ್ನೂ ನನ್ನ ತಂದೆ ನಡಿಕೇರಿಯಂಡ ಚಿಣ್ಣಪ್ಪನವರು ಸಂಗ್ರಹಿಸಿ 'ಪಟ್ಟೋಲೆ ಪಳಮೆ' ಎಂಬ ಹೆಸರಿನ ಪುಸ್ತಕವಾಗಿ ಪ್ರಕಟಿಸಿದ್ದು ನಮ್ಮೂರಿನವರೇ ಆಗಿರುವ ನಿಮಗೆ ಗೊತ್ತಿರಬಹುದು. ಅದರ ಎಲ್ಲ ಪ್ರತಿಗಳೂ ಮುಗಿದು ಹೋಗಿ ಬಹಳ ವರ್ಷಗಳೇ ಸಂದಿವೆ. ಬೇಡಿಕೆಯಂತೂ ಏರುತ್ತಲೇ ಇದೆ. ಧೈರ್ಯ ಮಾಡಿ ನಾನೇ ಅದರ ಮರುಮುದ್ರಣ ಹಾಕಲು ಹಣ ಹೂಡಿದೆ. ಮಡಿಕೇರಿಯಲ್ಲೇ ನಮ್ಮೊಬ್ಬ ಬಂಧುವಿನ ಪ್ರೆಸ್ಸಿನಲ್ಲಿ ಈ ಕೆಲಸ ತೊಡಗಿದ್ದೂ ಆಯಿತು. ಆದರೆ ಅವನು ನನ್ನಿಂದ ಸಾಕಷ್ಟು ದುಡ್ಡು ಎಳೆದ, ಪುಸ್ತಕ ಮಾತ್ರ ಹೊರಬಂದಿಲ್ಲ. ಎಲ್ಲ ಫಾರ್ಮುಗಳೂ ಮುದ್ರಣವಾಗಿವೆ. ಇನ್ನು ಬೈಂಡ್ ಮಾಡಿ ಪುಸ್ತಕ ರೂಪ ಕೊಡಬೇಕಾದರೆ ಇನ್ನಷ್ಟು ಹಣ ಸುರಿಯಬೇಕೆಂದು ಹೇಳುತ್ತಿದ್ದಾನೆ. ನನಗೇನೋ ಸಂದೇಹವಿದೆ ಆತ ಸಾಚಾ ಅಲ್ಲವೆಂದು. ಏನು ಮಾಡಲಿ? ನನ್ನ ಸಂಕಷ್ಟವನ್ನು ಹತ್ತಿರದ ನೆಂಟರೊಬ್ಬರ ಜೊತೆ ಹಂಚಿಕೊಂಡಾಗ ಅವರು 'ನಮ್ಮ ತಿಮ್ಮಪ್ಪಯ್ಯ ಸ್ವಾಮಿಯವರ ಮಗ ಈಗ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಭಾರೀ ಹುದ್ದೆಯಲ್ಲಿದ್ದಾರೆ. ಅವರನ್ನು ಕಂಡು ಮಾತಾಡಿ ನೋಡಿ' ಎಂಬ ಸೂಚನೆ ನೀಡಿದರು. ಈಗ ನೀವೇ ದಾರಿ ತೋರಿಸಬೇಕು."

ಹೀಗೆನ್ನುತ್ತಾ ಸುಬ್ಬಯ್ಯ ತಮ್ಮ ಚೀಲದಿಂದ ಮೊದಲ ಕೆಲವು ಫಾರ್ಮುಗಳನ್ನು ಹೊರ ತೆಗೆದು ನನಗೆ ಕೊಟ್ಟರು. ಇಡೀ ವ್ಯವಹಾರವನ್ನು ಮತ್ತೊಮ್ಮೆ ಪರಿಶೀಲಿಸಿ ಅವರ ಜೊತೆ ಚರ್ಚಿಸಿ ಒಂದು ನಿರ್ಧಾರ ತಳೆದು ಅವರನ್ನು ನಾಯಕರಲ್ಲಿಗೆ ಕರೆದುಕೊಂಡು ಹೋದೆ. ಸಾವಕಾಶವಾಗಿ ಎಲ್ಲವನ್ನೂ ವಿವರಿಸಿ, "ಪಟ್ಟೋಲೆ ಪಳಮೆ'ಯನ್ನು ನಮ್ಮ ಸಂಸ್ಥೆಯ ಒಂದು ಪ್ರತಿಷ್ಠಿತ ಕೃತಿಯಾಗಿ ಹೊರತರಬೇಕು. ಇದು ಸಮಸ್ತ ಕೊಡವ ಜನಾಂಗಕ್ಕೆ ವಿಶ್ವವಿದ್ಯಾನಿಲಯ ಸಲ್ಲಿಸಬಹುದಾದ ಗೌರವ ಗ್ರಂಥವಾಗುವುದರಲ್ಲಿ ನನಗೆ ಎಳ್ಳಷ್ಟೂ ಸಂದೇಹವಿಲ್ಲ. ಇನ್ನು ವಾಣಿಜ್ಯ ದೃಷ್ಟಿಯಿಂದ ಇದು ಖಾತ್ರಿ ಯಶಸ್ವಿಯಾಗುತ್ತದೆ. ಆದರೆ ಇಲ್ಲೊಂದು ತೊಡಕಿದೆ: ಫಾರ್ಮುಗಳೆಲ್ಲವೂ ಮುದ್ರಣವಾಗಿ ಆ ವೆಚ್ಚವನ್ನು ಸುಬ್ಬಯ್ಯನವರೇ ಭರಿಸಿದ್ದಾರೆ. ಅದು ಸಾಕಷ್ಟು ದುಬಾರಿಯಾಗಿದೆ ಎಂಬುದು ನನ್ನ ಅರಿವಿಗೆ ಬಂದಿದೆ. ನಾವು ಅಷ್ಟು ಹಣವನ್ನು ಸುಬ್ಬಯ್ಯನವರಿಗೆ ಪಾವತಿಸುವುದು ಸಾಧ್ಯವಿಲ್ಲ. ಬದಲು ವಿಶ್ವವಿದ್ಯಾನಿಲಯ ಶಿಷ್ಟೀಕರಿಸಿರುವ ದರದಲ್ಲಿ ಎಣಿಸಿ ಇವರಿಗೆ ಆ ಮೊಬಲಗು ಕೊಟ್ಟು ಎಲ್ಲ ಫಾರ್ಮುಗಳನ್ನು ಖರೀದಿಸಿ ಮುಂದೆ ನಮ್ಮ ಕ್ರಮದಲ್ಲಿ ಬೈಂಡ್ ಮಾಡಿಸಿ ಮಾರಾಟಕ್ಕೆ ಅಣಿಗೊಳಿಸುವುದು ವ್ಯಾವಹಾರಿಕವಾಗಿ ಸಾಧು ಮತ್ತು ಸಾಹಿತ್ಯಕವಾಗಿ ಸಾರ್ಥಕ ಕೆಲಸ ಕೂಡ. ತಾತ್ತ್ವಿಕವಾಗಿ ನೀವಿದನ್ನು ಒಪ್ಪಿಕೊಂಡರೆ ಮುಂದಿನ ಎಲ್ಲ ವಿವರಗಳನ್ನೂ ನಾನು ಪೂರೈಸುತ್ತೇನೆ.

ನಮ್ಮಿಬ್ಬರ ಕಾಳಜಿ ಮತ್ತು ಈ ಕೆಲಸದ ಸಮರ್ಪಕತೆಯನ್ನು ತತ್‌ಕ್ಷಣವೇ ಗ್ರಹಿಸಿದ ನಾಯಕರು ಆಗಲೇ ಹಸುರು ಕಂದೀಲು ತೋರಿಸಿದರು. ಮುಂದಿನ ಒಂದು ವರ್ಷದಲ್ಲೇ – ಸುಬ್ಬಯ್ಯನವರು ಬದುಕಿದ್ದಾಗಲೇ – ಗ್ರಂಥ ಮೈಸೂರು ವಿಶ್ವವಿದ್ಯಾನಿಲಯದ ಒಂದು ಅಧಿಕೃತ ಪ್ರಕಟಣೆಯಾಗಿ ಬೆಳಕು ಕಂಡಿತು. ಕೇವಲ ಎರಡು ವರ್ಷಗಳಲ್ಲಿ ಅದರ ಎಲ್ಲ ಪ್ರತಿಗಳೂ ಮಾರಾಟವಾಗಿ ಹೋದುವು.

ಹಲವು ವರ್ಷಾನಂತರ ಶೇಷಗಿರಿರಾಯರ ಅಧ್ಯಕ್ಷತೆಯಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ ಅಸ್ತಿತ್ವಕ್ಕೆ ಬಂದಾಗ ಅದರಲ್ಲಿ ನಾನೂ ಒಬ್ಬ ಸದಸ್ಯನಾಗಿದ್ದುದು ಸರಿಯಷ್ಟೆ. ಆಗ ಕನ್ನಡದ ಅಲಭ್ಯ ಆದರೆ ಸಾರ್ವಕಾಲಿಕ ಗ್ರಂಥಗಳ ಪುನರ್ಮುದ್ರಣ ಯೋಜನೆಯನ್ನು ಪ್ರಾಧಿಕಾರ ತೊಡಗಿತ್ತು. ನಮ್ಮಿಬ್ಬರ ಪ್ರೇರಣೆಯಿಂದ 'ಪಟ್ಟೋಲೆ ಪಳಮೆ' ಪ್ರಾಧಿಕಾರದ ಮೂಲಕ ಮರುವುಟ್ಟು ಪಡೆಯಿತು. ಆರ್.ಎಲ್. ನರಸಿಂಹಯ್ಯನವರ ಅಭಿಜಾತ ಕೃತಿ 'ನಕ್ಷತ್ರ ದರ್ಶನ'ವನ್ನೂ ಇದೇ ಯೋಜನೆಯ ಅಡಿಯಲ್ಲಿ ಪ್ರಕಟಿಸಿದೆವೆಂದು ಇಲ್ಲಿ ಹೇಳಬೇಕು.

ಅದೃಶ್ಯ ಲೋಕದ ಅನೂಹ್ಯ ರೂಪದ ಅನಂತ ಕಾಲದ ಯಾತ್ರಿಕ

೧೯೭೦ರ ದಶಕದ ಪೂರ್ವಾರ್ಧದ ಒಂದು ದಿನ ನನ್ನ ಕೊಠಡಿಗೊಬ್ಬ ಹಿರಿಯ ವ್ಯಕ್ತಿ ಬಂದರು. ಪ್ರಸಿದ್ಧ ಸಾಹಿತಿ ನಿರಂಜನ ಕೊಟ್ಟಿದ್ದ ಪರಿಚಯಪತ್ರವನ್ನು ನನಗೊಪ್ಪಿಸಿ ಕುಳಿತರು. "ಇವರ ಹೆಸರು ಕೆ. ಮುರಳೀಧರರಾವ್, ಉತ್ತಮ ರೇಖಾಚಿತ್ರಕಾರ, ನನ್ನ ಜೊತೆ 'ಜ್ಞಾನಗಂಗೋತ್ರಿ'ಯಲ್ಲಿ ದುಡಿದಿದ್ದಾರೆ. ಈಗ ಮೈಸೂರಿಗೆ ತಮ್ಮ ಬಿಡಾರವನ್ನು ವರ್ಗಾಯಿಸಿದ್ದಾರೆ. ವಿಶ್ವಕೋಶದಲ್ಲಿ ಇವರ ಸೇವೆಯನ್ನು ಧಾರಾಳವಾಗಿ ಬಳಸಿಕೊಳ್ಳಬಹುದು."

ದೃಢಕಾಯ, ಕಡೆದ ಶಿಲ್ಪದಂಥ ಮುಖಮುದ್ರೆ, ಮೌನಿಯೋ ಎನಿಸುವಷ್ಟು ತೀರ ಮಿತಭಾಷಿ. ಮಾದರಿ ಚಿತ್ರ ಕೆಲಸವನ್ನು ಅವರಿಗೆ ವಹಿಸಿದೆವು. ಮರುದಿನವೇ ಅವರು ಪೂರೈಸಿದ ಮಾಲು ಸಹಿತ ಹಾಜರು! ಆ ರೇಖೆಗಳ ದೃಢತೆ, ಅಕ್ಷರಗಳ ಸ್ಫುಟತೆ ಮತ್ತು ಚಿತ್ರಗಳ ಸುಂದರತೆ ಅತ್ಯಂತ ಆಕರ್ಷಕವಾಗಿದ್ದುವು. ದುಡ್ಡಿನ ಬಗ್ಗೆ ಚೌಕಾಸಿ ಇಲ್ಲ, ಆಸೆ ಆತುರವೂ ಇಲ್ಲ. ಕೆಲಸದ ಬಗ್ಗೆ ಸದಾ ಕಾಳಜಿ, ಅಸಾಧ್ಯವೆಂಬ ಮಾತೇ ಇಲ್ಲ. ಕಾಲಪ್ರಜ್ಞೆ ಸಾಕ್ಷಾತ್ ಸೂರ್ಯನಿಗೇ ಸವಾಲಾಗುವಂತೆ! ಹೀಗೆ ಆರಂಭದಿಂದಲೇ ರಾಯರು ನನ್ನ ಗೌರವಾದರಪಾತ್ರರಾದರೂ ಮೈತ್ರಿ ಮಾತ್ರ ಕುದುರಿರಲಿಲ್ಲ. ಚಿತ್ರಕಾರನ ಹಿಂದಿದ್ದ ಚೇತನ ಅಜ್ಞಾತ ಮತ್ತು ಅಗೋಚರವಾಗಿಯೇ ಉಳಿದಿತ್ತು. ಆದರೆ ನೇಸರಿಗೆ ನೀವು ದೀರ್ಘ ಕಾಲ ಕತ್ತಲೆಯ ಸಂಕೋಲೆ ತೊಡಿಸಿಡಲಾರಿರಿ.

"ಈ ಸಂಜೆ ಜಗನ್ಮೋಹನ ಅರಮನೆಯಲ್ಲಿ ಒಂದು ಕಾರ್ಯಕ್ರಮವಿದೆ. ಸ್ವಲ್ಪ ಅವಸರದಲ್ಲಿದ್ದೇನೆ" ಎಂದರು ಒಂದು ಅಪರಾಹ್ಣ – ಪೂರೈಸಿದ ಚಿತ್ರಗಳನ್ನು ಕೊಡುತ್ತ, ಕೂರಲಿಲ್ಲ. ಒಂದು ಕಾಲು ಹೊರಗಿಟ್ಟರು.

"ಏನು ಅಂಥ ತುರ್ತು?" ಮಾತಾಳಿಯಾದ ನನ್ನ 'ಅನಗತ್ಯ ಅಧಿಕಪ್ರಸಂಗ."

"ಒಂದು ನೃತ್ಯ ಪ್ರದರ್ಶನ."

ಮುಂದಿನ ಸಂವಾದಕ್ಕೆ ಎಡೆ ಕೊಡದಂತೆ ಆಗಲೇ ಅವರು ಮಾಯವಾಗಿದ್ದರು. ಕಲಾಕ್ಷೇತ್ರದ ರುಕ್ಮಿಣೀದೇವಿ ಅರುಂಡೇಲ್ ಅವರ ಉಚ್ಛ್ರಾಯ ದಿನಗಳಂದೇ ನಾನು ಮದ್ರಾಸು ನಿವಾಸಿಯಾಗಿದ್ದರೂ (೧೯೪೪–೪೯) ಶುದ್ಧ ಸಾತ್ತ್ವಿಕ ಕರ್ನಾಟಕ ಸಂಗೀತದ ಕರ್ಮಠ ಭಕ್ತನಾಗಿದ್ದುದರಿಂದ ನೃತ್ಯ ಪ್ರಕಾರದತ್ತ ಲಕ್ಷ್ಯ ಹರಿಸಿಯೇ ಇರಲಿಲ್ಲ. ಏಕೆ? ಅಮೂರ್ತ ಅಜ್ಞಾತ ಮೌಲ್ಯಗಳಲ್ಲಿ ಆನಂದ ಅನ್ವೇಷಿಸುವವರು ಮೂರ್ತ ಜ್ಞಾತ ಘಟನೆಗಳ ಬಗ್ಗೆ ಅಂಧರಾಗಿರುವುದು ವಾಡಿಕೆ.

ಮುರಲೀಧರರಾಯರ ಒಗಟು ನನ್ನ ಮೇಲೆ ಸಮ್ಮೋಹಕಾಸ್ತ್ರ ಬೀರಿ ಕಣ್ಣು ತೆರೆಸಿತ್ತು. ಕಾಲಕ್ಕೆ ಮೊದಲೇ ಸಭಾಂಗಣಕ್ಕೆ ಹೋದೆ. ನಿರ್ಜೀವ ತೆರೆಯತ್ತ ನಿರ್ಭಾವ ದೃಷ್ಟಿ ಹರಿಸಿ ನಿಷ್ಠುರ ಗಡಿಯಾರ ನೋಡುತ್ತ ಕುಳಿತೆ. ಯುಕ್ತ ಮುಹೂರ್ತದಲ್ಲಿ ತೆರೆ ಸರಿಯಿತು. ಸಿಸೇಮೆ ತೆರೆಯಿತು. ವೇದಿಕೆಯ ಬಲ ಬದಿಯಲ್ಲಿ ಆಸೀನರಾಗಿದ್ದ ಸಂಗೀತ ಮೇಳದವರು ಗಣಪತಿ ಸ್ತುತಿ ಹಾಡತೊಡಗಿದರು. ಶುದ್ಧ ಕರ್ನಾಟಕ ಸಂಗೀತದ ಈ ವಾಮನ ರೂಪ ನನಗೆ ಪ್ರಿಯವಾಗಲಿಲ್ಲ. ಆದರೆ ಮೇಳದ ನಡುವೆ ತಾಳವ ತಟ್ಟುತ್ತ ಮಂಡಿಸಿರುವ ಇವರು ಯಾರು? ಹೌದು, ಸಾಕ್ಷಾತ್ ಚಿತ್ರಕಾರ ಮುರಲೀಧರರಾವ್ ತಾಳ ಹಿಡಿದು ಮೃದುವಾಗಿ ಮಿಡಿದು ಸಂಗೀತಕ್ಕೆ ಚಾಲನೆ ನೀಡುತ್ತಿದ್ದಾರೆ! ನಿಜ, "ತಾಳಬೇಕು, ತಕ್ಕ ಮೇಳ ಬೇಕು." ಅಲ್ಲದೆ ಕಾಲ ಮಾಗಬೇಕು, ಮತ್ತು ಸಹನೆ ಬೇಕು.

ರಾಯರ ಈ (ನನ್ನ ಮಟ್ಟಿಗೆ) ಹೊಸ ಅವತಾರ ಕಂಡ ನಾನು ಪುಳಕಿತನಾಗಿ ಇಡೀ ಪ್ರದರ್ಶನ ನೋಡಿದೆ. ಇಲ್ಲ, ಅದರಲ್ಲೇ ಲೀನಗೊಂಡು ಹೊಸ ದೃಷ್ಟಿ ಗಳಿಸಿದೆ ಪ್ರಜ್ಞಾವಂತ ರಸಿಕನಾಗಿ. ಅಮೂರ್ತ ಸಂಗೀತದ ಮೂರ್ತಾಭಿನಯ ಭರತನಾಟ್ಯ. ಅಂತೆಯೇ, ಮೂರ್ತ ಭರತನಾಟ್ಯದ ಅಮೂರ್ತ ವಿಸ್ತರಣೆ ಅಭಿಜಾತ ಸಂಗೀತವೆಂಬ ಸೂಕ್ಷ್ಮ ಅರಿತೆ. ದಾಸ ಶ್ರೇಷ್ಠರು ಹಾಡಿ ಕುಣಿದರು, ಕುಣಿದು ಹಾಡಿದರು, "ನೋಡಿ ಮುದ್ದಾಡಿ ಮಾತಾಡಿ ಸಂತೋಷಗೂಡಿ ಪಾಡಿ ಪೊಗಳಿದರು ಪರಮ ಪುರುಷ ಹರಿ."

ಹೀಗೆ ಚಿತ್ರಕಾರ ಮುರಲೀಧರರಾಯರ ನಾಟ್ಯಾಚಾರ್ಯ ಮುಖದ ಪರಿಚಯ ತೀರ ಅಕಸ್ಮಾತ್ತಾಗಿ, ಅನಿರೀಕ್ಷಿತವಾಗಿ, ಆದ್ದರಿಂದ ಅಧಿಕ ಸಂತೋಷಪ್ರದವಾಗಿ, ನನಗಾಯಿತು. "ಜೀವವಿಂತಜ್ಞಾತ ಸೂತ್ರದಾಟದ ಬೊಂಬೆ, ಭಾವಿಸಾ ಸೂತ್ರಗಳ" (ಡಿವಿಜಿ) ಅಲ್ಲವೇ? ನಮ್ಮ ಈ ಗಾಢ ಮೈತ್ರಿಯ ಪಕ್ವ ಫಲ ೧೯೯೮ರಲ್ಲಿ ಪ್ರಕಟವಾದ 'ನೃತ್ಯಲೋಕ.' ೫೨೮ ಪುಟಗಳ ಈ ಸಚಿತ್ರ ಬೃಹದ್ಗ್ರಂಥದಲ್ಲಿ ಮುರಲೀಧರರಾಯರು ತಮ್ಮ ಸಂಶೋಧನೆ–ಪ್ರಯೋಗಗಳ ಸಾರವನ್ನು ತಿಳಿಗನ್ನಡದಲ್ಲಿ ನಿರೂಪಿಸಿದ್ದಾರೆ.

ಎಲ್ಲರಂಥವನಲ್ಲವೀ ನನ್ನ ಶರಣ!

ಅವರು ಮೈಸೂರಿಗೆ ಹೊಸತಾಗಿ ಬಂದು ಹಿರಿ ಹೆಸರು ಮಾಡಿದ್ದ ವೈದ್ಯ ಶಿರೋಮಣಿ ಎಂಬ ಸಂಗತಿ ಗೊತ್ತಿದ್ದರೂ ಅವರ ಪರಿಚಯ ಲಾಭಕ್ಕಾಗಿ ನಾನು ಸ್ನೇಹಿತರ ಮೂಲಕ ಪ್ರಯತ್ನಿಸಿದ್ದರೂ ವಾಸ್ತವ ಭೇಟಿ ಸಂಭವಿಸಿದ್ದು ಮಾತ್ರ ನಂಜನಗೂಡಿನ ಒಂದು ಸಾರ್ವಜನಿಕ ಸಭಾಂಗಣದಲ್ಲಿ! ನಾವಿಬ್ಬರೂ ಅಲ್ಲಿ ಆಹ್ವಾನಿತ ಭಾಷಣಕಾರರು: 'ನಕ್ಷತ್ರಗಳ ಅಜ್ಞಾತ ಪ್ರಪಂಚ' ಕುರಿತು ಮೊದಲು ನಾನೂ ಬಳಿಕ 'ಮಾದಕ ಚಟಗಳ ಮಾರಕ ಪರಿಣಾಮಗಳು' ಕುರಿತು ಅವರೂ ತಲಾ ಒಂದು ತಾಸು ಮಾತಾಡಿದೆವು. ನನ್ನ ನಿರರ್ಗಳ ವಾಗ್ಧಾರೆಗೆ ಪ್ರತಿಕ್ರಿಯೆ ದಿವ್ಯ ಮೌನ – ಕಾರಣ, ಅದು ಯಾರಿಗೂ ಅರ್ಥವಾಗಿರಲಿಲ್ಲ. ಆ ವಿಷಯವೇ ಹಾಗೆ, ಅನಂತ ದೇಶ – ಕಾಲವನ್ನು ನೀವು ೧ ಗಂಟೆಯ ಕೃಪಣತೆಯಲ್ಲಿ ಕುಂಚಿಸಲಾರಿರಿ! ಅವರಿಗೋ ದೊರೆತ ಮೆಚ್ಚುನುಡಿಗಳು ಮತ್ತು ಕೊನೆಯಲ್ಲಿ ಶರಣಾಗಿ ತಪ್ಪೊಪ್ಪಿಗೆ ನೀಡಿದ ಅನೇಕ ವ್ಯಸನಿಗಳು ಒಂದು ಅಂಶವನ್ನು ನನಗೆ ಸ್ಪಷ್ಟಪಡಿಸಿದುವು. "ಇಲ್ಲೊಂದು ರಸಲೋಕ ಕೈಬೀಸಿ ಕರೆಯುತಿದೆ." ಅವರ ಮಾತಿನ ಸಂಚು, ಭಾವದ ಮಿಂಚು, ಕಂಠದ ಕಂಚು ಮತ್ತು ಓಘದ ಹೊಂಚು ಒಂದು ಪೂರ್ಣ ಕಲಾಪ್ರಕಾರವೇ ಆಗಿತ್ತು. ಅವರ ಹೆಸರು ಡಾಕ್ಟರ್ ಸ.ಜ. ನಾಗಲೋಟಿಮಠ, ವೈದ್ಯಲೋಕದ ಗಾರುಡಿಗ, ಮೈಸೂರಿನಲ್ಲಿಯ ಜೆ.ಎಸ್.ಎಸ್ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ.

ಉಪನ್ಯಾಸ ಮುಗಿದ ಬಳಿಕ, "ಇದೇ ವಿಷಯದ ಮೇಲೆ ಲೇಖನ ಬರೆದು ಕೊಡಿ, 'ಪುಸ್ತಕ ಪ್ರಪಂಚ'ದಲ್ಲಿ ಮುದ್ರಿಸುವ ಸಲುವಾಗಿ" ಎಂದು ಕೋರಿದೆ.

"ಈ ತನಕ ಆ ಕೆಲಸ ನಾನು ಮಾಡಿಲ್ಲ. ಕನ್ನಡದಲ್ಲಿ ಬರೆದು ರೂಢಿ ಇಲ್ಲ" ಅವರ ಪ್ರಾಮಾಣಿಕ ಪ್ರತಿಕ್ರಿಯೆ.

"ಅನುಭವ ಸಾಚಾ ಆಗಿದ್ದರೆ, ಸಂವಹನ ತುಡಿತ ತೀವ್ರವಾಗಿದ್ದರೆ, ಮತ್ತು ಅದನ್ನು ಅರಿಯಲೇಬೇಕೆಂಬ ತವಕ ವಾಚಕರಲ್ಲಿ ಗಾಢವಾಗಿದ್ದರೆ ತಜ್ಜನ್ಯ ನಿರೂಪಣೋಲ್ಲಾಸವೇ ಭಾಷೆಯನ್ನು ಕಡೆದು ಕಂಡರಿಸುತ್ತದೆ. ಇದೀಗ ತಾನೇ ನೀವು ನೀಡಿದ ಅದ್ಭುತ ಭಾಷಣವೇ ಇದಕ್ಕೆ ನಿದರ್ಶನ."

"ಆದರೆ ಮಾತಿನ ಧಾಟಿ ಬೇರೆ, ಬರವಣಿಗೆಯ ಶಿಸ್ತು ಬೇರೆ. ವ್ಯಾಕರಣದೋಷ, ಲಿಪಿ ಸ್ಖಾಲಿತ್ಯ, ಪಾರಿಭಾಷಿಕ ಪದ ಬಳಕೆ ಕುರಿತ ಗೊಂದಲ, ಶೈಲಿಯಲ್ಲಿಯ ವಿಚ್ಛಿನ್ನತೆ ಮುಂತಾದವುಗಳಿಗೆ ನನ್ನಲ್ಲಿ ಪರಿಹಾರವಿಲ್ಲ."

"ಅವು ಚಿಲ್ಲರೆ ವಿಷಯಗಳು, ಕಲೆಗಾರಿಕೆ ಅಂದರೆ ಕುಸುರಿ ಕೆಲಸಕ್ಕೆ ಸಂಬಂಧಿಸಿದುವು. ಈ ವಿವರಗಳನ್ನು ನನಗೆ ಬಿಡಿ. ಶಿಲೆ ನಿಮ್ಮದು, ಕಲೆ, 'ಪುಸ್ತಕ ಪ್ರಪಂಚ'ದ್ದು. ಶಿಲೆಯಿದ್ದರಲ್ಲವೇ ಕಲೆ"?

ಹೀಗೆ ಹನಿಯಲು ತೊಡಗಿದ ಕನ್ನಡದ ಕೆಲಸ ಇಂದು (೨೦೦೬) ಸಜನಾರನ್ನು ಕನ್ನಡ ನಾಡಿನ ಒಬ್ಬ ಮುಂಚೂಣಿ ಜನಪ್ರಿಯ ವಿಜ್ಞಾನಲೇಖಕರನ್ನಾಗಿಯೂ ಬಿಂಬಿಸಿದೆ. ವಿವರಗಳಿಗೆ ಅವರ ಆತ್ಮಕಥೆ 'ಬಿಚ್ಚಿದ ಜೋಳಿಗೆ'ಯನ್ನು ಓದಬೇಕು. ಅದು ಹೇಗಿದೆ?

ಅನುಭವದಡುಗೆಯ ಮಾಡಿ, ಅದ
ಕ್ಕನುಭವಿಗಳು ಬಂದು ನೀವೆಲ್ಲ ಕೂಡಿ – ಪುರಂದರದಾಸರು

ನುಡಿದರ ಲಿಂಗ ಮೆಚ್ಚಿ ಅಹುದಹುದೆನಬೇಕು – ಬಸವಣ್ಣ

ಸೂಜಿಗಲ್ಲು ತಿರುಗುತ್ತಿತ್ತೋ ಹೊಳಿಮ್ಯಾಗ
ಸೂಜಿಯೊಂದು ತೇಲತಿತ್ತೋ ಹೊಳಿಯಾಗ – ಅಂಬಿಕಾತನಯದತ್ತ

ಉದಾಹರಣೆಗಳ ಯಾದಿಯನ್ನು ಲಂಬಿಸದೆ ಸಾರಾಂಶವಾಗಿ ಒಂದು ಮಾತು ಹೇಳಬಲ್ಲೆ: ಇತರರಲ್ಲಿ ಅಡಗಿರುವ ಪ್ರತಿಭೆಯನ್ನು ಗುರುತಿಸಿ, ಬೆಂಬಲಿಸಿ, ಪೋಷಿಸಿ, ಹರ್ಷಿಸುವ ಕೆಲಸವೊಂದೇ ವ್ಯಕ್ತಿಯ ಭೌತಿಕ ಮತ್ತು ಆಧ್ಯಾತ್ಮಿಕ ಅಭಿವೃದ್ಧಿಗಿರುವ ಮಾರ್ಗ. ಇದರಿಂದ ಸಮಾಜ ಬೆಳೆಯುತ್ತದೆ, ಜೊತೆಗೆ ವ್ಯಕ್ತಿಯೂ ಹೊಳೆಯುತ್ತಾನೆ. ಈ ಜೀವನ ತಥ್ಯ ಮತ್ತು ಸತ್ಯ ಮತ್ತೆ ಮತ್ತೆ ನನ್ನ ಅನುಭವಕ್ಕೆ ಬರುತ್ತಿವೆ. 'ವಸುಧೈವ ಕುಟುಂಬಕಂ' ಅದೆಂಥ ಅರ್ಥಪೂರ್ಣ ನುಡಿ!

ಚಂದ್ರ ದರ್ಶನ ಮತ್ತು ಸಂದರ್ಶನ
ಅಧ್ಯಾಯ ೮೭



ನಮ್ಮ ಎರಡನೆಯ ಮಗ ಆನಂದ. ಇವನ ಮಡದಿ ಜಯಶ್ರೀ, ಮಗಳಂದಿರು ಅನರ್ಘ್ಯ ಮತ್ತು ಐಶ್ವರ್ಯ. ಈತ ಗಣಕ ವಿಜ್ಞಾನಿ, ಜಯಶ್ರೀ ಗೃಹಿಣಿ. ಈ ಕುಟುಂಬ ೧೯೯೦ರ ವೇಳೆಗೆ ಹೊಸ ಹಸುರು ಅರಸಿ ಪಡುವಲಿಗೆ ಪಯಣಿಸಿ ಅಮೆರಿಕದ ಪೋರ್ಟ್ ಲ್ಯಾಂಡಿನಲ್ಲಿ (ಓರೆಗಾನ್) ನೆಲಸಿತು. ಪ್ರತಿಷ್ಠಿತ ಇಂಟೆಲ್ ಕಂಪೆನಿಯಲ್ಲಿ ಇವನೊಬ್ಬ ತಂತ್ರಾಂಶ ಎಂಜಿನಿಯರ್. ಮಕ್ಕಳ ಶಿಕ್ಷಣ ಅಲ್ಲೇ. ಇವರ ಮನೋಧರ್ಮ ಹೇಗಿತ್ತು, ಮತ್ತು ಇದೆ? ಅಶನ ವಸನ ವಸತಿ ಅಲ್ಲಿ (ಅಮೆರಿಕ), ಆದರೆ ಉಸಿರು ಮಾತ್ರ ಇಲ್ಲಿ (ಭಾರತ). ಮನೆಯಲ್ಲಿ ಸಂಪೂರ್ಣ ಭಾರತೀಯ ಸಂಸ್ಕೃತಿ, ಕನ್ನಡದ ಕಂಪು, ಅಲ್ಲಿಯ ಕನ್ನಡ ಮತ್ತು ಕಲಾಸಂಘಗಳಲ್ಲಿ ಸಕ್ರಿಯ ಪಾತ್ರ ಮುಂತಾದವು ಇವರ ಜೀವನ ಶೈಲಿ, ಹಕ್ಕಿನ ರಜಾದಿನಗಳಲ್ಲಿ ಭಾರತಕ್ಕೆ ಮರಳಿ ಇಲ್ಲಿಯ ಆತ್ಮೀಯ ಸಾಂಸ್ಕೃತಿಕ ಹವೆಯಲ್ಲಿ ಯಥೇಚ್ಛವಾಗಿ ಮಿಂದು ಪುನೀತರಾಗಿ ನವೋತ್ಸಾಹದೀಪ್ತರಾಗಿ ಮರಳುವುದು ವಾಡಿಕೆ.

ಸಹಜವಾಗಿ ಇವರ ಒಂದು ಉತ್ಕಟ ಅಪೇಕ್ಷೆ ನಮ್ಮಿಬ್ಬರನ್ನೂ ಅಂತೆಯೇ ಜಯಶ್ರೀಯ ತಾಯಿ ತಂದೆಯರನ್ನೂ ಅಮೆರಿಕಕ್ಕೆ ಕರೆಸಿಕೊಂಡು ತಮ್ಮ ಹೊಸಗೂಡಿನ ನವಗಾನದ ಸೊಗಸನ್ನು ಉಣಿಸುವುದು. ಇಂಥ ಎಲ್ಲ ಪ್ರೀತಿಯ ಆಹ್ವಾನಗಳಿಗೂ ನನ್ನ ಸಿದ್ಧ ದೃಢ ಉತ್ತರ ಒಂದೇ, "God is my enemy number one, and travel enemy number two. I keep away from both." ಅವರ ಒತ್ತಾಯ ತೀರ ಜಾಸ್ತಿ ಆದಾಗ ನಾನೊಂದು ಬ್ರಹ್ಮಾಸ್ತ್ರ ಪ್ರಯೋಗಿಸುತ್ತಿದ್ದೆ, "ಮಕ್ಕಳೇ! ನಮ್ಮ ಮೇಲೆ ನೀವು ವೆಚ್ಚ ಮಾಡಬೇಕೆಂದಿರುವ ಈ ಹಿರಿ ಮೊಬಲಗನ್ನು ನಿಮಗೆ ಪ್ರಿಯವಾದ ಯಾವುದೇ ಭಾರತೀಯ ಸಂಸ್ಥೆಗೆ ದಾನಮಾಡಿಬಿಡಿ. ಇಂಥ ಸೇವೆ ಶಾಶ್ವತ, ನಮ್ಮ ಪ್ರಯಾಣದಿಂದ ನಿಮಗೆಲ್ಲ ದೊರೆಯುವ ಸಂತೋಷವಾದರೋ ಕೇವಲ ಕ್ಷಣಿಕ."

ಈ ಪ್ರೇಮಕಲಹ ಮುಂದುವರಿಯುತ್ತಿದ್ದಂತೆ ಆನಂದ ಇನ್ನೊಂದು ನಿರಾಕರಿಸಲಾಗದ ಮತ್ತು ಆಗ ನಾನು ಪೂರ್ತಿ ಅಸಂಭವನೀಯವೆಂದು ಭಾವಿಸಿದ್ದ ಯೋಜನೆಯನ್ನು ನನ್ನ ಮುಂದಿಟ್ಟ, "ನೀವೀಗ ನೊಬೆಲ್ ಪ್ರಶಸ್ತಿ ಪುರಸ್ಕೃತ ಚಂದ್ರಶೇಖರ್ ಅವರ ಜೀವನ ಚರಿತ್ರೆಯನ್ನು ಕನ್ನಡದಲ್ಲಿ ಬರೆಯುತ್ತಿದ್ದೀರಿ. ಆ ಮಹಾ ವಿಜ್ಞಾನಿಯ ಸಾಧನೆ ಸಿದ್ಧಿಗಳನ್ನು ಅವರ ಕಾರ್ಯಕ್ಷೇತ್ರದಲ್ಲೇ ನೋಡಿ ಹೆಚ್ಚಿನ ಮಾಹಿತಿ ಸಂಗ್ರಹಿಸಲಾದರೂ ಇಲ್ಲಿಗೆ ಬನ್ನಿ."

ಆಮಿಷ ಅನಿರಾಕರಣೀಯವೆನಿಸುವಷ್ಟು ಆಕರ್ಷಕವಾಗಿತ್ತು. ಆದರೆ ನನ್ನ ನಿರ್ಧಾರ ಅಷ್ಟೇ ದೃಢವಾಗಿ ವಿಕರ್ಷಕವೂ ಆಗಿತ್ತು. ಈ ಇಕ್ಕಟ್ಟಿನಿಂದ ಪಾರಾಗಲು ಅವನಿಗೊಂದು ಅನೂಹ್ಯ ಮತ್ತು ಅಸಾಧ್ಯ ಷರತ್ತು ಹಾಕಿದೆ, "ನೋಡು, ನಾನೀಗ ಚಂದ್ರಶೇಖರ್‌ರಿಗೆ ನನ್ನ ಆಸಕ್ತಿ ಬಗ್ಗೆ ಒಂದು ಸುದೀರ್ಘ ಪತ್ರ ಬರೆದಿದ್ದೇನೆ. ಅವರ ವೈಜ್ಞಾನಿಕ ವ್ಯಕ್ತಿತ್ವ ಬೆಳೆದು ಅಭಿವರ್ಧಿಸಿರುವ ಪರಿ ಕುರಿತ ವಿವರಗಳನ್ನು ಕಳಿಸುವ ಕೃಪೆ ಮಾಡಬೇಕೆಂದು ಕೋರಿದ್ದೇನೆ. ಅಲ್ಲದೇ ನನ್ನ ಪುಸ್ತಕಕ್ಕೊಂದು ಸ್ವಹಸ್ತಲಿಖಿತ ಸಂದೇಶ ದಯಪಾಲಿಸಬೇಕೆಂದೂ ಪ್ರಾರ್ಥಿಸಿದ್ದೇನೆ. ಅವರಿಂದ ಬಂದ ಮಾರೋಲೆ ಮಾತ್ರ ನಿರಾಶಾದಾಯಕವಾಗಿದೆ. ನೀನೇನಾದರೂ ನನಗೆ ಅವರ ಜೊತೆ ಒಂದು ಭೇಟಿ ಏರ್ಪಡಿಸಬಲ್ಲೆಯಾದರೆ ನಮ್ಮ ಅಮೆರಿಕ ಯಾನ ಅರ್ಥಪೂರ್ಣವಾಗುತ್ತದೆ."

ಎಂದೂ ಕೈಗೂಡದ ಬಯಕೆ ಇದು, ಆದ್ದರಿಂದ ನಾವಿನ್ನು ಅಮೆರಿಕ ಬಾಧೆಯಿಂದ ಶಾಶ್ವತವಾಗಿ ಮುಕ್ತಿಪಡೆದು ನಿಶ್ಚಿಂತರಾಗಿರಬಹುದೆಂದು ಬಗೆದು ಚಂದ್ರಶೇಖರ್ – ಜೀವನ ಚರಿತ್ರೆ ಬರೆಯುವ ಪ್ರೀತಿಯ ಕೆಲಸದಲ್ಲಿ ಮಗ್ನನಾದೆ. ಇಷ್ಟಾಗುವಾಗ ೧೯೯೪ರ ಅಂತಿಮ ಪಾದ ನಡೆಯುತ್ತಿತ್ತು. ಆ ಒಂದು ಮುಂಜಾನೆ ಆನಂದನಿಂದ ಬಂದ ದೂರವಾಣಿ ನಿರ್ಣಾಯಕವಾಗಿತ್ತು, "ಶಿಕಾಗೋ ನಿವಾಸಿ ಚಂದ್ರಶೇಖರ್‌ರಿಗೆ ದೂರವಾಣಿಸಿ ಮಾತಾಡಿದೆ: ಅಮೆರಿಕಕ್ಕೆ ನೀವು ಬಂದಾಗ ನಿಮ್ಮನ್ನು ಭೇಟಿಯಾಗಲು ಅವರು ಒಪ್ಪಿದ್ದಾರೆ! ನಾಗೆದ್ದೆ!"

ಅಂದ ಮೇಲೆ ನಾನು ಸೋಲಲೇಬೇಕಷ್ಟೆ! 'ಸುಬ್ರಹ್ಮಣ್ಯನ್ ಚಂದ್ರಶೇಖರ್' ಶೀರ್ಷಿಕೆಯ ಪುಸ್ತಕದ ಮುದ್ರಣವನ್ನು ತ್ವರೆಗೊಳಿಸಿ ನಾವಿಬ್ಬರೂ ಅಮೆರಿಕಯಾನಕ್ಕೆ ಸಿದ್ಧರಾದೆವು. ಮುಂದೊಂದು ದಿನ ಆ ಹೊಸ ನೆಲ, ಹೊಸ ಹವೆ ಮತ್ತು ಹೊಸ ಹಸುರಿನಲ್ಲಿ ಸಂಗಮಿಸಿ ಹೊಸಬರೇ ಆದೆವು.

ಜೂನ್ ೨೨ ೧೯೯೫ ಮತ್ತು ಅದರ ಮರುದಿನ ನಾನು ಆನಂದನೊಡಗೂಡಿ ಚಂದ್ರಶೇಖರರನ್ನು ಅವರ ಕಛೇರಿಯಲ್ಲಿಯೂ ಮನೆಯಲ್ಲಿಯೂ ಸಂದರ್ಶಿಸಿ ಕೃತಾರ್ಥರಾದೆವು. ಮೊದಲನೆಯ ದಿನ ಅವರ ಅತಿಥಿಯಾಗಿ ಮಧ್ಯಾಹ್ನದ ಭೋಜನಕ್ಕೆ ನಡೆದು ಹೋಗುತ್ತಿದ್ದಾಗ ನಾನೊಂದು ಮಾತು ನುಡಿದೆ, "On the longest day I am walking with the tallest man in the farthest place from our country!" ಜೂನ್ ೨೨ ರಂದು ಹಗಲು ಗರಿಷ್ಠ ಎಂಬ ಖಗೋಳ ವೈಜ್ಞಾನಿಕ ಸತ್ಯವನ್ನೂ ಅವರ ವ್ಯಕ್ತಿತ್ವದ ಹಿರಿಮೆಯನ್ನೂ ಬೆಸೆದ ನುಡಿನಮನವಿದು. ಆದರೆ ಆ ಮರ್ಯಾದಾಪುರುಷೋತ್ತಮನ ಪ್ರತಿಕ್ರಿಯೆ ಅವರ ಸ್ವಭಾವಕ್ಕನುಗುಣವಾಗಿ ಅತ್ಯಂತ ವಿನಯಪೂರ್ವಕವಾಗಿ ಈ ಉತ್ಪ್ರೇಕ್ಷೆಯನ್ನು ನಿರಾಕರಿಸಿತ್ತು, "That is how we mortals in our exaggerated ego about our small and insignificant achievements think of us. But the vast ocean of truth lies completely unexplored in front of us!"

ಜಗದ್ಭವ್ಯ ನ್ಯೂಟನ್‌ನ ಸುಪ್ರಸಿದ್ಧ ಉಕ್ತಿಯನ್ನು ಚಂದ್ರ ತಮ್ಮದೇ ಧಾಟಿಯಲ್ಲಿ ವ್ಯಾಖ್ಯಾನಿಸಿದ ಈ ಧಾಟಿ ಮಾರ್ಮಿಕವಾಗಿತ್ತು. ಇದೊಂದು 'ಋಷಿವಾಕ್ಯ' – 'ಋಷಿವಾಕ್ಯ ವಿಜ್ಞಾನಕಲೆ ಮೇಳವಿಸೆ ಜಸವು ಜನಜೀವನಕೆ ಮಂಕುತಿಮ್ಮ' ನೆನಪಿಗೆ ಬಂತು. ನ್ಯೂಟನ್ ತನ್ನ ಸಾಧನೆಗಳ ಶಿಖರದಲ್ಲಿದ್ದಾಗ ಬರೆದ ಮಾತು, "ಇಲ್ಲಿ ನಾನೊಬ್ಬ ಕಡಲ ಕಿನಾರೆಯಲ್ಲಿ ಆಟವಾಡುತ್ತ ಕೈಗೆ ಸಿಕ್ಕಿದ ದುಂಡು ಕಲ್ಲು, ಕಪ್ಪೆಚಿಪ್ಪು ಮುಂತಾದ ವಿರಳ ಪದಾರ್ಥಗಳನ್ನು ಆಗ ಈಗ ಹೆಕ್ಕುತ್ತಿರುವ ಕಿರಿ ಹೈದ. ಆದರೆ ನನ್ನಿಯ ಹೆಗ್ಗಡಲಿಡೀ ನನ್ನೆದುರು ಅನನ್ವೇಷಿತವಾಗಿ ಮೈಚೆಲ್ಲಿಕೊಂಡಿದೆ."

ಆ ಪರ್ವದಿನದಂದೂ (೨೨-೩-೧೯೯೫) 'ಸುಬ್ರಹ್ಮಣ್ಯನ್ ಚಂದ್ರಶೇಖರ್' ಕೃತಿಯನ್ನು ಅವರಿಗೆ ಖುದ್ದಾಗಿ ಒಪ್ಪಿಸುವ ಭಾಗ್ಯ ನನ್ನದಾಗಿತ್ತು. ಮೈಸೂರಿಗೆ ಮರಳಿದ ಬಳಿಕ ಯಾನಾನುಭವ, ಅನ್ಯ ಸಂಸ್ಕೃತಿಯ ಕಿಂಚಿದ್ದರ್ಶನ ನಮ್ಮ ಮೇಲೆ ಮಾಡಿದ ಪರಿಣಾಮ ಮತ್ತು ಕಳಶಪ್ರಾಯವಾಗಿ ಚಂದ್ರದರ್ಶನ – ಸಂದರ್ಶನ ಕುರಿತ ಸಚಿತ್ರ ಗ್ರಂಥವನ್ನೂ ಬರೆದೆ: 'ಸಪ್ತಸಾಗರದಾಚೆಯೆಲ್ಲೋ..." **[ಪ್ರಕಾಶಕನ ಅಡಿ ಟಿಪ್ಪಣಿ: ಹೀಗೆ ಕನ್ನಡದ ಮೂಲ ಸತ್ತ್ವವನ್ನೇ ಮೈಗೂಡಿಸಿಕೊಂಡು, ಕಾರಣಿಕವಾಗಿಯೂ ಬಂದ 'ಸುಬ್ರಹ್ಮಣ್ಯನ್ ಚಂದ್ರಶೇಖರ್' ೩೦೦ ಪುಟ ಬೆಲೆ ರೂ ಐವತ್ತೈದು ಮಾತ್ರ, ಅನಂತರದ ಸಪ್ತಸಾಗರದಾಚೆಯೆಲ್ಲೋ ೨೬೦ ಪುಟ ಬೆಲೆ ರೂ ಅರವತ್ತು ಮಾತ್ರ ಮತ್ತು ಇದೇ ಅನುಭವದ ಸಂಗ್ರಹಿತ ಸ್ವತಂತ್ರ ಇಂಗ್ಲಿಷ್ ಅವತರಣಿಕೆ (ಅನುವಾದ ಅಲ್ಲ) ಕ್ರಾಸಿಂಗ ದ ಡೇಟ್ಲೈನ್ ಪುಟ ೧೫೦ ಬೆಲೆ ರೂ ನಲ್ವತ್ತು ಮಾತ್ರ ಇಪ್ಪತ್ತು ವರ್ಷಗಳ ಅವಧಿ ದಾಟಿದರೂ ಮಾರಿಮುಗಿಯದ (ತಲಾ ಒಂದೊಂದು ಸಾವಿರ ಪ್ರತಿಗಳನ್ನಷ್ಟೇ ಮುದ್ರಿಸಿದ್ದೆ) ದುರ್ದಶೆ ಕನ್ನಡದ್ದು, ನಮ್ಮ ವಿದ್ಯಾವಂತಿಕೆಯದು. ಕೊಳ್ಳುವ ಜನಗಳ ಕೈಗೆ ಭಾರವಾಗಬಾರದು, ಓದುಗರನ್ನು ನಿರ್ಲಕ್ಷಿಸಿ ಪುಸ್ತಕವನ್ನು 'ಮಾಲು' ಮಾಡುವ ಯಾವುದೇ ಸಗಟು ಖರೀದಿಗಳಿಗೆ 'ಗಿಟ್ಟ'ಬಾರದು, ಲೇಖಕನಿಗೆ (ತಂದೆಯೇ ಆದ್ದರಿಂದ) ಗೌರವಧನವಿಲ್ಲ ಪ್ರಕಾಶಕನಿಗೆ (ನಾನೇ) ಎಲ್ಲ ಮಾರಿಹೋದರೆ ಬಡ್ಡಿರಹಿತವಾಗಿ ತೊಡಗಿಸಿದ ಹಣವಷ್ಟೇ ಮರಳಿ ದಕ್ಕುವಂತೆ ಮುದ್ರಣ ಬೆಲೆ ಹಾಕಿದ್ದೇನೆ. ಸಹಜವಾಗಿ ಸರಳ ಸುಂದರ ಮುದ್ರಣವೇ ಆದರೂ ಕಾಗದದ ಗುಣಮಟ್ಟವನ್ನು ಸೀಮಿತಗೊಳಿಸಿದ್ದರಿಂದ ಅವೆಲ್ಲ ಇಂದು ತುಸು ಬಣ್ಣಗುಂದಿದ್ದರೂ ಬಾಳಿಕೆ ಹಾಗೂ ಓದಿಕೆಗೆ ಯಾವ ಕೊರತೆಯೂ ಬಾರದಂತೆ ಇನ್ನೂ ಕೆಲವೇ ಪ್ರತಿಗಳು ಉಳಿದಿವೆ. ಆಸಕ್ತರು ಕೂಡಲೇ ಪುಸ್ತಕದ ಬೆಲೆಯನ್ನಷ್ಟೇ ಮುಂಗಡವಾಗಿ ಕಳಿಸಿದರೆ (ವಿಳಾಸ ಇಲ್ಲೆ ಪುಸ್ತಕ ವಿಭಾಗದ ಕೊನೆಯಲ್ಲಿದೆ ಗಮನಿಸಿ) ಮರು ಟಪಾಲಿಗೆ ಸಾದಾ ಅಂಚೆಯಲ್ಲಿ ಕಳಿಸುವ ವೆಚ್ಚ ನನ್ನದು – ಅವ]**

ಯಮಸದನ ನೋಡಿ ಬಂದೆ!
ಅಧ್ಯಾಯ ೮೮

ಇಪ್ಪತ್ತನೆಯ ಶತಮಾನ ಚಿರನೇಪಥ್ಯಕ್ಕೆ ಸರಿಯುತ್ತಿದ ದಿನಗಳು, ನನ್ನ ಪ್ರಾಯ ೭೦ನ್ನು ದಾಟಿ "ಅಯ್ಯಾ! ಇನ್ನು ನಿನ್ನ ಏರಾಟ ಹಾರಾಟ ಚೀರಾಟ ಮತ್ತು ಆಟಾಟೋಪಗಳಿಗೆ ಸ್ವಲ್ಪ ಬಿರಿ ಹಾಕು" ಎಂಬ ಎಚ್ಚರಿಗೆ ನುಡಿಗಳನ್ನು ಕಾಲು, ಕೀಲು ಮತ್ತು ಮುಖ್ಯವಾಗಿ ಶ್ವಾಸಕೋಶಗಳು ಒರಲಿ ಎಚ್ಚರಿಸುತ್ತಿದ್ದ ಜೀವನಸಂಧ್ಯಾಕಾಲ. ಆದರೆ ಮಾನವನ ಅಹಂಕಾರ, ಚಿರಂಜೀವಿತ್ವದ ಕನಸು, ಸಾಧನೆಯ ಅಮಲು ಮುಂತಾದವು ಆತನನ್ನು ಇಂಥ ನೈಜ ಸನ್ನಿವೇಶವನ್ನು ಸ್ವೀಕರಿಸದೇ ಮುನ್ನಡೆಯಲು ಕುಮ್ಮಕ್ಕು ನೀಡುವುದೇ ವಾಡಿಕೆ. "ನೋಡಿ ಈ ಎಪ್ಪತ್ತರಲ್ಲೂ ನಾನು ಸೈಕಲ್ಲಿನಲ್ಲೇ ನಗರವಿಡೀ ಸಂಚರಿಸುತ್ತಿದ್ದೇನೆ" ಎಂದು ಸ್ಕೂಟರ್–ಕಾರ್–ದಾಸ–ನರಪೇತಲರ ಮುಂದೆ ಸ್ವಪ್ರತಾಪ ಪ್ರದರ್ಶಿಸುವುದರಲ್ಲಿ ನನಗೊಂದು ಬಗೆಯ ಅಹಂ–ತೃಪ್ತಿ (ವಿಕೃತಾನಂದ?) ಲಭಿಸುತ್ತಿತ್ತು.

ಆದರೆ ಬಂಡಿ (ದೇಹ) ಈಗ ಚಾಲಕನ (ಮನಸ್ಸು) ಹಿಡಿತದಿಂದ ಹೊರಸರಿಯುತ್ತಿದೆಯೋ ಎಂಬ ಹತಾಶಭಾವ ಆಗೀಗ ಅಣಕಿಸುತ್ತಲೂ ಇತ್ತು. ವಾಸ್ತವ ಪರಿಸ್ಥಿತಿ ಹೀಗಿದ್ದರೂ ಲಕ್ಷಿಸದೆ "ಬಂದದ್ದೆಲ್ಲ ಬರಲಿ, ಗೋವಿಂದನ ದಯೆ ನನಗಿರಲಿ" ಎಂಬ ದಾಸವಾಣಿಯ ಮೌಲ್ಯಕ್ಕೆ ಶರಣಾಗಿ ನನ್ನ ಚಟುವಟಿಕೆಗಳನ್ನು ಮೂರೂ ರಂಗಗಳಲ್ಲಿ ಏಕಕಾಲಿಕವಾಗಿ ನಿರ್ವಹಿಸುತ್ತಿದ್ದೆ: ಸಂಗೀತ ಪ್ರಚಾರ, ಸಾಹಿತ್ಯ ಸಂಚಾರ ಮತ್ತು ವಿಜ್ಞಾನ ವಿಹಾರ. ಇತ್ತ "ಅಂತಕನ ದೂತರಿಗೆ ಕಿಂಚಿತ್ತು ದಯವಿಲ್ಲ" ದನಿ ಒಳಗೊಳಗೆ ಮಂದ್ರದಲ್ಲಿ ಮಿಡಿಯುತ್ತಿತ್ತು: ಎಚ್ಚರೆಚ್ಚರ!

ನೆಗಡಿ ನನಗೆ ಜನ್ಮತಃ ಅಂಟಿದ್ದ ಬೇನೆ. ಸಿಗರೆಟ್, ನಸ್ಯ, ಶರಾಬು, ತಿಂಡಿ ತೀರ್ಥಗಳ ಅತಿಮೋಹ ಮುಂತಾದ ಎಲ್ಲ ಆಧುನಿಕ ದುಶ್ಚಟಗಳಿಂದ ಸದಾ ದೂರವಾಗಿದ್ದು ಯುಕ್ತಾಹಾರ ಯುಕ್ತವಿಹಾರ ನಿರತನಾಗಿದ್ದು (ಅಕಾಲದಲ್ಲಿ ಅಮೃತವೂ ವಿಷ, ಸಕಾಲದಲ್ಲಿ ಮಿತಸಾತ್ತ್ವಿಕಾಹಾರ ಸೇವನೆ ಮತ್ತು ಸದಾಕಾಲ ಕರ್ತವ್ಯ ಮಗ್ನತೆ – ಇದು ನನ್ನ

ಜೀವನ ಮಂತ್ರ ಮತ್ತು ತಂತ್ರ) ಸಂತೃಪ್ತ ಜೀವನ ನಡೆಸುತ್ತಿದ್ದರೂ ನೆಗಡಿ ಮಾತ್ರ ಕ್ರಮೇಣ ತನ್ನ ಗಿಯರನ್ನು ಏರಿಸತೊಡಗಿತು. ೧೯೬೦ರ ದಶಕದಲ್ಲಿ ಅದು ತೀವ್ರವಾಗಿ ಉಲ್ಬಣಿಸಿತು: ಶೀತ, ಕೆಮ್ಮಲು, ಉಬ್ಬಸ, ನಿರ್ನಿದ್ರೆ, ಮುಂತಾದವು ನನ್ನ ನಿತ್ಯ ಸಂಗಾತಿಗಳಾದುವು. ಯೋಗ, ಅತೀತ ಧ್ಯಾನ (transcendental meditation), ಪ್ರಾಣಾಯಾಮ, ರೇಖೀ ಮುಂತಾದ ನೈಸರ್ಗಿಕ ಚಿಕಿತ್ಸಾವಿಧಾನಗಳಾಗಲೀ ಹೋಮಿಯೋಪಥಿ, ಆಯುರ್ವೇದ, ಎಲ್ಲೋಪತಿ ಮುಂತಾದ ವೈದ್ಯಕೀಯ ಶುಶ್ರೂಷೆಗಳಾಗಲೀ ಪ್ರಕೋಪಿಸುತ್ತಿದ್ದ ನನ್ನ ಪಿಡುಗನ್ನು ಶಮನಿಸಲು ಶಕ್ತವಾಗಲಿಲ್ಲ. ನಿರಂತರ ಕೆಮ್ಮಲಿನ ಪ್ರಸಾದವಾಗಿ ಅಂಡವಾಯು (ಹರ್ನಿಯ) ಬೇನೆ ತಲೆದೋರಿತು. ಶಸ್ತ್ರಕ್ರಿಯೆ ಮಾಡಿಸಿಕೊಂಡೆ. ಆದರೆ ಗೂರಲು (ನೇವಸ) ಬಾಧಿಸತೊಡಗಿತು. ಇದನ್ನು ಔಷಧಿ ಸೇವನೆಯಿಂದ ಹತೋಟಿಗೆ ತಂದಾಗ ಒಳಜ್ವರ ಶುರು. ಇವೆಲ್ಲ ರಕ್ಕಸರ ಉಪಟಳಗಳು ರಾತ್ರಿ ವೇಳೆ ಸತತವಾಗಿ ಪೀಡಿಸಿ ನನ್ನ ಆಸಕ್ತ ಚಟುವಟಿಕೆಗಳಿಗೆ ಭಂಗ ತರುತ್ತಿದ್ದುವು.

ನನ್ನ ಪೂರ್ಣ ವಿಶ್ವಾಸಕ್ಕೆ ಪಾತ್ರರಾಗಿದ್ದ ಕುಟುಂಬ ವೈದ್ಯರು ಪ್ರತಿ ವಾರವೂ ನನ್ನನ್ನು ಪರೀಕ್ಷಿಸಿ ಭರವಸೆ ಕೊಡುತ್ತಿದರು. ಆಗ ಈಗ ಇಸಿಜಿ ತಪಾಸಣೆ (ಎಲೆಕ್ಟ್ರೋಕಾರ್ಡಿಯೊಗ್ರಾಮ್ – ವೈದ್ಯುತ ಹೃಲ್ಲೇಖ) ಕೂಡ ಮಾಡಿ "ಮೂವತ್ತರ ಯುವಕನ ಗುಂಡಿಗೆಯ ತ್ರಾಣವಿದೆ" ಎಂದು ಹುರಿದುಂಬಿಸುತ್ತಿದ್ದರು. ಇವರು ಅತ್ಯಂತ ಸಜ್ಜನ, ಎಂದೂ ಧನದಾಹಿ ಆಗಿರಲಿಲ್ಲ. ಇತ್ತ ನಾನಾದರೂ ಮಳೆ ಬಿಸಿಲು ಚಳಿ ಸೆಕೆ ಎನ್ನದೆ ಊರೂರು ಅಲೆಯುತ್ತ ವಿಜ್ಞಾನಪ್ರಸಾರ ಕಾರ್ಯದಲ್ಲಿ ನಿರತನಾಗಿದ್ದೆ: ಕಾರ್ಯಮಗ್ನತೆಯೇ ಬದುಕು, ಸೋಮಾರಿತನ ಸಾವು ಎಂಬ ಮಂತ್ರವನ್ನು ಸದಾ ಅನುಷ್ಠಾನಿಸುತ್ತಿದ್ದೆ. ಆದರೆ ಗಳಿಗೆ ಬಟ್ಟಲು ತುಂಬುತ್ತ ಬರುತ್ತಿತ್ತು.

ಇಸವಿ ೨೦೦೩ರ ಸೆಪ್ಟೆಂಬರ್ ರಾತ್ರಿ, ಮೈಸೂರು ಸನಿಹದ ಒಂದು ಹಳ್ಳಿಯಲ್ಲಿ ಸಂತ ಭದ್ರಗಿರಿ ಅಚ್ಯುತದಾಸರ ಹರಿಕಥೆ ಇತ್ತು. ಸಂತರ ಹರಿಕಥೆ ನಾಲ್ಕು ಆರೋಹೀ ಹಂತಗಳಲ್ಲಿ ನನಗೆ ಪ್ರಿಯ: ಮನೋರಂಜನೆ, ಕಥಾನಿರೂಪಣೆ, ಮೌಲ್ಯವರ್ಧನೆ ಮತ್ತು ಅಧ್ಯಾತ್ಮಿಕ ಉತ್ತಾರಣೆ. ಸೈಕಲ್ ತುಳಿದು ಅಲ್ಲಿಗೆ ಹೋದೆ. ಅಲ್ಲಿಯ ಪರಿಸರ ತೀರ ಅಸಹ್ಯವಾಗಿತ್ತು. ಉಸಿರು ಕಟ್ಟುವಂಥ ಕೊಳಕು, ದುರ್ವಾಸನೆ. ಹರಿಕಥೆ ಮುಗಿಯುವಾಗ ರಾತ್ರಿ ೧೧ ಗಂಟೆ ದಾಟಿತ್ತು. ಮಳೆ ಸುರಿಯುತ್ತಿತ್ತು. ಇನ್ನು ಉಣ್ಣೆ ರೇಷ್ಮೆ ಮುಂತಾದ ಬೆಚ್ಚಗಿನ ಉಡುಪು ನನಗೆ ಸದಾ ಅಲರ್ಜಿ, ವರ್ಜ್ಯ. ಏಕೆ? ನಾನು ಕೊಡಗಿನವೆಂಬ ಜಂಬ! ಮಳೆಯಲ್ಲಿ ತೋಯ್ದು ಕತ್ತಲಲ್ಲಿ ಸೈಕಲ್ ತುಳಿದು ಪೂರ್ಣ ಬಸವಳಿದು ಅಪರಾತ್ರಿಯಲ್ಲಿ ಮನೆಗೆ ಬಂದೆ, ಅಕಾಲದಲ್ಲಿ ಅಶನ ತಿಂದೆ, ಮಲಗಿದೆ. ನಿದ್ರೆ ಬರಲಿಲ್ಲ, ನೇವಸ ಉಲ್ಬಣಿಸಿ ಉಸಿರು ಕಟ್ಟಿತು, ವಾಂತಿ ಆಯಿತು. ಬಹುಶಃ ಸ್ಮೃತಿ ತಪ್ಪಿತು. ಕಣ್ಣು ತೆರೆದಾಗ ಅದೇ ಕುಟುಂಬ ವೈದ್ಯರ ರುಗ್ಣಾಲಯದಲ್ಲಿ (ನರ್ಸಿಂಗ್ ಹೋಮ್) ಮಲಗಿದ್ದೆ.

ಹೆಂಡತಿಗೆ (ಲಕ್ಷ್ಮಿ) ಶಿಕ್ಷೆ, ಸೊಸೆಗೆ (ರುಕ್ಮಿಣಿ) ಚಡಪಡಿಕೆ, ಮಗನಿಗೆ (ಅನಂತ) ಕಠಿಣ ಪರೀಕ್ಷೆ, ಮೊಮ್ಮಗಳಿಗೆ (ಅಕ್ಷರಿ) ಉದ್ವೇಗ, ಅಸಂಖ್ಯ ಬಂಧುಗಳಿಗೂ ಅಭಿಮಾನಿಗಳಿಗೂ ಚಿಂತೆ, ಚಿಂತೆ, ಚಿಂತೆ. ನನಗೋ? ಸ್ವಯಂಕೃತಾಪರಾಧ. ಆಗ ನನ್ನ ಬಾಯಿಯಿಂದ ಹೊಮ್ಮುತ್ತಿತ್ತಂದು ಒಂದು ಹಾಡು: "ಅನುಗಾಲವು ಚಿಂತೆ ಜೀವಕೆ… ಪೊಡವಿಯೊಳು ಸಿರಿ ಪುರಂದರವಿಠಲನ ಬಿಡದೆ ಚಿಂತಿಸಿದರೆ ಚಿಂತೆ ನಿಶ್ಚಿಂತೆ!"

ನನ್ನ ಆಯುಷ್ಯ ಕೊನೆ ಘಟ್ಟ ತಲಪಿದೆ ಎಂದು ನೋಡಿದವರೆಲ್ಲರೂ ಮರುಗಿದರು. ಅಶೋಕ ಮಂಗಳೂರಿನಿಂದ ಬಂದ, ಆನಂದ ಅಮೆರಿಕದಿಂದಲೇ ಹಾರಿ ಬಂದ. ಎಲ್ಲರೂ ಪರ್ಯಾಲೋಚಿಸಿ ನನ್ನನ್ನು ಇನ್ನೊಂದು ಹೈಟೆಕ್ ದವಾಖಾನೆಗೆ ಸಾಗಿಸಿದರು. ಅಲ್ಲಿ ೪೫ ದಿವಸ ತುರ್ತು ನಿಗಾಘಟಕವೆಂಬ (intensive care ward) ಬಂದೀಖಾನೆಯಲ್ಲಿ ಬಂಧನ. ಅನಿವಾರ್ಯವಾಗಿ ಪತ್ನಿಗೂ ಸೆರೆವಾಸ. ಉನ್ನತ ವೈದ್ಯಕೀಯ ತಪಾಸಣೆ ಅರುಹಿದ ಕಠೋರ ಸತ್ಯ ವೈಯಕ್ತಿಕವಾಗಿ ನನಗೂ ನಮ್ಮ ಕುಟುಂಬಕ್ಕೂ ಆತಂಕಕಾರಿಯಾಗಿದ್ದುದರ ಜೊತೆಗೆ ನಮ್ಮ ಸಾರ್ವಜನಿಕ ಆರೋಗ್ಯ ಸೇವಾಕ್ಷೇತ್ರಕ್ಕೆ ಬಡಿದಿರುವ ಪಿಡುಗಿಗೂ ಎತ್ತಿಹಿಡಿದ ಕೈಮರವಾಗಿತ್ತು: "Wrong diagnosis, wrong medication, and wrong treatment as a result of which common cold gradually degenerated into pleurisy, pneumonia culminating in tuberculosis. An example of misuse of steroid." ಈ ಭರತ ವಾಕ್ಯ ಆಲಿಸಿದಾಗ ನಾನೊಂದು ಚಟಾಕಿ ಹಾರಿಸಿದೆ "yes, an engineer's mistake is a standing monument, a doctor's mistake is buried in 6 feet deep and a teacher's mistake is generations spoiled."

ಆದರೂ ಸಾಯಲಿಲ್ಲ! ತೀವ್ರ ಜರ್ಝರಿತದೇಹಿಯಾಗಿ ಮನೆಗೆ ಮರಳಿದೆ: ಸಾವಿತ್ರಿ ಇದ್ದಳೋ ಇಲ್ಲವೋ ಗೊತ್ತಿಲ್ಲ. ಆದರೆ ನನ್ನ ಸಾವಿತ್ರಿ (ಲಕ್ಷ್ಮಿ) ಹಗಲಿರುಳು ಎಚ್ಚತ್ತಿದ್ದು ಮಾಡಿದ ಶುಶ್ರೂಷೆ ಮತ್ತು ಮಗ–ಸೊಸೆ–ಮೊಮ್ಮಗಳು ಮತ್ತು ಬಂಧುಗಳು ವಹಿಸಿದ ಕಾಳಜಿ ನೆನೆಯುವಾಗ ಸಾವಿತ್ರಿತ್ವ ಕೇವಲ ಪೌರಾಣಿಕ ಕಲ್ಪನೆ ಅಲ್ಲ, ಭಾರತೀಯ ಕುಟುಂಬದ ಜೀವನಪ್ರೀತಿಯ ದರ್ಪಣ ಎಂಬುದು ನನಗೆ ಸ್ಪಷ್ಟವಾಗಿದೆ. ನನ್ನನ್ನು ದಂಡೆ ಹಾಯಿಸಿದ ಕ್ಷಯರೋಗತಜ್ಞ ಜಿ.ಎಮ್ ಕುದರಿಯವರ ಪ್ರಕಾರ ನನ್ನ ವೈಯಕ್ತಿಕ ಶಿಸ್ತು, ಹೆಂಡತಿಯ ಆರೈಕೆ ಹಾಗೂ ಕುಟುಂಬದ ಸೇವೆ ಇಲ್ಲವಾಗಿದ್ದರೆ ನಾನೆಂದೋ ಮರಣಿಸಿರುತ್ತಿದ್ದೆ.

ಹಿಂದೆ ಬಂದೆ. ಎರಡು ಸಂಗತಿಗಳು ಸ್ಪಷ್ಟವಾದುವು: ದೇಹ ದುರ್ಬಲವಾಗಿದೆ, ಆದರೆ ಮನಸ್ಸು ಮಸಳಿಲ್ಲ! ಅರ್ಥಾತ್, ಯಂತ್ರಾಂಶ ಶಿಥಿಲವಾದರೂ ತಂತ್ರಾಂಶ ಬಲಿಷ್ಠವಾಗಿಯೇ ಇದೆ – hardware weak but software strong. ಇವೆಲ್ಲ ಒತ್ತಡ ಹೊಡೆತ ಬಡಿತಗಳು ಚಕ್ರಬಡ್ಡಿ ಸಹಿತ ನನ್ನ ಹೆಂಡತಿಯ ದೃಢ ಆರೋಗ್ಯದ ಮೇಲೆ ಶಾಶ್ವತ ದುಷ್ಪರಿಣಾಮ ಘಾತಿಸಿವೆ. ಆಕೆಯ ಬಹುಮುಖ ಚಟುವಟಿಕೆಗಳೀಗ ಸ್ಥಗಿತವಾಗಿವೆ; ಯಂತ್ರಾಂಶ ನನಗಿಂತ ಹೆಚ್ಚು ಸೋತಿದೆ. ಅದೃಷ್ಟವಶಾತ್ ತಂತ್ರಾಂಶ ಆಕೆಯದೂ ಪ್ರಬಲವಾಗಿದೆ. ಆದ್ದರಿಂದ ಈಗ ೮೧ರಲ್ಲಿರುವ ನನ್ನ ಮತ್ತು ೭೭ರಲ್ಲಿರುವ ಅವಳ ಬಾಳು 'ತರಕಾರಿ ಬಾಳು' (vegetable existence) ಆಗಿಲ್ಲವೆಂದು ಸಮಾಧಾನ ತಳೆಯಬಹುದು.

ವಿಶ್ವಕೋಶದಲ್ಲಿ ಮರುವುಟ್ಟು
ಅಧ್ಯಾಯ ೮೯

ಇಸವಿ ೨೦೦೪ ಬಂದೇ ಬಂತು. ಕುವೆಂಪು ಜನ್ಮ ಶತಮಾನೋತ್ಸವ ವರ್ಷವದು. ಆ ಯುಗಚೇತನದ ಒಂದು ಕನಸು ಕನ್ನಡ ವಿಶ್ವಕೋಶ. ೧೪ ಸಂಪುಟಗಳ ಈ ಯೋಜನೆಯಲ್ಲಿ ಅಲ್ಲಿಯ ತನಕ ೧೩ ಸಂಪುಟಗಳು ಪೂರ್ಣಗೊಂಡಿದ್ದುವು. ಕೊನೆಯದರ ಅವಸ್ಥೆ ಏನು? ಈ ಸಂದರ್ಭದಲ್ಲಿ ಹಲವಾರು ಪೂರಕ ಬಲಗಳು ಸಂಗಮಿಸಿದ್ದೊಂದು ಯೋಗಾಯೋಗ, ಕನ್ನಡದ ಭಾಗ್ಯ: ೮೭ರ ಜ್ಞಾನವಯೋವೃದ್ಧ ಮತ್ತು ವಿಶ್ವಕೋಶದ ಕ್ರತುಶಕ್ತಿ ದೇಜಗೌ ಅವರ ತೀವ್ರ ಆಸಕ್ತಿ, ಇವರ ಸುಪುತ್ರ ಜೆ. ಶಶಿಧರಪ್ರಸಾದ್ ವಿಶ್ವವಿದ್ಯಾನಿಲಯದ ಕುಲಪತಿಯಾಗಿ ನೇಮನಗೊಂಡುದು, ಕಾರ್ಯಧುರಂಧರ ಅರವಿಂದ ಮಾಲಗತ್ತಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡುದು, ಮತ್ತು ವಿಶ್ವಕೋಶದ ಗರಡಿಯಲ್ಲಿಯೇ ಪಳಗಿ ಅನುಭವ ಗಳಿಸಿದ ಹಾ.ತಿ. ಕೃಷ್ಣೇಗೌಡ ಕಾರ್ಯನಿರ್ವಾಹಕ ಸಂಪಾದಕರಾದುದು, ಹಣದ ಅಭಾವವಿಲ್ಲ, ಸಂಕಲ್ಪದ ಕೊರತೆಯಿಲ್ಲ. ಸರಿ, ಆದರೆ ಕನ್ನಡ ವಿಶ್ವಕೋಶಕ್ಕಾಗಿ ದುಡಿಯುವ ಅನುಭವೀ ಚೇತನಗಳನ್ನೆಲ್ಲಿಂದ ತರೋಣ?

ನಿವೃತ್ತರನ್ನು ಮತ್ತೆ ಕಾಲಬಂಧಿತ ಒಪ್ಪಂದದ ಪ್ರಕಾರ ನೇಮಿಸಿ ೧೪ನೆಯ ಸಂಪುಟವನ್ನು ೨೦೦೪ರಲ್ಲಿಯೇ ಪೂರೈಸುವುದೆಂದು ಆಡಳಿತ ವಿಭಾಗ ತೀರ್ಮಾನಿಸಿ ಕಳಕ್ಕೆ ದುಮುಕಿತು. ವಿಜ್ಞಾನ ವಿಭಾಗದ ಪೂರ್ಣ ಹೊಣೆಯನ್ನು ನಾನು, ನನ್ನ ಷರತ್ತಿನ ಅನುಸಾರ, ವಹಿಸಿಕೊಂಡು ಈ ಕನ್ನಡ ಕೈಂಕರ್ಯವನ್ನು ೨೦೦೪ರಲ್ಲಿಯೇ ಪೂರ್ತಿಗೊಳಿಸಿಕೊಡಬೇಕೆಂದು ದೇಜಗೌರಿಂದ ತೊಡಗಿ ಸಂಬಂಧಿಸಿದ ಸಕಲರೂ ನನಗೆ ದುಂಬಾಲುಬಿದ್ದರು. ನನಗಿಂತ ಎಷ್ಟೋ ಹಿರಿಯರಾದ ಎಚ್ಚೆಸ್ಕೆಯವರು ಆ ಮೊದಲೇ ನವಯುವಕನ ಹುಮ್ಮಸ್ಸಿನಿಂದ ಮಾನವಿಕ ವಿಭಾಗದ ಉಸ್ತುವಾರಿ ಹೊತ್ತಿದ್ದರು.

ಸವಾಲನ್ನು ಸಂತೋಷದಿಂದ ಸ್ವೀಕರಿಸಿದೆ. ನನ್ನ ಮಾಜಿ ಶಿಷ್ಯ ಮತ್ತು ಕನ್ನಡದ ಹಿರಿಯ ವಿಜ್ಞಾನ ಬೋಧಕ–ಲೇಖಕ ಎ.ವಿ. ಗೋವಿಂದರಾಯರ ನೆರವನ್ನು ಒದಗಿಸಬೇಕೆಂದು ನಿರ್ದೇಶಕರಿಗೆ ಹೇಳಿ ಪಡೆದೆ. ಸೇತುಬಂಧನ ಭರದಿಂದ ಸಾಗಿತು. ಕಲ್ಲುಗಳು ತೇಲಿದುವು, ಕ್ಲುಪ್ತ ಮುಹೂರ್ತದಲ್ಲಿ ಆಚೆ ದಡ ಸೇರಿದೆವು. ೧೪ನೆಯ ಸಂಪುಟ ೨೯–೧೨–೨೦೦೪ರಂದು ಲೋಕಾರ್ಪಣಗೊಂಡಾಗ ಮಗುದೊಮ್ಮೆ ನಮ್ಮೆಲ್ಲರನ್ನು ಕೃತಾರ್ಥಭಾವ ಉದ್ದೀಪಿಸಿತು. ಕವಿವಾಣಿ ಸತ್ಯ, "ಕನ್ನಡಕ್ಕಾಗಿ ಕೈಯೆತ್ತು ಕಲ್ಪವೃಕ್ಷವಾಗುತ್ತದೆ!" ಇತ್ತ ನನ್ನ ಆರೋಗ್ಯ ಸುಧಾರಿಸಿ ಆಯುಷ್ಯವೂ ವೃದ್ಧಿಸಿತು. ಆದ್ದರಿಂದ "ಕನ್ನಡಕ್ಕಾಗಿ ದುಡಿ ಚಿರಂಜೀವಿ ಆಗುವೆ!" ಎಂಬ ಷರಾವನ್ನೂ ಜೋಡಿಸಬಹುದು.

ಅನಿರೀಕ್ಷಿತ ಪುರಸ್ಕಾರಗಳು
ಅಧ್ಯಾಯ ೬೦

ತಾನು ಮೆಚ್ಚಿದ ಆದರ್ಶ ಸಾಧನೆಗಾಗಿ ಸದಾ ಕಾರ್ಯಮಗ್ನನಾಗಿರುವಾತನಿಗೆ ಅನಿರೀಕ್ಷಿತವಾಗಿ ಹಲವಾರು ಪುರಸ್ಕಾರ ಪ್ರಶಸ್ತಿ ಪ್ರೋತ್ಸಾಹಗಳು ಲಭಿಸುವುದು ವಿರಳವಲ್ಲ. ಇಂಥವು ಆತನಿಗೆ ಅಕಸ್ಮಾತ್ತಾಗಿ ಬಂದಾಗ ಆತನ ಮನೋಭಾವ ಹೇಗಿರುತ್ತದೆ?

"ಅಯ್ಯಾ! ನೀನುನಡೆಯುತ್ತಿರುವ ಹಾದಿ ತಪ್ಪಾಗಿಲ್ಲ. ಸಮಾಜ ಇದನ್ನು ಗಮನಿಸಿದೆ. ಇದೇ ಜಾಡಿನಲ್ಲಿ ಮುನ್ನಡೆಯುತ್ತಿರು" ಎಂಬ ಸಂದೇಶ ಅಪ್ರಾರ್ಥಿತವಾಗಿ ಅಪರಿಚಿತ ನೆಲೆಗಳಿಂದ ಬಂದಂತಲ್ಲವೇ? ಸಾಗರೋತ್ತರಣ ನಿರತ ಆಂಜನೇಯನಿಗೆ ಕಡಲ ನಡುವೆ ಮೈನಾಕ ಪರ್ವತ ಸ್ವಾಗತಕೋರಿದ್ದು ಇಂಥ ಒಂದು ನಿದರ್ಶನ.

ನನಗೆ ಲಭಿಸಿರುವ ಇಂಥ ಅನೇಕ ಪ್ರಶಸ್ತಿ ಪುರಸ್ಕಾರಗಳ ಪೈಕಿ ಪ್ರಾತಿನಿಧಿಕವಾಗಿ ಕೆಲವನ್ನು ಇಲ್ಲಿ ಉಲ್ಲೇಖಿಸಿದ್ದೇನೆ.

ವಿಶ್ವಮಾನವ ಪ್ರಶಸ್ತಿ

ಶ್ರೀ ಕುವೆಂಪು ವಿದ್ಯಾಪರಿಷತ್ತು ೧೯೯೧ರಲ್ಲಿ ಪ್ರದಾನಿಸಿದ ಈ ಪ್ರಶಸ್ತಿಯಲ್ಲಿರುವ ಸ್ವಸ್ತಿವಾಕ್ಯ: ವಿಜ್ಞಾನ ಸಾಹಿತ್ಯ ರಚನೆಯಲ್ಲಿ ಸಿದ್ಧಹಸ್ತರಾಗಿ, ಆ ಕ್ಷೇತ್ರಕ್ಕೆ ಅನುಪಮ ಅಮೂಲ್ಯ ಕೊಡುಗೆಗಳನ್ನು ನೀಡುವ ಮೂಲಕ ನಾಡು ನುಡಿಗಳಿಗೆ ಅಪಾರ ಸೇವೆ ಸಲ್ಲಿಸಿರುವ ಶ್ರೀ ಜಿ.ಟಿ. ನಾರಾಯಣರಾಯರಿಗೆ ೧೯೯೧ನೆಯ ಸಂವತ್ಸರದ ವಿಶ್ವಮಾನವ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

ಮೈಸೂರು ೨೬-೮-೧೯೯೧:: ಸಾವಿತ್ರಮ್ಮ ದೇಜಗೌ, ಅಧ್ಯಕ್ಷಿಣಿ

ಶ್ರೀ ಕೆ.ವಿ ಶಂಕರಗೌಡ ಸ್ಮಾರಕೋಪನ್ಯಾಸ ಮಾಲೆ

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟಿನ ಆಶ್ರಯದಲ್ಲಿ ೧೯೯೯ರ ಸಾಲಿನ, ಅಂದರೆ ೨೦ನೆಯ ಶತಮಾನದ ಅಂತೆಯೇ ೨ನೆಯ ಸಹಸ್ರಮಾನದ ಕೊನೆಯ ವರ್ಷದ ಶ್ರೀ ಕೆ.ವಿ. ಶಂಕರ ಗೌಡ ಸ್ಮಾರಕೋಪನ್ಯಾಸ ನೀಡುವ ಸುಯೋಗ ನನ್ನದಾಗಿತ್ತು. ಆಗ ನಾನು ಟ್ರಸ್ಟಿಗೆ ಒಪ್ಪಿಸಿದ 'ವಿಶ್ವದ ಕಥೆ' ಎಂಬ ಹಸ್ತ ಪ್ರತಿಯನ್ನು ಅದು ಯಥಾಕಾಲದಲ್ಲಿ ಪ್ರಕಟಿಸಿತು ಕೂಡ. ಇದಕ್ಕೆ ದೇಜಗೌ ಅವರು ಬರೆದಿರುವ ಮುನ್ನುಡಿಯನ್ನು ಇಲ್ಲಿ ಉದ್ಧರಿಸಿದೆ:

ಪ್ರಸ್ತುತ ಕಾಲದ ಮಹತ್ವದ ವಿಜ್ಞಾನ ವಾಙ್ಮಯ ಸೃಷ್ಟಿಕಾರರಲ್ಲಿ ಅಗ್ರಪೂಜೆಗೆ ಅರ್ಹರಾದವರು ಶ್ರೀ ಜಿ.ಟಿ. ನಾರಾಯಣರಾಯರು. ವಿದ್ವತ್ತಿಗೆ, ಶಿಸ್ತಿಗೆ, ಸಾಹಸಕ್ಕೆ, ನಿಯತ್ತಿಗೆ, ರುಚಿಶುಚಿ ಶುದ್ಧಿಗೆ, ಜೀವನೋತ್ಸಾಹಕ್ಕೆ, ಸತ್ಕಾರ್ಯ ಸಾಧನಾಛಲಕ್ಕೆ, ವೈಜ್ಞಾನಿಕ ಮನೋಧರ್ಮಕ್ಕೆ, ವಿಜ್ಞಾನ ಪ್ರಸಾರ ಸಮರ್ಪಣ ಮನೋಧರ್ಮಕ್ಕೆ ಸರಳ ಸಜ್ಜನಿಕೆಗೆ ಮತ್ತೊಂದು ಹೆಸರು ಜಿಟಿಎನ್.

ಹಲವು ವರ್ಷ ಗಣಿತ ಮತ್ತು ಖಗೋಳವಿಜ್ಞಾನಗಳ ಪ್ರಾಧ್ಯಾಪಕರಾಗಿ, ಎನ್ಸಿಸಿಯಲ್ಲಿ ಮೇಜರ್ ಸ್ಥಾನಾಲಂಕೃತರಾಗಿದ್ದು, ಕನ್ನಡ ವಿಶ್ವಕೋಶದ ವಿಜ್ಞಾನ ವಿಭಾಗದ ಸಂಪಾದಕರಾಗಿದ್ದು, ಆ ಮೂಲಕ ಶೈಕ್ಷಣಿಕ ಹಾಗೂ ವಿಜ್ಞಾನ ಕ್ಷೇತ್ರಗಳಿಗೆ ಅವರು ಸಲ್ಲಿಸಿದ ಸೇವೆ ಅಗಣ್ಯ, ಅನುಪಮ, ಅಸಾಧಾರಣ. ಅವರು ಮತ್ತು ಎಚ್ಚೆಸ್ಕೆ ಇಬ್ಬರೂ ವಿಶ್ವಕೋಶದಿಂದ ನಿರ್ಗಮಿಸಿದನಂತರ ಅದು ತಬ್ಬಲಿಯಾಯಿತು, ಸುರುಟಿಹೋಯಿತು, ಕುಟುಕು ಜೀವದಿಂದಿರಬೇಕಾಯಿತೆಂಬುದೇ ಅವರ ಪ್ರತಿಭಾ ಸಾಮರ್ಥ್ಯಕ್ಕೊಡ್ಡಿದ ಕನ್ನಡಿಯಾಗಿದೆ. ಪ್ರಾಯಶಃ ಆ ಕ್ಷೇತ್ರದಲ್ಲಿ ಅವರೆತ್ತರಕ್ಕೇರಬಲ್ಲ ವಿದ್ವಾಂಸರು ವಿರಳರೆಂದೇ ಹೇಳಬೇಕು. ಅವರ ವಿದ್ವತ್ತನ್ನು ಗುರುತಿಸಲಾರದ, ಬಳಸಿಕೊಳ್ಳಲಾರದ ಸಮಾಜ, ಸರ್ಕಾರ ಮತ್ತು

ವಿಶ್ವವಿದ್ಯಾನಿಲಯಗಳಿಗೆ ಅಂಧತ್ವ ಕವಿದಿದೆ ಎಂದೇ ಹೇಳಬೇಕಾಗಿದೆ. ಲಾಬಿ, ಅಂಗಲಾಚಿಕೆ, ಹಲ್ಲುಗಿಂಜಿಕೆ, ಪಾದಗ್ರಹಣಾದಿ ಶುಶ್ರೂಷೋಪಚಾರಗಳಿಗೆ ಮಾತ್ರ ದಕ್ಕುವ ಪದವಿ ಪ್ರಶಸ್ತಿಗಳಿಗಾಶಿಸದೆ, ವಿಜ್ಞಾನಕೈಂಕರ್ಯ ಸಂಕಲ್ಪವೊಂದೇ ತಮ್ಮ ಜೀವನದ ಉಸಿರಾಗಿರುವಾಗ ಯಾವ ಆಶೆ ಆಮಿಷಗಳಿಗೂ ಮಣಿಯದೆ, ಅಸಾಧ್ಯವನ್ನು ಸಾಧಿಸುತ್ತಿದ್ದಾರೆಂಬುದು ಕನ್ನಡದ ಪುಣ್ಯ.

ಜಿಟಿಎನ್‌ರ ಹವ್ಯಾಸಗಳ ಕಡೆಗೆ ಗಮನಹರಿಸಿದಾಗಲೇ ಅವರು ಅಸಾಧಾರಣರೆಂಬುದು, ಬಹುಮುಖ ಪ್ರತಿಭೆಯ ಸೃಜನಶೀಲ ಅಗ್ಗಳೆಯರೆಂಬುದು ಮನದಟ್ಟಾಗುತ್ತದೆ. ಅವರ 'ಎನ್ಸಿಸಿ ದಿನಗಳು' ಮತ್ತು 'ಕುದುರೆಮುಖದೆಡೆಗೆ' ಎಂಬ ಗ್ರಂಥಗಳನ್ನೋದಿದರೆ ಸಾಕು, ಅವರಿಗೆ ಎಂಥ ಕೆಲಸವನ್ನು ವಹಿಸಿದರೂ ಸೃಷ್ಟಿಪೂಜೆಯೆಂದೇ ನಂಬಿ, ಅದನ್ನು ಸಮರ್ಥ ಸಾರ್ಥಕ ಶಿಕ್ಷಣ ಮಾಧ್ಯಮವನ್ನಾಗಿ ಪರಿವರ್ತಿಸಿಕೊಳ್ಳುತ್ತಾರೆಂಬುದು ವಿದಿತವಾಗುತ್ತದೆ. ಜಗತ್ತಿನ ಗಡಿಯಾರ ಅಥವಾ ಋತುಮಾನವೆಷ್ಟು ಕ್ರಮಬದ್ಧವೋ ಅವರ ಜೀವನ ಕ್ರಮವೂ ಅಷ್ಟೇ ವ್ಯವಸ್ಥಿತವಾದದ್ದು. ಪ್ರಾತರ್ವಿಧಿ, ವ್ಯಾಸಂಗ, ಲೇಖನ ಕರ್ಮ ಅವರ ಪ್ರತಿನಿತ್ಯದ ಪರಿಪಾಟ. ಮುದ್ರಣಾಲಯಕ್ಕೆ ಕರಡು ಕೊಡೊಯ್ಯುವವರೂ ಅವರೆ. ನಗರದ ಯಾವ ಮೂಲೆಯಲ್ಲಿ ಸಂಗೀತ ಕಛೇರಿಯಿದ್ದರೂ ಹಾಜರಿ ಹಾಕಲೇಬೇಕು. ದೇವರ ಮಂಡೆಯ ಹೂ ಹಾಕುವುದು ತಪ್ಪಿದರೂ ಸಂಗೀತ ಕಚೇರಿಯನ್ನು ತಪ್ಪಿಸಿಕೊಳ್ಳುವಂತಿಲ್ಲ. ಸಂಗೀತ ಶಾಸ್ತ್ರವನ್ನು ಬಲ್ಲ ಸದಭಿರುಚಿಯ ವಿಮರ್ಶಕರವರು. ಅವರ ಸಮತೋಲನ ಪ್ರಜ್ಞೆಗೆ, ಭಾವಸಂಸ್ಕಾರಕ್ಕೆ ಸಂಗೀತ ಜ್ಞಾನವೇ ಕಾರಣವೆಂದು ತೋರುತ್ತದೆ. ಮೈಸೂರಿನ 'ವೀಣೆ ಶೇಷಣ್ಣ ಭವನ'ವನ್ನು ನಿರ್ಮಿಸುವಲ್ಲಿ ಸಂಗೀತ ಪ್ರಸಾರ ವಿಕಾಸಗಳ ಬಗೆಗಿನ ಅವರ ಕಾಳಜಿ, ಅವರ ಸಂಘಟನ ಸಾಮರ್ಥ್ಯ ಹಾಗೂ ಅವರ ಸ್ನೇಹಾರ್ಜನಾ ಕೌಶಲ ವ್ಯಕ್ತಗೊಳ್ಳುತ್ತವೆ.

ಏಕಕಾಲಕ್ಕೆ ವಿಜ್ಞಾನ ಹಾಗೂ ಸಾಹಿತ್ಯ ಕ್ಷೇತ್ರಗಳಿಗೆ ನೀಡಿರುವ ಮೌಲ್ಯಾತ್ಮಕ ಕಾಣಿಕೆಯಾಗಿ, ಸಲ್ಲಿಸುತ್ತಿರುವ ವಿಶಿಷ್ಟ ಸೇವೆಗಾಗಿ ಕರ್ನಾಟಕ ಸಾಹಿತ್ಯ ಅಕಡೆಮಿ, ಕರ್ನಾಟಕ ವಿಶ್ವವಿದ್ಯಾನಿಲಯ, ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ವಿಶ್ವಮಾನವ, ಕರ್ನಾಟಕ ಗಾನಕಲಾ ಪರಿಷತ್ತು, ಮಣಿಪಾಲ್ ಜನರಲ್ ಎಜ್ಯುಕೇಶನ್ ಅಕಾಡೆಮಿ ಮೊದಲಾದ ಹಲವು ಸಂಸ್ಥೆಗಳು ಅವರಿಗೆ ಸಲ್ಲಿಸಿರುವ ಬಹುಮಾನ ಪ್ರಶಸ್ತಿಗಳಿಗೆ ಅವರು ಸರ್ವಾರ್ಹರೆಂಬುದರಲ್ಲಿ ಸಂದೇಹವಿಲ್ಲ.

ಪ್ರಶಸ್ತಿಗಳು ಬರಲಿ, ಬರದಿರಲಿ, ವಿಜ್ಞಾನ ಸಾಹಿತ್ಯ ನಿರ್ಮಾಣ ಮತ್ತು ಕನ್ನಡ ಭಾಷಾ ಸೇವೆ ತಮ್ಮ ಜೀವನ ಧರ್ಮವೆಂದು ತಿಳಿದು, ಅದೇ ಕಾಯಕ ಸತ್ಯ ಮುಕ್ತಿ ಎಲ್ಲವೂ ಎಂದು ಭಾವಿಸಿ ಅನಿವೃತ್ತರಂತೆ ಏಕೋಭಾವದಿಂದ ಶ್ರದ್ಧಾನಿಷ್ಠೆಗಳಿಂದ ದುಡಿಯುತ್ತಿದ್ದಾರೆ. ಆದ್ದರಿಂದಲೇ ಅವರು ಈಗಾಗಲೇ ಸುಮಾರು ೬೮ ಗ್ರಂಥಗಳನ್ನು ರಚಿಸಿ, ಕನ್ನಡವು ವಿಜ್ಞಾನದ ಸಶಕ್ತ ಮಾಧ್ಯಮವೆಂಬುದನ್ನು ತೋರಿಸಿಕೊಟ್ಟಿದ್ದಾರೆ. ಆಕಾಶದ ಅದ್ಭುತಗಳು, ಧೂಮ ದೈತ್ಯ, ಕಾಲ, ನಕ್ಷತ್ರ ಜಾಲ, ಭವಿಷ್ಯ ವಿಜ್ಞಾನ, ಗಣಿತ ಗಗನ ಗಮನ, ಗ್ರಹಣಗಳು, ಕೃಷ್ಣವಿವರಗಳು, ವೈಜ್ಞಾನಿಕ ಮನೋಧರ್ಮ – ಇವು ಅವರ ಕೆಲವು ಗ್ರಂಥಗಳು ಮಾತ್ರ. ಇವುಗಳ ಹೆಸರುಗಳನ್ನು ಓದಿದಾಗಲೇ, ಅವರ ವೈವಿಧ್ಯಮಯ ವೈದುಷ್ಯದ ಆಳ ಅಗಲ ವಿಸ್ತಾರಗಳು ಪರಿಚಯವಾಗುತ್ತವೆ. ಕೊಪರ್ನಿಕಸ್, ಐನ್‌ಸ್ಟೈನ್, ಶ್ರೀನಿವಾಸ ರಾಮಾನುಜನ್, ಸುಬ್ರಹ್ಮಣ್ಯನ್ ಚಂದ್ರಶೇಖರ್, ವಿಜ್ಞಾನ ನಿರ್ಮಾಪಕರು ಮೊದಲಾದ ಜೀವನ ಚರಿತ್ರೆ – ಚಿತ್ರಗಳು ಕನ್ನಡಿಗರಿಗೆ ದಾರಿದೀಪವಲ್ಲದೆ ಧೈರ್ಯ ನಚಿಕೇತಗಳಾಗಿರುವುದಲ್ಲದೆ, ಆ ಸಾಹಿತ್ಯ ಪ್ರಕಾರಕ್ಕೆ ಮಾದರಿಗಳಾಗಿ ವಿಜೃಂಭಿಸುತ್ತವಲ್ಲದೆ, ಜೀವನ ಚರಿತ್ರೆಯ ಕ್ಷೇತ್ರವನ್ನು ವಿಶಿಷ್ಟ ರೀತಿಯಲ್ಲಿ ಸಮೃದ್ಧಗೊಳಿಸಿವೆ. ಈ ವಿಜ್ಞಾನ ಲೇಖಕರು ಸಣ್ಣ ಕತೆಗಳಲ್ಲಿಯೂ ಕೈಯಾಡಿಸಿದ್ದಾರೆಂಬುದು ಗಮನಾರ್ಹವಾದ ಸಂಗತಿ. ಅವರ ದೈತ್ಯಶಕ್ತಿಗೆ ಸಾಕು ಇಷ್ಟೇ ನಿದರ್ಶನ.

ಅವರ ಈ ಶಕ್ತಿಯನ್ನು ಸುಮಾರು ಮೂವತ್ತು ವರ್ಷಗಳ ಹಿಂದೆಯೇ ಗುರುತಿಸುವ ಅವಕಾಶ ನನಗೆ ದೊರೆಯಿತೆಂಬುದು ಸಂತೋಷದ ಹಾಗೂ ಹೆಮ್ಮೆಯ ಸಂಗತಿ. ಗುರುತಿಸಲು ನೆರವಾದವರು ಪ್ರೊ. ಕು.ಶಿ. ಹರಿದಾಸಭಟ್ಟರೆಂಬುದನ್ನು ನಾನು ಮರೆಯುವಂತಿಲ್ಲ. ನಾನಾಗ ಕನ್ನಡ ವಿಶ್ವಕೋಶದ ವಿಜ್ಞಾನದ ವಿಭಾಗಕ್ಕೆ ಸಂಪಾದಕರೊಬ್ಬರನ್ನು ಹುಡುಕುವ ಯತ್ನದಲ್ಲಿದ್ದೆ. ಕರ್ನಾಟಕಾದ್ಯಂತ ದೃಷ್ಟಿ ಕ್ಷಕಿರಣ ಹಾಯಿಸಿದ್ದೆ, ಹುಡುಕುಬಲೆಯನ್ನು ಬೀಸಿದ್ದೆ. ಬೆಂಗಳೂರು ಸೆಂಟ್ರಲ್ ಕಾಲೇಜಿನ ಗಣಿತ ಭವನದ ಮುಂದಣ ಶಿರೀಷ ವೃಕ್ಷದಡಿ ನಿಂತು ಗಂಟೆಗಟ್ಟಲೆ ನಾರಾಯಣ ರಾಯರ ಮನವೊಲಿಸಿಕೊಳ್ಳಲು ಪ್ರಯತ್ನಿಸಿದೆ. ಸಫಲವಾಗಲಿಲ್ಲ. ಆದರೂ ನಾನು ನೆಚ್ಚುಗೆಡದೆ ಕುಶಿಯವರನ್ನು ಮರೆಹೊಕ್ಕಿದ್ದೆ; ಭುವನೇಶ್ವರಿಯನ್ನು ಪ್ರಾರ್ಥಿಸುತ್ತಿದ್ದೆ. ದಿನಕಳೆದಂತೆಲ್ಲ ನನ್ನ ಸಂಕಲ್ಪ ದೃಢಗೊಳ್ಳುತ್ತಿತ್ತು. ಬೆಂಗಳೂರು ವಿಶ್ವವಿದ್ಯಾಲಯ ನಾರಾಯಣರಾಯರ ಪ್ರತಿಭಾ ಸಾಮರ್ಥ್ಯವನ್ನು, ಅವರ ದಕ್ಷತೆಯನ್ನು, ಪ್ರಾಮಾಣಿಕತೆಯನ್ನು ಗುರುತಿಸಲಾರದೆಂಬ ನಂಬಿಕೆ ನನ್ನ ಮನಸ್ಸಿನಲ್ಲಿ ಕಾವು ಕೂತಿತ್ತು. ಆ ನನ್ನ ನಂಬಿಕೆ ಹುಸಿಯಾಗಲಿಲ್ಲ. ಕೆಲವು ತಿಂಗಳಾನಂತರ ಕುಶಿಯವರೇ ನನ್ನನ್ನು ಕೇಳಿದರು: ವಿಶ್ವಕೋಶದ ಕದ ನಾರಾಯಣರಾಯರಿಗೆ ಇನ್ನೂ ತೆರೆದಿದೆಯೆ ಎಂದು. ಕೊನೆಗೂ ನನ್ನ ಪ್ರಾರ್ಥನೆ ಸಫಲವಾಯಿತೆಂಬ, ನನ್ನ ಮನೋರಥ ಈಡೇರಿತೆಂಬ, ವಿಶ್ವಕೋಶವನ್ನು ಖಂಡಿತವಾಗಿಯೂ ಪೂರೈಸುತ್ತೇನೆಂದು ಸರ್ಕಾರಕ್ಕೆಸೆದಿದ್ದ ಸವಾಲಿಗೆ ವಿಜಯ ದೊರೆಯುತ್ತದೆಂಬ ಆನಂದ ನನ್ನ ಮೈಮನ ಹೃದಯಗಳನ್ನೆಲ್ಲ ತುಂಬಿಕೊಂಡವು.

ಎಚ್ಚೆಸ್ಕೆ, ಜಿ.ಟಿ. ನಾರಾಯಣರಾವ್ ಮತ್ತು ಎನ್. ಪ್ರಹ್ಲಾದರಾವ್ ಈ ಮೂವರು ಘನ ವಿದ್ವಾಂಸರು, ವಿಶ್ವದ ಯಾವ ಭಾಗದಲ್ಲಾದರೂ ಮಾನ್ಯತೆ ಪಡೆಯಬಲ್ಲ ಅರ್ಹತೆಯುಳ್ಳ ಧೀಮಂತರು. ಆ ಮೂವರು ವಿಶ್ವಕೋಶಕ್ಕೆ ವರವಾಗಿ ಬಂದವರು ನನ್ನ ಅದೃಷ್ಟದ ಬಾಗಿಲನ್ನು ಸಹ ತೆರೆದರು. ಅವರು ಬಂದನಂತರ ನಾನು ವಿಶ್ವಕೋಶದ ಜವಬ್ದಾರಿಯನ್ನೆಲ್ಲ ಅವರ ಹೆಗಲುಗಳಿಗೆ ವರ್ಗಾಯಿಸಿ ನಿಶ್ಚಿಂತನಾದೆ. ಸಂಸ್ಥೆಯ ಬೇರೆ ಕಾರ್ಯಗಳಿಗೆ ನನ್ನ ಗಮನ ಹರಿಸಿದೆ. ನನ್ನ ನಿರೀಕ್ಷೆ ಹುಸಿಯಾಗಲಿಲ್ಲ. ಭಾರತದ ಯಾವ ಭಾಷೆಗಾದರೂ ಮಾದರಿಯಾಗಬಹುದಾದ ವಿಶ್ವಕೋಶವನ್ನು ರಚಿಸಿ, ಸಂಪಾದಿಸಿ, ಆರು ತಿಂಗಳಿಗೊಂದು ಸಂಪುಟವನ್ನು ಹೊರತಂದರು. ಅವರ ಶಕ್ತಿಯನ್ನರಿಯಲಾರದೆ, ವಿಶ್ವಕೋಶದ ಮಹತ್ತ್ವದ ಗಂಧವೇ ಗೊತ್ತಿಲ್ಲದ, ಅದಕ್ಷ, ಅಜ್ಞ ಅಧಿಕಾರಿಗಳು ಆ ಸಂಪಾದಕರಿಗೇ ನಿವೃತ್ತಿ [ಶ್ರೀ ಎನ್. ಪ್ರಹ್ಲಾದರಾಯರು ಮೊದಲೇ ಅಕಾಲ ಮರಣಕ್ಕೆ ತುತ್ತಾದರೆಂಬುದು ಅವರನ್ನು ಬಲ್ಲವರೆಲ್ಲರಿಗೂ ದುಃಖದ ಸಂಗತಿಯಾಗಿದೆ] ವಯಸ್ಸು ಸನ್ನಿಹಿತವಾಯಿತೆಂದು ನಿವೃತ್ತಿಗೊಳಿಸಿದ್ದು ವಿಶ್ವವಿದ್ಯಾನಿಲಯದ ದೌರ್ಭಾಗ್ಯ. ಕನ್ನಡ ವಿಶ್ವಕೋಶವನ್ನು ಇಂದಿನ ದುಃಸ್ಥಿತಿಗೆ ತಂದ, ವಿಷಯ ವಿಶ್ವಕೋಶವನ್ನು ಅನಾಥ ಸ್ಥಿತಿಗೆ ನೂಕಿದ ಉದ್ದಂಡ, ಉದ್ದಾಮ ವಿದ್ವಜ್ಜನರು ಕೀರ್ತಿವೇಷ್ಟಿತರಾಗಿ ಬಾಳಲೆಂದು ಹಾರೈಸುತ್ತೇನೆ. ಕಣ್ಣೀರಿನಲ್ಲಿ ಲೇಖನಿಯದ್ದಿ ನಾನು ಈ ಮಾತು ಬರೆಯುವ ತನಕ ಬದುಕಬೇಕಾಯಿತೆ ಎಂದು ಮನಸ್ಸು ಉದ್ವಿಗ್ನಗೊಂಡಿದೆ. ಇಲ್ಲಿಗೆ ಅಪ್ರಕೃತವಾದರೂ ಜಿ.ಟಿ. ನಾರಾಯಣ ರಾಯರ ವಿಶೇಶ ಗುಣವನ್ನು ಪ್ರಕಟಿಸುವ ಅವರ ಮತ್ತೊಂದು ಮುಖವನ್ನು ಇಲ್ಲಿ ದಾಖಲಿಸಲೇಬೇಕು. ಅವರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷವನ್ನು ಕೊಟ್ಟಿದ್ದಾರೆ. ಎಲ್ಲ ರೀತಿಯಿಂದ ಈ ಶಿಕ್ಷಣ ನೌಕರಿಗಲ್ಲ, ಬದುಕಿಗೆ ಎಂದು ಅವರೇ ಹೇಳುತ್ತಾರೆ. ಸ್ವಾವಲಂಬನೆ ಅವರ ಜೀವನ ಮಂತ್ರ. ನಿರುದ್ಯೋಗಿಗಳ ಸಾಲಿನಲ್ಲಿ ನನ್ನ ಮಕ್ಕಳನ್ನು ಕಾಯಿಸಲಾರೆ; ಅವರಿವರ ಮುಂದೆ ನಿಂತು ನಾನು ಹಲ್ಲುಗಿಂಜಲಾರೆ; ನನ್ನ ಮಕ್ಕಳು ಆತ್ಮ ಗೌರವವನ್ನು ತೊರೆದು ಅವರಿವರ ಮುಂದೆ ಅಂಗಲಾಚುವುದನ್ನು ನಾನು ನೋಡಲಾರೆ; ಮೊದಲೇ ನಿರುದ್ಯೋಗಸ್ಥ ಅನಾಥರಾಗಿರುವ, ತನ್ನ ಮಕ್ಕಳ ಬವಣೆಯನ್ನು ನೋಡಿ ದುಃಖಾಕ್ರಾಂತಳಾಗಿರುವ ಭಾರತ ಮಾತೆಗೆ ನಾನು ಮತ್ತು ನನ್ನ ಮಕ್ಕಳು ಮತ್ತಷ್ಟು ತೊಂದರೆ ಕೊಡಬಾರದು, ಅವಳಿಗೆ ಭಾರವಾಗಬಾರದು; ನನ್ನ ಮಕ್ಕಳು ಸ್ವಾವಲಂಬಿಗಳಾಗಿ, ಸ್ವಾಭಿಮಾನಿಗಳಾಗಿ, ಸ್ವಧರ್ಮ ನಿರತರಾಗಿ ದುಡಿದು ಬದುಕಬೇಕು ಎಂಬುದು ರಾಯರ ಆಕಾಂಕ್ಷೆ ಮತ್ತು ಸಂಕಲ್ಪ. ನುಡಿದಂತೆ ನಡೆಯುವ, ಆ ನೀತಿವಂತರು ತಮ್ಮ ಆಕಾಂಕ್ಷೆಯನ್ನು ಪೂರೈಸಿಕೊಳ್ಳುವಲ್ಲಿ ಕೃತಕೃತ್ಯರಾಗಿದ್ದಾರೆ; ಇಡೀ ಸಮಾಜಕ್ಕೆ ಮಾದರಿಯಾಗಿದ್ದಾರೆ.

ಇಂಥ ಧೀಮಂತರೂ, ಶ್ರೇಷ್ಠ ವಿದ್ವಾಂಸರೂ ಸತತ ಕ್ರಿಯಾಶೀಲರೂ, ಕಾಯಕ ತಪಸ್ವಿಗಳೂ ಆದ ಪ್ರೊ. ಜಿ.ಟಿ. ನಾರಾಯಣರಾಯರು ಶ್ರೀ

ಕೆ.ವಿ. ಶಂಕರ ಗೌಡ ಸ್ಮಾರಕ ಉಪನ್ಯಾಸ ಮಾಲೆಯಲ್ಲಿ ಭಾಷಣ ಮಾಡಲೊಪ್ಪಿದ್ದು ಸಂತಸದ ಸಂಗತಿ. ಮಹಾಕವಿ ಕುವೆಂಪು ಅವರಿಂದ ನಿತ್ಯಸಚಿವರೆನಿಸಿಕೊಂಡ, ಮಹಾಕಾದಂಬರಿಕಾರ ಅನಕೃ ಅವರಿಂದ ಅಪೂರ್ವ ಸಚಿವರೆಂದು ಕರೆಸಿಕೊಂಡ ಶಂಕರಗೌಡರು ಸ್ವಯಂ ವಿದ್ವಾಂಸರು, ಗಾಂಧಿ ಅನುಯಾಯಿಗಳು, ಕಲಾವಿದರು ಮಾತ್ರವಲ್ಲ, ಕಲಾಪೋಷಕರು, ನಾಟಕಕಾರರು, ಹಲವು ಸಹಕಾರ ಶಿಕ್ಷಣ ಸಂಸ್ಥೆಗಳ ನಿರ್ಮಾಪಕರು, ರೈತ ಬಾಂಧವರು ಮತ್ತು ತ್ಯಾಗವೀರರು. ಈ ಮಾಲೆಯಲ್ಲಿ ಇದು ೨೦ನೆಯ ಉಪನ್ಯಾಸ. ನ್ಯಾಯವಾಗಿ ಇದು ೨೪ನೆಯದಾಗಬೇಕಿತ್ತು. ಬರೆದುಕೊಡುವ ಮುನ್ನವೇ ಒಬ್ಬರು ತೀರಿಕೊಂಡರು. ಮತ್ತೊಬ್ಬರು ತಾವೇ ಮುದ್ರಿಸಿ ಮಡಗಿಕೊಂಡರು. ಇನ್ನಿಬ್ಬರು ಹಸ್ತಪ್ರತಿಯನ್ನೇ ಕೊಡಲಿಲ್ಲ. ಕಾರಣಾಂತರದಿಂದ ಒಂದು ಭಾಷಣ ನಡೆಯಲಿಲ್ಲ. ಕೊನೆಯದು ಹೊರತಾಗಿ, ಉಳಿದ ಉಪನ್ಯಾಸಗಳಿಗೆ ಸಂಭಾವನೆ ಸಂದಿದೆ.

ಸಾಮಾನ್ಯರಿಗೆ ಮಾತ್ರವಲ್ಲ, ಮಹಾವಿಜ್ಞಾನಿಗಳಿಗೂ ವಿಶ್ವ ಸವಾಲಾಗಿ ನಿಗೂಢವಾಗಿ, ಆಶ್ಚರ್ಯ ಪ್ರಶ್ನೆ ಚಿಹ್ನೆಗಳ ನಡುವಣದೋಲಕವಾಗಿ, ಅರಿತಂತೆಲ್ಲ ಅರಿದಾಗಿ, ನಿರ್ದಿಗಂತವಾಗಿ ತೋರುತ್ತಿದೆ. ರೂಢಿಬದ್ಧರಾಗಿ, ವಿವಾದವಿಲ್ಲದೆಯೆ, ಶ್ರದ್ಧಾಭಕ್ತಿಗಳಿಗೆ ಅದು ಅನಾದಿ ಅನಂತವೆಂದು ಎಲ್ಲರೂ ಒಪ್ಪಿ ತೆಪ್ಪಗಾಗುತ್ತೇವೆಯೇ ಹೊರತು, ಅದನ್ನು ತಿಳಿದುಕೊಳ್ಳುವ ಗೋಜಿಗೆ ಯಾರೂ ಹೋಗುವುದಿಲ್ಲ. ತನ್ನ ಸುತ್ತಮುತ್ತ ಪ್ರತಿಕ್ಷಣವೂ ಕಣ್ಣು ಮನಸ್ಸುಗಳಿಗೆ ರಾಚುತ್ತಿರುವ ಸೃಷ್ಟಿಯ ವೈಚಿತ್ರ್ಯ ವೈವಿಧ್ಯ ವೈಭವಗಳ ಬಗೆಗೆ, ಭೂರಚನೆಯ ಬಗೆಗೆ, ವಾತಾವರಣದ ಬಗೆಗೆ ಮನುಷ್ಯ ಸಾಮಾನ್ಯವಾಗಿ ಯೋಚನೆ ಹರಿಸುವುದಿಲ್ಲ. ಇಂಥ ಯೋಚನೆ ಇಲ್ಲದೆಯೇ ಅವನು ಬದುಕು ಮುಗಿಸುತ್ತಾನೆ. ಸುತ್ತಮುತ್ತಣ ಪ್ರದೇಶವೇ ನಿಗೂಢತೆಯ ಬೀಡಾಗಿರುವಾಗ ವಿಶ್ವದ ನಿಗೂಢತೆ ಅಪ್ರಮೇಯ ಅಚಿಂತ್ಯವೆಂದೇ ಹೇಳಬೇಕು. ಆದರೂ ಸತ್ಯಾನ್ವೇಷಣಾತತ್ಪರರಾದ ಮಹಾವಿಜ್ಞಾನಿಗಳು ಅದರ ರಚನೆ ಸ್ವರೂಪ ವ್ಯಾಪ್ತಿ ವಿಸ್ತಾರ ಸೌಂದರ್ಯಾದಿ ರಹಸ್ಯಗಳನ್ನರಿಯಲು ಪ್ರಾಚೀನ ಕಾಲದಿಂದಲೂ ಪ್ರಯತ್ನಿಸುತ್ತಿದ್ದಾರೆ. ಆ ಪ್ರಯತ್ನದ ಫಲವಾಗಿ ಅನೇಕ ಶೋಧಗಳು ಬೆಳಕಿಗೆ ಬಂದಿವೆ. ಸಾಮಾನ್ಯರಿಗೆಷ್ಟು ಬೇಕೋ ಅಷ್ಟನ್ನು ಮಾತ್ರ ಸಂಗ್ರಹಿಸಿ, ಗ್ರಂಥಕರ್ತರು ಉಪನ್ಯಾಸದ ಇತಿಮಿತಿಗಳಲ್ಲಿ 'ವಿಶ್ವದ ಕಥೆ'ಯನ್ನು ಓದುಗರ ಮುಂದೆ ಇರಿಸಿದ್ದಾರೆ. ನಿಗೂಢ ವಿಷಯಗಳನ್ನು ವಿವರಿಸುವಾಗ ಭಾಷೆ ತುಸು ಗಟ್ಟಿಯಾಗುವುದು ಸಹಜ. ನಿಧಾನವಾಗಿ ಓದಿದಾಗ ಅದು ತನ್ನ ಹೃದಯವನ್ನು ತೆರೆದು ತೋರಿಸುತ್ತದೆ.

ಪ್ರಶ್ನೆಯಿಂದ ಆಶ್ಚರ್ಯಕೆ
ಆಶ್ಚರ್ಯದಿಂದ ಪ್ರಶ್ನೆಗೆ
ಉಭಯ ಮಧ್ಯೆ ಚಲಿಪ ವಿದ್ಯೆ
ಪೂರ್ಣೆ ಶೂನ್ಯೆ ಕುಂಡಲಿನೀ – ಕುವೆಂಪು

ಈ ಗ್ರಂಥವನ್ನು ಬರೆದುಕೊಟ್ಟಿರುವ ಪ್ರೊ. ಜಿ.ಟಿ. ನಾರಾಯಣರಾಯರಿಗೆ ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಮತ್ತು ಶ್ರೀ ಕುವೆಂಪು ವಿದ್ಯಾ ಪರಿಷತ್ತಿನ ಪರವಾಗಿ ಹೃತ್ಪೂರ್ವಕ ಧನ್ಯವಾದವನ್ನರ್ಪಿಸುತ್ತೇನೆ.

ದೇಜಗೌ ೯-೨-೧೯೯೯ ಮೈಸೂರು ೫೭೦೦೧೨

ದೆಹಲಿ ಕರ್ನಾಟಕ ಸಂಘ ಒಪ್ಪಿಸಿದ
ಡಾ. ಶಿವರಾಮ ಕಾರಂತ ಪ್ರಶಸ್ತಿ ೨೦೦೦

ಈ ಸಂಘ ನನ್ನನ್ನು ದೆಹಲಿಗೆ ಕರೆಸಿಕೊಂಡು ನೀಡಿದ ಪ್ರಶಸ್ತಿ ಪತ್ರ:

ಸನ್ಮಾನ್ಯರಾದ ಶ್ರೀ ಜಿ.ಟಿ. ನಾರಾಯಣರಾವ್ ಅವರೇ,

೨೦೦೦ ವರ್ಷಗಳ ಸುದೀರ್ಘ ಮತ್ತು ಶ್ರೀಮಂತ ಸಾಹಿತ್ಯ ಪರಂಪರೆ ಇರುವ ಕನ್ನಡ ಭಾಷೆಯನ್ನು ವಿಜ್ಞಾನ ಸಂಬಂಧೀ ಬರಹಗಳ ಮೂಲಕ ಹೊಸ ಎತ್ತರಕ್ಕೇರಿಸಿದವರು ತಾವು. ಹಾಗೆ ಮಾಡುವುದರ ಮೂಲಕ ಕನ್ನಡ ಭಾಷೆಯನ್ನು ಆಧುನಿಕ ಕಾಲದ ಅಗತ್ಯಗಳಿಗೆ ಅನುಗುಣವಾಗಿ ಪುನಾರೂಪಿಸಿ ಬೆಳೆಸಿದಿರಿ. ಕನ್ನಡಂಥ ಪ್ರಾದೇಶಿಕ ಭಾಷೆಯಲ್ಲಿ ವಿಜ್ಞಾನ ಪ್ರಪಂಚದ ಸಂಕೀರ್ಣ ಪರಿಕಲ್ಪನೆಗಳನ್ನು ವಿನೂತನ ದಾಟಿಯಲ್ಲಿ ಆಕರ್ಷಕವಾಗಿ, ಸರ್ವಗ್ರಾಹ್ಯವಾಗಿ ಮತ್ತು ಸಮಗ್ರವಾಗಿ ಮಂಡಿಸಲು ಸಾಧ್ಯ ಎಂಬುದನ್ನು ತಾವು ಸಾಧಿಸಿ ತೋರಿಸಿದಿರಿ. ಇಂತಹ ಸಾಧನೆಗಳ ಮೂಲಕವೇ ನಾಡು–ನುಡೀ ಸಮೃದ್ಧಿಗೊಳ್ಳುತ್ತದೆ ಎಂದು ನಾವು ಬಲವಾಗಿ ನಂಬಿದ್ದೇವೆ.

ಎಪ್ಪತ್ನಾಲ್ಕು ವಸಂತಗಳನ್ನು ಕಂಡ ಕವಿ ಹೃದಯದ ತಾವು, ಕಳೆದ ೫೦ ವರ್ಷಗಳಿಂದ ವಿಜ್ಞಾನ ಪ್ರಪಂಚದ ಕಾರ್ಯಕಾರಣ ಸಂಬಂಧಗಳನ್ನು ಎಲ್ಲ ತಲೆಮಾರಿನ ಜನರಿಗೆ ದಣಿವರಿಯದೆ ವಿವರಿಸುತ್ತಲೇ ಬಂದಿದ್ದೀರಿ. ಇದಕ್ಕಾಗಿ ಲೇಖನ, ಪುಸ್ತಕ, ಭಾಷಣ, ಅಧ್ಯಾಪನ ಮತ್ತಿತರ ಮಾಧ್ಯಮಗಳನ್ನು ತಾವು ಅತ್ಯಂತ ಪರಿಣಾಮಕಾರಿಯಾಗಿ ಬಳಸಿಕೊಳ್ಳುತ್ತ ಬಂದಿದ್ದೀರಿ. ನಂಬಿದ ಮೌಲ್ಯಗಳಿಗಾಗಿ ಹೀಗೆ ನಿರಂತರವಾಗಿ ದುಡಿದ ಅಪೂರ್ವ ವ್ಯಕ್ತಿತ್ವ ನಿಮ್ಮದು. ನಾವೆಲ್ಲ ಅದಕ್ಕಾಗಿ ಹೆಮ್ಮೆ ಪಡುತ್ತಿದ್ದೇವೆ.

ತಾವು ಬರೆದ ಆಲ್‌ಬರ್ಟ್ ಐನ್‌ಸ್ಟೈನ್, ನೋಡೋಣು ಬಾರಾ ನಕ್ಷತ್ರ, ಪ್ಲಾಂಕ್ ಐನ್‌ಸ್ಟೈನ್ ಬೋರ್, ಸೂರ್ಯನ ಸಾಮ್ರಾಜ್ಯ, ಭವಿಷ್ಯ ವಿಜ್ಞಾನ, ಭವಿಷ್ಯ ವಾಚನ, ಗಣಿತ ಗಗನ ಗಮನ, ಸುಬ್ರಹ್ಮಣ್ಯನ್ ಚಂದ್ರಶೇಖರ್, ಐವರು ವಿಜ್ಞಾನಿಗಳು, ಧೂಮಕೇತು, ವೈಜ್ಞಾನಿಕ ಮನೋಧರ್ಮ, ಸೂಪರ್ನೋವಾ, ಶ್ರೀನಿವಾಸ ರಾಮಾನುಜನ್ ಮತ್ತಿತರ ಗ್ರಂಥಗಳು ಭೌತ ಜಗತ್ತಿನ ಪ್ರಗಲ್ಭ ವಿದ್ಯಮಾನಗಳನ್ನು ರೋಮಾಂಚಕಾರಿಯಾಗಿ ಓದುಗರಿಗೆ ವಿವರಿಸಿವೆ. ಡಾ. ಶಿವರಾಮ ಕಾರಂತರ ವಿಜ್ಞಾನ ಪ್ರಪಂಚ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ವಿಶ್ವಕೋಶದ ವಿಜ್ಞಾನ ವಿಭಾಗದ ಸಂಪಾದಕರಾಗಿ ತಾವು ಸಲ್ಲಿಸಿದ ಸೇವೆಯೂ ಅನುಪಮವಾದುದು. ಕರ್ನಾಟಕ ಸರ್ಕಾರ ಮತು ಕರ್ನಾಟಕದ ಹಲವು ವಿಶ್ವವಿದ್ಯಾಲಯಗಳ ಶೈಕ್ಷಣಿಕ ಸಮಿತಿಗಳಲ್ಲಿಯೂ ತಾವು ವಿಜ್ಞಾನದ ಕೆಲಸಗಳನ್ನು ಮಾಡುತ್ತಲೇ ಬಂದಿರುವಿರಿ. ಸಂದರ್ಭೋಚಿತವಾಗಿ ತಾವು ಬರೆದ ಪತ್ರಿಕಾ ಲೇಖನಗಳು ಹಲವು ಬಗೆಯ ಮೂಢನಂಬಿಕೆಗಳಿಗೆ ತೆರೆ ಎಳೆದಿರುವುದನ್ನು ನಾವು ಗಮನಿಸಿದ್ದೇವೆ.

ವಿಜ್ಞಾನಕ್ಕೂ ಕಾವ್ಯಕ್ಕೂ ಜೈವಿಕ ಸಂಬಂಧವಿದೆ ಎಂಬುದನ್ನು ತೋರಿಸಿದ ಕೀರ್ತಿ ತಮಗೆ ಸಲ್ಲುತ್ತದೆ. ತಮ್ಮ ಗ್ರಂಥಗಳ ನಡುವೆ ಮಿಂಚಿ ಮಾಯವಾಗುವ ಕವನಗಳ ಸಾಲುಗಳು ತಮ್ಮ ಭಾಷಣಗಳಲ್ಲಿ ಅಸ್ಖಲಿತವಾಗಿ ಹರಿದು ಬರುತ್ತಿದ್ದ ಕಾವ್ಯಧಾರೆಯನ್ನು ಕನ್ನಡಿಗರೆಲ್ಲ ನೆನಪಿಟ್ಟುಕೊಳ್ಳುತ್ತಿದ್ದಾರೆ. ಕೊಡಗಿನ ಸುಮಗಳು ಹರಡಿದ ಪರಿಮಳ, ಎನ್ಸಿಸಿ ದಿನಗಳು ವಿವರಿಸಿದ ಜೀವನ ಧರ್ಮವನ್ನು ಯಾರಿಗೂ ಮರೆಯಲಾಗದು.

ತಮ್ಮ ಸಾಧನೆಗಾಗಿ ತಾವು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನ ಹಾಗೂ ರಾಷ್ಟ್ರಕವಿ ಕುವೆಂಪು ದತ್ತಿ ನಿಧಿಯ ವಿಶ್ವಮಾನವ ಪ್ರಶಸ್ತಿಗಳನ್ನು ಪಡೆದಿದ್ದೀರಿ. ಎಲ್ಲಕ್ಕಿಂತ ಮಿಗಿಲಾಗಿ ಕರ್ನಾಟಕದ ಅಸಂಖ್ಯ ಓದುಗರ ಪ್ರೀತಿ–ಅಭಿಮಾನಗಳಿಗೆ ಪಾತ್ರರಾಗಿದ್ದೀರಿ. ತಮ್ಮ ಬರಹಗಳಿಂದ ಕನ್ನಡ ಭಾಷೆಗೆ ಹೊಸ ಬಗೆಯ ಚೈತನ್ಯ ಪ್ರಾಪ್ತಿಸಿದೆ. ಕರ್ನಾಟಕದ ಜನತೆಗೆ ಜ್ಞಾನದ ಬಹುಮುಖತೆ ಲಭ್ಯವಾಗಿದೆ. ಮುಂದಿನ ಶತಮಾನಗಳಿಗಾಗಿ ನಾಡುನುಡಿಗಳನ್ನು ಸಜ್ಜುಗೊಳಿಸುವ ಮಹತ್ತ್ವದ ಹೊಣೆಗಾರಿಕೆಯನ್ನು ತಾವು ಅತ್ಯಂತ ಜವಾಬ್ದಾರಿಯಿಂದ ನಿರ್ವಹಿಸಿದ್ದೀರಿ. ನಾಡಿನ ಜನತೆ ಅದಕ್ಕಾಗಿ ತಮಗೆ ಋಣಿಯಾಗಿದೆ.

ಇವುಗಳನ್ನೆಲ್ಲ ಗಮನದಲ್ಲಿರಿಸಿಕೊಂದು 'ಮಣ್ಣಿನಮನದಲಿ ಹೊನ್ನನೆ ಬೆಳೆಯುವ ಅಪೂರ್ವ ತೇಜದ ಮಾಂತ್ರಿಕ'ರಾದ ತಮಗೆ ದೆಹಲಿ ಕರ್ನಾಟಕ ಸಂಘವು ಎರಡನೆಯ ಶಿವರಾಮ ಕಾರಂತ ಪ್ರಶಸ್ತಿಯನ್ನು ಅಭಿಮಾನಪೂರ್ವಕವಾಗಿ ನೀಡಿ ಗೌರವಿಸುತ್ತದೆ.

ಕೆ.ಆರ್, ನಾಗರಾಜ, ಅಧ್ಯಕ್ಷರು. ಎಚ್.ವೈ. ಶಾರದಾ ಪ್ರಸಾದ್, ಅಧ್ಯಕ್ಷರು, ಡಾ. ಶಿವರಾಮ ಕಾರಂತ ಪ್ರಶಸ್ತಿ ಸಮಿತಿ. ಎಸ್. ಕೃಷ್ಣ ಭಟ್, ಪ್ರಧಾನ ಕಾರ್ಯದರ್ಶಿ. ದಿನಾಂಕ ೬–೮–೨೦೦೧ ನವದೆಹಲಿ. ಶ್ರೀ ಅನಂತ ಕುಮಾರ್, ಕೇಂದ್ರ ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಸಚಿವರು.

ಬೆಂಗಳೂರು ಗಾಯನ ಸಮಾಜ ತನ್ನ ಶತಮಾನೋತ್ಸವ ಸಂದರ್ಭದಲ್ಲಿ ಮಾಡಿದ ಪ್ರಶಸ್ತಿ ವಾಚನ

ಮಾನ್ಯರೆ,

ಮಡಿಕೇರಿಯಲ್ಲಿ ೧೯೨೬ರಲ್ಲಿ ಜನಿಸಿದ ತಾವು ೧೯೪೨ರಲ್ಲಿ ಎಸ್ಸೆಸೆಲ್ಸಿ ತೇರ್ಗಡೆಯಾಗಿ ಮುಂದೆ ಮಂಗಳೂರು, ಮದರಾಸು ನಗರಗಳಲ್ಲಿ ಕಾಲೇಜು ಅಧ್ಯಯನವನ್ನು ಮುಂದುವರಿಸಿದಿರಿ. ೧೯೪೭ರಲ್ಲಿ ಗಣಿತ ಎಂಎ ಪದವೀಧರರಾಗಿ, ತರುವಾಯದ ಎರಡು ವರ್ಷ ಮದರಾಸಿನಲ್ಲಿ ಕಾಲೇಜ್ ಉಪನ್ಯಾಸಕರಾಗಿ ವೃತ್ತಿ ಜೀವನಾರಂಭ ಮಾಡಿದಿರಿ. ಮನೆಯೊಳಗೂ ಹೊರಗೂ ಸಂಗೀತ ಮತ್ತು ಸಾಹಿತ್ಯ ಪರಿಸರ ಮತ್ತು ಆ ದಿನಗಳ ಉತ್ತಮ ಮಟ್ಟದ ಶಿಕ್ಷಣ ತಮ್ಮಲ್ಲಿದ್ದ ಸುಪ್ತಪ್ರತಿಭೆಯನ್ನು ಜಾಗೃತಗೊಳಿಸಿ, ಸಾಹಿತ್ಯ ಮತ್ತು ಸಂಸ್ಕೃತಿಗಳ ಸೇವೆಯನ್ನು ಪ್ರೇರೇಪಿಸಿತು. ಸ್ವಭಾವತಃ ಇರುವ ವೈಜ್ಞಾನಿಕ ಮನೋಭಾವ ಮತ್ತು ಕನ್ನಡದ ಅಭಿಮಾನ ತಮ್ಮನ್ನು ಕನ್ನಡದಲ್ಲಿ ಜನಪ್ರಿಯ ವಿಜ್ಞಾನ ಲೇಖಕರಾಗಿ ರೂಪಿಸಿತು. ಸಂದರ್ಭಕ್ಕೆ ತಕ್ಕಂತೆ ಸ್ವಯಂ ಪ್ರೇರಣೆಯಿಂದ, ಅಂತರ್ವಾಣಿಯಿಂದ ರಚಿತವಾಗುವ

ಕವಿತೆಗಳು ತಮ್ಮ ಲೋಕಜ್ಞಾನದ ಪ್ರತೀಕ ಮತ್ತು ತಮ್ಮ ಪ್ರಬುದ್ಧತೆಯ ಇನ್ನೊಂದು ಮುಖ. ತಾವೇ ಒಂದು ಸಂದರ್ಭದಲ್ಲಿ ಹೇಳಿರುವಂತೆ, "ಸಂಗೀತವೆನ್ನುಸಿರು, ಸಾಹಿತ್ಯವೆನ್ನೊಡಲು, ವಿಜ್ಞಾನವೆನ್ನುಣಿಸು" ಎಂಬ ಮಾತು ಎಷ್ಟು ಸತ್ಯ ಎಷ್ಟು ಅರ್ಥಪೂರ್ಣ!

೧೯೬೯ರಲ್ಲಿ ಬೆಂಗಳೂರಿನಲ್ಲಿದ್ದ ತಮಗೆ ಮೈಸೂರು ವಿಶ್ವವಿದ್ಯಾನಿಲಯದಿಂದ ಬಂದ ಆಹ್ವಾನ ತಮ್ಮನ್ನು ಮೈಸೂರಿನ

ಶಾಶ್ವತವಾಸಿಗಳಾಗಿ ಮಾಡಿ ಸಂಗೀತ ಮತ್ತಿತರ ಕಲಾಪ್ರಕಾರಗಳಿಗೆ ಉಪಕಾರ ಮಾಡಿತು. ಉನ್ನತ ಮಟ್ಟದ ಸಂಗೀತ ಶ್ರವಣ, ಅಧ್ಯಯನಗಳಿಂದ ಪಕ್ವವಾಗಿದ್ದ ತಮಗೆ ಸಕ್ರಿಯವಾಗಿ ಇನ್ನೂ ಹೆಚ್ಚಿನ ಸೇವೆ ಸಲ್ಲಿಸುವ ಅವಕಾಶ ದೊರೆಯಿತು. ೧೯೭೮ರಲ್ಲಿ ಸ್ಥಾಪಿತವಾದ ಗಾನಭಾರತೀ ಸ್ವಯಂಸೇವಾ ಸಂಸ್ಥೆ ತಮ್ಮನ್ನು ಒಬ್ಬ ಗೌರವ ಪದಾಧಿಕಾರಿಯಾಗಿ ಬರಲು ಒಲವಿನ ಕರೆಯಿತ್ತು. ೧೯೮೦ರಲ್ಲಿ ಗೌರವ ಕೋಶಾಧಿಕಾರಿ ಹೊಣೆ ವಹಿಸಿತು. ಮುಂದಿನ ಹದಿನೈದು ವರ್ಷ ತಾವು ಈ ಜವಾಬ್ದಾರಿಯನ್ನು ಅತ್ಯಂತ ಶ್ರದ್ಧೆಯಿಂದ ನಿರ್ವಹಿಸಿದಿರಿ. ಈ ಅವಧಿಯಲ್ಲಿ ಇತರ ಸಮಿತಿ ಸದಸ್ಯರೊಡಗೂಡಿ ಧನ ಸಂಗ್ರಹಣೆ ಮಾಡಿ, ವೀಣೆ ಶೇಷಣ್ಣ ಭವನ ೧೯೯೧ರಲ್ಲಿ ಲೋಕಾರ್ಪಣೆಯಾಯಿತು. ಈ ನಿಟ್ಟಿನಲ್ಲಿ ತಮ್ಮ ಕಲಾಕೈಂಕರ್ಯವನ್ನು ನಾದಿನಾದ್ಯಂತ ಜನತೆ ಕೃತಜ್ಞತೆಯಿಂದ ನೆನೆಯುತ್ತದೆ.

ಸಂಗೀತಜ್ಞರೂ ಕಲಾವಿಮರ್ಶಕರೂ ಆದ ತಮ್ಮಿಂದ ಹಲವಾರು ಲೇಖನಗಳು ಪ್ರಕಟವಾಗಿವೆ. ತಮ್ಮ ಪಕ್ಷಪಾತರಹಿತ, ಮೌಲ್ಯಾಧಾರಿತ ಕಲಾ ವಿಮರ್ಶೆಗಳು ಅನೇಕ ಪತ್ರಿಕೆಗಳಲ್ಲಿ ಪ್ರಕಟವಾಗಿ ಜನಮನ್ನಣೆ ಗಳಿಸುತ್ತಿವೆ. ತಮ್ಮ ಸಾಹಿತ್ಯ, ವಿಜ್ಞಾನ, ಕಲಾಕ್ಷೇತ್ರಗಳ ಸೇವೆಗೆ ಹಲವಾರು ಪ್ರಶಸ್ತಿ, ಗೌರವಗಳು ಸಂದಿವೆ.

ಈ ರೀತಿ ಸಂಗೀತ ಕ್ಷೇತ್ರಕ್ಕೆ ಬಹುಮುಖ ಸೇವೆಯನ್ನು ಸಲ್ಲಿಸುತ್ತಿರುವ ತಮ್ಮನ್ನು ಬೆಂಗಳೂರು ಗಾಯನ ಸಮಾಜ ತನ್ನ ಶತಮಾನೋತ್ಸವ ವರ್ಷವನ್ನು ೮ನೇ ಮೇ ೨೦೦೫ರಂದು ಮೈಸೂರಿನಲ್ಲಿ ಆಚರಿಸುತ್ತಿರುವ ಸಂದರ್ಭದಲ್ಲಿ ವರ್ಷದ ಕಲಾವಿದರು ಎಂದು ಗೌರವಿಸಿ, ಸನ್ಮಾನಿಸಲು ಹೆಮ್ಮೆ ಪಡುತ್ತದೆ. ಕಲಾಧಿದೇವತೆಯಾದ ಶ್ರೀ ಶಾರದೆಯು ತಮಗೂ ತಮ್ಮ ಕುಟುಂಬ ವರ್ಗಕ್ಕೂ ಆಯುರಾರೋಗ್ಯ, ಐಶ್ವರ್ಯಾದಿಗಳನ್ನು ದಯಪಾಲಿಸಲಿ, ತಮ್ಮಿಂದ ಇನ್ನೂ ಹೆಚ್ಚಿನ ಕಲಾಸೇವೆ ನಡೆಯುವಂತೆ ಅನುಗ್ರಹಿಸಲಿ ಎಂದು ಹಾರೈಸುತ್ತೇವೆ.

ಗಾಯನ ಸಮಾಜದ ಪರವಾಗಿ ಎಚ್. ಕಮಲನಾಥ್, ಅಧ್ಯಕ್ಷರು, ಬೆಂಗಳೂರು ಮೈಸೂರು ೮ನೇ ಮೇ ೨೦೦೫

VIDWAN R.K. SRIKANTAN TRUST (Regd)
Bangalore
Felicitation address
Presented to
Shri G.T. Naryana Rao

Sir

You have been a noted art critic who has earned a wide reputation for your write-ups of high standard.

With your long stint as a respectable critic, you have obviously made your presence felt among the musical and dance fraternity.

It is a known fact that a critic in any art form has a significant role to play. A constructive criticism fair or unfair, irrespective of personal likes or dislikes, pressures and preferences is the need of the hour. Allowing nothing other than the dictates of your conscience influence your opinion you have indeed filled the bill appropriately as the true critic.

Your knowledge, courage and conviction gained as a result of your long association with and listening and viewing experience of music and dance performances have made your critical assessment purposeful and praise worthy.

By achieving excellence in your chosen field you have not only won many laurels personally but also served the world of music and dance with distinction.

So in due recognition of your splendid contribution to the cause of music, we are pleased to honour you on this auspicious occasion, on this day of 15-1-2005

We also pray for summons from the Almighty to bestow upon you long life and prosperity along with a fruitful career.

Yours

On behalf of the trust

Rudrapatnam S.Ramakanth

Managing Trustee

ಕೊಡಗುಜಿಲ್ಲಾ ೫ನೇ ಕನ್ನಡ ಸಾಹಿತ್ಯ ಸಮ್ಮೇಳನ
ಅಧ್ಯಕ್ಷ ಭಾಷಣ
ಅಧ್ಯಾಯ ೯೧

ತನು ಕನ್ನಡ, ಮನ ಕನ್ನಡ, ಧನ ಕನ್ನಡವೆಮ್ಮವು – ಮಂಜೇಶ್ವರ

ಪೀಠಿಕೆ

ನಲವತ್ತಮೂರು ವರ್ಷಗಳ ಹಿಂದೆ (೧೯೬೩) ಕೊಡಗಿನಿಂದ ಭೌತಿಕವಾಗಿ ದೂರಹೋದ ಒಬ್ಬ ಸಾಮಾನ್ಯನನ್ನು ಇಂದಿನ ಸ್ಥಳೀಯ ಚೇತನಗಳು ಗುರುತಿಸಿ ಗೌರವಿಸುತ್ತಿರುವುದು ನನ್ನ ಜೀವನದಲ್ಲಿ ಒಂದು ಅವಿಸ್ಮರಣೀಯ ಅನುಭವ. ಇಲ್ಲಿಯ ಸಹೃದಯ ಬಂಧುಗಳ ಔದಾರ್ಯಕ್ಕೆ ಕೃತಜ್ಞತೆಯಿಂದ ಶಿರಬಾಗಿ ಈ ಗಳಿಗೆಯಲ್ಲಿ ನನ್ನ ಮನದೊಳಗೆ ಮಿಡಿಯುತ್ತಿರುವ ಭಾವವನ್ನು ಅಭಿವ್ಯಕ್ತಿಸಲು ಮುಂದಿನ ಸಾಲುಗಳನ್ನು ವಾಚಿಸ ಬಯಸುತ್ತೇನೆ:

ಔದಾರ್ಯ ಸಹಜ ಗುಣ, ಅಭಿವ್ಯಕ್ತಿ ಪರಮ ಗುಣ
ಸೋದರತೆಯಂ ಪ್ರೇರಿಸುವ ದೇವ ಲಕ್ಷಣವೊ!
ನಾದುತಿರೆ ಬಾಳೆಂಬ ಚೂರ್ಣವನು ಕಾಯಕದಿ
ಬುದ್ಬುದಿಪ ಪೀಯೂಷಸಾರವದು ಅತ್ರಿಸೂನು

ವ್ಯಕ್ತಿಯ ತಂದೆ ತಾಯಿಯರ ಅಥವಾ ಜನನ ಸ್ಥಳದ ಆಯ್ಕೆ ಕುರಿತಂತೆ ಆತನಿಗೇನೂ ಸ್ವಾತಂತ್ರ್ಯವಿಲ್ಲ. ಅದು ನಿಸರ್ಗದ ಅಭೇದ್ಯ ರಹಸ್ಯಗಳ ಪೈಕಿ ಒಂದು. ಹುಟ್ಟಿದ ಬಳಿಕ ಆತನ ವಿಕಾಸದಲ್ಲಿ ಪ್ರಮುಖ ಪಾತ್ರ ವಹಿಸುವ ಪ್ರಭಾವಗಳು ಐದು: ಗೃಹಪರಿಸರ, ಶಿಕ್ಷಣ, ಸ್ಥಳೀಯ ಸಂಸ್ಕೃತಿ, ನಿಸರ್ಗ ಮತ್ತು ಸಮಕಾಲೀನತೆ.

ವ್ಯಕ್ತಿತ್ವದ ಪಂಚ ಧಾತುಗಳು

೧ **ಗೃಹಪರಿಸರ.** ತಂದೆ ಜಿ.ಎನ್. ತಿಮ್ಮಪ್ಪಯ್ಯ ಸಹಕಾರೀ ಇಲಾಖೆಯಲ್ಲಿ ಪರಿವೀಕ್ಷಕರು, ತಾಯಿ ವೆಂಕಟಲಕ್ಷ್ಮಮ್ಮ ಗೃಹಿಣಿ. ಇವರ ಒಬ್ಬ ಮಗನಾಗಿ ದಿನಾಂಕ ೩೦–೧–೧೯೨೬ರಂದು ಜನಿಸಿದೆ. ಮಧ್ಯಮವರ್ಗದ ಅವಿಭಕ್ತ ಕುಟುಂಬ. ಕರ್ಮಠ ಬ್ರಾಹ್ಮಣ ಸಂಪ್ರದಾಯವಾದರೂ ಜಾತಿ, ಮತ, ಕುಲ, ಗೋತ್ರ ಮುಂತಾದ ಯಾವುದೇ ಮನುಷ್ಯಕೃತ ದಿಗ್ಬಂಧನಗಳನ್ನು ಮೀರಿ ಎಲ್ಲರನ್ನೂ ಪ್ರೀತಿಸಿ ಯಥಾಶಕ್ತಿ ಆದರಿಸಿ ಉಪಚರಿಸುವ ಮನೋಧರ್ಮ,

ಇಂದಿನ ಪರಿಭಾಷೆಯಲ್ಲಿ ಹೇಳುವುದಾದರೆ truly secular. ನಾನು ಕಣ್ತೆರೆಯುತ್ತಿದ್ದ ದಿನಗಳಂದು ನಮ್ಮ ಮನೆಯೊಂದು ಅನ್ನ ಸತ್ರವೇ ಆಗಿತ್ತು. ಮುತ್ತಜ್ಜ (ಹಿರಿಯ) ಎ.ಪಿ. ಸುಬ್ಬಯ್ಯ (ಆಗಲೇ ೮೦ನ್ನು ದಾಟಿದ್ದರು) ವೇದಪಾರಂಗತ, ಅಜ್ಜಿ ದೇವಮ್ಮ ಶಾಸ್ತ್ರೀಯ ಸಂಗೀತ ನಿಷ್ಣಾತೆ, ತಾಯಿ ಕನ್ನಡ ಸಾಹಿತ್ಯಾಸಕ್ತೆ, ತಂದೆ ಸಂಗೀತಪ್ರಿಯ, ಚಿಕ್ಕಪ್ಪ ಜಿ.ಎನ್. ರಾಮಚಂದ್ರರಾವ್ ನಿರಂತರ ಪ್ರಯೋಗಶೀಲ ವಿಚಾರಮತಿ. ಇನ್ನು ತಾಯಿಯ ತವರಿನಲ್ಲಿ (ಪುತ್ತೂರು) ಸೋದರಮಾವ (ಕಿರಿಯ) ಎ.ಪಿ. ಸುಬ್ಬಯ್ಯ ಬಹುಶ್ರುತ ಮತ್ತು ಬಹ್ವಾಸಕ್ತಿಯ ಕೃಷಿಕ ಮತ್ತು ಸಾಹಿತಿ.

೨ ಶಿಕ್ಷಣ. ಅಂದಿನ ಸೆಂಟ್ರಲ್ ಹೈಸ್ಕೂಲಿನಲ್ಲಿ (ಇಂದು ಸರಕಾರೀ ಪದವಿಪೂರ್ವ ಕಾಲೇಜಿರುವ ನಿವೇಶನ) ನಾನು ಬಾಲಶಿಕ್ಷೆಯಿಂದ (ಕೆಜಿ) ಎಸ್ಸೆಸೆಲ್ಸಿವರೆಗೆ ೧೧ ವರ್ಷ ಪರ್ಯಂತ ಓದಿದೆ. ಪ್ರಾಚೀನ ಗುರುಕುಲವನ್ನು ನೆನಪಿಗೆ ತರುವಂತಿತ್ತು ಅಲ್ಲಿಯ ಪರಿಸರ, ಪಾಠಕ್ರಮ ಮತ್ತು ಜ್ಞಾನದಾಸೋಹ. ಶಿಕ್ಷಣ ವಿಧಾನ ಈ ಮುಂದಿನ ಋಷಿವಾಕ್ಯಕ್ಕೆ ಬರೆದ ಭಾಷ್ಯವಾಗಿತ್ತು:

ವಿಶ್ವಗರ್ಭಿತ ಸತ್ಯ ಕಂಡವನು ನೈಜ ಋಷಿ
ಋಷಿ ಕಂಡ ಸತ್ಯಕ್ಕೆ ವ್ಯಾಖ್ಯಾನ ಬರೆವಾತ ಆಚಾರ್ಯ
ಆಚಾರ್ಯ ಸೂಕ್ತಿಗಳ ಬೋಧಕನು ಶ್ರೇಷ್ಠ ಗುರು
ಗುರುಬೋಧನೆಗೆ ಪಾತ್ರನಾದವನು ಪ್ರಿಯ ಶಿಷ್ಯ
ಶಿಷ್ಯ ಋಷಿಯಾಗುವುದು ಋಜುವಿದ್ಯೆ

ಇಂಥ ಉನ್ನತ ಪರಿಸರದಲ್ಲಿ ಮತ್ತು ಉತ್ಕೃಷ್ಟ ಮಟ್ಟದಲ್ಲಿ ವಿದ್ಯಾಭ್ಯಾಸ. ಅಂದು ನನ್ನ ಮೇಲೆ ವಿಶೇಷ ಪ್ರಭಾವ ಬೀರಿ ಭವಿಷ್ಯವನ್ನು ಟಂಕಿಸಿದವರು ಮುಖ್ಯವಾಗಿ ಐದು ಮಂದಿ ಪ್ರಾತಃಸ್ಮರಣೀಯರು: ಜಿ.ಎಸ್. ಕೇಶವಾಚಾರ್ಯ (ಕನ್ನಡ), ಎ.ಪಿ. ಶ್ರೀನಿವಾಸರಾವ್ (ವಿಜ್ಞಾನ), ಆರ್. ಹರಿ ಶೆಣೈ (ಗಣಿತ), ಪಿ.ಸಿ. ಉತ್ತಯ್ಯ (ಇಂಗ್ಲಿಷ್) ಮತ್ತು ಒಂದನೆಯ ಮಹಾಯುದ್ಧದ ಯೋಧ ಬಿ.ಎಂ. ಬಿದ್ದಯ್ಯ (ಕವಾಯತಿ). ಶಿಕ್ಷಣ ಮಾಧ್ಯಮ ಪ್ರೌಢಶಾಲಾಮಟ್ಟದವರೆಗೆ (ಅಂದರೆ ಮೊದಲ ೮ ವರ್ಷ ಪರ್ಯಂತ) ಕನ್ನಡ, ಪ್ರೌಢಶಾಲೆಯಲ್ಲಿ (ಕೊನೆಯ ೩ ವರ್ಷ) ಇಂಗ್ಲಿಷ್. ಇಂಗ್ಲಿಷ್ ಭಾಷಾಪಾಠ ಮೂರನೆಯ ತರಗತಿಯಲ್ಲಿ ಮೊದಲ ಬಾರಿಗೆ ಆರಂಭವಾಯಿತು. ಪಾಠ ಪುಸ್ತಕಗಳು ಉತ್ತಮ ಗುಣ ಮಟ್ಟದವು. ಉಪಾಧ್ಯಾಯರೆಲ್ಲರೂ ನಿಷ್ಠೆಯಿಂದ ನಮಗೆ ವಿದ್ಯೆ ಬೋಧಿಸಿದರು. ಹೀಗೆ ಮನೆ ಮತ್ತು ಶಾಲೆ ಒಟ್ಟಾಗಿ ನನ್ನಲ್ಲಿ ಸಂಗೀತ ಪ್ರೇಮವನ್ನೂ ಸಾಹಿತ್ಯ ಪ್ರೀತಿಯನ್ನೂ ವಿಜ್ಞಾನಾಸಕ್ತಿಯನ್ನೂ ಬಿತ್ತಿದುವು. ಎಂದೇ ವಯಸ್ಸು ೭೦ ತುಂಬಿದಾಗ ಬರೆದೆ, “ಸಂಗೀತವೆನ್ನುಸಿರು, ಸಾಹಿತ್ಯವೆನ್ನೊಡಲು, ವಿಜ್ಞಾನವೆನ್ನಶನ.” ಆ ಸುಮಾರಿಗೆ, ಪ್ರಾಯಶಃ ೧೯೩೨ರಲ್ಲಿ, ಅಖಿಲ ಕರ್ನಾಟಕ ಕನ್ನಡ ಸಾಹಿತ್ಯ ಸಮ್ಮೇಳನ ನಮ್ಮ ಶಾಲೆಯ ಆವರಣದಲ್ಲಿ ವಿಜೃಂಭಣೆಯಿಂದ ಜರಗಿತು. ನಾನಾಗ ಕೇವಲ ೬ ವರ್ಷದ ಹುಡುಗ. ಡಿ.ವಿ. ಗುಂಡಪ್ಪನವರು ಸಮ್ಮೇಳನಾಧ್ಯಕ್ಷರು. ಯುವ ಕವಿ ಕುವೆಂಪು ತಮ್ಮ ನವ ಭಾವದ, ಹೊಸ ಧಾಟಿಯ, ಚಿರ ನೂತನ ಕವನಗಳನ್ನು ಹಾಡಿ ಕಿಂದರಿಜೋಗಿಯ ಮೋಡಿಯನ್ನು ಇಡೀ ಸಭೆಯ ಮೇಲೆ ಬೀರಿದ ದೃಶ್ಯ ಕಣ್ಣಿಗೆ ಕಟ್ಟಿದಂತಿದೆ: ಮೈನವಿರೆದ್ದಿತು, ಮಿಂಚಿನ ಹೊಳೆ ತುಳುಕಾಡಿದುದು! ಆ ಕವನಗಳು ಅಂದು ನನಗೆ ಅರ್ಥವಾಗದಿದ್ದರೂ ಅವು ನೀಡಿದ ಪ್ರೇರಣೆ ನನ್ನ ಎದುರೊಂದು ಆದರ್ಶ ಬಿಂಬಿಸಿತ್ತು: “ನುಡಿದರೆ ಮುತ್ತಿನ ಹಾರದಂತಿರಬೇಕು,” ಅಂದರೆ ಕುವೆಂಪು ಅವರ ಅಸ್ಖಲಿತ ಶೈಲಿಯಲ್ಲಿರಬೇಕು. ಈ ಕನಸು ಮುಂದೆ ೧೯೬೯ರಲ್ಲಿ ಕವಿವರೇಣ್ಯರ ಮೂಲಕವೇ ನನಸಾದ್ದೊಂದು ವಿಸ್ಮಯ. ‘ಕುವೆಂಪು ದರ್ಶನ ಸಂದರ್ಶನ’ (೨೦೦೪) ಎಂಬ ಪುಸ್ತಕದಲ್ಲಿ ಇದನ್ನು ಚಿತ್ರಿಸಿದ್ದೇನೆ.

೩ ಸ್ಥಳೀಯ ಸಂಸ್ಕೃತಿ. ಅಂದು ಕೊಡಗು ಭೌಗೋಲಿಕವಾಗಿ ಮಾತ್ರವಲ್ಲ, ಆಡಳಿತ ಮತ್ತು ಸಾಂಸ್ಕೃತಿಕ ವೈಶಿಷ್ಟ್ಯ ಕುರಿತಂತೆ ಕೂಡ ಒಂದು ವಿಸ್ತೃತ ಗ್ರಾಮವಾಗಿತ್ತು. ಪಂಜೆ ಮಂಗೇಶರಾಯರ (ಇವರು ಸೆಂಟ್ರಲ್ ಹೈಸ್ಕೂಲಿನ ಪ್ರಥಮ ಭಾರತೀಯ ಮುಖ್ಯೋಪಾಧ್ಯಾಯರು) ಅಮರ ನುಡಿಗಳಲ್ಲಿ ಇದು ಬಿಂಬಿತವಾಗಿದೆ:

ಒಮ್ಮತವು ಒಗ್ಗಟ್ಟು ಒಂದೇ ಮನವು ಎಲ್ಲಿದೆ ಹೇಳಿರಿ?
ಸುಮ್ಮನಿತ್ತರೊ ದಟ್ಟಿ ಕುಪ್ಪಸ? ಹಾಡು ಹುತ್ತರಿಗೇಳಿರಿ!
ಚಿಮ್ಮಿ ಪಾತುರೆ ಕೋಲ ಹೊಯ್ಲಿಗೆ ಕುಣಿವ ಪದ ಹೊರಹೊಮ್ಮಲಿ!
ಅಮ್ಮೆ ಹಾಸಿದ ಸೀಮೆ ನಮಗಿದು ಇರಲಿ ನಮ್ಮದೆ ನಮ್ಮಲಿ!
ನೆಮ್ಮದಿಯನಿದು ತಾಳಲಿ!
ಅಮ್ಮೆಯಾ ಬಲ ತೋಳಲಿ!
ನಮ್ಮ ಕೊಡಗಿದು ಬಾಳಲಿ!

ಕೊಡಗಿನ ವೈಶಿಷ್ಟ್ಯ ಏನು! ಪುನಃ ಪಂಜೆಯವರ ನುಡಿಗಳಲ್ಲಿ 'ಬೊಮ್ಮಗಿರಿಯಿಂ ಪುಷ್ಪಗಿರಿ ಪರ್ಯಂತ ಬೆಳೆದೀ ದೇಶ,' 'ಇದು ಅಗಸ್ತ್ಯನ ತಪದ ಮಣೆ ಕಾವೇರಿ ತಾಯ ತವರ್ಮನೆ.' ಪ್ರಾಮಾಣಿಕ ವ್ಯವಹಾರ, ದಾನಧರ್ಮ ಪರಂಪರೆ, ಕಷ್ಟ ಸಹಿಷ್ಣುತೆ, ಅನ್ಯೋನ್ಯ ಪ್ರೀತಿ ವಿಶ್ವಾಸ ಮುಂತಾದ ಸದ್ಗುಣಗಳು ಅಂದಿನ ಜೀವನದ ಪ್ರಮುಖ ರೇಖೆಗಳಾಗಿದ್ದುವು. ಡಿವಿಜಿಯವರ ನುಡಿಗಳಲ್ಲಿ,

ಗಿರಿಗಳ ಕಂದರಗಳ ನಿ–
ರ್ಝರಗಳ ವಿಪಿನಗಳ ವಕ್ರಪಥಗಳ ದರ ಸುಂ–
ದರ ಶಮಕರ ರೂಪಂಗಳ–
ನರಿವೊಡೆ ನೀಂ ನಡೆದು ನೋಡು ಕೊಡಗಿನ ಬೆಡಗಂ

ಇದನ್ನು ಕೇಳಿದ ಶಿವರಾಮ ಕಾರಂತರು ಒಡನೆ ಉದ್ಗರಿಸಿದರಂತೆ, "ಒಡೆದು ನೋಡು ನೀಂ ಕೊಡಗಿನ ಕಡುಬಂ!" ಎರಡೂ ನಿಜ. ಬಾಳೆ ಎಲೆಯ ಸುರುಳಿ ಒಳಕ್ಕೆ ಹಿಟ್ಟು ಹೊಯ್ದು ಹಬೆಯಲ್ಲಿ ಬೇಯಿಸಿ ಬಡಿಸುತ್ತಿದ್ದ ಕಡುಬಿನ ಒಂದೊಂದು ತುಣುಕೂ ಸಾಕ್ಷಾತ್ ಭೀಮನ ಗದೆಯೇ! ಕೊಡಗಿನವರ ಬಾಳ ಹಿರಿಮೆಗೆ ಹಿಡಿದ ಕನ್ನಡಿ ಡಿವಿಜಿಯವರ ಈ ಸಾಲುಗಳು:

ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು
ಕಲ್ಲಾಗು ವಿಧಿ ಕಷ್ಟಗಳ ಮಳೆಯ ಸುರಿಯೆ
ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ
ಎಲ್ಲರೊಳಗೊಂದಾಗು ಮಂಕುತಿಮ್ಮ

ಅಲ್ಲಿಯ ತನಕ ಗುಪ್ತವಾಗಿ ಪ್ರವಹಿಸುತ್ತಿದ್ದ ಕೊಡಗಿನ ಸಾಂಸ್ಕೃತಿಕ ಅಂತರಗಂಗೆ ಸಾಂಸ್ಥಿಕ ರೂಪ ಪಡೆದು ಪ್ರಕಟವಾಗಲು ಆ ಸಮ್ಮೇಳನ ಮುಖ್ಯ ಕಾರಣವಾಯಿತೆಂದು ಭಾವಿಸಿದ್ದೇನೆ: ಕೊಡಗು ಕರ್ನಾಟಕ ಸಂಘ ಮೈದಳೆಯಿತು, ಮೈ.ಶೇ. ಅನಂತಪದ್ಮನಾಭರಾವ್, ಜಿ.ಎಸ್. ಕೇಶವಾಚಾರ್, ಬಿ.ಡಿ. ಗಣಪತಿ. ಚೆಕ್ಕೆರ ಅಪ್ಪಯ್ಯ, ಕಟ್ಟಿಗೆ ಸುಬ್ರಾಯ ಮೊದಲಾದ ಯುವ ಪ್ರತಿಭೆಗಳು ರಂಗ ಪ್ರವೇಶಿಸಿದುವು.

ಸ್ವತಃ ಗಮಕಿ ಮತ್ತು ಕವಿಯಾಗಿದ್ದ ಮೈಶೇಯವರು ಅಂದು ಬಾರಿಸಿದ ಕನ್ನಡ ಡಿಂಡಿಮ ಅಪೂರ್ವವಾದದ್ದು. ಶ್ರೀಯುತರು ನನ್ನ ತಂದೆಯವರ ಸಹಪಾಠಿ, ಸರ್ಕಾರೀ ನೌಕರ, ದೊಡ್ಡ ಸಂಸಾರ, ನೂರಾರು ಆಸಕ್ತಿ, ಎಂದೂ ಹಿಂಗದ, ಬದಲು ಸದಾ ವರ್ಧಿಸುತ್ತಿದ್ದ, ಉತ್ಸಾಹ. ಮನೆಯಲ್ಲೇ ಮುಂಜಾನೆ ಮತ್ತು ಸಂಜೆ ಗಮಕ ಶಿಕ್ಷಣವಿತ್ತು "ಕುಮಾರವ್ಯಾಸನು ಹಾಡಿದನೆಂದರೆ ಕಲಿಯುಗ ದ್ವಾಪರವಾಗು"ವ ಮೋಡಿಯನ್ನು ಶ್ರೋತೃಗಳ ಮೇಲೆ ಬೀರುತ್ತಿದ್ದ ಕನ್ನಡದ ಡಿಂಗರಿಗರು. ಇವರ ಮನೆಯಲ್ಲೇ ಕರ್ನಾಟಕ ಸಂಘದ ಗ್ರಂಥ ಭಂಡಾರವೂ ಇತ್ತು. ಇದರಿಂದ ಓದಲು ಪುಸ್ತಕ ತೆಗೆದುಕೊಂಡು ಹೋಗುತ್ತಿದ್ದ ನನ್ನ ಮೇಲೆ ಮೈಶೇಯವರು ಬೀರಿದ ಪ್ರಭಾವ ಅವರ್ಣನೀಯ. ಪ್ರಾಯಶಃ ಹನ್ನೆರಡರ ಹರೆಯದ ನಾನು ಆ ತನಕ ಹುಚ್ಚಾಬಟ್ಟೆ ಗೀಚಿದ್ದ ಪದ್ಯಗಳನ್ನೊಮ್ಮೆ ನೋಡಿದ ಇವರು ನನಗೆ ಛಂದಶ್ಶಾಸ್ತ್ರವನ್ನು ಬೋಧಿಸಿ ನನ್ನ ಹುಚ್ಚು ಹೊನಲಿಗೊಂದು ಹಾದಿ ಕಾಣಿಸಿದರು. ಅಂದು ನಾನು 'ಕನ್ನಡ ಕುವರ' ಎಂಬ ಗುಪ್ತನಾಮದಿಂದ ಅಸಂಖ್ಯ ಕವನಗಳನ್ನು ಬರೆದು, ಅವು ಪತ್ರಿಕೆಗಳಲ್ಲಿ ಪ್ರಕಟವೂ ಆದುವು. ಹೆಚ್ಚಿನವು ಕುಮಾರವ್ಯಾಸ ಇಲ್ಲವೇ ಕುವೆಂಪು ಅವರ ಅನುಕರಣೆಗಳು! ಹೀಗೆ ಮೈಶೇಯವರು ನನ್ನ ಪರೋಕ್ಷ ಗುರುಗಳು.

ಇನ್ನು ಕೇಶವಾಚಾರ್ಯರಂತೂ ನನ್ನ ವಿದ್ಯಾಗುರುಗಳು. ಗಣಪತಿಯವರ 'ಕೊಡಗು' ವಾರಪತ್ರಿಕೆಯ ಉಪಸಂಪಾದಕ, ತತ್ತ್ವಶಾಸ್ತ್ರಜ್ಞ, ಉತ್ತಮ ಲೇಖಕ ಮತ್ತು ವಾಗ್ಮಿ. ಇವರು ನನ್ನ ಹುಚ್ಚು ಬರೆಹಗಳನ್ನು ನೇರ್ಪುಗೊಳಿಸಿ ತಮ್ಮ ಪತ್ರಿಕೆಯಲ್ಲಿ ಮುದ್ರಿಸಿ ನನ್ನನ್ನು ಪ್ರೋತ್ಸಾಹಿಸಿದರು. ಸಂಗೀತವೆನ್ನುಸಿರು ಎಂದೆ. 'ಕೂರ್ಗ್ ಸ್ಟಾರ್' ಬಿರುದಾಂಕಿತ ಚೆಕ್ಕೆರ ಅಪ್ಪಯ್ಯ ಮತ್ತು ಗಮಕಿ ಹಾಗೂ ಹರಿಕಥಾಪ್ರವೀಣ ಸುಬ್ರಾಯರು ನನ್ನ ಸಂಗೀತಾಸಕ್ತಿಗೆ ಸಾಕಷ್ಟು ಪೋಷಣೆಯಿತ್ತ ಮಹಾನುಭಾವರು. ಆಂಜನೇಯನ ಗುಡಿ ಮತ್ತು ವೇದಾಂತ ಸಂಘ ಅಂದು ಮಡಿಕೇರಿಯ, ವ್ಯಾಪಕವಾಗಿ ಕೊಡಗಿನ ಕೂಡ, ಸಾಂಸ್ಕೃತಿಕ ಚಟುವಟಿಕೆಗಳ ಜೇನುಗೂಡುಗಳಾಗಿದ್ದುವು.

ಬಿಎಂಶ್ರೀ, ಮಾಸ್ತಿ, ವಿಸೀ, ಕಾರಂತ, ಗೊರೂರು, ವೆಂಕಟರಾಮಯ್ಯ, ರಾಜರತ್ನಂ, ಮುಳಿಯ, ಕಡೆಂಗೋಡ್ಲು, ರಾಶಿ, ವೆಂಕಟರಾಮಪ್ಪ, ಪರಮೇಶ್ವರ ಭಟ್ಟ, ಕಸ್ತೂರಿ ಮೊದಲಾದ ಉದ್ದಾಮ ಪಂಡಿತ–ವಾಗ್ಮಿಗಳ ಉಪನ್ಯಾಸಗಳು, ಬೇಲೂರು ಕೇಶವದಾಸ ಮತ್ತು ಕೃಷ್ಣಗಿರಿ ಕೃಷ್ಣರಾಯರ ಗಮಕವಾಚನ–ಪ್ರವಚನಗಳು, ಆಗ ಈಗ ಏರ್ಪಾಡಾಗುತ್ತಿದ್ದ ಶಾಸ್ತ್ರೀಯ ಸಂಗೀತ ಬೈಠಕ್ಕುಗಳು, ಸ್ವಾತಂತ್ರ್ಯಾಂದೋಳನ ಸಂಬಂಧವಾದ ಸಭ್ಯ ಭಾಷಣಗಳು ಮುಂತಾದವು ಅಂದು ಮಡಿಕೇರಿಯ ನೈಸರ್ಗಿಕ ಸೌಂದರ್ಯಕ್ಕೆ ತೊಡಿಸಿದ ಚೆಲುವಾದ ಒಡವೆಗಳಾಗಿದ್ದುವು. ಇಂಥ ಪರಿಸರದಲ್ಲಿಯ ಜೇನನ್ನು ಯಥೇಚ್ಛವಾಗಿ ಸವಿದು ಸುಪುಷ್ಟನಾಗುವ ಭಾಗ್ಯ ನನ್ನದಾಗಿತ್ತು.

೪ ನಿಸರ್ಗ. ಕೊಡಗಿನ ಬೆಟ್ಟ ಕಾಡುಗಳು, ಕಣಿವೆ ತೆಮರುಗಳು, ಗದ್ದೆ ತೋಟಗಳು, ಕೆರೆ ತೊರೆ ಹೊಳೆಗಳು ಮುಂತಾದವು ಮಂಜೇಶ್ವರದ 'ಕನ್ನಡಿಗರ ತಾಯಿ' ಹಾಡನ್ನು ನೆನಪಿಗೆ ತರುತ್ತವೆ. ಆಯ್ದ ಕೆಲವು ಸಾಲುಗಳು:

ಹಣ್ಣನೀವ ಕಾಯನೀವ ಪರಿಪರಿಯ ಮರಗಳೊ
ಪತ್ರಮೀವ ಪುಷ್ಪಮೀವ ಲತೆಯ ತರತರಂಗಳೊ
ಅಲೆಯ ಮಲೆಯ ಗಾಳಿಯೊ
ಖಗಮೃಗೋರಗಾಳಿಯೊ
ನದಿನಗರನಗಾಳಿಯೊ
ಇಲ್ಲಿಲ್ಲದುದುಳಿದುದೆ?
ಜೇನು ಸುರಿವ ಹಾಲು ಹರಿವ ದಿವಂ ಭೂಮಿಗಿಳಿದುದೆ?

ಇಲ್ಲಿಯ ಋತುಗಳು ಕೇವಲ ಎರಡು: ಮಳೆಗಾಲ, ಚಳಿಗಾಲ! ಮನೆ ಹಿಂದೆ ಮುಂದೆ ಗುಡ್ಡೆ ಅಥವಾ ಕೊರಕಲು, ಸುತ್ತಲೂ ಬಾನತ್ತ ಚಾಚಿರುವ ಬೆಟ್ಟಗಳ ಸಾಲು. ಇಂಥ ನೈಸರ್ಗಿಕ ಪರಿಸರದಲ್ಲಿಯ ಬಾಳ್ವೆ, ಆಧುನಿಕ ಸೌಕರ್ಯಗಳಿರದಿದ್ದ ಆ ದಿನಗಳಂದು, ಸಮಾಜದ ಎದುರೊಡ್ಡಿದ ಸವಾಲು ಇಲ್ಲಿಯ ಜನರ ಜೀನ್‌ಗಳಲ್ಲಿ ವಿಶಿಷ್ಟ ಛಾಪು ಒತ್ತಿದೆ. ಸವಾಲನ್ನು ಎದುರಿಸುವ ಛಲ, ಸಮೃದ್ಧ ಸಹಜೀವನ ಮತ್ತು ಅಪಾರ ನಿಸರ್ಗ ಪ್ರೇಮ ಇದರ ಮುಖ್ಯ ಗುಣಗಳು. ಕೊಡಗಿನಲ್ಲಿ ಬಾಳಿದವನು ಎಲ್ಲಿಯೂ ಬಾಳಿಯಾನು ಎಂಬ ನಾಣ್ಣುಡಿಯ ಹಿನ್ನೆಲೆ ಈ ಗುಣಗಳಲ್ಲಿದೆ. "ಮರ್ತ್ಯ ಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ: ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ" (ಬಸವಣ್ಣ).

೫ ಸಮಕಾಲೀನತೆ. ದಾಸರಾಷ್ಟ್ರವಾಗಿದ್ದ ಭಾರತ ಅಂದು – ೧೯೩೦ರ ದಶಕದಲ್ಲಿ – ಸುದೀರ್ಘ ಮಂಪರು ತೊರೆದು ಸ್ವತಂತ್ರವಾಗುವ ಸನ್ನಾಹದಲ್ಲಿತ್ತು. ಗಾಂಧೀಜಿಯವರ ದರ್ಶನ ಇಲ್ಲಿಯೇ ರಾಜಾಸೀಟಿನ ಮೈದಾನದಲ್ಲಿ (ಈಗ ಅಲ್ಲಿ ಗಾಂಧೀ ಮಂಟಪವಿದೆ) ನಮಗಾಯಿತು. ಪಂದ್ಯಂಡ ಬೆಳ್ಯಪ್ಪ, ಬಿ.ಕೆ. ನಂಜುಂಡೇಶ್ವರ, ಸಿ.ಎಂ. ಪೂಣಚ್ಚ, ಕೊಳ್ಳಿಮಾಡ ಕರುಂಬಯ್ಯ ಮೊದಲಾದವರ ಹಿರಿತನದಲ್ಲಿ ಸ್ವಾತಂತ್ರ್ಯ ಚಳುವಳಿ 'ಆಕುಟ್ಟ ಕೊಡ್ಲೀಪೇಟೆ' ಹಬ್ಬಿತು. ಎಳೆಯರಾದ ನಾವು ನಾಳಿನ ಆ ಹೊಂಗನಸು ಕಾಣುತ್ತ ಇಂದಿನ ಬವಣೆಗಳನ್ನು ಮರೆತೆವು. ಕ್ರೂರ ಹಿರಣ್ಯನ ಎದುರು ಸೆಟೆದು ನಿಲ್ಲುವ ಬಾಲಕ ಪ್ರಹ್ಲಾದನ ಅದಟು ನಮ್ಮ ವ್ಯಕ್ತಿತ್ವದ ಒಂದು ಭಾಗವಾಯಿತು.

ಸಂಕ್ಷೇಪವಾಗಿ ಹೇಳುವುದಾದರೆ, ಪರಿಸರದ ಶಿಸುವಾದ ವ್ಯಕ್ತಿ ಲಭ್ಯ ಅವಕಾಶಗಳನ್ನು ಕೆಚ್ಚಿನಿಂದ ಸ್ವೀಕರಿಸಿ ಧರ್ಮನಿಷ್ಠವಾಗಿ ವಿನಯ ಮಾರ್ಗದಲ್ಲಿ ಮುನ್ನಡೆಯುವುದರಲ್ಲೇ ಆತನ ಮತ್ತು ಸಮಾಜದ ಪ್ರಗತಿ ಇದೆ ಎಂಬುದು ನನ್ನ ಅನುಭವ.

ಆ ದಿನಗಳಂದು ಕೊಡಗಿನಲ್ಲಿ ಸಾಹಿತ್ಯ ದೀವಟಿಗೆಯನ್ನು ಪ್ರೀತಿಯಿಂದ ಮೇಲೆತ್ತಿ ಬೆಳಕು ಬೀರಿ ಕೊಡಗಿಗೆ ಹೆಸರು ತಂದಿದ್ದ ಇತರರ ಹೆಸರುಗಳನ್ನು (ಇವರೆಲ್ಲರೂ ನನಗಿಂತ ಎಷ್ಟೋ ಹಿರಿಯರು) ನೆನಪಿನಿಂದ ಉಲ್ಲೇಖಿಸ ಬಯಸುತ್ತೇನೆ: 'ಪಟ್ಟೋಲೆ ಪಳಮೆ' ಖ್ಯಾತಿಯ ನಡಿಕೇರಿಯಂಡ ಚಿಣ್ಣಪ್ಪ, ಕೊಡವ ಭಾಷೆಯಲ್ಲಿ ನಾಟಕ ರಚಿಸಿದ ಹರದಾಸ ಅಪ್ಪಚೆಟ್ಟೋಳಂಡ ಅಪ್ಪಚ್ಚ ಕವಿ, ಆಶುಕವಿ – ಗಾಯಕ ವೆಂಕಟಾದ್ರಿ ಶ್ಯಾಮರಾಯ, ಕತೆಗಾರ್ತಿ ಕೋಟೇರ ಪದ್ಮಾವತಿ ಚಿಣ್ಣಪ್ಪ, ಕತೆಗಾರ್ತಿ ಕೊಡಗಿನ ಗೌರಮ್ಮ, ಕಾದಂಬರಿಕಾರ ಭಾರತೀಸುತ, ಇತಿಹಾಸ ಸಂಶೋಧಕ ಡಿ.ಎನ್. ಕೃಷ್ಣಯ್ಯ, ಬಹುಶ್ರುತ ವಿದ್ವಾಂಸ – ಲೇಖಕ ಐ.ಮಾ. ಮುತ್ತಣ್ಣ, ನನಗೆ ಪ್ರಥಮವಾಗಿ ಕನ್ನಡ ಕಲಿಸಿ ಬರವಣಿಗೆಯ ಹುಚ್ಚು ಹಿಡಿಸಿದ ಗುರು–ಲೇಖಕ ಎನ್.ಎಸ್. ರಾಮಚಂದ್ರ, ಪ್ರೌಢಶಾಲೆಯ ಮಟ್ಟದಲ್ಲಿ ಗಣಿತ ಮತ್ತು ವಿಜ್ಞಾನ ವಿಷಯಗಳ ಮೇಲೆ ಪಠ್ಯಪುಸ್ತಕಗಳನ್ನು ಬರೆದು, ಬರೆಸಿ ಮತ್ತು ಸಂಪಾದಿಸಿ ಪ್ರಕಟಿಸಿದ ಎಂ.ಎಸ್. ಸುಬ್ರಾಯ ಮೊದಲಾದವರು ಕಟ್ಟಿದ ಪಂಚಾಂಗವೇನೂ ಸಾಮಾನ್ಯವಾದದ್ದಲ್ಲ. ಇದರ ಮೇಲೆ ನಿಂತ ಅನೇಕ ಪ್ರತಿಭಾನ್ವಿತರ ಪೈಕಿ "ಎನಗಿಂತ ಕಿರಿಯರಿಲ್ಲ" ಎಂಬ ಅರಿವು ನನಗುಂಟು.

ನನ್ನ ಈ ನಿವೇದನ ಭಾವಕ್ಕೆ ಕವಿ ಜಿ.ಎಸ್. ಶಿವರುದ್ರಪ್ಪನವರು (ನನ್ನದೇ ವಯಸ್ಸು) ತಮ್ಮ 'ಶ್ರೀ ಕುವೆಂಪು ಅವರಿಗೆ' – ಕವನದಲ್ಲಿ ಚೆಲುವಾದ ನುಡಿಯೊಡಲನಿತ್ತಿದ್ದಾರೆ:

ನಿಶ್ಶಬ್ದದಲ್ಲಿ ನಿಂತು ನೆನೆಯುತ್ತೇನೆ
ನಿಮ್ಮಿಂದ ನಾ ಪಡೆದ ಹೊಸ ಹುಟ್ಟುಗಳ, ಗುಟ್ಟುಗಳ!
ಎಷ್ಟೊಂದು ಕೀಲಿ ಕೈಗಳನು ದಾನ ಮಾಡಿದ್ದೀರಿ
ವಾತ್ಸಲ್ಯದಿಂದ; ನಾನರಿಯದನೇಕ
ಬಾಗಿಲುಗಳನು ತೆರೆದಿದ್ದೀರಿ ನನ್ನೊಳಗೆ;
ಕಟ್ಟಿ ಹರಸಿದ್ದೀರಿ ಕನ್ನಡದ ಕಂಕಣವನ್ನು ಕೈಗೆ,
ನಕ್ಷತ್ರ ಖಚಿತ ನಭವಾಗಿ ತಬ್ಬಿಕೊಂಡಿದ್ದೀರಿ
ನನ್ನ ಸುತ್ತ
ಪಟ ಬಿಚ್ಚಿ ದೋಣಿಯನ್ನೇರಿ ಕುಳಿತಿದ್ದೇನೆ
ನೀವಿತ್ತ ಹೊಸಹುಟ್ಟುಗಳ ಹಾಕುತ್ತ.

ಮುಂದಿನ ಪಯಣ

ಹೀಗೆ ನನಗೆ ಅಯಾಚಿತವಾಗಿ ಲಭಿಸಿದ ಬುತ್ತಿ ಮತ್ತು ನನ್ನೆದುರು ತೆರೆದುಕೊಂಡಿದ್ದ ಹರವುಗಳನ್ನು ಬಳಸಿಕೊಂಡು ಮುನ್ನಡೆದೆ, ಅಥವಾ ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ ಮುನ್ನಡೆಸಲ್ಪಟ್ಟೆ. ಕಾಲೇಜ್ ವಿದ್ಯಾಭ್ಯಾಸ ೧೯೪೨ರಿಂದ ೧೯೪೭ರ ತನಕ ಮಂಗಳೂರು ಮತ್ತು ಮದ್ರಾಸು ನಗರಗಳಲ್ಲಾಯಿತು. ಗಣಿತ ಎಂಎ ಪದವೀಧರನೂ ಆದೆ. ಮುಂದೇನು? ನಿರುದ್ಯೋಗ ಭೂತ ದೇಶವನ್ನೇ ಕಾಡುತ್ತಿದ್ದ ಹತಾಶ ದಿನಗಳವು, ಎರಡನೆಯ ಮಹಾಯುದ್ಧ ಕೊನೆಗೊಂಡ ನೋವಿನ ದಿನಗಳವು, ಕೋಮು ಗಲಭೆಯ ಚೀತ್ಕಾರದ ದಿನಗಳವು. ಆದರೂ ಸ್ವಾತಂತ್ರ್ಯದ ಅರುಣೋದಯವನ್ನು ಸಾರುತ್ತಿದ್ದ ಭರವಸೆಯ ದಿನಗಳೂ ಅವಾಗಿದ್ದುವು.

ತಿರುಕರಿಗೆ ಆಯ್ಕೆ ಹಕ್ಕಿಲ್ಲ – ಇದು ಅಂದಿನ ಎಲ್ಲ ಪದವೀಧರರ ಪರಿಸ್ಥಿತಿ. ಮೊದಲು ಬ್ಯಾಂಕ್ ಗುಮಾಸ್ತಿಕೆ, ಎರಡೇ ತಿಂಗಳಲ್ಲಿ ಅಲ್ಲಿಂದ ಬರಖಾಸ್ತು, ಕಾಲೇಜ್ ಟ್ಯೂಟರ್ ಕೆಲಸ – ಎರಡೂ ಮದ್ರಾಸಿನಲ್ಲೇ. ನನ್ನ ಸಂಗೀತ ಮತ್ತು ಸಾಹಿತ್ಯ ಪ್ರೇಮ ನನ್ನನ್ನು ಮದ್ರಾಸಿಗೆ ಬಲವಾಗಿ ಕಟ್ಟಿಹಾಕಿದ್ದುವು. ಆ ಐದು ವರ್ಷಗಳ ಅವಧಿಯಲ್ಲಿ, ೧೯೪೪–೪೯, ನನ್ನ ಸುಪ್ತ ಸಾಮರ್ಥ್ಯಕ್ಕೆ ಅರಳಲು ಒದಗಿದ ಅವಕಾಶಗಳು ಅಸಂಖ್ಯ. ಪ್ರಚಂಡ ಧೀಮಂತರಾಗಿದ್ದ ಬಾಗಲೋಡಿ ದೇವರಾಯ, ಕುಶಿ ಹರಿದಾಸ ಭಟ್ಟ, ಸೇವ ನಮಿರಾಜಮಲ್ಲ (ಇವರೆಲ್ಲರೂ ಸಮಕಾಲೀನ ವಿದ್ಯಾರ್ಥಿಗಳು) ಮೊದಲಾದವರ ಸಾಹಚರ್ಯದಲ್ಲಿ ನನ್ನ ಜ್ಞಾನಕ್ಷಿತಿಜ ವಿಸ್ತರಿಸಿತು ಮತ್ತು ಅಭಿವ್ಯಕ್ತಿ ಶೈಲಿ ಮೊನಚುಗೊಂಡಿತು. ನಾನು ಕವಿಯಲ್ಲ ಎಂಬ ಅರಿವು ಮೂಡಿತು. ಸಣ್ಣ ಕತೆ ಬರೆದೆ. ಅವು ಅಂದಿನ ಪ್ರಸಿದ್ಧ ಮಾಸ ಪತ್ರಿಕೆಗಳಾಗಿದ್ದ 'ಜೀವನ', 'ಜಯಂತಿ', 'ಜಯಕರ್ನಾಟಕ' ಮುಂತಾದವುಗಳಲ್ಲಿ ಪ್ರಕಟವಾದುವು.

ಮುಂದೆ ೧೯೪೯–೫೩ ಅವಧಿಯಲ್ಲಿ ಉಪನ್ಯಾಸಕ ಹುದ್ದೆಗೆ ಬಡ್ತಿ ಪಡೆದು ಮಂಗಳೂರು ನಿವಾಸಿಯಾದೆ. ಅಲ್ಲಿದ್ದಾಗ ನನ್ನ ಎರಡು ಕಥಾಸಂಕಲನಗಳು – 'ವನಸುಮ' (೧೯೫೧) ಮತ್ತು 'ಕೊಡಗಿನ ಕತೆಗಳು' (೧೯೫೩) – ಪ್ರಕಟವಾಗಿ

ನನಗೆ ಸಾಕಷ್ಟು ಪ್ರಸಿದ್ಧಿ ಪ್ರಚಾರ ತಂದು ಕೊಟ್ಟವು. ಆದರೆ ಆ ವೇಳೆಗೆ ನಾನು ಎರಡನೆಯ ಭ್ರಮನಿರಸನಕ್ಕೆ ಒಳಗಾಗಿದ್ದೆ: ನಾನು ಕತೆಗಾರನೂ ಅಲ್ಲ!

ಇಂಗ್ಲಿಷಿನಲ್ಲಿದ್ದ ಜನಪ್ರಿಯ ವಿಜ್ಞಾನ ಗ್ರಂಥಗಳನ್ನು ಓದಿ, ಮನನ ಮಾಡಿ, ಕನ್ನಡದಲ್ಲಿ ಅದೇ ಶೈಲಿಯ ಲೇಖನ ರಚನೆಗೆ ಮುಂದಾದೆ. ಈ ಅನನ್ವೇಷಿತ ಮತ್ತು ಅಪರಿಚಿತ ಕನ್ನೆ ನೆಲದಲ್ಲಿ ಅಂದು ನನಗೆ ಸ್ಫೂರ್ತಿ ಲಭಿಸಿದ್ದು ಕನ್ನಡದಲ್ಲಿ ಆಧುನಿಕ ವಿಜ್ಞಾನವಾಙ್ಮಯದ ಅಗ್ರಮಾನ್ಯ ಹರಿಕಾರ ಆರ್.ಎಲ್. ನರಸಿಂಹಯ್ಯನವರ ಲೇಖನ ಮತ್ತು ಕೃತಿಗಳಿಂದ. ಈ ನಿಟ್ಟಿನಲ್ಲಿ ಶಿವರಾಮ ಕಾರಂತರ ಪ್ರಯೋಗಗಳಿಂದಲೂ ಇವರ ಅಗ್ರಜ ಕೋಟ ಲಕ್ಷ್ಮೀನಾರಾಯಣ ಕಾರಂತರು ಬರೆದಿದ್ದ ವಿಜ್ಞಾನ ಪಠ್ಯ ಪುಸ್ತಾಕಗಳಿಂದಲೂ ರಚನೆಯ ತಂತ್ರ ಗ್ರಹಿಸಿದೆ: ಇಂಗ್ಲಿಷ್ ಕೃತಿಯೊಂದನ್ನು ಓದಿದ ಸಾಮಾನ್ಯ ವಾಚಕನಿಗೆ ದೊರೆಯುವಷ್ಟೇ ಸಂತೃಪ್ತಿ ಅದೇ ವಿಷಯ ಕುರಿತಂತೆ ಕನ್ನಡ ಲೇಖನ ಓದುವಾತನಿಗೂ ಲಭಿಸುವಂತೆ ನನ್ನ ಶೈಲಿ ಇರಬೇಕೆಂಬುದು ಉದ್ದೇಶ. ಅಂದರೆ, ಇಂಥ ಒಂದು ಲೇಖನದಲ್ಲಿ ವಿಜ್ಞಾನ ಪರಿಕಲ್ಪನೆ ಸ್ಪಷ್ಟವಾಗಿರತಕ್ಕದ್ದು, ಇದನ್ನು ಸಂವಹನಿಸುವ ಕನ್ನಡ ಸೃಜನಶೀಲವಾಗಿರತಕ್ಕದ್ದು ಮತ್ತು ಸಮಗ್ರ ನಿರೂಪಣೆ ಉತ್ಸಾಹಪೂರ್ಣವಾಗಿರತಕ್ಕದ್ದು. ೧೯೫೦ರ ಸುಮಾರಿಗೆ ನಾನು ಅಂಜಿ ಅಳುಕಿ, ತುಸು ಭಂಡಗೆಟ್ಟು ಕೂಡ, ಬರೆದ ಮೊದಲ ಕನ್ನಡ ವಿಜ್ಞಾನ ಲೇಖನಕ್ಕೆ ಓದುಗರಿಂದ ದೊರೆತ ಮನ್ನಣೆ, ನನ್ನ ಋಜು ಅಭಿವ್ಯಕ್ತಿ ಮಾಧ್ಯಮ ಕನ್ನಡ ಜನಪ್ರಿಯ ವಿಜ್ಞಾನ ವಾಙ್ಮಯದಲ್ಲಿದೆ ಎಂಬ ಸತ್ಯ ಸಂಗತಿಯನ್ನು ಕಾಣಿಸಿತು. ಉಳಿದದ್ದು ಈಗ ಇತಿಹಾಸ. **"ಕನ್ನಡಕ್ಕಾಗಿ ಕೈಯೆತ್ತು, ಕಲ್ಪವೃಕ್ಷವಾಗುತ್ತದೆ"** ಎಂದರು ಕುವೆಂಪು. ಇದು ಎಂಥ ಪ್ರವಾದಿವಾಣಿ ಎಂಬುದನ್ನು ನನ್ನ ಜೀವನ ಪೂರ್ತಿ ಅನುಭವಿಸಿ ಹರ್ಷಿಸಿದ್ದೇನೆ. ಇಲ್ಲಿ ಇಂದು ನಿಂತಿರುವ ಸೌಭಾಗ್ಯವೂ ಇದಕ್ಕೊಂದು ನಿದರ್ಶನ. ಎಲ್ಲ ಪ್ರಶಸ್ತಿ ಪುರಸ್ಕಾರಗಳ ಪೈಕಿ ತಾಯಿನೆಲದಲ್ಲಿ ದೊರೆಯುವ ಮನ್ನಣೆಗೆ ಅತಿಶಯ ಮಹತ್ತ್ವ ಉಂಟು: ತವರೇ ಪುಷ್ಪಿಸಿ ಕಂದಗೆ ತೊಡಿಸುತ ಹರಸುವ ಹಾರವದು.

ಸವಾಲನ್ನು ಎದುರಿಸುವ ಛಲ

೧೯೫೨ನೆಯ ಇಸವಿ. ಆಗ ನಾನು ಮಂಗಳೂರು ಸಂತ ಅಲೋಶಿಯಸ್ ಕಾಲೇಜಿನಲ್ಲಿ ಗಣಿತೋಪನ್ಯಾಸಕ. ನನ್ನ ಅಪೇಕ್ಷೆ ನಿರೀಕ್ಷೆ ಅಥವಾ ಒಲವು ಇಲ್ಲದೇ ಸೇನಾಶಿಕ್ಷಣಕ್ಕೆ ತಳ್ಳಲ್ಪಟ್ಟೆ. ಅದಾಗ ತಾನೇ ನಮ್ಮ ಕಾಲೇಜಿನಲ್ಲಿ ಪ್ರಾರಂಭಿಸಲಿದ್ದ ಎನ್ಸಿಸಿ ದಳಕ್ಕೆ ನನ್ನನ್ನು ಮುಖ್ಯಸ್ಥನನ್ನಾಗಿ ಆಯ್ದಿದ್ದರು. ತತ್ಸಂಬಂಧವಾಗಿ ನಾನು ಮದ್ರಾಸು ರೆಜಿಮೆಂಟಲ್ ಸೆಂಟರ್, ವೆಲ್ಲಿಂಗ್ಟನ್, ನೀಲಗಿರಿಯಲ್ಲಿ ಮೂರು ತಿಂಗಳ ಪರ್ಯಂತ ಸೇನಾಶಿಕ್ಷಣ ಪಡೆಯಲು ನಿಯೋಜಿತನಾದೆ. ಜನರಲ್‌ಗಳ ತೂಗುತೊಟ್ಟಿಲೆಂದು ಪ್ರಸಿದ್ಧವಾಗಿರುವ ಈ ನಾಡಿನವನಾದ ನನ್ನಲ್ಲಿ ಅಂಥ ಗುಣವೇನಾದರೂ ಇತ್ತೇ? ನಾನು ಕಟ್ಟಾ ಸಸ್ಯಾಹಾರಿ, ಸಾಮೂಹಿಕ ಕ್ರೀಡೆಗಳಲ್ಲಿ ಭಾಗವಹಿಸಿದವನಲ್ಲ, ಬೌದ್ಧಿಕ ವಲಯದಲ್ಲಿ ಒಂಟಿ ಪಯಣಿಗ. ಹಾಗಾದರೆ ಆ ಪರಕೀಯ ಕ್ಷೇತ್ರದಲ್ಲಿರಲು ನನ್ನ ಅರ್ಹತೆ ಏನು?



ಅದು ಬೆಳಕಿಗೆ ಬಂದುದು ಪೆರೇಡ್ ಗ್ರೌಂಡಿನಲ್ಲಿ – ಖುದ್ದು ನನಗೇ ಸೋಜಿಗವಾಗುವಂತೆ. ಅಲ್ಲಿಯ ಬೆಟ್ಟಗುಡ್ಡಗಳ ಹರವಿನಲ್ಲಿ, ಮೈಕೊರೆವ ಕುಳಿರಿನಲ್ಲಿ, ಎದುರಾಗುತ್ತಿದ್ದ ಸವಾಲುಗಳಲ್ಲಿ ಮತ್ತು ಸಾಮೂಹಿಕ ಕವಾಯತಿ ಸ್ಪರ್ಧೆಗಳಲ್ಲಿ ನನ್ನೊಳಗೆ ಸುಪ್ತವಾಗಿದ್ದ ಕೊಡಗುತನ ನನಗೆ ತಿಳಿಯದಂತೆಯೆ ಕುಮ್ಮಕ್ಕು ಕೊಟ್ಟಿತು. ಕುವೆಂಪು ನುಡಿಗಳಲ್ಲಿ –

ನಡೆ ಮುಂದೆ ನಡೆ ಮುಂದೆ
ನುಗ್ಗಿ ನಡೆ ಮುಂದೆ
ಜಗ್ಗದೆಯ ಕುಗ್ಗದೆಯೆ
ಹಿಗ್ಗಿ ನಡೆ ಮುಂದೆ

ಮುಂದಿನ ೧೭ ವರ್ಷ ಕಾಲ (೧೯೬೯ರ ತನಕ) ನಾನು ಎನ್ಸಿಸಿ ಅಧಿಕಾರಿಯಾಗಿ ಮಾಡಿದ ಪ್ರಯೋಗಗಳನ್ನೂ ಗಳಿಸಿದ ಅನುಭವವನ್ನೂ 'ಎನ್ಸಿಸಿ ದಿನಗಳು' ಮತ್ತು 'ಸವಾಲನ್ನು ಎದುರಿಸುವ ಛಲ' ಎಂಬ ಪುಸ್ತಕಗಳಲ್ಲಿ ವಿವರಿಸಿದ್ದೇನೆ.

ಕೊಡಗಿನ ನೆಲ, ಜಲ, ಗಾಳಿ, ಬಾನು ಮತ್ತು ಸಂಸ್ಕೃತಿ ಹೇಗೆ ಇಲ್ಲಿಯ ಮಕ್ಕಳಲ್ಲಿ ಸವಾಲನ್ನು ಎದುರಿಸುವ ಛಲವನ್ನು ಹುಟ್ಟಿನಿಂದಲೇ ಗರ್ಭಿಸಿಟ್ಟಿರುತ್ತದೆ ಎನ್ನುವುದನ್ನು ವಿಶದೀಕರಿಸಲು ಈ ಅಂಶವನ್ನಿಲ್ಲಿ ಪ್ರಸ್ತಾವಿಸಿದ್ದೇನೆ ಅಷ್ಟೆ.

ಕನ್ನಡದ ಸ್ಥಿತಿ ಗತಿ

೧ ವರ್ತಮಾನ ಸ್ಥಿತಿ. ದೇಶಕ್ಕೆ ಸ್ವಾತಂತ್ರ್ಯ ಲಭಿಸಿದ ಅನಂತರ (೧೯೪೭), ಅಲ್ಲಿಯೂ ಕರ್ನಾಟಕ ಏಕೀಕರಣವಾದ ಬಳಿಕ, ಕನ್ನಡ ಸರ್ವಾಂಗ ಸುಂದರವಾಗಿ ಎಲ್ಲ ಜ್ಞಾನ ವಿಜ್ಞಾನ ಪ್ರಕಾರಗಳ ಸಮರ್ಥ ಸಂವಹನ ಮಾಧ್ಯಮವಾಗಿ ಅಭಿವರ್ಧಿಸಿತು. ವಿಜ್ಞಾನ ಕ್ಷೇತ್ರ ಕುರಿತು ಹೇಳುವುದಾದರೆ ಯಾವುದೇ ಅತ್ಯಾಧುನಿಕ ಸಂಕೀರ್ಣ ಪರಿಕಲ್ಪನೆಯನ್ನೂ ಇದರಲ್ಲಿ ಮೂಲ ಇಂಗ್ಲಿಷಿನಲ್ಲಿಯಷ್ಟೇ ಖಚಿತವಾಗಿ, ಸ್ಪಷ್ಟವಾಗಿ ಮತ್ತು ಆಕರ್ಷಕವಾಗಿ ನಿರೂಪಿಸುವುದು ಸಾಧ್ಯವೆಂಬುದನ್ನು ತೋರಿಸಿಕೊಟ್ಟಿತು. ಉದಾಹರಣೆಗೆ ವಿಶ್ವವಿದ್ಯಾಲಯಗಳು ಪ್ರಕಟಿಸಿದ ಆಕರ ಗ್ರಂಥಗಳು, ಪಠ್ಯ ಪುಸ್ತಕಗಳು ಮತ್ತು ಜನಪ್ರಿಯ ಕೃತಿಗಳು, ಆರ್.ಎಲ್. ನರಸಿಂಹಯ್ಯ, ಸಿ.ಎನ್. ಶ್ರೀನಿವಾಸಯ್ಯಂಗಾರ್, ಯು.ಎಲ್. ಆಚಾರ್ಯ, ಜೆ.ಆರ್. ಲಕ್ಷ್ಮಣ ರಾವ್, ಅಡ್ಯನಡ್ಕ ಕೃಷ್ಣ ಭಟ್ಟ, ಅನುಪಮಾ ನಿರಂಜನ ಮೊದಲಾದ ಹಿರಿಯರ ಕೊಡುಗೆಗಳು. ಶಿವರಾಮ ಕಾರಂತರ 'ಬಾಲಪ್ರಪಂಚ'ದ ಒಟ್ಟು ೧೮೦೦ ಪುಟಗಳ ಮೂರು ಸಂಪುಟಗಳು (೧೯೩೬), 'ವಿಜ್ಞಾನ ಪ್ರಪಂಚದ' ಒಟ್ಟು ೧೯೬೪ ಪುಟಗಳ ನಾಲ್ಕು ಸಂಪುಟಗಳು (೧೯೫೯-೬೪), ನಿರಂಜನರ ಪ್ರಧಾನ ಸಂಪಾದಕತ್ವದಲ್ಲಿ ಪ್ರಕಟವಾದ 'ಜ್ಞಾನ ಗಂಗೋತ್ರಿ'ಯ ಒಟ್ಟು ೪೯೧ ಪುಟಗಳ ಏಳು ಸಂಪುಟಗಳು (೧೯೭೦-೭೪) ಮತ್ತು ಕಳಶಪ್ರಾಯವಾಗಿ ಮೈಸೂರು ವಿಶ್ವವಿದ್ಯಾನಿಲಯ ೧೯೬೯ರಿಂದ ಅನಿಯತಕಾಲಿಕವಾಗಿ ಪ್ರಕಟಿಸುತ್ತಿರುವ 'ಕನ್ನಡ ವಿಶ್ವಕೋಶ'ದ ೧೪ ಸಂಪುಟಗಳು (ಪ್ರತಿಯೊಂದೂ ಸರಾಸರಿ ೧೦೦೦ ಪುಟಗಳ ಗ್ರಂಥ), 'ವಿಷಯ ವಿಶ್ವಕೋಶ'ದ ೩೦ ಸಂಪುಟಗಳ ಯೋಜನೆ (ಸದ್ಯಕ್ಕೆ ಒಂದು ಪ್ರಕಟವಾಗಿದೆ, ಇನ್ನೆರಡು ಸದ್ಯವೇ ಹೊರಬರಲಿವೆ.) ಕನ್ನಡದ ಶ್ರೀಮಂತಿಕೆಯನ್ನು ಎತ್ತಿ ಕಾಣಿಸುತ್ತಿವೆ. ನಮ್ಮ ರಾಜ್ಯದ ಇತರ ವಿಶ್ವವಿದ್ಯಾಲಯಗಳೂ ಈ ದಿಶೆಯಲ್ಲಿ ಕಾರ್ಯತತ್ಪರವಾಗಿವೆ. ಶಿವರಾಮ ಕಾರಂತರ ಗೌರವ ಸಹಾಯಕನಾಗಿ, 'ಜ್ಞಾನಗಂಗೋತ್ರಿ'ಯ ಸಂಪಾದಕಮಂಡಲಿ ಸದಸ್ಯನಾಗಿ ಮತ್ತು 'ಕನ್ನಡ ವಿಶ್ವಕೋಶ'ದ ವಿಜ್ಞಾನ-ಮತ್ತು-ಕಾರ್ಯನಿರ್ವಾಹಕ ಸಂಪಾದಕನಾಗಿ ಈ ಎಲ್ಲ ಯೋಜನೆಗಳಲ್ಲಿಯೂ ಪಾಲ್ಗೊಳ್ಳುವ ಭಾಗ್ಯ ನನ್ನದಾಗಿತ್ತು. ನವಕರ್ನಾಟಕ ಪ್ರಕಾಶನದ ಪ್ರತಿಷ್ಠಿತ ಕೃತಿ 'ಕನ್ನಡ ವಿಜ್ಞಾನ ಪದವಿವರಣ ಕೋಶ' (೨೦೦೧) ಪಾರಿಭಾಷಿಕ ಪದಗಳ ಶಿಷ್ಟೀಕರಣಕ್ಕೆ ನೀಡಿರುವ ಚಾಲನೆ ಗಮನಾರ್ಹವಾಗಿದೆ. ಇದರ ಪ್ರಧಾನ ಸಂಪಾದಕನಾಗುವ ಗೌರವ ನನಗೆ ಸಂದಿತ್ತು.

ಇವೆಲ್ಲ ಅನುಭವಗಳ ಸಾರವಿಷ್ಟು: ಜ್ಞಾನ-ವಿಜ್ಞಾನಗಳಲ್ಲಿಯ ಸರ್ವ ಪ್ರಕಾರಗಳ ಅಭಿವ್ಯಕ್ತಿಗೆ ಇಂದು ಇಂಗ್ಲಿಷಿನಷ್ಟೇ ಸಮರ್ಥ ಮಾಧ್ಯಮವಾಗಿದೆ ನಮ್ಮ "ಸುಲಿದ ಬಾಳೆಯ ಹಣ್ಣಿನಂದದ" ಕನ್ನಡ. ಇಂತಿದ್ದರೂ ವ್ಯಾವಹಾರಿಕವಾಗಿ ಕನ್ನಡದ ವರ್ತಮಾನ ಸ್ಥಿತಿ ಹೇಗಿದೆ? ಒಂದೇ ಪದದಲ್ಲಿ ಹೇಳುವುದಾದರೆ ಅದು ಶೋಚನೀಯ. ಏಕೆ? ಕನ್ನಡಿಗರ ಅಭಿಮಾನ ಶೂನ್ಯತೆ, ಸರ್ಕಾರದ ಸಂಕಲ್ಪರಾಹಿತ್ಯ, ಐಟಿಬಿಟಿ ಇತ್ಯಾದಿ ವಿತ್ತಾಕರ್ಷಕ ಹುದ್ದೆಗಳ ಆಮಿಷ ಮುಂತಾದವುಗಳ ಸಂಯುಕ್ತ ತಾಡನೆಯ ವಿಷಫಲವಿದು. ಆದ್ದರಿಂದ ಕನ್ನಡ ವಿಜ್ಞಾನ ವಾಙ್ಮಯದ ಹಾಗಿರಲಿ, ಸಾಕ್ಷಾತ್ ಕನ್ನಡದ ಭವಿಷ್ಯವೇ ಇಂದು ಡೋಲಾಯಮಾನವಾಗಿದೆ: ಪರಿಕರಗಳು ಸಮೃದ್ಧವಾಗಿವೆ, ಬಾಣಸಿಗರಿಲ್ಲ; ತಯಾರಾಗಿರುವ ಅಡುಗೆ ಸವಿಯಲು ಬಾಯಿಗಳಿಲ್ಲ; ಉಂಡರೂ ಆ ವ್ಯಕ್ತಿಗೆ ಪ್ರಯೋಜನವಾಗುವ ಪರಿಸರವಿಲ್ಲ. ವಾಣಿಜ್ಯದ ಪರಿಭಾಷೆಯಲ್ಲಿ ಹೇಳುವುದಾದರೆ ಅಂಗಡಿಯ ಬಡುಗಳಲ್ಲಿ ಮಾಲುಗಳು ತುಂಬಿ ತುಳುಕುತ್ತಿವೆ, ದರ ಅಗ್ಗವಾಗಿದೆ, ಮಾರಾಟ ಸೇವೆ ಉತ್ತಮವಾಗಿದೆ, ಆದರೆ ಗಿರಾಕಿಗಳಿಲ್ಲ.

೨ ರೋಗನಿದಾನ. ಹೀಗೇಕೆ? ರಾಜ್ಯದಲ್ಲಿ ಕನಿಷ್ಠ ಎಸ್ಸೆಸೆಲ್ಸಿ ತನಕ ಶಿಕ್ಷಣ ಮಾಧ್ಯಮ ಮತ್ತು ಆಡಳಿತಭಾಷೆ ಕನ್ನಡವಾದ ಹೊರತು ಪರಿಸ್ಥಿತಿ ಸುಧಾರಿಸದು. ಮಾತ್ರವಲ್ಲ, ಕಾಲ ಸಂದಂತೆ ವಿಕೋಪಿಸುತ್ತದೆ ಕೂಡ. ಇಂಗ್ಲಿಷ್ ಅಂತಾರಾಷ್ಟ್ರೀಯ ಭಾಷೆ, ಸಕಲ ಆಧುನಿಕ ಜ್ಞಾನಪ್ರಕಾರಗಳಿಗೂ ಸುಲಭ ಪ್ರವೇಶ ಒದಗಿಸುವ ಕೀಲಿಕೈ. ಇದರಲ್ಲಿ ಶಿಕ್ಷಣ ಪಡೆದವರಿಗೆ ಪ್ರಪಂಚಾದ್ಯಂತ ಉದ್ಯೋಗ ಮತ್ತು ವ್ಯವಹಾರಾವಕಾಶಗಳಿವೆ. ಇಂಥ ನೇರ ದಾರಿ ಬಿಟ್ಟು ಇನ್ನೂ ಅಡುಗೇಮನೆಯಿಂದ ಹೊರಬಂದಿರದ ಕನ್ನಡವನ್ನು ಈ ಕೆಲಸಕ್ಕೆ ನಿಯೋಜಿಸಿದ್ದಾದರೆ ನಮ್ಮ ದೇಶ ತೀರ ಹಿಂದೆ ಬೀಳುವುದು ಶತಸ್ಸಿದ್ಧ ಎಂಬ ಶುಷ್ಕ ತರ್ಕವನ್ನು ಅಸಂಖ್ಯ ವೇದಿಕೆಗಳಲ್ಲಿ ಕನ್ನಡಿಗರಿಂದಲೇ ಕೇಳಿ ಕೇಳಿ ನನ್ನಂತೆ ಈ ಕ್ಷೇತ್ರದಲ್ಲಿ ದೀರ್ಘಕಾಲದಿಂದ ಮಗ್ನರಾಗಿರುವ ಲೇಖಕರೆಲ್ಲರಿಗೂ ತಲೆಚಿಟ್ಟು ಹಿಡಿದುಹೋಗಿದೆ.

ಎರಡನೆಯ ಮಹಾಯುದ್ಧಾಂತ್ಯದಲ್ಲಿ ನೆಲಕಚ್ಚಿದ್ದ ಜಪಾನ್ ಇಂದು ಅಮೆರಿಕ, ಇಂಗ್ಲೆಂಡ್ ಮುಂತಾದ ಮುಂದುವರಿದ ರಾಷ್ಟ್ರಗಳ ಜೊತೆ ಶಿಕ್ಷಣ ಮತ್ತು ವಾಣಿಜ್ಯ ರಂಗಗಳಲ್ಲಿ ಯಶಸ್ವಿಯಾಗಿ ಸ್ಪರ್ಧಿಸುತ್ತಿರುವುದು ಸರಿಯಷ್ಟೆ. ಅಲ್ಲಿಯ ಶಿಕ್ಷಣ

ಮಾಧ್ಯಮ ಜಪಾನೀ ಭಾಷೆ, ಇಂಗ್ಲಿಷ್ ಅಲ್ಲ! ಜನರಲ್ಲಿ ಅಸ್ಮಿತೆ ಅಂದರೆ ಸ್ವಾಭಿಮಾನ ವರ್ಧಿಸುವಂತೆ ಬಾಲ್ಯದಿಂದಲೇ ರಚನಾತ್ಮಕ ಚಟುವಟಿಕೆಗಳನ್ನು ಹಮ್ಮಿ ಕೊಳ್ಳುವುದೊಂದೇ ಶ್ರೀಸಾಮಾನ್ಯ ಮಾಡಬಹುದಾದ ಕೆಲಸ. ಪ್ರಕೃತ ಸಮ್ಮೇಳನ ಈ ದಿಶೆಯಲ್ಲೊಂದು ದಿಟ್ಟ ಹೆಜ್ಜೆ.

೩. ಪರಿಹಾರ. ಹಾಗಾದರೆ ನಾವೇನು ಮಾಡಬೇಕು? ಕರ್ನಾಟಕ ಸರ್ವತ್ರ ಕನ್ನಡವನ್ನು ಆಡಳಿತ ಮತ್ತು ಶಿಕ್ಷಣ ಮಾಧ್ಯಮವಾಗಿ ಘೋಷಿಸಿ ಅನುಷ್ಠಾನಿಸುವಂತೆ ಸರ್ಕಾರವನ್ನು ಒತ್ತಾಯಪಡಿಸಬೇಕು, ಜೊತೆಯಲ್ಲೇ ನಾವು ಕನ್ನಡವನ್ನು ಸ್ವಸಂತೋಷದಿಂದ ವೈಯಕ್ತಿಕವಾಗಿಯೂ ಸಾಮೂಹಿಕವಾಗಿಯೂ ಸಂವಹನ ಮಾಧ್ಯಮವಾಗಿ ಬಳಸಲು ಮುಂದಾಗಬೇಕು. ಕನ್ನಡ ಪುಸ್ತಕಗಳನ್ನು ಕೊಂಡು, ಓದಿ, ಮನನ ಮಾಡಿ ಅದರಲ್ಲಿ ನುಡಿಯಲು ಮತ್ತು ಬರೆಯಲು ಮುಂದಾಗಬೇಕು.

ಮಹಾಕವಿ ವಿಲಿಯಮ್ ಶೇಕ್ಸ್‌ಪಿಯರ್ (೧೫೬೪–೧೬೧೬), ಮಹಾವಿಜ್ಞಾನಿ ಮೈಖೇಲ್ ಫ್ಯಾರಡೇ (೧೭೯೧–೧೮೬೭) ಮೊದಲಾದ ಯುಗಪ್ರವರ್ತಕ ಚಿಂತನಶೀಲರು ತಮ್ಮ ತಮ್ಮ ಸೃಜನಶೀಲ ಕೃತಿಗಳನ್ನು ಮಾತೃಭಾಷೆ ಇಂಗ್ಲಿಷಿನಲ್ಲಿ ಅಭಿವ್ಯಕ್ತಿಸಲು ತೊಡಗುವ ತನಕ – ಅಂದರೆ ಸ್ಥೂಲವಾಗಿ ಕೇವಲ ಮೂರು ಶತಮಾನಗಳ ಹಿಂದೆ – ಆ ಭಾಷೆ ಕುಲೀನ ಮಂದಿಯ ವ್ಯವಹಾರ ಕ್ಷೇತ್ರವನ್ನು ಪ್ರವೇಶಿಸಿರಲಿಲ್ಲ, 'ಅಸ್ಪೃಶ್ಯ'ವಾಗಿತ್ತು. ೯ನೆಯ ಶತಮಾನದಷ್ಟು ಪ್ರಾಚೀನದಲ್ಲೇ ಶ್ರೇಷ್ಠ ಕಾವ್ಯಗಳಿಗೆ ಮಾಧ್ಯಮವಾಗಿದ್ದ ಕನ್ನಡ (ನೃಪತುಂಗನ 'ಕವಿರಾಜಮಾರ್ಗ') ಇಂದು ಕರ್ನಾಟಕದಲ್ಲಿಯೇ 'ಅಸ್ಪೃಶ್ಯ'ವಾಗಿರುವುದರ ಮುಖ್ಯ ಕಾರಣ ನಮ್ಮ ಸರ್ಕಾರದ ಮತ್ತು ಕುಲೀನರ ದಿವ್ಯ ನಿರ್ಲಕ್ಷ್ಯ ಹಾಗೂ ಘೋರ ಅವಜ್ಞೆಯ ಫಲವೆನ್ನದೆ ವಿಧಿಯಿಲ್ಲ. ಈ ಅನುಭವಜನ್ಯ ಮಾತಿನ ಧ್ವನಿ ಇದು: ಚಲಾವಣೆಗೆ ಬರದ ನಾಣ್ಯ ಸಂಪತ್ತನ್ನು ಉತ್ಪಾದಿಸಲಾರದು. ಇದು ಇಂದಿನ ಕನ್ನಡದ ಪರಿಸ್ಥಿತಿ. ಖಜಾನೆ ಭರ್ತಿ, ಆದರೆ ಮಾರುಕಟ್ಟೆ ನಾಸ್ತಿ! ಇಂಗ್ಲಿಷನ್ನು ಕಡೆಗಣಿಸಿ ಅಥವಾ ತಿರಸ್ಕರಿಸಿ ಕನ್ನಡವನ್ನು ಕಟ್ಟಿ ಎಂಬ ಖಂಡನವಾದ ನನ್ನದಲ್ಲ, ಅದೆಂದೂ ನನ್ನ ಉದ್ದೇಶವಲ್ಲ. ಅದು ಆಕಾಶಕ್ಕೆ ತೆರೆದಿರುವ ಹೆಬ್ಬಾಗಿಲು, ಕನ್ನಡವಾದರೋ ನಮ್ಮ ಅಂಗಳ, ತೋಟ, ಬಯಲುಗಳನ್ನು ನೇರ ಕಾಣಿಸುವ ಗವಾಕ್ಷಿ ಮತ್ತು ಕದ. ಎರಡೂ ವಿಶಾಲವಾಗಿ ತೆರೆದಿರುವಾಗ ಮಾತ್ರ ಜ್ಞಾನಪ್ರಕಾಶ ನಮ್ಮ ಅಂತರಂಗ ಬಹಿರಂಗಗಳನ್ನು ಉದ್ದೀಪಿಸಬಲ್ಲುದು.

ಪ್ರೌಢಶಿಕ್ಷಣ ಸಚಿವ ಬಸವರಾಜ ಹೊರಟ್ಟಿಯವರ ಈ ಹೇಳಿಕೆ ದಿನಾಂಕ ೨೧–೪–೨೦೦೬ರ 'ಪ್ರಜಾವಾಣಿ'ಯಲ್ಲಿ ವರದಿ ಆಗಿದೆ: "ಪ್ರಸಕ್ತ ವರ್ಷದಿಂದ ಪ್ರಾಥಮಿಕ ಹಂತದಲ್ಲಿ ಮಾತೃ ಭಾಷೆಯಲ್ಲಿಯೇ ಶಿಕ್ಷಣ ನೀಡಬೇಕು ಎಂಬುದನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲಾಗುವುದು. . . . ಇಂಗ್ಲಿಷ್ ಲಾಬಿಗೆ ಸರ್ಕಾರ ಮಣಿಯುವುದಿಲ್ಲ." ಇಂಥ ಭರವಸೆಗಳನ್ನು ಹಿಂದೆಯೂ ಕೇಳಿ ಮನಸ್ಸು ರೋಸಿಹೋಗಿದೆ. ಕಾರಣ, ನಿರ್ವಹಣೆ ಹಂತದಲ್ಲಿ ಇದು ನೆರವೇರದಂತೆ ಸಾಕಷ್ಟು ಮೊಸಳೆ ತಿಮಿಂಗಿಲಗಳು ಗುಟ್ಟಾಗಿ ವರ್ತಿಸುತ್ತಲೇ ಇರುತ್ತವೆ. ಪರಿಹಾರ ಒಂದೇ: ತಮಿಳು, ತೆಲುಗು, ಬಂಗಾಳಿ, ಮರಾಠಿ, ಮಲೆಯಾಳಂ, ಕೊಡವ, ತುಳು ಮೊದಲಾದ ಭಾಷಾನುಯಾಯಿಗಳಿಗೆ ತಮ್ಮ ತಮ್ಮ ಭಾಷೆ ಮತ್ತು ಸಂಸ್ಕೃತಿ ಬಗ್ಗೆ ಅಭಿಮಾನ ಮತ್ತು ಪ್ರೀತಿ ಇರುವ ಮಟ್ಟದಲ್ಲೇ ನಮಗೂ ಕನ್ನಡ ನೆಲ, ನುಡಿ ಮತ್ತು ಸಾರಗಳ ಬಗ್ಗೆ ಇರುವಂತಾಗಬೇಕು. ಈ ದಿಶೆಯಲ್ಲಿ ನಾವೆಲ್ಲರೂ ಕೂಡಿ ಚಿಂತಿಸಬೇಕು, ನಡೆಯಬೇಕು ಮತ್ತು ಗುರಿ ಸಾಧಿಸಬೇಕು.

ನಾವು ಇಂಗ್ಲಿಷನ್ನು ದ್ವಿತೀಯ ಭಾಷೆಯಾಗಿ ಅಭ್ಯಸಿಸಲೇಬೇಕು. ನನ್ನದೇ ಅನುಭವ ಕೇಳಿ. ವಿಜ್ಞಾನದ ಮುಂಚೂಣಿ ಸಂಶೋಧನ ರಂಗಗಳ ಪೈಕಿ ಒಂದಾಗಿರುವ 'ಸಾಪೇಕ್ಷತಾ ಸಿದ್ಧಾಂತ' ಅಥವಾ 'ಖಭೌತವಿಜ್ಞಾನ' ವಿಷಯಗಳನ್ನು ಕನ್ನಡದಲ್ಲಿ ನಿರೂಪಿಸುವುದು 'ಕನ್ನದ ವಿಶ್ವಕೋಶ'ದಲ್ಲಿಯ ನನಗೂ ನನ್ನ ಸಹಕಾರ್ಯಕರ್ತರಿಗೂ ಸಾಧ್ಯವಾಗಿರುವುದು ಹೇಗೆ? ಉಭಯ ಭಾಷೆಗಳನ್ನು ನಾವು ಪ್ರೀತಿಸಿ ಅವುಗಳಲ್ಲಿ ಪ್ರಯೋಗಶಾಲಿಗಳಾಗಿರುವುದರಿಂದ ಇದು ಕೈಗೂಡಿದೆ. ಮುಖ್ಯವಾಗಿ ಆತ್ಮಾಭಿಮಾನ, ದೃಢ ಸಂಕಲ್ಪ ಮತ್ತು ಸಮರ್ಥ ನಿರ್ವಹಣೆ ಒಂದುಗೂಡಬೇಕು. ಪ್ರಸಕ್ತ ಸಮ್ಮೇಳನ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಬೇಕೆಂದು ನನ್ನ ವಿನಂತಿ. ತಾಯಿನುಡಿಯನ್ನು ಕಡೆಗಣಿಸಿ ಪರನುಡಿಗೆ ಶರಣಾದವನಿಗೆ ಇದು ದಕ್ಕದು, ಇದು ಉಳಿಯದು. ಹೀಗಲ್ಲದೇ ತಾಯಿನುಡಿಯನ್ನು ಪ್ರೀತಿಸುತ್ತ ಪರನುಡಿಯನ್ನು ಕಲಿಯುವಾತನಿಗೆ ಅದು ಒಲಿಯುವುದು, ಇದು ಹರಸುವುದು! ಮೊದಲನೆಯ ಸಂದರ್ಭದಲ್ಲಿ ಉಭಯ ನಷ್ಟ, ಎರಡನೆಯದರಲ್ಲಿ ಉಭಯ ಲಾಭ.

ಕನ್ನಡ ಪುಸ್ತಕಗಳ ಮಾರಾಟ

ಇಂದು ಕನ್ನಡ ಪುಸ್ತಕ ಮತ್ತು ಲೇಖನಗಳ 'ಉತ್ಪಾದನೆ' (ಬೇಕೆಂದೇ ಈ ವಾಣಿಜ್ಯ ಪರಿಭಾಷೆ ಬಳಸಿದ್ದೇನೆ) ಭೂರಿಯಾಗಿದೆ. ಆದರೆ ಆ ಮಟ್ಟದಲ್ಲಿ ಇವುಗಳ ಹೂರಣ ಮತ್ತು ಕನ್ನಡದ ಸಂವಹನ ಕೌಶಲ ಅಭಿವರ್ಧಿಸಿದೆಯೇ ಎಂದು ಚಿಕಿತ್ಸಕವಾಗಿ ಪರಿಶೀಲಿಸಿದರೆ ದೊರೆಯುವ ಉತ್ತರ ನಿರಾಶಾದಾಯಕ. 'ಉದಯವಾಣಿ' ದೈನಿಕದ ದಿನಾಂಕ ೨೩-೪-೨೦೦೭ರ ಸಂಚಿಕೆಯಲ್ಲಿ 'ವಿಶ್ವ ಪುಸ್ತಕ ದಿನ: ಕನ್ನಡ ಮೌಲ್ಯಮಾಪನ' ಎಂಬ ಶೀರ್ಷಿಕೆಯಡಿ ಪ್ರಕಟವಾಗಿರುವ ಲೇಖನ ವಾಸ್ತವತೆಗೆ ಹಿಡಿದಿರುವ ಕನ್ನಡಿ. ಉದ್ಧೃತಾಂಶ: "ಲಂಕೇಶ್ ಪತ್ರಿಕೆ'ಯ ಯಶಸ್ಸಿನಿಂದ ತೊಡಗಿ ಕನ್ನಡದಲ್ಲಿ ಪತ್ರಿಕೋದ್ಯಮ ಮತ್ತು ಸಾಹಿತ್ಯರಚನೆ ಒಂದು ಅನಾರೋಗ್ಯಕರ ಒಪ್ಪಂದ ಮಾಡಿಕೊಂಡಂತಿವೆ. ವಿಮರ್ಶೆ, ವೈಚಾರಿಕತೆಗಳು ಬಿಡಿ, ಸರ್ಜನಶೀಲ ಸಾಹಿತ್ಯವೂ ವಸ್ತುನಿಷ್ಠತೆಗಿಂತಲೂ ಸನ್ನಿವೇಶದ ಅವಸರಕ್ಕೆ, ಕ್ಷಣಿಕ ಬೆಡಗಿಗೆ ದುಡಿದು ಒಂದು ಓದಿಗೇ ಜೀವ ಕಳೆದುಕೊಳ್ಳುತ್ತಿವೆ. ನಾಲ್ಕು ದಿನ ಯಾವ್ಯಾವ ಪುಸ್ತಕಕ್ಕೋ ಮುನ್ನುಡಿ ಬರೆದವನು ಐದನೇ ದಿನ ತನ್ನ ಮುನ್ನುಡಿ ಸಂಕಲನ ಪ್ರಕಟಿಸುವಂತಾಗುವುದು ಇದರ ಮುಖ್ಯಲಕ್ಷಣ. ಗೋಷ್ಠಿಯಿಂದ ಗೋಷ್ಠಿಗೆ, ವಿಶೇಷ ಸಂಚಿಕೆಯಿಂದ ವಿಶೇಷ ಸಂಚಿಕೆಗೆ ಹಾರುವ ಕವಿಯ ಸಂಕಲನಗಳು, ಕಮ್ಮಟ ಸಮ್ಮೇಳನಗಳ ಪ್ರಬಂಧ ಒಕ್ಕಟ್ಟುಗಳು, ಕಥಾ-ಕಾದಂಬರಿ ಸ್ಪರ್ಧೆ, ವಿವಿಧ ವಿಷಯಕ ಪ್ರಶಸ್ತಿ, ನಿಧಿ, ಬಹುಮಾನ ಮುಂತಾದವುಗಳಿಂದ ಪ್ರಚೋದಿತ (ಮತ್ತು ಅಂಥವುಗಳಲ್ಲಿ ವಿಜೇತವೂ ಆಗಿರಬಹುದಾದರೂ ಅದು ಗುಣಸೂಚಕವಾಗಿರಬೇಕಾಗಿಲ್ಲ; ಪ್ರವೇಶಪತ್ರಗಳ ಮಿತಿನಿರ್ದೇಶಕವಾಗಿರಬಹುದು) ಕೃತಿಗಳು ಭರಪೂರ ಹರಿದಿವೆ. ಅಧಿಕಾರಾವಧಿಯ ಮುಕ್ತಾಯದ ಕಾಲಕ್ಕೆ ಸಾಧನೆಗಳ ಪಟ್ಟಿ ಬೆಳೆಸಲು ಓರ್ವ ಅಧ್ಯಕ್ಷ ತುರ್ತಾಗಿ ತಂದ ಅಸಂಖ್ಯ ಪ್ರಕಟಣೆಗಳು, ಕುವೆಂಪು ಜನ್ಮ ಶತಾಬ್ದಿಯ ವೇಳೆಗೆ ಓರ್ವ ಪ್ರಕಾಶಕ ಒಮ್ಮೆಗೇ ನೂರು ಪ್ರಕಟಣೆಗಳನ್ನು ಚಚ್ಚಿಹಾಕಿದ್ದು ಇಲ್ಲಿ ಉಲ್ಲೇಖನಾರ್ಹ. ಇಂಥಲ್ಲೂ ಲೇಖಕನ ಸ್ಥಾನ ಮಾನಗಳು, ಪ್ರಕಾಶಕನ ಸಂಪರ್ಕಗಳು ಪುಸ್ತಕಗಳ ವ್ಯಾಪಾರೀ ಯಶಸ್ಸನ್ನು ನಿರ್ಧರಿಸುವುದುಂಟು. ಹಾಗಾಗಿ ಮುದ್ರಿತ ಪ್ರತಿಗಳು ಮುಗಿದಿವೆ ಅಥವಾ ಮರುಮುದ್ರಣ ಕಂಡಿವೆ ಎಂದ ಮಾತ್ರಕ್ಕೆ ಅವು ಘನ ಕೃತಿಗಳೇ ಆಗಿರಬೇಕೆಂದಿಲ್ಲ."

ಕನ್ನಡ ಕೃತಿಗಳ ಸಂಖ್ಯಾಮಹಾಪೂರ, ಆದರೆ ಸರಾಸರಿ ಗುಣಮಟ್ಟ ಕುಸಿತ ಕುರಿತಂತೆ ಬರೆದಿರುವ ತ್ರಿಪದಿ ಗಮನಿಸಿ (ಸರ್ವಜ್ಞನ ಕ್ಷಮೆಕೋರಿ)
ಅಚ್ಚು ಸಾಲೆಗಳುಂಟು ವೆಚ್ಚಕ್ಕೆ ಹೊನ್ನುಂಟು
ಮೆಚ್ಚಿ ಹೊಗಳುವ ವಂದಿಮಾಗಧರ ದಂಡುಂಟು
ಹಚ್ಚು ಸ್ವರ್ಗಕ್ಕೆ ಕಿಚ್ಚು ಕಾವ್ಯಜ್ಞ

ಕನ್ನಡದ ಗುಣಮಟ್ಟ ಕುಸಿಯುವಲ್ಲಿ ಗ್ರಂಥಗಳ ಸಗಟು ಖರೀದಿ, ಅಕಾಡೆಮಿಗಳ ಮತ್ತು ಪ್ರಾಧಿಕಾರಗಳ ಸಹಾಯಧನವೆಂಬ ಮರೀಚಿಕೆ, ಪ್ರಸಿದ್ಧ (?) ಲೇಖಕನ ಸಮಗ್ರ ಕೃತಿ ಪ್ರಕಟಣೆ ಮುಂತಾದ (ಧೃತ) ರಾಷ್ಟ್ರೀಕೃತ ನೀತಿಯ (ದುಷ್) ಪಾತ್ರ ಗಮನಾರ್ಹ. ನಾನು ವಿಶ್ವವಿದ್ಯಾಲಯ ಪಠ್ಯಪುಸ್ತಕ ಪ್ರಕಾಶನ, ಸಾಹಿತ್ಯ ಅಕಾಡೆಮಿ, ಕನ್ನಡ ಪುಸ್ತಕ ಪ್ರಾಧಿಕಾರ ಮುಂತಾದ ಸರ್ಕಾರ ಕೃಪಾಪೋಷಿತ ಸಂಸ್ಥೆಗಳ ಸದಸ್ಯನಾಗಿದ್ದಾಗ ಗಳಿಸಿದ ಅನುಭವವಿದು. ಜನರ ಸರಾಸರಿ ನೈತಿಕ ಮಟ್ಟ ತೀವ್ರವಾಗಿ ಕುಸಿದಿರುವ ಈ ದಿನಗಳಲ್ಲಿ ಪ್ರತಿಯೊಂದು ಘನೋದ್ದೇಶಿತ ಯೋಜನೆಯೂ ಭ್ರಷ್ಟಾಚಾರದ ಮಡುವಿನಲ್ಲಿ ಸಿಕ್ಕಿಹಾಕಿಕೊಂಡು ನವೆದು ನಶಿಸುವುದೊಂದು ವಿಪರ್ಯಾಸ.

ಕನ್ನಡದಲ್ಲಿ ವಿಜ್ಞಾನ ವಾಙ್ಮಯ

ಆಧುನಿಕ ಕನ್ನಡ ವಿಜ್ಞಾನ ವಾಙ್ಮಯದ ಪಿತಾಮಹರೆಂದೇ ಖ್ಯಾತರಾದ ಆರ್.ಎಲ್. ನರಸಿಂಹಯ್ಯನವರು ೪೮ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ (ಕಾರವಾರ, ೧೯೭೬) ಈ ವಿಚಾರ ಕುರಿತಂತೆ ತುಸು ಲಘುವಾಗಿ ಆದರೆ ವೇದನೆ ಸಹಿತ ನೀಡಿದ ಉಪಮೆ ನೆನಪಿಗೆ ಬರುತ್ತದೆ. 'ಐಸ್ಲೆಂಡಿನ ಸರ್ಪಗಳು' ಎಂಬ ವಿಷಯದ ಮೇಲೆ ಉಪನ್ಯಾಸ ನೀಡಬೇಕಾಗಿದ್ದ ಒಬ್ಬ ಪ್ರಾಣಿವಿಜ್ಞಾನ ಸಂಶೋಧಕ, "ಮಹನೀಯರೇ ಐಸ್ಲೆಂಡಿನಲ್ಲಿ ಹಾವುಗಳಿಲ್ಲವಾದ್ದರಿಂದ ಇದರ ಬಗ್ಗೆ ನಾನಿನ್ನೇನನ್ನೂ ಹೇಳಬೇಕಾಗಿಲ್ಲ" ಎಂದುಸುರಿ ಹಾಯಾಗಿ ಕುಳಿತುಬಿಟ್ಟನಂತೆ! ಸಂಖ್ಯಾ ದೃಷ್ಟಿಯಿಂದ ಹೇಳುವುದಾದರೆ ಇಂದಿನ ಪರಿಸ್ಥಿತಿ ಹಾಗಿಲ್ಲ, ತುಂಬ ಸುಧಾರಿಸಿದೆ. ಆದರೆ ಗುಣಾತ್ಮಕವಾಗಿ ಅದೇ ಪ್ರಮಾಣದಲ್ಲಿ ಅಭಿವೃದ್ಧಿ ಆಗಿಲ್ಲವೆಂದು ವಿಷಾದಪೂರ್ವಕವಾಗಿ ಹೇಳಬೇಕಾಗುತ್ತದೆ. ಕಾರಣವೇನು? ಮೂಲತಃ, ಈ ಕ್ಷೇತ್ರ ನಮ್ಮ ಯುವಧೀಮಂತರಿಗೆ ಎಳ್ಳಷ್ಟೂ ಆಕರ್ಷಣೀಯವಾಗಿಲ್ಲ; ಕನ್ನಡ ವಿಜ್ಞಾನ ವಾಙ್ಮಯಕ್ಕೆ ಬೇಡಿಕೆ ಇಲ್ಲ; ಇದರಲ್ಲಿ ಕೆಲಸಮಾಡಿಯೇ ತೀರುತ್ತೇನೆಂದು ಪಣತೊಟ್ಟು ಕಳಕ್ಕಿಳಿದರೆ ಸಮಾನಮನಸ್ಕ ಕಾರ್ಯಕರ್ತರು ಸಿಕ್ಕುವುದಿಲ್ಲ. 'ಕನ್ನಡ

ವಿಶ್ವಕೋಶ'ದ ವಿಜ್ಞಾನ ಸಂಪಾದಕನಾಗಿದ್ದ ನನ್ನ ಕಾರ್ಯಾನುಭವವಿದು. ಪರಿಹಾರವೇನೆಂಬುದನ್ನು ಪ್ರತ್ಯೇಕವಾಗಿ ಚರ್ಚಿಸಿದ್ದೇನೆ.

ಕನ್ನಡಕ್ಕೆ ಅಭಿಜಾತ ಅಂತಸ್ತು

ಕನ್ನಡ ಅಭಿಜಾತ ಭಾಷೆಯೇ ಅಲ್ಲವೇ ('ಅಭಿಜಾತ' ಕ್ಕೆ 'ಶಾಸ್ತ್ರೀಯ' ಎಂಬ ತಪ್ಪು ಪದ ಬಳಕೆಗೆ ಬಂದಿದೆ) ಎಂಬುದು ತೀವ್ರ ಚರ್ಚಾವಿಷಯ. ಇದು ಸಕಾರಣವಾಗಿ ಕನ್ನಡಿಗರಲ್ಲಿ ಸಾಕಷ್ಟು ಭಾವೋದ್ರೇಕಕ್ಕೂ ಕಾರಣವಾಗಿದೆ. ಯಾವುದೇ ಮಾನದಂಡ ಬಳಸಿದರೂ ಕನ್ನಡ ಎಲ್ಲ ರೀತಿಗಳಲ್ಲಿಯೂ ಅಭಿಜಾತ ಪಟ್ಟ ಪಡೆಯಲು ಅರ್ಹವಾಗಿದೆ. ಇದನ್ನು ಅಧಿಕೃತವಾಗಿ ಘೋಷಿಸಬೇಕಾದ ಹೊಣೆ ಕೇಂದ್ರ ಸರ್ಕಾರದ್ದು. ಹಾಗೆ ಮಾಡಿದ್ದಾದರೆ ಅಖಿಲ ಭಾರತ ಮಟ್ಟದಲ್ಲಿ ಕನ್ನಡದ ಅಂತಸ್ತು ಏರುವುದರ ಜೊತೆಗೆ ಇದರ ಸರ್ವಾಂಗ ಸುಂದರ ಅಭಿವೃದ್ಧಿಗೆ ಕೇಂದ್ರ ಸರ್ಕಾರದಿಂದ ಸಮೃದ್ಧ ಆರ್ಥಿಕ ಸಹಾಯವೂ ಲಭಿಸಲಿದೆ. ಸಾಧ್ಯವಾದರೆ ಈ ಬಗ್ಗೆ ಒಂದು ಪ್ರತ್ಯೇಕ ವಿಚಾರಗೋಷ್ಠಿ ಏರ್ಪಡಿಸಿ ಯುಕ್ತ ಠರಾವನ್ನು ಅಂಗೀಕರಿಸಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಗೆ ತಿಳಿಯಪಡಿಸುವುದು ಜರೂರಿನ ಅಗತ್ಯ. ಮಗು ಅಳದಿದ್ದರೆ ಖುದ್ದು ತಾಯಿಯೇ ಹಾಲೂಡಲು ಮುಂಬರುವುದಿಲ್ಲ ಅಲ್ಲವೇ?

ಕರ್ನಾಟಕ ರಾಜ್ಯದ ವ್ಯಾಪ್ತಿ

ಮಹಾಜನ ವರದಿಯನ್ನು ಈಗಲಾದರೂ ತದ್ವತ್ತಾಗಿ ಅನುಷ್ಠಾನಿಸುವಂತೆ ಮತ್ತು ರಾಜ್ಯದ ವ್ಯಾಪ್ತಿಯನ್ನು ಅಂತಿಮವಾಗಿ ತೀರ್ಮಾನಿಸುವಂತೆ ನಾವೆಲ್ಲರೂ ಒಕ್ಕೊರಲಿನಿಂದ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕು. ಕರ್ನಾಟಕದಲ್ಲಿಯ ಎಲ್ಲ ಭಾಷೆಗಳೂ ಸಹೃದಯ ಪರಿಸರದಲ್ಲಿ ತಮ್ಮ ತಮ್ಮ ಬೆಳೆವಣಿಗೆ ಕಂಡುಕೊಳ್ಳುವುದೊಂದೇ ಸರಿಯಾದ ಪ್ರಾಯೋಗಿಕ ಮಾರ್ಗ. ಈ ವಿಷಯದ ಮೇಲೆ ಕೂಡ ಪ್ರತ್ಯೇಕ ಗೋಷ್ಠಿ ಏರ್ಪಡಿಸುವುದು ಅಪೇಕ್ಷಣೀಯ.

ಕೊಡಗಿನಲ್ಲಿ ಕನ್ನಡ

ಉತ್ತರ ಕನ್ನಡದ ರಾಮಕೃಷ್ಣ ಜೋಶಿ ಎನ್ನುವವರು (ಇವರು ಡಾಕ್ಟೊರೇಟ್ ಪದವೀಧರರು, ನಿವೃತ್ತ ಕನ್ನಡ ಅಧ್ಯಾಪಕರು, ಉತ್ತಮ ಚಿಂತಕರು ಮತ್ತು ಮೈಸೂರು ನಿವಾಸಿಗಳು) ಇದೇ ದಿನಾಂಕ ೧೮ರಂದು ನನಗೆ ಬರೆದಿರುವ ಪತ್ರದಿಂದ ಎರಡು ಸಾಲುಗಳನ್ನು ಉಲ್ಲೇಖಿಸಬಯಸುತ್ತೇನೆ: "ನಾನು ೧೯೬೮ರಿಂದ ೧೯೭೬ರವರೆಗೆ ವಿರಾಜಪೇಟೆಯ ಬಿ. ಶೆಟ್ಟಿಗೇರಿ ಎಂಬಲ್ಲಿಯ ಪ್ರೌಢಶಾಲೆಯಲ್ಲಿ ಕನ್ನಡ ಪಂಡಿತನಾಗಿ ಕಾರ್ಯ ನಿರ್ವಹಿಸಿದ್ದೆ. ಕುಗ್ರಾಮವಾದ ಅಲ್ಲೂ ಎಸ್ಸೆಸೆಲ್ಸಿಯಲ್ಲಿ ಕನ್ನಡದಲ್ಲಿ ಶೇಕಡಾ ೯೫ಕ್ಕಿಂತ ಹೆಚ್ಚಿನ ಮಕ್ಕಳು ತೇರ್ಗಡೆಯಾಗುತ್ತಿದ್ದರು. ಅದೇ ನಾನು [ಮೈಸೂರಿನ] ಫಿಲೊಮಿನಾ ಶಾಲೆಗೆ ಬಂದ ಮೇಲೆ ಶೇಕಡಾ ೮೦ ಫಲಿತಾಂಶ ದಾಟಿಸಲಾಗಲಿಲ್ಲ. ಅಂದರೆ ಕೊಡಗಿನ ಮಕ್ಕಳು ಕನ್ನಡದಲ್ಲಿ ಆಸಕ್ತಿ ಇರುವವರೂ ಶುದ್ಧ ಉಚ್ಚಾರಣೆಯವರೂ ವಿಶಿಷ್ಟವಾದ ಜೀವನಾನುಭವ ಉಳ್ಳವರೂ ಗುರುಗಳಿಗೆ ಗೌರವ ಕೊಡುವವರೂ ಆಗಿದ್ದರು. ಆದರೆ ಮನೆಯಲ್ಲಿ, ತೋಟದಲ್ಲಿ, ಗದ್ದೆಯಲ್ಲಿ, ಹಬ್ಬಹುಣ್ಣಿಮೆಯಲ್ಲಿ ಕನ್ನಡ ಭಾಷೆಯ ಬಳಕೆ ಕೊಡವರಲ್ಲಿ ಇಲ್ಲದುದರಿಂದ ಅವರಿಂದ ಸೃಜನಶೀಲ ಬರವಣಿಗೆ ಅಷ್ಟಾಗಿ ಬರಲಿಲ್ಲ."

ಈ ಕೊನೆಯ ವಾಕ್ಯಕ್ಕೆ ನಾನೊಂದು ಷರಾ ಸೇರಿಸಲು ಇಚ್ಛಿಸುತ್ತೇನೆ: ತುಸುಕಾಲ 'ಕೊಡಗು' ವಾರಪತ್ರಿಕೆಯ ಸಂಪಾದಕರಾಗಿದ್ದ ಸಿ.ಎಂ. ಪೂಣಚ್ಚ (ಮುಂದೆ ಕೊಡಗು ರಾಜ್ಯದ ಮುಖ್ಯಮಂತ್ರಿ), ದೀರ್ಘಕಾಲ ಸಂಪಾದಕರಾಗಿದ್ದ ಬಿ.ಡಿ. ಗಣಪತಿ, ಇವರ ತಮ್ಮ ಬಿ.ಡಿ. ಸುಬ್ಬಯ್ಯ, ಬಿಟ್ಟಿಯಂಡ ದೇವಕಿಯಮ್ಮ, ಪದ್ಮಾವತಿ ರಸ್ತೋಗಿ, ಐ.ಮಾ. ಮುತ್ತಣ್ಣ, ಬಿ.ಎಸ್. ಕುಶಾಲಪ್ಪ, ಕಲಿಯಾಟಂಡ ಬಿ. ಗಣಪತಿ ಮೊದಲಾದವರ ಮನೆ ಮಾತು ಕೊಡವ ಭಾಷೆ, ಆದರೆ ಇವರೆಲ್ಲರ ಸೃಜನಶೀಲ ಭಾವನೆಗಳ ಹಾಗೂ ಉಪನ್ಯಾಸಗಳ ಸಂವಹನ ಭಾಷೆ ಕನ್ನಡವೆಂಬುದನ್ನು ಸ್ವತಃ ಕಂಡು ಕೇಳಿ ಮತ್ತು ಓದಿ ಅರಿತಿದ್ದೇನೆ. ಕೆ. ಕುಶಾಲಪ್ಪ ಗೌಡರ ಮನೆಮಾತು ಅರೆಗನ್ನಡ. ಇವರು ಮದ್ರಾಸು ವಿಶ್ವವಿದ್ಯಾನಿಲಯದಿಂದ ಭಾಷಾವಿಜ್ಞಾನದಲ್ಲಿ ಡಾಕ್ಟೊರೇಟ್ ಪದವಿ ಗಳಿಸಿದರು. ಕನ್ನಡದಲ್ಲಿ ಕವಿ ಮತ್ತು ಲೇಖಕ, ಅಂತೆಯೇ ನನ್ನ ಸಹಪಾಠಿ ಎಂ.ಬಿ. ಶಿವರಾಯ ಮತ್ತು ಈಚೆಗೆ ಬೆಳಕಿಗೆ ಬಂದಿರುವ ಬಿ.ಆರ್. ಜೋಯಪ್ಪ ಎಂಬ ಯುವ ಬರೆಹಗಾರ (ಉಭಯರದೂ ಮನೆಮಾತು ಅರೆಗನ್ನಡ) ಕನ್ನಡದಲ್ಲಿ ಒಳ್ಳೆಯ ಸೃಜನಶೀಲ ಲೇಖಕರು. ಕನ್ನಡದ ಉದ್ದಾಮ ಲೇಖಕ ವಿ.ಎಸ್. ರಾಮಕೃಷ್ಣ ಮತ್ತು ಮುಂಚೂಣಿ ಲೇಖಕ–ಪತ್ರಕರ್ತ–ಗಮಕಿ ಬಿ.ಎಸ್. ಗೋಪಾಲಕೃಷ್ಣ ಮೊದಲಾದವರ ತಾಯಿನುಡಿ ತುಳು. ಕನ್ನಡ ಪ್ರಾಧ್ಯಾಪಕ ಕೂವರ್ಕೊಲ್ಲಿ ಕರುಣಾಕರನ್ ಅವರ ಮನೆಮಾತು ಮಲೆಯಾಳಂ. ನನ್ನ ಬಾಲ್ಯದ ದಿನಗಳಂದು ಯಂತ್ರ ರಿಪೇರಿಗಳಲ್ಲಿ ಅಡಿಸನ್ ಎಂದೇ ಜನಪ್ರಿಯರಾಗಿದ್ದ ಆದಮ್ ಸಾಬರ ಬಾಯಿಯಿಂದ ಮಾತುಮಾತಿಗೆ ಸರ್ವಜ್ಞನ ನುಡಿ ಅಥವಾ ಬಸವಣ್ಣನ ವಚನ ಮಿಡಿಯುತ್ತಿದ್ದುದು ಈಗಲೂ ನೆನಪಿನಲ್ಲಿದೆ. ಕೊಡಗಿನಲ್ಲಿ ಕನ್ನಡ ಕಟ್ಟಿ ಬೆಳೆಸಿದವರ ಸಾಲಿನಲ್ಲಿ ಕೆ. ಸಚ್ಚಿದಾನಂದಯ್ಯ (ಚಿರಂತನ), ಎನ್. ಮಹಾಬಲೇಶ್ವರ ಭಟ್ಟ, ಯದುರ್ಕಳ ಶಂಕರನಾರಾಯಣ ಭಟ್ಟ, ಭಾರತೀಸುತ, ಕೆ.ಪಿ. ಬಾಲಸುಬ್ರಹ್ಮಣ್ಯ; ಕಾಲೇಜು

ಅಧ್ಯಾಪಕರಾಗಿದ್ದ ಎಲ್.ಎಸ್. ಶೇಷಗಿರಿ ರಾವ್, ಎನ್. ಸುಬ್ರಹ್ಮಣ್ಯಂ ಮತ್ತು ಕೆ. ರಾಮಕೃಷ್ಣ ಉಡುಪ; ಎಂ.ಬಿ. ಅಪ್ಪಯ್ಯ ಮತ್ತು ಸಿ.ಎಸ್. ಪೊನ್ನಪ್ಪ (ಈ ಇಬ್ಬರು ಮಹನೀಯರು ಒಬ್ಬರಾದನಂತರ ಇನ್ನೊಬ್ಬರು 'ಕೊಡಗು ಸಹಕಾರ ಬಂಧು' ಮಾಸಿಕದ ಸಂಪಾದಕರಾಗಿದ್ದರು), 'ಲೋಕರಹಸ್ಯ' ಮಾಸ ಪತ್ರಿಕೆ (ವಿರಾಜಪೇಟೆಯ ಜಿ.ಎಚ್ ಹೌಸ್ ಪ್ರೆಸ್), 'ಸತ್ಯಾರ್ಥಿ' ಮಾಸಪತ್ರಿಕೆ (ಪೊನ್ನಂಪೇಟೆ), 'ಕೊಡಗು' ದೈನಿಕ, 'ಶಕ್ತಿ' ದೈನಿಕ, 'ನಂದಾದೀಪ' ಮಾಸಪತ್ರಿಕೆ ಮುಂತಾದ ವ್ಯಕ್ತಿಗಳ ಹಾಗೂ ಪತ್ರಿಕೆಗಳ ಸೇವೆ ಗಮನಾರ್ಹ. ನನ್ನ ನೆನಪು ಮಸಕಾಗಿದೆ, ಈ ನಿಟ್ಟಿನಲ್ಲಿ ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ವ್ಯಾಪಕ ಸಂಶೋಧನೆ ಕೈಗೊಳ್ಳಬೇಕೆಂದು ನಮ್ರವಾಗಿ ವಿನಂತಿಸಿಕೊಳ್ಳುತ್ತೇನೆ.

ಇವೆಲ್ಲ ನಿದರ್ಶನಗಳ ಸಾರವಿಷ್ಟು: ಕೊಡಗಿನಲ್ಲಿ ಕನ್ನಡ ಕಾವೇರಿಯ ಉಪನದಿಗಳು ಕೊಡವ, ಅರೆಗನ್ನಡ, ಉರ್ದು, ತುಳು, ಮಲೆಯಾಳಂ ಮುಂತಾದ ಸ್ಥಳೀಯ ನಿವಾಸಿಗಳ ಮನೆಮಾತುಗಳು. ಅಂದಿನ ಅಂಥ ಸಾಮರಸ್ಯ ಇಂದು – ಕರ್ನಾಟಕ ರಾಜ್ಯದ ಸುವರ್ಣ ಮಹೋತ್ಸವದ ಪರ್ವಕಾಲದಲ್ಲಿ – ಉಳಿದಿಲ್ಲ ಎನ್ನುವುದು ವಿಷಾದದ ಸಂಗತಿ.

ಸಮಾರೋಪ

ತಾವೆಲ್ಲರೂ ಮನನ ಮಾಡಿ ಯುಕ್ತ ನಿರ್ಧಾರ ತಳೆದು ತದನುಸಾರ ವರ್ತಿಸಲು ನಾನು ತಮ್ಮ ಮುಂದೆ ಈ ಹತ್ತು ಪ್ರತಿಜ್ಞೆಗಳನ್ನು ನಿವೇದಿಸಬಯಸುತ್ತೇನೆ:

೧ ಕನ್ನಡವನ್ನು ವ್ಯಾಕರಣಬದ್ಧವಾಗಿ ಮತ್ತು ಅರ್ಥಶುದ್ಧವಾಗಿ ಕಲಿತು ಸಾರ್ವಜನಿಕ ವ್ಯವಹಾರಗಳಲ್ಲಿ ಪ್ರಯೋಗಿಸುತ್ತೇನೆ.

೨ 'ಭಾರತ ಜನನಿಯ ತನುಜಾತೆ ಜಯಹೇ ಕರ್ನಾಟಕ ಮಾತೆ'ಯನ್ನು ಮನಃಪೂರ್ವಕವಾಗಿ ಪ್ರೀತಿಸಿ ಗೌರವಿಸುತ್ತೇನೆ.

೩ ಕನ್ನಡದಲ್ಲಿ ಪ್ರಕಟವಾಗಿರುವ ಅಭಿಜಾತ ಕೃತಿಗಳನ್ನು – ಕುಮಾರವ್ಯಾಸ, ವಚನ ಮತ್ತು ಹರಿದಾಸ ವಾಙ್ಮಯ, ರಾಮಾಯಣ, ಮಹಾಭಾರತಾದಿ ಗ್ರಂಥಗಳು ಇತ್ಯಾದಿ ಅಭ್ಯಸಿಸುತ್ತೇನೆ.

೪ ಸೋದರ ಭಾಷೆಗಳಲ್ಲಿಯ ಶ್ರೇಷ್ಠ ಗ್ರಂಥಗಳ ಸಾರ ಗ್ರಹಿಸುತ್ತ ಪ್ರಯತ್ನಶೀಲನಾಗುತ್ತೇನೆ.

೫ ಇಂಗ್ಲಿಷನ್ನು ಇಷ್ಟೇ ನಿಷ್ಠೆಯಿಂದ ಕಲಿತು ಅದರಲ್ಲಿಯೂ ಪ್ರಾವೀಣ್ಯ ಗಳಿಸುತ್ತೇನೆ.

೬ ಕನ್ನಡ ಸಂಸ್ಕೃತಿಯನ್ನು ರಕ್ಷಿಸಿ ಪೋಷಿಸಿ ಬೆಳೆಸಲು ಬದ್ಧನಾಗಿದ್ದೇನೆ.

೭ ಕನ್ನಡ ಪತ್ರಿಕೆಗಳನ್ನೂ ಪುಸ್ತಕಗಳನ್ನೂ ಖರೀದಿಸಿ ಓದುತ್ತೇನೆ.

೮ ಸಾರ್ವಜನಿಕ ವ್ಯವಹಾರಗಳಲ್ಲಿ ಕನ್ನಡವನ್ನೇ ಬಳಸುತ್ತೇನೆ.

೯ ನಾವೆಲ್ಲರೂ ಒಂದೇ, ನಾವು ಕನ್ನಡಿಗರು ಎಂಬ ಭಾವದಿಂದ ಸದಾ ಉದ್ದೀಪಿತನಾಗಿರುತ್ತೇನೆ.

೧೦ "ಎಲ್ಲಾದರೂ ಇರು, ಎಂತಾದರೂ ಇರು, ಕನ್ನಡವಾಗಿರು" ಎಂಬ ಕುವೆಂಪುವಾಣಿಗೆ ಬದ್ಧನಾಗಿರುತ್ತೇನೆ.

ಸಮಾರೋಪವಾಗಿ ಮಂಜೇಶ್ವರ ಗೋವಿಂದ ಪೈಗಳ 'ಕನ್ನಡದ ಮೊರೆ' ಎಂಬ ಲೇಖನ ಸಂಕಲನದಿಂದ ಇದೇ ಶೀರ್ಷಿಕೆಯ ಪ್ರಬಂಧದ ಕೊನೆಯ ಪರಿಚ್ಛೇದವನ್ನು ಉಲ್ಲೇಖಿಸ ಬಯಸುತ್ತೇನೆ: "ನಾನು ಎರಡು ತಾಯಂದಿರ ಕೂಸು. ಕೊಂಕಣಿ ನನ್ನ ಹೆತ್ತ ತಾಯಿ, ಕನ್ನಡ ಸಾಕುತಾಯಿ, ನನ್ನನ್ನು ಸಾಕಿದ ದಾಯಿ. ಕೊಂಕಣಿಯಲ್ಲಿ ಹೆಸರಿಗೆ ತಕ್ಕ ಸಾಹಿತ್ಯವಿದ್ದರೆ ಸಾಕಿತ್ತು, ಫ್ರಾನ್ಸ್ ದೇಶದ ಪ್ರೊವಾಂಸ್ ಎಂಬ ತೆಂಕಣ ಜಿಲ್ಲೆಯವನಾದ ಫ್ರೆಡರಿಕ್ ಮಿಸ್ತ್ರಾಲ್ ಎಂಬ ಕವಿ ಫ್ರೆಂಚ್ ಭಾಷೆಯಲ್ಲಿ ವಿಪುಲವೂ ಜಗದ್ವಿಖ್ಯಾತವೂ ಆದ ಸಾಹಿತ್ಯವಿದ್ದರೂ ಅದರಲ್ಲಿ ರಚಿಸದೆ ಅದರಿಂದ ಭಿನ್ನವಾದ ತನ್ನ ತಾಯಿನುಡಿಯಾದ ಪ್ರೊವೆಂಸಾಲ್ ಭಾಷೆಯಲ್ಲಿ ತಾನೆ ತನ್ನ ಕೃತಿಗಳನ್ನು ರಚಿಸಿದಂತೆ, ನಾನೂ ನನ್ನ ತಾಯ್ನುಡಿಯಲ್ಲಿ ತಾನೆ ರಚಿಸುತ್ತಿದ್ದೆನೇನೋ. ಆದರೆ ತಾಯಿಯ ಮೊಲೆಯಲ್ಲಿ ಹಾಲಿಲ್ಲ, ಕೊಂಕಣಿಯಲ್ಲಿ ಸಾಹಿತ್ಯವಿಲ್ಲ. ಆಕೆ ಆ ಬಗ್ಗೆ ನನ್ನನ್ನು ಕನ್ನಡದ ಮೊರೆಯಲ್ಲಿ ಹಾಕಿದಳು. ಈ ದಾಯಿಯಾದರೆ ಪಯಸ್ವಿನಿ. ಎಷ್ಟು ಕಾಲದಿಂದ ಎಷ್ಟೋ ಕವಿಗಳನ್ನು ಊಡಿಸಿಯೂ ಮತ್ತೂ ಬತ್ತದ, ದೇವರ ದಯದಿಂದ ಸರ್ವದಾ ಬತ್ತಬಾರದ, ಸದಾಸ್ನೇಹಿ. ತನ್ನ ಮೊಲೆಯನ್ನು ಆಕೆ ತಾಯಿಗೂ ಮಿಕ್ಕ ಅಳ್ತಿಯಿಂದ ನನಗೆ ಉಣಿಸಿದಳು. ಆಕೆಯ ಆ ಅಕ್ಕರೆ ಸಾಲವನ್ನು ಏಳೇಳು ಜನ್ಮಕ್ಕೂ ತೆತ್ತು ತೀರಿಸಲಾರೆ. ತಾಯೀ, ನೀನು ನನ್ನಲ್ಲಿಟ್ಟ ಮಮತೆಗೂ ನಾನು ನಿನಗೆ ಸಲ್ಲಿಸುತ್ತಿರುವ ಪ್ರತಿ ಮಮತೆಗೂ ಸರ್ವಥಾ ಎಣೆಯಿಲ್ಲ. ನೀನು ನನಗೆ ತರುವಿ ಎಂದರೆ ಅಮೃತದಂಥಾ ಮೊಲೆಹಾಲು, ನಾನು ನಿನಗೆ ತರುವೆನೆಂದರೆ ನಿನ್ನ ಕಾಲುಂಗುಟವನ್ನು ಕೂಡ ತೊಳೆಯಸಾಲದ ಕಣ್ಣೀರು. ಬೇರೆ ಏನಿದೆ ನನ್ನಲ್ಲಿ? ಅವ್ವಾ, ಅದರಿಂದ ತಾನೆ ತೃಪ್ತಳಾಗು."

ಮಂಜೇಶ್ವರರಂತಲ್ಲದೆ ನನ್ನ ಜನ್ಮದಾತೆ ಮತ್ತು ಶಿಕ್ಷಣಮಾತೆ ಎರಡೂ ಕನ್ನಡವಾಗಿದ್ದುದೊಂದು ಭಾಗ್ಯ. ನಿತ್ಯ ಜೀವನದಲ್ಲಿ ಕೊಡವ ಸಂಸ್ಕೃತಿಯನ್ನು ಉಸಿರಾಡಿದೆ. 'ಪಟ್ಟೋಲೆ ಪಳಮೆ' ಗ್ರಂಥವನ್ನು ವಿಶ್ವವಿದ್ಯಾನಿಲಯದಿಂದ ಪ್ರಕಾಶಿಸುವ ಸಂದರ್ಭದಲ್ಲಿ ಅಮೂಲಾಗ್ರ ಪಠಿಸಿ ಆ ಭಾಷೆಯ ಸೊಗಡನ್ನು ಹೀರುವ ಭಾಗ್ಯವೂ ಒದಗಿತು. ನಾನು ಇಂಗ್ಲಿಷನ್ನು ಕೇವಲ ಸಾಹಿತ್ಯವಾಗಿ ಓದಲಿಲ್ಲ, ಬದಲು ನನ್ನ ಅಧ್ಯಯನ ವಸ್ತುವಾದ ಗಣಿತ ವಿಜ್ಞಾನದಲ್ಲಿ ಪ್ರಾವೀಣ್ಯ ಗಳಿಸಲು ಅಭ್ಯಸಿಸಿದೆ, ಮತ್ತು ವೃತ್ತಿ ಜೀವನದಲ್ಲಿ ಅದರ ಮೂಲಕವೇ ವ್ಯವಹರಿಸಿದೆ. ಇದು ಮೂರನೆಯ ಭಾಗ್ಯ. ಪುರಂದರದಾಸರ ಜೊತೆ ದನಿಗೂಡಿಸಿ ಹಾಡುತ್ತೇನೆ, "ಇದುಭಾಗ್ಯ ಇದು ಭಾಗ್ಯ, ಇದು ಭಾಗ್ಯವಯ್ಯ, ಕೊಡಗು ಮಾತೆಯ ಭಜನೆ ಪರಮ ಸುಖವಯ್ಯ."

ಸಂಗೀತ, ಸಾಹಿತ್ಯ ಮತ್ತು ವಿಜ್ಞಾನ ಕ್ಷೇತ್ರಗಳಲ್ಲಿ ಅಂತಾರಾಷ್ಟ್ರೀಯ ಖ್ಯಾತಿಯ ಯುಗಪುರುಷರ ಪ್ರತ್ಯಕ್ಷ ಸಂಪರ್ಕ ನನಗೊದಗಿತ್ತು. ನಿಮ್ಮೆಲ್ಲರ ಪ್ರೀತಿ ಅಭಿಮಾನಗಳ ಶಕ್ತಿಯುತ ಮಸೂರ ನನ್ನನ್ನು ನಿಮ್ಮ ದೃಷ್ಟಿಯಲ್ಲಿ ಎಷ್ಟೇ ಲಂಬಿಸಿ ಬಿಂಬಿಸಿದರೂ ಅಂಥವರ ಜೊತೆ ನನ್ನನ್ನು ಹೋಲಿಸಿಕೊಂಡಾಗ ಕೇವಲ ಸಾಮಾನ್ಯ ಬುದ್ಧಿಶಕ್ತಿಯ ನಾನು ಮೇಲೆ ವಿವರಿಸಿದ ತ್ರಿವಿಧ ಭಾಗ್ಯಧಾರೆಗಳಿಂದ ಪುನೀತನಾಗಿದ್ದೇನೆ. ಇದು ಸಾಧ್ಯವಾಗಿರುವುದು ನಾನು ಕೊಡಗಿನ ನೆಲದಲ್ಲಿ, ಕನ್ನಡದ ನೆಲೆಯಲ್ಲಿ ಮತ್ತು ಅಪಾರ ಸಂಸ್ಕೃತಿಯ ಹವೆಯಲ್ಲಿ ಜನಿಸಿ ಓದಿ ಬೆಳೆದುದರಿಂದ ಎಂಬ ಅರಿವು ನನಗುಂಟು. ಇಂಥ ಕೊಡಗಿನ ಋಣವನ್ನು ಎಂದಾದರೂ ತೀರಿಸಬಲ್ಲೆನೇ? ಸದಾ ಪ್ರಯತ್ನಶೀಲನಾಗಿರುತ್ತೇನೆ ಎಂದು ಮಾತ್ರ ಆಶ್ವಾಸಿಸಬಲ್ಲೆ ಅಷ್ಟೆ.

"ಜಮ್ಮ ಕೊಡಗಿದು ನಮ್ಮದು" ಎಂಬ ಗಟ್ಟಿ ನೆಲದ ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವಾಧ್ಯಕ್ಷ ಎನ್. ಮಹಾಬಲೇಶ್ವರಭಟ್, ಕಾರ್ಯಾಧ್ಯಕ್ಷ ಟಿ.ಪಿ ರಮೇಶ್, ಕಾರ್ಯದರ್ಶಿ ಬಿ.ಎ. ಶಂಸುದ್ದೀನ್ ಮತ್ತು ಇತರ ಎಲ್ಲ ಪದಾಧಿಕಾರಿಗಳಿಗೂ ಪರಿಷತ್ತಿನ ಸರ್ವ ಸದಸ್ಯರಿಗೂ ಕೊಡಗಿನ ಮಹಾಜನತೆಗೂ ಇಲ್ಲಿ ನೆರೆದಿರುವ ಸಮಸ್ತ ಸಭಾಸದರಿಗೂ ನನ್ನ ಜೊತೆ ಮೈಸೂರಿನಿಂದ ಬಂದಿರುವ ಬಂಧುಮಿತ್ರರಿಗೂ ಎದೆತುಂಬಿ ಕೃತಜ್ಞತೆ ಅರ್ಪಿಸುತ್ತೇನೆ.

ಇಂತಹ ಸುಂದರ ಪ್ರಾತಃಕಾಲದಲ್ಲಿ ಬದುಕಿರುವುದೊಂದು ಭಾಗ್ಯ. ಅಲ್ಲಿಯೂ ತಾಯಿ ನೆಲದಲ್ಲಿ ಮನ್ನಣೆ ಗಳಿಸಿರುವುದು ಪರಮ ಸೌಭಾಗ್ಯವೆಂದು ತಿಳಿದಿದ್ದೇನೆ. ಡಿವಿಜಿಯವರ ಅಮರವಾಣಿಗೆ ದನಿಗೂಡಿಸುತ್ತ ಮಂಗಳ ಹಾಡುತ್ತೇನೆ:

ಕಾನನದಿ ಮಲ್ಲಿಗೆಯು । ಮೌನದಿಂ ಬಿರಿದು ನಿಜ
ಸೌರಭವ ಸೂಸಿ ನಲವಿಂ । ತಾನೆಲೆಯ ಪಿಂತಿರ್ದು
ದೀನತೆಯ ತೋರಿ ಅಭಿ–
ಮಾನವನು ತೊರೆದು ಕೃತಕೃತ್ಯತೆಯ ಪಡೆವಂತೆ
ವನಸುಮದೊಲೆನ್ನ ಜೀ । ವನವು ವಿಕಸಿಸುವಂತೆ
ಮನವನನುಗೊಳಿಸು ಗುರುವೇ – ಹೇ ದೇವ!

ಪಂಪ ಕುವೆಂಪು ವರೇಣ್ಯರ
ಪೆಂಪಿನ ನುಡಿಗಳ ನಿವಾಸ ಕನ್ನಡ ದೇಶಂ
ಕಂಪಿಂ ಕತ್ತುರಿಯಾಗಿಹು–
ದಿಂಪಿಂ ಪಿಕದುಲಿಯಿದು ಸಿರಿಗನ್ನಡ ಗೆಲ್ಗೆ!

ಕಾವೇರಿ ಕಲಾಕ್ಷೇತ್ರ, ಮಡಿಕೇರಿ:: ಮೇ ೫ ಮತ್ತು ೬, ೨೦೦೬

ಅತ್ರಿ ವೃಕ್ಷದ ಬೀಜವಾಪನೆ
ಅಧ್ಯಾಯ ೯೨

ಪ್ರೌಢಶಾಲೆಯ ಎಲ್ಲ ತರಗತಿಗಳಲ್ಲಿಯೂ ನಾನು ಪ್ರಥಮಸ್ಥಾನವನ್ನೇ ಗಳಿಸುತ್ತಿದ್ದರೂ ಪರೀಕ್ಷೆ ಬರೆಯಲು ನನಗೆ ನಿಗದಿಯಾಗುತ್ತಿದ್ದ ಸ್ಥಳ ಮಾತ್ರ ಎಲ್ಲಿಯೋ ಮೂಲೆಯಲ್ಲಿದ್ದ ಒಂದು ಇಕ್ಕಟ್ಟು ಕೊಠಡಿ. ಎಂದೂ ಶಾಲೆಯ ಆ ಭವ್ಯ ಸಭಾಂಗಣವಲ್ಲ. ಕಾರಣ? ತೀರ ಕ್ಷುದ್ರ, ಆದರೂ ನನ್ನ ಯುವ ಮನಸ್ಸು ಇದನ್ನು ಹಾಗೆಂದು ಒಪ್ಪುವ ಪಕ್ವತೆ ಗಳಿಸಿರಲಿಲ್ಲ. ಇಂಗ್ಲಿಷ್ ವರ್ಣಮಾಲೆ ಪ್ರಕಾರ ವಿದ್ಯಾರ್ಥಿಗಳ ಹೆಸರುಗಳನ್ನು ಅಳವಡಿಸಿ ಸ್ಥಳ ನಿಗದಿಸುತ್ತಿದ್ದರು. ಎ – ಯಿಂದ ಸುಮಾರು ಎಲ್ – ವರೆಗಿನ ಅಕ್ಷರಗಳಿಂದ ಆರಂಭವಾಗುವ ಹೆಸರುಗಳಿದ್ದವರಿಗೆ ಸಭಾಂಗಣದಲ್ಲಿ ಸ್ಥಾನ, ಮುಂದಿನವರಿಗೆ ಎಲ್ಲೆಲ್ಲಾದರೂ! ನನ್ನ ಹೆಸರು ಅಭಿಜಿತ್ ಅಥವಾ ಅಚ್ಯುತ ಎಂದಿರಬಾರದಿತ್ತೇ ಎಂದು ಪರಿತಪಿಸಿದ್ದಿತ್ತು.

ತರುವಾಯದ ವರ್ಷಗಳಲ್ಲಿ ಕಾಲೇಜ್ ಅಧ್ಯಯನದ ವೇಳೆ, ಅಂತೆಯೇ ವಿವಿಧ ಸಂದರ್ಶನಗಳಿಗೆ ಹಾಜರಾದಾಗ, ವಿಮಾನ ಹಾಗೂ ರೈಲ್ವೇ ನಿಲ್ದಾಣಗಳಲ್ಲಿ ನನ್ನ ಸರದಿಗಾಗಿ ಕಣ್ಣು ಕಿವಿ ಅರಳಿಸಿ ನಿಂತಿರುತ್ತಿದ್ದಾಗ ಈ ಎನ್ – ಪೀಡೆ ನನ್ನನ್ನು ಅತಿಯಾಗಿ ಬಾಧಿಸುತ್ತಿತ್ತು: ಒಂದು ಹಗಲಿಡೀ ಕಾದರೂ ಎಲ್ – ನಿಂದ ಮುಂದಿನವರಿಗೆ ಅವಕಾಶ ಒದಗುತ್ತಲೇ ಇಲ್ಲ. ಉದಾಹರಣೆಗೆ, ಮದರಾಸು ಕ್ರಿಶ್ಚಿಯನ್ ಕಾಲೇಜಿನಲ್ಲಿ ಗಣಿತ ಟ್ಯೂಟರ್ (೧೯೪೭–೪೯) ಆಗಿದ್ದಾಗ ಭಾರತೀಯ ವಾಯುಪಡೆಯ ಆಫೀಸರ್ ಹುದ್ದೆಗೆ ಅರ್ಜಿ ಸಲ್ಲಿಸಿದೆ. ಮದ್ರಾಸಿನಲ್ಲಿಯ ಪ್ರಾರಂಭಿಕ ಪರೀಕ್ಷೆಗಳಲ್ಲಿ ಉತ್ತೀರ್ಣನಾಗಿ ಮುಂದೆ ಡೆಹ್ರಾಡೂನಿನ ಸೇನಾಶಿಕ್ಷಣ ಕೇಂದ್ರದಲ್ಲಿ ನಾಲ್ಕು ದಿನಗಳ ಅಂತಿಮ ಪರೀಕ್ಷೆ–ತಪಾಸಣೆ–ಮೌಖಿಕ ಭೇಟಿಗಳಿಗೆ ಹಾಜರಾದೆ. ಇಲ್ಲೆಲ್ಲ ಈ ಎನ್ – ಭಾರದ ಕಾರಣವಾಗಿ ನನ್ನ ಸರದಿ ಬರುವಷ್ಟರಲ್ಲಿ ಪರೀಕ್ಷಕರೆಲ್ಲ ಸೋತು ಸುಣ್ಣಾಗಿ ಕಾಟಾಚಾರಕ್ಕೆ ಅದನ್ನು ಹೇಗೋ ಮುಗಿಸುತ್ತಿದ್ದರೆಂಬ ಭಾವನೆ ನನ್ನನ್ನು ಪ್ರಬಲವಾಗಿ ಕಾಡತೊಡಗಿತು. ಅಲ್ಲಿ ಆಯ್ಕೆ ಆಗಲಿಲ್ಲ ಎಂಬ ಸಂಗತಿ ಈಗ ಅಪ್ರಸ್ತುತ! ಹೆಸರಲ್ಲೇನಿದೆ? ಗುಲಾಬಿ ಹೂವನ್ನು ಬೇರೆ ಯಾವ ಹೆಸರಿಂದ ಕರೆದರೂ ಅದರ ಪರಿಮಳಕ್ಕೇನಾದರೂ ಊನ ತಟ್ಟೀತೇ ಎಂಬ ಶೇಕ್ಸ್‌ಪಿಯರ್ ವಾಣಿ ನನ್ನ ವಿಚಾರದಲ್ಲಿ ಹುಸಿಯಾಗಿತ್ತು! ಅಂಥ ಒಂದು ಹತಾಶ ಸಂದರ್ಭದಲ್ಲಿ ನನ್ನೊಳಗೊಂದು ಹೊಸ

ಚಿಂತನೆ ಛಳುಕಿತು: ನಾನೇನಾದರೂ ಮದುವೆಯಾಗಿ ಮಕ್ಕಳನ್ನು ಪಡೆದುದಾದರೆ ಅವರಿಗೆ ಎ – ಇಂದ ಅಂತೆಯೇ ಕನ್ನಡದಲ್ಲಿ ಅ – ದಿಂದ ತೊಡಗುವ ಹೆಸರುಗಳನ್ನೇ ಇಡಬೇಕು. ಲಕ್ಷ್ಮಿಯೂ ನಾನೂ ಯೋಚಿಸಿ ಹುಟ್ಟಲಿರುವ ನಮ್ಮ ಮಗುವಿಗೆ ಅಶೋಕ ಅಥವಾ ಅನೂರಾಧಾ ಎಂಬ ಹೆಸರಿಡಬೇಕೆಂದು ನಿರ್ಧರಿಸಿದೆವು. ನಮ್ಮ ಮೊದಲ ಮಗು ಗಂಡು, ೧೯೫೨ರಲ್ಲಿ ಜನನ. ಆ ದಿನಗಳಂದು ರಾಷ್ಟ್ರಾದ್ಯಂತ ‘ಅಶೋಕಚಕ್ರ, ಅಶೋಕ ಸ್ತಂಭ’ ಮುಂತಾದ ಅಶೋಕ ಚಕ್ರವರ್ತಿಯ ದಿವ್ಯ ನಾಮಾವಳಿಗಳು ಅನುರಣಿಸುತ್ತಿದ್ದುವು. ಹೀಗೆ ಆತನಿಗೆ ಅಶೋಕನೆಂಬ ಹೆಸರಿಟ್ಟೆವು. ಅಂದಿನ ಸಂಪ್ರದಾಯದ ಪ್ರಕಾರ ಅವನನ್ನು ತಿಮ್ಮಪ್ಪಯ್ಯ (ನನ್ನಪ್ಪನ ಹೆಸರು) ಇಲ್ಲವೇ ತಿರುಮಲೇಶ್ವರನೆಂದು ನಾಮಕರಿಸಬೇಕಿತ್ತು. ಹೀಗೆ ಮಾಡದೇ ನಾವು ಹಿರಿಯರ ಕೆಂಗಣ್ಣಿಗೆ ಗುರಿಯಾಗಬೇಕಾಯಿತು. ಮುಂದಿನ ಮಕ್ಕಳನ್ನು ಆನಂದ (೧೯೫೭) ಮತ್ತು ಅನಂತ (೧೯೬೯) ಎಂದು ಹೆಸರಿಸಿದೆವು. ಅಶೋಕನನ್ನು ಶಾಲೆಗೆ ಸೇರಿಸುವಾಗ ಈ ಹೆಸರಿಗೊಂದು ‘ಬಾಲ’ ಇರಲೇಬೇಕೆಂದು ಉಪಾಧ್ಯಾಯರು ಒತ್ತಾಯಿಸಿದರು. ಅದು ‘ರಾವ್’ ಅಥವಾ ‘ಭಟ್’ ಎಂದಿದ್ದರೆ ಜಾತಿಸೂಚಕವಾಗುತ್ತದೆ, ಬದಲು ‘ವರ್ಧನ’ ಎಂದಾದರೆ ಈ ಅಭ್ಯಂತರವಿರದೆಂದು ಬಗೆದು ಹಾಗೆ ಮಾಡಿದೆ. ಹೀಗೆ ನಮ್ಮ ಮೂವರು ಮಕ್ಕಳೂ ವರ್ಧನ ಸಹೋದರರಾದರು!

ಮೈಸೂರಿನಲ್ಲಿ ಸ್ವಂತ ಮನೆ ಖರೀದಿಸಿದಾಗ (೧೯೭೧) ಇದಕ್ಕೊಂದು ಹೆಸರು ಕೊಡಬೇಕು. ಅದರಲ್ಲಿ ಈ ಮೂವರ ಹೆಸರುಗಳೂ ಸೂಚಿತವಾಗಿರಬೇಕು ಎಂದು ಯೋಚಿಸಿ ಹಿರಿಯವನಿಗೆ ಈ ಜವಾಬುದಾರಿಕೆ ವಹಿಸಿದೆ. ಇವನ ಸೂಚನೆಯ ಫಲವೇ 'ಅತ್ರಿ'. ಇಂಗ್ಲಿಷಿನಲ್ಲಿ ಇದು A-three, ಸರಳವಾಗಿ Athree!

ಹುಟ್ಟಿನ ಆಕಸ್ಮಿಕತೆಯಿಂದ ನನಗೆ ಒದಗಿದ ಜಾತಿ ಹಣೆಪಟ್ಟಿ ವಿದ್ಯಾರ್ಥಿ ಜೀವನದಲ್ಲಿಯೂ ತರುವಾಯದ ವೃತ್ತಿಜೀವನದಲ್ಲಿಯೂ ನನ್ನನ್ನು ಆಗಾಗ ಬಾಧಿಸಿ ಅಂತರ್ಮುಖಿಯನ್ನಾಗಿಸಿದ್ದಿತ್ತು. ಇದರಿಂದ ನನ್ನ ಜೀವನದೃಷ್ಟಿಯಲ್ಲಿ ಹಲವಾರು ಧೋರಣೆಗಳು ಕ್ರಮೇಣ ಹೆಪ್ಪುಗಟ್ಟಿದುವು: ಸಾರ್ವಜನಿಕ ಜೀವನದಲ್ಲಿ ಎಲ್ಲಿಯೂ ಜಾತಿ, ಧರ್ಮ, ನಂಬಿಕೆ ಮುಂತಾದ ಜ್ಞಾತೃನಿಷ್ಠ (subjective) ಸಂಗತಿಗಳು ನುಸುಳದಂತೆ ನಾನು ಸದಾ ಜಾಗರೂಕನಾಗಿರತಕ್ಕದ್ದು: ಗುಣ ಅಥವಾ ಯೋಗ್ಯತೆಯೊಂದನ್ನೇ ಪರಿಗಣಿಸತಕ್ಕದ್ದು; ಮಕ್ಕಳನ್ನು ಅವರವರ ಒಲವು ಸ್ವಭಾವಗಳಿಗೆ ಅನುಗುಣವಾಗಿ ಮುಕ್ತ ವಾತಾವರಣದಲ್ಲಿ ಅರಳಲು ಅವಕಾಶ ಒದಗಿಸಬೇಕೇ ಹೊರತು ಸಾಚೆಸಿದ್ಧ (stereotyped) ಪದಾರ್ಥಗಳಾಗಿ ತಯಾರಿಸತಕ್ಕದ್ದಲ್ಲ; ವ್ಯಕ್ತಿತ್ವ ವಿಕಾಸಕ್ಕೆ ಸ್ವತಂತ್ರ ವೃತ್ತಿಯೇ ಸರ್ವಶ್ರೇಷ್ಠ, ತಾಬೇದಾರಿಕೆ ಎಂದೂ ಅಲ್ಲ; ಮೊದಲು ಬ್ಯಾಂಕಿನಲ್ಲಿಯೂ ಮುಂದೆ ಕಾಲೇಜು, ಎನ್ಸಿಸಿಗಳಲ್ಲಿಯೂ ಕೊನೆಗೆ ವಿಶ್ವವಿದ್ಯಾಲಯದಲ್ಲಿಯೂ ನಾನಿದ್ದುದು ತಾಬೆದಾರನಾಗಿಯೇ, ಅಲ್ಲೆಲ್ಲ ಹಲವಾರು ಅನಾವಶ್ಯಕ ಪ್ರತಿಬಂಧಕಗಳ ನಡುವೆ ನಾನು ಕೆಲಸ ಮಾಡುತ್ತ ನನ್ನತನ ಉಳಿಸಿಕೊಳ್ಳಲು ಹೆಣಗಬೇಕಾಗಿತ್ತು. ಆದ್ದರಿಂದ ನಮ್ಮ ಮಕ್ಕಳಾದರೂ ಸ್ವತಂತ್ರ ವೃತ್ತಿ ಅನುಸರಿಸುವಂತೆ ಅವರಿಗೆ ಆರಂಭದಿಂದಲೇ ಪ್ರೇರಣೆ ಕೊಡತಕ್ಕದ್ದು. ಈ ಪ್ರಯೋಗದ ವೇಳೆ ನನಗೊಂದು ಸೂತ್ರ ಮನವರಿಕೆಯಾಯಿತು. "ನಿಮ್ಮ ವಂಶದ ಕುಡಿ ನರವ್ಯಾಘ್ರನಾಗಬೇಕೆಂದು ನೀವು ಬಯಸಿದರೆ, ನೀವು ಕನಿಷ್ಠ ನರಶೃಗಾಲವಾದರೂ ಆಗಿರಬಾರದು." ನಾವಂತೂ ಎಂದೂ ನರಿಮಾನವರಾಗಲಿಲ್ಲ ಎಂಬ ತೃಪ್ತಿ ನಮಗಿದೆ.

ಹೀಗೆ 'ಪ್ರವರ್ಧಿಸಿದ' ವರ್ಧನ ಸಹೋದರರಲ್ಲಿ ಹಿರಿಯನ ಒಲವಿಗೆ ಸಮೃದ್ಧ ಲಾಲನೆ–ಪಾಲನೆ–ಪೋಷಣೆಯನ್ನು ಡಿ.ವಿ.ಕೆ ಮೂರ್ತಿಯವರು ಊಡಿದರು. ನನ್ನದೇ ಪ್ರಾಯದ ಇವರು ಕರ್ನಾಟಕದ ಪ್ರಸಿದ್ಧ ಗ್ರಂಥ ಪ್ರಕಾಶಕರು, ವಿತರಣಕಾರರು. ಜೊತೆಗೆ ಪ್ರಖರ ಚಿಂತಕರು ಕೂಡ. ಐಎಎಸ್ ಮುಂತಾದ ತೋರ ವೇತನದ ಮತ್ತು ಹಿರಿ ಅಧಿಕಾರದ ಅಮಲಿನಿಂದ (ಸಕಲ ಅರ್ಹತೆಗಳಿದ್ದರೂ) ಎಂದೂ ಆಕರ್ಷಿತರಾಗದೇ ತಮ್ಮ ಪ್ರವೃತ್ತಿಗನುಗುಣವಾಗಿ ಸ್ವತಂತ್ರ ವೃತ್ತಿ ಆಯ್ದು ಅದರಲ್ಲಿ ಯಶಸ್ಸು ಸಾಧಿಸಿದವರು, ಇತರರಿಗೆ ಆ ತೆರನಾಗಿ ಬೆಳೆಯಲು ಅವಕಾಶ ಒದಗಿಸಿಕೊಡುತ್ತಿರುವವರು ಕೂಡ. ಮಡಿಕೇರಿ ದಿನಗಳಲ್ಲಿ ನಾನು ಸಹಕಾರ ಸಂಘ ನಡೆಸುತ್ತಿದ್ದಾಗ ಅದರ ಕಾರಣವಾಗಿ ನನಗೆ ಇವರ ಸಂಪರ್ಕ ಒದಗಿ ಕ್ರಮೇಣ ಇಂದು ಕುಟುಂಬ ಬಾಂಧವ್ಯವೇ ಆದುದು ನನ್ನ ಬಾಳಿನ ಒಂದು ರಮ್ಯ ಅಧ್ಯಾಯ.

ಇನ್ನು ನನ್ನ ಶಾಲಾದಿನಗಳಲ್ಲಿ ಮಡಿಕೇರಿಗೆ ದೂರದ ಧಾರವಾಡದಿಂದ ಮನೋಹರ ಗ್ರಂಥ ಮಾಲೆಯ ಉತ್ಕೃಷ್ಟ ಪುಸ್ತಕಗಳನ್ನು ಹೊತ್ತು ತಂದು ಹಳ್ಳಿ ಹಳ್ಳಿ ಮನೆ ಮನೆಗಳಿಗೆ ಭೇಟಿಯಿತ್ತು ಕೃತಾರ್ಥರಾಗುತ್ತಿದ್ದ ದ.ಬಾ. ಕುಲಕರ್ಣಿಯವರ ಶೈಲಿ ನನ್ನ ಮೇಲೆ ತುಂಬ ಪರಿಣಾಮ ಬೀರಿತ್ತು. ಹೀಗೆ ದಬಾಕು, ಸಹಕಾರ ಸಂಘ ಮತ್ತು ಡಿವಿಕೆ ಎಂಬ ಮೂರು ಪ್ರಭಾವಗಳು ಬೆಸುಗೆಗೊಂಡು ಅಶೋಕನ ಭವಿಷ್ಯಕ್ಕೆ ನಾಂದಿ ಹಾಡಿದುವು: ಸ್ವತಂತ್ರ ಪುಸ್ತಕ ವ್ಯಾಪಾರ – ಮೈಸೂರಿನ ಗೀತಾ ಬುಕ್ ಹೌಸ್ ಮಾದರಿಯಲ್ಲಿ. ಆತ ಶೈಕ್ಷಣಿಕವಾಗಿ ಇಂಗ್ಲಿಷ್ ಎಂಎ ಪದವೀಧರ, ಎನ್ಸಿಸಿ ಶಿಕ್ಷಿತ ಇತ್ಯಾದಿ.

ಮುಂದೆ ಅಶೋಕ ಮಂಗಳೂರಿನಲ್ಲಿ ಸ್ವಂತ ಪುಸ್ತಕ ಮಳಿಗೆ ತೆರೆದಾಗ (೧೯೭೫) ಅದಕ್ಕೊಂದು ಹೆಸರು ಕೊಡಬೇಕಾಯಿತು. ಅವನೇ ಯೋಚಿಸಿ ಅದನ್ನು Athree Book Centre (ABC) ಅತ್ರಿ ಬುಕ್ ಸೆಂಟರ್ ಎಂದು ನಾಮಕರಿಸಿದ. ಇದರ ಸಾಹಸಗಾಥೆ (ನೋಡಿ: ಅವನೇ ಬರೆದಿರುವ 'ಪುಸ್ತಕ ಮಾರಾಟ ಹೋರಾಟ')

ಮೂರು ಸಾರ್ವಕಾಲಿಕ ಉನ್ನತ ಮೌಲ್ಯಗಳನ್ನು ಶ್ರುತಪಡಿಸಿದೆ: ೧ ಪ್ರಾಮಾಣಿಕ ಗ್ರಾಹಕ ಸೇವೆ ಎಂದೂ ವಿಫಲವಾಗದು. ೨ ತಾತ್ಕ್ಷಣಿಕ ಲಾಭದ ದುರಾಶೆ ಬಿಟ್ಟು ದೀರ್ಘಕಾಲಿಕ ಮೌಲ್ಯಾನುಶೀಲನೆ ಮಾಡಿದಾತ ಎಂದೂ ಎಲ್ಲಿಯೂ ಸೋಲಲಾರ. ೩. ವೃತ್ತಿ ಮತ್ತು ಪ್ರವೃತ್ತಿಗಳಲ್ಲಿ ಕರ್ಣ ಏಕಾಗ್ರತೆ, ಅರ್ಜುನ ಲಕ್ಷ್ಯ, ಭಗೀರಥ ಸಾಹಸ ಮತ್ತು ನಚಿಕೇತಪ್ರಯತ್ನ ಹೂಡಿದಾತ ಸದಾ ಶಿಖರಗಾಮಿಯಾಗಿಯೇ ಇರುತ್ತಾನೆ.

ಅಶೋಕನ ಪತ್ನಿ ದೇವಕಿ. ನಮ್ಮ ಕುಟುಂಬದ ಜೀವನಧರ್ಮವನ್ನೇ ತಮ್ಮದೇ ಶೈಲಿಯಲ್ಲಿ ಪಾಲಿಸುತ್ತ ಬಂದಿರುವ ಕೃಷಿಕ ಕೊಂದ್ಲಕಾನ ಕೃಷ್ಣ ಭಟ್ಟ – ಇಂದಿರಾ ದಂಪತಿಗಳ ಮಗಳಿವಳು. ಇವರ ಏಕೈಕ ಪುತ್ರ ಅಭಯಸಿಂಹ (೧೯೮೧). ಇವನೀಗ ಪುಣೆಯ Film and television institute of India (FTII) ಪದವೀಧರನಾಗಿ ಪರಿಸರ ಮತ್ತು ಜನಜೀವನ ಸಂಬಂಧೀ ಸಾಕ್ಷ್ಯಚಿತ್ರಗಳ ನಿರ್ಮಾಣ ಪ್ರಪಂಚವನ್ನು ನನವೋನ್ಮೇಷಶಾಲಿತ್ವ ಸಹಿತ ಪ್ರವೇಶಿಸುತ್ತಿದ್ದಾನೆ.

ಅತ್ರಿ ಮಧ್ಯಮನಾದ ಆನಂದ ಸ್ವಂತಾಸಕ್ತಿಯಿಂದ ಎಂಜಿನಿಯರಿಂಗ್ (ಬಿಇ) ಓದಿ ಅಸ್ಸಾಮ್, ರಾಜಸ್ಥಾನ ಮತ್ತು ಬೆಂಗಳೂರಿನಲ್ಲಿ 'ತಾಬೇದಾರಿಕೆ' ಮಾಡಿ ೧೯೯೦ರಿಂದೀಚೆಗೆ ಅಮೆರಿಕ ನಿವಾಸಿಯಾಗಿದ್ದಾನೆ. ಇಂಟೆಲ್ ಸಂಸ್ಥೆಯಲ್ಲಿ ಇವನು ತಂತ್ರಾಂಶ ಎಂಜಿನಿಯರ್ (software engineer). ತಾನು ಭಾರತದಲ್ಲಿಯೇ ಉಳಿದಿದ್ದು ಗಣಿತದಲ್ಲಿ ಉನ್ನತ ಸಾಧನೆ ಮಾಡದಿದ್ದುದು ತಪ್ಪಾಯಿತೆಂಬ ಭಾವನೆ ಇವನನ್ನು ಸದಾ ಕಾಡುತ್ತಿದೆ. ಹೀಗಾಗಿ ತನ್ನ ಮಕ್ಕಳಿಗೆ – ಅನರ್ಘ್ಯ (೧೯೮೮) ಮತ್ತು ಐಶ್ವರ್ಯ (೧೯೯೪) – ಆರಂಭದಿಂದಲೂ ಭಾರತೀಯ ಸಂಸ್ಕೃತಿ ಮತ್ತು ಲಲಿತಕಲೆಗಳಲ್ಲಿ ಯುಕ್ತ ಶಿಕ್ಷಣ ಮತ್ತು ಗಣಿತ ಪ್ರಾವೀಣ್ಯದತ್ತ ಸಮರ್ಪಕ ಪ್ರೇರಣೆ ಪ್ರೋತ್ಸಾಹ ಒದಗಿಸುತ್ತ ಬಂದಿದ್ದಾನೆ. ಫಲ? ಇವನ ಹಿರಿ ಮಗಳು ಅನರ್ಘ್ಯ ಈಗ ಜಗತ್ಪ್ರಸಿದ್ಧ ಗಣಿತ ಶಿಕ್ಷಣ ಕೇಂದ್ರ Stanford Universityಯನ್ನು ಸ್ವಂತ ಯೋಗ್ಯತೆಯಿಂದ ಪ್ರವೇಶಿಸಿದ್ದಾಳೆ.

ಆನಂದನ ಪತ್ನಿ ಜಯಶ್ರೀ. ಈಕೆ ಉಡುಪಿಯ ಹಿರಿಯ ವಕೀಲ ಬಳಕ ಕೃಷ್ಣ ಭಟ್ಟ–ಸುಮತಿ ದಂಪತಿಗಳ ಪುತ್ರಿ. ತಮ್ಮ ಮಕ್ಕಳ ಸರ್ವಾಂಗ ಸುಂದರ ಅಭಿವರ್ಧನೆಯಲ್ಲಿ ಈಕೆಯ ಪಾತ್ರ ಆನಂದನದಕ್ಕಿಂತ ಒಂದು ಮೆಟ್ಟಿಲು ಹೆಚ್ಚೇ – ಅವನು ತಂತ್ರಾಂಶ (software) ಒದಗಿಸುತ್ತಾನೆ, ಇವಳೋ ಇದಕ್ಕೆ ಯುಕ್ತ ಯಂತ್ರಾಂಶ (hardware) ರಚಿಸಿ ಈ ಮಾನವ ಗಣಕಗಳ (computers) ವಿಕಾಸವನ್ನು ಸಾಧಿಸುತ್ತಿದ್ದಾಳೆ.

ಶಾಲಾ ವಿದ್ಯಾರ್ಥಿಯಾಗಿದ್ದ ಅನಂತನ ಒಲವು ನನ್ನಪ್ಪನ ವೃತ್ತಿ (ಸಹಕಾರ ಸಂಘಗಳ) ಲೆಕ್ಕಪತ್ರ ತಪಾಸಣೆಯತ್ತ ಹೊರಳಿದುದನ್ನು ಕಂಡೆ. ಹೀಗೆ ಇವನು ಬಿಕಾಮ್ ಓದಿ ಚಾರ್ಟರ್ಡ್ ಅಕೌಂಟೆಂಟ್ ಆಗಿ ನಮ್ಮೊಂದಿಗೆ ನೆಲಸಿದ್ದಾನೆ. ಇವನ ಪತ್ನಿ ರುಕ್ಮಿಣಿಮಾಲಾ. ಇವಳು ಕೂಡ ಕೃಷಿಕ ಒಡಿಯೂರು ಕೃಷ್ಣಭಟ್ಟ–ಭಾರತೀ ದಂಪತಿಗಳ ಮಗಳು. ಇವರ ಏಕೈಕ ಪುತ್ರಿ ಅಕ್ಷರಿ (೧೯೮೮). ಇವಳೀಗ ಬಿಕಾಮ್ ವಿದ್ಯಾರ್ಥಿನಿ, ತಂದೆಯ ಹಾದಿಯಲ್ಲಿಯೇ ಮುನ್ನಡೆಯುತ್ತಿದ್ದಾಳೆ. ಅಂದ ಹಾಗೆ ಅನಂತ–ರುಕ್ಮಿಣಿಯರ ಮದುವೆ ಮುಗಿಸಿ ಈ ಯುವದಂಪತಿಗಳು ನಮ್ಮ ಮನೆ (ಮೈಸೂರು ಅತ್ರಿ) ತುಂಬಿದಾಗ ನಾವು, ವೃದ್ಧದಂಪತಿಗಳು, ಅವರೆದುರು ಎರಡು ಆಯ್ಕೆಗಳನ್ನಿಟ್ಟೆವು: ಸ್ವತಂತ್ರ ಬಿಡಾರ ಹೂಡಲು ಅವರು ಇಚ್ಛಿಸಿದರೆ ಅದನ್ನು ಬೆಂಬಲಿಸುತ್ತೇವೆ, ನಮ್ಮ ಜೊತೆಯಲ್ಲೇ ಇರಲು ಅಪೇಕ್ಷಿಸಿದರೆ ಖಂಡಿತವಾಗಿಯೂ ಸ್ವಾಗತಿಸುತ್ತೇವೆ. ಪ್ರೀತಿಯಿಂದಲೇ ಅವರು ಎರಡನೆಯದನ್ನು ಆಯ್ದು ನಮಗೆ ಈ ಇಳಿವಯಸ್ಸಿನಲ್ಲಿ ಸಂತೋಷ ಸಂತೃಪ್ತಿ ಮತ್ತು ಕೃತಾರ್ಥತೆ ತಂದುಕೊಡುತ್ತಿದ್ದಾರೆ. ದಾಸವಾಣಿ ನೆನಪಾಗುತ್ತದೆ, "ಇದು ಭಾಗ್ಯ, ಇದು ಭಾಗ್ಯ, ಇದು ಭಾಗ್ಯವಯ್ಯಾ!"

ನಮ್ಮ ಮೂವರು ಬೀಗರೂ ಕೃಷ್ಣ ಭಟ್ಟರೇ ಆಗಿರುವುದು ಕೇವಲ ಆಕಸ್ಮಿಕ, ಆದರೆ ನಾಲ್ವರು ಮೊಮ್ಮಕ್ಕಳೆಲ್ಲರ ಹೆಸರುಗಳು ಎ–ಯಿಂದ ಆರಂಭವಾಗುವುದು ಅವರವರ ತಂದೆ ತಾಯಿಯರ ಅಪೇಕ್ಷೆಯಿಂದಲೇ. ಇನ್ನು ಮಕ್ಕಳ ಮದುವೆ ಸಂದರ್ಭದಲ್ಲಿ ನಾವು ತಳೆದ ಸ್ಪಷ್ಟ ನಿಲವು ಇದು: ಅವರೇ ಯಾರನ್ನಾದರೂ ಆ ಮುನ್ನ ಇಚ್ಛೆಪಟ್ಟಿದ್ದರೆ ಜಾತಿ, ಕುಲ, ಗೋತ್ರ, ಅಂತಸ್ತು ಮುಂತಾದವನ್ನು ಪರಿಗಣಿಸದೆ ಆ ಇಚ್ಛೆಯನ್ನು ಯೋಗ್ಯವಾಗಿ ಪೂರೈಸುವುದು ಮಾತ್ರ ನಮ್ಮ ಹೊಣೆ. ಹೀಗಲ್ಲದೇ ನಾವು (ತಂದೆ ತಾಯಿಯರು) ಆಯಬೇಕೆಂಬುದು ಮಕ್ಕಳ ಅಪೇಕ್ಷೆಯಾದರೆ ಇವರ ನಿರೀಕ್ಷಾನುಸಾರ ಮುಂದುವರಿಯುವುದು. ಜಾತಕಾದಿ ಅವೈಜ್ಞಾನಿಕ ದಾಖಲೆಗಳಿಲ್ಲಿ ಪೂರ್ಣ ವರ್ಜ್ಯ.

ನೋಂದಾಯಿತ ಮದುವೆಗೆ ಆದ್ಯತೆ. ಇನ್ನು ಹೆಣ್ಣಿನವರು ಸಾಂಪ್ರದಾಯಿಕ ವಿವಾಹ ಮಾಡಬೇಕೆಂದು ಆಶಿಸಿದರೆ ಅದನ್ನು ಅತ್ಯಂತ ಸರಳವಾಗಿ ಯಾವುದೇ ದಕ್ಷಿಣೆ–ಪ್ರದಕ್ಷಿಣೆ–ನಿರೀಕ್ಷಣೆ ಕೋಲಾಹಲಗಳಿಲ್ಲದೆ ನಿರ್ವಹಿಸಬೇಕು. ನಮ್ಮೆಲ್ಲ ಮಕ್ಕಳೂ ಹೇಳಿದ್ದು ಒಂದೇ, "ಅಮ್ಮನ ಮಾದರಿ ಗೃಹಿಣಿ–ಮಡದಿ ಸಾಕು; ಹುಡುಗಿ–ಹುಡುಗರ ಪರಸ್ಪರ ಸಮ್ಮತಿಯಿಂದ ಮಾತ್ರ ಈ ಮದುವೆಯನ್ನು ಸರಳವಾಗಿ ಮಾಡಬೇಕು. ಉಡುಗೊರೆ, ವರದಕ್ಷಿಣೆ, ಭೂರಿಭೋಜನ ಮುಂತಾದ ಆಡಂಬರಗಳಿಗೆ ಅವಕಾಶ ಕೊಡಕೂಡದು." ಇದೇ ಪ್ರಕಾರ ಅಶೋಕ–ದೇವಕಿ, ಆನಂದ–ಜಯಶ್ರೀ ಮತ್ತು ಅನಂತ–ರುಕ್ಮಿಣಿಮಾಲಾ ಆಯಾ ಕಾಲದಲ್ಲಿ ದಂಪತಿಗಳಾಗಿ ನಮ್ಮ ಮನ, ಮನೆ, ದಿನ ಮತ್ತು ಕುಲಗಳನ್ನು ಬೆಳಗುತ್ತಿದ್ದಾರೆ.

ಸಮಾರೋಪ
ಅಧ್ಯಾಯ ೯೩

'ಮುಗಿಯದ ಪಯಣ'ಕ್ಕೆ ಮುಕ್ತಾಯವಿಲ್ಲ, ಆದರೆ ಬರೆಹಕ್ಕೆ ಹೀಗಲ್ಲ. ಅದು ನಾಗಾಲೋಟ, ವರ್ತಮಾನಸ್ಯಂದಿ, ನಿರಂತರ ಹೊಸ ನೋಟಗಳನ್ನು ಬೀರುವ ಮತ್ತು ಹೊಸ ಪ್ರತಿಕ್ರಿಯೆಗಳನ್ನು ಬೇಡುವ ಚಲಚ್ಚಿತ್ರ. ಇದು? ಸಂದ ಘಟನೆಗಳನ್ನು ಸಾವಕಾಶವಾಗಿಯೂ ಸಾವಧಾನವಾಗಿಯೂ ವಿವೇಚನೆಯ ಜರಡಿಯಲ್ಲಿ ಸೋಸಿ ಕಾಳುಗಳನ್ನು ಆಯ್ದು ದಾಖಲಿಸುವ ಆಮೆ ನಡೆ. ವ್ಯಕ್ತಿಯ ಮರಣದೊಳಗೆ ಆತನ ಪಯಣ ಮುಗಿಯುತ್ತದೆ. ಆದರೆ ಆಯ್ಕೆ ಮಾಡಿದ ಅದರ ದಾಖಲೆ ಆ ಮೊದಲೇ ಕೊನೆ ಕಾಣಬೇಕಾದದ್ದು ಅನಿವಾರ್ಯ. ಎಂದೆ ಪ್ರಸ್ತುತ ಅಧ್ಯಾಯಕ್ಕೆ 'ಸಮಾರೋಪ'ವೆಂಬ ಹೆಸರು. ಈ ಪುಸ್ತಕದಲ್ಲಿ ದಾಖಲಿಸಿರದ ಅಥವಾ ಆನುಷಂಗಿಕವಾಗಿ ಉಲ್ಲೇಖಿಸಿರುವ ಹಲವಾರು ಘಟನೆಗಳನ್ನು ನನ್ನ ಇತರ ಕೃತಿಗಳಲ್ಲಿಯೂ ಬಿಡಿ ಲೇಖನಗಳಲ್ಲಿಯೂ – ಮುಖ್ಯವಾಗಿ, ಎನ್ಸಿಸಿ ದಿನಗಳು, ಸವಾಲನ್ನು ಎದುರಿಸುವ ಛಲ, ಶ್ರುತಗಾನ, ಐನ್‌ಸ್ಟೈನ್ ಬಾಳಿದರಿಲ್ಲಿ, ಆಲ್ಬರ್ಟ್ ಐನ್‌ಸ್ಟೈನ್ ಮಾನವೀಯ ಮುಖ, ಸುಬ್ರಹ್ಮಣ್ಯನ್ ಚಂದ್ರಶೇಖರ್, ಸಪ್ತಸಾಗರದಾಚೆಯೆಲ್ಲೋ... ಸಂಗೀತ ರಸನಿಮಿಷಗಳು ಇತ್ಯಾದಿ – ನೋಡಬಹುದು.

ಇಳಿವಯಸ್ಸಿನಲ್ಲಿ ಒಬ್ಬ ವ್ಯಕ್ತಿಯನ್ನು ಏಳು ಬಗೆಯ ಪೀಡೆಗಳು ಬಾಧಿಸಬಹುದೆಂದು ಅನುಭವದಿಂದ ಅರಿತಿದ್ದೇನೆ: ಆರ್ಥಿಕ ಪರಾವಲಂಬನೆ, ಅನಾರೋಗ್ಯ, ಜೀವನಸಂಗಾತಿಯ ವಿನಷ್ಟ, ಸಾಂಸಾರಿಕ ಅಸಾಮರಸ್ಯ, ಮಕ್ಕಳಿಂದ/ ಸೊಸೆಯರಿಂದ/ ಅಳಿಯಂದಿರಿಂದ ನಿರಂತರ ತೊಂದರೆ, ವೃತ್ತಿ ಹಾಗೂ ಪ್ರವೃತ್ತಿ ಪೋಷಕಗಳಿಲ್ಲದೆ ಮನಸ್ಸು ಜಡವಾಗುವುದು, ಸಾಮಾಜಿಕವಾಗಿ ಸೋತಿರುವುದು ಅಥವಾ ವಿನಾ ಕಾರಣ ಖಿನ್ನತೆ ಆವರಿಸಿರುವುದು. ನಮ್ಮ ಅದೃಷ್ಟ: ಇಂಥ ಯಾವುದೇ ಬಾಧೆ ನಮಗೆ ತಟ್ಟಿಲ್ಲ, ತಟ್ಟುವಂತೆಯೂ ಇಲ್ಲ – ೨೦೦೦ದಿಂದೀಚೆಗೆ ಅನಾರೋಗ್ಯವೊಂದರ ಹೊರತಾಗಿ, ಇದಾದರೂ ನನ್ನ ಅಥವಾ ಮಡದಿಯ ತಪ್ಪಿನ ಫಲವಲ್ಲ.

ನಮ್ಮಿಬ್ಬರದೂ ಆರೋಗ್ಯ ಸುಸ್ಥಿತಿಯಲ್ಲಿಲ್ಲ. ಆದರೆ ಭಾವತೀವ್ರತೆ, ಹೃದಯ ಸಂಪನ್ನತೆ ಮತ್ತು ಸ್ಮರಣ ಸಾಮರ್ಥ್ಯ ಮೊದಲಿನಂತೆಯೇ ಇವೆ. ಒಟ್ಟಾರೆ ಬದುಕು ನಮಗೆ ಸದಾ ಒಳ್ಳೆಯದನ್ನೇ ಮಾಡಿದೆ ಎಂಬ ಪೂರ್ಣ ತೃಪ್ತಿ ಇದೆ. ಇದರ ರಹಸ್ಯವೇನೆಂದು ನನ್ನನ್ನು ನಾನು ಪ್ರಶ್ನಿಸಿಕೊಂಡರೆ – ಜಾತಕ, ಪೂರ್ವಜನ್ಮ, ಅದೃಷ್ಟ, ದೈವಿಕ ಬಲ ಮುಂತಾದ ಅಸ್ಪಷ್ಟ ಅವೈಚಾರಿಕ ಪ್ರಭಾವ ಯಾವುದರಲ್ಲಿಯೂ ನಂಬಿಕೆ ಇರದ – ನನಗೆ ಹೊಳೆಯುವ ಉತ್ತರ ಒಂದೇ:

ಗೋಪಾಲಕೃಷ್ಣ ಅಡಿಗರ ಅಮರ ವಾಣಿಯಲ್ಲಿ –
ನಿನಗೆ ನೀನೇ ಗೆಳೆಯ, ನಿನಗೆ ನೀನೇ!
ಅವರಿವರ ನಂಬುಗೆಯ ಮಳಲ ರಾಶಿಯ ಮೇಲೆ
ಬಾಳಮನೆಯನು ಮುಗಿಲಿಗೆತ್ತರಿಸಲಿಹೆಯಾ?
ನಿನಗೆ ನೀನೇ ಗೆಳೆಯ, ನಿನಗೆ ನೀನೇ! ॥
ಬಾಳ ಕಾಳೆಗದಲ್ಲಿ ಏಕಾಂಗಿ ವೀರ!
ನೇಹನಲುಮೆಗಳೆದೆಗೆ ಬರಿಯ ಆಹಾರ;
ನಿನ್ನ ಅಂತಃಸತ್ತ್ವ ಆಧಾರ!
ಉಳಿದೆಲ್ಲವೂ ಬೆಸಕೆ ಬರೆದ ಸಿಂಗಾರ!
ನಿನ್ನಾತ್ಮದಿದಿರು ನೀನಿಂತಿರುವ ವೇಳೆ,
ಆತ್ಮಸಾಕ್ಷಿಗೆ ಸಾಕ್ಷಿಗುಡುತಲಿರೆ ಬಾಳೆ;
ಮೃತ್ಯುವಿನ ಹಿಡಿತ ಬಿಗಿಯಾಗುತಿರೆ, ಮೇಲೆ
ಕಿರುತಾರೆಯೊಂದು ಓರಗೆಯ ಕೋರೆ,
ನಿನಗೆ ನೀನೇ, ಗೆಳೆಯ, ನಿನಗೆ ನೀನೇ! ॥
**   **   **
ಅಪರಿಗ್ರಹದೊಳುಂಟು ಸಂತೃಪ್ತಿ ಸಂತೋಷ
ಸ್ವಪರಿಗ್ರಹದಲಿಲ್ಲ ನಿರ್ಮೋಹ ನಿರಸೂಯೆ
ನೃಪನಾತ ಧಾರಿಣಿಗೆ ಕೃಪನೀತ ಕೌರವಗೆ
ತಪನ ಪ್ರಕಾಶದೋಲ್ ಬಾಳೆಲೋ ಅತ್ರಿಸೂನು ॥

ನಾವಿಬ್ಬರೂ ಸ್ವಂತ ಇಷ್ಟದಿಂದ ನಮ್ಮ ದೇಹಗಳನ್ನು ಮೈಸೂರಿನ ಜೆ.ಎಸ್.ಎಸ್ ಆಸ್ಪತ್ರೆಗೆ ದಾನವಿತ್ತಿದ್ದೇವೆ; ನಮ್ಮ ಮರಣವಾರ್ತೆಯನ್ನು ಬಿತ್ತರಿಸಬಾರದೆಂದೂ ಮರಣಾನಂತರ ಕರ್ಮಾಂತರಾದಿ ಅಪರಕ್ರಿಯೆಗಳನ್ನಾಗಲೀ ವಾರ್ಷಿಕ ತಿಥಿಗಳನ್ನಾಗಲೀ ಮಾಡಬಾರದೆಂದೂ ಮಕ್ಕಳಿಗೆ ಲಿಖಿತ ನಿರ್ದೇಶವಿತ್ತಿದ್ದೇವೆ. ಸದಾ ವರ್ತಮಾನದಲ್ಲಿ ಪ್ರೀತಿ–ನೀತಿಯುತವಾಗಿ ಬಾಳುವಾತ ನಿತ್ಯ ಸುಖಿ ಎಂಬುದನ್ನು ಬದುಕು ನನಗೆ ಕಲಿಸಿದೆ. ಎಂದೇ ನನ್ನ ಬಾಳಿನ ಆಧಾರಶ್ರುತಿ –

ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ
ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ
ಎಲ್ಲರೊಳಗೊಂದಾಗು ಮಂಕುತಿಮ್ಮ ॥

ವಿಸ್ತಾರದಲಿ ಬಾಳು, ವೈಶಾಲ್ಯದಿಂ ಬಾಳು
ಕತ್ತಲೆಯ ಮೊಡಕು ಮೂಲೆಗಳ ಸೇರದಿರು
ಭಾಸ್ಕರನನುಗ್ರಹವೆ ನೂತ್ನ ಜೀವನ ಸತ್ವ
ಮೃತ್ಯು ನಿನಗಲ್ಪತೆಯೊ ಮಂಕುತಿಮ್ಮ ॥

ಚರಮಗೀತೆ:

ಸಾವು? ಜೀವನಯಾನವೈದಲಿಹ ಕಟ್ಟಕಡೆ
ರೇವು! ಸುಂದರ ಸುಖದ ಸಂತೃಪ್ತ ಸಂಪನ್ನ
ಠಾವು! ಪೀಳಿಗೆ ವರ್ಧಿಸಲು ವ್ಯಕ್ತಿ ಮುಡಿಪಿಡುವ
ಠೇವು – ತಿಳಿ ಜೀವಸಾತತ್ಯವಿದು ಅತ್ರಿಸೂನು ॥

ಅತ್ರಿಸೂನೆಂಬಾತ ಮಂಕುತಿಮ್ಮನಿಗೇನು
ಪುತ್ರನೇ, ಭ್ರಾತೃವೇ, ಕುಲಜನೇ, ನಕಲಿಯೇ?
ಚಿತ್ರಭಾನುವು ತಿಮ್ಮ, ಬರಿಕಿರಿ ಸೊಡರು ಸೂನು
ಶತುರ್ಗಳುಭಯರುಂ ತಮಂಧಕ್ಕೆ ಅತ್ರಿಸೂನು

– 'ಮುಗಿಯದ ಪಯಣ' ಮುಗಿದುದು –

BY NC ND